JAI—HIND

ನವಚೈತನ್ಯ

ಬಳ್ಳಾರಿಯ
ಉಜ್ವಲ ರಾಷ್ಟ್ರೀಯ ವಾರಪತ್ರಿಕೆ
*
ಉತ್ತಿಷ್ಠತ! ಜಾಗೃತ!!
ಪ್ರಾಪ್ಯವರಾನ್ನಿ ಬೋಧತ!!!
*
ಸಂಪಾದಕ ಮತ್ತು ಪ್ರಕಾಶಕರು:—
ಟಿ. ಬಿ. ಕೇಶವರಾವು.

ವರ್ಷ ೧೨ | ಸೋಮವಾರ ೧೬ ಜನವರಿ ೧೯೫೦ | ಸಂಚಿಕೆ ೫೧

ಬಳ್ಳಾರಿಯವರ ಕರ್ತವ್ಯ

(ಜಿಲ್ಲೆಯ ವಿಭಜನೆಯೋಗಬಾರದು ಈಗಿನಿಂದಲೇ ಯತ್ನಿಸಿರಿ.)

ಕನ್ನಡಿಗರು, ತೆಲುಗರು ಮತ್ತು ಬಳ್ಳಾರಿ ಜಿಲ್ಲೆಯ ವಿವಿಧ ಪ್ರದೇಶಗಳಲ್ಲಿ ನೆಲೆಸಿರುವ ಸರ್ವ ಭಾಷಾಭಾಷಿಗಳು ಜಿಲ್ಲೆಯ ಇಬ್ಭಾಗ ಮಾಡಬಾರದೆಂದೂ ಅದರಿಂದ ಸರ್ವವಿಧವಾದ ನಷ್ಟವಾಗುವ ವೆಂದೂ ಮನಗಂಡಿರುವರು. ವ್ಯಾಪಾರ, ಉದ್ಯೋಗಗಳಿಗೆ ಹಾನಿಯಾಗಿ ಆರ್ಥಿಕ ಪರಿಸ್ಥಿತಿಯು ಕೆಟ್ಟು, ಅನೇಕ ವರ್ಷಗಳ ನವನಿಗೆ ಗ್ರಾಮೋದ್ಧಾರದಮಾತು ಹಾಗಿರಲಿ, ಪಟ್ಟಣದ ಸುಧಾರಣೆಯು ಆಗಲಾರದು. ಕುಡಿಯಲಿಕ್ಕೆ ಸರಿಯುದ್ದ ನೀರು, ಇರಲು ನಿರ್ಮಲವಾದ ಮನೆ, ಸಾರಿಗೆಗಾಗಿ ಬಳ್ಳೆಯ ರಸ್ತೆ, ಪ್ರಕಾಶದ ವ್ಯವಸ್ಥೆ ಇವುಗಳ ಅಭಾವವು ಜಿಲ್ಲೆಯ- ಬಳ್ಳಾರಿ ಆದವಾನಿ, ಹೊಸಪೇಟೆ ನರ್ಸೈ ನಗರಗಳಿಗಿದ್ದು ಈದಿಶೆಯಲ್ಲಿ ಶೀಘ್ರ ಸಾಲಭ್ಯವು ನಾಗರೀಕರಿಗೆ ಹೊರೆಯ ಲಕ್ಷಣಗಳು ಬೆಳ್ಳಾ ವಿಭಜನೆಯಿಂದ ವಾಯುವಾಗುವ ಮುಖ್ಯ ಮುಖ್ಯವಾದ ಕಷ್ಟೇರಿಗಳು ಬೇಕಿಷ್ಟಿಗೆ ಹೋಗುವದರಿಂದ ಜನತೆಯ ಸೃಷ್ಟಿಯು ಅಲ್ಲಿಗೇ ಸಾಗುವುದು. ಇಪ್ಪತ್ತೊರು ವರ್ಷಗಳ ಕೆಳಗೆ ಮುಸಲ್ಮಾನರವರ ಸಂಘಟಿತ ಶಕ್ತಿಯಿಂದ ವಿಜಯನಗರವು ನಾಶವಾಯಿತು.

ಜಿಲ್ಲೆಯಲ್ಲಿ ನೆಲೆಸಿರುವ ವಿವಿಧ ಶಕ್ತಿಗಳು ಈಗ ಒಂದಾಗದಿದ್ದರೆ, ಬಳ್ಳಾರಿಯ ಪತನವು ನಿಕಟವಾಗುವುದರಲ್ಲಿ ಸಂಶಯವಿಲ್ಲ. ಕಳೆದ ಒಂದು ಸಾವಿರ ವರ್ಷಗಳ ಇತಿಹಾಸವನ್ನು ಅವಲೋಕಿಸಿದರೆ, ನಮ್ಮ ನಮ್ಮೊಳಗಿನ ಅಂತಃಕಲಹಗಳಿಂದ ನಾವು ಗುಲಾಮರಾಗಿದ್ದೇವೆಂದು ಒಂದು ಸರ್ವವೇದ್ಯವಿದೆ.

ಈ ದೃಷ್ಟಿಯಿಂದ ಬಳ್ಳಾರಿ ಜನತೆ ದುಷ್ಟಿನ ವಿವಿಧ ವಂಗಡಗಳವರು ಈ ವರ್ಷಸಮಯದಲ್ಲಿ ಒಗ್ಗಟ್ಟಿನಿಂದ ಮುಂದೆ ಹೆಜ್ಜೆ ಇಡಬೇಕಾದುದು ಅತಿ ಅಗತ್ಯವಾಗಿದೆ. ವ್ಯಾಂತೀಕ ಕಾಂಗ್ರೆಸ್ ಮುಖಂಡರಲ್ಲಿ ಅವಿಶ್ವಾಸವನ್ನು ವ್ಯಕ್ತ ಪಡಿಸಿ ಬಿಸುಸು ಸುದಿಗಳಿಂದ ಅನಪೇಕ್ಷಿತ ಭಾವೆಯಲ್ಲಿ ರಚನಾತ್ಮಕ ಸೂಚನೆಗಳಿಲ್ಲದೆ, ಸಂಪಾದಕೀಯಗಳನ್ನು ಪ್ರಕಟಿಸುವದರಿಂದ ಕಾರ್ಯಸಾಧನೆಗೆ ಬದಲಾಗಿ ಈ ದಾರಿಯಲ್ಲಿ ಅನಿರೀಕ್ಷಿತ ಘಟನೆಗಳಾಗಿ ವಂಗಡ ಸಂಗಡಗಳಲ್ಲಿ ವೈಮನಸ್ಯವು ಬೆಳೆಯುತ್ತದೆ.

ತಾವು ಬಹುಸಂಖ್ಯಾಕರೆಂಬ, ತಮಗೆ ಜನಬಲವಿದೆಯೆಂಬ ದುಷ್ಟ ಪ್ರವೃತ್ತಿಯಿಂದ ಮದಾಂಧರಾದ ಕೆಲ ತಿಳಿಗೇಡಿ ತರುಣರು ಜಿಲ್ಲೆಯ ವಿಜಭನೆಯಂಥ ಮುಖ್ಯ ಸಮಸ್ಯೆಯನ್ನು ಚರ್ಚಿಸುವ ಸಭೆಗಳಿಗೆ ತಮ್ಮವರೇ ಆದ ಅಲ್ಪಸಂಖ್ಯಾಕರನ್ನು ಆಹ್ವಾನಿಸದೆ ಬಹಿಷ್ಕರಿಸುತ್ತಿರುವರು ಇದು ತಮ್ಮ ತಾಲಮೇಲೆ ಕೊಡಲಿ ಪ್ರಹಾರ ಮಾಡಿಕೊಂಡಂತೆಂಬುದು ಅವರಿಗೆ ತೀಕ್ಷ್ಣವಾಗಿ ಜ್ಞಾನೋದಯವಾಗಿರದು. ಇಂಥ ಸಂಕುಚಿತ ಪ್ರವೃತ್ತಿಯು ಅನುಭವಿಗಳಾದ ಕಾರ್ಯಕರ್ತರಿಗಿರುವುದಿಲ್ಲ.

ಕೆಲವರ ಅವಪ್ರಚಾರದಿಂದ ತಿಳಿಗೇಡಿತನದಿಂದ ಮುಖ್ಯ ಸಮಸ್ಯೆಯನ್ನು ಮರೆಯಬಾರದಂತಿಲ್ಲ. ಇದು ಬಾಳಿನ ಪ್ರಶ್ನೆ ನಮ್ಮ ಪ್ರಾಂತ ನಮ್ಮ ಭಾಷೆ ಎಂಬ ಗಾಢ ಪ್ರೇಮವು ಸಂಕೀರ್ಣ ದೃಷ್ಟಿಯವರಿಂದ ನಾಶವಾಗಲಾರದು. ಹೊಸ ಗಾರಿಕೆಯನ್ನರಿತ ಆಯಾಕ್ಷೇತ್ರಗಳಲ್ಲಿ ಪ್ರತಿಭಾವಂತರಾದ ಜನನಾಯಕರು ಆದವಾನಿ, ಆಲೂರು, ರಾಯದುರ್ಗ ತಾಲೂಕುಗಳಲ್ಲಿ ಜನತಾಭಿಪ್ರಾಯವನ್ನು ಸ್ಥಿರಗೊಳಿಸಬೇಕು. "ನಮ್ಮನ್ನು ಬಳ್ಳಾರಿ ಜಿಲ್ಲೆಯಿಂದ ಪ್ರತ್ಯೇಕಿಸದಿರಿ" ಎಂಬುವ ಕೂಗು ಮೂರು ತಾಲೂಕುಗಳಲ್ಲೇ ಪ್ರಜ್ವಲಿತವಾಗಿ ದೆಲ್ಲಿಗೆ ಮುಟ್ಟಬೇಕು. ಆಂಧ್ರ ಪ್ರಾಂತ ನಿರ್ಮಾಣವು ಜನವರಿ ೨೬ ರೊಳಗಾಗಿ ಆಗುವಂತಿಲ್ಲವಾದರೂ, ಮುಂದೆ ಗಂಡಾಂತರವಿದೆಯೆಂದೂ, ಏಕಪ್ರಾಂತ ನಿರ್ಮಾಣದಿಂದ ಬಳ್ಳಾರಿಗೆ ಭಕ್ಕೆ ಕಟ್ಟುವದೆಂದೂ ಬಳ್ಳಾರಿಗರು ಅರಿಯಬೇಕು. ಸಹಕಾರದಿಂದ ತಮ್ಮ ಕರ್ತವ್ಯವನ್ನು ಪ್ರತಿವ್ಯಕ್ತಿಯೂ ನೆರವೇರಿಸಿದಾಗಲೇ ಬಳ್ಳಾರಿಗೆ ಮೋಕ್ಷ.

ಹೊಸಪೇಟೆ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

S. C. 549/49.

ಶ್ರೀ ವೆಂಕಟರಮಣಸ್ವಾಮಿ ಪರ್ಮನೆಂಟು ಭಂಡಾರ ಲಿಮಿಟೆಡ್.

ಬೈ ಇಟ್ಸ್ ಸೆಕ್ರಟರಿ:
ಟಿ. ಶ್ರೀನಿವಾಸಮೂರ್ತಾಚಾರು,
ಹರಪನಹಳ್ಳಿ. ....ವಾದಿ

Vs.

ಹೊಸಹಳ್ಳಿ ಮರದ ಅಜ್ಜಯ್ಯ ವಗೈರಾ
....ಪ್ರತಿವಾದಿ ಹೊಂಬಳಗಟ್ಟು.

ಮೇಲಿನ ನಂಬರಿನಲ್ಲಿ ವಾದಿ ಸೊಸೈಟಿ ನಿನ್ನ ಮೇಲೂ ನಿನ್ನ ಜಾಮೀನುದಾರರ ಮೇಲೂ 102-14-3 ಗೆ ದಾವಾ ನೂಡಿರುತ್ತಾರೆ. ಸದರಿ ದಾವಾ 19-1-50 ಕ್ಕೆ ವಾಯ್ದೆ ಇರುತ್ತದೆ. ಅಷ್ಟೊವರೆ ನಿನಾದರೂ ಇದ್ದಲ್ಲಿ ಸದರಿ ವಾಯ್ದೆದಿನ ಹಾಜರಾಗಿ ತಿಳಿಸಬೇಕು. ಇಲ್ಲವಾದರೆ ಡಿಕ್ರಿ ಆಗುವದು.

ಹೊಸಪೇಟೆ. ಹಜ್. ಗೋವಿಂದಾಚಾರ್
೩-೧-೫೦ ಅಡ್ವೊಕೇಟು.

ಜೋಳ, ನವಣೆಗೇಕೆ ನಿಯಂತ್ರಣ?

ಸರ್ಕಾರದ ನಿರಂಕುಶ ವ್ಯವಹಾರ.

—೦—

ಬಳ್ಳಾರಿ ಜಿಲ್ಲಾ ಆಹಾರ ಸಮಿತಿಯಲ್ಲಿ ಅಕ್ಕಿಯಲ್ಲದ ಇತರ ಧಾನ್ಯಾದಿಗಳ ಸಾಗಾಟಕ್ಕೆ, ಮಾರಾಟಕ್ಕೆ, ಸಂಗ್ರಹಕ್ಕೆ ನಿಯಂತ್ರಣ ಇರಬಾರದೆಂಬ ತೀರ್ಮಾನವು ಸರ್ವಾನುಮತದಿಂದ ವಾಸಾಯಿತು. ಕಲೆಕ್ಟರವರು ತಮ್ಮ ಸಿಫಾರಸಿನಿಂದ ಸರ್ಕಾರಕ್ಕೆ ಇದನ್ನು ಕಳುಹಿಸಿದರು. ಇದಾದನಂತರ ಆಹಾರ ಮಂತ್ರಿಗಳಾದ ಶ್ರೀ ರಾಜೆ ವಿಕ್ಟೋರಿಯಾರವರು ಬಂದಾಗ ಈ ವಿಷಯವನ್ನು ನಿವೇದಿಸಲಾಯಿತು. ಅವರೂ ಮೇಲ್ಕಾಣಿಸಿದ ಅಭಿನ್ಯಾಯಕ್ಕೆ ತಮ್ಮ ಅನೋದನೆ ಇತ್ತು ತಕ್ಕ ಆರ್ಡರ್ ಹೊರಡಿಸುವದಾಗಿ ಹೇಳಿದರು. ಆದರೆ ಇಲ್ಲಿಯವರೆವಿಗೂ ಸರ್ಕಾರದಿಂದ ಯಾವವಿಧವಾದ ಅನುಕೂಲವುಆಗಲಿಲ್ಲ.

ಸರಕಾರವು ಜನತಾ ಅಭಿಪ್ರಾಯವನ್ನುಲ್ಲಂಘಿಸಿ ನಿರಂಕುಶವಾಗಿ ವರ್ತಿಸುತ್ತಲಿದೆಯೆಂಬುದಕ್ಕೆಯಾವ ಸಂಶಯವೂ ಇಲ್ಲ. ಏಕೆಂದರೆ– ಬಳ್ಳಾರಿ, ಕಡಪಾ, ಕರ್ನೂಲು, ಅನಂತಪುರ ಜಿಲ್ಲೆಗಳಲ್ಲಿ ಜೋಳ, ನವಣೆಯೇ ಜನತೆಯ ಮುಖ್ಯ ಆಹಾರ. ಈ ಜಿಲ್ಲೆಗಳಲ್ಲಿ ಈ ಬೆಳೆಯೂ ಅಧಿಕವಾಗಿದೆ. ಸರ್ಕಾರದವರು ಈಜಿಲ್ಲೆಗಳಲ್ಲಿ ಸಂಗ್ರಹಿಸಿದ ಈ ಧಾನ್ಯಗಳನ್ನು ಇಲ್ಲಿಯವರಿಗೆ ಪೂರ್ಣವಾಗಿ ಸಾಗಿಸುವೇ ಇಲ್ಲ. ಕೆಲಕಡೆ ಪಡಕೂಡ ಕೊಟ್ಟಿಲ್ಲ. ಸರ್ಕಾರವು ನಿಗದಿಮಾಡಿದ ದರಗಳಿಗೆ ಅವರ ಡಿಪೋಗಳಿಂದ ಧಾನ್ಯಗಳನ್ನು ತೊಳ್ಳಲು ಜನತೆಯು ಸಿದ್ಧವಿಲ್ಲ. ಹೀಗಿದ್ದೂಕೂಡ ಸರ್ಕಾರಕ್ಕೆ ಈ ದುಷ್ಪ ಹಟ ಏತಕ್ಕೆ?

ಅಲ್ಲದೆ ಜೋಳ, ನವಣೆ ಏಗೈರಿ ಧಾನ್ಯಗಳ ನಿಯಂತ್ರಣದಿಂದ ಅಕ್ಕಿಯ ಬೇಡಿಕೆಯೂ ಕಡಮೆಯಾಗುವುದು ಇದನ್ನು ಶಾಸನ ಸಭಾಸದರು ಸರ್ಕಾರದ ಗಮನಕ್ಕೆ ತಂದು ಪರಿಹಾರವನ್ನು ದೊರಕಿಸಲಿ ಎಂದು ಆಶಿಸುತ್ತೇನೆ.

[ಒಬ್ಬ ಫುಡ್ ಕಮಿಟಿ ಮೆಂಬರ್]

ಶಿರುಗುಪ್ಪ ತಾಲೂಕು ದೇವದಾಸಿ ಬಿಲ್.

ಬಳ್ಳಾರಿಜಿಲ್ಲೆಯ ಸಿರುಗುಪ್ಪ ತಾಲೂಕಿನಲ್ಲಿ ಬಸವಿಯರನ್ನು ಬಿಡುವ ಪದ್ಧತಿಯು ಅಂತವಾಗಿಲ್ಲ. ಜೋರಾಗಿ ನಡೆಯುತ್ತಲೇ ಇದೆ. ಗುಪ್ತವಾಗಿ ಮುದ್ರೆ ಹಾಕಿ ಈ ದುಷ್ಟ ವ್ಯಾವಾರಕ್ಕೆಡೆಗೊಡುವ ಕಾರ್ಯವು ಸಾಗಿಯೇ ಇದೆ. ಈ ತಾಲೂಕಿನಲ್ಲಿ ಒಬ್ಬರನ್ನಾದರೂ ಜೈಲಿಗೆ ಕಳುಹಿಸಿದ್ದರೆ ಇದರ ಪರಿಣಾಮ ಭಯಂಕರವಾಗುತ್ತದೆ. ಬ್ಯಾಡರಲ್ಲಿ ಅದರಲ್ಲೂ ಹರಿಜನರಲ್ಲಿ ಈರೂಢಿಯು ಅತಿಯಾಗಿದೆ. ಹರಿಜನ ಸಂಘದವರ ಪ್ರಚಾರ ಈ ತಾಲೂಕಿನಲ್ಲಿ ಅಷ್ಟು ಯಶಸ್ವಿಯಾಗಿಲ್ಲ. 'ಬಸವಿ' ಬಿಡುವ ಕಾರ್ಯವು ಪೋಲೀಸ್ ಅವಲಂಭವಾದಾಗಲೇ (Cognisable offence) ಈ ಕಾರ್ಯಕ್ಕೆ ತಡೆಯಾದೀತು. ಫಸ್ಟ್ ಕ್ಲಾಸ್ ಮೇಜಿಸ್ಟ್ರೇಟರ ಕೋರ್ಟಿಗೆ ಹೋಗಿ ತಮ್ಮ ಖರ್ಚಿನಿಂದ ಸಾಕ್ಷಿ ಪುರಾವೆಯೊದಗಿಸಿ ತಪ್ಪಿತಸ್ಥರನ್ನು ಶಿಕ್ಷೆಗೆ ಗುರಿಮಾಡುವದು ಕಷ್ಟ ಸಾಧ್ಯವಾದ ಕೆಲಸ. ಈ ಕಾರಣ ಸರ್ಕಾರವು ಇದನ್ನು ನಿಲ್ಲಿಸಬೇಕೆಂದರೆ– ಪೋಲೀಸ್ ಅಪರಾಧವನ್ನಾಗಿ ಮಾಡಬೇಕು. ಇದಕ್ಕೆ ಶಾಸನ ಸಭೆಯ ಸಹಕಾರ ಬೇಕು. ಇದಕ್ಕೆ ತಕ್ಕ ಪ್ರಯತ್ನ ಮಾಡಲೆಂದು ಬೇಡುತ್ತೇನೆ.

ವಿರುಪಾಕ್ಷಪ್ಪ,
ಆರಳಿಗನೂರು.

ಕರ್ನಾಟಕ ತರುಣ ಸಂಘ ಹರಪನಹಳ್ಳಿ.

ಆದಿತ್ಯವಾರ ದಿನಾಂಕ 8-1-50 ರಲ್ಲಿ ಸಂಘದ ಸಲಹೆಗಾರರ ಸಭೆಯ ಶ್ರೀಯುತ ಡಾ॥ ರಾಮಣ್ಣಾಯರ ಅಧ್ಯಕ್ಷತೆಯಲ್ಲಿ ಸೇರಿ, ಆಡಿಟ್ ಆದ 1949ನೇ ವರ್ಷದ ಲೆಕ್ಕ ಪತ್ರಗಳನ್ನು ಪರಿಶೀಲಿಸಿ ಶಿಲ್ಕು ಹಣವನ್ನು ಸ್ಥಳಿಕ ಸಹಕಾರ ಸಂಘದಲ್ಲಿ ನಿರಪು ತೇವಣಾತಿಯಾಗಿಡಬೇಕಂತಲೂ ಸಂಘವನ್ನು ರಿಜಿಸ್ಟರು ಮಾಡಿಸುವ ಕೆಲಸವನ್ನು ಸದ್ಯಕ್ಕೆ ಮುಂದೂಡಬೇಕೆಂತಲೂ ನಿರ್ಣಯಿಸಿತು.

ಜಮಾ—

ಸದಸ್ಯರಿಂದ ಚಂದಾ,	
ಪೋಷಕರಿಂದ ಸಹಾಯ ಧನ, ಮತ್ತು ನಾಟಕದಂಪಿ ಗುತ್ತನ್ನಸೇರಿ ವಸೂಲಿ ಆದಷ್ಟು ಮೊಬಲಗು	ರು. 694-13-0

ಖರ್ಚು:—

ಟೋರ್ನಮೆಂಟ್, ಪಂದ್ಯಾಟಗಳು, ಸಂಗೀತ, ಸಾಹಿತ್ಯೋತ್ಸವ, ನಾಟಕ ಮುಂತಾದ ಖರ್ಚು	ರು. 399-6-3
ನಿಕ್ಕಿ ಶಿಲ್ಕು	ರು. 195-8-9

ಅಲ್ಲದೆ ವಸೂಲು ಆಗತಕ್ಕದ್ದು ರು. 72-8-0 ಇದೆ; ಮತ್ತು ಸೇಲ್ಸ್ ಟಾಕ್ಸ ಆಫೀಸುನಲ್ಲಿ ಡಿವಾಜಿಟ್ ಇರುವ ರು. 50-0-0 ಪೈಕಿ ಅಂದಾಜು 30-0-0 ಟ್ಯಾಕ್ಸ ಹೋಗಲಾಗಿ ಉಳಿದ ಹಣ ಬರಲಿದೆ.

ಸಂಘಕ್ಕೆ ಹರಪನಹಳ್ಳಿಯ ತಾಲೂಕಿನ ಪ್ರತಿಯೊಬ್ಬರು ಸದಸ್ಯರಾಗಿ, ಸಂಘವು ಕೈಕೊಳ್ಳಬೇಕೆಂದಿರುವ ಅನೇಕ ಮಹತ್ಕಾರ್ಯಗಳಿಗೆ ಧನ ಸಹಾಯ ಮಾಡಬೇಕಾಗಿ ಅರಿಕೆ.

ರಾ॥ ಹಯವದನ.
ಸಂಚಾಲಕ.

ಆದವಾನಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಸಮ್ಮರಿ ದಾವಾ ನಂಬರ್ 405/49.

ಭೀಮರೆಡ್ಡಿ ತಂದೆ ತಿಪ್ಪಾರೆಡ್ಡಿಗಾರಿ ವೆಂಕಟರೆಡ್ಡಿ ಕಾಪು ಕುಲ, ಜಗಾಯ್ತಿದಾರ, ಕುಂತಿತನಗರ್ತ ಗ್ರಾಮ, ಆಲೂರು ತಾಲೂಕು. ....ವಾದಿ

ವಿರುದ್ಧ

ಕ್ರಿಷ್ಣಪ್ಪ, ತಂದೆ ಪೆಸರು ಪೆದ್ದನಾಗಪ್ಪ ಕುರುಬ ಕುಲ ಜಗಾಯ್ತಿದಾರ, ಮಾವಿನಹಳ್ಳಿ, ಹೊಸಪೇಟೆ ತಾಲೂಕು. ....ಪ್ರತಿವಾದಿ

ವಾದಿಯು ಪ್ರತಿವಾದಿಯ ಮೇಲೆ ಸದರಿ ಕೋರ್ಟಿನಲ್ಲಿ ವ್ಯಾಮಿಸರು ನೋಟಿನ ಸಂಬಂಧ ರೂ. 633-7-0 ಗೆ ದಾವಾ ಮಾಡಿರುತ್ತಾನೆ. 19-1-'50 ಕ್ಕೆ ವಾಯ್ದೆ ಇದೆ. ಅಂದು ಸದರಿ ಕೋರ್ಟಿನಲ್ಲಿ ಉದಯ 11 ಗಂಟೆಗೆ ವಾದಿಯು ಖುದ್ದಾಗಲಿ ವಕೀಲರ ಮೂಲಕವಾಗಲಿ ಹಾಜರಾಗಿ ಅಕ್ಷೇಪಣೆ ತಿಳಿಸದಿದ್ದಲ್ಲಿ, ಯಕ್ಪಾರ್ಟಿ ವಿಚಾರಣೆ ನಡೆಸಲಾಗುವುದೆಂದು ಈ ಮೂಲಕ ತಿಳಿಸಲಾಗಿದೆ.

ಬಳ್ಳಾರಿ 24-12-49	ಆರ್. ನಾರಾಯಣರಾವ್ ವಾದಿಯ ಅಡ್ವೊಕೇಟು.

ಬಳ್ಳಾರಿಯಿಂದ ದೆಲ್ಲಿಗೆ ಹೋಗಿರುವ 3 ಶಿಷ್ಟಮಂಡಲಗಳ ಉದ್ದೇಶ:—

1. ಇಡೀಜಿಲ್ಲೆಯನ್ನು ಆಂಧ್ರಕ್ಕೆ ಸೇರಿಸಬೇಕು. —ಬಳ್ಳಾರಿ ಆಂಧ್ರ ಸಭೆ
2. ಇಡೀ ಜಿಲ್ಲೆಯನ್ನು ಮದ್ರಾಸ್‌ಕ್ಕೆ ಸೇರಿಸಿ ಮುಂದಿನ ಕರ್ನಾಟಕದಲ್ಲಿ ಸಮ್ಮಿಳಿತವಾಗಬೇಕು
   — ಬಳ್ಳಾರಿ ಕರ್ನಾಟಕರು
3. ಸದ್ಯಕ್ಕೆ ಯಾವ ವ್ಯತ್ಯಾಸವೂ ಆಗದಿರುವಂತೆ ನೋಡಿಕೊಳ್ಳಬೇಕು.
   ರಾಯಲಸೀಮೆ ಸಹಾಯಕ ಸಭೆ

ಈ ಸದಸ್ಯರಲ್ಲಿ ಕೆಲವರು ವಿಮಾನಗಳ ಮೂಲಕ ಹೋಗಿದ್ದಾರೆ

ಮೂಲವಿದ್ಯಾಭ್ಯಾಸ

ಸಂಸ್ಕೃತಿ, ಪ್ರಾಕೃತಿಕ ಪರಿಸ್ಥಿತಿ ಇವುಗಳಿಗೆ ಅನುಕೂಲವಾದ ಶಿಕ್ಷಣವೇ ಶಿಕ್ಷಣ

ನಮ್ಮ ದೇಶದ ಸಂಸ್ಕೃತಿ, ಹವಾಮಾನ ಪ್ರಾಕೃತಿಕ ಪರಿಸ್ಥಿತಿ ಇವುಗಳಿಗೆಲ್ಲಾ ಅನುಕೂಲವಾದ ವಿದ್ಯಾವದ್ಧತಿಯೇ ಮೂಲ ವಿದ್ಯಾಭ್ಯಾಸ ಪದ್ಧತಿಯಾಗಿದೆ. ಗಾಂಧೀಜಿಯವರು ಇದನ್ನು ನಮ್ಮ ದೇಶಕ್ಕೆ ಯೋಗ್ಯಪದ್ಧತಿಯೆಂದು ಹೇಳಿದ್ದಾರೆ. ಅನೇಕ ವಿದ್ಯಾವಂತರೂ ಶಿಕ್ಷಣಶಾಸ್ತ್ರದಲ್ಲಿ ಚೆನ್ನಾಗಿ ಪರಿಶ್ರಮಪಟ್ಟರೂ ಈ ಕ್ರಮವನ್ನು ಶ್ಲಾಘಿಸಿದ್ದಾರೆ. ಇಂದು ಇಡೀ ಜಗತ್ತಿನಲ್ಲೇ ಮೂಲಶಿಕ್ಷಣದ ಕತ್ವವು ಹಬ್ಬುತ್ತಿದೆ. ಕಸಬುಗಳ ಮೂಲಕ ಸ್ವಾವಲಂಬಕತನವನ್ನು ಕಲಿಸುವುದೂ ಈ ವಿದ್ಯಾಭ್ಯಾಸದ ಮುಖ್ಯ ಉದ್ದೇಶಗಳಾಗಿವೆ. ತನಗೆ ಬೇಕಾದ ಯಾವ ಕೆಲಸವನ್ನಾದರೂ ಮಾಡಲು ಮಗು ಹಿಂಜರಿಯದೆ ಕೈಲಾದಷ್ಟು ಪರಾವಲಂಬನದಿಂದ ಬಿಡುಗಡೆ ಹೊಂದುತ್ತದೆ.

ಶುಚಿತ್ವವೂ ಒಳ್ಳೆಯ ಗುಣ ನಡತೆಗಳೂ ವಿದ್ಯಾಭ್ಯಾಸದ ತಳಪಾಯಗಳಾಗಿವೆ. ಶುಚಿತ್ವವಿಲ್ಲದಿದ್ದರೆ ರೋಗರುಜಿಗಳಿಗೆ ಅವಕಾಶವಾಗುವುದು. ರೋಗಿಷ್ಠರಾದ ಮಕ್ಕಳು ಓದುವುದಾದರೂ ಹೇಗೆ? ಮಾನಸಿಕ ಬೆಳವಣಿಗೆಗೆ ದೈಹಿಕ ಆರೋಗ್ಯವೂ ಮುಖ್ಯ ಕಾರಣವಾಗಿದೆ. ಮಕ್ಕಳು ಚಿಕ್ಕಂದಿನಲ್ಲೇ ಶುಚಿತ್ವದ ಕಡೆಗೆ ಎಚ್ಚರ ತೆಕ್ಕೊಳ್ಳುವಂತೆ ಅವರನ್ನು ಪಳಗಿಸಬೇಕು. ಮೈಕೈಗಳನ್ನು ತೊಳೆಯುವುದರಲ್ಲಾಗಲಿ ಹಲ್ಲು ಉಜ್ಜಿ ಶುಚಿಯಾಗಿಸುವುದರಲ್ಲಾಗಲೀ ಉದಾಸೀನರಾಗದಂತೆ ನೋಡಿಕೊಳ್ಳಬೇಕು. ಕೈಗಳಲ್ಲಿ ಉಗುರು ಬೆಳೆಸುವುದು, ಬೆರಳು ಕಡ್ಡಿ ಪೆನ್ಸಿಲ್ ಇತ್ಯಾದಿಗಳನ್ನು ಕಚ್ಚುವುದು ಆಗಾಗ ಉಗುಳುವುದು. ಮೂಗಿನ ಹೊಳ್ಳೆಗೆ ಬೆರಳು ಹಾಕುವುದು, ನೆಗಡಿಯಾದರೆ ಸಿಂಬಳವನ್ನು ಕೈಯಿಂದ ಒರಸಿಕೊಳ್ಳುವುದು, ಇತ್ಯಾದಿ ದುರಭ್ಯಾಸಗಳು ಅಂಟದಂತೆ ನೋಡಿಕೊಳ್ಳಬೇಕು. ಉಣ್ಣುವಾಗಾಗಲಿ ತಿನ್ನುವಾಗಾಗಲಿ ಕ್ರಮದಂತೆ ನಡೆದುಕೊಳ್ಳಲು ಕಲಿಸಬೇಕು. ಈ ಶಿಕ್ಷಣಕ್ರಮದಲ್ಲಿ ಮಕ್ಕಳೇ ಗೃಹಕೃತ್ಯವನ್ನು ನೋಡಿಕೊಳ್ಳುತ್ತಾರೆ. ಬಟ್ಟೆ ಒಗೆದುಕೊಳ್ಳತ್ತಾರೆ. ಊಟಕ್ಕೆ ಬೇಕಾದ ತರಕಾರಿ ಕೊಯ್ದು ತಯಾರಿಸುತ್ತಾರೆ. ನುರಕಲಸ, ಕಸ ಹೊರಕಲಸವೆಂದಿಲ್ಲದೆ ಎಲ್ಲಾ ಕಸಬುಗಳನ್ನೂ ಕಲಿಯುತ್ತಾರೆ.

ನಮ್ಮ ದೇಶದಲ್ಲಿ ಮೂಲವಿದ್ಯಾಭ್ಯಾಸವು ಮಕ್ಕಳ ಅಭಿವೃದ್ಧಿಗೆ ಅತ್ಯಂತ ಯೋಗ್ಯವಾಗಿದೆ. ಮಕ್ಕಳು ಹೇಗೆ ಶುಚಿಯಾಗಿರಬೇಕು? ಹೇಗೆ ಉಣ್ಣುವಾಗ, ತಿನ್ನುವಾಗ ವರ್ತಿಸಬೇಕು? ಮನೆಯಲ್ಲಿ ಇತರರಿಗೆ ಸಹಾಯಮಾಡಬೇಕು? ಶಾಲೆಯಲ್ಲಿ ಆಟದ ಬಯಲಲ್ಲಿ ಹಾಗೂ ಹೋದಲ್ಲೆಲ್ಲಾ ಹೇಗೆ ನಡೆದುಕೊಳ್ಳಬೇಕು ಇತ್ಯಾದಿಯಾಗಿ ಜೀವನೋಪಯೋಗಿಯಾದ ಶಿಕ್ಷಣವನ್ನು ಈ ಪದ್ಧತಿಯು ಒದಗಿಸುತ್ತದೆ.

ಕೆಲವು ಜನರು ಈ ಪದ್ಧತಿಗೆ ನಿರ್ದಿಷ್ಟವಾದ ಪಾಠದ ಪಟ್ಟಿಯಿಲ್ಲವೆಂದು ಆಕ್ಷೇಪಿಸಬಹುದು. ಆದರೆ ಹಿಂದುಸ್ಥಾನಿ ತಾಲೀಂ ಸಂಘದವರು ತಯಾರಿಸಿದ ಪಾಠದ ಪಟ್ಟಿಯು ಈ ಪದ್ಧತಿಗೆ ಅತ್ಯುಪಯುಕ್ತವಾಗಿದೆ. ಈ ಪಟ್ಟಿಯಂತೆ ಓದುಬರಹ, ಲೆಕ್ಕ, ಸಾಮಾನ್ಯ ವಿಜ್ಞಾನ, ಕಲೆ, ಸಂಗೀತ ಹಾಗೂ ನ್ಯಾಯಾಮ, ಇವಕ್ಕೆಲ್ಲಾ ಅವಕಾಶವಿದೆ. ಪಾಠಪಟ್ಟಿಯು ಯುಕ್ತವಾಗಿದ್ದರೂ ವಿವರವಾಗಿಲ್ಲವೆಂಬುದೇನೋ ನಿಜ. ಆದರೆ ಇದರಿಂದ ಅಧ್ಯಾಪಕರಿಗೆ ಆಯಾಯ ವಾತಾವರಣ ಅನುಕೂಲತೆಗಳಿಗೆ ಅನುಸಾರವಾಗಿ ವಿವರವಾಗಿಸಿಕೊಂಡು ಕಲಿಸಲು ಅನುಕೂಲವಾಗಬಹುದು

ವಿದ್ಯಾಭ್ಯಾಸ.

ಹಿಂದಿನ ಪ್ರಾಥಮಿಕ ತರಗತಿಗಳಿಗಿಂತ ಮೂಲಶಿಕ್ಷಣ ತರಗತಿಗಳು ಅವೆನ್ನೆಂದು ಬದಲಾಗಿಲ್ಲ. ಕಾಲವಿಯಮಾನ ಪಟ್ಟಿಯಲ್ಲಿ ಎರಡು ಗಂಟೆಗಳನ್ನು ಕೈಕಸಬುಗಳಿಗಾಗಿ ವಿಂಗಡಿಸಿದ್ದನ್ನು ಬಿಟ್ಟರೆ ಹೆಚ್ಚೇನೂ ವ್ಯತ್ಯಾಸವಿಲ್ಲ. ಆದರೆ ವಾತಾವರಣ ಮಾತ್ರ ಸಂಪೂರ್ಣ ಬದಲಾಗಿ ಕಾಣುತ್ತಿದೆ. ಮಕ್ಕಳು ತನ್ನ ತಿಂಡಿನುಗಿಸಿ ಅರ್ಧಗಂಟೆಕಾಲ ನೂಲುವುದನ್ನು ನೋಡಿದರೆ ಮೂಲ ಶಿಕ್ಷಣದ ಮಹತ್ವ ತಿಳಿದೀತು ನೂಲುವಾಗ ವಿಶ್ರಬ್ಧರಾಗಿ ಕೈವಶವಾಗಿ ಕಾರ್ಯಪ್ರೌಢಿಯಿಂದ ಕೆಲಸಮಾಡುವ ಆಸಕ್ತಿಯನ್ನು ನೋಡಿದರೆ ವಿದ್ಯಾರ್ಥಿ ಆನಂದವಾಗುತ್ತಿದೆ ಇಂತಹ ವಿಸ್ತೃತವಿಷಯಗಳು ಹಿಂದಿನ ಪ್ರಾಪಂಚಿಕ ಶಿಕ್ಷಣದತರಗತಿಗಳಲ್ಲಿ ಎಂದೂ ಕಾಣಲಾರವು.

ಮೂಲವಿದ್ಯಾಭ್ಯಾಸವು ಒಂದು ಪ್ರಯೋಗವಾಗಿದೆ ಎಂಬುದೇನೋ ನಿಶ್ಚಯ. ಆದರೆ ಇದು ನಮ್ಮ ಶಾಲೆಗಳಿಗೆ ಮಾತ್ರವಲ್ಲ ನಮ್ಮ ಜನಾಂಗಕ್ಕೇ ಒಗ್ಗುವಂತಹದೇ ಎಂದು ಪ್ರಯೋಗಿಸಿನೋಡಬೇಕಾದ ವಿಷಯವಾಗಿದೆ. ನಾವು ಈ ಪದ್ಧತಿಯ ಸಾಧಕ ಬಾಧಕಗಳನ್ನು ಪ್ರತ್ಯಕ್ಷ ಅನುಭವದಿಂದ ತಿಳಿದುಕೊಂಡು ಕುಂದು ಕೊರತೆಗಳನ್ನು ತಿದ್ದಿ ಸರಿಪಡಿಸಿಕೊಳ್ಳಬಹುದು.

ಕಸಬುಗಳೇ ಮುಖ್ಯವಾಗಿರುವ ಶಿಕ್ಷಣ ಕ್ರಮಕ್ಕಿಂತಲೂ ಮೂಲಶಿಕ್ಷಣ ಪದ್ಧತಿಯು ದೊಡ್ಡದಾಗಿದೆ ಮೂಲಶಿಕ್ಷಣದಲ್ಲಿ ಸಾಮಾಜಿಕ ಕ್ರಿಯಾಕಲಾಪಗಳಿಗೇ ಹೆಚ್ಚಿನ ಅವಕಾಶವಿಲ್ಲ. ಮೂಲ ಶಿಕ್ಷಣದಿಂದ ನಮ್ಮ ದೇಶದ ಒಗ್ಗಟ್ಟಿಗೆ ತಳಹದಿ ಹಾಕಿದಂತಾಗುಬಹುದು. ಜನಾಂಗದ ಮೂಲಾಧಾರವಾದ ಮಕ್ಕಳು ಸ್ವಾವಲಂಬಿಗಳಾಗಿ ಸ್ವತಂತ್ರವಾಗಿ ಜೀವನ ನಡೆಸುವ ವ್ಯಕ್ತಿಗಳಾದರೆ ದೇಶದ ಸ್ವಾತಂತ್ರ್ಯವೂ ಭದ್ರವಾಗಿ ಬಡತನ ಅಜ್ಞಾನವನ್ನು ಹೋಗಲಾಡಿಸಬಹುದು. ಇದರಿಂದ ಮೂಲಶಿಕ್ಷಣಕ್ಕೆ ಎಲ್ಲರೂ ಪ್ರೋತ್ಸಾಹಿಸುವುದು ಅತ್ಯಗತ್ಯವಾಗಿದೆ.

ಶ್ರೀ ಬಿ. ಭೀಮರಾವ್.

[ಬಳ್ಳಾರಿಯನ್ನು ಅಭಿವೃದ್ಧಿ ಮಾಡಬೇಕೆಂದು ನಾವು ಹೇಳುತ್ತಿದ್ದೇವೆ]

"ಡಾಕ್ಟರ್ ಪಟ್ಟಾಭಿ ಸುಂದರಮ್ಮನವರ ವಿದ್ಯಾಸಿನಲ್ಲಿ ಒಂದು ಹೇಳಿಕೆಕೊಟ್ಟು ಇಡೀ ಬಳ್ಳಾರಿ ಜಿಲ್ಲೆಯನ್ನು ಅಭಿವೃದ್ಧಿ ಸೇವಾ ಸುವುದೊಳ್ಳೆಯದೆಂದ ನಾನು ಹೇಳಿದ್ದೆನೆಂಬುದಾಗಿ ಅಂದಿರಂತೆ. ಇದು ಸತ್ಯದೂರವಾಗಿದೆ, ಜಿಲ್ಲೆಯ ಅಭಿವೃದ್ಧಿಯನ್ನು ಕಾಯಬೇಕೆಂದು ಅವರು ಅಂದರು ಅದಕ್ಕೆ ನಾನು ಒಪ್ಪಿ ಕರ್ನಾಟಕ ಪ್ರಾಂತವು ನಿರ್ಮಾಣವಾಗುವವರೆಗೆ ಇಡೀ ಜಿಲ್ಲೆಯು ಮದ್ರಾಸ್‌ದಲ್ಲಿರತಕ್ಕದ್ದೆಂದು ಹೇಳಿದೆನು" ಎಂದು ಶ್ರೀ ಬಿ. ಭೀಮರಾಯರು ಪತ್ರಿಕೆಗಳಿಗೆ ಹೇಳಿಕೆ ಕೊಟ್ಟಿರುವರು.

ಬಳ್ಳಾರಿ ಜಿಲ್ಲಾ ಜಡ್ಜರವರ ಕೋರ್ಟಿನಲ್ಲಿ

ಒ. ಸಿ. ನಂ. 671/1949.

ಮೊಲಗವೇಲಿ ಲಕ್ಷ್ಮಿರೆಡ್ಡಿಯರ ಆಸ್ತಿಯ ವಾರಸು ಸಂಬಂಧ

ಎಂ. ಲಕ್ಷ್ಮಿಕಾಂತರೆಡ್ಡಿ — ಅರ್ಜಿದಾರ ಮತ್ತು

ಅಂಬಮ್ಮ — ರೆಸ್ಪಾಂಡೆಂಟ್

ಅರ್ಜಿದಾರನಾದ ೨೭ ವರ್ಷ ವಯಸ್ಸಿನ ಲಕ್ಷ್ಮಿಕಾಂತರೆಡ್ಡಿಯು ದಿವಂಗತ ಮೊಲಗವೇಲಿ ಲಕ್ಷ್ಮಿರೆಡ್ಡಿಯ ಮಗನಿದ್ದು ಅವರ ಆಸ್ತಿಗೆ ಹಕ್ಕುದಾರನಿದ್ದಾನೆಂದೂ, ತನಗೆ ವಾರಸು ಸರ್ಟಿಫಿಕೇಟು ಬರಬೇಕೆಂದೂ ಅರ್ಜಿ ಇಟ್ಟಿರುತ್ತಾನೆ ಅಂಬಮ್ಮನು ಲೇಟ್ ಲಕ್ಷ್ಮಿರೆಡ್ಡಿಯ ಪತ್ನಿ ಇರುತ್ತಾಳೆ. ಈ ವಿಚಾರಣೆಯ ವಾಯ್ದೆಯು 20—2- 1950 ಕ್ಕೆ ಹಾಕಲಾಗಿದೆ. ಇಂಡಿಯನ್ ಸಕ್ಸೆಷನ್ ಆಕ್ಟದ ಪ್ರಕಾರಕ್ಕೆ ಸದರಿ ಅರ್ಜಿದಾರನಿಗೆ ವಾರಸು ಸರ್ಟಿಫಿಕೇಟು ಕೊಡಲು ಯಾರದಾದರೂ ಆಕ್ಷೇಪಣೆ ಇದ್ದಲ್ಲಿ ಅವರು ಸದ್ರಿ ವಾಯ್ದೆದಿನ ಖುದ್ದಾಗಲಿ ವಕೀಲರ ಮೂಲಕವಾಗಲಿ ಹಾಜರಾಗಿ ಆಕ್ಷೇಪಣೆ ಕೊಡದಿದ್ದಲ್ಲಿ ಏಕಪಕ್ಷವಾದ ತೀರ್ಮಾನವಾಗಲಿದೆ ಯೆಂದು ಈ ಮೂಲಕ ತಿಳಿಸೋಣವಾಗಿದೆ.

ಹೆಚ್. ಲಿಂಗಾರೆಡ್ಡಿ

ಅರ್ಜಿದಾರರ ಅಡ್ವೋಕೇಟು

ಕಮ್ಯೂನಿಸ್ಟ ಪಾರ್ಟಿಯ ಹಿಂದಿನ ಕಾರ್ಯಕರ್ತೆಗಳಾದ ಶ್ರೀ ಸಿ.ಸಿ. ಜೋಶಿಯವರು ಒಂದು ಪ್ರಕಟನೆ ಹೊರಡಿಸಿ ಕಮ್ಯೂನಿಸ್ಟಪಕ್ಷದ ಮುಖಂಡರು ಭಯಂಕರ ಚಟುವಟಿಕೆಗಳಲ್ಲಿ ಮಗ್ನರಾಗಿರುವರೆಂದೂ ಇದನ್ನು ಪ್ರತಿಭಟಿಸಿ ತಮ್ಮನ್ನು ಹೊರಗೆ ಹಾಕಿರುವುದರಲ್ಲಿ ಆಶ್ಚರ್ಯವಿಲ್ಲೆಂದೂ ಸಾರಿದ್ದಾರೆ.

ಬಾಬು ರಾಜೇಂದ್ರಪ್ರಸಾದರು ಭಾರತ ಪ್ರಜಾರಾಜ್ಯದ ಪ್ರಥಮಾಧ್ಯಕ್ಷರಾಗಿ ಸರ್ವಾನುಮತದಿಂದ ಚುನಾಯಿಸಲ್ಪಡಲಿರುವರೆಂದು ಗೊತ್ತಾಗಿದೆ.

ಬಳ್ಳಾರಿಯಲ್ಲಿ ಕೇಂದ್ರಮಂತ್ರಿ ಸಂತಾನಂರವರು (ಸಾರಿಗೆಶಾಖೆ) ತಿಪ್ಪಮಂಡಳದವರು ಕೊಟ್ಟ ಬೇಡಿಕೆ ಅಂದರೆ, ಚಿತ್ರದುರ್ಗ, ರಾಯದುರ್ಗ ರೈಲ್ವೆ ಕೊಟ್ಟೂರು ಹರಿಹರ ರೈಲ್ವೆ ಹಾಕಲು, ವಾರ್ಷಿಕ ರಿಜಿಸ್ಟ್ರೇಷನ್ ಪದ್ಧತಿ ತೆಗೆದು ಹಾಕಲು ಕೇಳಿದರು. ಬಳ್ಳಾರಿಜಿಲ್ಲೆಯನ್ನು ಇಡಿಯಾಗಿಡಲು ಕೇಳಿಕೊಂಡದ್ದನ್ನು ನೆಹರೂರವರಿಗೆ ತಿಳಿಸುವದಾಗಿ ಹೇಳಿದರು

ಸಮ್ಮ ದೇಶದ ಸಮಾಚಾರ

ಪಂಡಿತ ನೆಹರೂರವರು ತಿರೋಸಿಗೆ ಹೋಗಿ ಪರರಾಷ್ಟ್ರ ಮಂತ್ರಿಗಳ ಪರಿಷತ್ತಿನಲ್ಲಿ ಭಾಗವಹಿಸಿ ಭಾರತಕ್ಕೆ ಮರಳಿದರು ಅಲ್ಲಿ ಕಾಮನ್ ವೆಲ್ತ್ ರಾಷ್ಟ್ರಗಳ ಪರದೇಶ ನೀತಿ, ಕಮ್ಯೂನಿಸಂನ್ನು ಹತ್ತಿಕ್ಕುವ ಉಪಾಯ ವಗೈರೆ ಯೋಚನೆಲಾಗಿ ಕೆಲ ನಿರ್ಣಯಗಳಿಗೆ ಬಂದರು

—:o:—

ಕೂಡ್ಲಿಗಿ:—ಇಲ್ಲಿ ೨೩ ರಿಂದ ೩೦ ರವರಿಗೆ ಮಹಾತ್ಮಗಾಂಧಿ ಚಿತಾ ಭಸ್ಮದ ಸ್ಮಾರಕ ಕಾರ್ಯವಗಳು ನಡೆಯಲಿವೆ ಶೈತಪರಿಷತ್ತು, ಯುವಕ ಪರಿಷತ್ತು ನೆರವೇರುವುದು. ಸಮಾಜವಾದಿ ನಾಯಕರೊಬ್ಬರು ಬರುವರೆಂದು ಆಶಿಸಲಾಗಿದೆ.

ಹಿಂದೀ ಮಹಾ ವಿದ್ಯಾಲಯ, ಬಳ್ಳಾರಿ,

[1931 ಸ್ಥಾಪಿತ. ಬಳ್ಳಾರಿ ಜಿಲ್ಲಾ ಹಿಂದೀ ಪ್ರೇಮೀಮಂಡಲದಾಶ್ರಯದಲ್ಲಿ, ರಿಜಿಸ್ಟರ್ಡ.]

ಮದ್ರಾಸ್ ಸರ್ಕಾರದಿಂದ ಮಾನ್ಯತೆ ಇದೆ.

ಪ್ರಾರಂಭಿಕ ವರ್ಗಗಳಿಗೆ ಮಾಸಿಕ 3/- ಶುಲ್ಕ — ಉನ್ನತ ವರ್ಗಗಳಿಗೆ ಮಾಸಿಕ 5/- ಶುಲ್ಕ

ವಾರ್ಡಲಾ ಹೈಸ್ಕೂಲ್ ಕಟ್ಟಡದಲ್ಲಿ ಪ್ರಾತಃಕಾಲ—ಸಾಯಂಕಾಲ ಹಿಂದೀ ಕಾಲೇಜ್‌ದ ವರ್ಗಗಳು ನಡೆಯುತ್ತಿ
ವಿಶಾರದ — ಪ್ರಚಾರಕ ವರ್ಗಗಳಲ್ಲದೆ ಪ್ರಾರಂಭಿಕ ವರ್ಗಗಳಿಗೂ ಪ್ರವೇಶವಿದೆ. ವರ್ಗಗಳಿಗೆ ಸಂಬಂಧಿಸಿದ ಪಾ
ಪುಸ್ತಕಗಳು ವಿದ್ಯಾಲಯದಲ್ಲಿ ದೊರೆಯುತ್ತವೆ. ಒಳ್ಳೆಯ ಪುಸ್ತಕಭಂಡಾರವಿದೆ. ಶ್ರೇಷ್ಠ ವಾರಪತ್ರಿಕೆ, ಮಾಸಪತ್ರಿಕೆಗಳು ಲ
ಇತರ ವಿವರಗಳಿಗೆ ಸ್ವಾಂಸಿಟ್ಟು ಬರೆಯಿರಿ.

ಪ್ರಿನ್ಸಿಪಾಲ್.

NAVA BHARAT BELLARY.

(Reg. No. M. 46)4

16—1—

ನವಭಾರತ ಬಳ್ಳಾರಿ.

(Nationalist Weekly)

ಚಂದಾದರಗಳು.		Subscription Rates.	
ವರ್ಷಕ್ಕೆ	5—0—0	One Year	5—0—0
6 ತಿಂಗಳಿಗೆ	3—0—0	Six months	3—0—0

ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.

Subscription will not be accepted for less than 6 months

To

Sri..... .....

.....

.....

Pirnted at Krishna Printing Works. Edited &:Published by T. B Keshava Rao,

ಪಂಚಾಯ್ತಿ ಬಿ. ೪

ನಮೂನೆ ೮

1950 - 51

ಕೈಫಿಯತ್ತು ಪಂಚಾಯ್ತಿ 30-1-195

ಪಂಚಾಯ್ತಿ ನಕ್ಷೆ 2 ಅಂಕಿ 50

ಪಂಚಾಯ್ತಿ 27, 30, 31, 32,
33, 34, 35, 36, 45 ಭಾಗ

ಸೈಜು ನಕ್ಷೆ 1 ಅಂಕಿ 272

MANOHAR

Account Book

No. 1. Quire

NAME .....

ADDRESS.....

— HIGH CLASS BINDERS —

MANUFACTURERS OF

Student's Exercise Note Books & Account Books

Ledgers Etc.

Brucepettah **BELLARY.**

ಸಂಖ್ಯೆ ಪ. 8

ಸಮಿತಿ

1950 - 51

ಸ್ಥಾಪನೆ ಸಂವತ್ಸರ 30-1-1950

ಸಂಚಿತನಿಧಿ 2000=50

ಸಂಚಿತ ಶೇ 27, 30, 31, 32,
33, 34, 35, 36, 45, ಬಟ್ಟೆ

ಸ್ಥಾವರಸಭ್ಯರು 1000 272

JAI HIND

ನವಚೈತನ್ಯ

ಬಳ್ಳಾರಿಯ
ಉಜ್ವಲ ರಾಷ್ಟ್ರೀಯ ವಾರಪತ್ರಿ
ಉತ್ತಿಷ್ಠತ! ಜಾಗೃತ!!
ವ್ರಾನ್ನಿಬರಾನ್ನಿ ಬೋಧತ!!
ಸಂಪಾದಕ ಮತ್ತು ಪ್ರಕಾಶಕ:
ಟಿ. ಬಿ. ಕೇಶವರಾವ್

ವರ್ಷ ೧೩ | ಸೋಮವಾರ ೩೦ ಜನವರಿ ೧೯೪೦ | ಸಂಚಿಕೆ ೨

ಸಮಾಜವಾದಿ ವ್ಯವಸ್ಥೆಯ

ಸಹಕಾರೀ ಸ್ವರಾಜ್ಯ

[ದೇಶವು ಸ್ವತಂತ್ರ ವಾಯಿತು. ಆದರೆ ಸಾರಾಸ್ಯ ಜನತೆಗೆ–ರೈತ–ಕೂಲಿ ಕಾರರಿಗೆ–ನಾತ್ರ, ತಮ್ಮ 'ಸ್ವರಾಜ್ಯ' ಉಂಟಾಗಿದೆಯೆಂದೇನೂ ಅನಿನಲೊಲ್ಲದು ಸಾಮಾನ್ಯ ಜನತೆಯ ಜೀವನ ಮಟ್ಟ ಎತ್ತರಿಸಬೇಕು. ಅಂದರೆ ಅನರಿಗೆ ಅನ್ನ, ಬಟ್ಟೆ ಇರಲು ಮನೆ ಮೊದಲಾದ ಜೀವನಾವಶ್ಯಕ ಸುಖ-ಸೌಲಭ್ಯಗಳು ದೊರೆಯುವಂತಾಗಬೇಕು. ಸರಕಾರ ಅಂಥದೊಂದು ಆರ್ಥಿಕ ನಿಯೋಜನೆ ಕೈಕೊಳ್ಳಬೇಕು. ನಮ್ಮ ಹಳ್ಳಿಗಾಡಿನ ಆರ್ಥಿಕ ಜೀವನದಲ್ಲಿಯಾದರೋ, ಸಾವುಕಾರಿ, ದಲಾಲಿ ಮತ್ತು ಅಡತಿಗಳು ಬೆಳೆದು ರೈತನ ಶೋಷಣೆಯೇ ನಜೆದಿದೆ. ಆರ್ಥಿಕ ನಿಯೋಜನೆಯಲ್ಲಿ ಉದ್ಯೋಗ-ಧಂದೆಗಳ ವಿಕೇಂದ್ರೀಕರಣವಾಗುವದೂ ಅವಶ್ಯವಾಗಿದೆ. ಸಹಕಾರಿ ಚಳವಳಿಯು ಅಂಥ ವಿಕೇಂದ್ರೀಕರಣಕ್ಕೊಂದು ಸಾಧನವಾಗಿದೆ. ಆದರಿಂದಾಗಿ, ಜನಸಾಮಾನ್ಯರಿಗೆ ಹಾಗು ಸಮಾಜ ಸೇವಕರಿಗೆ ಸಹಕಾರಿ ಚಳವಳಿಯ ಮಹತ್ವ ಗೊತ್ತಿರುವುದು ಅವಶ್ಯವಾಗಿದೆ.

ಈ 'ಸಹಕಾರಿ ಸ್ವರಾಜ್ಯ'ವು ಸಹಕಾರಿ ಚಳವಳಿಯ ಮಹತ್ವ, ಅದರ ದೋಷದೋಷಗಳನ್ನು ವಿವೇಚಿಸಿ, ಅದರ ಸುಧಾರಣೆಯ ಉಪಾಯ-ಯೋಜನೆಯನ್ನು ಸೂಚಿಸುವ ಒಂದು ಚಿಕ್ಕ ಪ್ರಯತ್ನ ವಾಗಿದೆ.

ಶ್ರೀ ಅಣ್ಣಾ ಸಾಹೇಬ ಸಹಸ್ರಬುದ್ಧೆ ಅವರು 'ಸಹಕಾರಿ ಸ್ವರಾಜ್ಯ'ದ ಮೂಲ ಲೇಖಕರು. ಬಂಧು ಕರವೀರ ಮುಮ್ಮಿಗಟ್ಟಿಯವರು ಕನ್ನಡಿಗರಿಗಾಗಿ ಇದನ್ನು ಕನ್ನಡಿಸಿದ್ದಾರೆ. ಜನ ಸಾಮಾನ್ಯರು ಸಹಕಾರಿ ಚಳವಳಿಯ ಮಹತ್ವವನ್ನರಿತು ಕೊಂಡು, ತಮ್ಮ ಜೀವನದ ಪ್ರತಿಯೊಂದು ಕ್ಷೇತ್ರದಲ್ಲಿಯೂ ಸಹಕಾರಿ ತತ್ವವನ್ನು ಅಳವಡಿಸಿಕೊಂಡರೆ ಪ್ರಜಾಸತಾತ್ಮಕ ಸಮಾಜವಾದೀ ಅರ್ಥವ್ಯವಸ್ಥೆಯ ಧ್ಯೇಯ ಸಾಧಿಸೀತೆಂದು ನಮ್ಮ ಎಣಿಕೆ.]

ಕೇಂದ್ರೀಕರಣವೋ, ವಿಕೇಂದ್ರೀಕರಣವೋ?

ಉದ್ಯೋಗ ಧಂಧೆಗಳು ಕೇಂದ್ರಿತ ಪದ್ಧತಿಯಿಂದ ನಡೆಯಬೇಕೋ, ಇಲ್ಲವೆ ಅವುಗಳ ವಿಕೇಂದ್ರೀಕರಣವಾಗಬೇಕೋ ಎನ್ನುವ ಬಗೆಗೆ ಇಂದು ಚರ್ಚೆ ಸಲಾಗುತ್ತಿದೆ. ಮತ್ತು ಆರ್ಥಿಕ ನಿಯೋಜನೆಯಲ್ಲಿ ಉದ್ಯೋಗ-ಧಂಧೆಗಳ ವಿಕೇಂದ್ರೀಕರಣಕ್ಕೆ ಮಹತ್ವದ ಸ್ಥಾನ ದೊರೆಯಬೇಕೆಂದು ಇಂದು ಹೆಚ್ಚಾಗಿಯೇ ಪ್ರತಿಪಾದಿಸಲಾಗುವದು. ದೇಶದಲ್ಲಿ ನಿಜವಾದ ಅರ್ಥದಲ್ಲಿ ಪ್ರಜಾಸತಾತ್ಮಕ ರಾಜ್ಯವ್ಯವಸ್ಥೆಯು ಉಂಟಾಗಬೇಕಾಗಿದ್ದರೇ ಉದ್ಯೋಗ-ಧಂಧೆಗಳ ವಿಕೇಂದ್ರೀಕರಣವಾಗಬೇಕು. ಪ್ರತಿಯೊಬ್ಬನ ಶಕ್ತಿಗೂ ಅನುವು ದೊರೆತು ಉದ್ಯೋಗ-ಧಂಧೆಗಳ ಒಡೆತನವು ಚಿಕ್ಕ ಚಿಕ್ಕ ಗುಂಪುಗಳಲ್ಲಿ ಹಂಚಲ್ಪಡಬೇಕೆಂದು ವಿಕೇಂದ್ರೀಕರಣದ ಪರ ಸ್ಪರ್ಧಿಗಳಿಗೆ ಅನಿಸುವದು.

ವಿಕೇಂದ್ರೀಕರಣದ ಸಾಧನೆ-ಸಹಕಾರಿ ಚಳವಳಿ

ಯಾವುದೇ ಸಿದ್ಧಾಂತವನ್ನು ಬರೇ ಒಂದು ಸಿದ್ಧಾಂತವೆಂದು ಸ್ವೀಕರಿಸುವುದರಿಂದಲೇ ನಾವು ಹಿಂದುಸ್ತಾನದ ಆರ್ಥಿಕ ನಿಯೋಜನೆಯನ್ನು ಮಾಡಲಾರೆವು ಇಂದು ನಮ್ಮ ಸಮಾಜವು ಯಾವ ಮಟ್ಟದಲ್ಲಿದೆಯೆಂಬುದನ್ನು ನುಲಕ್ಷಿಸಿಯೇ ನಾವು ರಾಜಕೀಯ ಸಂಸ್ಥೆಯನ್ನು ಕಟ್ಟಬೇಕಾದೀತು; ಆರ್ಥಿಕ ನಿಯೋಜನೆಯನ್ನಾದರೂ ಕಾರ್ಯ ರೂಪದಲ್ಲಿ ತರಬೇಕಾದೀತು. ಇಂದಿನ ಮಟ್ಟಿಗಾದರೂ ಇಂಥದೇ ಒಂದು ಬಗೆಯ ಆರ್ಥಿಕ ಯೋಜನೆಯು ಅದೀತೆಂದು ಹೇಳುವದು ತುಂಬ ವ್ಯಯಾಸದ್ದಾಗಿದೆ. ಪ್ರಜಾಸತ್ತಾತ್ಮಕ ಪ್ರಧಾನವಾದಸಮಾಜವಾದೀ ಅರ್ಥ ವ್ಯವಸ್ಥೆಯು ಹಿಂದುಸ್ತಾನದ ಧ್ಯೇಯವಾಗಿದೆ. ಈ ಧ್ಯೇಯಕ್ಕನುಗುಣವಾದಂತಹ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಸಂಸ್ಥೆಗಳನ್ನು ನಾವು ಕಟ್ಟಿ ಕೊಳ್ಳಬೇಕಾದೀತು. ಆ ಸಂಸ್ಥೆಗಳ ಮುಖಾಂತರ ನಾವು ನಿಲ್ಲಮೆಲ್ಲನೆ ಪ್ರಗತಿ ಹೊಂದುತ್ತಿದ್ದೇನೆ. ಹಾಗು ಧ್ಯೇಯದತ್ತ ನಿಶ್ಚಯವಾಗಿಯೂ ಸಾಗುತ್ತಿದ್ದೇವೆ. ಎಂದಿಷ್ಟು ನಿಶ್ಚಿತವಾಗಿದ್ದರೆ, ನಾವು ಇಂದಿನ ಆರ್ಥಿಕ ನಿಯೋಜನೆಯ ಯಾವುದೇ ಘಟ್ಟದಲ್ಲಿದ್ದರೂ ಅದರಿಂದ ಸಂತೃಪ್ತರಾಗಿರಬೇಕು ಒಮ್ಮೆಲೇ ದೇಶದಲ್ಲಿ ವಿಕೇಂದ್ರೀಕೃತ ಅರ್ಥವ್ಯವಸ್ಥೆಯುಂಟಾಗುವದಾದರೂ ಪ್ರಯಾಸದ್ದಾಗಿದೆ. ರಾಜಕೀಯ ಕ್ಷೇತ್ರದಲ್ಲಿ ಒಮ್ಮೆಲೇ ಸಕ್ತೆಯ ವಿಕೇಂದ್ರೀಕರಣವಾಗುವದು ಅದು ಹೇಗೆ ಸಾಧ್ಯವಿಲ್ಲವೋ— ಅಂದರೆ ಸಾರ್ವಭೌಮ ಗಣರಾಜ್ಯಗಳು ಎಲ್ಲೆಡೆಯಲ್ಲಿಯೂ ಸ್ಥಾಪನೆಯಾಗುವದು ಸಾಧ್ಯವೇ ಇಲ್ಲವೋ— ಹಾಗೆಯೇ ಔದ್ಯೋಗಿಕ ಇಷ್ಟನೆ ಆರ್ಥಿಕ ಕ್ಷೇತ್ರಗಳೆಲ್ಲಾದರೂ ಸಂಪೂರ್ಣವಾಗಿ ವಿಕೇಂದ್ರೀಕರಣ ಮಾಡುವುದು ಇಂದಂತೂ ಸಾಧ್ಯವಾಗಿ ತೋರುವದಿಲ್ಲ. ಆದರೂ ಅಂಥ ಪರಿಸ್ಥಿತಿಯನ್ನು ಉಂಟು ಮಾಡುವ ಒಂದು ಸಾಧನವೆಂದು ನಮ್ಮ ಉದ್ಯೋಗ ಧಂದೆ, ವ್ಯಾಪಾರ, ವಾಹನ

ಸಾಧನ ಹಾಗು ಇತರೆಲ್ಲ ಆರ್ಥಿಕ ಜೀವನದಲ್ಲಿ ಸಹಕಾರಿ ಚಳುವಳಿಯನ್ನು ಹೆಚ್ಚಿಚ್ಚಾಗಿ ಪ್ರಚಾರ ಮಾಡುವದು ಅವಶ್ಯವಾಗಿದೆ.

ಸಹಕಾರಿ ಚಳವಳಿಯಲ್ಲಿ ಸ್ಪರ್ಧೆಯನ್ನು ಆಧರಿಸಿ ಭಂಡವಾಲಶಾಹಿ ಪ್ರಧಾನವಾದ ಅರ್ಥವ್ಯವಸ್ಥೆಯನ್ನು ನಷ್ಟಗೊಳಿಸುವ ಸಾಮರ್ಥ್ಯವಿದೆ ಇಂದು ಲಾಭದ ದೃಷ್ಟಿಯನ್ನಿಟ್ಟುಕೊಂಡು ನಡೆಯುವ ಹುಟ್ಟುವಳಿಯು ಸಮಾಜದ ಅವಶ್ಯಕತೆಯನ್ನನುಲಕ್ಷಿಸಿ ನಡೆಯಬೇಕು. ಮತ್ತು ಅಂಥ ವ್ಯವಸ್ಥೆಯು ಎಲ್ಲಾ ಆರ್ಥಿಕ ಕ್ಷೇತ್ರಗಳಲ್ಲಿ ಸಹಕಾರಿ ಚಳವಳಿ ದೃಢವಾದಾಗಲೇ ಉಂಟಾಗೀತು. ಸಹಕಾರಿ ಚಳವಳಿಯು ಎಲ್ಲಾ ಕ್ಷೇತ್ರಗಳಲ್ಲಿ, ದೇವದತುಂಬೆಲ್ಲ ಹಬ್ಬಿದಾಗಲೇ ಸಾವಕಾರಿಕ, ದಲಾಲಿ ಮತ್ತು ಅಡತಿಗಳಂತಹ ಸಂಸ್ಥೆಗಳು ಇಲ್ಲದಂತಾದಾವು. ಇಂದ ಜೀವನವ್ಯಾಪಿಯಾವ ಸಹಕಾರಿ ಚಳವಳಿಯನ್ನು ನಾವು ನಡೆಸುವದೆಂತು, ಹಾಗೂ ಅದಕ್ಕೆ ಭಂಡವಾಲಶಾಹಿಯ ವಿರೋಧವನ್ನು ತಪ್ಪಿಸುವದೆಂತು ಎಂಬುದೇ ಮುಖ್ಯ ಪ್ರಶ್ನೆಯಾಗಿದೆ. ಯಾಕಂದರೆ ಸಹಕಾರಿ ಚಳವಳಿಯ ಇತಿಹಾಸವನ್ನು ನೋಡಿದರೆ, ಅದು ಅದಷ್ಟೋ ದೇಶಗಳಲ್ಲಿ ಭಂಡವಾಲಶಾಹಿಯ ಕೈಗೊಂಬೆಯಾದದ್ದು ಕಂಡುಬರುವದು. ಇನ್ನು ಕೆಲವು ದೇಶಗಳಲ್ಲಿ ರಾಜಕೀಯ ಸತ್ತೆಯೊಂದಿಗೆ ಹಾಗು ಭಂಡವಾಲದಾರವರ್ಗದೊಂದಿಗೆ ಹೋರಾಡುತ್ತಲೇ ಅದು ಮುನ್ನಡೆಯ ಬೇಕಾಗಿದೆಯೆ ಸ್ವಪೂರ್ಣ ಕಾಯುಬರದಿರಲಾರದು. ಹೀಗಿರುವಲ್ಲಿ ಸ್ವತಂತ್ರ ಭಾರತದಲ್ಲಿ ಸಹಕಾರಿ ಚಳವಳಿಯು ಸರಕಾರದಿಂದಲೇ ವ್ಯಾರಂಭಿಸಲ್ಪಟ್ಟಿದ್ದು, ಮತ್ತು ಈಗಂತೂ ಅದು ಸರಕಾರದ ಹೊಣೆಯ ಮೇಲೆಯೇ ನಡೆದಿದೆ. ಭಂಡವಾಲಶಾಹಿಯನ್ನು ನಾಶಮಾಡುವ ಶಕ್ತಿಯು ಅದರಲ್ಲಿಂದ ಉಂಟಾಗಿಲ್ಲ. ಯಾಕಂದರೆ ಬಂಡುಸ್ವತಂತ್ರದ ಅದಷ್ಟೋ ಆರ್ಥಿಕಕ್ಷೇತ್ರಗಳಲ್ಲಿ ಅದನ್ನೂ ಪ್ರವೇಶಿಸಿ ವ್ಯಾಪ್ತಿಸಿದ ಕಡೆಗಳಲ್ಲೆಲ್ಲ ಅದು ಯಾ[illegible]ಸ್ಥಿಯಲ್ಲಿಯೇ ಇದೆ. ಇಂದಿನ [illegible] ಧ್ಯೇಯವು ಅಲ್ಪವಾಗಿದ್ದರೂ, ನಾವು ಜೀವನದ ಎಲ್ಲ ಕ್ಷೇತ್ರಗಳಲ್ಲಿಯೂ ಸಹಕಾರಿ ಚಳವಳಿಯನ್ನು ಹಬ್ಬಿಸುವ ಪ್ರಯತ್ನ ಮಾಡಬೇಕು ಯಾಕಂದರೆ ಅದೇವ ನಿಜದ ಪ್ರಜಾಸ್ವಾಮ್ಯ ಸ್ವತಂತ್ರವಾದ ಸಮಾಜ ನಿರ್ಮಾಣವಾಗಲೀಕೆ.

[ವಂದವರಿಯುವದು]

—C—

ಆಂಧ್ರ ಸ್ವಾತಂತ್ರ್ಯಕ್ಕೆ ಬೀಸಿದ ಬಿರುಗಾಳಿಯು ಪರಿಣಾಮವಾಗಿ ಮದ್ರಾಸ್ ಪ್ರಾಂತದಲ್ಲಿ ಆರು ಜಿಲ್ಲೆಗಳನ್ನು ಕೊಂಡು ಹೋಗಲಿರುವದೆಂದು ತಿಳಿದುಬಂದಿದೆ.

OUR REPUBLIC

Directive Principles of State Policy
(The Constitution of India)

The provisions contained in this Part shall not be enforceable by any court, but the principles therein laid down are nevertheless fundamental in the governance of the country and it shall be the duty of the State to apply these principles in making laws.

Promotion of Welfare of the People

The State shall strive to promote the welfare of the people by securing and protecting as effectively as it may a social order in which justice, social, economic and political, shall inform all the institutions of the national life

The State shall, in particular, direct its policy towards securing

(*a*) that the citizens, men and women equally, have the right to an adequate means of livelihood;

(*b*) that the ownership and control of the material resources of the community are so distributed as best to subserve the common good :

(*c*) that the operation of the economic system does not result in the concentration of wealth and means of production to the common detriment ;

(*d*) that there is equal pay for equal work for both men and women ;

(*e*) that the health and strength of workers, men and women, and the tender age of children are not abused and that citizens are not forced by economic necessity to enter avocations unsuited to their age or strength

(*f*) that childhood and youth are protected against moral and material abandonment.

Village Panchayats.

The state shall take steps to organise village panchayats and endow them with such powers and authority as may be necessary to enable them to function as units of self-government

The Right to Work and Education.

The State shall, within the limits of its economic capacity and development make effective provision for securing the right to work, to education and to public assistance in cases of unemployment, old age, sickness and disablement, and in other cases of undeserved want.

Humane Conditions of work.

The State shall make provision for securing just and humane conditions of work and for maternity relief

Living Wages for Workers

The State shall endeavour to secure, by suitable legislation or economic organisation or in any other way to all workers agricultural, industrial or otherwise, work, a living wage, conditions of work ensuring a decent standard of life and full enjoyment of leisure and social and cultural opportunities and

in particular, the State shall endeavour to promote cottage industries on an individual or co-operative basis in rural areas

Uniform Civil Code.

The State shall endeavour to secure, for the citizens a uniform civil code throughout the territory of India.

Free and Compulsory Education.

The state shall endeavour to provide, within a period of ten years from the commencement of this Constitution, for free and compulsory education for all children until they complete the age of fourteen years

Educational & Economic Interests of Weaker Sections.

The State shall promote with special care the educational and economic interest of the weaker section of the people, and in particular, of the Scheduled Castes and the Scheduled Tribes and shall protect them from social injustice and all forms of exploitation.

Standard of Living, Nutrition and Health

The State shall regard the raising of the level of nutrition and the standard of living of its people and the improvement of public health among its primary duties and, in particular the State shall endeavour to bring about prohibition of the consumption except for medicinal purposes of intoxicating liquor and of drugs which are injurious to health

ಬಳ್ಳಾರಿ

ಪ್ರಜಾ ರಾಜ್ಯ ದಿನಾಚರಣೆಯು ವೂರಸಭೆಯ ಎಲ್ಲಾ ಸಂಸ್ಥೆಗಳಲ್ಲೂ ವಿಜೃಂಭಣೆಯಿಂದ ನಡೆಯಿತು. ವಿದ್ಯುದ್ದೀಪಗಳ ಅಭಾವದಿಂದ-ಒಳ್ಳಿಣ್ಣೆ ದೀಪಗಳ ಪ್ರಣತಿಗಳು ಕಟ್ಟಡಗಳ ಮೇಲೆ ಶೋಭಿಸುತ್ತಿದ್ದವು. ಶಾಲೆಗಳಲ್ಲಿ ಮಕ್ಕಳಿಗೆ ಮಿಠಾಯಿ ಹಂಚಲಾಯಿತು. ಜಿಲ್ಲಾ ಕಲೆಕ್ಟರ್ ಶ್ರೀ. ಎಸ್. ಪಿ ಡಿ ಐ. ಜಯವರು ವೆರೇಡ್ ಗ್ರೌಂಡಿನಲ್ಲಿ 'ಕೂಚಿನ' ದಂದ ನಾಸ್ಕೀಕಾರವಾಡಿದರು. ಕಲೆಕ್ಟರವರು ಪ್ರಜಾರಾಜ್ಯ ಪಾರವು ಜಾಯಿಲ್ಲ ಬಂದಿತೆಂದು ಸರ್ಕಾರದ ಪ್ರಕಟಣೆಯನ್ನೋದಿದರು.

ಬಿ. ಡಿ. ಎ ಗ್ರೌಂಡ್ಸಿದಲ್ಲಿ- ಶ್ರೀ ಟಿ ಸುಬ್ರಹ್ಮಣ್ಯಂರವರ ಅಧ್ಯಕ್ಷತೆಯಲ್ಲಿ ಈ ದಿನಾಚರಣೆಯು ಮಹತ್ವವು ಶ್ರೀ ಪೆಂಕೊಂಬರಾವ್ ಮತ್ತು ವಿ. ಎಂ. ಗಿರಿಯು ವರಿಂದ ಸೂಚಿತವಾಯಿತು. ಪಾಲಿಟೆಕ್ನಿಕ್ ಸಂಸ್ಥೆಯಲ್ಲಿ ಶ್ರೀ ಆರ್. ಯಂ ವಿ. ಎಸ್. ರಾಯರವ್ಯಕ್ಷತೆಯಲ್ಲಿ ರಾಜನ್‌ರವರ ಪಟಿಸೆಯನ್ನು ವಿವರಿಸಿದರು. ಅಲ್ಲಿ ರಿಪ್ರೆವಧು ಪರೀಕ್ಷೆ' ಎಂಬ ನಾಟಕವು ಪ್ರದರ್ಶನವಾಯಿತು.

ಆಂಧ್ರ ಪ್ರಾಂತರಚನೆಯು ಈಗ ಇಲ್ಲ

ಭಾರತ ಸರಕಾರದ ಸೂಚನೆ ಮದ್ರಾಸ್ ಪ್ರಧಾನರ ಹೇಳಿಕೆ

ಜನವರಿ ೩೭ ರೊಳಗೆ ಆಂಧ್ರ ರಾಜ್ಯವನ್ನು ರಚಿಸಿಯು ಸಾಧ್ಯವಿಲ್ಲೆಂದೂ ಈ ವಿಷಯಕ್ಕೆ ಸುದೀರ್ಘ ನಿರ್ಣಯವನ್ನು ಮದ್ರಾಸ್ ಸರ್ಕಾರಕ್ಕೆ ಕಳುಹಿಸಲಾಗುವದೆಂದೂ-ಭಾರತ ಸರ್ಕಾರದ ಗೃಹಶಾಖೆಯ ಕಾರ್ಯದರ್ಶಿ ಶ್ರೀ ಹೆಚ್. ವಿ. ಆರ್. ಅಯ್ಯಂಗಾರವು ಮದ್ರಾಸ್ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆ ತಿಳಿಸಿದೆಂದು ಮದ್ರಾಸ್ ಪ್ರಧಾನರು ಪತ್ರಿಕಾ ಸಂವರ್ತನದಲ್ಲಿ ತಿಳಿಸಿದರು. ಈ ಕಾರಣ ವಾರ್ಷಿಕ ಆಯ-ವ್ಯಯದ ಮುಂಗಡ ಪತ್ರವು ಇಲ್ಲೀ ಪ್ರಾಂತಕ್ಕೆ ಕಯಾರಾಗುವದು.

ಪಾಕಿಸ್ತಾನಿಗಳ ದಾಳಿ

ಕಳೆದವಾರ 40 ಪಾಕಿಸ್ತಾನಿಗಳು ಶಸ್ತ್ರಾಸ್ತ್ರಗಳಿಂದ ಸುಸಜ್ಜಿತರಾಗಿ ಕಾಶ್ಮೀರ ದೇಶದಲ್ಲಿ 17 ಮೈಲುಗಳ ಸುಗ್ಗಿ ಕಜ್ಜಿ ನಿಜಾವು ಎಂಬ ಪ್ರದೇಶವನ್ನು ದಾಳಿ ಮಾಡಿ ನಾಲ್ವರನ್ನು ಕೊಂದು ಕೆಲವರಿಗೆ ಗಾಯ ಮಾಡಿದ್ದಾರೆ.

ನಮ್ಮ ರಾಷ್ಟ್ರ ಗೀತೆ

ಜನ ಗಣ ಮನ ಅಧಿನಾಯಕ ಜಯಹೇ
ಭಾರತ ಭಾಗ್ಯವಿಧಾತಾ ॥

ಕಾಮರೂಪ ಪಂಜಾಬ ಮರಾಠಾ
ಗುರ್ಜರ ದ್ರಾವಿಡ ವಂಗ
ಉತ್ಕಲ ವಿಂಧ್ಯ ಹಿಮಾಚಲ ಜಮುನಾ
ಗಂಗಾ ಜಲಧಿ ತರಂಗ ॥

ತವ ಶುಭ ನಾಮೆ ಜಾಗೆ ।
ತವ ಶುಭ ಆಶಿಷ ಮಾಗೆ ।
ಗಾಹೆ ತವ ಜಯಗಾಥಾ ।
ಜನಗಣ ಮಂಗಲದಾಯಕ ಜಯಹೆ
ಭಾರತ ಭಾಗ್ಯವಿಧಾತಾ ॥

ಜಯಹೇ, ಜಯಹೇ, ಜಯಹೇ
ಜಯ ಜಯ ಜಯ ಜಯ ಹೇ ॥೧॥

ಜನ ಗಣ ಮನ ಭಾರತದ
ರಾಷ್ಟ್ರಗೀತೆ

ಘಟನಾ ಸಮಿತಿಯಲ್ಲಿ ಡಾ. ಪ್ರಸಾದರ ಘೋಷಣೆ

ಹೊಸದಿಲ್ಲಿ "ಜನ ಗಣ ಮನ" ಗೀತೆಯು ಭಾರತದ ರಾಷ್ಟ್ರಗೀತೆಯೆಂದೂ "ವಂದೇ ಮಾತರಂ" ಗೀತೆಯನ್ನು ಸಹ "ಜನ ಗಣ ಮನ" ದಷ್ಟೇ ಗೌರವಿಸಲಾಗುವುದಲ್ಲದೆ ಅದಕ್ಕೂ ಅಷ್ಟೇ ಸ್ಥಾನಮಾನಗಳನ್ನು ನೀಡಲಾಗುವುದೆಂದೂ ಘಟನಾ ಸಮಿತಿಯ ಅಧ್ಯಕ್ಷರಾದ ಡಾ ರಾಜೇಂದ್ರ ಪ್ರಸಾದರು ಇಂದು ಘೋಷಿಸಿದರು.

"ಜನ ಗಣ ಮನ" ಎಂಬ ಶಬ್ದ ಮತ್ತು ಶ್ರುತಿಯನ್ನೊಳಗೊಂಡ ಗೀತೆಯನ್ನು ಸರಕಾರವು ಅಯಾ ಪ್ರಸಂಗಗಳಲ್ಲಿ ಇದರ ಶಬ್ದಗಳಲ್ಲಿ ಸೂಚಿಸಬಹುದಾದ ಬದಲಾವಣೆಗಳೊಡನೆ ಎಲ್ಲಾ ಸರಕಾರೀ ಉದ್ದೇಶಗಳಿಗಾಗಿ ರಾಷ್ಟ್ರ ಗೀತೆ ಯೆಂದು ಅಳವಡಿಸಬೇಕು. ಮತ್ತು ಹಿಂದೀ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಚರಿತ್ರಾರ್ಹ ಪಾತ್ರವಹಿಸಿದ "ವಂದೇ ಮಾತರಂ" ಗೀತೆಯನ್ನು "ಜನ ಗಣ ಮನ" ದಂತೆಯೇ ಗೌರವಿಸಲಾಗುವದಲ್ಲದೆ ಅದಕ್ಕೆ ಅಷ್ಟೇ ಸ್ಥಾನಮಾನಗಳಿರುವವು.

PUBLIC NOTICE.

Know ye all men concerned- On the death of my revered and undivided father, **Rao Sahib Vittal Seshappa Setty**, on the 16th January 1950 at our residence, I, as his only son, became solely entitled to our entire joint family estate by right of survivor-ship, and I am now in charge and management of it.

He was conducting our joint family business, both at Bellary and Kadiri, in his own name. He had entrusted the management of the business at Kadiri to my son-in-law, Sri J. Kuppanna Chetty, B. A., L. T., son of J. Nagappa Setty of Rayadrug. During my father's life time, the said Kuppanna Chetty was carrying on our business at Kadiri and was also operating on Bank accounts in my father's name.

Hereafter, my family business will be run under the name and style of "**Vittal Seshappa Setty Son**" both at Bellary and Kadiri, and Sri. J. Kuppanna Chetty will be incharge of both at Bellary and Kadiri as Manager thereof. I authorize him to carry on the business in the same manner as he was doing during my father's life time.

BELLARY,
Dated 24- 1 1950 | VITTAL SUBBARAYA SETTY.

ಸಾರ್ವಜನಿಕ ಪ್ರಕಟಣೆ.

ಈ ಮೂಲಕ ಸಂಬಂಧಿಸಿದ ಎಲ್ಲರಿಗೂ ತಿಳಿಯಪಡಿಸುವುದೇನೆಂದರೇ:- ನನಗೆ ಅತ್ಯಂತ ಪ್ರಿಯವಾದ ಪೂಜ್ಯ ಮತ್ತು ಅವಿಭಕ್ತ ಕುಟುಂಬದಲ್ಲಿ ನನ್ನ ತಂದೆಯವರಾದ ರಾವ್ ಸಾಹೇಬ್ ವಿಠಲ್ ಶೇಷಪ್ಪ ಶೆಟ್ಟಿಯವರು 16 ನೆಯ ಜನವರಿ 1950 ರ ದಿನ ನಮ್ಮ ನಿವಾಸದಲ್ಲಿ ಸ್ವರ್ಗಸ್ಥರಾದ ನಂತರ ಏಕಮಾತ್ರ ಪುತ್ರನಾದ ನಾನು ನಮ್ಮ ಅವಿಭಕ್ತ ಕುಟುಂಬದ ಆಸ್ತಿಗೆ-ವಾರಸು ಹಕ್ಕಿನಿಂದ-ಹಕ್ಕುದಾರನಾಗಿ ಈಗ ಅವರ ಸ್ವಾಧೀನ ಮತ್ತು ಅವರ ಅಡಕಿತ ವಾಗಿದ್ದೇನೆ.

ಬಳ್ಳಾರಿ ಮತ್ತು ಕದಿರಿಯಲ್ಲಿ ನನ್ನ ತಂದೆಯವರ ಹೆಸರಿನಿಂದ ಇವರು ನಮ್ಮ ಅವಿಭಕ್ತ ಕುಟುಂಬದ ವ್ಯಾಪಾರ-ವ್ಯವಹಾರವನ್ನು ನಡಾಯಿಸುತ್ತಿದ್ದರು. ರಾಯದುರ್ಗದ ಶ್ರೀ ಜೆ. ನಾಗಪ್ಪಶೆಟ್ಟಿರ ಪುತ್ರನಾದ ಮತ್ತು ನನ್ನ ಅಳಿಯನಾದ ಶ್ರೀ ಜೆ. ಕುಪ್ಪನ್ನ ಶೆಟ್ಟಿ ಬಿ. ಎ ಎಲ್ ಟಿ. ಯವರಿಗೆ ನನ್ನ ತಂದೆಯವರು ಕದಿರಿಯಲ್ಲಿನ ವ್ಯಾಪಾರದಾತಳಿತವನ್ನು ಒಪ್ಪಿಸಿದ್ದರು. ಈಕ್ತ ಕುಪ್ಪನ್ನ ಶೆಟ್ಟಿಯವರು ನಮ್ಮ ತಂದೆಯವರ ಹೆಸರಿನಲ್ಲಿ ಅವರ ಜೀವಿತ ಕಾಲದಲ್ಲಿ ನನ್ನ ವ್ಯಾಪಾರವನ್ನು ನಡೆಸುತ್ತಿದ್ದ ಬ್ಯಾಂಕಿನ ಲೆಕ್ಕಗಳ ವ್ಯವಹಾರ ಮಾಡುತ್ತಿದ್ದರು.

ಬಳ್ಳಾರಿ ಮತ್ತು ಕದಿರಿಗಳಲ್ಲಿ

ಇನ್ನು ಮೇಲೆ ನನ್ನ ಕುಟುಂಬದ ವ್ಯವಹಾರವು "ವಿಠಲ್ ಶೇಷಪ್ಪ ಶೆಟ್ಟಿ ಸನ್" ಎಂಬ ಅಂಕಿತ ಅಭಿ ಧಾನದಿಂದ ಜರುಗಿಸಲ್ಪಡುವುದು. ನಿದರಿ ಕುಪ್ಪನ್ನ ಶೆಟ್ಟಿಯವರೇ ಬಳ್ಳಾರಿಯಲ್ಲೂ-ಕದಿರಿಯಲ್ಲೂ ನಮ್ಮ ವ್ಯಾಪಾರ ಸಂಸ್ಥೆಗಳ ನಿರ್ವಾಹಕರಾಗಿರುವರು. ನನ್ನ ತಂದೆಯವರ ಜೀವಿತ ಕಾಲದಲ್ಲಿಯಂತೆ ನಮ್ಮ ವ್ಯಾಪಾರ ಸಂಸ್ಥೆಗಳನ್ನು ನಿರ್ವಹಿಸಲು ಈ ಮೂಲಕವಾಗಿ ನಾನು ಅವರಿಗೆ ಅಧಿಕಾರವನ್ನು ಕೊಡುತ್ತೇನೆ.

ಬಳ್ಳಾರಿ.
ತಾ. 24-1-50

ವಿಠಲ್ ಸುಬ್ಬರಾಯ ಶೆಟ್ಟಿ.

ನಮ್ಮ ರಾಜ್ಯ ಘಟನೆಯ ಪರಿಚಯ

ಹಿಂದುಸ್ಥಾನವು ಬ್ರಿಟಿಶದಿಂದ ಸ್ವಾತಂತ್ರ್ಯವನ್ನು ತನ್ನ ಕಾಲಮೇಲೆ ನಿಲ್ಲಲು ಯತ್ನಿಸುತ್ತಿರುವುದರಿಂದ, ಅದಕ್ಕೆ ತನ್ನದೇ ಆದ ಒಂದು ರಾಜ್ಯಘಟನೆಯ ಅವಶ್ಯಕತೆಯುಂಟಾಯಿತು. ಅದು ಕಳೆದು ಸುಮಾರು ಎರಡು ವರ್ಷಗಳ ಪರಿಶ್ರಮದಿಂದ ಕಟ್ಟಿಕೊಂಡಿದೆ. ಈ ಘಟನೆಯು ಇದೇ ೨೬-೧-೫೦ (ಸ್ವಾತಂತ್ರ್ಯದಿನ) ದಿಂದ ಅಸ್ತಿತ್ವದಲ್ಲಿ ಬರುತ್ತಿದೆ. ಅದರ ವಿವರಗಳು ಸಂಕ್ಷಿಪ್ತವಾಗಿ ಈ ಕೆಳಗಿನಂತೆ ಇವೆ.

ಜನೆವಾರಿ ತಾರೀಖು ೨೬, ಈ ಗಾಗಲೇ ಮಹತ್ವದ ಸ್ಥಾನವನ್ನು ಭಾರತದಲ್ಲಿ ಗಳಿಸಿದೆ. ೧೯೩೦ ಜನೆವಾರಿ ೨೬ ರಿಂದ ಮೊದಲ್ಗೊಂಡು ಭಾರತವು ಅದನ್ನು "ಸ್ವಾತಂತ್ರ್ಯದಿನ" ವೆಂದು ಆಚರಿಸುತ್ತ ಬಂದಿದೆ. ೧೯೨೬ ನೆಯ ವರ್ಷವು ಮುಗಿದು ೧೯೩೦ ನೆಯ ವರ್ಷವು ಪ್ರವೇಶಿಸುವ ಮುಹೂರ್ತದಲ್ಲಿ ಪಂಡಿತ ಜವಾಹರಲಾಲ ನೆಹರೂ ಇವರು ಲಾಹೋರದಲ್ಲಿ ಮುಂದೆ ಜನೆವಾರಿ ೨೬ ರನ್ನು ಸ್ವಾತಂತ್ರ್ಯ ದಿನವನ್ನಾಗಿ ಆಚರಿಸತಕ್ಕ ದೆಂದು ಘೋಷಿಸಿದರು ೨೦ ವರ್ಷಗಳ ತನಕ ಆ ಸ್ವಾತಂತ್ರ್ಯ ಪ್ರತಿಜ್ಞೆಯನ್ನು ಪ್ರತಿ ವರ್ಷವು ತೆಗೆದು ಕೊಳ್ಳುತ್ತ ಬಂದ ಭಾರತೀಯರಾದ ನಾವು ಇದೀಗ ಇಂದು ಸಂಪೂರ್ಣ ಸ್ವಾತಂತ್ರ್ಯವನ್ನು ಪಡೆದಿರುವೆವು. ನಮಗೆ ನಮ್ಮದೇ ಆದ ಒಂದು ರಾಜ್ಯ ಘಟನೆಯೂ ಇಂದು ಸಿದ್ಧವಾಗಿದೆ. ಅದು ಇಂದು ರೂಢಿಗೆ ಬರುತ್ತಲಿದೆ. ೩೨ ಕೋಟಿ ಪ್ರಜೆಗಳಶಾಂತಿ ಸ್ವಾತಂತ್ರ್ಯಗಳಿಗಾಗಿ-ಅದು ಇನ್ನು ಮುಂದೆ ದುಡಿಯಲಿದೆ ಜಗತ್ತಿನ ಯಾವದೇ ರಾಜ್ಯಘಟನೆಯು ಇಷ್ಟೊಂದು ಪ್ರಜೆಗಳಿಂದ ಕೂಡಿದಂತಹದಾದುವುದಿಲ್ಲವೆಂದರೆಅತಿಶಕ್ತಿಯೇಯಾಗಲಾರದು. ಹಲವಡೆಗಳಲ್ಲಿ ನವ್ಯಈ ರಾಜ್ಯಘಟನೆಯು ಅಮೇರಿಕೆಯ ಅಥವಾ ಇನ್ನಿತರ ರಾಷ್ಟ್ರಗಳ ಘಟನೆಗಳನ್ನು ಹೋಲುವುದಾದರೂ ಅದು ಭಾರತದ ಪರಿಸ್ಥಿತಿಗೆ ಅನುಗುಣವಾದ ರೀತಿಯಲ್ಲಿ ಕಟ್ಟಲ್ಪಟ್ಟಂತಹದಿದ್ದು ಭಾವೀ ಭಾರತದ ಸುಖ ಶಾಂತಿ ಸಮಾಧಾನಗಳಿಗಾಗಿ ದುಡಿಯುವಂತಹದಾಗಿದೆ. ಇಂತಹ ಈ ಮಹತ್ವದ ಘಟನೆಯನ್ನು ಸೂಕ್ಷ್ಮವಾಗಿ ಅಭ್ಯಸಿಸಿ ಅದು ನಮಗೊದಗಿಸಿರುವ ಸೌಕರ್ಯಗಳನ್ನು ಹಾಗೂ ಅದನ್ನು ಯಶಸ್ವಿಗೊಳಿಸಲು ನಾವು ಅದಕ್ಕೆ ಸಲ್ಲಿಸ ಬೇಕಾದ ಸೇವೆಗಳನ್ನು ತಿಳಿದುಕೊಳ್ಳುವುದು ಪ್ರತಿಯೊಬ್ಬ ಭಾರತೀಯನ ಕರ್ತವ್ಯವಾಗಿದೆ. ಪರರಾಷ್ಟ್ರಗಳು ನಮ್ಮನ್ನೂ ನಮ್ಮ ರಾಷ್ಟ್ರವನ್ನೂ ಈ ಘಟನೆಯ ಅಳತೆ ಗೋಲಿನಿಂದ ಅಳೆಯುವವು. ಬ್ರಿಟಿಶ ಸಾಮ್ರಾಜ್ಯದಿಂದ ದೂರಸರಿದು ಅದರೊಡನೆ ಇದ್ದ ಯಃಶ್ಚಿಂಚಿತ್ ಸಂಬಂಧವನ್ನು ಕಡಿದು ಕೊಂಡು, ಭಾರತವು ಇಂದು ಈ ಘಟನೆಯನ್ನು ರಚಿಸಿ ಕೊಂಡು ಸರ್ವ ಸ್ವತಂತ್ರ ರಾಷ್ಟ್ರವಾಗಿದೆ. ಈ ಘಟನೆಯ ಕೆಲವು ಮಹತ್ವದ ಅಂಶಗಳ ಸಂಕ್ಷಿಪ್ತ ಸ್ವರೂಪವು ಈ ಕೆಳಗಿನಂತಿದೆ.

ಅಧ್ಯಕ್ಷ

ಹಿಂದೀ ಒಕ್ಕೂಟದ ಸಂಪೂರ್ಣ ಆಡಳಿತಾಧಿಕಾರವು ಅದರ ಅಧ್ಯಕ್ಷನ ಕಡೆಗೆ ಇರುವುದು ಒಕ್ಕೂಟದ ಎರಡು ಮನೆಗಳ ಹಾಗೂ ಘಟಕಗಳ ಶಾಸನ ಸಭೆ ಮತ್ತು ವಿಧಿ ಮಂಡಲವು ಅಧ್ಯಕ್ಷನನ್ನು ಆರಿಸುವುದು. ಮತದಾನವು ಗುಪ್ತವಾಗಿ ನಡೆಯುವುದು. ಸಂರಕ್ಷಣಾಧಿಕಾರವು ಅಧ್ಯಕ್ಷನ ಕಡೆಗೆ ಒಪ್ಪಿಸಲ್ಪಡುವುದು. ಅಧ್ಯಕ್ಷ ಪದದ ಅವಧಿಯು ಐದು ವರ್ಷ ವಿದ್ದರೂ ಈ ಅವಧಿಯ ನಡುವೆ ಅಧಿಕಾರವನ್ನು ಅವನು ತ್ಯಜಿಸುವ ಪ್ರಸಂಗವು ಬಂದಲ್ಲಿ ಉಪಾಧ್ಯಕ್ಷರ ಕಡೆಗೆ ರಾಜೀನಾಮೆ ಪತ್ರವನ್ನೊಪ್ಪಿಸಿ ಅದರಿಂದ ಮುಕ್ತನಾಗಬಹುದು. ಅಧ್ಯಕ್ಷನು ಘಟನೆಯನ್ನುಲ್ಲಂಘಿಸಿದರೆಅವನನ್ನು ವಿಚಾರಣೆಗೊಳಪಡಿಸಿ ಪದಚ್ಯುತಿಗೊಳಿಸಬಹುದು. ಹೊಸ ಅಧ್ಯಕ್ಷನು ಅಧಿಕಾರ ವಹಿಸುವವರೆಗೆ ಹಳೆಯ ಅಧ್ಯಕ್ಷನು ಅಧಿಕಾರದಲ್ಲುಳಿಯುವನು. ಭಾರತದ ಪ್ರಜೆಯಲ್ಲದ ಹಾಗೂ ೩೫ ವಯಸ್ಸು ಪೂರ್ಣವಾಗದ ಹೊರತು ಯಾವನಿಗೂ ಅಧ್ಯಕ್ಷ ವಾಗಲು ಬರುವದಿಲ್ಲ. ಅಧ್ಯಕ್ಷ ವೇತನವು ತಿಂಗಳೊಂದಕ್ಕೆ ೧೦ ಸಾವಿರ ರೂವಾಯಿಗಳು. ಇವಲ್ಲದೆ ಇತರ ಭತ್ತೆಗಳು ಅವನಿಗೆ ದೊರೆಯುತ್ತವೆ. ಅಧಿಕಾರ ವಹಿಸುವ ಪೂರ್ವದಲ್ಲಿ ಅಧ್ಯಕ್ಷನು ಮುಖ್ಯ ನ್ಯಾಯಾಧೀಶರ ಸಮ್ಮುಖದಲ್ಲಿ ನಿಷ್ಠೆಯ ಪ್ರತಿಜ್ಞೆಯನ್ನು ತೆಗೆದುಕೊಳ್ಳಬೇಕು.

ತನ್ನ ಮಂತ್ರಿ ಮಂಡಲದ ಅಧಿಕಾರ ಯವನ್ನು ತೆಗೆದುಕೊಂಡು ಅಧ್ಯಕ್ಷನು ತನ್ನ ಅಧಿಕಾರವನ್ನು ಸಾಗಿಸತಕ್ಕದ್ದು ಸರಕಾರವು ಅಧ್ಯಕ್ಷನ ಹೆಸರಿನಲ್ಲಿ ಕಾರ್ಯಕಲಾಪಗಳನ್ನು ನಡೆಸುವದು. ಅಧ್ಯಕ್ಷನ ಅಂಕಿತದಿಂದ ಹೊರಟ ಆಜ್ಞೆಗಳ ಬಗೆಗೆ ಯಾರಿಗೂ ಸಂಶಯಿತ್ತಲು ಬರುವದಿಲ್ಲ. ಯಾವದೇ ಬಗೆಯ ಶಿಕ್ಷೆಯನ್ನು ಕ್ಷಮಿಸುವ, ಸಾಮ್ಯ ರೂಪಕ್ಕಿಳಿಸುವ ಇಲ್ಲವೆ ತೆಗೆದು ಹಾಕುವ ಅಧಿಕಾರವು ಅಧ್ಯಕ್ಷನಿಗಿದೆ.

ಉಪಾಧ್ಯಕ್ಷ

ಎರಡೂ ಮನೆಗಳ ಸಂದುಕ್ತ ಅಧಿವೇಶನದಲ್ಲಿ ಪ್ರಮಾಣ ಬದ್ಧವಾದ ಪ್ರಾತಿನಿಧ್ಯದ ತಳಹದಿಯ ಮೇಲೆ ಗುಪ್ತ ಮತದಾನದಿಂದ ಉಪಾಧ್ಯಕ್ಷನ ಆಯ್ಕೆಯು ಜರುಗುವುದು. ಅಧ್ಯಕ್ಷ ಪದದ ಅವಧಿಯಂತೆ ಈ ಅಧಿಕಾರ ಸ್ಥಾನದ ಅವಧಿಯಾದರೂ ಐದು ವರ್ಷ. ಮೇಲ್ಮನೆಯ ಅಧ್ಯಕ್ಷಪದವು ಕ್ರಮ ಪ್ರಾಪ್ತವಾಗಿ ಉಪಾಧ್ಯಕ್ಷನ ಕಡೆಗೆ ಉಳಿಯುವುದು. ಅಧ್ಯಕ್ಷಸ್ಥಾನವು ಯಾವದೇ ಕಾರಣಗಳಿಗಾಗಿ ತೆರವಾದಾಗಅಸ್ಥಾನದ ಅಧಿಕಾರವನ್ನು ಉಪಾಧ್ಯಕ್ಷನು ನಿರ್ವಹಿಸವನು ಸುತ್ತಿಮ್ಮಂದು ಆಯ್ಕೆಯು ನಡೆದು ಹೊಸ ಅಧ್ಯಕ್ಷನ ಆಯ್ಕೆಯಾಗಿ ಅವನು ಅಧಿಕಾರ ವಹಿಸುವ ತನಕ ಎರಡೂ ಹೊಣೆಗಾರಿಕೆಯು ಉಪಾಧ್ಯಕ್ಷನ ಕಡೆಗೆ ಉಳಿಯುವುದು. ಉಪಾಧ್ಯಕ್ಷಪದದ ಆಯ್ಕೆಗೆ ನಿಲ್ಲುವವನಾದರೂ ಹಿಂದೀ ಪ್ರಜೆಯಿದ್ದು ೩೫ ವರ್ಷ ಕ್ರಾಯಕ್ಕಿಂತ ಕಡಿಮೆಯಾದವನಿರಬಾರದು.

ಮಂತ್ರಿ ಮಂಡಳ

ಅಧ್ಯಕ್ಷನು ತನ್ನ ಪ್ರಧಾನ ಮಂತ್ರಿಯನ್ನು ನಿಯಮಿಸುವನು ಹಾಗೂ ಪ್ರಧಾನ ಮಂತ್ರಿಯ ಸಲಹೆಯ ಮೇರೆಗೆ ಇತರ ಮಂತ್ರಿಗಳನ್ನು ನಿಯಮಿಸುವನು.

ಅವನ ಅನುಮತಿಯಿರುವವರೆಗೆ ಆ ಮಂತ್ರಿಗಳು ಅಧಿಕಾರದಲ್ಲುಳಿಯುವರು. ಈ ಮಂತ್ರಿಗಳು ಅಧ್ಯಕ್ಷನಿಗೀಯುವ ಸಲಹೆಯನ್ನು ವಿಚಾರಿಸಲು ಯಾವ ನ್ಯಾಯಾಲಯಕ್ಕೂ ಅಧಿಕಾರವಿಲ್ಲ. ಈ ಮಂತ್ರಿ

ಮಂಡಳವು ಪ್ರದಾ ಪ್ರತಿನಿಧಿ ಸಭೆಗೆ ಹೊಣೆಗಾರವಾಗಿರುವುದು. ಮಂತ್ರಿಯು ಯಾವುದೇ ಮನೆಯ ಸದಸ್ಯನಾಗಿರದಿದ್ದರೆ ಅಧಿಕಾರ ವಹಿಸಿದ ಆರು ತಿಂಗಳು ಗಳೊಳಗಾಗಿ ಸದಸ್ಯನಾಗಬೇಕು. ಹಾಗೆ ಆಗದಿದ್ದರೆ ಅವನು ಆ ಪದವಿಯಿಂದ ನಿವೃತ್ತನಾಗುವನು. ಅವನು ಅಧಿಕಾರ ವಹಿಸುವ ಮುನ್ನ ಅಧ್ಯಕ್ಷನು ಅವನಿಂದ ಪ್ರತಿಜ್ಞೆ ಮಾಡಿಸುವನು.

ಹಿರಿಯೋಲಗ

ಹಿಂದುಸ್ಥಾನ ಒಕ್ಕೂಟದ ಹಿರಿಯೋಲಗವು, ಅಧ್ಯಕ್ಷ ಹಾಗೂ ಮೇಲ್ಮನೆ [ಕೌನ್ಸಿಲ ಆಫ್ ಸ್ಟೇಟ] ಕೆಳಮನೆ [ಹೌಸ್ ಆಫ್ ದಿ ಪೀಪಲ] ಗಳಿಂದ ಕೂಡಿರುವುದು. ಮೇಲ್ಮನೆಯ ಸದಸ್ಯರ ಒಟ್ಟು ಸಂಖ್ಯೆಯು ೨೫೦ಇದ್ದು ಅದರಲ್ಲಿ ೧೨ ಸ್ಥಳಗಳಿಗೆ ಅಧ್ಯಕ್ಷನು ಸದಸ್ಯರನ್ನು ನಾಮಕರಣಮಾಡುವನು. ಕೆಳಮನೆಯಲ್ಲಿ ೫೦೦ ಕ್ಕಿಂತ ಹೆಚ್ಚಲ್ಲದೆ ಸದಸ್ಯರಿರುವರು. ಇವರ ಆಯ್ಕೆಯು ಪ್ರಾದೇಶಿಕ ಮತದಾರ ಸಂಘಗಳಿಂದ ನಡೆಯುವುದು. ೭೫ ಲಕ್ಷ ಜನಸಂಖ್ಯೆಗೆ ೫೩ ಕಡಿಮೆಯಿಂದರೆ ಒರ್ವ ಸದಸ್ಯ ಮತ್ತು ೫ ಲಕ್ಷ ಜನಸಂಖ್ಯೆಗೆ ಹೆಚ್ಚೆಂದರೆ ಒರ್ವ ಸದಸ್ಯರನ್ನು ಆರಿಸಲು ಬರುವಂತೆ ಮತದಾರ ಸಂಘಗಳನ್ನು ರಚಿಸಲಾಗುವದು.

ಮೇಲ್ಮನೆಯು ಸ್ಥಿರವಾದದ್ದಿದ್ದು ಅದನ್ನು ವಿಸರ್ಜಿಸಲು ಬರುವದಿಲ್ಲ. ಆದರೆ ಪ್ರತಿ ಎರಡು ವರ್ಷಗಳಿಗೊಮ್ಮೆ ಅದರ ⅓ ಸದಸ್ಯರು ನಿವೃತ್ತರಾಗುವರು. ಕೆಳಮನೆಯಲ್ಲಿ ಅಂಗ್ಲೊ ಇಂಡಿಯನ್ನರಿಗಾಗಿ ಕಾಯ್ದಿಟ್ಟ ಸ್ಥಳಗಳು ಇರುವುದಿಲ್ಲ. ಅದರೆ ಇವರಿಗೆ ತಕ್ಕ ಪ್ರಾತಿನಿಧ್ಯವು ದೊರೆಯಲಿಲ್ಲವೆಂದು ಅಧ್ಯಕ್ಷನಿಗೆನಿಸಿದರೆ ಅವನು ಅವರಲ್ಲಿಯ ಇಬ್ಬರನ್ನು ಸದಸ್ಯರನ್ನಾಗಿ ನಾಮಕರಣಮಾಡಬಹುದು. ಈ ಮನೆಯ ಸಾಮಾನ್ಯ ಅವಧಿಯು ೫ ವರ್ಷಗಳಿರುವುದಾದರೂ ಅಭ್ಯಕ್ಷನು ಅದರ ಅವಧಿಯನ್ನು ಒಂದು ವರ್ಷದ ಮಟ್ಟಿಗೆ ಹೆಚ್ಚಿಸಬಹುದು. ಆ ಅವಧಿ ಮುಗಿದ ನಂತರ ಮುಂದೆ ಆರು ತಿಂಗಳುಗಳಿಗಿಂದ ಹೆಚ್ಚು ಕಾಲ ಅದನ್ನು ಬೆಳಿಸಲಾಗುವದಿಲ್ಲ.

ಮೇಲ್ಮನೆಯ ಸದಸ್ಯನಾಗಬೇಗಾದರೆ ೩೫ ವರ್ಷಗಳಿಗಿಂತ ಮತ್ತು ಕೆಳಮನೆಯ ಸದಸ್ಯ ನಾಗಬೇಕಾದರೆ ೨೫ ವರ್ಷ ಗಳಿಗಿಂತ ಕಡಿಮೆ ಪ್ರಾಯದವರಾಗಿರಲು ಬರುವಂತಿಲ್ಲ.

ಈ ಎರಡೂ ಮನೆಗಳು ವರುಷಕ್ಕೆ ಕನಿಷ್ಟ ಎರಡು ಬಾರಿಯಾದರೂ ಸಭೆ ಸೇರುವವು. ಒಕ್ಕೂಟದ ಅಧ್ಯಕ್ಷನು ಎರಡೂ ಮನೆಗಳಿಗೆ ಅಥವಾ ಒಂದೇ ಮನೆಗೆ, ಸಭೆ ಸೇರುವ ವೇಳೆಯನ್ನೂ ಸ್ಥಳವನ್ನೂ ನಿರ್ದಿಷ್ಟಪಡಿಸಿ ತಿಳಿಸುವನು. ಹಿಂದುಸ್ಥಾನದ ಮಂತ್ರಿಗಳಿಗೆ ಹಾಗೂ ಅಟಾರ್ನಿ ಜನರಲರಿಗೆ ಈ ಸಭೆಗಳಲ್ಲಿ ಭಾಗವಹಿಸುವ ಹಾಗು ಮಾತಾಡುವ ಅಧಿಕಾರವಿರುವುದಾದರೂ ಮತದಾನದ ಅಧಿಕಾರವಿರುವುದಿಲ್ಲ.

[ಮುಂದುವರಿಯುವದು.]

—○—

ಹಿಂದೀ ಮಹಾ ವಿದ್ಯಾಲಯ, ಬಳ್ಳಾರಿ.

[1931 ಸ್ಥಾಪಿತ. ಬಳ್ಳಾರಿ ಜಿಲ್ಲಾ ಹಿಂದೀ ಪ್ರೇಮಿಮಂಡಲದಾಶ್ರಯದಲ್ಲಿ, ರಿಜಿಸ್ಟರ್ಡ.]

ಮದ್ರಾಸ್ ಸರ್ಕಾರದಿಂದ ಮಾನ್ಯತೆ ಇದೆ.

ಪ್ರಾರಂಭಿಕ ವರ್ಗಗಳಿಗೆ ಮಾಸಿಕ 3/- ಶುಲ್ಕ — ಉನ್ನತ ವರ್ಗಗಳಿಗೆ ಮಾಸಿಕ 5/- ಶುಲ್ಕ

ವಾರ್ಡಲಾ ಹೈಸ್ಕೂಲ್ ಕಟ್ಟಡದಲ್ಲಿ ಪ್ರಾತಃಕಾಲ—ಸಾಯಂಕಾಲ ಹಿಂದೀ ಕಾಲೇಜ್‌ದ ವರ್ಗಗಳು ನಡೆಯುತ್ತಿವೆ ವಿಶಾರದ — ಪ್ರಚಾರಕ ವರ್ಗಗಳಲ್ಲದೆ ಪ್ರಾರಂಭಿಕ ವರ್ಗಗಳಿಗೂ ಪ್ರವೇಶವಿದೆ. ವರ್ಗಗಳಿಗೆ ಸಂಬಂಧಿಸಿದ ಪಾಠ ಪುಸ್ತಕಗಳು ವಿದ್ಯಾಲಯದಲ್ಲಿ ದೊರೆಯುತ್ತವೆ. ಒಳ್ಳೆಯ ಪುಸ್ತಕಭಂಡಾರವಿದೆ. ಶ್ರೇಷ್ಠ ವಾರಪತ್ರಿಕೆ, ಮಾಸಪತ್ರಿಕೆಗಳು ಲಭ್ಯ ಇತರ ವಿವರಗಳಿಗೆ ಸ್ವಾಂಪಿಟ್ಟು ಬರೆಯಿರಿ.

ಪ್ರಿನ್ಸಿಪಾಲ್.

NAVA BHARAT BELLARY. (Reg. No. M. 4746)

ನವಭಾರತ ಬಳ್ಳಾರಿ. 30—1—50

(Nationalist Weekly)

ಚಂದಾದರಗಳು.	Subscription Rates.
ವರ್ಷಕ್ಕೆ 5—0—0	One Year 5—0—0
6 ತಿಂಗಳಿಗೆ 3—0—0	Six months 3—0—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.	Subscription will not be accepted for less than 6 months

To

Sri.....

.....

.....

Printed at Krishna Printing Works. Edited & Published by T. B. Keshava Rao.

JAI—HIND

ನವಚೈತನ್ಯ

ಬಳ್ಳಾರಿಯ
ಉಜ್ವಲ ರಾಷ್ಟ್ರೀಯ ವಾರಪತ್ರಿಕೆ.
*
ಉತ್ತಿಷ್ಠತ! ಜಾಗೃತ!!
ವ್ಯಾಪ್ತವರಾನ್ನಿ ಬೋಧತ!!!
*
ಸಂಪಾದಕ ಮತ್ತು ಪ್ರಕಾಶಕ:—
ಟಿ. ಬಿ. ಕೇಶವರಾವು.

ವರ್ಷ ೧೬ | ಸೋಮವಾರ ೬ ಫಿಬ್ರವರಿ ೧೯೩೮ | ಸಂಚಿಕೆ ೩

ಇಮ ಯೂರತಪ್ಪು ?

ಶಾಲೆಯು ಹೊಲವಾಗಿ ಮಕ್ಕಳು ಮಣ್ಣಲ್ಲಿ ಕೂಡುತ್ತಿದ್ದರೆ, ಕಿಂಗಳುಗಟ್ಟಿ ಮಣ್ಣಿನ ನೆಲದ ಸಾರಣೆಯೊಗದರೆ, ಉಪಾಧ್ಯಾಯರದೂ ತಪ್ಪು, ಊರಿನ ಮುಖ್ಯರ ಮತ್ತು ಪೋಷಕರದೂ ತಪ್ಪು ಉಪಾಧ್ಯಾಯರು, ಪೋಷಕರಬಳಿಹೋಗಿ ಕಕ್ಕ ಸಹಾಯ, ಸಹಕಾರಗಳನ್ನು ಹೊಂದಬಹುದಿತ್ತು. ಹಾಗೆ ಮಾಡದ ಉಪಾಧ್ಯಾಯರು ದುರ್ಲಕ್ಷ್ಯ, ಕರ್ತವ್ಯ ಚ್ಯುತಿಯ ಅಪಾದನೆಗೆ ಗುರಿಯಾಗಬೇಕು. ಮಕ್ಕಳ ವಿದ್ಯಾಭ್ಯಾಸ ಪ್ರಣಾಲಿಯಲ್ಲಿ ನೈರ್ಮಲ್ಯವೂ ಒಂದು ಅಂಗವಾಗಿರುವ ಕಾರಣ, ಉಪಾಧ್ಯಾಯರಿಗೆ ಉತ್ತಮ ವಿದ್ಯಾಭ್ಯಾಸ ಕ್ರಮದಲ್ಲಿ ಆಸಕ್ತಿಇಲ್ಲವೆನ್ನಲೇಕು. ಸಾರ್ವಜನಿಕ ಸಂಸ್ಥೆಯಂಥ ಶಾಲೆಯ ರಿವೇರಿಯನ್ನು ಕಾಲಕಾಲಕ್ಕೆ ಮಾಡಿಸಬೇಕಾದುದು ಮ್ಯಾನೇಜುಮೆಂಟು ನವರ ಕರ್ತವ್ಯ. ಶಾಲಾಕಟ್ಟಡವು ಸ್ವಕ್ಕಿಗಳಾಗಿದ್ದರೆ, ಅವರು ತಕ್ಕ ಶ್ರದ್ಧೆಯನ್ನು ವಹಿಸಬೇಕು. ಶಾಲಾಮಕ್ಕಳ ಇತರ ಪೋಷಕರೂ ಸಹಾ ಈ ವಿಷಯದಲ್ಲಿ ಸುಧಾರಿಸಲು ಕಕ್ಕ ಚರ್ಯೆ ತೆಗೆದುಕೊಳ್ಳಬೇಕು. ಸಂಪಾದಕರ ಸಂಚಾರದಲ್ಲಿ ಅನೇಕ ದೃಷ್ಟಿಗೆ ಗೋಚರವಾದ ಶಾಲೆಯೊಂದರ ಸರ್ವಮುಖಾಭಿವೃದ್ಧಿಗಾಗಿ ಆ ಊರಿನವರೆಲ್ಲಾ ಶ್ರಮಿಸುವರೆಂಬ ನಮ್ಮ ಆಶೆ.

ಕುಡಿಯುವ ನೀರಿನ ಭಾವಿಯಿಲ್ಲದೆ

ಕಳೆದ ಅನೇಕ ಶತಮಾನಗಳಿಂದ ಕಷ್ಟ ಪರಂಪರೆಗಳನ್ನು ಭೋಗಿಸುತ್ತಿದ್ದರೆ, ಜೂರತಪ್ಪು? ಪ್ರಜೆಗಳಲ್ಲಿ ಸಾಕಷ್ಟು ಆಂದೋಳನ ಮಾಡುವವರಿಲ್ಲದಿರಬೇಕು. ಈ ಕಾಲದಲ್ಲಿ ಬಾಯಿಬ್ಬಿದವರನ್ನು ಕೇಳುವವರಿಲ್ಲ. ಬಾಯಿಬ್ಬಿದವನು ಪ್ರಪಂಚವನ್ನೇ ಜಯಿಸಬಲ್ಲ. ವರ್ಷಂಪ್ರತಿ ಲಕ್ಷಗಟ್ಟಲೆ ಹಣವು ಭಾವಿಗಳಿಗಾಗಿ ತೆಗೆದಿಡಲ್ಪಡುತ್ತಿದೆ. ಅದು ಏಜೆಂಟಗದೆ ಹಿಂದಕ್ಕೆ ಹೋಗುವುದೂ ಉಂಟು ಇದಕ್ಕೇನು ಕಷ್ಟಪಡಬೇಕು? ಕಲೆಕ್ಟರವರ ಕಿವಿಗೆ ಮುಟ್ಟಿ ಅದರ ಅಗತ್ಯವೂ ಅವರ ಮನಸ್ಸಿಗೆ ಹೊಳೆವಂತಾದರೆ ಸಾಕು. ಕೆಲಸವಾದೀತು. ಪಟ್ಟು ಹಿಡಿದು ಹರಿಜನರಿಗೆ ಭಾವಿಗಳಾಗಬೇಕೆಂದು ಶ್ರಮಿಸಿದವರ ಕಾರ್ಯಸಿದ್ಧಿಯಾಗಲಿಲ್ಲವೇ? ದೊಡ್ಡ ಮನಸ್ಸು ಮಾಡಿ ಹರಿಜನರ ಭಾವಿಯಲ್ಲಿ ಇತರ ವರ್ಗದ ಹಿಂದೂಗಳು ತುಂಬಿದೆರಾಯಿತು. ಹೊರಗೆ ನೀರು ಹಂಚುವದರ ಬದಲು, ಗಂಗಾದೇವಿಯು ಬಳಕೆಗೆ ದೋಷವಿಲ್ಲೆಂದು, ಊರಿನ ದೊಡ್ಡವರು ಹರಿಜನರನ್ನು ತಮ್ಮ ಭಾವಿಯಲ್ಲಿ ಕುಂಬಲು ಉದಾರ ಮನಸ್ಸಿನಿಂದ ಬಿಟ್ಟರೂ ಆಯಿತು ಹೀಗೆ ಮಾಡಿದರೆ ಎಲ್ಲಾ ಕಷ್ಟಗಳೂ ನಿವಾರಣೆಯಾದಾವು, ಹಳ್ಳಿಗಳಲ್ಲಿ ಈ ಕ್ರಾಂತಿಕಾರಕ ಸುಧಾರಣೆಗೆ ಸಮಯ ಬೇಕೆಂದರೆ, ಬೇರೆ ಭಾವಿಗಳನ್ನು ತೆಗೆಸಲು ಊರಿನವರೆಲ್ಲಾ ಕೈಸಿವಮಾಡಬೇಕು.

ಅಂಚೆ-ಯೂ-ಪೋಸ್ಟು

ಸಣ್ಣ ಸಣ್ಣ ಊರುಗಳಿಗೇರ್ಪಟ್ಟು ನನಗೆ ಬರಲಿಲ್ಲವೆಂದು ಮನೆಯಲ್ಲಿ ಜಪ ಮಾಡಿದರಾಗದು. ಒಂದಲ್ಲ ನಾಲ್ಕುಸಲ ಪೋಸ್ಟಿನ ಮುಖ್ಯರ ಬಳಿಸುಳಿದಾಡಿ "ಇವರೇನಪ್ಪ ನಮ್ಮನ್ನು ಬಿಡುವಂತಿಲ್ಲ" ಎಂಬ ಭಾವನೆ ಅವರಲ್ಲಿ ಬರುವಂತಾದರೆ ಕಾರ್ಯ ಸಿದ್ಧಿಯಾಗುತ್ತದೆ. ಇದೇನು ಕಷ್ಟಸಾಧ್ಯವಲ್ಲ. ಸಾಕಷ್ಟು ಆದಾಯ ಬಗಲು ಕ್ಯಾಗಮಾಡಬೇಕು. ಎಲ್ಲರಲ್ಲಿಯೂ ಪತ್ರವ್ಯವಹಾರ, ಪುಸ್ತಕ ಮತ್ತು ವೃತ್ತ ಪತ್ರಿಕೆಗಳ ವಾಚನಾಭಿರುಚಿಯು ಅಭಿವೃದ್ಧಿಗೊಳ್ಳಬೇಕು. ಹೀಗಾದರೆ, ಪೋಸ್ಟಾಫೀಸು ಶಾಶ್ವತವಾಗಿ ಉಳಿಯುತ್ತದೆ.

ಪ್ರಜಾರಾಜ್ಯ ದಿನಾಚರಣೆ

ಬಳ್ಳಾರಿ ಜಿಲ್ಲೆಯ ಎಲ್ಲಾ ತಾಲೂಕು ಕೇಂದ್ರಗಳಲ್ಲಿ ಪ್ರಜಾರಾಜ್ಯದಿನಾಚರಣೆಯು ಸಂಬಂಧಿಸಿದ ತಹಶೀಲ್ದಾರರ ನೇತೃತ್ವದಲ್ಲಿ ನಡೆದು, ಶಾಲಾಬಾಲಕರ ನೆರವಣಿಗೆ, ಮಿಠಾಯಿ ಹಂಚುವಿಕೆ, ಸಭೆಗಳಲ್ಲಿ ಪ್ರಜಾರಾಜ್ಯದ ಸಂಬಂಧಿಯ ಭಾಷಣಗಳಿಗೆ ಏರ್ಪಾಟಿದ್ದಿತು. ಆಟಪಾಟ, ಮನರಂಜನೆಯ ಕಾರ್ಯ ಕ್ರಮಗಳೂ ಇದ್ದವು.

ಗಾಂಧಿ ಪುಣ್ಯತಿಥಿ

ಮೊರಗೇರಿ- ಸೊನ್ನಗ್ರಾಮಗಳಲ್ಲಿ— 30-31 ನೆಯ ದಿನಾಂಕ ಗಾಂಧೀ ಪುಣ್ಯ ತಿಥಿಯ ಆಚರಣೆ ಯಾಯಿತು. ಶ್ರೀ ಟಿ. ಬಿ. ಕೇಶವರಾಯರು ಮಹಾತ್ಮಾ ಗಾಂಧಿಯವರ ಜೀವನ ತತ್ವಗಳನ್ನು ಸಂಕ್ಷಿಪ್ತವಾಗಿ ತಿಳಿಯ ಪಡಿಸಿದರು.

ಕೂಡ್ಲಿಗಿಯಲ್ಲಿ

-:ಸರ್ವೋದಯ ವಾರ:-

ಕೂಡ್ಲಿಗಿಯ ಬಾಲಕಂಡ ಮತ್ತು ಕರುಣ ಮಿತ್ರರ ಸ್ತುತ್ಯ ಮತ್ತು ಯಶಸ್ವಿ ಪ್ರಯತ್ನಗಳಿಂದ 26 ರಿಂದ 30 ವರೆಗೆ ಸರ್ವೋದಯ ದಿನಾಚರಣೆಯು ಗಾಂಧೀ ರತಿಯಿಂದ ಕೂಡಿದ ಶ್ರದ್ಧಾ ಭಕ್ತಿ ವಾತಾವರಣದಲ್ಲಿ ಆಚರಿಸಲಾಯಿತು. ಮಹಾತ್ಮಾ ಗಾಂಧೀ ಚಿತಾಭಸ್ಮ ಸ್ಮಾರಕ ಸ್ಥಳವೂ ಶಾಂತಿ ನಿಕೇತನದಂತಿದ್ದು ನಾಸ್ತಿಕನೆನ್ನುವಷ್ಟಿಕನನ್ನಾಗಿಮಾಡುವಂತಿದೆ. 26ನೆ ದಿನಾಂಕ ಶ್ರೀ ಸಿದ್ದನಗೌಡರಿಂದ ಧ್ವಜಾರೋಹಣವಾಗಿ ಸಾಯಂಕಾಲ ವಿದ್ಯಾರ್ಥಿಗಳ ಮೆರವಣಿಗೆಯು ಆಜಾದ ಮೈದಾನದಲ್ಲಿ ಸಭೆ ಸೇರಿತು. ಡಾ ಗುರುಶಿದ್ಧನಗೌಡರಧ್ಯಕ್ಷತೆಯಲ್ಲಿ ಶ್ರೀ ಮತಿ ಸಿದ್ಧಮ್ಮ- ಮೈಲಾರರು ಭಾಷಣ ಮಾಡಿದರು. ಹುತಾತ್ಮರ ಸ್ಮಾರಕಾವರಣದಲ್ಲಿ ಶ್ರೀ ಮತಿ ಸಿದ್ಧಮ್ಮ ಯವರು,

ಇತರರೂ ಶ್ರದ್ಧಾಂಜಲಿ ಅರ್ಪಿಸಿದರು. ಇದರಿಂದ ಸತತ ೧೫ ಗಂಟೆಗಳ ಸೂತ್ರಯಜ್ಞ ಸಾಗಿತು. ೨೭ ನೆಯ ತಾ. ತಹಶೀಲ್ದಾರ ಜನಾಬ್ ಪಾಸಿಂಸಾಹೇಬರಧ್ಯಕ್ಷತೆಯಲ್ಲಿ ಪ್ರಸಿದ್ಧ ಗಮಕಿಗಳಾದ ಶ್ರೀ ಜೋಳದರಾಶಿ ದೊಡ್ಡನಗೌಡರು ವಿದ್ಯಾರ್ಥಿಗಳನ್ನುದ್ದೇಶಿಸಿ ದೀರ್ಘ ಭಾಷಣ ಮಾಡಿ ಹಲವು ಕವನಗಳನ್ನು ರಸವತ್ತಾಗಿ ಹಾಡಿದರು.

ಶ್ರೀ ಸಿದ್ದೇನಹಳ್ಳಿ ಕೃಷ್ಣಶರ್ಮರು ಶ್ರೀ ಕೇಶವರಾಯರಧ್ಯಕ್ಷತೆಯಲ್ಲಿ ೨೮ ನೆಯ ದಿನಾಂಕ ಗಾಂಧಿ ಕತ್ತಲಗಳ ಮೇಲೆ ಮಾರ್ಮಿಕವಾಗಿ ಸರಳವಾಗಿ ಜನತೆಯ ಮನಸ್ಸಿನ ಮೇಲೆ ಸುರಿಮಾತು ಮಾಡಿದರು. ಮಾರನೆಯ ದಿನ ಗಾಂಧೀ ಜೀವನ ತತ್ವಗಳ ಅಭ್ಯಾಸ ತರಗತಿಯಲ್ಲಿ ೨೦ಜಕೀಯ ಕ್ರಾಂತಿಗಳ ಇತಿಹಾಸವನ್ನು ವಿವರಿಸಿ ಗಾಂಧೀ ತತ್ವದ ಶ್ರೇಷ್ಠತೆಯನ್ನು ಪ್ರತಿಪಾದಿಸಿದರು.—

ಶ್ರೀ ರಮಾನಂದ ತೀರ್ಥರು-೩೧ನೆಯ ದಿನಾಂಕ ಚಿತಾಭಸ್ಮದ ಸ್ಥಾಪನೆ ಮಾಡಿ ಭಾವ ಪೂರ್ಣ ಭಾಷಣ ಮಾಡಿದರು. ದೈವಿ ಕವಿಪತ್ನಿ ಗಾಗಿ ಶ್ರೀ ರಾಯನಗೌಡರು ಬರಲಿಲ್ಲ. ಪರಸ್ಥಳದಿಂದ ಬಂದವರಿಗೆ ವ್ಯವಸ್ಥೆಯು ಚನ್ನಾಗಿದ್ದಿತು. ವಿದ್ಯಾರ್ಥಿಗಳ ನಾಟಕದಿಂದ ಸರ್ವೋದಯದ ಕಾರ್ಯಗಳಿಗಾಗಿ ಸ್ವಲ್ಪ ಮೊತ್ತವು ಬಂದಿತು

ದುಗ್ಗವತ್ತಿ:— ಜನವರಿ ೨೬–೨೭ ರಸ್ಪೆಷಲ್ ದಿನಾಚರಣೆಯು ಮಹಾತ್ಮರ ಭಾವ ಚಿತ್ರದ ಪ್ರಭಾತ ಫೇರಿಯಿಂದ ಆರಂಭವಾಗಿ ಶ್ರೀ ಎಸ್. ಲಿಂಗಾಭಟ್ಟ H. M. ಇವರಧ್ಯಕ್ಷತೆಯಲ್ಲಿ ಧ್ವಜವಂದನೆ ಉಪನ್ಯಾಸಗಳು ಜರುಗಿದವು ಮಕ್ಕಳಿಗೆ ಮಿಠಾಯಿ ಹಂಚಲಾಗಿ ಮಂಗಳದೊಂದಿಗೆ ಸಭಾ ಕಾರ್ಯಕ್ರಮಗಳು ನಡೆದವು ——

ಕುರುಗೋಡು:— ಪ್ರಾತಃಕಾಲ ರಾಷ್ಟ್ರ ಧ್ವಜವಂದನೆಯಾಗಿ ಶಾಲಾ ಬಾಲಕರಿಗೆ ಮಿಠಾಯಿ ಹಂಚಲಾಯಿತು. ಸಾಯಂಕಾಲ ಮಹಾತ್ಮಾ ಗಾಂಧಿ ಭಾವಚಿತ್ರದ ಮೆರವಣಿಗೆಯಾಗಿ ಸಭೆಯಲ್ಲಿ ಪ್ರಜಾ ರಾಜ್ಯದ ಮಹತ್ವವನ್ನು ವ್ಯಕ್ತ ಪಡಿಸಲಾಯಿತು. ——

ಹಾ. ಹೊ ಸ ಹಳ್ಳಿ (ಸಿರುಗುಪ್ಪೆ)

ಗ್ರಾಮಾಭಿವೃದ್ಧಿ ಸಂಘದ ಅಧ್ಯಕ್ಷ ಶ್ರೀ ಎಚ್. ವೀರನಗೌಡರು ಕರಣಂ ರಾಘವೇಂದ್ರರಾವ್ ಮತ್ತು ಇತರ ಪ್ರಮುಖರೆಲ್ಲಾ ಸೇರಿ ಪ್ರಜಾಪ್ರಭುತ್ವದ ನಾಚರಣೆಯನ್ನು ವೈಭವದಿಂದ ನೆರವೇರಿಸಿದರು.. ೨೬ ನೆಯ ದಿನಾಂಕ ವ್ಯಾತಃಕಾಲ ಪ್ರಭಾತ ಫೇರಿಯಸಂತರ ಧ್ವಜವಂದನೆಯಾಗಿ ಮಹಾತ್ಮಾ ಗಾಂಧಿಯವರ ಭಾವ ಚಿತ್ರದ ಅನಾವರಣವು ಮಹಾತ್ಮ ಗಾಂಧೀ ವಾಚನಾಲಯದಲ್ಲಾಯಿತು. ಪಂಚಾಯ್ತಿ ಬೋರ್ಡು ಅಧ್ಯಕ್ಷರಾದ ಶ್ರೀ ವೆಂಕಟ ರೆಡ್ಡಿಯವರ ನೇತೃತ್ವದಲ್ಲಿ ಆಟ ಪಾಟ ನಡೆಯು ಬಹುಮಾನಗಳ ವಿತರಣೆ ನಡೆಯಿತು. ಶ್ರೀ V. ಗೋವಿಂದರೆಡ್ಡಿಯವರಧ್ಯಕ್ಷತೆಯಲ್ಲಿ ಕ್ರಿಸ್ಟಣ್ಣಾವ್ ಗುಂಡಾವ್ ಮುಪ್ಪಿನಯ್ಯ ವ್ಯಾಕ್ಸಿನೇಟರ್ ನಾರಾಯಣರಾವ್ ಶೇಷಗಿರಿಯಾಚಾರ್ಯ ಇವರ ಭಾಷಣಗಳಾದವು —

ರಾತ್ರಿ ದೀಪೋತ್ಸವದಿಂದ ಸಮಾರಂಭವು ಕೊನೆಯಾಯಿತು.

——

ಸ್ವೀಕಾರ — ವಿಮರ್ಶೆ

(೧) ಶ್ರೀ ಷಣ್ಮುಖ ಯಾತ್ರೆ—
ಬೆಲೆ ೦-೮-೦
ಭಾವಿಸಿ ಷಟ್ಪದಿ. ಸರಳ ಶೈಲಿಯ ೧೫೦ ಪದ್ಯಗಳು.

(೨) ಶ್ರೀ ವೇಣು ಗೋಪಾಲ ಶತಕ—
ಬೆಲೆ ೦-೮-೦

—— —

(3) ಶ್ರೀ ಕುಮಾರ ಸ್ವಾಮಿಯು ಸಿಕ್ಕಿದ್ದು—
ಬೆಲೆ ೧-೨-೦
ಸರಳ ಗದ್ಯ-

ಈ ಮೂರು ಹೊತ್ತಗೆಗಳ ಮೂಲ ಲೇಖಕರು- ಶ್ರೀ ವಿದ್ವಾನ್ ಕೆ. ರಾಮರಾಯರು ಬೋರ್ಡು ಹೈಸ್ಕೂಲ್ ಕೂಡ್ಲಿಗಿಯಲ್ಲಿ ಕನ್ನಡ ಪಂಡಿತರು ಹಿಂದುಳಿದ ಬಳ್ಳಾರಿ ಭಾಗದಲ್ಲೂ ಶ್ರೇಷ್ಠ ಸಾಹಿತ್ಯದ ಸಂಪತ್ತಿಯನ್ನು ಹೆಚ್ಚಿಸಬಲ್ಲ ಸುಲೇಖಕರೂ-ಕವಿಗಳೂ ಇದ್ದಾರೆಂಬುದರ ಸಮರ್ಥನೆಯು ವ್ಯತಿರಿಕವಾಗಿ ಈ ಮೂರು ಪುಸ್ತಕಗಳು ಕನ್ನಡ ರಂಗಕ್ಕಿಳಿದಿರುವುದು ಬಳ್ಳಾರಿ ಕನ್ನಡಿಗರ ಸುದೈವವೆನ್ನಬೇಕು. ಪುಸ್ತಕಗಳ ಪ್ರಕಾಶನ ಮಾರಾಟದಿಂದ ವ್ಯಾಪ್ತಿಯ ಮಾತಂತಿರಲಿ ದೋಷರಹಿತ ಸುಂದರ ಮುದ್ರಣದಿಂದ ಕೂಡಿಮದಷ್ಟೇ ಅಲ್ಲದೆ ಭಾವಿನಿ ಷಟ್ಪದಿಯ ಪದ್ಯಗಳು ರಸಾಲಂಕಾರದಿಂದ ಕೂಡಿ ಸಾಹಿತ್ಯ ಮನವನ್ನು ತಣಿಸುವಂತೆ ವೆ. ಶಬ್ದ ಸೌಷ್ಠವ ಶೈಲಿಯು ಉಚ್ಚತರ ಗತಿಯದಾಗಿದೆ.

ಪ್ರಾಚೀನ ಪರಂಪರೆಯ ಭಕ್ತರ ಮನಾಕರ್ಷಕವಾಗಿದೆ ಶ್ರೀ ಕುಮಾರ ಸ್ವಾಮಿಯವರು ಸಿಕ್ಕಿದ್ದು ಎಂಬ ಪುಸ್ತಕ. ಆಧುನಿಕ ಕಾಲದ ಯಾತ್ರೆಗೆ ಬೇಕಾಗುವ ಸೌಕರ್ಯಗಳ ಸೂಚಿ-ಬೆಲೆ ದೂರದ ನಂಬಿಕೆ ರೈಲಿನ ಸೌಕರ್ಯ ವಗೈರೆ-ಸೂಚಿಸಿ ಒಂದು ನಕ್ಷೆಯನ್ನು ಕೊಟ್ಟಿದ್ದಾರೆ ಚನ್ನಾಗಿತ್ತೆಂದನಿಸುವುದು ಯಾತ್ರಸ್ಥಳ ಮಹಾತ್ಮೆಯನ್ನು ಸೂಚಿಸುವಷ್ಟೆಂಶಗಳೇ ಇಲ್ಲದೆ ಚರಿತ್ರೆಗೆ ಸಂಬಂಧಿಸಿದ ವಿಷಯಗಳೂ ಇರುವ ಕಾರಣ ಚುರುಕ್ಕಾಕಾರರಿಗೂ ಉಪಯುಸ ಯೋಗ್ಯವಾಗಿದೆ. ಜಿಲ್ಲೆಯ ಕನ್ನಡ ಸ್ನೇಮಿಗಳು ಅಗತ್ಯವಾಗಿ ಪ್ರೋತ್ಸಾಹಿಸಲು ನಮ್ಮ ಕೋರಿಕೆ.

——

ನೋಟೀಸು

ಬಳ್ಳಾರಿ ತಾಲೂಕು ಕುರುಗೋಡು ಗ್ರಾಮದಲ್ಲಿರುವ ಬಡಿಗೇರ ಷಣ್ಮುಖಪ್ಪನ ಮಕ್ಕಳು (1) ಬಡಿಗೇರ ಈರಣ್ಣ (2) ಬಡಿಗೇರ ರುದ್ರಪ್ಪ ಇವರು ತಮ್ಮ ಅವಿಭಕ್ತ ಸಹೋದರನಾದ ಬಡಿಗೇರ ವೀರಭದ್ರಪ್ಪನ 1/8 ಸಮೂಹ ಹಿಸ್ಸೆಯನ್ನು ಮುಂಗಿಸ ಬೇಕೆಂಬದುರುದ್ದೇಶದಿಂದ ಕಲ್ಲುಕಂಬ ಗ್ರಾಮದಲ್ಲಿರುವ ಸಮೂಹ ಕುಟುಂಬದ ಪಿತ್ರಾರ್ಜಿತ ಆಸ್ತಿಗಳನ್ನು ಮಾರಾಟ ಮಾಡುವ ಯತ್ನದಲ್ಲಿದ್ದಾರೆ. ಸದ್ರಿ ಆಸ್ತಿಗಳನ್ನು ಯಾರು ಖರೀದಿಗಾಗಲಿ ಪತ್ತಿಗಾಗಲಿ ಹಿಡಿಯುಕೂಡದು ಈ ವಳಗಾಗಿ ಖರೀದಿ ವಗೈರೆ ದಿಂದ ಸಂಪಾದನೆ ಮಾಡಿದ್ದರೆ ಅವು ರದ್ದಾಗುತ್ತವೆ.

ಬಿ ವೀರಭದ್ರಪ್ಪ

——

ಹರಿಜನಾಭಿವೃದ್ಧಿ ಮಂತ್ರಿಗಳ ಸಂಚಾರ

—(●)—

ಮದ್ರಾಸ್ ಗ್ರಾಮಾಭಿವೃದ್ಧಿ ಶಾಖೆ ಮತ್ತು ಹರಿಜನೋದ್ಧಾರ ಶಾಖೆಯ ಮತ್ತು ಹರಿಜನೋದ್ಧಾರ ಶಾಖೆಯ ಮಂತ್ರಿಗಳಾದ ಶ್ರೀ. ಬಿ. ಪರಮೇಶ್ವರನ್‌ರವರು 7 ನೆಯ ತಾ॥ ಆದವಾನಿ ಆಲೂರು 8 ನೆಯ ತಾ॥ ಬಳ್ಳಾರಿ ಹೊಸಪೇಟೆ 9ನೆ ತಾ॥ ಹರಪನಹಳ್ಳಿಯನ್ನು ಸಂದರ್ಶಿಸಿ ಮದ್ರಾಸಿಗೆ ತೆರಳುವರು ಎಲ್ಲಾ ಕಡೆಗಳಲ್ಲಿ ಹಾಸ್ಪೆಲ್‌ಗಳನ್ನು ನೋಡುವರು.

ಪ್ರಜಾ ಶಕ್ತಿಯ ನಮ್ಮ ಕಲ್ಪನೆ

ಶ್ರೀ ಜೆ. ಸಿ. ಕುಮಾರಪ್ಪನವರನ್ನರಿಯದ ಭಾರತೀಯರು ವಿರಳ. ಇವರು ಅಚ್ಚ ಗಾಂಧೀ ವಾದಿಗಳು. ಕಂಡದ್ದನ್ನು ಕಂಡಂತೆ ಹೇಳುವ ಕೆಚ್ಚೆದೆಯ ಮುಖಂಡರಿವರು, ಗ್ರಾಮೋದ್ಯೋಗ ಸಂಘಟನೆಯಲ್ಲಿ ಅವರದು ಪಳಗಿದ ಕೈ. ಪ್ರಜಾಸತ್ತೆಯ ಕಲ್ಪನೆ ಎಂಬ ಈ ಲೇಖನದಲ್ಲಿ ಅವರು ತಮ್ಮ ವಿಚಾರವನ್ನು ಸುಸ್ಪಷ್ಟವಾಗಿ ಜನತೆಗೆ ಒದಗಿಸಿದ್ದಾರೆ.

ಮೂಲದಲ್ಲಿ ಹಿಂದುಸ್ಥಾನವು ಹಳ್ಳಿಗಳ ಪ್ರಜಾಸತ್ತೆಯೇ ಆಗಿತ್ತು ನುತ್ತು ಪ್ರತಿಹಳ್ಳಿಯು ಅದರ ಸ್ವಯಂಪೂರ್ಣ ಘಟಕವಾಗಿತ್ತು. ಸಮಾಜದಲ್ಲಿ ಸಾಮನ್ಯವಾಗಿಕಾಣುವ ಕಲವ್ಯಕ್ತಿಗಳ ಮಾದರಿಯ ತಳಹದಿಯ ಮೇಲೆ ಅದರ ಪ್ರಜಾಸತ್ತೆಯ ಕಲ್ಪನೆಗಳು ನಿರ್ಮಿಸಲ್ಪಟ್ಟಿವೆ.

ಮಾನವಿ ಸಮಾಜದಲ್ಲಿಯ ಸರ್ವ ಚಟುವಟಿಕೆಗಳು, ದೂರದೃಷ್ಟಿ ಮತ್ತು ಸಮೀಪದೃಷ್ಟಿ ಹೀಗೆ ಎರಡು ತರಹದ ದೃಷ್ಟಿಗಳನ್ನು ಪ್ರದರ್ಶಿಸುತ್ತಿವೆ. ನಮ್ಮಲ್ಲಿ ಅನೇಕರು ದೂರ ದೃಷ್ಟಿಯನ್ನಿಟ್ಟುಕೊಳ್ಳಲು ಇಚ್ಚಿಸುವುದಿಲ್ಲ. ಯಾವನೊಬ್ಬನ ಕಾರ್ಯಕ್ಕೆ ಫಲ ಸಿಗಬೇಕಾದರೆ ಅನೇಕ ವರ್ಷಗಳವರೆಗೆ ದುಡಿಯಬೇಕಾಗುತ್ತದೆ ಜನರು ದಾರಿಕಾಯಲು ಮನಸ್ಸು ಮಾಡುವುದಿಲ್ಲ. ನಾವೆಲ್ಲರೂ ಅಲ್ಪ ದೃಷ್ಟಿಯಬಗ್ಗೆ ಆಸ್ತೆ ವಹಿಸುವವರಾಗಿದ್ದೇವೆ. ತಿಂದುಂಡು ಆಲ್ಪಾದ ಪಡುವದಕ್ಕೆ ನಾವು ಹಾತೊರೆಯುತ್ತೇವೆ. ನೂರರಲ್ಲಿ ೯೯ ಜನರ ದೃಷ್ಟಿಯು ಈ ತರಹದ್ದಿದೆ. ಆದ್ದರಿಂದ ಪ್ರಜಾಸತ್ತೆಯು ಇಂಥದೇ ನಿರ್ಮಾಣವಾಗುವುದು.

ಯಾವುದೊಂದು ಸರಕಾರವು ಯಶಸ್ವಿಯಾಗಬೇಕಾದರೆ, ಅದರ ಮುಖ್ಯಸ್ಥಳದಲ್ಲಿ ದೂರದೃಷ್ಟಿಯ ವ್ಯಕ್ತಿಗಳು ಇರಬೇಕಾಗುವುದು. ಅಲ್ಲಿ ಇರುವ ಅಲ್ಪ ದೃಷ್ಟಿಯವರು ಸಮಾಜಕ್ಕೆ ಅಪಾಯಕಾರಿಗಳಾಗುವರು. ತಮ್ಮ ಅಲ್ಪ ದೃಷ್ಟಿಯ ಧೋರಣದಿಂದ ಅವರು ಯುದ್ಧಗಳಿಗೆ ಪ್ರಚೋದಿಸುವರು.

ಇಂಗ್ಲಂಡ-ಅಮೇರಿಕೆ

ಈ ದೃಷ್ಟಿಯಿಂದ ನೋಡಿದರೆ ಇಂಗ್ಲಂಡ-ಅಮೇರಿಕೆಗಳು ಪ್ರಜಾಸತ್ತೆಗಳೆನಿಸಲಾರವು. ಅವು ಶುದ್ಧ ಸರ್ವಾಧಿಕಾರಿ ಆಡಳಿತಗಳಾಗಿವೆ. ಅವುಗಳಿಗೆ ಯುದ್ಧದ ಭಯಾನಕ ಪರಿಸ್ಥಿತಿಯು ಎದುರಾಗಿದ್ದಾಗ್ಗೆ ಅವುಗಳಲ್ಲಿ ಯಾವ ಸರಕಾರ ಅಸ್ತಿತ್ವದಲ್ಲಿ ಬಂದಿತು? ಪ್ರಜಾಸತ್ತೆಯೋ? ಸರ್ವಾಧಿಕಾರಿ ಪದ್ಧತಿಯೋ? ಸ್ಪಷ್ಟ ಸರ್ವಾಧಿಕಾರವು ಆಗ ಕಾರ್ಯರಂಗದಲ್ಲಿ ಒಂದಿತು. ಅದು ಅಕಸ್ಮಾತ್ತಾಗಿ ಉಂಟಾದುದಲ್ಲ. ಅದು ಒಂದೇ ಬೇಕಾಗಿತ್ತು ಹುಟ್ಟುವಳಿಯ ವಿಷಯದಲ್ಲಿ ಈ ದೇಶಗಳು ಕೇಂದ್ರೀಕೃತ ಪದ್ಧತಿಯನ್ನು ಉಪಯೋಗಿಸುತ್ತವೆ ಇದರಿಂದ ಅವರು ಕೇಂದ್ರದಿಂದ ಸೈನಿಕೀಕರಣಕ್ಕೆ ಮತ್ತು ನಿಯಂತ್ರಣವನ್ನು ತಾಕುತ್ತಾರೆ. ಅದು ಕಾರಣದಲ್ಲಿ ಸರ್ವಾಧಿಕಾರಕ್ಕೇ ಒಯ್ಯುವುದು ಆರ್ಥಿಕ ವಿಭಾಗದಲ್ಲಿ ನಾವು ಸರ್ವಾಧಿಕಾರವನ್ನೂ, ರಾಜಕಾರಣದಲ್ಲಿ ಪ್ರಜಾಸತ್ತೆಯನ್ನೂ ಹೊಂದಲಾರೆವು. ಪ್ರಜಾಸತ್ತೆಯಲ್ಲಿ ಈ ಮಾತುಗಳನ್ನು ಆಡುವುದು ವ್ಯರ್ಥವೇ ಸರಿ. ಅರ್ಥ ವಿಭಾಗದಲ್ಲಿಯ ಪ್ರಜಾಸತ್ತೆಯು, ವೈಯಕ್ತಿಕ ತಳಹದಿಯ ಮೇಲೆ, ವಿಕೇಂದ್ರೀಕೃತ ರೂಪದಲ್ಲಿ ಹಳ್ಳಿಗಳ ಮೇಲೆ ಅವಲಂಬಿಸಿರಬೇಕಾಗುವುದು.

ನೀರಾವರಿ, ಮಾರ್ಗಗಳು ಮತ್ತು ಅಂತಹ ಇತರ ಕಾರ್ಯಗಳಕ್ಕಾಗಿ ಜನತೆಯೊಳಗಿಂದ ದೂರ ದೃಷ್ಟಿಯುಳ್ಳ ಜನರನ್ನು ಆರಿಸಿಕೊಳ್ಳಬೇಕಾಗುವುದು. ಆದ್ದರಿಂದ ಎಲ್ಲಾ ಮಂತ್ರಿಗಳು ಮತ್ತು ಸರಕಾರೀ ಅಧಿಕಾರಿಗಳು ದೂರ ದೃಷ್ಟಿಯುಳ್ಳವನಿರಬೇಕಾಗುವುದು. "ಇದರಿಂದ ಲಾಭವಾಗಬಹುದೇ?" ಎಂಬ ದುಡ್ಡಿನ ದೃಷ್ಟಿಯಿಂದ ಅವರು ಮಾತಾಡುತ್ತಿದ್ದಾರೆ, ಅವರು ಇಂದಿನ ಹೊಣೆಗಾರ ಸ್ಥಳವನ್ನು ಅಲಂಕರಿಸಲು ಯೋಗ್ಯರಾಗಲಾರರು. ದೂರ ದೃಷ್ಟಿಯಲ್ಲಿ "ಲಾಭವಾಗುವುದೇ?" ಈ ಮಾತು ಉಪಯೋಗ ಬೀಳಲಾರದು. "ಜನತೆಯ ಪ್ರಯೋಜನದಿಂದ ಸಾಧಿಸುವುದೇ?" ಎಂಬದು ಆಗಿನ ಪ್ರಶ್ನೆ ಯಾಗಿರಬೇಕು. ಸರಕಾರವು ವ್ಯಾಪಾರೀ ಸಂಸ್ಥೆಯಲ್ಲ. ಅದು ದುಡ್ಡುಗಳಿಸುವುದಕ್ಕಾಗಿ ಇಲ್ಲವೇ ಸರ್ವಾಧಿಕಾರಿಗಳನ್ನು ನಿರ್ಮಾಣಮಾಡುವುದಕ್ಕೆ ಇರುವದಿಲ್ಲ ಸರಕಾರವು ಜನರ ಸೇವೆಗಾಗಿ ಇರುತ್ತದೆ. ಅದನ್ನು ಅದು ಸರಿಯಾಗಿ ಮಾಡಬೇಕೇ ಹೊರತು ಅದಕ್ಕಾಗಿ ಎಷ್ಟು ದುಡ್ಡು ಹಿಡಿಯಿತು.? ಎಂಬ ದೃಷ್ಟಿಯನ್ನು ಇಟ್ಟುಕೊಳ್ಳಕೂಡದು. ಆಕಲಸವಾಗಲೇಬೇಕು. ಇದು ಮೂಲ ಭೂತ ತತ್ವ ವಾಗಿದೆಯೆಂಬುದನ್ನು ನಾವು ಮರೆಯ ಕೂಡದು.

ವೈಯಕ್ತಿಕ ಮತ್ತು ಸಾರ್ವಜನಿಕ ಭಾಷಣಗಳಲ್ಲಿ ವ್ಯತ್ಯಾಸವಿದೆ. ಸಾರ್ವಜನಿಕ ಅರ್ಥಶಾಸ್ತ್ರದಲ್ಲಿ ದೂರದೃಷ್ಟಿಯ ಅವಶ್ಯಕತೆಯಿದೆ ಪ್ರಜಾಸತ್ತೆಯು ಯೋಜನೆಯನ್ನು ಮಾಡುವಾಗ್ಗೆ ಆ ಇಡಿ ಯೋಜನೆಯ ಬಗ್ಗೆ ತನ್ನ ಮಾಲಿನ ಕರ್ತವ್ಯವನ್ನು ಮಾಡುವ ಎಚ್ಚರಿಕೆಯು ಪ್ರತಿಯೊಬ್ಬ ವ್ಯಕ್ತಿಯಲ್ಲಿ ಹುಟ್ಟುವಂತಾಗಬೇಕು.

ಸ್ವಾರ್ಥ ವಿರಕೂಡದು.

ಈ ಕಾರ್ಯದಲ್ಲಿಯ ಅವಶ್ಯಕವಿಷಯವೆಂದರೆ ಕಾರ್ಯವನ್ನು ದಹಿಸಿಕೊಂಡವರಲ್ಲಿ ಸ್ವಾರ್ಥವು ಇರಕೂಡದು. ಅದು ಇದ್ದರೆ, ಅವರು ಲಕ್ಷಾಂತರ ಜನತೆಯ ದುಡಿಮೆಯ ದುಡ್ಡಾರ್ಜಿಸುವನ್ನು ಪಡೆಯುವರು ಈ ಗಂಡಾಂತರವನ್ನು ತಪ್ಪಿಸುವದಕ್ಕಾಗಿ ಕಾಂಗ್ರೆಸ ಮಂತ್ರಿಗಳ ವಿಷಯಗಳನ್ನು ಕಡಿಮೆ ಮಾಡಬೇಕಾಗಿದೆ.

ಹಿಂದಿನ ಮಂತ್ರಿಮಂಡಲವು ತನ್ನ ಸಂಬಳವನ್ನು ೫೦೦ ರೂ. ಗಳಿಗೆ ಇಳಿಸಿಕೊಂಡಿತು ಈಗ ಆ ಮಟ್ಟವು ಏರಿಸಲ್ಪಟ್ಟಿದ್ದರಿಂದ ಸಂಬಳವೂ ಏರಿಸಲ್ಪಟ್ಟಿದೆ. ಅದರ ಅರ್ಥವು "ಸ್ವಾರ್ಥವು" ಪುನಃ ಪ್ರವೇಶ ಮಾಡಿದೆ ಎಂದಾಗುತ್ತದೆ. ಇದು ಅಪಾಯಕರ

ವಾಗಿವೆ ನಾವು ಹಳ್ಳಿಗಳ ಮಟ್ಟವನ್ನು ಇಟ್ಟುಕೊಳ್ಳಬೇಕು ಅರಮನೆಗಳಲ್ಲಿ ಇರಕೂಡದು. ಶ್ರೀಮಂತ ಜನರು ಇರುವ ಪಟ್ಟಣಗಳಲ್ಲಿ ಅನೇಕ ಅರಮನೆಗಳಿವೆ, ಅದರೆ ಹಳ್ಳಿಗಳಲ್ಲಿಲ್ಲ.

ನಮ್ಮಲ್ಲಿ ಪರಿವರ್ತನೆಯನ್ನು ಮಾಡಿಕೊಂಡು ನಾವು ಈ ತರಹದ ಜೀವನಕ್ಕೆ ಇಳಿಯಬೇಕಾಗುವದು ಅದರಿಂದಲೇ ನಮಗೆ ಸ್ವರಾಜ್ಯವು ಧೊರೆಯುವದು ಆ ರಾಜ್ಯದಲ್ಲಿ ಪ್ರತಿಯೊಬ್ಬನಿಗೆ ಸಾಕಷ್ಟು ಆಹಾರವು ದೊರೆಯುವದು. ಬಡತನದಿಂದ ಬಳಲುತ್ತಿರುವ ದೇಶದಲ್ಲಿ ಮೊಟ್ಟ ಮೊದಲು ಪ್ರತಿಯೊಬ್ಬನಿಗೆ ಆಹಾರ, ಬಟ್ಟೆಗಳು ದೊರೆಯುಬೇಕು ಆದ್ದರಿಂದ ಈ ಸಮಸ್ಯೆಯನ್ನು ನಾವು ಒಕ್ಕಲುತನದ ದೃಷ್ಟಿಯಿಂದ ಗಮನಿಸಬೇಕು. ಇದಕ್ಕಾಗಿ ಜನರ ದೇಶಾಭಿಮಾನವನ್ನು ಜಾಗ್ರತೆಗೊಳಿಸಿದರೆ ಸಾಲದು; ಪ್ರತಿಯೊಬ್ಬನನ್ನು ಎಚ್ಚರಿಸ ಬೇಕಾಗುವದು. ಕೊನೆಯಲ್ಲಿ ನಾವು ಈ ಆಹಾರ ಮತ್ತು ಬಟ್ಟೆಯ ಪ್ರಶ್ನೆಯನ್ನು ಬಿಡಿಸಲೇ ಬೇಕಾಗುವುದು.

ಶಾಂತಿಸ್ಥಾಪನೆ

ಜಗತ್ತಿನಲ್ಲಿ ಶಾಂತಿಯನ್ನು ಸ್ಥಾಪಿಸಲು ಇದೊಂದೇ ದಾರಿಯಿದೆ ಚೀನದೇಶದ ಮೇಲೆ ನಮ್ಮದು ದೊಡ್ಡ ಪ್ರಭುತ್ವವಿದೆ. ನಾವು ಅಣುಬಾಂಬುಗಳನ್ನು ಇಟ್ಟುಕೂಂಡಿದ್ದೇವೆಂದಲ್ಲ, ಭಗವಾನ್ ಬುದ್ಧನು ನಮ್ಮ ಮತ್ತು ಆ ದೇಶದಲ್ಲಿ ಹುಟ್ಟಿಸಿದ ಸಂಬಂಧದ ಮೂಲಕ ಈ ಪರಿಸ್ಥಿತಿಯುಂಟಾಗಿದೆ. ಈ ತರಹದ ಸಂಸ್ಕೃತಿ ನಮಗೆ ಬೇಕು ನಾವು ಜಾಗತಿಕ ಶಕ್ತಿಯಾಗಿ ಪರಿಣಮಿಸಬೇಕು. ಹಾಗಿದ್ದರೆ ನಾವು ಈ ಸಂಸ್ಕೃತಿಯ ಮಹತ್ವವನ್ನು ಅರಿತುಕೊಳ್ಳಬೇಕು ಮತ್ತು ಹಳ್ಳಿಯಿಂದ ಪ್ರಾರಂಭವಾಗಿ ನಮ್ಮ ಯೋಜನೆಯು ಏಳಲ್ಕೇರಬೇಕು. ಈ ದಾರಿಯಿಂದ ನಮ್ಮ ಸಮಸ್ಯೆಗಳನ್ನು ನಾವು ಪರಿಹರಿಸಿಕೊಳ್ಳಲು ಶಕ್ತರಾಗುವೆವಲ್ಲದೆ, ಇದಿ ಹಿಂದುಸ್ಥಾನದ ಪಶ್ನೆಗಳನ್ನು ಬಿಡಿಸಲು ನಮಗೆ ಸಾಧ್ಯವಾಗುವದು. ಕಾರ್ಯಪ್ರಮುಖರಾದವರು ತಮ್ಮ 'ನ್ಯಕ್ತಿತ್ವ' ಮತ್ತು ಸರ್ವಸ್ವವನ್ನು ತ್ಯಾಗಮಾಡಬೇಕು ಮತ್ತು ಈ ಯೋಜನೆಯನ್ನು ಅವರು ಜನತೆಗಾಗಿ ಕಾರ್ಯದಲ್ಲಿ ಇಳಿಸಬೇಕು. ಅದು ನಮ್ಮ ದೇಶಕ್ಕಾಗಿ ಅವರು ಮಾಡಬಹುದಾದ ನಿಜವಾದ ಅರ್ಪಣೆಯಾಗಿದೆ.

ವಿರೋಧಿ ಪಕ್ಷ

ಪ್ರತಿನಿಧಿಗಳಮೇಲೆ ನಿರ್ಮಿಸಲ್ಪಟ್ಟ ಪ್ರಜಾಸತ್ತಾ ಸರಕಾರದ ಯೋಗ್ಯ ದಿಶೆಯನ್ನು ಕಲ್ಪಿಸಲು ವಿರೋಧಿಪಕ್ಷವು ಅವಶ್ಯವಿದೆ. ನದಿಯು ನೀರು ಅದರ ಎಡಬಲದ ದಂಡೆಗಳ ಮೂಲಕ ಒಂದುದಾರಿಯಲ್ಲಿ ಹೋಗುತ್ತಿರುತ್ತದೆ ಆ ದಂಡೆಗಳು ಕಲ್ಲಿನ ವಿದ್ದರೆ ಬಹಳ ಒಳ್ಳೆದು. ಇಲ್ಲದಿದ್ದರೆ ಅವು ಸವೆಯುತ್ತ ನದಿಯತಳಕ್ಕೆ ಮಣ್ಣನ್ನು ಹಾಕುತ್ತವೆ ಮತ್ತು ಅದರ ದಾರಿಯನ್ನು ಎತ್ತರಿಸುತ್ತವೆ ಆದ್ದರಿಂದ ನದಿಯು ದಂಡೆಗಳು ಮತ್ತು ನೀರಿನ ನಡುವೆ ಅದರ ತಳದ ವಿಷಯದಲ್ಲಿ ಮೇಲಾಟ ವಿರಲಾರದು. ಅದರಂತೆ ಮಾರ್ಗದರ್ಶಕನು ಮತ್ತು ಮಾರ್ಗದರ್ಶಿತರು ಇವರಲ್ಲಿ ಮೇಲಾಟವಿರಬಾರದು. ಅದರ ಸ್ಥಳದಲ್ಲಿ ಸಹಕಾರ ವಿರಬೇಕಾಗುವದು.

(ಮುಂದು ವರೆಯುವದು.)

ಹಿಂದೀ ಮಹಾ ವಿದ್ಯಾಲಯ, ಬಳ್ಳಾರಿ,

[1931 ಸ್ಥಾಪಿತ. ಬಳ್ಳಾರಿ ಜಿಲ್ಲಾ ಹಿಂದೀ ಪ್ರೇಮೀಮಂಡಲದಾಶ್ರಯದಲ್ಲಿ, ರಿಜಿಸ್ಟರ್ಡ.]

ಮದ್ರಾಸ್ ಸರ್ಕಾರದಿಂದ ಮಾನ್ಯತೆ ಇದೆ.

ಪ್ರಾರಂಭಿಕ ವರ್ಗಗಳಿಗೆ ಮಾಸಿಕ 3/– ಶುಲ್ಕ — ಉನ್ನತ ವರ್ಗಗಳಿಗೆ ಮಾಸಿಕ 5/– ಶುಲ್ಕ

ವಾರ್ಡಲಾ ಹೈಸ್ಕೂಲ್ ಕಟ್ಟಡದಲ್ಲಿ ವ್ಯಾಕರಣಕಾಲ—ಸಾಯಂಕಾಲ ಹಿಂದೀ ಶಾಲೇಜಿನ ವರ್ಗಗಳು ನಡೆಯುತ್ತವೆ. ವಿಶಾರದ — ಪ್ರಚಾರಕ ವರ್ಗಗಳಲ್ಲದೆ ಪ್ರಾರಂಭಿಕ ವರ್ಗಗಳಿಗೂ ಪ್ರವೇಶವಿದೆ. ವರ್ಗಗಳಿಗೆ ಸಂಬಂಧಿಸಿದ ಪಾಠ ಪುಸ್ತಕಗಳು ವಿದ್ಯಾಲಯದಲ್ಲಿ ದೊರೆಯುತ್ತವೆ. ಒಳ್ಳೆಯ ಪುಸ್ತಕಭಂಡಾರವಿದೆ. ಶ್ರೇಷ್ಠ ವಾರಪತ್ರಿಕೆ, ಮಾಸಪತ್ರಿಕೆಗಳು ಲಭ್ಯ ಇತರ ವಿವರಗಳಿಗೆ ಸ್ವಾಂಪಿಟ್ಟು ಬರೆಯಿರಿ.

ಪ್ರಿನ್ಸಿಪಾಲ್.

NAVA BHARAT BELLARY. (Reg. No. M. 4746)

ನವಭಾರತ ಬಳ್ಳಾರಿ. 6—2—50

(Nationalist Weekly)

ಚಂದಾದರಗಳು		Subscription Rates.	
ವರ್ಷಕ್ಕೆ	6—0—0	One Year	5—0—0
6 ತಿಂಗಳಿಗೆ	3—0—0	Six months	3—0—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.		Subscription will not be accepted for less than 6 months	

To

Sri.....

.....

.....

Pirnted at Krishna Printing Works. Edited & Published by T. B. Keshava Rao,

JAI—HIND

ನವಭಾರತ

ಬಳ್ಳಾರಿಯ
ಉಜ್ವಲ ರಾಷ್ಟ್ರೀಯ ವಾರಪತ್ರಿಕೆ.
*
ಉತ್ತಿಷ್ಠತ! ಜಾಗೃತ!!
ಪ್ರಾಪ್ಯವರಾನ್ನಿ ಬೋಧತ!!!
*
ಸಂಪಾದಕ ಮತ್ತು ಪ್ರಕಾಶಕರು:—
ಟಿ. ಬಿ. ಕೇಶವರಾವು.

ಪು ೧೩ | ಸೋಮವಾರ ೧೩ ಫಿಬ್ರವರಿ ೧೯೫೦ | ಸಂಚಿಕೆ ೪

ವಿವೇಕವಾಣಿ

1 ಕುದ್ಧನಿರ್ಮಲಮನವೇ ಪರಮನ ವಾಸಸ್ಥಾನವಾಗಬಲ್ಲುದು ಆದುದರಿಂದ ಭಕ್ತನನ್ನು ತನ್ನ ಮನಸ್ಸಾ ಹಾಗೆ ಆಗಲು ಪ್ರಾರ್ಥಿಸುವನೆ.

2 ದುಃಖವುಕೆಡಕಲ್ಲ ಜೀವನವನ್ನು ಶುದ್ಧೀಕರಿಸುವ ಶಕ್ತಿ ಅದರಲ್ಲಿದೆ, ಅದರ ದೇವರ ಕೃಪೆ ಸೂಚ್ಯವೇಕು. ಅದಿದ್ದರೆ ವಿಷವು ಅಮೃತವಾಗುವುದು.

3 ನಿಜವಾದ ಭಕ್ತನು ಜನತಾಜನಾರ್ದನನೆಯೇ ಸರ್ವಸ್ವವೆಂದು ತಿಳಿದು ತನ್ನ ಸರ್ವಶಕ್ತಿಗಳನ್ನು ಆಧ್ಯೇಯಸಾಧನೆಗಾಗಿ ವಿನಿಯೋಗಿಸುವನು.

4 ಸಂಸಾರದಿಂದ ಓಡಿಹೋಗದೆ ಅದರಲ್ಲಿಯೇ ಇದ್ದು ಲೀಲಾಭಾವದಿಂದ ಸಂಸಾರದ ವ್ಯವಹಾರಗಳಲ್ಲಿ ಕೊಡಗಿ ಮುಕ್ತಿಯನ್ನು ಸಾಧಿಸಬೇಕು

5 ಅಸಂಭಾವನೆಯೇ ಹೆಚ್ಚಿನ ಕಳ್ಳನಂತಿರುವುದರಿಂದ 'ನಾನು' ಎಂಬ ರಾಕ್ಷಸನನ್ನು ಕೊಂದು ಎಲ್ಲವೂ ದೇವನೆಂದು ಮಾಡಿದರೆ ದುಃಖವಿಲ್ಲ.

6 ಅನುಭವನೇ ಗುರುವು.

7 ಮನನವನ್ನು ಆಳುವ ಸಾಮರ್ಥ್ಯವನ್ನು ನೀನೇಕೊಡು ಎಂದು ಸಾಧಕನು ಭಗವಂತನಲ್ಲಿ ವ್ಯಾರ್ಥಿಸಬೇಕು

8 ಮುಖಸಾಧನೆಗಳನ್ನು ಸರ್ವರಿಗೆ ಸಮಭಾವದಿಂದ ಸರಿಯಾಗಿ ಹಂಚಿರುವದೇ ದುಃಖದ ಬೀಜವು.

ಪಾಕಿಸ್ತಾನಕ್ಕೆ ಹಾನಿ

ಭಾರತ ಪಾಕಿಸ್ತಾನಗಳಲ್ಲಿನ ವ್ಯಾಪಾರೀ ಬಿಕ್ಕಟ್ಟಿನಿಂದ ಪಾಕಿಸ್ತಾನದ ಆರ್ಥಿಕಕ್ಕೆ ಅಧಿಕವಾದ ಹಾನಿ ಕಟ್ಟಿದೆಯೆಂದು ತಿಳಿದು ಬಂದಿದೆ 55 ಲಕ್ಷ ಬೇಲು ಸೆಣಬಿನ ಉತ್ಪನ್ನದಲ್ಲಿ 50 ಲಕ್ಷ ಬೇಲುಗಳಷ್ಟು (ಅಂದರೆ 50 ಕೋಟಿ ರೂ ಪಾಯಿ ಬೆಲೆಯ ಸೆಣಬು ಪೂರ್ವ ಬಂಗಾಳದಲ್ಲಿ ಕೊಳೆಯುತ್ತಲಿದೆಯೆಂದೂ. ಪಾಕಿಸ್ತಾನವು ದುರಭಿಮಾನದ ಗೌರವದಿಂದ ಈ ಹಾನಿಯನ್ನು ಸಹಿಸುತ್ತಿರುವದೆಂದು ಗೊತ್ತಾಗಿದೆ ಭಾರತವು ಪಾಕಿಸ್ತಾನಕ್ಕೆ ಕಲ್ಲಿದ್ದಲು ಕಳುಹಿಸದಕಾರಣ ಪೂರ್ವ ಬಂಗಾಲದ ಉದ್ಯೋಗವೆಲ್ಲಾ ನಿಂತುಬಿಟ್ಟಿದೆ. ಪಾಕಿಸ್ತಾನದಲ್ಲಿ ಸಣಬಿನ ಬೇಸಾಯದ ಎಕರೆಗಳನ್ನು ಕಡಿಮೆ ಮಾಡಿರುವುದು ಇದಕ್ಕೆ ಸಾಕ್ಷಿಯಾಗಿದೆ.

ಕಾಶ್ಮೀರ ನನಗೆ ಬೇಕು.

ಪಾಕಿಸ್ತಾನದ ಭದ್ರತೆಗಾಗಿ ಕಾಶ್ಮೀರವು ಬೇಕೆಂದು ಪಾಕಿಸ್ತಾನದ ಪರರಾಷ್ಟ್ರ ಮಂತ್ರಿ ಸರ್. ಜಫರುಲ್ಲಾ ಖಾನರು ನಾದಿಸಿದರು ಇಂಡಿಯಾದ ಪರವಾಗಿ ಸರ್. ಬಿ. ಎನ್. ರಾಯರು ಕಾಶ್ಮೀರದಲ್ಲಿದ ಪಾಕಿಸ್ತಾನಿಗಳಿಂದ ನಡೆದ ಅತ್ಯಾಚಾರವನ್ನು ಖಂಡಿಸಿ ನಿಷ್ಪಕ್ಷಪಾತ ನಿರ್ಣಯಕ್ಕೆ ತಾವು ಸಿದ್ಧರಿದ್ದೇವೆಂದಾಗಿ ತಿಳಿಸಿದರು. ದಕ್ಷಿಣದೇಶದ ಸೇಲಂ-ಕೋಯಂಬತೂರು ರಾಮನಾಡ ಜಿಲ್ಲೆಗಳಲ್ಲಿ ಬೆಳೆಯು ಅಭಾವವಾಗಿರುವಕಾರಣ ನಮ್ಮಲ್ಲಿನ ಜೋಳ ನವಣೆಯನ್ನು ಅಲ್ಲಿಗೆ ಕಳುಹಿಸಲಿರುವರೆಂದು ತಿಳಿದು ಬಂದಿದೆ.

ಹಿಂದೀ ಪರೀಕ್ಷೆಗಳು, ವಿದ್ಯಾರ್ಥಿಗಳಿಗೆ ಸೂಚನೆ.

ಪ್ರವೀಣ ವಿಶಾರದ ಪ್ರವೇಶಿಕ ಪರೀಕ್ಷೆಗಳಿಗೆ ಕೂತ ವಿದ್ಯಾರ್ಥಿಗಳಿಗಾಗಿ ಫೆಬ್ರವರಿ ತಿಂಗಳು 25-26-27 ಈ ಮೂರು ದಿನಗಳು ಪರೀಕ್ಷೆಯುಂಟು ಪ್ರೌಢಿಕ ಪರೀಕ್ಷೆಗಾಗಿ ಕಾಲವನ್ನು (ಬಳ್ಳಾರಿ ಕೇಂದ್ರ) ಯುನಿವರ್ಸಿಟಿ ಹೈಸ್ಕೂಲ್ ಹೆಡ್ಮಾಸ್ಟರಿಂದ ಅರಿಯಬೇಕು, ಪ್ರಾಥಮಿಕ ಮಧ್ಯಮ ರಾಷ್ಟ್ರಭಾಷಾ ವಿದ್ಯಾರ್ಥಿಗಳಿಗೆ 26-2-50 ರ ದಿನ ಮಾತ್ರ ಪರೀಕ್ಷೆಯುಂಟು. ಪರೀಕ್ಷೆಗಳಿಗೆ ಕೂತ ವಿದ್ಯಾರ್ಥಿಗಳು ಹಿಂದೀ ಮಹಾವಿದ್ಯಾಲಯದಿಂದಾದ ತಮ್ಮ ಪ್ರವೇಶ ಪತ್ರಿಗಳನ್ನು ಪಡೆಯಬಹುದು.

ಕೊಪ್ಪಳ ಜಿಲ್ಲಾ ಮುನ್ಸಿಫ್ ಕೋರ್ಟಿನಲ್ಲಿ

O. P. No 162/50

ಜಾಲಿ ಸಾಂಬಪ್ಪ ಪುರುಷ್
ಶಂಭುಲಿಂಗಪ್ಪ ಅರ್ಜಿದಾರ
ಮತ್ತು
ಜಾಲಿ ಸಿದ್ಧಿಂಗಮ್ಮ ಎದುರು

ಮೇಲಿನ ಅರ್ಜಿದಾರನು ಅಣ್ಣನಾದ ಜಾಲಿ ಲಿಂಗಪ್ಪನ ಹೆಸರಲ್ಲಿ ಇದ್ದ ಪಾಲಿನ ಹಣವನ್ನು ವಸೂಲು ಮಾಡಿಕೊಳ್ಳಲು ಮಾರಸು ಸರ್ಟಿಫಿಕೇಟುಗಾಗಿ ಅರ್ಜಿ ಇಟ್ಟಿರುವನು. ಸದ್ರಿ ಅರ್ಜಿಯ ವಿಚಾರಣೆಯು 16-2-50 ಕ್ಕೆ ವಾಯಿದಾ ಇರುತ್ತದೆ. ಇದರಲ್ಲಿ ಯಾರಿಗಾದರು ಆಸಕ್ತಿ ಇದ್ದರೆ, ಕಾವಾಗಲಿ, ತಮ್ಮ ವಕೀಲರ ಮೂಲಕವಾಗಲಿ ಹಾಜರಾಗಿ ತಮ್ಮ ಆಕ್ಷೇಪಣೆಗಳನ್ನು ತಿಳಿಸಬೇಕು. ಇಲ್ಲವಾದರೆ ಎಕ್ಸ್‌ಪಾರ್ಟಿಯಿಂದ ವಿಚಾರಣೆಯು ನಡೆದು ನಿರ್ಣಯ ಕೈಗೊಳ್ಳೋಣವಾಗುವುದು.

M ನಟೇಶ ಮೊದಲಿಯಾರು,
ಅರ್ಜಿದಾರನ ವಕೀಲು.

ಪುಸ್ತಕ ಭಂಡಾರಗಳಿಗೆ ಸುಸಂಧಿ.

ಸಾಹಿತ್ಯ-ಕಥೆ-ನಾಟಕ-ವಿಜ್ಞಾನ-ಕಾವ್ಯ ವಗೈರೆ ವಿಷಯಗಳಿಗೆ ಸಂಬಂಧಿಸಿದ ಕನ್ನಡದ ಪುಸ್ತಕಗಳು ನಮ್ಮಲ್ಲಿ ಬೆಲೆಗಾಗಿವೆ ಎಲ್ಲವನ್ನೂ ಕೊಳ್ಳುವವರಿಗೆ ಬೆಲೆಯಲ್ಲಿ ಕಡಿಮೆ ಮಾಡಲಾಗುವುದು ಸೂಚಿಯನ್ನು ಕಳುಹಿಸಲು ಸಾಧ್ಯವಿಲ್ಲ ಪ್ರತ್ಯಕ್ಷ ಭೆಟ್ಟಿಯಾಗಿ ನಿಶ್ಚಯಿಸಿಕೊಳ್ಳಬಹುದು.

ನವಭಾರತ ಕಾರ್ಯಾಲಯ, ಬಳ್ಳಾರಿ.

ಗ್ರಾಮ ಪಂಚಾಯಿತಿ

ಮದ್ರಾಸ್ ಸರ್ಕಾರದ ಪ್ರಕಟನೆ.

ಹಳ್ಳಿಗಳಲ್ಲಿ ಒಗ್ಗಟ್ಟಿತ್ತು

ಹಿಂದಿನ ಕಾಲದಲ್ಲಿ ಗ್ರಾಮದ ಮುಖ್ಯ ಸ್ಥರು ಗ್ರಾಮದಲ್ಲಿ ಸಂಚರಿಸುತ್ತಿದ್ದರು ಎಲ್ಲಾ ಸಾಮಾಜಿಕ ಚಟುವಟಿಕೆಗಳನ್ನು ನಿರ್ವಹಿಸುತ್ತಿದ್ದರು, ದೇಶವೆಂದರೆ ಇಂತಹ ಅನೇಕ ವಿಭಾಗಗಳಿಂದ ಕೂಡಿದ್ದಾಗಿತ್ತು. ಆಡಳಿತವು ವಿಕೇಂದ್ರೀಕೃತವಾಗಿತ್ತು ಹಳ್ಳಿಗರೆಲ್ಲಾ ಒಗ್ಗಟ್ಟಾಗಿ ದುಡಿದು ಹಳ್ಳಿಯ ಅಭಿವೃದ್ಧಿಯಲ್ಲಿ ನಿರತವಾಗುತ್ತಿದ್ದರು ಹಳ್ಳಿಯಜೀವನವುನಿರಾತಂಕವಾಗಿ ಯಾವ ತಿಕ್ಕಾಟವೂ ಇಲ್ಲದೆ ಸಾಗುತ್ತಿತ್ತು ಹಳ್ಳಿಗರ ಮತ, ಧರ್ಮ, ಜಾತಿ ಇತ್ಯಾದಿಗಳೆಲ್ಲಿ ಯಾರೂ ಕೈಹಾಕದೆ ಸಾಮೂಹಿಕವಾದ ಸಂಸ್ಕೃತಿಯು ಅವಿಚ್ಛಿನ್ನವಾಗಿ ಬೆಳೆದು ಬಾಳುತ್ತು.

ರಾಮರಾಜ್ಯದ ಸುಖಶಾಂತಿಗಳು

ಪರದೇಶೀಯರ ಅಧಿಕಾರವು ಹೆಚ್ಚಿದಂತೆ ಹಳ್ಳಿ ಸಂಕಷ್ಟಗಳು ಹೆಚ್ಚುದುವು ಆಡಳಿತೆಯೆಲ್ಲಾಕೇಂದ್ರೀಕೃತವಾಗಿನಿರ್ಜೀವಿಗಳಾಯುವು ಭೇದೋಪಾಯದಿಂದ ಆಳುತ್ತಿದ್ದ ಬ್ರಿಟಿಷರ ತಂತ್ರದಿಂದ ಹಳ್ಳಿಗಳಲ್ಲಿಯೂ ಭೇದ, ವೈಮನಸ್ಯ, ಪರಸ್ಪರ ಹೋರಾಟಗಳು ಹೆಚ್ಚಿದುವು ಪಟ್ಟಣಗಳು ಬೆಳೆದುವು ಹಳ್ಳಿಗಳು ಅಳಿದುವು. ಯಾವ ಸೌಕರ್ಯ ಸುಧಾರಣೆಯೆಂದರೂ ಅವು ಹಳ್ಳಿಗಳಿಗೆ ಬರುವ ಸಂಭವವೇ ಇಲ್ಲದಾಯಿತು ಇಂತಹ ಪರಿಸ್ಥಿತಿಯನ್ನು ನೋಡಿ ದೇಶದ ಅನುಭೋಗುಗಳಲ್ಲಿ ಆಸಕ್ತಿ ಇರುವವರೆಲ್ಲಾ ಆಲೋಚಿಸತೊಡಗಿದರು. ಮಹಾತ್ಮಾ ಗಾಂಧಿಯವರ ಹಳ್ಳಿಗಳ ಏಳಿಗೆಯೇ ದೇಶದ ಏಳಿಗೆಯೆಂಬ ಮಹಾ ಮಂತ್ರವನ್ನು ಉಚ್ಚರಿಸ ತೊಡಗಿದರು, ಗ್ರಾಮ ಪಂಚಾಯಿತಿಗಳನ್ನು ಸ್ಥಾಪಿಸಿ ದೇಶಕ್ಕೆ ರಾಮರಾಜ್ಯದ ಸುಖಶಾಂತಿಗಳನ್ನು ತರಬೇಕೆಂಬ ಗಾಂಧೀಜೀಯವರ ಆಸೆಯು ಸಫಲವಾಗುವಂತೆ ಸರಕಾರಗಳು ಈ ವಿಷಯದಲ್ಲಿ ಆಸಕ್ತಿ ವಹಿಸತೊಡಗಿದುವು.

ತೆರಿಗೆ ಹೊರಿಸುವ ಅಧಿಕಾರ

ನಮ್ಮ ಪ್ರಾಂತದಲ್ಲಿ 54,000 ಹಳ್ಳಿಗಳಿವೆ ಆದರೂ ಕೇವಲ 1,000 ಪಂಚಾಯಿತಿಗಳು ಮಾತ್ರ ರಚಿಸಲ್ಪಟ್ಟಿದ್ದುವು ಇವುಗಳಲ್ಲಿ 810 ಗ್ರಾಮದ ಕಾಡುಗಳ ಮೇಲ್ವಿಚಾರಣೆಯನ್ನು ನೋಡಿಕೊಳ್ಳುತ್ತಿದ್ದವು ಇವುಗಳಿಗೆಲ್ಲಾ ಕಾನೂನು ಪ್ರಕಾರ ಮಂಜೂರಾತಿ ಇಲ್ಲದ ಕಾರಣ 1920 ನೆಯ ಮದ್ರಾಸು ಗ್ರಾಮಪಂಚಾಯಿತಿ ಶಾಸನವು ಜಾರಿಯಾಗಬೇಕಾಯಿತು. ಈ ಶಾಸನದಂತೆ ಮನೆತೆರಿಗೆ ಮಾರ್ಕೆಟ್‌ತೆರಿಗೆ, ಗಾಡಿಕೊಟ್ಟಿಗೆ ಕಸಾಯಿಮನೆ ಆಸ್ತಿತೆರಿಗೆ ಇತ್ಯಾದಿಗಳನ್ನು ಹೊರಿಸುವ ಅಧಿಕಾರವು ಈ ಪಂಚಾಯಿತಿಗಳಿಗೆ ದೊರೆಯಿತು.

ಕೆಲವು ಕಾಲದವರೆಗೆ ಈ ಪಂಚಾಯಿತಿಗಳು ಉತ್ಸಾಹದಿಂದ ಕೆಲಸನಡೆಸಿದರೂ ಅನೇಕ ಪಂಚಾಯಿತಿಗಳ ಲೆಕ್ಕಪತ್ರ ಇತ್ಯಾದಿಗಳು ಸರಿಯಾಗಿಲ್ಲದೆ ಅವನತಿಗೆ ಬಂದುವು ಆಗಾಗ ಚುನಾವಣೆಯ ಬಗ್ಗೆ ಹೋರಾಟವಾಗತೊಡಗಿತು. ಪಂಚಾಯಿತಿಗಳ ಆರ್ಥಿಕ ಪರಿಸ್ಥಿತಿಯು ಅತ್ಯಂತ ಶೋಚನೀಯವಾಗತೊಡಗಿತು ಈ ಸಂದರ್ಭದಲ್ಲಿ ತಿರಿಗಿ ಪಂಚಾಯಿತಿಗಳನ್ನು ಸುವ್ಯವಸ್ಥೆಗೆ ತರಲು ಪ್ರಯತ್ನ ನಡೆಯಿತು ಇದರಿಂದ ಸುಮಾರು 5,000 ಪಂಚಾಯಿತಿಗಳು 1930 ರ ಕೊನೆಯ ಒಳಗೆ ವ್ಯವಸ್ಥೆಗೊಳಿಸಲ್ಪಟ್ಟವು. ಹಳೆಯ ಶಾಸನವನ್ನು ತಿದ್ದಿ ಮದ್ರಾಸು ಸ್ಥಳೀಕಸಂಸ್ಥೆಗಳ ಶಾಸನದ ಅಧಿಕಾರವಲಯದಲ್ಲೇ ಇರಿಸಲಾಯಿತು. ವಯಸ್ಕರ ಮತದಾನದ ಬದಲಿಗೆ ಆಸ್ತಿ ಇರುವಿಕೆಯನ್ನು ಯೋಗ್ಯತೆಯನ್ನಾಗಿ ಎಣಿಸಲಾಯಿತು 1/6 ಫಾಲು ಭೂಕಂದಾಯವಲ್ಲದೆ ನುನಿತೆರಿಗೆ ಉದ್ಯೋಗತೆರಿಗೆಗಳನ್ನು ಹೊರಿಸಿ ವಸೂಲುಮಾಡುವ ಅಧಿಕಾರವನ್ನು ಇವಕ್ಕೆ ಒಪ್ಪಿಸಲಾಯಿತು 1934 ರಲ್ಲಿ ತಾಲೂಕು ಬೋರ್ಡ್‌ಗಳು ರದ್ದಾದುವು ಆಮೇಲೆ ಪಂಚಾಯಿತಿಗಳಿಗೆ 1/3 ಪಾಲು ಸಿಗುವಂತಾಯಿತು. ಗೌರವ ಕೆಲಸಗಾರರ ಸ್ಥಾನದಲ್ಲಿ ಜಿಲ್ಲಾಪಂಚಾಯತ್ ಆಫೀಸರ್, ಅಸಿಸ್ಟೆಂಟ್ ಆಫೀಸರ ಸ್ಥಾನಗಳನ್ನು ಏರ್ಪಡಿಸಲಾಯಿತು. 1938 ರಲ್ಲಿ ಲೆಕ್ಕಪತ್ರ ಪರಿಶೋಧನೆ ಕ್ರಮವನ್ನು ಸರಿಯಾಗಿ ಜಾರಿಗೆ ತರಲಾಯಿತು. 1939 ರಲ್ಲಿ ಪಂಚಾಯಿತಿಗಳನ್ನು ವೈಜ್ಞಾನಿಕವಾಗಿ ಪರೀಕ್ಷಿಸಿ 83 ಪಂಚಾಯಿತಿಗಳನ್ನು ರದ್ದುಗೊಳಿಸಲಾಯಿತು ಇದರಿಂದ ಸಾಮಾನ್ಯ ಸುಧಾರಣೆಯ ಕುರುಹು ತಂದಿತು ಪಂಚಾಯಿತಿಗಳ ಸಂಖ್ಯೆಯು 7,000 ಏರಿತು.

ಸೌಕರ್ಯಗಳು ದೊರೆಯಲಿಲ್ಲ.

ಮದ್ರಾಸು ಸ್ಥಳೀಕಸಂಸ್ಥೆಗಳ ಶಾಸನದ ಪ್ರಕಾರ ಸರಕಾರವು ಸಾರ್ವಜನಿಕರಿಗೆ ಸಂಬಂಧಿಸಿದ ಕಾಡು, ತೋಪು, ಸಾರ್ವಜನಿಕಸ್ಥಳ, ನೀರಾವರಿದುರಸ್ತಿ ಗ್ರಾಮತೋಟಗಳ ರಚನೆ ಇವನ್ನೆಲ್ಲಾ ತನ್ನವಶಕ್ಕೆ ತೆಕ್ಕೊಳ್ಳಬಹುದು 1939 ರಿಂದ ಈ ಪಂಚಾಯಿತಿಗಳಲ್ಲಿ ರೇಡಿಯೋ ಸೆಟ್ಟುಗಳನ್ನು ರಿಯಾಯಿತಿ ದರದಲ್ಲಿ ಸ್ಥಾಪಿಸಲಾಗಿದೆ. ಇವುಗಳನ್ನು ನಡೆಸಿಕೊಂಡು ಬರುವ ನೆಚ್ಚವನ್ನು ಪಂಚಾಯಿತಿಗಳೇ ವಹಿಸಲು ಒಪ್ಪಿಕೊಂಡಿವೆ. ಆದರೆ ಚಿಕ್ಕ ಚಿಕ್ಕ ಪಂಚಾಯಿತಿಗಳಿಗೆ ತೋಟದ ಕೆಲಸ, ದೀಪ ಉರಿಸುವುದು ಇತ್ಯಾದಿ ಕೆಲವೇ ಸೌಕರ್ಯಗಳನ್ನು ಒದಗಿಸಲು ಸಾಧ್ಯವಾಗುತ್ತಿತ್ತು ಆದುದರಿಂದ ಹಳ್ಳಿಗರಿಗೆ ಬೇಕಾದ ಹಲವಾರು ಸೌಕರ್ಯಗಳು ದೊರೆಯದಾದುವು.

ಹೊಸ ಪಂಚಾಯಿತಿ ಶಾಸನ

ನಮ್ಮ ಪ್ರಾಂತದಲ್ಲಿ 7,200 ಗ್ರಾಮ ಪಂಚಾಯಿತಿಗಳು ಈಗ ಕೆಲಸಮಾಡುತ್ತಿವೆ. ಸುಮಾರು 10 ಮಿಲಿಯ ಜನರು ಈ ಪಂಚಾಯಿತಿಗಳ ಅಧಿಕಾರವಲಯದಲ್ಲಿ ವಾಸಮಾಡುತ್ತಿದ್ದಾರೆ

ಈ ಪಂಚಾಯಿತಿಗಳೆಲ್ಲಾ ಸರಿಯಾಗಿ ಕೆಲಸ ಮಾಡಿದಿರುವದರಿಂದ ಹೊಸ ಶಾಸನವನ್ನು ತಂದು ಇವನ್ನೆಲ್ಲಾ ಸರಿಗೊಳಿಸಬೇಕೆಂದು ಸರಕಾರವು 1940 ರಿಂದಲೇ ಆಲೋಚಿಸುತ್ತಿತ್ತು 1941 ರಲ್ಲಿ ಒಂದು ಶಾಸನವನ್ನು ತಯಾರಿಸಿ ಸಾರ್ವಜನಿಕರ ಅಭಿಪ್ರಾಯಕ್ಕಾಗಿ ಪ್ರಕಟಿಸಲಾಯಿತು ಸಂಯಮದ ವಿಮರ್ಶೆ ನಡೆಸಿ 1946 ನೇ ಏಪ್ರಿಲಲ್ಲಿ ಇದು ಕಾನೂನಾಗಿ ಮಂಜೂರಾಯಿತು ಆದನ್ನು ಇದನ್ನು ಜಾರಿಗೆ ತರುವ ಕಾರ್ಯವನ್ನು ಹೊಸ ಮಂತ್ರಿಮಂಡಲಕ್ಕೆ ಬಿಡಲಾಯಿತು.

ಹಳ್ಳಿಯಲ್ಲೂ ಪಂಚಾಯಿತಿ

ಜನತಾ ಮಂತ್ರಿಮಂಡಲವು ಅಧಿಕಾರಕ್ಕೆ ಬಂದಾಗ ಈ ಶಾಸನದಂತೆ ಪಂಚಾಯಿತಿಗಳಿಗೆ ಸ್ವತಂತ್ರವಾಗಿ ಕೆಲಸಮಾಡಲು ಅನುಕೂಲವಿರುವದನ್ನು ಮನಗಂಡಿತು ಆದುದರಿಂದ ಸ್ವತಂತ್ರಾಧಿಕಾರ ಕೊಡುವ ಹೊಸ ಶಾಸನವನ್ನು ತಯಾರಿಸಲಾಯಿತು ಈ ಶಾಸನದಂತೆ 500 ಅಥವಾ ಅದಕ್ಕಿಂತ ಹೆಚ್ಚಿಗೆ ಜನಸಂಖ್ಯೆಯುಳ್ಳ ಪ್ರತಿಯೊಂದು ಹಳ್ಳಿಯಲ್ಲಿಯೂ ಒಂದು ಪಂಚಾಯಿತಿ ಸ್ಥಾಪಿಸಲ್ಪಡುವುದು. ಕಮ್ಮಿ ಜನಸಂಖ್ಯೆಯುಳ್ಳ ಹಳ್ಳಿಗಳನ್ನು ಒಂದುಗೂಡಿಸಲಾಗುವುದು ಪಂಚಾಯತಿಗಳ ರಚನೆಯು ಕಡ್ಡಾಯವಾಗಿದೆ ಈ ಶಾಸನವು ಕಾನೂನಾದ ತಾರೀಖಿ

ನಿಂದ ಎರಡು ವರುಷಗಳ ಒಳಗೆ ಪಂಚಾಯಿತಿಯನ್ನು ಸ್ಥಾಪಿಸಲೇಬೇಕು 5,000 ಕ್ಕಿಂತ ಹೆಚ್ಚಿಗೆ ಜನಸಂಖ್ಯೆಯುಳ್ಳ ಪಂಚಾಯಿತಿಗಳನ್ನು I ನೇ ತರಗತಿಗೆ ಸೇರಿಸಲಾಗುವುದು. ಒಬ್ಬ ಅಡಳಿತ ಅಧಿಕಾರಿಯನ್ನು ಪಂಚಾಯಿತಿಗಳ ಕೈ ಕೆಳಗೆ ನೇಮಿಸಲಾಗುವುದು.

ಗುಣನಡತೆಯುಳ್ಳವರೇ ಬೇಕು.

ಗ್ರಾಮ ಪಂಚಾಯಿತಿಗಳ ಕೈ ಕೆಳಗೆ ಸ್ಥಳೀಕಸಂಸ್ಥೆಗಳೆಲ್ಲಾ ಸೇರಿರುವುವು ಸಿವಿಲ್ ಮತ್ತು ಕ್ರಿಮಿನಲ್ ನ್ಯಾಯಾಂಗ ದಾಖಲೆಗಳ ರಿಜಿಸ್ಟ್ರಿ, ನೀರಾವರಿ, ವಿಮಾನಗಾರಿಕೆ, ಸ್ಥಳೀಕ ಬಂಜರು, ಪ್ರಾಥಮಿಕ ಶಾಲೆ, ಹುಲ್ಲುಗಾವಲು ತೋಟ ಇತ್ಯಾದಿಗಳೆಲ್ಲಾ ಪಂಚಾಯಿತಿಗಳ ಅಧಿಕಾರಕ್ಕೆ ಬರುವುವು. ಉತ್ತಮ ಗುಣನಡತೆಗಳುಳ್ಳ ಆದರ್ಶ ವ್ಯಕ್ತಿಗಳೇ ಈ ಸಂಸ್ಥೆಯ ಯಶಸ್ವಿತೆಗೆ ಬೇಕಾದವರು. ಅಧಿಕಾರ ಸ್ವಾರ್ಥಗಳಿಗಾಗಿ ಈ ಸಂಸ್ಥೆಗಳಲ್ಲಿ ಜನರು ಹಾತೊರೆದು ಸೇರಬಾರದು ಹೀಗೆ ಆದರ್ಶ ವ್ಯಕ್ತಿಗಳು ನಿಸ್ವಾರ್ಥಬುದ್ಧಿಯಿಂದ ಮಾಡಿದರೇನೆ ಪಂಚಾಯಿತ್ ರಾಜ್ಯದ ಮೂಲಕ ರಾಮರಾಜ್ಯವನ್ನು ಸ್ಥಾಪಿಸಲು ಇಚ್ಛಿಸಿದ ಮಹಾತ್ಮಾ ಗಾಂಧೀಜಿಯವರ ಆಸೆ ಕೈಗೂಡುವುದು.

ಸಂದೇಹ-ಭೀತಿ

ಆದರೆ ಅನೇಕ ಹಳ್ಳಿಗಳಲ್ಲಿ ವಾರ್ಷಿಗಳಿರುವ ಕಾರಣ ಹಳ್ಳಿ ಜೀವನವು ವಿಷಮಯವಾಗುವದೆಂದು ಅನೇಕರು ಭಾವಿಸಿದ್ದಾರೆ ಹಳ್ಳಿಗಳಲ್ಲಿನ ಕೆಲವರು ಊರಡಣವನ್ನೆಲ್ಲಾ ನುಂಗುವರೆಂಬ ಭಯವಿದೆ. ಕೆಲಕಾಲ ಸರ್ಕಾರದಿಂದ ಪಂಚಾಯ್ತಿಗಳಮೇಲೆ ಅಡಳಿತಗಾರರಿರುವರೆಂಬ ಯದು.

ಇನಾಮು ಗ್ರಾಮ

ಈ ಶಾಸನ ಪ್ರಕಾರ ಇನಾಮ್ ಗ್ರಾಮಗಳನ್ನು ಸಹ ಸ್ವಾಧೀನ ಪಡಿಸಬೇಕಾಗಿದೆ ಆದರೆ ಯಾವುವು ನಿಜವಾದ ಇನಾಮು ಗ್ರಾಮಗಳು ಎಂಬುದು ಇನ್ನೂ ನಿರ್ಣಯ ಯಾಗಲಿಲ್ಲ ಇದಕ್ಕಾಗಿ ಸರಕಾರವು ಇರು ಸೆಟಲ್‌ಮೆಂಟ್ ಆಫೀಸರನ್ನು ನೇಮಿಸಿದೆ ನನ್ನು ಸ್ವಾಂತದಲ್ಲಿ ಇಂತಹ ಸುಮಾರು 8,000 ಇವೀಗ್ರಾಮಗಳಾಗಿವೆ ಈ ಆಫೀಸರ ತಿರ್ಮಾನದ ಮೇಲೆ ಅಪ್ಪೀಲು ಮಾಡುವಂತೆ ಸರಕಾರವು ಒಂದು ನ್ಯಾಯ ಮಂಡಲವನ್ನು ನೇಮಿಸಿದೆ.

ಜಮೀಂದಾರಿ ಪದ್ಧತಿ ರದ್ದು

ಹಿಂದು ರಾಜರ ಕಾಲದಲ್ಲಿ ಸರಕಾರಕ್ಕೆ ಸಲ್ಲತಕ್ಕ ಕಂದಾಯವನ್ನು ವಸೂಲು ಮಾಡಲು ದೇಶಮುಖ, ದೇಶಪಾಂಡೆ, ಕಲೆಕ್ಟರ್ ಅಥವಾ ಎಕೌಂಟಿಂಟರೆಂಬ ಆಫೀಸರಿದ್ದರು. 16 ನೇ ಶತಮಾನದಲ್ಲಿ ಈ ಅಧಿಕಾರಕ್ಕೆ ಬಂದ ಮುಹಮ್ಮದೀಯ ಅರಸರು ಈ ಪದ್ಧತಿಯನ್ನು ಬದಲಾಯಿಸಲಿಲ್ಲ ಈ ಆಫೀಸರರಿಗೆ ಕಂದಾಯ ವಸೂಲಿಯನ್ನು ಕಂಟ್ರಾಕ್ಟಿಗೆ ತೆಗೆದು ಕೊಳ್ಳುವಂತೆ ಮಾಡಿ ಅವರಿಗೆ ಜಮೀನ್ದಾರರೆಂದು ಹೆಸರಿಟ್ಟರು. ಈಸ್ಟ್ ಇಂಡಿಯಾ ಕಂಪೆನಿಯು ಸಹ ತಮಗೆ ದೊರೆಯುವ ಭೂಕಂದಾಯವನ್ನು ಭದ್ರತೆಮಾಡಿಕೊಂಡಿತು. ಅವರು ಈ ಜಮೀನ್ದಾರಿ ಪದ್ಧತಿಯನ್ನು ಅನುಸರಿಸಿದರು ಆದರೆ ಕಾಂಗ್ರೆಸ್ ಸರಕಾರವು ಜಮೀನ್ದಾರೀ ಪ್ರದೇಶಗಳಲ್ಲಿರುವ ರೈತರ ಸ್ಥಿತಿಗತಿ-ಸಂಕಷ್ಟಗಳನ್ನು ಮನಗಂಡು ಪದ್ಧತಿಯನ್ನು ಅಡಪ್ಪು ಬೇಗನೆ ರದ್ದುಗೊಳಿಸಬೇಕೆಂದು ನಿರ್ಧರಿಸಿತು 1947 ನೇ ಸೆಪ್ಟೆಂಬರದಲ್ಲಿ ಈ ಬಗ್ಗೆ ಪ್ರಕಟಿಸಿದ ಮುಸೂದೆಯು 1919 ನೇ ಮಿಸ್ಟರ್ ಕಿಂಗ ಳ 2 ನೇ ತಾರೀಕಿನಲ್ಲಿ ರಾಜಸನವಾಗಿ ಜಾರಿಗೆ ಬಂತು.

ಈ ಶಾಸನಪ್ರಕಾರ ಜಮೀನಿನೊಡನೆ ಅದರಲ್ಲಿರುವ ಕಾಡು, ಖನಿ, ವಿನಿಜ ಕಾಲುವೆ, ನದಿ, ಹೊಳೆ, ಸಾರ್ವಜನಿಕ ಸ್ಥಳ, ಸರಂಬೋಕು ಇತ್ಯಾದಿಗಳೆಲ್ಲವು ಸರಕಾರದ ಸ್ವಾಧೀನಕ್ಕೆ ಬರುವವು. ರೈತರು ಅವರ ಸ್ವಾಧೀನ ಇರುವ ಹಿಡುವಳಿಗಳಿಗೆ ಪಟ್ಟಿ ಬರೆಯಿಸಿ ತ್ತಾರೆ ಭೂಮಾಲಿಕರಿಗೆ ಸಹ ತಮ್ಮ ಖಾಸಗಿ ಭೂಮುಗಳಿಗೂ ಕೆಲವು ನಿರ್ದಿಷ್ಟ ಕಾರಣಗಳಿಂದ ತಮ್ಮ ಸ್ವಾಧೀನದಲ್ಲಿ ಕಾಯಂ ಆಗಿ ಇದ್ದ ಇತರ ಸ್ಥಳಗಳಿಗೂ ರೈತವಾರಿ ಪಟ್ಟಿ ದೊರೆಯುತ್ತದೆ. ಜಮೀನನ್ನು ಸರ್ವೆಮಾಡಿ ರೈತವಾರಿತ್ವಗಳ ಮೇಲೆ ಕೊಡಲಾಗುವದು ಜಮೀನ್ದಾರರಿಗೆ ಪರಿಹಾರ ಕೊಡಲಾಗುವದು. ಅದಕ್ಕಾಗಿ ಒಂದು ಶಾಸನವು ತಯಾರಿಸಲ್ಪಟ್ಟಿದೆ. ಒಟ್ಟು ಸುಮಾರು 15 75 ಕೋಟಿ ರೂಪಾಯಿ ಪರಿಹಾರ ದ್ರವ್ಯವಾಗಿ ಕೊಡಲ್ಪಡುವದು.

ಇಸ್ಲಾಮೀ ರಾಜ್ಯದ ಕಲ್ಪನೆಯನ್ನು ಪಾಕಿಸ್ತಾನವೂ ಬಿಟ್ಟು ಕೊಡಬೇಕೆಂದು ಜೋಜಾ ಮುಸಲ್ಮಾನರ ಗುರುವುಗಳಾದ ಆಗಾಖಾನರು ಕರಾಚಿಯಲ್ಲಿ ಹೇಳಿದರು.

★★

ಸ್ಪಷ್ಟೀಕರಣ.

'ನವಭಾರತ' ದ 16-1-50 ಸಂಚಿಕೆಯಲ್ಲಿ ಒಳ್ಳಾರಿಯವರ ಕರ್ತವ್ಯ ಎಂಬ ಭಿದಾನದಮೇಲೆ ಪ್ರಕಟವಾದ ಲೇಖನದಿಂದ ತಪ್ಪರ್ಥಗಳಿಗೆ ಅವಕಾಶವುಂಟಾಗಿ ಲೇಖಕರನ್ನು ಕೇಳಲಾಗಿ ಯಾವ ವಿಶೇಷ ವ್ಯಕ್ತಿಯವರನ್ನಾಗಲಿ ಯಾವ ಕಾರ್ಯಕರ್ತರನ್ನಾಗಲಿ ಮನನೋಯಿಸುವ ಉದ್ದೇಶದಿಂದ ಬರೆದಿಲ್ಲವೆಂದು ಸ್ಪಷ್ಟೀಕರಣಕ್ಕೆ ಭಿನ್ನಾಭಿಪ್ರಾಯಗಳಿಲ್ಲದೆ ಒಟ್ಟುಕೂಡಬೇಕೆಂಬುದೇ ತಮ್ಮ ಆಶಯವೆಂದು ತಿಳಿಸಿದ್ದಾರೆ ಸಂಪಾದಕ-ನವಭಾರತ

★★

ಮಂತ್ರಿಗಳ ಸಂಚಾರದಿಂದ ಯಾರಿಗೂ ಪ್ರಯೋಜನವಿಲ್ಲ.

ಬಳ್ಳಾರಿಗೆ ಮಂತ್ರಿಗಳು ಬಂದು ತುಂಗಭದ್ರಾ ಯೋಜನೆ, ಹಂಪಿಯ ವಿರೂಪಾಕ್ಷ ದರ್ಶನ ಮಾಡಿ ಹೋಗುವರು ಪ್ರಜೆಗಳು ಪ್ರತಿನಿಧಿಗಳು ಸಂಸ್ಥೆಯವರು ಇವರನ್ನು ಕಂಡು ಅರ್ಜಿನಗಳನ್ನು ಕೊಡುವರು ಜಿಲ್ಲಾ ಅಧಿಕಾರಿಗಳಿಂದ ಸಾಧ್ಯವಾಗದ ಅಂಶಗಳನ್ನು ಮಂತ್ರಿಗಳಲ್ಲಿ ನಿವೇದಿಸಿಕೊಳ್ಳುವರು. ಪೂರ್ವದಂತೆ "ಆಗಲಿ ಒಳ್ಳೆಯದು ವಿಚಾರಿಸಾಡೋಣ" ಎಂಬ ಉತ್ತರವನ್ನು ಕೊಟ್ಟು ಹೊರಡುವರು.

ಮಂತ್ರಿಗಳಿಗೂ ಜನತೆಗೂ ಸಂಬಂಧವೇ ಉಳಿದಿಲ್ಲ. ಜನರಿಂದಾರಿಸಿ ಮಂತ್ರಿಪದವಿಯಲ್ಲಿ ಕೂತವರು ಜನತೆಯ ಮುಖ್ಯಬೇಡಿಕೆಗಳನ್ನೇ ಮರೆತಿರುವರು ಬರೆದರೆ ಒಂದಕ್ಕೂ ಉತ್ತರವಿಲ್ಲ. ಜನತೆಯ ಸಂಬಂಧವನ್ನಿಟ್ಟುಕೊಂಡಿರುವ ಸಾರ್ವಜನಿಕ ಕಾರ್ಯಕರ್ತರನ್ನು ತುಚ್ಛೀಕರಿಸುತ್ತಿರುವರು.

ಈ ಮಂತ್ರಿಗಳ ಸಂಚಾರದಿಂದ ಸಾರ್ವಜನಿಕ ಹಣದ ದುರ್ವ್ಯಯವಾಗುವುದರಲ್ಲಿ ಸಂಶಯವೇ ಇಲ್ಲ, ಈಗಿನ ಸರ್ಕಾರದಲ್ಲಿ ಹಣದ ಅಭಾವದಿಂದ ಕಾಗದದ ಯೋಜನೆಗಳು (Paper Schemes) ಅಧಿಕವಾಗುತ್ತಾ ನಡೆದಿವೆ. ಕಾರ್ಯರೂಪಕ್ಕೆ ಬರದ ಯೋಜನೆಗಳಿಂದ ಯಾವ ಪ್ರಜೆಗಳಿಗೇನು ಪ್ರಯೋಜನ?

ಇಷ್ಟು ಜನರನ್ನು ಇಂಥಾ ವ್ಯವಹಾರದಿಂದ ಮೋಸಗೊಳಿಸುವ ಕಾಲವಿಂದಾಯಿತು. ಜನತೆಯು ಸಾಕಷ್ಟು ಎಚ್ಚೆತ್ತಿದೆ. ಇನ್ನಾದರೂ ಮಂತ್ರಿಪದವಿಯಲ್ಲಿರುವವರು ಕಾರ್ಯರೂಪಕ್ಕೆ ತರಬಹುದಾದ ಯೋಜನೆಗಳಿಂದ ಜನರ ಸಹಾನುಭೂತಿಯನ್ನು ಸಂಪಾದಿಸಲು ಯತ್ನಿಸಿದರೆ ಒಳ್ಳೆಯದು.

ಪ್ರಜಾ ಶಕ್ತಿಯ ನಮ್ಮ ಕಲ್ಪನೆ

[ಕಳೆದವಾರದಿಂದ ಮುಂದುವರೆದಿದೆ]

ವಿರೋಧಿ ಪಕ್ಷ

ಪ್ರತಿನಿಧಿಗಳಮೇಲೆ ನಿರ್ಮಿಸಲ್ಪಟ್ಟ ಪ್ರಜಾಸತ್ತಾ ಸರಕಾರದ ಕಾರ್ಯಕ್ಕೆ ಯೋಗ್ಯ ದಿಶೆಯನ್ನು ಕಲ್ಪಿಸಲು ವಿರೋಧಿ ಪಕ್ಷವು ಅವಶ್ಯವಿದೆ. ನದಿಯ ನೀರು ಅದರ ಎಡಬಲದ ದಂಡೆಗಳಮೂಲಕ ಒಂದು ದಾರಿಯಲ್ಲಿ ಹೋಗುತ್ತಿರುತ್ತದೆ. ಆ ದಂಡೆಗಳು ಕಲ್ಲಿನವಿದ್ದರೆ ಅದು ಬಹಳ ಒಳ್ಳೆದು ಇಲ್ಲದಿದ್ದರೆ ಅವು ಸವೆಯುತ್ತ ನದಿಯ ತಳಕ್ಕೆ ಮಣ್ಣನ್ನು ಹಾಕುತ್ತವೆ ಮತ್ತು ಅದರ ದಾರಿಯನ್ನು ಎತ್ತರಿಸುತ್ತವೆ. ಆದ್ದರಿಂದ ನದಿಯ ದಂಡೆಗಳು ಮತ್ತು ನೀರಿನ ನಡುವೆ, ಅದರ ತಳದ ವಿಷಯದಲ್ಲಿ ಮೇಲಾಟವಿರಲಾರದು. ಅದರಂತೆ ಮಾರ್ಗಕನು ಮತ್ತು ಮಾರ್ಗದರ್ಶಿತರು ಇವರಲ್ಲಿ ಮೇಲಾಟವಿರಲಾರದು. ಅದರ ಸ್ಥಳದಲ್ಲಿ ಸಹಕಾರವಿರಬೇಕಾಗುವದು.

ನದಿಯ ನೀರನ್ನು ಅದರ ಕಲ್ಲಿನ ದಂಡೆಗಳುಯೋಗ್ಯದಾರಿಯಲ್ಲಿರಿಸುವಂತೆ ಒಂದು ದೇಶದ ಸರಕಾರವು ತನ್ನ ಹೊರಗಿನ ಜನರಿಂದ ನಿಯಂತ್ರಿಸಲ್ಪಡಬೇಕಾಗುವದು. ಗ್ರೇಟ್ ಬಿಟನ್ನವು "ತಾಯಿ ಪಾರ್ಲಮೆಂಟು" ತನ್ನಲ್ಲಿ ಇದೆಯೆಂದು ಅಭಿಮಾನಪಡುತ್ತಿದೆ. ಆದರೆ ಅದರ ಕಾರ್ಯದ ರೀತಿಯನ್ನು ನೋಡಿದರೆ ಸರಕಾರವು ಮಾಡುತ್ತಿರುವ ಇಲ್ಲವೆ ಮಾಡಲಿರುವ ಕಾರ್ಯಗಳ ವಿಷಯವಾದಲ್ಲಿ, ಸಾರ್ವಜನಿಕ ಅಭಿಪ್ರಾಯದ ದ್ವಾರಾ ಮಂತ್ರಿಮಂಡಲವನ್ನು ಯೋಗ್ಯ ದಾರಿಯಲ್ಲಿಡಲು ಪ್ರಯತ್ನಿಸುತ್ತಿರುವ ವಿರೋಧಿ ಪಕ್ಷಗಳನ್ನು ಅಲ್ಲಿ ಸರಕಾರಿ ವೆಚ್ಚದಿಂದ ಜೀವಂತ ಇಡುತ್ತಾರೆ. ಬ್ರಿಟಿಶ ಪಾರ್ಲಮೆಂಟು ಒಂದು ಮಹತ್ವದ ಸ್ಥಾನವಾಗಿದ್ದು, ಅಲ್ಲಿ ಅನೇಕ ಮುಖಂಡರು ಅಪೂರ್ವ ಮಲ್ಲಯುದ್ಧವನ್ನು ನಡೆಯುತ್ತದೆ. ಅದರಲ್ಲಿ ಸೋತ ಮಲ್ಲನು ಗೆದ್ದವನಿಗೆ ತನ್ನ ಸ್ಥಾನವನ್ನು ಬಿಟ್ಟುಕೊಡುತ್ತಾನೆ. ಅಲ್ಲಿಯ ಪಾದವಿವಾದಗಳ ಪರಿಣಾಮದಿಂದ ಇಂದು ವಿರೋಧಪಕ್ಷದಲ್ಲಿದ್ದವರು ನಾಳೆ ಸರಕಾರೀ ಅಧಿಕಾರದ ಸ್ಥಾನಗಳಲ್ಲಿ ಕೂಡ್ರಬಹುದಾಗಿದೆ. ಬ್ರಿಟಿಶ ಪಾರ್ಲಮೆಂಟಿನಲ್ಲಿ ವಿರೋಧಿ ಪಕ್ಷವು ಈ ರೀತಿ ಕಾರ್ಯಮಾಡುತ್ತದೆ. ರಾಜಕೀಯ ಕ್ಷೇತ್ರದಲ್ಲಿ ಸೇರಲ್ಪಟ್ಟ ಸಮರ್ಥ ಅರ್ಥಿಕ ಧೋರಣವು ಅಲ್ಲಿ ಈ ವಾತಾವರಣವನ್ನು [illegible]

ಅಲ್ಲಿಯ ಮಂತ್ರಿಮಂಡಲದ ರಚನೆಯು, ಆ ದೇಶದ ಅರ್ಥಿಕ ಕ್ಷೇತ್ರದಲ್ಲಿ ಸಾಮ್ರಾಜ್ಯ ದೃಷ್ಟಿಯನ್ನು ವ್ಯಕ್ತಪಡಿಸುತ್ತದೆ. ಅಲ್ಲಿಯ ಕೇಂದ್ರೀಕೃತ ಉದ್ಯೋಗಗಳು ಜಗತ್ತಿನ ನಾಲ್ಕೂ ಕಡೆಗಳಿಂದ ಮೂಲ ವಸ್ತುಗಳನ್ನು ತರಿಸಿಕೊಂಡು ಅವುಗಳ ಸಹಾಯದಿಂದ ನಿರ್ಮಿಸಲ್ಪಟ್ಟ ಸಿದ್ಧವಸ್ತುಗಳನ್ನು ಪ್ರಪಂಚದ ಮೂಲೆ ಮೂಲೆಗಳಿಗೆ ಕಳಿಸಬೇಕಾಗುತ್ತದೆ. ಇದರಿಂದ, ದುಡ್ಡು, ವಾಹನಸೌಕರ್ಯ ರಾಜಕೀಯ ಶಕ್ತಿಯ ನಿಯಂತ್ರಣ ಇವುಗಳ ಉಪಯೋಗವು ಬಹಳವಾಗಿ ಆಗುವಂತಾಗುತ್ತದೆ. ಈ ಸರದೇಶೀಯ ಪೇಟೆಯನ್ನು ಸಾಧಿಸಲು ದುಡ್ಡು, ಸೈನ್ಯ ಹಡಗು-ಪಡೆ, ವಿಮಾನಪಡೆಗಳು ಅವಶ್ಯವಾಗುತ್ತವೆ. ಇದಕ್ಕಾಗಿಯೇ ಬ್ರಿಟಿಶ ಮಂತ್ರಿಮಂಡಲದಲ್ಲಿ ಈ ಸಂಗತಿಗಳಿಗೆ ಮಹತ್ವವು ಬಂದಿದೆ. ಆದರೆ ಸಾಮ್ರಾಜ್ಯವಾದಿತ್ವಗಳು ಹಿಂಸೆಯಿಂದ ಉಗಮವಾಗಿವೆಯೆಂಬುದನ್ನು ನಾವು ಮರೆಯಕೂಡದು.

ನಮ್ಮ ಪರಿಸ್ಥಿತಿ

ನಮ್ಮ ದೇಶವು ರಾಜ್ಯ ಸೂತ್ರಗಳನ್ನು ಬಹಿಸಿದೆ. ನಾವು ಅಹಿಂಸೆಯನ್ನು ಅನುಸರಿಸಬೇಕೆಂದರೆ ನಮ್ಮ ಸರಕಾರದ ಸ್ವರೂಪವೇನಾಗಬಹುದು? ನಮ್ಮ ಸರಕಾರದಲ್ಲಿಯೂ, ಸುಧಾರಣಾಕಾರ್ಯಮಾಡುವದಕ್ಕಾಗಿ ಒಂದು ವಿರೋಧಕ ಶಕ್ತಿಯು ನಿರ್ಮಾಣವಾಗಬೇಕಾಗುವದು. ಮೇಲಾಟದಮೇಲೆ ನಿಂತಿರುವ ಅರ್ಥಶಾಸ್ತ್ರವು ನಮ್ಮವಾಗಿರದೆ ಸಹಕಾರಮೂಲಕ ಹುಟ್ಟಿದ ಅರ್ಥವು ಇರಬೇಕಾಗುವದು. ಇಂದಿನ ಸರಕಾರಿ ಅಧಿಕಾರಿಗಳ ವಿರೋಧವಾಗಿ ಚರ್ಚೆಯಿಂದಲೂ ಆ ಸ್ಥಳಗಳನ್ನು ಆಕ್ರಮಿಸುವ ಎಂದು ನಮ್ಮ ದೇಶದ ವಿರೋಧಿಪಕ್ಷದ ಸಭಾಸದರು ಆತುರಪಡುತ್ತಿಲ್ಲ. ಅಹಿಂಸಾತ್ಮಕ ಮತ್ತು ಸಹಕಾರಮಯವಾದ ಆರ್ಥಿಕ ವ್ಯವಸ್ಥೆಯಲ್ಲಿ ವೈಯಕ್ತಿಕ ಮಹತ್ವಾಕಾಂಕ್ಷೆಗೆ ಸ್ಥಾನವಿಲ್ಲ. ಮಂತ್ರಿಗಳನ್ನು ತೆಗೆಯುವದು ನಮ್ಮ ಧ್ಯೇಯವಾಗಿರದೆ, ಅವರು ಮಾಡಬೇಕಾದ ಕರ್ತವ್ಯಗಳನ್ನು ದೃಢಪಡಿಸುವದಾಗಿದೆ. ವಿಧಾಯಕ ಕಾರ್ಯಕರ್ತರು ತಮ್ಮಲ್ಲಿ ಉದಾಹರಣೆಯನಾರ್ಗದರ್ಶಕ ಪ್ರಕಾಶದೊಡನೆ ಅವರನ್ನು [illegible]

ಶಾಸ್ತ್ರದಲ್ಲಿ ವಿಧಾಯಕ ಕಾರ್ಯಕರ್ತರ ಮೇಲಿರುವ, ಇದೊಂದು ಮಹತ್ಪದ ಹೊಣೆಯಾಗಿದೆ.

ಈ ಪ್ರಬೋಧಕ ಶಕ್ತಿಯನ್ನು ಹುಟ್ಟಿಸುವದಕ್ಕೆ ವಿಧಾಯಕ ಕಾರ್ಯಕರ್ತರ ಒಂದುಸುಸಂಘಟಿತ ಗುಂಪಿನ ಅನಿವಾರ್ಯತೆಯಿದೆ ಅವರು ಜನತೆಗಾಗಿ ಮಾಡುವ ಸೇವೆಯು ಅವರ ಹಿಂದಿನ ಶಕ್ತಿಯಾಗುವದು ಮತ್ತು ಅವರ ಕಾರ್ಯವು ಆ ಸಂಬಂಧದ ಒಡಂಬಡಿಕೆಯಾಗುವದು. ಜಾತ್ಯಾತೀತ ಸರಕಾರಕ್ಕೆ ಸಲಹೆಗಾರನಾಗಿ ಮಾರ್ಗದರ್ಶನ ಮಾಡುವಂತಹ ಇಂತಹ ಗುಂಪಿನಿಂದ, ಮಂತ್ರಿಗಳು ಸ್ಫೂರ್ತಿಯನ್ನು ಪಡೆಯಬೇಕು. ಈ ತರಹದ ಕಾರ್ಯಮಾಡಬೇಕಾದ ಗುಂಪು, ತನ್ನ ಕಾರ್ಯಕರ್ತರನ್ನು, ಜನತೆಯ ಸೇವೆಯನ್ನು ಪಡೆಯುವದೇ ಆ ಕಾಂಕ್ಷೆಯನ್ನಾಗಿಟ್ಟುಕೊಂಡು ತ್ಯಾಗಿಗಳೊಳಗಿಂದ ಆರಿಸಿಕೊಳ್ಳಬೇಕು.

ಇಂತಹ ರಾಜಕೀಯ ಕಟ್ಟಡದಲ್ಲಿ ಮಂತ್ರಿಮಂಡಲವು, ಸ್ವಯಂಪೂರ್ಣ ಆರ್ಥಿಕ ವ್ಯವಸ್ಥೆಗೆ ಅವಶ್ಯವಾಗುವ ಕಾರ್ಯಗಳನ್ನು ಮುಂದಂಸಬೇಕು. ಹಿಂಸಾಕಾರ್ಯ ಭಾಗಗಳೆಂದರೆ, ಒಕ್ಕಲುತನ ಭೂಸುಧಾರಣೆ ಭೂಸಮಕರಣಗಳನ್ನು ತಡೆಯೋಣ, ಭೂಆಕ್ರಮಣ ಭೂಫಲದ್ರೂಪತೆಯನ್ನು ಬೆಳಸುವುದು, ನೀರಾವರಿ, ನದಿಗಳ ನಿಯಂತ್ರಣ, ಅಡವಿಗಳ ಪರಾಮರಿಕೆ, ಗ್ರಾಮ ಮತ್ತು ಗುಡಿಸಲು ಉದ್ಯೋಗಗಳ ಸುಧಾರಣೆ, ಖನಿಜಗಳು ಮತ್ತು ಲೋಹಗಳ ಉದ್ಯೋಗಗಳು, ಆರೋಗ್ಯ, ಶಿಕ್ಷಣ ಮತ್ತು ಗೃಹರಕ್ಷಣೆ ಇವುಗಳಬಗ್ಗೆ ಲಕ್ಷ್ಯಕೊಡುವದಾಗಿದೆ. ಈ ಕಾರ್ಯಪದ್ಧತಿಯಲ್ಲಿ, ವಿದೇಶ ಸಂಬಂಧ, ದುಡ್ಡು ರಕ್ಷಣೆಗಳಿಗೆ, ಅವು ಎಷ್ಟೇ ಮಹತ್ವದ ವಿಷಯಗಳಾದರೂ, ಮಂತ್ರಿಮಂಡಲದ ಲಕ್ಷ್ಯವನ್ನೆಳೆಯಲು ಅಸ್ಪಡಕೊಡಪ ಅವಶ್ಯಕತೆಯಿಲ್ಲ.

ಈ ಸಂದರ್ಭದಲ್ಲಿ, ಜನತೆಯು ಸುಲಿಗೆಯಾಗಕೊಡದಂತೆ ರಕ್ಷಣಾ ಕೋಟೆಯನ್ನು ಕಟ್ಟುವುದು ವಿಧಾಯಕ ಕಾರ್ಯಕರ್ತರ ಕರ್ತವ್ಯವಾಗುವದು. ಈ ತಳಹದಿಮೇಲೆ ಕಟ್ಟಲ್ಪಟ್ಟ ಸರಕಾರವು, ಜನರ ಕಾರ್ಯಕ್ಕೆ ಹೆಚ್ಚು ಪ್ರಾಶಸ್ತ್ಯವನ್ನು ಕೊಡುವುದಲ್ಲದೆ ಅದನ್ನೆ ಸ್ವರಾಜ್ಯವನ್ನು ಸಂಪಾದಿಸಿಕೊಟ್ಟು ಅದರ ಕಲ್ಯಾಣದ [illegible]

ನಮ್ಮ ರಾಜ್ಯ ಘಟನೆಯ ಪರಿಚಯ

(ಕಳೆದವಾರದಿಂದ ಮುಂದುವರಿದಿದೆ.)

ಮೇಲ್ಮನೆ ಹಾಗೂ ಕೆಳಮನೆಗಳ ಅಧ್ಯಕ್ಷ-ಉಪಾಧ್ಯಕ್ಷರು

ಈ ಮೇಲೆ ಹೇಳಿದಂತೆ ಒಕ್ಕೂಟ ಸರಕಾರದ ಉಪಾಧ್ಯಕ್ಷನು ಮೇಲ್ಮನೆಯ ಎಕ್ಸ ಅಫಿಸಿಯೋ ಅಧ್ಯಕ್ಷನಿರುವನು ಮೇಲ್ಮನೆಯ ಸದಸ್ಯರು ತಮ್ಮಲ್ಲೋರ್ವನನ್ನು ಉಪಾಧ್ಯಕ್ಷನನ್ನಾಗಿ ಆರಿಸುವರು ಕೆಳಮನೆಯ ಸದಸ್ಯರು ತಮ್ಮಲ್ಲೀರ್ವರನ್ನು ಉಪಾಧ್ಯಕ್ಷನನ್ನಾಗಿ ಆರಿಸುವರು. ಕೆಳಮನೆಯ ಸದಸ್ಯರುತಮ್ಮಲ್ಲೀವರ್ಕರನ್ನು ಕ್ರಮವಾಗಿ ಅಧ್ಯಕ್ಷ [ಸ್ಪೀಕರ] ಉಪಾಧ್ಯಕ್ಷ (ಡೆಪ್ಯುಟಿಸ್ಪೀಕರ್) ರೆಂದು ಆರಿಸಿಕೊಳ್ಳುವರು ಈ ಎರಡೂ ಮನೆಗಳ ಸದಸ್ಯರು ಅಧ್ಯಕ್ಷನ ಸನ್ನುಖದಲ್ಲಿ ನಿಷ್ಠೆಯ ಪ್ರತಿಜ್ಞೆಯನ್ನು, ಅಧಿಕಾರ ಸ್ವೀಕರಿಸುವ ಮೊದಲು ಮಾಡತಕ್ಕದ್ದು. ಓರ್ವನು ಎರಡೂ ಮನೆಗಳ ಸದಸ್ಯನಾಗಲಾರನು.

ಗವ್ಹರ್ನರ ಮತ್ತು ಮಂತ್ರಿಮಂಡಳ

ಪ್ರತಿಯೊಂದು ಘಟಕದ ಕಾರ್ಯಕಾರಿ ಅಧಿಕಾರವನ್ನು ಓರ್ವ ಗವ್ಹರ್ನರರ ಕಡೆಗೆ ವಪ್ಪಿಸಲಾಗುವುದು. ಅವನು ಅದನ್ನು ಘಟನಾಬದ್ಧ ರೀತಿಯಲ್ಲಿ ಉಪಯೋಗಿಸುವನು. ಇವನ ವೇತನವು ತಿಂಗಳೊಂದಕ್ಕೆ ರೂ. ೫,೫೦೦ ಇದ್ದು, ಅಧ್ಯಕ್ಷನು ಇವನನ್ನು ನಿಯಮಿಸುವನು. ಹಾಗು ಅಧ್ಯಕ್ಷನ ಅನುಮತಿ ಇರುವವರೆಗೆ ಗವ್ಹರ್ನರನು ಅಧಿಕಾರದಲ್ಲಿರುವನು ಪ್ರತಿಯೊಂದು ಘಟಕಕ್ಕೆ ಒಂದು ಮಂತ್ರಿಮಂಡಲವಿದ್ದು ಮುಖ್ಯ ಮಂತ್ರಿಯು ಅದರ ಮುಖ್ಯಸ್ಥನಾಗಿ ಗವ್ಹರ್ನರರಿಗೆ ಸಲಹೆ-ಸಹಾಯ ನೀಡುವನು. ಘಟಕದ ಆಡಳಿತಕ್ಕೆ ಸಂಬಂಧಿಸಿದ ಮಂತ್ರಿ ಮಂಡಳದ ಎಲ್ಲ ನಿರ್ಣಯಗಳನ್ನೂ ಹಾಗು ಹೊಸ ಕಾಯದೆ ಮಾಡುವ ಸೂಚನೆಗಳನ್ನು ಗವ್ಹರ್ನರನ ಎದುರು ಮುಖ್ಯ ಮಂತ್ರಿಯು ಇಡಬೇಕು. ಘಟಕದ ಅಡ್ವೋಕೇಟ ಜನರಲ್ಲನಿಗೆ ಶಾಸನ ವಿಧಾಯಕ ಸಭೆಗಳಲ್ಲಿ ಮತದಾನದ ಅಧಿಕಾರವಿಲ್ಲ ಮಂತ್ರಿಮಂಡಲದ ಎದುರು ಇಡಬೇಯಾವುದಾದರೊಂದು ವಿಷಯದ ಬಗ್ಗೆ ಒಬ್ಬ ಮಂತ್ರಿಯು ನಿರ್ಣಯ ತೆಗೆದು ಕೊಂಡಿದ್ದರೆ ಹಾಗೂ ಗವ್ಹರ್ನರನು ಆ ವಿಷಯವನ್ನು ಮಂತ್ರಿ ಮಂಡಲದೆದು ರಿಗೆ ಇಡಬೇಕೆಂದು ನಿರ್ಣಯಿಸಿದರೆ. ಮುಖ್ಯ ಮಂತ್ರಿಯು ಹಾಗೆ ಮಾಡಬೇಕಾಗುತ್ತದೆ. ಘಟಕದ ಎಲ್ಲ ಕೆಲಸಗಳು ಗವ್ಹರ್ನರನ ಹೆಸರಿನಲ್ಲಿ ನಡೆಯುವವು.

ಘಟಕ-ಶಾಸನಸಭೆ

ಪ್ರತಿಯೊಂದು ಘಟಕಕ್ಕೆ ಒಂದು ಶಾಸನ ವಿಧಾಯಕ ಸಭೆಯಿರುವದು. ಕೆಲವಕ್ಕೆ ಎರಡೂ ಮನೆಗಳಿರಬಹುದು. ಶಾಸನ ಸಭೆಯ ಸದಸ್ಯರ ಸಂಖ್ಯೆಯು ೫೦೦ ಕ್ಕಿಂತ ಹೆಚ್ಚು ಹಾಗೂ ೬೦ ಕ್ಕಿಂತ ಕಡಿಮೆ ಇರಕೂಡದು. ವಿಧಿಮಂಡಲ [ಮೇಲ್ಮನೆ] ವಿದ್ದರೆ ಅದರ ಸದಸ್ಯರ ಸಂಖ್ಯೆಯು ಶಾಸನ ಸಭೆಯ ಸಂಖ್ಯೆಯ ೧/೪ ಸಂಖ್ಯೆಗಿಂತ ಹೆಚ್ಚಿಗಿರುವುದಿಲ್ಲ. ಪ್ರೌಢ ಮತದಾನದ ಪದ್ಧತಿಯನ್ವಯ ಶಾಸನ ಸಭಾ ಸದಸ್ಯರ ಆಯ್ಕೆಯು ನಡೆಯುವುದು. ಪ್ರತಿ ೭೫ ಸಾವಿರ ಜನಸಂಖೆಗೆ ಒಬ್ಬನಂತೆ ಸಭಾಸದರನ್ನು ಆರಿಸಲಾಗುವುದು. ತೀವ್ರ ವಿಸರ್ಜಿಸಲ್ಪಡದಿದ್ದಲ್ಲಿ ಪ್ರಥಮ ಅಧಿವೇಶನ ಸೇರಿದಂದಿನಿಂದ ಐದು ವರ್ಷಗಳ ವರೆಗೆ ಶಾಸನ ಸಭೆಯ ಕೆಲಸ ಸಾಗುವುದು. ವಿಧಿಮಂಡಲವು ಸ್ಥಿರವಿದ್ದು ಪ್ರತಿ ಎರಡು ವರ್ಷಕ್ಕೆ ಅದರ ೧/೩ ಭಾಗ ಸದಸ್ಯರು ನಿವೃತ್ತರಾಗುವರು. ಶಾಸನ ಸಭಾ ಸದಸ್ಯನ ವಯಸ್ಸು ೨೫ ಕ್ಕಿಂತ ಕಡಿಮೆ ಇರಕೂಡದು.

ಒಕ್ಕೂಟ ಮತ್ತು ಘಟಕಗಳು

ಹೀಯೋಲಗವು ಒಕ್ಕೂಟಕ್ಕಾಗಲಿ ಅಥವಾ ಅದರ ಯಾವುದೇ ಪ್ರದೇಶದ ಭಾಗಕ್ಕಾಗಲಿ ಅನ್ವಯಿಸುವ ಕಾಯಿದೆಯನ್ನು ನೂಂದಿಸುವುದು. ಘಟಕಗಳು ಇದೇ ಘಟಕಕ್ಕೆ ಅಥವಾ ಅದರ ಯಾವುದಾದರೊಂದು ಭಾಗಕ್ಕೆ ಅನ್ವಯಿಸುವಂತೆ ಕಾಯಿದೆಯನ್ನು ಮಾಡಲಿಸುವುದು. ಹೀಯೋಲಗವು ಮಾಡುವ ಮತ್ತು ಅಸ್ತಿತ್ವದಲ್ಲಿರುವ ಹಾಗೂ ಘಟಕಗಳಿಗೆ ಅನ್ವಯಿಸುವ ಕಾಯಿದೆಗಳನುಸಾರವಾಗಿ ಘಟಕಗಳ ಕಾರ್ಯ ನಡೆಯುವದು.

ಆಯ್ಕೆಗಳು

ಈ ಘಟನೆಗನುಸಾರವಾಗಿ ನಡೆಯುವ ಹೀಯೋಲಗದ ಆಯ್ಕೆಯು ಮತ್ತು ಒಕ್ಕೂಟ ಅಧ್ಯಕ್ಷ ಉಪಾಧ್ಯಕ್ಷರ ಆಯ್ಕೆಯ ಮೇಲ್ವಿಚಾರಣೆ, ಮಾರ್ಗದರ್ಶನ ಮತ್ತು ನಿಯಂತ್ರಣಾಧಿಕಾರವು ಮತ್ತು ಹೀಯೋಲಗದ ಆಯ್ಕೆಗಳಲ್ಲಾಗಲಿ, ಅಧ್ಯಕ್ಷ ಉಪಾಧ್ಯಕ್ಷ ಆಯ್ಕೆಗಳಲ್ಲಾಗಲಿ ತಂಟೆಯುದ್ಭವಿಸಿದರೆ, ಸಂದೇಹ ಹೋರಿ ಬಂದರೆ ಅವುಗಳ ನಿರ್ಣಯಕ್ಕಾಗಿ ಪಂಚರನ್ನು ನಿಯಮಿಸುವ ಅಧಿಕಾರ, ಇವ್ಹ. ಒಕ್ಕೂಟ ಅಧ್ಯಕ್ಷನಿಂದ ನಿಯಮಿಸಲ್ಪಡುವ ಸಮಿತಿಗೆ ಸೇರಿರುತ್ತವೆ.

ವಿಶೇಷ ಅಧಿಕಾರ

ಯುದ್ಧ ಅಥವಾ ಆಂತರಿಕ ಗೊಂದಲದಿಂದ ಹಿಂದುಸ್ಥಾನದ ಶಾಂತಿಗೆ ಗಂಡಾಂತರ ಬಂದೊದಗಿದೆಯೆಂದು ಅಧ್ಯಕ್ಷನಿಗೆ ಎನಿಸಿದರೆ ಅವನು ಹಾಗೆ ಮೊದಲು ಪ್ರಕಟ ಮಾಡಲು ಪ್ರಕಟನೆಯನ್ನು ಅಧ್ಯಕ್ಷನು ಹೊರಡಿಸುತ್ತಾನೆ. ಪ್ರಕಟನೆಯು ಪ್ರಯೋಗದಲ್ಲಿದ್ದಾಗ, ಘಟನೆಯಲ್ಲಿ ಏನೇ ಇದ್ದರೂ ಒಕ್ಕೂಟದ ಕಾರ್ಯಾಕಾರಿ ಮಂಡಳವು, ಘಟಕಗಳ ಕಾರ್ಯಾಕಾರಿ ಅಧಿಕಾರವನ್ನು ಹೇಗೆ ನಡೆಯಿಸಬೇಕೆಂಬುವರ ಬಗ್ಗೆ ಅದೇ ಮಾರ್ಗದರ್ಶನ ಮಾಡುತ್ತದೆ. ಇಂತಹ ಪ್ರಕಟನೆಗಳನ್ನು ಹಿಂಯೋಲಗದ ಎರಡೂ ಮನೆಗಳ ಎದುರು ಇಡಬೇಕಾಗುತ್ತದೆ. ಅವಸರದ ಪ್ರಕಟನೆಯು ಪ್ರಯೋಗದಲ್ಲಿರುವಾಗ, ಅದಕ್ಕೆ ಸಂಬಂಧಪಟ್ಟಿದ್ದನ್ನು ಬಿಟ್ಟು ಉಳಿದ ವಿಷಯದಲ್ಲಿ, ಶಾಸನ ಕನ್ನ ಅಧಿಕಾರ ಕಕ್ಷೆಯಲ್ಲಿರುವ ವಿಷಯಗಳ ಬಗ್ಗೆ ಶಾಯಿದೆಮಾಡಲು ನಿರ್ಬಂಧವಿಲ್ಲ.

ಅಲ್ಪ ಸಂಖ್ಯಾಕರಿಗೆ ಸೌಕರ್ಯ

ಒಕ್ಕೂಟ ಅಧ್ಯಕ್ಷನು, ಹಿಂದೀ ಒಕ್ಕೂಟ ಪ್ರದೇಶದಲ್ಲಿರುವ ಹಿಂದುಳಿದ ವರ್ಗದವರ ಸಾಮಾಜಿಕ, ಶೈಕ್ಷಣಿಕ ಕ್ಷೇತ್ರದ ತೊಂದರೆಗಳನ್ನು ನಿವಾರಿಸಲು ಇರುವ ತೊಡಕುಗಳ ಬಗ್ಗೆ ವರದಿಮಾಡಲು ತನ್ನ ಆಜ್ಞೆಯಿಂದ ತನಗೆ ಸರಕಾರಿ ವರ ಸಮಿತಿಯನ್ನು ನೇಮಿಸುವನು. ಈ ಸಮಿತಿಯು ಒಕ್ಕೂಟ ಅಥವಾ ಅದರ ಯಾವುದೇ ಘಟಕವು ತೊಡಕುಗಳನ್ನು ನಿವಾರಿಸಲು ಕೈಕೊಳ್ಳಬೇಕಾದ ಕ್ರಮಗಳ ಬಗ್ಗೆ ಇಂತಹ ಸೂಚನೆಗಳ ವಿವರಣೆಯು ಹಿರಿಯೋಲಗದಲ್ಲಿ ಬರುವುದು.

ನಾಗರಿಕತೆ

ಇನ್ನು ಮುಂದೆ, ಹಿಂದುಸ್ಥಾನದಲ್ಲಿ ಜನಿಸುವವರು ಹಾಗೂ ಈಗ ಇರುವರ ತಂದೆ ತಾಯಿಗಳು ಹಿಂದುಸ್ಥಾನದಲ್ಲಿ ಜನಿಸಿದ್ದ ತೆ

ಅಂಥವರು ಹಿಂದುಸ್ಥಾನದ ನಾಗರಿಕರಾಗಲು ಅವಕಾಶ ದೊರೆಯುವದು. ಹಾಗೂ ಐದು ವರ್ಷಗಳಿಂದ ಸತತ ಹಿಂದುಸ್ಥಾನದಲ್ಲಿ ವಾಸಿಸುವವರಿಗೂ ಈ ಅವಕಾಶವನ್ನು ಕೊಡಲಾಗುವದು.

ಮೂಲಭೂತ ಹಕ್ಕುಗಳು

ರಾಷ್ಟ್ರವು ನಾಗರೀಕ ಜಾತಿ, ಮತ, ಪಂಥ, ಹಾಗೂ ಲಿಂಗಭೇದ ಭಾವನೆಗಳನ್ನು ಎಣಿಸುವದಿಲ್ಲ. ಸಾರ್ವಜನಿಕ ವಿಶ್ರಾಂತಿ ಗೃಹಗಳ ಮತ್ತು ಸೀರ್ವಜನಿಕ ಗೃಹಗಳ ಭೋಜನಾಲಯಗಳ ಪ್ರವೇಶಕ್ಕೆ ಮೇಲಿನ ಕಾರಣಗಳು ಆತಂಕವನ್ನು ಮಾಡಬಾರದು. ಕೆರೆ, ಭಾವಿ, ಸ್ನಾನಗೃಹಗಳ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಕೂಡ ಭೇದ ಭಾವಕ್ಕೆ ಆಸ್ಪದವಿಲ್ಲ. ಮಹಿಳೆಯರಿಗಾಗಿ ಹಾಗೂ ಮಕ್ಕಳಿಗಾಗಿ ವಿಶೇಷ ಸೌಕರ್ಯಗಳನ್ನು ಕಲ್ಪಿಸಲು ಅವಕಾಶವಿದೆ; ಜಾತಿ ಮತ, ಪಂಥ, ಜನ್ಮ ಸ್ಥಳಗಳು ಅವಕಾಶವನ್ನು ಕಸಿದುಕೊಳ್ಳಲಾರವು. ಅಸ್ಪೃಶ್ಯತೆಯನ್ನು ನಿವಾರಿಸಲಾಗಿದ್ದು ಯಾವುದೇ ರೂಪದಲ್ಲಿ ಅದನ್ನು ಅನುಸರಿಸುವದನ್ನು ನಿರ್ಭಂದಿಸಲಾಗಿದೆ. ಹಿಂದು ಸ್ಥಾನದ ಯಾವನೇ ನಾಗರಿಕನು ವಿಷಯದ ಬಿರುದುಗಳನ್ನು ಸ್ವೀಕರಿಸಲು ಬರುವುದಿಲ್ಲ. ಪ್ರತಿಯೊಬ್ಬನಿಗೂ ಭಾಷಣ ಹಾಗೂ ಅಭಿವ್ಯಾಯ ವ್ಯಕ್ತಪಡಿಸುವ, ಶಿಕ್ಷಣವನ್ನು ಪಡೆಯುವ, ಸಂಘ ಸಂಸ್ಥೆಗಳನ್ನು ಸ್ಥಾಪಿಸುವ ಹಿಂದುಸ್ಥಾನದಲ್ಲಿ ತನಗೆ ಇಚ್ಛೆ ಕಂಡಂತೆ ವಿಹರಿಸುವ, ಯಾವುದೇ ಪ್ರದೇಶದಲ್ಲಿ ನೆಲೆಸುವ ಆಸ್ತಿಗಳನ್ನು ಕೊಂಡು ಅನುಭೋಗಿಸಿ ಮಾರಾಟ ಮಾಡುವ, ಯಾವುದೇ ವೃತ್ತಿ, ವ್ಯಾಪಾರ ಉದ್ಯೋಗವನ್ನು ಕೈ ಕೊಳ್ಳುವ ಸ್ವಾತಂತ್ರ್ಯವಿದೆ.

ಕಾಯಿದೆಗಳು ಪ್ರಯೋಜನವನ್ನು ಸಮರ್ಪಕವಾಗಿ ಸಮರ್ಪಿಸಿಯಿಂದ ಸೋಡಬಾರದು. ಅಸಮರ್ಪಕ ನ್ಯಕ್ತಿ ಸ್ವಾತಂತ್ರ್ಯವನ್ನು ಅತ್ಯ ಅಪಹರಿಸುವದಿಲ್ಲ. ವಕ್ತಾಯದ ಕೂಲಿಯು ಪದ್ಧತಿಯನ್ನು ಪ್ರತಿಬಂಧಿಸಿದ್ದು ಇದರ ವಿರುದ್ಧ ವರ್ತಿಸಿದರೆ ಅಪರಾಧವಾಗುವದು ಸಾರ್ವಜನಿಕ ಆಜ್ಞೆ, ನೀತಿ, ಆರೋಗ್ಯ ಹಾಗೂ ಇತರ ನಿಬಂಧನೆಗಳಿಗನುಸರಿಸಿ ಪ್ರತಿಯೊಬ್ಬನು ತನ್ನ ಧರ್ಮದಂತೆ ನಡೆಯಲು ಸ್ವತಂತ್ರ ನಿರುವದು. ರಾಷ್ಟ್ರವು ನಡೆಸುವ ಶಿಕ್ಷಣ ಸಂಸ್ಥೆಗಳಲ್ಲಿ ಧಾರ್ಮಿಕ ಶಿಕ್ಷಣವನ್ನು ಕೊಡಲಾಗುವದಿಲ್ಲ. ಆದರೆ ಖಂಬಳಿಯಿಂದ ಅಥವಾ ನಿಧಿಯಿಂದ ಸ್ಥಾಪಿಸಲ್ಪಟ್ಟು ರಾಷ್ಟ್ರದಿಂದ ನಡೆಸಲ್ಪಡುವ ಶಿಕ್ಷಣಾಲಯಗಳಲ್ಲಿ ಧಾರ್ಮಿಕ ಶಿಕ್ಷಣಗಳನ್ನೀಯಲು ಅಡ್ಡಿಯಿಲ್ಲ. ಯಾವದೇ ಭಾಗದ ನಾಗರಿಕಂಗೆ ತಮ್ಮ ವಿಶಿಷ್ಟವಾದ ಭಾಷೆ, ಲಿಪಿ, ಸಂಸ್ಕೃತಿಗಳನ್ನು ಕಾಯ್ದು ಕೊಂಡು ಹೋಗಲು ಅಧಿಕಾರವಿರುವುದಿಲ್ಲ.

ಒಕ್ಕೂಟದ ಘಟಕಗಳು

ಆಸಾಮು, ಬಿಹಾರ, ಮುಂಬಯಿ, ಮಧ್ಯಪ್ರದೇಶ, ಮದ್ರಾಸು, ಒಡಿಸಾ, ಪಂಜಾಬು, ಸಂಯುಕ್ತ ಪ್ರಾಂತ, ಪಶ್ಚಿಮ ಬಂಗಾಲ, ಹೈದರಾಬಾದ, ಜಮ್ಮು ಮತ್ತು ಕಾಶ್ಮೀರ, ಸುಮ್ಯಭಾರತ, ಮೈಸೂರು, ಪಕಿಯಾಲಾ ಮತ್ತು ಪೂರ್ವ ಪಂಜಾಬ ಸ್ಟೇಟ್ಸ ಯುನಿಯನ್, ರಾಜಸ್ಥಾನ ಸೌರಾಷ್ಟ್ರ, ತಿರುವಾಂಕೂರು, ಕೊಚ್ಚಿ, ವಿಂಧ್ಯಪ್ರದೇಶ, ಅಜಮೀರ, ಭೋಪಾಲ, ವಿಲಾಸಪುರ, ಕೂಚಬಿಹಾರ. ಕೊಡಗು, ದಿಲ್ಲಿ, ಹಿಮಾಚಲ ಪ್ರದೇಶ, ಕಚ್ಚ, ಮಣಿಪುರ, ತ್ರಿಪುರ, ಅಂಡಮಾನ, ಮತ್ತು ನಿಕೋಬಾರ ನಾಗತ್ತೆಗಳು.

ಪ್ರಶ್ನೆ

ಇಂದು ಬಳಕೆಯಲ್ಲಿ ಬರಲಿರುವ ರಾಜ್ಯ ಪಟಿನೆಯಂತೆ ಪ್ರತಿಯೋರ್ವ ಭಾರತೀಯನೂ ಈ ಕೆಳಗಿನ ಪ್ರತಿಜ್ಞೆಯನ್ನು ಇಂದು ಮಾಡುವುದು ಕ್ರಮವ್ಯಾಪ್ತನಾಗುವುದು.

"ಹಿಂದುಸ್ಥಾನದ ಪ್ರಜೆಗಳಾದ ನಾವು, ಈ ಹಿಂದುಸ್ಥಾನದಲ್ಲಿ ಸಾರ್ವಭೌಮ ಲೋಕವಾದಿ ಪ್ರಜಾಸತ್ತಾತ್ಮಕ ರಾಜ್ಯ ಸ್ಥಾಪನೆ ಮಾಡುವ ಮತ್ತು ಹಿಂದು ಸ್ಥಾನದ ಎಲ್ಲಾ ನಾಗರಿಕರಿಗೆ ಈ ಕೆಳಗಿನ ಅಧಿಕಾರಗಳನ್ನು ಒದಗಿಸುವ ನಿರ್ಧಾರವನ್ನು ಮಾಡಿದ್ದೇವೆ.

(೧) ನ್ಯಾಯ:- ಸಾಮಾಜಿಕ ಆರ್ಥಿಕ ಮತ್ತು ರಾಜಕೀಯ

(೨) ಸ್ವಾತಂತ್ರ್ಯ:- ವಿಚಾರ ಉಚ್ಚಾರ ಪ್ರಚಾರ ಮಾಡುವ, ಶ್ರದ್ಧೆ, ಧರ್ಮ ಮತ್ತು ಆರಾಧನೆ.

(೩) ಸಮತೆ:- ಸಾರ್ವತ್ರಿಕ ಸಮತೆಗೆ ಪುರಸ್ಕಾರ.

(೪) ಒಂಭಾವ್ಯ:- ರಾಷ್ಟ್ರೀಯ ಐಕ್ಯ ಮತ್ತು ವ್ಯಕ್ತಿಯ ಪ್ರತಿಷ್ಠೆಯನ್ನು ಸಂರಕ್ಷಿಸುವ ಬಾಂಧವ್ಯ.

ಘಟನಾ ನಿರ್ಣಯ ಸ್ಥಾಪಿಸಲಾದಂದಿನಿಂದ ಅದು ಜಾರಿಗೊಳ್ಳುವ ತನಕ ಅದರ ನೆಚ್ಚುವೆ ರೂ. ೬೫ ೯೬, ೭೯೯ ಆಗಿದೆ ಎಂದರೆ ಪ್ರತಿ ಒಂದು ಮುಂಬರಿಗೆ ೯ ಸಾವಿರ ರೂಪಗಳಷ್ಟು ಹಿಡಿದಂತಾಯಿತು. ಈ ಸಮಿತಿಯು ೧೧ ಬಾರಿ ಅಧಿವೇಶನ ಕೂಡಿತು ಮತ್ತು ೧೬೫ ದಿನಸಗಳ ವರೆಗೆ ಕೆಲಸ ನಡಾಡಿತು. ಅವುಗಳಲ್ಲಿ ೧೧೪ ದಿವಸಗಳು ಕೇವಲ ಮಸೂದೆಗಳ ಚರ್ಚೆಗಾಗಿ ಸಂದವು. ಘಟನಾ ಸಮಿತಿಯ ಸ್ಥಾಪನೆಯು ಶಾ ೧೯-೮-೪೭ ರಲ್ಲಿ ಆಯಿತು. ಈ ಸಮಿತಿಯು ೧೧೯ ದಿನಗಳ ವರೆಗೆ ಮುಡಿದು ಘಟನೆಯ ಮುಂಗಡ ಪತ್ರಿಕೆಯನ್ನು ಸಿದ್ಧಗೊಳಿಸಿತು. ಈ ಕರಡಿನಲ್ಲಿ ೫೧೫ ಭಾಗಗಳು ೮ ವಂಪ್ಪಗಳಿರುವವು. ಚರ್ಚೆಯ ಸಮಯದಲ್ಲಿ ಇವುಗಳಲ್ಲಿ ತಿಳಿಸಿ ಉಪಸೂಚನೆಗಳು ಮಂಡಿಸಲ್ಪಟ್ಟವು. ಘಟನಾ ಸಮಿತಿಯ ಕಾರ್ಯ ಕಲಾಪಗಳನ್ನು ನೋಡಲು ೫೬ ಸಾವಿರ ಜನರು (೧೧ ಅಧಿವೇಶನಗಳಲ್ಲಿ ಕೂಡಿ) ಹೋಗಿದ್ದರು. ಈಗ ಭಾರತದಲ್ಲಿರುವ ವ್ಯಾಪಾರ ಸಂಸ್ಥೆಯು ೧೬ ಕೋಟಿಯಷ್ಟಿದೆ. ಎಲ್ಲ ಘಟಕಗಳ ಸಭಾಸದರ ಒಟ್ಟು ಸಂಖ್ಯೆಯು ೩೮೦ ಆಗುವದು.

—○—

ಸರಕಾರದ ಪಂಚಾಯ್ತಿ ಸುಧಾರಣೆ ಯ ಬಿಲ್

ಮದ್ರಾಸ್ ಸರಕಾರವು ರಾಷ್ಟ್ರ ನಿಧಿಯನ್ನು ತಂದು ಸುಸೂತ್ರವಾಗಿ ಪಡೆಯುವಂತೆ ಸ್ವೀಕೃತವಾಗಿರುವ ಮದುರಿಸುವ್ಯೆ ತಿದ್ದುಪಡಿಯನ್ನು ಜಾರಿಗೆ ತರಲು ಕೆಲವು ಹಿಂಜರಿಯುತ್ತಿದೆ. ಕೆಲವು ಸಿರಿವಂತ ಕುಟುಂಬಗಳನ್ನು ಗ್ರಾಮಸ್ಥರೇ ಬಿಟ್ಟು ಕೊಟ್ಟಿರುವರಾರು ಅವರಾರು ಸ್ವಾಮಿ ಪಕ್ಷಗಳಲ್ಲಿ ಕೆಲವರ್ಷ ಯಾಗುವ ವರೆಗೆ ಸ್ಥಾಪಿಸಲಾಗಿದೆ. ಬಹುತೇಕ ಕಾಲ್ಪನಿಕ ಭಾಗಗಳ ಸಾರ್ವಜನಿಕ ಸಂಬಂಧಿಸಿದ ಪಾರ್ಟಿಗಳು ಹುಟ್ಟಿಕೊಂಡಿವೆ. ಪಂಚಾಯ್ತಿಗಳ ಅಡಚಣೆವು ಎಕ್ಸಿಕ್ಯೂಟೀವ್ ಆಫೀಸರ್‌ಗಳಿವೆ. ಕೃಷ್ಣಿಕರನಾಗಿ ಸಾಗಲು ಅಧಿಕಾರವೇ ಇಲ್ಲವಾಗಿದೆ. ಪ್ರತಿ ಹಳ್ಳಿಗಳಲ್ಲೂ ಎಕ್ಸಿಕ್ಯೂಟೀವ್ ಆಫೀಸರೆಂಬ ವಿಶ್ವಾಸಾರ್ಹತೆಯ ಅಧಿಕಾರಿಗಳನ್ನಿಡಲು ಸರಕಾರವೇ ಬರಬಹುದು. ಊರಿನ ಸ್ಪರ್ಧೆಯಿಂದ ಈ ಮೇಲ್ವಿಚಾರಕರ ಹೆಚ್ಚಿನ ಸಂಬಳವನ್ನೂ ಗ್ರಾಮಸ್ಥರೇ ಭರಿಸಬೇಕಾಗುವದು. ಪಂಚಾಯ್ತಿ ಬಿಲ್‌ನ ಕಾರ್ಯ ರೂಪದಿಂದ ಪಾರ್ಟಿ ವ್ಯಾಜ್ಯಗಳಿಲ್ಲದ ಕೆಲಪಕ್ಷಗಳು ಅಭಿವೃದ್ಧಿಯಾಗಬಹುದು. ಆದರೆ ಬಹುಸಂಖ್ಯಾತ ಹಳ್ಳಿಗಳು ನೈಸರ್ಗಿಕ ಪರಿಸರಗಳಾಗಿ ಪರಿಣಮಿಸಿ ಶಾಂತಿ ವಾತಾವರಣದ ಸಮಸ್ಯೆಯಲ್ಲಿ ತೊಡಗಲೇಳುವವು.

—

ಅಧಿಕ ಶಕ್ತಿಯ ಬಾಂಬು:—

ರಷ್ಯಾವು ಹೈಡ್ರೋಜನ್ ಬಾಂಬಿಗಿಂತ ಅಧಿಕ ಶಕ್ತಿಯ ಬಾಂಬನ್ನು ಶೋಧಿಸಿರುವದೆಂದು ಪೂರ್ವ ಜರ್ಮನ್ನಿನ ವಿಜ್ಞಾನಿಗಳಾದ ಡಾ. ರಾಬರ್ಟ್‌ಹ್ಯಾನರು ತಿಳಿಸಿದರು. ಪ್ರಪಂಚವನ್ನು ನಾಶ ಮಾಡಲು ಭಯಂಕರ ಶಸ್ತ್ರಗಳಾದುವಾಗಲಿ ಉದ್ಧಾರ ಮತ್ತು ಅಭಿವೃದ್ಧಿಯ ಯೋಜನೆಗಳೇ ಹಿಂದೆ ಬೀಳುತ್ತಲಿವೆ.

—

ಸಮಾಜವಾದೀ ವ್ಯವಸ್ಥೆಯ

★ಶ್ರೀ★

ಸ ಹ ಕಾ ರೀ ಸ್ವ ರಾ ಜ್ಯ

ಸಹಕಾರಿ ಚಳವಳಿಯ ಪೂರ್ವೇತಿಹಾಸ

ಇಂಗ್ಲೆಂಡಿನಲ್ಲಿ ಸಹಕಾರಿ ಚಳವಳಿಯು ೧೮೦-೧೯೫ ವರ್ಷಗಳ ಪೂರ್ವದಲ್ಲಿ ಹುಟ್ಟಿತ್ತು. ದೇಶದಲ್ಲಿ ಉದ್ಯೋಗಗಳ ಬೆಳವಣಿಗೆಯು ಭರಭರನೆ ಸಾಗಿದ್ದಕ್ಕಾಗಿ ಅಲ್ಲಿ ಸಹಕಾರಿ ಚಳವಳಿಯು ಹುಟ್ಟಿತು. ಕೈಗಾರಿಕೆಗಳ ಮಾಲೀಕರ ಕೈಯಲ್ಲಿ ದೇಶದ ಆರ್ಥಿಕ ಜೀವನದ ಸೂತ್ರಗಳು ಹೆಚ್ಚುತ್ತಿದ್ದುದು ರಾಜಕೀಯ ಸತ್ತೆಯ ನಿಯಂತ್ರಣವನ್ನಾದರೂ ಇದೇ ಭಾಂಡವಲದಾರರ ಕೈಯಲ್ಲಿ ಇರುವುದನ್ನು ಕಂಡು ಸಾಮಾನ್ಯ ಜನರು ಕಂಗೆಡುತ್ತಿದ್ದರು. ಅಂಥ ಪರಿಸ್ಥಿತಿಯಲ್ಲಿ ಕೆಲವು ಧ್ಯೇಯವಾದಿ ಸಮಾಜ ಸೇವಕರು ಗ್ರಾಹಕ ಸಹಕಾರಿ ಸಂಸ್ಥೆಗಳನ್ನು ಸ್ಥಾಪಿಸಿ, ಅವುಗಳ ಮುಖಾಂತರ ಸಣ್ಣ ಪುಟ್ಟ ವ್ಯವಸಾಯ ಮಾಡುವ ಮಹತ್ವಾಕಾಂಕ್ಷೆಯನ್ನು ಇಟ್ಟುಕೊಂಡರು. ಅವರಿಗೆ ಈ ಮೇಲಿನ ಸ್ವಯತ್ನದಲ್ಲಿ ಜಯ ದೊರೆಯಲಿಲ್ಲ. ಆದರೂ ಬಹುಜನ ಸಮಾಜವನ್ನು ಸಂಘಟಿಸಲು ಹಾಗೂ ಜಾಗೃತಗೊಳಿಸಲು ಸಾಧನವೆಂದು ಈ ಸಮಾಜ ಸೇವಕರು ಸಹಕಾರಿ ಚಳವಳಿಯನ್ನು ಉಪಯೋಗಿಸಿಕೊಂಡರು. ಇಂದು ನೂರಕ್ಕೆ ಬಹುಶಃ ಇಪ್ಪತ್ತಾದರೂ ನಾಗರಿಕರು ಒಂದಲ್ಲಾ ಒಂದು ಬಗೆಯ ಸಹಕಾರಿ ಸಂಸ್ಥೆಯ ಸದಸ್ಯರಾಗಿದ್ದಾರೆ; ಮತ್ತು ಈ ಸಹಕಾರಿ ಸಂಸ್ಥೆಗಳ ರಾಜಕೀಯ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ ಇಂದು ತನ್ನ ಸ್ವಭಾವ ಬೀರುತ್ತಿದೆ. ಇಟಲಿ, ಜಪಾನ ಮತ್ತು ಇತರ ಕೆಲವು ದೇಶಗಳಲ್ಲಿ ಸಹಕಾರಿ ಚಳವಳಿಯು ಸರಕಾರದ ಪ್ರೇರಣೆಯಿಂದ ಹಾಗೂ ನಿಯಂತ್ರಣದಲ್ಲಿ ಪ್ರಾರಂಭವಾಗಿದ್ದು, ಸರಕಾರದ್ದೇ ಒಂದು ಖಾತೆಯಾಗಿ ಅದರ ಬೆಳವಣಿಗೆಯಾಗುತ್ತ ನಡೆಯಿತು. ಸ್ವಲ್ಪ ಹೆಚ್ಚುಕಡಿಮೆಯಾಗಿ ೫೦ ವರ್ಷಗಳ ಪೂರ್ವದಲ್ಲಿಯೇ ಹಿಂದುಸ್ಥಾನದಲ್ಲಿ ಸಹಕಾರ ಚಳವಳಿ ಪ್ರಾರಂಭವಾಯಿತು. ರೈಫೈಸನು ಸಾಲಗಾರನಾಗಿಯೇ ಇದ್ದು ಒಕ್ಕಲತನದ ಉದ್ಯಮವು ಅವನಿಗೆ ಸಾಲವಾಗಿತ್ತು. ರೈತರಲ್ಲಿ ಎಷ್ಟೊಂದು ಬಡತನವೆಂಬುದಾಗಿತ್ತು! ಕೆಲವೆಡೆಗಳಲ್ಲಿ ಯಂತೂ ರೈತರು ಸಾಹುಕಾರರ ವಿರುದ್ಧ ವಾಗಿ ಬಂಡೆದ್ದಿದ್ದರು. ಸಾವಕಾರೀ ಪಾಶದಿಂದ ರೈತನನ್ನು ಮುಕ್ತಗೊಳಿಸುವ ಉದ್ದೇಶದಿಂದ ರೈತರಿಗೆ ಸಾಲಕೊಡುವ ಸಹಕಾರಿ ಸಂಸ್ಥೆಗಳಿಂದಲೇ ಸಹಕಾರಿ ಚಳವಳಿಗೆ ಪ್ರೋದ್ಬಲವಾಯಿತು.

ಕಳೆದ ಜಾಗತಿಕ ಯುದ್ಧದಲ್ಲಿ ಚೀನ ದೇಶದಲ್ಲಿ ತುಂಬ ದೊಡ್ಡ ಪ್ರಮಾಣದಲ್ಲಿ ಉತ್ಪಾದನೆ ಸಂಸ್ಥೆಗಳು ಹುಟ್ಟಿದವು. ಜಪಾನಿನ ದಾಳಿಯಿಂದಾಗಿ, ಚೀನದಲ್ಲಿಯ ದೊಡ್ಡ ದೊಡ್ಡ ಕಾರಖಾನೆಗಳೆಲ್ಲ ಸಪ್ಪೆಯಾದವು ಕಾರಖಾನೆಗಳ ಹುಟ್ಟುವಳಿಯು ಸಂಪೂರ್ಣವಾಗಿಯೇ ನಿಂತುಹೋಗಿತ್ತು ಹೊರಗಡೆಯಿಂದ ವಸ್ತುಗಳನ್ನು ತರಿಸುವದಾದರೂ ಅಷ್ಟೊಂದು ಸಾಧ್ಯವಿರಲಿಲ್ಲ ದೇಶದಲ್ಲಿಯೇ ಕೈಗಾರಿಕೆಗಳಿಂದ ಅವಶ್ಯಕವಸ್ತುಗಳನ್ನು ತಯಾರಿಸಿಕೊಳ್ಳುವ ಇಲ್ಲವೆ ನಿರಾಶೆಯಿಂದ ಪರಿಸ್ಥಿತಿಗೆ ಕಲೆ ಬಾಗಬೇಕೆನ್ನುವ ಪ್ರಶ್ನೆಯೇ ಚೀನೀಯರ ಮುಂದಿತ್ತು. ಅಂಥ ಪರಿಸ್ಥಿತಿಯಲ್ಲಿ ಸಹಕಾರಿ ತತ್ವದಂತೆ ಚಿಕ್ಕ ಚಿಕ್ಕ ಹುಟ್ಟುವಳಿ ಸಂಸ್ಥೆಗಳು ಹುಟ್ಟಿಕೊಂಡವು. ಅವುಗಳ ಇತಿಹಾಸ ನನಗೆ 'China Builds for Dsmocracy' ಎಂಬ ಪುಸ್ತಕದಲ್ಲಿ ಓದಲು ದೊರೆಯಿತು. ಚೀನ, ಜಪಾನ ಹಿಂದುಸ್ಥಾನ ದೇಶಗಳಲ್ಲಿ ಮೊದಲಿನ ಕೈಗಾರಿಕೆಗಳು ತುಂಬ ದೊಡ್ಡ ಪ್ರಮಾಣದಲ್ಲಿಯೇ ನಡೆಯುತ್ತಿದ್ದವು; ಇಂದಿಗಾದರೂ ಈ ದೇಶಗಳಲ್ಲಿಯೇ ಸಂಪತ್ತಿಯ ಹುಟ್ಟುವಳಿಯು ದೊಡ್ಡ ಪ್ರಮಾಣದಲ್ಲಿ ಕೈಗಾರಿಕೆಗಳಿಂದಲೇ ನಡೆಯುವದು ಯುರೋಪಿನಲ್ಲಾದರೋ, ಯಾಂತ್ರಿಕ ತಾಂತ್ರಿಕ ಪ್ರಗತಿಯಾಗಿ, ಕೈಗಾರಿಕೆಯ ಕುಶಲರೆಲ್ಲ ಕೂಲಿಕಾರರಾದರು. ಸಹಜವಾದ ಈ ವೈಲಿನ ನೇತ್ರಗಳಲ್ಲಿ ಅಂಥ ಪರಿಸ್ಥಿತಿಯುಂಟಾಗಿಲ್ಲ ಕೈಗಾರಿಕೆಗಳಿಂದಲೇ ಯುಂಟಾಗಿಲ್ಲ ಕೈಗಾರಿಕೆಗಳಿಂದಲೇ ಕಮ್ಮಿ ಉದ್ಯೋಗ ಧಂಧೆಗನ್ನು ನಡೆಸುವ ಕೋಟಿಗಟ್ಟಲೆ ಜನರು ಇಂದು ಪ್ರತಿಯೊಂದು ಉದ್ಯಮದಲ್ಲಿಯೂ ಇದ್ದಾರೆ. ಅಂಥವರನ್ನೆಲ್ಲ ಸಹಕಾರಿ ಚಳವಳಿಯ ಮುಖಾಂತರ ಸಂಘಟಿಸಿದರೆ, ಈ ದೇಶದಲ್ಲಿ ನಮ್ಮ ಸ್ವತಂತ್ರವಾದೊಂದು ಆರ್ಥಿಕ ನಿಯೋಜನೆಯಾಗಬಹುದಾಗಿದೆ.

ಹಿಂದೀ ಸಹಕಾರಿ ಸಂಸ್ಥೆಗಳು.

ರೈತರಿಗೆ ಸಾಲ ಪೂರೈಸುವ ಸಂಸ್ಥೆಗಳ ಸ್ಥಾಪನೆಯಿಂದಲೇ ಹಿಂದೀ ಸಹಕಾರಿ ಚಳವಳಿಯು ಪ್ರಾರಂಭವಾಯಿತೆಂದು ಈ ಮೇಲಿನ ಹೇಳಿಕೆಯೇ ಇದೆ. ಅಂಥ ಸಂಸ್ಥೆಗಳಿಂದು ನನ್ನ ದೇಶದಲ್ಲಿ ದೊಡ್ಡ ಪ್ರಮಾಣದಲ್ಲಿಯೇ ಹುಟ್ಟಿಕೊಂಡಿವೆ ೧೯೪೩ರಲ್ಲಿ ಇಂಥ ಸಾಲ ಪೂರೈಸುವ ಸಹಕಾರಿ ಸಂಸ್ಥೆಗಳ ಸಂಖ್ಯೆ ೧೫೫೭೬ ಇತ್ತು ಕಳೆದ ನಾಲ್ಕು ವರ್ಷದಲ್ಲಿಯೇ ಅದು ಇಪ್ಪು ಬೆಳೆದಿದೆ. ಯಾವುದೇ ಹಳ್ಳಿಯಲ್ಲಿಯ ಹತ್ತು ರೈತರು ಕೂಡಿಕೊಂಡು ಎರಡು ನೂರು ರೂಪಾಯಿಗಳ ಮೂಲ ಭಾಂಡವಲು ಸೇರಿಸಿ ಇಂಥ ಸಂಸ್ಥೆ ಸ್ಥಾಪಿಸಲು ಬರುವಹು ಸರಕಾರ ಇಂಥ ಸಂಸ್ಥೆಗಳಿಗೆ ಎರಡು ಸಾವಿರ ರೂಪಾಯಿಗಳವರೆಗೆ ಸಾಲವೆಂದು ಅಲ್ಪ ಬಡ್ಡಿಯಿಂದ ಸಾಲ ಕೊಡುವುದು. ಎಲ್ಲ ಸದಸ್ಯರೂ ಪಮ್ಮ ಸಂಪತ್ತಿಯನ್ನು ಆಡವೆಂದು ಸರಕಾರದಲ್ಲಿ ಇಡಬೇಕಾಗುವದು. ಈ ಸಂಸ್ಥೆಗಳಲ್ಲಿ ಅಮರ್ಯಾದಿತ ಹೊಣೆಗಾರಿಕೆ Unlimited liability ಸ್ವೀಕರಿಸುವುದು ಅನಿವಾರ್ಯವೆಂದು ತಿರ್ಮಾನವಾಗುವದು ಎಲ್ಲೆಲ್ಲಿ ಈ ಸಂಸ್ಥೆಗಳು ಒಳ್ಳೆಯ ಜನರ ಕೃಪೆಯಲ್ಲಿವೆಯೋ, ಅಲ್ಲೆಲ್ಲ ಅವುಗಳ ಇತಿಹಾಸವು ಉತ್ಸಾಹಜನಕವೇ ಆಗಿದೆ. ಅವರು ಸಾಲ ಪೂರೈಸುವದರ ಜೊತೆಗೇ ಇತರ ಕೆಲಸಗಳನ್ನು ಕೈಕೊಳ್ಳಲು ಪ್ರಾರಂಭಿಸಿದ್ದು ವಿವಿಧೋದ್ದೇಶದ ಸಂಸ್ಥೆಗಳು (Multi purposes Societies) ಇಂದು ಪ್ರತಿಯೊಂದು ಜಿಲ್ಲೆಯಲ್ಲಿಯೂ ಅನೇಕ ಕಡೆಗಳಲ್ಲಿ ಹುಟ್ಟಿಕೊಂಡಿವೆ ರೈತರ ಕಚ್ಚಾವಸ್ತುಗಳಿಗೆ ಮಾರಾಟಮಾಡುವದು, ಅವರಿಗೆ ಅವಶ್ಯವಿರುವ ಬೀಜ, ಗೊಬ್ಬರ ಒಕ್ಕಲತನದ ಸಾಧನ ಹಾಗೂ ಇತರ ವಸ್ತುಗಳನ್ನು ಪೂರೈಸಿಕೊಡುವದು ಈ ವಿವಿಧೋದ್ದೇಶಗಳ ಸಂಸ್ಥೆಗಳು ಹುಟ್ಟುವಳಿಯ ಕೆಲಸಗಳನ್ನು ಕೈಕೊಂಡಿವೆ

ರೈತರಲ್ಲಿ ಕೊಳ್ಳು-ಮಾರುವ ಸಂಸ್ಥೆಗಳು, ಸಹಕಾರಿ ಪದ್ಧತಿಯಿಂದ ಸಾಮುದಾಯಕವಾಗಿ ಒಕ್ಕಲತನ ಮಾಡುವ ಸಂಸ್ಥೆಗಳು ದೊಡ್ಡ ಪ್ರಮಾಣದಲ್ಲಿ ಹುಟ್ಟುವುದು ಅವಶ್ಯವಾಗಿದೆ. ಕೆಲ ಕೆಲ ಪ್ರಾಂತಗಳಲ್ಲಿಂದು ಈ ಬಗೆಯ ಸಂಸ್ಥೆಗಳು ಕೆಲ ಪ್ರಮಾಣದಲ್ಲಿ ಕೆಲಸ ಮಾಡುತ್ತಿವೆ. ಬಿಹಾರ ಮತ್ತು ಯುಕ್ತ ಪ್ರಾಂತಗಳಲ್ಲಿ ಸಕ್ಕರೆ ತಯಾರಿಸುವ ಕಾರಖಾನದಾರರಿಗೆ ಕಬ್ಬು ಪೂರೈಸುವ ಸಹಕಾರಿ

ಸಂಸ್ಥೆಗಳು ತುಂಬ ದೊಡ್ಡ ಪ್ರಮಾಣದಲ್ಲಿವೆ. ಕಬ್ಬಿನ ಮೂರುನಾಲ್ಕಾಂಶ ಹುಟ್ಟುವಳಿಯಿಂದು ಅಂಥ ಸಹಕಾರಿ ಸಂಸ್ಥೆಗಳ ಕೈಯಲ್ಲಿಯೇ ಇದೆ ಈ ಪ್ರಾಂತಗಳಲ್ಲಿಯ ಸಕ್ಕರೆಯು ನೂರಕ್ಕೆ ಎಂಬತ್ತೈದು ಹುಟ್ಟುವಳಿಗೆ ಈ ಸಂಸ್ಥೆಗಳ ಮುಖಾಂತರ ಸಾಲ ಪೂರೈಸುವದು, ಭೂಮಿಯನ್ನು ಹದಗೊಳಿಸುವದು, ಬೀಜಗಳನ್ನು ಪೂರೈಸುವದೇ ಮುಂತಾದ ಕೆಲಸಗಳು ನಡೆಯುತ್ತಿರುವವು.

ಸಾಮುದಾಯಿಕ ಒಕ್ಕಲುತನ-ಉತ್ಪಾದಕ ಸಂಸ್ಥೆಗಳು ಹೆಚ್ಚಾಗಿ ಪಂಜಾಬದಲ್ಲಿವೆ. ಅವು ರೈತರ ಜಿಕ್ಕಭೂಮಿಗಳನ್ನು ಒಟ್ಟಾಗಿಸಬೇಕು. ಅವುಗಳ ಒಡೆತನದ ಹಕ್ಕನ್ನೊಪ್ಪಿಕೊಂಡೂ, ಇಂದು ಪಂಜಾಬದಲ್ಲಿ ದೊಡ್ಡ ದೊಡ್ಡ ಹೊಲಗಳು ಸಾಮುದಾಯಿಕ ಒಕ್ಕಲುತನಕ್ಕೆ ಒಳಪಟ್ಟಿವೆ. ೧೯೬೪ರಲ್ಲಿ ಪಂಜಾಬದಲ್ಲಿ ಇಂಥ ಸಹಕಾರಿ ಒಕ್ಕಲುತನದ ಸಂಸ್ಥೆಗಳ ಸಂಖ್ಯೆ ೧೨೬೬ ಇದ್ದಿತು. ಸಲ್ಲ ಹೆಚ್ಚುಕಡಿಮೆಯಾಗಿ ೧೧ ಲಕ್ಷದಷ್ಟು ಎಕರೆ ಭೂಮಿಯು ಸಹಕಾರಿ ತತ್ವದಂತೆ ಒಕ್ಕಲುತನಕ್ಕೆ ಒಳಪಟ್ಟಿದ್ದಿತು. ಪಂಜಾಬದಲ್ಲಿ ಒಡ್ಡು ಒಕ್ಕಲಿನ ಹೆಚ್ಚಿನ ಸೌಕರ್ಯವಿದ್ದುದರಿಂದ ಮೇಲಿನ ಚಳವಳಿಗೆ ಅಲ್ಲಿ ಹೆಚ್ಚಾಗಿ ಅವಕಾಶವುಂಟಾಯಿತು. ಮಹಾರಾಷ್ಟ್ರದಲ್ಲಿ ಕಾಲಿವೆಗಳ ಮುಖಾಂತರ ಕಬ್ಬಿನ ಬೆಳೆ ಬೆಳೆಯಲಾಗುವದೋ, ಅಲ್ಲಿ ಪಂಜಾಬದಂತಹ ಸಹಕಾರಿ ಉತ್ಪಾದಕ ಸಂಸ್ಥೆಗಳು ಹುಟ್ಟಿರದಿದ್ದರೂ, ಬಹುತರ ಕಡೆಗಳಲ್ಲಿ ಇಂದು ಕೊಳ್ಳು-ಮಾರುವ ಸಂಸ್ಥೆಗಳು ಹುಟ್ಟಿವೆ.

ಗ್ರಾಹಕ ಸಹಕಾರಿ ಸಂಘಗಳು (Consumers' Co-operativ) ಇಂದು ಹೆಚ್ಚಾಗಿ ನಗರ-ಪಟ್ಟಣಗಳಲ್ಲಿ ಅನೇಕ ಕಡೆಗಳಲ್ಲಿ ಸ್ಥಾಪನೆಯಾಗಿವೆ. ಧಾರಣ ನಿಯಂತ್ರಣದ ಕಾಲದಲ್ಲಿ ಇಂಥ ಸಂಸ್ಥೆಗಳನ್ನು ಸ್ಥಾಪಿಸಲು ಸರಕಾರವೇ ಹೆಚ್ಚಾಗಿ ಉತ್ತೇಜನ ಕೊಟ್ಟಿತು. ಅದರಿಂದಾಗಿ, ದೇಶದಲ್ಲಿ ಈ ಸಂಸ್ಥೆಗಳಿಗೆ ಚಾಲನೆ ದೊರೆಯಿತು. ಮುಂಬಯಿ ಇಲಾಖೆಯಲ್ಲಿ ಅವುಗಳ ಸಂಖ್ಯೆ ೪೬೬ ಇವೆ; ಮತ್ತವುಗಳ ಭಂಡವಲು ೫೫ ಲಕ್ಷ ರೂಪಾಯಿಗಳಷ್ಟಿವೆ. ಆದರೆ ಜನಸಂಖ್ಯೆಯ ಮಾನದಂದ ಮೇಲಿನ ಅಂಕೆಸಂಖ್ಯೆಗಳು ಅತ್ಯಲ್ಪವಾಗಿವೆ. ನೂರಕ್ಕೆ ಜಾರಷ್ಟು ಜನರು ಇನ್ನೂ ಗ್ರಾಹಕ ಸಹಕಾರಿ ಸಂಸ್ಥೆಗೆ ಸೇರ್ಪಡೆಯಾಗಿಲ್ಲ. ದೇಶದಲ್ಲಿಯ ಪ್ರತಿಯೊಬ್ಬ ನಾಗರಿಕನು ಒಂದು ಅರ್ಥದಿಂದ ಉತ್ಪಾದಕನಾಗಿದ್ದಾನು ಮತ್ತು ಗ್ರಾಹಕನಾಗಿ ಇದ್ದೇ ಇರುವನು ಒಂದೊಂದು ಗ್ರಾಹಕ-ಸಹಕಾರಿ ಸಂಸ್ಥೆಗೆ ಲಕ್ಷಗಟ್ಟಲೆಯಾಗಿ ಸದಸ್ಯರಾಗಬೇಕು; ಈ ಪ್ರವೃತ್ತಿಗೆ ದೇಶವ್ಯಾಪಿಯಾದ ಚಳವಳಿಯ ಸ್ವರೂಪ ಉಂಟಾಗಬೇಕು.

ಮುಂಬಯಿ ಇಲಾಖೆಯಲ್ಲಿ ಉತ್ಪಾದಕ ಸಹಕಾರಿ ಸಂಸ್ಥೆಗಳು (Producer's Co-Oparatives) ಜಾಗತಿಕ ಯುದ್ಧಕಾಲದಲ್ಲೀನೊ ಸ್ವಲ್ಪಪ್ರಮಾಣದಲ್ಲಿ ಹುಟ್ಟಿದವು. ಪ್ರಾಂತದಲ್ಲಿ ಸ್ವಲ್ಪ ಸ್ವಲ್ಪ ಹೆಚ್ಚುಕಡಿಮೆಯಾಗಿ ೩೫ ಸಾವಿರ ದಷ್ಟು ನೇಕಾರರಿದ್ದಾರೆ. ಅವರಿಗಿಲ್ಲ ಒಂಟಿಯಾಗಿ ನೂಲು ಪೂರೈಸುವುದು ಸರಕಾರಕ್ಕೆ ಸಾಧ್ಯವಿರಲಿಲ್ಲ ಅದರಿಂದಾಗಿ ಎಲ್ಲೆಲ್ಲಿ ನೇಕಾರ ಸಹಕಾರಿ ಸಂಘಗಳು ಹುಟ್ಟಿದವೋ, ಅಲ್ಲೆಲ್ಲ ನೂಲು ಹಂಚುವ ಕೆಲಸವನ್ನು ಸರಕಾರವು ಅಂಥ ಸಂಸ್ಥೆಗಳಿಗೆ ಒಪ್ಪಿಸಿತು. ಈ ಬಗೆಯ ನೇಕಾರ ಸಹಕಾರಿ ಸಂಸ್ಥೆಗಳು ೯೦ರಷ್ಟಿದ್ದು, ಇತರ ನಟ್ಟಿಗ, ಒಡಿಗ, ಕುಂಬಾರ, ಗಾಣಿಗ, ಇಂಥ ಬಗೆಯ ಕೈಗಾರಿಕೆಯವರು ಇಂದು ಸಂಘಟಿತರಾಗುತ್ತಿದ್ದಾರೆ. ಅಂಥ ಉತ್ಪಾದಕ ಸಹಕಾರಿ ಸಂಸ್ಥೆಗಳ ಸಂಖ್ಯೆ ೩೫೦ರಷ್ಟಿದೆ ಇವುಗಳಿಗೆ ಬೆಳವಣಿಗೆಯಾದರೆ ತೀವ್ರಗತಿಯಿಂದಲೇ ನಡೆದೀತೆಂಬ ಆಶೆಯಿದೆ.

— —

ಹಿಂದೀ ಮಹಾ ವಿದ್ಯಾಲಯ, ಬಳ್ಳಾರಿ,

[1981 ಸ್ಥಾಪಿತ ಬಳ್ಳಾರಿ ಜಿಲ್ಲಾ ಹಿಂದೀ ಪ್ರೇಮಿ ಮಂಡಲದಾಶ್ರಯದಲ್ಲಿ, ರಿಜಿಸ್ಟರ್ಡ.]

ಮದ್ರಾಸ್ ಸರ್ಕಾರದಿಂದ ಮಾನ್ಯತೆ ಇದೆ.

ಪ್ರಾರಂಭಿಕ ವರ್ಗಗಳಿಗೆ ಮಾಸಿಕ 3/- ಶುಲ್ಕ — ಉನ್ನತ ವರ್ಗಗಳಿಗೆ ಮಾಸಿಕ 5/- ಶುಲ್ಕ

ವಾರ್ಡಲಾ ಹೈಸ್ಕೂಲ್ ಕಟ್ಟಡದಲ್ಲಿ ಪ್ರಾತಃಕಾಲ—ಸಾಯಂಕಾಲ ಹಿಂದೀ ಕಾಲೇಜಿನ ವರ್ಗಗಳು ನಡೆಯುತ್ತಿವೆ. ವಿಶಾರದ — ಪ್ರಾಚಾರ್ಯ ವರ್ಗಗಳಲ್ಲದೆ ಪ್ರಾರಂಭಿಕ ವರ್ಗಗಳಿಗೂ ಪ್ರವೇಶವಿದೆ. ವರ್ಗಗಳಿಗೆ ಸಂಬಂಧಿಸಿದ ಪಾಠ ಪುಸ್ತಕಗಳು ವಿದ್ಯಾಲಯದಲ್ಲಿ ದೊರೆಯುತ್ತವೆ. ಒಳ್ಳೆಯ ಪುಸ್ತಕಭಂಡಾರವಿದೆ. ಶ್ರೇಷ್ಠ ವಾರಪತ್ರಿಕೆ, ಮಾಸಪತ್ರಿಕೆಗಳು ಲಭ್ಯ ಇತರ ವಿವರಗಳಿಗೆ ಸ್ವಾಂಪಿಟ್ಟು ಬರೆಯಿರಿ.

ಪ್ರಿನ್ಸಿಪಾಲ್.

NAVA BHARAT BELLARY.

(Reg. No. M. 4746)

13—2—50

ನವಭಾರತ ಬಳ್ಳಾರಿ.

(Nationalist Weekly)

ಚಂದಾದರಗಳು.	Subscription Rates.
ವರ್ಷಕ್ಕೆ 5—0—0	One Year 5—0—0
6 ತಿಂಗಳಿಗೆ 3—0—0	Six months 3—0—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.	Subscription will not be accepted for less than 6 months

To

Sri.....

.....

.....

Pirated at Krishna Printing Works. Edited & Published by T. S. Keshava

JAI—HIND

ನವಚೈತನ್ಯ

ಬಳ್ಳಾರಿಯ
ಉಜ್ವಲ ರಾಷ್ಟ್ರೀಯ ವಾರಪತ್ರಿಕೆ.
*
ಉತ್ತಿಷ್ಠಕ! ಜಾಗೃತ!!
ವ್ಯಾಸ್ಯವರಾನ್ನಿ ಬೋಧತ!!!
*
ಸಂಪಾದಕ ಮತ್ತು ಪ್ರಕಾಶಕ:—
ಟಿ. ಬಿ. ಕೇಶವರಾವು.

ಸಂ ೧೩ | ಸೋಮವಾರ ೨೦ ಫಿಬ್ರವರಿ ೧೯೪೦ | ಸಂಚಿಕೆ ೫

ಅಪರಾಧಗಳ ಬೆಳೆವಣಿಗೆ

ಇತ್ತೀಚೆಗೆ ಅಪರಾಧಗಳ ಬೆಳವಣಿಗೆಯು ಬಹಳ ಆಗಿರುವುದು ಕಂಡು ಬರುತ್ತದೆ. ಅದಕ್ಕೆ ಅನೇಕ ಕಾರಣಗಳಿವೆ. ರಾಜ್ಯ ವ್ಯವಸ್ಥೆಯಲ್ಲಿಯೂ ಕ್ರಾಂತಿ, ಅದರ ಸ್ರತಿಬಂಧಕ ಕಾರ್ಯಗಳಲ್ಲಿಯೂ ಶಿಥಿಲತೆ ಆಹಾರ ಬಟ್ಟೆಗಳಲ್ಲಿಯೂ ಕುಟುಗ್ರತೆಯಿಂದ ಆಗುತ್ತಿರುವ ಅನಾನುಕೂಲತೆ, ಮಳೆಬೆಳೆಗಳ ಅನಿಶ್ಚಿತತನದಿಂದ ಆವ ಕೊಂಡದೆ, ಅಪರಾಧಿ ತಂಡಗಳನ್ನು ಮುಕ್ತ ಮಾಡಿದ್ದು ನಿಯಂತ್ರಣಗಳ ಅಸ್ತಿತ್ವ, ದೇಶದಲ್ಲಿಯೂ ವಿರೋಧೀ ಶಕ್ತಿಗಳ ಹೋರಾಟ ಇವೇ ಮೊದಲಾದ ಸಂಗತಿಗಳು ಇಂದಿನ ಅನಂಧಗಳಿಗೆ ಪುಟಗೊಡುತ್ತಿವೆ

ಬ್ರಿಟಿಶರು ಇಲ್ಲಿಂದ ಹೋಗಿ, ಇಲ್ಲಿಯ ರಾಜ್ಯಭಾರವು ನಮ್ಮ ಕೈಗೆ ಬಂದುದರಿಂದ ಮತ್ತು ನಮ್ಮ ಆಡಳಿತಗಾರರು ಸಮಾಜವ್ಯಕ್ತಿ, ಜನತೆಯ ಕಲ್ಯಾಣಗಳಿಗೆ ಹೆಚ್ಚು ಲಕ್ಷಕೊಡುವದಕ್ಕಾಗಿ ಆತ ಳಿತದ ಕಾರಿಣ್ಣನ್ನು ಕಡಿಮೆ ಮಾಡಿರುವುದು ಗೊತ್ತಾದುದರಿಂದ, ಅಪರಾಧೀ ಮನೋವೃತ್ತಿಯವರಿಗೆ ಕಣ್ಣು ಬಿಚ್ಚಿದಂತಾಗಿದೆ,

ಹೊಸ ಮನ್ವಂತರದಲ್ಲಿಯ ರೀತಿನೀತಿಗಳ ಲಾಭವನ್ನೆದುಕೊಂಡು ಅಪರಾಧಿಗಳನ್ನು ಮಾಡಿಯೂ ಅದರಿಂದ ಪಾರಾಗುವುದು, ಮತ್ತು ಅಪರಾಧಿಗಳನ್ನು ಬಿಡಿಸಿಕೊಂಡು ಬರುವುದು ಬೆಳೆದಿವೆ ಇದರಿಂದ ನಿಯಂತ್ರಣಾಧಿಕಾರಿಗಳ ಶಕ್ತಿಯು ಕುಂಠಿತವಾಗಿದೆ. ಮತ್ತು ಪರಿಸ್ಥಿತಿಯ ಲಾಭದ ಮೂಲಕ ಅಪರಾಧಿಗಳಿಗೆ ಸಹಾಯ ನೀಡುವ ಹಲಕೆಲವು ಅಧಿಕಾರಿಗಳಿಗೆ ಮುಕ್ತದ್ವಾರ ಸಿಕ್ಕಿದೆ.

ಇಂತಹ ಪರಿಸ್ಥಿತಿಯಲ್ಲಿ ಮಳೆ ಬೆಳೆಗಳು ಕೈಕೊಟ್ಟರಂತೂ ತೀರಿಯೇಹೋಯಿತು ಅದರ ಮೂಲಕ ಕೂಳುಗೇಡಾದ ಅನೇಕ ಜನರು ನೇರವಾಗಿ ಕಳವು ಸುಲಿಗೆಗಳಿಗೆ ಇಳಿಯುತ್ತಾರೆ.

ಅಪರಾಧಿ ಜಾತಿಗಳು ಇಂದು ಹೆಸರಿಟ್ಟು ಕೆಲವರನ್ನು ತಂತಿಗಳಲ್ಲಿ ಇಡುವುದು ಅಯೋಗ್ಯವೆಂದು ಬಗೆದು ನಮ್ಮ ಸರಕಾರದವರು ಅಪರಾಧಿ ತಂಡಗಳನ್ನು ಮುಕ್ತ ಮಾಡಿದರು. ಅದರೆ ಹೀಗೆ ಬಂಧಮುಕ್ತರಾದವರು ಈಗ ತಾವು ಅಪರಾಧಿಗಳು ಎಂಬ ಹೆಸರಿಗೇ ಕಕ್ಕವರಾಗಿ ಡ್ಯಾಬೆ ಸುತ್ತು ಕಮ್ಮನ್ನು ಬಿಟ್ಟವರೇ ಬಡ್ಡರು ಎಂಬ ಮಾತನ್ನು ಕಮ್ಮ್ಯ ವರ್ತನದಿಂದಲೇ ಸಿದ್ಧಪಡಿಸುತ್ತಿದ್ದಾರೆ ಅವರ ಪಿಡುಗಿನಿಂದ, ಬೆಳೆ, ಆಸ್ತಿಗಳನ್ನು ರಕ್ಷಿಸಿಕೊಳ್ಳುವುದು ಜನತೆಗೆ ದುಸ್ತರವಾಗಿದೆ.

ನಿಯಂತ್ರಣಗಳ ಮೂಲಕ ಸರಕಾರೀ ಅಂಗದಿಗಳೋ ಸಂಗ್ರಹಗಳೋ ಇರುವಲ್ಲಿ ಅವುಗಳ ಮೇಲೆ ಅನಾಯಾಸವಾಗಿ ಲಾಭ ಮಾಡಿಕೊಳ್ಳುವವರ ಕಣ್ಣು ಬೀಳುತ್ತಿದೆ.

ಕೆಲವು ವಿರೋಧೀ ಶಕ್ತಿಗಳು ಇಂದಿನ ಆಡಳಿತದ ವಿರುದ್ಧವಾಗಿ ದೇಶದಲ್ಲಿ ಹೋರಾಡುತ್ತಿವೆ. ಅವು ಕೊಲೆ, ಸುಲಿಗೆಗಳಿಗೆ ಹಿಂಜರಿಯುತ್ತಿಲ್ಲ

ಹೀಗೆ ಒಂದಲ್ಲ, ಎರಡಲ್ಲ, ಅನೇಕ ಕಾರಣಗಳ ಮೂಲಕ ಜನತೆಯು ತನ್ನ ಆಸ್ತಿಪಾಸ್ತಿಗಳನ್ನು ಉಳಿಸಿಕೊಳ್ಳುವುದು ಕಠಿಣವಾಗಿ ಪರಿಣಮಿಸಿದೆ. ಈ ಪರಿಸ್ಥಿತಿಯನ್ನು ನಿಯಂತ್ರಿಸಲು ಸರಕಾರವು ಯತ್ನಿಸುತ್ತಲೇ ಇದೆ. ಅದರಿಂದಲೇ ಸರ್ವಕಾರ್ಯವಾಗಬೇಕೆಂಬುದು ಆಗದಂಥದಾಗಿದೆಯೆಂಬ ಮಾತು ನಮಗೆ ವಿವಿಧ ಕ್ಷೇತ್ರಗಳಲ್ಲಿ ನಿದರ್ಶನಕ್ಕೆ ಬರುತ್ತಿದೆ. ಸರಕಾರವೆಂದರೆ ನಮ್ಮಂತಹ ಜನರಿಂದಲೇ ಕೂಡಿದ ಸಂಸ್ಥೆಯಾಗಿದೆ. ಅದರಲ್ಲಿಯ ಎಲ್ಲರೂ ಕರ್ತವ್ಯ ತಿಳಿದು ವರ್ತಿಸುತ್ತಿಲ್ಲ.

ಆದ್ದರಿಂದ ಜನತೆಯು ತನ್ನ ಸ್ಥಿತಿಯನ್ನು ರಕ್ಷಿಸಿಕೊಳ್ಳಬೇಕಾದರೆ ಮೊದಲು ತಾನು ಸಮರ್ಥವಾಗಿ ಆ ಮೇಲೆ ಸರಕಾರೀ ಸಹಾಯವನ್ನು ಪಡೆಯಬೇಕೆಂಬುದು ಅನಿವಾರ್ಯವಾದ ಸಂಗತಿಯಾಗಿದೆ.

ಪಾಕಿಸ್ತಾನ ಮತ್ತು ಇತರ ಗಡಿಗಳಲ್ಲಿ ಇರುವವರ ಸ್ಥಿತಿಯನ್ನು ಈ ವಿಷಯದಲ್ಲಿ ಗಮನಿಸುವುದು ಅಗತ್ಯದ ಮಾತಾಗಿದೆ. ಅವರಿಗೆ ಸರಕಾರದವರೂ ಸಹಾಯ ಮಾಡುತ್ತಿದ್ದಾರೆ. ಮತ್ತು ಅವರೊಡನೆ ಅನೇಕರು ಸ್ವತಃ ಎದ್ದು ನಿಂತು ಹೋರಾಟ ಮಾಡಿ ಆತ್ಮ ಸಂರಕ್ಷಣೆ ಮಾಡಿ ಆತ್ಮಸಂರಕ್ಷಣ ಮಾಡಿಕೊಳ್ಳುತ್ತಿದ್ದಾರೆ. ಮತ್ತು ಸುಲಿಗೆಗಾರರು ಸರಸ್ರರಾಗಿ ಬಂದರೂ ಅವರನ್ನು ಹಳ್ಳಿಗರು ಎದುರಿಸಿ ಪಾರಾದ ಉದಾಹರಣೆಗಳಿವೆ.

ಇಂದು ಈ ಘಟನೆಗಳ ಮೂಲಕ ಸಾರ್ವಜನಿಕರು ಎಚ್ಚತ್ತು ಸಂಘಟಿತರಾಗುವ ಕಾಲವು ಸನ್ನಿಹಿತವಾಗಿದೆ. ಅವಶ್ಯಕ ವಲ್ಲದವುದಾಗಿಂದ ಅವರು ತಾವೇ ಮೊದಲು ಸಮರ್ಥರಾಗದೆ ನಡೆಯುವ ಕಾಲವು ಇದಲ್ಲ. [ಜಯ ಹಿಂದ]

ಸಮಾಜವಾದೀ ವ್ಯವಸ್ಥೆಯ

ಸಹಕಾರೀ ಸ್ವರಾಜ್ಯ

ಸಹಕಾರಿ ಕೂಲಿಕಾರ ಸಂಘ

ರೈತರು ಮತ್ತು ಕೈಗಾರಿಕೆಯವರಿಗೆ ತಮ್ಮ ಸ್ವಂತದ್ದಾದ ಸ್ವಲ್ಪಾದರೂ ಸ್ಥಾವರ ಇಲ್ಲದೆ ಜಂಗಮ ಆಸ್ತಿಯಿರುವದು; ಇಲ್ಲವೆ ಇರುವ ಸಂಭವವಿದೆ. ಆದರೆ ಹೊಲದಲ್ಲಿ ದುಡಿಯುವ ಕೂಲಿಕಾರ ವರ್ಗ ನಾತ್ರ ಎಲ್ಲ ದೃಷ್ಟಿಯಿಂದಲೂ ಪರಾಧೀನವಾಗಿದೆ. ಇಂಥ ಕೂಲಿಕಾರರ ವರ್ಗದಲ್ಲಿಯೇ ಹರಿಜನ ಆದಿವಾಸಿ ಮತ್ತು ಅಂಥ ಬಗೆಯ ಸಮಾಜದವರಿರುವರು. ಅಂಥವರಿಗೆ ತಮ್ಮದೇ ಆದ ಹೊಲ ಗದ್ದೆ ಇರುತ್ತಿರುವುದಿಲ್ಲ ಮಾತ್ರವೇ ಅಲ್ಲ; ಅವರ ಬಳಿಯಲ್ಲಿ ಹಸ್ತಕೌಶಲ್ಯವೂ ಇರುವುದಿಲ್ಲ. ಹಿಂದುಸ್ತಾನದಲ್ಲಿ ಇಂಥ ವರ್ಗವು ಸರಾಸರಿಯಾಗಿ ನೂತಕ್ಕೆ ಹತ್ತರಷ್ಟಾದರೂ ಇದೆ. ಇವೆಲ್ಲ ಶ್ರಮಜೀವಿ ಜನತೆಯನ್ನು ಕೂಲಿಕಾರ ಸಹಕಾರಿ ಸಂಘೆದ ಛಾಯೆಯಲ್ಲಿ ಸಂಘಟಿಸುವುದು ಅವಶ್ಯವಾಗಿದೆ.

ಅವರಿಂದು ಒಂಟಿಯಾಗಿ ಯಾವ ಕಾರ್ಯ ಮಾಡಲು ಸಾಧ್ಯವಿಲ್ಲವೋ, ಅಂಥ ಕಾರ್ಯವನ್ನವರು ಕೂಲಿಕಾರ ಸಂಘೆದ ಮುಖಾಂತರ ಮಾಡುವದು ಸಾಧ್ಯವಾಗಬಹುದು. ಹಿಂದುಸ್ತಾನದಲ್ಲಿ ಈ ಬಗೆಯ ಸಹಕಾರಿ ಚಳವಳಿಗೇ ಹೆಚ್ಚಿನ ಅಸ್ಪದವಿದೆಯೆಂದು ತಜ್ಞರ ಅಭಿಪ್ರಾಯವಾಗಿದೆ. ಹತ್ತು ಹದಿನೈದು ಕೂಲಿಕಾರರು ಒತ್ತಟ್ಟಿಗೆ ನೇರಿ, ತಮ್ಮ ಸಂಘವನ್ನು ನೊಂದಾಯಿಸಿಕೊಳ್ಳಬೇಕು. ಮನೆ ಕಟ್ಟುವದು, ರಸ್ತೆ ತಯಾರಿಸುವದು, ಅಡವಿ ಕಡೆಯುವದು, ಬಗೆಯುವದು, ಇಲ್ಲವೆ ರಿಪೇರಿ ಮಾಡುವುದೇ ಮುಂತಾದ ಸಹಕಾರಿ ಮತ್ತು ಸ್ಥಾನಿಕ ಸಂಸ್ಥೆಗಳ ಗುತ್ತಿಗೆಗಳನ್ನೆಲ್ಲ ಈ ಸಹಕಾರಿ ಸಂಘೆದ ಮುಖಾಂತರ ಕೈಕೊಳ್ಳಬೇಕು. ಸರಕಾರವು ಅವರಿಗೆ ಭಂಡವಲು, ಯಂತ್ರಸಾಮಗ್ರಿ, ಹಾಗು ತಜ್ಞರ ಮಾರ್ಗದರ್ಶನ ಒದಗಿಸಿಕೊಡಬೇಕು. ಕಾಲಾಂತರದಲ್ಲಿ ಇಂಥ ಜನರ ಕೈಕೌಶಲ್ಯವೂ ಬೆಳೆಯುವಂತಾಗಬೇಕು; ಅವರಲ್ಲಿಂದಲೇ ಬಡಿಗೆ, ಕುಮ್ಮಾರ, ಉಪ್ಪಾರ ಮತ್ತು ಶಿಲ್ಪವಿಶಾರದ ಜನರು ಹುಟ್ಟಿಕೊಳ್ಳಬೇಕು: ಅವರ ಸಲುವಾಗಿ ಅವರ ಕೆಲಸಗಳು ನಡೆದಿರುವಾಗಲೇ ಶಿಬಿರಗಳ ಮುಖಾಂತರ ಅವರಿಗೆ ಶಿಕ್ಷಣದ ವ್ಯವಸ್ಥೆಯು ಆಗಬೇಕು ಮೆಲ್ಲ ಮೆಲ್ಲನೆ ಅವರು ಕಾರ್ಯಕ್ಷಮರೂ ಉತ್ಸಮ ನಾಗಂಕರೂ ಆಗುತ್ತ ಹೋಗಬೇಕು. ಹಾಗೂ ಅವರು ದೇಶದ ಹುಟ್ಟುವಳಿಯಲ್ಲಿ ದೊಡ್ಡಪಾಲನ್ನು ನಿರ್ವಹಿಸುವಂತಾಗಬೇಕೆನ್ನುವುದು ಕೂಲಿಕಾರ ಸಹಕಾರಿ ಸಂಘೆದ ಉದ್ದೇಶವಾಗಿರಬೇಕು ಇಟಲಿಯಲ್ಲಿ ಕೂಲಿಕಾರ ಸಹಕಾರಿ ಸಂಘೆಟನೆಗೆ ಹೆಚ್ಚಿನ ಮಹತ್ವವುಂಟಾಯಿತು; ಮತ್ತು ಡೆನ್ಮಾರ್ಕಿನಲ್ಲಿ 'ಜನಪದ ಉಚ್ಚ ಶಾಲೆಗಳ' ಮುಖಾಂತರ ಕೂಲಿಕಾರರಿಗೆ ಆರಾರು ತಿಂಗಳುಗಳ ವರ್ಗಗಳನ್ನು ತೆರೆದು ಕೂಲಿಕಾರರ ಕಾರ್ಯಕ್ಷಮತೆಯನ್ನು ಹೆಚ್ಚಿಸಲಾಯಿತು ಮುಂದೆ ಅವನ್ನೇ ಸಹಕಾರಿ ಸಂಸ್ಥೆಗಳಾಗಿ ರೂಪಾಂತರಿಸಲಾಯಿತು. ಹಿಂದುಸ್ತಾನದಲ್ಲಿ ಈ ಚಳವಳಿಯು ಈಗ ಮಾತ್ರ ಪ್ರಾರಂಭವಾಗಿದೆ ಮದ್ರಾಸ ಇಲಾಖೆಯಲ್ಲಿ ಇಂಥ ಕೂಲಿಕಾರ ಸಹಕಾರಿ ಸಂಘಟನೆ ಕೆಲ ಪ್ರಮಾಣದಲ್ಲಿಯಾದರೂ ಈಗ ನಡೆದಿದೆ. ಮುಂಬಯಿ ಇಲಾಖೆಯಲ್ಲಿ ಇದೇ ವರ್ಷವೇ ಅಡವಿಯಲ್ಲಿ ಕಟ್ಟಡದ ಕಟ್ಟಿಗೆ ಕಡಿಯುವದು ಹಾಗು ಇದ್ದಲಿ ತಯಾರಿಸುವ ಕೆಲಸಕ್ಕಾಗಿ ಅಂಥ ೧೬ ಕೂಲಿಕಾರ ಸಹಕಾರಿ ಸಂಘಗಳು ಸ್ಥಾಪಿತವಾಗಿವೆ ಇನ್ನೂ ಅವುಗಳ ಕಾರ್ಯ ಪ್ರಯೋಗಾವಸ್ಥೆಯಲ್ಲಿಯೇ ಇದೆಯೆಂದು ಹೇಳಬಹುದು. ಸರಕಾರವಾದರೂ ಆದಿವಾಸಿಗರಿಗೆ ಇಂಥ ಸಂಸ್ಥೆಗಳ ಮುಖಾಂತರ ಕೆಲಸ ಮಾಡಲು ಅದಿಷ್ಟೋಅನುಕೂಲತೆಮಾಡಿಕೊಟ್ಟಿದೆ. ಕೂಲಿಕಾರ ಸಹಕಾರಿ ಸಂಘೆದ ಮುಂದಾಳುತ್ವ ವಹಿಸಿಕೊಂಡು ಕೆಲಸ ಮಾಡುವಂತಹ ಸಮಾಜಸೇವಕರ ಅವಶ್ಯಕತೆ ಇದೆ. ಅಂದದೇನಿ ಇಂಥ ಸಾವಿರಾರು ಸಂಸ್ಥೆಗಳು ದೇಶದಲ್ಲಿ ಹುಟ್ಟಬಹುದು; ಮತ್ತು ಕೂಲಿಕಾರರು ಸಂಘಟಿತವಾಗಿ ಕೆಲಸಮಾಡಬಲ್ಲರು. ಅಷ್ಟುಮಾತ್ರವಲ್ಲ, ಮನೆ ಕಟ್ಟುವ ಸಂಸ್ಥೆಗಳಾದರೂ (Housing Co-Operatives) ಇಂದು ಪ್ರಾಂತಿದಲ್ಲಿ ಹಾಗು ದೇಶವ ಬೇರೆಡೆಗಳಲ್ಲಿ ಹುಟ್ಟುತ್ತಲಿವೆ. ನಗರ ಪಟ್ಟಣಗಳಲ್ಲಿ ನೂರಕ್ಕೆ ೫೦ ರಷ್ಟು ಹಾಗು ಹಳ್ಳಿಗಾಡಿನಲ್ಲಿ ನೂರಕ್ಕೆ ೭೫ ರಂತೆ ಭಂಡವಲನ್ನು ಸರಕಾರದಿಂದ ಕದಿಸಿಬಡ್ಡಿದರದಿಂದ ಇಂಥ ಸಂಸ್ಥೆಗಳಿಗೆ ಕೊಡಲಾಗುವದು. ಬಂಗಾಲದಲ್ಲಿ ಆರೋಗ್ಯ ಸಂವರ್ಧಕ ಸಹಕಾರಿ ಸಂಘಗಳು (Medical Co-Operatives) ಇಂದು ೧೦೦೦-೧೧೦೦ ದಷ್ಟಿವೆ. ಪ್ರಾಮುಖ್ಯವಾಗಿ ಮಲೇರಿಯದ ವಿರುದ್ಧ ಸಾಮುದಾಯಿಕ ಪ್ರತಿಬಂಧಕ ಉಪಾಯೋಜನೆಗಳ ಕಾರ್ಯವನ್ನು ಇಂಥ ಸಂಘಗಳ ಮುಖಾಂತರ ನಡೆಸಲಾಗುವದು, ಶಿಕ್ಷಣ ಕೊಡುವ ಸಹಕಾರಿ ಸಂಘಟನೆಗಳಾದರೂ (Educational Co-operatives) ಇತರ ದೇಶಗಳಲ್ಲಿ ತುಂಬ ಹೆಚ್ಚಿನ ಪ್ರಮಾಣದಲ್ಲಿಯೇ ಹುಟ್ಟುತ್ತಲಿವೆ. ನಮ್ಮ ದೇಶದಲ್ಲಿ ಈ ದಿಶೆಯಲ್ಲಿ ಹೆಚ್ಚಿನ ಕಾರ್ಯವಾಗಿದೆ.

ಶುದ್ಧೀಕರಣದ ಅವಶ್ಯಕತೆ.

ಇಂದಿನ ಸಹಕಾರಿ ಚಳವಳಿಯು ವ್ಯಾಪ್ತಿಯನ್ನು ಸ್ವಲ್ಪದರಲ್ಲಿ ಹೇಳಿಯಾಯಿತು ನಮ್ಮ ದೇಶದಲ್ಲಿ ಸಹಕಾರಿ ಚಳವಳಿಯು ಯಾವ ರೀತಿಯಲ್ಲಿ ಬೆಳೆದಿದೆಯೋ ಇಲ್ಲವೆ ಬೆಳೆಯುತ್ತಿದೆಯೊ ಅದೃಷ್ಟಿಯಿಂದ ನೋಡಿದರೆ, ಅದರಲ್ಲಿ ಅನೇಕ ಬನೆಯ ದೋಷಗಳೂ ಹುಟ್ಟಿಕೊಂಡಿವೆ. ನಮ್ಮ ಪ್ರಾಂತದಲ್ಲಿಯ ಇಂದಿನ ಚಳವಳಿಯೆಲ್ಲ ಸರಕಾರದ ವಿಭಾಗದ ಮುಖಾಂತರವೇ ನಡೆದಿದೆ ಜನತೆಯ ಉತ್ಸಾಹದಿಂದ ಅದರಲ್ಲಿ ಭಾಗವಹಿಸುವಷ್ಟರ ಮಟ್ಟಿಗೆ ಈ ಸಹಕಾರ ಚಳವಳಿಯ ಸ್ವರೂಪವು ಇನ್ನೂ ವ್ಯಾಪ್ತಗೊಂಡಿಲ್ಲ. ಜನರಿಗಿನ್ನೂ ಸಹಕಾರ ಜೀವನದ ಸವಿ ಹತ್ತಿಲ್ಲ. ಭಿನ್ನ ಭಿನ್ನ ಸ್ವರೂಪದಲ್ಲಿ ಸಂಸ್ಥೆಗಳು ಹುಟ್ಟಿಕೊಳ್ಳುತ್ತಿದ್ದರೂ, ಸರಕಾರದಿಂದ ತಂದಿಲ್ಲೊಂದು ಬನೆಯಿಂದ ಸಾಲ ದೊರೆಯುವದೆಂದೇ ಜನರು ಇಂಥ ಸಂಸ್ಥೆಗಳನ್ನು ಸಂಘಟಿಸಲು ಪ್ರಾಮುಖ್ಯವಾಗಿ ಸ್ಪೃಹೆರಾಗುವರು. ಸಂಸ್ಥೆಯ ಹೆಸರಿನಲ್ಲಿ ಸದಸ್ಯರು ವ್ಯವಹಾರ ನಡೆಸಿದ್ದರೂ, ವೈಯಕ್ತಿಕ ಲಾಭ ಹಾನಿಗಳ ವಿಚಾರಮಾಡಿಕೊಂಡೇ ಅವು

ಪ್ರಾಮುಖ್ಯವಾಗಿ ವ್ಯವಹಾರ ನಡೆಸುವದು ಕೆಲವೊಂದು ಸಂದರ್ಭದಲ್ಲಿ, ಸಂಸ್ಥೆಯ ಮುಖಾಂತರ ಸ್ವಾರ್ಥ ಸಾಧಿಸುವಂತಿದ್ದರೇನಿ, ಆಗ ಮಾತ್ರವೇ ಸಂಸ್ಥೆಯ ಮುಖಾಂತರ ವ್ಯವಹಾರ ಮಾಡುವದು, ಹಾಗು ಸ್ವಾರ್ಥ ಸಾಧಿಸುವದು ಸಾಧ್ಯವಾಗದಾಗ, ವೈಯಕ್ತಿಕ ಸ್ವಾರ್ಥದಸಲುವಾಗಿ ಖಾಸಗಿ ವ್ಯವಹಾರ ನಡೆಸುವದು ಹೀಗೆ ಈ ಸಂಸ್ಥೆಗಳ ಸ್ಥಿತಿಯಾಗಿದೆ. ಸಾಲ ಪೂರೈಸುವ ಸಂಸ್ಥೆಗಳು ಊರಲ್ಲಿ ವಿಶಿಷ್ಟ ಜನರ ಕೈಯೇನಿದೆ, ಉತ್ಪಾದ ಸಂಸ್ಥೆಗಳಲ್ಲಿ ಕೈಗಾರಿಕೆಯು ಧಂಡೆಯಲ್ಲಿಯು ಕುರಿಂ ಪ್ರಮುಖರೇ ಕಮ್ಮ ಅಸನಗಳನ್ನು ಸ್ಥಿರವಾಗಿಟ್ಟುಕೊಂಡಿದ್ದಾರೆ. ಇವರೇ ಇತರರನ್ನು ಕೂಲಿಕಾರರನ್ನಾಗಿ ನಡೆಸಿಕೊಳ್ಳುತ್ತಿದ್ದಾರೆ. ವಿವಿಧೋದ್ದೇಶಗಳ ಸಂಸ್ಥೆಗಳ ಹಂಡಾದರು ಇದೇಯಾಗಿದೆ. ದ್ಯೇಯವಾದಿ ಸಮಾಜಸೇವಕರು ಈ ಚಳವಳಿಯ ನೂತ್ಯಗಳನ್ನು ತಮ್ಮ ಕೈಯಲ್ಲಿಟ್ಟೆದು ಕೊಳ್ಳುವ ಪ್ರಯತ್ನ ಮಾಡದಿದ್ದರೆ, ಹಾಗು ಇಂದಿನಲ್ಲಿ ಸಂಸ್ಥೆಗಳ ಶುದ್ಧೀಕರಣವಾಗದಿದ್ದರೆ ಈ ಸಂಸ್ಥೆಗಳಾದರೂ ಹಿತ ಸಂಬಂಧಿ ಜನರ ಸ್ವಾರ್ಥಸಾಧನೆಗಳಾಗಿ ಬಹುದಾದ ಭೀತಿಯು ಇದೆ ಎಲ್ಲ ನಿಯಂತ್ರಣ ಹಾಗು ಮಾರ್ಗದರ್ಶನವಿಂದು ಸರಕಾರದ ಮುಖಾಂತರವೇ ನಡೆಯುತ್ತಿದೆ ಅದು ಹೋಗಿ, ಜನತೆಯ ಕೈಯಲ್ಲಿ ಮಾರ್ಗದರ್ಶನ ಹಾಗು ನಿಯಂತ್ರಣದ ಸೂತ್ರಗಳು ಬಂದಾಗ, ಸಹಕಾರಿ ಚಳವಳಿಯು ನಿಜವಾಗಿಯೂ ಲೋಕಚಳವಳಿಯಾಗಬೇಕು. ಇಂದೇನೆ ಈ ಸಂಸ್ಥೆಗಳ ವ್ಯವಹಾರದ ಪ್ರಜಾ ಪ್ರಭುತ್ವ ಕ್ರಮವನ್ನು ಸಾಧ್ಯವಾದಷ್ಟು ಇಂದು ನನ್ನ ಸಮಾಜವಾದ ಜೀವನವನ್ನು ತೊಡಕಿಸದಾಗಿದೆ. ವೈಯಕ್ತಿಕ ಜೀವನದಲ್ಲಿ ಸಾಮಾನ್ಯವಾಗಿ ಸಾಮಿನ್ನು ಚಾತುರ್ಯವನ್ನು ಬೇಡುವಂತೆ ಕೆಲವೆಡೆ ಇಂದಿನ ಶಸ್ತ್ರ ಜೀವನವು ಸಂಸ್ಥೆಯಾಗಿ ಬಂದಿದೆ. ಜಾಗತಿಕ ಯುದ್ಧದ ಪರಿಣಾಮವಾಗಿ, ಸಾಮಾನ್ಯ ನೈತಿಕ ಮಟ್ಟವು ಇಂದು ಕೆಳಗಾಗಿದೆ. ಈ ಎಲ್ಲ ಪರಿಣಾಮಗಳಲ್ಲಿ ನಾವು ಯಶಸ್ವಿಯಾಗಿ ಕ್ರಾಂತಿಯನ್ನುಂಟುಮಾಡಿದೆವೆ. ನಮ್ಮ ಕಾರ್ಯ ಚಳವಳಿಗೆ ವ್ಯಾಪಕವಾದ ಸ್ವರೂಪ ಬಂದೀತು. ಸಾರ್ವಜನಿಕ ಜೀವನದಲ್ಲಿ ಕಾರ್ಯಮಾಡುವ ಕಾರ್ಯಕರ್ತರಿಗೆ ಇಂಥಾದೊಂದು ವ್ಯಕ್ತಿಯ ರಾಜಕಾರಣದತ್ತ ಮನಸ್ಸೆಳೆದವರಾಗಿದ್ದರು; ಮತ್ತು ಹಾಗಿರಬೇಕೆಂಬುದೂ ಸ್ವಾಭಾವಿಕವೇ ಆಗಿತ್ತು. ಸ್ವರಾಜ್ಯದಲ್ಲಿ ನಮಗೆ ಸಾಮಾಜಿಕ ಹಾಗು ಆರ್ಥಿಕ ಕ್ರಾಂತಿಯ ಚಳವಳಿಗೆ ಮೈಗೂಡಿಸಿಕೊಳ್ಳಬೇಕಾಗಿದೆ. ಆ ದೃಷ್ಟಿಯಿಂದ ಸಹಕಾರಿ ಚಳವಳಿಯಂತಹ ವಿಧಾಯಕ ಪ್ರವೃತ್ತಿಯ ಕಾರ್ಯ ಮಾಡಬಯಸುವ ಸಮಾಜಸೇವಕರು ದೊಡ್ಡದೊಂದು ಸಡೆಯಲ್ಲಿ ಉಂಟಾಗುವದು ಅತ್ಯಾವಶ್ಯಕವಾಗಿದೆ. ಇಂಥ ಸಮಾಜಸೇವಕರ ಪಡೆಯೇ ಸಹಕಾರಿ ಚಳವಳಿಯ ಮುಖಂಡತ್ವ ವಹಿಸಿಕೊಂಡು, ಆ ಚಳವಳಿಯ ಮುಖಾಂತರ ರಾಷ್ಟ್ರವನ್ನು ಕ್ರಾಂತಿಯತ್ತ ಒಯ್ಯಬೇಕಾಗಿದೆ.

———

ಸತ್ರವ್ಯವಹಾರ:—

ವಯಸ್ಕರ ವಿದ್ಯಾಭ್ಯಾಸ ಪ್ರಚಾರ

ಮದ್ರಾಸ ಸರ್ಕಾರದ ಅಜ್ಞೆಯಂತೆ ತಾಲೂಕು ಮತ್ತು ಜಿಲ್ಲಾ ಸ್ಥಳಗಳಲ್ಲಿ ವಯಸ್ಕರ ವಿದ್ಯಾಭ್ಯಾಸ ವಾರವನ್ನು ಆಚರಿಸಿದರು. ಬಾಲಕರಿಂದ ಪ್ರಭಾತಫೇರಿ ಸಭೆಗಳು ವಯಸ್ಕರ ವಿದ್ಯಾಭ್ಯಾಸ ಮಹತ್ವವನ್ನು ಕುರಿತು ಭಾಷಣಗಳಾದುವು. ಈ ಪ್ರಜಾರವನ್ನೆಲ್ಲಾ ನಗರಗಳಲ್ಲೇ ಆಯಿತು ಬಾರತವು ೭ ಲಕ್ಷ ಹಳ್ಳಿಗಳಿಂದ ಕೂಡಿದ ಪ್ರದೇಶ. ಅನೇಕ ದೊಡ್ಡ ಹಳ್ಳಿಗಳಲ್ಲಿ ದೊಡ್ಡವರಿಗೆ ಹಾಗಿರಲಿ ಮಕ್ಕಳಿಗೂ ವಿದ್ಯಾಭ್ಯಾಸದ ಏರ್ಪಾಟಿಲ್ಲ ಓದಲು ಯೋಗ್ಯವಾಗಿರುವ ಬಾಲಬಾಲೆಯರು ವೃಥಾ ಸಾಮಾನ್ಯೋಗಗಳಿಗಾಗಿ ಅಲೆಯುತ್ತಿರುವರು. ನಿರಂತರ ಪ್ರಚಾರಗಳಿಂದ ವಿದ್ಯಾಭ್ಯಾಸದ ಉದ್ದೇಶ ಸಾಧನೆಯಾಗುವುದಿಲ್ಲ ವಿದ್ಯಾನ್ವೇಷಿಗಳು ನಾಡಿನಲ್ಲಿ ಸ್ಥಾಪಿಸಿ ಕೊನೆಗೆ ಒಬ್ಬೊಬ್ಬರು ಹತ್ತುಜನ ನಿರಕ್ಷರಕುಕ್ಷಿಗಳನ್ನು ಅಕ್ಷರಸ್ಥರನ್ನಾಗಿ ಮಾಡಿದರೆ ಸಾರ್ಥಕವಾದೀತು ಹೀಗೆ ಗಳಿಸಿದ ವಿದ್ಯಾವಂತರು ಈ ಒಂದು ಮುಖ್ಯ ಕೆಲಸವನ್ನಾದರೂ ಕೈಗೊಂಡು ರಾತ್ರಿಶಾಲೆಗಳನ್ನು ನಡೆಸಿದರೆ ಬೇಸರವಿಲ್ಲ ಪ. ನಿರಕ್ಷರತೆಯು ದೂರವಾದೀತು.

"ವಿದ್ಯಾನ್ವೇಷಿ"

———

ಬಳ್ಳಾರಿ ಕಲೆಕ್ಟರ್

ಒಳ್ಳಾರಿಜಿಲ್ಲಾ ಕಲೆಕ್ಟರರಾಗಿದ್ದ ಮಿ ಸ್ಟರ್ ಅಲಾರ್ದಿಸ್‌ರವರು ನಿವೃತ್ತರಾಗಲು ಮದ್ರಾಸ್ ಸರ್ಕಾರವು ಅವ್ವಣಿಯಿಸ್ವೀಕಾರ ಅವರು ೧೦-೩-೫೦ ರಂದು ಛಾರ್ಜು ಕೊಟ್ಟು ಇಂಗ್ಲೆಂಡಿಗೆ ತೆರಳಿದರು. ಅವರ ಸ್ಥಳದಲ್ಲಿ ಈ ಹಿಂದೆ ತಾತ್ಕಾಲಿಕ ಕಲೆಕ್ಟರರಾಗಿದ್ದ ಶ್ರೀರಾಮರೆಡ್ಡಿಯವರು ಕಲೆಕ್ಟರರಾಗಿ ನಿಯುಕ್ತರಾಗಿರುವರು.

ಬಳ್ಳಾರಿ ಜಿಲ್ಲಾ ಜಡ್ಜಿಯವರ ಕೋರ್ಟಿನಲ್ಲಿ.

O. S. 12/50

ಲೇಟ್ ವತ್ಸಲಾಬಾಯಿ ವಿಠಲ್‌ರಾವ್ ಲಾಡ್ ಇವರ ಸಾಲಸಂಬಂಧದ ವಿಷಯದಲ್ಲಿ

ಅರ್ಜಿದಾರರು { 1) ಉದಯಸಿಂಗ್ 2) ಜಾಡೋಜ 3) ಶಿವಾಜಿ 4) ಏಕನಾಥ್

ಮೈನರ್ ನಿಗೇವಾನಿಕಂದಿ ವಿ. ಯಸ ಲಾಡ್.

ನೋಡೂರಿನಲ್ಲಿದ್ದು 3-7-48 ನೆಯ ದಿನಾಂಕ ಗತಿಸಿದ ವತ್ಸಲಾಬಾಯಿ ವಿಠಲ್‌ರಾವ್‌ಲಾಡ್‌ರ ಸಾಲಸಂಬಂಧ ಸರ್ಟಿಫಿಕೇಟ್ ಕೊಡಿಸಬೇಕೆಂದು ಅರ್ಜಿದಾರರಿಂದ ಈ ಕೋರ್ಟಿನಲ್ಲಿ 16-1-50 ಕ್ಕೆ ಅರ್ಜಿದಾಖಲಾಗಿದೆ ಸದರಿ ಅರ್ಜಿಯು ವಿಚಾರಣೆಗಾಗಿ 6-3-50 ಕ್ಕೆ ವಾಯ್ದೆ ಹಾಕಲಾಗಿದೆ ಸದರಿ ವತ್ಸಲಾಬಾಯಿಯು ವಾರಸುದಾರರು ಯಾರಾದರೂ ಇದ್ದಲ್ಲಿ ೧ ನೆಯತಾರೀಖು ಮುದ್ದಾಗಲಿ ವಕೀಲರಮೂಲಕವಾಗಲಿ ಹಾಜರಾಗಿ ತಕರಾರು ಮಾಡದಿದ್ದರೆ ಏಕಪಕ್ಷೀಯ ನಿರ್ಣಯವಾಗುವದೆಂದು ಈ ಮೂಲಕ ತಿಳಿಸಲಾಗಿದೆ.

ಬಳ್ಳಾರಿ 9-2-50 } B. S. ಹನುಮಂತರಾವ್, ಅಡ್ವಕೇಟ್

ಕಲಕತ್ತೆಯಲ್ಲಿ

ಪೂರ್ವಬಂಗಾಳ (ಪಾಕಿಸ್ತಾನ) ದಲ್ಲಿ ಅಲ್ಪಸಂಖ್ಯಾತರಾದ ಹಿಂದೂಗಳ ಮೇಲೆ ಅತ್ಯಾಚಾರವಾಗಿ ಅವರು ಕರಣ ಫಿಗಳಾಗಿ ಕಲ್ಕತ್ತೆಯ ಕಡೆಗೆ ಬಂದಕಾರಣ ಕಲ್ಕತ್ತೆಯಲ್ಲಿ ಗಲಭೆಗಳಾರಂಭವಾಗಿದ್ದು ಈಗ ಕಲ್ಕತ್ತೆಯ ಪರಿಸ್ಥಿತಿಯು ಸಮಾಧಾನಕರವಿದೆ.

———

ಸೇಲಂ ಜೈಲಿನಲ್ಲಿ ೨೦ ಜನ ಸತ್ತರು.

ಕಳೆದವಾರ ಸೇಲಂಜೈಲಿನಲ್ಲಿ ಕಮ್ಯೂನಿಸ್ಟ್ ಕೈದಿಗಳು ದಂಗೆಯನ್ನಾರಂಭಿಸಿದರೆಂಬ ಕಾರಣದಿಂದ ಗುಂಡು ಹಾಕಲ್ಪಟ್ಟು ೨೦ ಕೈದಿಗಳು ಸತ್ತರು. ೧೫೦ ಜನರಿಗೆ ಚಿಕ್ಕ ಘಾಯಗಳಾಗಿವೆ.

ವಚನಾಮೃತ

ಶಿವನೇದೈನ, ಕೊಲ್ಲದಿಪ್ಪುದೇ ಧರ್ಮ ಅಧರ್ಮದಿಂದೆ ಬಂದುದ
ನೊಲ್ಲದಿಪ್ಪುದೇ ನೇಮ ಆಶೆಯಿಲ್ಲದಿಪ್ಪುದೇ ತಪ, ದೋಷವಿಲ್ಲದಿ
ಪ್ಪುದೇ ಜಪ, ವಂಚನೆನಿಲ್ಲದಿಪ್ಪುದೇ ಭಕ್ತಿ ಹಚ್ಚುಕುಂದಿಲ್ಲದಿಪ್ಪುದೇ
ಸಮಯಾಚಾರ ಇದುಸತ್ಯ ಶಿವಬಲ್ಲ ಶಿವನಾಣೆ ಉರಿಲಿಂಗ ಪೆದ್ದ
ಪ್ರಿಯ. ವಿಶ್ವೇಶ್ವರಾ

ಕಳಬೇಡ, ಕೊಲಬೇಡ, ಹುಸಿಯನುಡಿಯಲುಬೇಡ ಮುನಿಯ
ಬೇಡ, ಅನ್ಯರಿಗೆ ಅಹಸ್ಯನುಡಿಯಲುಬೇಡ, ತನ್ನ ಬಣ್ಣಿಸಬೇಡ
ಇದಿರು ಹೆಳೆಯಲುಬೇಡ ಇದೇ ಅಂತರಂಗದಶುದ್ಧಿ, ಇದೇ ಬಹಿ
ರಂಗದ ಶುದ್ಧಿ, ಇದೇ ನಮ್ಮಕೂಡಲ ಸಂಗಮದೇವರ
ನೊಲಿಸುವಪರಿ.

ಸ್ವಾಗತಗೀತೆ

[ಶ್ರೀಮಾನ್ ಮಾಸ್ತಿ ಯವರು ಮದನಪಲ್ಲಿಗೆ ಬಂದಾಗ ಹೇಳಿದ ಗೀತೆ]

ಸ್ವಾಗತವು ಬಯಸುವೆವು ಕವಿತಾ ಶ್ರೀನಿವಾಸಂಗೆ
ಏಗಳವು ನುಡಿಯನ್ನು ಉಸ್ಸಿಗೆ ತರುವವಗೆ ||ಪಲ್ಲವಿ||

ಕರಿಕರಿಯ ಕಥೆಗಳಲಿ ಹೆಸರಾಂತನಾದವಗೆ
ಕರುನಾಡಿನೊಳು ಮೆರೆವ ಕವಿಕುಲದ ತಿಲಕಂಗೆ ||೧||

ಪರಿಪರಿಯ ವಿಧದಿಂದ ಹರಿದು ಹಂಚಾಗಿರುವ
ಕರುನಾಡ ಐಕ್ಯತೆಗೆ ಅನುದಿನವು ದುಡಿವವಗೆ ||೨||

ಮಾದರಿಯ ನಾಡಿಗೆನುತ ಅನವರತ ಶ್ರಮಿಪವಗೆ
ಹೃದಯ ಸಿಂಹಾಸನವ ಕನ್ನಡಾಂಬೆಗಿತ್ತವಗೆ ||೩||

ಸ್ವಾಗತವ ನೀಡುವೆವು ಅರಳು ಮೊಗ್ಗೆಗಳು ನಾವು
ಆಗಮಿಸಿಹ ವರ ಕನ್ನಡದ ಕೋಗಿಲೆಗೆ ||೪||

— T. N. R. ಕೃಷ್ಣವೇಣಿ.

ವಿದ್ಯಾಭ್ಯಾಸ:—

ಮುಖ್ಯಾಸ್ ವ್ಯಾಂಕಡಲ್ಲಿ ಶಿಕ್ಷಣ ಕ್ಕಾಗಿ ೧೯೫೦-೫೧ ರಲ್ಲಿ ಒಂದು ಕೋಟಿ ರೂಪಾಯಿಗಳನ್ನು ವೆಚ್ಚಮಾಡಲಿರುವ ರೆಂದು ವಿದ್ಯಾಶಾಖಾ ಮಂತ್ರಿ ಮಾಧವ ಮೆನನ್‌ರು ಹೇಳಿದರು, ಕಳೆದ ವರ್ಷ ೯ ಕೋಟಿ ೪೦ ಲಕ್ಷರೂ. ತೆಗೆದಿಡ ಲಾಗಿತ್ತು.

ಚುನಾವಣೆಗಳು:—

ಬರುವ ವರ್ಷ ಬೆಳಗಾಲದಲ್ಲಿ ನೂ ತನ ಘಟನೆಯನ್ವಯ ಸಾರ್ವತ್ರಿಕ ಚುನಾ ವಣೆಗಳು ನಡೆಯಲಿರುವವೆಂದು ಭಾರತ ಪ್ರಧಾನ ಮಂತ್ರಿ ನೆಹರೂರವರು ಪಾರ್ಲ ಮೆಂಟದಲ್ಲಿ ಹೇಳಿದರು.

ಫೆಬ್ರವರಿ- 1 ನೆಯ ತಾ. ದಿಂದ ಕೆಲವು ತರಹೆ ಬಟ್ಟೆ ಬೆಲೆಗಳಲ್ಲಿ ಕಡಮೆ ಯಾಗಲಿದೆ. ಸರ್ಕಾರವು ಹಣದಉಬ್ಬರ ವನ್ನು ಕಡಮೆ ಮಾಡಲು ನಿಶ್ಚಯಿಸಿದ್ದು ಈ ರೀತಿಯ ಕ್ರಮವನ್ನು ಕೈ ಕೊಳ್ಳ ಲಾಗಿದೆ.

ಹೊಸಪೇಟೆ ಡಿ. ಮು. ಕೋರ್ಟಿನಲ್ಲಿ.

O. S. 27/50 IA 42/50

ಕಿಲ್ಲಿಕ್ಯಾತರ ಗಂಗಪ್ಪ .... ವಾದಿ
ಚಿನ್ನಾಪುರ, ತಾ॥ ಹೊಸಪೇಟೆ .... ಅರ್ಜಿದಾರ

Vs.

1. ಮೇಲುಗಡಿ ಪೀರುಸಾಬು
2. ಹಿರೇ ಪಕೀರಸಾಬು
3. ಸುಲೇಮಾನ್ ಸಾಬು
4. ಯಮ್ಮಿಗನೂರು ಹೊನ್ನೂರು ಸಾಬು
5. ಮುಲ್ಲಾ ಖಾಜಾಸಾಬು
6. ರಾಜಾಸಾಬು
7. ಹುಸೇನ್‌ಸಾಬು

ಪ್ರತಿವಾದಿಗಳು
ರಿಸ್ಪಾಂಡೆಂಟ್ಸ್

ಎಲ್ಲರೂ ಹೊಸಪೇಟೆ ತಾಲೂಕಿನ
ಚಿನ್ನಾಪುರದ ಕಾಪುರಸ್ಥರು

ಹೊಸಪೇಟೆ ತಾ॥ ಮೆ ಟ್ರಿ ಮ ಜಿ ರಾ ಚಿನ್ನಾಪುರ ಗ್ರಾಮದ ತನ್ನ ಜವಿನಾನು ಸ. ನಂ. 235 ರಲ್ಲಿ ಪ್ರತಿವಾದಿಗಳು ಮತ್ತು ಸದ್ರಿ ಗ್ರಾಮದ ಇತರ ಮುಸಲ್ಮಾನರು ತಮ್ಮ ಕುಲಸ್ತರ ಶವಗಳನ್ನು ದಫನ್ (ಹುಗಿಯ) ಮಾಡದಂತೆ ಶಾಶ್ವತ ಇಂಜಂಕ್ಷನ್ ಕೋರಿ ಸದ್ರಿ ಗ್ರಾಮದ ಎಲ್ಲ ಮುಸಲ್ಮಾನರ ಪರವಾಗಿ ಪ್ರತಿವಾದಿಗಳ ಮೇಲೆ ಈ ದಾವೆ ಮಾಡಲಿಕ್ಕೆ O.I R 8C.P.C. ಪ್ರಕಾರಪರವಾನಿಗೆ ಕೊಡಬೇಕೆಂದು ವಾದಿ IA 42/50 ಅರ್ಜಿಹಾಕಿರುತ್ತಾನೆ ಸದ್ರಿಅರ್ಜಿವಾಯಿದೆ 25-2-50 ಇರುತ್ತದೆ ಅದಕ್ಕೆ ಸದ್ರಿ ಮುಸಲ್ಮಾನರ ಪೈಕಿ ಯಾರಿಗಾದರೂ ಆಕ್ಷೇಪಣೆ ಇದ್ದರೆ ಸದ್ರಿ ತೇದಿ 11 ಗಂಟೆಗೆ ಹಾಜರಾಗಿ ಆಕ್ಷೇಪಣೆ ತೀಸಕತಕ್ಕದ್ದು ಇಲ್ಲದಿದ್ರೆ ಯಕ್ಸ್‌ಪಾರ್ಟಿ ಹುಕುಂ ಆಗುವುದು.

ಹೊಸಪೇಟೆ } ತಟ್ಟಿ ಕೃಷ್ಣರಾವ್,
ತಾ॥ 13-2-50 } ತಟ್ಟಿ ರಂಗರಾವು
ವಾದಿ ವಕೀಲರು

ಮೈಸೂರಿನ ಹೊಸ ಮಂತ್ರಿ ಮಂಡಲದಲ್ಲಿ ಒಬ್ಬರು ಹೊಸಬರು ಮಾತ್ರ ಶ್ರೀ ಟಿ. ಸಿದ್ಧಲಿಂಗಯ್ಯನವರು ಪ್ರವೇಶ ಮಾಡಿದರು. ಕಾಂಗ್ರೆಸ್ಸೇತರರಾದ ಶ್ರೀ ಸುಬ್ಬರಾಯಶೆಟ್ಟಿ ಶ್ರೀ ಮಹಮ್ಮದ ಶರೀಫ ಮತ್ತು ಚಂದ್ರಶೇಖರಯ್ಯನವರು ರಾಜೀ ನಾಮೆ ಕೊಡಬೇಕಾಯಿತು.

ಜೇನಿನ ವ್ಯವಸಾಯ ಹಳ್ಳಿಗರಿಗೆ ಅನುಕೂಲ

"ನಮ್ಮ ದೇಶದ ಹಳ್ಳಿಗರಲ್ಲಿ ಎಷ್ಟೊ ಜನರು ನಿರುದ್ಯೋಗಿಗಳಾಗಿರುವರು. ಉದ್ಯೋಗಸ್ಥರೂ ಕೂಡ ವರ್ಷದಲ್ಲಿ ಎಷ್ಟೊಕಾಲ ಸಾಕಷ್ಟು ಕೆಲಸವಿಲ್ಲದಿರುವರು. ನಮ್ಮನ್ನೆದುರಿಸಿದ ಸಮಸ್ಯೆಯು ಮುಂದುಗುರಿದ ಪಾಶ್ಚಾತ್ಯ ನಿರುದ್ಯೋಗಿಕ ದೇಶಗಳನ್ನೆದುರಿಸಿದ ಸಮಸ್ಯೆಯಿಂದ ತೀರ ಭಿನ್ನವಾಗಿದೆ. ನಾವು ಹಳ್ಳಿಗರ ಗಳಿಕೆಯನ್ನು ಹೆಚ್ಚಿಸಲು ಉಪಪಂಥೆಗಳನ್ನು ಒದಗಿಸುವದವಶ್ಯವಿದೆ." ಹೀಗೆಂದು ಮುಂಬಯಿ ಪ್ರಾಂತದ ಅಭಿವೃದ್ಧಿ ಖಾತೆಯ ಮಂತ್ರಿ ಶ್ರೀ. ನಾಯಿಕ ನಿಂಬಾಳಕರರು ಡಿಸೆಂಬರ ೪ ರಂದು ಸಂಡಗಡ (ಬೆಳಗಾವಿ ಜಿಲ್ಲೆ) ದಲ್ಲಿ ಅಖಿಲ ಭಾರತ ಜೇನು ಸಾಕುವವರ ಸಭೆಯ ಪರಿಷತ್ತನ್ನೂ ಪ್ರದರ್ಶನವನ್ನೂ ಉದ್ಘಾಟಿಸುತ್ತ ಹೇಳಿದರು.

ಅವರು ತಮ್ಮ ಭಾಷಣದಲ್ಲಿ ಇನ್ನೂ ಹೇಳಿದ್ದಿನೆಂದರೆ:—

"ಸ್ಥಾನಿಕ ಪರಿಸ್ಥಿತಿಗೆ ಒಗ್ಗುವಂಥ ಉಪವ್ಯವಸಾಯ ದಂಧೆಗಳನ್ನು ಆಯ್ದುಕೊಳ್ಳಬೇಕು. ಶಕ್ಯವಿದ್ದಷ್ಟು ಅಗ್ಗವಾಗಿ ಉತ್ತಮಸರಕುಗಳ ಉತ್ಪಾದನೆಯಾಗುವಂತೆ ಅದನ್ನು ಸುವ್ಯಸ್ಥೆಗೊಳಿಸಬೇಕು. ಈ ಕಾರ್ಯ ನಡೆದರೆಮಾತ್ರ ನಮ್ಮ ಹಳ್ಳಿಗರ ಗಳಿಕೆಯನ್ನು ಹೆಚ್ಚಿಸಿದಂತಾಗುವದಲ್ಲದೆ ರಾಷ್ಟ್ರದ ಸಂಪತ್ತೂ ಬೆಳೆಯುವದು. ದೊಡ್ಡ ಪ್ರಮಾಣದ ಉದ್ಯಮಗಳನ್ನು ಕೈಕೊಳ್ಳಲು ಬಹಳ ಬಂಡವಲು ಬೇಕಾಗುತ್ತದೆ. ಮೇಲಾಗಿ ಅಂಥ ಯೋಜನೆಗಳು ಫಲಿಸುವದಕ್ಕೆ ಕಾಲಾವಧಿಯು ಬಹಳ ಹಿಡಿಯುವದು. ಆದುದರಿಂದ ಅವು ಯಾವಾಗಲೂ ನಮ್ಮುಂಥ ಬಡದೇಶದ ಅಳವಿನಲ್ಲಿ ಬರುವವೆಂದು ಹೇಳಲಿಕ್ಕಾಗದು

ಜೇನುಸಾಕುವ ಉದ್ಯಮ

"ನಮ್ಮ ದೇಶವಲ್ಲಿ ಜೇನುಸಾಕುವ ಉದ್ಯಮವು ಮಹತ್ವದ ಪಾತ್ರ ವಹಿಸಲಿದೆ. ಅದಕ್ಕೆ ಕಾರಣಗಳಿಲ್ಲದಿಲ್ಲ. ಇಲ್ಲಿ ಅರಣ್ಯಸಂಪತ್ತಿನಿಂದ ತುಂಬಿದ ಅನೇಕ ಪ್ರದೇಶಗಳಿವೆ. ಜೇನುಸಾಕುವ ಉದ್ಯಮಕ್ಕೆ ಇಂಥ ಪ್ರದೇಶಗಳ ವಾತಾವರಣವು ಬಹಳ ಅನುಕೂಲ. ಈ ಉದ್ಯಮಕ್ಕಾಗಿ ಸ್ವಲ್ಪ ವೆಚ್ಚದಲ್ಲಿ ಹಾಗೂ ಸುಲಭ ಪದ್ಧತಿಯಿಂದ ಹಳ್ಳಿಗರನ್ನು ತರಬೇತಿ ಗೊಳಿಸಬಹುದು. ಇದಕ್ಕಾಗಿ ಅವಶ್ಯವಿರುವ ಸಾಧನ ಸಲಕರಣೆಗಳು ಅಗ್ಗವಾಗಿ ದೊರಕುವವು. ಜೇನುಸಾಕುವ ಉದ್ಯೋಗವು ಸದಾಕಾಲ ಹಳ್ಳಿಗರ ಕೈತೊಗಿಸುವದಿಲ್ಲ. ಅವರು ತಮ್ಮ ಮುಖ್ಯ ಹೋರಿಯಾದ ಒಕ್ಕಲತನ ಇಲ್ಲವೆ ಕೋಟಗಾರಿಕೆಯ ಬಿಟ್ಟು ಉಪವ್ಯವಸಾಯವೆಂದು ಜೇನು ಸಾಕುವ ಉದ್ಯೋಗವನ್ನು ಕೈಕೊಳ್ಳಬೇಕು.. ಕುಟುಂಬದ ಇತರ ಜನರಿಂದಲೂ ಕೆಲಸ ತೆಗೆದುಕೊಂಡು ಇಡಿ ಕುಟುಂಬದ ಉತ್ಪನ್ನವನ್ನು ಹೆಚ್ಚಿಸಬಹುದು.

ಆರೋಗ್ಯವರ್ಧಕ ಜೇನುತುಪ್ಪ

"ಪಾಶ್ಚಾತ್ಯ ದೇಶಗಳಲ್ಲಿ ಜೇನುತುಪ್ಪವು ನಿತ್ಯದ ಆಹಾರದಲ್ಲಿ ಒಂದು ಮಹತ್ವದ ಅಂಗವಾಗಿದೆ. ಪಾಶ್ಚಿಮಾತ್ಯ ದೇಶಗಳಲ್ಲಿ ಆರೋಗ್ಯವರ್ಧಕ ಮತ್ತು ರುಚಿಕರ ಆಹಾರ ಪದಾರ್ಥವೆಂದು ಜೇನುತುಪ್ಪ ಬಳಸುವರು. ಇಲ್ಲಿರುವ ಪಾಶ್ಚಾತ್ಯ-ಪದ್ಧತಿ-ಪ್ರಿಯರಿಗೆ ಶುದ್ಧವಾದ ಜೇನುತುಪ್ಪ ಒದಗಿಸಿದರೆ ಅದನ್ನು ಅವರು ಅನಂದದಿಂದ ಕೊಳ್ಳುವರು. ವಿದೇಶಗಳಂತೂ ಜೇನುತುಪ್ಪವನ್ನು ಕಳುಹಿಸುವದು ಸಾಧ್ಯವಿದೆ. ಇಷ್ಟೇ ಅಲ್ಲ ಜೇನುತುಪ್ಪದಲ್ಲಿ ಔಷಧೀ ಗುಣಗಳೂ ಇವೆ. ದೇಶೀ ವೈದ್ಯಕೀ ಪದ್ಧತಿಗಳಿಗೆ ಪ್ರೋತ್ಸಾಹನೆ ಹೆಚ್ಚಿದಂತೆ ಜೇನುತುಪ್ಪದ ಬಳಕೆಯೂ ಹೆಚ್ಚುವದು. ಅದರೆ ಇದರಲ್ಲಿ ಇತರ ಪದಾರ್ಥಗಳನ್ನು ಕಲಬೆರಿಸಕೂಡದು. ಇದು ಮಹತ್ವದ ವಿಷಯ. ಈ ದೋಷಕ್ಕಾಗಿ ನಮ್ಮ ಸರಕುಗಳಿಗೆ ಅಮೇರಿಕೆಗೆ ಹಾಗೂ ಇತರ ದೇಶಗಳಲ್ಲಿ ಬೇಡಿಕೆ ಕಡಿಮೆಯಾಗುತ್ತಿದೆ. ಅವೇದುಸ್ಥಿತಿ ನಮ್ಮದೇಶದಲ್ಲೂ ಉಂಟಾಗುವದು ಹಿತಕರವಲ್ಲ. ಹಾಗೆ ಉಂಟಾವಲ್ಲಿ ವಿದೇಶಿ ಸರಕುಗಳಿಗೆ, ನಾವೇ ಅನುಜ್ಞೆಣ ಕೊಟ್ಟಂತಾಗುವದು ಏಕೆಂದರೆ ಅವು ಶುದ್ಧ ಹಾಗು ಖಾತ್ರಿಲಾಯಕ ಇರುವವು. ಈ ಗೊದೊದಗಿದ ಅರ್ಧಕ ಸರಕುಗಳನ್ನು ಅಯಾತಮಾಡಿಕೊಳ್ಳುವದರಿಂದ ನಮಗೆ ಹಾನಿಯಾಗುವದು.

"ಹಳ್ಳಿಗರಿಗೆ ತರಬೇತಿ ಒದಗಿಸುವದು ಈ ಉದ್ಯಮ ಕೈಕೊಳ್ಳಲು ಅವಶ್ಯಕ ಸಾಧನೆ ಸಲಕರಣೆಗಳನ್ನೊದಗಿಸುವದು, ಕೆಲವಿಷಯಗಳಲ್ಲಿ ಮೇಲ್ವಿಚಾರಣೆ ಜಾಗು ಕಾಂತ್ರಿಕ ನೆರವು ಕೊಡುವದು ಈ ಮೊದಲಾದ ವಿಷಯಗಳನ್ನು ಸಹಕಾರಿ ತಳಹದಿಯ ಮೇಲೆ ಬಿಡಿಸುವದು ಉತ್ತಮ ಪ್ರಾಂತದಲ್ಲಿ ಗ್ರಾಮೋದ್ಯೋಗ ಸಮಿತಿಯವರು ಈ ದಿಶೆಯಲ್ಲಿ ಸ್ತುತ್ಯ ಕಾರ್ಯವನ್ನು ಪ್ರಾರಂಭಿಸಿದ್ದಾರೆ."

ಆಂಧ್ರಪ್ರಾಂತ

"ಏಪ್ರಿಲ್ 1 ರೊಳಗಾಗಿ ಆಂಧ್ರಪ್ರಾಂತವು ಅಸ್ತಿತ್ವದಲ್ಲಿ ಬರುವದೆಂದು ನನ್ನ ವಿಶ್ವಾಸವಿದೆ. ಹೈದರಾಬಾದ್ ಸಂಸ್ಥಾನವನ್ನು ಭಾಷಾವಾರ ವಿಂಗಡಿಸುವದರಿಂದ ಕರ್ನಾಟಕ ಮಹಾರಾಷ್ಟ್ರ ಪ್ರಾಂತಗಳ ನಿರ್ಮಾಣಕ್ಕೂ ಅನುಕೂಲವಾಗುವದು ಬಳ್ಳಾರಿನಗರ ಮತ್ತು ತಾಲೂಕುಗಳನ್ನು ಆಂಧ್ರಪ್ರಾಂತದಲ್ಲಿ ಸೇರಿಸಬೇಕು....." ಎಂದುಮಾಗಿ ಹೈದರಾಬಾದ್ ಸಂಸ್ಥಾನದ ಓರಂಗಲ್ಲಿನಲ್ಲಿ ಕೂಡಿದ ವಿಶಾಲಾಂಧ್ರ ಮಹಾಸಮಿತಿಯ ಸ್ಥಾಯಿಸಭೆಯಲ್ಲಿ ಅಧ್ಯಕ್ಷರಾದ ಶ್ರೀ ಕಾಳೇಶ್ವರರಾಯರು ಹೇಳಿದರು ಆಂಧ್ರ ಪ್ರಾಂತವನ್ನು ಶೀಘ್ರವಾಗಿ ರಚಿಸುವದೇ ಈಸಂಸ್ಥೆಯ ಉದ್ದೇಶವಾಗಿದೆ. ಶ್ರೀ ಕಾಳೇಶ್ವರರಾಯರು ಮದ್ರಾಸ್ ಶಾಸನಸಭೆಯ ಸದಸ್ಯರುವರು.

ಮದ್ರಾಸ್ ನಗರವು ನಮ್ಮದು.

ತಮಿಳನಾಡಿನ ರಾಜಕೀಯ ಪುಢಾರಿಕ್ಕು ಶ್ರೀ ಅಣ್ಣಾಮಲಿಪಿಳ್ಳೆಯವರ ಅಧ್ಯಕ್ಷತೆಯಲ್ಲಿ ಕೂಡಿದಾಗ ಆಂಧ್ರರು ಮದ್ರಾಸ್ ನಗರವನ್ನು ಬೇಡುವದು ಅನ್ಯಾಯ್ಯವೆಂದು ಎಲ್ಲಾ ವಿಧಗಳಿಂದ ಮದ್ರಾಸ್ ತಮಿಳರಿಗೇ ಸೇರಿದ್ದೆಂದು ಆಂಧ್ರರು ಈ ಸಂಬಂಧದ ಚಳವಳಿ ನಿಲ್ಲಿಸಬಿದ್ದರೆ ಆಂಧ್ರ ತಮಿಳರಲ್ಲಿ ದ್ವೇಷವು ಬೆಳೆಯುವದೆಂದು ಭಾಷಣಗಳಾದವು.

ಬರಗಾಲದಲ್ಲಿ ಮೇವಿನ ಅವಶ್ಯಕತೆ

ಮೇವಿನ ಗಿಡಗಳು:— ಮೇವನ್ನು ಒದವಿಸುವ ಗಿಡಗಳು ಬರಗಾಲದಲ್ಲಿ ಬಹಳ ಮಹತ್ವವಾಗಿವೆ. ಯಾವ ಬಗೆಯ ಮೇವೂ ದೊರೆಯದಾದರೆ ಅವು ದನಗಳಿಗೆ ಹಸಿರೆಲೆಗಳನ್ನು ಒದಗಿಸಿ ಅವುಗಳನ್ನು ಉಳಿಸುವವು. ಇದರಿಂದ ದನಗಳು ದಷ್ಟಪುಷ್ಟವು ಆಗಬಲ್ಲವು ಅದ್ದರಿಂದ ಬರಗಾಲದ ಭೀತಿಯಿರುವ ಪ್ರದೇಶದಲ್ಲಿ ಇವುಗಳನ್ನು ನೆಟ್ಟು ಬೆಳೆಸುವದು ಅಗತ್ಯವಿದೆ.

ಬರಗಾಲದಲ್ಲಿ ಹಸಿರು ಮೇವು ದೊರೆಯದ್ದರಿಂದ ಕೇವಲ ಒಣ ಮೇವಿನ ಮೇಲೆ ಇಟ್ಟ ದನಗಳು ಶಕ್ತಿಗುಂದುವದು. ಇಷ್ಟೇ ಅಲ್ಲ ಅವು ಅನೇಕ ರೋಗಗಳ ತವರುಮನೆ ಆಗುವವು 'ಅ' ಆಹಾರ ಸತ್ವದ ಅಭಾವದಿಂದ ಉಂಟಾಗುವ ರೋಗಗಳ (ಅವಿಟಾಮಿನೊಸಿಸ್ 'ಎ') ಲಕ್ಷಣಗಳು ಕಾಣಬರುವವು ಮೇವಿನ ತೀವ್ರ ಕೊರತೆಯಾದಾಗ ಗಿಡಗಳಿಂದ ಬಹಳ ಪ್ರಯೋಜನವುಂಟು ದನಗಳಿಗೆ ಬೇಕಾದ ಹಸಿರುಮೇವನ್ನು ಅವು ಒದಗಿಸುವವು ಇದರಿಂದ ದನಗಳು ಜೀವ ಸಾವಿನಿಂದ ಪಾರಾಗುವವಿಷ್ಟೇ ಅಲ್ಲದೆ ಹೊಲದಕೆಲಸ ಮುಂಕಾದವುಗಳಿಗೂ ಅವು ಯೋಗ್ಯವಾಗಿರುವವು. ಮೇವಿಗಾಗಿ ಉಪಯುಕ್ತವಿರುವ ಗಿಡಗಳ ಎಲೆಗಳನ್ನು ಎನ್ ಸಾಯಲೇಜ (ಹನ್ನೆರಡು ತಿಂಗಳು ಹಸಿರಾಗಿರುವಂತೆ) ಮಾಡಲು ಬರುವ ಜಾಲಿ, ಹೊನ್ನೆರಿಕೆ ನೀರಲ, ಹಲಸು ಮುಂತಾದವುಗಳು ಕೆಲವು ಮಹತ್ವದ ಗಿಡಗಳಾಗಿವೆ.

ಕೊನೆಯ ಮಾತು.

ಬರಗಾಲದಲ್ಲಿ ಜನಗಳಿಗಿಂತ ದನಗಳಿಗೇ ಹೆಚ್ಚು ಕಷ್ಟಕ್ಕೆ ಗುರಿಯಾಗುವವು. ಮೇವಿನ ಅಭಾವದಿಂದ ಸೊರಗಿ ಕಡ್ಡಿಯಾದ ದನಗಳನ್ನು ಮತ್ತೆ ಸೊಕ್ಕಿಸಬೇಕಾದರೆ ಬಹಳ ವೆಚ್ಚ ಬರುವದು ಮೇವಿನ ಅಭಾವದ ಮೂಲಕ ದನಗಳನ್ನು ಸಾಕುವದೇ ಕಠಿಣವಾಗುವದು. ಹೀಗಾಗದಂತೆ ನೋಡಿಕೊಳ್ಳಲು ಮೇವಿನ ವ್ಯವಸ್ಥೆ ಮಾಡುವದು ಅಗತ್ಯವಾಗಿದೆ ದನಗಳ ಜೀವಮಾನದ ವರೆಗೂ ಅವನ್ನು ಸುಸ್ಥಿತಿಯಲ್ಲಿಟ್ಟರೇ ಲಾಭವಾಗುವದು. ಒಮ್ಮೆಯಾದರೂ ಅವುಗಳಿಗೆ ಮೇವಿನ ತುಟಾಗ್ರತೆ ಯಾಗಬಾರದು. ಅದ್ದರಿಂದ ದನಕರಗಳುಳ್ಳವರು, ಒಣ ಹುಲ್ಲು, ಕಣಕೆ, ಸಾಯಲೇಜ ಮುಂಕಾದ ರೂಪದಿಂದ ಸಾಕಷ್ಟು ಮೇವನ್ನು ಸಂಗ್ರಹಿಸಿ ಇಡಲೇಬೇಕು.

ಬರಗಾಲದಲ್ಲಿ ದೊಡ್ಡ ಜಾತಿಯ ದನಗಳಿಗೆ ಈ ಕಳಿಗೆ ಕಾಣಿಸಿದಂತೆ ಮೇವು ಹಾಕಬೇಕೆಂದು ಮುಂಬಯಿ ಸರಕಾರದ ಒಕ್ಕಲತನ ಖಾತೆಯು ಸಲಹೆಯಿತ್ತಿದೆ:-

ಒಣಹುಲ್ಲು ಅಥವಾ ಕಣಕೆ	೧೦ ಪೌಂಡು
ಹತ್ತಿಕಾಳು ಅಥವಾ ಕಡಲೆ ಹೊಟ್ಟು	೨ ಪೌಂಡು
ಯಾವದಾದರೂ ಬೇಳೆ ಕಾಳು	೩ ಪೌಂಡು
ಸೇಂಗಾ ಇತ್ಯಾದಿ	೨ ಪೌಂಡು
ಉಪ್ಪು	೨ ಔನ್ಸ

ಬರಗಾಲದಲ್ಲಿ ಎಲ್ಲ ದನಗಳನ್ನು ಒತ್ತೊಟ್ಟಿಗೇ ಇಟ್ಟು, ಸಾಕುವದು ಹೆಚ್ಚು ಯೋಗ್ಯವಾಗುವದು. ಆದರೆ ಇಂಥ ವ್ಯವಸ್ಥೆಯಿಟ್ಟರೆ ಸ್ವಲ್ಪ ಗಟ್ಟಿ ಮುಟ್ಟಾದ ದನವು ತನಗಿಂತ ಅಶಕ್ತವಾದ ದನದ ಆಹಾರವನ್ನು ಕಸಿದು ತಿಂದು ಕೊಬ್ಬುವದು ಸ್ವಾಭಾವಿಕವಾಗಿದೆ. ಅದ್ದರಿಂದ ಪ್ರತಿ ದನದ ಮೇಲೂ ಮೇಲ್ವಿಚಾರಣೆ ಅವಶ್ಯವಾಗುವದು. ಯಾವುದಾದರೂ ದನವು ಸೊರಗುತ್ತ ನಡೆದುದು ಕಂಡು ಬಂದರೆ ಅದಕ್ಕೆ ಕೂಡಲೇ ಹತ್ತಿಕಾಳು ಹಿಂಡೀ ಮೊದಲಾದವುಗಳನ್ನು ಹೆಚ್ಚಿಗೆ ಹಾಕುಬೇಕು.

ಹಿಂದೀ ಮಹಾ ವಿದ್ಯಾಲಯ, ಬಳ್ಳಾರಿ,

[1931 ಸ್ಥಾಪಿತ. ಬಳ್ಳಾರಿ ಜಿಲ್ಲಾ ಹಿಂದೀ ಪ್ರೇಮೀಮಂಡಲದಾಶ್ರಯದಲ್ಲಿ, ರಿಜಿಸ್ಟರ್ಡ.]

ಮದ್ರಾಸ್ ಸರ್ಕಾರದಿಂದ ಮಾನ್ಯತೆ ಇದೆ.

ಪ್ರಾರಂಭಿಕ ವರ್ಗಗಳಿಗೆ ಮಾಸಿಕ 3/- ಶುಲ್ಕ — ಉನ್ನತ ವರ್ಗಗಳಿಗೆ ಮಾಸಿಕ 5/- ಶುಲ್ಕ

ವಾರ್ಡಲಾ ಹೈಸ್ಕೂಲ್ ಕಟ್ಟಡದಲ್ಲಿ ಪ್ರಾತಃಕಾಲ—ಸಾಯಂಕಾಲ ಹಿಂದೀ ಕಾಲೇಜ್‌ದ ವರ್ಗಗಳು ನಡೆಯುತ್ತಿವೆ ವಿಶಾರದ — ಪ್ರಚಾರಕ ವರ್ಗಗಳಲ್ಲದೆ ಪ್ರಾರಂಭಿಕ ವರ್ಗಗಳಿಗೂ ಪ್ರವೇಶವಿದೆ. ವರ್ಗಗಳಿಗೆ ಸಂಬಂಧಿಸಿದ ಪಾಠ ಪುಸ್ತಕಗಳು ವಿದ್ಯಾಲಯದಲ್ಲಿ ದೊರೆಯುತ್ತವೆ ಒಳ್ಳೆಯ ಪುಸ್ತಕಭಂಡಾರವಿದೆ. ಶ್ರೇಷ್ಠ ವಾರಪತ್ರಿಕೆ, ಮಾಸಪತ್ರಿಕೆಗಳು ಲಭ್ಯ ಇತರ ವಿವರಗಳಿಗೆ ಸ್ಟಾಂಪಿಟ್ಟು ಬರೆಯಿರಿ.

ಪ್ರಿನ್ಸಿಪಾಲ್.

NAVA BHARAT BELLARY. (Reg. No. M. 4746)

20—2—50

ನವಭಾರತ ಬಳ್ಳಾರಿ.

(Nationalist Weekly)

ಚಂದಾದರಗಳು.	Subscription Rates.
ವರ್ಷಕ್ಕೆ 5—0—0	One Year 5—0—0
6 ತಿಂಗಳಿಗೆ 3—0—0	Six months 3—0—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.	Subscription will not be accepted for less than 6 months

To

Sri.....

.....

.....

Printed at Krishna Printing Works. Edited & Published by T. B. Keshava Rao.

JAI—HIND

ನವಚೇತನ

ಬಳ್ಳಾರಿಯ
ಉಜ್ವಲ ರಾಷ್ಟ್ರೀಯ ವಾರಪತ್ರಿಕೆ.
*
ಉತ್ತಿಷ್ಠತ! ಜಾಗ್ರತ!!
ನ್ಯಾಸ್ಯವರಾನ್ನಿ ಬೋಧತ!!!
*
ಸಂಪಾದಕ ಮತ್ತು ಪ್ರಕಾಶಕ:—
ಟಿ. ಬಿ. ಕೇಶವರಾವು.

ಸಂ ೧೩ | ಸೋಮವಾರ ೨೭ ಫಿಬ್ರವರಿ ೧೯೪೦ | ಸಂಚಿಕೆ ೬

ಭೂವಿಗಳ ಪ್ರಥಾವಿ ವಸೂಲಿ

ಇಲಿದ ಎರಡು ವರ್ಷಗಳಲ್ಲಿ ಆಹಾರ ಧಾನ್ಯಗಳನ್ನು ಬೆಳೆಯಲು ಈ ಪ್ರಾಂತ ಸರ್ಕಾರದಿಂದ ಸಹಾಯದ್ರವ್ಯ (Subsidy) ಮತ್ತು ಸಾಲವನ್ನು ಪಡೆದ ರೈತರಲ್ಲಿ ಕೆಲವರು ಭೂವಿಗಳನ್ನು ಸಂಪೂರ್ತಿಮಾಡದಕಾರಣ ತಾವು ಕೊಟ್ಟ ಋಣವನ್ನು ಸರ್ಕಾರವು ಪೂರ್ಣವಾಗಿ ಒಂದೇಸಲ ವಸೂಲಿಮಾಡಲು ಆಜ್ಞೆ ಇತ್ತಿದೆ (Summary Recovery)

ಭೂವಿಗಳನ್ನು ಸಂಪೂರ್ತಿಮಾಡದಿರಲು ಕಾರಣಗಳುಂಟು. ಸರ್ಕಾರವು ಉದ್ದೇಶಿಸಿದ ಪ್ರಯೋಜನವು ರೈತರಿಗೆ ಮುಟ್ಟಿಲ್ಲ. ಅಲ್ಲದೆ ಬಹಳ ಸುಲಭವಾಗಿ ದೊಡ್ಡ ಪ್ರಮಾಣದ ಪೈರನ್ನು ಸಿಗುವಂತೆ ರೈತರು ಬಾಯ್ತೆರೆದರು. ದೊರೆತ ಋಣದಲ್ಲಿ ಕುಟುಂಬದ ಅಗತ್ಯಗಳಿಗಾಗಿ ಕೆಲಭಾಗವನ್ನು ಖರ್ಚುಮಾಡಿಕೊಂಡು ಉಳಿದ ಋಣದಿಂದ ಕೂಡಿಗಳನ್ನು ತೋಡಿ ಅಧಿಕಾರಿಗಳು ಬಂದಾಗ ಕೂಡಿಗಳನ್ನು ತೋರಿಸಿದರು. ಇದು ಸಹ್ಯವಾದ ವಿಷಯ.

ಆದರೆ ಋಣವನ್ನು ಮುಟ್ಟಿದೆಯೆಂದು ಬರೆದುಕೊಟ್ಟ ರೈತರು ಸರ್ಕಾರದ ಸಾಲದಿಂದ ಹೇಗೆ ಮುಕ್ತರಾಗಬಲ್ಲರು? ಅದನ್ನು ತೀರ್ಪುಕೊಡಬೇಕಾಗುತ್ತದೆ. ಅದರಿಂದೇನಲ್ಲ ಈ ಋಣವನ್ನು ಕೊಡಜೇಕೆನ್ನುವದೂ. ಅದಕ್ಕಾಗಿ ಚರಾಚರಾಸ್ತಿಗಳ ಜಪ್ತಿಕ್ರಮವನ್ನು ಕೈಗೊಳ್ಳುವುದೂ ಸರ್ಕಾರಕ್ಕೆ ಯೋಗ್ಯವಾದುದಲ್ಲ. ಎಷ್ಟು ದೊಡ್ಡ ರೈತನೆಂದರೂ ಶೀಘ್ರವಾಗಿ ಋಣ ಒಡಗಿಸುವುದು ಸುಲಭವಲ್ಲ. ಈ ಕಾರಣ ಸುಲಭಕಂತುಗಳನ್ನು, ಸಾಕಷ್ಟು ಸಮಯವನ್ನು ಕೊಡಜೇಕಾದುದು ರೈತರ ಮತ್ತು ವ್ಯವಸಾಯದ ಹಿತದ ದೃಷ್ಟಿಯಿಂದ ಮುಖ್ಯವಾದುದಾಗಿದೆ.

ಎತ್ತುಗಳನ್ನು ಹಿಡಿದು ದೊಡ್ಡಿಗಳಲ್ಲಿ ಹಾಕಿ ಉಪವಾಸ ಕೊಲ್ಲುತ್ತಿರುವ ಉದಾಹರಣೆಗಳೂ ಒಂದಿವೆ. ಅಲ್ಲದೆ ವಸೂಲಿಮಾಡಲು ಹೋದ ರಿವೆನ್ಯೂ ಇನ್ಸಪೆಕ್ಟರನ್ನು ಬೆದರಿಸಿದ ಉದಾಹರಣೆಯು ಗೊತ್ತಾಗಿದೆ. ಸರ್ಕಾರದ ಅಧಿಕಾರಿಗಳು ಸೌಮ್ಯದಿಂದ ಅಧಿಕಾರದ ಉಪಯೋಗ ಮಾಡಿ ನಿಯಮನಿಬಂಧನೆಗಳನ್ನು ಜಾರಿಯಲ್ಲಿತರಬೇಕು ದಮೆ ದಾಕ್ಷಿಣ್ಯ ವಿವೇಕದ ಉಪಯೋಗವಾಗಬೇಕು. ರೈತರಾದರೂ ಸರ್ಕಾರದ ಅಧಿಕಾರಿಗಳ ಕಷ್ಟಗಳನ್ನರಿತು ದೌರ್ಜನ್ಯಕೃತ್ಯಗಳಿಗೆ ಹೋಗಬಾರದು.

ಭಾರತ ಪ್ರಜಾ ರಾಜ್ಯ



ಪ್ರತಿಯೊಂದು ಹಳ್ಳಿಯೂ ಪ್ರಜಾರಾಜ್ಯವಾಗುವಂತೆ (ಪೂರ್ಣ ಅಧಿಕಾರವುಳ್ಳ ಪಂಚಾಯಿತಿಯನ್ನೊಳಗೊಳ್ಳುವಂತೆ) ಸ್ವಾತಂತ್ರ್ಯವು ಹಿಂದುಸ್ಥಾನದಲ್ಲಿ ಮೂಲದಿಂದಲೆ ಪ್ರಾರಂಭವಾಗಬೇಕು. ಹೀಗಾಗಬೇಕಾದರೆ ಪ್ರತಿಯೊಂದು ಹಳ್ಳಿಯು ಸ್ವಾವಲಂಬಿಯಾಗಬೇಕು. ತನ್ನ ವ್ಯವಹಾರಗಳನ್ನು ತಾನೇ ನೋಡಿಕೊಳ್ಳಬೇಕು. ಅಷ್ಟೇ ಏಕೆ, ಇಡಿ ಜಗತ್ತು ಎದುರು ನಿಂತರೂ ಸಂರಕ್ಷಣೆ ಮಾಡಿಕೊಳ್ಳುವಷ್ಟು ಶಕ್ತಿಯನ್ನು ಅದಕ್ಕೆ ಬರಬೇಕು. ಅಂದರೆ ಒಟ್ಟಿನ ಮೇಲೆ ವ್ಯಕ್ತಿಯೇ (ರಾಷ್ಟ್ರವು) ಘಟಕವಾಗುವನು ನೆರೆಹೊರೆಯವರು ಅಥವಾ ಹೊರಗಿನ ಜಗವು ತಾವಾಗಿಯೇ ಸಹಾಯ ನೀಡಿದರೆ ಸಹಾಯ ಕೈಗೆದುಕೊಳ್ಳಬಹುದು ಆದರೆ ಅನು ಸ್ವತಂತ್ರ ಹಾಗು ಸ್ವಸಂತೋಷದ ಮತ್ತು ಪರಸ್ಪರ ಅನುಕೂಲತೆಯ ವಿಸ್ತಾರದ ಇಂಥ ಸಮಾಜವು ಸುಸಂಸ್ಕೃತನಿರತೇ ಬೇಕು. ಇಂಥ ಸಮಾಜದಲ್ಲಿಯ ಸ್ತ್ರೀಯರು ಪರಿಪೂರ್ಣತೆಯನ್ನು ಪಡೆಯಲು ಏನು ಬೇಕು ಏನು ಬೇಡ ಎಂಬುದರ ಸ್ಪಷ್ಟ ಕಲ್ಪನೆ ಇರಲು ಸಾಕು. ಅಷ್ಟೇ ಶ್ರಮವನ್ನಾಡಿದರೆ ಇತರರಿಗೂ ನಿಲುಕುವಂತಹುದನ್ನೇ ಅವರು ಬಯಸಬೇಕು.

ನನಗೆ ಏನು ಬೇಕೆಂಬುದರ ಸುಸ್ಪಷ್ಟ ಕಲ್ಪನೆ ನನಗಿರಬೇಕು. ಅಂದರೆ ಅದಿಲ್ಲದಿದ್ದರೂ ಅದರಂತಹುದು ನನಗೆ ದೊರೆಯಬಹುದು. ಹಿಂದುಸ್ಥಾನದಲ್ಲಿ ಹಳ್ಳಿ ಹಳ್ಳಿಗೆ ಪ್ರಜಾರಾಜ್ಯವು ಸ್ಥಾಪಿತವಾಗುವದಾದರೆ ಕೋಟಿಯುವರು ಮೊದಲಿನವರು ಎಂಬ ಭೇದಭಾವವಿಲ್ಲದೆ ಸವಾಜವು ಸತ್ಕೃಷ್ಟಿಯಿಂದ ಬಹುದು.

ದಿವಂಗತ ಶರತಬೋಸರು

ಬಂಗಾಲದಲ್ಲಿ ಬೋಸರ ಹೆಸರೆಂದರೆ ನಡುಗಳ್ಳ ವಿದ್ಯುತ್ ಪ್ರವಾಹವಾದಂತೆ ಎಂಬು ಸುಭಾಸಚಂದ್ರಬೋಸರು ಭಾರತ ಸ್ವಾತಂತ್ರ್ಯಕ್ಕಾಗಿ ಯುದ್ಧಹೂಡಿ ಬ್ರಿಟಿಷ್ ಸೈನ್ಯವನ್ನು ಕಟ್ಟಿ ಜಪಾನರಾಜರುಗಳ ಸಹಾಯವನ್ನು ಪಡೆದು ಅಸ್ಸಾಮಿನ ಇಂಫಾಲದವರೆಗೂ ಬಂದಿದ್ದ ಶರತ್‌ಬೋಸರು ಚಿತ್ತರಂಜನದಾಸರ ಸಹೋದರರು ಮತ್ತು ಅಂತರ ವ್ಯಾಂತರ ಮಂತ್ರಿಯಾಗಿ ಅನೇಕಬಾರಿ ಕಾರಾಗೃಹವಾಸವನ್ನನುಭವಿಸಿದವರು. ಇವರು ವಿದ್ಯಾವಂತರೂ ಬುದ್ಧಿವಂತರೂ ಆಗಿದ್ದಾಗ್ಯೂ ವ್ಯಾಂತರಾಜಕೀಯ ರಥವೇರಿಸಂತಾಯೋಗಿದ್ದ ಕಾರಣ ಅನೇಕ ಮುಖ್ಯಮಂತ್ರಿಗಳಾದ ಫಜಲೂಲ ಹಕ್ಕರು ಅವರನ್ನು ಗೃಹಶಾಖೆಯ ಮಂತ್ರಿಗಳಾಗಿ ನಿಯಮಿಸಬೇಕಾಯಿತು. ಯುದ್ಧಕಾಲದಲ್ಲಿ ಬ್ರಿಟಿಶ ಸರಕಾರವು ಇವರನ್ನು ಸ್ಥಾನಬದ್ಧತೆಯಲ್ಲಿರಿಸಿತ್ತು ಆವರು ಜೈಲಿನಲ್ಲಿರಬೇಕಾದರೇ ಅವರು ಶಾಸನ ಸಭೆಗೆ ಆರಿಸಿಬಂದರು ಕೇಂದ್ರ ಶಾಸನ ಸಭೆಯಲ್ಲಿನ ಸ್ಥಾನಕ್ಕೆ ಅವರೇ ಯೂರೋಪದಲ್ಲಿದ್ದಾಗ ಕಾಂಗ್ರೆಸ್ ಉಮೇದುವಾರನನ್ನು ಬಹುಮತದಿಂದ ಸೋಲಿಸಿ ಆರಿಸಿಬಂದರು. ಇವರು ರಾಜಕೀಯದಲ್ಲಿ ಕಾಂಗ್ರೆಸ್‌ಗೆ ವಿರೋಧಿಗಳಾಗಿ ಇತ್ತೀಚೆಗೆ ಪರ್ತಿಸಿದರೂ ಇವರ ದೇಶಪ್ರೇಮವು ನಿಷ್ಕಳಂಕವಾಗಿತ್ತು. ಇವರಿಗೆ 4 ಜನ ಪುತ್ರರೂ 4 ಜನ ಪುತ್ರಿಯರೂ ಇದ್ದಾರೆ. ಇವರ ಆಸ್ತಿಕ್ಕೆ ಶಾತಿಯನ್ನು ಕುಟುಂಬದವರಿಗೆ ಸವಾಧಾನವನ್ನು ಭಗವಂತನು ಪ್ರಸಾದಿಸಲಿ

ದನ ಸಾಕುವ ಸಾಂಘಿಕ ಪದ್ಧತಿ

ಮಹಾತ್ಮಾ ಗಾಂಧಿ ಅವರ ಲೇಖನ

"ಗೋಸೇವೆಯ ಮಾರ್ಗದಲ್ಲಿ ಹೆಜ್ಜೆ ಹೆಜ್ಜೆಗೆ ಅಡ್ಡಿ ಆತಂಕಗಳಿವೆ. ಈ ಅಡ್ಡಿ ನಿವಾರಿಸಿದ ಹೊರತು ಮಾರ್ಗವು ಸುಗಮವಾಗದು. ಮನೆಮನೆಗೆ ದನಕರುಗಳನ್ನು ಸಾಕುವದಕ್ಕಿಂತ ಅವುಗಳನ್ನು ಸಾಂಘಿಕವಾಗಿ ಒಂದೆಡೆಗೆ ಕಟ್ಟಿದರೆ ಇಪ್ಪೊಂದು ಲಾಭವಿದೆಂಬುದನ್ನು ತೋರಿಸಲೆಣಿಸಿದ್ದೇನೆ. [ಗಾಂಧಿಜಿ]

ಮೊನ್ನೆ ಮೊನ್ನೆ ಸೇರಿದ ಗೋಸೇವಾ ಸಂಘ ಪರಿಷತ್ತಿನ ಎದುರಿಗೆ ಒಂದು ಮಹತ್ವದ ಪ್ರಶ್ನೆ ಬಂದಿತ್ತು. ಒಬ್ಬೊಬ್ಬರು ಪ್ರತ್ಯೇಕವಾಗಿ ದನಕರುಗಳನ್ನು ಸಾಕಬೇಕೋ ಅಥವಾ ಅವುಗಳನ್ನು ಎಲ್ಲರೂ ಕೂಡಿ ಸಾಂಘಿಕವಾಗಿ ಸಾಕುವದುತ್ತಮವೊ? ಮನೆಮನೆಗೆ ಆಕಳುಗಳನ್ನು ಸಾಕಿದರೆ ಅದರ ಕಲ್ಯಾಣವಾಗದೆಂದು ನಾನು ಎಳ್ಳಷ್ಟು ಅನುಮಾನವಿಲ್ಲದೆ ಹೇಳಿದೆ. ಸಾಂಘಿಕ ಪದ್ಧತಿಯಿಂದ ಕಟ್ಟಿದರೆ ಮಾತ್ರ ಆಕಳಿನ ಉದ್ಧಾರವಾಗಬಲ್ಲದು, ಅದರೊಡನೆ ಎಮ್ಮೆಯ ಉದ್ಧಾರವೂ ಆಗುವದು. ದನಕರುಗಳನ್ನು ತನ್ನ ಮನೆಯಲ್ಲಿ ಕಟ್ಟಿಕೊಂಡು, ಅವುಗಳ ಆರೈಕೆಯನ್ನು ಯೋಗ್ಯ ರೀತಿಯಿಂದ ಶಾಸ್ತ್ರೀಯಪದ್ಧತಿಯಿಂದ ನೋಡಿಕೊಳ್ಳುವದೆಂದರೆ ಸಾಮಾನ್ಯ ಒಕ್ಕಲಿಗನಿಗೆ ನೀಗದ ಮಾತು. ಸಾಂಘಿಕ ಪದ್ಧತಿಯನ್ನು ಅವಲಂಬಿಸಿದಿರುವದೂ ಆಕಳನ ಅದೇಕೆ ಎಲ್ಲ ದನಕರುಗಳ ಕಂಗಾಲಸ್ಥಿತಿಗೆ ಒಂದು ಕಾರಣವಾಗಿದೆ.

ಸಹಕಾರದ ಮೇಲ್ಮನೆ

ಜಗತ್ತಿನಲ್ಲಿ ಇಂದು ಪ್ರತಿಯೊಂದು ಕ್ಷೇತ್ರದಲ್ಲಿ ಸಹಕಾರ ಅಥವಾ ಸಾಂಘಿಕ ಪ್ರಯತ್ನ ಕಂಡುಬರುತ್ತಿದೆ. ಈ ವಿಷಯದಲ್ಲಿ ಎಷ್ಟೋ ಪ್ರಗತಿ ಆಗಿದೆ, ಆಗುತ್ತಿದೆ. ನಮ್ಮ ದೇಶದಲ್ಲೂ ಸಾಂಘಿಕ ಪದ್ಧತಿಯು ಹಣಕಿಕ್ಕಿದೆ; ಆದರೆ ತೀರ ವಿಕೃತಸ್ವರೂಪದಲ್ಲಿ ಅದರ ಲಾಭವು ನಮ್ಮ ಬಡಜನರ ಪದರಲ್ಲಿ ಬೀಳಲೊಲ್ಲದು. ಜನಸಂಖ್ಯೆ ಬೆಳೆದಂತೆ ಹೊಲಗಳೆಲ್ಲ ತುಂಡುಗಳಾಗಿ ಅವುಗಳ ಕ್ಷೇತ್ರದಿನದಿನಕ್ಕೆ, ಕಡಿಮೆಯಾಗುತ್ತ ನಡೆದಿದೆ. ಒಂದು ತುಂಡು ಹೊಲದ ಆಧಾರದ ಮೇಲಿಂದ ಒಕ್ಕಲಿಗನು ಹೇಗೆ ತನ್ನ ಮನೆಯಲ್ಲಿ ದನಕರುಗಳನ್ನು ಕಟ್ಟಬೇಕು? ಕಟ್ಟಿದರೂ ಅವನಿಗೆ ಅದು ಮೈಮೇಲೆ ಬಾರದಿರದು ಆದರೂ ಕಟ್ಟದೆ ನಿರ್ವಾಹವಿಲ್ಲ. ಧಾರ್ಮಿಕ ನೈತಿಕ ಅಥವಾ ಭೂತದಯೆಯ ದೃಷ್ಟಿಯನ್ನು ಕ್ಷಣಕಾಲ ಬದಿಗಿರಿಸಿ ಕೇವಲ ಜನಾರ್ಥಿಕನ ದೃಷ್ಟಿಯಿಂದ ಪ್ರಶ್ನೆಯನ್ನು ಪರಿಶೀಲಿಸಿದವರು ಘಂಟಾಘೋಷವಾಗಿ ಹೀಗೆ ಹೇಳುತ್ತಾರೆ; "ದನಕರುಗಳಿಂದ ಬರುವ ಉತ್ಪತ್ತಿಯನ್ನೂ ಅವುಗಳ ಹೊಟ್ಟೆಗೆ ಬೇಕಾಗುವ ಖರ್ಚನ್ನೂ ಹೋಲಿಸಿ ನೋಡಿದರೆ ಒಕ್ಕಲಿಗನು ಅವುಗಳಿಂದ ಹಾಳಾಗುತ್ತಿದ್ದಾನೆಂದು ಅನಿಸದಿರದು. ಎಲ್ಲ ನಿರುಪಯುಕ್ತ ದನಗಳನ್ನು ಕಸಾಯಿಖಾನೆಗೆ ಅಟ್ಟಿದರೆ ಅದರಲ್ಲಿ ತಪ್ಪೇನಿದೆ?"

ಭೂತದಯೆಯ ದೃಷ್ಟಿಯಿಂದ ಈ ಪ್ರಶ್ನೆಯನ್ನು ವಿಚಾರಿಸಿದರೆ ಉತ್ತರವೇನು? ಉತ್ತರವು ಸ್ಪಷ್ಟವಿದೆ. ಆತ್ಮ ನಮ್ಮ ದನಕರುಗಳ ಜೀವ ಉಳಿದಿರಬೇಕು, ಇತ್ತ ಅವು ನಮಗೆ ಭಾರವಾಗಿರಬಾರದು. ಇಂಥ ಹಾದಿಯನ್ನು ನಾವು ನೋಡಬೇಕು. ಈ ವಿಷಯದಲ್ಲಿ ನಮಗೆ ಸಾಂಘಿಕ ಪದ್ಧತಿಯು ಬಹು ಮಟ್ಟಿಗೆ ಈ ಕೆಳಗಿನ ವಿವರಣೆಯಿಂದ ಸ್ಪಷ್ಟವಾಗಬಹುದು:—

ಸಾಂಘಿಕ ಪದ್ಧತಿ ಯಾಕೆ ಮೇಲು?

೧) ಸಾಂಘಿಕ ಪದ್ಧತಿಯಂತೆ ದನಕರುಗಳನ್ನು ಸಾಕಿದರೆ ಒಕ್ಕಲಿಗರು ತಮ್ಮ ತಮ್ಮ ಮನೆಗೆ ದನಕರುಗಳನ್ನು ಕಟ್ಟಬೇಕಾಗಿಲ್ಲ. ದನಗಳಿಂದ ಸುತ್ತಲಿನ ಹವೆಯು ದೂಷಿತವಾಗುತ್ತದಲ್ಲದೆ ಹೊಲಸು ಬೆಳೆಯುತ್ತದೆ. ದನಗಳೊಡನೆ ಇರುತ್ತೇನೆನ್ನುವನು ಜಾಣನೂ ಅಲ್ಲ. ದಯೆಯು ಳ್ಳವನೂ ಅಲ್ಲ. ದನಗಳೊಡನೆ ಇರಲೆಂದು ಮನುಷ್ಯನನ್ನು ದೇವರು ಹುಟ್ಟಿಸಿಲ್ಲ. ಮನೆಯಲ್ಲಿ ಕೊಟ್ಟಿಗೆಯಿಲ್ಲದಿದ್ದರೆ, ಒಕ್ಕಲಿಗನೂ ಅವನ ಕುಟುಂಬದವರೂ ಇಂಬಾಗಿ ಇರಬಲ್ಲರು. ಸಾಂಘಿಕ ದನಗಳನ್ನು ಸಾಕಿದರೆ ಇದು ಸಾಧ್ಯ.

೨) ಮನೆಯಲ್ಲಿ ದನಗಳು ಹೆಜ್ಜಾದರೆ ಒಕ್ಕಲಿಗನಿಗೆ ಮನೆಯಲ್ಲಿ ಇರುವದು ಕರುಗಳನ್ನು ಮಾರಿಕೊಳ್ಳುತ್ತಾನೆ, ಕೋಣಗಳನ್ನು ಕೊಲ್ಲುತ್ತಾನೆ ಇಲ್ಲವೆ ಉಪವಾಸಬಿದ್ದು ಸಾಯಲೆಂದು ಅವುಗಳನ್ನು ಹೊಡೆದಟ್ಟುತ್ತಾನೆ. ಆದರೆ ಸಾಂಘಿಕ ಪದ್ಧತಿಯಿಂದ ದನಗಳನ್ನು ಸಾಕಿದರೆ ಈ ವಾಸದಿಂದ ವಾರಾಗಲು ಸಾಧ್ಯವಿದೆ.

೩) ಬೇನೆ ಬೇಸರಿಕೆಯಾದರೆ ದನಗಳಿಗೆ ಔಷಧ ಕೊಡಿಸುವದು ಕೇವಲ ಸಾಂಘಿಕ ಪದ್ಧತಿಯಂತೆ ಮಾತ್ರ ಸಾಧ್ಯ. ಸಾಮಾನ್ಯ ಒಕ್ಕಲಿಗನಿಗೆ ಇದು ಪೂರೈಸಲಾರದು.

೪) ಸಾಂಘಿಕ ಪದ್ಧತಿಯಿಂದ ದನಗಳನ್ನು ಸಾಕಿದರೆ ಒಂದು ಉತ್ತಮ ಬೀಜದಹೋರಿಯನ್ನು ಜೆನ್ನಾಗಿ ಮೇಯಿಸಿ ಸಾಕಬಹುದು. ಮನೆ ಮನೆಗೆ ದನಗಳನ್ನು ಕಟ್ಟಿದರೆ ಇದು ಸಾಧ್ಯವಾಗದು. ಒಳ್ಳೆವಾದರೆ ಯಾರಾದರೂ ಉಪಕಾರಬುದ್ಧಿಯಿಂದ ಒಂದು ಹೋರಿಯನ್ನು ಬಿಟ್ಟರೆ ಬಿಡಬೇಕು, ಅಷ್ಟೇ.

೫) ಮನೆ ಮನೆಗೆ ದನಗಳನ್ನು ಕಟ್ಟಿದರೆ ಅವುಗಳಿಗೆ ಮೇಯಲು ಗಾಹುಲ್ಲು ಸಲು ದೊರೆಯದು, ಅವುಗಳಿಗೆ ಅಡ್ಡಾಡಲು ಸ್ಥಳ ಸಿಗದು. ಆದರೆ ಅದೇ ಸಾಂಘಿಕ ಪದ್ಧತಿಯಲ್ಲಿ ಅವುಗಳಿಗಾಗಿ ಒಟ್ಟಿನಲ್ಲಿ ಒಂದು ಹುಲ್ಲುಗಾವಲನ್ನು ಪಡಬಹುದು.

೬) ಸಾಂಘಿಕ ಪದ್ಧತಿಯಲ್ಲಿ ಮೇವಿಗಾಗಿ ಆಗುವಷ್ಟು ಎಷ್ಟೋ ಕಡಿಮೆಯಾಗುವದು.

೭) ಒಳ್ಳೇ ಬೆಲೆಗೆ ಹಾಲು ಹೈಸುವಂತಾಗಲು ಸಾಂಘಿಕ ಪದ್ಧತಿಯೆ ಅನುಕೂಲ. ಸಾಂಘಿಕ ಪದ್ಧತಿಯಲ್ಲಿ, ಒಕ್ಕಲಿಗನಿಗೆ ಹಾಲಿನಲ್ಲಿ ನೀರು ಕೂಡಿಸುವ ಅವಶ್ಯಕತೆ ಉಳಿಯುವದಿಲ್ಲ ಮೋಹವೂ ಆಗುವದಿಲ್ಲ

೪) ಯಾವದೊಂದು ದನವು ಕಟ್ಟಿಲು ಯೋಗ್ಯವಿದೆಯೋ ಹೇಗೆಂಬುದನ್ನು ಪರೀಕ್ಷಿಸಿ ನೋಡಲು ಸದ್ಯದ ಪದ್ಧತಿ ಯಾರಿಗೆ ಸಾಧ್ಯವಿದೆ? ಆದರೆ ಅದೇ ಸಾಂಘಿಕ ಪದ್ಧತಿಯಲ್ಲಿ ಈ ಮಾತು ಸುಲಭಸಾಧ್ಯ. ಇಡೀ ಹಳ್ಳಿಯ ದನಗಳನ್ನು ಪರೀಕ್ಷಿಸಿಕೊಳ್ಳಬಹುದು, ಇದರಿಂದ ದನಗಳ ಪೀಳಿಗೆಯ ಸುಧಾರಣೆಯೂ ಆಗುವದು.

೯) ಮೇಲೆ ಹೇಳಿದ ಲಾಭಗಳನ್ನು ನೋಡಿದರೆ ಸಾಂಘಿಕ ಪದ್ಧತಿಯು ಲಾಭಕರವೆಂಬುದು ಸ್ಪಷ್ಟವಾಗುವದು. ಸಾಂಘಿಕ ಪದ್ಧತಿಯು ಬರಬೇಕೆಂಬುದಕ್ಕೆ ಒಂದು ದೊಡ್ಡ ಕಾರಣವೇನೆಂದರೆ, ಮನೆ ಮನೆಗೆ ದನಗಳನ್ನು ಕಟ್ಟಿದ್ದರಿಂದ ನಮ್ಮ ಸ್ಥಿತಿಯು ಹದಗೆಟ್ಟಿದೆ ಇಷ್ಟೇ ಅಲ್ಲ ದನಗಳ ಸ್ಥಿತಿಯು ಕಂಗಾಲಾಗಿದೆ. ಈ ಸುಧಾರಣೆಯಿಂದ ನಾವು ನಮ್ಮನ್ನೂ ದನಗಳನ್ನೂ ದುಃಸ್ಥಿತಿಯಿಂದ ಪಾರು ಮಾಡಿಕೊಳ್ಳಬಲ್ಲೆವು.

ಸಹಕಾರಿ ಒಕ್ಕಲತನ

ಸಹಕಾರ ಪದ್ಧತಿಯನ್ನು ಅವಲಂಬಿಸದೆ ಹೋದರೆ ನಮಗೆ ಒಕ್ಕಲತನದಿಂದ ಪೂರ್ಣ ಲಾಭ ದೊರೆಯದು. ಒಂದು ಹಳ್ಳಿಯ ಭೂಮಿಯನ್ನು, ನೂರೆಂಟು ಹಂಚಿ ಪರಿದುಕೊಂಡು ಸಾಗುಮಾಡುವದಕ್ಕಿಂತ, ಎಲ್ಲರೂ ಕೂಡಿ ಇಡೀ ಹಳ್ಳಿಯ ಭೂಮಿಯನ್ನು ಸಾಗುಮಾಡಿ ಉತ್ಪನ್ನವನ್ನು ಪಂಚಿಕೊಳ್ಳುವದು ಜಾಣತನವಲ್ಲವೆ? ಹೊಲಗಳಿಗೆ ಯಾವ ಮಾತು ನಿರೋಗುವದೊ ಅದು ದನಗಳ ವಿಷಯದಲ್ಲೂ ನಿರೋಗುವದು.

ಆದರೆ ಒಮ್ಮೆಲೆ ನಮ್ಮ ಜನರನ್ನು ಈ ಪದ್ಧತಿಗೆ ಹೇಗೆ ಅಣಿಗೊಳಿಸುವದೆಂಬ ಮಾತು ಬೇರೆ. ಸರಳ ಮತ್ತು ಇಕ್ಕಟ್ಟಿನ ದಾರಿಯಿಂದ ನಡೆಯಲು ಶ್ರಮ ಬೇಕು. ಗೋಸೇವೆಯು ಮಾರ್ಗದಲ್ಲಿ ಪೆಚ್ಚಿ ಪೆಚ್ಚಿಗೆ ಅಡ್ಡಿ ಆತಂಕಗಳಿವೆ ಈ ಅಡ್ಡಿಆತಂಕಗಳನ್ನು ನಿವಾರಿಸಿದ ಹೊರತು ಮಾರ್ಗವು ಸುಗಮವಾಗಲಾರದು. ಮನೆಮನೆಗೆ ದನಗಳನ್ನು ಕಟ್ಟುವದಕ್ಕಿಂತ, ಅವುಗಳನ್ನು ಸಾಂಘಿಕವಾಗಿ ಕಟ್ಟಿದರೆ ಎಷ್ಟೊಂದು ಲಾಭವಿದೆಯೆಂಬುದನ್ನು ತೋರಿಸಲೆನಿಸಿದ್ದೇನೆ. ಹೊದಲನೆ ಪದ್ಧತಿ ತಪ್ಪು ಪದ್ಧತಿ ಎರಡನೇಯದೆ ಸೇಸು. ವಿಚಾರವಮಾಡಿನೋಡಿದರೆ ಸಹಕಾರದ ಮುಖಾಂತರವೇ ವ್ಯಕ್ತಿಯು ತನ್ನ ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳಬಲ್ಲ. ಮನೆಮನೆಗೆ ದನಗಳನ್ನು ಕಟ್ಟುವದೆ ಸ್ವಾರ್ಥವು ಬೆಳೆಯುತ್ತದೆ ಭಾವೈಕ್ಯವು ಕಾಲಿಗೆ ಬುದ್ಧಿಹೇಳುತ್ತದೆ ಆದರೆ ಅದೇ ಸಾಂಘಿಕ ಪದ್ಧತಿಯು ಇವೆರಡು ದೋಷಗಳನ್ನು, ಹೊಡೆದಟ್ಟಿದ್ದರೂ, ಎಷ್ಟೋ ಮಟ್ಟಿಗೆ ಕಡಿವಿ ಮಾಡುತ್ತದೆ.

("ಹರಿಜನ ಸೇವಕ" ದಿಂದ ೧೫-೨-೫೦ ನೇ ದಿನಾಂಕದ "ಹರಿಜನ"ದಲ್ಲಿ ಪ್ರಕಟವಾದದ್ದು.)

ಧಾರವಾಡ ಬಾನುಲಿ ಕೇಂದ್ರದಿಂದ ಉಪಯೋಗವಿಲ್ಲ.

ಧಾರವಾಡ ಬಾನುಲಿ ಕೇಂದ್ರವಾದ ಮೇಲೆ ನಮ್ಮ ಜಿಲ್ಲೆಯ ಬಾನುಲಿ ಕೇಂದ್ರವಾಯಿತಲ್ಲಾ ಎಂದು ಒಂದು ತರಹದ ಉತ್ಸಾಹ ಮತ್ತು ಆನಂದವಾಯಿತು ನಮ್ಮ ಊರಿನಲ್ಲಿ ತರುಣ ಉತ್ಸಾಹಿ ಸಂಗೀತಗಾರರಿರುವರು ದಾಸರ ಪದಗಳನ್ನು ದಕ್ಷಿಣಾದಿ ಪದ್ಧತಿಯಲ್ಲಿ ಚೆನ್ನಾಗಿ ಹಾಡುವರು ಕಾರಣ ತಮ್ಮ ಬಾನುಲಿಯು ಕಾರ್ಯಕ್ರಮದಲ್ಲಿ ಭಾಗವಹಿಸಲು ಅವರಿಗೂ ಒಂದು ಅವಕಾಶ ಕೊಡಬೇಕೆಂದು ತಾ|| 5-2-50 ರಲ್ಲಿ ಧಾರವಾಡ ಕೇಂದ್ರದ ಮುಖ್ಯಾಧಿಕಾರಿಗಳಿಗೆ ಒಂದು ಪತ್ರ ಬರೆದು ಇದ್ದೆವು ಅಷ್ಟರಲ್ಲಿ ಹೊಸಪೇಟೆಯು ಧಾರವಾಡ ಬಾನುಲಿ ಕೇಂದ್ರಕ್ಕೆ ಸೇರಿಲ್ಲ ನಮ್ಮ ಅರಿಕೆಯ ವಿಷಯವಾಗಿ ಮುಖ್ಯ ಆಂಧ್ರ ಬಾನುಲಿಕೇಂದ್ರವಾದ ವಿಜಯವಾಡ ಕೇಂದ್ರದ ಅಧಿಕಾರಿಗಳಿಗೆ ಬರೆದು ಕೊಳ್ಳಬೇಕೆಂದು ಧಾರವಾಡ ಕೇಂದ್ರದ ಅಧಿಕಾರಿಗಳು ತಾ|| 10-2-50 ರಲ್ಲಿ ಕಾಣಿಸಿದ್ದಾರೆ.

ಹೊಸಪೇಟೆಯು ಕನ್ನಡಿಗರದೋ ಅಥವಾ ಆಂಧ್ರರದೋ? ನಾವು ಹತ್ತಿರವಿರುವ ನಮ್ಮ ಅಚ್ಚಕನ್ನಡ ಬಾನುಲಿ ಕೇಂದ್ರಕ್ಕೆ ಹೋಗಬೇಕೋ ಅಥವಾ ನೂರಾರು ಮೈಲುಗಳ ದೂರವಿರುವ ಆಚ್ಚ ತೆಲುಗು ಬಾನುಲಿ ಕೇಂದ್ರಕ್ಕೆ ಹೋಗಬೇಕೋ? ಹೋದರು ಕನ್ನಡದಲ್ಲಿ ಹಾಡುವ ನಮಗೆ ಈಗ ಕರ್ನಾಟಕ ಆಂಧ್ರವ್ಯಾಂತಗಳ ಪ್ರಶ್ನೆ ಇರುವಾಗ ತಕ್ಕ ಪ್ರೋತ್ಸಾಹ ಮತ್ತು ಸ್ಥಾನಸಿಗುವದೇ?

ವೈಸೂರು ಬಿಟ್ಟು ಉಳಿದ ಕನ್ನಡ ಪ್ರದೇಶಗಳೆಲ್ಲವೂ ಧಾರವಾಡ ಬಾನುಲಿ ಕೇಂದ್ರದ ಇಲಾಖೆಯಲ್ಲಿ ಕಕ್ಷಣ ಸೇರಿಸಲ್ಪಡಬೇಕು.

ಹೊಸಪೇಟೆ) ತಟ್ಟಿ ರಂಗಾವಧಾನಿ
ತಾ|| 14-2-50) ವಕೀಲ

ಅರಣ್ಯಗಳ ಸಂರಕ್ಷಣೆ.

ಕಾಡುಗಳನ್ನು ಮನಬಂದಂತೆ ಕಡಿಮ, ಬೇಗೆಗೆ ಈಡುಮಾಡಿ, ಸಿಕ್ಕಂತೆ ದನಕರುಗಳನ್ನು ಮೇಯಬಿಟ್ಟು ಹಾಳು ಹಚ್ಚುವದು ತರವಲ್ಲ. ಮುಂದಿನ ಪೀಳಿಗೆಯ ಸಲುವಾಗಿ ಕಾಡುಗಳನ್ನು ಕಾಯುವದು ಬೆಳಿಸುವದು ಪ್ರತಿಯೊಬ್ಬನ ಕರ್ತವ್ಯ

ಅಡವಿಗಳು ನಮ್ಮ ದೇಶದ ಅಮೂಲ್ಯ ಸೊತ್ತು. ಅನಾವೃಷ್ಟಿಯ ಮೂಲಕ ಉಂಟಾಗುವ ಭೀಕರ ಬರಗಾಲಗಳನ್ನು ಅತಿವೃಷ್ಟಿಯಿಂದಾಗುವ ಮಹಾಪೂರಗಳನ್ನೂ ತಡೆಯಬೇಕಾದರೆ, ಗುಡ್ಡಗಳ ಮೇಲಿನ ಗಿಡಗಳನ್ನು ಕಡಿಯದೆ ಕಾಯ್ದಿಡಿರಿ.

ಕಾಡುಗಳು ಒಕ್ಕಲಿಗರಿಗೆ ಅನುದಿನ ಬೇಕಾಗುವ ಸಾಧನ ಸಲಕರಣೆಗಳನ್ನು, ವ್ಯವಸಾಯದ ಸಾಮಾನುಗಳನ್ನು ಇಮಾರತಿಯ ಕಟ್ಟಿಗೆಯನ್ನು, ಗುಡಿಸಲು ಚಪ್ಪಗಳಿಗಾಗಿ ಕಟ್ಟಿಗೆ ಬಿದರನ್ನು, ದನಕರಗಳಿಗೆ ಹುಲ್ಲನ್ನು ಮತ್ತು ಜೋಟ ಪಟ್ಟಿಗಳಿಗೆ ಎಲೆಗೊಬ್ಬರವನ್ನು ಒದಗಿಸುವವು.

ಕಡ್ಡಿಯೊಂದರಿಂದ ಗುಡ್ಡವನ್ನೆಲ್ಲ ಸುಡಬಹುದು; ಆದರೆ ಗುಡ್ಡದಲ್ಲಿಯ ಗಿಡ ಒಂದರಿಂದ ಸಾವಿರಾರು ಕಡ್ಡಿಗಳನ್ನು ತಯಾರಿಸಬಹುದು. ಬೇಗೆ ಕಾಳ್ಗಿಚ್ಚುಗಳಿಂದ ಅರಣ್ಯಗಳು ಹಾಳಾಗದಂತೆ ದಕ್ಷತೆ ವಹಿಸಿರಿ. ಬೆಂಕಿಯಿಂದ ಗುಡ್ಡಗಳನ್ನು ರಕ್ಷಿಸಿರಿ.

ಕಾಡಿನ ನುಡಿಗಳು

ಬಾಳುವೆಗೆ ಬೀಡುಗಳು ಬೇಕು;
ಬೀಡುಗಳಿಗೆ ಕಾಡುಗಳು ಬೇಕು.
ಗಿಡವಿಲ್ಲದ ನಾಡಿಗೆ ಕೇಡು.
ಗಿಡವಿಲ್ಲದ ಕಾಡು, ದೈತನ ಗೋಳು.
ನಿಬಿಡ ವನ, ದೇಶದ ಧನ,
ಕದಿದಕಾಡು ನಾಡಿಗೆ ಕೇಡು.
ಅರಣ್ಯ ಸಂಪತ್ತಿಯೇ ದೇಶ ಸಂಪತ್ತಿ,
ವನಸಿರಿಯೇ ವ್ಯವಸಾಯ ಸಿರಿ.
ಊರಿನ ಇರುವಿಗೆ ಗಿಡಗಳ ಗುಂಪು;
ನಾಡಿನ ನೆರವಿಗೆ ಅಡವಿಯ ತಂಪು.

ಹಾಲಿನ ಹೊಳೆ

ಅಮೇರಿಕೆಯಲ್ಲಿ ಪ್ರತಿವರ್ಷ ಹುಟ್ಟುವ ಹಾಲು ೩,೦೦೦ ಮೈಲು ಉದ್ದಗಲ ಅಡಿ ಆಗಲ ಹಾಗು ೩ ಅಡಿ ಆಳವಾದ ಒಂದು ಹೊಳೆಯನ್ನು ತುಂಬಿಬಹುದು.

ಕರ್ನಾಟಕ ತರುಣ ಸಂಘ ಹರಪನಹಳ್ಳಿ.

ಈ ಸಂಘದ ವತಿಯಿಂದ ತಾ॥ 16–17 ರಲ್ಲಿ ಉಪನ್ಯಾಸಮಾಲೆಯನ್ನು ಏರ್ಪಡಿಸಲಾಗಿತ್ತು. ಸಂಘದ ಆದರದ ಕರೆಗೆ ಓಕೊಟ್ಟುಹಿರಿ ಸಾಹಿತಿಗಳಾದ ಶ್ರೀಯುತ ಶಂ. ಭಾ. ಜೋಷಿಯವರು ಬೀಚಿಯವರ ಜೊತೆಯಲ್ಲಿ ಅತಿಥಿಗಳಾಗಿ ಆಗಮಿಸಿದ್ದರು. ಸ್ಥಳೀಕ ಡೆಪ್ಯೂಟಿ ಪಂಚಾಯತಿ ಆಫೀಸರರಾದ ಶ್ರೀಮಾನ್ ಮಹದೇವನಗೌಡರ ಅಧ್ಯಕ್ಷತೆಯಲ್ಲಿ "ಬೀಚಿ" ಯವರಿಂದ ಅಥಿತಿ ಪರಿಚಯವಾಗಿ ಶ್ರೀಶಂಭಾರವರ ವಿಚಾರ ಪೂರಕ ಅಮೋಘ ಉಪನ್ಯಾಸವಾಯಿತು "ಆರಣಿಯಪರ್ವ" ವನ್ನು ಉಪನ್ಯಾಸದ ವಿಷಯವಾಗಿಟ್ಟುಕೊಂಡು ವ್ಯಾಸರ ಮತ್ತು ಕುಮಾರವ್ಯಾಸರ ಭಾರತಗಳನ್ನು ತುಲನಾತ್ಮಕ, ಸಂಶೋಧಕ ದೃಷ್ಟಿಯಿಂದ ವಿಮರ್ಶಿಸುತ್ತ ಈ ಪರ್ವದಲ್ಲಿ ಕಂಡುಬರುವ ಪಾತ್ರಗಳ ಅನೇಕಕೈತಿಗಳ ಸಂಕೇತಗಳನ್ನು ಶಾಸ್ತ್ರೀಯವಾಗಿ ವಿವರಿಸಿದರು. ರಾಮಾಯಣ ಮಹಾಭಾರತ ಮುಂತಾದ ಪುರಾಣಗಳ ರೂಪದಲ್ಲಿ ನಮ್ಮದೇಶದಲ್ಲಿರುವಂತೆ, ಸಾರ್ವಕಾಲಿಕ ಚರಿತ್ರೆಗಳು ಇತರ ದೇಶಗಳಲ್ಲಿ ದೊರೆಯುವದಿಲ್ಲವೆಂತಲೂ, ಯಕ್ಷಪ್ರಶ್ನೆಗಳನ್ನು ಉದಹರಿಸುತ್ತಾ ಮಹತತ್ವಗಳ ಸ್ಫೊಳಗೊಂಡ ಸಂಕೇತಗಳ ತಳಪದಿಯಮೇಲೆ ರಚಿತವಾದ ಇಂತಹ ಚರಿತ್ರೆಗಳನ್ನು ಅಭ್ಯಸಿಸಿ ಆ ಸಂಕೇತಗಳನ್ನು ಅರಿತುಕೊಂಡು ದೇಶಕಾಲಗಳಿಗೆ ಅನ್ವಯಿಸುವಂತೆ ಅವುಗಳ ಅರ್ಥಗಳನ್ನು ಸ್ವಾಚೀನ ನಾಣ್ಯಕ್ಕೆ ಹೊಸಮುದ್ರೆಯ ಸ್ಫೊತ್ತಿ ಚಲಾವಣೆಯಲ್ಲಿ ತರುವಂತೆ ಅನಾರ್ಥವಾಗದಂತೆ ಪರಿವರ್ತಿಸಿಕೊಳ್ಳಬೇಕೆಂತಲೂ ಹೇಳಿದರು.

ಮೂರನೆಯದಿನ "ವಿಚಾರದ ವಿಚಾರ" ಗಳ ಬಗೆಗೆ ಉಪನ್ಯಾಸ ಸಂಭಾಷಣೆ ಚರ್ಚೆಗಳಾಗಿ ಅಭಾರ ಮನ್ನಣೆಯೊಂದಿಗೆ ಮುಕ್ತಾಯವಾಯಿತು. ಶೈತನದಲ್ಲಿರುವ ಈ ಸಂಘಕ್ಕೆ ಕೆಲಉನೆಯುಕ್ತ ಸೂಚನೆಗಳನ್ನಿತ್ತರು. ಅಶೀರ್ವಾದ ಪೂರ್ವಕವಾಗಿ ಅವರು ಕೊಟ್ಟ "ಯಕ್ಷಪ್ರಶ್ನೆ" 'ಕರ್ನಾಡಕತೆ' 'ಅಗ್ನಿವಿದ್ಯೆ' ಈ ಮೂರುಪುಸ್ತಕಗಳನ್ನು ಆದರದಿಂದ ಸ್ವೀಕರಿಸಿ ಸಂಘವು ಅವರಿಗೆ ಪುನಃ ಧನ್ಯವಾದಗಳನ್ನು ಅರ್ಪಿಸುತ್ತದೆ.

ಹಾಲ್ಕಿ (ಆದನಾಗಿ)

೧೫ನೆಯ ದಿನಾಂಕ ಪಂಚಾಯ್ತಿ ಬೋರ್ಡು ಅಧ್ಯಕ್ಷ ಶ್ರೀ ರಾಮಲಿಂಗಪ್ಪನವರ ನೇತೃತ್ವದಲ್ಲಿ ಶ್ರೀ ಕಸೂ. ಬೂಗಪ್ಪನವರಧ್ಯಕ್ಷತೆಯಲ್ಲಿ ಜಹಿರಂಗ ಸಭೆಯಾಯಿತು. ಶ್ರೀ ಬಿ. ಲಕ್ಷ್ಮಣ್ಣನವರಿಂದ ಪ್ರಾರ್ಥನೆಯಾದಮೇಲೆ ಲೇಬರ್ ಪ್ರಧಾನೋಪಾಧ್ಯಾಯ ಶ್ರೀ ಓಬಪ್ಪನವರು ನಿರಕ್ಷತಾನಿರ್ಮೂಲನ ವಯೋಜನ ವಿದ್ಯಾಭ್ಯಾಸ ಹಳ್ಳಿಗಳಲ್ಲಿ ಮಾಡಬೇಕಾದ ಕೃಷಿ ಈ ವಿಷಯಗಳ ಮೇಲೂ, ಶ್ರೀ. ಹೆಚ್. ಚನ್ನಯ್ಯನವರು ವಯೋಜನ ವಿದ್ಯುಕ್ತಧರ್ಮಗಳು ಎಂಬುದನ್ನು ಕುರಿತು ಸ್ವಾರಸ್ಯವಾಗಿ ಭಾಷಣ ಮಾಡಿದರು. ಶ್ರೀ ನಾಯ್ಕರ ರಾಮಲಿಂಗಪ್ಪನವರೂ ಅಧ್ಯಕ್ಷರೂ ಕೆಮ್ಮು ಭಾಷಣಗಳಲ್ಲಿ ನಿರಕ್ಷತಾನಿರ್ಮೂಲನಕ್ಕೆ ಸಹಾಯ ಮಾಡಲು ಕೇಳಿಕೊಂಡರು ಶ್ರೀ. ಕೆ. ಬಿ. ನರಸಪ್ಪನವರ ವಂದನಾ ಸಮರ್ಪಣೆಯಿಂದ ಸಭೆ ಮುಗಿಯಿತು. ವಯೋಜನ ವಿದ್ಯಾಸಂಘವು ಸ್ಥಾಪಿಸಲ್ಪಟ್ಟು ಈ ಕೆಳಗಿನ ಅಧಿಕಾರವರ್ಗದವರು ಚುನಾಯಿತರಾದರು.

ಅಧ್ಯಕ್ಷರು ಕೆ. ಸೂಗಪ್ಪ, ಉಪಾಧ್ಯಕ್ಷರು ಹ. ವಿಕಾಂಬ್ರಪ್ಪ ಪ್ರ. ಕಾರ್ಯದರ್ಶಿ ಕೆ. ವೆಂಕಯ್ಯಶೆಟ್ಟಿ ಸ. ಕಾರ್ಯದರ್ಶಿ ಜಿ. ಸಿದ್ದೋಜಿರಾವ್ ಸದಸ್ಯರು 1) ಕೆ. ನಾರಾಯಣಶೆಟ್ಟಿ (2 ಕು. ಬಸಪ್ಪ (3 ಈ. ನಾರಾಯಣಪ್ಪ (4 ಸಿ. ಅಳ್ಳಪ್ಪ (5 ಲಕ್ಷ್ಮಣ್ಣ (6 ವೀರಪ್ಪ (7 ಸ ಶಿವಣ್ಣ (8 ಊದಂಡಿದಾನೀದಪ್ಪ (9 ಗಿಡ್ಡಿ ಬಾನೀದಪ್ಪ.

ನಾಗತಿ ಬಸಾಪುರ

ಇಲ್ಲಿ ಪ್ರಜಾರಾಜ್ಯ ಉದಯದ ಉತ್ಸವನ್ನೆ ೨೬–೨೭ ರಂದು ಮಹಾತ್ಮರ ಭಾವಚಕ್ರದ ಮೆರವಣಿಗೆ ಪ್ರಭಾತಫೇರಿಗಳಿಂದಾರಂಭವಾಗಿ ಕೀರ್ತನ ಸ್ವಾಮಿಗಳಧ್ಯಕ್ಷತೆಯಲ್ಲಿ ಸಭೆಯಾಯಿತು ಮಾಸ್ಟರ್ ಹನುಮಂತಗೌಡರು ಮಹಾತ್ಮರ ವಿಷಯ ಪ್ರಜಾರಾಜ್ಯಮಹತ್ವವನ್ನು ಹೇಳಿದನಂತರ ಮಕ್ಕಳಿಗೆ ಗಾಂಧಿಟೊಪ್ಪಿಗೆ ಯಾಚಿತಾರ್ಥವಾಗಿ ಕೊಡಲಾಯಿತು ಮಿಠಾಯಿ ಹಂಚಿನುಂಗಳ ರಾಷ್ಟ್ರೀಯಗೀತೆಗಳಿಂದ ಸಭೆ ಮುಗಿಯಿತು.

ಬಳ್ಳಾರಿ ಸ್ಮಾಲ್‌ಕಾಸ್ ಕೋರ್ಟಿನಲ್ಲಿ.

S. C. ನಂ. 834/1949

ಹೆಚ್. ರಂಗನಗೌಡು ವಾದಿ
ಸೋಮನಮುದ್ರ (ಬಳ್ಳಾರಿ ತಾಲೂಕು)

ನಾಗನಗೌಡು ಪ್ರತಿವಾದಿ
ಉಗಾನಿಜಾಲ್ ಜಾಂಗಿರಣಿ
ಸೋಲಾಪುರ

ಪ್ರತಿವಾದಿಯು ವಾದಿಯಿಂದ 1–4–1947 ರಲ್ಲಿ ವ್ಯಾಂಸರಿನೋಟಿನ ಮೇಲೆ ಪಡೆದ ಮೊತ್ತದ ಬಡ್ಡಿ ಖರ್ಚುಗಳ ಸಮೇತ 170/-ನಸೂಲುಮಾಡಲು ದಾವಾಹಾಕಿದ್ದಾನೆ. ಅದರ ವಾಯ್ದೆ 8–3–1950 ಕ್ಕೆ ಹಾಕಲಾಗಿದೆ. ಅಂದು ಪ್ರತಿವಾದಿಯು ಖುದ್ದಾಗಿಯಾಗಲಿ ವಕೀಲರ ಮೂಲಕವಾಗಲಿ ಹಾಜರಾಗಿ ಕನ್ನದೇನಾದರೂ ಆಕ್ಷೇಪಣೆಗಳನ್ನು ತಿಳಿಸದಿದ್ದರೆ ಏಕಪಕ್ಷತೀರ್ಮಾನವಾಗುವದೆಂದು ಈ ಮೂಲಕ ತಿಳಿಸಲಾಗಿದೆ.

ಕೋಲಾರ ರಾಮರಾವ್,
ವಕೀಲು, ಬಳ್ಳಾರಿ.

ಮದನಪಲ್ಲಿ

೧೫ನೆಯ ದಿನಾಂಕ ಬೆಸೆಂಟ್ ಥಿಯೋಸಫಿಕಲ್ ಕಾಲೇಜ ಕನ್ನಡ ಸಂಘದ ವಾರ್ಷಿಕ ಸಮಾರಂಭವು ಕನ್ನಡ ಮುಖ್ಯ ಅಧ್ಯಾಪಿಕೆಯರಾದ ಶ್ರೀ ಎಸ್. ನಾಗಮ್ಮ M.A. ಇವರಧ್ಯಕ್ಷತೆಯಲ್ಲಿ ನಡೆಯಿತು ಮುಖ್ಯ ಅಥಿತಿಗಳಾದ ಮಾಸ್ತಿಯವರು ವಿವಿಧಭಾಷಾಭಾಷಿಗಳು ಭೇದಭಾವನನ್ನು ಮರೆತು ನಾಡಿನ ಏಕ್ಯತೆ ಮತ್ತು ಭದ್ರತೆಗಾಗಿ ದುಡಿಯಬೇಕೆಂದರು "ಬಾತಾಯೆ ಬಾರಮ್ಮ ನಮ್ಮನಾಲಗೆಯ ನಡೆಮುಡಿಯನ್ನು ಹಾಸುವೆವು ಬಾತಾಯೇ ನಮ್ಮ ದೇಹದ ದೇವಾಲಯಕ್ಕೆ ವಿಜಯವಾಗು ತಾಯೇ ನಮ್ಮ ಹೃದಯಸಿಂಹಾಸನದಲ್ಲಿ ಮುಂದಿನ ಉದ್ದರಿಸುತಾಯೇ! ನಾವು ಅನನ್ಯಶರಣರಾಗಿ ನಿನ್ನ ಆರಾಧನೆಯಿಂದ ಧನ್ಯರಾಗುವಂತೆ ಕರುಣಿಸಿ ಕೃಪೆಮಾಡು ತಾಯೆ"ಎಂದು ಹೇಳಿ ಕನ್ನಡವಿದ್ಯಾರ್ಥಿನಿಯರಿಂದ ಆರಳುನೊಗ್ಗೆಗಳು ಉಬ್ಬಿಸಿಕಸಿಸಿ ಸನಪಾರಭಬೀಳುವಂತೆ ಮಾಡಿಸಿದರು.

ದನಗಳ ಮೂತ್ರದಲ್ಲಿ ಗೊಬ್ಬರದ ಅಂಶಗಳು ಸಮೃದ್ಧವಾಗಿವೆ. ಬೆಳೆಗೆ ಅವಶ್ಯವಾದ ನೈಟ್ರೋಜನ್ ಮತ್ತು ಪೊಟಾಶಗಳು ಇದರಲ್ಲಿ ಹೇರಳವಾಗಿರುವವು ಈ ಸತ್ವಗಳು ನಾಶವಾಗದಂತಾಗಿ ದನಗಳ ಮೂತ್ರವನ್ನು ಸಂಗ್ರಹಿಸಿಡುವದು ಅವಶ್ಯವಿದೆ. ಸಂಗ್ರಹಿಸುವ ಪದ್ಧತಿಯು ಬಹಳ ಸುಲಭವಾಗಿದೆ ಒಕ್ಕಲಿಗರು ತಮ್ಮ ಭೂಮಿಯು ಫಲವತ್ತತೆಯನ್ನು ಹೆಚ್ಚಿಸಲು ಇದನ್ನು ಸಹಜವಾಗಿ ಅನುಸರಿಸಬಹುದು.

ಗೊಬ್ಬರಕ್ಕಾಗಿ
ದನಗಳ ಮೂತ್ರ

ನಮ್ಮ ಭೂಮಿಗಳ ಹುಟ್ಟುವಳಿಯು ಕಡಿಮೆಯಾಗುತ್ತ ನಡೆದಿದೆಯೆಂದು ಹೇಳುತ್ತ ಕೂಡುವದರಲ್ಲಿ ಅರ್ಥವಿಲ್ಲ ಹುಟ್ಟುವಳಿ ಕಡಿಮೆಯಾಗುವದಕ್ಕೆ ಅನೇಕ ಕಾರಣಗಳಿದ್ದರೂ, ಉತ್ತಮ ಗೊಬ್ಬರ ಪೂರೈಕೆಯ ಅಭಾವವೇ ಅವುಗಳಲ್ಲಿ ಮುಖ್ಯವಾಗಿದೆ. ದಡ್ಡೀ ಗೊಬ್ಬರದ ಕೊರತೆ ಬಹಳವಾಗಿರುವದರಿಂದ ತಮ್ಮ ಹೊಲಗಳಿಗೆ ಸಾಕಷ್ಟು ಗೊಬ್ಬರ ಸಿಗುವದಿಲ್ಲವೆಂದು ಒಕ್ಕಲಿಗರು ದೂರುತ್ತಿದ್ದಾರೆ. ಅದರೆ ದಡ್ಡಿ ಗೊಬ್ಬರವನ್ನು ಹೆಚ್ಚಿಸುವದಕ್ಕೆ ನಮ್ಮ ಒಕ್ಕಲಿಗರಲ್ಲಿ ಎಷ್ಟು ಜನ ಪ್ರಯತ್ನಿಸುತ್ತಿರುವರು?

ಹಿಂಡಿ, ಅಮೋನಿಯಮ್ ಸಲ್ಫೇಟ ಮುಂತಾದ ಗೊಬ್ಬರಗಳನ್ನು ಹಾಕುವದರಿಂದ ಒಕ್ಕಲಿಗರಿಗೆ ಲಾಭವಿದೆ, ನಿಜ ಆದರೆ ಗೊಬ್ಬರದ ಕೊರತೆಯಿರುವಾಗ ಅವುಗಳನ್ನು ಹೆಚ್ಚೆಚ್ಚಾಗಿ ಬಳಸುವದು ಸಾಧ್ಯ ಮಾತಲ್ಲ. ಇದಲ್ಲದೆ ಜೀವಜನ್ಯ ಗೊಬ್ಬರದ ಪೂರೈಕೆಯಿಲ್ಲದೆ ಬರಿ ಕೃತಿಮ ಗೊಬ್ಬರಗಳಿಂದ ವಿಶೇಷ ಲಾಭವೂ ಆಗಲಾರದು. ಆದ್ದರಿಂದ ಜೀವಜನ್ಯ ಗೊಬ್ಬರದ ಪ್ರಮಾಣವು ಹೆಚ್ಚಬೇಕಾದದು. ಅವಶ್ಯವಿದೆ. ಇದಕ್ಕಾಗಿ ಒಕ್ಕಲಿಗರು ಸಾಧ್ಯವಿದ್ದ ಜೀವಜನ್ಯ ಗೊಬ್ಬರವನ್ನು ಕೂಡು ಹಾಕಲು ಪ್ರಯತ್ನಿಸಬೇಕು.

ಕಾರ್ಯರೂಪಕ್ಕಿಳಿದ ಯೋಜನೆ

ಜೀವಜನ್ಯ ಗೊಬ್ಬರವನ್ನು ಕಲೆಹಾಕುವ ದಕ್ಕಾಗಿ ಮುಂಬಯಿ ಸರಕಾರವು ಗೊಬ್ಬರ ಕುಣಿ ತೋಡುವ ಯೋಜನೆಯನ್ನು ಈಗಾಗಲೇ ಕಾರ್ಯರೂಪಕ್ಕೆ ತಂದಿದೆ. ಈ ಯೋಜನೆಯು ಯಶಸ್ವಿಯಾಗಿ ಸಾಂಗವಾದ ರೆದಡ್ಡಿಯ ಕಸದಡ್ಡಿಯಿಂದ, ಬೆಳೆಗಳಿಗೆ ಒಳ್ಳೇ ಉಪಯುಕ್ತವಾದ ಗೊಬ್ಬರ ಸಿದ್ಧವಾಗುವದು.

ಗೊಬ್ಬರಕ್ಕಾಗಿ ಕಲೆಹಾಕುವ ಕಸ ಕೊಳೆಗಳಲ್ಲಿ ದನಗಳ ಮೂತ್ರ ಸಂಗ್ರಹಕ್ಕೂ ಮಹತ್ವ ಕೊಡಬೇಕು. ಸಗಣಿಯಲ್ಲಿರುವಷ್ಟೇ ಗೊಬ್ಬರ ಸತ್ವವು, ದನಗಳ ಮೂತ್ರದಲ್ಲಿದೆಯೆಂದು ಕಂಡು ಬಂದಿದೆ ಇಷ್ಟು ಉಪಯುಕ್ತವಿದ್ದರೂ ಅದನ್ನು ಗೊಬ್ಬರಕ್ಕೆ ಉಪಯೋಗಿಸದೆ ಸುಮ್ಮನೆ ಹಾಳುಗೆಡುವುತ್ತಿರುವದುಂಟು ಅದರ ಮೂತ್ರವನ್ನು ಯೋಗ್ಯವಾದ ರೀತಿಯಿಂದ ಸಂಗ್ರಹಿಸಿದಲ್ಲಿ ಅವಶ್ಯ ಹಾಗು ಉಪಯುಕ್ತ ಗೊಬ್ಬರವು ದೊರೆಯುವದು.

ಸುಲಭ ರೀತಿ

ಕೊಟ್ಟಿಗೆಯಲ್ಲಿ ದನಗಳ ಮೂತ್ರವು ನಿರರ್ಥಕವಾಗಿ ನೆಲದಲ್ಲಿ ಇಂಗಿ ಇಲ್ಲವೆ ಹರಿದು ಹೋಗುವದು. ಕೇವಲ ಸಗಣಿಯನ್ನು ಮೂತ್ರ ಬಳಿದು ಗೊಬ್ಬರಕುಣಿಯಲ್ಲಿ ಹಾಕುತ್ತಾರೆ. ಆದರೆ ಹೀಗೆ ನಿರರ್ಥವಾಗಿ ನಾಶವಾಗುವ ಮೂತ್ರದಲ್ಲಿಯೂ ಮಹತ್ವದ ಗೊಬ್ಬರದ ಸತ್ವಾಂಶಗಳಿವೆಂಬುದನ್ನು ಮರೆಯಕೂಡದು ಸಗಣಿಯೊಂದಿಗೆ ಮೂತ್ರವನ್ನು ಬಳಿದು ಗೊಬ್ಬರಕ್ಕೆ ಹಾಕಿದರೆ ಗೊಬ್ಬರದ ಸತ್ವವು ಹೆಚ್ಚಾಗುವದರಲ್ಲಿ ಸಂದೇಹವಿಲ್ಲ.

ಸುಲಭ ಮಾರ್ಗ

ಮೂತ್ರವನ್ನು ಗೊಬ್ಬರಕ್ಕಾಗಿ ಬಳಸಿಕೊಳ್ಳುವ ಅತ್ಯಂತ ಸುಲಭ ಮತ್ತು ಸರಳವಾದ ಒಂದು ಮಾರ್ಗವಿದೆ. ಒಕ್ಕಲಿಗರು ಅದನ್ನು ವಿಚ್ಚವಿಲ್ಲದೆ ಅನುಸರಿಸಬಹುದು. ಕೊಟ್ಟಿಗೆಯ ನೆಲವನ್ನು ಒಂದು ಅಡಿಯಷ್ಟು ಆಳವಾಗಿ ಅಗಿದು ತಳವನ್ನು ಮುಮ್ಮಸದಿಂದ ಬಡಿದು ಗಟ್ಟಿ ಮಾಡಬೇಕು ಅನಂತರ ಅದರಲ್ಲಿ ಮಣ್ಣು ತುಂಬಿ ಸಪುಮಾಡಬೇಕು. ಹೀಗೆ ಮಾಡುವದರಿಂದ ಮೂತ್ರವು ಸುಲಭವಾಗಿ ಇಂಗುವದು. ಮಣ್ಣನ್ನು ಆಗಾಗ ತಿರುವಿ ಹಾಕಬೇಕು. ಐದಾರು ತಿಂಗಳನಂತರ ಈ ಮಣ್ಣನ್ನು ಅಗಿದುತೆಗೆದು ಗೊಬ್ಬರವೆಂದು ಹೊಲಕ್ಕೆ ಉಪಯೋಗಿಸಬಹುದು. ದಡ್ಡೀ ಗೊಬ್ಬರದಲ್ಲಿ ಇದನ್ನು ಬೆರಿಸಬಹುದು. ಇಲ್ಲವೆ ನೇರವಾಗಿ ಹೊಲಕ್ಕೆ ಹಾಕಬಹುದು. ಪುನಃ ಮಣ್ಣು ತುಂಬಿ ಈ ಕ್ರಮವನ್ನು ನುಂದರಿಸಬೇಕು.

ದನಗಳಿಗೆ ನೆಲದ ತೇವಸಿಂದ ತೊಂದರೆಯಾಗದಂತೆ ಮಳೆಗಾಲದ ಪ್ರಾರಂಭಕ್ಕೆ ಸಾಕಷ್ಟು ಒಣ ಮಣ್ಣನ್ನು ಕೂಡಿಡಬೇಕು. ಈ ರೀತಿ ಸಿದ್ಧಗೊಳಿಸಿದ ನೆಲವು ಸ್ವಲ್ಪ ಮಿಧುವಾಗಿರುವದರಿಂದ ತಗ್ಗು ದಿನ್ನೆಗಳುಂಟಾಗದಂತೆ ನೋಡಿಕೊಳ್ಳಬೇಕು. ದನಗಳ ತುಳಿದಾಟದಿಂದ ಬೀಳುವ ತಗ್ಗುದಿನ್ನೆಗಳನ್ನು ಹೊಸ ಮಣ್ಣು ಹಾಕಿ ಸಂಪಡಿಸಬೇಕು.

ಖರ್ಚಿಲ್ಲದ ಗೊಬ್ಬರ

ಹೀಗೆ ಸಿದ್ಧವಾದ ಗೊಬ್ಬರವು ಉತ್ತಮ ಪ್ರತಿ ಗೊಬ್ಬರವೆಂದು ಕಂಡು ಬಂದಿದೆ. ಇದನ್ನು ಸ್ವಲ್ಪ ಸಿದ್ಧಗೊಳಿಸಲು ಏನು ಖರ್ಚು ಹತ್ತುವದಿಲ್ಲ. ಕೇವಲ ಸ್ವಲ್ಪ ಪುಟ್ಟಿಗೆ ದೈಹಿಕ ಶ್ರಮ ಅವಶ್ಯ ಒಕ್ಕಲಿಗನು ತಾನೆ ಅದನ್ನು ವಹಿಸಬಲ್ಲನು. ವಹಿಸಿದ ಶ್ರಮಕ್ಕಿಂತ ಬರುವ ಲಾಭವು ಹೆಚ್ಚಾಗುವದು. ಈ ಉತ್ತಮ ಗೊಬ್ಬರದ ಪರಿಣಾಮವಾಗಿ ಭೂಮಿಯು ಫಲವತ್ತತೆ ಹೆಚ್ಚುವದು; ಫಲವತ್ತತೆ ಹೆಚ್ಚಿದರೆ ಹುಟ್ಟುವಳಿಯು ಹೆಚ್ಚಬಹುದು ಆದ್ದರಿಂದ ಈ ಮೊದಲು ಹೇಳಿದ ಪದ್ಧತಿಯನ್ನು ಅನುಸರಿಸಿದರೆ, ಗೊಬ್ಬರದ ಪೂರೈಕೆಗೆ ಅನುಕೂಲವಾಗುವದು ಆದ್ದರಿಂದ ಈ ಸುಲಭ ಸರಳ ಮಾರ್ಗವನ್ನು ಒಕ್ಕಲಿಗರು ಅನುಸರಿಸಿ, ದನಗಳ ಮೂತ್ರದಿಂದ ದೊರೆಯುವ ಗೊಬ್ಬರದ ಉತ್ತಮ ಸತ್ಪದ ಲಾಭ ಪಡೆದುಕೊಳ್ಳಬೇಕು.

ಪೂರ್ವಬಂಗಾಲದಲ್ಲಿ ಕೊಲೆಸುಲಿಗೆ

ಪೂರ್ವಬಂಗಾಲದಲ್ಲಿ ಅಲ್ಪಸಂಖ್ಯಾಕ ಹಿಂದೂಗಳ ಮೇಲೆ ಭಯಂಕರ ಕೊಲೆಸುಲಿಗೆ ಅತ್ಯಾಚಾರಗಳು ನಡೆಯುತ್ತಿರುವುದೂ ಪಂಜಾಬಿನಂತೆಯೆ ಪುನಃ ಜನಾಭಿವೃದ್ಧಿ ಆಗುತ್ತಿದ್ದರೂ ಗೊತ್ತಾದೊಡನೆ ಪಾಕಿಸ್ತಾನ ಸರಕಾರವು ಸುದ್ದಿಗಾರರನ್ನು ಸಂಬಂಧಿಸಿ ಈ ಸುದ್ದಿಗಳು ಹೊರಹೋಗದಂತೆ ಮಾಡಿದೆ. ಭಾರತದ ಪ್ರತಿನಿಧಿ ಕೈಕಮೀಶನರ ಭವನಕ್ಕೆ ಭಾರತದ ಪ್ರಜೆಗಳು ಇರಬಾರದೆಂದು ಪಾಕಿಸ್ತಾನ ಸರಕಾರವು ಸಹ ಹೇಳಿಬಿಟ್ಟಿತ್ತು. ಢಾಕ್ಕೆ, ಅಗರತಲ ಗಳ ಮಧ್ಯೆ ತಾತ್ಕಾಲಿಕ ವಿಶೇಷ ವಿಮಾನ ಸಂಚಾರವನ್ನು ಏರ್ಪಡಿಸಿದ್ದು ಭಾರತ ಪಾಕಿಸ್ತಾನದ ಪ್ರತಿನಿಧಿಗಳು ಗಲಭೆ ಮುಟ್ಟಿ ಸಂಪೂರ್ಣ ಪ್ರದೇಶಗಳಲ್ಲಿ ಸಂಚರಿಸಲು ಅವಕಾಶ ಕೊಡಲಾಗಿದೆ.

ಪಂಡಿತ ನೆಹರೂರು ಪರಿಸ್ಥಿತಿಯನ್ನು ಬಂಗಾಳದ ಪರಿಸ್ಥಿತಿಯನ್ನು ವಿವರಿಸುತ್ತಾ ಪಾಕಿಸ್ತಾನ ಸರಕಾರನು ಹಿಂದೂ ಅಲ್ಪಸಂಖ್ಯಾಕರಿಗೆ ಸಾಕಷ್ಟು ರಕ್ಷಣೆಯನ್ನು ಕೊಟ್ಟಿಲ್ಲವೆಂದೂ ಅವರು ಸರ್ಕಾರದಲ್ಲಿ ವಿಶ್ವಾಸ ಕಳೆದುಕೊಂಡಿರುವುದಾಗಿಯೂ ಭಾರತವು ಇನ್ನು ನೋಡುತ್ತಾ ಸುಮ್ಮನಿರಲು ಸಾಧ್ಯವಿಲ್ಲೆಂದು ತಿಳಿಸಿದರು. ಪ. ನೆಹರೂರವರ ಹೇಳಿಕೆಯನ್ನು ಪ್ರತಿಕಾರಕ್ಕೆ ಪ್ರಚೋದನೆ ಬಂಗಾಲದಲ್ಲಿ ದೊಡ್ಡ ಪ್ರಾತ್ಯಕ್ಷಿಕೆಗಳನ್ನೂ ಪ್ರಾರಂಭಿಸಿದೆಯೆಂದೂ ಪ್ರಾಕಾಂದರಲ್ಲಿಯೇ ಹಿಂದುಗಳ ಸ್ಥಿತಿ ಜನರು ಸಹಿಸಿರುವರೆಂದು ಗೊತ್ತಾಗಿದೆ.

ಬದ್ರಿನಾಥ ಎಂಬ ಹಿಮಾಚ್ಛಾದಿತ ಪರ್ವತದ ಯಾತ್ರಿಕರಿಗೆ ಹೋಗಲು ಎಲ್ಲಾ ಸೌಕರ್ಯಗಳನ್ನು ಕಲ್ಪಿಸುವೆನೆಂದೂ ಮೇಲಿನಿಂದ ಯಾತ್ರಿಗಳಿಗೆ ಆಶ್ರಯ ಪ್ರಯಾಣವಾಗಬಹುದೆಂದೂ ಯು. ಪಿ. ಸರ್ಕಾರದವರು ಪ್ರಕಟಿಸಿದ್ದಾರೆ.

ಗುಂಟೂರು ಜಿಲ್ಲೆಯ ರಾಮಚಂದ್ರಪುರದಲ್ಲಿ ೧೦೦ ಜನ ಸನ್ಯಾಸಿಸ್ಥರು ಸ್ಥಾಯಿಫಲಕ ಬಂದು ಹಳ್ಳಿಯ ಶಾನುಭೋಗರ ಮನೆಗೆ ಕಂಚಿ ಮತ್ತು ಒಬ್ಬ ಮಗನನ್ನು ಕರೆದಿನರೆದ ತೊಂದರೆ. ಮಕ್ಕಳ ಅಳುವ ಸಲೆಸಿದ ಪೋಲೀಸ್ ಗುಪ್ತಚರ ಕೈಸ್ಥರು ಏಂಬಾತನನ್ನು ಕೊಂದರು.

1950 ನೆಯ ಇಂಗ್ಲಿಷ ಪರೀಕ್ಷೆಗಳಿಗೆ ಬಳ್ಳಾರಿ ಕೇಂದ್ರದಿಂದ ಉಚ್ಚ ಮತ್ತು ಪ್ರಾಥಮಿಕ ಪರೀಕ್ಷೆಗಳಿಗೆ ೨೫೦ ಜನರು ಕೂತಿದ್ದು ಇವರಲ್ಲಿ ೩೦ ಸ್ತ್ರೀಯರು ಇರುವರು.

ಸಾಲ

ಸುಲಭ ಕಂತುಗಳವೂಲಕ ವಸೂಲಾಗುವ ಅಪ್ಪೆಯನ್ನು ಸರ್ಕಾರವೇ ಕೊಡಬೇಕಾಗಿದೆ. ಈ ಕಾರಣ ಸರ್ಕಾರವು ಇದನ್ನು ಅನ್ಯಮಾಡಲು ರೈತರು ಪಟ್ಟಿಗಳನ್ನು ತಯಾರಿಸಿ ತೀರ್ಮಾನಮಾಡಿ ಸಕಾಲದಲ್ಲಿ ಸಾಧ್ಯವಾದಷ್ಟು ರೈತರಿಗೆ ಮೂಲಕ ತಲಿಪಿಸಬೇಕು. ಹಳ್ಳಿಗಾಡಿನ ಈ ವಿಷಯದಲ್ಲಿ ಸಹಕಾರ ಸಂಘಗಳು ಪ್ರಯತ್ನಿಸಬೇಕು.

ನವಭಾರತಕ್ಕೆ
ಚಂದಾದಾರರಾಗಿರಿ.

ಹಿರೇಮಠ ವಿದ್ಯಾಲಯ, ಬಳ್ಳಾರಿ.

[1931 ಸ್ಥಾಪಿತ ಬಳ್ಳಾರಿ ಜಿಲ್ಲಾ ಹಿಂದೀ ಪ್ರೇಮೀಜನ ಅಭಿಲಾಷೆಯಂತೆ ಪ್ರಾರಂಭವಾಗಿದೆ.]

ಮದ್ರಾಸ್ ಸರ್ಕಾರದಿಂದ ಮಾನ್ಯತೆ ಪಡೆದಿದೆ.

ಪ್ರಾರಂಭಿಕ ವರ್ಗಗಳಿಗೆ ಮಾಸಿಕ ೨/- ರೂಪಾಯಿ ಮತ್ತು ಉನ್ನತ ವರ್ಗಗಳಿಗೆ ಮಾಸಿಕ ೫/- ರೂಪಾಯಿ ಶುಲ್ಕ

ವರ್ಷದ ಹೈಸ್ಕೂಲ್ ಕಟ್ಟಿದದಲ್ಲಿ ಪ್ರಾತಃಕಾಲ ಮತ್ತು ಸಾಯಂಕಾಲ ಹಿಂದೀ ತರಗತಿಗಳು ನಡೆಯುತ್ತಿವೆ. ವಿಶಾರದ — ಪ್ರವೇಶ ವರ್ಗಗಳಲ್ಲದೆ ಪ್ರಾರಂಭಿಕ ವರ್ಗಗಳಿಗೂ ಪ್ರವೇಶವುಂಟು. ವರ್ಗಗಳಿಗೆ ಸಂಬಂಧಿಸಿದ ಪಾಠ ಪುಸ್ತಕಗಳು ವಿದ್ಯಾಲಯದಲ್ಲಿ ದೊರೆಯುತ್ತವೆ. ಒಳ್ಳೆಯ ಪುಸ್ತಕಭಂಡಾರ. ಕ್ರೀಮ್ ಪಾರಿತೋಷಕಗಳು, ಮಾಸಪತ್ರಿಕೆಗಳು ಲಭ್ಯ. ಇನ್ನಿತರ ವಿವರಗಳಿಗೆ ಸ್ಟ್ಯಾಂಪಿಟ್ಟು ಬರೆಯಿರಿ.

ಪ್ರಿನ್ಸಿಪಾಲ್.

NAVA BHARAT BELLARY. (Reg. No. M 4746)

ನವಭಾರತ ಬಳ್ಳಾರಿ. ೫೯—2—50

(Nationalist Weekly)

ಚಂದಾದಾರರಿಗೆ.	Subscription Rates.
ವರ್ಷಕ್ಕೆ 5—0—0	One Year 5—0—0
6 ತಿಂಗಳಿಗೆ 3—0—0	Six months 3—0—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.	Subscription will not be accepted for less than 6 months

To

Sri.....

Printed at Krishna Printing Works. Edited & Published by T. B. Keshava

JAI—HIND

ನವಚೈತನ್ಯ

ಬಳ್ಳಾರಿಯ
ಉಜ್ವಲ ರಾಷ್ಟ್ರೀಯ ವಾರಪತ್ರಿಕೆ.
*
ಉತ್ತಿಷ್ಠತ! ಜಾಗ್ರತ!!
ಪ್ರಾಪ್ಯವರಾನ್ನಿ ಬೋಧತ!!!
*
ಸಂಪಾದಕ ಮತ್ತು ಪ್ರಕಾಶಕ:—
ಟಿ. ಬಿ. ಕೇಶವರಾವು.

ವರ್ಷ ೧೩ | ಸೋಮವಾರ ೬ ಮಾರ್ಚ್ ೧೯೩೮ | ಸಂಚಿಕೆ ೬

ಆದವಾನಿಯಲ್ಲಿ

ಹಿಂದೀ ಪರೀಕ್ಷೆಗಳು

ವಿದ್ಯಾರ್ಥಿಗಳ ಹರತಾಳ

ಆದವಾನಿ ಕೇಂದ್ರದಲ್ಲಿ ಹಿಂದೀ ಪರೀಕ್ಷೆಗಳಿಗೆ ಕೂತ 58 ವಿದ್ಯಾರ್ಥಿಗಳಲ್ಲಿ 44 ವಿದ್ಯಾರ್ಥಿಗಳು ಪರೀಕ್ಷೆಗಳನ್ನು ಬಹಿಷ್ಕರಿಸಿದರೆಂದೂ, ಆದವಾನಿ ಕೇಂದ್ರವನ್ನು ಆಂಧ್ರರಾಷ್ಟ್ರ ಹಿಂದೀ ಪ್ರಚಾರ ಸಂಘಕ್ಕೆ ಹೊಂದಿಸಿದುದು ಇದಕ್ಕೆ ಮುಖ್ಯಕಾರಣವಾಯ್ತೆಂದೂ, ಶ್ರೀ ವಿರುವಾಕ್ಷಯ್ಯನವರು ತಿಳಿಸಿದ್ದಾರೆ. ರಾಷ್ಟ್ರಭಾಷೆಯಾದ ಹಿಂದಿಯನ್ನು ಕಲಿಯುವ ಉದ್ದೇಶ್ಯ ಉತ್ತೇಜನಾ ಪೂರ್ವಕವಾಗಿ ಪರೀಕ್ಷೆಗಳನ್ನಿಟ್ಟಿರುವರು. ಈ ಪರೀಕ್ಷೆಗಳಿಗಾಗಿ ಯಾವ ಕೇಂದ್ರದಲ್ಲಿ ಕೂತರೂ, ಪರೀಕ್ಷಾ ವ್ಯವಸ್ಥಾಪಕರು, ಅನುವಾದ ಭಾಷೆಯು ಜ್ಞಾತರಿಂದ ಉತ್ತರ ಪುಸ್ತಕಗಳನ್ನು ಪರಿಶೋಧಿಸುವರು. ಈ ಕಾರಣ ರಾಷ್ಟ್ರಭಾಷೆಯನ್ನು ಕಲಿಯುವ ಸದುದ್ದೇಶವುಳ್ಳವರು ಹಿಂದೀ ಪರೀಕ್ಷೆಗಳನ್ನು ಬಹಿಷ್ಕರಿಸಿದುದು ಅನ್ಯಾಯವಾಗಿದೆ. ಬೆಜವಾಡದ ಆಂಧ್ರರಾಷ್ಟ್ರ ಹಿಂದೀ ಪ್ರಚಾರಸಂಘದವರು ದುರುದ್ದೇಶದಿಂದ ಕನ್ನಡ ವಿದ್ಯಾರ್ಥಿಗಳನ್ನು ಅನುತ್ತೀರ್ಣರಾಗುವಂತೆ ಪರಿಶಿಸಿದ್ದರೆ ಆಗ ನುದ್ರಾಸ್ ಸಭೆಯವರನ್ನು ಕೇಳಿನ, ಅಪೀಲ್ ಮಾಡುವ ಹಕ್ಕಿರುತ್ತಿದ್ದಿತು.

ವಿದ್ರಾಸಿನ ದಕ್ಷಿಣ ಭಾರತ ಹಿಂದೀ ಪ್ರಚಾರಸಭೆಯು, ಕಾಂಗ್ರೆಸ್ ಸಂಸ್ಥೆಯನ್ನು ಅನುಕರಣ ಮಾಡಹತ್ತಿ ಅನೇಕ ವರ್ಷಗಳಾಯಿತು. ಆದವಾನಿ, ಆಲೂರು, ರಾಯದುರ್ಗಗಳು ಆಂಧ್ರರ ಕ್ಷೇತ್ರವೆಂಬ ಅಂದೋಲನವು ವ್ಯರ್ಥವಾಯಿತು. ಹಿಂದೀ ಪರೀಕ್ಷೆಗಳ ಸಂಬಂಧವಾಗಿರುವ ಈ ಮೂರು ತಾಲೂಕುಗಳ ಅಧಿಕಾರವನ್ನು ಬೆಜವಾಡ ಸಂಘವು ತೆಗೆದುಕೊಳ್ಳಲಿಕ್ಕೆ ಪ್ರಾರಂಭಿಸಿ ಅನೇಕವರ್ಷಗಳಾಗಿದೆ. ಇನ್ನು ಆಂಧ್ರರಾಷ್ಟ್ರದಲ್ಲೆಲ್ಲಾ ಪರೀಕ್ಷೆಗಳನ್ನು ನಡೆಸುವ ಹಕ್ಕನ್ನು ಮದ್ರಾಸ್ ಸಭೆಯಿಂದ ಪಡೆಯಲು ಒಂದು ವರ್ಷವಾಯಿತು. ಅದಕ್ಕೆ ಹಿಂದೀ ಕ್ಷೇತ್ರದಲ್ಲಿ ಪ್ರಾಂತ ಸ್ವಾತಂತ್ರ್ಯವು (Provincial Autonomy) ಈಗ ದೊರೆತಂತಾಗಿದೆ.

ದಕ್ಷಿಣ ಭಾರತದಲ್ಲಿ ಕರ್ನಾಟಕದಲ್ಲಿರುವಷ್ಟು ಹಿಂದೀ ಪ್ರಚಾರಕರೂ ಹಿಂದೀ ಪರೀಕ್ಷಾರ್ಥಿಗಳೂ ಬೇರೆ ಯಾವ ಪ್ರಾಂತದಲ್ಲೂ ಇಲ್ಲ. ಆದರೆ ಕರ್ನಾಟಕ ಸಭೆಯು ಧಾರ್ವಾಡದಲ್ಲಿ ಆಸ್ತಿತ್ವದಲ್ಲಿದೆಯೆಂದು ಕರ್ನಾಟಕದಲ್ಲಿನ ಬಹು ಸಂಖ್ಯಾಕ ಹಿಂದೀ ಪ್ರೇಮಿಗಳಿಗಾವರೂ ಗೊತ್ತಿಲ್ಲವೆನ್ನಿಬಹುದು. ಧಾರವಾಡದಲ್ಲಿ ನಾಮಮಾತ್ರಕ್ಕಿರುವ ಕರ್ನಾಟಕ ಹಿಂದೀ ಪ್ರಚಾರ ಸಭೆಯು ಶಕ್ತಿಶಾಲೀ ಸಂಸ್ಥೆಯಾಗಿದ್ದರೆ, ಹಿಂದೀ ಕ್ಷೇತ್ರದಲ್ಲೂ ಈ ವಿಷವು ಪ್ರವೇಶಿಸುತ್ತಿದ್ದಿಲ್ಲ. ಬಳ್ಳಾರಿ ಕೇಂದ್ರವು ಕರ್ನಾಟಕದಲ್ಲಿನ ದೊಡ್ಡ ಕೇಂದ್ರಗಳಲ್ಲೊಂದು, ಕರ್ನಾಟಕದಲ್ಲಿರುವ ಎರಡು ಹಿಂದೀ ವಿದ್ಯಾಲಯಗಳಲ್ಲಿ ಬೆಂಗಳೂರಿನ ವಿದ್ಯಾಲಯಕ್ಕಿಂತಲೂ, ಬಳ್ಳಾರಿಯದು ದೊಡ್ಡದು. ಆದರೂ ಕರ್ನಾಟಕದ ಕಾರ್ಯದರ್ಶಿಗಳು ಇಲ್ಲಿಗೆ ಬಾರದೆ ಹತ್ತು ವರ್ಷಗಳಾಗಿರಬಹುದು. ಯಾವತ್ತರಹೆ ಪ್ರೋತ್ಸಾಹ ಉತ್ತೇಜನಗಳಿಲ್ಲ, ಪತ್ರಬರೆದರೆ ಮರುತ್ತರ ಬರುವುದೂ ಕಡಿಮೆ.

ಹೀಗೆ ಬಳ್ಳಾರಿ ಜಿಲ್ಲೆಯು ಎಲ್ಲಾ ವಿಷಯಗಳಲ್ಲೂ ಎಲ್ಲರಿಂದಲೂ ನಿರ್ಲಕ್ಷಿಸಲ್ಪಟ್ಟಿದೆ. ಪ್ರಾಂತ ನಿರ್ಮಾಣವಾಗಿ ಬಳ್ಳಾರಿ ಸ್ಥಾನವು ಭದ್ರವಾಗುವವರೆಗೂ ಈ ಅಸಮಾನ ದುಃಖಗಳನ್ನು ಅನುಭವಿಸಬೇಕಾಗುವದೇನೊ !!

ಧ. ಭಾ ಹಿಂದೀ ಪ್ರಚಾರ ಸಭೆಯ ಪರೀಕ್ಷೆಗಳು

ಆದವಾನಿ ಕೇಂದ್ರದಲ್ಲಿ ಹರತಾಳ

" ಈ ಕೇಂದ್ರಕ್ಕೆ ಬಂದ 58 ವಿದ್ಯಾರ್ಥಿಗಳಲ್ಲಿ ೫೮ ವಿದ್ಯಾರ್ಥಿಗಳು ಕನ್ನಡದವರಿದ್ದು ಕನ್ನಡವನ್ನೆ ಅನುವಾದಭಾಷೆಯಾಗಿ ತೆಗೆದುಕೊಂಡಿದ್ದರು. ಆದವಾನಿ ಕೇಂದ್ರವು ಆಂಧ್ರರಾಷ್ಟ್ರ ಹಿಂದೀ ಪ್ರಚಾರ ಸಂಘಕ್ಕೆ ಸೇರಿರುವದು ನಮಗೆ ಗೊತ್ತಾಗಿ, ಅನಂತರ ಅನ್ಯಾಯವಾಗಬಹುದೆಂದು ಬಗೆದು, ಕನ್ನಡಿಗನಕ್ಕೆ ಆದ ಅಘಾತವನ್ನು ಗುರ್ತಿಸಿ 44 ವಿದ್ಯಾರ್ಥಿಗಳು, ಉತ್ತರ ಪುಸ್ತಕಗಳನ್ನು ಹಿಂದಕ್ಕೆ ಕೊಟ್ಟು ಪರೀಕ್ಷೆಗಳಿಗೆ ಬಹಿಷ್ಕಾರ ಹಾಕಿದರು " ಮಗೈರೆ, ಎಂದು ಶ್ರೀ ಎನ್. ವಿರುವಾಕ್ಷಯ್ಯನವರು ಬರೆದಿರುತ್ತಾರೆ.

ಪಂಡಿತ ಬ್ರಹ್ಮದತ್ತ ಭಾರ್ಗವರಿಗೆ ಸತ್ಕಾರ

ಅಜ್ಮೀರ ಜನರಲ್ ಕೋಆರ್ಡಿನೇಟಿಂಗ್ ಸೊಸೈಟಿ ಜನರಲ್ ಮೇನೇಜರರವರಾದ ಪಂಡಿತ ಬ್ರಹ್ಮದತ್ತ ಭಾರ್ಗವರವರು ಬಳ್ಳಾರಿಗೆ ಬಂದಾಗ, ಸ್ಥಾನಿಕ ಶಾಖೆಯವರಿಂದ ಅವರಿಗೆ 17—2—50 ರ ದಿನ ಮುನಿಸಿಪಲ್ ಹೈಸ್ಕೂಲದಲ್ಲಿ ಅಭೂತಪೂರ್ವವಾದ ಸತ್ಕಾರವಾಯಿತು. ಜಿಲ್ಲಾ ಶಾಸನ ಸಭ್ಯರಾದ ಶ್ರೀ ಬಿ. ಭೀಮರಾಯರು ಅಧ್ಯಕ್ಷತೆ ವಹಿಸಿದ್ದರು. ಅವರಿಗೆ ಮಾನಪತ್ರವು ಸಮರ್ಪಿತವಾಗಿ, ಅವರು ವಿವಿಧ ಕಾರ್ಯದಲ್ಲಿ ಕೊಡಗಿದ್ದರೂ, ಸಾರ್ವಜನಿಕ ಸೇವೆಗಾಗಿ ಕಷ್ಟ ಅಮೂಲ್ಯ ಕಾಲ ಮತ್ತು ಧನವನ್ನು ವಿನಿಯೋಗಿಸುತ್ತಿರುವ ಪ್ರಶಂಸೆಯು ಅಡಕವಾಗಿದ್ದಿತು. ಶ್ರೀ ಭಾರ್ಗವರು, ಉತ್ತರಿಸುತ್ತಾ ಸಾರ್ವಜನಿಕರು ವಿವಿಧ ಕಾರ್ಯದಲ್ಲಿ ಅಧಿಕ ಶ್ರದ್ಧೋತ್ಸಾಹಗಳನ್ನು ಪ್ರದರ್ಶಿಸಿ, ರಾಷ್ಟ್ರದ ಆರ್ಥಿಕ ರಚನೆಯ ಕಾರ್ಯದಲ್ಲಿ ಸಹಾಯಕರಾಗಬೇಕೆಂದರು. ಅಧ್ಯಕ್ಷರು ಶ್ರೀ ಭಾರ್ಗವರ ಅಭಿಪ್ರಾಯಗಳನ್ನು ಸಮರ್ಥಿಸುತ್ತಾ ವಿವಿಧ ಪ್ರತಿ ವ್ಯಕ್ತಿಯ ಜೀವನಕ್ಕೆ ಉಪಯುಕ್ತವಾಗಿರಬೇಕೆಂದರು. ಸ್ಥಾನೀಕ ಶಾಖೆಯ ಮ್ಯಾನೇಜರ್ ಶ್ರೀ ಕೆ.ಯಂ. ರಾಮಾಚಾರ್ಯರು ಎಲ್ಲರಿಗೆ ವಂದನೆ ಮನ್ನಿಸಿದರು.

ಅಶೋಕನ ರಾಜ್ಯಭಾರ

ಇಂದು ನಾವು ಸ್ವತಂತ್ರ ಹಿಂದು ಸ್ಥಾನದ ರಾಷ್ಟ್ರಧ್ವಜಕ್ಕಾಗಿ ಮತ್ತು ರಾಜ ಮುದ್ರೆಗಾಗಿ ನಮ್ಮ ಹಿಂದಿನ ದೇಶೀಯ ರಾಜರಲ್ಲಿ, ತನ್ನ ಆಡಳಿತದ ರೀತಿ-ನೀತಿಗಳಿಗೆ ಪ್ರಸಿದ್ಧನಾದ ಅಶೋಕ ಚಕ್ರವರ್ತಿಯ ರಾಜಚಿಹ್ನದಲ್ಲಿಯ ಚಕ್ರ ಮತ್ತು ಸಿಂಹಗಳ ಲಾಂಛನಗಳನ್ನು ಸ್ವೀಕರಿಸಿದ್ದೇವೆ. ಅವುಗಳನ್ನು ಕಣ್ಣುಮುಂದಿಟ್ಟುಕೊಂಡು ಸಾಗಬೇಕಾದ ನಾವು ಅವುಗಳು ಕೊಡುವ ಅರ್ಥ ಮತ್ತು ಸೂಚನೆಗಳನ್ನು ಗಮನಿಸುವದು ಅತ್ಯವಶ್ಯಕವಾದ ಮಾತಾಗಿದೆ. ಮತ್ತು ಅವುಗಳ ನೆರಳಿನಲ್ಲಿ ಅಶೋಕನು ತನ್ನ ಸಾಮ್ರಾಜ್ಯವನ್ನು ಹೇಗೆ ನಡೆಸಿದನೆಂಬ ಬಗ್ಗೆ ದೊರೆಯುವ ವಿವರಗಳೂ ಅಷ್ಟೇ ಮಹತ್ವದ ವಿಷಯವಾಗಿವೆ.

ಧರ್ಮ

ಅಶೋಕನು ಬುದ್ಧ ಧರ್ಮೀಯನಾಗುವದರಿಂದ ಅವನು ಆ ಧರ್ಮವನ್ನು ಜನರಲ್ಲಿ ಹರಡಿದನೆಂಬ ಕಲ್ಪನೆಯು ಸಾಮಾನ್ಯರಲ್ಲಿ ಆಗುವ ಸಂಭವವಿದೆ ಏಕೆಂದರೆ ಹಾಗೆ ಮಾಡಿದ ರಾಜರೇ ಬಹಳ. ಆದರ ಇತಿಹಾಸಜ್ಞರ ಸಂಶೋಧನೆಯು ಹಾಗೆ ಹೇಳುತ್ತಿಲ್ಲ. ರಾಜನ ಧರ್ಮವು ಅದಾಗಿದ್ದರಿಂದ ಮತ್ತು ಪ್ರಜೆಗಳಲ್ಲಿಯ ಕೆಲವು ಬುದ್ಧಧರ್ಮೀಯರು ಆ ಪರಿಸ್ಥಿತಿಯ ಲಾಭತೆಗೆದುಕೊಂಡು ಅದನ್ನು ಹರಡಲು ಯತ್ನಿಸಿರಬಹುದು. ಆ ಮೂಲಕ ಅನೇಕರು ಆ ಕಾಲದಲ್ಲಿ ಆ ಧರ್ಮವನ್ನು ಸ್ವೀಕರಿಸಿರಬಹುದು. ಅಶೋಕನು ತನ್ನ ತನ್ನ ವೈಯುಕ್ತಿಕ ಧರ್ಮವನ್ನು ತನ್ನ ಪ್ರಜೆಗಳ ಮೇಲೆ ಹೇರಲಿಲ್ಲವೆಂಬ ಬಗ್ಗೆ ಆಧಾರಗಳು ದೊರೆಯುತ್ತವೆ.

ಆದರೆ ಅವನು ಸಾಮಾಜಿಕರಿಗಾಗಿ "ಧಮ್ಮ ಮಂಗಲ" ಎಂಬ ನಿಯಮಾವಳಿ ಅಥವಾ ಕಾಯದೆಗಳನ್ನು ರಚಿಸಿದನು. ಅದನ್ನು ಪಾಲಿಸಿದವರಿಗೆ ಈ ಲೋಕ ಮತ್ತು ಪರಲೋಕದಲ್ಲಿ ಸುಖ ಸಿಗುವದೆಂಬುದನ್ನು ಪ್ರಜೆಗಳಲ್ಲಿ ಬಿಂಬಿಸಿದನು. ಸರ್ವರೂ, ಸರ್ವರ ಹಿತಕ್ಕಾಗಿ ಯತ್ನಿಸಬೇಕೆಂಬುದು ಅವನ ತತ್ವವಾಗಿತ್ತು ಮತ್ತು ಪ್ರತಿಯೊಬ್ಬನು ತನ್ನ ದೇಶದ ಪ್ರತಿಯೊಬ್ಬನಿಗಾಗಿ ತನ್ನ ಪಾಲಿನ ಕರ್ತವ್ಯವನ್ನು ಪಾಲಿಸಬೇಕೆಂಬುದು ಅವನ ಪ್ರಚಾರಕಾರ್ಯದ ವಿಷಯವಾಗಿತ್ತು ಮತ್ತು ತಾನೂ ಕೂಡ ಅದೇ ಕರ್ತವ್ಯದಿಂದ ಬದ್ಧನಾಗಿರುವದಾಗಿ ಸಾರುತ್ತಿದ್ದನು.

ಪ್ರಜೆಗಳೆಲ್ಲರೂ ತಮ್ಮ ಪರಿಶ್ರಮದಿಂದ ದೇಶದ ಸಂಪತ್ತನ್ನು ಬೆಳೆಸುವದು ಅವಶ್ಯವಿದೆಯೆಂದು ಅವನು ಪ್ರತಿಪಾದಿಸುತ್ತಿದ್ದನು.

ಆಡಳಿತದ ಮೇಲ್ವಿಚಾರಣೆ

ಎಲ್ಲ ಪ್ರಜೆಗಳೂ ತನ್ನ ಮಕ್ಕಳಂತೆಯೇ ತನ್ನ ಮಕ್ಕಳು ಸುಖದಿಂದ ಇರಬೇಕೆಂದು ತಾನು ಇಚ್ಚಿಸಿದಂತೆ ಎಲ್ಲ ಪ್ರಜೆಗಳೂ ತನ್ನ ಮಕ್ಕಳಂತೆಯೇ ಸಮಾಧಾನ ಶಾಂತಿಗಳಿಂದ ಕೂಡಿರಬೇಕೆಂದು ತಾನು ಬಯಸುವದಾಗಿ ಅಶೋಕನು ಹೇಳುತ್ತಿದನು. ತನ್ನ ಕೈಕೆಳಗಿನ ಆಡಳಿತಗಾರರಿಗೆ ಅವನು ಮೇಲಿಂದ ಮೇಲೆ ಅವರ ಕರ್ತವ್ಯದ ನೆನಪುಮಾಡಿ ಕೊಡುತ್ತಿದ್ದನು "ಎಲ್ಲರೂ ಕರ್ತವ್ಯವನ್ನು ಸಂಪೂರ್ಣವಾಗಿ ಪಾಲಿಸುವದಿಲ್ಲವೆಂಬ ಮಾತು ನನಗೆ ಗೊತ್ತಿದೆ. ಆದರೆ ಅವರು ಆದಷ್ಟು ಯತ್ನದಲ್ಲಿ ಮನಃಪೂರ್ವಕವಾಗಿ ಯತ್ನಿಸಬೇಕು. ನಾನು ಅವರ ಮೇಲೆ ಮೇಲ್ವಿಚಾರಕರನ್ನು ನಿಯಮಿಸುವ ಕ್ರಮವನ್ನು ಕೈಕೊಳ್ಳುತ್ತಿರುವೆನು" ಎಂದು ಅವನು ಸಾರುತ್ತಿದ್ದನು ಮತ್ತು ಅದೇ ಮೇರೆಗೆ ತಾನು ಕೂಡ ಸ್ವತಃ ಮೇಲ್ವಿಚಾರಣೆಯ ಕಾರ್ಯವನ್ನು ಪೂರೈಸುತ್ತಿದ್ದನು.

ಇಷ್ಟಾದರೂ ಅವನ ರಾಜ್ಯದಲ್ಲಿ ಪ್ರಜೆಗಳನ್ನು ಹಿಂಡುವ ಅಧಿಕಾರಿಗಳು ಇದ್ದೇ ಇದ್ದರು ತಕ್ಷಶಿಲೆಯ ದುಷ್ಟವ್ರಾಂತಾಧಿಪತಿಗಳ ಮೂಲಕ ಅವನ ತಂದೆಯಾದ ಬಿಂದುಸಾರನ ಆಳಿಕೆಯಲ್ಲಿ ಮತ್ತು ಒಮ್ಮೆ ಅಶೋಕನ ಆಡಳಿತೆಯಲ್ಲಿ ಅನ್ಯಾಂತದಲ್ಲಿ ಎದ್ದು ಸಲ ಪ್ರಜೆಗಳು ದಂಗೆಯೆದ್ದರು. ಬಿಂದುಸಾರನು ಆ ಉದ್ರೇಕವನ್ನು ಶಾಂತಗೊಳಿಸುವದರ ಸಲುವಾಗಿ ಅಶೋಕನನ್ನು ಕಳಿಸಿದ್ದನು ಆಗ ಅಶೋಕನು ಅಲ್ಲಿಗೆ ಹೋಗಿ ಬಹಳ ಸಮಂಜಸವಾದ ರೀತಿಯಿಂದ ಆ ತಂಟೆಯನ್ನು ತೀರಿಸಿಬಂದನು. ಜನರು ತಮ್ಮ ಆಡಳಿತಗಾರನ ಮೇಲೆ ಎಷ್ಟೇ ಸಿಟ್ಟುಗೆದ್ದಿದ್ದರೂ ಪ್ರಜಾವತ್ಸಲನಾದ ಬಿಂದುಸಾರ ಮತ್ತು ಅವನ ಉತ್ತಮ ತರಗತಿಯ ಮಗ ಅಶೋಕನ ವ್ಯಕ್ತಿತ್ವ ಮತ್ತು ಅವನ ಮನೋವೃತ್ತಿಗಳನ್ನು ಕಂಡು, ಅವನಿಗೆ ತಮ್ಮ ರಾಜನಿಷ್ಠೆಯನ್ನು ವ್ಯಕ್ತಮಾಡಿ ಅವನ ಮೇಲೆ ಭರವಸೆಯಿಟ್ಟು ತಮ್ಮ ನಿರ್ಧಾರವನ್ನು ಬದಿಗರಿಸಿ ಪುನಃ ತಲೆಬಾಗಿಸಿದರು ಅಶೋಕನ ಕಾಲದಲ್ಲಿ ಎದ್ದ ದಂಗೆಯನ್ನು ಶಾಂತಪಡಿಸುವದಕ್ಕಾಗಿ ಅವನ ಮಗನಾದ ಕುನಾಲ ಇವನನ್ನು ಕಳುಹಿಸಿದನು. ಅವನು ಕೂಡ ತನ್ನ ತಂದೆಯಂತೆಯೇ ಬಹು ಚಾಣಾಕ್ಷತನದಿಂದ ಅದನ್ನು ನಂದಿಸಿ ಬಂದನು ಜನರನ್ನು ಕೈಪ್ರತಿಪಡಿಸುವದಕ್ಕಾಗಿ ಆ ಆಡಳಿತಗಾರರನ್ನು ತೆಗೆಯಬೇಕಾದ ತಪ್ಪು ಹಾಗೆ ತೆರವು ಬಿದ್ದ ಸ್ಥಳದಲ್ಲಿ ರಾಜಪುತ್ರರೇ ಕಾರ್ಯಕೈಕೊಂಡರು.

ಪರದೇಶ ಧೋರಣ

ಭಾರತದಲ್ಲಿ ಅಶೋಕನ ಆಡಳಿತಕ್ಕೆ ಸೇರಿದ್ದ ಭಾಗಗಳನ್ನು ನೋಡಿದರೆ, ವಾಯುವ್ಯದಲ್ಲಿ ಕಾಬೂಲ, ಕಾಶ್ಮೀರಗಳು ಉತ್ತರಕ್ಕೆ ಹಿಮಾಲಯ ಪರ್ವತವೂ ಪೂರ್ವಕ್ಕೆ ಬಂಗಾಲ ಪ್ರಾಂತವೂ, ದಕ್ಷಿಣದಲ್ಲಿ ಅರ್ಧ ಸ್ವತಂತ್ರವಿದ್ದ ಚೋಳ, ಪಾಂಡ್ಯ, ಸತೀಯಪುರ, ಕೇರಳಪುರ ಈ ಭಾಗಗಳನ್ನು ಬಿಟ್ಟರೆ ವೈಸೂರಿಗಿಂತ ಕೆಳಗಿನ ಭಾಗವೂ ಅದರ ಮೇರೆಗಳಾಗಿದ್ದವು. ಈ ದೇಶದ ಹೊರಗಿನ ರಾಜ್ಯಗಳೊಡನೆ ಕೂಡ ಅವನು ಸಖ್ಯ ಬೆಳೆಸಿದ್ದನು. ಸಿರಿಯಾದ ರಾಜದ ಏನ್ಟಿಯೋಕಸ್ ಥಿಯೋಸ್ ಇಜಿಪ್ತದ ರಾಜನಾದ ಟೇಟೋಲೆಮೀ ಫಿಲೆಡೆಲ್ಫೋಸ್, ಉತ್ತರ ಆಫ್ರಿಕೆಯಲ್ಲಿಯ ಸಿರೀನಯ ರಾಜನಾದ ಮಗಾಸ್ ಮೆಸಿಡೋನಿಯಾದ ರಾಜನಾದ ಆ್ಯಂಟಿಗೋನಸ್ ಗೋನಾಟಾಸ್ ಇವರೂ ಅವನ ಸ್ನೇಹಿತರಾಗಿದ್ದರು. ಈಗಿನ ಸಿಂಹಲದ್ವೀಪಕ್ಕೆ ಆಗ ತಾಮ್ರಪರ್ಣಿ ಎಂಬ ಹೆಸರಿತ್ತು ಅದೂ ಅವನೊಡನೆ ಸಹಕರಿತಸುತ್ತಿತ್ತು ಮಾರ್ಗದರ್ಶನ ಧೋರಣ ಮತ್ತು ಅಶೋಕನ ಭೂತದಯಾಯುಕ್ತವಾದ ಆಡಳಿತದ ಮಾದರಿ ಇವುಗಳ ಮೂಲಕ ಪರಕೀಯರು ಭಾರತದೊಡನೆ ಸಹಾನುಭೂತಿಪರವಾದ ಸಂಬಂಧವನ್ನಿಟ್ಟುಕೊಂಡಿದ್ದರು

ಕಳಿಂಗ ಯುದ್ಧದಲ್ಲಿ ಅಶೋಕನು ಕ್ಷಿದಮೇಲೆ ಜನರನ್ನು ಸಂಹರಿಸಬೇಕಾಯಿತು ಮತ್ತು ಅದಕ್ಕೂ ಹೆಚ್ಚು ಜನರನ್ನು ಸೆರೆಹಿಡಿದನು. ಇದರಿಂದ ಅವನಲ್ಲಿ ತೀಕ್ಷ್ಣವಾದ ಪಶ್ಚಾತ್ತಾಪ ಬುದ್ಧಿಯು ಹುಟ್ಟಿತು ಆದ್ದರಿಂದ 'ದಿಗ್ವಿಜಯ' ಎಂಬ ಶಬ್ದಕ್ಕೆ ಅವನು 'ಧರ್ಮವಿಜಯ' ಎಂಬ ರೂಪಕೊಟ್ಟನು. ಮತ್ತು ಯುದ್ಧಗಳ ಘೋಷಣೆಗೆ 'ಧಮ್ಮ ಘೋಷ' ಎಂದು ಕರೆಯಹತ್ತಿದನು.

ಇವೆಲ್ಲ ಮಾತುಗಳನ್ನು ಅವನು ಕಲ್ಲುಗಳಲ್ಲಿ ಬರೆಯಿಸಿ ದೇಶದ ಎಲ್ಲ ಭಾಗಗಳಲ್ಲಿ ನಿಲ್ಲಿಸುತ್ತಿದ್ದನು. ಪುಸ್ತಕ ಕಾಗದಗಳಿಲ್ಲದ ಆ ಕಾಲದಲ್ಲಿ ಇದೇ ಮಾರ್ಗವು

ಪ್ರಚಾರಕ್ಕೆ ತಕ್ಕದಾಗಿತ್ತು. ಇಂದಿಗೂ ಆ ಕಲ್ಲುಗಳು ನಿಗುತ್ತ ಆ ಕಾಲದ ಇತಿಹಾಸವನ್ನು ನಮಗೆ ಹೇಳುತ್ತಿವೆ. ಇದರ ಮೇಲಿಂದ ಆ ಜನರ ದೂರದೃಷ್ಟಿ ಮತ್ತು ಶಾಶ್ವತವಾದ ಕಾರ್ಯಗಳ ಕಲ್ಪನೆಯು ಉಂಟಾಗದೆ ಇರದು.

ಏಕೆ ಪತನವಾಯಿತು?

ಅಶೋಕನ ಅಹಿಂಸೆಯ ಮೂಲಕ ಅವನ ರಾಜ್ಯದ ಪತನವಾಯಿತು ಎಂದು ಕೆಲವರು ಅನುಮಾನ ತೆಗೆದಿದ್ದಾರೆ. ಆದರೆ ಈ ಮಾತನ್ನು ಇತಿಹಾಸಜ್ಞರು ಮತ್ತು ತಜ್ಞಿಷಯಕವಾದ ಸಂಶೋಧನೆಯನ್ನು ಮಾಡಿದವರು ಒಪ್ಪುತ್ತಿಲ್ಲ ಅವನು ದಿಗ್ವಿಜಯಕ್ಕೆ ಧಮ್ಮ ವಿಜಯ ಎಂದೂ ಯುದ್ಧ ಘೋಷಣೆಗಳಿಗೆ ಧಮ್ಮ ಘೋಷ ಎಂದೂ ಹೆಸರಿಟ್ಟಿದ್ದನ್ನು ನೋಡಿದರೇನೆ, ಪರಕೀಯ ದಾಳಿಯನ್ನು ತನ್ನ ದೇಶದಲ್ಲಿಯ ವಿರೋಧಶಕ್ತಿಗಳನ್ನು ಎದುರಿಸಲು ಅವನು ತಪ್ಪುತಿದ್ದಿಲ್ಲವೆಂಬ ಮಾತು ಸ್ಪಷ್ಟವಾಗುತ್ತದೆ ಆದರೆ ಕಲಿಂಗ ಕಾಳಗದ ನಂತರ ಅವನ ದೃಷ್ಟಿಯು ವ್ಯತ್ಯಾಸಗೊಂಡಿತ್ತು. ಅವನು ವಿನಾಕಾರಣ ಯುದ್ಧಮಾಡುತ್ತಿದ್ದಿಲ್ಲ, ಇಲ್ಲವೆ ಅನ್ಯಾಯಕ್ಕೆ ಕೈ ಹಾಕುತ್ತಿದ್ದಿಲ್ಲ ನ್ಯಾಯ ಸ್ಥಾಪನೆಗಾಗಿ ಮತ್ತು ತನ್ನ ದೇಶದ ರಕ್ಷಣೆಗಾಗಿ ಅವನು ಹೋರಾಟ ಮಾತದೆ ಇರುತ್ತಿದ್ದಿಲ್ಲ.

ಅಂತೆಯೇ ಅವನ ಸಾಮ್ರಾಜ್ಯವು ಅವನು ಇರುವವರೆಗೆ ನಿರ್ಭಯವಾಗಿ ಸಾಗಿತ್ತು ಚಂದ್ರಗುಪ್ತನ ಕಾಲದಲ್ಲಿ ಮೌರ್ಯರು ಉತ್ತರದಲ್ಲಿ ಗ್ರೀಕರನ್ನು ಸೋಲಿಸಿ ಕಾಬೂಲ ಮತ್ತು ಇತರ ಪ್ರದೇಶಗಳನ್ನು ಹಿಡಿದುಕೊಂಡಿದ್ದರು ಆ ಗ್ರೀಕರ ಅಸಮಧಾನವು ಎಂದಿನಿಂದಲೂ ಇದ್ದೇಇತ್ತು. ಅಶೋಕನ ಮರಣದ ನಂತರ, ಯವನರು ಬಂದು ಉತ್ತರ ಹಿಂದುಸ್ಥಾನದಲ್ಲಿ ವ್ಯಾಪಿಸಿದರು.

ಈ ಪರಿಸ್ಥಿತಿಯನ್ನು ನೋಡಿದರೆ ಅಶೋಕನ ಅಹಿಂಸೆಯು ಮೂಲಕ ಅವನ ರಾಜ್ಯವು ಅಮೇಲೆ ಕೆಡಗಿದನೆ ಅವನ ಕರುಪಾಯದ ಅಸಮರ್ಥರಾಜರಿಂದ ಆ ಪರಾಣಾಮವುಂಟಾಗಿರುವದೆಂದು ತಿಳಿಯುತ್ತದೆ. —

ಜೀವನ ಸುಮಗಳು

ಕಾವಲು:-

ಇಡೀ ಜಗತ್ತೇ ನಿದ್ರಿಸುತ್ತಿರುವಾಗ ನಿಷ್ಕಾಮನಾದ ಗಸ್ತು ಕಾವಲುಗಾರನ ತಾಸೊಬ್ಬನೇ ನಿಕೆ ಎಚ್ಚತ್ತಿರಬೇಕೆಂದು ಚಿಂತಿಸುವನೇ? ಜಗತ್ತು ನಿಶ್ಚಿಂತೆಯಿಂದ ನಿದ್ರಿಸಲೆಂದೇ ತಾನು ಎಚ್ಚತ್ತಿರುವುದಾಗಿ ಆ ಕಾವಲುಗಾರನು ಭಾವಿಸುತ್ತಾನೆ ಜಗತ್ತು ಹಾಗೆ ನಿದ್ರಿಸಲು ಅಸಮರ್ಥವಾದರೆ ತನ್ನ ನಿದ್ರಿಯೇ ನಿಷ್ಫಲವಾದುದೆಂದು ಅವನು ತಿಳಿಯುತ್ತಾನೆ.

ಕೋಳಿ-ಗೂಳಿ:-

ತಿಪ್ಪೆಯಲ್ಲಿಯ ಗೊಬ್ಬರದ ರಾಶಿಯನ್ನು ಕೆದರುತ್ತಿರುವ ಕೋಳಿ ಅದರಲ್ಲಿರುವ ಹುಸ್ಪಡಿಗಳನ್ನು ಆರಿಸಿ ಹೊಟ್ಟೆಹೊರೆದು ಕೊಳ್ಳುತ್ತದೆ.. ಆದರೆ.... ಗೂಳಿ? ಮದ ವೇರಿದ ಗೂಳಿ ಗೊಬ್ಬರವನ್ನು ಸಿಕ್ಕಾ ಪಟ್ಟೆ ಕೆದರಿ, ತೂರಿ, ಚೆಲ್ಲಿ, ತನ್ನ ತಲೆ ಕೋಡು ಕಾಲುಗಳನ್ನೆಲ್ಲ ಹೊಲಸು ಮಾಡಿಕೊಳ್ಳುತ್ತದೆ.

ಉಪನ್ಯಾಸದಫ್ಯಾಶನ್ನು:-

ಭಾರತೀಯರು "ಗಾಂಧೀಜಿ" "ಸತ್ಯ ಅಹಿಂಸೆ" "ಸರ್ವೋದಯ" ಮೊದಲಾದ ಶಬ್ದೋಚ್ಚಾರಣೆಯನ್ನು ಮನಬಂದಲ್ಲಿ ಮಾಡುತ್ತಲಿದ್ದಾರೆ. ಅದು ಒಂದು ಅವರ ಚಾಳಿಯೇ ಆಗಿದೆ. ಪ್ರತಿಯೊಬ್ಬ ಉಪನ್ಯಾಸಕನೂ ತನ್ನ ಭಾಷಣದಲ್ಲಿ "ಇದೇ ನಮ್ಮ ರಾಷ್ಟ್ರಪಿತನ ಉಪದೇಶ" ಗಾಂಧೀಜಿ ಹೇಳಿದ ಮಾರ್ಗಾವಲಂಬನ ಎಂದಲೇ ಕಟ್ಟಕಡೆಗೆ ಜಗದ ಹಿತವಾಗಬಲ್ಲದು ಎಂದು ಪ್ರತಿಯೊಬ್ಬ ಮುಂದಾಳು ಪೂಮಂತ್ರಿಯೂ ಭಾವಿಸಿದಂತೆ ಪೇಳುತ್ತಾರೆ.

ಸದ್ಗುಣ:-

ತನ್ನ ಸುಗಂಧವನ್ನು ಸವಿದು ಮೆಚ್ಚಲು ಯಾವ ಮನುಷ್ಯನಿಗೂ ಇಲ್ಲವೆಂದು ವನ ಸುಮವು ತಾನೇಕ ಅರಳಿ ವ್ಯರ್ಥವಾಗಿ ಗಾಳಿಯಲ್ಲಿ ಕೆಂಪು ಹಬ್ಬಿಸಬೇಕು ಎಂದು ಬಗೆಯುವುದೇ? ವನಸುಮಕ್ಕೆ ವಿಚಾರ ಶಕ್ತಿಯಲ್ಲಿ ಅದು ಸುಗಂಧ ಬೀರುವುದೇ ತನ್ನ ಕಾರ್ಯ ಯಾರಾದರೂ ಅನುಭವಿಸಿ ಮೆಚ್ಚಲಿ, ಬಿಡಲಿ, ತಾನೇಕ ತನ್ನ ಆವುನ್ಯಕಾರ್ಯವನ್ನ ಬಿಡಬೇಕು? ಎಂದು ತಿಳಿಯುವುದು.

—"ಸುರಜನ"ದಿಂದ

—●—

ಸರಕಾರಕ್ಕೆ ಸೋಶಲಿಸ್ಟರಿ ಸಹಾಯ

ದೇಶಕ್ಕೆ ಗಂಡಾಂತರ ಬಂದ ಕಾಲದಲ್ಲಿ

ಯಾವ ದಿಕ್ಕಿನಿಂದಲೇ ಬರಲಿ ಜಿಥವಾ ಯಾರಿಂದಲೇ ಆಗಲಿ ಭಾರತದ ಮೇಲೆ ಪರಕೀಯರ ಆಕ್ರಮಣವಾದದ್ದೇ ಆದರೆ ಸೋಶಲಿಸ್ಟರು ಸರಕಾರಕ್ಕೆ ಬೆಂಬಲ ಕೊಡಲಿ ಇರಲಾರರು ಎಂದು ಸೋಶಲಿಸ್ಟ ಧುರೀಣರಾದ ಶ್ರೀ ಪುರುಷೋತ್ತಮದಾಸ ತ್ರಿಕಮದಾಸರು ಗೌಹಾತಿ ಸಭೆಯಲ್ಲಿ ಹೇಳಿದರು.

ಕಾಂಗ್ರೆಸ ಸರಕಾರದೊಂದಿಗೆ ಮತ ಭೇದವಿದ್ದರೂ ಗಂಡಾಂತರ ಸಮಯದಲ್ಲಿ ದೇಶದ ಮಾನರಕ್ಷಣೆಗಾಗಿ ತಾವು ಸಹಕರಿಸಲು ಸಿದ್ಧರಿರುವದಾಗಿ ಅಸಾವ್ಯ ಸೋಶಲಿಸ್ಟ ಪಕ್ಷದ ಮೂರನೆಯ ವಾರ್ಷಿಕ ಸಭೆಯಲ್ಲಿ ಮಾತನಾಡುತ್ತಾ ಹೇಳಿದರು.

ಸಣ್ಣ ಕಾಳುಗಳ ವಿನಿಯಂತ್ರಣ

ಒಕ್ಕೂಟ ಸರಕಾರದ ಒಪ್ಪಿಗೆ?

ಬಳ್ಳಾರಿ ೨೫-೨-೫೦- ದಿವಸ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಸೇರಿದ ಜಿಲ್ಲಾ ಆಹಾರ ಸಮಿತಿಯಲ್ಲಿ ಸಣ್ಣಕಾಳುಗಳ ಸಂಗ್ರಹವು ಸಾಕಷ್ಟಿರುವದರಿಂದ ಅವುಗಳ ಮೇಲಿನ ನಿಯಂತ್ರಣವನ್ನು ತೆಗೆದುಹಾಕಬೇಕೆಂದು ಪುನಃ ಒತ್ತಾಯದಿಂದ ಕೇಳಿಕೊಳ್ಳಲಾಯಿತು. ಚರ್ಚೆಯ ಕಾಲಕ್ಕೆ ಓರ್ವ ಸದಸ್ಯರು ಒಕ್ಕೂಟ ಸರಕಾರದ ಮುಂಗಂಡ ಅಪ್ಪಣೆ ತೆಗೆದುಕೊಳ್ಳದೆ ಪ್ರಾಂತಿಕ ಸರಕಾರಕ್ಕೆ ನಿಯಂತ್ರಣ ತೆಗೆದುಹಾಕಲು ಬರುವದೇನೆಂದು ಪ್ರಶ್ನಿಸಿದರು. ಬಿಸಿಸಿ ನ್ಯೂಸ್ ಅವ್ಯಕ್ಷರಾದ ಶ್ರೀ ಹೆಚ್. ಲಿಂಗಾರೆಡ್ಡಿಯವರು ಉತ್ತರ ಕೊಡುತ್ತ ನಿಯಂತ್ರಣ ತೆಗೆದುಹಾಕಲು ಒಕ್ಕೂಟ ಸರಕಾರದ ಅಪ್ಪಣೆಯನ್ನು ಈಗಾಗಲೆ ಪಡೆದುಕೊಂಡಿದೆಯೆಂದು ತಿಳಿಸಿ ಪ್ರಾಂತಿಕ ಸರಕಾರದ ಆಹಾರ ಮಂತ್ರಿಗಳೂ ಸಣ್ಣ ಕಾಳುಗಳ ಮೇಲಿನ ನಿಯಂತ್ರಣ ತೆಗೆದುಹಾಕುವ ಆಶ್ವಾಸನೆ ಕೊಟ್ಟಿರುವರೆಂದು ಇನ್ನೂ ಅವುಗಳ ಮೇಲೆ ನಿಯಂತ್ರಣವಿರುವದಕ್ಕೆ ಆಹಾರ ಶಾಖೆಯ ಅಧಿಕಾರಿಗಳೇ ಕಾರಣರಿರುವದೆಂದೂ ಹೇಳಿದರು. ಸಭೆಯಲ್ಲಿ ಕೆಲವು ಸದಸ್ಯರು ಸೀದೇತರ ಭಾಗಗಳಲ್ಲಿ ಅಕ್ಕಿಯು ಪೂರೈಸಲ್ಪಡುತ್ತಿರುವದಿಲ್ಲೆಂದು ದೂರಿದ್ದರಿಂದ ಈ ಬಗ್ಗೆ ತಿಂಗಳಿಗೆ ಕನಿಷ್ಟ ೧೦೦೦ ಟನ್ ಅಕ್ಕಿ ಹೆಚ್ಚು ಕೊಡಲು ಸರಕಾರಕ್ಕೆ ವಿನಂತಿಸಬೇಕೆಂದು ಸಭೆಯಲ್ಲಿ ಗೊತ್ತಾಯಿಸಲಾಯಿತು.

ನವಭಾರತಕ್ಕೆ

ಚಂದಾದಾರರಾಗಿರಿ.

ಆಹಾರ ನಿಯಂತ್ರಣದ ಹುಳುಕುಗಳು

ನಿವಾರಿಸಲು ಎರಡು ಹಾವಿ, ಪೂರ್ಣ ವಿನಿಯಂತ್ರಣ ಇಲ್ಲವೆ ವ್ಯಾಪಾರಿಗಳ ಮೂಲಕ ಹಂಚುವಿಕೆ

ಲೇಖಕರು:— ಶ್ರೀ ಕೆ. ವಿ. ಕೌಂಡಿನ್ಯ

ಈ ಕೆಳಗಿನದು (ನಿನ್ನೆತ್ತ) ನೆನ್ನೂ ಅಧಿಕಾರಿಯಾಗಿ ನನಗೆ ಬಂದ ಅನುಭವಗಳ ಆಧಾರದಿಂದ ಬರೆದುದಾಗಿದೆ.

ನಿಯಂತ್ರಣಗಳು ಅನಿವಾರ್ಯವೇ ಎಂಬ ವಿಚಾರದಲ್ಲಿ ಪತ್ರಿಕೆಗಳೂ ಭಾಷಣಕಾರರು ಗುದುಮುರಿಗೆ ಹಾಕುತ್ತಲೇ ಇರುವರು ಕೆಲವರು ದೇಶದಲ್ಲಿ ಆಹಾರದ ಕೊರತೆಯಿರುವದರಿಂದ ಅವು ಬೇಕೆಂದರೆ ಉಳಿದವರು ಆಹಾರ ಕೊರತೆಯೆಂಬುದೇ ಭ್ರಾಂತಿಯೆಂದೂ ನಿಯಂತ್ರಣಗಳಿಂದ ಕಳ್ಳಸೇಟೆ ವ್ಯಾಯವಾಗುವ ಬದಲು ಅವು ಕಳ್ಳಸೇಟೆಯನ್ನು ಭಯ-ಪ್ರದರ್ಶನವನ್ನೂ ಉಂಟುಮಾಡಿವೆಯೆಂದು ಸಾಧಿಸುತ್ತಾರೆ. ಈ ವರೆಗೆ ಆಗಿ ಹೋದುದನ್ನು ಚರ್ಚಿಸುವ ಇಚ್ಛೆ ನನಗಿಲ್ಲ ಆದರೆ ನಿಯಂತ್ರಣವೆಂಬುದೇ ಕೃತಕೋನಾಯವೆಂಬಲ್ಲಿ ನುತ್ತು ಅದನ್ನು ಆದಷ್ಟು ಬೇಗ ಕೊನೆಗೊಳಿಸಿ ಸ್ವಾಭಾವಿಕ ವಿತರಣೆ ಪದ್ಧತಿಯನ್ನು ಪುನಃ ಪ್ರಾರಂಭಿಸಬೇಕೆಂಬಲ್ಲಿ ಅಭಿಪ್ರಾಯ ಭೇಧಕ್ಕೆಡೆಯಿಲ್ಲ ಇರಕೂಡದು. ಈ ಪದ್ಧತಿಯಿಂದ ಅನೇಕ ಸಿಕ್ಕುಗಳು ಉದ್ಭವಿಸಿವೆ.

ನಿಯಂತ್ರಣದ ದೋಷಗಳು

ಮೊದಲನೆಯದಾಗಿ ಸರಕಾರವೆಂಬುದೊಂದು ವ್ಯಕ್ತಿಯಲ್ಲ. ಅದು ಸಂಬಳದ ನೌಕರರ ಮೂಲಕ ಕೆಲಸಮಾಡಿಸಬೇಕಾಗುತ್ತದೆ. ಈ ನೌಕರರಿಂದ ಸದ್ಯಸ್ಥಿತಿಯಲ್ಲಿ ಸಾಕಷ್ಟು ಸ್ವಾಮಾಣಿಕತೆಯನ್ನಾಗಲಿ ವ್ಯಾವಹಾರಚಾತುರ್ಯವನ್ನಾಗಲಿ ನಿರೀಕ್ಷಿಸಲು ಸಾಧ್ಯವಿಲ್ಲ.

ಎರಡನೆಯದಾಗಿ ಜಿಲ್ಲೆಯಿಂದ ಜಿಲ್ಲೆಗೆ ಧಾನ್ಯಗಳನ್ನು ಸಾಗಿಸುವಾಗ ಸಾಕಷ್ಟು ವಿಚಾರ ಮಾಡುವದಿಲ್ಲ. ಇದರಿಂದ ಸಾಗಿಗೆ ವೆಚ್ಚವ್ಯರ್ಥವಾಗಿ ಏರುತ್ತದೆ. ಎಷ್ಟೋ ವೇಳೆ ಉತ್ತಮ ಧಾನ್ಯ ಬೆಳೆಯುವ ಜಿಲ್ಲೆಯಲ್ಲಿ ಹೊರಗಿನ ಕೀಳುತರದ-ಸಾಗಾಟದಲ್ಲಿ ಕೆಟ್ಟ ಧಾನ್ಯವನ್ನು ಹಂಚಿ ಉತ್ತಮ ಧಾನ್ಯಗಳನ್ನು ಬೇರೆ ಜಿಲ್ಲೆಗಳಿಗೆ ಕಳಿಸಲಾಗುತ್ತವೆ.

ಮೂರನೆಯದಾಗಿ, ಈಗಿನ ಪದ್ಧತಿಯಲ್ಲಿ ದೇಶದ ನಿಜವಾದ ಆಹಾರದ ಸ್ಥಿತಿಯನ್ನು ಡೆತಹಿಡಿಯುವುದು ಅತ್ಯಾವಶ್ಯಕವಾಗಿರುವುದರಿಂದ ನಿಜವಾದ ಕೊರತೆಯನ್ನು ನಿರ್ಧರಿಸುವುದೂ ಅಸಾಧ್ಯ.

ನಾಲ್ಕನೆಯದಾಗಿ, ಒಂದು ಪ್ರಾಂತದ ಧಾನ್ಯ ವಸೂಲಿ ಕ್ರಮಕ್ಕೂ ಇನ್ನೊಂದರ ದಕ್ಕೂ ತಾಳಮೇಳವಿಲ್ಲ. ನಮ್ಮ ಕಣಜಗಳಿಸಿದ ಪ್ರದೇಶಗಳು ಪಾಕಿಸ್ತಾನಕ್ಕೆ ಸೇರಿದ್ದರಿಂದಲೂ ಬ್ರಹ್ಮದೇಶದ ಗಲಭೆಗಳು ನಮ್ಮ ಆಹಾರ ಪರಿಸ್ಥಿತಿಯನ್ನು ಇನ್ನಷ್ಟು ಕಡಿಸಿರುವುದರಿಂದಲೂ ಎಲ್ಲ ಪ್ರಾಂತಗಳು ಸಹಕಾರದಿಂದ ಜನತೆಯ ಹೊಟ್ಟೆ ಹೊರೆಯಲು ಅನುಭವವಾಗಬೇಕಿತ್ತು. ಆದರೆ ವಾಸ್ತವಿಕವಾಗಿ ಅವು ಹಾಗೆ ಮಾಡಲಿಲ್ಲ. ಉಳಿಕೆಯ ದೇಶದ ಆಪತ್ತನ್ನು ನೀಗಿಸಲು ನಿಜವಾಗಿ ಇನ್ನೂ ಹೆಚ್ಚಾಗಿ ನೆರವಾಗಬಹುದಿತ್ತು. ಈಗ ಪ್ರಾಂತಪ್ರಾಂತಗಳಲ್ಲಿನ ಧಾನ್ಯ ಸಾಗಾಟದ ಪ್ರತಿಬಂಧಗಳಿಂದ ಕೊರತೆಯ ಪ್ರಾಂತಗಳಿಗೆ ನೆಟ್ಟಿಬಿದ್ದು ಉಳಿಕೆಯು ಳ್ಳರುಗಳಿಗೆ ಲಾಭವಾಗುತ್ತದೆ ಸಾಮಾನ್ಯ ಕಾಲದಲ್ಲಿ ಉಳಿಕೆ ಪ್ರದೇಶಗಳಿಂದ ಧಾನ್ಯಗಳು ಸ್ವಾಭಾವಿಕವಾಗಿ ಕೊರತೆ ಪ್ರದೇಶಗಳಿಗೆ ಹರಿದು ಸಮತೂಕವನ್ನುಂಟುಮಾಡುತ್ತಿದ್ದವು ಸ್ವತಿ ಬಂಧಗಳ ಫಲವಾಗಿ ಕೊರತೆಯ ಪ್ರದೇಶಗಳು ಇದಕ್ಕೂ ಎರವಾಗಬೇಕಾಯಿತು.

ಐದನೆಯದಾಗಿ, ಮುಂಬಯಿ ಪ್ರಾಂತದ "ಲೆವ್ಹಿ" ಪದ್ಧತಿಯಲ್ಲಿ ರೈತನ ಎಲ್ಲ ಉಳಿಕೆಯು ಸರಕಾರದ ಕೈಗೆ ಬಾರದೆ ಅದಿರಲ್ಲಿ ಒಂದಂಶ ಮಾತ್ರ ಬರುತ್ತದೆ ಹೀಗಾಗಿ ಅವನಲ್ಲಿ ಸ್ವಂತ ಉಪಯೋಗಕ್ಕೆ ಸಾಕಾಗಿ ಎಷ್ಟೋ ಧಾನ್ಯ ಉಳಿಯುತ್ತದೆ. ಧಾನ್ಯವನ್ನು ಸರಕಾರಕ್ಕಲ್ಲವೆ ಬೇರೆ ಮಾರಬಾರದೆಂದು ನಿಯಮವಿದ್ದರು ರೈತನಲ್ಲಿರುವ ಉಳಿಕೆ ಒಳಗಿಂದೊಳಗೆ ನಗರಗಳಲ್ಲಿರುವ ಕಳ್ಳಸೇಟೆಯನ್ನು ಸೇರುತ್ತದೆಯೆಂಬುದು ಎಲ್ಲರಿಗೂ ಗೊತ್ತಿದ್ದ ಗುಟ್ಟು

ಆರನೆಯದಾಗಿ, ಸೀದಾ ಪದ್ಧತಿಯಲ್ಲಿರುವ ದೋಷಗಳಿಂದ ಕಳ್ಳಸೇಟೆಗೆ ಪ್ರೋತ್ಸಾಹ ದೊರೆತಿದೆ. ಸೀದಾದಲ್ಲಿ ಕೊಟ್ಟ ಧಾನ್ಯಗಳು ಪರಿಮಾಣದಲ್ಲಿ ಮಾತ್ರವಲ್ಲದೆ ಗುಣದಲ್ಲಿಯೂ ಕೀಳ್ತರದವು. ಸರಿಯಾದ ಜೋಪಾನವಿಲ್ಲದೆ ಧಾನ್ಯಗಳು ಕೆಡುವುದಲ್ಲದೆ ಬೇಕೆಂದೇ ಮಳಲು ಮಣ್ಣುಗಳನ್ನು ಅವುಗಳಲ್ಲಿ ಬೆರಸುವುದೂ ಉಂಟು ಹೀಗೆ ಸೀದಾ ಧಾನ್ಯಗಳಿಗಿಂತ ಕಳ್ಳಸೇಟೆಯ ಧಾನ್ಯಗಳು ಉತ್ತಮವಾಗಿವೆ.

ಪದ್ಧತಿಯನ್ನು ಬದಲಿಸಬೇಕು

ಕಳ್ಳಸೇಟೆ ಲಾಭಬಡಕತನಗಳು ಈಗಿನ ಸೀದಾ ಪದ್ಧತಿಯಿಂದಲೇ ಹುಟ್ಟುವ ಕಾರಣ ಅದನ್ನು ಬದಲಿಸಿ, ಲೈಸನ್ಸು ಪಡೆದ ವರ್ತಕರ ಮೂಲಕ ಧಾನ್ಯ ಕೊಳ್ಳುವುದು, ಕೂಡಿಡುವುದು ಮತ್ತು ಹಂಚುವುದನ್ನು ಮಾಡಿ ಅವರಲ್ಲಿರುವ ಸಂಗ್ರಹದ ಮೇಲೆ ಪ್ರೇ ತೀಕ್ಷ್ಣವಾಗಿ ನಿಯಂತ್ರಣವಿಡುವ ಪದ್ಧತಿಯನ್ನು ಜಾರಿಗೆ ತರಬೇಕಾಗಿದೆ.

ಎರಡು ವರ್ಷಗಳ ಕೆಳಗೆ ಕೈಕೊಂಡ ವಿನಿಯಂತ್ರಣ ನಿರರ್ಥವಾಗಲು ಅದನ್ನು ನಾನಾ ನಿರ್ಬಂಧಗಳೊಡನೆ ಜಾರಿಗೆ ತಂದದ್ದೇ ಕಾರಣ. ಆದರಿಂದ ಈ ಅರೆ ಮನಸಿನ ಮದ್ದು ರೋಗವನ್ನು ಇನ್ನಷ್ಟು ಉಲ್ಬಣಕ್ಕೆತಂದಿತು. ವ್ಯಾಂತಪ್ರಾಂತಗಳ ಮತ್ತು ಜಿಲ್ಲೆಜಿಲ್ಲೆಗಳ ನಡುವೆ ಇದ್ದ ಸಾಗಾಟ ಪ್ರತಿಬಂಧಗಳು ಹಾಗೆಯೇ ಉಳಿದವು. ಹೀಗೆ ಬೇರೆ ಬೇರೆ ಪ್ರದೇಶಗಳಿಗೆ ಸಾಮಾನ್ಯವಾಗಿ ಧಾನ್ಯವನ್ನು ಒದಗಿಸುತ್ತಿದ್ದ ಆಶ್ರಯಗಳು ತೆರವಾಗಲಿಲ್ಲ. ಗುಜರಾಥ ಜಿಲ್ಲೆಗಳಲ್ಲಿ ವಿನಿಯಂತ್ರಣ ಜಾರಿಗೆ ಬಂದೇ ಇಲ್ಲ. ವ್ಯಾಂತದ ಸಾಲ್ಕು ಮುಖ್ಯ ನಗರಗಳಲ್ಲಿ ಸೀದಾ ಪದ್ಧತಿ ಹಾಗೆಯೇ ನಡೆಯುತ್ತಿತ್ತು ಈ ನಗರಗಳಲ್ಲಿನ ಜನರಿಗೆ ಒಂದು ವರ್ಷಕ್ಕೆ ಬೇಕಾಗುವಷ್ಟು ಧಾನ್ಯವನ್ನು ಹೊರಗಿಂದ ತರಲು ಅವಕಾಶ ಕೊಟ್ಟ ದ್ದಂತೂ ವಿನರ್ಥಕಾರಿಯಾಯಿತು. ಇದರಿಂದ ಒಳನಾಡಿನ ಧಾನ್ಯಗಳು ಸಿಕ್ಕಾಪಟ್ಟೆ ದೊಡ್ಡ ನಗರಗಳನ್ನು ಸೇರಿಬಿಟ್ಟವು ಅದನ್ನು ತರಿಸಿಕೊಂಡವರು ಮುಂದೆ ಕಳ್ಳಸೇಟೆಯಲ್ಲಿ ಮಾರಿದರು. ಹಳ್ಳಿಗಾಡಿನಲ್ಲಿ ಧಾನ್ಯ ಉಳಿಯುವಂತಾಯಿತು. ಎರಡೂ ಪ್ರದೇಶಗಳಲ್ಲಿ ಬೆಲೆ ಅಲ್ಪನಿಯಂತ್ರವಾಗಿ ಏರಿತು.

ವೇಲಿನ ಸಂಗತಿಗಳಿಂದ ಎರಡು ತತ್ವಗಳು ನಿಷ್ಪನ್ನವಾಗುತ್ತವೆ: (೧) ಕೆಲವು ಪ್ರದೇಶಗಳಲ್ಲಿ ನಿಯಂತ್ರಣ ತೆಗೆದು ಕೆಲವು ಪ್ರದೇಶಗಳಲ್ಲಿ ಉಳಿಸಿಕೊಳ್ಳುವುದು ಅಪಾಯಕರ (೨) ಸಾಮಾನ್ಯ ವ್ಯಾಪಾರ ವದ್ಧತಿ ಪುನಃ ಸ್ಥಾಪಿಸಲ್ಪಟ್ಟ

ಹೊರತು ವಿನಿಯಂತ್ರಣ ಸಫಲವಾಗದು. ಹಾಗಾದರೆ ಪರಿಹಾರೋಪಾಯವೇನು?

ಬ

ಎರಡು ಹಾದಿಗಳು

ನನ್ನ ಅಭಿಪ್ರಾಯದಲ್ಲಿ ಇದಕ್ಕೆ ಎರಡು ವೈಕಲ್ಪಿಕ ಪರಿಹಾರೋಪಾಯಗಳಿವೆ:

ಅ

೧. ಪೂರ್ಣ ವಿನಿಯಂತ್ರಣ.

೨ ಪೂರ್ತಿಕೆಯ ಎಲ್ಲ ಅಶ್ರಯಗಳನ್ನು ತೆರವಾಗಿಡುವುದು.

೩ ರೇಲು, ಗಸ್ತೆ ಮತ್ತು ಸಮುದ್ರ ಮೂಲಕ ಸಾರಿಗೆ ಸೌಕರ್ಯಗಳನ್ನೊದಗಿಸುವದು.

೪. ಪೇಟೆಗಳು ಪೂರ್ವಸ್ಥಿತಿಗೆ ಬರುವ ವರೆಗೆ ಯೋಗ್ಯದರದ ಅಂಗಡಿಗಳನ್ನು ನಡೆಸುವದು.

೫. ಅನಿರ್ಬಂಧ ವ್ಯಾಪಾರ ಮತ್ತು ಅನಿರ್ಬಂಧ ಸಾಗಾಟವಿದ್ದೂ ಎಲ್ಲಾದರು ಯಾವಾಗಾದರೂ ಕೊರತೆ ಕಂಡುಬಂದರೆ ಅದನ್ನು ತುಂಬಲು ಕೇಂದ್ರ ಸರಕಾರದವರೊಂದು ಆವತ್ಯಾಲದ ಕಣಜವನ್ನಿಡುವುದು.

೬. ವಿದೇಶಗಳಿಗೆ ಧಾನ್ಯ ಸಾಗುವುದನ್ನು ಪ್ರತಿಬಂಧಿಸುವುದು ಮತ್ತು ನಿಯಂತ್ರಿಸುವುದು.

ವಿನಿಯಂತ್ರಣಕ್ಕೆ ಅತ್ಯಂತ ಯೋಗ್ಯ ಸಮಯವೆಂದರೆ ಹೊಸ ಬೆಳೆ ಪೇಟೆಗೆ ಬರುವ ವೇಳೆ. ವಿನಿಯಂತ್ರಣವನ್ನು ದೇಶಾದ್ಯಂತವೂ ಏಕಕಾಲದಲ್ಲಿ ಜಾರಿಗೆ ತರಬೇಕು.

ಅಥವಾ

ಆ

ವಿನಿಯಂತ್ರಣವನ್ನು ಎಚ್ಚರಿಕೆಯಿಂದ ಜಾರಿಗೆ ತರಬೇಕೆನಿಸಿದರೆ ಮಧ್ಯಕಾಲದಲ್ಲಿ ನಿಯಂತ್ರಣವನ್ನು ಸಡಲಿಸಬಹುದು. ಆದರೆ ಎಲ್ಲ ಪ್ರಾಂತಗಳೂ ಒಂದೇ ನೀತಿಯನ್ನನುಸರಿಸುವುದು ಅವಶ್ಯ. ಅದನ್ನು ಈ ಕೆಳಗಿನಂತೆ ಮಾಡಬಹುದು:—

೧. ರೈತರಿಂದ ಧಾನ್ಯ ಖರೀದಿ ಮಾಡಲು ಕೆಲ ಲೈಸನ್ಸು ವಡೆದ ವರ್ತಕರನ್ನು ನೇಮಿಸಿಕೊಂಡು ಅವರಿಗೆ ಹೊರತು ಧಾನ್ಯ ಮಾರಾತಕ್ಕದ್ದಲ್ಲೆಂದು ರೈತರಿಗೆ ವಿಧಿಸಬೇಕು.

೨. ಕೊಳ್ಳುವ ಮತ್ತು ಮಾರುವ ದರಗಳನ್ನು ನೊತ್ತುಪಡಿಸಬೇಕು. ರೋಮಿ ಮತ್ತು ಚಿಲ್ಲರ ದರಗಳು ಜಿಲ್ಲಾವಾರು ನಿರ್ಣಯಿಸಲ್ಪಡಬೇಕು.

೩. ಕೆಲ ಕರಾರುಗಳಿಗೊಳಪಟ್ಟು ಪರಮಾವಧಿ ಬೆಲೆಯ ಅಳವಿನೊಳಗೆ ಧಾನ್ಯವನ್ನು ತಾವೇ ಕೊಂಡು ಪಾರಾರಲು ವ್ಯಾಪಾರಿಗಳಿಗೆ ಬಿಡತಕ್ಕದ್ದು. ಕರಾರುಗಳು ಹೀಗಿರಬಹುದು.

(ಅ) ರೋಕ ವಾವಾರಿಗಳು ಲೈಸೆನ್ಸು ಪಡೆದ ಕಿರುಕಳ ವ್ಯಾಪಾರಿಗಳಿಗೇ ಪರ್ಮಿಟ್ಟಿನಲ್ಲಿ ಗೊತ್ತುಪಡಿಸಿದಷ್ಟೇ ಧಾನ್ಯವನ್ನು ಮಾರತಕ್ಕದ್ದು.

(ಆ) ರೋಕ ವ್ಯಾಪಾರಿಗಳು ಸಾಮಾನ್ಯ ಹಿಕ ಇಲ್ಲವೆ ವಾಕ್ಟಿಕ ಖರೀದಿ, ಮಾರಾಟ ಶಿಲ್ಕುಗಳ ವರದಿಯನ್ನು ಜಿಲ್ಲಾ ಪೂರೈಕೆ ಅಧಿಕಾರಿಗೊಪ್ಪಿಸಬೇಕು

(ಇ) ಸ್ಟಾಕ್ ಪುಸ್ತಕವನ್ನು ಆಗಾಗ್ಗೆ ಪರಿಶೀಲಿಸಿ ನಿಜವಾದ ಸ್ಟಾಕನ್ನು ತಾಳೆ ನೋಡಲು ಅಬಗ್ಗೆ ನೇಮಿಸಿದ ಅಧಿಕಾರಿಗಳಿಗೆ ಅಧಿಕಾರವಿರತಕ್ಕದ್ದು.

(ಈ) ಬೇರೆ ಜಿಲ್ಲೆಗಳಿಂದ ಧಾನ್ಯಗಳನ್ನು ಕೊಳ್ಳಬೇಕಾದರೆ ಕೊಳ್ಳುವ ಜಿಲ್ಲೆಯ ಕಲೆಕ್ಟರನ ಇಲ್ಲವೆ ಪೂರೈಕೆ ಅಧಿಕಾರಿಯ ಪರವಾನಗಿಬೇಕು, ಪರವಾನಗಿಯಲ್ಲಿ ಕಾಣಿಸಿದಷ್ಟೇ ಕೊಳ್ಳಬೇಕು ಅದನ್ನು ಸಾಗಿಸಲು ಮಾರುವ ಜಿಲ್ಲೆಯ ಪೂರೈಕೆ ಅಧಿಕಾರಿಯು ಅಪ್ಪಣೆಬೇಕು.

(ಳ) ಸೀದಾ ಅಂಗಡಿಗಳನ್ನು ಯೋಗ್ಯದರದ ಅಂಗಡಿಗಳಾಗಿ ಮಾರ್ಪಡಿಸಿ ಅವನ್ನು ಲೈಸೆನ್ಸು ಪಡೆದ ವರ್ತಕರ ಸಮಾನ ಸ್ಥಾನದಲ್ಲಿರಿಸಬೇಕು. ಆ ಅಂಗಡಿಗಳೆಂದಾಗಲಿ ವರ್ತಕರಿಂದಾಗಲಿ ಯಾವನು ಬೇಕಾದರೂ ಅವನ ಉತ್ಪನ್ನವಷ್ಟೇ ಇರಲಿ,— ಕೊಳ್ಳಬಹುದೆಂದಿರಬೇಕು.

೪. ಪ್ರತಿ ಜಿಲ್ಲೆಯಲ್ಲಿಯೂ ಸರಕಾರದ ವರವಾಗಿ ಆಪತ್ತಿನ ಧಾನ್ಯ ನಿಧಿಯನ್ನಿಟ್ಟಿರಬಹುದು. ಇದರಲ್ಲಿ ಸ್ಥಾನಿಕ ಖರೀದಿಗಳನ್ನಾಗಲಿ ಹೊರಗಿಂದ ಸರಕಾರದ ಪರವಾಗಿ ಕೊಂಡದ್ದನ್ನಾಗಲಿ ಕೂಡಿಡಬಹುದು.

ವೆಚ್ಚವೂ ಕಡಿಮೆ ಆಯಲಿತವೂ ಸುಲಭ

ವ್ಯಾಪಾರಿಗಳನ್ನು ಒಳಗೆ ತೆಗೆದುಕೊಂಡರೆ ನಿಯಂತ್ರಣದ ಉದ್ದೇಶವೇ ವ್ಯರ್ಥವಾಗಿ ಇಡೀ ಯೋಜನೆಯೇ ಕುಸಿದು ಬೀಳಬಹುದೆಂದು ಯಾರಾದರೂ ಆಕ್ಷೇಪಿಸಬಹುದು ಆದರೆ ಇಂಥ ಭಯಕ್ಕೆ ಕಾರಣವಿಲ್ಲ. ಲೈಸನ್ಸು ಪಡೆದ ವ್ಯಾಪಾರಿಗಳ ಸಂಖ್ಯೆಯನ್ನು ಶಕ್ಯವಿದ್ದಷ್ಟು ಕಡಿಮೆಯಾಗಿಟ್ಟರೆ ಸಫಲವಾಗಿ ಅವರನ್ನು ಹಿಡಿತದಲ್ಲಿಡಬಹುದು. ಈಗಿನ ಏಕ್ಷಿಪ್ತ ನಿಯಂತ್ರಣ ಪದ್ಧತಿಗಿಂತ ಇದು ಹೆಚ್ಚು ಸಂಕ್ಷಿಪ್ತವಾಗುವುದು. ಇದಕ್ಕೆ ಈಗಿಗಿಂತ ಎಷ್ಟೋ ಕಡಿಮೆ ಸಿಬ್ಬಂದಿ ಸಾಕು. ಇದು ಪೂರ್ಣ ನಿಯಂತ್ರಣಕ್ಕೂ ನಮ್ಮ ಚರಮ ಉದ್ದೇಶವಾದ ಶುದ್ಧ ಅನಿರ್ಬಂಧ ವ್ಯಾಪಾರ ಸ್ವಾತಂತ್ರ್ಯಕ್ಕೂ ಮಧ್ಯ ಮಾರ್ಗ. ಸರಕಾರ ಖಜಾನೆಗೆ ನೆಚ್ಚವನ್ನು ಕಡಿಮೆ ಮಾಡುವ ಅದಕ್ಕಿಂತಲೂ ಮುಖ್ಯವಾದ ಉದ್ದೇಶವೂ ಇದರಿಂದ ಸಾಧಿಸುತ್ತದೆ. ಗಿರಾಕಿಗಳಿಗೆ ಸಾಮಾನ್ಯ ಕಾಲದಂತೆ ಬೇಕಷ್ಟು ಧಾನ್ಯ ನಿಯಂತ್ರಿತ ದರಕ್ಕೆ ಸಿಗುವುದು. ದೇಶದಲ್ಲಿರುವ ಕೊರತೆ ಕನಿಷ್ಠಾವಧಿಗಿಳಿದು, ಇದರ ಫಲವಾಗಿ ವಿದೇಶಗಳಂಥ ಕರಿಸುವ ಧಾನ್ಯ ಕಡಿಮೆಯಾಗುವುದರಿಂದ ಸ್ಟರ್ಲಿಂಗುಗಳೂ ಡಾಲರುಗಳೂ ಉಳಿದು ಇವನ್ನು ದೇಶದ ಆರ್ಥಿಕ ಉದ್ಧಾರಕ್ಕೆ ವಿನಿಯೋಗಿಸಲು ಅವಕಾಶವಾಗುತ್ತದೆ. ಒಂದೇ ಮೊತಿನಲ್ಲಿ ಸರಕಾರಕ್ಕೆ ಕೀರ ಕಡಿಮೆ ವೆಚ್ಚವೊದಗಿ ದೇಶದಲ್ಲಿ ಸಾಮಾನ್ಯ ಸ್ಥಿತಿಗತಿ ಬೇಗನೆ ಬಂದೊದಗುತ್ತದೆ.

(ಹರಿಜನ ದಿಂದ)

[ಮೇಲಿನ ಲೇಖನ ಕೊನೆಗೆ "ಹರಿಜನ" ಸಂಪಾದಕ ಶ್ರೀ ಮಶ್ರೂವಾಲಾ ಅವರು ಟಿಪ್ಪಣಿ ಬರೆದು ತಮಗೆ ಶ್ರೀ ಕೌಂಡಿನ್ಯರು ಸೂಚಿಸುವ ಎರಡನೆ ವಿಕಲ್ಪ ಸೇರಿಕೆಯಾಗಿಲ್ಲವೆಂದಿದ್ದಾರೆ ಆದಕ್ಕೆ ಎಷ್ಟೇ ಕಟ್ಟುನಿಟ್ಟುಗಳನ್ನು ಲೇಖಕರು ಸೂಚಿಸಿದರೂ ಅವರಲ್ಲಿ ಲಂಚಗುಳಿತನಕ್ಕೂ ವಾಮಮಾರ್ಗದಿಂದ ಕಾಯಿದೆಯಿಂದ ತಪ್ಪಿಸಿಕೊಳ್ಳಲಿಕ್ಕೂ ಅವಕಾಶವಿದೆ. ಆದರಿಂದ ಮೊದಲನೆಯ ವಿಕಲ್ಪವೇ ಅಂದರೆ ಪೂರ್ಣ ವಿನಿಯಂತ್ರಣವೇ ಅನುಸರಣೀಯವೆಂದು ಶ್ರೀ ಮಶ್ರೂವಾಲಾ ಅವರ ಅಭಿಪ್ರಾಯ.]

—●—

ಏಪ್ರಿಲ್ ತಿಂಗಳಲ್ಲಿ ಸೋಶಿಯಲಿಷ್ಟ ಸಮ್ಮೇಳನ

ಮದ್ರಾಸಿನಲ್ಲಿ ದಕ್ಷಿಣ ಭಾರತ ಸೋಷಲಿಷ್ಟರ ಸಮ್ಮೇಳನವು ಏಪ್ರಿಲ್ ತಿಂಗಳಲ್ಲಿ ನಿರವೇರುವಾಗಿಯೂ ಶ್ರೀಮತಿ ಕಮಲಾದೇವಿಯವರು ಇದರ ಅಧ್ಯಕ್ಷ ಪದವನ್ನು ವಹಿಸಲಿರುವರೆಂದೂ ಪ್ರಕಟನೆಯು ಹೊರಟಿದೆ.

ವೋಟರುಗಳ ಯಾದಿ ತಯಾರಾಯಿತು.

ನೂತನ ಘಟನೆಯನ್ವಯ ವಯಸ್ಕ ನಾಡವರೆಲ್ಲರೂ ಮತದಾನಮಾಡಬಹುದು. ಈ ತತ್ವದಿಂದ ಎಲ್ಲಾ ಮುದ್ರಣಾಲಯಗಳಲ್ಲೂ ವೋಟರ್ ಲಿಸ್ಟು ಛಾಪಿಸಲು ಕೊಟ್ಟಿದ್ದರು ಬಳ್ಳಾರಿ ಜಿಲ್ಲೆಯ ಪಟ್ಟಿಯೂ ಪೂರ್ಣವಾಗುತ್ತಾ ಬಂದಿದೆ ಬಳ್ಳಾರಿ ಜಿಲ್ಲೆಯಲ್ಲಿ 4 ಲಕ್ಷಕ್ಕಿಂತಲೂ ಹೆಚ್ಚಿಗೆ ಮತದಾರರಿರುವರು. ಬಳ್ಳಾರಿ ಜಿಲ್ಲೆಗೆ ಮದ್ರಾಸ್ ಅಸೆಂಬ್ಲಿ ಸ್ಥಾನಗಳು ಮೂರು ಹತ್ತು ದೊರೆಯಬಹುದಾಗಿದೆ.

ಮತದಾನ ಕೊಡುವ ಕ್ಷೇತ್ರಗಳನ್ನು ಸಂಪೂರ್ಣವಾಗಿ ನಿರ್ಧರಿಸಿದನಂತರ ಸ್ಥಾನಗಳ ಸಂಖ್ಯೆಯು ತೀರ್ಮಾನವಾಗುವುದು 75 ಸಾವಿರದಿಂದ 1 ಲಕ್ಷ ಜನಸಂಖ್ಯೆಯ ಪ್ರದೇಶಕ್ಕೆ ಒಂದುಸ್ಥಾನ ದೊರೆಯುವಂತೆ ರಲ್ಲಿ ಸಂಶಯವಿಲ್ಲ.

ಆಂಧ್ರ ಪ್ರಾಂತ ರಚನೆ ಸಾಧ್ಯವಿಲ್ಲ

ಆಂಧ್ರ-ಆಂಧ್ರರಲ್ಲಿಯೇ ಜಗಳವಿದೆ

ಹೊಸದಿಲ್ಲಿ— ಭಾಷಾವಾರ ಪ್ರಾಂತ ರಚನೆಯು ಸಂಬಂಧದಲ್ಲಿ ಸರಕಾರವು ಯಾವ ವಚನಕ್ಕೂ ಬದ್ಧವಾಗಿಲ್ಲವೆಂದು ಗೃಹ ಮಂತ್ರಿ ಸರದಾರ ಪಟೇಲರು ಒಕ್ಕೂಟ ಶಾಸನ ಸಭೆಯಲ್ಲಿ ಶ್ರೀ. ಎಚ್. ವಿ. ಕಾಮತರಿಗೆ ತಿಳಿಸಿದರು.

ಆವಶ್ಯಕವಾದ ಒಪ್ಪಂದದ ಅಭಾವವಿರುವದರಿಂದ ಆಂಧ್ರ ಪ್ರಾಂತ ರಚನೆಯು ಸಾಧ್ಯವಿಲ್ಲೆಂದು ಸರಕಾರವು ನಿರ್ಧರಿಸಿರುವದಾಗಿಯೂ ಅವರು ತಿಳಿಸಿದರು.

ಆಂಧ್ರ ಪ್ರಾಂತ ರಚನೆಯು ವಿಷಯದಲ್ಲಿ ಹೇಳಲ್ಪಟ್ಟ ಪೂರಕ ಪ್ರಶ್ನೆಗಳಿಗುತ್ತರ ಸರದಾರಪಟೇಲರು ಹೇಳಿಜ್ಞೇನಂದರೆ.

"ಆಪ್ತ ವಿಭಾಗ ಸಮಿತಿಯ ವರದಿಯಲ್ಲಿರುವ ತಂಟೆಯ ಪ್ರಶ್ನೆಗಳ ಪರಿಹಾರಕ್ಕಾಗಿ ಪಂಚಾಯತಿ ಮಂಡಲವನ್ನು ನೇಮಿಸುವದು ಅನಶ್ಯಕ ವೆಂದು ಸರಕಾರವು ತಿಳಿದಿಲ್ಲ. ಆಂಧ್ರ ಪ್ರಾಂತ ರಚನೆಯ ವಿರುದ್ಧ ರಾಯಲಸೀಮೆಯವರ ಅನೇಕ ಶಿಷ್ಟಮಂಡಲಗಳು ನನ್ನೊದುರು ಹೇಳಿಕೆಯಿತ್ತಿವೆ. ಆಪ್ತ ವಿಭಾಗ ಸಮಿತಿಯ ವರದಿಯನ್ನು ಸ್ವೀಕರಿಸದಿರಲು ಇದೂ ಒಂದು ಕಾರಣವಾಗಿದೆ. ಎಲ್ಲ ಪ್ರಶ್ನೆಗಳ ಬಗ್ಗೆ ಒಮ್ಮತವಾದಲ್ಲಿ ಭಾಷಾವಾರ ಪ್ರಾಂತಗಳನ್ನು ರಚಿಸಲು ಸರಕಾರವು ಸಿದ್ಧವಿದೆ. ಆಂಧ್ರ ಪ್ರಾಂತ ರಚನೆಯ ಬಗ್ಗೆ ಆಂಧ್ರ-ಆಂಧ್ರರಲ್ಲಿ ಮತ್ತು ಆಂಧ್ರ-ತಮಿಳರಲ್ಲಿ ಮತ ಭೇದವಿದೆ. "

ಗಂಡಸು ಹೆಂಗಸಾಗಲಾರ;

ಸರ್ದಾರ ಪಟೇಲರ ಉತ್ತರ

ಹೊಸದಿಲ್ಲಿ "ಈ ವರೆಗೆ ಒಬ್ಬ ಮಹಿಳೆಯನ್ನು ಆಯ್. ಎ. ಎಸ್. ಗೆ ಆರಿಸಿಲ್ಲ. ವಿಶೇಷ ಆಯ್ಕೆ ಮಂಡಳದ ಕೆಲ ಶಿಫಾರಸುಗಳನ್ನು ಇನ್ನೂ ವಿಚಾರಿಸಬೇಕಾಗಿದೆ" ಎಂದು ಉಪ ಪ್ರಧಾನ ಮಂತ್ರಿ ಸರದಾರ ಪಟೇಲರು ಕೇಂದ್ರ ಶಾಸನ ಸಭೆಯಲ್ಲಿ ಶ್ರೀಮತಿ ಉಮಾ ನೆಹರುರವರು ಕೇಳಿದ ಪ್ರಶ್ನೆಗೆ ಉತ್ತರ ಕೊಡುತ್ತ ಹೇಳಿದರು.

ಶ್ರೀಮತಿ ದುರ್ಗಾಬಾಯಿ ವಿವಾಹಿತ ಮಹಿಳೆಯರ ನೇಮಕದ ಬಗ್ಗೆ ಪ್ರತಿಬಂಧ ವಿದೆಯೆ ?

ಸರದಾರ ಪಟೇಲ— ಸೆಕ್ರೆಟರಿಯೆಟ್ ದಲ್ಲಿಯ ಕೆಲಸಗಳ ಬಗ್ಗೆ ಯಾವದೇ ನಿರ್ಬಂಧವಿಲ್ಲ. ವಿವಾಹಿತ ಮಹಿಳೆಯರು ಅವಶ್ಯವಾಗಿ ಸೇರಬೇಕಾದ ಕೆಲ ಕಾರ್ಯಗಳ ನಿಮಿತ್ತ ಅವರನ್ನು ಕಾರ್ಯನಿರ್ವಾಹಕ ಸ್ಥಳಗಳಿಗೆ ನೇಮಿಸಲು ಕೆಲ ತೊಂದರೆಗಳುಂಟಾಗುತ್ತವೆ ಸಮೂಹ ಹಕ್ಕುಗಳನ್ನೊಪ್ಪಿದರೂ ಗಂಡಸು ಹೆಂಗಸಾಗಲಾರ. ಮತ್ತು ಹೆಂಗಸು ಗಂಡಸಾಗಲಾರಳು.

ಕಾಪತ— ಪ್ರವಾಸದ ಮತ್ತು ಕಾರ್ಯ ನಿರ್ವಾಹಕ ಕೆಲಸಗಳಲ್ಲಿ ಉದ್ಭವಿಸುವ ಕೆಲ ತೊಂದರೆಗಳ ಮೂಲಕ ಅಂತಹ ಸ್ಥಳಗಳಿಗೆ ಮಹಿಳೆಯರನ್ನು ನೇಮಿಸಲಾಗುವದಿಲ್ಲವೆಂದು ಇನ್ನೆ ಮಂತ್ರಿಗಳು ಹೇಳಿದ್ದು ಮಂತ್ರಿಗಳಿಗೂ ಅನ್ವಯಿಸುವದೋ ? (ಜೊಳ್ಳೆಂದು ನಗೆ)

—!!!—

ಹರಪನಹಳ್ಳಿ

ಇಲ್ಲಿ ಜರುಗಲಿರುವ ಚಂಡಿಯಜ್ಞದ ತಯಾರಿಯು ಪೂರ್ಣವಾಗಿದೆ ಸಹಸ್ರಾರು ಜನರ ಸಂಪರ್ಕಣೆ ತಂತ್ರಮಂತ್ರಗಳ ವ್ಯವಸ್ಥೆ ನಡೆದಿದೆ ಈ ಯಜ್ಞವು ನೆರವೇರುವದರಿಂದ ಜಗತ್ತಿನ ಶಾಂತಿಯಾಗುವದೆಂದು ನಂಬಲಾಗಿದೆ.

ಹಿಂದೀ ಮಹಾ ವಿದ್ಯಾಲಯ, ಬಳ್ಳಾರಿ,

[1981 ಸ್ಥಾಪಿತ. ಬಳ್ಳಾರಿ ಜಿಲ್ಲಾ ಹಿಂದೀ ಪ್ರೇಮೀಮಂಡಲದಾಶ್ರಯದಲ್ಲಿ, ರಿಜಿಸ್ಟರ್ಡ.]

ಮದ್ರಾಸ್ ಸರ್ಕಾರದಿಂದ ಮಾನ್ಯತೆ ಇದೆ.

ಪ್ರಾರಂಭಿಕ ವರ್ಗಗಳಿಗೆ ಮಾಸಿಕ 3/- ಶುಲ್ಕ — ಉನ್ನತ ವರ್ಗಗಳಿಗೆ ಮಾಸಿಕ 5/- ಶುಲ್ಕ

ನಾರ್ಮಲಾ ಹೈಸ್ಕೂಲ್ ಕಟ್ಟಡದಲ್ಲಿ ಪ್ರಾತಃಕಾಲ-ಸಾಯಂಕಾಲ ಹಿಂದೀ ಕಾಲೇಜ್‌ದ ವರ್ಗಗಳು ನಡೆಯುತ್ತಿವೆ. ವಿಶಾರದ — ಪ್ರಚಾರಕ ವರ್ಗಗಳಲ್ಲದೆ ಪ್ರಾರಂಭಿಕ ವರ್ಗಗಳಿಗೂ ಪ್ರವೇಶವಿದೆ. ವರ್ಗಗಳಿಗೆ ಸಂಬಂಧಿಸಿದ ವಾಚ್ಯ ಪುಸ್ತಕಗಳು ವಿದ್ಯಾಲಯದಲ್ಲಿ ದೊರೆಯುತ್ತವೆ. ಒಳ್ಳೆಯ ಪುಸ್ತಕಭಂಡಾರವಿದೆ. ಶ್ರೇಷ್ಠ ವಾರಪತ್ರಿಕೆ, ಮಾಸಪತ್ರಿಕೆಗಳು ಲಭ ಇತರ ವಿವರಗಳಿಗೆ ಸ್ಟ್ಯಾಂಪಿಟ್ಟು ಬರೆಯಿರಿ.

ಪ್ರಿನ್ಸಿಪಾಲ್.

NAVA BHARAT BELLARY. (Reg. No. M. 4746)

ನವಭಾರತ ಬಳ್ಳಾರಿ.

6—3—50

(Nationalist Weekly)

ಚಂದಾದರಗಳು	Subscription Rates.
ವರ್ಷಕ್ಕೆ 5—0—0	One Year 5—0—0
6 ತಿಂಗಳಿಗೆ 3—0—0	Six months 3—0—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.	Subscription will not be accepted for less than 6 months

To

Sri.....

.....

.....

Pirnted at Krishna Printing Works. Edited & Published by T. B. Keshava Rao,

JAI—HIND

ನಾಡಿಚಾವಡಿ

ಬಳ್ಳಾರಿಯ
ಉಸ್ತುವಲ ರಾಷ್ಟ್ರೀಯ ವಾರಪತ್ರಿಕೆ
*
ಉತ್ತಿಷ್ಠತ! ಜಾಗೃತ!! ಪ್ರಾಪ್ಯವರಾನ್ನಿ ಬೋಧತ!!!
*
ಸಂಪಾದಕ ಮತ್ತು ಪ್ರಕಾಶಕರು:
ಟಿ. ಬಿ. ಕೇಶವರಾವ್

ವರ್ಷ ೧೩ | ಸೋಮವಾರ ೧೩ ಮಾರ್ಚ್ ೧೯೫೦ | ಸಂಚಿಕೆ ೮

ಬಳ್ಳಾರಿಯಲ್ಲಿ ಹರತಾಳ

ಪೋಲೀಸರ ಲಾಠಿಛಾರ್ಜು

ಈವರ್ಷ ಬಳ್ಳಾರಿನಗರದಲ್ಲಿ ಹೋಳಿಯ ಹಬ್ಬವು ವಿಶೇಷ ವಿಜೃಂಭಣೆ ಉತ್ಸಾಹಗಳಿಂದ ನಡೆಯಿತೆನ್ನಬಹುದು. ಚಿಕ್ಕದೊಡ್ಡವರೆನ್ನದೆ ಎಲ್ಲಾ ಬಗೆಯ ಜನರೂ ಈ ಸಮಾರಂಭದಲ್ಲಿ ಭಾಗವಹಿಸಿ ವಸಂತದಿಂದ ವಿವಿಧ ಬಣ್ಣಗಳ ವ್ಯಕ್ತಿಗಳಾದರೂ ಇದರಿಂದ ಕುಪಿತರಾದ ಕೆಲವ್ಯಕ್ತಿಗಳು ಪೋಲೀಸರಿಗೆ ರಿಪೋರ್ಟುಮಾಡಿದಕಾರಣ ಪರಿಸ್ಥಿತಿಯು ಕೆಟ್ಟಿತು. ಬಣ್ಣದನೀರನ್ನು ಚಲ್ಲುವದರಲ್ಲಿ ಹಾಕಿಸಿಕೊಂಡ ವ್ಯಕ್ತಿಗಳಲ್ಲಿ ಸಲ್ಪವಿವೇಚನೆ ಇದ್ದು ಇಂಥಾ ಸಮಾರಂಭಗಳಲ್ಲಿ ಇರಬೇಕಾದ ಉದಾರ ಮತ್ತು ಕ್ಷಮ್ಯ ಸ್ವಭಾವವಿದ್ದಿದ್ದರೆ ಇಂಥಾ ವಿಷಮ ವಾತಾವರಣವೇಳುತ್ತಿದ್ದಿಲ್ಲ.

ಶನಿವಾರದಂದು (4-3-50) ವಸಂತ ಹಾಕಿಸಿಕೊಂಡ ಮಹನೀಯರೊಬ್ಬರು ಸಿಟ್ಟಿಗೆದ್ದು ಪೋಲೀಸರಿಗೆ ವರದಿಮಾಡಿದ ಘಟನೆಯಾಗಿ ಸಂಬಂಧಿಸಿದ ವ್ಯಕ್ತಿಗಳ ತಾತ್ಕಾಲಿಕ ಬಂಧನವಾಯಿತು. ಈ ಸಂದರ್ಭದಲ್ಲಿ ಪೋಲೀಸರ ಮೇಲೂ ವಸಂತ ಹಾಕಲಾಯ್ತೆಂದು ತಿಳಿದುಬಂದಿದೆ. ಆಗ ನರ್ತಕರೂ ಇತರರೂ ಪೋಲೀಸ್ ಸ್ಟೇಷನ್ ಬಳಿಹೋಗಿ ಇದು ಹಬ್ಬವಾದ ಕಾರಣ ಈ ಪದ್ಧತಿ ಇರುವದರಿಂದ ಮಾಮೂಲನ್ನು ತಪ್ಪಿಸಲು ಸಾಧ್ಯವಿಲ್ಲೆಂದರು.

ಭಾನುವಾರ (5-3-50) ಡಾಕ್ಟರ್ ವೀರಾಸ್ವಾಮಿಯವರ ಮೇಲೆ ವಸಂತ ಬಿತ್ತೆಂದೂ, ಇವರು ಪೋಲೀಸರಿಗೆ ಸಂದಿಮಾಡಿದರೆಂದೂ, ಸಾಯಂಕಾಲ ಎರಡು ಸಲ ಲಾಠೀಛಾರ್ಜಿನಿಂದ ಜನರನ್ನು ಚದರಿಸಲಾಯ್ತೆಂದೂ ತಾತ್ಕಾಲಿಕ ಬಂಧಿಸಲ್ಪಟ್ಟ 16 ಜನರನ್ನು ಬಿಡಲು ಜನತೆಯು ಆಗ್ರಹತೊಟ್ಟಿತೆಂದೂ ಸ್ಪೇಷ್ ಮೇಲೆ ಕಲ್ಲುಗಳನುರಿಮಳೆಯಾಯ್ತೆಂದೂ ತಿಳಿದುಬಂದಿದೆ ವಾತಾವರಣವು ಪ್ರಕ್ಷುಬ್ಧವಾಯಿತು.

6-3-50 ಸೋಮವಾರ ಬಳ್ಳಾರಿನಗರದಲ್ಲಿ ಪೋಲೀಸರ ವರ್ತನೆಯ ನಿಷೇಧವಾಗಿ ಸಂಪೂರ್ಣ ಹರತಾಳ ಏರ್ಪಾಟಾಯಿತು. ಸಾಯಂಕಾಲ ಸಾಂಬಮೂರ್ತಿ ಮೈದಾನದ ಸಭೆಯಲ್ಲಿ ಶ್ರೀಮೂಲಂಗಿ ದೊಡ್ಡಬಸಪ್ಪನವರ ಧ್ಯಕ್ಷತೆಯಲ್ಲಿ ಶ್ರೀಗಳಾದ ಭೀಮುಸೇನಾಚಾರ್ಯ ವಿ. ಹೆಚ್. ಕೃಷ್ಣರಾವ್ ಶಾಂತಿರುದ್ರಸ್ವ ಇವರು ಭಾಷಣಮಾಡಿದರು "ಹೋಳಿಯು ದೊಡ್ಡಹಿಂದೂ ಹಬ್ಬವಾಗಿ ಹಿಂದೂಮುಸಲ್ಮಾನರೆಲ್ಲಾ ಇದಂದಲ್ಲಿ ಭಾಗವಹಿಸಿದರು. ವಸಂತದ ಚಲ್ಲಾಟವು ಹಬ್ಬದ ಪ್ರತೀಕ. ಕಡ್ಡಿಯನ್ನು ಗುಡ್ಡವಾಗಿ ಮಾಡಿ ಈ ಹಿಂದೆ ಸ್ವಾತಂತ್ರ್ಯ ಉಂಬೋಳನಗಳಲ್ಲಿಯೂ ಇಲ್ಲದ ಲಾಠೀಛಾರ್ಜು ಪ್ರಚಾರಾರ್ಜ ಭಾರ ಕಾಲದಲ್ಲಿ ಆದುದು ವಿಷಾದಕರ ಇದನ್ನು ನಾವು ಪ್ರತಿಭಟಿಸುತ್ತೇವೆ" ಎಂಬುದೇ ಭಾಷಣಗಳ ಸಾರಾಂಶ ಈ ವಿಷಯದಲ್ಲಿ ನಿಷ್ಪಕ್ಷವಾತವಾದ ವಿಚಾರಣೆಯಾಗಬೇಕೆಂದು ತೀರ್ಮಾನಗಳಾಗಿ ಸರ್ಕಾರಕ್ಕೆ ಕಳುಹಿಸಲಾಯಿತು.

ಬಳ್ಳಾರಿ ಹೋಳಿಹಬ್ಬದ ಘಟನೆಗಳು

ಇ. ಸಿ. ಕೋ. 141/151 ಮತ್ತು 152 ಕಲಂಗಳ ಪ್ರಕಾರಕ್ಕೆ ಪೋಲೀಸಿನವರು ಕೇಸನ್ನು ರಿಜಿಸ್ಟರ್ ಮಾಡಿ 44 ಜನರನ್ನು ಇಲ್ಲಿಯವರಿಗೆ ಅರೆಸ್ಟು ಮಾಡಿ ಜಾಮೀನಿನಮೇಲೆ ಬಿಟ್ಟಿರುತ್ತಾರೆ

ಪೋಲೀಸಿನವರು ಲಾಠೀಛಾರ್ಜು ಮಾಡಿ ಅತ್ಯಾಚಾರವೆಸಗಿದರೆಂದು ತಾವು ಕೊಟ್ಟ ಪರಿಷಾಧುವಾಗಿ ಯೇನು ಜಿಲ್ಲಾ ಪೋಲೀಸ್ ಸೂಪರೆಂಟರು ವಿಚಾರಣೆ ಪ್ರಾರಂಭಿಸಿ ಕೆಲವರ ಹೇಳಿಕೆಗಳನ್ನು ಕೆಗೆದುಕೊಂಡರು.

ಸಕ್ಕರೆಯ ಮೇಲಿನ ನಿಯಂತ್ರಣ ತೆಗೆಯಿರಿ

ಸಕ್ಕರೆಯು ಎಲ್ಲಾ ಡಿಪೋಗಳಲ್ಲಿ ಸ್ಟಾಕು ಇತಲ್ಪಟ್ಟಿದೆ. ಅದಕ್ಕೆಕೊರತೆಇಲ್ಲ ಸರ್ಕಾರದವರು ವೃಥಾ ನಿಯಂತ್ರಣವನ್ನು ಹಾಕಿ ಸಕ್ಕರೆ ಬಳಸುವಂಥವರಿಗೆ ಕಷ್ಟಗಳನ್ನುಂಟುಮಾಡಿದ್ದಾರೆ. ಉತ್ತರ ಹಿಂದುಸ್ಥಾನದಿಂದ ಮಾಲು ಬರುತ್ತಿರುವದರಿಂದಲೂ ಪರದೇಶಗಳಿಂದ ಸಕ್ಕರೆಯನ್ನು ತರಿಸಲು ನಿರ್ಬಂಧಗಳೆನ್ನು ತೆಗೆದು ಹಾಕಿರುವದರಿಂದಲೂ ಕೊರತೆಯ ಭಯವೇ ಇಲ್ಲ. ಈ ಕಾರಣ ಸರ್ಕಾರದವರು ಸಕ್ಕರೆಯ ಮೇಲೆ ನಿಯಂತ್ರಣ ತೆಗೆದುಹಾಕುವುದು ಒಳ್ಳೆಯದು.

ಎಂ. ರಾಘವಾಚಾರ್,

ಬಳ್ಳಾರಿಜಿಲ್ಲಾ ಆಹಾರ ಸಮಿತಿ

ಕಳೆದವಾರ ಸಮಾವೇಶವಾದ ಆಹಾರ ಸಮಿತಿಯು ಕನಿಷ್ಟಕ್ಕೆ 10 ಟ್ರಾಕ್ಟರುಗಳನ್ನಾದರೂ ಜಿಲ್ಲೆಯ ಆಹಾರದುತ್ಪನ್ನಕ್ಕಾಗಿ ಕಳುಹಿಸಬೇಕೆಂದು ಸರ್ಕಾರವನ್ನು ಕೇಳಿಕೊಂಡಿದೆ.

ಪಾಕಿಸ್ತಾನದ ವಿರುದ್ಧ ಯಾವ ಕಾರ್ಯಕ್ರಮ ?

ಭಾರತದ ಪ್ರಧಾನರಾದ ಪಂಡಿತ ನೆಹರೂರವರಲ್ಲಿ ಬಂಗಾಲದ ಸಮತಾವಾದಿಗಳು ಒಂದು ಬಿನ್ನವತ್ತಳೆಯನ್ನು ಸಲ್ಲಿಸಿ, ಪಾಕಿಸ್ತಾನದ ವಿರುದ್ಧ ಮಿಲಿಟರೀ ಕಾರ್ಯಕ್ರಮವನ್ನು ಕೈಗೊಂಡಾಗಲೇ ಪಾಕಿಸ್ತಾನದ ಅಲ್ಪಸಂಖ್ಯಾಕರಾದ ಹಿಂದೂಗಳಿಗೆ ನರಿಹಾರ ದೊರೆಯುತ್ತೆಂದೂ ಅಭಿಪ್ರಾಯ ಪಟ್ಟಿರುವರು.

ಪಾಕಿಸ್ತಾನಕ್ಕೆ ನೀತಿಯಿಲ್ಲ. ಇನ್ನಾವ ರಾಷ್ಟ್ರವೆಂದು ಹೇಳಿಕೊಳ್ಳುತ್ತಿರುವ ಕಾರಣ ಮುಸಲ್ಮಾನರಲ್ಲದ ಇತರರಿಗೆ ಅಲ್ಲಿ ಅನುಕೂಲಗಳು ದೊರೆಯುವಂತಿಲ್ಲ. ಅವರು ಸಂಘಗಳನ್ನು ಅವರು ಪಾಲಿಸುವಂತಿಲ್ಲ. ನಿಷೇಧವರ ತೀರ್ಮಾನಗಳಿಗಾಲಿ ಅವರು ಬೆದರುವಂತಿಲ್ಲ ಈ ಕಾರಣ ಅವ್ಯವಾದಿಗಳು ಪಾಕಿಸ್ತಾನದ ವಿರು ಮಿಲಿಟರೀ ಕಾರ್ಯಕ್ರಮವನ್ನು ಸೂಚಿಸಿಲುವುದು ನ್ಯಾಯವೆಂದು ತೋರುತ್ತದೆ.

ಆದರೆ, ಎರಡು ರಾಷ್ಟ್ರಗಳಲ್ಲಿ ಯುದ್ಧವಾಗುವದಾದರೆ ಯಾವ ಅಂತ ರಾಷ್ಟ್ರೀಯ ಪರಿಣಾಮಗಳುಂಟಾಗತ್ತವೆಂಬುದನ್ನು ಗಮನಿಸಬೇಕು ಪಾಕಿಸ್ತಾನಕ್ಕೆ ಅಂತರಾಷ್ಟ್ರೀಯ ರಾಷ್ಟ್ರಗಳು ಮೊದಲಿಂದಲೂ ಪುರಸ್ಕಾರ ಕೊಡುತ್ತಲಿವೆ. ಯುದ್ಧದಿಂದ ಅನಿಷ್ಟ ಪರಿಣಾಮಗಳೇ ಹೆಚ್ಚಾಗಿ ಯಾವ ಕಾರಣ ಸಾಧ್ಯವಾದಷ್ಟುಮಟ್ಟಿಗೆ ಯುದ್ಧವನ್ನು ದೂರೀಕರಿಸಬೇಕು. ಅನಿವಾರ್ಯ ಪಕ್ಷದಲ್ಲಿ, ಪಂಡಿತ ನೆಹರೂರವರು ಹೇಳುವಂತೆ, ಬೇರೆ ಕಾರ್ಯ ಉಪಾಯಗಳನ್ನು ಕೈಕೊಳ್ಳಲೇಬೇಕು.

ಮೈಸೂರೊಂದೇ ಕರ್ನಾಟಕ ನಿಕೀಕರಣಕ್ಕೆ ತೊಡಕು

ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಅಧ್ಯಕ್ಷರೂ, ಕಾಂಗ್ರೆಸ್ ಕಾರ್ಯಕಾರೀ ಸಮಿತಿ ಸದಸ್ಯರೂ ಆದ ಶ್ರೀ ಎಸ್. ನಿಜಲಿಂಗಪ್ಪನವರು ಹೊಳೆ ಆಲೂರಲ್ಲಿ ಭಾಷಣ. ಕೊಡುತ್ತಾ ಈ ಪ್ರಕಾರ ತಿಳಿಸಿದರು.

ಕಾಂಗ್ರೆಸ ವರ್ಕಿಂಗ ಕಮಿಟಿಯವರ ಅಭಿಪ್ರಾಯದಂತೆ ಕೇವಲ ಮೈಸೂರೊಂದೇ ಕರ್ನಾಟಕ ನಿಕೀಕರಣಕ್ಕೆ ಅಡ್ಡವಿರುವದಾಗಿಯೂ, ಅಲ್ಲಿ ಅಧಿಕಾರ ಬಲಸ್ಥಿತೀಯತೆ ಇವೇ ಮುಖ್ಯ ಸಮಸ್ಯಗಳಿರುವದಾಗಿಯೂ, ಇವುಗಳ ನಿವಾರಣೆಗಾಗಿ ಸಾಕಷ್ಟು ಪ್ರಚಾರ ಕಾರ್ಯವನ್ನು ಕೈಕೊಳ್ಳಬೇಕಾಗಿರುವದಾಗಿಯೂ, ಅದಕ್ಕಾಗಿ ಜನತೆಯು ಮುಕ್ತ ಹಸ್ತದಿಂದ ದಾನ ಸಹಾಯ ಮಾಡಬೇಕಾಗಿಯೂ ತಿಳಿಸಿದರು.

ರೋಡ್ ಟ್ರಾಫಿಕ್ ಬೋರ್ಡ್‌ನವರ ಗಮನಕ್ಕೆ ಕಣೇಕಲ್ಲು ರಾಯದುರ್ಗ ಭಾಗಕ್ಕೆ ಬಸ್ ಬೇಕು.

ರಾಯದುರ್ಗದ ತಾಲೂಕಾಫೀಸಾ ಸಬ್ ಮ್ಯಾಜಿಸ್ಟ್ರೇಟ್ ಕೋರ್ಟು ಸಬ್ ರಿಜಿಸ್ಟ್ರಾರು ಆಫೀಸು, ಹೈಸ್ಕೂಲ್ ಆಲ್ಲದೆ ನಗರದ ವ್ಯಾಪಾರ ವ್ಯವಹಾರ ಸಂಬಂಧಗಳಿಗಾಗಿ ತಾಲೂಕಿನ ಪೂರ್ವಭಾಗದ ಹಳ್ಳಿಗಳವರಾದ ನಮಗೆ ಬಹಳ ಕಷ್ಟವಿದೆ. ಅದರಲ್ಲೂ ಕಣೇಕಲ್ಲು ಸರ್ಕಾರಿ ಮಾಲ್ಯ ಸೋಪ್ಲಾಪುರ ಹನುಮಾಪುರ ತುಂಬಿಗನೂರು ಗರುಡಚೇಡು ಮೀನಹಳ್ಳಿ ನಾಗೇನಹಳ್ಳಿ ಅನುಕನಹಾಳ ಹಳ್ಳಿಗಳ ವಾಸಸ್ಥರು ಪ್ರಾತಃಕಾಲ ಹೊರಟು ಸಾಯಂಕಾಲ ಹಿಂದಿರುಗುವಂತೆಯೇ ಇಲ್ಲ ಬಳ್ಳಾರಿಯಿಂದ ಹೊರಟ ಬಸ್ಸು ಮಧ್ಯಾಹ್ನ 1 ಗಂಟೆಗೆ ರಾಯದುರ್ಗ ಸೇರುತ್ತದೆ. ಇದು ಕೋರ್ಟು ಕಛೇರಿ ಶಾಲೆಗಳಿಗೆ ಹೋಗುವವರಿಗೆ ಅನುಕೂಲವಿಲ್ಲದಂತಿದೆ ಸಾಯಂಕಾಲದ ಬಸ್ಸು 7 ಗಂಟೆಗೆ ರಾಯದುರ್ಗ ಸೇರುತ್ತದೆ. ಈ ಕಾರಣ ಕೋರ್ಟುಕಛೇರಿ ಕೆಲಸಗಳಿದ್ದವರು ಭೋಜನವಸತಿಗಳಿಗೆ ಕೂಲವಾದ ರಾಯದುರ್ಗಕ್ಕೆ ಒಂದುದಿನ ಮುಂಚಿತವಾಗಿ ಒಂದು ಬಹಳ ಕಷ್ಟಪಡಬೇಕಾದ ಪ್ರಸಂಗವಿದೆ.

ಈ ಕಾರಣ ರೋಡ್ ಟ್ರಾಫಿಕ್ ಬೋರ್ಡಿನವರು, ಕಣೇಕಲ್ಲಿನಿಂದ ಒಂದು ಬಸ್ ಪ್ರಾತಃಕಾಲ ಹೊರಟು ಅದೇ ಸಾಯಂಕಾಲ ಹಿಂದಿರುಗಲು ಲೈಸನ್ಸ್ ಕೊಟ್ಟರೆ ಈ ಭಾಗದವರಿಗೆ ಬಹಳ ಅನುಕೂಲವಾಗುತ್ತೆಂದು ಈ ಮೂಲಕ ಸೂಚಿಸುತ್ತೇವೆ.

" ಕಷ್ಟದಲ್ಲಿರುವ ರೈತರು "

ಹೈದರಾಬಾದಿನ ಹಿಂದಿನ ಮುಖ್ಯಮಂತ್ರಿಗಳ ಪಲಾಯನ

ಹೈದರಾಬಾದ್ ಪೋಲೀಸ್ ಬಂಧನದಲ್ಲಿದ್ದ ಪ್ರಧಾನ ಮಂತ್ರಿಗಳಾದ ಮೀರ್ ಲಾಯಕ್ ಅಲಿಯವರು 4-3-50 ನೆಯ ವ್ಯಾತಃಕಾಲ ತಮ್ಮ ಹೆಂಡಿರು ಮಕ್ಕಳೊಡನೆ ಮೋಟರ್ ಕಾರಿನಲ್ಲಿ ತಪ್ಪಿಸಿಕೊಂಡರೆಂಬುದು ಇಂಡಿಯಾ ಸರ್ಕಾರಕ್ಕೆ 6 ನೆಯ ತಾರೀಖು ಮಧ್ಯಾಹ್ನ ಗೊತ್ತಾಯಿತು ಅವರ ಹಾಸಿಗೆಯ ಮೇಲೆ ಉದ್ದುದ್ದನಾಗಿ ಎರಡು ತಲೆದಿಂಬುಗಳನ್ನಿಟ್ಟು ಅದರಮೇಲೆ ಬಿಳಿ ಹೊದಿಕೆಯನ್ನು ಹೊದಿಸಿದ್ದರು ಎರಡು ದಿನಗಳನಂತರ ಅನುಮಾನದಿಂದ ಕಾಯಲಿಕ್ಕೆ ಇದ್ದವರು ನೋಡಿದಾಗ ಪತ್ತೆ ಹತ್ತಿತು. ಹೋಳಿಹಬ್ಬದ ಗಲಾಟೆಯನ್ನು ಅನುಕೂಲಪಡಿಸಿಕೊಂಡು ಗೋಷಾದಿಂದ ತಲೆತಪ್ಪಿಸಿಕೊಂಡಿರಬೇಕೆಂದು ಕೆಲವರೂ ಗೋವದ ಮಾರ್ಗವಾಗಿ ವರದೇಶಕ್ಕೆ ಹೋಗಿರಬೇಕೆಂದು ಕೆಲವರೂ ಅಂದುಕೊಳ್ಳುತ್ತಾರೆ. ಹೈದರಾಬಾದಿನ ಇನ್ಸಪೆಕ್ಟರ್ ಜನರಲ್ ಜಟ್ಲಿಯವರು "ಲಾಯಕಾಲಿಯವರು ಭಾರತದಲ್ಲಿರಲಿಕ್ಕಿಲ್ಲ" ವೆಂದು ಹೇಳಿದರು ಈ ಪ್ರಸಂಗದಲ್ಲಿ ಹಿಂದಿನ ಸೇನಾನಾಯಕ ಎಲ್. ಎಡ್ರೂಸ್ ಮತ್ತು ಮತ್ತು ಸುಪ್ರಸಿದ್ಧ ವರ್ತಕರಾದ ಖಾನ್ ಬಹದೂರ್ ಅಹಮದ್ ನವಾಜ್ ಜಂಗರ ಬಂಧನವಾಗಿದೆ ಪೋಲೀಸರು ಗುಪ್ತ ಇಲಾಖೆಯವರು ಹಿಂದುಸ್ತಾನದ ಎಲ್ಲಾ ಭಾಗಗಳಲ್ಲೂ ಜಾಗ್ರತೆವಹಿಸಿದ್ದಾರೆ.

ಕಾಂಗ್ರೆಸ್

ಬರುವ ತಿಂಗಳಲ್ಲಿ ಕಾಂಗ್ರೆಸ್ ಅಧಿವೇಶನವು ಜರುಗಲಿದ್ದು ಅಧ್ಯಕ್ಷರ ಚುನಾವಣೆಯು ಅಸ್ಪರೊಳಗೆ ನಡಯಬೇಕೆಂದು ಕಾಂಗ್ರೆಸ್ ವರ್ಕಿಂಗ್ ಕಮಿಟಿಯಲ್ಲಿ ನಿರ್ಣಯವಾಗಿದೆ. ಜಿಲ್ಲಾ ತಾಲೂಕುಗಳಲ್ಲಿ ಚುನಾವಣೆಗಳನ್ನು ಏಪ್ರಿಲ್‌ದಲ್ಲಿ ನಡೆಸಲು ನಿಶ್ಚಯವಾಗಿದೆ.

ಡಾಕ್ಟರ್ ರಾಮಮನೋಹರ ಲೋಹಿಯಾ ಕರ್ನಾಟಕದ ಕಾರ್ಯಕ್ರಮ

ಸಾಮ್ಯವಾದಿ ಮುಖಂಡರಾದ ಡಾಕ್ಟರ್ ರಾಮಮನೋಹರ ಲೋಹಿಯಾರವರು ಕರ್ನಾಟಕದಲ್ಲಿ ಇದೇ ತಿಂಗಳು 15 ನೆಯ ತಾರೀಖಿನಿಂದ 22 ರವರೆಗೆ ಸಂಚಾರಕಾರ್ಯಕ್ರಮ ವಿಟ್ಟಿರುವರು ಹೊಸಪೇಟೆ ಬಳ್ಳಾರಿಗಳಿಗೆ ಬರುವ ನಿಶ್ಚಿತದಿನಗಳು ಇನ್ನೂ ಗೊತ್ತಾಗಿಲ್ಲ.

NOTICE.

The anaual lease of the ferries, markets, slaughter house and cart stand under the control of this Board, for 1950-51 will be sold in public auction by the undersigned or any officer with authorisation from him. The place of auction and its date are givin below.

Adoni Taluk

Nagaladinni. 22-3 50 Kosigi. 24-3-50 Madhavaram. 25-3-50

Siruguppa Taluk.

Siruguppa. 26-3-50

Hospet Taluk.

Kampli 22-3-50 Morning.
Hospet. 22-3-50 Afternoon.

Hadagalli Taluk.

Hadagalli 24 3 50

Harapanahalli Taluk.

Harapananahalli 26-3 '50

Kudligi Taluk

Kudligi 27-3-50

District Board Office.
Bellary. Dated. 9-3-50

Y. MAHABALESWARAPPA,
President, District Board Bellary.

ಪ್ರಕಟನೆ.

ಬಳ್ಳಾರಿಜಿಲ್ಲಾ ಬೋರ್ಡಿನ ಅಧೀನದಲ್ಲಿ ವಾರ್ಷಿಕವಾಗಿ ನಿರ್ದಿಷ್ಟ ನಿಯಮಗಳಮೇಲೆ ಕೊಡಲ್ಪಡುವ ತೆಪ್ಪ ಸಂತೆ ಮತ್ತು ಕಟಿಕರಂಗಡಿಗಳ ಯಾಲಂ ಬಹಿರಂಗವಾಗಿ ಈ ಕೆಳಗೆ ಕಾಣಿಸಿದ ಸ್ಥಳ ಮತ್ತು ದಿನಗಳಲ್ಲಿ ನಮ್ಮಿಂದಾಗಲಿ ನಮ್ಮಿಂದ ಅಧಿಕಾರ ಹೊಂದಿದವರಿಂದಲಾಗಲಿ ಹಾಕಲ್ಪಡುತ್ತದೆ.

ಆದವಾನಿ ತಾಲೂಕು

ನಾಗಲದಿನ್ನಿ 22-3-1950
ಕೋಸಿಗಿ 24-3-1950
ಮಾಧವರಂ 25-3-1950

ಸಿರುಗುಪ್ಪೆ ತಾಲೂಕು

ಸಿರುಗುಪ್ಪೆ 26-3 1950

ಹೊಸಪೇಟೆ ತಾಲೂಕು

ಕಂಪ್ಲಿ 22-3-50 ಪ್ರಾತಃಕಾಲ
ಹೊಸಪೇಟೆ 22-3-50 ಮಧ್ಯಾಹ್ನ

ಹಡಗಲಿ ತಾಲೂಕು

ಹಡಗಲಿ 24-3 50

ಹರಪನಹಳ್ಳಿ ತಾಲೂಕು

ಹರಪನಹಳ್ಳಿ 26-3-50

ಕೂಡ್ಲಿಗಿ ತಾಲೂಕು

ಕೂಡ್ಲಿಗಿ 27-3-50

ಜಿಲ್ಲಾ ಬೋರ್ಡ್ ಆಫೀಸ್
ಬಳ್ಳಾರಿ 9-3-50

ವೈ. ಮಹಾಬಳೇಶ್ವರಪ್ಪ
ಅಧ್ಯಕ್ಷ ಜಿಲ್ಲಾಬೋರ್ಡ್
ಬಳ್ಳಾರಿ.

ಭಯಂಕರ ರೈಲ್ವೇ ಅಪಘಾತ

ಮದ್ರಾಸಿನಿಂದ ಕಲ್ಕತ್ತೆಗೆ ಹೋಗುವ ಮೇಲ್ ಗಾಡಿಯು ಸಿನೆಯ ತಾಲೂ ರಾತ್ರಿ 11-30 ಗಂಟೆಗೆ ಮದ್ರಾಸಿಗೆ 48 ಮೈಲಿ ದೂರದಲ್ಲಿ ಭಯಂಕರ ಅಪಘಾತಕ್ಕೆ ಗುರಿಯಾಯಿತು. 6 ಜನ ಸತ್ತು 85 ಜನರಿಗೆ ಘಾಯಗಳಾಗಿವೆ. ಯಾರೋ ದುರಾತ್ಮರು ರೈಲ್ವೇ ಹಳಿಯನ್ನು ತೆಗೆದು ಈ ಅಪಾಯಕ್ಕೆ ಕಾರಣಮಾಡಿದರೆಂದು ಊಹಿಸಲಾಗಿದೆ.

ಪೂರ್ವ ಬಂಗಾಲದಲ್ಲಿ ಅತ್ಯಾಚಾರಗಳು

ಅಲ್ಪ ಸಂಖ್ಯಾಕರಾದ ಹಿಂದೂಗಳ ಮೇಲೆ ಪೂರ್ವಬಂಗಾಲದಲ್ಲಿ ಭಯಂಕರ ಅತ್ಯಾಚಾರಗಳಾಗುತ್ತಿವೆ. ಹೆಂಗಸರನ್ನು ಅಪಹರಿಸಿಕೊಂಡು ಹೋಗುವುದೂ ಇತರರನ್ನು ಕೊಲ್ಲುವುದೂ ಸುಲಿಗೆ ಲೂಟಿ ಅವ್ಯಾಹತವಾಗಿ ನಡೆದಿದೆ. ಪೂರ್ವ ಬಂಗಾಲದಿಂದ ಬರುವ ರೈಲ್ವೆಗಳ ಮೇಲೆ ದಾಳಿಯಾಗುತ್ತಿರುವ ಕಾರಣ ಮದ್ರಾಸ್ ರೈಲ್ವೆಗಳನ್ನು ತಡೆಹಿಡಿಯಲಾಗಿದೆ.

ಮಂಗಳೂರು ಮೋಟಾರ ಮುಜದೂರ

ಮಂಗಳೂರಿನ ಮೋಟಾರ ಮುಜದೂರರ ಮುಷ್ಕರವು ಹಾಗೆ ನಡೆದಿದ್ದು, ಉಡುಪಿ-ಮಂಗಳೂರ ನಿಟ್ಟಿನಲ್ಲಿ ಪ್ರಯಾಸಕ್ಕೆ ಹೊಡೆತ ಕೊಡಿದೆಯೆಂದೂ, ಮೋಟರ ವಾಹನಗಳನ್ನು ಮುಷ್ಕರದವರು ಹಾಳುಮಾಡಿ ಸಾವಿರಾರು ರೂಪಾಯಿ ಬೆಲೆಯ ವಸ್ತುಗಳನ್ನು ಧ್ವಂಸಮಾಡಿದ್ದಾರೆಂದೂ ಪ್ರಕಟವಾಗಿದೆ.

ಲಕ್ಷ್ಮಿಯ ಚಾಂಚಲ್ಯ

ಲಕ್ಷ್ಮಿಯು ಚಂಚಲಳು ಎಂದು ನಮ್ಮ ಪೂರ್ವಜರು ಹೇಳಿದ್ದಾರೆ. ಮತ್ತು ಸರಸ್ವತಿಗೂ ಲಕ್ಷ್ಮಿಗೂ ಸೊಸೆ—ಅತ್ತೆಯ ಸಂಬಂಧವಿರುವ ಮೂಲಕ ಅವರಿಬ್ಬರು ಒಂದು ಕಡೆಗೆ ಕೂಡಿರುವುದು ಕ್ವಚಿತ ಎಂದು ಹೇಳಿದ್ದಾರೆ. ಈ ಮಾತುಗಳು ಎಷ್ಟು ಅನುಭವ ಪೂರ್ಣವಾಗಿವೆಯೆಂಬುದನ್ನು ನಾವು ಪ್ರತಿದಿವಸ ಜೀವನದಲ್ಲಿ ಸ್ಪಷ್ಟ ಕಾಣುತ್ತಿದ್ದೇವೆ.

ಎಲ್ಲರೂ ದುಡ್ಡಿಗಾಗಿ ಹಂಬಲಿಸುತ್ತಿದ್ದಾರೆ. ಯಾವುದೇ ರೀತಿಯಿಂದ ಆಗಲೊಲ್ಲದೇಕೆ ಅಡನ್ನು ಗಳಿಸಲು ಅವ್ಯಾಹತವಾದ ಶ್ರಮಮಾಡುತ್ತಾರೆ. ಇಲ್ಲದಾಗ ಅದನ್ನು ಗಳಿಸುವ ಪ್ರಯತ್ನವು ನಡೆಯುತ್ತಲೆ.

ಶ್ರೀಮಂತಿಕೆಯು ಬರುತ್ತಲೇ ನಾನಾ ತರಹದ ಸ್ನೇಹಿತರು ಸುತ್ತಲೂ ನೆರೆಯುತ್ತಾರೆ. ಅವರು ಶ್ರೀಮಂತರಲ್ಲಿಯ ದುಡ್ಡನ್ನು ಕರಗಿಸುವದಕ್ಕಾಗಿಯೇ ಅವತಾರವೂ ಡಿದವರೆಂದು ಹೇಳಲು ಏನೂ ಅಭ್ಯಂತರವಿಲ್ಲ.

ಮನುಷ್ಯನು, ತನ್ನ ಹೊಟ್ಟೆ ಬಟ್ಟೆಗೆ ಸಾಲುವನವರೆಗೆ ಎಷ್ಟಬಲ ನೋಡುವದಿಲ್ಲ. ಅದಕ್ಕೆ ಸಾಕಷ್ಟು ವ್ಯವಸ್ಥೆಯಾಗಿ ಹೆಚ್ಚಿನ ದುಡ್ಡು ಕೂಡಿಬೀಳುವದಕ್ಕೆ ಆರಂಭವಾಯಿತೆಂದರೆ ಇವನ ಕೊರತೆಗಳು ಬೆಳೆಯುತ್ತವೆ. ದುಡ್ಡು ಹೆಚ್ಚಾಗದಂತೆ ಅವಶ್ಯಕತೆಗಳು ಹೆಚ್ಚಾಗುತ್ತವೆ. ನುತ್ತು ದುಡ್ಡಿನ ಮೊತ್ತವನ್ನು ಬೆಳೆಸುವ ಹವ್ಯಾಸವು ಹೆಚ್ಚಾಗುತ್ತದೆ. ಕೊರತೆಯುತ್ತು ಹವ್ಯಾಸಗಳ ತಾಕಲಾಟದಲ್ಲಿ ಆ ಹಣವೆಲ್ಲವು ಒಂದು ದಿವಸ ಕರಗಿ ಹೋಗಿ ಪುನಃ ಮೊದಲಿನ ಮನೆಗೆ ಆ ಮನುಷ್ಯನು ಬಂದ ಉದಾಹರಣೆಗಳು ಬೇಕಾದಷ್ಟು ಇವೆ.

ಇದಕ್ಕೆ ಲಕ್ಷ್ಮಿಯು ಚಂಚಲಳೆನ್ನುವದ. ಹೈದರಾಬಾದಿನ ನಿಜಾಮರಲ್ಲಿ ಲಕ್ಷ್ಮಿಯು ಈ ಚಾಂಚಲ್ಯವನ್ನು ಸುಮಾರು ಬಹು ದಿವಸ ಕುಳಿತುಬಿಟ್ಟಿದ್ದಳು. ಆದರೆ ಎಷ್ಟು ದಿವಸ ಅವನ್ನು ಮುರೆತಾಳು? ನುತ್ತು ಆ ಹುಟ್ಟುಗುಣವು ಎಲ್ಲಿ ಹೋಗಬೇಕು? ಅದ್ದರಿಂದ ಅವಳು ಮೆಲ್ಲನೆ ಅಲ್ಲಿಂದ ಈಗ ಕಾಲ್ತೆಗೆಯಲು ಪ್ರಾರಂಭಿಸಿದ್ದಾಳೆ.

ಲಕ್ಷ್ಮಿ-ಸರಸ್ವತಿ

ಅತಿ ಬುದ್ಧಿವಂತರು ದರಿದ್ರರಿರುವುದೇ ಬಹಳ. ಏಕೆಂದರೆ ಅವರ ಬುದ್ಧಿ ಚಾತುರ್ಯವು ದುಡ್ಡು ಗಳಿಸಲು ಉಪಯೋಗಬೀಳುವುದೇ ಇಲ್ಲ. ಅವರಲ್ಲಿ ದುಡ್ಡು ಕೂಡಿಬಿದ್ದರೂ ಅದನ್ನು ಎಬ್ಬಿಸಲು ಇತರರಿಗೆ ಬಹಳ ಕಷ್ಟವಾಗುವದಿಲ್ಲ. ಇಂತಹ ಉದಾಹರಣೆಗಳನ್ನು ಬೇಕಾದಷ್ಟು ನೋಡಬಹುದಾಗಿದೆ. ಈ ಮಾತಿಗೆ ಎಷ್ಟೋ ಅಪವಾದಗಳು ಇರಬಹುದು. ಆದರೆ ಸಾಮಾನ್ಯವಾಗಿ ನೋಡಿದರೆ ಈ ಪರಿಸ್ಥಿತಿಯೇ ಹೆಚ್ಚಾಗಿ ತೋರುವದು ಆದ್ದರಿಂದಲೇ ಸರಸ್ವತಿ ಲಕ್ಷ್ಮಿಯರು ಒಂದೆಡೆಗೆ ಕೂಡುವುದಿಲ್ಲವೆಂದು ಹೇಳಿದ್ದಾರೆ.

ನಮ್ಮ ಪುರಾಣಗಳಲ್ಲಿಯ ಕಥೆಯ ನೇರೆಗೆ ಲಕ್ಷ್ಮಿ-ಸರಸ್ವತಿಯರು ಅತ್ತೆ ಸೊಸೆಯೆಂದಿರೂ ಹೌದು. ಈ ಕಥೆಗಳನ್ನು ಹೆಣೆದು ಬೋಧ ಮತ್ತು ವ್ಯವಹಾರ ಇವುಗಳ ಮೇಲೆ ಹಾಕಿ ನಮಗೆ ದಾರಿ ತೋರಿಸಿದ ನಮ್ಮ ಪೂರ್ವಜನರ ಬುದ್ಧಿ ಚಾತುರ್ಯವು ಪಶಂಸನೀಯವಾದುದೆಂಬುದರಲ್ಲಿ ಸಂಶಯವೂ ಇಲ್ಲ.

ರಾಜಕೀಯ ಕ್ಷೇತ್ರ

ಇಂದಿನ ರಾಜಕೀಯ ಕ್ಷೇತ್ರವನ್ನು ನೋಡಿದರೂ ಇದೇ ಮಾತು ಎದ್ದು ಕಾಣುತ್ತದೆ ಅಮೇರಿಕೆಯ ಜಗತ್ತಿನಲ್ಲಿಯೇ ಶ್ರೀಮಂತ ದೇಶವಾಗಿದೆ ಎಲ್ಲ ತರಹದ ಸಂಪತ್ತು ಅಲ್ಲಿ ತುಂಬಿ ತುಳುಕುತ್ತಿದೆ. ಆದರೆ ಆ ಲಕ್ಷ್ಮಿಯ ಚಾಂಚಲ್ಯವು ಅಲ್ಲಿಯೂ ಹೇಗೆ ಕಾಣುತ್ತಿದೆ ಎಂಬುದನ್ನು ಸಹಜವಾಗಿ ನೋಡಬಹುದು.

ಬೇಕಾದಷ್ಟು ದುಡ್ಡು ಗಳಿಸಿಕೊಂಡು ಆ ದೇಶವು ಇಂದು ಸುಮ್ಮನೆ ಕೂಡುವಂತಿಲ್ಲ. ಜಗತ್ತಿನಲ್ಲಿ ಎಲ್ಲಕ್ಕೂ ಹೆಚ್ಚಿನ ಸ್ಥಾನವನ್ನು ಗಳಿಸಿಕೊಳ್ಳಬೇಕೆಂದು ಅದು ಇಂದು ಹಂಬಲಿಸುತ್ತಿದೆ. ರಶಿಯಾವನ್ನು ತನಗಿಂತ ಹೆಚ್ಚು ಬಲಶಾಲಿಯಾಗಲು ಬಿಡಕೂಡದೆಂದು ಅದು ನಿರ್ಧರಿಸಿದೆ.

ದುಡ್ಡು ಇದ್ದವರ ಹವ್ಯಾಸಗಳು ದೊಡ್ಡವಾಗಿರುವಂತೆಯೇ ಈ ಧನವಂತ ರಾಷ್ಟ್ರದ ಹವ್ಯಾಸವು ದೊಡ್ಡದಾಗಿಲ್ಲವೆ? ಅದಕ್ಕಾಗಿ ಅದು ಇಂದು ಎಲ್ಲ ದೇಶಗಳಿಗೆ, ತನ್ನ ಸ್ವಲ್ಪನಿತ್ಸವನ್ನು ಅವುಗಳ ಮೇಲೆ ಹೇರುವದಕ್ಕಾಗಿಯೋ? ಅಥವಾ ಅವುಗಳು ತನ್ನ ಕಡೆಗೆ ಇರಬೇಕೆಂತೋ ನೀರಿನಂತೆ ದುಡ್ಡು ಹಂಚುತ್ತಿದೆ. ಅಲ್ಲದೆ ತಾನು ಅಜಿಂಕ್ಯವಾಗಬೇಕೆಂಬ ದೃಷ್ಟಿಯಿಂದ ಕೋಟಿಗಟ್ಟಲೆ ದುಡ್ಡನ್ನು ಶಸ್ತ್ರಾಸ್ತ್ರ ಸಿದ್ಧತೆಯಲ್ಲಿ ವೆಚ್ಚಮಾಡುತ್ತಿದೆ.

ಹೀಗೆ ಅಳತೆಗೆಟ್ಟು ದುಡ್ಡು ಕೂಡಿದುದರ ಫಲವಾಗಿಯೇ ಅದು ಇಂತಹ ಕಟಾಟೋಪಕ್ಕೆ ಬಿದ್ದಿದೆಯೆಂದು ಹೇಳಿದರೆ ತಪ್ಪಾದೀತೇ?

ಇಬ್ಬುಂಗಳ ತೊಡಕು

ಮುಖ್ಯವಾಗಿ ಇಂದು ಜಗತ್ತಿನಲ್ಲಿ ಕಂಟಿಬಿದ್ದುದು ಪ್ರಜಾಸತ್ತೆ ಮತ್ತು ಸಾಮ್ಯವಾದ ಇವುಗಳ ನಡುವೆ. ಸಾಮ್ಯವಾದದ ಪುರಸ್ಕರ್ತವಾದ ರಸಿಯಾದೇಶವು ಪ್ರಜಾಸತ್ತೆಯ ಅಧ್ವರ್ಯಗಳನ್ನು ಧನವಾದಿಗಳೆಂದು ಕರೆಯುತ್ತಿದೆ. ಪ್ರಜಾಸತ್ತೆಯವರು ಸಾಮ್ಯವಾದಿಗಳನ್ನು ಅನ್ಯವಹಾರ್ಯವಾದಿಗಳೆಂದು ಹೇಳುತ್ತಿದ್ದಾರೆ.

ಈ ಎರಡು ವಾದಗಳಲ್ಲಿ ಯಾವುದು ಸರಿ, ಯಾವುದು? ಎಂಬುದನ್ನು ಹೇಳುವುದು ಕಠಿಣವಾಗಿದೆ. ಏಕೆಂದರೆ ಈ ಯಾವ ವಾದದಲ್ಲಿಯೂ ಪ್ರಾಮಾಣಿಕತೆಯು ಉಳಿದಿಲ್ಲ. ಪ್ರತಿಪಕ್ಷವು ತನ್ನ ವರ್ತನೆಯಿಂದ ಈ ತತ್ವವನ್ನೇ ಕಳಗೆಳೆಯುತ್ತಿದೆ.

ರಶಿಯಾದಲ್ಲಿಯ ಇಂದಿನ ಸ್ಥಿತಿಯನ್ನು ನೋಡಿದರೆ ಸಾಮ್ಯವಾದದ ಬಗ್ಗೆ ನಾಬರಿಯಾಗುವಂತಿದೆ. ಅಷ್ಟೇ ಅಲ್ಲದೆ ಅಲ್ಲಿ ಏನು ನಡೆದಿದೆಯೆಂಬುದನ್ನು ಕೂಡ ರಶಿಯಾ ತೋರಿಸಲು ಸಿದ್ಧವಿಲ್ಲ.

ಪ್ರಜಾಸತ್ತೆಯನ್ನು ಕಾರ್ಯರಂಗದಲ್ಲಿ ಇಳಿಸುವ ಇಂಗ್ಲಂಡ ಅಮೇರಿಕೆಗಳನ್ನು ನೋಡಿದರೂ ಆ ತತ್ವದ ಬಗ್ಗೆ ನಿರಾಶೆಯೇ ಉಂಟಾಗುತ್ತದೆ. ಎಂದೂ ಇವರು ತಮ್ಮ ಸ್ವಾರ್ಥಬಿಟ್ಟು ಆ ತತ್ವವನ್ನು ಎಲ್ಲರಲ್ಲಿ ಪ್ರಚಾರಮಾಡಲಿಲ್ಲ.

ಒಟ್ಟಿನಲ್ಲಿ ಯಾವುದರಲ್ಲಿ ತಮಗೆ ಹೆಚ್ಚು ಸುಖಸಿಗುವುದೋ ಅದನ್ನು ಸ್ವೀಕರಿಸುವ ಕಾಲವು ಪ್ರಜೆಗಳಿಗೆ ಬಂದಿದೆ.

ಮೊನ್ನೆ ಅಮೇರಿಕೆಯ ಅಧ್ಯಕ್ಷರಾದ ಟ್ರೂಮನ್ನರು ಅಲೆಗ್ಜಾಂಡ್ರಿಯಾ ಎಂಬಲ್ಲಿ ತಾ॥ ೩೦ ನೇ ದಿವಸ "ಪೂರ್ವದೇಶಗಳ ಪ್ರಜೆಗಳು ಕಮ್ಯೂನಿಝಮ್‌ವನ್ನು ತ್ಯಜಿಸಿ ಪ್ರಜಾತ್ತೆಯನ್ನು ಸ್ವೀಕರಿಸುವಂತಾಗ ಬೇಕಾದಲ್ಲಿ, ಅವರ ಅವಸರದ ಕೊರತೆಗಳೆನ್ನು ಪ್ರಜಾಸತ್ತೆಯೇ ಪೂರೈ

ಸಬಲ್ಲನೆಂಬುದನ್ನು ನಾವು ತೋರಿಸಿ ಕೊಡಬೇಕು. ಸ್ವಾತಂತ್ರ್ಯ ಗಿತ್ತು ಪ್ರಜಾ ಸತ್ತೆಗಳ ಲಾಭಗಳು ಅವರಿಗೆ ಎಷ್ಟಿ ತೋರಿಸಲ್ಪಡಬೇಕು. ಅವರಿಗೆ ಮೋಟಾರು ಗಳನ್ನು ಮತ್ತು ತಂತಿಯಿಂದ ಚಿತ್ರ ಕಳಿ ಸುವ ಯಂತ್ರಗಳನ್ನು ನಾವು ಮಾರುವ ದಿಲ್ಲ; ಹಬ್ಬು ಬೆಳೆ, ಶಿಕ್ಷಣ ಮತ್ತು ಆರೋಗ್ಯಗಳನ್ನು ಸಂಪಾದಿಸುವ ಸೆಲ ಕರಣೆಗಳನ್ನು ಅವರಿಗೆ ಒದಗಿಸುವೆವು" ಎಂಬರ್ಥದ ಅಭಿಪ್ರಾಯವನ್ನು ವ್ಯಕ್ತ ಮಾಡಿದ್ದಾರೆ.

ಹೀಗೆ ತನ್ನ ದುತ್ತನ್ನು ವೆಚ್ಚನಾಡಿ ಪ್ರಜಾಸತ್ತೆಯ ಲಾಭದಾಯಕ ಸ್ವರೂಪ ವನ್ನು ಜಗತ್ತಿಗೆ ತೋರಿಸಿ ಅದರ ಭಾಗ ಗಳನ್ನು ಅಮೇರಿಕೆಯು ತನ್ನ ಕಡೆಗೆ ಎಳೆದುಕೊಳ್ಳಬೇಕಾಗಿದೆ.

ಇತ್ತ ಗಿಶಿಯಾವು ಕೂಡ ಅದೇ ಮಾರ್ಗವನ್ನು ಕೈಕೊಂಡಿದೆ. ಪ್ರಜಾಸತ್ತೆ ಯು ಪ್ರಯೋಜನವನ್ನು ಕೊಡಲಾರದು. ಕಮ್ಯೂನಿಸ್ಟುಮಿಸಿಂದಲೇ ಜಗತ್ತಿಗೆ ಶಾಂತಿ ಸಮಾಧಾನಗಳು ದೊರೆಯಬಲ್ಲುವಾಗಿವೆ. ಎಂದು ಅದು ಪ್ರತಿಪಾದಿಸು ತ್ತಿದೆ. ಮತ್ತು ತನ್ನ ತತ್ವದ ಪ್ರಸಾರವನ್ನು ಅದು ತನಗೆ ಸಾಧ್ಯವಾದ ರೀತಿಯಲ್ಲಿ ನಡೆಸಿದೆ.

ತತ್ವದ ನಿಜಸ್ವರೂಪವು ಈ ತಿಕ್ಕಾಟ ದಲ್ಲಿ ಎಲ್ಲಿಯೋ ಮಾಯವಾಗಿ ಹೋಗಿದೆ. ಇದು ಪ್ರಚಾರಕಾಲ. ಪ್ರಚಾರದಿಂದ ಕಂದನ್ನು ಬಿಳಿದಾಗಿ ತೋರಿಸುವ ಬಿಳಿ ದನ್ನು ಕರಿದೆಂದು ಸಿದ್ಧನಾಡುವ ಪ್ರಯತ್ನವು ಅವ್ಯಾಹತವಾಗಿ ನಡೆದುಹೋಗಿದೆ. ಮತ್ತು ಕೇವಲ ಶಕ್ತಿ ಸಾಮರ್ಥ್ಯಗಳ ಬಲದಿಂದ ತತ್ವವನ್ನು ಜನತೆಯ ಮೇಲೆ ಹೇರುವ ಕ್ರಮವು ಸಾಗಿದೆ.

ದುಡ್ಡಿನ ಅಪಸ್ಯಯ

ಈ ಸಂಗತಿ ಅಧವಾ ವಾತಾವರಣವಾದ ರೂ ಲಕ್ಷ್ಮಿಯ ಚಾಂಚಲ್ಯಕ್ಕೆ ಅನುಸರಿ ಸಿಯೇ ನತದಿದಿಯೆಂದು ಹೇಳಿದವನನ್ನು ನನ್ನು ಬಿಟ್ಟಂತೇನು ಆಗಲಾರದು.

ಭೂಮಿತಾಯಿಯು ಕೈಯಿಂದ ಸ್ಟಿಗಳು, ರಾಷ್ಟ್ರಗಳು ಅಪಾರ ಹಣ ಗಳಿಸು ತ್ತಿದ್ದಾರೆ, ಮತ್ತು ಅದನ್ನು ನಾನಾ ರೂಪ ದಿಂದ ತಿರುಗಿ ಅವಗೇ ಅಧವಾ ಸೃಷ್ಟಿಗೇ ಅರ್ಪಿಸುತ್ತಿದ್ದಾರೆ. ಈ ಲಕ್ಷ್ಮಿಯ ಹರಿದಾಟದ ಓಘವನ್ನು ಯಾರು ತಡೆಯುತ್ತಿಲ್ಲ ಮತ್ತು ಅದಂ ರೀತಿನೀತಿಗಳನ್ನು ತಿಳಿಯಲು ಕೂಡ ಯಾರು ಸಮರ್ಥರಾಗಿಲ್ಲ. ಹಾಂತೆಯೇ ಲಕ್ಷ್ಮಿಗೆ 'ಚಂಚಲಳು' ಎಂಬ ಹೆಸರು ಯಧಾರ್ಥವಾಗಿ ಕೊಡಲ್ಪಟ್ಟಿದೆ. ಜಯ ಹಿಂದಾ

ಬಂಗಾಲದ ಪರಿಸ್ಥಿತಿ ಹೆದು ವುದೇ? ರವಿ ಶನಿ ರಾತಿಗಳ ಪ್ರತಿಯೋಗ

ಹಾವೇರಿ ಜ್ಯೋತಿಮಾರ್ತಾಂಡ ಪ್ರೌಢಜ್ಞ ಮುಕುಟಾಲಂಕಾರ ಜ್ಯೋತಿರ್ವಿದ್ಯಾಬ್ಧಾನ್ಧರ ಪಂಡಿತ ಶಂಕರಶಾಸ್ತ್ರಿ ಹಾವೇರಿ ಇವರು ಹೀಗೆ ತಿಳಿಸುತ್ತಾರೆ.

ರವಿಶನಿ ಪ್ರತಿಯೋಗವು ತಾ ೭-೩-೧೯೫೦ ನೇ ದಿನದ ಸ್ವಾತಿಕಾಲ ೬ ಘಂಟೆ ೫ ನಿಮಿಸಿಟಿಗೆ ಆಗುವದು ರನಿ ಉದಯ ಮತ್ತು ರವಿ ಅಸ್ತಮೂರ್ವ ಪಶ್ಚಿಮಕ್ಕೆ ಅನುಕ್ರಮವಾಗಿ ಆಗಮನ ವಾಗುವದರ ಪರಿಣಾಮದಿಂದ ಈ ಯೋ ಗವು ಉಂಟಾಗುವದು ಶನಿಗ್ರಹಕ್ಕೆ ಎಂದು ಉಸಗೃಹಗಳು ಇದ್ದು ಈ ಪ್ರತಿ ಯೋಗಕಾಲಕ್ಕೆ ದು ಬಿ ೯ ಯಂತ್ರ ಸಹಾಯದಿಂದ ನಿರೀಕ್ಷಿಸಿದಲೆಕಾರದಲ್ಲಿ ಆದ್ಯತೆ ಚಮತ್ಕಾರಕಂದು ಬರುವದು. ಜ್ಯೋತಿಷ ಫಲಶಾಸ್ತ್ರ ರೀತಿಯಿಂದ ವಿಚಾರಿಸಲಾಗಿ, ಈ ಯೋಗವು ಮೇಷಲಗ್ನದಲ್ಲಿ ಸಂಭವಿಸುವದರಿಂದ ಇದರ ಪರಿಣಾಮವೂ ವಿಶೇಷವಾಗಿ ಇಂಗ್ಲಂಡದಲ್ಲಿ ಕಂಡು ಬರುವದು ಮತ್ತು ಅಲ್ಲಿಯಮಂತ್ರಿ ಮಂಡಳದಲ್ಲಿ ಚಮತ್ಕಾರಿಕ ಬದಲಾವಣೆ ಗಳು ಆಗುವದಲ್ಲದೆ ಮಂತ್ರಿಮಂಡಳ ಸ್ಥಿತ್ಯಂತರ ಯೋಗವು ಸಾಧಾರಣವಾಗಿ ಕಂಡುಬರುವದು. ಆದರೂ ಅನೀಕ್ಷಿತ ಘಟನೆಗಳು ಇಂಗ್ಲಂಡದಲ್ಲಿ ತೋರುವವು.

ಭಾರತದ ಲಾಭಸ್ಥಾನದಲ್ಲಿ ಯೋಗ ವಾಗುವದರಿಂದ ಸಾಂಪ್ರತ ಬಂಗಾಲ ಪರಿಸ್ಥಿತಿಯು ಮಹಾಪ್ರಧಾನರ ಜಗಮನ ದಿಂದ ಹಿಡಿತದಲ್ಲಿ ಬರುವದಲ್ಲದೇ ಶಾಂತ ತೆ ನೆಲಗೊಳ್ಳುವದು. ಆದರೂ ಮುಖ್ಯ ಮಂತ್ರಿಗಳು ತವ್ಕ ಪ್ರಯಾಣದಲ್ಲಿ ವಿಶೇಷ ಮುಂಜಾಗ್ರತೆ ವಹಿಸಿಕೊಳ್ಳ ವದು ಅವಶ್ಯವೆಂದು ಕಂಡು ಬಂದಿದೆ ಗ್ರಹಗಳ ತಲನವಲನಗಳ ಮೇಲಿಂದ ನೋಡಲಾಗಿ ರವಿಯು ಸಿಂಹ ರಾಶಿಯ ನ್ನು ಪೂರ್ಣವಾಗಿ ಬಿಡುವ ತನಕ ಈ ಪ್ರಕಾರದ ಕಲಹಗಳು ಮೇಲಿಂದ ಮೇಲೆ ಸಂಭವಿಸುವ ಲಕ್ಷಣಗಳು ಬಹಳ ಇರುತ್ತವೆ ವತ್ತ ಸುಂಗಳ ಪುನಃ ಸಿಂಹ ರಾಶಿಯನ್ನು ಪ್ರವೇಶ ಮಾಡಿದ ನಂತರ ಈ ಕಲಹಗಳು ವಿಕೋಪಕ್ಕೆ ಹೋಗುವವು. ಮತ್ತು ಇತರ ರಾಜ್ಯ ಕ್ರಮು ತಗೆದುಕೊಳ್ಳುವದರ ದೆಸೆಯಿಂದ ಕೇಂದ್ರ ಸರಕಾರವು ಪೋಲೀಸ, ಸೈನ್ಯ ಸಂಖ್ಯೆಯನ್ನು ಹೆಚ್ಚಿಸುವದು ಮತ್ತು ಕ್ರಮತಗೆದು ಕೊಳ್ಳುವ ಯೋಗ ಬಲ ವತ್ತರವಾಗಿ ತೋರುವದು. ಈ ಯೋಗದ ಪರಿಣಾಮದಿಂದ ಭೂಕಂಪ ಗಲಭೆ ಮತ್ತು ಅನಿಷ್ಟ ಫಲ ಉಂಟಾಗುವುದು. ವ್ಯಾವಾರದಲ್ಲಿ ಅನೀಕ್ಷಿತ ಪರಿಣತಗಳಾ ಗಿ ಪರಿಸ್ಥಿತಿಯು ಸ್ಥಿರವಾಗಿ ಜರುಗಲಾರದು.

ಪ್ರಕಟಣೆ

ಶ್ರೀಭಾಂಧವರೇ,

ಬಳ್ಳಾರಿ ರಾಯದುರ್ಗ ತಾಲೂಕು ಗಳ ರೈತರ ಅಭಿವೃದ್ಧಿಗಾಗಿ ಬಳ್ಳಾರಿ ಯಲ್ಲಿ ಸಹಕಾರ ಭೂಮಿ ಅಯಕ ಬ್ಯಾಂಕು ರಿಜಿಸ್ಟ್ರಾರರವರಿಂದ ರಿಜಿ ಸ್ಟರ್ ಮಾಡಿಸಲ್ಪಟ್ಟಿದೆ. 12-3-50 ನೇ ಆದಿತ್ಯವಾರ ಸಾಯಂಕಾಲ 6-15 ಘಂಟೆಗೆ ಬಳ್ಳಾರಿ ಕೋ ಆಪರೇಟಿವ್ ಸೆಂಟ್ರಲ್ ಸ್ಟೋರ್ಸ್ ಭವನದಲ್ಲಿ ಅದರ ವ್ಯಾಪಾರೋತ್ಸವ ನಡೆಯಿತು ಅದರ ಮುಖ್ಯ ಉದ್ದೇಶಗಳೇನೆಂದರೆ

1. ರೈತರು ಇಂ ನಿವಾರಣೆ 2 ಭೂಮಿ ಗಳ ಅಭಿವೃದ್ಧಿಗಾಗಿ ಹೊಸ ಭೂಮಿ ಕೆಗೆ ಸುವುದು ಹೊಲ ಭೂಮಿಗಳ ಮಾರಾಟ್ಟು ಮಾಡುವುದು, ಅಯೋ ಇರ್ಜ ಹಾಕು ವುದು. ಮೋಟಾರ್ ಬಂ ವುಗಳನ್ನು ಹಂಚುವುದು. ಇವುಗಳಿಗಾಗಿ ರೈತರ ಸ್ವಂತಭೂಮಿಗಳ ಆಯಕದಲೇ 20 ಸಂವತ್ಸರ ಕಂತುಗಳನ್ನು ಏರ್ಪಾಟು ಮಾಡಿ ಬಡ್ಡಿ ರೂ. 100 ಕ್ಕೆ (ನೂರು ರೂಪಾಯಿಗೆ) ವರ್ಷಕ್ಕೆ ರೂವಾಜಿ ನಾಲ್ಕು ಸ್ರಕಾರ ಸಾಲ ಕೊಡುವುದು.

ಒಬ್ಬ ರೈತನಿಗೆ 10,000 ಗಳಿಗಿಂತ ಹೆಚ್ಚಾಗಿ ಸಾಲ ಸಿಗಲಾರದು. ಈ ಸಾಲ ಕ್ಕಾಗಿ ದರಖಾಸ್ತುಗಳನ್ನು ಪಡಲು ಕೋರು ವವರು ಮೊದಲು ಬ್ಯಾಂಕಿನಲ್ಲಿ 10-0-0 ಪೇರು ಧನವನ್ನು ಮತ್ತು 0-8-0 ಪ್ರವೇಶ ಹಣವನ್ನು ಕಟ್ಟಿಡಬೇಕು. ಇತರ ವಿವರಗಳ ಕುರಿತು ಬ್ಯಾಂಕಿನ ಕಾರ್ಯ ದರ್ಶಿಯವರನ್ನು ಕೇಳಬೇಕು

ಈ ಬ್ಯಾಂಕಿನಿಂದ ರೈತರಿಗೆ ಬಹಳ ಸಹಾಯವಾಗುವುದು. ಇದರ ಸದ್ಬಳಿ ಯೋಗವಾಗಬೇಕೆಂದು ಹಾರೈಸುತ್ತೇವೆ. ಎಲ್ಲಾ ರೈತರು ಸದಸ್ಯರಾಗಲು ಕೋರಿಕೆ.

(Sd) ಟೇಕೂರು ಸುಬ್ರಮಣ್ಯಂ
ಅಧ್ಯಕ್ಷರು.

ಪಂಡಿತ ನೆಹರು ಕಲ್ಕತ್ತಕ್ಕೆ

ಪೂರ್ವ ಬಂಗಾಲದಲ್ಲಿ ಪರಿಸ್ಥಿತಿಯು ಬಹಳ ಕೆಟ್ಟಿದ್ದು ಅನೇಕ ಹಿಂದೂ ನಿರಾ ಶ್ರಿತರು ಪಶ್ಚಿಮ ಬಂಗಾಳಕ್ಕೆ ಬರುತ್ತಿರು ವ ಕಾರಣ ಕಲ್ಕತ್ತೆಯಲ್ಲಿ ಸ್ಫೋಟ್ಟದ ಪರಿ ಸ್ಥಿತಿ ಇರುವದರಿಂದ ಪಂಡಿತ ನೆಹರೂರವರು 6-3-50 ಕಲ್ಕತ್ತೆಗೆ ಹೋಗಿ ಮೂರುದಿನಗಳು ಕಲ್ಕತ್ತಾದಲ್ಲಿ ತಂಗಿದರು.

ಹೊಸಪೇಟೆ

(ನಮ್ಮ ಸುದ್ದಿಗಾರರಿಂದ)

ಕಳೆದವಾರ ಇಲ್ಲಿಯ ಮೂರ್ವಾದಿ ತರಾಫಿ ಅಂಗಡಿಗೆ ಒಬ್ಬಿಯ ಉಡುಪನ್ನು ಧರಿಸಿ ಬಂದ ಮುಸಲ್ಮಾನನೊಬ್ಬನು ಗೋಪಾಸ್ತ್ರೀಯರಿಗೆ ಸೋರಿಸಬೇಕೆಂಬ ನೆವದಿಂದ ಸುಮಾರು ೩೫೦೦ ರೂ ಬೆಲೆ ಬಾಳುವ ಆಭರಣಗಳನ್ನು ಅಪಹರಿಸಿ ಕೊಂಡು ಹೋಗಿರುತ್ತಾನೆ. ಪೋಲಿಸರಿಗೆ ಭೆರ್ಯಾದಿಯಾಗಿ ವಿಚಾರಣೆಯಲ್ಲಿದೆ.

ಇಲ್ಲಿಯ ಕೊ-ಆಪರೇಟಿವ್ ಸ್ಟೋರ್ಸ್ ಕಾರ್ಯಕಾರೀ ಸಮಿತಿಯಲ್ಲಿ ಸ್ಪರ್ಧೆಗಳುತ್ಪನ್ನವಾಗಿ ಅಭ್ಯರ್ಥಿಗಳಿಗೆ ನೋಟೀಸು ಕೊಟ್ಟ ಪಾರ್ಟಿಯವರು ಪಿತಾ ಸಾಧಾರಣ ಸಭೆ ನೇರಿಸಿ ತೀರ್ಮಾನಗಳನ್ನು ಮಾಡಿದರು.

ಬಾಕಿ ಇರುವ ದಿವಿಡೆಂಟ್ ಮೊತ್ತ ಹಂಚಬೇಕು. ಸ್ಟೋರ್ಸ್‌ಬಾಕಿಂರ ಸಾಪಿರ ರೂ ತಕ್ಷಣ ವಸೂಲಿಮಾಡತಕ್ಕದ್ದು ಕೋರ್ಟು ವ್ಯಾಜ್ಯಕ್ಕಾಗಿ ಸ್ಟೋರ್ಸ್ ಹಣ ವೆಚ್ಚಿಸಬಾರದು. ಕಾರ್ಯಕಾರೀಸಮಿತಿಯಲ್ಲಿ ಅವಿಶ್ವಾಸತೀರ್ಮಾನವಾಗಿ ಈ ಕೆಳಗಿನವರು ಆರಿಸಲ್ಪಟ್ಟರು.

1) ಗುತ್ತಿ ತೋಟಪ್ಪ (2 ಸುಬ್ರಮಣ್ಯಂ 3) ವೇದಿ ಶ್ರೀರಾಮುಲು (4 ಕೆ. ಸಿದ್ದನಗೌಡು (5 ಕೆ. ಚನ್ನಬಸಪ್ಪ (ವಸೈರೆ 7 ಮಂದಿ

——

ನಿಜಾಮರ ಪದಚ್ಯುತಿ

ನಿಜಾಮರನ್ನು ಪದಚ್ಯುತಿಗೊಳಿಸಿ ಹೈದರಾಬಾದನ್ನು ಕನ್ನಡ ಅಂಧ್ರ ಮರಾಠಗಳಲ್ಲಿ ಹಂಚಬೇಕೆಂಬ ಗೊತ್ತುವಳಿಯು ಹೈದರಾಬಾದ್ ಕಾಂಗ್ರೆಸ್ ಬಹಿರಂಗದವಿವೇಶನದಲ್ಲಿ ಸರ್ವಾನುಮತದಿಂದ ಸ್ವೀಕೃತವಾಯಿತು. ಈ ಗೊತ್ತುವಳಿಯನ್ನು ಸಮರ್ಥಿಸಿ ಸ್ವಾಮಿ ರಾಮಾನಂದ ತೀರ್ಥರು ಭಾಷಣ ಮಾಡಿದರು.

——

ಪಾಕಿಸ್ತಾನ

ಅಫಗಾನಿಸ್ತಾನದ ಸಂಬಂಧಗಳ ಕೆಡುತ್ತಿದ್ದು ಅವರು ರಾಯಭಾರಿಗಳನ್ನು ಹಿಂದಕ್ಕೆ ಕರೆಸಿಕೊಂಡಿರುವದಾಗಿ ಗೊತ್ತಾಗಿದೆ

——

ದೇಶದಲ್ಲಿ ಶಾಂತತೆ ನೆಲಸಿದ್ದರೆ ಪೂರ್ವ ಬಂಗಾಲದ ಹಿಂದೂಗಳ ಹಿತದಂಧ ದೊಡ್ಡ ಸಮಸ್ಯೆಯು ಬಗೆಹರಿದೀತು. ಇಂಧಾಸಮಯದಲ್ಲಿ ಎಲ್ಲಾ ಪಾರ್ಟಿಗಳವರು ಶಾಂತಿಯನ್ನು ಕಾಪಾಡಬೇಕು. ಎಂದು ಪಂ. ಜವಹರಲಾಲರ್ ಕಲ್ಕತ್ತೆಯಲ್ಲಿರೆದಿನಗಳು ಇದ್ದು ದಿಲ್ಲಿಗೆ ಹೋಗುವಾಗ ಈ ಸಂದೇಶವನ್ನು ಕೊಟ್ಟರು.

——

ಉಗಾದಿ— ಈ ಹಬ್ಬವು 19-3-'50 ಭಾನುವಾರ ಆಚರಿಸಲ್ಪಡಬೇಕೆಂಬ ವಿಷಯದಲ್ಲಿ ಪಂಚಾಂಗಗಳ ಬಹುಮತವಿದೆ.

——

ಬಳ್ಳಾರಿಗೆ ಬರುವತಿಂಗಳು ರೆವಿನ್ಯೂ ಮಿನಿಷ್ಟರ್ ಶ್ರೀ ಶೇಕಾರಾವು ರೆಡ್ಡಿಯವರು, ಬರಲಿರುವರೆಂದು ಗೊತ್ತಾಗಿದೆ.

ಹಿಂದೀ ಮಹಾ ವಿದ್ಯಾಲಯ, ಬಳ್ಳಾರಿ,

[1951 ಸ್ಥಾಪಿತ ಬಳ್ಳಾರಿ ಜಿಲ್ಲಾ ಹಿಂದೀ ಪ್ರೇಮಿಮಂಡಲದಾಶ್ರಯದಲ್ಲಿ, ರಿಜಿಸ್ಟರ್ಡ.]

ಮದ್ರಾಸ್ ಸರ್ಕಾರದಿಂದ ಮಾನ್ಯತೆ ಪಡೆದಿದೆ.

ಪ್ರಾರಂಭಿಕ ವರ್ಗಗಳಿಗೆ ಮಾಸಿಕ 3/- ಶುಲ್ಕ — ಉನ್ನತ ವರ್ಗಗಳಿಗೆ ಮಾಸಿಕ 5/- ಶುಲ್ಕ

ವಾರ್ಡಲಾ ಪೈಸ್ಕೂಲ್ ಕಟ್ಟಡದಲ್ಲಿ ಪ್ರಾತಃಕಾಲ—ಸಾಯಂಕಾಲ ಹಿಂದೀ ಕಾಲೇಜ್‌ದ ವರ್ಗಗಳು ನಡೆಯುತ್ತಿವೆ ವಿಶಾರದ — ಪ್ರಚಾರಕ ವರ್ಗಗಳಲ್ಲದೆ ಪ್ರಾರಂಭಿಕ ವರ್ಗಗಳಿಗೂ ಪ್ರವೇಶವಿದೆ. ವರ್ಗಗಳಿಗೆ ಸಂಬಂಧಿಸಿದ ಪಾಠ ಪುಸ್ತಕಗಳು ವಿದ್ಯಾಲಯದಲ್ಲಿ ದೊರೆಯುತ್ತವೆ ಒಳ್ಳೆಯ ಪುಸ್ತಕಭಂಡಾರವಿದೆ. ಶ್ರೇಷ್ಠ ವಾರಪತ್ರಿಕೆ, ಮಾಸಪತ್ರಿಕೆಗಳು ಲಭ್ಯ ಇತರ ವಿವರಗಳಿಗೆ ಖುದ್ದಾಗಿ ಬರೆಯಿರಿ.

ಪ್ರಿನ್ಸಿಪಾಲ್.

NAVA BHARAT BELLARY. (Reg. No. M. 4746)

ನವಭಾರತ ಬಳ್ಳಾರಿ. 13—3—50

(Nationalist Weekly)

ಚಂದಾದರಗಳು.	Subscription Rates.
ವರ್ಷಕ್ಕೆ 5—0—0	One Year 5—0—0
6 ತಿಂಗಳಿಗೆ 3—0—0	Six months 3—0—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.	Subscription will not be accepted for less than 6 months

To

Sri.... ....

....

....

Pirnted at Krishna Printing Works. Edited & Published by T. B. Keshava Rau

JAI--HIND

ನವಚೈತನ್ಯ

ಬಳ್ಳಾರಿಯ
ಉಜ್ವಲ ರಾಷ್ಟ್ರೀಯ ವಾರಪತ್ರಿ
ಉತ್ತಿಷ್ಠತ! ಜಾಗೃತ!!
ವ್ಯಾಪ್ತನರಾನ್ನಿ ಬೋಧತ!!!
ಸಂವಾದಕ ಮತ್ತು ಪ್ರಕಾಶಕ:-
ಟಿ. ಬಿ. ಕೇಶವರಾವು

ವರ್ಷ ೧೩ | ಸೋಮವಾರ ೨೦ ಮಾರ್ಚ್ ೧೯೪೦ | ಸಂಚಿಕೆ ೯

ಇಡೀ ದೇಶದ ಸಮಸ್ಯೆ

ಆಹಾರೋತ್ಪಾದನೆ

ಭಾರತದ ಅಧ್ಯಕ್ಷ ಡಾ. ರಾಜೇಂದ್ರ ಪ್ರಸಾದರು
(ಮದ್ರಾಸಿನಲ್ಲಿ ಮಾಡಿದ ಭಾಷಣ ಸಾರ)

ಭಾರತೀಯ ಒಕ್ಕಲಿಗ ಯಾವಾಗಲೂ ಎಚ್ಚರಿಕೆಯಿಂದ ಇರುವವನಾದರೂ, ಅತಿ ಸಂಪ್ರದಾಯ ಬದ್ಧನಲ್ಲ ಹೊಸಪದ್ಧತಿಯೊಂದು ಹೆಚ್ಚಿಗೆ ಹುಟ್ಟುವಳಿ ಕೊಡಬಲ್ಲದು, ರುಡಿಮೆಯನ್ನು ಉಳಿಸಬಹುದು ಅಥವಾ ಇತರ ರೀತಿಯಿಂದ ಸಹಾಯಕವಾಗಬಲ್ಲದೆಂದು ಅನಿಸಿದೆ ಮನಪಟ್ಟು ಮಾಡಿಕೊಳ್ಳಲ್ಲಿ, ಅದು ತನ್ನ ಅಳವಿನಲ್ಲಿದ್ದರೆ, ಅದನ್ನು ಸ್ವೀಕರಿಸಲು ಅವನು ಹಿಂದೆ-ಮುಂದೆ ನೋಡುವದಿಲ್ಲ.

ಕಳೆದ ೪-೫ ವರುಷಗಳಿಂದ, ಆಹಾರದ ಕೊರತೆ, ಆಮದಾದ ಅವಶ್ಯಕತೆ, ಆಯಾ ಕಟ್ಟಾಗಿ ಕೈಕೊಂಡ ಕ್ರಮಗಳು, ಅದಕ್ಕಾಗಿ ತಗಲಿದ ಕೋಟ್ಯಾಂತರ ರೂಪಾಯಿವೆ ಚ್ಚ, ಈ ವಿಷಯಗಳನ್ನಿಲ್ಲಿ ಕುರಿತು ಇಷ್ಟೆಲ್ಲ ಕೇಳುತ್ತಲಿದ್ದೀವೆ. ನಮ್ಮ ಆಯಾತ ಹೆಚ್ಚಾಗುತ್ತಲೆ ನಡೆದಿದೆ ನಾವು ಆಹಾರ ಆಮದು ಮಾಡಿದ್ದು ೧೯೪೬ ರಲ್ಲಿ ೨೩೫,೦೦೦ ಟನ್ನು, ೧೯೪೭ ರಲ್ಲಿ ೨೩೫,೦೦೦ ಟನ್ನು, ೧೯೪೮ ರಲ್ಲಿ ೨೬,೦೦೦ ಟನ್ನು ಹಾಗು ೧೯೪೯ ರಲ್ಲಿ ೬೬,೯೦,೦೦೦ ಟನ್ನು ಅಂತೂ ನಾಲ್ಕು ವರುಷಗಳಲ್ಲಿ ೧,೧೦,೦೦,೦೦೦ ಟನ್ನು ಆಮದು ಕ್ಕಾಗಿ ನಾವು ತೆತ್ತ ಹಣ ೧೯೪೬-೪೭ ರಲ್ಲಿ ೯೯ ಕೋಟಿ ರೂ., ೧೯೪೭-೪೮ ರಲ್ಲಿ ೧೦೮ ಕೋಟಿ ರೂ. ಹಾಗು ೧೯೪೮-೪೯ ರಲ್ಲಿ ೧೩೧ ಕೋಟಿ ರೂ. ಇವನ್ನು ಆಗ್ಗದ ದರದಿಂದ ಮಾರುವದಕ್ಕಾಗಿ ಸರಕಾರವು ಕೈಯಿಂದ ತುಂಬಿದ ಹಣ ೧೯೪೬-೪೭ ರಲ್ಲಿ ೨೦,೫೯,೧೨,೦೦೦ ರೂ. ೧೯೪೭-೪೮ ರಲ್ಲಿ ೧೬,೧೩,೦೦,೦೦೦ ರೂ. ಹಾಗು ೧೯೪೮-೪೯ ರಲ್ಲಿ ೨೬,೫೦,೦೦,೦೦೦ ರೂ.

ಕೊರತೆಯನ್ನು ತುಂಬುವದು ಗುಡ್ಡದಂಥ ಕೆಲಸವಲ್ಲ

ಈ ಆಹಾರ ಕೊರತೆಯನ್ನು ತುಂಬಿಕೊಳ್ಳುವದಕ್ಕಾಗಿ ನಾವು ಪ್ರಯತ್ನ ಮಾಡಬೇಕಾಗಿದೆ. ೧೯೪೬-೪೭ ರಿಂದ ೧೯೪೮-೪೯ ಈ ಮೂರು ವರುಷಗಳ ಎಲ್ಲ ಆಹಾರ ಧಾನ್ಯಗಳ ಸರಾಸರಿ ಹುಟ್ಟುವಳಿ ೪೨,೬೬,೦೦,೦೦೦ ಟನ್ನಿನಷ್ಟಾಗುತ್ತದೆ. ಅಂದರೆ ಕೊರತೆ ೧೦% ಕ್ಕಿಂತ ಕಡಿಮೆ ಯಾಯಿತು. ಹೊಸಭೂಮಿಗಳ ಸಾಗುವಳಿ ಮಾಡಿದರೆ ಕೂಡ ಈಗ ೧೦ ಮಣ ಬೆಳೆದರೆ ಸಾಕು ಕೊರತೆ ಕೊಚ್ಚಿ ಹೋಗುವದು ೧೦ ಮಣ ಬೆಳೆಯುವಲ್ಲಿ ೧೧ ಮಣ ಬೆಳೆಯುವದು ದೊಡ್ಡ ಮಾತೇನಲ್ಲ ನೀರು ಹಾಗು ಗೊಬ್ಬರಗಳ ಪೂರೈಕೆಯಾದರೆ, ೧೦ ಮಣಕ್ಕೆ ೧೧ ಏಕೆ ಅದಕ್ಕೂ ಹೆಚ್ಚು ಬೆಳೆಯಬಹುದು, ಎಂಬದು ಒಕ್ಕಲತನದಲ್ಲಿರ್ವ ಯಾರಾದರೂ ಹೇಳಿಬಹುದು. ಅಲ್ಲದೆ ಸುಧಾರಿಸಿದ ಬೇಸಾಯದ ಪದ್ಧತಿಗಳು, ಸುಧಾರಿಸಿದ ಉಪಕರಣಗಳು ಹಾಗು ಉತ್ತಮ ಸಂಘಟನೆ ಇತ್ಯಾದಿಗಳ ಲಾಭವನ್ನು ನಾವು ಪಡೆಯಬಹುದು.

ಸರಕಾರದ ಪಾತ್ರ

ಸಹಕಾರಿ ತತ್ವವನ್ನೆನುಸರಿಸಿ ನಾವು ಒಕ್ಕಲಿಗರಿಗೆ ಸುಧಾರಿಸಿದ ತರಗತಿಯ ಬೀಜಗಳನ್ನೂ, ಸುಧಾರಿಸಿದ ಉಪಕರಣಗಳನ್ನೂ ಕೆತ್ತಿ ಒಯ್ಯಬಲ್ಲ ಬರುವಂಥ ನೀರಿನ ಪಂಪುಗಳನ್ನು ಒದಗಿಸಿದಲ್ಲಿ ಹಾಗು ಕಸಕೊಳೆಯ ಉಪಯೋಗ ತಿಪ್ಪೆ ಗೊಬ್ಬರ ತಯಾರಿಕೆ ಮತ್ತು ಬೇಸಾಯದ ಸುಧಾರಿಸಿದ ಪದ್ಧತಿಗಳ ಕುರಿತ್ತು ತ್ರಾಂತ್ರಿಕ ಸಲಹೆ ನೀಡಿದಲ್ಲಿ ಅಲ್ಪ ಸಮಯದಲ್ಲಯೇ ಹುಟ್ಟುವಳಿಯನ್ನು ಹೆಚ್ಚಿಸಬಹುದು ಎಂದು ನನಗೆನಿಸುತ್ತದೆ.

ಹೆಚ್ಚು ಆಹಾರ ಬೆಳೆಯುವ ಸರಕಾರಿ ಯೋಜನೆಗಳು ಸರಿಯಾದ ಮಾರ್ಗದಲ್ಲಿಯೇ ಸಾಗಿವೆ. ಅವು ಒಕ್ಕಲಿಗರಿಗೆ ಚಿಕ್ಕ ಯೋಜನೆಗಳ ಮುಖಾಂತರ ನೀರಾವರಿ ಸೌಕರ್ಯ, ತಿಪ್ಪೆಗೊಬ್ಬರ ಸುಧಾರಿಸಿದ ಉಪಕರಣಗಳು, ಉತ್ತಮ ಬೀಜಗಳು ಇತ್ಯಾದಿಗಳ ಪೂರೈಕೆ ಧನಸಹಾಯ ಇವೇ ಮೊದಲಾದ ಅನುಕೂಲತೆಗಳನ್ನು ಒದಗಿಸುತ್ತೀವೆ.

ಒಕ್ಕಲಿಗನ ಹೊಣೆ

ಇತ್ತ ಜನತೆಯಲ್ಲಿ, ಒಕ್ಕಲತನ ಹಾಗು ಆಹಾರದ ಹುಟ್ಟುವಳಿ ಇವು ಒಕ್ಕಲಿಗನ ವೈಯುಕ್ತಿಕ ವಿಷಯಗಳಾಗಿರದೆ, ಸಮಸ್ತ ದೇಶದ ಸಮಸ್ಯೆಗಳಾಗಿನೆ, ಎಂಬ ಅರಿವು ಮೂಡಿರಬೇಕು. ಒಕ್ಕಲಿಗನು ಬೆಳೆಯಲು ಅಥವಾ ಬೆಳೆಯದೆ ಇರಲು ಸ್ವತಂತ್ರನು! ಅವನು ತನ್ನ ಮನಸ್ಸಿಗೆ ಬಂದ ಪ್ರಮಾಣದಲ್ಲಿ ಬೆಳೆಯಬಹುದು. ಎಂಬ ಅಭಿಪ್ರಾಯ ತಪ್ಪು. ಪ್ರತಿಯೊಬ್ಬ ಒಕ್ಕಲಿಗನು, ತಾನು ಆಹಾರ ಬೆಳೆಯುವದು ತನಗೊಬ್ಬನಿಗಾಗಿಯೇ ಅಲ್ಲ, ಇಡೀ ದೇಶಕ್ಕಾಗಿ ಎಂಬುದನ್ನು ಅರಿತುಕೊಳ್ಳಬೇಕು; ತನಗೆ ಸಾಕಾಗಿ ಉಳಿದ ಆಹಾರವನ್ನು ದೇಶಕ್ಕೆ ಅರ್ಪಿಸಬೇಕು. ಬೆದರಿಕೆ ಹಾಗು ಆಶೆಗಳಿಗೆ ಅವನು ಒಳಗಾಗಕೂಡದಾದರೂ ದೇಶಕ್ಕಾಗಿ ತನ್ನ ಕರ್ತವ್ಯವನ್ನು ಪರಿಪಾಲಿಸಲು ಅವನು ಸಿದ್ಧನಾಗಬೇಕು. ದುರಾತ ಹಾಗು ಕೀಳುಸ್ವಾರ್ಥ ಅಳಿದು ಜನತೆ

[೬ ನೇ ಪುಟಕ್ಕೆ ನೋಡಿರಿ.]

ಮೊಗಲಾಯಿ ಸಮಸ್ಯೆಗಳು

ಹೈದರಾಬಾದ್ ಸಂಸ್ಥಾನದಲ್ಲಿಯ ಅನಿಷ್ಪರಾಜ್ಯದಾಡಳಿತವನ್ನು ಹಿಂದುಸ್ತಾನ ಸರಕಾರವು ಸೈನಿಕ ಬಲದಿಂದ ನಿವಾರಿಸಿ ಕೆಲವು ದಿವಸ ಸೈನಿಕ ಅಧಿಕಾರಿಯ ನೇತೃತ್ವದಲ್ಲಿ ಅಲ್ಲಿಯ ರಾಜ್ಯಭಾರವನ್ನು ನಡಾಯಿಸಿತು. ಈಗ ಅಲ್ಲಿಯ ಪ್ರಮುಖ ಅಧಿಕಾರಿಯ ಸ್ಥಳದಲ್ಲಿ ಸೈನಿಕೇತರ ಮನುಷ್ಯನು ನಿಯಮಿಸಲ್ಪಟ್ಟಿದ್ದಾನೆ.

ನಿಜಾಮರು ಈ ಮುಖ್ಯಾಧಿಕಾರಿಯ ಮೇಲೆ ಅಧಿಕಾರವುಳ್ಳವರಾಗಿದ್ದರು ಅವರ ಅಧಿಕಾರವು ನಾಮ ಮಾತ್ರಕ್ಕೆ ಉಳಿದಿದೆ. ನಿಜಾಮರ ಹೆಸರು ಕೂಡ ಈಗ ಮಾಯವಾಗಿದ್ದು ರಾಜ ಪ್ರಮುಖ ಎಂಬ ಹೆಸರನ್ನು ಅವರು ಈಗ ಪಡೆದಿದ್ದಾರೆ. ಅಲ್ಲಿಯ ಸರ್ವ ಆಡಳಿತವು ಹಿಂದುಸ್ತಾನ ಸರಕಾರದ ಆದೇಶದ ಮೇರಿಗೆ ನಡಯುತ್ತಿದೆಯೆನ್ನಲು ಏನೂ ಅಡ್ಡಿಯಿಲ್ಲ. ಆದ್ದರಿಂದ ಹಿಂದುಸ್ತಾನ ಸರಕಾರದಿಂದ ಅಲ್ಲಿ ನಿಯಮಿಸಲ್ಪಟ್ಟ ಮುಖ್ಯಾಧಿಕಾರಿಯೇ ನಿಜವಾದ ಸರ್ವಾಧಿಕಾರವನ್ನು ಹೊಂದಿದವನಾಗಿದ್ದಾನೆ. ಸಯಮಾದ ಸಮಯಾಗಿ ಅವನು ಆ ಬಗ್ಗೆ ರಾಜಪ್ರಮುಖನ ಅಂಕಿತ ಅಥವಾ ಒಪ್ಪಿಗೆ ತೆಗೆದುಕೊಳ್ಳಬೇಕಾಗುವದು. ಅದನ್ನು ನಿಜಾಮರು ಕೊಟ್ಟೇಕೂಡಬೇಕಾದ ಪರಿಸ್ಥಿತಿಯಿದೆ.

ಅಧಿಕಾರಿಗಳು

ವಿವಿಧ ಶಾಖೆಗಳ ಮುಖ್ಯ ಸ್ಥಳದಲ್ಲಿ ಭಾರತ ಸರಕಾರದಿಂದ ನಿಯಮಿಸಲ್ಪಟ್ಟ ಅಧಿಕಾರಿಗಳೇ ಇದ್ದಾರೆ. ಮತ್ತು ಬೇರೆ ಬೇರೆ ವಿಭಾಗಗಳಲ್ಲಿ ಕೆಳಗೆಇದ್ದ ಹಿಂದೂ ಅಧಿಕಾರಿಗಳನ್ನು ಮುಸಲ್ಮಾನರ ಮೇಲೆ ನಿರಿಸಿದ್ದಾರೆ. ಆದರೂ ಎಲ್ಲಿ ಅಧಿಕಾರಿಗಳಿಂದ ಸಾಕಷ್ಟು ಸಹಾಯವು ಸಹಕಾರಗಳು ಆಡಳಿತದ ಸೂತ್ರ ಜಾಲಕರಿಗೆ ಸಿಗುತ್ತವೆಂದು ಹೇಳಲು ಬರುತ್ತಿಲ್ಲ

ಸೈನಿಕ ವಿಜಯದ ಮೊದಲು ಹೈದರಾಬಾದದಲ್ಲಿ ಮುಸಲ್ಮಾನರೆ ರಾಜ್ಯವೇ ಇತ್ತು ಎಲ್ಲ ವಿಭಾಗಗಳ ಪ್ರಮುಖ ಸ್ಥಾನಗಳಲ್ಲಿ ಮುಸಲ್ಮಾನರೇ ಇದ್ದರು. ಪೋಲೀಸ ಸೈನ್ಯ ವಿಭಾಗಗಳಲ್ಲಿ ಹೆಚ್ಚಾಗಿ ಅವರೇ ಇದ್ದರು. ಆ ಪರಿಸ್ಥಿತಿಯನ್ನು ಇಂದು ಸಂಪೂರ್ಣ ತಿರುವು ಮುರುವು ಮಾಡುವುದು ಸಾಧ್ಯವಿಲ್ಲ. ರಜಕಾರರಂತೆ ಕುಖ್ಯಾತ ಅಲ್ಲಿಯ ಬಹುಶಃ ಮುಸಲ್ಮಾನ ಅಧಿಕಾರಿಗಳನ್ನೆಲ್ಲ ಮೇಲಿನಿಂದ ಕೆಳಗಿನ ಪರಿಗೆ ಒಮ್ಮಲೇ ಇಂದು ಕಿತ್ತಿ ಒಗೆಯುವುದು ಸುಲಭವಾಗಿಲ್ಲ. ಕೆಲಸದ ಪರಿಚಯದ ದೃಷ್ಟಿಯಿಂದ ಕೂಡ ಎಲ್ಲರನ್ನು ಹೊಸವಾಗಿ ತೆಗೆದುಕೊಳ್ಳುವುದುಪ್ರಯೋಜನದ್ದಾಗಲಾರದು. ಆದ್ದರಿಂದ ಅಲ್ಲಿಯ ಜನಸಂಖ್ಯೆ ಬಲಕ್ಕೆ ಅನುಸರಿಸಿ ಈ ಎರಡು ಧರ್ಮದನರ ಪ್ರಮಾಣವನ್ನು ಸರಕಾರೀ ಅಧಿಕಾರಿಗಳ ಸ್ಥಳದಲ್ಲಿ ಸರಪಡಿಸಲು ಕೆಲವು ದಿವಸಗಳ ಹಿಡಿಯದೆಇರಲಾರವು.

ಅಲ್ಲಿಯ ಮುಸಲ್ಮಾನರು ಹಿಂದಿನ ಪರಿಸ್ಥಿತಿಯಲ್ಲಿ ಮಾಡಿದಂತೆ ಇಂದು ನಡೆಯುವ ಸಂಭವನವಿಲ್ಲದಿದ್ದರೂ, ಅವರ ತ್ರಿಕರಣ ಪೂರ್ವಕವಾದ ನಂಬಿಕೆಯು ಈಗಿನ ಸರಕಾರಕ್ಕೆ ಸಿಗುವುದು ಅಸಂಭವನೀಯ ಮಾತಾಗಿದೆ. ಮುಸಲ್ಮಾನರು ತಮ್ಮ ಸಮಾಜಕ್ಕೆ ಜೊತೆ ಆಯುಶಕ್ತಿಯ ಮೂಲಕ ಒಳಗಿಂದೊಳಗೆ ಪ್ರಸರ್ಗ ತ್ತಿರಬಹುದಾದದ್ದು ಸ್ವಾಭಾವಿಕವಾಗಿ ಮಾತೇಸರಿ. ಆದ್ದರಿಂದ ಅವರ ಸ್ವ ಕಾರ್ಯವನ್ನು ನಿರ್ವಾಹವಿಲ್ಲದೆ ಇಂಥ ಪರಿಸ್ಥಿತಿಗೆ ವಿರುದ್ಧ ತೋಗದಂತೆ ಮಾಡುತ್ತಿದ್ದಾರೆ.

ಹರಿದು ಹಂಚುವಿಕೆ

ಹೈದರಾಬಾದ ಸಂಸ್ಥಾನದಲ್ಲಿ ಮೂರು ಭಾಷೆಯ ಪ್ರದೇಶಗಳವೆ. ಆ ಸಂಸ್ಥಾನವು ಆಂಧ್ರ, ಕರ್ನಾಟಕ ಮತ್ತು ಮಹಾರಾಷ್ಟ್ರ ವ್ಯಾಂತಗಳ ಗಡಿಗಳಿಗೆ ಹತ್ತಿದ್ದರಿಂದ ಸ್ವಾಭಾವಿಕವಾಗಿ ಆ ನಿಟ್ಟಿನಭಾಗಗಳು ಆ ಆಯಾ ಭಾಷೆಗೆ ಒಳಪಟ್ಟಿಂಥವಾಗಿವೆ. ಹಿಂದಿನ ಸಂಸ್ಥಾನಿಕ ಆಡಳಿತವಾದರೂ ಈ ಮೂರು ಭಾಗಗಳಲ್ಲಿ ಆಯಾ ಭಾಗದ ಸರಕಾರೀ ಭಾಷೆಯಾಗಿ ಸ್ವೀಕರಿಸಿತ್ತು. ಉರ್ದುಭಾಷೆಯು ಎಲ್ಲ ಸಂಸ್ಥಾನ ಪ್ರಜೆಗಳಿಗೆ ಕಲಿಸಲ್ಪಡುತ್ತಿತ್ತು ಮತ್ತು ಸರ್ವರಿಗೂ ಬರಬೇಕೆಂಬ ನಿಯಮ ಮಾಡಲಾಗಿತ್ತು.

ಈ ಕಾರಣದಿಂದ ಆ ಸಂಸ್ಥಾನದ ಈ ಮೂರು ಭಾಗಗಳ ಜನರಲ್ಲಿ ತಮ್ಮ ತಮ್ಮ ಪ್ರಾದೇಶಿಕ ಭಾಷೆಗಳ ಅಭಿಮಾನವು ಸಹಜವಾಗಿ ಬೆಳೆದು ಹೋಗಿದೆ. ಅದು ಇಡೀ ನಿಜಾಮ ಸಂಸ್ಥಾನವು ಹಾಗೆಯೇ ಇಡಲ್ಪಡದೆ ಆಯಾ ಭಾಷೆಗಳ ಪ್ರದೇಶಗಳು, ಆಯಾ ನಿಟ್ಟಿನ ಸ್ವಾಂತಗಳಲ್ಲಿ ಲೀನವಾಗಬೇಕೆಂದು ಬಯಸುತ್ತಿದೆ.

ಈ ಸಂದರ್ಭದಲ್ಲಿ ಎರಡು ತರಹದ ವಿಚಾರಗಳು ಅಲ್ಲಿ ವ್ಯಕ್ತವಾಗುತ್ತಿವೆ. ಕೆಲವರು ಇಂದಿನ ನಿಜಾಮರನ್ನು ತೆಗೆದು ಸಂಸ್ಥಾನವನ್ನು ಹಾಗೆಯೇ ಇಡಬೇಕು, ಮತ್ತು ಸದ್ಯದ ನಿಜಾಮರ ಮಗನನ್ನು ಪಟ್ಟಕ್ಕೆ ಕೂಡ್ರಿಸಬೇಕು ಅನ್ನುತ್ತಿದ್ದಾರೆ. ಹೆಲವರು ಸಂಸ್ಥಾನವನ್ನೇ ಅಳಿಸಿಬಿಡಬೇಕೆಂದು ಅನ್ನುತ್ತಿದ್ದಾರೆ. ಹೀಗೆನ್ನುವವರಲ್ಲಿ ಅಲ್ಲಿಯ ಕಾಂಗ್ರೆಸ ಪ್ರಮುಖರು ಒರತ್ತಾರೆ.

ಇಂತಹ ಅಭಿಪ್ರಾಯದ ಹಿಂದೆ, ನಿಜಾಮರ ಬಗ್ಗೆ ಕೆಲವರು ಪಡುತ್ತಿದ್ದ ವೈಯಕ್ತಿಕ ತಿರಸ್ಕಾರವು ಇದ್ದುದನ್ನು ನೋಡಬಹುದಾಗಿದೆ. "ಈಗಿನ ನಿಜಾಮರು ಆಡಳಿತವನ್ನು ಸಮರ್ಥವಾಗಿ ನಡೆಸಿಕೊಂಡು ಹೋಗಲಿಲ್ಲ. ಪ್ರತಿಗಾಮೀ ಶಕ್ತಿಗಳಿಗೆ ಒಪ್ಪದಕೊಟ್ಟು ಪರಿಸ್ಥಿತಿಯನ್ನು ಹದೆಗೆಡಿಸಿದರು. ಆದ್ದರಿಂದ ಅವರನ್ನು ಬದಿಗೆ ಸರಿಸುವುದೇ ಯೋಗ್ಯವು ಎಂದು ಕೆಲವರು" ಅನ್ನಲು ಕಾರಣವಾಗಿದೆ. ಮುಸಲ್ಮಾನರಲ್ಲಿ ಕೂಡ ಕೆಲವು ಪ್ರಮುಖರು ಈ ರೀತಿಯ ಅಭಿಪ್ರಾಯಪಡುವುದನ್ನು ನೋಡಿದರೆ ಯಾರಿಗಾದರೂ ಆಶ್ಚರ್ಯವಾಗದಿರದು

ಆದರೆ ಅದಕ್ಕೆ ಕಾರಣವಿದೆ. ಮುಸಲ್ಮಾನರಿಗೂ ಈ ನಿಜಾಮರ ಬಗ್ಗೆ ತಿರಸ್ಕಾರವು ಹುಟ್ಟಲು, ಅವರಿಗೆ ಇಂದು ಸ್ವಾತ್ಯವಾಗಿರುವ ಅವರ ವಿಶೇಷ ಸ್ಥಿತಿಯೇ ಕಾರಣವಿದೆ ಈಗಿನ ರಜಕಾರರನ್ನು ಉತ್ತೇಜಿಸಿದವರು ಅವರಿಗೆ ಅಸ್ತ್ರದಕೊಟ್ಟವರು ನುತ್ತು ಅವರ ಅವಮಾನಕರ ನರ್ತನೆಯನ್ನು ಕಂಡು ಕಣ್ಣು ಮುಚ್ಚಿಕೊಂಡವರು ಈ ನಿಜಾಮರೇ ಆದ್ದರಿಂದ. ಆ ಮೂಲಕವೇ ಮುಂದೆ ಅಲ್ಲಿಯ ಮುಸಲ್ಮಾನರ ಸ್ಥಿತಿಯು ಹೀನಾವಸ್ಥೆಗೆ ಇಳಿಯಿತು. ಎಂದು ಅವರು ಮನಗಂಡಿದ್ದಾರೆ ಆದ್ದರಿಂದ ಅವರು ನಿಜಾಮರ ಬಗ್ಗೆ ತೀವ್ರವಾದ ಅಸಂತೋಷವನ್ನು ತಾಳಿದ್ದಾರೆ

ಘಟನಾಸಮಿತಿ

ಹೈದರಾಬಾದದಲ್ಲಿ ಒಂದು ಘಟನಾ ಸಮಿತಿಯು ನಿರ್ಮಿಸಲ್ಪಡಬೇಕೆಂದೂ ಅದರ ದ್ವಾರಾ ಆ ಸಂಸ್ಥಾನದ ಆಡಳಿತದ ಕ್ರಮವು ನಿರ್ಧರಿಸಲ್ಪಡಬೇಕೆಂದೂ ಸೂಚ್ಯಾಗಿದೆ. ಆ ಬಗ್ಗೆ ಸಿದ್ಧತೆಗಳು ನಡೆದಿವೆ. ಆದರೆ ಹೈದರಾಬಾದ ಸಂಸ್ಥಾನಕ್ಕೆ ಸ್ವಂತಂತ್ರ ಘಟನೆಯು ಇರಬೇಕಾದದ್ದು ಅವಶ್ಯವೇ ಎಂಬ ಮಾತು ಇದ್ದೇ ಇದೆ. ನಾಳೆ ಅದರ ಬಗ್ಗೆ ಒಂದು ಘಟನೆಯು ನಿರ್ಮಾಣವಾದರೂ ಅದು ಹಿಂದುಸ್ಥಾನದ ರಾಜ್ಯಘಟನೆಗೆ ಭಂಗಬರದಂತೆ ರೂಪುಗೊಳ್ಳಬೇಕಾಗುತ್ತದೆ. ಮತ್ತು ಏನೇ ಆದರೂ ಆ ಸಂಸ್ಥಾನದ ಕೊನೆಯ ಅಧಿಕಾರವು ಹಿಂದುಸ್ಥಾನ ಸರಕಾರದ ಕೈಯಲ್ಲಿಯೇ ಇರುವದು ಎಂಬುದರಲ್ಲಿ ಯಾವ ಶಂಕೆಗೂ ಆಸ್ಪದವಿಲ್ಲ

ಸಂಸ್ಥಾನ ಕಾಂಗ್ರೆಸ್ಸು

ಹೈದರಾಬಾದ ಕಾಂಗ್ರೆಸ್ಸು ಅಲ್ಲಿಯ ಹಿಂದಿನ ಅಮಾನುಷ ವಾತಾವರಣವನ್ನು ನಿವಾರಿಸಲು ಬಹಳ ಶ್ರಮಿಸಿತು ಅಂದರೆ ಅದರಿಂದ ಅದು ತನ್ನ ಕಾರ್ಯದಲ್ಲಿ ಸಂಪೂರ್ಣ ಯಶಸ್ಸನ್ನು ಪಡೆಯಿತೆಂದಲ್ಲ ಕೊನೆಗೆ ಹಿಂದುಸ್ಥಾನ ಸರಕಾರವು ನಡುವೆ ಬಿದ್ದಾಗ ಆ ಪ್ರಶ್ನೆಯು ಬಗೆಹರಿಯಿತು. ಆದರೂ ಅಲ್ಲಿಯ ಕಾಂಗ್ರೆಸ್ಸಿಗೆ ಜನ ಜೊಂಬಾವಿದೆ. ಅದಕ್ಕೆ ಆ ಸಂಸ್ಥೆಯಲ್ಲಿರುವ ಬಳಕ ಇರುವದರಿಂದ ಅದರ ಶಕ್ತಿಯು ಅಷ್ಟೊಂದು ಪ್ರಬಲತೆಯನ್ನು ವ್ಯಕ್ತಪಡಿಸುತ್ತಿಲ್ಲ ಇಂದು ಹೈದರಾಬಾದ ಕಾಂಗ್ರೆಸ್ಸು ಆ ಸಂಸ್ಥಾನದ ಆಡಳಿತವನ್ನು ತೊಗಿಸುವಷ್ಟು ಸಂಘರ್ಷವಾಗಿ ತೊರುತ್ತಿಲ್ಲ. ಅಲ್ಲಿ ಅನೇಕ ಸ್ವತಂತ್ರ ಸಂಸ್ಥೆಗಳು ಮತ್ತು ಸ್ವಾರ್ಥದ ದೃಷ್ಟಿಯಿಂದ ಬೇಕಾದ ದಾವಯನ್ನು ಹಿಡಿಯಲು ಸಿದ್ಧರಿದ್ದ ಜನರು ಇರುವದು ಬಹಳ ಇಗಾಗಿ. ನಿಜವಾದ ನಿಸ್ವಾರ್ಥ ಜನರು ಹಿಂದೂ ಜನರಲ್ಲಿ ಕೂಡ ಸಿಗುತ್ತಾರೆ.

ಆ ಸಂಸ್ಥಾನದಲ್ಲಿಯ ಅನೇಕ ಜಹಾಗೀರುಗಳು ಮತ್ತು ನಿಜಾಮರ ಸೈಯಕ್ತಿಕ ಆಸ್ತಿಯು ಇಂತಹ ವರ್ಗವನ್ನು ಹುಟ್ಟಿಸಲು ಕಾರಣವಾಯಿತು. ಅವರೆ ಅವುಗಳನ್ನು ಅಳಿಸುವ ಯತ್ನವು ಈಗ ನಡೆದದ್ದು ಬಹಳ ಪ್ರಾ. ಕಾರ್ಯವು ಪ್ರಜಾಪ್ರಭುತ್ವದಿಂದ ಸಾಧಿಸಿದೆ. ಅದರೂ ಆಕರ್ಷಕವಾದ ಪ್ರತಿಗಾಮೀ ವ್ಯಕ್ತಿಯು ಕೃಷ್ಣಕರವಾಗಿ ಕಡಿಮೆಯಾಗಲು ಇನ್ನೂ ಕೆಲವು ಕಾಲ ಹಿಡಿಯಬೇಕಾಗುವುದು.

[ಜಯ ಹಿಂದ್]

ಘಟನಾ ಅಂಕ ಸಂಖ್ಯೆಗಳು

ಘಟನಾ ಸಮಿತಿಯ ಸದಸ್ಯರು	೩೦೮
ಮೊದಲ ಸಭೆ	೯-೧೨-೪೬
ಕೊನೆಯ ಸಭೆ	೨೬-೧೧-೪೯
ಒಟ್ಟು ದಿವಸಗಳು ೩೫ ತಿಂಗಳಿಗಿಂತ ದಿವಸ	
ಒಟ್ಟು ಸಭೆಗಳು	೧೧
ಪ್ರೇಕ್ಷಕರ ಸಂಖ್ಯೆ	೫೩,೦೦೦
ಒಟ್ಟು ವೆಚ್ಚ	ರೂ. ೬೫,೯೬,೭೨೯
ಮೂಲ ಘಟನೆಯ ಪರಿಶಿಷ್ಟಗಳು	೧೪
,, ಕಲಮುಗಳು	೩೮೩
ಕರಡು ಸಮಿತಿಯ ಘಟನೆಯ ಪರಿಶಿಷ್ಟಗಳು	೮
,, ಕಲಮುಗಳು	೩೧೫
ಒಟ್ಟು ತಿದ್ದುಪಡಿಗಳು	೭೯೩
ಚರ್ಚಿಸಿದ ತಿದ್ದುಪಡಿಗಳು	೨೪೭
ಕೊನೆಗೆ ಕರಡಿನಲ್ಲಿ ಬಂದಪರಿಶಿಷ್ಟಗಳು	೮
,, ಕಲಮುಗಳು	೩೯೫

ಬಳ್ಳಾರಿ ಸಮಾಚಾರ

ಹಣವನ್ನೆಲ್ಲಿರಿ ಭಿನ್ನಾಭಿಪ್ರಾಯವೆನಾಡಿ ಅದನ್ನು ಕಸಲು ಸ್ವಾತಂತ್ರ್ಯೋದ್ಯೋಗವನ್ನಾಗಲು ನ್ಯಾಷನಲ್ ಸೇವಿಂಗ್ಸ್ ಸರ್ಟಿಫಿಕೇಟ್ ಗಳನ್ನು ಕೊಳ್ಳುವುದೇ ಒಂದು ಮಾರ್ಗವೆಂದು ಜಿಲ್ಲಾ ಕಲೆಕ್ಟರ್ ಶ್ರೀ ಜ. ರಾಮಿರೆಡ್ಡಿಯವರಧ್ಯಕ್ಷತೆಯಲ್ಲಿ ಶ್ರೀ ಗಳಾದ ಟಿ. ಬಿ. ಕೇಶವರಾವ್ ಕೆ. ಸಿ. ಶಾಸ್ತ್ರಿ ಮತ್ತು ಶಿಂದಿಗಿ ಸಿದ್ದಲಿಂಗಸ್ವಾಮಿಗಳವರು ಮಾತಾಡಿದರು. ಅಧ್ಯಕ್ಷರು ಹೆಚ್ಚಿಸಾರ್ಥಮೆಂಬೆಯಲ್ಲಿ ಶ್ರೀ. ಮಥಾಯ (ಆರ್ಥಿಕ ಮಂತ್ರಿಗಳು) ಮಾಡಿದ ಬಾಷಣ ಭಾಗಗಳನ್ನೆತ್ತಿ ರಾಷ್ಟ್ರದ ಆರ್ಥಿಕರಚನೆಯಲ್ಲಿ ಸಹಾಯ ಮಾಡಬೇಕೆಂದರು. ಈ ಸಮಾರಂಭವು ಸಾಯಂಕಾಲ ಐದು ವಾರದವರೆಗೆ ದಿನಾ ಚರಣೆ ನಡೆಯಲಿದೆ. 12-3-50 ರಂದು ಯಾ ಸರ್ಟಿಫಿಕೇಟ ಸಾಲಿನವರ ಬ್ಯಾಂಡಿ ಸೊಂದಿಗೆ ಮೆರವಣಿಗೆ ತೆಗೆಯಲಾಗುತ್ತದೆ. ಕರ್ನಲ್ ಕಾಂಗ್ರೆಸ್ ಶ್ರೀಮತಿ ಹೆಚ್. ವೆಂಕಟೇಶರಾಯರು ಸಭೆ ಏರ್ಪಡಿಸಿದ್ದರು. ಜಿಲ್ಲಾ ಸಂಘಟಕರಾದ ಶ್ರೀ ಉದ್ದಾ ಪಾಚಾರ್ಯರು ಈ ಸಮಾರಂಭವನ್ನು ಉತ್ಸಾಹದಿಂದ ನಿರವೇರಿಸುತ್ತಿರುವುದಕ್ಕೆ ಕಲೆಕ್ಟರ್‌ರವರು ಪ್ರಶಂಸಿಸಿದರು.

ಚೀನದಲ್ಲಿ ಕೆಂಪುಸೈನ್ಯವೂ ಇವೋತ್ತ ದ್ವೀಪವನ್ನು ಆಕ್ರಮಿಸಿಕೊಂಡಿದೆ ರಾಷ್ಟ್ರೀಯರಿಗೆ ಉಳಿದಿರುವ ಭಾಗವೆಂದರೆ ಹೈನಾನ್ ದ್ವೀಪ. ಅದುಕೂಡ ಬೀಳಬಹುದು.

ನೆಹರೂ-ಜಯಪ್ರಕಾಶ ಭೆಟ್ಟಿ

ಕೇಂದ್ರ ಮಂತ್ರಿಮಂಡಳದ ಪುನರ್ಘಟನೆಯ ಸಂಭವ

ಹೊಸದಿಲ್ಲಿ ೯-ಸಮಾಜವಾದಿ ಧುರೀಣರಾದ ಶ್ರೀ ಜಯಪ್ರಕಾಶ ನಾರಾಯಣರವರು ಪಂಡಿತ ನೆಹರುರವರನ್ನು ಕಲಕತ್ತೆಯಲ್ಲಿ ಕಾಣಲಿರುವರೆಂದು ಈ ಮೊದಲು ವರದಿಯಾಗಿತ್ತು. ಆದರೆ ಅವರು ಈಗ ನೆಹರೂರವರನ್ನು ರವಿವಾರ ದಿವಸ ದಿಲ್ಲಿಯಲ್ಲಿ ಕಾಣಲಿರುವ ಸಂಭವವಿದೆ. ಯೆಂದು ತಿಳಿದುಬರುತ್ತದೆ. ಈ ಭೆಟ್ಟಿಯು ಸಂಬಂಧದಲ್ಲಿ ತರ್ಕವಿತರ್ಕಗಳು ಸುರುವಾಗಿದ್ದು ಅಯವ್ಯಯ ಆಧಿವೇಶನ ನಂತರ ಪುನರ್ಘಟಿತವಾಗಲಿರುವ ಕೇಂದ್ರ ಮಂತ್ರಿಮಂಡಳದಲ್ಲಿ ಸಮಾಜವಾದಿಗಳಿಗೆ ಕೆಲವೊಂದು ಸ್ಥಳಗಳು ಕೊಡಲ್ಪಡಬಹುದೆಂದು ಹೇಳಲಾಗುತ್ತಿದೆ. ದೇಶದ ಮುಂದಿನ ಕೊಡತನದ ಸಮಸ್ಯೆಗಳನ್ನು ಬಿಡಿಸಲು ಕಾಂಗ್ರೇಯ ಪೂರ್ಣ ಬಹುಮತದಿಂದ ಈಗ ಕಾರ್ಯಮಾಡುವದು ಅವಶ್ಯವಿರುವದೆಂದು ಕೆಲವು ಸ್ನೇಹಪರ ಸಮಾಜವಾದಿಗಳಿಗೂ ಈಗ ಎನಿಸಹತ್ತಿದ್ದರಿಂದ ಮಂತ್ರಿಮಂಡಳದಲ್ಲಿ ಸಮಾಜವಾದಿಗಳಿಗೆ ಸ್ಥಳಗಳು ಕೊಡಲ್ಪಟ್ಟರ್ದೆ ಅವರು ಸಹಕಾರ ನಿರಾಕರಿಸಲಿಕ್ಕಿಲ್ಲವೆಂದು ಕೋರುವದು.

ಕೇಂದ್ರ ಮಂತ್ರಿ ಮಂಡಳವನ್ನು ಪುನರ್ಘಟಿಸುವದು. ಅತಿ ಅವಶ್ಯಕವಾಗಿ ಪರಿಣಮಿಸಿರುವದೆಂದು ಒಕ್ಕೂಟ ಶಾಸನ ಸಭೆಯ ಸದಸ್ಯರಲ್ಲಿಯೂ ದಿನೇ ದಿನೇ ಭಾವನೆ ಬೆಳೆಯಹತ್ತಿದೆ. ಮಂತ್ರಿಗಳ ಪಕ್ಷಿಕೆಯ ತಪ್ಪಿಯು ಕಾಲಕ್ಕೆ ಕೆಲವು ಸದಸ್ಯರು ಈ ಅಭಿಪ್ರಾಯ ವ್ಯಕ್ತಮಾಡಿತ್ತಾಪಿದ್ದಲ್ಲದೆ ಕಳೆದ ವಾರದಲ್ಲಿ ಸೇರಿದ ಒಕ್ಕೂಟ ಶಾಸನ ಸಭೆಯು ಕಾಂಗ್ರೆಸ ಪಕ್ಷ ಕಾರ್ಯಕಾರಿ ಸಭೆಯಲ್ಲಿಯೂ ಈ ವಿಷಯವು ವ್ಯಕ್ತಪಡಿಸಲ್ಪಟ್ಟಿತು. ಕೆಲವರ ಅಭಿಪ್ರಾಯಗಳು ಸ್ಥಳಗಳಿಗೆ ಬಿಸಿ ನೆತ್ತರಿನ ತರುಣರನ್ನು ಸೇರಿಸಲಿಕ್ಕೆ ಬೇಕೆಂದು ಒತ್ತಿ ಹೇಳಿದರೆಂದು ಗೊತ್ತಾಗುವದು ಹೀಗೆ ಬಿಸಿ ನೆತ್ತರಿನವನ್ನು ಸೇರಿಸಿಕೊಂಡಲ್ಲಿ ಅವರು ಕರಡೋ ಹೊಂದಿ ಮುಂದೆ ಮಂತ್ರಿಗಳಾಗಲು ತ್ರಾಸವಾಗುವದೆಂದು ಅವರ ವಿಚಾರವಿನ್ನಂತೆ ತೋರುವದು.

ವೀರಲಾಯಕ ಅಲಿ ಓಡಿ ಹೋದದ್ದೆಂದು ?

ಹೈದ್ರಾಬಾದ್ ಸರಕಾರದ ಪ್ರಕಟಣೆ

ಹೈದ್ರಾಬಾದ್ – ಭಾರತ ಸರ್ಕಾರದಿಂದ ತೆರೆಯಲಿಕ್ಕಿರುವ ವಿಶೇಷ ಅದಿಕಾರಿಗಳ [illegible] ವಿಚಾರಣೆಯ [illegible] ಯಲ್ಲಿರುವ ಹೈದ್ರಾಬಾದ್ ಮುಖ್ಯಮಂತ್ರಿ, ವೀರ [illegible] ಮತ್ತು ಅವನ ಮಕ್ಕಳು ಸರ್ಕಾರ ಸೀನೆಯ ತಾಲೀಮಿನ ದಿನ ದೈರ್ಯಾಬಾದವನ್ನು ಬಿಟ್ಟು ಹೋದರೆಂದು ಅತನ ಹೆಂಡತಿಯು ಅಳಿಯ ತಾಲೀಮಿನ ಓಡಿಹೋದಳೆಂದು ತಿಳಿದು ಬಂದಿದೆಯಾಗಿ ಹೈದ್ರಾಬಾದ್ ಸರಕಾರವು ಇಂದು ಸಂಜೆ ಹೊರಡಿಸಿದ ಪತ್ರಿಕಾ ಪ್ರಕಟನೆಯಲ್ಲಿ ಹೇಳಲಾಗಿದೆ.

ವೀರ್ ಲಾಯಕ ಅಲಿ ಹಾಗು ಅವನ ಕುಟುಂಬದವರು ಓಡಿಹೋದ ವಿಚಾರದಲ್ಲಿ ಅಲಕ್ಷ್ಯರಾಗಿದ್ದ ಅಧಿಕಾರಿಗಳ ವಿಚಾರವನ್ನು ಮುಖ್ಯಮಂತ್ರಿಗಳು ಮಾಡುತ್ತಿದ್ದು ಇವರ ಇತ್ಯರ್ಥವನ್ನು ಅವರು ಬೇಗನೆ ಮಾಡುವರೆಂದು ಪ್ರಕಟನೆಯಲ್ಲಿ ಹೇಳಲಾಗಿದ.

ಪ್ರಕಟನೆಯಲ್ಲಿ ಈರೀತಿ ಹೇಳಲ್ಪಟ್ಟಿದೆ.

ವೀರ್‌ಲಾಯಕ ಅಲಿಯ ಸಲಾಮಿನದ ಬಗ್ಗೆ ನಡೆಸಿದ ವಿಚಾರಣೆ ಮುಗಿಯುತ್ತ ಬಂದಿದ್ದು ಈ ವಾರಾಂತ್ಯದಲ್ಲಿ ಅದು ಮುಗಿಯುವದು. ಈ ಕಾರ್ಯಕ್ಕಾಗಿಯೇ ಭಾರತ ಸರ್ಕಾರದಿಂದ ನಡೆಸಲ್ಪಡೆಂತಿರುವ ವಿಶೇಷ ಅಧಿಕಾರಿಯು ಈ ವಿಚಾರಣೆ ನಡೆಸಿದ್ದಾರೆ. ವೀರಲಾಯಕ ಅಲಿಯು ಮತ್ತು ಅವನ ಮಕ್ಕಳು ಪೊಲೀಸ್ ತಾಲೀಮಿನ ದಿನ ಅಧ್ಯಾಕ್ಷ್ಯನ್ನು ಹೊತ್ತಾಯಿಂದ ಹೆಂಡತಿಯಿಂದ ತಿಳಿದುಬಂದಿದೆ.

ವಿಚಾರಣೆಗಾಗಿ ಕೆಲ ಜನರನ್ನು ಬರಮಾಡುವದು ಅವಶ್ಯಕವಾಗಿತ್ತು ವಿಚಾರಣೆ ಮುಗಿಯುವದರ ಒಳಗೆ ಈ ಜನರ ಬಗ್ಗೆ [illegible] ವಿಚಾರಣೆ ಮಾಡಲಾಗುವದು. ಮುಂಜಾಗ್ರತೆಯ ಕ್ರಮವೆಂದು ಸ್ಥಾನಬದ್ಧತೆಯಲ್ಲಿರುವ ಹಿಂದಿನ ಮಂತ್ರಿಗಳನ್ನು [illegible] ನೆಗೆ ಸಾಗಿಸಲಾಗಿದೆ. ವೀರಲಾಯಕ ಅಲಿಯು ಸಲಾಯನದ [illegible] ಅಧಿಕಾರಿಗಳ ವಿಚಾರ [illegible] ಮಾಡುತ್ತಿದ್ದು ಅವರು [illegible] ಯದ ಇತ್ಯರ್ಥ ಮಾಡುವರು.

ಧಾರ್ಮಿಕ ಸಭೆ

ಹಡಗಲಿ:– ತಾಲೂಕು ಸೊನ್ನ ಗ್ರಾಮದಲ್ಲಿ ತಾರೀಕು 11-3-1950 ನೇ ದಿನ ಸಾಯಂಕಾಲ ಶ್ರೀ ಅಂಜನೇಯ ದೇವಸ್ಥಾನದಲ್ಲಿ ಜೀರ್ಣಾವಾರ ಗುಡಿಗಳ ಪುನರುದ್ಧಾರದ ಬಗ್ಗೆ ಸಿಂಗಳ ಮಾಂಜಿಯೇ ಸಂಸ್ಥೆಯು ಸ್ಥಾಪಿಸಿಟ್ಟು ಕೆಲವು ವಿಷಯಗಳಿಂದ ಮೇಲ್ಕಾಣಿಸಿದ ಸತ್ಕಾರ್ಯವು ಸಿಂಗಳಿಂದ ನಿರ್ಣಯಿಸಲ್ಪಟ್ಟಿದ್ದನ್ನು ಪುನಃ ಹೊಸಕುರುಸಿನಿಂದ ಜೀರ್ಣೋದ್ಧಾರ ಕಾರ್ಯವನ್ನು ಮುಂದುವರಿಸುವುದರ ಸಲುವಾಗಿ ಸಭೆಯನ್ನು ಕರೆಯಲಾಗಿತ್ತು. ಸಭೆಯಲ್ಲಿ ಸೊಂಬರರು ಮತ್ತು ಈ ಗ್ರಾಮದ [illegible] ರೈತಭಾಂದವರು ಸಹ ಹಾಜರಿದ್ದರು. ಸಭೆಗೆ ಶ್ರೀವಾಸನ್ ಸಕ್ಕರ್ ಹಳ್ಳಿ ನಾಗನ್ನನವರು ಅಧ್ಯಕ್ಷರಾಗಿದ್ದರು. ಸಭೆಯಲ್ಲಿ ವಿಜ್ಞಾಪನೆದಾರರಾದ [illegible] ಶ್ರೀಮಂತ ಜಟ್ಟೆ ಶಿವಿಂಗನ್ನನವರು, ಮತ್ತು ಲೆಕ್ಕಪತ್ರದ ಜವಾಬ್ದಾರಿಯನ್ನು ಸಹಿಸಿರುವ ಸಂಘ ಸಂಸ್ಥಾಪಕರಾದ [illegible] ನವರು [illegible] ಸಂಘದ ಅಧ್ಯಕ್ಷರಾದ [illegible] ಬಣಕಾರರೂ ವೈನಹಳ್ಳಿ ಮಲ್ಲಪ್ಪ ಗಡ್ಡೀ ಶಿದ್ದೀರಯ್ಯ ದಸ್ಸಾಪುರದ ಪಕ್ಕೀರಪ್ಪ ಗೌಡರ ಸುಣ್ಣಜ್ಜಿ ಹ್ಯಾತ್ರಿ ಕೊಟ್ರಗೌಡ, ರೆಡ್ಡಿ ವಿರೂಪಾಕ್ಷಗೌಡ, ಗೋನ್ಯಾಳ ದೊಡ್ಡಲಿಂಗವ್ವ ರಾಂಪುರ ಪಕ್ಕೀರವ್ವ ಹಸ್ಸಿಕಿಂದವ್ವ ಯಜಮಾನಾದಿಗಳಿರೂ ಹಾಜರಿದ್ದರು.

ಸೊನ್ನ ಗ್ರಾಮದ ಸಾಧುಶರಣ ಎಸ್. ಎಮ್. ವಿರೂಪಾಕ್ಷಯ್ಯನವರು ಮಹಾವಿರಕ್ತ ಪುಂಡಳ ಬಸವಣ್ಣನವರ ವಚನಗಳನ್ನು ಓದುತ್ತಾ ಅವರ ಅರ್ಥವನ್ನು ಅತಿ ಸರಳವಾಗಿ ಮತ್ತು ಸುಲಭವಾಗಿ ಸಾಮಾನ್ಯ ಜನರಿಗೂ ತಿಳಿಯುವಂತೆ ಭಾಷಣಗಳನ್ನು ಅತಿ ಸ್ಪುಟಿಕದಿಂದ ಸುಮಾರು ಎರಡು ತಾಸುಗಳವರೆಗೆ ಶ್ರೀಸ್ವಚ್ಛಿಯಾಂಬಿಕೆಯ ಮತ್ತು ಶ್ರೀಅಚ್ಚೇಶ್ವರನ ಸನ್ನಿಧಿಗೆ ಹೃದಯದಲ್ಲಿ ಭಕ್ತಿಪೂರ್ವಕವಾಗಿ ದೈವೀಕರಿಸುವಂತೆ ಮಾಡಿ ಮತ್ತು ಪದ್ಮಕ್ಕೆ ಗುಂಡಿಕಯನವರಿಗೆ, ಸಜ್ಜಕ್ಕ ಬಾಂಧವರಾದ ನೀವೆಲ್ಲರೂ 8 ತಿಂಗಳ ಹಿಂದೆ ಶ್ರೀ ಸ್ವಯಂಭುಲಿಂಗೇಶ್ವರ ಜೀರ್ಣವಾದ ದೇವಾಲಯವನ್ನು ಜೀರ್ಣೋದ್ಧಾರ ಮಾಡುವ ಅಂದರೆ ಶಿಲಾಸಿಂಹಾಸನವನ್ನು ಕಟ್ಟಿಸುವ ಪ್ರತಿಜ್ಞೆಯನ್ನು ಮತ್ತು ಎರಡನೆಯದಾಗಿ ಶ್ರೀ ಕಲ್ಲೇಶ್ವರನ ಜೀರ್ಣವಾದ ರಥೋತ್ಸವವನ್ನು ಹೊಸದಾಗಿ ನಿರ್ಮಾಣ ಮಾಡುವ ಪ್ರತಿಜ್ಞೆಯನ್ನು ಮಾಡಿ ಕೆಲವು ದಿನಗಳಲ್ಲೇ ನೀವು ಮಾಡಬೇಕೆಂದರು.

ಭಾರತದ ಒಕ್ಕಲಿಗ

ಭಾರತೀಯ ಒಕ್ಕಲಿಗರೊಡನೆ, ಮಾತನಾಡಲು ಪ್ರಾರಂಭಿಸಿ ನೋಡಿದೆ. ಅವರ ಬಾಯಿಂದ ಹೊರಬರುವ ಬುದ್ಧಿವಂತಿಕೆಯ ಮಾತುಗಳು ಯಾರನ್ನೂ ತಲೆಸೊಗಿಸುವವು. ಕಣ್ಣಿಗೆ ಕಾಣಲು ಅವರು ಹುಂಬರಂತೆ ತೋರಿದರೂ ಅವರಲ್ಲಿ ಅಧ್ಯಾತ್ಮಿಕ ಅಳವಾದ ಆಗರವಿದೆಯೆಂದು ತೋರಿ ಬಂದಿರಲಾರದು. ಇದಕ್ಕೆ ನಾನು ಸಂಸ್ಕೃತಿ ಎನ್ನುವೆನೆ. ಅದೇ ಯೂರೋಪಿನ ಒಕ್ಕಲಿಗನನ್ನು ಮಾತನಾಡಿಸಿ ನೋಡಿ. ಅಧ್ಯಾತ್ಮದ ಮಾತುಗಳು ಅವನಿಗೆ ಬೇಕಾಗಿರುವುದಿಲ್ಲ. ಭಾರತದ ಒಕ್ಕಲಿಗನಲ್ಲಿ ಪುರಾತನ ಸಂಸ್ಕೃತಿಯು ಮನೆಮಾಡಿಕೊಂಡಿದೆ. ಮೇಲಿನ ಅನರ್ಗಣವನ್ನು ಕೆನೆದು ನೋಡಿ ಬೇರೆಯವರಿಂದ ಬಡತನವೆನ್ನು ಹೊಸಿಸೋದಿಸಿ ನೋಡಿರಿ, ನಿರಕ್ಷರತೆಯನ್ನು ನಿವಾರಿಸಿ ನೋಡಿರಿ. ಅಕ್ಕಂತ ಸುಸಂಸ್ಕೃತ, ಸಭ್ಯ ಚರಿತೆಯು, ಸ್ವತಂತ್ರವಾದ ಗರಿಕೆಯ ಸಾಕ್ಷಾತ್ಕಾರವು ನಿಮಗಾಗಿದೀತು.

—ಮಹಾತ್ಮ ಗಾಂಧಿ

ಹೈದ್ರಾಬಾದ್ ಪೋಲೀಸ್ ಇನ್‌ಸ್ಪೆಕ್ಟರ ಜನರಲ್‌ರು ಮನೆಗೆ

ಹೈದ್ರಾಬಾದ್ – ಹೈದ್ರಾಬಾದ್ ಸರಕಾರದ ಪೋಲೀಸ ಇನಸ್ಪೆಕ್ಟರ ಜನರಲ್‌ರಾದ ಬಿ. ಬಿ. ಎಸ್ ಜೆಡ್ಡಿಯವರಿಗೆ ಇದೇ ಗಳರಂದು ಹೈದ್ರಾಬಾದ್ ಸರ್ಕಾರ ವಿಭಾಗದ ಸೈನ್ಯಾಟಿ ಪೋಲೀಸ ಇನ್‌ಸ್ಪೆಕ್ಟರ್ ಜನರಲ್‌ರಾದ ಶ್ರೀ ಕೃಷ್ಣ ಮೇನನ್‌ರಿಗೆ ತಮ್ಮ ಅಧಿಕಾರ ವಹಿಸಿ ಕೊಟ್ಟು ರಜೆಯ ಮೇಲೆ ಭಾರತಕ್ಕೆ ಹೋಗಲು ಹೈದ್ರಾಬಾದ್ ಸರಕಾರವು ಆಜ್ಞಾಪಿಸಿದೆ.

ರೈತರೂ, ತಕಾವಿ ಸಾಲವೂ

ಅನೇಕ ರೈತರು ತಮ್ಮ ವ್ಯವಸಾಯ ಕಾರ್ಯಗಳಿಗೂ ಇತರ ಖರ್ಚುಗಳನ್ನು ತೆಗೆಸುವ ಸಲುವಾಗಿಯೂ ಸಾಲವಹಿಡಿದಿರುತ್ತಾರೆ. ಅನೇಕ ಜಿಲ್ಲಾಗಳಲ್ಲಿ ಬಳ್ಳಾರಿ ಜಿಲ್ಲೆಯೇ ಈ ಸರ್ಕಾರಿ ಸಾಲದ ವಸೂಲಿ ಕ್ರಮದಲ್ಲಿ ಹಿಂದುಳಿದಿರುವುದು ಕಂಡುಬಂದರು ಸಹ ಸುಲಭವಾಗಿ ಉಗ್ರಾಣಗಳ ವ್ಯವಸ್ಥೆಯನ್ನು ಮಾಡಿಸಬೇಕಾಗಿ ಮದ್ರಾಸ್ ಸರ್ಕಾರವು ಆಜ್ಞೆ ಮಾಡಿರುವುದಾಗಿ ಗೊತ್ತಾಗಿದೆ.

"ಸಾಲವನು ಕೊಂಬಾಗ ಹಾಲೋಗರುಂಡಂತೆ ಸಾಲಿಗರು ಬಂಕೆಳೆವಾಗ ಕಬ್ಬುವಿಯ ಕೇಲು ಮುರಿದಂತ್ತೆ" ಎಂಬ ಸರ್ವಜ್ಞ ವಾಕ್ಯದಂತೆ ಸುಲಭವಾಗಿ ದೊರೆತ ಸಾಲವನ್ನು ರೈತರು ಸಂತೋಷದಿಂದ ಸ್ವೀಕರಿಸಿ ಈಗ ಅದರ ವಸೂಲಿಯು ಬಂದಾಗ ಪಡಪಡಿಸುತ್ತಿರುವರು. ಎಂಥ ದೊಡ್ಡ ರೈತನಾಗಲಿ ಆಸ್ತಿ ಇದ್ದರೂ ಹಣದ ತೀಕ್ಷ್ಣೆ ಅನುಕೂಲವಾಗುವುದು. ಕಂದಾಯ ಜಿಲ್ಲೆ ದಾರರು (Revenue Inspector) ಬಂದು ಜಪ್ತಿಕ್ರಮಗಳನ್ನು ನಡೆಸುವಾಗ ರೈತರು ಪರಿತಪಿಸುವುದು ಸ್ವಾಭಾವಿಕವಾದ ಸಿಸ್ಸು ಹಾಯ ಪರಿಸ್ಥಿತಿಯನ್ನು ಪ್ರಕ್ಷಗೊಳಿಸುತ್ತದೆ. ತಕಾವಿಸಾಲವನ್ನು ಸುಲಭಕಂತುಗಳಲ್ಲಿ ತೀರಿಸಲು ಅವಕಾಶವಿದ್ದರೂ ರೈತನ ಆಲಸ್ಯ ಅರ್ಥಿಗದುಷ್ಟಿನಿಂದ ಇದೀಸಾಲವು ಹಾನಿಯೇ ಆಗಿದೆ.

ಇಂಥಾ ಪರಿಸ್ಥಿತಿಯಲ್ಲಿ ಸರಕಾರಿ ಅಧಿಕಾರಿಗಳ ಕಡೆಯಿಂದ ಅನುಕೂಲ್ಯಗಳ ಆಶೆಯ ಸ್ವೀಕೃಸುವುದೂ ಸಹಜವಾದರೂ ಅದನ್ನವರು ಮಾಡುವಂತಿಲ್ಲ.

ಈ ಕಾರಣ ರೈತರು ಸುಸಂಘಟಿತರಾಗಿ ತಮ್ಮ ಜೀವನದಲ್ಲಿ ಒಂದು ವ್ಯಸನವೆಂಬ ಕ್ರಮವನ್ನಷ್ಟಿ ಬಂದ ಆದಾಯದಲ್ಲಿ ಕೆಲಭಾಗ ಉಳಿಸಿ ಸರ್ಕಾರದ ಸಾಲವನ್ನು ಸುಲಭಕಂತುಗಳಲ್ಲಿ ತೀರಿಸುವರೆ ಕಷ್ಟಗಳು ನಿವಾರಣೆಯಾಗಲಾರವು ವೆನ್ನೋ ಅಧಿಕಾರಿಗಳು ಕಾರುಣ್ಯದಿಂದ ಕ್ರೂರತೆಯಿಂದ ವರ್ತಿಸುತ್ತಿರುವರೆಂದ ವ್ಯರ್ಥ ಆರೋಪ ಹೊರಿಸುವುದಸ್ಪಿಂತಲೂ ಅಂಥಾ ಉದಾಹರಣೆಗಳನ್ನು ವ್ಯಕ್ತಪಡಿಸಿ ತಂದು ಕಲೆಕ್ಟರರುಗಳ ಬಳಿಹೋಗಿ ನಿಜವಾದ ಅಂಶಗಳನ್ನು ವೇದ್ಯಗೊಳಿಸಬೇಕು ಆಗಲೇ ಸರಸ್ಪರ ಕಷ್ಟಗಳು ತಿಳಿಯುತ್ತವೆ. ಒಂದೇ ವಕ್ಷಣ ಬೇಕೆಯೇ ಮುಖ್ಯವಾದುದೆಂದು ಭಾವಿಸದೆ ಕಾರ್ಯರೂಪದಲ್ಲಿ ನಿಯಮಗಳನ್ನು ಜಾರಿಯಲ್ಲಿ ತರಬೇಕು.

ಹಿಂದೀ ಮಹಾವಿದ್ಯಾಲಯ ಬಳ್ಳಾರಿ

ಇನ್ನುಮೇಲೆ ವಿಶಾರದ ವರ್ಗದಲ್ಲಿ ಸೇರಲು ಪ್ರವೇಶಿಕಾ ಪರೀಕ್ಷೆಯಲ್ಲಿಲ್ಲಿ ಉತ್ತೀರ್ಣರಾಗಿರಬೇಕೆಂಬ ನಿಯಮವು ಬಂದಿದೆ.

ವ್ಯವಸಾಯ ಸಂಬಂಧೀ ಪ್ರಶ್ನೆಗಳಿಗೆ ಉತ್ತರ

ಆಹಾರ ಕೊರತೆ ಇರುವ ಸಮಯಗಳಲ್ಲಿ ಆಹಾರದಲ್ಲಿ ಹೆಚ್ಚು ಕಾಲ ಉಪಯೋಗಿಸಲು ಹೇಳಲಾಗುತ್ತಿದೆ. ಗೆಣಸು ಒಳ್ಳೆಯ ಆಹಾರವಾಗಬಲ್ಲದೆ?

ಉತ್ತರ:- ಅಹುದು ಗೆಣಸು ಒಳ್ಳೆಯ ರಕ್ತವರ್ಧಕ ಆಹಾರವಿದೆ. ಇತರ ಗಡ್ಡೆ ಗೆಣಸುಗಳಿಂತೆಯೇ ಇದೂ ಸಿಪ್ಪೆಯು ಪದಾರ್ಥವು. ಇದರಲ್ಲಿ ಬಲ್ಲಾಗುವ ಈ ಪ್ಲಸ್ತೆ ಉತ್ಪಾದಿಸುವ ಶಕ್ತಿಇದೆ. (೧೦೦ ಗ್ರಾಮುಗಳಿಗೆ ೩೪೬ ಕ್ಯಾಲರಿ) ಪೌಷ್ಟಿಕದಲ್ಲಿ ಕಾಣಿಸುವ ಒಟ್ಟಿಗೆ ಹಿಂದೆಲ್ಲ ಗೆಣಸಿನಲ್ಲಿ ವಿಸಿಜ ದ್ರವ್ಯಗಳೂ 'ಎ' ವಿಟ್ಯಾಮಿನ್ ಸತ್ವವೂ ಇರುತ್ತವೆ. ಆದ್ದರಿಂದ ಗೆಣಸು ಒಟ್ಟಿಗೆಯ ಕೊರತೆಯನ್ನು ನೀಗಿಸಬಹುದು. ಇದರಲ್ಲಿ ವಿಷ್ಟ ವದಾರ್ಥಗಳು ಸಾಕಷ್ಟಿರುವುದರಿಂದ ಇದನ್ನು ಉಪಯೋಗಿಸಿ, ಸನ್ನ ಆಹಾರದಲ್ಲಿಯೆ. ಅಕ್ಕಿಯ ಬಳಕೆಯನ್ನು ಉಳಿಸಬಹುದು.

ಪ್ರಶ್ನೆ:- ಅಕ್ಕಿ ಮೊಲಾದ ಆಹಾರ ಧಾನ್ಯಗಳ ಬದಲು ಗೆಣಸನ್ನು ಬಳಸಬಹುದೋ?

ಉತ್ತರ:- ಅಹುದು. ಬಳಸಬಹುದು ಆದರೆ, ಗೆಣಸಿನಲ್ಲಿ ಎಲ್ಲಿ ಆಹಾರ ಸತ್ವಗಳಿದ್ದರೂ ಪ್ರೊಟೀನಿನ ಅಂಶ ಕಡಿಮೆ ಇರುವುದು ಈ ಕೊರತೆಯನ್ನು ಕಡಲೆ ಮೊದಲಾದ ಬೇಳೆಯ. ಕಾಳುಗಳನ್ನು ಉಪಯೋಗಿಸಿ ತುಂಬಿಕೊಳ್ಳಬಹುದು. ಬೇಳೆಯ ಕಾಳುಗಳಲ್ಲಿ ಪ್ರೊಟೀನಿನ ಅಂಶ ೧೫% ರಿಂದ ೨೫% ವರೆಗೆ ಇರುತ್ತದೆ. ಇದರಂತೆಯೇ ಹಾಲು ಹಾಗು ಮೈನೆಯ ಪದಾರ್ಥಗಳು, ಕೋಳಿಯ ತತ್ತಿ, ಮೀನು, ಮಾಂಸ ಮೊದಲಾದ ಪ್ರೊಟೀನುಗಳು ಸನ್ನುದ್ಧರಿಯ ಪದಾರ್ಥಗಳನ್ನು ಉಪಯೋಗಿಸಿಯೂ ಗೆಣಸಿನಲ್ಲಿಯ ಈ ಕೊರತೆಯನ್ನು ತುಂಬಿಕೊಳ್ಳಬಹುದು.

ಪ್ರಶ್ನೆ:- ಎಲುವಿನ ಪುಡಿಯನ್ನು ಬೂದಿಯೊಡನೆ ಬೆರೆಸಿ ಭೂಮಿಗೆ ಹಾಕಬಹುದೋ? ಅವುಗಳನ್ನು ಕೂಡಿಸಿ ಹಾಕಿದರೆ ರಾಸಾಯನಿಕ ಕ್ರಿಯೆ ಆಗಿ ಅಪಾಯ ಉಂಟಾಗುತ್ತದೆಯೇ?

ಉತ್ತರ:- ಅವನ್ನು ಕೂಡಿಸಿ ಹಾಕಲು ಅಡ್ಡಿ ಇಲ್ಲ. ಸಾರಾಯನಿಕಕ್ರಿಯೆ ಏನೂ ಆಗುವದಿಲ್ಲ. ಎಲುವಿನ ಪುಡಿಯಿಂದ ಫಾಸ್ಫರಿಕ್ ಆಸಿಡ್ ಮತ್ತು ಸ್ವಲ್ಪ ನೈಟ್ರೋಜನ್‌ಗಳು ಹಾಗು ಬೂದಿಯಿಂದ ಪೊಟ್ಯಾಶ್ ಭೂಮಿಗೆ ದೊರೆಯುತ್ತವೆ. ಬೂದಿಯು ಕಬ್ಬಿಣವಿದ್ದರೆ ಪೊಟ್ಯಾಶ ವಿಶೇಷ ಪ್ರಮಾಣದಲ್ಲಿ ದೊರೆಯುವುದು.

ಪ್ರಶ್ನೆ:- ಸೌಳು ನೀರನ್ನು ನೀರಾವರಿಗಾಗಿ ಬಳಸಬಹುದೇ? ನೀರಾವರಿಗಾಗಿ ಆದನ್ನು ಸುಧಾರಿಸಲು ಏನಾದರೂ ಉಪಾಯವಿದೆಯೇ?

ಉತ್ತರ:- ಯಾವದೇ ಕರದ ಉಪ್ಪು ಅಥವಾ ಸೌಳು ನೀರು ನೀರಾವರಿಗೆ ಯೋಗ್ಯವಲ್ಲ ಇಂಥ ನೀರನ್ನು ಕಡಿಮೆ ಖರ್ಚಿನಲ್ಲಿ ಸುಧಾರಿಸಲು ಯಾವ ಉಪಾಯವೂ ಇಲ್ಲ. ಪರಿಪೂರ್ಣವಾಗಿಲ್ಲದಿದ್ದರೂ ಸಹಿ ನೀರು ಸಾಕಷ್ಟು ಸಿಗುತ್ತಿದ್ದರೆ, ಸೌಳು ನೀರಿನ ಸಾಂದ್ರತೆಯ ಪರ್ಸೆಂಟು ಸಹಿಸೀರನ್ನು ಬೆರೆಸಿ ಅದರ ಸೌಳು ಕಡಿಮೆ ಮಾಡಿ ನೀರಾವರಿಗೆ ಉಪಯೋಗಿಸಬಹುದು ಅದೂ ಭೂಮಿಯು ಹಗುರು ಇದ್ದರೆ ಮಾತ್ರ.

ಪ್ರಶ್ನೆ:- ಅಮೋನಿಯಂ ಸಲ್ಫೇಟ ಹಾಗು ಸುಪರ ಫಾಸ್ಫೇಟುಗಳನ್ನು ಕೂಡಿಸಿ ಸೊಪ್ಪರಕ್ಕಾಗಿ ಉಪಯೋಗಿಸಿ ಬಹುದೋ?

ಉತ್ತರ:- ಎನೂ ಅಡ್ಡಿಇಲ್ಲ; ಅದರಿಂದ ಆಪತ್ತುಗಳೆಲ್ಲಿಯು ಯಾವದೇ ವಿಸಿಜ ದ್ರವ್ಯವೂ ಕಡಿಮೆಯಾಗುವದೆಂಬ ಅಂಜಿಕೆಯು ಬೇಡ. ಆದರೆ ಆವೆರಡೂ ಕೃತ್ರಿಮ ಗೊಬ್ಬರಗಳ ಸೇವನತ್ವ ಬೇರೆ ಬೇರೆ ಇರುವದರಿಂದ, ಆವೆರಡನ್ನೂ ಚನ್ನಾಗಿ ಕೂಡಿಸಿ ಉಪಯೋಗಿಸಬೇಕು. ಅಂದರೆ ಹೊಲದಲ್ಲೆಲ್ಲ ಆವೆರಡೂ ಸಮಾನಾಗಿ ಬೀಳುವಂತೆ ಹರಡಲು ಅನುಕೂಲವಾಗುತ್ತದೆ.

ಪ್ರಶ್ನೆ:- ಅಮೋನಿಯಂ ಸಲ್ಫೇಟನ್ನು ಕಬ್ಬಿಣವು ಬೂದಿಯೊಡನೆ ಎಂದೂ ಬೆರಸಕೂಡದು. ಹಾಗೆ ಮಾಡಿದರೆ ಅದರ ನೈಟ್ರೋಜನ್ನಿನ ಅಂಶ ಕಡಿಮೆಯಾಗುವದು. ಕಬ್ಬಿಣ ಬೂದಿಯಲ್ಲಿದ್ದ ಕ್ಷಾರವು ಅಮೋನಿಯಂ ಸಲ್ಫೇಟನೊಡನೆ ಪ್ರಕ್ರಿಯೆ ಹೊಂದಿ, ಅಮೋನಿಯಾ ವಾಯುವು ಹೊರಡುತ್ತದೆ. ಹಾಗು ಈ ಕ್ರಿಯೆಯಲ್ಲಿ ಭೂಮಿಗೆ ಅವಶ್ಯವಾದ ನೈಟ್ರೋಜನ್ ಹಾಳಾಗುತ್ತದೆ.

ಪ್ರಶ್ನೆ:- ಕಬ್ಬಿಣ ಬೆಳೆಗೆ ಅಮೋನಿಯಂ ಸಲ್ಫೇಟನ್ನು ಯಾವಾಗ ಮತ್ತು ಯಾವ ಪ್ರಮಾಣದಲ್ಲಿ ಹಾಕಬೇಕು.?

ಉತ್ತರ:- ವಾಡೇಗಣಾವದಲ್ಲಿಯ ಕಬ್ಬಿಣ ಸಂಶೋಧನ ಕೇಂದ್ರದಲ್ಲಿ ನಡೆಸಿದ ಪ್ರಯೋಗಗಳ ಮೇಲಿಂದ, ಸುಮಾರು ೧೫೦ ಪೌಂಡು ನೈಟ್ರೋಜನ ದೊರೆಯುವಂತೆ, ಅಮೋನಿಯಂ ಸಲ್ಫೇಟ ಮತ್ತು ಸೇಂಗಾ ಹಿಂಡಿಗಳನ್ನು ಸಮಪ್ರಮಾಣದಲ್ಲಿ ಬೆರೆಸಿ ಹಾಕಿದರೆ ಒಳ್ಳೆಯದೆಂದು ಕಂಡು ಬಂದಿದೆ. ತೀರ ಹೆತ್ತೆಂದರೆ ೨೫೫ ಪೌಂ. ನೈಟ್ರೋಜನ್ ಸಿಗುವಷ್ಟು ಮೇಲಿಕೇಳಿದ ಮಿಶ್ರಣವನ್ನುಪಯೋಗಿಸಬಹುದು. ಕಬ್ಬಿನಲ್ಲಿ ಅಗಸಮಾಡುವ ಕಾಲಕ್ಕೆ ಈ ಮಿಶ್ರಣವನ್ನು ಹಾಕಬೇಕು.

[illegible]

[ಗ ತೇ ಪುಟದಿಂದ]

ಯಲ್ಲಿ ಹಾಗು ಸರ್ಕಾರಿ ನೌಕರರಲ್ಲಿ, ಉಚ್ಚತಮವಲ್ಲವಾದರೂ, ಸಮಾಧಾನಕರವಾದ ನೈತಿಕ ಮಟ್ಟ ನೆಲೆಗೊಳ್ಳುವದು ಅವಶ್ಯವಿದೆ. ವ್ಯಕ್ತಿಗಳಿಂದ ಕರ್ತವ್ಯ ಚ್ಯುತಿಯಾಗದಂತೆ ನೋಡಿಕೊಳ್ಳಲು ಸರಕಾರ ಹಾಗು ಸಮಾಜವು ಸಾಂಘಿಕ ವ್ಯವಸ್ಥೆ ಮಾಡಬೇಕು. ಸರ್ವವಿಧ ಉದ್ಧಾರಕ್ಕಾಗಿ ದುಡಿಯುವ ಕೆಲ ಜನರಾದರೂ ದೊರೆತಲ್ಲಿ ಈ ಕೆಲಸ ಅಸಾಧ್ಯವೇನಲ್ಲ ನಾಡಿನ ಉದ್ಧಾರ ದಂಥ ಆದರ್ಶ ಜೀವಿಗಳನ್ನು ಹುಟ್ಟಿಸುವ ಅದರ ಶಕ್ತಿಯ ಮೇಲೆ ಆವಲಂಬಿಸಿದೆ. ಕೀಳ್ಮಟ್ಟವನ್ನು ಮೆಟ್ಟಿನಿಂತು, ನಾಡನ್ನು ಹೊಸ ಬಾಳಿನತ್ತ ಒಯ್ಯಬಲ್ಲ, ಇಂಥ ಜೀವಿಗಳಿಗೆ ಭಾರತ ಜನ್ಮವೀಯಲಿ ಎಂದು ಆಶಿಸುವಾ ಪ್ರಾರ್ಥಿಸುವಾ. ಮಹಾತ್ಮಾ ಗಾಂಧೀಜಿಯವರ ತಪಸ್ಸು ಮಣ್ಣಿನಿಂದ ಮಹಾಪುರುಷರನ್ನು ನಿರ್ಮಿಸಿತು. ದಾಸ್ಯದ ಕೊಳೆಹಯಿಂದ ಸ್ವಾತಂತ್ರ್ಯ ಸ್ವರ್ಗಕ್ಕೆ ನಾಡನ್ನು ಒಯ್ಯುವಂಥ ಜನತೆಯನ್ನು ಒದಗಿಸಿತು. ಹೊಸ ಆಹ್ವಾನವನ್ನು ಎದುರಿಸಿ, ಸ್ವಾತಂತ್ರ್ಯವನ್ನು ಸ್ಥಿರಗೊಳಿಸುವದಷ್ಟೇ ಅಲ್ಲದೆ, ಸುಖ ಜೀವನಕ್ಕಾಗಿ ಅನ್ನ ಇತ್ಯಾದಿ ಅನುಕೂಲತೆಗಳನ್ನು ಒದಗಿಸಿ, ಸ್ವಾತಂತ್ರ್ಯವನ್ನು ಫಲಕಾರಿಯನ್ನಾಗಿಸಲು ಭಾರತದ ನೈತಿಕ ಹಾಗು ಅಧ್ಯಾತ್ಮಿಕ ಶಕ್ತಿಗೆ ಸಾಧ್ಯವಾಗಲಿ ಎಂದು ಆಶಿಸುವಾ.

ಪಶು ಸಂಗೋಪನೆ

ಒಕ್ಕಲತನವೆಂದರೆ ಅದರೊಡನೆ ಪಶು ಸಂಗೋಪನೆಯೂ ಬರಲೇ ಬೇಕು. ಆಹಾರ ಒದಗಿಸುವ ದೃಷ್ಟಿಯಿಂದಲೇ ಆಗಲಿ ಅಥವಾ ನಮ್ಮ ಒಕ್ಕಲತನದ ಆಧಾರವಾಗಿರುವ ಎತ್ತುಗಳನ್ನು ಪೋಷಿಸುವ ದೃಷ್ಟಿಯಿಂದಲೆ ಆಗಲಿ ದನಗಳಿಗೆ ಮಹತ್ವವಿದೆ. ಎತ್ತುಗಳನ್ನು ಕೊಡದೆ ಕೇವಲ ಹೆಚ್ಚು ಹೈನವನ್ನು ಕೊಡುವ ಧೋರಣೆ ಬದಲಾಗಬೇಕು. ಎರಡು ರೀತಿಯಿಂದ ಉಪಯುಕ್ತವಿರುವ ಆಕಳುಗಳ ಪೀಳಿಗೆ ಬೆಳೆಸಬೇಕು.

ಪೂರ್ವ ಬಂಗಾಲದ ಗಲಭೆ
೫೫೦೦ ಜನರ ಮರಣ

ಹೊಸದಿಲ್ಲಿ:—ಇತ್ತೀಚೆಗೆ ಪೂರ್ವ ಬಂಗಾಲದಲ್ಲಿ ನಡೆದ ಜಾತೀಯ ಗಲಭೆಗಳಲ್ಲಿ ೫೫೦೦ ಹಿಂದುಗಳು ಸತ್ತರೆಂದು ಇಲ್ಲಿಯ ಅಧಿಕೃತ ವರ್ಗಗಳಿಗೆಬಂದ ಸುದ್ದಿಯಿಂದ ತಿಳಿದಿದೆ. ಅಸಂಖ್ಯಾತ ಜನರಿಗೆ ಗಾಯಗಳಾಗಿದ್ದು ಗಾಯಗೊಂಡವರ ನಿಶ್ಚಿತ ಸಂಖ್ಯೆ ಇನ್ನೂ ತಿಳಿದುಬಂದಿಲ್ಲ.

ಲ್ಯಾಂಡ್ ಮಾರ್ಟ್‌ಗೇಜ ಬ್ಯಾಂಕ್

ಭೂಮಿಗಳಮೇಲೆ ಸಾಲ ಕೊಡುವ ಬ್ಯಾಂಕಿನ ಸ್ಥಾಪನೆಯು ಶ್ರೀ ಟೀಕೂರು ಸುಬ್ರಹ್ಮಣ್ಯಂ ಅಧ್ಯಕ್ಷತೆಯಲ್ಲಿ 12-3-50 ರ ದಿನ ಬಳ್ಳಾರಿ ಮತ್ತು ಮತ್ತು ರಾಯದುರ್ಗ ತಾಲೂಕುಗಳಿಗಾಯಿತು. ತರೀಭೂಮಿಗಳಿಗಷ್ಟೇ ಅಲ್ಲದೆ ಖುಷ್ಕಿಭೂಮಿಗಳಿಗೂಕೂಡ ಸಾಲಕೊಡುವ ಸೌಕರ್ಯವನ್ನು ಒದಗಿಸಬೇಕೆಂದು ಕೇಳಿಕೊಳ್ಳಲಾಯಿತು.

— ರ ಜಾ —
ಉಗಾದಿ ಹಬ್ಬದ ನಿಮಿತ್ಯ

೨೭-೩-'೫೦ ನೆಯ 'ನವಭಾರತ' ಸಂಚಿಕೆಯು ಹೊರಡುವುದಿಲ್ಲ. ೩-೪-'೫೦ ಸಂಚಿಕೆ ಹೊರಡುವುದು. —ವ್ಯವಸ್ಥಾಪಕ—

ಹಿಂದೀ ಮಹಾ ವಿದ್ಯಾಲಯ, ಬಳ್ಳಾರಿ,

[1931 ಸ್ಥಾಪಿತ. ಬಳ್ಳಾರಿ ಜಿಲ್ಲಾ ಹಿಂದೀ ಪ್ರೇಮೀಮಂಡಲದಾಶ್ರಯದಲ್ಲಿ, ರಿಜಿಸ್ಟರ್ಡ.]

ಮದ್ರಾಸ್ ಸರ್ಕಾರದಿಂದ ಮಾನ್ಯತೆ ಇದೆ.

ಪ್ರಾರಂಭಿಕ ವರ್ಗಗಳಿಗೆ ಮಾಸಿಕ 3/- ಶುಲ್ಕ — ಉನ್ನತ ವರ್ಗಗಳಿಗೆ ಮಾಸಿಕ 5/- ಶುಲ್ಕ

ವಿಶಾರದ — ಪ್ರವೇಶ ವರ್ಗಗಳಲ್ಲದೆ ಪ್ರಾರಂಭಿಕ ವರ್ಗಗಳಿಗೂ ಪ್ರವೇಶವಿದೆ. ವರ್ಗಗಳಿಗೆ ಸಂಬಂಧಿಸಿದ ವಾಚ್ಯ ಪುಸ್ತಕಗಳು ವಿದ್ಯಾಲಯದಲ್ಲಿ ದೊರೆಯುತ್ತವೆ. ಒಳ್ಳೆಯ ಪುಸ್ತಕಭಂಡಾರವಿದೆ. ಶ್ರೇಷ್ಠ ವಾರಪತ್ರಿಕೆ, ಮಾಸಪತ್ರಿಕೆಗಳು ಲಭ್ಯ. ಇತರ ವಿವರಗಳಿಗೆ ಸ್ವಾಂಪಿಟ್ಟು ಬರೆಯಿರಿ.

ಪ್ರಿನ್ಸಿಪಾಲ್.

NAVA BHARAT BELLARY. (Reg. No. M. 4746)

ನವ ಭಾರತ ಬಳ್ಳಾರಿ.

(Nationalist Weekly)

ಚಂದಾದರಗಳು. Subscription Rates.

ವರ್ಷಕ್ಕೆ 6—0—0	One Year 5—0—0
6 ತಿಂಗಳಿಗೆ 3—0—0	Six months 3—0—0

ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.

Subscription will not be accepted for less than 6 months

20—3—50

To

Sri.....

.....

.....

Pirnted at Krishna Printing Works. Edited& Publishe by T.B. Keshava Rao,

ನಾಡಿಗಾಗಿ

ಬಳ್ಳಾರಿಯ
ಉಜ್ವಲ ರಾಷ್ಟ್ರೀಯ ವಾರಪತ್ರಿ
*
ಉತ್ತಿಷ್ಠತ! ಜಾಗ್ರತ!!
ಪ್ರಾಪ್ಯವರಾನ್ನಿ ಬೋಧತ!!
*
ಸಂಪಾದಕ ಮತ್ತು ಪ್ರಕಾಶಕ:
ಟಿ. ಬಿ. ಕೇಶವರಾವ್

ವರ್ಷ ೧೩ | ಸೋಮವಾರ ೩ ಏಪ್ರೆಲ್ ೧೯೫೦ | ಸಂಚಿಕೆ ೧೦

ಡಾ. ನಾ. ಸು. ಹರ್ಡೀಕರ

ವಜ್ರಮಹೋತ್ಸವ ಸಮಿತಿ, ಹುಬ್ಬಳ್ಳಿ

ಬಿನ್ನಹ

ಭಾರತೀಯ ಸ್ವಯಂಸೇವಕ ಅಂದೋಲನದ ಜನಕರಾದ ಡಾ|| ನಾರಾಯಣ ಸುಬ್ಬರಾವ ಹರ್ಡೀಕರ ಅವರಿಗೆ ಬರುವ ಮೇ ತಿಂಗಳಲ್ಲಿ ೬೦ ವರ್ಷ ತುಂಬುವವು. ಅವರ ನಾಯಕತ್ವದಲ್ಲಿ ರಾಷ್ಟ್ರೀಯ ಮಹಾಕಾರ್ಯದ ಪ್ರಾಥಮಿಕ ಶಿಕ್ಷಣ ಪಡೆದ ಅವರ ಅನೇಕ ಶಿಷ್ಯರು, ಅವರಲ್ಲಿ ಸ್ನೇಹ್ಯಾದರಗಳುಳ್ಳ ಅಸಂಖ್ಯ ಆಪ್ತ ಮಿತ್ರರು ಈ ಅವರ ಜನ್ಮದಿನವನ್ನು ಆ ಮಹಾನಾಯಕನ ಘನತೆಗೊಪ್ಪುವಂತೆ ಸೆರನೇರಿಸಲು ಅತ್ಯರದಾಗಿರುವಲ್ಲಿ ಆಶ್ಚರ್ಯವೇನು?

ಕರ್ನಾಟಕದೊಂದು ಮೂಲೆಯಿಂದ ಬಂದವರಾದರೂ ಡಾ|| ಹರ್ಡೀಕರರು ರಾಷ್ಟ್ರೀಯ ಹೋರಾಟದ ಪ್ರಥಮ ರಂಗದಲ್ಲಿಯೇ ಮುಂದಳವನ್ನು ಪ್ರವೇಶಿಸಿದರು. ಮುಂದೆ ವಿದ್ಯಾಭ್ಯಾಸಕ್ಕೆಂದು ಅವರು ಅಮೇರಿಕೆಗೆ ಹೋದರು. ಆಗ ಆ ದೇಶವು ಭಾರತದ ಮಿತ್ರದೇಶವಾಗಿದ್ದರೂ ಅಲ್ಲಿ ಪಂಜಾಬ ಕೇಸರಿ ಲಾಲಾ ಲಜಪತರಾಯರ ನಾಯಕತ್ವದಲ್ಲಿ ಭಾರತದ ಸದಸವಾಗಿ ಪ್ರಚಾರಕಾರ್ಯವನ್ನು ನಡೆಸಿದ್ದ ಯುವಕರ ತಂಡದಲ್ಲಿ ಸೇರಿ ಅವರ ಕಾರ್ಯವನ್ನು ಬಲಪಡಿಸಿದರು. ಅಮೇರಿಕೆಯಲ್ಲಿ ಹಿಂದೀ ಸ್ವಾತಂತ್ರ್ಯಕ ಸಂದೇಶವನ್ನು ಬೀರಿ ಅಲ್ಲಿ ಒಂದು ಪ್ರಭಾವೀ ಮಿತ್ರವರ್ಗವನ್ನು ನಿರ್ಮಾಣಮಾಡಿದಂಥ ಸಂಜಾಬ ಕೇಸರಿಯ ಅನಾಯಾಯಿಗಳಲ್ಲಿ ಡಾ. ಹರ್ಡೀಕರರು ಅಗ್ರಗಣ್ಯರಾದರು.

ಸಂಯುಕ್ತ ಸಂಸ್ಥಾನದಲ್ಲಿ ಬಹಳ ಕಷ್ಟಪಟ್ಟು ತಾವು ಶಿಕ್ಷಣವನ್ನು ಯಶಸ್ವಿಯಾಗಿ ಮುಗಿಸಿಕೊಂಡು ಡಾ. ಹರ್ಡೀಕರರು ಮಾತೃಭೂಮಿಗೆ ಮರಳಿ ಬಂದರು. ಆಗ ಅವರು ಮನಸ್ಸುಮಾಡಿದ್ದರೆ ತಮ್ಮ ವೈದ್ಯವೃತ್ತಿಯಲ್ಲಿಯೇ ಚೆನ್ನಾಗಿ ಹೆಸರು ಗಳಿಸಬಹುದಾಗಿತ್ತು. ಆದರೆ ವಿಧಾತನ ಬೇರೆಯಾಗಿತ್ತು. ದೇಶದಲ್ಲಿ ಆಗ ಮಹಾತ್ಮಾ ಗಾಂಧಿಯವರ ನೇತೃತ್ವದಲ್ಲಿ ಸಾಗಿದ್ದ ಸ್ವಾತಂತ್ರ್ಯದ ಅಂದೋಲನದಲ್ಲಿ ಅವರು ನುಗ್ಗಿಬಿಟ್ಟರು.

ಅಂದಿನಿಂದ ಇಲ್ಲಿಯವರೆಗೆ ಡಾಕ್ಟರ್ ಹರ್ಡೀಕರರು ರಾಷ್ಟ್ರದ ಸ್ವಾತಂತ್ರ್ಯ ಹೋರಾಟದಲ್ಲಿ ಮಾಡಿದ ಕಾರ್ಯವು ಭಾರತೀಯ ಇತಿಹಾಸವನ್ನು ಪರಿಶೀಲಿಸುವ ಪ್ರತಿಯೊಬ್ಬರಿಗೂ ಗೊತ್ತಿದ್ದ ಮಾತು. ಅಂದಿನ ಸಂಕಟಮಯ ಪರಿಸ್ಥಿತಿಯಲ್ಲಿ ಸ್ವಯಂಸೇವಕ ಘಟನೆಯ ವಿಷಯದಲ್ಲಿ ಕಲೆಹಾಕಿ ಅದಕ್ಕೆ ಮೂರ್ತಸ್ವರೂಪವನ್ನು ತಂದು ಕೊಟ್ಟವರು ಡಾ|| ಹರ್ಡೀಕರರು. ಬಹಳ ಏನು? ಡಾ. ಹರ್ಡೀಕರರಿಂದ ಪ್ರೇರಿತವಾದ ಹಿಂದುಸ್ಥಾನೀ ಸೇವಾದಲವು ನಾಗಪುರ ಧ್ವಜ ಸತ್ಯಾಗ್ರಹ ಸಮಯಕ್ಕೇ ರೂಪ ಗೊಂಡಿತು. ಆಗ ರಾಷ್ಟ್ರದ ಮೂಲೆಮೂಲೆಗಳಿಂದಲೂ ಅಸಂಖ್ಯ ಸ್ವಯಂಸೇವಕರು ತಂಡ ತಂಡವಾಗಿ ಬಂಧನ ಸೆರೆಮನೆಗಳನ್ನು ಸ್ವಾಗತಿಸುತ್ತಿದ್ದರು. ಅದೊಂದು ಮಾದರಿಯ ಸಂಘಟನೆಯಾಗಿ ಹೆಚ್ಚು ಬಲಯುತವಾಗಿ ಸಾಗಬೇಕಿದ್ದರೆ ತಾತ್ಕಾಲಿಕ ಸ್ವಾತಂತ್ರ್ಯದ ಬಗ್ಗೆ ತ್ಯಾಗಮಾಡಲಿಚ್ಛಿಸುವಂಥ ಹಿಂದೀ ಯುವಕರಿಗೆ ಶಿಸ್ತು ಸಂಘಟನೆಗಳ ತರಬೇತಿಯೂ ತುಂಬ ಅವಶ್ಯಕವೆಂದೆನಿಸಿತು. ಅಮೇರಿಕಾ ಯುವಕರ ಶಿಸ್ತಿನ ಕಾರ್ಯಪದ್ಧತಿಯ ಬಗ್ಗೆ ಗೌರವಾಭಿಮಾನಗಳನ್ನು ತಾಳಿದ ಡಾ. ಹರ್ಡೀಕರರು ಆಗ ತಾನೆ ಅಲ್ಲಿಂದ ಮರಳಿ ಬಂದಿದ್ದರು. ಭಾರತೀಯ ಯುವಕ-ಯುವತೀಯರ ಶಿಸ್ತುಪೂರ್ಣವಾದ ಅಂಥದೊಂದು ಸಂಘಟನೆಯನ್ನು ಇಲ್ಲಿಯೂ ನಿರ್ಮಿಸಬೇಕೆಂದು ಅವರಿಗೆ ಕೂಡಲೆ ಹೊಳೆಯಿತು.

ನಾಗಪುರ ಸೆರೆಮನೆಯಿಂದ ಸತ್ಯಾ[illegible]

ಹರ್ಡೀಕರರು ಈ ತಮ್ಮ ವಿಚಾರವನ್ನು ಕಾಂಗ್ರೆಸ್ ನಾಯಕರೊಡನೆ ಚರ್ಚಿಸಿ ಅದರ ಅವಶ್ಯಕತೆಯನ್ನು ಅವರಿಗೆ ಬಿಂಬಿಸಲು ಕೂಡಲೆ ಮುಂದಾದರು. ಸಂಘಟನೆ ಶಿಸ್ತು, ಮತ್ತು ತ್ಯಾಗ ಇವುಗಳಲ್ಲಿ ತರಬೇತಿಹೊಂದಿದ ತರುಣ-ತರುಣಿಯರನ್ನೊಳಗೊಂಡ ಈ ಸಂಸ್ಥೆಯು ಕಾಂಗ್ರೆಸ್ಸಿನ ಒಂದು ಅಂಗವಾಗಬಹುದೆಂದು ಅವರೊಡನೆ ಚರ್ಚಿಸಿದರು. ಇದೇ ಹಿಂದುಸ್ತಾನೀ ಸೇವಾದಲದ ಜನನ. ಮುಂದೆ ಅದು ಕೇವಲ ೫ ವರ್ಷಗಳಲ್ಲಿ ಇಡೀ ದೇಶದಲ್ಲೆಲ್ಲ ಸೇವಾವರದಿಂದ ಕನ್ಯಾಕುಮಾರಿಯ ವರೆಗೆ ಅನೇಕ ಶಾಖೋಪಶಾಖೆಗಳುಳ್ಳ ಒಂದು ಪ್ರಚಂಡ ಸಂಘಟನೆಯಾಗಿಬಿಟ್ಟಿತು. ಸ್ತ್ರೀಯರು ಪುರುಷರು ಹುಡುಗರು ಹುಡುಗಿಯರು ಎಲ್ಲರೂ ಅಲ್ಲಲ್ಲಿ ಹಿಂದುಸ್ಥಾನೀ ಸೇವಾದಲ ಸಂಘಟಕರಿಂದ ತರಬೇತಿ ಹೊಂದುತ್ತಿದ್ದರು. ಮುಂದಿನ ವಿವಿಧ ಕಟುಹೋರಾಟಗಳಲ್ಲಿ ಈ ಸ್ವಯಂಸೇವಕರು ತೋರಿಸಿದ ಶಿಸ್ತು ಹಾಗೂ ಮನೋದಾರ್ಢ್ಯಗಳು ಈ ಅವಿಚ್ಛಿನ್ನ ತರಬೇತಿಯ ಫಲವೆಂದು ನಿಃಸಂದೇಹವಾಗಿ ಹೇಳಬಹುದು.

ದೇಶದ ಸ್ವಾತಂತ್ರ್ಯ ಯುದ್ಧದಲ್ಲಿ ಡಾ|| ಹರ್ಡೀಕರರು ಮತ್ತು ಅವರ ಪರಿಶ್ರಮದಿಂದ ಹುಟ್ಟಿದ ಹಿಂದುಸ್ಥಾನೀ ಸೇವಾದಲದ ಮೂಲಕ ಶಿಕ್ಷಣಪಡೆದ ವೈಶಿಷ್ಟ್ಯಯುಕ್ತವಾದ ಸ್ವಯಂಸೇವಕರ ತಂಡಗಳು, ಮಹಿಸಿದ ಕಾರ್ಯದ ಪರಿಚಯವು ಅದರಲ್ಲಿ ಅವ್ಯಾಹತವಾಗಿ ಭಾಗವಹಿಸಿದವರಿಗೆ ಸ್ಪಷ್ಟವಾಗಿ ಅರಿದೆ. ಅದರಿಂದ ಡಾ|| ಹರ್ಡೀಕರರು ದೇಶಕ್ಕಾಗಿ ಸಲ್ಲಿಸಿದ ಸೇವೆಯ ಬಗ್ಗೆ ಪ್ರಸಿದ್ಧಿಯು ಆಗಿರುವದಿಲ್ಲ. ಅವರ ನಿಷ್ಕಾಮಸೇವೆಯ ಬಗ್ಗೆ ಈ ಮಾತೇ ಬಲವಾದ ಸಾಕ್ಷಿಯಾಗಿದೆ. ಇದೇ ಮಾತು, ಅವರಲ್ಲಿ ಆದರವುಳ್ಳವ

ತುಂಗಭದ್ರಾ ನೀರು ಮುಳುಗು ಗ್ರಾಮಗಳ ಸಂತ್ರಸ್ತರ ಪರಿಷತ್ತು.. ನಾರಾಯಣದೇವರಕೆರೆ.

ದಿ. ೨೦-೩-೫೦ ಶ್ರೀ ಶಂಕರಕುರ್ತಕೋಟಿ ಇವರ ಅಧ್ಯಕ್ಷತೆಯಲ್ಲಿ ಪಾಸಾದ ತೀರ್ಮಾನಗಳು ೧) ನಮ್ಮದೇಶದ ನಾಯಕರಾದ ಶ್ರೀ ಶರತ್‌ಚಂದ್ರಬೋಸರ ಮತ್ತು ನಮ್ಮ ಪ್ರಿಯ ಕಾರ್ಯಕರ್ತರಾದ ಶ್ರೀ ಎಸ್. ಲಕ್ಷ್ಮಣಮೂರ್ತಿ ಇವರ ನಿಧನಬಗ್ಗೆ ಈ ಸಭೆಯು ತನ್ನ ದುಃಖವನ್ನು ಸೂಚಿಸುತ್ತದೆ

೨) ಮದ್ರಾಸ್ ಸರಕಾರವು ಅಲ್ಲಸಲ್ಲದ ಕಾರಣಗಳಿಗಾಗಿ ಅಖಿಲಭಾರತ ಹಿಂದ್ ಕಿಸಾನ್ ಪಂಚಾಯತ ಕಾರ್ಯದರ್ಶಿಗಳಾದ ಸಾಥಿರಾಮನಂದನ ಮಿತ್ರರವರನ್ನು ಬಂಧಿಸಿ ಕೂಡಲೆ ಬಿಡುಗಡೆ ಮಾಡಿದ ಹೇಯಕೃತಿಯನ್ನು ತೀವ್ರವಾಗಿ ಖಂಡಿಸುತ್ತಾ ಗೌರವ ಜವಾಬ್ದಾರಿ ಕಾರ್ಮಿಕ ರೈತ ಮುಖಂಡರುಗಳೊಡನೆ ಚಿನ್ನಾಟವಾಡಿದಂತೆ ಕಾಂಗ್ರೆಸ್ ಸರಕಾರವನ್ನು ಈ ಸಭೆಯು ಎಚ್ಚರಿಸುತ್ತದೆ.

೩) ಕೇಂದ್ರಕಾಂಗ್ರೆಸ್ ಸರಕಾರವು ವಿಶಾಲಭಾವದ ನಿಸ್ಪಳಂಕ ದೇಶಭಕ್ತರ ವ್ಯಕ್ತಿ ಸ್ವಾತಂತ್ರ್ಯಕ್ಕೆ ಕೊಡಲಿಯನ್ನಿಡುವ ಕಾಯಿದೆ (1 ಪ್ರಿವೆಂಟಿವ್‌ಡಿಟೆನ್ಷನ್) ಮಾಡಿರುವ ನಿರಂಕುಶ ಪ್ರಭುತ್ವದ ಘೋರಣೆಯನ್ನು ತೀವ್ರವಾಗಿ ಖಂಡಿಸುತ್ತ ಇಂಥಾ ಕೃತಿಗಳು ಕಾಂಗ್ರೆಸ್ ಸರಕಾರವು ರಚಿಸಿದ ಹೊಸರಾಜ್ಯಘಟನೆಯ ತತ್ವಕ್ಕೆ ಮಸಿಯನ್ನು ಬಳಿದಂತೆ ಇದೆಂದು ಈ ಸಭೆಯು ಎಚ್ಚರಿಸುತ್ತದೆ.

೪) ತುಂಗಭದ್ರಾ ಪ್ರಾಜೆಕ್ಟ್ ಪರಿಣಾಮವಾಗಿ ಮುಳುಗಲಿರುವ ಗ್ರಾಮಗಳ ಪ್ರಜೆಗೆ ಹೊಲಕ್ಕೆ ಹೊಲ, ಮನೆಗೆ ಮನೆ ಪ್ರತಿಫಲಕೊಡದ ಹೊರತು ಆ ಜನರನ್ನು ಸ್ಥಳಾಂತರಿಸಕೂಡದೆಂದು ಖಂಡತುಂಡವಾಗಿ ಸರಕಾರಕ್ಕೆ ತಿಳಿಸುತ್ತಾ ಸರಕಾರವು ಸ್ಥಳಾಂತರಿಸುವ ಜನರ ಪುನರ್ನೆಲಸುವಿಕೆಗೆ ವಸತಿ ಮತ್ತು ಬೇಸಾಯ ಸೌಕರ್ಯಗಳನ್ನು ಅತ್ಯಾಧುನಿಕರೀತಿಯಲ್ಲಿ ಒದಗಿಸಿಕೊಡಬೇಕೆಂದು ತೀವ್ರವಾಗಿ ಒತ್ತಾಯಪಡಿಸುತ್ತಾ ಹೊಲಮನೆಗಳಿಲ್ಲದ ಬೇಸಾಯಗಾರ ಕುಟುಂಬ್ಕೆ ಒಂದಕ್ಕೆ ಕನಿಷ್ಠದ ೧೫ ಎಕರೆ ಖುಷ್ಕಿ ಅಥವಾ ೫ ಎಕರೆ ತರಿಭೂಮಿ ಒದಗಿಸಿಕೊಡತಕ್ಕದ್ದೆಂದೂ, ಸರಕಾರವು ನಿರ್ಣಯಿಸಿದೆ. ತಿಪ್ಪೆರೆ ಭೂಮಿಯ ಯೋಜನೆಯು ಅತ್ಯಲ್ಪವೂ ಅತ್ಯಸ್ತಿಕರವೂ, ಪ್ರಜಾಸ್ವಭುತ್ವ ಎಂಬುದಕ್ಕೆ ಮಸಿಹಚ್ಚುವದರಿಂದ, ಸರಕಾರವು ಈ ಜನರಿಗೆ ಹೊಸ ಜೀವನವನ್ನು ಪ್ರಾರಂಭಿಸಲು ಸಹಕಾರಿ ಪಂಚಾಯತೀ ಧನವನ್ನು ಮತ್ತು ಇತರ ಸಲವತ್ತುಗಳನ್ನು ಒದಗಿಸಿಕೊಡಬೇಕೆಂದು ಈ ಸಭೆಯು ಒತ್ತಾಯಪಡಿಸುತ್ತದೆ.

೫) ತುಂಗಭದ್ರಾ ಯೋಜನೆಯನ್ವಯ ಅಗೆಯುತ್ತಿರುವ ಕೆಳಗಾಲುವೆಯನ್ನು ಈಗಲೇ ಅಗಿದು, ಅನ್ನ ಅನ್ನ ಎಂದು ಗೋಳಿಡುವಾಗ ಸುತ್ತುಮುತ್ತಲಿನ ಭತ್ತ ಕಬ್ಬು ಬೆಳೆಯುವವರನ್ನು ಕೆಡಿಸಿ ಅಪಶ್ಯವೆಂದು ಕಂಡುಬರುವ ಸಮಯದವರೆಗೂ ಮುಂದೂಡಬೇಕೆಂದು ಈ ಸಭೆಯು ಆಗ್ರಹಪಡುತ್ತದೆ.

೬) ಪೂರ್ವಭಾಗದ ಪ್ರದೇಶಗಳಿಗೆ ಸಹಾಯವಾಗುವ ಫಲದಾಯಕವಾಗುವ ಮೇಲ್ಗಾಲುವೆಯ ಯೋಜನೆಯನ್ನು ಕೂಡಲೇ ಕೈಕೊಳ್ಳಬೇಕೆಂದು ಈ ಸಭೆಯು ಬಲವಾಶ್ಯರಿಸುತ್ತಿದೆ.

೭) ತುಂಗಭದ್ರಾ ನೀರನ್ನು ಸಂಬಂಧಿಸಿದ ನಾಲ್ಕು ಪ್ರಾಂತಗಳಿಗೆ ಸಮವಾಗಿ ಹಂಚಿಕೊಡಲು ಕಜ್ಜರ ಸಮಿತಿಯನ್ನು ನಿಯಮಿಸಬೇಕೆಂದು ಕೇಂದ್ರ ಮತ್ತು ಪ್ರಾಂತೀಯ ಸರಕಾರಗಳಿಗೆ ಸೂಚಿಸುತ್ತಾ ಈ ತುಂಗಭದ್ರಾ ಪ್ರಾಜೆಕ್ಟು ಕಟ್ಟುವ ವಿಕೆಯ ಪೂರ್ಣಹೊಣೆಯನ್ನು ಕೇಂದ್ರ ಸರಕಾರವೇ ಹೊತ್ತುಕೊಳ್ಳಬೇಕೆಂದು ಈ ಸಭೆಯು ಸ್ಪಷ್ಟಪಡಿಸುತ್ತಿದೆ.

೮) ರಾಷ್ಟ್ರದ ವಿವಿಧ ನೀರಾವರಿ ಯೋಜನೆಗಳ ಸ್ಥಳ ನಿರ್ದೇಶನ ಕಟ್ಟುವದಿ ಮೊದಲಾದ ಪ್ರಶ್ನೆಗಳನ್ನು ನಿರ್ಧರಿಸಲು ತಕ್ಷ ಕೇಂದ್ರ ನದಿ ಸಮಿತಿ "River Commission" ಒಂದನ್ನು ಕೇಂದ್ರ ಸರಕಾರವು ರಚಿಸಬೇಕೆಂದು ಈ ಸಭೆಯು ಒತ್ತಾಯದ ಅಭಿವ್ಯಾಯ ಪಡುತ್ತದೆ.

೯) ಪ್ರಾಜೆಕ್ಟಿನ ಕೆಲಸಗಾರರಿಗೆ ಸರಿಯಾದ ವಸತಿ ಕೂಲಿ ಆರೋಗ್ಯ ಮೊದಲಾದ ಸಲವತ್ತುಗಳನ್ನು ಒದಗಿಸಿಕೊಡತಕ್ಕದ್ದು ಮೊದಲನೇ ಕರ್ತವ್ಯವೆಂದು ಈ ಸಭೆಯು ಸ್ಪಷ್ಟಪಡಿಸುತ್ತಿದೆ.

೧೦) ಪ್ರಾಂತೀಯತಾಭಾವನೆಯು ಮತ್ತು ಅಧಿಕಾರಿಗಳ ಕೆರುಕಳಸ್ವಭಾವದ ಮೇಲೂ ಒಂದೊಂದು ನಂಬರಿಗೆ ಪರಿಹಾರದ್ರವ್ಯ ಕೊಟ್ಟಿರುವ ವಿಷಮ ಪರಿಸ್ಥಿತಿಯನ್ನು ವಿಚಾರಿಸಲು ಕೂಡಲೇ ಒಂದು ಕಮಿಟಿ ನಿಯಮಿಸಬೇಕೆಂದು ಈ ಸಭೆಯು ಒತ್ತಾಯ ಪಡಿಸುತ್ತಿದೆ.

೧೧) ಸೀಡೆಡ್ ಡಿಸ್ಟ್ರಿಕ್ಟ್‌ಗಳಲ್ಲಿ ಆರ್ಥಿಕ ಅಭಿವೃದ್ಧಿ ಸಂಸ್ಥೆಯಲ್ಲಿ M. L. A ಗಳಲ್ಲದ ಅಧಿಕಾರೇತರರನ್ನು ನಿಯಮಿಸಿಕೊಳ್ಳಬೇಕೆಂದು ಈ ಸಭೆಯು ಸೂಚನೆಯಾಗಿ ಸೂಚಿಸುತ್ತದೆ.

ಶಿವಪ್ರಕಾಶಾನಂದನಾಥ
ಅಧ್ಯಕ್ಷ
ಬಿಲ್ಲೂ ಹಿಂದ್ ಕಿಸಾನ್ ಪಂಚಾಯತ್.

ರಾಮಮನೋಹರ ಲೋಹಿಯಾ

ಸೋಷಲಿಸ್ಟ್ ನಾಯಕ ಡಾ|| ರಾಮಮನೋಹರ ಲೋಹಿಯಾ 9-3-50 ಬೆಳಿಗ್ಗೆ ತುಂಗಭದ್ರಾ ಪ್ರಾಜೆಕ್ಟನ್ನು ಸಂದರ್ಶಿಸಿದರು ಪ್ರಾಜೆಕ್ಟ್ ಕೂಲಿಕಾರ ಯೂನಿಯನ್ ಕಾರ್ಯದರ್ಶಿ ಆರ್. ವಿ. ದೇಶಾಯಿ, ಸಹಾಯಕಾರ್ಯದರ್ಶಿ ಕೆ. ಆರ್. ರಾಜಗೋಪಾಲ್, ಕಿಸಾನ್ ಪಂಚಾಯತ್ ಕಾರ್ಯದರ್ಶಿ ಯಂ. ರಘುಪತಿ, ಪ್ರಾಜೆಕ್ಟಿನ ಸೂಪರಿಂಟೆಂಡಿಂಗ್ ಇಂಜಿನಿಯರ್ ಶ್ರೀ ಎ. ಆರ್. ವೆಂಕಟರಾಮನ್ ಇವರು ಯಿತರ ಅಧಿಕಾರಿಗಳೊಂದಿಗೆ ಸ್ವಾಗತಿಸಿದರು. ಶ್ರೀ. ಎ. ಆರ್. ವೆಂಕಟರಾಮನ್ ಪ್ರಾಜೆಕ್ಟಿನ ಪ್ರಗತಿಯನ್ನು ತಿಳಿಸಿದರು. ನಂತರ ಕೂಲಿಕಾರರ ವಸತಿಯನ್ನು ಸಂದರ್ಶಿಸಿದರು. ಅಲ್ಲಿ ಕೂಲಿಕಾರರು ಯೂನಿಯ್ಕ ಪರವಾಗಿ ಹಾರತುರಾಯಿಗಳನ್ನರ್ಪಿಸಿದರು. ಕೂಲಿಕಾರರ ಕುಂದುಕೊರತೆಗಳ ಬಗ್ಗೆ ವಿಚಾರಿಸಿ ಕೊಪ್ಪಳಕ್ಕೆ ತೆರಳಿದರು. ಡಾ|| ರಾಮಮನೋಹರ ಲೋಹಿಯಾ ಮತ್ತು ಅವರ ಸಂಗಡಿಗರು 20-3-50 ಬೆಳಿಗ್ಗೆ ಹಂಪಿಯನ್ನು ಸಂದರ್ಶಿಸಿದರು ಅಲ್ಲಿ ಅವರನ್ನು ದೇವಾಲಯ ಮರ್ಯಾದೆಗಳೊಂದಿಗೆ ಸ್ವಾಗತಿಸಲಾಯಿತು ದೇವಾತಾ ಪೂಜೆಯನಂತರ ತೀರ್ಥ ಪ್ರಸಾದಗಳನ್ನು ಸ್ವೀಕರಿಸಿದರು ನಂತರ ಹಂಪಿಯ ದಿವಾನರಾದ ಶ್ರೀ ಶಂಕರಯ್ಯನವರು ಅಲ್ಪೋಹಾರವನ್ನು ಕೊಟ್ಟರು. ಇತರ ಐತಿಹಾಸಿಕ ಸ್ಥಳಗಳನ್ನು ನೋಡಿಕೊಂಡು ಹೊಸಪೇಟೆಗೆ ಮರಳಿದರು.

ಮಾ|| ರಾ|| ಹೊಸಪೇಟೆ ದಿ. ಮು. ಕೋರ್ಟಿನಲ್ಲಿ So 536/49.

ಸೇಟ್ ಪರಶುರಾಂ ವಕ್ಕಾವರ್‌ಮಲ್ ಫರ್ಮ್, ಸಾ. ಕೊಟ್ಟೂರು ವಾದಿ

Vs

1 ಜಂಪಯ್ಯಗಳ ಹನುಮಪ್ಪ ಪ್ರತಿವಾದಿಗಳು
2 ನಾಯತರ ಮಲಿಯಪ್ಪ

ಮೆಮೋರ್ಯಾಂಡಂ ಆಫ್ ಅಕೌಂಟ್ ಮೇಲೆ ಪ್ರತಿವಾದಿಗಳಿಂದ ರು. 72-5-೦ ಮುಂದಿನ ಬಡ್ಡಿ, ಕೋರ್ಟು ಖರ್ಚು ವಸೂಲು ಮಾಡಲಿಕ್ಕಾಗಿ ವಾದಿದಾಖಲು ಮಾಡಿದೆ ಈದಾವೆ ವಾಯಿದೆ ತಾ|| 17-4-50 ಇದೆ ಸದ್ರಿ ದಿನ 11 ಗಂಟೆಗೆ ಪ್ರತಿವಾದಿಗಳು ಖುದ್ದಾಗಲೀ ವಕೀಲರ ದ್ವಾರಾ ಆಗಲಿ ಹಾಜರಾಗದಿದ್ದಲ್ಲಿ, ಅವರ ಮೇಲೆ ಎಕ್ಸ್‌ಪಾರ್ಟಿ ಡಿಕ್ರಿ ಮಾಡಿಕೊಳ್ಳಲಾಗುತ್ತದೆ.

ಹೊಸಪೇಟೆ
23-3-50

ಕಟ್ಟಿ ಕೃಷ್ಣರಾವ್
ಕಟ್ಟಿ ರಂಗರಾವ್
ವಾದಿ ವಕೀಲರು.

(೧ನೇ ಪುಟದಿಂದ)

ತಿಲ್ಲರೂ ಮುಂದೆ ಬಂದು ತಮ್ಮ ಪ್ರೀತಿ ಕೃತಜ್ಞತೆ ಮತ್ತು ಪೂಜ್ಯಭಾವನೆಗಳನ್ನು ನಮ್ಮದೇಶದ ಉಚ್ಚಕೋಟಿಯ ವ್ಯಕ್ತಿಗೆ ಸಲ್ಲಿಸುವಂತೆ ಪ್ರಚೋದಿಸುತ್ತದೆ.

ಆದುದರಿಂದ ಮುಂಬರುವ ಮೇ ತಿಂಗಳ ೭ನೆಯ ತಾರೀಖಿಗೆ ಅವರ ೭೧ನೆಯ ಜನ್ಮದಿನವನ್ನು ನಮ್ಮ ರಾಷ್ಟ್ರೀಯ ಮುಖಂಡರ ಘನತೆಗೊಪ್ಪುವ ತೆರದಲ್ಲಿ ಆಚರಿಸಬೇಕೆಂದು ಯೋಚಿಸಲಾಗಿದೆ ಅಂದು ಇಡೀ ದೇಶದಲ್ಲಿ ಸಭೆಗಳು, ಧ್ವಜವಂದನೆ, ಮೆರವಣಿಗೆಗಳು ಉಚಿತರೀತಿಯಲ್ಲಿ ಸಾಗಬೇಕು. ಮುಖ್ಯ ಸಮಾರಂಭವು ಮುಂಬಯಿಯಲ್ಲಿಯೇ ಜರುಗುವುದಿದ್ದು ಆಗ ಡಾಕ್ಟರ್ ಹರ್ಡೀಕರರಿಗೆ ಒಂದು ಗೌರವ ನಿಧಿಯನ್ನು ಹಾಗೂ ಅಭಿನಂದನ ಗ್ರಂಥವನ್ನು ಅರ್ಪಿಸುವದು ಗೊತ್ತಾಗಿದೆ.

ಡಾ॥ ಹರ್ಡೀಕರರ ಸಮಾರಂಭವು ಹುಬ್ಬಳ್ಳಿಯಲ್ಲಿಯೂ ಆಗುವದಿದ್ದು ಅದಕ್ಕೆ ಸಂಬಂಧಪಟ್ಟ ಹಣವು ಅಲ್ಲಿಯೇ ತೀರಿಸಲ್ಪಡುವುದು. ಅದಕ್ಕಾಗಿ ಹಣವನ್ನು ಕಳಿಸುವವರು "ಡಾ. ಹರ್ಡೀಕರ ವಜ್ರಮಹೋತ್ಸವ ಸಮಿತಿ ಜಯ ಹಿಂದ್ ಕಾರ್ಯಾಲಯ ಕಿಲ್ಲೆ, ಹುಬ್ಬಳ್ಳಿ" ಈ ವಿಳಾಸಕ್ಕೆ ಕಳಿಸುವ ಕೃಪೆ ಮಾಡಬೇಕು. ಹಣವು ಸೊಡ್ಡದಿರಲಿ ಸಣ್ಣದಿರಲಿ ಅತ್ಯಾದರದಿಂದ ಸ್ವೀಕರಿಸಲ್ಪಡುವುದು. ಮತ್ತು ಹಣವನ್ನು ತೀರಿಸಲು ಕೆಲವೇ ಅಭಿಮಾನಿಜನರು ಪಾವತಿ ಪುಸ್ತಕಗಳೊಡನೆ ಹಣಕೂಡಿಸಲು ಬರುವರು. ಅವರು ಬಂದಾಗ್ಗೆ ಸರ್ವರೂ ಸಹಾಯಮಾಡಬೇಕಾಗಿ ವಿನ್ನಹ.

ಗುರುನಾಥಪ್ಪ ಬೀಳವ್ವ ಹುಬ್ಬಳ್ಳಿ.
ಅಧ್ಯಕ್ಷ
ಡಾ. ಹ. ವ. ಮ. ಸಮಿತಿ
ಕರ್ನಾಟಕ ಸ್ಯಾಂತ
ತಾರೀಖು ೨೪-೨-೫೦ ಹುಬ್ಬಳ್ಳಿ

ಸಹಕಾರವೇ ಮುಖ್ಯವಾಗಿದೆ

ರಾಜಕೀಯ ಸ್ವಾತಂತ್ರ್ಯವೆಂದರೆ ಇನ್ನು ಮುಂದೆ ರಚನಾತ್ಮಕ ಕಾರ್ಯ ನಿರ್ವಹಿಸಲಿಕ್ಕಿಲ್ಲ ವೆಂದರ್ಥವಲ್ಲ ನಿಜಾಂತವೆಂದರೆ ಹಿಂದುಸ್ಥಾನವು ಸುಲಭವಾಗಿ ರಾಜಕೀಯ ಸ್ವಾತಂತ್ರ್ಯವನ್ನು ಸಂಪಾದಿಸಿಕೊಂಡಿದೆ. ಅದುದರಿಂದಲೇ ಜನರು ಅದಕ್ಕೆ ಅಷ್ಟು ಮಹತ್ವವನ್ನೀಯುವದಿಲ್ಲ ಅವರು ಯಾವಾಗಲೂ ಸ್ವಾತಂತ್ರ್ಯವು ನಮಗೇನು ತಂದಿದೆಯೆಂದು ಕೇಳುತ್ತಾರೆ ಒಂದುಮಟ್ಟಿಗೆ ಅವರು ಹೇಳುವುದರಲ್ಲಿ ನಿಜಾಂಶವಿರಬಹುದು. "ನಿಜವಾದ ಸ್ವರಾಜ್ಯ" ವು ನಮಗೆ ಇನ್ನೂ ದೊರಕಲಿಲ್ಲ ಆಹಾರ, ಬಟ್ಟೆ ಹಾಗೂ ಇತರ ಜೀವನಾವಶ್ಯಕ ವಸ್ತುಗಳಮಟ್ಟಿಗೆ ಹಿಂದುಸ್ಥಾನವನ್ನು ಸ್ವಯಂಪೂರ್ಣಗೊಳಿಸುವುದರಿಂದಲೇ ಅದನ್ನು ಸಾಧಿಸಿಕೊಳ್ಳಿಬಹುದು. ಇಂದು ಆಹಾರ ಧಾನ್ಯಗಳಿಗೆ ಸಹ ಹಿಂದುಸ್ಥಾನವು ಹೊರಗಿನವರ ಮೇಲೆ ಹೊಂದಿಕೊಂಡಿರಬೇಕಾಗಿದೆ. ಇದರಿಂದ ದೇಶದ ಸಂಪತ್ತು ವ್ಯಯವಾಗುತ್ತದೆ. ಆದುದರಿಂದ ಜನರು ಅವರ ಸ್ವಾರ್ಥಹಿತಗಳನ್ನು ತ್ಯಜಿಸಿ ಗಾಂಧೀಜೀಯವರು ತೋರಿಸಿದ ಹಾದಿಯನ್ನು ಅನುಸರಿಸಬೇಕು. ಆಗಲೇ ಲಂಚಗುಳಿತನವನ್ನು ನಿಯಂತ್ರಣ ಜಾರಿಗೆ ತಂದುದರಿಂದುಂಟಾದ ದುರಾಚಾರಗಳನ್ನು ಎದುರಿಸುವದಕ್ಕೂ ಸಾಧ್ಯವಾಗುವುದು. ಇವುಗಳಿಗೆಲ್ಲಾ ಸರಕಾರವನ್ನು ಹಳಿಯುತ್ತಿದ್ದರೆ, ಹಿಂದುಸ್ಥಾನದ ಗೌರವವನ್ನು ಪ್ರಪಂಚದ ಎದುರಿನಲ್ಲಿ ಕುಗ್ಗಿಸಿದಂತಾಗುವದಲ್ಲದೆ ಬೇರೇನೂ ಪ್ರಯೋಜನವಿಲ್ಲ ಜನತೆಯು ಕಷ್ಟಪಟ್ಟು ಕೆಲಸಮಾಡುವುದೂ ಸರಕಾರದೊಡನೆ ಸಹಕರಿಸುವುದೂ ಮುಖ್ಯವಾಗಿದೆ.

—ವಲ್ಲಭಭಾಯಿ ಪಟೇಲ್

ವಿಕೃತಿನಾಮ ಸಂವತ್ಸರದ ಫಲಾಫಲಗಳು

ಈ ವರ್ಷ ರಾಜ್ಯಸಸ್ಯನೀರೆಸಾಧಿಪತ್ನಿಕ್ಕೆ ಸೂರ್ಯನಾಗಿ, ಮಂತ್ರಿಸೋನಾದಿ ಪತ್ಯಕ್ಕೆ ಗುರುವಾಗಿ, ಸೈನ್ಯಾರ್ಧಿಪತಿ ಬುಧನಾಗಿ, ಧಾನ್ಯಾಧಿಪತಿ ಶುಕ್ರನಾಗಿ ರಸಾಧಿಪತಿ ಕುಜನಾಗಿ ಯಮನು ಪಶುನಾಯಕನಾಗಿ ಸ್ಥಾನರಕ್ಷಕನು ಶ್ರೀಕೃಷ್ಣನಾಗಿರುವಕಾರಣ ವ್ರಜೆಗಳು ವ್ಯಾರಂಭದಲ್ಲಿ ಅಂತಃಕಲಹಗಳಿಂದ ಬಾಧೆಪಟ್ಟರೂ ಕ್ರಮೇಣ ದೇಶದಲ್ಲಿ ಶಾಂತತೆ ವ್ಯಾಪ್ತವಾಗುವುದು. ಪಶುಗಳು ರೋಗಿಷ್ಠವಾಗುವುದಾದರೂ ಶೀಘ್ರದಲ್ಲಿ ಉತ್ತಮಗೊಳ್ಳುವವು.

ಅಶ್ವಿನಿ ಆರ್ದ್ರಾಪ್ರವೇಶ ಚಂದ್ರಚಾರ, ಗುರುಚಾರ ಫಲಗಳು ಶುಭದಾಯಕಗಳಿರುವದರಿಂದ ದೇಶವು ಸುಭಿಕ್ಷವಾಗಿರುವುದು. ಗುರು-ಶನಿ, ಸಮಸಪ್ತಕದಿಂದ ಕುಜ-ರಾಹು ಸಮಾಯುಕ್ತಕಾಲ ಚಾತುರ್ಗ್ರಹ ಪಂಚಗ್ರಹವಷ್ಟ ಗ್ರಹ ಕೂಟಗಳಿಂದ ಕ್ರೂರವಾದ ಶಾಸನದ ದುರ್ಯೋಗವು ಅಧಿಕವಾಗಿ ದೇಶದಲ್ಲಿ ಭೀತಿ ವೈರಿನ ನಾಶವಾಗುವ ಸಂಭವವಿದೆ. ರೋಗಾದ್ಯುಪದ್ರವಗಳು ಅಗಾಗ್ಗೆ ಸಂಭವಿಸುತ್ತವೆ.

ವೈಶಾಖದಲ್ಲಿ ಅಲ್ಪ ಸ್ವಲ್ಪ ಮಳೆಯು ಕೆಲವೆಡೆಗಳಲ್ಲಾಗುತ್ತದೆ. ಜ್ಯೇಷ್ಠದಲ್ಲಿ ಅನುಕೂಲವೃಷ್ಟಿ ಆಷಾಢದಲ್ಲಿ ಬಂಜೆವೃಷ್ಟಿ ಶ್ರಾವಣದಲ್ಲಿ ಸಸ್ಯಾನುಕೂಲವೃಷ್ಟಿ ಭಾದ್ರಪದ ಆಶ್ವೀಜಗಳಲ್ಲಿ ಸಾಮಾನ್ಯವೃಷ್ಟಿ ಕಾರ್ತೀಕದಲ್ಲಿ ಸುವೃಷ್ಟಿ ಮಾರ್ಗಶಿರದಲ್ಲಿ ಶೀತಾತಿಶಯ ಸೃಷ್ಟಿಯಾಗುವ ಯೋಗವಿದೆ.

ಭಾದ್ರಪದ ಬಹುಳ ೦ ದಿಂದ ಮಾರ್ಗಶಿರ ಶುಕ್ಲ ೧೫ ರ ವರೆಗೆ ವೃನಃ ಮಾಘ ಬಹುಳ ದಿಂದ ಫಾಲ್ಗುಣ ಬಹುಳ ೭ ರ ವರೆವಿಗೆ ಗುರು ಮೌಢ್ಯ ವಿರುತ್ತದೆ. ವೈಶಾಖ ಶುಕ್ಲ ೧೫ ಪೂರ್ಣ ಚಂದ್ರಗ್ರಹಣವಿದೆ. ವೃಶ್ಚಿಕ ಬಹುಳ ೦ ಮಹೋದಯ ಪುಣ್ಯಕಾಲ ಫಾಲ್ಗುಣ ಬಹುಳ ೩ ಭಾನುವಾರ ತುಂಗಭದ್ರಾನದಿಗೆ ಪುಷ್ಕರ ಪ್ರವೇಶವಾಗುವುದು. ಈ ವರ್ಷ ಅಕ್ಕಿ, ಜೋಳ, ನವಣೆ ಮೊದಲಾದ ಬಿಳಿ ಧಾನ್ಯಗಳು ಕಡ್ಲೆ, ಹುರುಳಿ, ರಾಗಿ, ನೆಲಗಡಲೆ, ವಗೈರೆ ಕೆಂಪುಧಾನ್ಯಗಳು ಚೆನ್ನಾಗಿ ಬೆಳೆಯುತ್ತವೆ. ಬಂಗಾರ-ಬೆಳ್ಳಿ ರತ್ನಗಳು ಅರಿಸಿನ ಹತ್ತಿಗಳಿಗೆ ಧರಗಳು ಬೆಳೆಯುವವು. ರಸವಸ್ತುಗಳಾದ ಎಣ್ಣೆ, ಎಳ್ಳು, ವಗೈರೆ ವ್ಯಾರಂಭದಲ್ಲಿ ಸುಲಭದರವಿದ್ದು ಏರುವವು.

ಎರಡುಭಾಗ ಮಳೆ, ನಾಲ್ಕು ಭಾಗಗಳಿಂದ ಪೂರ್ವಾಪರಸಸ್ಯಗಳು ಸಮೃದ್ಧಿಯಾಗಿ ಬೆಳೆಯುತ್ತವೆ. ಬೆಳೆಯು ೦-೧೦-೦ ಗಿಂತ ಹೆಚ್ಚಾಗಿರುತ್ತೆ.

—ಸರ್ವೇಷಾಂಸನ್ಮಂಗಳಾನುಭವಂತು

ಬಳ್ಳಾರಿ ಸ್ಮಾಲ್‌ಕಾಸ್ ಕೋರ್ಟಿನಲ್ಲಿ
S. C. 508/49 E P. 25/50
ಸರೋಜಮ್ಮ ——— ದಿಕ್ರಿದಾರಳು
ಡಾಕ್ಟರು ನಿರಂಜ್ ಕೊತ್ವಾಲ್‌ಸಿಂಗ್ ತೀರ್ಪು ಋಣಸ್ಥರು
ಪ್ರತಿವಾದಿ ತೀರ್ಪು ಋಣಸ್ಥರಿಗೆ ತಿಳಿಸುವದೇನೆಂದರೆ ತೀರ್ಪಿಗೆ ಮುಂಚೆ ಜಪ್ತಿ ಆದ ನಿನ್ನ ಚರಾಸ್ತಿಗಳ ಯಾಲಾಂ ಪರ್ತುಗಳನ್ನು ನಿರ್ಣಯಿಸುವದಕ್ಕಾಗಿ 6-4-50 ವಾಯಿದಾ ಇರುತ್ತದೆ. ನಿನಗೆ ಏನಾದರು ತಕರಾರು ಇದ್ದಲ್ಲಿ ಆ ತೇದಿಯಲ್ಲು 11 ಘಂಟೆ (ಹಗಲು) ಖುದ್ದು ಆಗಲಿ ವಕೀಲು ದ್ವಾರಾ ಆಗಲಿ ತಿಳಿಸಬೇಕು ತಪ್ಪಿದ್ದಲ್ಲಿ ನಿನ್ನ ಪರೋಕ್ಷದಲ್ಲಿ ನಿರ್ಣಯಿಸಲ್ಪಡುತ್ತದೆ.
Bellary 18-3-50 | P. Venkobacharya M,A,L.L B. Advocate for Decree/Holder

ನವಭಾರತಕ್ಕೆ
ಚಂದಾದಾರರಾಗಿರಿ.

ಹೊಸಪೇಟೆ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S 407/49

ಶ್ರೀ ವೆಂಕಟರಮಣ ಸ್ವಾಮಿ ಪರ್ಮನೆಂಟು ಭಂಡಾರ ಲಿಮಿಟೆಡ್ By its Secretary ಟಿ. ಶ್ರೀನಿವಾಸಾಮೂರ್ತ್ಯಾಚಾರು ಹರಪನಹಳ್ಳಿ | ವಾದಿ

Vs

ಜೋಯ್ಸ್ ಶಾಂ ಭಟ್ಟ | ಪ್ರತಿವಾದಿ
ವಗೈರಾ | ಗಳು

ಮೇಲಿನ ನಂಬರಿನಲ್ಲಿ ಕಾಣಿಸಿದ ವಾದಿ ನಿಮ್ಮ ಮೇಲು ಮತ್ತು ಇತರರಮೇಲೂ ರೂ. 665-3-0 ಗೆ ದಾವಾಮಾಡಿರುತ್ತಾನೆ ಸದರಿ ದಾವಾ 21-4-50 ಕ್ಕೆ ವಾಯಿದೆ ಇರುತ್ತದೆ. ನಿನಗೆ ಆಕ್ಷೇಪಣೆ ಇದ್ದಲ್ಲಿ ಸದರಿ ತೀದಿಗೆ ಖುದ್ದಾಗಲಿ ವಕೀಲರ ಮೂಲಕವಾಗಲಿ ಹಾಜರಾಗಬೇಕು ಇಲ್ಲವಾದರೆ ಎಕ್ಸಪಾರ್ಟಿ ಡಿಕ್ರಿ ಆಗುವುದು.

ಪೆಜ್. ಗೋವಿಂದಾಚಾರು,
ವಕೀಲರು

ತಾಲ್ಲೂಕ ಜನಾಂಗ ವಿದ್ಯಾಭಿವೃದ್ಧಿ

ತಾಲ್ಲೂಕ, ಬೇಡ, ಬೋಯ, ವಗೈರೆ ನಾಮಾಂಕಿತದಿಂದ ಕರೆಯುತ್ತಿದ್ದ ಸಮಾಜವನ್ನು ಮದ್ರಾಸ್ ಸರಕಾರವು ಹಿಂದುಳಿದ ವರ್ಗದವೆಂದು ಒಪ್ಪಿಕೊಂಡು ಅವರಿಗೆ ಶಾಲಾರುಲ್ಕ ನುತ್ತು ಇತರ ವಿಷಯಗಳಲ್ಲಿ ಸೌಲಭ್ಯವನ್ನು ಕೋರಿಸಲು ಆಜ್ಞೆ ಮಾಡಿರುತ್ತದೆ.

ಹೊಸಪೇಟೆ ಫಿರ್ಕಾದಲ್ಲಿ ಇವರಿಗಾಗಿ ಕೆಲಶಾಲೆಗಳನ್ನು ಏಕೆ ತೆಗೆಯಬಾರದೆಂದು ಜಿಲ್ಲಾ ವೆಲ್ಫೇರ್ ಡಿಪಾರ್ಟ್‌ಮೆಂಟಿನವರು ಇದಕ್ಕೆ ಗಮನ ಕೊಡಬೇಕೆಂದೂ ಶ್ರೀ ಜೋರಯ್ಯನವರು ಸೂಚಿಸಿರುತ್ತಾರೆ. ಉಪಾಧ್ಯಾಯರೋಗ್ಯತೆಯನ್ನುಳ್ಳವರ ಅಭಾವದಿಂದ ಅನೇಕ ಜಿಲ್ಲಾ ಬೋರ್ಡು ಮತ್ತು ಲೇಬರ್ ಶಾಲೆಗಳು ಅನೇಕ ಶಾಲೆಗಳಲ್ಲಿ III ಫಾರಂವರೆಗೆ ಓದಿದವರು ಕೆಲಸಮಾಡುತ್ತಿದ್ದಾರೆ. ಸಾಕಷ್ಟು ಸಂಖ್ಯೆಯಲ್ಲಿ ಟ್ರೈನಿಂಗಾಗಿ ಉಪಾಧ್ಯಾಯರು ದೊರೆಯುವವರೆಗೂ ಇದೇ ಪರಿಸ್ಥಿತಿಯೇ ಮುಂದುವರಿಯುವುದು ಶಾಲಾಯೋಗ್ಯವಯಸ್ಸಿನ ಬಾಲಕರು ಎಲ್ಲೆಲ್ಲಿರುವರೋ ಅಂಥಾ ಗ್ರಾಮಗಳಲ್ಲಿ ಲ್ಲಾ ಶಾಲೆಯನ್ನು ಸ್ಥಾಪನೆಮಾಡುವುದರಲ್ಲಿ ಯಾವ ಅಭ್ಯಂತರವೂ ಇಲ್ಲ. ಜಿಲ್ಲಾ ಬೋರ್ಡಿನವರೂ ಬೇಡವೆಲ್ಫೇರ ಡಿಪಾರ್ಟುಮೆಂಟು ಬೇಡ, ಗ್ರಾಂಟುಶಾಲೆಯನ್ನು ತೆರೆಯಬಹುದು. ತಿಂಗಳಿಗೆ ಗ್ರಾಂಟು ಕೊಡುತ್ತಿರುವರು ಅಲ್ಲದೆ ಪ್ರಾಥಮಿಕ ವಿದ್ಯಾಭ್ಯಾಯರ ವೇತನದಲ್ಲಿ ವಿವಿಧ ಶಾಲೆಗಳಲ್ಲಿ ಹೆಚ್ಚು ವ್ಯತ್ಯಾಸವಿಲ್ಲ. ಆದಕಾರಣ ಯೋಗ್ಯತೆ ಇರುವ ಉಪಾಧ್ಯಾಯರು ಇಂಥ ಕಡೆಯಲ್ಲಿ ನಿರುದ್ಯೋಗಿಗಳಾಗಿ ಕೂತಿರುವರೆಂಬುದನ್ನು ಯಾವ ಮಹನೀಯರಾದರೂ ನಮಗೆ ತಿಳಿಸಿದರೆ ಅವರಿಗನುಕೂಲವಾದ ಹಳ್ಳಿಯಲ್ಲಿ ಶಾಲೆಯನ್ನಾರಂಭಿಸುವ ವ್ಯವಸ್ಥೆ ಮಾಡಬಹುದು.

— ಸಂಪಾದಕ

ಪಾಕಿಸ್ತಾನ ಸರಕಾರವು ಒಪ್ಪಿಕೊಂಡಿತು

ಹೈದರಾಬಾದಿನ ಹಿಂದಿನ ಪ್ರಧಾನರಾಗಿದ್ದ ಮೀರ್ ಲಾಯಕ್ ಅಲಿಯು ಕುಟುಂಬಸಮೇತ ಕರಾಚಿಯಲ್ಲಿರುವನೆಂದು ಒಪ್ಪಿಕೊಂಡಿತು. ಆ ಪ್ರಕಾರ ರೇಡಿಯೋದಲ್ಲಿ ಕೂಡ ಸಾರಲಾಯಿತು.

ಹಿಂದೀ ಮಹಾ ವಿದ್ಯಾಲಯ, ಬಳ್ಳಾರಿ,

[1931 ಸ್ಥಾಪಿತ. ಬಳ್ಳಾರಿ ಜಿಲ್ಲಾ ಒಂದೇ ಪ್ರೇಮಿಮಂಡಲದಾಶ್ರಯದಲ್ಲಿ, ರಿಜಿಸ್ಟರ್ಡ್.]

ಮದ್ರಾಸ್ ಸರ್ಕಾರದಿಂದ ಮಾನ್ಯತೆ ಇದೆ.

ಪ್ರಾರಂಭಿಕ ವರ್ಗಗಳಿಗೆ ಮಾಸಿಕ 3/- ಶುಲ್ಕ — ಉನ್ನತ ವರ್ಗಗಳಿಗೆ ಮಾಸಿಕ 5/- ಶುಲ್ಕ

ವಾರ್ಡಲಾ ಹೈಸ್ಕೂಲ್ ಕಟ್ಟಡದಲ್ಲಿ ಪ್ರಾತಃಕಾಲ-ಸಾಯಂಕಾಲ ಹಿಂದೀ ಕಾಲೇಜ್‌ದ ವರ್ಗಗಳು ನಡೆಯುತ್ತಿವೆ. ವಿಶಾರದ — ಪ್ರಚಾರಕ ವರ್ಗಗಳಲ್ಲದೆ ಪ್ರಾರಂಭಿಕ ವರ್ಗಗಳಿಗೂ ಪ್ರವೇಶವಿದೆ. ವರ್ಗಗಳಿಗೆ ಸಂಬಂಧಿಸಿದ ಪಾಠದ ಪುಸ್ತಕಗಳು ವಿದ್ಯಾಲಯದಲ್ಲಿ ದೊರೆಯುತ್ತವೆ ಒಳ್ಳೆಯ ಪುಸ್ತಕಭಂಡಾರವಿದೆ. ಶ್ರೇಷ್ಠ ವಾರಪತ್ರಿಕೆ, ಮಾಸಪತ್ರಿಕೆಗಳು ಲಭ್ಯ. ಇತರ ವಿವರಗಳಿಗೆ ಸ್ವಾಂಸಿಟ್ಟು ಬರೆಯಿರಿ.

ಪ್ರಿನ್ಸಿಪಾಲ್.

NAVA BHARAT BELLARY. (Reg. No. M. 4746)

ನವಭಾರತ ಬಳ್ಳಾರಿ. 3—4—50

(Nationalist Weekly)

ಚಂದಾದರಗಳು.	Subscription Rates.
ವರ್ಷಕ್ಕೆ 5—0—0	One Year 5—0—0
6 ತಿಂಗಳಿಗೆ 3—0—0	Six months 3—0—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.	Subscription will not be accepted for less than 6 months

To

Sri..... .....

.....

....

Printed at Krishna Printing Works, Edited & Published by T. B. Keshava Rao.

ಕರ್ಮವೀರ

ಬಳ್ಳಾರಿಯ
ಉಜ್ವಲ ರಾಷ್ಟ್ರೀಯ ವಾರಪತ್ರಿಕೆ

ಉತ್ತಿಷ್ಠತ! ಜಾಗೃತ!!
ಪ್ರಾಪ್ಯವರಾನ್ನಿ ಬೋಧತ!!!

ಸಂಪಾದಕ ಮತ್ತು ಪ್ರಕಾಶಕರು:-
ಟಿ. ಬಿ. ಕೇಶವರಾವು

ವರ್ಷ ೧೩ | ಸೋಮವಾರ ೧೦ ಏಪ್ರಿಲ್ ೧೯೩೦ | ಸಂಚಿಕೆ ೧೩

ಜಗತ್ತಿನ ಶಾಂತಿ

ರಷ್ಯಾ ಅಮೇರಿಕಾಪ ಯೋಜೆ

ಜಗತ್ತಿನಲ್ಲಿ ಎಲ್ಲಿ ನೋಡಿದರೂ ನೊಂದವರೇ ಗೊಂದಲ. ಎಲ್ಲಿಯೂ ಬಿಗಿಯಿಲ್ಲ ಯಾರ ಹೆದರಿಕೆಯೂ ಯಾರಿಗೂ ಉಳಿದಿಲ್ಲ. ಇಂತಹ ಅನಿಶ್ಚಿತ ಮತ್ತು ಅನಿಯಂತ್ರಿತ ವರಿಸ್ಥಿತಿಯಲ್ಲಿ ಸರ್ವರೂ ಬಾಯಿಯಲ್ಲಿ ಅಕ್ಕೀಕಾಳು ಹಾಕಿಕೊಂಡು ಕುಳಿತಿರುವಂತೆ ಆಗಿದ್ದರೆ ಅದೇನೂ ಆಶ್ಚರ್ಯಕರ ಮಾತಾಗಲಾರದು.

ಸೈನ್ಯಬಲದಿಂದ, ಸಾಂಪತ್ತಿಕ ದೃಷ್ಟಿಯಿಂದ ಇಂದು ಜಗತ್ತಿನ ಮೇಲಿನ ನಿಯಂತ್ರಣದ ಅಧಿಕಾರವನ್ನು ಅಮೇರಿಕ ಮತ್ತು ರಶಿಯಾಗಳು ಇಟ್ಟುಕೊಂಡು ಕುಳಿತಿವೆ. ಅಮೇರಿಕವು ಇಂದು ಯಾರ ಬಗ್ಗೆ ಆಗಿದೆ, ಮತ್ತು ರಶಿಯಾದೇಶವು ಇಂದು ಯಾರ ಬಗ್ಗೆಯಾದರೂ ಅಸ್ಪೃಶ್ಯರಂತೆ ಮಾಡುತ್ತಿದ್ದರೆ ಅದು ಅಮೇರಿಕೆಯ ವಿಷಯದಲ್ಲಿ ಎಂದೂ ನಿಃಸಂಶಯವಾಗಿ ಹೇಳಬಹುದು. ಈ ಎರಡೂ ದೇಶಗಳು ತಮ್ಮ ತಮ್ಮ ಸೈರಕ್ಷಣೆಯ ನಿಲುವಾಗಿ ತಪಾವಾಗಿ ಹೆಣಗುತ್ತಿವೆ. ಅವು ಏತಕ್ಕಾಗಿ ಹೇಗೆಲ್ಲ ಯಾವುದೇ ತಕ್ಷ ಮತ್ತು ಪೂರ್ವಗಳ ಬಗ್ಗೆ ನಿಷೇಧಗಳನ್ನು ಇಟ್ಟುಕೊಳ್ಳದೆ ನುಂದರಿಯುತ್ತಿವೆ.

ಈ ವರಿಸ್ಥಿತಿಯ ನೂಲಕ ಉಳಿದೆಲ್ಲ ದೇಶಗಳು ತಮ್ಮ ತಮ್ಮ ಅಲೋಚನೆಯನ್ನು ಇಟ್ಟುಕೊಳ್ಳತ್ತ ಮತ್ತು ಈ ಪ್ರಬಲ ರಾಷ್ಟ್ರಗಳಲ್ಲಿಯ ತಕ್ಕಾಟದ ನೂಲಕ ತಮ್ಮ ಹಿತ ಸಂಬಂಧಗಳಿಗೆ ಬಾಧೆ ಬರುವಾಗದಂತೆ ನೋಡಿಕೊಳ್ಳಲು ಮುಂದಾಗಿವೆ. ಇದರಿಂದ ಅಧವಾ ಅನೇಕ ವಿಧವಾಗಿ ಈ ಪಕ್ಷಗಳಲ್ಲಿ ಬಾವ ಹೊಂದಿಕೆ ತಂದುಕೊಂಡಿವೆ. ಮತ್ತು ಸೇರಿಕೊಳ್ಳುತ್ತಿವೆ. ಕೆಲವು ಒಂದೇ ಕೈಬೆರಳುಗಳಿಂದ ಎಣಿಸಲು ಕೂಡ ಸಾಕಾಗದಷ್ಟು ರಾಷ್ಟ್ರಗಳು, ಈ ತಿಕ್ಕಾಟದಲ್ಲಿ ಯಾವುದೇ ರೀತಿಯಿಂದ ಮನಸ್ಸು ಮಾಡದೆ ಅಲಿಪ್ತವಾಗಿ ಉಳಿಯಲು ಯತ್ನಿಸುತ್ತವೆ. ಅದರಿಂದ ಈ ಅಲಿಪ್ತ ರಾಷ್ಟ್ರಗಳ ವರಿಸ್ಥಿತಿಯು ಕಂಟಕಮಯವೇ ಆಗಿದೆ

ಅಮೇರಿಕ ಮತ್ತು ರಶಿಯಾ ದೇಶಗಳಿಗೆ ಈ ಕಾರಣಗಳಿಂದ ಜಾಗತಿಕ ಹಿರಿಯರೆಂದು ಕರೆಯಲು ಅಡ್ಡಿಯಿಲ್ಲ. ಈ ಹಿರಿಯರು ಮನಸ್ಸುಮಾಡಿದರೆ ಇಂದಿನ ಜಗತ್ತಿನಲ್ಲಿ ಸುಖ ಶಾಂತಿಗಳು ನೆಲೆಸಬೇಕು, ಇಲ್ಲವಿದ್ದರೆ ಒಂದೇ ಸವನೆ ಎಡಬೈಯಲ್ಲಿ ಜೀವನ ಹಿಡಿದುಕೊಂಡೇ ಸಾಗಬೇಕು ಎಂಬ ವಾತಾವರಣವು ಹುಟ್ಟಿದೆ.

ಹಿರಿಯರಾದ ಇವರಿಗೂ ಸುಖವಿಲ್ಲ ಒಮ್ಮೆ ಈ ರುಬಿಗೆ ಅವರು ಬಿದ್ದ ಮೂಲಕ ಅದರಿಂದ ಪಾರಾಗಲು ಸಾಧ್ಯವಾಗದೆ ಅನಿವಾರ್ಯವಾಗಿ ಮುಂದುವರಿಯುತ್ತಿದ್ದಾರೆ. ಒಮ್ಮೊಮ್ಮೆ ಅವರಿಗೆ ಸಾಧುವಿಚಾರಗಳು ಬರುವುದೂ ಉಂಟು ಆದರೆ ಆ ವಿಚಾರಗಳು ಬಹಳ ವೇಳೆ ನಿಲ್ಲವೆ ಪುನಃ ಅಡಗಿಹೋಗುವುದರಿಂದ ಅವರಿಂದ ಆ ವಿಚಾರಗಳ ಮೇರೆಗೆ ಸದ್ಯದ ವರಿಸ್ಥಿತಿಯನ್ನು ಶಾಂತರೀತಿಯಿಂದ ಬಗೆಹರಿಸಿಕೊಳ್ಳಲು ಅವಶ್ಯಕವಾಗಿ ಕುಳಿತಿವೆ.

ರಶಿಯಾ ಮತ್ತು ಅಮೇರಿಕಗಳ ಅರ್ಥಧುರೀಣರಾದ ಸ್ಟಾಲಿನ್ ಮತ್ತು ಟ್ರೂಮನ್ನರು ಸಮಕ್ಷಮ ಬೆಟ್ಟಿಯಾಗಲು ಬೇಕೆಂಬ ಬಗ್ಗೆ ವ್ಯವಸ್ಥೆಗಳು ಅನೇಕ ಸಲ ನಡೆದಿವೆ. ಆದರೆ ಅವು ಅವಿಚ್ಛಾರದಲ್ಲಿ ಇದುವರೆಗೆ ಯಶಶ್ವಿಗಳಾಗಿಲ್ಲ ಅವರ ಕಾರಣವೇನೆಂದರೆ ಇಬ್ಬರೂ ಅತ್ಯಪ್ರತಿಷ್ಠೆಗೆ ಬಿದ್ದಿದ್ದಾರೆ. ಇಂತಹ ಪ್ರಸಂಗಗಳಲ್ಲಿ ದ್ವೇಷ, ಅಸೂಯೆ, ಕಕ್ಷಿಕಲಹಗಳಿಗೆಗಳಿಗೆ ಅಸ್ಪದಕೊಟ್ಟು ಜನರು, ಪರಸ್ಪರ ಭೆಟ್ಟಿಯಾದರೇನೇ ಅಭಾವನೆಗಳು ಅಳಿಸಿ ವರಿಸ್ಥಿತಿಯು ಕಿಳಗಟ್ಟುವುದು ಸಾಧ್ಯವಿದೆ.

ಏನೇ ಇರಲಿ, ಈಗ ಸ್ಟಾಲಿನ್ ಮತ್ತು ಟ್ರೂಮನ್ನರ ಬೆಟ್ಟಿಮಾಡಿಸುವ ಪ್ರಯತ್ನವು ಪುನಃ ನಡೆದಂತೆ ತೋರುತ್ತದೆ. ಸ್ಟಾಲಿನ್ನರು ಸಿದ್ಧವಾಗಬಹುದೆಂದು ರಶಿಯಾನ ಒರ್ವ ಹೊಣೆಗಾರ ಮನುಷ್ಯನು ಹೇಳಿದ್ದಾನೆ.

ಸ್ಟಾಲಿನ್ನರಂತೂ ಯಾವ ವಿಷಯಕ್ಕೂ ಮಾತಾಡುವುದೇ ಇಲ್ಲ. ಅವರ ರಾಜಕಾರಣ ರೀತಿಯೇ ಬೇರೆ. ಒಮ್ಮೆ ಈ ತರಹದ ಅನಿಷ್ಟಕಾರಿ ದೃಷ್ಟಿಯನ್ನು ಬಿಟ್ಟು ಈ ಇಬ್ಬರೂ ಮುಖಂಡರು ಒಂಜೆತೆಗೆ ಸೇರಿ ತಮ್ಮುಲ್ಲಿಯ ವಿರೋಧಕ್ಕೆ ಅಂತವನ್ನುಂಟುಮಾಡುವುದು ಅವರಿಗೂ ಜಗತ್ತಿಗೂ ಕೂಡಿಯೇ ಕಲ್ಯಾಣವನ್ನು ಮಾಡುವ ವಿಷಯವಾಗಿದೆ ಎಂಬುದನ್ನು ಅವರು ಮರೆಯಕೂಡದು.

ಏನುಮಾಡಲೂ ಅಡ್ಡಿಯಿಲ್ಲ. ಆದರೆ ಈ ಹಿರಿಯರು ತಮ್ಮ ಮೇಲಿನ ಜಾಗತಿಕ ಹೊಣೆಯನ್ನು ಸರಿಯಾಗಿ ಅರಿತುಕೊಂಡರೆ, ಈ ವಿಕ್ಷಿಪ್ತತ್ವದಿಂದ ಅವರು ತಮ್ಮನ್ನು ಮತ್ತು ಜಗತ್ತನ್ನು ನಿಶ್ಚಯವಾಗಿ ಪಾರು ಮಾಡಬಲ್ಲರು.

ನೆಪರು-ಲಿಯಾಖತರ ಭೇಟಿ

ಪಾಕಿಸ್ತಾನದ ಪ್ರಧಾನಮಂತ್ರಿಗಳಾದ ಲಿಯಾಖತ್ ಅಲಿಖಾನರು ಭಾರತ ಪ್ರಧಾನಿಗಳಾದ ಪಂಡಿತ ನೆಹರೂರವರೊಡನೆ ಬಂಗಾಳದ ಅಲ್ಪಸಂಖ್ಯಾಕರ ಸಮಸ್ಯೆಗಳ ಬಗ್ಗೆ ವಿಚಾರವಿನಿಮಯನಡೆಸುತ್ತಿರುವುದು ಅಶಾದಾಯಕವಾದ ಸಂಗತಿಯಾಗಿದೆ. ಇದರಿಂದ ಪರಿಣಾಮವಾಗಿ ಬಂಗಾಳದಲ್ಲಿ ಶಾಂತಿ ನೆಲೆಸುವುದಾದರೆ ಬಹಳ ಉಪಕಾರವಾದೀತು.

ಕಾಫಿ ಕಥೆ

ಕಾಫಿಯನ್ನು ಶೋಧಿಸಿ ತೆಗೆದ ಬಗ್ಗೆ ಅನೇಕ ಕಥೆಗಳು ಹೇಳಲ್ಪಡುತ್ತವೆ. ಮೂರನೆಯ ಶತಮಾನದ ಕೊನೆಯಲ್ಲಿ ದರ್ಮ ಸಂಬಂಧದ ಶೊಂದರೆಯಿಂದ ತಪ್ಪಿಸಿಕೊಳ್ಳಲು ಅಬಿಸೀನಿಯಾಕ್ಕೆ ಓಡಿ ಹೋದ ಸಾಧುಗಳು ಈ ಕಾಫಿಯನ್ನು ಕಂಡುಹಿಡಿದರೆಂದು ಹೇಳುವ ಕಥೆಯೊಂದಿದ್ದು ಅದು ಈ ರೀತಿಯಾಗಿರುತ್ತದೆ:-

ಇವರು ಆಡುಕುರಿಗಳನ್ನು ಕಾಯುತ್ತಿರುವಾಗ ಒಂದುದಿನ ಬೆಳದಿಂಗಳಿರುಳಲ್ಲಿ ಕೆಲವು ಕುರಿ ಆಡುಗಳು "ವ್ರೇಮಿ" ಗಳಂತೆ ಹುಚ್ಚೆದ್ದು ತಿರುಗಾಡುತ್ತ ನಿದ್ರೆ ನೀರಡಿಕೆಗಳನ್ನು ಮರೆತುಬಿಟ್ಟುದನ್ನು ಈ ಸಾಧುಗಳಲ್ಲೊಬ್ಬ ನೋಡಿ ಚಕಿತನಾದನು. ದಿನದಿನವೂ ಇದೇ ಹಾಡು. ಆ ಆಡು ಕುರಿಗಳು ನಿದ್ರೆಯನ್ನೇ ಮರೆತಿವೆಯೇ ಎಂದು ಅವನಿಗೆ ಸಂಶಯ ಉಲ್ಲದೆ ಅವು ಓದಿಹೋಗದಂತೆ ರಾತ್ರಿಯೆಲ್ಲವೂ ಅವನು ನೋಡಬೇಕಾಗುತ್ತಿತ್ತು. ಹೀಗೆ ಹಗಲೂ ರಾತ್ರಿ ಅವನೂ ನಿದ್ದೆ ಕೆಟ್ಟರೆಬೇಕಾದ ಪ್ರಸಂಗ ಬಂದು ಅವನಿಗೆ ಬಹಳ ತೊಂದರೆಯಾಯಿತು ಇದು ಹೀಗೇಕೆ? ಎಂದು ಅವನು ಶೋಧಿಸತೊಡಗಿದನು. ಕೊನೆಗೆ ಈ ಕಂಟಿಯ ಎಲೆ ಕಾಯಿಗಳನ್ನು ತಿನ್ನುತ್ತಿದ್ದುದು ಇವನ ದೃಷ್ಟಿಗೆ ಬಂತು. ಜತೆಯವರಿಗೂ ಈ ಕತೆ ಹೇಳಿದ. ಅವರೂ ಸೋಜಿಗಪಟ್ಟರು. ಒಂದು ಇವರೂ ಆ ಕಂಟಿಯ ಕಾಯಿಗಳನ್ನು ಸಂಜೆಯ ಮುಂದೆ ಒಬ್ಬನಿಗೆ ತಿನ್ನಿಸಿದರು. ಆದರಿಂದ ಅವನಿಗೆ ಆ ರಾತ್ರಿಯೆಲ್ಲ ನಿದ್ರಿಬರದೆ ಒಳ್ಳೇ ಉತ್ಸಾಹತನಾಗಿ ತಿರುಗಾಡುತ್ತಲೇ ಇದ್ದುದನ್ನು ಕಂಡರು. ಆದೇ ಕಾಫಿ ಕಂಟಿ. ಅವೇ ಕಾಫೀ ಬೀಜಗಳು.

ಈ ಕತೆಯ ಸತ್ಯತೆಯ ಬಗ್ಗೆ ಏನೇ ಅಭಿಪ್ರಾಯಪಟ್ಟರೂ ಕಾಫಿಯನ್ನು ಮೊದಲು ಶೋಧಿಸಿದ ಹಾಗೂ ಉಪಯೋಗಿಸಿದ ದೇಶಗಳೆಂದರೆ ಅಬಿಸೀನಿಯಾ ಮತ್ತು ಅರೇಬಿಯಾಗಳೇ ಎಂದು ನಿಶ್ಚಯವಾಗಿ ಗೊತ್ತಾಗಿದೆ. ಮಹಮದೀಯರಲ್ಲಿ ಮಾದಕ ದ್ರವ್ಯಗಳ ಸೇವನೆಯು ಅಧರ್ಮವೆಂದು ಹೇಳಿರುವಾಗ ಮಾದಕ ವಲ್ಲದ ಅದರೆ ಉತ್ತೇಜಕವಾದ ಈ ಹೊಸ ಕಾಫೀ ಪೇಯವನ್ನು ಕಂಡು ಅವರಿಗೆ ಅಮಿತಾನಂದವಾಯಿತು ಹಾಗೂ ಅದರ ಉಪಯೋಗವೂ ಭರದಿಂದ ಹಬ್ಬತೊಡಗಿತು. ಇದನ್ನು ಕುಡಿಯುವುದರಿಂದು ಅವರ ಧರ್ಮಾಧಿಕಾರಿಗಳಿಂದ ನಿರ್ಬಂಧಿಸಲ್ಪಟ್ಟರೂ, ಶಿಕ್ಷದಂಡಗಳ ಹೆದರಿಕೆ ಹಾಕಲ್ಪಟ್ಟರೂ, ಚೀನದಲ್ಲಿ ಚಹದ ಚಟವು ಓತಪ್ರೋತವಾಗಿ ತುಂಬಿಕೊಂಡಂತೆ ಅರೇಬಿಯಾದಲ್ಲಿ ಕಾಫೀ ಚಟವೂ ಓತಪ್ರೋತವಾಗಿ ತುಂಬಿಕೊಂಡಿತು.

ಒಳಕ ಹದಿನೈದನೆಯ ಶತಮಾನದ ಕೊನೆಯ ಭಾಗದಲ್ಲಿ ಕೆಲವು ಸಾಹಸಿಗ ವಾದ ವ್ಯಾಪಾರಸ್ಥರಿಂದ ಈ ಕಾಫೀ ಯೂರೋಪದಲ್ಲಿ ಕಾಲುಚಾಚುವಂತಾಯಿತು. ಪುತ್ತು ವೈನಿಸ [ಇಟಲಿ] ದಲ್ಲಿ ಗಿಟಿಗಿ ರಲ್ಲಿ ಯೂರಪ ಖಂಡದಲ್ಲೇ ಮೊಟ್ಟ ಮೊದಲಾಗಿ "ಪಬ್ಲಿಕ್ ಕಾಫಿ ಹೌಸ್" ಸ್ಥಾಪಿತವಾಯಿತು. ಯೂರೋಪ ಖಂಡದಲ್ಲಿಯೂ ಟೀಕೆ ಭಿನ್ನಾಭಿಪ್ರಾಯ, ನಿರ್ಬಂಧಗಳೆಲ್ಲವನ್ನೂ ಎದುರಿಸಿ ಕಾಫಿ ಕುಡಿತವು ಭರದಿಂದ, ಅರೇಬಿಯಾದಲ್ಲಿ ಅದಂತೆಯೇ-ಪಸಾರವಾಗತೊಡಗಿತು. ತನ್ನ ಮೋಹಕ ಸುವಾಸದಿಂದ ಕಾಫಿ ಅನೇಕರ ಮನವನ್ನು ಸೆರೆಹಿಡಿಯಿತು.

ಜರ್ಮನಿಯಲ್ಲಿ ಒಂದು ಕಾಲಕ್ಕೆ ಕಾಫಿ ಪೇಯವನ್ನು ಶಯಾರಿಸಬೇಕಾದರೆ ಸರಕಾರೀ ಲಾಯಸೆನ್ಸನ್ನು ಪಡೆಯಬೇಕಾಗುತ್ತಿತ್ತು. ಇಂಗ್ಲಂಡದಲ್ಲಿಯಂತೂ ಕಾಫೀ ಅಂಗಡಿಗಳು ಸಾರ್ವಜನಿಕ ಹಾಗೂ ವಿದ್ಯೋಗಿಕ ಚಟುವಟಿಕೆಗಳ ಕೇಂದ್ರ ಸ್ವರೂಪವನ್ನು ಹೊಂದಿದಲ್ಲದೆ ಕೆಲವುಕೆಲವು ಕಡೆಗೆ ರಾಜಕೀಯ ತಿರ್ಮಾಟದ ಚಟುವಟಿಕೆಗಳ ಕೇಂದ್ರಗಳೂ ಆಗಿದ್ದುದನ್ನು ಆ ಕಾಲದ ಇತಿಹಾಸವು ಹೇಳುತ್ತದೆ. ಇದೇ ಕಾರಣಕ್ಕಾಗಿ ಅವುಗಳನ್ನು ಹತ್ತಿಕ್ಕಲು ಎರಡನೆಯ ಚಾರ್ಲಸ (ಇಗ್ಲಂಡಸ ಅರಸು) ಹಲವು ಸಲ ಪ್ರಯತ್ನಿಸಿದ್ದೂ ಉಂಟು.

ಕಾಫೀ ಕೃಷಿಯು ಗಿಆಇ ರಲ್ಲಿ ಮೊದಲಿಗೆ ಡಚಿಯಾದಲ್ಲಿ ಪ್ರಾರಂಭಿಸಲ್ಪಟ್ಟಿತು. ಆದರೆ ಹಾಗಆಕ ಪ್ರಥಮ ಮಹಾಯುದ್ಧದ ಕಾಲದಲ್ಲಿ ಅಲ್ಲಿ ಅಲ್ಪಸ್ವಲ್ಪ ವಿದ್ದ ಕಾಫೀ ತೋಟಗಳೆಲ್ಲವೂ ನಿರ್ನಾಮವಾಗಿ ಹೋದವು. ಒಪ್ಪಂದವಾಗಿ ಶಾಂತಿ ಪ್ರಸ್ಥಾಪಿತವಾದ ಬಳಕ ಪೆನಃ ಅಲ್ಲಿ ಅಲ್ಲೊಂದು ಇಲ್ಲೊಂದು ಕಾಫೀ ತೋಟಗಳು ತಲೆಯೆತ್ತತೊಡಗಿದವು. ಮುಂದೆ ಅಲ್ಲಿ ಈ ಕಾಫೀ ಉದ್ಯಮವು ಭರದಿಂದ ಬೆಳೆಯುತ್ತ ಒಂದು ಇಂದು ಈ ದೇಶದದಲ್ಲಿ ಉಪಯೋಗಿಸಲಾಗುತ್ತಿರ್ದ ಕಾಫಿಯನ್ನು ಕೆನಿಯಾ ಕಾಫಿಗೆ ಹೆಚ್ಚಿನ ದರ್ಜೆಯ ಸ್ಥಾನನೂಡಗಳುಂಟೆಂದು ಗಣಿಸಲ್ಪಡುತ್ತದೆ.

ಜಗತ್ತಿಗೆ ಬೇಕಾಗುವ ಕಾಫಿಯಲ್ಲಿ ಇಂದು ಮೂರು ನಾಲ್ಕಾಂಶ ಕಾಫಿಯು ಬ್ರಾಝಿಲಿನಿಂದ ಬೆಳೆದು ಬರುತ್ತಿದ್ದರೂ ಇಂಗ್ಲಂಡದಲ್ಲಿ ಬ್ರಾಝಿಲಿನ ಕಾಫಿಯನ್ನು ಉಪಯೋಗಿಸುವದು ಬಹಳ ಕಡಿಮೆ.

ಕಾಫೀ ಗಿಡದಹೂವು ಬೀರಾದುದೂ ಬಹು ಚಿಕ್ಕದು ಆಗಿದ್ದರೂ ಒಳ್ಳೇ ಸುವಾಸನೆಯುಳ್ಳದ್ದಾರುತ್ತದೆ. ಕಾಫೀ ತೋಟದಲ್ಲಿ ಈ ಹೂವಿನ ಸುಗ್ಗಿ ಇದ್ದಾಗ ಅದರ ಕಡೆಗೆ ನೋಡಿದರೆ ಕಾಣುವ ಸುಂದರತರ ದೃಶ್ಯವು ಎಂದಿಗೂ ಮರೆಯಲು ಸಾಧ್ಯವೆಂದೇ ಹೇಳಬಹುದು.

ಹೂ ಕುದುರಿದ ಬಳಕ ಆಗುವ ಕಾಫಿ ಹಣ್ಣು ಕೆಂಬಣ್ಣದಿದ್ದು ಯೂರೋಪದಲ್ಲಿಯ "ಚರಿ" ಹಣ್ಣಿನಷ್ಟು ಅದರ ಆಕಾರ ವಿರುತ್ತದೆ. ಅದು ಹಣ್ಣಾಗುತ್ತ ಬಂದಂತೆಲ್ಲ ಕಂದೀ ಬಣ್ಣವನ್ನು ತಾಳುತ್ತದೆ. ಪ್ರತಿಯೊಂದು ಹಣ್ಣಿನಲ್ಲಿಯೂ ಒಂದರ ಬದಿಗೊಂದರಂತೆ ಎರಡು ಬೀಜಗಳು ಇರುತ್ತವೆ. ಇವೇ ಕಾಫೀ ಬೀಜಗಳು. ಇವುಗಳಿಗೆ ನಮ್ಮಲ್ಲಿ ಕೆಲವರು 'ಬುಂದು' ಎಂದೂ ಕರೆಯುತ್ತಾರೆ.

ತೋಟದಿಂದ ಕಾಫಿ ಎತ್ತುವ ಕೆಲಸವನ್ನು ಗಂಡಸರು ಹೆಂಗಸರು ಹುಡುಗರು ಎಲ್ಲರೂ ಮಾಡಬಹುದು. ಸರಿಯಾಗಿ ದುಡಿದರೆ ಒಬ್ಬ ವಯಸ್ಕನು ಪ್ರತಿದಿನ ಸುಮಾರು ನೂರತ್ತು ಪೌಂದಿನಷ್ಟು ಕಾಫಿಯನ್ನು ಆರಿಸಬಹುದು. ಜಗತ್ತಿನಲ್ಲಿ ಬೆಳೆಯುವ ಉತ್ತಮ ತರಗತಿಯ ಕಾಫಿಯು ಬಹುಭಾಗವು ಲಂಡನ್ನಿಗೆ ರಫ್ತಾಗುತ್ತದೆ ಅಲ್ಲಿ ಲೀಲಾವತಿಯಲ್ಲಿದರ ವ್ಯಾಪಾರವಾಗಿ ಬೇರೆ ಬೇರೆ ದೇಶದವರು ತೆಗೆದುಕೊಳ್ಳುತ್ತಾರೆ. ಅಲ್ಲಿಂದ ಮುಂದೆ ವ್ಯಾಪಾರಿಗಳ ಮುಖಾಂತರವಾಗಿ, ಹರಡುತ್ತ ಬಂದು ಅದು ಕುಡಿಯುವ ಜನರಿಗೆ ದೊರೆಯುತ್ತದೆ.

ಕೆಲವು ಚೀನದಲ್ಲಿ ರಷ್ಯಾದ ನೀತಿಯೂ ಧೋರಣೆಯೂ ಅನುಸರಿಸಲ್ಪಡುವುದಾದರೆ ಅಮೇರಿಕಾದಿಂದ ಸಹಾಯ ದೊರೆಯುವದಿಲ್ಲವೆಂದೂ ವ್ಯಾಪಾರವೂ ದಲ್ಲೈಹಾಕುವದಿಲ್ಲವೆಂದೂ ಹೇಳಲಾಗಿದೆ

NOTICE.

Office of the Regional Transport Officer, Cuddapah

All Matters relating to Motor Transport of Bellary and Anantapur Districts will be dealt with by the Regional Transport Officer, Anantapur at his office located at the building near the Railway Station, Anantapur from 1-4-50, All correspondence and applications by transport operators, bus owners lorry owners, and taxi owners, in respect of Motor Transport matters in these two districts to be received on or after 1-4-50 may be addressed to him to the address given above.

Sd. C. Ramachandran
Regional Transport Officer, Cuddapah

ಮೋಟಾರ್ ಮಾಲೀಕರಿಗೆ
ಸೂಚನೆ

ಬಳ್ಳಾರಿ ಅನಂತಪುರ ಜಿಲ್ಲೆಗಳಿಗಾಗಿ ಅನಂತಪುರದಲ್ಲಿ ಕಛೇರಿ ತೆರೆಯಲಾಗಿದೆ. ಸಾರಿಗೆಗೆ ಸಂಬಂಧಿಸಿದ ಬಸ್, ಲಾರಿ, ಟ್ರಕ್, ಒಡೆಯರು ತಮ್ಮ ಬೇಡಿಕೆಯ ಅರ್ಜಿಗಳನ್ನು 1-4-50 ರಿಂದ ಅನಂತಪುರದ ರೀಜನಲ್ ಟ್ರಾನ್ಸ್‌ಪೋರ್ಟ್ ಅಧಿಕಾರಿಗಳಿಗೆ ಕಳುಹಿಸತಕ್ಕದ್ದು. ಸದರ ಕಟೇರಿಯು ರೈಲ್ವೇಸ್ಟೇಷನ್ ಬಳಿಇದೆ.

ಜಿ. ರಾಮಚಂದ್ರನ್
ರೀಜನಲ್ ಟ್ರಾನ್ಸ್‌ಪೋರ್ಟ್ ಆಫೀಸರ್

ದಾವಣಗೆರೆಯಲ್ಲಿ ಸೋಶಿಯಲಿಷ್ಟ್ ಮಹಾ ಸಮ್ಮೇಳನ

ಏಪ್ರಿಲ್ 15-16 ಕ್ಕೆ ನೈ ಸೂ ರು ಸ್ವಾಂತದ ಸೋಶಿಯಲಿಷ್ಟ್ ಮಹಾ ಸಮ್ಮೇಳನವನ್ನು ದಾವಣಗೆರೆಯಲ್ಲಿ ಕರೆದಿದ್ದಾರೆ. ಮುಖ್ಯನಾಯಕರು ಬರಲಿರುವರು. ಸಂಬಂಧಿಸಿದವರೆಲ್ಲಾ ಬರಲು ಸಮಿತಿಯವರು ಕೋರುತ್ತಾರೆ.

ಕಲ್ಕತ್ತೆಯಲ್ಲಿ ದಂಡಿನ ಕಾಯ್ದೆ

ಹೊರಾದಲ್ಲಿ ಅಶಾಂತಿ ಪರಿಸ್ಥಿತಿ ಇದ್ದ ಕಾರಣ ದಂಡಿನ ಕಾಯ್ದೆಯನ್ನು ಅಮಲಿನಲ್ಲಿ ತರಲಾಗಿದೆ. ಸೈನಿಕರು ಆತಂಕಿತ ಸಂದರ್ಭಗಳನ್ನು ನಿಭಾಯಿಸಿಕೊಂಡಿರುವರು.

ಹಳ್ಳಿಗಳು ಸಂ[illegible]

ನಮ್ಮ ಸಂಸ್ಕೃತಿಯಿಂದಲೆ ಪರಂಪರೆಯಾಗಿ ಬಂದ ಹಳ್ಳಿಯ ಸಂಸ್ಕೃತಿ ದೇಶದ ವಿಶಾಲತೆ, ಜನಸಂಖ್ಯೆಯ ಅವಾರತೆ ಭೌಗೋಲಿಕ ಸ್ಥಿತಿಗತಿಗಳ ಪರಿಣಾಮವಾಗಿ ನಮ್ಮ ಸಂಸ್ಕೃತಿ ಹಳ್ಳಿಯ ಸಂಸ್ಕೃತಿಯೇ ಆಗಿರುವುದೆಂದು ನನ್ನ ಅಭಿಪ್ರಾಯ. ಅವರ ಲೋಪದೋಷಗಳು ಎಲ್ಲರಿಗೆ ಗೊತ್ತು; ಆದರೆ ಉಪಾಯವನ್ನು ನೀಡಿದ ಲೋಪದೋಷಗಳಾವೂ ಇಲ್ಲ. ಇಂಥ ಸಂಸ್ಕೃತಿಯನ್ನು ಬೇರು ಸಹಿತ ಕಿತ್ತೊಗೆದು ಅದರ ಸ್ಥಳದಲ್ಲಿ ಪಟ್ಟಣದ ಸಂಸ್ಕೃತಿಯನ್ನು ನೆಡುವದು ಅವಶ್ಯಕತೆ ಇಲ್ಲ ಹಾಗೆ ಮಾಡಬೇಕೆಂದರೆ ಯಾವದೋ ಉಗ್ರ ಉಪಾಯವನ್ನು ಯೋಜಿಸಿ ಇಂಕೋಟಿ ಜನಸಂಖ್ಯೆಯನ್ನು ಸಿ ಕೋಟಿ ಮಾಡಬೇಕಾಗುತ್ತದೆಯೊ ಏನೊ.

★ ★ ★

ಹಳ್ಳಿಯ ಕಾರ್ಯವು ನಮ್ಮನ್ನು ಬಿಡಲಿಸುತ್ತದೆ. ಪಟ್ಟಣದಲ್ಲಿ ಹುಟ್ಟಿ ಬೆಳೆದವರಿಗೆ ಹಳ್ಳಿಯ ಜೀವನವು ಒಲ್ಲೆನಿಸುತ್ತದೆ. ಶ್ರಮ ಜೀವನಕ್ಕೆ ನಮ್ಮ ಕಂಠವು ಎಷ್ಟೋ ಸಾರಿ ಒಪ್ಪುವದಿಲ್ಲ ಆದರೆ ಇಂಥ ಅಡ್ಡಿ ಆತಂಕಗಳಿಗೆ ಧೈರ್ಯದಿಂದ ಶೌರ್ಯದಿಂದ ಎದೆಗೊಡಬೇಕು. ಇಲ್ಲಿಯ ನರಿಗೆ ನಮ್ಮನ್ನು ಬದುಕಿಬಾಳಿಸಲು ಸಹಸ್ರಾರು ಹಳ್ಳಿಗರು ತಮ್ಮ ಜೀವನವನ್ನು ಧಾರೆ ಎರೆದಿದ್ದಾರೆ. ಈಗ ಅವರನ್ನು ಉಳಿಸಲು ನಾವು ವ್ಯಾಪಾರ್ಯ ಮಾಡಬಹುದಲ್ಲವೆ? ಹಳ್ಳಿಗರು ಗೊತ್ತಿಲ್ಲದೆ ಅಥವಾ ಮತಿಸ್ಥಿಲ್ಲದೆ ಕೂಡ ಜೀವ ಕೊಟ್ಟಿರಬಹುದು. ಒತ್ತಾಯದಿಂದ ಅವರನ್ನು ಸ್ವಾರ್ಥತ್ಯಾಗಕ್ಕೆ ಹಚ್ಚಿದುದಕ್ಕಾಗಿ ನಾವು ಕಳಗಿಳಿದ್ದೇವೆ ತಿಳಿದು ತಿಳಿದು ಬುದ್ಧಿಪೂರ್ವಕ ನಾವು ಅವರಿಗಾಗಿ ಸ್ವಾರ್ಥತ್ಯಾಗ ಮಾಡಿದರೆ, ನಾವು ಅದೇಕೆ ಇದಿ ವೀರವೇ ಕೃತಕೃತ್ಯ. ಸ್ವತಂತ್ರ ಮತ್ತು ಸ್ವಾಭಿಮಾನಿಯಾದ ರಾಷ್ಟ್ರವನ್ನು ಕಟ್ಟಬೇಕಾದರೆ ನಾವು ಸ್ವಾರ್ಥತ್ಯಾಗಕ್ಕೆ ಹಿಂಜರಿದರೆ ನಡೆಯಲಾರದು.

—ಮಹಾತ್ಮಾ ಗಾಂಧಿ

ಮೀರಲಾಯಕ ಅಲಿ ಕರಾಚಿಗೆ ಹೋಗಿದ್ದು ನಿಜ
ಅವನ ಕುಟುಂಬದವರೆಲ್ಲ ಪೆಸರನ್ನು ಬದಲಾಯಿಸಿಕೊಂಡಿದ್ದರು

ಮುಂಬಯಿ — ಹೈದರಾಬಾದಿನ ಹಿಂದಿನ ಮುಖ್ಯಮಂತ್ರಿಗಳಾದ ಮೀರಲಾಯಕ ಅಲಿಯವರು ಸಿಕಂದರಾಬಾದಿನಿಂದ ಮುಂಬೈಗೆ ರೈಲಿನಲ್ಲಿ ಬಂದು ತಾಜ್ ಹೋಟಲಿನಲ್ಲಿ ಒಂದು ವಿಮಾನದಲ್ಲಿ ಕರಾಚಿಗೆ ಹೊರಟಿದ್ದು ನಿಜವೆಂದು ಒರ್ವ ಉಚ್ಚ ಸರಕಾರೀ ಅಧಿಕಾರಿಯಿಂದ ತಿಳಿಯುತ್ತದೆ.

"ಲಾಯಕ ಅಲಿಯು ಎಂ. ಮಹಮ್ಮದ ಅಲಿ ಎಂಬ ಪೆಸರನ್ನು ಇಟ್ಟುಕೊಂಡಿದ್ದನ್ನು, ಅವನ ಬಳಿ ಪಾಕಿಸ್ತಾನಿ ಅಧಿಕಾರಿಗಳು ಕೊಟ್ಟ ಪರಮಿಟ್ಟು ಇತ್ತು. ಅವನ ಹೆಂಡತಿ ಮಕ್ಕಳು ಬೇರೆ ಪೆಸರಿಟ್ಟುಕೊಂಡು ಮುಂಬೈಯಿಂದ ಪಡಗದಲ್ಲಿ ಪ್ರಯಾಣ ಬೆಳೆಸಿದರು" ಎಂದೂ ಅವನು ತಿಳಿಸಿದನು.

ಮೀರಲಾಯಕ ಅಲಿಯು ಕುಟುಂಬದವರು ಕರಾಚಿಯಲ್ಲಿಯೆ ಇರುವರೆಂದು ಮೀರಲಾಯಕ ಅಲಿಯವರಿಗೆ ಕರಾಚಿಯ ಹವೆಯು ಒಗ್ಗುವದಿಲ್ಲವಾದ್ದರಿಂದ ಊರು ಬಿಟ್ಟು ಹೋಗಿದ್ದು ೧೫ ದಿನಗಳಲ್ಲಿ ಕರಾಚಿಗೆ ಹಿಂತಿರುಗುವರೆಂದೂ ಸುದ್ದಿ ಬಂದಿದೆ. ಆದರೆ ಈ ಬಗ್ಗೆ ಅಲ್ಲಿಯ ಅಧಿಕಾರಿವರ್ಗಗಳು ಮೌನದಿಂದಿವೆ.

ಅವನು ಭಾರತದಿಂದ ಓಡಿಹೋಗಲು ಅವನಿಗೆ ಮುಂಬೈಯ ಕೆಲ ಹಿಂದುಗಳು ನೆರವಾದರೆಂದೂ ಹೇಳಲಾಗುತ್ತದೆ.

ಅಡಿಕೆ

ನಮ್ಮ ದೇಶದಲ್ಲಿ ಜನರು ಪ್ರತಿವರ್ಷ ಐದು ಲಕ್ಷ ಮಣ ಅಡಿಕೆಯನ್ನು ತಿನ್ನುತ್ತಾರೆ. ಇದರಿಂದ ಅಡಿಕೆ ತಿನ್ನುವ ಚಟ ಎಷ್ಟು ವಿಶಾಲವಾಗಿ ಹಬ್ಬಿದೆ ಎಂದು ಸ್ಪಷ್ಟವಾಗುತ್ತದೆ. ವಿಭಜನೆಯ ಪೂರ್ವದಲ್ಲಿ ಹಿಂದುಸ್ತಾನದಲ್ಲಿ ಆರು ಲಕ್ಷ ಮಣ ಅಡಿಕೆಯು ಹುಟ್ಟುತ್ತಿತ್ತು. ಆದರೆ ಬಂಗಾಲದಲ್ಲಿಯ ಅಡಿಕೆ ಬೆಳೆಯುವ ಬಹುಭಾಗವು ಪಾಕಿಸ್ತಾನಕ್ಕೆ ಹೋಗಿರುವದರಿಂದ, ಇಂದು ನಮ್ಮ ಅಡಿಕೆಯ ಉತ್ಪತ್ತಿ ಕೇವಲ ೧೫ ಲಕ್ಷ ಮಣ ಇದೆ. ನಮಗೆ ಇಷ್ಟು ಅಡಿಕೆಯನ್ನು ಪ್ರತಿವರುಷ ಸುಮಾರು ೫೫ ಕೋಟಿ ರೂ. ವೆಚ್ಚಮಾಡಿ ಆಮದು ಮಾಡಬೇಕಾಗುತ್ತದೆ.

ಪ್ರಜಾರಾಜ್ಯೋದಯವು ಜನತೆಗೆಹೆಚ್ಚಿನ ಹೊಣೆಯನ್ನು ತಂದಿದೆ. ಹಕ್ಕುಗಳ ಜೊತೆಗೆ ಹೊಣೆಯೂ ಇರುತ್ತದೆಂಬುದನ್ನು ನಾವರಿಯಬೇಕು. ಸರಕಾರದಿಂದ ಜನತೆ ಸಿಡಿದು ನಿಲ್ಲಲಾರದೆಂಬುದನ್ನು ಅರಿತುಕೊಳ್ಳಬೇಕು. ದೇಶದ ಮತ್ತು ಜನತೆಯ ಕಲ್ಯಾಣಕ್ಕಾಗಿ ಸರಕಾರವು ಏನು ಮಾಡಿದೆಂಬುದನ್ನು ಸುಖ್ಮಮಂತ್ರಿಯೆಂದು ನಾನು ಹೇಳುವುದು ಯೋಗ್ಯವಾಗಲಾರದು. ಪ್ರತಿಯೊಬ್ಬರ ಹಿತಕ್ಕಾಗಿ ಜನತೆ ಸರಕಾರದೊಡನೆ ಸಹಕರಿಸಿ ಕಾರ್ಯ ಮಾಡುತ್ತಾ ಹೋಗಬೇಕು. ಸರಕಾರವು ಕೇವಲ ಕಾನೂನುಗಳಿಂದ ನಡೆಯುವದಿಲ್ಲ. ಅಯೋಗ್ಯವೆಂದು ಕಂಡುಬಂದಲ್ಲಿ ಕಾಯಿದೆಗಳಲ್ಲಿ ತಿದ್ದುಪಡಿ ಮಾಡಬಹುದು. ಆದುದರಿಂದ ಜನತೆಯಲ್ಲಿ ಸರಕಾರ ಮತ್ತು ತಾವು ಭಿನ್ನವೆಂಬ ಅಭಿಪ್ರಾಯವನ್ನು ಅಂಟು ಮಾಡಬೇಕಾದದು ಅವಶ್ಯವಾಗಿದೆ.

—ನೆಹರು

ಡಾ॥ ಶಾಮಪ್ರಸಾದ ಮುಕರ್ಜಿಯವರು ಕೇಂದ್ರ ಮಂತ್ರಿಮಂಡಳದಿಂದ ರಾಜೀನಾಮೆ ಕೊಟ್ಟಿರುತ್ತಾರೆ. ನೆಹರೂರ ಬಂಗಾಳದ ಧೋರಣೆಯೇ ಇದಕ್ಕೆ ಕಾರಣವಂತೆ

ಪಾಕಿಸ್ತಾನ ಭಾರತಪ್ರಧಾನಿಗಳ ಶಾಂತಿ ಸಮಾಧಾನ

ಪೂರ್ವ ಮತ್ತು ಪಶ್ಚಿಮ ಬಂಗಾಳದಲ್ಲಿ ಅಲ್ಪಸಂಖ್ಯಾಕರ ಮೇಲೆ ಆದ ಅತ್ಯಾಚಾರ ಪ್ರಾಣಹಾನಿ ಆಸ್ತಿನಷ್ಟಗಳಿಂದ ಭಯಂಕರ ಪರಿಸ್ಥಿತಿಯುಪ್ಪನ್ನವಾಗಿ ಇಡೀ ರಾಷ್ಟ್ರದಲ್ಲೇ ಜಾತೀಯ ದಂಗೆಗಳೇಳುವ ಸೂಚನೆಗಳು ಕಂಡುಬಂದಿದ್ದವು. ಈ ಕಾರಣ ಪರಸ್ಪರ ವಿಚಾರವಿನಿಯಮದಿಂದ ಅಲ್ಪಸಂಖ್ಯಾಕರಿಗೆ ರಕ್ಷಣೆಕೊಡಲು ಅವರ ಭದ್ರತೆಗಾಗಿ ಶಾಶ್ವತ ಕ್ರಮಗಳನ್ನು ಜಾರಿಯಲ್ಲಿ ತರಲು ಭಾರತ ಮಂತ್ರಿಗಳಾದ ಪಂಡಿತ ನೆಹರು ಪಾಕಿಸ್ತಾನ ಮಂತ್ರಿಗಳಾದ ಲಿಯಾಖತ್ ಅಲಿ ಖಾನರಲ್ಲಿ ಕಳೆದ ಭಾನುವಾರದಿಂದ ನವದೆಹಲಿಯಲ್ಲಿ ಮಾತುಕತೆಗಳು ಕೃಪ್ತಿಕರವಾಗಿ ಸ್ನೇಹ ವಾತಾವರಣದಲ್ಲಿ ಸಾಗಿರುವದಾಗಿ ಗೊತ್ತಾಗಿದೆ. ಎರಡೂ ಭಾಗದ ಬಂಗಾಳದಲ್ಲಿ ಹಿಂದೂ ಮುಸಲ್ಮಾನರಿಗೆ ಭದ್ರತೆ ಬೇಕು. ಸರ್ಕಾರದಿಂದ ನಮಗೆ ಸಾಕಷ್ಟು ರಕ್ಷಣೆ ದೊರೆತಿದೆ. ಇನ್ನುಮೇಲೆ ಪುಂಡರಕೃತ್ಯಗಳಿಗೆ ಆಸ್ಪದವಿಲ್ಲೆಂಬ ಆತ್ಮವಿಶ್ವಾಸವು ಅವರಲ್ಲಿ ಹುಟ್ಟಬೇಕು. ಬರೀ ಬಾಯಿ ಮಾತುಗಳಿಂದ ಉಪಯೋಗವಿಲ್ಲ. ಎಲ್ಲವೂ ಕೃತಿಯಲ್ಲಿಳಿಯಬೇಕು. ಶರಣಾರ್ಥಿಗಳಾಗಿ ಒಂದುಭಾಗದಿಂದ ಮತ್ತೊಂದು ಭಾಗಕ್ಕೆ ಗಂಟು ಮೂಟೆ ಕಟ್ಟಿಹೋಗುವ ದೃಶ್ಯವು ಕಾಣದಾಗಬೇಕು. ಕೊಳ್ಳೆಯಾಪ ಆಸ್ತಿ ಅಕ್ರಮಿತ ಮನೆಗಳನ್ನು ಬಿಡಿಸುವದು ಅಪಹೃತ ಸ್ತ್ರೀಯರನ್ನು ಅವರ ಕುಟುಂಬಗಳಿಗೊಪ್ಪಿಸುವುದು. ಶೀಘ್ರವಾಗಿ ತೃಪ್ತಿಕರವಾಗಿ ಆಗಬೇಕು. ಕೆಲವೇ ಅಪರಾಧಿಗಳಿಂದಾದ ಕೃತ್ಯಗಳಿಗಾಗಿ ಇಡೀ ರಾಷ್ಟ್ರದಲ್ಲಿರುವ ನಿರಪರಾಧಿಗಳು ದುಃಖ ಭೋಗಿಸಬೇಕೆನ್ನುವುದು ರಾಕ್ಷಸೀ ಧರ್ಮವಾವ ಧರ್ಮದಲ್ಲೇ ಇದುನಿಂದನೀಯವೆಂದು ಬೇರೆ ಹೇಳಬೇಕಿಲ್ಲ.

ಪಾಕಿಸ್ತಾನವು ಬಾಯಿಯಲ್ಲಾಡುವುದನ್ನು ಕೃತಿಗಿಳಿಸಿದಾಗಲೇ ಶಾಂತಿ ನೆಲೆಗೊಳ್ಳುವುದು ಪ್ರಧಾನ ಮಂತ್ರಿಗಳೆ ಸಂಧಾನವು ಯಶಶ್ವಿಯಾಗಲೆಂದು ನಾವು ಕೋರುತ್ತೇವೆ.

ಚುನಾವಣೆಗಳು ಯಾವಾಗ?

1951 ನೆಯ ಏಪ್ರಿಲ್ ಮೇ ತಿಂಗಳುಗಳಲ್ಲಿ ಮದ್ರಾಸ್ ಅಸೆಂಬ್ಲಿ ಮತ್ತು ಕೌನ್ಸಿಲ್‌ಗಳ ಚುನಾವಣೆಯು ನಡೆಯಲಿದೆಯೆಂದು ಅಧಿಕಾರಿವರ್ಗಗಳಿಂದ ತಿಳಿದುಬರುತ್ತಲಿದೆ. ಬಳ್ಳಾರಿ ಜಿಲ್ಲೆಯ ವೋಟರ್ಸ್ ಲಿಸ್ಟುಗಳು ಮುದ್ರಣವಾಗಿ ತಯಾರಾಗಿವೆ.

ಹಿಂದೀ ಮಹಾ ವಿದ್ಯಾಲಯ, ಬಳ್ಳಾರಿ,

[1931 ಸ್ಥಾಪಿತ. ಬಳ್ಳಾರಿ ಜಿಲ್ಲಾ ಹಿಂದೀ ಪ್ರೇಮಿಮಂಡಲದಾಶ್ರಯದಲ್ಲಿ, ರಿಜಿಸ್ಟರ್ಡ.]

ಮದ್ರಾಸ್ ಸರ್ಕಾರದಿಂದ ಮಾನ್ಯತೆ ಇದೆ.

ಪ್ರಾರಂಭಿಕ ವರ್ಗಗಳಿಗೆ ಮಾಸಿಕ 3/- ಶುಲ್ಕ — ಉನ್ನತ ವರ್ಗಗಳಿಗೆ ಮಾಸಿಕ 5/- ಶುಲ್ಕ

ವಾರ್ಡಲಾ ಹೈಸ್ಕೂಲ್ ಕಟ್ಟಡದಲ್ಲಿ ಪ್ರಾತಃಕಾಲ—ಸಾಯಂಕಾಲ ಹಿಂದೀ ಕಾಲೇಜ್‌ದ ವರ್ಗಗಳು ನಡೆಯುತ್ತಿವೆ ವಿಶಾರದ — ಪ್ರಚಾರಕ ವರ್ಗಗಳಲ್ಲದೆ ಪ್ರಾರಂಭಿಕ ವರ್ಗಗಳಿಗೂ ಪ್ರವೇಶವಿದೆ. ವರ್ಗಗಳಿಗೆ ಸಂಬಂಧಿಸಿದ ಪಾಠ ಪುಸ್ತಕಗಳು ವಿದ್ಯಾಲಯದಲ್ಲಿ ದೊರೆಯುತ್ತವೆ. ಒಳ್ಳೆಯ ಪುಸ್ತಕಭಂಡಾರವಿದೆ. ಶ್ರೇಷ್ಠ ವಾರಪತ್ರಿಕೆ, ಮಾಸಪತ್ರಿಕೆಗಳು ಲಭ್ಯ ಇತರ ವಿವರಗಳಿಗೆ ಸ್ವಾಂಪಿಟ್ಟು ಬರೆಯಿರಿ.

ಪ್ರಿನ್ಸಿಪಾಲ್.

NAVA BHARAT BELLARY. (Reg. No. M. 4746)

ನವ ಭಾರತ ಬಳ್ಳಾರಿ. 10—4—50

(Nationalist Weekly)

ಚಂದಾದರಗಳು.	Subscription Rates.
ವರ್ಷಕ್ಕೆ 5—0—0	One Year 5—0—0
6 ತಿಂಗಳಿಗೆ 3—0—0	Six months 3—0—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.	Subscription will not be accepted for less than 6 months

To

Sri.....

.....

.....

Printed at Krishna Printing Works, Edited & Published by T. B. Keshava Rao.

JAI HIND

ಸಂಯುಕ್ತ ಕರ್ನಾಟಕ

ಬಳ್ಳಾರಿಯ
ಉಜ್ವಲ ರಾಷ್ಟ್ರೀಯ ವಾರಪತ್ರಿಕೆ
*
ಉತ್ತಿಷ್ಠ !! ಜಾಗೃತ!!!
ಪ್ರಾಪ್ಯವರಾನ್ನಿ ಬೋಧತ!!!
*
ಸಂಪಾದಕ ಮತ್ತು ಪ್ರಕಾಶಕ:—
ಟಿ. ಬಿ. ಕೇಶವರಾವು.

ಸಂ ೧೩ ಸೋಮವಾರ ೧೭ ಏಪ್ರೆಲ್ ೧೯೫೦ | ಸಂಚಿಕೆ ೮

ಸಕ್ಕರೆಯ ಸುದ್ದಿ

ಭಾರತೀಯ ಸಕ್ಕರೆ ಉದ್ಯೋಗದವರು ಸಂಯುಕ್ತ ಪ್ರಾಂತದಲ್ಲಿ ತಮ್ಮ ಬಂಡವಾಳಗಳನ್ನಿಲ್ಲಿ ಕಡಿಹಿಡಿಯಬೇಕೆಂದು ನಿರ್ಧರಿಸಿದ್ದಾರೆ. ತಾಂತ್ರಿಕ ಕಾರಣಗಳಿಗಾಗಿ ಕೊನೆಯ ನಿರ್ಣಯವನ್ನು ಸಾರ್ವಜನಿಕರಿಗೆ ತಿಳಿಸಿಲ್ಲವಷ್ಟೆ. ಏನೇ ಇದ್ದರೂ ಸಂಯುಕ್ತ ಪ್ರಾಂತ ಸರಕಾರವು ತನ್ನ ಮುನ್ನಡೆಯನ್ನು ಹಿಂತೆಗೆದುಕೊಳ್ಳಲಿಲ್ಲ. ಸಂಯುಕ್ತ ಪ್ರಾಂತದಲ್ಲಿ ಸಕ್ಕರೆಯ ಸ್ಥಿತಿಯು ತುಸು ಹೆಚ್ಚು ಕಡಿಮೆ ಕೃಷ್ಟಿಕರವಾಗಿರುತ್ತದೆ ಎಂದು ಹೇಳಬೇಕು. ಕಾನಪೂರದಲ್ಲಿ ಮಾತ್ರ ಸಕ್ಕರೆಯು ಲೋಕ ನ್ಯಾಯಾಲಯದ ಮೆಟ್ಟಿಲೇರುವ ಸ್ಥಿತಿಯಲ್ಲಿರುತ್ತದೆ. ವಾಗೀಸುಗಳ ಕೊರತೆಯಿಂದ ಗಿರಣಿಗಳಿಂದ ಸಕ್ಕರೆಯು ಬಾಹ್ಯ ಪ್ರದೇಶಗಳಿಗೆ ಸಾಗಿಸಲ್ಪಡುತ್ತಿದೆ. ವಿರಳವಾಗಿ ಆಗ್ರಾ ಮುಝಫರನಗರಗಳಲ್ಲಿ ಸಕ್ಕರೆಯ ಪರಿಸ್ಥಿತಿ ಮೊದಲಿನಂತೆಯೇ ಇರುತ್ತದೆ. ಅಷ್ಟರಲ್ಲಿ ಏನೂ ವ್ಯತ್ಯಾಸ ಬಾಹಿರವಾಗಿರುವದಿಲ್ಲ. ಬಿಳಿ ಸಕ್ಕರೆಯ ಬೇಡಿಕೆ ಹೆಚ್ಚಾಗಿರುವದರಿಂದ, ಹಳದಿ ಸಕ್ಕರೆಗೆ ಬೇಡಿಕೆ ಹೆಚ್ಚಾಗಿಲ್ಲ. ಇದೇ ಕಾರಣದಿಂದ ಸಕ್ಕರೆಯ ಬೆಲೆಗೂ ಪೂರೈಸಲಾಗಿದೆ. ಸಕ್ಕರೆಯ ಮೇಟಿ ದರವು [ಕಂಟ್ರೋಲಲ್ಲಿ] ನೇರಾಗಿ [ಅ ನೇ] ಒಂದೂವರೆ ರೂಪಾಯಿ ಹತ್ತಾಣೆಯ ನಡುವೆಗೂ ಇರುತ್ತದೆ. ಖುಲ್ಲಾ ದರವು ಸಾಗಿಸಿ [೪೭೬೧ ಗೌಂಪು ಅಜಮೂಸು] ರೂ. ಎಲ್ಲ ಇರುತ್ತದೆ. ಅಂಬಾಲಾ, ಜಲಂಧರ್, ಹಾಗೂ ಅಮೃತಸರಗಳಲ್ಲಿ ಸಕ್ಕರೆಯು ಕೊರತೆಯಿರುವದೆಂದೂ, ಕಲಕತ್ತೆ, ಮದ್ರಾಸು, ಗೌಹಾತಿಗಳಲ್ಲಿ ಪರಿಸ್ಥಿತಿಯು ಮೊದಲಿನಂತೆಯೇ ಇದೆಯೆಂದೂ ತಿಳಿದು ಬರುತ್ತದೆ.

ಮುಂಬಯಿ ಸರಕಾರವು, ಸಕ್ಕರೆ ಉತ್ಪಾದನೆ ಕಾರ್ಖಾನೆಗಳಲ್ಲಿ ಬಾಳಬಲಿಕೆಯ ವ್ಯವಸ್ಥೆಯನ್ನು ಏರ್ಪಡಿಸಲು ಮತ್ತು ಸಕ್ಕರೆಯ ಉತ್ಪಾದನೆಯ ಪರಿಮಾಣವನ್ನು ಹೆಚ್ಚಿಸಲು ಸಲಹೆ ನೀಡಲು ಒಂದು ಸಮಿತಿಯನ್ನು ನೇಮಿಸಿದೆ. ಈ ಸಮಿತಿಯು ಸಕ್ಕರೆಯ ಉತ್ಪಾದನೆಯ ಪರಿಮಾಣವನ್ನು ಹೆಚ್ಚಿಸಲು ಕಬ್ಬಿನ ಬೆಳೆಯ ಪ್ರತಿ ಎಕರೆಗೆ ಇಳುವರಿಯನ್ನು ಹೆಚ್ಚಿಸಲು ಸಲಹೆ ನೀಡಿದೆ. ಈ ಸಮಿತಿಯ ಸಲಹೆಯಂತೆ ಮುಂಬಯಿ ಸರಕಾರವು ಕಬ್ಬಿನ ಬೆಳೆಯ ಪ್ರತಿ ಎಕರೆಗೆ ಇಳುವರಿಯನ್ನು ಹೆಚ್ಚಿಸಲು ಕಬ್ಬಿನ ಬೆಳೆಯ ಸಂಶೋಧನೆಗಾಗಿ ಒಂದು ಕೇಂದ್ರವನ್ನು ಸ್ಥಾಪಿಸಲು ನಿರ್ಧರಿಸಿದೆ. ಈ ಕೇಂದ್ರವು ಪಶ್ಚಿಮ ಭಾರತದ ಸಕ್ಕರೆ ಉತ್ಪಾದನೆಯ ಕೇಂದ್ರವಾಗಿರುವದು. ಈ ಕೇಂದ್ರವು ಕಬ್ಬಿನ ಬೆಳೆಯ ಸಂಶೋಧನೆಯ ಜೊತೆಗೆ ಕಬ್ಬಿನ ಬೆಳೆಯ ಸಂರಕ್ಷಣೆಯ ಕಾರ್ಯವನ್ನೂ ಕೈಗೊಳ್ಳಲಿದೆ. ಈ ಕೇಂದ್ರವು ಕಬ್ಬಿನ ಬೆಳೆಯ ಸಂಶೋಧನೆಯ ಕಾರ್ಯವನ್ನು ಕೈಗೊಳ್ಳಲು ಸಾಕಷ್ಟು ಸಿಬ್ಬಂದಿಯನ್ನು ಹೊಂದಿರುವದು. ಈ ಕೇಂದ್ರವು ಕಬ್ಬಿನ ಬೆಳೆಯ ಸಂಶೋಧನೆಯ ಕಾರ್ಯವನ್ನು ಕೈಗೊಳ್ಳಲು ಸಾಕಷ್ಟು ಹಣವನ್ನು ಒದಗಿಸಲಾಗಿದೆ. ಈ ಕೇಂದ್ರವು ಕಬ್ಬಿನ ಬೆಳೆಯ ಸಂಶೋಧನೆಯ ಕಾರ್ಯವನ್ನು ಕೈಗೊಳ್ಳಲು ಸಾಕಷ್ಟು ಸಮಯವನ್ನು ಒದಗಿಸಲಾಗಿದೆ.

ಭಾರತ ಪ್ರಜಾರಾಜ್ಯದ ಕೇಂದ್ರ ಸಕ್ಕರೆ ಕಾರಖಾನೆಗಳಿಂದ ೧೯೫೦ ಫೆಬ್ರುವರಿ ತಿಂಗಳ ಕೊನೆಯವರೆಗೆ ಉತ್ಪಾದಿಸಲ್ಪಟ್ಟ ಒಟ್ಟು ಸಕ್ಕರೆಯ ಪರಿಮಾಣವು ೧೭,೫೩,೫೦೦ ಮೆಟ್ರಿಕ್ ಟನ್ನುಗಳಷ್ಟಾಗಿದೆ. ಈ ಪರಿಮಾಣವು ೧೯೪೯ ಫೆಬ್ರುವರಿ ತಿಂಗಳ ಕೊನೆಯವರೆಗೆ ಉತ್ಪಾದಿಸಲ್ಪಟ್ಟ ಸಕ್ಕರೆಯ ಪರಿಮಾಣಕ್ಕಿಂತ ೧೭,೫೩,೫೦೦ ಮೆಟ್ರಿಕ್ ಟನ್ನುಗಳಷ್ಟು ಹೆಚ್ಚಾಗಿದೆ. ಈ ಪರಿಮಾಣವು ೧೯೪೮ ಫೆಬ್ರುವರಿ ತಿಂಗಳ ಕೊನೆಯವರೆಗೆ ಉತ್ಪಾದಿಸಲ್ಪಟ್ಟ ಸಕ್ಕರೆಯ ಪರಿಮಾಣಕ್ಕಿಂತ ೧೭,೫೩,೫೦೦ ಮೆಟ್ರಿಕ್ ಟನ್ನುಗಳಷ್ಟು ಹೆಚ್ಚಾಗಿದೆ.

ಅಂಕಿ ಸಂಖ್ಯೆಗಳು

ಸಂಯುಕ್ತ ಪ್ರಾಂತದ ಕಬ್ಬು ಬೆಳೆವಣಿಗೆ ಖಾತೆಯವರು ಸುಧಾರಿಸಿದ ಬೀಜ, ಜಾತಿ, ಕೃಷಿ, ತರಹಗಳ ಉನ್ನತಿಗಾಗಿ ಪ್ರಯತ್ನಪಡುತ್ತಿದ್ದು ಅದರಿಂದ ಹೆಚ್ಚಿನ ಪ್ರಮಾಣದಲ್ಲಿ ಸಕ್ಕರೆಯನ್ನಾಗುವ ಡಾಲು ಕಂಡುಬರುತ್ತಿದೆ. ಅದಷ್ಟು ಕಡಿಮೆ ಕ್ಷೇತ್ರದಲ್ಲಿ ಅದಷ್ಟು ಹೆಚ್ಚಿನ ಬೆಳೆ ಬೆಳೆಯುವುದೇ ಅವರ ಧ್ಯೇಯ ಹಾಗೂ ಗುರಿಗಳಾಗಿದ್ದು, ಆ ಕಾರ್ಯದಲ್ಲಿ ಅವರು ಯಶಸ್ಸು ಪಡೆಯುತ್ತಿದ್ದಾರೆಂದು ಕಂಡುಬರುವಂತಿದೆ. ಸಕ್ಕರೆ ಹಾಗೂ ಕಬ್ಬುಗಳ ವ್ಯಾಪಾರವನ್ನು ಸಹಕಾರಿ ಸಂಸ್ಥೆಯು ಮೇಲೆಯೇ ನಡೆಯಲಾಗುತ್ತಿದೆ.

ಸದ್ಯದ ಸಕ್ಕರೆ ಕಂಟ್ರೋಲು ಬೆಲೆಯನ್ನು ಪ್ರತಿ ಮಣಕ್ಕೆ, ಅಂಬಾಲಾದಲ್ಲಿ ರೂ. ೩೧-೪ ಂ, ಹೊಸದಿಲ್ಲಿಯಲ್ಲಿ ರೂ. ೩೫-೨-೨, ವಿರತದಲ್ಲಿ ೩೨-೪-೦ ಂ, ಕಾನಪುರದಲ್ಲಿ ರೂ. ೩೧-೪-೦ ಂ ಕಲಕತ್ತೆಯಲ್ಲಿ ರೂ ೩೧-೧೨-೦, ಮದ್ರಾಸದಲ್ಲಿ ರೂ. ೩೩ ೬-೦ ಹಾಗೂ ಮುಂಬಯಿಯಲ್ಲಿ ರೂ. ೩೩ ೬-೦ ಇರುತ್ತದೆ.

ಭಾರತ ಪ್ರಜಾರಾಜ್ಯದ ಕೇಂದ್ರ ಸಕ್ಕರೆ ಕಾರಖಾನೆಗಳಿಂದ ೧೯೫೦ ಫೆಬ್ರುವರಿ ತಿಂಗಳ ಕೊನೆಯವರೆಗೆ ಉತ್ಪಾದಿಸಲ್ಪಟ್ಟ ಒಟ್ಟು ಸಕ್ಕರೆಯ ಪರಿಮಾಣವು ೧೭,೫೩,೫೦೦ ಮೆಟ್ರಿಕ್ ಟನ್ನುಗಳಷ್ಟಾಗಿದೆ. ಈ ಪರಿಮಾಣವು ೧೯೪೯ ಫೆಬ್ರುವರಿ ತಿಂಗಳ ಕೊನೆಯವರೆಗೆ ಉತ್ಪಾದಿಸಲ್ಪಟ್ಟ ಸಕ್ಕರೆಯ ಪರಿಮಾಣಕ್ಕಿಂತ ೧೭,೫೩,೫೦೦ ಮೆಟ್ರಿಕ್ ಟನ್ನುಗಳಷ್ಟು ಹೆಚ್ಚಾಗಿದೆ. ಈ ಪರಿಮಾಣವು ೧೯೪೮ ಫೆಬ್ರುವರಿ ತಿಂಗಳ ಕೊನೆಯವರೆಗೆ ಉತ್ಪಾದಿಸಲ್ಪಟ್ಟ ಸಕ್ಕರೆಯ ಪರಿಮಾಣಕ್ಕಿಂತ ೧೭,೫೩,೫೦೦ ಮೆಟ್ರಿಕ್ ಟನ್ನುಗಳಷ್ಟು ಹೆಚ್ಚಾಗಿದೆ.

೧೯೪೯ ರ ನವೆಂಬರ ೧ ರಿಂದ ಒಟ್ಟು ಉತ್ಪಾದನೆಯು ೨,೯೫,೯೫,೦೦೦ ಮಣಗಳಷ್ಟೆಂದೂ, ಹಾಗೂ ಒಟ್ಟು ವಿತರಣವು ೬೭,೭೧,೦೦೦ ಮಣಗಳಷ್ಟೆಂದು ತಿಳಿದು ಬರುತ್ತದೆ. ಹೋದ ಸುಗ್ಗಿಗೆ ೧,೬೨,೯೬,೦೦೦ ಮಣ ಉತ್ಪಾದನೆಯೂ ೯೬,೬೯,೦೦೦ ಮಣ ವಿತರಣೆಯೂ ಆಗಿತ್ತು.

ಪರಿಸ್ಥಿತಿ

ಏನೇ ಇದ್ದರೂ ಸಕ್ಕರೆಯ ಪರಿಸ್ಥಿತಿಯಲ್ಲಿ ಮಾತ್ರ ಏನೂ ವ್ಯತ್ಯಾಸವಿಲ್ಲ. ಸಕ್ಕರೆ ನೇಟಿ ಮೊದಲಿನಂತೆಯೇ ನಡೆದಿದೆ. ನಿಯಂತ್ರಣವೂ ಹಾಗೆಯೇ ನಡೆದಿದೆ. ನಿಯಂತ್ರಿತ ಬೆಲೆ ಹಾಗೂ ರೇಶನ್ನಿನ ಕ್ಷೇತ್ರಗಳಲ್ಲಿಯ ವಿತರಣ ಸಡ್ಡತಿಗಳು ಮೊದಲಿನಂತೆಯೇ ಇರುತ್ತವೆ. ಸರಕಾರವು ಸಕ್ಕರೆ ಉದ್ಯೋಗಕ್ಕೆ ಇನ್ನು ಮುಂದೆ ಸಂರಕ್ಷಣ ದೊರಕಲಾರದೆಂದು ಹೇಳಿದುದರ ಪರಿಣಾಮವು ಸಕ್ಕರೆ ಕೊಳ್ಳುವ ಗಿರಾಕಿಗಳ (ಉಪಯೋಗಿಸುವವರು) ಮೇಲೆ ಏನೂ ಆಗಿಲ್ಲ.

ಉತ್ಪತ್ತಿ ಹಾಗು ಬೇಡಿಕೆಗಳ ಪ್ರಮಾಣವು ಸರಿ ಬರುವವರೆಗೆ ಸಕ್ಕರೆಯ ಮೇಲೆ ಕಂಟ್ರೋಲು ತಪ್ಪಲಾರದೆಂದು ನಿರೀಕ್ಷಿಸಲಾಗುತ್ತದೆ. ಹೊರ ದೇಶಗಳಿಂದ ಸಕ್ಕರೆಯನ್ನು ಆಯಾತ ಮಾಡಿಕೊಳ್ಳಬೇಕೆಂಬ ಮಾತೂ ಕೇಳಬರುತ್ತದೆ. ಸಕ್ಕರೆಯನ್ನು ಆಯಾತ ಮಾಡುವ ಪ್ರಶ್ನೆಯ ಬಗ್ಗೆ ಸರಕಾರದಲ್ಲಿ ವಿಚಾರ ವಿನಿಮಯವು ನಡೆಯುತ್ತಿರುವದೆಂದೂ, ಸ್ಟರ್ಲಿಂಗ ಕ್ಷೇತ್ರಗಳಲ್ಲಿ ಈ ಆಯಾತನ ಬಗ್ಗೆ ಪ್ರಯತ್ನ ನಡೆದಿರುತ್ತದೆಂದೂ, ಈ ಪ್ರಯತ್ನದ ಪರಿಣಾಮವಾಗಿ ಪರದೇಶಗಳಿಂದ ಸುಮಾರು ಒಂದು ಲಕ್ಷ

(ಅ ನೇ ಪುಟ ನೋಡಿರಿ.)

ಗಿಣ್ಣದ ಹಾಲು ಕರುವಿಗೇ ಬಿಡಿರಿ

ಗಿಣ್ಣದ ಹಾಲಿನಿಂದ ರುಚಿಯಾದ ಗಿಣ್ಣವನ್ನು ಮಾಡಿ ತಿನ್ನುವಾಗ ಅದು ಮನುಷ್ಯನ ಪಚನಕ್ರಿಯೆಗೆ ನಿಶ್ಚಯವಾಗಿಯೂ ಕೇಡು ಮಾಡುವದೆಂಬುದು ಯಾರಿಗೂ ಹೊಳೆಯುವದಿಲ್ಲ. ಗಿಣ್ಣವು ಮನುಷ್ಯನ ಆರೋಗ್ಯಕ್ಕೆ ಅಹಿತಕಾರಿಯಷ್ಟೇ ಅಲ್ಲದೆ ಗಿಣ್ಣದ ಹಾಲನ್ನು ತಾವು ಹಿಂಡಿಕೊಳ್ಳುವದೆಂದರೆ ಸೈಸರ್ಗಿಕ ಮತ್ತು ಪೌಷ್ಟಿಕ ಆಹಾರವನ್ನು ಕರುವಿನ ಬಾಯಿಂದ ಕಸಿದುಕೊಂಡಂತೆಯೇ

ಮುಂದಿನ ಸಲ ನಿಮ್ಮ ಆಕಳು ಈದಾಗ ಮೊದಲನೇ ಸಲ ಹಿಂಡಿದ ರಕ್ತಮಿಶ್ರಿತ "ಹಾಲನ್ನು" ಚೆನ್ನಾಗಿ ನೋಡಿರಿ. ಅದು ಹಾಲೇ ಅದರೂ ದಿನದ ಹಾಲಿಗಿಂತ ಬೇರೆಯಾಗಿದೆ ಆಕಳ ಕೆಚ್ಚಲದಲ್ಲಿರುವ ರಕ್ತ ಗ್ರಂಥಿಗಳಿಂದ ಒಂದ ವಿಶೇಷ ಪ್ರವಾಹಿ ಪದಾರ್ಥವದು ನಿಧವಾದ ಹಾಲು ಕೆಚ್ಚಲಲ್ಲಿ ಹಯಲು ಪ್ರಾರಂಭಿಸುತದು. ಆ ವಿಶೇಷ ಪ್ರವಾಹಿ ಪದಾರ್ಥವನ್ನು ಹಿಂಡಿದ ಕರುವ ಯಾವ ಅದಕ್ಕೆ ನಾವು ಗಿಣ್ಣದ ಹಾಲು ಎನ್ನುತ್ತೇವೆ. ಅದು ಜಿಗಿಟಾಗಿಯೂ ಸ್ವಲ್ಪ ಹುಳಿಯಾಗಿಯೂ ಇರುತ್ತದೆ. ಅವರ ಬಣ್ಣ ಕುಸು ಹಳದೀ ಮೋಡಿಯಬದು ದಿನದ ಹಾಲಿಗಿಂತಲೂ ಅದು ಜಡವಾಗಿರುತ್ತದೆ. ಗಿಣ್ಣದ ಹಾಲಿನಲ್ಲಿ ಸಾದಾ ಹಾಲಿಗಿಂತಲೂ ಘನ ಪದಾರ್ಥಗಳ ಅಂಶ ಹೆಚ್ಚಿರುತ್ತದೆ. ಈದ ಬಳಿಕ ಮೊದಲನೆಯ ಸಲ ಹಿಂಡಿದ ಹಾಲು ಹಾಗು ಮೂರು ದಿವಸಗಳ ತರುವಾಯ ಹಿಂಡಿದ ಹಾಲು ಸೃಧಕ್ಕರಿಸಿದರೆ ಅವುಗಳಲ್ಲಿರುವ ಬೇರೆ ಬೇರೆ ಪದಾರ್ಥಗಳ ಪ್ರಮಾಣ ಈ ಕೆಳಗಿನಂತೆ ಇದ್ದುದು ಕಂಡುಬರುತ್ತದ.

ನೂರಕ್ಕೆ ಪ್ರಮಾಣ

ಗಿಣ್ಣದ ಹಾಲು		ವರ ದಿನಗಳ ತರುವಾಯದ ಹಾಲು
ನೀರು	೭೩.೧೩	೮೬.೭೪
ಸೆಣ	೩.೫೪	೪.೧೮
ಕ್ಯಾಸೀನ		
ಹಾಲಿನ ಪ್ರೊಟೀನ್	೫.೭೪	೩.೦೩
ಅಲ್ಬುಮಿನಮ್ ಹಾಗೂ		
ಗ್ಲೋಬುಲಿನ್	೧೬.೫೬	೧೩೫
ಲ್ಯಾಕ್ಟೋಜ್	(ಹಾಲಿನ ಸಕ್ಕರೆ)	೩.೦೦ ೪.೦೦
ಆ್ಯಶ್	೧.೧೫	೦.೯೨

ಸಾಮಾನ್ಯ ಹಾಲಿನಲ್ಲಿಯ ಎರಡಷ್ಟು ಪದಾರ್ಥಗಳು ಗಿಣ್ಣದ ಹಾಲಿನಲ್ಲಿರುತ್ತವೆಂಬುದು ಮೇಲಿನ ಪ್ರಮಾಣದಿಂದ ತಿಳಿದುಬರುತ್ತದೆ ಗಿಣ್ಣದ ಹಾಲಿನಲ್ಲಿ ಕ್ಯಾಸೀನಮತ್ತು ಸಕ್ಕರೆಯು ಪ್ರಮಾಣ ಕಡಿಮೆ ಇರುತ್ತದೆ ಆದರೆ ಅದರಲ್ಲಿ ಕಬ್ಬಿಣದ ಅಂಶವು ಸಾದಾ ಹಾಲಿಗಿಂತಲೂ ಹೆಚ್ಚಿರುತ್ತದೆ. ಇದಲ್ಲದೆ ಗಿಣ್ಣದ ಹಾಲಿನಲ್ಲಿ ರಕ್ತದ ಅಂಶವೂ ಇರುವ ಸಂಭವವಿದೆ. ಇದಕ್ಕೆ ಉಗ್ರ ವಾಸನೆ ಇದ್ದು ರುಚಿಗೆ ಸ್ವಲ್ಪ ಹುಳಿಯಾಗಿರುತ್ತದೆ. ಇದರಲ್ಲಿ ಅಲ್ಬುಮಿನಮ್ ಹಾಗು ಗ್ಲೊಬುಲಿನ್ ಗಳ ಅಂಶ ಹೆಚ್ಚಿರುವದರಿಂದ ಕಾಯಿಸಿದಾಗ ಹಾಲು ಗಟ್ಟಿಯಾಗಿರುತ್ತದೆ. ಆಕಳು ಈದೊಡನೆ ಮೊದಲ ಸಲ ಹಿಂಡಿದ ಹಾಲು, ತರುವಾಯದ ಹಾಲಿನಲ್ಲಿ ಗಿಣ್ಣದ ಅಂಶ ಕಡಿಮೆಯಾಗುತ್ತ ಹೋಗಿ ೪ನೆಯ ಹಾಗು ೬ನೆಯ ದಿವಸಲ ಹಿಂಡಿದ ಬಳಿಕ ಗಿಣ್ಣದ ಅಂಶ ಪೂರ್ಣ ಕಡಿಮೆಯಾಗಿ ನಿಧವಾದ ಹಾಲು ಬರಹತ್ತುತ್ತದೆ. ಕೆಲವೊಂದು ಆಕಳಿಗಳ ಹಾಲಿನಲ್ಲಿ ಈದ ಬಳಿಕ ಸುಮಾರು ಒಂದು ವಾರದ ವರೆಗೂ ಗಿಣ್ಣದ ಅಂಶ ವಿರತ್ತದೆ. ಗರ್ಭದೊಳಗಿನ ಪರಿಸ್ಥಿತಿಯಿಂದ ಭಿನ್ನವಾಗಿರುವ ಹೊರಗಿನ ಪರಿಸ್ಥಿತಿಗೆ ಕರು ಎಷ್ಟು ಬೇಗನೆ ಹೊಂದಿಕೊಳ್ಳುವುದೋ ಅದರ ಮೇಲೆ ಇದು ಅವಲಂಬಿಸಿದೆ.

ಬಹಳ ದಿನ ತಡೆಯದು

ಗಿಣ್ಣದ ಹಾಲು ಬಹಳ ದಿನ ತಡೆಯುವದಿಲ್ಲ. ಅಂದಮೇಲೆ ಇದಕ್ಕೆ ವ್ಯಾಪಾರೀ ಮಹತ್ವವಿಲ್ಲವೆಂದೇ ಹೇಳಬಹುದು ಇದು ಮನುಷ್ಯನ ಹೊಟ್ಟೆಗೂ ಒಳ್ಳೆಯದಲ್ಲ, ಇದರಿಂದ ಯಾವ ಉಪಯುಕ್ತ ಪದಾರ್ಥಗಳನ್ನೂ ತಯಾರಿಸಲು ಸಾಧ್ಯವಿಲ್ಲ ಇದರಿಂದ ಬೆಣ್ಣೆ ಅಥವಾ ತುಪ್ಪ ತಯಾರಿಸಿದರೆ ಸ್ವಲ್ಪ ವೇಳೆಯಲ್ಲಿಯೇ ಅವು ಬುಗ್ಗುನಾರ ಹತ್ತುತ್ತದೆ.

ಸಾಧಾರಣವಾಗಿ ಆಕಳು ನಿತ್ಯದ ಹಾಲಿಗಿಂತ ಗಿಣ್ಣದ ಹಾಲನ್ನು ಕದಮೆ ಕೊಡುತ್ತದೆ. ಆದರೆ ಮೊದಲನೆಯ ಸಲ ಬೆಣೆಕ ಗಿಣ್ಣದ ಹಾಲಿನ ಮೇಲಿಂದ ಆಕಳು ಹೇಗೆ ಹೈನ ಮಾಡುವದೆಂಬುದನ್ನು ತಿಳಿಯಬಹುದು. ಗಿಣ್ಣದ ಹಾಲು ಹೆಚ್ಚಿಗೆ ಹೊರಟರೆ ಆಕಳು ಮುಂದೆ ನಿಶ್ಚಯವಾಗಿಯೂ ಹೆಚ್ಚು ಹಾಲು ಕೊಡುವದು ಆದ್ದರಿಂದ ಈದ ಬಳಿಕ ಸುಮಾರು ಅದರಿಂದ ಎಂಟು ವಾರಗಳ ವರೆಗೆ ಆಕಳಿಗೆ ಸಂಪೂರ್ಣ ವಿಶ್ರಾಂತಿಯನ್ನು ಕೊಡಬೇಕು. ಅಂತರೆ ಮುಂದಿನ ಸೂಲಕ್ಕೂ ಆಕಳು ಹೆಚ್ಚು ಹಾಲು ಕೊಡಲಿಲ್ಲ.

ನಮ್ಮ ದೇಶದಲ್ಲಿ ಗಿಣ್ಣದ ಹಾಲಿನಿಂದ ರುಚಿ ರುಚಿಯಾದ ಗಿಣ್ಣವನ್ನು ಮಾಡಿ ತಿನ್ನುವ ಪರಿಪಾಠವಿದೆ. ಎಷ್ಟೋ ಜನರು ಅದನ್ನು ಬಹಳ ಪ್ರೀತಿಯಿಂದ ತಿನ್ನುತ್ತಾರೆ. ಹೀಗೆ ಗಿಣ್ಣದ ಹಾಲನ್ನು ಉಪಯೋಗಿಸುವದರಿಂದ ಕರುವಿಗೆ ತೀರ ಸ್ವಲ್ಪ ಹಾಲು ಉಳಿಯುತ್ತದೆ. ಹೊಟ್ಟೆ ಗಿಲ್ಲದೆ ಕರುಗಳು ಸಾಯುವದೂ ಉಂಟು ಸಾಯದೆ ಉಳಿದರೂ ಅವುಗಳ ಬೆಳವಣಿಗೆ ಕುಂದಿ ಒಡೆಯನಿಗೆ ಯಾವ ಉಪಯೋಗಕ್ಕೂ ಬಾರದೆ ಮೇವಿಗೆ ಭಾರವಾಗುವವು. ಇವಲ್ಲದೆ ಮನುಷ್ಯನ ಆರೋಗ್ಯಕ್ಕೂ ಗಿಣ್ಣ ಒಳ್ಳೆಯದಲ್ಲ ಅದರಲ್ಲಿ ಗ್ಲೋಬುಲಿನ್ ಅಂಶ ಬಹಳವಿರುವದರಿಂದ ಹೊಟ್ಟೆ ಕೆಡುವ ಸಂಭವವಿದೆಯಲ್ಲದೆ ತೊಂದರೆಯಾಗಬಹುದು. ಆದ್ದರಿಂದ ಗಿಣ್ಣದ ಹಾಲಿನ ಉಪಯೋಗವನ್ನು ಸಂಪೂರ್ಣವಾಗಿ ಬಿಟ್ಟುಬಿಡುವದು ಒಳಿತು ಅದನ್ನು ಕರಕ್ಕೆ ಬಿಡಬೇಕು.

ರಕ್ತಾಭಿಸರಣಕ್ಕೆ

ಕರುವಿಗೆ ಗಿಣ್ಣದ ಹಾಲಿನ ಮಹತ್ವ ಅಷ್ಟಿಷ್ಟಲ್ಲ. ತಾಯಿ ಗರ್ಭದೊಳಗಿನ ಪರಿಸ್ಥಿತಿಯಿಂದ ಬೇರೆಯೇ ಆದ ವಾತಾವರಣದಲ್ಲಿ ಕರು ಬದುಕಬೇಕಾದರೆ ಅದಕ್ಕೆ ಕೊಡಬೇಕಾದ ಆಹಾರವು ಬೇಗನೆ ಪಚನವಾಗುವಂಥಲ್ಲದೆ ಅದರ ಬೆಳವಣಿಗೆಗೆ ಅವಶ್ಯವಿರುವ ಶಕ್ತಿವರ್ಧಕ ಗುಣಗಳುಳ್ಳವಿರಬೇಕು. ಅಲ್ಲದೆ ಆ ಆಹಾರದಲ್ಲಿ ಸೈಸರ್ಗಿಕ ಪ್ರತಿಕೂಲ ವಾತಾವರಣದಿಂದ ಕರುವನ್ನು ಸಂರಕ್ಷಿಸುವ ವಿಶೇಷ ಗುಣಗಳೂ ಇರಬೇಕಾಗುತ್ತವೆ ಗಿಣ್ಣದ ಹಾಲೊಂದೇ ಈ ಎಲ್ಲ ಸಾಮಾನ್ಯ ಹಾಗು ವಿಶೇಷ ಗುಣಗಳನ್ನೊಳಗೊಂಡ ಆಹಾರ

(ಪೀಠ ಪುಟ ನೋಡಿರಿ.)

ಹೈಡ್ರೋಜನ್ ಬಾಂಬ್

ಮೊನ್ನೆ ಮೊನ್ನೆಯ ವರೆಗೆ ಜನರು ಅಣುಬಾಂಬಿನ ಬೆದಂಕೆಯನ್ನು ತಲೆಗೆ ತೆಗೆದುಕೊಂಡೇಇಲ್ಲ ಎಂದು ವಿಜ್ಞಾನಿಗಳು ಅಂಜುತ್ತಿದ್ದರು. ಈಗ ಅನೇಕ ಹೊಣೆಗಾರ ವಿಜ್ಞಾನಿಗಳು ಹೈಡ್ರೊಜನ್ ಬಾಂಬಿನ ವಿನಾಶಕತೆಯ ಬಗ್ಗೆ ಅತಿಶಯ ಮಾಡಿಕೊಂಡು ಆ ಮೂಲಕ ಜನರು ಹೆಚ್ಚು ಭಯಜ್ವರಗ್ರಸ್ತರಾಗುತ್ತಿರುವುದನ್ನು ಕಂಡು ಹೆದರತೊಡಗಿದ್ದಾರೆ.

ಚಿಕಾಗೋ ವಿಶ್ವವಿದ್ಯಾನಿಲಯದಲ್ಲಿ ಮೊನ್ನೆ ಒಂದು ದುಂಡುಮೇಜಿನ ಚರ್ಚೆಯನ್ನು ಪ್ರೊ. ಹ್ಯಾರಿಸನ್ ಬ್ರೌನರು ಕರೆದರು. ಅದು ಭಯದ ಹಿಸುದೃಷ್ಟಿಯನ್ನೇ ಕರೆಯಿತು. ಹೈಡ್ರೋಜನ್ ಬಾಂಬು ಹಾತಿದ್ದರಿಂದ ಬೆಂಕಿ ಹಕ್ಕುವ ಪರಿಣಾಮ ಇನ್ನೂ ವ್ಯಾಪ್ತಿವಿಸ್ತವಾಗಬಹುದೇ ಎಂದು ಬ್ರೌನರು ತಮ್ಮ ಅ ರಾಷ್ಟ್ರ ಸಭಿಕರಿಗೆ ತಿಳಿಸಿದರು. ಅದರ ರೇಡಿಯೋ ಕ್ರಿಯೆಯ ಅನುಸರಣಾಮಗಳು ಮತ್ತಷ್ಟು ಭೀಕರ. ಹೈಡ್ರೋಜನ್ನಿನ ಸಿಡಿತಗಳು ಗಾಳಿಯಲ್ಲಿ ಬಹಳ ರೇಡಿಯೋ ಕ್ರಿಯೆಯನ್ನು ನೂಡುವ ಕಣಗಳನ್ನು ಹರಡಿಬಿಡುವುದು. ಮಿಡತೆಗಳ ಗುಂಪಿನಂತೆ ಅವು ಗಾಳಿಯ ಗಮನದ ದಿಕ್ಕನ್ನು ಹಿಡಿದು ಹಾದು ಜನ, ದನ, ಕೃಮಿ-ಕೀಟ ವನಸ್ಪತಿಗಳನ್ನು ಕೊಲ್ಲುತ್ತ ಹೋಗುವುವು

ರಶಿಯದ ಮೇಲೆ ಬಾಳಿ ಮೂಡುವ ಬಗೆ

ಮಾತಿನ ನಡವೆ ಅನೇಕರಿವು ರಶಿಯವನ್ನು ಹೇಗೆ ದಾಳಿಗೀಡುಮಾಡಬಹುದೆಂಬುದನ್ನು ಬ್ರೌನರು ವಿವರಿಸಿದರು. ಉತ್ತರ ದಕ್ಷಿಣವಾಗಿ ಯುರೋಪಿನಮೇಲೆ ಹೈಡ್ರೊಜನ್ ಬಾಂಬುಗಳನ್ನು ಹಾಸಿರಿ ಬಿಡುವುದಷ್ಟೇ ಮಾತಕತ್ಯ ಕೆಲಸ. ರೇಡಿಯೋ ಕ್ರಿಯೆಯನ್ನು ಗಾಳಿಯು ಪೂರ್ವಕ್ಕೊಯ್ಯುತ್ತದೆ. ಆಗ ಲೆನಿನ್ ಗ್ರಾಡಿನಿಂದ ಒಡೆಸ್ಸದ ವರೆಗಿನ ೧೫೦೦ ಮೈಲು ವಿಸ್ತಾರದಲ್ಲಿ ಮತ್ತು ಪ್ರೇಗಿನಿಂದ ಯೂರಲ್ ಪರ್ವತದವರೆಗಿನ ೩೦೦೦ ಮೈಲು ವಿಸ್ತಾರದಲ್ಲಿ ಅದು ಸರ್ವನಾಶವನ್ನು ಮಾಡಿಬಿಡುತ್ತದೆ. ರಶಿಯವು ಅಮೆರಿಕದ ಮೇಲೆ ದಾಳಿ ಮಾಡುವದಾದರೆ ಅದು ಬಾಂಬುಗಳನ್ನು ಕ್ಯಾಲಿಫೋರ್ನಿಯದಿಂದ ೧೫೦೦ ಮೈಲು ಪಶ್ಚಿಮದಲ್ಲಿ ಸಿಡಿಸಬಹುದು ಅವುಗಳ ರೇಡಿಯೋ ಕ್ರಿಯೆಯು ಪೂರ್ವಕ್ಕೆ ತಿರುಗಿ ಇಡಿ ಅಮೇರಿಕದ ಸಂಯುಕ್ತ ಸಂಸ್ಥಾನವನ್ನು ಹುಲ್ಲು ಕೊಯ್ದಂತೆ ಸಂಹರಿಸಿಬಿಡಬಲ್ಲುದು; ನ್ಯೂಯಾರ್ಕ ನಗರವಾಸಿಗಳನ್ನು ಐದೇ ದಿನಗಳಲ್ಲಿ ನಿರ್ವೀರ್ಯರನ್ನಾಗಿ ಮಾಡಿಬಿಡಬಲ್ಲುದು.

ಚಿಕಾಗೋವಿನ ಭೌತಿಕ ವಿಜ್ಞಾನಿಯೋ. ಟಲಾರ್ಡನು ಹೈಡ್ರೊಜನ್ನಿನ ಕಣಗಳ ಎರಕದಿಂದ ಶತಕೋಟಿ ನ್ಯೂಟ್ರಾನುಗಳು ಹುಟ್ಟಿ ಧೂಳಾಗಿ ಜಗತ್ತಿನ ಮೇಲೆ ಹರಿದು ಮೇಲ್ಪಿರಿಯಾಗಿ ಅಂಟಿಕೊಂಡು ಅದರ ಎಲ್ಲ ಜೀವ ಜಂತುಗಳನ್ನೂ ಕೊಲ್ಲಬಲ್ಲುದೆನ್ನುತ್ತಾನೆ. ಇಲಿನೋಯಿಸ್ ವಿಶ್ವವಿದ್ಯಾನಿಲಯದ ಪ್ರೆಡರಿಕ್ ಸಾಟ್ಟನೂ ಕಾರ್ನೆಲ್ಲಿನ ಹ್ಯಾನ್ಸ್ ಬೆಥಿಯೂ ಈ ಮಾತನ್ನು ಅನೇಕರು ದಿಸುತ್ತಾರೆ.

ಇಂಥ ಬಸಿಯ ಮಾತುಗಳು ವಿಶ್ವ ವಿಜ್ಞಾನಿಗಳಿಗೆ ರುಚಿಸುವದಿಲ್ಲ; ಅವರು ಜುಗುಪ್ಸೆಪಡುತ್ತಾರೆ; ಅಥವಾ ಆಶ್ಚರ್ಯವನ್ನು ವ್ಯಕ್ತಮಾಡುತ್ತಾರೆ. ಒಬ್ಬ ಮನುಷ್ಯನನ್ನ ಕೊಲ್ಲಲು ಎಷ್ಟುಕಾಲದ ರೇಡಿಯೋ ಕ್ರಿಯೆ ಬೇಕೆಂಬುದನ್ನೂ ನಿರ್ಧಾರವಾಗಿಲ್ಲವೆನ್ನುತ್ತಾರೆ ಅವರು. ಅಲ್ಲದೆ ಅದು ಅಂಟಿದಂತೆ ಮುಂಜಾಗ್ರತೆ ವಹಿಸಲು ಬರಬಹುದು ಅಥವಾ ಅಂಟಿದರೆ ಗುಣಪಡಿಸಿಕೊಳ್ಳಲೂ ಸಾಧ್ಯವಾಗಬಹುದು ಎಂಬುದು ಅವರ ಮತ. ಹೈಡ್ರೋಜನ್ ಬಾಂಬುಗಳು ಎಂಥ ಪರಿಣಾಮವನ್ನುಂಟುಮಾಡುವುವು ಅಥವಾ ಎಷ್ಟು ಕಾಲದಲ್ಲಿ ಅವನ್ನು ಸಂಪೂರ್ಣವಾಗಿ ನ್ಯಾಯವಾಗಿ ಮಾಡಬಹುದು ಎಂಬುದು ಯಾರಿಗೂ ಗೊತ್ತಿಲ್ಲ. ಬ್ರೌನ್ ಜಿಲಾರ್ಡ ಮುಂತಾದ ಇವರು ಈ ಭಯಂಕರಕ ಪರಿಸ್ಥಿತಿಯೊಡನೆ ಮನುಷ್ಯ ಇನ್ನೂ ಹೆಚ್ಚು ದುರ್ಭರವೆನಿಸ ಸಮಸ್ಯೆಗಳನ್ನು ಬೆರೆಸಿ ಗೊಂದಲ ಮಾಡಿಕೊಂಡಿದ್ದಾರೆ. ಎಂಬುದು ಸದಸು ವಿಮರ್ಶಕರ ಅಭಿಪ್ರಾಯ. ಅದರೆ ಅಷ್ಟು ಸದಯರಲ್ಲದ ವಿಮರ್ಶಕರು, ಭಯ ಸೃಷ್ಟಿಕಾರರು ಎಷ್ಟೇ ಸದುದ್ದೇಶ ಪ್ರೇರಿತರಾಗಿದ್ದರೂ ಬಹಳ ಅಪಾಯಕರವಾದ ಅನುಕೂಲ್ಯಗಳನ್ನು ರಶಿಯಕ್ಕೆ ಒದಗಿಸಿಕೊಂಡುವಂತೆ ಅಮೇರಿಕದ ಜನರನ್ನು ಒತ್ತಾಯಕ್ಕೊಳಪಡಿಸುತ್ತಿದ್ದಾರೆ ಎಂದು ಆರೋಪಿಸುವರು.

ಅತಿಭಯಕ್ಕೆ [illegible]

ಯಾವ ವಿಜ್ಞಾನಿಯೂ ಹೈಡ್ರೋಜನ್ ಬಾಂಬನ್ನು ಅಲ್ಪವೆಂದು ಧಿಕ್ಕರಿಸುವದಿಲ್ಲ ಬರಿ ಯೂರೇನಿಯಂ ಬಾಂಬೊಂದೇ ಒಂದು ನಗರದ ಜೀವನವನ್ನು ಅಲ್ಲೋಲಗೊಳಿಸುವಷ್ಟು ಸಮರ್ಥವಿದೆ ಸೀಕ್ಷಿಸಿದಷ್ಟು ಚೆನ್ನಾಗಿ ಹೈಡ್ರೋಜನ್ ಬಾಂಬುಗಳು ಕೆಲಸ ಮಾಡಿದರೆ, ಪ್ರಯೋಜನಕಾರಿಗಳಾದರೆ ಅದಕ್ಕಿಂತ ಬಹಳ ಬಹಳ ಪಟ್ಟು ಭಯಂಕರ ಪರಿಣಾಮಗಳನ್ನು ಮಾಡಬಹುದು ಒಂದು ನಗರದ ಜೀವಿಗಳನ್ನೂ ಕಟ್ಟಡಗಳನ್ನು ನಾಶಗೊಳಿಸುವ ಬಾಂಬಿಗೂ ಇಡಿ ಭೂಮಿಯಲ್ಲಿರುವ ಜೀವಿಜಾತಿಯನ್ನೇ ನಿರ್ಮೂಲಗೊಳಿಸುವ ಬಾಂಬಿಗೂ ಇರುವ ತಾರತಮ್ಯ ಅಲ್ಪವೇ?

ಯುರೇನಿಯಂ ಮತ್ತು ಹೈಡ್ರೋಜನ್ ಈ ಎರಡೂ ಬಾಂಬುಗಳ ಸ್ಫೋಟವು ಕೆಲ ರೇಡಿಯೋ ಕ್ರಿಯಾತ್ಮಕ ಅವಶೇಷಗಳನ್ನು ಬಿಡುವುದು ಸತ್ಯ. ನೆಲದ ಸವೀಪದಲ್ಲಿ ಯುರೇನಿಯಂ ಬಾಂಬೊಂದನ್ನು ಒಡೆದರೆ ಒಡೆದು ಬಿದ್ದ ಪದಾರ್ಥಗಳು ದೀರ್ಘಕಾಲದ ವರೆಗೆ ಅಲ್ಪ ಸ್ಥಳವನ್ನು ರೇಡಿಯೋ ಕ್ರಿಯೆಗೆ ಗುರಪಡಿಸುತ್ತವೆ. ಹಾಗಾಗಲಿಬೆ ಅದನ್ನು ಹಿರೋಶಿಮದಲ್ಲಿಯಂತೆ ನೆಲದಿಂದ ಗಳಿಂಡಿ ಎತ್ತರದಲ್ಲಿ ಸಿಡಿಸಿದರೆ ಹೊರಬಿದ್ದ ಕಣಗಳು ಗಾಳಿಯಿಂದ ಮೇಲೆ ಹಾರಿ ಹೋಗಿ ಸಿರುಪದ್ರವಿಗಳೆನಿಸುವುವು.

ಹೈಡ್ರೋಜನ್ ಬಾಂಬುಗಳೂ ರೇಡಿಯೋ ಕ್ರಿಯಾತ್ಮಕ ಅವಶೇಷಗಳನ್ನು ಉಳಿಸುವುವು. ಯುರೇನಿಯಮ್ಮಿನ ಭುಜಬಕ್ತಿಗಳು ತಮ್ಮ ಸ್ಫೋಟನ್ಯ ಅಂಶಗಳನ್ನು ಹೊರಚೆಲ್ಲುತ್ತವೆ ಹೈಡ್ರೋಜನ್ನಿನ ಏಸೋಟೋಪುಗಳ ಎರಕ ಎಮ್ಮೋ ನ್ಯೂಟ್ರಾನುಗಳನ್ನು ತೊರಬಿಡುವುದು, ಕೆಲವಂಶ ನ್ಯೂಟ್ರಾನುಗಳು ವಾತಾವರಣದಲ್ಲಿಯೂ ನೂರಕ್ಕೆ ಒಂದು ರಷ್ಟಿರುವ ಸಾರಜನಕದೊಡನೆ ಪ್ರಕ್ರಿಯೆಯೆಸಗಬಹುದು; ಅದರಿಂದ ಅದು ರೇಡಿಯೋ ಕ್ರಿಯಾತ್ಮಕವಾದರೂ ತೀವ್ರ ಕಡಿಮೆ ಅಪ್ಪ ಅಪಾಯಕರವಲ್ಲದ ಕಾರ್ಬನ್-೧೪ ಆಗಿ ಪರಿವರ್ತನೆ ಹೊಂದಬಹುದು. ಮಿಕ್ಕ ನ್ಯೂಟ್ರಾನುಗಳ ಪ್ರಕ್ರಿಯೆಗೆ ಹೊಸ ದ್ರವ್ಯಗಳನ್ನು ಒದಗಿಸಿಕೊಟ್ಟರೆ ಒಂದು ಬೇಳೆ ಬಾಂಬಿನ ಚಲತ್ಕಣ ಪರಿಣಾಮ ಹೆಚ್ಚಾಗಬಹುದಾದರೂ ಅದರ ವಿನಾಶಕತೆಯನ್ನೆ ಅಷ್ಟು ಹೆಚ್ಚಿಸಲಾರದು.

(ಬೇರೆ ಪುಟ ನೋಡಿರಿ.)

ಅಮೇರಿಕನ್ನರ ದೃಷ್ಟಿಯಲ್ಲಿ

ಇಂದಿನ ಭಾರತ

ಸಾಮಾನ್ಯವಾಗಿ ಭಾರತವನ್ನು ಕುರಿತು ವಿದೇಶಗಳ ಪತ್ರಿಕೆಗಳಲ್ಲಿ ತಪ್ಪು ತಿಳುವಳಿಕೆಯ ವರದಿಗಳು ಬರುವದೇ ಹೆಚ್ಚು. ಆದರೆ ನಮ್ಮ ಸಮಸ್ಯೆಗಳನ್ನು ಸಹಾನುಭೂತಿಯಿಂದ ಕಾಣಲೆಳಸುವ ಪತ್ರಿಕೆಗಳೂ ಕೆಲವಿವೆ. ಅಮೇರಿಕೆಯ 'ಅಟ್ಲಾಂಟಿಕ್' ಮಾಸ ಪತ್ರಿಕೆಯಲ್ಲಿ ಪ್ರಕಟವಾದ ಒಂದು ಲೇಖನದ ಸಾರವನ್ನು ಕೆಳಗೆ ಸಂಗ್ರಹಿಸಲಾಗಿದೆ. ಹೊರಗಿನವರು ನಮ್ಮನ್ನು ಕುರಿತು ಯಾವ ಅಭಿಪ್ರಾಯ ತಳೆದಿದ್ದಾರೆಂದು ಕಾಣಲು ಇದು ಸಹಕಾರಿಯಾದೀತು. —ಸಂ.

ಭಾರತಕ್ಕೆ ರಾಷ್ಟ್ರೀಯ ಸ್ವಾತಂತ್ರ್ಯದ ಪ್ರಾಪ್ತಿಯಿಂದ ಬಹಳವಾದರೆ ಮುಕ್ಕಾಲು ಪಾಲು ಮಾತ್ರ ಜಯ ದೊರೆತಂತಾಗಿದೆ. ಪಾಕಿಸ್ತಾನ ಬೇರ್ಪಟ್ಟು ಹೋದ ಕಾರಣ ರೇಲ್ವೇಗಳು, ನದಿಯ ನೀರು, ನೀರಾವರಿ, ಜಲವಿದ್ಯುದಾಗರಗಳಿಲ್ಲವೂ ವಿಭಕ್ತವಾದವು. ಅಯಾತ ನಿರ್ಯಾತ ವ್ಯಾಪಾರದ ತೂಕ ತಪ್ಪಿತು. ಪಾಕಿಸ್ತಾನದಲ್ಲಿ ಉಳ್ಳನ್ನವಾಗಿ ಭಾರತದಲ್ಲಿ ಉದ್ಯಮಿಗಳಿಗೆ ಅವಶ್ಯವಾದ ಕಚ್ಚಾ ಸರಕುಗಳ ಹಂಚು ವಿಕೆಯೂ ಹಾಗೆಯೇ ಭಾರತ ಪಾಕಿಸ್ತಾನಗಳ ಇಚ್ಛಾಗದಿಂದ ಎಲ್ಲಕ್ಕಿಂತ ಹೆಚ್ಚಾಗಿ ಭಾರತವು ನಾನಾ ಧರ್ಮ ಭಾಷೆ, ಸಂಸ್ಕೃತಿಗಳ ಸಂಯುಕ್ತ ರಾಜ್ಯವಾಗಬೇಕೆಂಬ ಗಾಂಧಿ-ನೆಹರು ಧ್ಯೇಯ ನೆಂಕತ

ಪಾಕಿಸ್ತಾನಕ್ಕೋಸ್ಕರ ವಿಭಜನೆ ಇವ್ಯಡಿ ಜಯದ ದ್ಯೋತಕವಾಗಿಸ್ತು-ದಾಷ್ಟೀಮೆ ಸ್ವಾತಂತ್ರ್ಯ ವನ್ನು ಸಮತೀಯ ಪ್ರತ್ಯೇಕತೆ ಇವೆರಡೂ ತತ್ವಗಳಿಗೆ ಮನ್ನಣೆ ನೊವೆ ಕೆಂತಾಯಿತು. ಆದರೆಯಾ ವಿಭಜನೆಗೆ ಬ್ರಿಟಿಷರ ಸಮ್ಮತಿ ಮಾತ್ರವಲ್ಲ ಅಭೀ ರ್ಷವೂ ಇದೆಯೆಂಬ ಮನವರಿಕೆ ಸಾಂಪ ಪಾಕಿಸ್ತಾನ ಮುಂದಾಳುಗಳು ಸಂಗತಿಸಿಂ ರು. ರತಿಯಡೊಡನೆ ತಕ್ಕಟ ಏರ್ಪಡುವುದರಿಂದ ಆಂಗ್ಲೋ ಅಮೇರಿಕನ್ನರು ಬಲಿಷ್ಠವಾದ ಮುಸ್ಲಿಂ ಗುಂಪನ್ನು ಕಟ್ಟುವರೆಂದೂ ಅವರಲ್ಲಿ ಪಾಕಿಸ್ತಾನಕ್ಕೆ ಪ್ರಮುಖ ಸ್ಥಾನ ದೊರೆಯುವದೆಂದು ಅವರು ನಂಬಿದ್ದಾರೆ. ಆದರೆ ಮುಸ್ಲಿಂ ರಾಷ್ಟ್ರಗಳಲ್ಲಿ ಪರಸ್ಪರ ರಾಜಕೀಯ ಸೈಷಮ್ಯಗಳಿರುವದರಿಂದ ಏಕಪಾಕ್ಷಿಕ ಜಾತೀಯ ರಾಜಕಾರಣವನ್ನು ಉಳಿಸಿ ಕೊಳ್ಳುವುದು ಕಠಿಣವಾಗಿದೆ. "ಇಸ್ಲಾಮಿಕ್ಯೆ ಗಂಡಾಂತರ" ವೆಂಬ ಕೂಗಿನಿಂದ ರಾಷ್ಟ್ರೀಯ ಏಕ್ಯ ಸಾಧನೆಯ ಸ್ವಯ ವಾಗಿಲ್ಲ ರಾಜಕಾರಣದಲ್ಲಿ ಮತಕ್ಕೆಲ್ಲಿ ಸ್ಥಾನವೆಂದು ಕೇಳುವ ವಿರೋಧಿಪಕ್ಷವೂ ಬೆಳೆಯುವುದು ಅಪೇಕ್ಷಣೀಯವಾಗಿದೆ.

ನಿರುದ್ಯೋಗ ಮತ್ತು ಹಳೆಯ ಯಂತ್ರಗಳು

ಭಾರತದಲ್ಲಿ ವೃತ್ತಪತ್ರಿಕೆಗಳಲ್ಲೆಲ್ಲ ಉದ್ಯಮಿಗಳ ಬೆಳವಣಿಗೆಯ ಮಾತೇ ಮಾತಾಗಿದ್ದರೂ ಅಮೇರಿಕೆಯಿಂದ ರಸಾಯನ ಶಾಸ್ತ್ರ, ಇಂಜಿನಿಯರಿಂಗ್ ಮೊದಲಾದ ತಾಂತ್ರಿಕ ಕೌಶಲವನ್ನು ಸಂಪಾದಿಸಿಕೊಂಡು ಬಂದ ಜನರಿಗೆ ನೌಕರಿ ಕೊಡದೆ ದೊರೆಯದ್ದರಿಂದ ಅವರು ಅಸಂತುಷ್ಟ ಬುದ್ಧಿಜೀವಿಗಳ ಸಾಲಿಗೆ ಸೇರುತ್ತಿದ್ದಾರೆ.

ಚೀನದ ಸಾಮಾಜಿಕ ಸ್ಥಿತಿಯನ್ನು ಅಭ್ಯಸಿಸಿದ ಹಿಂದೀಯರು ಈ ಲಕ್ಷಣಗಳಿಂದ ಚಿಂತಾಕ್ರಾಂತರಾಗಿದ್ದಾರೆ. ಚಿಯಾಂಗರ ಆಡಳಿತೆಯಲ್ಲಿ ನಿರುದ್ಯೋಗಿಗಳೋ ವಿಫಲೋದ್ಯೋಗಿಗಳೋ ಅವು ಇಂಥ ಜನರೇ ಸರಕಾರದ ದೌರ್ಬಲ್ಯಕ್ಕೆ ಕಾರಣರಾಗಿ ಮುಂದೆ ಯೋಗ್ಯರೀತಿಯಲ್ಲಿ ಉಪಯೋಗಿಸಲ್ಪಟ್ಟಾಗ ಕಮ್ಯೂನಿಸ್ಟರಿಗೆ ಒಲಿದು ಬಂದಿದ್ದರು.

ಎರಡನೆಯ ಮಹಾಯುದ್ಧದ ಪ್ರಾರಂಭವಾದಾಗ ಭಾರತದಲ್ಲಿ ಉದ್ಯಮಗಳ ಪ್ರಗತಿ ಭರದಿಂದ ನಡೆದಿತ್ತು. ಆದರೆ ಅವರಲ್ಲಿ ಪ್ರಾಬಲ್ಯವಿದ್ದ ಬ್ರಿಟಿಷರ ಪ್ರಾಬಲ್ಯ ವೊಂದಿತ್ತು. ಅಂಗಡಿ ಅಥವಾ ಸಾಹುಕಾರಿಕೆಯಲ್ಲಿ ಹಣ ತೊಡಗಿಸುವ ಬದಲು ಉದ್ಯಮದಲ್ಲಿ ತೊಡಗಿರುವಂತೆ ಜನರನ್ನು ಮನವೊಲಿಸಲು ಉದ್ದಿಮೆಗಾರರು ಹೆಚ್ಚಿನ ಪ್ರಮಾಣದಲ್ಲಿ ಲಾಭಾಂಶವನ್ನು ಹಂಚದಿದ್ದುದರಿಂದ ಯಂತ್ರಗಳು ಸವೆದಾಗ ಹೊಸವನ್ನು ಹಾಕಿಸಲು ಬೇಕಾಗುವಷ್ಟು ಹಣವನ್ನು ಕೂಡಿಸಲು ಸಮರ್ಥರಾಗಲಿಲ್ಲ. ಆದರ ಮೇಲೆ ಯುದ್ಧ ಬಂದು ಯಂತ್ರಗಳ ದುರಸ್ತಿ ಮತ್ತು ನವೀಕರಣ ಅಸಾಧ್ಯವಾಯಿತು ಹೀಗೆ ಇಂದು ಜಪಾನ, ಮಂಚೂರಿಯಗಳನ್ನು ಬಿಟ್ಟರೆ ಏಶಿಯದಲ್ಲಿ ಭಾರತವೇ ಅತ್ಯಂತ ಮುಂದುವರಿದ ತಾಂತ್ರಿಕ ರಾಷ್ಟ್ರವೆಂದು ಹೆಸರಿಗಷ್ಟೇ ಆಗಿದೆ.

ಅತ್ಯಂತ ಬಲಿಷ್ಠ ಬಂಡವಳಿಗಾರರು ಕೂಡ ವಿದೇಶಿ ಸ್ಪರ್ಧೆಯನ್ನೆದುರಿಸಿ ಗೆಲ್ಲಲಾರರು. ಅದರಿಂದ ವಿದೇಶಿ ಸಾಮಗ್ರಿಗಳ ಮೇಲೆ ಶುಂಕ ಹೇರಿ ಮತ್ತು ಉದ್ದಿಮೆಗಳಲ್ಲಿ ವಿದೇಶಿ ಬಂಡವಳವನ್ನು ಮಿತಗೊಳಿಸಿ ತಮ್ಮ ಉದ್ದಿಮೆಗಳನ್ನು ರಕ್ಷಿಸಬೇಕೆಂದು ಅವರು ಸರಕಾರವನ್ನು ಒತ್ತಾಯಿಸುತ್ತಿದ್ದಾರೆ.

ಅಮೇರಿಕನ್ನರ ವಿಚಾರ

ಅತ್ತ ಅಮೇರಿಕನ್ ಬಂಡವಳಿಗಾರರು ಸ್ವದೇಶದಲ್ಲಿಯೇ ಸಾಕಷ್ಟು ಲಾಭದೊರೆಯುತ್ತಿರುವುದರಿಂದ, ಅನಿರ್ಬಂಧವಾಗಿ ಹಂಚುವ ಲಾಭ ಮತ್ತು ಅಸಲು ಹಣವನ್ನು ಅಮೇರಿಕಕ್ಕೆ ವರ್ಗಾಯಿಸುವ ಮತ್ತು ಅಮೇರಿಕನ್ ಬಂಡವಳದಿಂದ ನಡೆಯುವ ಉದ್ದಿಮೆಗಳಲ್ಲಿ ಅಮೇರಿಕನ್ನರೇ ಆಡಳಿತೆಯಲ್ಲಿ ಬಹು ಮತವಿರಲಾಪ್ಪದ ಕೊಸುವ ಭರವಸೆಗಳು ಭಾರತದಿಂದ ದೊರೆಯದಿದ್ದರೆ ಅಮೇರಿಕದ ಬಂಡವಳ ಅಷ್ಟಾಗಿ ಭಾರತಕ್ಕೆ ಬರಲಿಕ್ಕಿಲ್ಲವೆಂದು ಎಚ್ಚರಿಕೊಡುತ್ತಿದ್ದಾರೆ.

ಹೀಗಾಗಿ ಹಿಂದುಳಿದ ರಾಷ್ಟ್ರಗಳಿಗೆ ಆರ್ಥಿಕ ಸಹಕಾರ ಕೊಡುವ ಅಮೇರಿಕನ್ ವ್ಯಕ್ತಿಯ ವಿಚಾರ ಅಲ್ಲಲ್ಲಿಗೆ ನಿಂತಿದೆ. ಭಾರತೀಯರಾಗಲಿ ಅಮೇರಿಕನ್ನರಾಗಲಿ ಇದಕ್ಕೆ ಅವಶ್ಯವಾದ ಯೋಜನೆಯತ್ತ ಹೆಚ್ಚು ಮನಸ್ಸು ಕೊಟ್ಟಿಲ್ಲ. ಆಶ್ಚರ್ಯ ಟ್ರೂಮನ್ನರು ಅಮೇರಿಕದ ಬಾಸಗಿ ಬಂಡವಳಕ್ಕೆ ವಿದೇಶಗಳಿಗೆ ಹೋಗಲು ಉತ್ತೇಜನ ಕೊಡುವ ಆರ್ಥಿಕ ಯುಕ್ತಿಯನ್ನೆಲ್ಲಿಯೇ ಅನುಕ್ತರಾಗಿದ್ದಾರೆಲ್ಲದೆ ಅಮೇರಿಕದ ಸಹಾಯದಿಂದ, ಅಭಿವೃದ್ಧಿ ಸ್ವಂತ ಪೀಲ್ಡೀಚಾಂಡೆಯಲ್ಲಿ, ಆರ್ಥಿಕ ಯೋಜನೆಗಳನ್ನು ಕಾರ್ಯಕಾರಿಯಾಗಿ ಮಾಡಬೇಕೆಂಬ ರಾಷ್ಟ್ರಗಳನ್ನು ತಮ್ಮ ಪಕ್ಷಕ್ಕೆ ಸೆಳೆದುಕೊಳ್ಳುವ ರಾಜಕೀಯ ಯುಕ್ತಿಯತ್ತ ಗಮನವನ್ನೇ ಕೊಟ್ಟಿಲ್ಲ.

ಅತ್ತ ಭಾರತದಲ್ಲಿ ಗ್ರಾಮಪುನರುದ್ಧಾರದ ಸಮಸ್ಯೆಗಳನ್ನು ಉದ್ಯಮಗಳ ವಿಸ್ತರಣದ ಪ್ರಶ್ನೆಗಳನ್ನೂ ಸಂಗಡ ಸಂಗಡವೇ ಬಿಡಿಸಲು ಪ್ರಯತ್ನಿಸದಿರುವದೆಂದು ದೊಡ್ಡ ಕೊರತೆ. ಅಗ್ಗವಾಗಿ ಕೂಲಿಕಾರರು ದೊರೆಯುವುದರಿಂದ ಕಾರಖಾನೆದಾರರಿಗೆ ಸುಧಾರಿಸಿದ ಯಂತ್ರ ಸಾಮಗ್ರಿಗಳನ್ನು ಪಯೋಗಿಸುವ ಆಸ್ಥೆಯಾಗಲಿ, ಇದ್ದ ಜನರಿಂದಲೇ ಪರಸ್ಪರಾವಲಂಬಿ ಕೆಲಸ

ಮಾಡಿಸಿಕೊಳ್ಳುವಂತೆ ಕೌಶಲ ಹೆಚ್ಚಿಸುವ ಇಚ್ಛೆಯಾಗಲಿ ಇಲ್ಲದಾಗಿದೆ. ಯೋಜನೆಯಿಲ್ಲದೆ ಈ ದೌರ್ಬಲ್ಯವನ್ನು ಹೋಗಲಾಡಿಸಲು ಸಾಧ್ಯವಿಲ್ಲ. ಈ ಸಮಸ್ಯೆಯನ್ನು ಈ ಪ್ರಕಾರಕಡೆಯಹೋದರೆ ಅಮೇರಿಕೆಯಲ್ಲಿರುವ ಭಾರತದ ಗೆಳೆಯರು ಬೆಚ್ಚಿ ಬೀಳಬಹುದು. (ಏಕೆಂದರೆ ಉದ್ಯಮಗಳಲ್ಲಿ ಸರಕಾರದ ಹಸ್ತಕ್ಷೇಪವು ಅಮೇರಿಕದ 'ಮುಕ್ತ ವ್ಯಾಪಾರ ಧ್ಯೇಯ'ಕ್ಕೆ ವಿರುದ್ಧವಾಗಿದೆ. —ಸಂ.)

ಸಮಸ್ಯೆಯನ್ನು ಬಿಡಿಸದೆ ಹೋದರೆ ಭಾರತ (ಮತ್ತು ಪಾಕಿಸ್ತಾನ ಕೂಡ) ವಿದೇಶಗಳನ್ನು ಆಕ್ರಮಿಸಲು ಯುದ್ಧ ಹೂಡಿ ಒಳಗೆ ಬಿಡಿಸಲಾರದಿದ್ದ ಸನುಸ್ಸೆಗಳನ್ನು ಮುಚ್ಚಿಟ್ಟುಕೊಳ್ಳಬೇಕಾಗುವುದು, ಇಲ್ಲವೆ ಚೀನದ ದಾರಿ ಹಿಡಿದು ಕಮ್ಯುನಿಸ್ಟರ ಬಗಲಿಗೆ ಬೀಳಬೇಕಾಗುವುದು.

ಭಾರತದಲ್ಲಿ 'ಎಡ' ಮತ್ತು 'ಬಲ' ಪಕ್ಷಗಳು

ಈ ತೊಡಕುಗಳಲ್ಲಿ ಸಿಕ್ಕಿಕೊಂಡ ಭಾರತದಲ್ಲಿ ಸಂಪ್ರದಾಯವಾದಿ ಮತ್ತು ತೀವ್ರಗಾಮಿ ಈ ಎರಡೂ ಬಣಗಳಿಂದ ಒತ್ತಡ ಕಾಣಬರುವುದೇನೂ ವಿಚಿತ್ರವಲ್ಲ. 'ಬಲ' [ಪ್ರತಿಗಾಮಿ] ಪಂಗಡದಲ್ಲಿ ಗಾಂಧಿಯನ್ನು ಕೊಂದವನಿಗೆ ಜನ್ಮವಿತ್ತ ರಾ. ಸ್ವ. ಸೇ. ಸಂಘವೇ ಅತ್ಯಂತ ಪ್ರಸಿದ್ಧವಾಗಿದೆ. ಉಗ್ರ ಹಿಂದೂ ಪಕ್ಷಪಾತಿಯಾದ ಈ ಸಂಸ್ಥೆ ರಾಜಕೀಯ ಮತ್ತು ಜಾತೀಯ ವಿಚಾರಗಳನ್ನು ಬೇರೆ ಬೇರೆಯಾಗಿಡಬೇಕೆಂಬ ನೆಹರು ವಿಚಾರಧಾರೆಗೆ ಪ್ರತಿಸ್ಪರ್ಧಿಯಾಗಿದೆ. ಈಚೆಗೆ ಇದು ಬಹಿರಂಗವಾಗಿ ಕಾರ್ಯ ನಡಿಸುವ ಸ್ವಾತಂತ್ರ್ಯ ಪಡೆದಿದೆ. ಸೈನಿಕ ಮಾದರಿಯಲ್ಲಿ ತರಬೇತಿ ಹೊಂದುತ್ತಿರುವ ಈ ಸಂಸ್ಥೆಯಿಂದ ಸಾಮಾಜಿಕ ಶಿಸ್ತಿಗೆ ನೆರವು ದೊರೆತೀತೆಂದು ಪ್ರಗಾಮಿಗಳು ಅದಕ್ಕೆ ಸಹಾಯಮಾಡುತ್ತಿದ್ದಾರೆ ಆದರೆ ಇವರಿಗೆ ನಗರಗಳಲ್ಲೇ ಬೆಂಬಲವಿರುವದರಿಂದ ಇವು ಭಾರತದ ಮೇಲೆ ಸತ್ತೆ ನಡೆಸುವ ಸಾಮರ್ಥ್ಯ ಬಾರದು.

ಇನ್ನು ಕಮ್ಯುನಿಸ್ಟರು ಕಲಕತ್ತೆಯಂಥ ನಗರಗಳಲ್ಲಿ ಮಾತ್ರವಲ್ಲದೆ ಹಳ್ಳಿಗಳಲ್ಲಿಯೂ ಸಂಘಟನಾತ್ಮಕವಾಗಿ ಕಾರ್ಯ ನಡೆಸುತ್ತಿದ್ದಾರೆ. ವಿಶೇಷವಾಗಿ ಕಲಕತ್ತೆಯಲ್ಲಿನ ಸದ್ಯದ ನಡೆನುಡಿಯನ್ನು ನೋಡಿದರೆ ಅವರು ಹಳ್ಳಿಗಳಲ್ಲಿ ತಮ್ಮ ಚಿತನ ಬರಗಾಲದ ಬವಣೆಯನ್ನು ಸರಿಹರಿಸಲು ಸಂಘಟನೆಯನ್ನು ಕಲಿಸುತ್ತಿದ್ದಾರೆ.

ಆದರೆ ಹಿಂದೀ ಕಮ್ಯೂನಿಸ್ಟರು ರಷ್ಯದ ಮೇಲೆ ಜರ್ಮನಿ ಏರಿ ಹೋದಾಗ ಬ್ರಿಟಿಶರ ಮುಖ್ಯ ಪ್ರಯತ್ನದಲ್ಲಿ ನೆರವಾದ್ದರಿಂದ ಅವರು ದೇಶಪ್ರೇಮಿಗಳಲ್ಲಿಂದು ಅಧಿಕಾಂಶ ಭಾರತೀಯರು ಭಾವಿಸುತ್ತಾರೆ. ಅಲ್ಲದೆ ಭಾರದ ವಿಭಜನೆಯನ್ನೊಪ್ಪಿದಲ್ಲದೆ ಅನೇಕ ಕಮ್ಯೂನಿಸ್ಟರು ಪಾಕಿಸ್ತಾನಕ್ಕೆ ಹೋಗಿ ಅಲ್ಲಿನ ಸರಕಾರಕ್ಕೆ ನೆರವಾದುದರಿಂದಲೂ ಭಾರತದಲ್ಲಿ ಅವರು ಜನಾದರವನ್ನು ಕಳೆದುಕೊಂಡಿದ್ದಾರೆ. ಹೀಗೆ ಕಮ್ಯೂನಿಸ್ಟರು ಭವಿಷ್ಯತ್ತಿನಲ್ಲಿ ಬಲಿಷ್ಠವಾಗಬಹುದಾದರೂ ಉಳಿದ ಭಾರತೀಯರು ಸಾಕಷ್ಟು ತಪ್ಪು ಮಾಡಿದರೆ ಮಾತ್ರ ಅವರು ನಿಜವಾಗಿ ಗಂಡಾಂತರ ಪ್ರಾಯರಾಗಬಹುದು

ಆದರೆ ಕಮ್ಯೂನಿಜಮಿನ ಪ್ರಚಾರಕ್ಕೂ ರಾ. ಸ್ವ. ಸಂಘದ ಪ್ರಾಬಲ್ಯಕ್ಕೂ ಹೆಚ್ಚು ಅಡಚಣೆಯೊಡ್ಡಿರುವ ಸಂಗತಿಯೆಂದರೆ ಭಾರತಕ್ಕೆ ಸ್ವಾತಂತ್ರ್ಯ ಲಾಭವಾದದ್ದು. ಗಾಂಧಿ ಮತ್ತು ಅವರ ಅನುಯಾಯಿಗಳ ಪ್ರಯತ್ನದಿಂದ ಎಂಬುದು.

ಪಟೇಲರು ಮತ್ತು ಮಧ್ಯಮ ವರ್ಗ

ಭಾರತದಲ್ಲಿ 'ಎಡ' ಮತ್ತು 'ಬಲ' ಪಕ್ಷಗಳೆಂಡಲ್ಲೆಯೂ ಸ್ವಾತಂತ್ರ್ಯಾಪೇಕ್ಷೆಯನ್ನು ಅಪ್ಪಿದಿರುವುದೊಂದು ವಿಶೇಷ ಕಮ್ಯೂನಿಷ್ಟರನ್ನು ಪಡೆಬಡಿಯುವ ಕೆಲಸದಲ್ಲಿ ಉದ್ಯುಕ್ತರೂ ರಾ. ಸ್ವ. ಸಂಘದ ಮೇಲಿನ ನಿರ್ಬಂಧನವನ್ನು ಸಡಿಲಿಸಲು ಕಾರಣರೂ ಆದ ಸರದಾರ ವಲ್ಲಭಭಾಯಿ ಪಟೇಲರೇ ಮಹಾರಾಜರ ಅಧಿಕಾರಗಳಿಗೂ ಸಾಮಾಜಿಕ ಪ್ರಾಬಲ್ಯಕ್ಕೂ ಆರ್ಥಿಕ ಉತ್ಪನ್ನಕ್ಕೂ ಕತ್ತರಿ ಪ್ರಯೋಗ ಮಾಡಿದ್ದಾರೆ.

ಪಟೇಲರ ಈ ದ್ವಿಭಾವದಲ್ಲಿಯೇ ಬಲಪಕ್ಷದ ಕೇಂದ್ರ ಸ್ಥಾನವಿದೆ. ಸಾವುಕಾರರ ಉದ್ದಿಮೆಗಾರರ ಪ್ರತಿನಿಧಿಗಳವರು. ಅವರು ಸ್ವಾರ್ಥ ಕಾರಣಗಳಿಗಾಗಿ ಜಮೀನ್ದಾರರೊಡನೆ ಸಹಕರಿಸಲು ಸಿದ್ಧರಿದ್ದಾರೆ ಆದರೆ ಕಮ್ಯೂ ಈ ಜಮೀನ್ದಾರರ ಗೆಳೆತನವನ್ನು ಸಂಪೂರ್ಣವಾಗಿ ಕುಡಿಯಲು ಅವರು ಅಂಜುವದಿಲ್ಲ ಎಡ ಪಕ್ಷವನ್ನೊಡನೆ ದೃಢ ನಿಶ್ಚಯದಿಂದ ಅವರು ಹೋರಾಡುತ್ತಾರೆ ಆದರೆ ಕಮ್ಯೂ ಉತ್ಪನ್ನವನ್ನೂ ಅಧಿಕಾರವನ್ನು ಬೆಳಸಿಕೊಳ್ಳುವ ಬಯಕೆಯನ್ನು ಅವರು ಬಿಡಲಾರರು ಆದಂದ ಅವರು ಒಂದು ಕಾಲದಲ್ಲಿ ಸಂಸ್ಥಾನಿಕರಿಗೆ ದೊರೆಯುತ್ತಿದುದನ್ನು ತಾವು ಸೆಳೆದುಕೊಳ್ಳ ಹೊರಟಿದ್ದಾರೆ ಈ ವಿಷಯದಲ್ಲಿ ಅವರು ಚೀನದಲ್ಲಿನ ಕೌಮಿಂಟಾಂಗಕ್ಕಿಂತ ಮತ್ತು ಪಾಕಿಸ್ತಾನದಲ್ಲಿನ ಜಮೀನ್ದಾರಿಗಿಂತ ಭಿನ್ನರಾಗಿದ್ದಾರೆ.

ನೆಹರು ಅವರ ವ್ಯಾಬಲ್ಯ

ಹೀಗೆ ಬಲ ಪಕ್ಷದಲ್ಲಿಯೂ ಚೈತನ್ಯವಿರುವ ಕಾರಣ ಇನ್ನು ಎಡ-ಬಲಗಳ ತಿಕ್ಕಾಟ ಭಯಂಕರವಸ್ಥೆಗೆ ಮುಟ್ಟಲಿಕ್ಕಿಲ್ಲ ಪಟೇಲರಿಗಿರುವಂತೆ ದೃಢವಾಗಿ ಸಂಘಟಿತವಾದ ಪಕ್ಷದ ನಿಯಂತ್ರಣ ನೆಹರು ಅವರಿಗಿಲ್ಲದೆ ಹೋದರು ಅವರು ಭಾರತೀಯ ರಾಜಕಾರಣದಲ್ಲಿ ಇನ್ನೂ ಅತ್ಯುನ್ನತ ಸ್ಥಾನದಲ್ಲೇ ಇದ್ದಾರೆ. ಕಾಂಗ್ರೆಸ್ಸಿನ ಹೊರಗೂ ನೆಹರೂ ಅವರಿಗೆ ಮಾಂತ್ರಿಕ ಪ್ರಭಾವವಿರುವದರಿಂದ ಪಟೇಲರಿಗಾಗಲಿ ಕಮ್ಯೂನಿಸ್ಟರಿಗಾಗಲಿ ಪಾತ್ರಿಯಾದ ಸಾಮೂಹಿಕ ಬೆಂಬಲ ಸಿಗುವುದು ಅಸಾಧ್ಯವಿಲ್ಲ. ಕಾಂಗ್ರೆಸ್ಸಿನೊಳಗೆ ಪ್ರಗತಿಪರ ವಿಚಾರದವರು ಅವರಿಗೆ ಬೆಂಬಲವಿದ್ದಾರೆ ಅವರಿನ್ನೂ ಬಹಿರಂಗವಾಗಿ ವಿಶೋಧಿಗಳಾದ ಸಮಾಜವಾದಿಗಳನ್ನು ಸೇರದಿರಲು ನೆಹರು ಅವರೇ ಕಾರಣ. ಗಾಂಧಿಯವರಿಲ್ಲದಿದ್ದರೂ ಕಾಂಗ್ರೆಸ್ಸಿನೊಳಗೆ ಪ್ರಗತಿಪರರಿಂದಲೂ ಹೊರಗೆ ಅಸಂಘಟಿತ ಜನಸಮುದಾಯದಿಂದಲೂ ಬೆಂಬಲ ಪಡೆದ ನೆಹರು ಅವರ ಕೈಯಲ್ಲಿ ಅಧಿಕಾರದ 'ತೂಕ' ಇದೆ

ಕಾಶ್ಮೀರ ನಿರ್ಣಾಯಕ ಸಮಸ್ಯೆ

ಈ ಅಧಿಕಾರದ ತೂಕದ ಹಣೆಬರಹ ಕಾಶ್ಮೀರ ಪ್ರಶ್ನೆಯನ್ನೇ ಅವಲಂಬಿಸಿದೆ. ಇದು ಭಾರತ ಪಾಕಿಸ್ತಾನಗಳ ಸಂಬಂಧವನ್ನಷ್ಟೇ ಅಲ್ಲದೆ ಭಾರತದ ಆಂತರಿಕ ರಾಜಕಾರಣದ ಸ್ವರೂಪವನ್ನು ನಿರ್ಣಯಿಸುವುದು.

ಮೂರರಲ್ಲಿ ಎರಡಂಶಕ್ಕಿಂತಲೂ ಹೆಚ್ಚು ಮುಸ್ಲಿಮರನ್ನೊಳಗೊಂಡಿರುವ ಜಮ್ಮು ಮತ್ತು ಕಾಶ್ಮೀರ ಸಂಸ್ಥಾನವನ್ನು ಹಿಂದೂ ಮಹಾರಾಜನು ಆಳುತ್ತಿದ್ದನು. ಇದು ವಿಶೇಷ ಇನಾಮು ದಾರಿ ರಾಜ್ಯವಾಗಿದ್ದು ವಿಪರೀತ ಕಂದಾಯವನ್ನು ಸೆಳೆದುಕೊಳ್ಳುತ್ತಿದ್ದುದರಿಂದ ಪ್ರಜೆಗಳು ಕೂಡ ಅದನ್ನು ವಿರೋಧಿಸುತ್ತಿದ್ದರು ಅಲ್ಲಿ ೧೯೩೦ ರಲ್ಲಿ ಶೇಖ್ ಅಬ್ದುಲ್ಲರೆಂಬ ಸಂಘಟಕರು ತಲೆಯೆತ್ತಿದರು. ಅವರು ಅತಿಶಯ ಗೇಣಿ ಕಂಡಾಬಟ್ಟೆ ಬಡ್ಡಿ ಮೊದಲಾದ ಅನೇಕ ರೀತಿಗಳಿಂದ ಪೀಡಿತನಾಗಿದ್ದ ರೈತನನ್ನು ಸಂಘಟಿಸಿದರು. ಮೊದಲು ಮುಸ್ಲಿಮರ ನಡುನೆಯೇ ಕೆಲಸ ಮಾಡಿದರ ಮುಂದೆ ಹಿಂದುಗಳಿಗೂ ಮುಕ್ತದ್ವಾರವಾದ ಅವರ ಚಳವಳಿಯಿಂದ ಭಾರತದಲ್ಲಿ ಎಲ್ಲರಿಗೆ ತುಂಬ ಜನಪ್ರಿಯತೆ ದೊರಕಿತು ವಿಭಜನಾನಂತರ ಕಾಶ್ಮೀರಕ್ಕೆ—ಸ್ವಾತಂತ್ರ್ಯ ಭಾರತಕ್ಕೆ ಸೇರುವುದು ಅಥವಾ ಪಾಕಿಸ್ತಾನಕ್ಕೆ ಸೇರುವುದು ಹೀಗೆ ಮೂರು

(ಮುಂದಿನ ಪುಟ ನೋಡಿರಿ.)

62

ಅಮೇರಿಕನ್ನರ ದೃಷ್ಟಿಯಲ್ಲಿ ಇಂದಿನ ಭಾರತ

(ನೇ ಪುಟದಿಂದ)

ಪಾರ್ಗರಗಂದ್ದುವು. ಶೇಖ ಅಬ್ದುಲ್ಲರು ಈ ತತ್ವವನ್ನು ಸಾರಿದರು: ಮೊದಲು ಮಹಾರಾಜರಿಂದ ಬಿಡುಗಡೆ; ಅಮೇಲೆ ಭವಿಷ್ಯತ್ತನ್ನು ಜನಮತಗಣನೆಯಿಂದ ನಿರ್ಣಯಿಸುವುದು.

ಈ ನಡುವೆ ಪಾಕಿಸ್ತಾನ ಗುಂಡು ಹಾರಿಸಿತು. ಕಾಶ್ಮೀರದಿಂದ ಓಡಿ ಬಂದಿದ್ದ ಮುಸ್ಲಿಮ್ ಧರ್ಮಾಂಧರನ್ನು ಸಶಸ್ತ್ರರಾಗಿ ಮಾಡಿ ಅದು ಕಾಶ್ಮೀರಕ್ಕೆ ಕಳಿಸಿತು. ಅವರಿಗೆ ಬೆಂಬಲವೀಯಲು ಜನಜಂಗುಳಿ ದಂಗೆಯೇಳುವ ಭರವಸೆಯಿದ್ದಿಲ್ಲವಾದುದರಿಂದ ಗುಡ್ಡಗಾಡಿನ ಜನರನ್ನು–ಭಾಷೆ ಸಾಮಾಜಿಕ ಅಥವಾ ಆರ್ಥಿಕ ಸ್ಥಿತಿಯಾವುದರಲ್ಲಿಯೂ ಕಾಶ್ಮೀರಕ್ಕೆ ಸಂಬಂಧವಿಲ್ಲದವರನ್ನು– ಪಾಕಿಸ್ತಾನಿ ಸೈನ್ಯದ ಗಾಡಿಗಳಲ್ಲಿ ಪಾಕಿಸ್ತಾನಿ ಅಧಿಕಾರಿಗಳ ಕೈಕೆಳಗೆ ಕಾಶ್ಮೀರಕ್ಕೆ ಕಳಿಸಲಾಯಿತು. ಜೊತೆಗೆ ಪಾಕಿಸ್ತಾನಿ ಸೈನ್ಯವೇ ಕಾಶ್ಮೀರವನ್ನು ಆಕ್ರಮಿಸಿತು.

ಹೆದರಿದ ಕಾಶ್ಮೀರ ಮಹಾರಾಜ ಭಾರತಕ್ಕೆ ತನ್ನ ಸಂಸ್ಥಾನವನ್ನು ಸೇರ್ಪಡೆ ಮಾಡಿದನು. ಅವನ ಸಹಾಯಸೂಚನೆಯನ್ನು ಸ್ವೀಕರಿಸಬೇಕಾದರೆ ತಮಗೆ ಕಾಶ್ಮೀರದ ಭವಿಷ್ಯತ್ತು ಜನಮತಗಣನೆಯಿಂದ ನಿರ್ಣಯಿಸಲ್ಪಡಬೇಕೆಂದು ಕರಾರಿಂದ ಭಾರತ ತನ್ನ ಸೈನ್ಯವನ್ನು ಕಳಿಸಿತು. ಈಗ ಯುದ್ಧ ವಿರಾಮ ಒಪ್ಪಂದದನ್ವಯ ಪರಿಸ್ಥಿತಿ ಸ್ಥಗಿತವಾಗಿದೆ. ಆದರೆ ಕಾಶ್ಮೀರದ ಆಯಕಟ್ಟಿನ ನೆಲೆಗಳು ಹಲವು ಪಾಕಿಸ್ತಾನದ ಕೈಯಲ್ಲಿವೆ.

ಸನ್ನಿವೇಶ ಈಗ ಸಂಯುಕ್ತ ರಾಷ್ಟ್ರ ಸಂಘದ ಮುಂದಿದೆ. ಭಾರತವು ತನ್ನ ಪಕ್ಷವನ್ನು ಮಂಡಿಸಿದ್ದು ಸ್ಪಷ್ಟವೂ ಕಾಯದೆಯ ಪ್ರಕಾರ ಕಟ್ಟುನಿಟ್ಟಿದ್ದೂ ಇದೇ ಭಾರತ ಸರ್ಕಾರ ಸಂಸ್ಥಾನದ ಕಟ್ಟುನಿಟ್ಟಿನ ಯಜಮಾನಿಕೆಯಿಂದ ಮಾತ್ರವೇ ಶಾಂತಿ ಸುವ್ಯವಸ್ಥೆ ಸಂಭವವೆಂಬ ಮೇಲೆ ಬಂದ. ರಾಜ್ಯದ ಜನರು ಸಹಾಯ ಸೂಚನೆ ಮಾಡಿದಾಗ ಅದನ್ನು ಕೊಡುವ ಹಕ್ಕು ತನಗಿದೆಯೆಂಬ ಮಾತನ್ನು ಸಾಕಷ್ಟು ಒತ್ತಿ ಹೇಳಿಲ್ಲ.

"ಮುಂದೆ ಪಂಜಾಯತಿಯ ನಿರ್ಣಯ ಏನಾಗಬೇಕೆಂಬ ಒತ್ತಾಯ ಬಹಳವಾಗಿದೆ ಆದರೆ ಇಂಥ ನಿರ್ಣಯವು ಪಾಕಿಸ್ತಾನದಲ್ಲಿ ಧರ್ಮಾಂಧ ಸರಕಾರವನ್ನು ಬಲಗೊಳಿಸಿ ಭಾರತದಲ್ಲಿ ನೆಹರೂ ಅವರ ಸ್ಥಾನವನ್ನು ದುರ್ಬಲಗೊಳಿಸುವುದು ಖಂಡಿತ. ಹೀಗಾದರೆ ಎರಡೂ ರಾಷ್ಟ್ರಗಳಲ್ಲಿ ಎಡಬಲಗಳ ನಡುವೆ ಭ್ರಾತೃಘಾತಕ ಬೆಳೆಯುವುದರಿಂದ ಪಜಾತಂತ್ರ್ಯಕ್ಕೆ ಬೆಳವಣಿಗೆಯಾಗುವ ಬದಲು ಕಮ್ಯೂನಿಸ್ಟ್ ಕ್ರಾಂತಿಯೇ ಆಗುವ ಸಂಭವವುಂಟು.

ಕಾಂಗ್ರೆಸ — ಸೋಶಿಯಲಿಸ್ಟ್ ಸಮ್ಮಿಶ್ರ ಸರಕಾರದ ಪ್ರಶ್ನೆ

ಜಲಂದರ್—ಪಂಜಾಬ್, ಸಂಯುಕ್ತ ಪೂರ್ವಪಂಜಾಬ್ ಹಾಗೂ ಹಿಮಾಚಲ ಪ್ರದೇಶಗಳ ಸಂಯುಜವಾದ ಪ್ರಸಿದ್ಧ ಎರಡನೆ ನಾರ್ಥರ್ನ್ ಅಧಿವೇಶನದ ಅಧ್ಯಕ್ಷ ವೀರೇಂದ್ರ ದೇವರು ಭಾಷಣ ಮಾಡುತ್ತ ದೇಶದಲ್ಲಿ ಯುದ್ಧವೇ ಮೊದಲಾದ ಗಂಡಾಂತರ ಪರಿಸ್ಥಿತಿ ನಿಲ್ಲದೋದಾಗ ಮಾತ್ರ ಸಮಾಜವಾದಿ ಪಕ್ಷವು ಯಾವ ಕರಾರುಗಳನ್ನು ಹಾಕದೆ ಕಾಂಗ್ರೆಸ್‌ನೊಡನೆ ಸಮ್ಮಿಶ್ರ ಸರಕಾರದಲ್ಲಿಯು ಒಪ್ಪವಡೆಂದರು.

"ಈ ಗಂಡಾಂತರಗಳಲ್ಲದಿರುವ ಸಮಯದಲ್ಲಾದರೆ ರಾಷ್ಟ್ರೀಕರಣ ಹಾಗು ಜವಿನಾದಾರ ನಿರ್ಮೂಲನಗಳ ತತ್ವವನ್ನು ಕಾಂಗ್ರೆಸ್ಸು ಒಪ್ಪಿದರೆ ಆ ಸರಕಾರದೊಡನೆ ನಮ್ಮ ಪಕ್ಷವು ಸಹಕರಿಸುವುದು" ಎಂದರು.

ಮುರಾರಿ ಹೊಸಪೇಟೆ ಡಿಮುನ್ಸಿ ಕೋರ್ಟ್‌ನಲ್ಲಿ

O. S. 406 49

ಶ್ರೀ ವೆಂಕಟರಮಣಸ್ವಾಮಿ ಸರ್ಮಿಂಟು ಭಂಡಾರ ಲಿಮಿಟೆಡ್.

by its Secretary,

ಟಿ ಶ್ರೀನಿವಾಸ ಮೂರ್ತಾಚಾರು

ರ್‌ಪನಹಳ್ಳಿ .... ವಾದಿ

Vs.

ಅಳ್ಳಿಬೆಲ್ಲು ಸಂಬಮಣ್ಯಂ ವೈದ್ಯ

ಕೊಟ್ಟು .... ಪ್ರತಿವಾದಿಗಳು.

ಮೇಲಿನ ನಂಬರಿನಲ್ಲಿ ವಾದಿ ನಿನ್ನ ಮೇಲು, ಮತ್ತು ಇತರ ಮೇಲು ರು 1283-15-0 ಕ್ಕೆ ದಾವಾ ಮಾಡಿರುತ್ತಾನೆ. ಸದ್ರಿ ದಾವಾ 26-4-50 ಕ್ಕೆ ವಾಯಿದಾ ಆಗಿರುತ್ತದೆ. ಸದ್ರಿ ದಾವಾಕ್ಕೆ ನಿನ್ನಗೆ ಆಕ್ಷೇಪಣೆಯಿದ್ದಲ್ಲಿ, ಸದ್ರಿ ದಿವಸ ಬಂದು ಹಾಜರಾಗತಕ್ಕದ್ದು. ಇಲ್ಲದಿದ್ದಲ್ಲಿ ಎಕ್ಸ್‌ಪಾರ್ಟಿ ತೀರ್ಪು ಆಗುವುದು.

ಹೆಚ್ ಗೋವಿಂದಾಚಾರು
ಅಡ್ವೋಕೇಟ್, ಹೊಸಪೇಟೆ.

ಮು. ರಾ. ಹೊಸಪೇಟೆ ಡಿ. ಮು. ಕೋರ್ಟ್‌ನಲ್ಲಿ

O. P. 164 of 50.

(ಲೇಟು ಜಿ. ಡಿ. ತೀಲವಂತಂಗೆ ಬರತಕ್ಕ ಬಾಕಿಗಳು ವಸೂಲು ಮಾಡಿಕೊಳ್ಳುವ ವಿಚಾರದಲ್ಲಿ.)

ಮೇಲ್ಕಂಡ ನಂಬರಿನಲ್ಲಿ ಅರ್ಜಿದಾರರಾದ ಲೇಟು ತೀಲವಂತ ಗುರುಬಸಪ್ಪನ ಮೈನರು ಮಕ್ಕಳು 1. ವೀರಭದ್ರಪ್ಪ 2. ಮಲ್ಲಿಕಾರ್ಜುನಪ್ಪ, 3. ಬಸಲಿಂಗಪ್ಪ 4. ಶಿವಲಿಂಗಪ್ಪ ಇವರ ಜನಕ ತಾಯಿ ಮತ್ತು ನಿಗೇವಾನಿ ಆದ ಬಸವ್ವನು ಸದರಿ ಮೈನರುಗಳ ಪರವಾಗಿ ಅವರ ತಂದೆ ಯಾದ ಲೇಟು ತೀಲವಂತಂಗೆ ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ ಮತ್ತು ಇತರರಿಂದ ಬರತಕ್ಕ ದಿವಾಣಿಟ್ ಮತ್ತು ನೇರು ಮೊತ್ತ ಮಂತಾದ ಬಾಕಿಗಳನ್ನು ವಸೂಲು ಮಾಡಿಕೊಳ್ಳುವದಕ್ಕಾಗಿ ವಾರಸ್ ಸರ್ಟಿಫಿಕೇಟು ಪಡೆದುಕೊಳ್ಳಲು ಮನವಿ ಮಾಡಿಕೊಂಡಿದ್ದಾರೆ. ಸದರಿ ಅರ್ಜಿಯ ಪರಿಷ್ಕಾರವು ದಿ. 20-4-50 ರಂದು ಜರುಗುವದಾಗಿ ಕೋರ್ಟಿನವರು ಗೊತ್ತುಪಡಿಸಿದ್ದಾರೆ. ಕಾರಣ ಲೇಟು ಜಿ. ಡಿ. ತೀಲವಂತರ ಇತರ ವಾರಸುದಾರಿಗೆ ಸದರಿ ವಿಷಯದಲ್ಲಿ ಆಕ್ಷೇಪಣೆಗಳೇನಾದರು ಇದ್ದಲ್ಲಿ ಅವರು ತಾ|| 20-4-50 ಹಗಲು 10½ ಗಂಟೆಗೆ ಖಂಯಾಗಿ ತಮ್ಮ ತರಫಾರುಗಳನ್ನು ಕೋರ್ಟಿಗೆ ಅಗಳಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಸದರಿ ಅರ್ಜಿಯು ಏಕತರ್ಫಿಯಾಗಿ ತೀರ್ಮಾನಿಸಲ್ಪಡುತ್ತದೆಂದು ಖಂಡಿತ ತಿಳಿಯೋದು.

ಹೊಸಪೇಟೆ M ತಿರುಮಲಾಚಾರ್
7-4-50 ಅರ್ಜಿದಾರರ ವಕೀಲ್.

ಕೇಂದ್ರ ಮಂತ್ರಿಗಳು ರಾಜೀನಾಮೆ ಕೊಟ್ಟರು

ಕೆ. ಸಿ. ನಿಯೋಗಿ ಡಾಕ್ಟರ್ ಶಾಮಪ್ರಸಾದ ಮುಖರ್ಜಿಯವರು ನೆಹರೂ ಲಿಯಾಕತ್ ಒಪ್ಪಂದದ ನಿಷೇವಾರ್ಥ ರಾಜೀನಾಮೆ ಕೊಟ್ಟಿರುವರೆಂದು ಪ್ರಕಟವಾಗಿದೆ.

ಹೈಡ್ರೊಜನ್ ಬಾಂಬ್

(3ನೇ ಪುಟದಿಂದ ಮುಂದುವರಿದಿದೆ)

ಬಹಳ ದೂರದಲ್ಲಿ ಸಿಡಿದ ಬಾಂಬಿನ ಕಣಗಳ ರೇಡಿಯೋ ಕ್ರಿಯೆಯಿಂದ ಏನೂ ಆಗದು; ಗಾಳಿಯ ಓಟ ಅನಿರೀಕ್ಷಿತವಿರುವುದರಿಂದ ಅದು ಅವನ್ನು ಅನುದ್ದಿಷ್ಟದಿಕ್ಕಿಗೂ ಒಮ್ಮೆ ಒಯ್ಯಬಹುದು ಎನ್ನುತ್ತಾರೆ ಕೆಲ ವಿಜ್ಞಾನಿಗಳು. ಹೈಡ್ರೋಜನ್ ಬಾಂಬುಗಳು ಸಾಕಷ್ಟು ಸಂಖ್ಯೆಯಲ್ಲಿ ಸ್ಫೋಟವಾದರೆ ರೇಡಿಯೋ ಕ್ರಿಯೆ ವಾತಾವರಣದಲ್ಲಿ ಹರಡುವುದನ್ನು ಅಲ್ಲಗಳೆಯಲಾಗದಿದ್ದರೂ ಅದು ಜಗತ್ತಿನ ಸರ್ವಜೀವಿಗಳನ್ನೂ ನಾಶಮಾಡುವುದೆಂಬುದು ಅರ್ಥವಿಲ್ಲದೂವತೆ ಎಂದು ಎಲ್ಲ ವಿಜ್ಞಾನಿಗಳು ಒಪ್ಪುತ್ತಾರೆ.

ಗಿಣ್ಣದ ಹಾಲು ಕರುವಿಗೇ ಬಿಡಿರಿ

[2ನೇ ಪುಟದಿಂದ ಮುಂದುವರಿದಿದೆ]

ವಾಗಬಲ್ಲದು. ಅದೇ ಹುಟ್ಟಿದ ಕರುವಿಗೆ ಅದು ಹೊಸ ಪರಿಸ್ಥಿತಿಗೆ ಹೊಂದಿಕೊಂಡು ಸ್ವತಂತ್ರವಾಗಿ ಬಾಳಲು ಸಹಾಯವಾಗುವಂತೆ ನಿಸರ್ಗದೇವತೆಯು ಪಾಲಿಸಿದ ಅಮೋಘ ಪದಾರ್ಥ ಈ ಗಿಣ್ಣದ ಹಾಲು. ಭರದಿಂದ ಬೆಳೆಯುವ ಕರುವಿಗೆ ಈ ಕೆಳಗಿನ ಕಾರಣಗಳ ಮೂಲಕ ಅದು ವಿಶೇಷ ಮಹತ್ವದ ಆಹಾರವಾಗಿದೆ.

ಔಷಧಿ ಮಹತ್ವ

(೧) ಗಿಣ್ಣದ ಹಾಲಿನಲ್ಲಿ ವಿಶೇಷವಾಗಿರುವ ಅಲ್ಬುಮಿನ್ ಹಾಗು ಗ್ಲೊಬುಲಿನ್‌ಗಳಲ್ಲಿ ಹೊಟ್ಟೆ ಸ್ವಚ್ಛವಿಡುವ ಗುಣವಿರುವುದರಿಂದ ಕರುವಿನ ಕರುಳು ಸ್ವಚ್ಛವಾಗುತ್ತದೆ.

(೨) ಗಿಣ್ಣದ ಹಾಲು ಕರುವಿನ ಹೊಟ್ಟೆಯಲ್ಲಿ ಹಾಲು ಪಚನವಾಗಲು ಸಹಾಯವಾಗುವ ಬ್ಯಾಕ್ಟೀರಿಯಾಗಳನ್ನು ಹುಟ್ಟಿಸುತ್ತದೆ.

(೩) ಕರುವಿನ ಹೊಟ್ಟೆಯಲ್ಲಿ ಅದು ರೋಗ ವಿರೋಧಕ ಶಕ್ತಿಯಾಗಿ ಸಹಾಯ ಮಾಡುತ್ತದೆ.

(೪) ಗಿಣ್ಣದ ಹಾಲಿನ ಮೂಲಕ ತಾಯಿಯ ಹೊಟ್ಟೆಯೊಳಗಿನ ರೋಗ ಪ್ರತಿಬಂಧಕ ಗುಣವುಳ್ಳ ಪದಾರ್ಥಗಳು ಕರುವಿನ ಹೊಟ್ಟೆಯಲ್ಲಿ ಸೇರುತ್ತವೆ.

(೫) ಗ್ಲೊಬುಲಿನ್ ಸತ್ವದಿಂದ ರಕ್ತ ಕಣಗಳು ತಯಾರಾಗುವವರೆಗೆ ಕರುವಿನಮ್ಮೆಯಲ್ಲಿ ರಕ್ತ ಬೆಳೆಯುತ್ತದೆ.

(೬) ಅದರಲ್ಲಿರುವ ಕಬ್ಬಿಣದ ಅಂಶದಿಂದ ರಕ್ತವರ್ಧನೆಗೆ ಸಹಾಯವಾಗುತ್ತದೆ.

(೭) ಮೊದಲಿನ ನಾಲ್ಕೈದು ದಿನಸ ಗಿಣ್ಣದ ಹಾಲು ದೊರೆಯದಿದ್ದ ಕರುವಿಗಿಂತ ಗಿಣ್ಣದ ಹಾಲು ಕುಡಿದ ಕರುವಿನ ದೇಹ ಸುದೃಢವಾಗಿರುತ್ತದೆ.

ಕರುವಿಗೆ ಗಿಣ್ಣದ ಹಾಲು ಪಚನವಾಗುವದಿಲ್ಲೆಂದು ನಮ್ಮಲ್ಲಿ ಸಾಮಾನ್ಯವಾದ ಕಲ್ಪನೆಯಾಗಿದೆ. ಆದರೆ ಇದು ಸಂಪೂರ್ಣ ಸುಳ್ಳು.

ಕರುವು ಚುರುಕಾಗಿಯೂ ಶಕ್ತಿಯುತವಾಗಿಯೂ ಬೆಳೆಯಬೇಕಾದರೆ ಶಕ್ಯವಿದ್ದಷ್ಟು ಹೆಚ್ಚಿಗೆ ಗಿಣ್ಣದ ಹಾಲು ಅದಕ್ಕೆ ಬಿಡಬೇಕು. ಅದರ ಹತ್ತು ಪೌಂಡ್ ತೂಕಕ್ಕೆ ಒಂದು ಪೌಂಡ್ ಗಿಣ್ಣದಹಾಲು ಈ ಪ್ರಮಾಣದಂತೆ ದಿನಾಲು ಕನಿಷ್ಠ ನಾಲ್ಕು ಪೌಂಡುಗಳಷ್ಟಾದರೂ ಗಿಣ್ಣದ ಹಾಲು ಕರುವಿಗೆ ದೊರೆಯಲೇ ಬೇಕು.

ಹೊಟ್ಟೆಯಲ್ಲಿ ಖಜ್ಜೂರ ಗಿಡ

ಫ್ರಾನ್ಸದೇಶದ ರಾಜಧಾನಿಯಾದ

ಪ್ಯಾರಿಸ ನಗರದಲ್ಲಿ ಬುಸನ್ ಎಂಬವನ ಹೊಟ್ಟೆಯಮೇಲೆ ಶಸ್ತ್ರ ಕ್ರಿಯೆ ನಡೆಸಿ ಪರೀಕ್ಷಿಸಲಾಗಿ ಅವನ ಹೊಟ್ಟೆಯ ಒಳಗೆ ಖಜ್ಜೂರದ ಗಿಡವಿದ್ದುದು ಕಂಡು ಬಂದಿತು.

ಕೆಲ ದಿನಗಳ ಹಿಂದೆ ಈ ಬುಸನ್ ನು ಖಜ್ಜೂರದ ಬೀಜವೊಂದನ್ನು ನುಂಗಿದ್ದನು. ಆ ಬೀಜವು ಅವನ ಹೊಟ್ಟೆಯಲ್ಲಿ ಒತ್ತಟ್ಟಿಗೆ ಹತ್ತಿಕೊಂಡು ಕುಳಿತಿದ್ದರಿಂದ ಹೊಟ್ಟೆಯಲ್ಲಿ ವಿಕಾರತೆ ನೋವು ಪ್ರಾರಂಭವಾಗಿ ಆ ಬೀಜವನ್ನು ಹೊಳಕ್ಕೆ ಬೆಸೆದು ಅರ ಇಂಚು ಉದ್ದದ ಚೂಪಾದ ದಂಟು ಬೆಳೆದಿದ್ದಿತು.

ಅ. ಭಾ. ಹರಿಜನ ಕಾರ್ಯಕರ್ತರ ಪರಿಷತ್ತು

ಸರದಾರ ಪಟೇಲರಿಂದ ಉದ್ಘಾಟನೆ

ಅ. ಭಾ. ಹರಿಜನ ಕಾರ್ಯಕರ್ತರ ಪರಿಷತ್ತು ದಿಲ್ಲಿಯಲ್ಲಿ ಇದೇ ೧೫, ೧೬ ಹಾಗೂ ೧೭ ನೇ ದಿನಾಂಕಗಳಲ್ಲಿ ಕೇಂದ್ರ ಸರಕಾರದ ಕೂಲಿಕಾರ ಮಂತ್ರಿ ಶ್ರೀ ಜಗಜೀವನ ರಾಮರ ಅಧ್ಯಕ್ಷತೆಯಲ್ಲಿ ಸೇರಲಿರುವದು ಪರಿಷತ್ತು ಬಿಲ್ಡಾ ಬೇವಾಲಯದಲ್ಲಿ ಸೇರಲಿದ್ದು ಭಾರತ ಉಪಮುಖ್ಯ ಪ್ರಧಾನರಾದ ಸರದಾರ ವಲ್ಲಭಭಾಯಿ ಪಟೇಲರು ಪರಿಷತ್ತನ್ನು ಉದ್ಘಾಟಿಸುವರು.

ಮುಂ ರಾಜಿ ಹೊಸಪೇಟೆ
ದಿವಾಣಿ ಮುಂಸಿಫ್ ಕೋರ್ಟಿನಲ್ಲಿ
Sc 524/38 ರಲ್ಲಿ E. P. ೩೫೬

ಪಾಟೀಲ ಬೆಟ್ಟನಗೌಡ ಸುತ್ತು } ವಾದಿ

ಮಹಮದ್ ಅನೂಬ್ ಸಾಬು ವಗೈರೆ } ಪ್ರತಿವಾದಿಗಳು

(2) ಅಬ್ದುಲ್ ರಸೀದ್ ಸಾಬು
(3) ನಥ್ಥಾಬಿ
(4) ರೂಕಮಾಬಿ
(5) ಅಬ್ದುಲ್ ನಬೀ ಸಾಬು
ತಂದಿ ಮಹಮದ್ ಅನೂಬ್ ಸಾಬು
ಇವರಿಗೆ.

ಮೇಲಿನ ನಂಬರುನಲ್ಲಿ ದಿಕ್ರಿ ಹೊಂದಿದ ವಾದಿಯು ಜಪ್ತಿ ಆಗಿರುವ ನಿಮ್ಮ ಮನೆ ವಿಕ್ರಯದ ಬಗ್ಗೆ ಅರ್ಜಿಮಾಡಿಕೊಂಡಿರುವನು ಆದುದರಿಂದ ವಿಕ್ರಯದ ಇಸ್ತಿಹಾರಿ ಪರತುಗಳನ್ನು ನಿರ್ಣಯಿಸಲು ತಾ|| 29-4-50 ನಿಶ್ಚಯಿಸೋಣವಾಗಿದೆಯೆಂದು ಇದರಿಂದ ತಿಳಿಸಲಾಗಿದೆ. ಇದಕ್ಕೆ ನಿಮ್ಮ ತಕರಾರು ಇದ್ದಲ್ಲಿ ಖುದ್ದಾಗಿ ಆಗಲಿ ವಕೀಲರ ದ್ವಾರಾ ಆಗಲಿ ಆ ದಿನಸ ಬೆಳಿಗ್ಗೆ 11 ಗಂಟೆಗೆ ಹಾಜರಾಗಿ ತಿಳಿಸತಕ್ಕದ್ದು.

13-4-50 ಹೊಸಪೇಟೆ } ಇಜಾರೆ ಟೀಕಪ್ಪ ದಿಕ್ರಿ ಹೋಲ್ಡರರ ವಕೀಲು

ಧಾರವಾಡದಲ್ಲಿ ಬಂಗಾರ

ಮುಂಬಯಿ ರಾಜ್ಯದ ಧಾರವಾಡ ಜಿಲ್ಲೆಯಲ್ಲಿ ಬಂಗಾರವಿರುವ ಶೋಧವಾಗಿದ್ದರೂ ಅದು ದೊರೆಯಬಹುದಾದ ಪ್ರಮಾಣವು ಅತ್ಯಲ್ಪವಾದುದರಿಂದ ಅದನ್ನು ತೆಗೆಯುವದು ಲಾಭದಾಯಕವಾಗದು ಎಂದು ಶ್ರೀ ಗಾಡಗೀಳರು ಕೇಂದ್ರ ಪಾರ್ಲಿಮೆಂಟು ದಿಲ್ಲಿಯಲ್ಲಿ ಹೇಳಿದರು.

ನವಭಾರತಕ್ಕೆ
ಚಂದಾದಾರರಾಗಿರಿ.

ಸಕ್ಕರೆಯ ಸುದ್ದಿ
(ಗಸೇ ಪುಟದಿಂದ ಮುಂದುವರಿದಿದೆ)

ಟನ್ನು ಗಳಷ್ಟು ಸಕ್ಕರೆಯೂ ಆಯಾತವಾಗಬಹುದೆಂದು ಅಧಿಕೃತವಾಗಿ ತಿಳಿದು ಬರುತ್ತದೆ.

ಕೊನೆಯ ಮಾತು

ಗಿರ್ಣಿ ಕಂಪನಿಯ ಭಾಗದಲ್ಲಿಯ ಸಕ್ಕರೆಯ ಬೂ ಬ್ಬಾ ಟ ಹಾಗೂ ಈ ಮೇಲಿನ ಸಕ್ಕರೆ ಉತ್ಪಾದನೆಯ, ವಿತರಣೆಯ ಹಾಗೂ ಸಂಗ್ರಹದ ಅಂಕಿ ಸಂಖ್ಯೆಗಳನ್ನು ನೋಡಿದರೆ, ಯಾವ ಕೈವಾಡದಿಂದ ಆಗ ಸಕ್ಕರೆಯ ಹಾಹಾಕಾರವೆದ್ದಿತ್ತೆಂಬುದನ್ನು ಅದಕ್ಕೆ ಏನು ಕಾರಣವೆಂಬುದನ್ನೂ ಸುಲಭವಾಗಿ ತಿಳಿದುಕೊಳ್ಳಬಹುದು. ಸಕ್ಕರೆಯ ಹುಟ್ಟುವಳಿದಾರರೂ ವ್ಯಾಪಾರಸ್ಥರೂ ತಮ್ಮ ಲಾಭಬಡಕತನವನ್ನೂ, ತನ್ಮೂಲಕ ಹುಟ್ಟುವ ಅನೇಕ ಅಲ್ಲದ ಕೃತಿಗಳನ್ನೂ "ದೇಶ ಬಾಂಧವ್ಯ"ದ ದೃಷ್ಟಿಯಿಂದಲಾದರೂ ತಡೆಹಿಡಿದು, ಕೂನೆಯ ಪಕ್ಷ ಅವುಗಳಿಗೆ ಕೆಲಮಟ್ಟಿಗೆ ಹಿಡಿತವನ್ನಾದರೂ ಹಾಕಿದರೆ, "ಸಕ್ಕರೆಯ ಬೊಬ್ಬಾಟವು" ಮುಂದೆ ಕೇಳಬರದೆ ಇದ್ದೀತೆಂದು ಆಶಿಸಿದರೆ ತಪ್ಪಾದೀತೆ?

ಜಯ ಹಿಂದ

—[o]—

ಶ್ರೀಮತಿ ಆದವಾನಿ ಶ್ರೀಮತಿ ರಾಯಲಸೀಮ ಮಿಲ್ಸ್

ಮದ್ರಾಸ್ ಮಂತ್ರಿಗಳಾದ ಶ್ರೀ ಭಕ್ತವತ್ಸಲಂರವರು 6 ನೆಯ ತಾ॥ ಆದವಾನಿ ನಗರದಲ್ಲಿ ಸ್ಥಾಪಿತವಾದ ರಾಯಲಸೀಮ ಮಿಲ್ಲಸದ ಪ್ರಾರಂಭವನ್ನು ಮಾಡಿ ರಾಯಲಸೀಮೆಯ ಔದ್ಯೋಗೀಕರಣವಾಗಲೆಂಬ ಆಶಯವನ್ನು ವ್ಯಕ್ತಪಡಿಸಿದರು ಈ ಸಮಾರೋಪಕ್ಕೆ ರೆವಿನ್ಯೂ ಮಂತ್ರಿ ಶ್ರೀ ಸೀತಾರಾಮರೆಡ್ಡಿಯವರು ಮತ್ತು ಲೆ. ಕೌ. ಸದಸ್ಯರಾದ ಸೂರ್ಯನಾರಾಯಣರು ಬಂದಿದ್ದರು. ಈ ಮಿಲ್ಲಿಗೆ ವಿದ್ಯುಚ್ಛಕ್ತಿಯು ಜೋಗದಿಂದ ಪೂರೈಕೆಯಾಗುತ್ತಲಿದ್ದು ಬಳ್ಳಾರಿ ಸಬ್ ಸ್ಟೇಷನ್ನಕ್ಕೆ ತಂತಿ ಹಾಕಿರುತ್ತಾರೆ. ಬಳ್ಳಾರಿಯಲ್ಲಿ ಅಧಿಕಶಕ್ತಿಯು ಅಲ್ಪಶಕ್ತಿಯಾಗಿ ಪರಿವರ್ತನವಾಗುತ್ತದೆ. ಬಳ್ಳಾರಿನಗರಕ್ಕೆ ದೊರೆವ ಮೊದಲೇ ರಾಯಲಸೀಮ ಮಿಲ್ಲಿಗೆ ವಿದ್ಯುಚ್ಛಕ್ತಿಯು ದೊರೆತದ್ದು ಒಂದು ವಿಶೇಷ

—[o]—

ಬಳ್ಳಾರಿ ರಾಯಲ್‌ಸೀಮ ಬ್ಯಾಂಕು ಸೆಂಟ್ರಲ್ ಕೊ-ಆಪರೇಟಿವ್ ಸೊಸೈಟಿಯಲ್ಲಿ ಮೊಲಗವೇಲಿ ಲಕ್ಷ್ಮಿರೆಡ್ಡಿಯವರ ಭಾವಚಿತ್ರದ ಅನಾವರಣವಾಯಿತು. ರಾಘವಸ್ಮಾರಕಸಮಿತಿಯ ಆಶ್ರಯದಲ್ಲಿ ಕಳೆದವಾರ ಮದ್ರಾಸಿನ ಕುಮಾರಿ ತುಳಸಿಯ ನೃತ್ಯವಾಯಿತು.

ಬಳ್ಳಾರಿ ರೋಡ್ ಟ್ರಾಫಿಕ್ ಬೋರ್ಡು

ಬಳ್ಳಾರಿ ರೋಡ್ ಟ್ರಾಫಿಕ್ ಬೋರ್ಡಿನ ಸಭೆಯು 12 ನೆಯ ತಾ॥ ಕಲೆಕ್ಟರ್ ರವರ ಅಧ್ಯಕ್ಷತೆಯಲ್ಲಿ ಸಮಾವೇಶವಾದಾಗ ಶ್ರೀ ಜಿ. ನಾಗಭೂಷಣಂ ರವರು ನಟ್ಟಣಿಗರ ಪರವಾಗಿ ಮನವಿಯನ್ನೊಪ್ಪಿಸುತ್ತಾ ಬಸ್ ಪ್ರಯಾಣೀಕರು ಹೆಚ್ಚಿರುವದರಿಂದ ಎಲ್ಲಾ ಲೈನುಗಳಲ್ಲಿ ಹೆಚ್ಚಿನ ಬಸ್‌ಗಳನ್ನು ನಡೆಸಲು ಅಪ್ಪಣೆ ಅವಕಾಶಗಳನ್ನು ಕೊಡಬೇಕೆಂದರು ಬಸ್‌ಗಳಲ್ಲಿ ಮಿತಿಇಲ್ಲದೆ ಜನರನ್ನು ತುಂಬುತ್ತಿರುವರಷ್ಟೇ ಅಲ್ಲದೆ ನಿಯತದರಗಳಿಗಿಂತ ಹೆಚ್ಚು ಹಣ ವಸೂಲಿ ಮಾಡುತ್ತಿರುವರೆಂದು ಅವರು ಹೇಳಿದರು.

—[o]—

ಮೂರುಮಹಾ ಪೋಟಗಿದಾರರು

ಸಂಸ್ಥಾನಿಕರ ಖಾಸಗಿ ವೆಚ್ಚಕ್ಕೆ ಭಾರತ ಸರಕಾರವು ವಾರ್ಷಿಕ ಪೋಟಗಿ ಕೊಡುತ್ತಿದ್ದು, ಎಲ್ಲಕ್ಕೂ ಹೆಚ್ಚೆಂದರೆ ಹೈದರಾಬಾದ ನಿಜಾಮರಿಗೆ ೨೦ ಲಕ್ಷ ರೂಪಾಯಿ, ಬಡೋದೆಯ ಗಾಯಕವಾಡರಿಗೆ ೨೬॥ ಲಕ್ಷ ರೂಪಾಯಿ ಹಾಗೂ ಮೈಸೂರ ಒಡೆಯರಿಗೆ ೨೦ ಲಕ್ಷ ರೂಪಾಯಿ ಪೋಟಗಿ ದೊರೆಯುತ್ತದೆ.

—[o]—

ಹಿಂದೀ ಮಹಾ ವಿದ್ಯಾಲಯ, ಬಳ್ಳಾರಿ,

[1931 ಸ್ಥಾಪಿತ ಬಳ್ಳಾರಿ ಜಿಲ್ಲಾ ಹಿಂದೀ ಪ್ರೇಮೀಮಂಡಲದಾಶ್ರಯದಲ್ಲಿ, ರಿಜಿಸ್ಟರ್ಡ.]

ಮದ್ರಾಸ್ ಸರ್ಕಾರದಿಂದ ಮಾನ್ಯತೆ ಇದೆ.

ಪ್ರಾರಂಭಿಕ ವರ್ಗಗಳಿಗೆ ಮಾಸಿಕ 3/- ಶುಲ್ಕ — ಉನ್ನತ ವರ್ಗಗಳಿಗೆ ಮಾಸಿಕ 5/- ಶುಲ್ಕ

ವಾರ್ಡಲಾ ಹೈಸ್ಕೂಲ್ ಕಟ್ಟಡದಲ್ಲಿ ಪ್ರಾತಃಕಾಲ-ಸಾಯಂಕಾಲ ಹಿಂದೀ ಕಾಲೇಜ್‌ದ ವರ್ಗಗಳು ನಡೆಯುತ್ತಿವೆ. ವಿಶಾರದ — ಪ್ರಚಾರಕ ವರ್ಗಗಳಲ್ಲದೆ ಪ್ರಾರಂಭಿಕ ವರ್ಗಗಳಿಗೂ ಪ್ರವೇಶವಿದೆ. ವರ್ಗಗಳಿಗೆ ಸಂಬಂಧಿಸಿದ ಪಾಠ್ಯ ಪುಸ್ತಕಗಳು ವಿದ್ಯಾಲಯದಲ್ಲಿ ದೊರೆಯುತ್ತವೆ. ಒಳ್ಳೆಯ ಪುಸ್ತಕಭಂಡಾರವಿದೆ. ಶ್ರೇಷ್ಠ ವಾರಪತ್ರಿಕೆ, ಮಾಸಪತ್ರಿಕೆಗಳು ಲಭ್ಯ ಇತರ ವಿವರಗಳಿಗೆ ಸ್ವಾಮಿಪಟ್ಟು ಬರೆಯಿರಿ.

ಪ್ರಿನ್ಸಿಪಾಲ್.

NAVA BHARAT BELLARY. (Reg. No. M. 4746)

17—4—50

ನವಭಾರತ ಬಳ್ಳಾರಿ.

(Nationalist Weekly)

ಚಂದಾದರಗಳು	Subscription Rates
ವರ್ಷಕ್ಕೆ 6—0—0	One Year 5—0—0
6 ತಿಂಗಳಿಗೆ 3—0—0	Six months 3—0—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.	Subscription will not be accepted for less than 6 months

To

Sri.....

.....

.....

Printed at Krishna Printing Works, Edited & Published by T. B. Keshava Rao.

JAI—HIND

ನವಭಾರತ

ಬಳ್ಳಾರಿಯ
ನಮ್ಮಲ ರಾಷ್ಟ್ರೀಯ ವಾರಪತ್ರಿಕೆ
*
ಉತ್ತಿಷ್ಠತ! ಜಾಗ್ರತ!!
ವ್ಯಾಪ್ತಯವರಾನ್ನಿ ಬೋಧತ!!!
*
ಸಂಪಾದಕ ಮತ್ತು ಪ್ರಕಾಶಕರು—
ಟಿ. ಬಿ. ಕೇಶವರಾವು.

ಸೋಮವಾರ ೩೦ ಏಪ್ರೆಲ್ ೧೯೪೦ | ಸಂಚಿಕೆ ೧೪

ಕಮ್ಯೂನಿಸ್ಟರ ಹಾವಳಿ

ಗುಂಡಿನಿಂದ ಸುಡುವುದೊಂದೇ ಉಪಾಯವೇ?

ಹೈದರಾಬಾದ್ ಪ್ರಾಂತದ ಓರಂಗಲ್ ನಲಗೊಂಡಾ ಮತ್ತು ಮದ್ರಾಸ್ ಪ್ರಾಂತದ ಕೃಷ್ಣಾ, ಬೆಜವಾಡ ಜಿಲ್ಲೆಗಳಲ್ಲಿ ಕಮ್ಯೂನಿಸ್ಟರ ಹಾವಳಿಯು ಹೆಚ್ಚಿದೆ. ಮದ್ರಾಸ್ ಸರ್ಕಾರದವರು ಇದನ್ನು ಹಿಡಿತದಲ್ಲಿ ತರಲು ದಮನೋಪಾಯಗಳನ್ನು ಸಾಧಿಸುತ್ತಲಿರುವರು. ಹೆಚ್ಚಿನ ಪೋಲೀಸ ಸ್ಪೇಷೆ, ಸ್ಪೆಶಲ್ ಪೋಲೀಸ್‌ದಳಗಳು ಏರ್ಪಾಟಾಗುತ್ತಲಿವೆ. ಕಮ್ಯೂನಿಸ್ಟರು ಲೂಟಿ, ಕೊಲೆ ನಿರಪರಾಧಗಳ ಖೈದು ಇತ್ಯಾದಿಗಳಲ್ಲಿ ತೊಡಗಿರುವುದು ನಿಸ್ಸಂದೇಹಾಸ್ಪದವಾದ ವಿಷಯ. ಇದಲ್ಲದೆ ರೈಲುಗಳನ್ನುರುಳಿಸಿ ಬಹುಜನ ಪ್ರಾಣಾಪಹರಣ ಮಾಡುವರೆಂದು ಕೂಡ ಅನುಮಾನಿಸಲಾಗಿದೆ. ಇದು ವಿನೇಇರಲಿ ಈಗಿನ ರಾಷ್ಟ್ರೀಯರಚನೆಯಲ್ಲಿ ಜನರ ಮನೋ ಪರಿಸ್ಥಿತಿಯಲ್ಲಿ ಕಮ್ಯೂನಿಸ್ಟ ಸಿದ್ಧಾಂತವು ಗಂಡಾಂತರದ್ದೆಂದೂ ದೇಶ ಕ್ಷೇಮಕ್ಕೆ ವಿರೋಧಕವೆಂದೂ ಸಾರಿಹೇಳದೆ ಗತ್ಯಂತರವಿಲ್ಲ.

ಯಾವ ಸಿದ್ಧಾಂತಕ್ಕಾಗಲಿ ಪ್ರಜೆಗಳ ಬೆಂಬಲಬೇಕು. ನೇಲ್ಲೂರಿನಲ್ಲಿ ಜಿಲ್ಲೆಗಳಲ್ಲಿ ಪ್ರಜೆಗಳಲ್ಲಿ ಅಲ್ಪಸಂಖ್ಯಾಕರಿಂದಲೂ ಇವನ್ನು ಪೋಷಿಸುತ್ತಿರುವೆಂದರೆ, ಈ ಸಿದ್ಧಾಂತದ ತಿರುಳನಲ್ಲಿ ಅವರು ಸವಿಗನಸನ್ನು ಕಾಣುತ್ತಿರಬೇಕೆಂದರ್ಥವಾಗುತ್ತದೆ. ಕೆಲದಿವಸಗಳಕ್ಕೆಗ ಮದ್ರಾಸ್ ಪ್ರಧಾನ ಮಂತ್ರಿಗಳಾದ ಶ್ರೀ ಕೊವೂರಸ್ವಾಮಿ ರಾಜಾರವು ಮೊದ್ದ ದೊಡ್ಡ ಪೋಲೀಸ ಫೋರ್ಸಾಗಳೊಂದಿಗೆ ಸೀಮಿತ ಪ್ರದೇಶಗಳಲ್ಲಿ ಸಂಚರಿಸಿದಾಗ ಸಾಕಷ್ಟು ಸಹಕಾರ ಬೆಂಬಲಗಳು ಪ್ರಜೆಗಳಿಂದಿಲ್ಲವೆಂದು ಅವರನ್ನು ನಿಂದಿಸಿದರು ಇದು ಅವಿವೇಕವೆಂದು ಆಂಧ್ರ ಪತ್ರಿಕೆಯು ಅಗ್ರಲೇಖನವನ್ನು ಬರೆದಿದೆ. ಹೈದರಾಬಾದಿನ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಸ್ವಾಮಿ ರಮಾನಂದ ತೀರ್ಥರು ಆ ಪ್ರದೇಶಗಳಲ್ಲಿ ಸಂಚರಿಸಿ ಅದರ ಮೂಲಕಾರಣಗಳನ್ನು ಲೇಖಾಂಕಗಳಿಂದ ಪ್ರಕಟಿಸಿರುವರು. ನೂರಾರು ವರ್ಷಗಳಿಂದ ಜಾಯಲ್ಲಿರುವ ಭೂಮೂಲೀಕ ಮತ್ತು ಜಾಗೀರ್ದಾರ ಪದ್ಧತಿಯಕಾರಣ ಸಾವಿರಾರು ರೈತರು ದಟ್ಟ ದಾರಿದ್ರ್ಯ ದಾಸ್ಯದಲ್ಲಿ ಕಾಲಕಳೆಯುತ್ತಿರುವ ದುಷ್ಪರಿಸ್ಥಿತಿಯಲ್ಲಿ ಪರಿವರ್ತನೆಯಾಗದೆ. ಜನರ ಅಸಂತೋಷವು ದೂರಾಗದೆಂದೂ, ಕಮ್ಯೂನಿಸ್ಟರ ಪೋಷಣೆಗೆ ಇದು ಒಂದು ಮುಖ್ಯಕಾರಣವೆಂದೂ ಅವರು ಅಭಿಪ್ರಾಯಪಟ್ಟಿರುವರು ಬಹುಜನರ ಹಿತಕ್ಕಾಗಿ ಸರ್ಕಾರದವರು ಕೈಗೊಂಡ ಮತ್ತು ಯೋಚಿಸಿದ ಚರ್ಯೆಗಳನ್ನು ಪ್ರಕಟಿಸಿದರೆ ಅವನ್ನು ಬಹುಜನ ಪ್ರಿಯವಾಗಿ ಮಾಡಿದರೆ ಈ ದಿಶೆಯಲ್ಲಿ ಬಹಳ ಉಪಕಾರವಾದೀತು.

ಗುಂಡಿನಿಂದ ಸಾಯ ಹೊಡೆಯುವ ಕ್ರಮದಲ್ಲಿ ದೋಷಗಳುಂಟು. ಅನೇಕಸಲ ಅದರಲ್ಲಿ ಕಮ್ಯೂನಿಸ್ಟರಲ್ಲದವರೂ ಕೂಡ ಅಕಸ್ಮಿಕ ಮರಣಕ್ಕೆ ಗುರಿಯಾಗುವರು. ಪೋಲೀಸರನ್ನೆದುರಿಸಿ ಪ್ರತ್ಯಕ್ಷ ಯುದ್ಧಕ್ಕೆ ನಿಂತಾಗ ಬೇರೊಂದುಪಾಯವೇ ಇಲ್ಲವಾಗುತ್ತದೆ.

ವಿದ್ಯಾರ್ಥಿಗಳೂ, ವಿದ್ವಾಂಸರೂ, ಅವಿದ್ಯಾವಂತರೂ, ನಾಗರೀಕರೂ, ಅನಾಗರೀಕರೂ ಈ ದಳದಲ್ಲಿರುವರೆಂದು ಹೇಳುತ್ತಾರೆ. "ಕಮ್ಯೂನಿಸ್ಟರ ಸಿದ್ಧಾಂತದ ಸ್ಪೇನೂ ದೋಸವಿಲ್ಲ. ಆದರೆ, ಅವರು ಅಚರಿಸುತ್ತಿರುವ ಕ್ರಮಗಳಬಗ್ಗೆ ನನ್ನ ವಿರೋಧವಿದೆ" ಎಂದು ಪಂಡಿತ ನೆಹರೂ ರವರು ಹೇಳಿದ್ದಾರೆ. ಈ ಕಾರಣ ಸರ್ಕಾದವರು ಕಮ್ಯೂನಿಸ್ಟ ಚಳವಳವನ್ನು ಹತ್ತಿಕ್ಕುವ ಕಾರ್ಯಕ್ರಮದಲ್ಲಿ ದಮನೋಪಾಯಗಳನ್ನಷ್ಟೇ ಅಲ್ಲದೆ, ಆ ಪ್ರದೇಶಗಳಲ್ಲಿ ಜನಹಿತಕಾರ್ಯವನ್ನುಮಾಡಿ ಅದರ ಪ್ರಚಾರಕ್ಕೆ ಸರಿಯಾದ ವ್ಯವಸ್ಥೆಯನ್ನು ಮಾಡಲು ನಮ್ಮ ಸಲಹೆ.

ಕಾಮಲಾಪುರ

ಕಾಮಲಾಪುರ ಜೆ. ಪಿ. ಬೋರ್ಡ್ ಹೈಯರ್ ಎಲಿಮೆಂಟರಿ ಶಾಲೆಯ ವಾರ್ಷಿಕೋತ್ಸವವು ಈ ತಿಂಗಳ 29, 30 ರಲ್ಲಿ ನಡೆಯಲಿದ್ದು, ಈ ಸವರೂಂಭಕ್ಕೆ ಶ್ರೀ ಶಿದ್ದನಹಳ್ಳಿ ಕೃಷ್ಣವಶರ್ಮ, ಜಿ. ಪಿ. ರಾಜರತ್ನಂ, ಹೋಳದರಶಿ ದೊಡ್ಡನಗೌಡರವರನ್ನು ಆಹ್ವಾನಿಸಲಾಗಿದೆ. ಶಾಲೆಯ ವಿದ್ಯಾರ್ಥಿಗಳಿಂದ ಹಿಂದೂ ಮುಸ್ಲಿಂ ಏಕ್ಯತೆ ಎಂಬ ನಾಟಕವನ್ನು ಮೈಸೂರಿಂದ ಸುಳ್ಳಿನಸೋಲು ಎಂಬ ನಾಟಕವನ್ನು ಹಳೆಯ ವಿದ್ಯಾರ್ಥಿಗಳಿಂದ ಅಭಿನಯಿಸಲಿರುವರು.

ಗುಂಟೂರು ಜಿಲ್ಲೆ ಸತ್ತೆನಪಲ್ಲಿ ತಾಲೂಕು ಅಚ್ಚಮ್ಮನಪೇಟೆ ಪೋಲೀಸ್ ಸ್ಟೇಷನ್ನಿಗೆ ಕಳೆದ ಭಾನುವಾರ ರಾತ್ರಿ ಕಮ್ಯೂನಿಸ್ಟರಿಂದ ದಾಳಿಯಾದ ಸುದ್ದಿ ಬಂದಿದೆ. ಇಲ್ಲಿ ಇಬ್ಬರು ಕಾನಸ್ಟೇಬಲರು ಗುಂಡಿನ ಹೊಡೆತದಿಂದ ಸತ್ತರು, ಮತ್ತೆ ಮೂವರಿಗೆ ಗುಂಡಿನ ಗಾಯಗಳಾಗಿವೆ. ಸಬ್ ಇನ್‌ಸ್ಪೆಕ್ಟರ ವಶ್ಟಿಯನ್ನು ಗುಂಡಿನಿಂದ ಕೊಂದು, ಮನೆಗೆ ಬೆಂಕಿ ಹಚ್ಚಿದರು. ಸ್ಟೇಷನ್‌ಲ್ಲಿದ್ದ ಬಂದೂಕ ಮದ್ದು ಗುಂಡನ್ನು ಅಪಹರಿಸಿಕೊಂಡರು

ಶ್ರೀ ರಮಣ ಮಹರ್ಷಿಗಳ ನಿರ್ಯಾಣ

ವೆಲ್ಲೂರು ಜಿಲ್ಲೆಯ ತಿರುವಣ್ಣಾಮಲೆ ಆಶ್ರಮದ ಸ್ಥಾಪಕರಾದ ಶ್ರೀ ರಮಣ ಮಹರ್ಷಿಗಳು 15 ನೆಯ ತಾರೀ ಪರಮ ಪದವನ್ನೈದಿದರು. ಅವರು ವಿದ್ವಾಂಸರೆ ಅಲ್ಲದೆ ತಮ್ಮ ಪ್ರತಿಭೆಯಿಂದ ಅಧ್ಯಾತ್ಮಿಕ ವಿಶೇಷದಿಂದ ಪರರಾಷ್ಟ್ರೀಯರನ್ನೂ ಆಕರ್ಷಿಸಿದ್ದರು. ಇವರ ನಿರ್ಮಾಣದಿಂದ ಅಧ್ಯಾತ್ಮಿಕ ಜಗತ್ತಿಗೆ ತುಂಬಾರದ ಹಾನಿಯಾಗಿದೆ.

ಭಾರತ—ಪಾಕ ಅಲ್ಪಸಂಖ್ಯಾಕ ಒಪ್ಪಂದ

ಅಲ್ಪಸಂಖ್ಯಾಕರಿಗೆ ಸಮಾನ ಹಕ್ಕು ಬಾಧ್ಯತೆಗಳು

ಒಂದು ವಾರ ಕಾಲ ದಿಲ್ಲಿಯಲ್ಲಿ ಭಾರತ ಮತ್ತು ಪಾಕಿಸ್ತಾನ ಮುಖ್ಯ ಮಂತ್ರಿಗಳಾದ ಪಂ. ನೆಹರು ಹಾಗೂ ಲಿಯಾಕತ ಅಲಿಖಾನರ ನಡುವೆ ಆದ ಮಾತುಕತೆಯ ಫಲವಾಗಿ ಉಭಯ ಸರಕಾರಗಳಲ್ಲಿ ಉಭಯ ಬಂಗಾಲ, ಅಸಾಮ ಮತ್ತು ತ್ರಿಪುರದಲ್ಲಿರುವ ಸಂತ್ರಸ್ತ ಅಲ್ಪಸಂಖ್ಯರ ರಕ್ಷಣೆಗಾಗಿ ಆದ ಒಪ್ಪಂದದ ಪೂರ್ಣ ಪಾಠ ಈ ಕೆಳಗಿನಂತಿದೆ:—

ಅ

ಭಾರತ – ಪಾಕಿಸ್ತಾನಗಳಲ್ಲಿರುವ ಅಲ್ಪ ಸಂಖ್ಯಾಕರಿಗೆ ಆ ಆ ರಾಷ್ಟ್ರಗಳ ಸರಕಾರಗಳು ದೇಶದ ಕಾಯದೆಗೂ ನೀತಿ ನಿಯಮಗಳಿಗೂ ಅನುಗುಣವಾಗಿ ಯಾವ ಜಾತಿಭೇದವನ್ನೆಣಿಸದೆ ಸಮಾನ ನಾಗರಿಕತೆ ಹಕ್ಕುಭಾದ್ಯತೆಗಳನ್ನು ಅವರ ವಿತ್ತ ಜೀವಿತ, ಸಂಸ್ಕೃತಿ, ಆತ್ಮಾಭಿಮಾನ, ತಂತಮ್ಮ ರಾಷ್ಟ್ರದಲ್ಲಿ ಸಂಚಾರ ಭಾಷಣ ಪೂಜಾ ಮತ್ತು ವೃತ್ತಿ ಇವುಗಳ ಸ್ವಾತಂತ್ರ್ಯವನ್ನು ಸಂರಕ್ಷಣೆಯನ್ನು ಕೊಡುವದಾಗಿ ತಾವು ಆಶ್ವಾಸನವೀಯುವದಾಗಿ ಎರಡೂ ಸರಕಾರಗಳು ಒಪ್ಪಿಕೊಳ್ಳುತ್ತವೆ ತಮ್ಮ ರಾಷ್ಟ್ರದ ಸಾರ್ವಜನಿಕ ಜೀವನದಲ್ಲಿ ಭಾಗವಹಿಸಲು, ರಾಜಕೀಯ ಇಲ್ಲವೆ ಇತರ ಹುದ್ದೆಗಳನ್ನು ಸ್ವೀಕರಿಸುವ ವಿಚಾರದಲ್ಲಿ, ದೇಶದ ನಾಗರಿಕ ಹಾಗೂ ಸೈನಿಕ ಶಾಖೆಯಲ್ಲಿ ಸೇರಿ ದೇಶಕ್ಕೆ ಸೇವೆ ಸಲ್ಲಿಸುವಲ್ಲಿ ಅಲ್ಪ ಸಂಖ್ಯಾಕರಿಗೆ ಬಹುಸಂಖ್ಯಾಕರಿಗಿರುವ ಪ್ರೇ ಹಕ್ಕನ್ನು ಭಾದ್ಯತೆಗಳಿಂದ ರತಕ್ಕದ್ದು ಹಕ್ಕುತ್ತಗಳು ಮೂಲ ಭೂತ ಹಕ್ಕುಗಳೆಂದು ಉಭಯ ಸರಕಾರಗಳು ಸಾರಿ ಅವನ್ನು ಪರಿಣಾಮಕಾರಿಯಾಗಿ ಜಾರಿಯಲ್ಲಿ ತರುವಂತೆ ಪ್ರಯತ್ನಿಸಬೇಕು. ಭಾರತದಲ್ಲಿಯು ಅಲ್ಪ ಸಂಖ್ಯಾಕರಿಗೆ ಈ ಎಲ್ಲ ಹಕ್ಕು ಭಾದ್ಯತೆಗಳನ್ನು ಭಾರತದ ರಾಜ್ಯ ಸಂವಿಧಾನದ ಮೂಲಕವೇ ದಯಪಾಲಿಸಿದ್ದಾಗಿದೆಂದು ಭಾರತ ಮುಖ್ಯ ಮಂತ್ರಿಗಳು ಗಮನಕ್ಕೆ ತರಿಸಿಕೊಟ್ಟಿದ್ದಾರೆ. ಪಾಕಿಸ್ತಾನದ ಸಂವಿಧಾನ ಸಮಿತಿಯು ಅಂಗೀಕರಿಸಿರುವ ಧ್ಯೇಯ ನಿರೂಪಣ ಗೊತ್ತುವಳಿಯಲ್ಲಿ ಈ ಅಂಶಗಳಿವೆ. ಎಂದು ಲಿಯಾಕತ ಅಲಿ ಖಾನರು ತಿಳಿಸಿದ್ದಾರೆ. ಈ ಎಲ್ಲ ಹಕ್ಕುಭಾದ್ಯತೆಗಳನ್ನು ಯಾವ ಭೇದಭಾವನಿಲ್ಲದೆ ಸಕಲ ನಾಗರಿಕರೂ ಅನುಭವಿಸುವಂತಾಗಬೇಕೆಂಬುದೇ ಈ ಎರಡೂ ಸರಕಾರಗಳ ಧೋರಣವಾಗಿದೆ.

ಅಲ್ಪಸಂಖ್ಯಾಕರು ತಾವು ವಾಸವಾಗಿರುವ ದೇಶದ ಸರಕಾರಕ್ಕೆ ನಿಷ್ಠೆಯಿಂದಿರಬೇಕು. ಇಲ್ಲದೆ ತಮ್ಮ ಸಂಕಟಗಳ ನಿವಾರಣೆಗಾಗಿ ಅವರು ಅ ಸರಕಾರವನ್ನೇ ಬೊರೆ ಹೋಗಬೇಕು ಎಂದು ಉಭಯ ಸರಕಾರಗಳು ಸಾರಿ ಹೇಳಲಿಚ್ಛಿಸುತ್ತವೆ.

ಬ

ಇತ್ತೀಚೆಗೆ ಜಾತೀಯ ಗಲಭೆ ಸಂಭವಿಸಿದ ಪೂರ್ವ ಬಂಗಾಲ, ಪಶ್ಚಿಮ ಬಂಗಾಲ, ಅಸಾಮ ಮತ್ತು ತ್ರಿಪುರಾ ಇಲ್ಲಿಂದ ಗುಳೆ ಕಟ್ಟಿಕೊಂಡು ಬಂದವರ ವಿಚಾರದಲ್ಲಿ ಈ ಕೆಳಗಿನಂತೆ ಉಭಯ ಸರಕಾರಗಳು ಒಡಂಬಡಿಕೆ ಮಾಡಿಕೊಂಡಿವೆ.

(೧) ಗೊಳಿಕಿತ್ತಿ ಹೊರಟವರಿಗೆ ಸಂಚಾರ ಸ್ವಾತಂತ್ರ್ಯವಿರತಕ್ಕದ್ದು ಮತ್ತು ಅವರಿಗೆ ಸಂಚಾರ ಕಾಲದಲ್ಲಿ ಸಂರಕ್ಷಣೆ ದೊರೆಯತಕ್ಕದ್ದು.

(೨) ಹೀಗೆ ದೇಶತ್ಯಾಗ ಮಾಡುವ ಜನರು ತಮ್ಮ ಮನಸ್ಸಿಗೆ ಬಂದಷ್ಟು ತಮ್ಮ ಜಂಗಮ ಆಸ್ತಿಯನ್ನು ತಮ್ಮೊಡನೆ ಹೊತ್ತುಕೊಂಡೊಯ್ಯಬಲ್ಲರು. ಈ ಜಂಗಮ ಆಸ್ತಿಯಲ್ಲಿ ಆಭರಣಗಳೂ ಸೇರುತ್ತವೆ. ಗುಳೆ ಕಿತ್ತಿ ಹೊರಟ ಪ್ರತಿಯೊಬ್ಬ ಪ್ರೌಢನಿಗೆ ರೂ. ೧೫೦ ಗಳು ಬಾಲಕನಿಗೆ ೭೫ ರೂ. ಗಳು ಹೀಗೆ ನಗದು ಹಣವನ್ನು ಒಯ್ಯಬಹುದು.

(೩) ಹೀಗೆ ದೇಶ ಬಿಟ್ಟು ಹೊರಟು ನಿಂತವನು, ತನ್ನೊಡನೆ ತೆಗೆದುಕೊಂಡು ಹೋಗಲು ಇಷ್ಟಪಡದಂಥ ನಗದನ್ನಾಗಲೀ ಆಭರಣಗಳನ್ನಾಗಲೀ ಬ್ಯಾಂಕಿನಲ್ಲಿ ಇಡಬಲ್ಲನು ಹಾಗೆ ಅಡವಿಟ್ಟ ವಸ್ತುಗಳ ಬಗ್ಗೆ ಅವನಿಗೆ ಬ್ಯಾಂಕಿನಿಂದ ಯೋಗ್ಯ ಪಾವತಿ ದೊರೆಯಬೇಕು. ಮತ್ತು ಅವಶ್ಯ ವೆನಿಸಿದಾಗ, ಅಗತ್ಯವಿದ್ದಾಗ ಅವನಿಗೆ ಪಿನಿಯಮ ಕಟ್ಟಳೆಗಳಿಗನುಗುಣವಾಗಿ ತನ್ನ ನಗದು ಹಣವನ್ನು ವರ್ಗಾಯಿಸಿಕೊಳ್ಳಲು ಸಂಬಂಧಿಸಿದ ಸರಕಾರವು ಸೌಕರ್ಯಗಳನ್ನು ಒದಗಿಸಿ ಕೊಡಬೇಕು.

(೪) ಸುಂಕದ ಅಧಿಕಾರಿಗಳ ಹಿಂಸೆ ತಪ್ಪಬೇಕು. ಉಭಯ ಸರಕಾರಗಳೂ ಸೇರಿ ಒಪ್ಪಿಕೊಂಡಿರುವ ಸುಂಕದ ಕಟ್ಟಿಗಳಲ್ಲಿ ಇನ್ನೊಂದು ಸರಕಾರದ ಸಂಬಂಧಾಧಿಕಾರಿಯು ನಿಂತುಕೊಂಡು ಈ ಹಿಂಸೆ ನಡೆಯದಂತೆ ನೋಡಿಕೊಳ್ಳಬೇಕು.

(೫) ಯಾವನೊಬ್ಬನು ದೇಶತ್ಯಾಗ ಮಾಡಿದರೆ ಅವನ ಸ್ಥಾವರ ಆಸ್ತಿಯ ಒಡೆತನದಲ್ಲಿ ಯಾವ ವ್ಯತ್ಯಾಸವೂ ಉಂಟಾಗಲಾರದು. ಇವನು ೧೯೪೯ ಡಿಸೆಂಬರ ೩೧ ರೊಳಗಾಗಿ ಸ್ವದೇಶಕ್ಕೆ ಹಿಂತಿರುಗಿದರೆ ಅವನು ಈ ಮೂಲ ಒಡೆಯನಿಗೆ ಆ ಆಸ್ತಿಯನ್ನು ಬಿಟ್ಟುಕೊಡಬೇಕು ಒಡಿಹೋದ ದೈತನೇ ಆಗಲಿ, ಹೊಲ ಸಾಗು ಮಾಡುತ್ತಿದ್ದ ಭೂಮಿ ಒಡೆಯನೇ ಆಗಲಿ, ೧೯೪೯ ಡಿಸೆಂಬರ ೩೧ ರೊಳಗಾಗಿ ಹಿಂತಿರುಗಿದರೆ ಅವನಿಗೆ ಅವನ ಹೊಲವನ್ನು ಒಪ್ಪಿಸಿಬಿಡಬೇಕು. ಕೆಲವು ಅಪನಾದಾತ್ಮಕ ಕಾರಣಗಳಿಗಾಗಿ ಯಾವನೊಬ್ಬನ ಸ್ಥಾವರ ಆಸ್ತಿಯನ್ನು ಅವನಿಗೆ ಕೊಡುವದು ಸಾಧ್ಯವಿಲ್ಲವೆಂದು ಸರಕಾರಕ್ಕೆ ಅನಿಸಿದರೆ ಈ ವಿಷಯವನ್ನು ಅಧಿಕೃತವಾದ ಅಲ್ಪಸಂಖ್ಯಾಕ ವಂತಿಕೆದ ಸಲಹೆ ಪಡೆದುಕೊಂಡು ಬಗೆಹರಿಸಬೇಕು.

ನಿರ್ದಿಷ್ಟ ಅವಧಿಯಲ್ಲಿ ಹಿಂತಿರುಗಿದ ಜನರಿಗೆ ಅವರ ಸ್ಥಾವರ ಆಸ್ತಿಯನ್ನು ತಿರುಗಿಕೊಡುವದು ಸರಕಾರಕ್ಕೆ ಇದ್ದರೆ ಅಂಥ ಜನರ ಪುನರ್ನಿವೇಶನದ ಹೊಣೆಯನ್ನು ಸರಕಾರವು ಹೊರಬೇಕು.

(೬) ಯಾವನೊಬ್ಬ ದೇಶತ್ಯಾಗಿಯು ಸ್ವದೇಶಕ್ಕೆ ಹಿಂತಿರುಗಬಾರದೆಂದು ನಿರ್ಧರಿಸಿದರೂ ಅವನು ಬಿಟ್ಟುಬಂದಿರುವ ಸ್ಥಾವರ ಆಸ್ತಿಯ ಒಡೆತನವು ಅವನಿಗೇ ಸಲ್ಲುವದು ಮತ್ತು ಅವನಿಗೆ ಈ ತನ್ನ ಆಸ್ತಿಯನ್ನು ಬೇಕಾದಾಗ ಮಾರಲಿಕ್ಕಾಗಲಿ ಬೇರೊಬ್ಬ ನಿರಾಶ್ರಿತರೊಡನೆ ಆಸ್ತಿ ಅದಲು ಬದಲು ಮಾಡಿಕೊಳ್ಳಲಿಕ್ಕಾಗಲಿ ಬೇರೆ ಯಾವ ರೀತಿಯಾದರೂ ತನ್ನ ಆಸ್ತಿಯ ವಿತರಣ ಮಾಡಲಿಕ್ಕಾಗಲೀ ಅಧಿಕಾರವಿರುತ್ತದೆ. ಸರಕಾರೀ ಮಂತ್ರಿಯೊಬ್ಬನ ಅಧ್ಯಕ್ಷತೆಯಲ್ಲಿ ಅಲ್ಪಸಂಖ್ಯಾಕರ ಮೂವರು ಪ್ರತಿನಿಧಿಗಳಿಂದ ರಚಿತವಾದ ಮಂಡಳವೊಂದು ಅಒಡೆಯರ ವಿಶ್ವಸ್ತರೆಂದು ಕೆಲಸ ಮಾಡುವದು. ಈ ಸ್ಥಾವರ ಆಸ್ತಿಯ ಲಾವಣಿ ವಸೂಲ ಮಾಡಲು ಈ ಮಂಡಳಕ್ಕೆ ಕಾಯಿದೆಯಿಂದ ಅಧಿಕಾರವಿದೆ.

ಈ ಮಂಡಳದ ಕರ್ತವ್ಯಗಳು ಸುರಕ್ಷಿತವಾಗಿ ನೆರವೇರುವಂತೆ ಅದಕ್ಕೆ ಸಹಾಯವನ್ನು ನೀಡಲು ಪ್ರಾಂತಿಕ ಇಲ್ಲವೆ ಸಂಸ್ಥಾನೀ ಸರಕಾರವು ಸಂಬಂಧಿಸಿದ ಅಧಿಕಾರಿಗಳಿಗೆ ತಿಳಿಸತಕ್ಕದ್ದು.

ಈ ಮೇಲೆ ಹೇಳಿದ ಅಂತಗಳು ಪೂರ್ವ ಬಂಗಾಲದಿಂದ ಭಾರತದ ಯಾವದೇ ಪ್ರದೇಶಕ್ಕೆ, ಅದರಂತೆ ಪಶ್ಚಿಮ ಬಂಗಾಲ, ಅಸಾಮ, ತ್ರಿಪುರಾಗಳಿಂದ ಪಾಕಿಸ್ತಾನದ ಯಾವದೇ ಪ್ರದೇಶಕ್ಕೆ ೧೫-೮-೪೭ ರಿಂದೀಚೆಗೆ ತೆರಳಿದ ನಿರಾಶ್ರಿತರಿಗೆ ಅನ್ವಯಿಸುತ್ತವೆ. ಜಾತೀಯ ಗಲಭೆಯ ಕಾರಣದಿಂದ ಇಲ್ಲವೆ ಅದರ ಹೆದರಿಕೆಯಿಂದ ಬಿಹಾರವನ್ನು ಬಿಟ್ಟು ಪೂರ್ವ ಬಂಗಾಲಕ್ಕೆ ತೆರಳಿದವರಿಗೂ ಈ ವ್ಯವಸ್ಥೆಯು ಅನ್ವಯಿಸುತ್ತದೆ.

ಕ

ಪಾಕಿಸ್ತಾನದ ಪೂರ್ವ ಬಂಗಾಲ ಮತ್ತು ಭಾರತದ ಪಶ್ಚಿಮ ಬಂಗಾಲ ಅಸಾಮ, ತ್ರಿಪುರಾಗಳ ಬಗ್ಗೆ ಉಭಯ ಸರಕಾರಗಳು ಈ ಕೆಳಗಿನ ಇನ್ನೂ ಕೆಲವು ಅಂಶಗಳ ವಿಚಾರದಲ್ಲಿ ಒಪ್ಪಂದ ಮಾಡಿಕೊಂಡಿವೆ

(೧) ಈ ಪ್ರದೇಶಗಳಲ್ಲಿ ಸಾಮಾನ್ಯ ಪರಿಸ್ಥಿತಿಯನ್ನು ನುಂಟುಮಾಡಲೂ ಇನ್ನು ಮುಂದೆ ಇಂಥ ಘಟನೆಗಳು ನಡೆಯದಂತೆ ಯೋಗ್ಯ ಉಪಾಯಗಳನ್ನು ಕೈಕೊಳ್ಳಲೂ ಪ್ರಯತ್ನಿಸುವದು.

(೨) ಜನರ ನಿತ್ಯ ಜೀವಿತಗಳಿಗೆ ಗಂಡಾಂತರವನ್ನುಂಟುಮಾಡುವ ಅಪರಾಧಗಳಲ್ಲಿ ತೊಡಗುವ ಕಿಡಿಗೇಡಿಗಳಿಗೆ ಯೋಗ್ಯ ಶಿಕ್ಷೆ ವಿಧಿಸಬೇಕು. ಅವಶ್ಯಕಂಡುಬಂದಲ್ಲಿ ಸಾಮೂಹಿಕ ದಂಡನೆಯನ್ನು ಹಾಕಬೇಕು. ಕಿಡಿಗೇಡಿಗಳಿಗೆ, ಯೋಗ್ಯ ದಂಡನೆಯಾಗಬೇಕೆಂಬುದಕ್ಕೆ ಅಗತ್ಯ ಕಂಡರೆ ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸಲಾಗುವದು.

(೩) ಸುಲಿಗೆ ಆಗಿಹೋದ ಆಸ್ತಿಯನ್ನು ತಿರುಗಿ ಸಂಪಾದಿಸಲು ಸರ್ವ ಪ್ರಯತ್ನ ಮಾಡುವದು.

(೪) ಅಪಹೃತ ಹೆಣ್ಣುಮಕ್ಕಳನ್ನು ಕಂಡು ಹಿಡಿಯುವದಕ್ಕಾಗಿ ಅಲ್ಪಸಂಖ್ಯಾಕರ ಪ್ರತಿನಿಧಿಗಳಿಂದ ಕೂಡಿದ ಒಂದು ಸಂಸ್ಥೆಯನ್ನು ಸ್ಥಾಪಿಸುವದು

ಒತ್ತಾಯದ ಮತಾಂತರವನ್ನು ಮನ್ನಿಸತಕ್ಕದ್ದಲ್ಲ. ಜಾತೀಯ ಗಲಭೆಯ ಕಾಲದಲ್ಲಿ ಸಂಭವಿಸಿದ ಮತಾಂತರವು ಒತ್ತಾಯದ ಮತಾಂತರವೆಂದು ಪರಿಗಣಿಸಲ್ಪಡುವದು. ಒತ್ತಾಯದಿಂದ ಮತಾಂತರ ಸಡಿಸಿದವರನ್ನು ಉಗ್ರವಾಗಿ ದಂಡಿಸಲಾಗುವದು.

(೬) ಇತ್ತೀಚೆಗೆ ಸಂಭವಿಸಿದ ಗಲಭೆಗಳ ಕಾರಣ ಮತ್ತು ಪರಿಣಾಮವನ್ನು ಕಂಡು ಹಿಡಿಯುವದಕ್ಕೆ ಮತ್ತು ಇನ್ನು ಮುಂದೆ ಇಂಥ ಘಟನೆಗಳು ಸಂಭವಿಸದಂತೆ ಕೈಕೊಳ್ಳಲು ಬೇಕಾದ ಉಪಾಯಗಳನ್ನು ಕುರಿತು ವರದಿ ಮಾಡುವದಕ್ಕೆ ಒಂದು ವಿಚಾರಣಾ ಮಂಡಳಿಯನ್ನು ಕೂಡಲೇ ನೇಮಿಸಬೇಕು ಈ ವಿಚಾರಣಾ ಮಂಡಳಿಕ್ಕೆ ಒಬ್ಬ ಹಾಯಕೋರ್ಟ ನ್ಯಾಯಾಧೀಶನು ಅಧ್ಯಕ್ಷನಾಗಿರತಕ್ಕದ್ದು ಮತ್ತು ಇದು ಅಲ್ಪ ಸಂಖ್ಯಾಕರ ನಿಷ್ಪಾಸಕ್ಷೆ ಪಾತ್ರವಾಗಿರಬೇಕು.

(೭) ಜಾತೀಯ ಭಾವನೆಯನ್ನು ಕೆರಳಿಸುವಂಥ ಸುದ್ದಿಗಳನ್ನು ಆಕಾಶವಾಣಿ ಇಲ್ಲವೆ ಪತ್ರಿಕೆಗಳ ಮುಖಾಂತರ ಪ್ರಸಾರ ಮಾಡದಂತೆ ಪರಿಣಾಮಕಾರಿಯಾದ ಉಪಾಯಗಳನ್ನು ಕೂಡಲೆ ಕೈಕೊಳ್ಳಬೇಕು ಯಾವದೇ ವ್ಯಕ್ತಿಗಾಗಲೇ ಸಂಸ್ಥೆಗಾಗಲೀ ಇಂಥ ಜಾತೀಯ ಪ್ರಚಾರಕ್ಕೆ ಅವಕಾಶ ಕೊಡಬಾರದು ಈ ಅಪರಾಧಗಳನ್ನೆಸಗುವವಂಗ ಉಗ್ರ ದಂಡನೆ ವಿಧಿಸಲಾಗುವದು.

(೮) ಉಭಯ ರಾಷ್ಟ್ರಗಳ ಪ್ರಾದೇಶಿಕ ಐಕ್ಯತೆಗೆ ಭಂಗತೆರುವಂಥ ಇಲ್ಲವೆ ಯುದ್ಧ ಪ್ರಚೋದಕವಾದ ಪ್ರಚಾರವನ್ನು ನಡೆಸಗೊಡಬಾರದು. ಇಂಥ ಪ್ರಚಾರದಲ್ಲಿ ತೊಡಗಿದವರನ್ನು ಉಗ್ರವಾಗಿ ದಂಡಿಸಬೇಕು.

ಡ

'ಕ' ಪಲ್ಲಿಯ ೧, ೨, ೩, ೪, ೫, ೬, ೭, ಮತ್ತು ೮ ವ್ಯಾಪಾರಗಳು ಶಾಶ್ವತ ಸ್ವರೂಪವಾಗಿದು ಸಂದರ್ಭಾನುಸಾರವಾಗಿ ಭಾರತ ಇಲ್ಲವೆ ಪಾಕಿಸ್ತಾನದ ಯಾವದೇ ಭಾಗಕ್ಕೆ ಅನ್ವಯಿಸಬಹುದಾಗಿದೆ.

ಈ

ಈಗ ಗುಳೆತಪ್ಪಿ ಹೋಗಿರುವ ಜನರು ತಂತಮ್ಮ ದೇಶಕ್ಕೆ ತಿರುಗಿ ಬರುವಂತೆ ವಿಶ್ವಾಸ ಹುಟ್ಟಿಸುವದಕ್ಕಾಗಿ ೧) ಸದ್ಯಕ್ಕೆ ಅಗತ್ಯವಿರುವವರೆಗೆ ಈಗಲಭೆಪ್ರದೇಶದಲ್ಲಿ ಉಭಯ ಸರಕಾರದವರು ತಮ್ಮ ಒಬ್ಬೊಬ್ಬ ಮಂತ್ರಿಯನ್ನು ಇಡಬೇಕು ೨) ಪೂರ್ವ ಬಂಗಾಲ, ಪಶ್ಚಿಮ ಬಂಗಾಲ ಮತ್ತು ಅಸಾಮಗಳ ಮಂತ್ರಿ ಮಂಡಲಗಳಲ್ಲಿ ಅಲ್ಪಸಂಖ್ಯಾಕರ ಪ್ರತಿನಿಧಿಯಾಗಿ ಒಬ್ಬೊಬ್ಬ ಮಂತ್ರಿಯಿರಬೇಕು ಎಂದು ಉಭಯ ಸರಕಾರಗಳು ನಿರ್ಧರಿಸಿವೆ ಅಸಾಮದಲ್ಲಿ ಅಲ್ಪ ಸಂಖ್ಯಾಕರ ಪ್ರತಿನಿಧಿಗೆ ಈಗಾಗಲೇ ಮಂತ್ರಿ ಮಂಡಳದಲ್ಲಿ ಸ್ಥಾನವು ದೊರೆತಿದೆ; ಪೂರ್ವ ಬಂಗಾಲ ಮತ್ತು ಪಶ್ಚಿಮ ಬಂಗಾಲಗಳ ಮಂತ್ರಿ ಮಂಡಳಿಗಳಲ್ಲಿಯೂ ಅಲ್ಪಸಂಖ್ಯಾಕರ ಪ್ರತಿನಿಧಿಯನ್ನು ಕೂಡಲೇ ನೇಮಿಸಲಾಗುವದು.

ಫ

ಈ ಒಡಂಬಡಿಕೆಯನ್ನು ಕಾರ್ಯಕಾರಿಯಾಗಿಸಲು ಉಭಯ ಸರಕಾರಗಳು ಮೇಲೆ 'ಈ' ಭಾಗದಲ್ಲಿ ಹೇಳಿದಂತೆ ಮಂತ್ರಿಗಳನ್ನು ಕಳಿಸುವದಲ್ಲದೆ ಪೂರ್ವ ಬಂಗಾಲ ಪಶ್ಚಿಮ ಬಂಗಾಲ ಮತ್ತು ಮತ್ತು ಅಸಾಮ ಈ ಪ್ರಾಂತಗಳಿಗೆ ಒಂದೊಂದು ಅಲ್ಪ ಸಂಖ್ಯಾಕ ಮಂಡಳದ ಕಾರ್ಯವಿಂತಿರಬೇಕು.

(೧) ಈ ಮಂಡಳವು ಪ್ರಾಂತಿಕ ಇಲ್ಲವೆ ಸಂಸ್ಥಾನಿ ಮಂತ್ರಿಯ ಅಧ್ಯಕ್ಷತೆಯಲ್ಲಿ ರಚಿತವಾಗಿರಬೇಕು. ಇದರಲ್ಲಿ ಆಯಾ ಪ್ರಾಂತಿಕ ಇಲ್ಲವೆ ಸಂಸ್ಥಾನಿಕ ಶಾಸನ ಸಭೆಯೊಳಗಿಂದ ಆರಿಸಲ್ಪಟ್ಟ ಬಹು ಸಂಖ್ಯಾಕರ ಒಬ್ಬ ಮತ್ತು ಅಲ್ಪಸಂಖ್ಯಾಕರ ಒಬ್ಬ ಪ್ರತಿನಿಧಿಯಿರಬೇಕು.

(೨) ಭಾರತ ಮತ್ತು ಪಾಕಿಸ್ತಾನ ಸರ್ಕಾರಗಳ ಇಬ್ಬರು ಮಂತ್ರಿಗಳು ಯಾವದೇ ಮಂಡಳದ ಸಭೆಗೆ ಹಾಜರು ಇದ್ದು ಅದರ ಕಾರ್ಯಕಲಾಪಗಳಲ್ಲಿ ಭಾಗವಹಿಸಬಲ್ಲರು. ಈ ಒಡಂಬಡಿಕೆಯನ್ನು ಕಾರ್ಯಕಾರಿಯಾಗಿಸಲು ಅಗತ್ಯವೆಂದು ಕಂಡಾಗ ಈ ಮಂಡಳವು ಇಲ್ಲವೆ ಮಂಡಳಗಳು ಕೇಂದ್ರ ಮಂತ್ರಿಯ ಇಚ್ಛೆಯಂತೆ ಸಂಯುಕ್ತ ಸಭೆ ನೇರಬೇಕು.

(೩) ಪ್ರತಿಯೊಂದು ಮಂಡಳವೂ ತಾನೇ ತನ್ನ ಸಿಬ್ಬಂದಿಯನ್ನು ಅಗತ್ಯ ವಿದ್ದಷ್ಟು ನೇಮಿಸಿಕೊಳ್ಳಬೇಕು. ಮತ್ತು ತನ್ನ ಕಾರ್ಯ ಪದ್ಧತಿಯನ್ನು ತಾನೇ ನಿರ್ಧರಿಸಿಕೊಳ್ಳಬೇಕು.

(೪) ೧೯೪೭ ದಿಸೆಂಬರ ಅಂತರ್ವಸಾಹತು ಒಡಂಬಡಿಕೆಯ ಪ್ರಕಾರ ರಚಿತವಾದ ಅಲ್ಪಸಂಖ್ಯಾಕ ಸಮಿತಿಗಳ ಮುಖಾಂತರ ಈ ಮಂಡಳವು ಜಿಲ್ಲೆಯಲ್ಲಿಯ ಮತ್ತು ಇತರ ಅಲ್ಪಸಂಖ್ಯಾಕರ ಸಂಪರ್ಕವನ್ನು ಇಟ್ಟುಕೊಳ್ಳಬೇಕು.

(೫) ಪೂರ್ವ ಬಂಗಾಲ ಮತ್ತು ಪಶ್ಚಿಮ ಬಂಗಾಲಗಳಲ್ಲಿ ೧೯೪೭ ಅಂತರ್ವಸಾಹತು ಒಡಂಬಡಿಕೆಯ ಪ್ರಕಾರ ರಚಿತವಾದ ಪ್ರಾಂತಿಕ ಅಲ್ಪಸಂಖ್ಯಾಕ ಮಂಡಳಗಳು ರಚಿತವಾಗಿರಬೇಕು.

(೬) ಭಾರತ ಪಾಕಿಸ್ತಾನಗಳ ಕೇಂದ್ರ ಸರಕಾರಗಳ ಮಂತ್ರಿಗಳು, ಅನಿಶ್ಚಿತ ಜನರು ಮತ್ತು ಸಂಸ್ಥೆಗಳೊಡನೆ ಕಾಲ ಕಾಲಕ್ಕೆ ಚರ್ಚಿಸಿ ಸಲಹೆ ಕೇಳಿಕೊಳ್ಳಬೇಕು.

(೭) ಅಲ್ಪಸಂಖ್ಯಾಕ ಮಂಡಳದ ಕಾರ್ಯ ನಿರ್ವಹಿಸಬೇಕು.

(೮) - ಈ ಅಲ್ಪಸಂಖ್ಯಾಕ ಒಡಂಬಡಿಕೆಯು ಕಾರ್ಯಕಾರೀಯಾಗುವದೇ ಎಂಬುದನ್ನು ನೀರೀಕ್ಷಿಸಿ ವರದಿ ಮಾಡುವದು, ಈ ಒಡಂಬಡಿಕೆಯನ್ನು ಭಂಗಿಸಿದ ಇಲ್ಲವೇ ಅಲಕ್ಷಿಸಿದ ಪ್ರಕರಣಗಳನ್ನು ಗಮನಿಸಬೇಕು.

(ಬ) ತಮ್ಮ ಸೂಚನೆಗಳ ಬಗ್ಗೆ ಯಾವ ಕ್ರಮವನ್ನು ಯೋಜಿಸಬೇಕೆಂಬ ಬಗ್ಗೆ ಸಲಹೆ ನೀಡುವದು.

(೮) ಈ ಅಲ್ಪಸಂಖ್ಯಾಕ ಮಂಡಳಿಗಳು ಅವಶ್ಯಕಂಡಾಗೆಲ್ಲ ತಮ್ಮ ಪ್ರಾಂತಿಕ ಇಲ್ಲವೆ ಸಂಸ್ಥಾನಿ ಸರಕಾರಗಳಿಗೆ ವರದಿ ಒಪ್ಪಿಸಬೇಕು. ಮತ್ತು 'ಈ'ದಲ್ಲಿ ಸೂಚಿಸಿದ ಅವಧಿಯಲ್ಲಿ ಅಲ್ಲಿರುವ ಕೇಂದ್ರದ ಮಂತ್ರಿಗಳಿಗೂ ತಮ್ಮ ವರದಿಯ ಒಂದೊಂದು ಪ್ರತಿಯನ್ನು ಒಪ್ಪಿಸಬೇಕು.

(೯) ಕೇಂದ್ರದ ಇಬ್ಬರೂ ಮಂತ್ರಿಗಳು ಒಪ್ಪಿಕೊಳ್ಳುವ ಸೂಚನೆಗಳನ್ನು ಉಭಯ ರಾಷ್ಟ್ರಗಳ ಕೇಂದ್ರ ಸರಕಾರಗಳು ಮತ್ತು ಸಂಬಂಧಿಸಿದ ಕೇಂದ್ರ ಸರಕಾರಗಳು ಸಾಮಾನ್ಯತಃ ಜಾರಿಯಲ್ಲಿ ತರುವವು. ಕೇಂದ್ರದ ಈ ಮಂತ್ರಿಗಳಲ್ಲಿ ಭಿನ್ನಾಭಿಪ್ರಾಯವುಂಟಾದರೆ ಆ ವಿಷಯವನ್ನು ಉಭಯ ರಾಷ್ಟ್ರಗಳ ಮುಖ್ಯ ಮಂತ್ರಿಗಳು ತಾವೇ ಚರ್ಚಿಸಿ ಬಗೆಹರಿಸುವ ಸಂಸ್ಥೆಯನ್ನೂ ಕ್ರಮವನ್ನೂ ನಿರ್ಧರಿಸುವರು.

(೧೦) ತ್ರಿಪುರಾದ ವಿಷಯದಲ್ಲಿ ಕೇಂದ್ರದ ಇಬ್ಬರು ಮಂತ್ರಿಗಳು ಮುಂಡಳವಾಗಿ ರಚಿತರಾಗಿ ಪೂರ್ವ ಬಂಗಾಲ, ಪಶ್ಚಿಮ ಬಂಗಾಲ, ಆಸಾಮಗಳ ಅಲ್ಪಸಂಖ್ಯಾಕ ಒಡಂಬಡಿಕೆಯ ಪ್ರಕಾರ ರಚಿತವಾದ ಮುಂಡಳಗಳ ಕಾರ್ಯವನ್ನು ನಿರ್ವಹಿಸುವರು 'ಈ'ದಲ್ಲಿ ಸೂಚಿತವಾದ ಕಾಲವು ನೆಲೆಗೊಳ್ಳುವ ಪೂರ್ವದಲ್ಲಿ ಈ ಇಬ್ಬರು ಕೇಂದ್ರದ ಮಂತ್ರಿಗಳು ತ್ರಿಪುರಾದಲ್ಲಿ ಅಲ್ಪ ಸಂಖ್ಯಾಕ ಮಂಡಳವನ್ನು ರಚಿಸುವ ಕುರಿತು ಸೂಚನೆಗಳನ್ನು ಮಾಡತಕ್ಕದ್ದು.

ಈ ಒಡಂಬಡಿಕೆಯ ಪ್ರಕಾರ ತಿದ್ದುಪಡಿ ಹೊಂದಿನ ೧೫ಳಲ ರ ಅಂತರ್ವಸಾಹತು ಒಡಂಬಡಿಕೆಯು ಜಾರಿಯಲ್ಲಿ ಇಳಿಯುವದು.

ಹೊಸದಿಲ್ಲಿ
೮-೪-೫೦

ಜವಾಹರಲಾಲ ನೆಹರು
ಭಾರತದ ಮುಖ್ಯಮಂತ್ರಿ
ಲಿಯಾಖತ ಅಲಿಖಾನ
ಪಾಕಿಸ್ತಾನದ ಮುಖ್ಯಮಂತ್ರಿ

ಹುಲ್ಲಿನ ರುಚಿ ಹೆಚ್ಚಿಸಬಹುದು

ಒಕ್ಕಲತನ ಮಂತ್ರಿಗಳ ಹೇಳಿಕೆ.

ಹೊಸದಿಲ್ಲಿ ೩೧—ಹುಲ್ಲನ್ನು ಹೆಚ್ಚು ರುಚಿಕರದನ್ನಾಗಿ ಮಾಡಬಹುದೆಂದು ಭಾರತದ ಒಕ್ಕಲತನ ಮಂತ್ರಿ ಶ್ರೀ ಜಯರಾಮದಾಸ ದೌಲತರಾಮರು ಹೇಳಿದ್ದಾರೆ.

ಈ ವಿಚಾರವನ್ನು ಪಾರ್ಲಿಮೆಂಟನಲ್ಲಿಂದು ತಿಳಿಸುತ್ತ ಅವರು ಹೇಳಿದೇನೆಂದರೆ:—

ಭತ್ತದ ಹುಲ್ಲನ್ನು ಮೇವಿಗಾಗಿ ಉಪಯೋಗಿಸುವ ವಿಷಯದಲ್ಲಿ ಸಂಶೋಧನೆಗಳನ್ನು ಮಾಡಿದೆ. ಹುಲ್ಲನ್ನು ನೀರಿನಿಂದ ತೊಳೆಯುವದರಿಂದ ಅದರಲ್ಲಿರುವ ಅಪಾಕಾರಕ ಅಂಶಗಳು ಬಹಳ ಮೆಟ್ಟಿಗೆ ಇಲ್ಲದಂತಾಗುವವು. ಇದನ್ನು ಅಲ್ಕಾಲಿ ದ್ರವ್ಯದಿಂದ ತೊಳೆದ ಬಳಿಕ ನೀರಿನಲ್ಲಿ ತೊಳೆಯುವದರಿಂದ ರುಚಿ ಹೆಚ್ಚುವದೆಂದೂ ಸುಲಭದಲ್ಲಿ ಜೀರ್ಣವಾಗುವದೆಂದು ತಿಳಿದು ಬಂದಿದೆ. ಅದಂ ಶಕ್ತಿದಾಯಕ ಗುಣವೂ ಹೆಚ್ಚುವದು ಮುಂದಿನ ತಿಂಗಳು ಈ ವಿಚಾರದ ವರದಿ ಪೂರ್ಣವಾಗಿ ಕೈ ಸೇರಬಹುದು.

ಕಬ್ಬಿಗೆ ಕೆಂಪು ರೋಗ ಹತ್ತಿ ಕೆಡುತ್ತಿದ್ದರೆ ಅದನ್ನು ಬಿಸಿ ನೀರಿನಿಂದ ತೊಳೆದಲ್ಲಿ ರೋಗ ನಿವಾರಣೆಯಾಗುವದೆಂದೂ ಅವರು ತಿಳಿಸಿದರದೂಳಿ

ಹಿಂದೀ ಮಹಾ ವಿದ್ಯಾಲಯ, ಬಳ್ಳಾರಿ,

[1931 ಸ್ಥಾಪಿತ. ಬಳ್ಳಾರಿ ಜಿಲ್ಲಾ ಹಿಂದೀ ಪ್ರೇಮಿಮಂಡಲದಾಶ್ರಯದಲ್ಲಿ, ನಿಜಸ್ವರ್ದ.]

ಮದ್ರಾಸ್ ಸರ್ಕಾರದಿಂದ ಮಾನ್ಯತೆ ಇದೆ.

ಪ್ರಾರಂಭಿಕ ವರ್ಗಗಳಿಗೆ ಮಾಸಿಕ 3/- ಶುಲ್ಕ — ಉನ್ನತ ವರ್ಗಗಳಿಗೆ ಮಾಸಿಕ 5/- ಶುಲ್ಕ

ವಾರ್ಡಲಾ ಹೈಸ್ಕೂಲ್ ಕಟ್ಟಡದಲ್ಲಿ ಪ್ರಾತಃಕಾಲ-ಸಾಯಂಕಾಲ ಹಿಂದೀ ಕಾಲೇಜ್‌ದ ವರ್ಗಗಳು ನಡೆಯುತ್ತಿವೆ. ವಿಶಾರದ — ಪ್ರಚಾರಕ ವರ್ಗಗಳಲ್ಲದೆ ಪ್ರಾರಂಭಿಕ ವರ್ಗಗಳಿಗೂ ಪ್ರವೇಶವಿದೆ. ವರ್ಗಗಳಿಗೆ ಸಂಬಂಧಿಸಿದ ಪಾಠ್ಯ ಪುಸ್ತಕಗಳು ವಿದ್ಯಾಲಯದಲ್ಲಿ ದೊರೆಯುತ್ತವೆ. ಒಳ್ಳೆಯ ಪುಸ್ತಕಭಂಡಾರವಿದೆ. ಶ್ರೇಷ್ಠ ವಾರಪತ್ರಿಕೆ, ಮಾಸಪತ್ರಿಕೆಗಳು ಲಭ್ಯ ಇತರ ವಿವರಗಳಿಗೆ ಸ್ವಾಂಪಿಟ್ಟು ಬರೆಯಿರಿ.

ಪ್ರಿನ್ಸಿಪಾಲ.

NAVA BHARAT BELLARY. (Reg No. M. 4746)

ನವಭಾರತ ಬಳ್ಳಾರಿ.

(Weekly)

ಚಂದಾದರಗಳು Subscription Rates.

ವರ್ಷಕ್ಕೆ 5—0—0	One Year 5—0—0
6 ತಿಂಗಳಿಗೆ 3—0—0	Six months 3—0—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ	Subscription will not be accepted for less than 6 months

24—4—50

To

Sri.....

.....

.....

Printed at Krishna Printing Works. Edited & Published by T. B. Keshava Rao.

JAI—HIND

ನವಭಾರತ

ಬಳ್ಳಾರಿಯ
ಉಜ್ವಲ ರಾಷ್ಟ್ರೀಯ ವಾರಪತ್ರಿಕೆ
*
ಉತ್ಪತ್ತಿ! ಡಾಗೈಟ್!!
ಪ್ರಾಪ್ತವರಾಷ್ಟ್ರಿ ಬೋಧನ!!!
*
ಸಂಪಾದಕ ಮತ್ತು ಪ್ರಕಾಶಕರು—
ಟಿ. ಬಿ. ಕೇಶವರಾವು.

ವರ್ಷ ೧೩ | ಸೋಮವಾರ ೪ ಮೇ ೧೯೫೦ | ಸಂಚಿಕೆ ೧೪

ಡಾಕ್ಟರ್ ಹರ್ಡೀಕರರ ವಜ್ರಮಹೋತ್ಸವ ಸಂಚಿಕೆ

ಸ್ವಾತಂತ್ರ್ಯ ಪ್ರಾಪ್ತಿಗಾಗಿ ಡಾಕ್ಟರರು ಮಾಡಿದ ಸೇವೆ, ದೇಶನಾಯಕರ ಅಭಿಪ್ರಾಯಗಳು

ಬೆಲೆ : 1—0—0

'ಜಯ ಹಿಂದ' ಕಾರ್ಯಾಲಯ.
ಹುಬ್ಬಳ್ಳಿ.

ನವಭಾರತಕ್ಕೆ ಚಂದಾದಾರರಾಗಿರಿ.

ಕೇಂದ್ರ ಮಂತ್ರಿಗಳಿಬ್ಬರ ರಾಜೀನಾಮೆ

ಡಾ. ಶಾಮಪ್ರಸಾದ ಮುಖರ್ಜಿ ಕೆ. ಶಿ. ನಿಯೋಗಿ ಬಂಗಾಲದ ಈ ಇಬ್ಬರು ಮಂತ್ರಿಗಳು ರಾಜೀನಾಮೆ ಕೊಟ್ಟಿದ್ದನ್ನು ಅಧ್ಯಕ್ಷರು ಸ್ವೀಕರಿಸಿದ್ದಾರೆ.

ಮುಖರ್ಜಿಯವರು ದೆಲ್ಲಿ ಪಾರ್ಲಿಮೆಂಟದಲ್ಲಿ ಸುದೀರ್ಘ ಹೇಳಿಕೆ ಕೊಟ್ಟಿ ಪಾಕಿಸ್ತಾನವು ಒಪ್ಪಂದ ಭಂಗಮಾಡುತ್ತಿದೆಯೆಂದೂ ಅದು ಇಸ್ಲಾಂ ರಾಷ್ಟ್ರವಾದಕಾರಣ ಅದರಲ್ಲಿ ಹಿಂದುಗಳು ವಿಶ್ವಾಸವಿಡುವಂತಿಲ್ಲವೆಂದೂ ಅಭಿಪ್ರಾಯ ಪಟ್ಟರು.

ಯುದ್ಧವು ಪರಿಹಾರ ಮಾರ್ಗವಲ್ಲ

ಶ್ರೀ ಜಯಪ್ರಕಾಶರಿಂದ ಖಂಡನೆ

ಹೊಸದಿಲ್ಲಿ—ಭಾರತ ಪಾಕಿಸ್ತಾನಗಳ ಲ್ಲಿಯ ಸಂಟಗಳನ್ನು ಬಗೆಹರಿಸಲು ಯುದ್ಧವೊಂದೇ ಪರಿಹಾರಮಾರ್ಗವೆಂಬುದನ್ನು ಸಮರ್ಥವಾದೀ ಧೋರಣೆಯಾಗಿ ಶ್ರೀ ಜಯಪ್ರಕಾಶರು ಇಂದು ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡುತ್ತ ಖಂಡಿಸಿದರು.

ಅವರು ಮುಂದರಿಯುತ್ತ ಹೇಳಿದ್ದೇನೆಂದರೆ—ಉಭಯ ರಾಷ್ಟ್ರಗಳಲ್ಲಿ ಶಾಂತಿ ನೆಲೆಸದಿದ್ದರೆ ಅಭಿವೃದ್ಧಿಯೂ ಕಾರ್ಯಸಾಧ್ಯವಾಗಿದ್ದು ಭಾರತದ ಕನಸುಗಳು ನನಸಾಗಲಾರವು. ಅಲ್ಪಸಂಖ್ಯಾಕರ ಸಮಸ್ಯೆಯು ಬಗೆಹರಿಯದಿದ್ದರೆ ನಮ್ಮ ಅಸ್ತಿತ್ವಕ್ಕೆ ಗಂಡಾಂತರವಿದೆ.

ಪಾಕಿಸ್ತಾನದಲ್ಲಿಯ ಅಲ್ಪಸಂಖ್ಯಾಕರ ವಿತ್ತಜೀವನಕ್ಕಿಗಳಿಗೆ ಸಂರಕ್ಷಣೆ ದೊರಕಿಸಿಕೊಡುವ ಪ್ರಬಾವಶಾಲಿ ಉಪಾಯವೆಂದರೆ ಭಾರತದಲ್ಲಿಯ ಅಲ್ಪಸಂಖ್ಯಾಕರಿಗೆ ರಕ್ಷಣೆಯೊದಗಿಸುವುದು.

ಜಾತೀಯ ಸಮಸ್ಯೆಯನ್ನು ಬಗೆಹರಿಸಲು ಜನರ ವಿನಿಮಯವಾಗಬೇಕೆಂಬುದು ಅವ್ಯವಹಾರವಾದುದಲ್ಲದೇ ಆರ್ಥಿಕ ದುಸ್ಥಿತಿಗಾಮಗಳುಂಟಾಗುವವು. ಭಾರತವು ಹಿಂದು ರಾಜ್ಯವಾಗಿ ತನ್ನ ಜಾತ್ಯತೀತತೆಯನ್ನು ಕಳೆದುಕೊಳ್ಳುವುದು.

ಮದ್ರಾಸ್ ಶಾಸನಸಭೆಗಳ ಸದಸ್ಯಸಂಖ್ಯೆ

ಮದ್ರಾಸ್ ಅಸೆಂಬ್ಲಿಗೆ 300 ಸದಸ್ಯರಿರಬೇಕೆಂದೂ, ಮೇಲ್ಮನೆಯಲ್ಲಿ 75 ಸದಸ್ಯರಿರಬೇಕೆಂದೂ, ಡೆಲ್ಲಿಯ ಮಧ್ಯಸ್ಥಿಕೆಯಲ್ಲಿ ನಿರ್ಣಯವಾಗಿದೆ. ಇದರಿಂದ ಅನ್ಯಾಯವಾಗುವದೆಂದೂ ಕೊನೆಯ ಸಲ್ಪ ಅಸೆಂಬ್ಲಿಗೆ 375 ಸ್ಥಾನಗಳಾದರೂ ಇರಬೇಕೆಂದೂ ಮದ್ರಾಸ್ ಸರ್ಕಾರವು ಕೇಂದ್ರವನ್ನು ಕೇಳಿಕೊಂಡ ಪರಿಣಾಮ ಕೇಂದ್ರವು 376 ಕ್ಕೆ ಒಪ್ಪಿಕೊಂಡಿತು.

NOTICE.

The Secretary Regional Transport Authority Bellary-Anantpur will receive applications for the grant of stage carriage permits in connection with proposals mentioned below in form P. S. P. A. with the requisite fee for Rs. 16/-

1) Tungabhadra Dam Site to Kampli via Hospet and Hampi for one Bus.

[Applications to be received on or before 10-5-50 willbe considered

2) Rayadrug to Bellary via Somalapur & Pulakurti [applications to be received on or before 15-5-50]

G. Ramachandran
Secretary
Regional Transport Officer
C No. 3161-9-49 Bellary-Anantapur

ಪ್ರಕಟನೆ.

ಬಳ್ಳಾರಿ-ಅನಂತಪುರ ಜಿಲ್ಲೆಗಳ ಸಾರಿಗೆ ಅಧಿಕಾರಿಗಳು ಈ ಕೆಳಗಿನ ಮಾರ್ಗಗಳಲ್ಲಿ ಬಸ್ ನಡೆಸಲು ನಿರ್ದಿಷ್ಟ ಕಾಗದಪತ್ರಗಳೊಳಗಾಗಿ 16 ರೂ ಚಲನ್ ದೊಂದಿಗೆ ಬಂದ ಅರ್ಜಿಗಳನ್ನು ಸರಾಮ ಶಿರಸ್ತುದಾರರು ಅರ್ಜಿ ನಮೂನೆ ನಮ್ಮಲ್ಲಿ ದೊರೆಯುತ್ತೆ.

1) ತುಂಗಭದ್ರ ಡ್ಯಾಂಸೈಟ್‌ದಿಂದ ಕಂಪ್ಲಿಗೆ (ಹೊಸಪೇಟೆ ಹಂಪಿಗಳ ಮಾರ್ಗವಾಗಿ) ಒಂದು ಬಸ್ 10-5-50 ರೊಳಗಾಗಿ ಅರ್ಜಿ ಹಾಕಬೇಕು.

2) ರಾಯದುರ್ಗದಿಂದ ಬಳ್ಳಾರಿಗೆ (ಸೋಮಲಾಪುರ ಪುಲಕುರ್ತಿಗಳಮಾರ್ಗದಿಂದ)(ಅರ್ಜಿಗಳು 15-5-50 ರೊಳಗೆ) ಒಂದು ಬಸ್.

ಜಿ. ರಾಮಚಂದ್ರನ್
ಕಾರ್ಯದರ್ಶಿ R T O.
C. No. 3161-9-49 ಬಳ್ಳಾರಿ-ಅನಂತಪುರ

ಕಮ್ಯೂನಿಜಂ ಕುಡಿ ಚಾಚುತ್ತಿದೆ?

ಕಮ್ಯೂನಿಜಂವು ಚೀನದಲ್ಲಿ ತನ್ನ ಡಿಕವನ್ನು ಪ್ರಸ್ಥಾಪಿಸಿದ ಬಳಿಕ ಅದರ ದಿ ಮುಂದೆ ಎತ್ತಿತ್ತ, ಹೇಗೆ ಹೇಗೆ ಾಚಬಹುದೆಂಬ ಬಗ್ಗೆ ನಾನಾಬಗೆಯ ಊಹಾಪೋಹಗಳು ಜಗತ್ತಿನ ಎಲ್ಲ ರಾಜ ೀಯ ವರ್ಗಗಳಲ್ಲಿಯೂ ತುರುಸಿನಿಂದ ಡೆಯುತ್ತಲಿವೆ. ಇಡೀ ಜಗತ್ತೇ ಇಂದು ಕ್ಯಾಪಿಟ್ಯಾಲಿಜಂ, ಕಮ್ಯೂನಿಜಂಗಳಲ್ಲಿ ಬ್ಭಾಗವಾಗಿದೆಯೆಂದು ಹೇಳಬಹುದು. ಇಬ್ಭಾಗದ ನಡುವಿನ ಕಂದರವನ್ನು ಗಲಾಡುವ ಅಶಕ್ತ ಸೇತುವೆಯಂತೆ ೀತಿಯುಲಿಜಂವು ಸಂಬಂಧವನ್ನು ಲ್ಪಿಸುತ್ತಲಿದೆ.

ಕ್ಯಾಪಿಟ್ಯಾಲಿಜಂ ಗುಂಪಿಗೆ, ಅಮೇ ಕೆ ಹಿರಿಹುದ್ದರೆ; ಕಮ್ಯೂನಿಜಂ ಗುಂಪಿಗೆ ಶಿಯಾ ಹಿರೇ ಹುದ್ದರೆ. ಈ ಎರಡೂ ೀದೇ ಹುದ್ದರಿಗಳಲ್ಲಿ ಒಬ್ಬೊಬ್ಬರ ನ್ನು ಹಿಡಿದು ಒಂದೊಂದು ರಾಷ್ಟ್ರವು ದುಕಬೇಕಾಗಿದೆ; ಬಾಳಬೇಕಾಗಿದೆ. ಎರಡೂ ಇಜಂಗಳಿಗೆ ಅಂಟಿಕೊಳ್ಳದೆ ಯಿಸ್ವತಂತ್ರ ಇರುವೆವೆಂದು ಹೇಳಿ ಳ್ಳುವ ರಾಷ್ಟ್ರಗಳು ಕಲವಿವೆ. ಆದರೆ ವು ಬಹಳ ಕಡಿಮೆ; ಕೇವಲ ಒಂದೇ ಬೆರಳಿನಿಂದ ಎಣಿಸುವ ಸ್ಟು ವೆಯೋ ಇಲ್ಲವೋ ಸಂಶಯ. ಇಂತ ನಾಕೂಡ ಒಂದಿಲ್ಲೊಂದು ಬಗೆಯಿಂದ ಎರಡು ಇಜಂಗಳಲ್ಲಿಯು ಯಾವುದಾ ಒಂದರ ಪ್ರಭಾವಕ್ಕೊಳಗಾದದ್ದೂ, ೂತ್ತೊಂದರ "ಕಟಾಕ್ಷ"ಕ್ಕೆ ಗೊಳಗಾ ದ್ದೂ, ತುಸು ಜಳವಾಗಿ ವಿಚಾರಮಾಡಿ ದೆ, ಕಂಡುಬಂದೆ ಇರಲಾರದು.

ಕ್ಯಾಪಿಟ್ಯಾಲಿಜಂ ದೃಷ್ಟಿ

ಕ್ಯಾಪಿಟ್ಯಾಲಿಜಂ ದೃಷ್ಟಿಯಂತೆ ಂದು ಆಗ್ನೇಯ ಏಶಿಯಾವೇ ಕಮ್ಯೂ ನಿಸ್ಟ ಗಂಡಾಂತರಕ್ಕೊಳಗಾಗಿದೆಯೆಂದು ೇಳಲಾಗುತ್ತದೆ. ಚೀನದಲ್ಲಿ, ಚಿಯಾಂಗ ಶೇಕರ ರಾಷ್ಟ್ರೀಯ ಪಕ್ಷವು ಕೃಷ್ಣ ಪಕ್ಷದ ಚಂದ್ರನಂತೆ ದಿನದಿನಕ್ಕೂ ಕ್ಷೀಣ ಗುತ್ತ ಜೀವಾವಸ್ಥೆಯು ಸಮೀಪಕ್ಕೆ ದೇಕೆ ಚಾಚುರ್ದಶಿಗೆ ಬಂದಿದೆ. ಕಮ್ಯೂ ನಿಸ್ಟ ಪಕ್ಷವು ಶುಕ್ಲ ಪಕ್ಷದ ಚಂದ್ರನಂತೆ ರ್ಧಿಸುತ್ತ ಅಷ್ಟಮಿಯನ್ನು ದಾಟಿದೆ. ಶರಣದಲ್ಲಿ, ಆಗ್ನೇಯ ಏಶಿಯಾದಲ್ಲಿ ನಾಬಗೆಯ ಆಶೆ, ಆಸ್ಥೆಗಳುಳ್ಳ ಅಮೇ ಕೆ, ಬ್ರಿಟನ್, ಫ್ರಾನ್ಸ್, ಹಾಲಂಡ, ನ್ಯಾರ್ಕ್ ಮೊದಲಾದ ದೇಶದವರು ಆಗ್ನೇಯ ಏಶಿಯಾಕ್ಕೇ ಗಂಡಾಂತರ ಬಂತೆಂದು ದೊಡ್ಡ ಧ್ವನಿಯೆಬ್ಬಿಸಿದ್ದಾರೆ. ಶ್ರೀ ಕೂಲಿಡ್ಜ್ ಮ್ಯಾಕ್ಡೊನಾಲ್ಡರ ಅಭಿಪ್ರಾಯದಂತೆ, ಈ ಧ್ವನಿಗೆ ಕಿವುಡಾ ಬಂದಿದ. ಅವರ ಅಭಿವ್ರಾಯವು "ಏಶಿ ಯಾದ ಅನೇಕ ರಾಷ್ಟ್ರಗಳು ಸ್ವತಂತ್ರ ವಾಗುತ್ತ ಸ್ವ ಆಡಳಿತವನ್ನು ನಡಸುತ್ತಿ ರುವದೂ ಹೌದೂ, ಚೀನೀಕಮ್ಯೂನಿಸ್ಟರು ಆಗ್ನೇಯ ಏಶಿಯಾ ವಾರ್ಧನವಾಗಿ ವಶ ಮುಕ್ಕೆ ಹೊರಳಿ ರಶಿಯದವರೆಗೆ ಹೋಗಿ ತಮ್ಮ ನರ್ತುಲವನ್ನು ಕೇವಲ ಸೈನಿಕ ಶಕ್ತಿಯಿಂದ ಪೂರ್ಣಮಾಡಿಕೊಳ್ಳುವುದು ಅಸಾಧ್ಯವೇ ಆಗಿರುವದೂ, ಇವೆರಡೇ "ಪ್ರಜಾಸ್ವಭುತ್ವ" ತತ್ವದ ಹಬ್ಬಗೆಗೆ ಒಂದು ರೀತಿಯ ನೆರವಿನಂಶವೇ ಆಗಿವೆ" ಎಂದು ಇರುವುದು.

ಆದರೆ ಈ ಸೂಕ್ಷ್ಮ ಎಷ್ಟರ ಮಟ್ಟಿಗೆ ಕಾರ್ಯಕಾರಿಯಾಗಬಹುದು? ಅದರ ಪ್ರಯೋಜನವು ಎಲ್ಲಿಗೆ ಒಯ್ಯುತ್ತದೆಯೆ ಬಹುದು ಎಂಬ ವಿಚಾರವು ವರ್ತ್ತ ಬೇರೆಯೇ. ಪೂರ್ವ ಗೋಲಾರ್ಧದಲ್ಲಿ ಈ ಸಾಮ್ರಾಜ್ಯವಾದೀ ಗುಂಪು-ಈಗ ಡೆಮೊ-ಕ್ರೆಟಿಕ್ ಗುಂಪು-ಶತ ಶತಮಾನಗಳ ಕಾಲದಿಂದಲೂ, ಜಡಿದ ಆಟವನ್ನು ಮಾಡಿದ ಶೋಷಣೆಯನ್ನು, ಪೂರ್ವ ಗೋಲಾರ್ಧದ ಜನರು ಕೂಡಲೆ ಮರೆಯ ಬಹುದೇ? ಒಂದು ವೇಳೆ ಮರೆಯಲು ಶಕ್ಯವಾಗುವದೆಂದಿಟ್ಟುಕೊಂಡರೂ, ಇವ ರೊಡನೆ ಸಂಪೂರ್ಣ ವಿಶ್ವಾಸ ಹಾಗೂ ನಂಬಿಗೆಗಳಿಂದ ನಡೆದುಕೊಳ್ಳಬಹುದೇ? ಸಾಮ್ರಾಜ್ಯವಾದೀ ಗುಂಪಿನ ಶೋಷಣ ದಿಂದ ಹುಟ್ಟಿದಜಡತನವೇ ಕಮ್ಯೂನಿಸ್ಟರ ಬಲ್ಲ ಹುಟ್ಟಲು ಗೊಬ್ಬರದಂತಾಗಿದೆ ಯೆಂದರೆ ತಪ್ಪಾದೀತೇ.

ಆಗ್ನೇಯ ಏಶಿಯಾ ಪರಿಸ್ಥಿತಿ

ಆಗ್ನೇಯ ಏಶಿಯಾ— ಬರ್ಮಾ ಥಾಯ್ಲಂಡ್, ಮಲಯಾ, ಇಂಡೋನೇ ಶಿಯಾ, ಫಿಲಿಫಾಯಿನ್ಸ್, ನ್ಯೂಗಿನಿ ಮೊದಲಾದವುಗಳ ಪರಿಸ್ಥಿತಿಯು ಅನೇಕ ತೊಡಕು ತೊಂದರೆಗಳಿಂದ ಕೂಡಿರುತ್ತದೆ. ಕೋಟಿ ಕೋಟಿಗಟ್ಟಲೆ ಜನರು, ಒಕ್ಕಲಿಗ ರು, ಕೂಲಿಕಾರರು, ಅಂಗಡಿಕಾರರು, ಚಕ್ಕಪುಟ್ಟ ಉದ್ಯೋಗಸ್ಥರು, ನೌಕರ ಮಾಡುವವರು - ಯಾರೂ ಕಮ್ಯೂನಿಜಂ ಪ್ರಣಾಲಿಯನ್ನು ಮನಸಾ ಅಪ್ಪಿಕೊಳ್ಳಲು ಸಿದ್ಧರಿರದಿದ್ದರೂ, ಅವರ ಬಡತನವು, ಕಂಗಾಲು ಸ್ಥಿತಿಯು, ಅರೆ ಹೊಟ್ಟೆ, ಬರಿ ವೈಗಳು, ಕಮ್ಯೂನಿಸ್ಟರ ವೇಷದ ಪ್ರ ಚಾರಕ್ಕೆ, ಸನ್ಯಾಸಿಗರ ತಪ್ಪಿಸುವ ಮೋಹ ಕ ಪ್ರಚಾರಕ್ಕೆ ಬಲಿಬೀಳುತ್ತಲಿವೆ. "ಹಿಟ್ಟೂ ಹಳಸಿತ್ತ; ವಾಯಿ ಯೂ ಹಸಿದಿತ್ತು" ಎಂಬಂತೆ ಆಗ್ನೇಯ ಏಶಿ ಯಾದ ಪರಿಸ್ಥಿತಿಯಾಗಿದೆ. ಚೀನದಲ್ಲಿ ಕೂಡ ಇದೇ ಕಾರಣವಾಗಿ ಅದು ಕಮ್ಯೂ ನಿಸ್ಟರ ಬಲೆಗೆ ಬೀಳಬೇಕಾಯಿತೆಂಬ ಮಾತನ್ನು ಇಲ್ಲಿ ನೆನೆಸಿಕೊಳ್ಳಬಹುದು.

ಕಮ್ಯೂನಿಸ್ಟ ದೃಷ್ಟಿ

ಈ ಪರಿಸ್ಥಿತಿಯನ್ನೆ ಕಂಡೇ ಕಮ್ಯೂ ನಿಸ್ಟ ದೃಷ್ಟಿಯು, ಬೇಕಾದರೆ ರಶಿಯಾದ ಕಾಕದೃಷ್ಟಿಯೆನ್ನಿರಿ, ಚೀನದಿಂದ ದಕ್ಷಿಣ ಕ್ಕಿಳಿದು ಪಶ್ಚಿಮದೆಡೆಗೆ ಕೈಚಾಚಲು ಹವಣಿಸುತ್ತಿರುವುದು. ಪ್ರಚಾರ ವ್ಯಾಪಂಡಿತರಾದ ಕಮ್ಯೂನಿಸ್ಟರು, ಈಗಾ ಗಲೇ, ಬರ್ಮಾ, ಥಾಯ್ಲಂಡ್, ವಿಯೆಟ್ ನಾಮ್, ಇಂಡೋಚೀನಾ, ಮಲಯಾ ಗಳಲ್ಲಿ ತಮ್ಮ ಪಂಚಮದಲದ ಚಟುವಟಿಕೆಗಳನ್ನು ನಡೆಸುತ್ತ ಅಳವಾಗಿ ಬೇರುಬಿಟ್ಟಿರುವರೆಂದು ತಿಳಿದುಬರುತ್ತದೆ. ಅಲ್ಲದೆ, ಪೂರ್ವ ಹಾಗೂ ಉತ್ತರಕ್ಕೆ ಮಲಯಾ, ಇಂಡೋನೇಶಿಯಾ, ನ್ಯೂಗಿನೀ, ಫಿಲಿಪಾಯಿನ್ಸ್, ಫಾರ್ಮೋಸಾ, ಜಪಾನ, ಕೋರಿಯಾಗಳ ವರೆಗೂ, ಅವರ ಪ್ರಚಂಡ ಪ್ರಜಾಬಲವು ಕುದಿಜಾಚರುತ್ತಿದೆ. ಇತ್ತ ಪಶ್ಚಿಮಕ್ಕೆ ಹೊರಳಿ, ಭಾರತ, ಪಾಕಿಸ್ತಾನ, ಸಿಲೋನ, ತಿಬೇಟ, ಅಫಗಾಣಿಸ್ತಾನ, ಇರಾಕದ ವರೆಗೂ, ಅವರ ಕುತಂತ್ರದ ಆಟವು ಜೋರಾಗಿರುತ್ತದೆ.

ಪರಿಣಾಮ

ಈ ಕಾರಣವಾಗಿಯೇ, ಆಗ್ನೇಯ ಏಶಿಯಾದಲ್ಲಿ ಒಳಜಗಳ, ಪರಸ್ಪರ ತಿಕ್ಕಾಟ, ಪುಂಡರ ಹಾವಳಿಗಳು ಗಂಡಾಂತರ, ವಿತ್ತಜೀವಿಗಳ ಅನಿಶ್ಚಿತತೆ, ಹಬ್ಬಿ, ಜನರನ್ನು ನಿರಾಶೆಯ ಸಾಗರದ ಆಳಕ್ಕೆ ಎಳೆದೊಯ್ಯುತ್ತಿವೆ. ಜನರಲ್ಲಿ ಪರಸ್ಪರ ಅವಿಶ್ವಾಸಕತೆ ನಂಬಿಗೆಗಳು ಕಡ ವೆಯಾಗತೊಡಗಿರುತ್ತವೆ. ಬಡತನದ ಭೂತವಂತೂ ತನ್ನ ಉರಿವಾಲಿಗೆಯ ಬಿಸಿಯನ್ನು ಎಲ್ಲರಿಗೂ ತಗಲಿಸಿದೆ. ಈ ಪರಿಸ್ಥಿತಿಗೆ ಕೇವಲ ಕಮ್ಯೂನಿಸ್ಟ ಅಥವಾ

ಕೇವಲ ಕ್ಯಾಪಿಟ್ಯಾಲಿಸ್ಟರೇ ಹೋಗಬೇಕೆಂದು ಹೇಳಲು ಬರುವುದಿಲ್ಲವಾದರೂ, ಈ ಇಬ್ಬರ ಭಿನ್ನ ಭಿನ್ನ ದಿಕ್ಕಿನ ಜಗ್ಗಾಟವು ರಾಜಕೀಯ ಚದುರಂಗದಾಟವು-ಸಂಪೂರ್ಣ ಕಾರಣವಾಗಿರಬೇಕೆಂದು ನಿಶ್ಚಿತವಾಗಿ ಹೇಳಬಹುದು.

ಆಫ್ರೋ-ಏಶಿಯಾದ ಕಮ್ಯೂನಿಜಂ ಪುಡಿಚಾಚಲು, ನೋಬಿಬೆಟ್ ಸಾಮ್ರಾಜ್ಯಾತ್ಮಕತೆಯ ಕಮ್ಯೂನಿಸ್ಟ್ ಚೀನವೇ ಪ್ರಮುಖ ಪಾತ್ರನಾಗುವ ಹಾಲು ತೋರಿಬರುತ್ತದೆ. ಮೊನ್ನೆ ಮೊನ್ನೆ ನಡೆದ ವರ್ಲ್ಡ್ ಫೇಡರೇಶನ್ ಆಫ್ ಟ್ರೇಡ್ ಯೂನಿಯನ್ಸ್ ಕಾಂಗ್ರೆಸ್ಸಿನಲ್ಲಿ ಇಂದಿನ ಚೀನದ ಪ್ರಮುಖ ಶ್ರೀ ಸೂಯೋಚ್ಲೆ ತಂಗನು "ಏಶಿಯಾದ ಅಬ್ಬಗಟ್ಟಲೆ ದಲಿತ ಜನಾಂಗವನ್ನು ಉದ್ಧರಿಸಿವ್ರದೇ ಚೀನದ ಗುರಿಯಾಗಿದೆ" ಎಂದು ಹೇಳಿದುದನ್ನು ನೋಡಿದರೆ, ಮೇಲಿನ ಮಾತುಗಳ ಸತ್ಯತೆಯು ಕಂಡು ಬಂದೆ ಇರಲಾರದು.

ಈ ಸುಡಿಚಾಜುವ ಕಾರ್ಯಕ್ಕೆ — ಏಶಿಯಾದಲ್ಲೇ ಕಮ್ಯೂನಿಸ್ಟ್ಪ್ರಯತ್ನವಾಗಿ ನಡೆವ ಕಾರ್ಯಕ್ಕೆ- ಯುದ್ಧೋತ್ತರಾಯ ನಗಳಿಂತಲೂ "ಪಂಚನುಮದಲೆ" ಉದಾಯವಾಯಿತೇ ಈ ಕಮ್ಯೂನಿಸ್ಟ ಪ್ರಮುಖರು ಸ್ವಯೋಗಿಸಬಹುದಾಗಿ ಊಹೆ. ಏಶಿಯಾದ ಕಮ್ಯೂನಿಸ್ಟ ಪಂಗಡದ ಆರ್ಥಿಕ ಪರಿಸ್ಥಿತಿ ಭದ್ರವಾಗಿಲ್ಲವೆಂದು ಹೇಳಬಹುದಾಗಿದ್ದರೂ, ವಸ್ತುಸ್ಥಿತಿಯು ಹಾಗೆಯೇ ಇದ್ದರೂ, ರಶಿಯಾದ ನೆರವೂ ಅವರಿಗೆ ಸಾಕಷ್ಟಿಲ್ಲದಿದ್ದರೂ ಕಳ್ಳಮಟ್ಟಿ ಗಾದರೂ ದೋಯೆಸ ಡಾಲು ತೋರಿ ಬರುತ್ತದೆ.

ಏನೇ ಇದ್ದರೂ, ಕಮ್ಯೂನಿಸ್ಟರಿಂದ ನೆಲೆತಿ ವಿವರಿಸಲಾದ ಸಂಗತಿಗಳು ಸಂಭವಿಸಿಯೇ ತೀರುವೆವೆಂದು ನಿಶ್ಚಿತವಾಗಿ ಹೇಳಲಿಕ್ಕೆ ಬರುವುದಿಲ್ಲ. ಅನೇಕ ಕಾರಣಗಳಿಂದ, ಜಪಾನಿನ ಉಪಟಳ, ಅಂತರ್ಯುದ್ಧ, ಮೊದಲಾದವುಗಳಿಂದ ಕಾಂಗ್ರೆಸ್ ಚೀನೀ ಕಮ್ಯೂನಿಸ್ಟರು ಕಳ್ಳ ಸಾಪ ಸುಧಾರಿಸಿಕೊಳ್ಳುವುದಕ್ಕೂ ಸಾಕಷ್ಟು ಬೇಕಾಗಿ ಹೋಗಿದ್ದು ಅವ್ವವಿಂದಲೇ ಸಹಜ ಪಕ್ಷಯಿಸಿ, ಆಗ್ನೇಯ ಏಶಿಯಾದ ಕಮ್ಯೂನಿಸ್ಟ್ ಗುಂಪಾಂತರವಿಲ್ಲವೆಂದು ಹೇಳಬಹುದಾಗಿದ್ದರೂ, ಅದನ್ನು ಅಲಕ್ಷಿಸಿ ಸಾಮಾನ್ಯ ಪ್ರಜಾಪ್ರಭುತ್ವ ರಾಷ್ಟ್ರಗಳು, ಸಿಲೋನ್ ಮತ್ತು ಹಾಂಗ್ ಕಾಂಗ್ ಮೊದಲಾದ ಪ್ರದೇಶಗಳಲ್ಲಿ ಆರ್ಥಿಕ ನೆರವು ನೀಡಿ, ಆ ಸ್ಥಳಗಳನ್ನು ಸಮಾಜವನ್ನಾಗಿ ಮಾಡಿ ಬಿಟ್ಟರೆ, ಕಮ್ಯೂನಿಸ್ಟ್ ಕಾಂಕವು ತಪ್ಪಿಸಿ ಇರಬೇಕು ಧಾರಾಳವಾಗಿ ಹೇಳಬಹುದು.

ಜಾಹೀರು ನೋಟೀಸು

ಈ ಮೂಲಕ ಎಲ್ಲರಿಗು ತಿಳಿಸುವದೇನಂದರೆ,—

ನನ್ನ ಕಕ್ಷಿದಾರನಾದ ರಾಯದುರ್ಗ ತಾಲೂಕು ಭೂಪಸಮುದ್ರದ ಮಜರಾ ದೇವರೆಡ್ಡಿಹಳ್ಳಿಯಲ್ಲಿರುವ ಪಾಕನಾಟಿ ಕಾಪು ಪದ್ದಯ್ಯನಮಗನಾದ ಹನುಮಪ್ಪನಿಗೆ ಒಬ್ಬ ತಮ್ಮನಿದ್ದಾನೆ. ಈತನ ಹೆಸರು ಪಾಕನಾಟಿ ಕಾಪು ವಗ್ಗಪ್ಪ ಸದರಿ ವಗ್ಗಪ್ಪ, ಹನುಮಪ್ಪ ಏಳೋದರಂತಾಗಿದ್ದು ಕಲತೇ ಇರುತ್ತಾರೆ, ನನಗೆ ದೊಡ್ಡವನಾದ ನನ್ನ ಕಕ್ಷಿದಾರ ಹನುಮಪ್ಪನೇ ಮನೆಯ ಎಲ್ಲಾ ಕಾರುಬಾರುಗಳನ್ನು ನೋಡಿಕೊಳ್ಳುತ್ತಿರುತ್ತಾನೆ.

ಸದರಿ ವಗ್ಗಪ್ಪನು ಬುದ್ಧಿ ಸ್ವಾಧೀನವಿಲ್ಲದೆ, ಹುಚ್ಚುಹಿಡಿದು ಬೆಳಗುಪ್ಪ ದುಬ್ಬಮ್ಮಪಲ್ಲಿ, ಗಲಗಲ, ಕೊಟ್ಟೂರು, ನೇತ್ರಹಳ್ಳಿ, ಗುಂಡ್ಲಪಲ್ಲಿ ವಗೈರೆ ಗ್ರಾಮಗಳಲ್ಲಿ ನಿರುದ್ಯೋಗಿಯಾಗಿ ಅನೇಕ ಸಂವತ್ಸರಗಳು ಕಳೆದಿರುತ್ತಾನೆ.

ಈಗ ಕೆಲವರು ನನ್ನ ಕಕ್ಷಿದಾರನ ಮೇಲಿ ದ್ವೇಷದಿಂದ ಆತನನ್ನು ಕೆಡಿಸುವ ಉದ್ದೇಶ ತಮ್ಮನಾದ ವಗ್ಗಪ್ಪನನ್ನು ಗ್ರಾಮದಿಂದ ಸರಂಜಾಮು ಮಾಡಿಸಿ ಆತನಿಂದ ಪ್ರಾಂಸರಿನೋಟುಗಳು ವಿಕ್ರಯ ಮತ್ತು ಆಯಕಪತ್ರಗಳನ್ನು ಬರೆಯಿಸುವ ಉದ್ದೇಶವುಳ್ಳವರಾಗಿರುತ್ತಾರೆ. ಈಗ ವಗ್ಗಪ್ಪ ಮನೆಬಿಟ್ಟಂಗಳಾಗಲಿ ಹೊಲದ ಖರ್ಚಿಗಾಗಲಿ ಸಾಲಮಾಡುವಗತ್ಯವಿಲ್ಲ. ಇಷ್ಟರಮೇಲೆ ನನ್ನ ಕಕ್ಷಿದಾರನ ತಮ್ಮನಾದ ವಗ್ಗಪ್ಪನಿಂದ ಯಾರಾದರೂ ವಿಕ್ರಯ, ಅಯಕ, ವ್ಯಾಪುಸರಿ ವಗೈರೆ ಪಡೆಯುವವರಾದರೆ ಸದರಿ ನಾನುಕಾರ್ಥ ಸಾಲಗಳಿಗೆ ನನ್ನ ಕಕ್ಷಿದಾರನು ಜವಾಬ್ದಾರಿಯಾಗಲಾರನು.

24-4-50 ಜಿ. ನಾಗಭೂಷಣಂ
ಬಳ್ಳಾರಿ ಬಿ.ಎ.ಬಿ.ಎಲ್.
ಅಡ್ವೊಕೇಟ್.

— ಪಂಡಿತ ನೆಹರು—

ಭಾರತ-ಪಾಕ್ ಒಪ್ಪಂದವು ಎಲ್ಲಿಯವರೆಗೆ ಫಲಕಾರಿಯಾಗಿದೆ ಯೆಂಬವಿಷಯವನ್ನು ಪಾಕಿಸ್ತಾನ ಮುಖ್ಯಮಂತ್ರಿಗಳೊಡನೆ ಚರ್ಚಿಸಲು ಭಾರತ ಪ್ರಧಾನಮಂತ್ರಿ ಪಂಡಿತ ನೆಹರೂರವರು ೨೬ ನೆಯ ದಿನಾಂಕ ಕರಾಚಿಗೆ ತೆರಳಿ ಎರಡು ದಿನ ಮಾತುಕತೆಯಾಡಿಬಂದರು.

ಬಳ್ಳಾರಿ

ಬಳ್ಳಾರಿ ಬಾಲಿಕೆಯರ ಸರ್ಕಾರಿ ಮಧ್ಯಮಿಕ ಶಾಲೆಯ ವಾರ್ಷಿಕೋತ್ಸವವು ಕಲೆಕ್ಟರ್ ಶ್ರೀ ಜಿ. ರಾಮಿರೆಡ್ಡಿಯವರಧ್ಯಕ್ಷತೆಯಲ್ಲಿ ನಡೆಯಿತು. ಶಾಲೆಗೆ ವಿಶಾಲಕಟ್ಟಡ ಬೇಕೆಂಬುದರ ಅನಿವಾರ್ಯತೆಯನ್ನು ಕುರಿತು ಮುಖ್ಯೋಪಾಧ್ಯಾಯನಿಯರು ಹೇಳಿದರು. ಬಾಲಿಕೆಯರ ಮನೋವಿನೋದ ದೃಶ್ಯಗಳನಂತರ ಸಭೆಯು ಮುಗಿಯಿತು. ಅಧ್ಯಕ್ಷರು ಹೆಮ್ಮೆ ಪ್ರಯುಕ್ತಗಳನ್ನು ಪ್ರಕಂಶಿಸಿದರು.

ಸನ್ಮಾರ್ಗ ಥಿಯೋಸಫಿಕಲ್ ಲಾಡ್ಜ್ ನಲ್ಲಿ ಉಚಿತ ಸಂಸ್ಕೃತ ವಾರಶಾಲೆಯ ವಾರ್ಷಿಕೋತ್ಸವವು ಶ್ರೀ ಎಸ್. ಸಂಜೀವರಾಯರಧ್ಯಕ್ಷತೆಯಲ್ಲಿ ನಡೆದು ಶ್ರೀ ಅಲಕ್ಷ್ಮೀನಾರಾಯಣಾಚಾರಿಯವರು ಬಹುಮಾನಗಳನ್ನು ಹಂಚಿದರು, ಗೀರ್ವಾಣ ಭಾಷೆಯ ಅಧ್ಯಯನಕ್ಕೆ ಪ್ರೋತ್ಸಾಹಕೊಡಬೇಕೆಂಬ ಭಾಷಣಗಳನ್ನು ಶ್ರೀ ಕೆ.ಕೆ ಶಾಸ್ತ್ರಿ, ಶರ್ಮಾ,, ಡಾ. ಅಚ್ಚಯ್ಯ ಇವರು ಹೇಳಿದರು. ಶ್ರೀ ಟಿ ಅಪ್ಪಣ್ಣನವರು ಓರಿಯಂಟಲ್ ಕಾಲೇಜ್ ನಿಯಮಗಳನ್ನು ಸವಿಸ್ತಾರವಾಗಿ ಸೂಚಿಸಿದರು.

ದಿವಂಗತ ಬ್ರಹ್ಮಶಾಸ್ತ್ರಿಗಳು

ಬಳ್ಳಾರಿಯ ಗೌರವ ಸನ್ಮಾನ್ಯಹಸ್ತರೂ, ದೊಡ್ಡ ಭೂಮಾಲೀಕರಾಗಿದ್ದ ಕೋಡೂರು ಬ್ರಹ್ಮಶಾಸ್ತ್ರಿಗಳು 22-4-'50 ದಿನಾಂಕ ಗಾಂಧೀನಗರದ ತಮ್ಮ ಮನೆಯಲ್ಲಿ ಸ್ವರ್ಗಸ್ಥರಾದರು. ಮುನಿಸಿಪಾಲಿಟಿ ತಾಲೂಕು ಬೋರ್ಡ್ ಜಿಲ್ಲಾ ಎಜುಕೇಷನಲ್ ಕೌನ್ಸಿಲ್‌ಗಳಲ್ಲಿ ೨೦ ವರ್ಷಗಳ ಕಾಲ ಪೌರಕಾರ್ಮಿಕರಾಗಿ ಸೇವೆಗೈದರು. ಇವರು ವೇದಾಂತ ಸ್ವಾಧ್ಯಾಯಿಗಳಾಗಿ, ಕಷ್ಟ ಜ್ಞಾನಸಮೂಹದ ಅಭಿವೃದ್ಧಿಗಾಗಿ ದುಡಿದರು ಇವರ ಆತ್ಮಕ್ಕೆ ಶಾಂತಿ ಇರಲಿ.

ಸರ್ದಾರ ಪಟೇಲ

ಸರ್ದಾರ ಪಟೇಲರ ಕಲ್ಕತ್ತೆಯಲ್ಲಿ, ಭಾರತ-ಪಾಕ್ ಒಡಂಬಡಿಕೆಯನ್ನು ಕಾರ್ಯಚರಣೆಯಲ್ಲಿ ತರಲು ಎಲ್ಲಾ ಮುಖಂಡರೊಡನೆ ಕಲಿತು ಪೂರ್ವ ಬಂಗಾಲ ಕಾಂಗ್ರೆಸ್ ಕಾರ್ಯಕರ್ತರನ್ನು ಹಿಂದಿರುಗಲು ಸಲಹೆಕೊಟ್ಟರು. ಮಂಗಳವಾರ ರಾತ್ರಿ ಆಕಾಶವಾಣಿ ಭಾಷಣಮಾಡುತ್ತ, ಸೌಹಾರ್ದ, ಸಹಾನುಭೂತಿ ಮತ್ತು ಪರಸ್ಪರ ವಿಶ್ವಾಸಗಳಿಗೆ ಗಿಡೆಗೊಡುವಸದವಕಾಶವನ್ನು ಪೂರ್ವ ಪಶ್ಚಿಮ ಬಂಗಾಲದ ಜನತೆ ಸರ್ಕಾರವು ಕಲ್ಪಿಸಲೆಂದು ಹೇಳಿದರು.

ಗ್ರಾಮ ಉದ್ಯೋಗಸ್ಥರ ಪರಿಷತ್ತು

ಮದ್ರಾಸ್ ಪ್ರಾಂತಕ್ಕೆ ಗ್ರಾಮ ಉದ್ಯೋಗಸ್ಥರ (ಪಟೇಲ್—ಪಟವಾರಿ) ಪ್ರಥಮ ಪರಿಷತ್ತು ತಾ॥ 21—22 ರಲ್ಲಿ ಮದ್ರಾಸಿನ ರಾಜಾಜಿ ಹಾಲಿನಲ್ಲಿ ಕೂಡಿತ್ತು. ಪಟೇಲ್ ಪಟವಾರಿಯವರ ಮಾಸಿಕ ವೇತನವನ್ನು ಹೆಚ್ಚಿಸಬೇಕೆಂಬುದು, ಮುಂಬರುವ ಗ್ರಾಮ ಪಂಚಾಯಿತಿ ಅಡಳಿತೆಯಿಂದ ತಮ್ಮನ್ನು ಒಹಿಷ್ಕರಿಸಲಿರುವುದನ್ನು ನಿಷೇಧಿಸುವುದು ಮುಂತಾದ ಬೇಡಿಕೆಗಳನ್ನು ಪರಿಷತ್ತು ಅಂಗೀಕರಿಸಿತು. ಪರಿಷತ್ತಿನ ಅಧ್ಯಕ್ಷರು ಮದ್ರಾಸಿನ ಸ್ವದೇಶಮಿತ್ರನ್, ತಮಿಳ್ ಪತ್ರಿಕೆಯ ಸಂಪಾದಕರು ಉದ್ಯಾಪಕರು ಮದ್ರಾಸಿನ ಮುಖ್ಯಮಂತ್ರಿ ಶ್ರೀ ಕುಮಾರಸ್ವಾಮಿ ರಾಜಾರವರು ಪರಿಷತ್ತಿಗೆ ಒಂದು ಸಾವಿರ ಕ್ಕೆ ಮೇಲ್ಪಟ್ಟ ಎಲ್ಲ ಜಿಲ್ಲೆಗಳಿಂದ ಪ್ರತಿನಿಧಿಗಳು ನೆರೆದಿದ್ದರು. ಸದಸ್ಯರು ಈಗ ಹತ್ತು ವರ್ಷಗಳಿಂದ ಪ್ರಾರಂಭವಾದ ಗ್ರಾಮಾಧಿಕಾರಿಗಳ ಆಂದೋಲನವು ಈಗ ಒಂದು ಮಟ್ಟಕ್ಕೆ ಬಂದಂತಾಗಿದೆ.

ಗ್ರಾಮ ಉದ್ಯೋಗಸ್ಥರು ಸಂಪೂರ್ಣ ಸರಕಾರಿ ನೌಕರರೋ ಅಥವಾ ಗೌರವ ಸ್ಥಾನದ ಮೂರ್ತಿಗಳೋ ಎಂಬುದನ್ನು ನಿಷ್ಕರ್ಷೆ ಮಾಡಿರಿ ಎಂದು ಕೇಂದ್ರದ ತೀರ್ಮಾನವು ಬಹಳ ಸಮಂಜಸವಾಗಿದೆ ಏಕೆಂದರೆ ಸಾವು ಸರಕಾರಿ ನೌಕರರು ನಮಗೆ ಸಹ ಇತರ ನೌಕರರಂತೆ ವೇತನ ಭತ್ತೆ, ಜೀವನ್ನು, ರಜೆ, ನಿವೃತ್ತಿ ಗಳು ಅಸ್ವಯಿಸಬೇಕೆಂದು ಅವರು ಕೇಂದ್ರದ ಸರಕಾರವು ನೀವು ನೌಕರರಲ್ಲ ಗೌರವ ಕಾರ್ಯಕರ್ತರು ನಿಮಗೆ ಕೊಡುವುದು (ಆನರೇರಿಯಮ್) ಗೌರವ ಕಾಣಿಕೆ ವೇತನವಲ್ಲ ಎನ್ನುವುದು ಆದರೆ ಕೆಲಸವನ್ನು ಮಾಡಿಸಿಕೊಳ್ಳುವುದರಲ್ಲಾಗಲೀ ಶಿಕ್ಷೆ ವಿಧಿಸುವುದರಲ್ಲಾಗಲೀ ನೀವು ಪೂರ್ಣ ಸರಕಾರಿ ನೌಕರರೆಂದು ಪ್ರತಿಪಾದಿಸುತ್ತದೆ. ಇದು ಒಹಳ ಹಾಸ್ಯಸ್ಪದವಾದ ಪರಿಷತ್ತಿನ ಅಮಂತ್ರಿಕ ಹಿಂದು ಪ್ರತಿನಿಧಿಗಳು ಸಹಾ ಇದೇ ಮನೋವೃತ್ತಿಯನ್ನು ರಂಗಿರುವುದು ಪರಿಷತ್ತಿನ ನೈಜ ಗ್ರಾಮ ಉದ್ಯೋಗಸ್ಥರು ಗೌರವಕಾರ್ಯಕರ್ತರಾದ ಮೇಲೆ ಅವರಿಗೆ ಸಿಗುವ ವೇತನವು ಸಾಕಷ್ಟು ಇಲ್ಲವೆಂದು ಅವರು ಇತರ ವ್ಯಾಪಾರ ಉದ್ದಿಮೆಗಳನ್ನು ಮಾಡುವುದಕ್ಕೆ ಸರಕಾರದ ಅನುಮತಿ ಏಕೆ? ಇಂದಿನ ಪ್ರಜಾರಾಜ್ಯಾಂಗದಲ್ಲಿಯೂ ಅವರು ಚುನಾವಣೆಗಳಲ್ಲಾಗಲೀ ರಾಜಕೀಯ ರಂಗದಲ್ಲಾಗಲೀ ಭಾಗವಹಿಸುವಂತೆ ಸರಕಾರದ ನಿರ್ಬಂಧವೇಕೆ? ಈ ಕೇವಲ ವೇತನದ ನೌಕರರ ಬಗ್ಗೆ ಸರಕಾರವು ತನ್ನ ಧೋರಣೆಯನ್ನು ಬೇಗನೆ ಬದಲಾಯಿಸಬೇಕು. ಇತರ ಸರಕಾರಿ ನೌಕರರಿಗೆ ಸಿಗುತ್ತಿರುವ ಪದಲತ್ತುಗಳು ನಮಗೆ ದೊರೆಯಬೇಕು. ತಲತಲಾಂತರದಿಂದ ಬಂದಿರುವ ಈ ವಿಂಶಲಿಪ ಪದವಿಯನ್ನು ನಿರ್ಲಕ್ಷಿಸಿದ ಎಂಬುದು ಕೂಡ ಕೆಲ ಗ್ರಾಮಗಳಿಂದ ಬರುತ್ತಿರುವ ಅನೇಕ ಖಾತೆಗಳನ್ನು ಹೆಚ್ಚಿಸಿ ಸರಕಾರವು ತಪ್ಪೋ ಒಪ್ಪೋ ತನ್ನ ಖರ್ಚುವೆಚ್ಚವನ್ನು ತಲೆಹೊರೆಯಾಗಿ ಮಾಡಿಕೊಂಡಿರುವುದರಿಂದ ಈ ಅರಹಟ್ಟೆಯು ಬಡವಾಯಿ. ಗ್ರಾಮಾಧಿಕಾರಿಗಳು ಕಷ್ಟವನ್ನು ಭೋಗಿಸಬೇಕೆ?

ನಿಯಂತ್ರಣಗಳ ಮೂಲಕ ಗ್ರಾಮದಲ್ಲಿ ಅಸಮಾಧಾನವನ್ನುಂಟು ಮಾಡಿರುವಿರಿ. ಮುಂತ್ತು ಅಸೆಂಬ್ಲಿಯಲ್ಲಿ ಅರ್ಜಿಕರ ಪ್ರತಿನಿಧಿಗಳು ನೀವು ಗ್ರಾಮ ಪಂಚಾಯಿತಿಗಳಲ್ಲಿರಕೂಡದು. ಎಂದು ತೀರ್ಮಾನಿಸಿದ್ದಾರೆ. ಎಂದು ಅಕ್ಷಿಗಳಾದ ಮುಖ್ಯಮಂತ್ರಿಗಳು ಅಪ್ಪಣೆ ಕೊಡಿಸಿದ್ದಾರೆ. ನಿಯಂತ್ರಣಗಳನ್ನು ಹೇರಿದವರಾರು? ಅವುಗಳ ಪರಿಕಾರ ಕೆಲಸವನ್ನಾಡಿದರೆ ನೈತರ ಅಸಮಾಧಾನ, ಮಾತಾಡಿದ್ದರೆ ಮೇಲಿನ ಅಧಿಕಾರಿಗಳಿಂದ ಇಂತಹ ಈ ಇಬ್ಬದಿಯ ತೊಡಕುಗಳಲ್ಲಿ ಸಿಕ್ಕು ಬಿದ್ದ ಗ್ರಾಮ ಉದ್ಯೋಗಸ್ಥನು ಏನು ಮಾಡಿದರು ತಪ್ಪಿಸ್ಥನೆ.

"ಗ್ರಾಮಗಳಲ್ಲಿ ಹುಟ್ಟಿಬೆಳೆಯುವ ಪಾರ್ಟಿ ಪಂಗಡಗಳು ಜಗಳಗಳು ಇತ್ಯಾದಿಗಳಿಗೆ ಎಷ್ಟೋಕಡೆ ಗ್ರಾಮಾಧಿಕಾರಿಗಳೇ ಕಾರಣರು ಎಂದೂ ಹೇಳಿದ್ದಾರೆ. ಗ್ರಾಮ ಉದ್ಯೋಗಸ್ಥರಿಂದ ವೈಷಮ್ಯ ಹೆಚ್ಚುವ ಕಾಲವು ಒಂದಾಯ್ತು ಎಷ್ಟೋ ವಿಸಲ್ದಾರರ ಅನುಕೂಲಕ್ಕಾಗಿ ಮಂತ್ರಿಯವರೇ ಗ್ರಾಮಾಸ್ಥರನ್ನು ಸೇಮಿಸಿ ತಾವು ಬೇರೆಡೆಗೆ ಹೊಟ್ಟೆಪಾಡಿಗಾಗಿ ದುಡಿಯುತ್ತಿದ್ದಾರೆ. ಉಳಿದ ಕೆಲವಿಷಲ್ದಾರರು ಹಿಂದಿನಂತೆ ದಿವಾನ್ಯ ಪೇಲಾಧಿಕಾರಿಗಳ ಕೃಪಾದೃಷ್ಟಿಯಿಂದ ಹೊರತಾಗಿರುವರು. ಗ್ರಾಮಗಳಲ್ಲಿ ಗ್ರಾಮಾಧಿಕಾರಿಗಳಿಗೆ ಹಿಂದಿನ ಮಾನ ಮರ್ಯಾದೆಗಳಿಗಲೀ ಗ್ರಾಮದ ಜಿರ್ಧಿಕ ಸೈನಿಕ ಬೆಳವಣಿಗೆ ಮಾಡುವಕಾರ್ಯದಲ್ಲಿ ಅವಕಾಶಗಳಿಗಲೀ ಸೈನಿಕರಿಗಾಗಲೀ ಸರಕಾರ ಉತ್ತೇಜನಗಳು ದೊರೆಯುವಂತಿಲ್ಲ. ಯುದ್ಧಕಾಲದಲ್ಲಿ ರೀತಿನೀತಿಗಳ ತ್ಯಾಗದಿಂದ ಕೂಡಿ ಹೊಸ ಕಿದ ನಾಲ್ಕು ಮಾಸಗಳನ್ನು ಕಾಯ್ದುಕೊಂಡು ಸೈರ್ ಹಂಗಾಮಿ ದಿನಗಳಲ್ಲಿ ಪರಿಣಾಮ ಬಡಿಯುವರೆಗೆ ಸೈನಿಕರಿಗೆ ಸಾಲಕೊಟ್ಟ ಸೂಲಿದುಕೊಳ್ಳುವ ಸಾಮರ್ಥ್ಯವನ್ನು ಸಾಮುಕಾರನೆಸಿಸಿದನೋ 1942 ನೇ ಕಾಂಗ್ರೆಸ್ಸಿನ ಶಾಂತಿಯುದ್ಧದ ಪದವಿನೆಲೆಕುಸಿಕವಾದಿಂದ ಮುಖಿಂದೆತ್ತನ್ನು ಪದೆದ ಯಾವನೊಬ್ಬ ಅಸ್ಪೃಷ್ಟಿತನ್ಮಕ್ತಿಯೋ, ಇಂದಿನ ಗ್ರಾಮಜಗಳ, ತಂತ್ರಗಳನ್ನು ಬಲಪಡಿಸುವಲ್ಲಿ ತ್ಯೇಷನನ್ನು ಹೆಚ್ಚಿಸುವಲ್ಲಿ ಹೆಚ್ಚು ಅಸಕ್ತಿಯನ್ನು ವಹಿಸಿ ತನ್ನ ಮಂಡಿತ್ವವು ಅಜರಾಮರವಾಗಿ ಸಾಗಬೇಕೆಂದು ಪ್ರಯತ್ನಿಸುತ್ತಿರುವನು. ಅಂತಹರಿದುರಿಗೆ ಜನಸಾಮಾನ್ಯರೆಂದು ಬಿರುದು ಹೊತ್ತ ಗೌಡ ಶ್ಯಾನುಭೋಗರ ವ್ಯಕ್ತಿತ್ವವು ನಸಿಸಿ ಹೋಗಿದೆ. ದಿವಿನ್ಯೂ ಅಧಿಕಾರಿಗಳು ಸಹಾ ಇಂತಹ ಮುಖಂಡರ ಸಲಹೆ ಸೂಚನೆಗಳಿಗೆ ತಲೆದೂಗುತ್ತ ಗ್ರಾಮ ಉದ್ಯೋಗಸ್ಥರನ್ನು ಕಡೆಗಣಿಸಿದ್ದಾರೆ.

ಸರಕಾರವು ಅಡಪ್ಪು ಬೇಗನೆ ತನ್ನ ಬುನಾದಿಯ ಕಲ್ಲುಗಳಂತಿರುವ ಈ ಗ್ರಾಮಾಧಿಕಾರಿಗಳ ಅಸಂತುಷ್ಟಿಯನ್ನು ಹೆಚ್ಚಿಸದೆ ಇತರ ಸರಕಾರಿ ನೌಕರರಿಗೆ ದೊರೆಯುವ ಸಲವತ್ತು ಸೌಕರ್ಯಗಳನ್ನು ಒದಗಿಸಿಕೊಡುವ ಕ್ರಮವನ್ನು ಕೈಗೊಳ್ಳುವುದು ಹಿತವೆಂದು ನನ್ನ ಭಾವನೆ.

ತಮ್ಮ ಬೇಡಿಕೆಗಳತ್ತ ಸರಕಾರದ ದೃಷ್ಟಿಯನ್ನು ಎಳೆದು ಅವುಗಳ ಪೂರ್ಣತ್ವಕ್ಕಾಗಿ ಒತ್ತಾಯ ಪಡಿಸುವದಕ್ಕಾಗಿ ಅಖಿಲ ಭಾರತ ಗ್ರಾಮಾಧಿಕಾರಿಗಳ ಸಂಸ್ಥೆಯೊಂದನ್ನು ನಿರ್ಮಾಣವಾಗುವ ಸರ್ವಾಧಿಕಾರವನ್ನು ಪರಿಷತ್ತಿನ ಕಾರ್ಯದರ್ಶಿಯವರಿಗೆ ಒಪ್ಪಿಸಿದ ತಮ್ಮ ನ್ಯಾಯವಾದ ಬೇಡಿಕೆಗಳನ್ನು ಪೂರೈಸಿಕೊಳ್ಳುವಲ್ಲಿ ಪರಿಷತ್ತಿಗೆ ಪರಿಪೂರ್ಣವಾದ ಶಕ್ತಿಯುಸ್ಫೀಯಲೆಂದು ಹಾರೈಸುತ್ತೇನೆ.

ಆರ್. ಎಸ್ ಹಯವದನ
ಪರಪನಹಳ್ಳಿ.

ಆದ್ಭುತವಲ್ಲ; ಸತ್ಯ ಸಂಗತಿ

ಸೇಂಗಾದಿಂದ ಉಣ್ಣೆ

ಸೇಂಗಾದಿಂದ ಉಣ್ಣೆಯನ್ನು ತಯಾರಿಸಬಹುದೆಂದು ಕೇಳಿ ನವ್ಯಳ್ಳನೇಕರಿಗೆ ಆಶ್ಚರ್ಯವಾಗಬಹುದು. ಇತ್ತೀಚಿನ ಶಾಸ್ತ್ರೀಯ ಶೋಧವಿದು. ಸೇಂಗಾದಿಂದ ತಯಾರಿಸಲ್ಪಟ್ಟ ಉಣ್ಣೆಯಂತಿರುವದು ಕಣ್ಣಿಗೆ ಉಣ್ಣೆಯಂತೆ ಕಾಣುವದು, ಕೈಗೆ ಉಣ್ಣೆಯಂತೆ ಹಕ್ಕುವದು. ಬಳಕೆಗೂ ಉಣ್ಣೆಯಂತೆಯೆ ಇರುವದು.

ನಮಗೆ ಉಣ್ಣೆಯೂಗಲಿ ಅಥವಾ ರೇಶಿಮೆಯಾಗಲಿ ಸಿಗುವದೆಲ್ಲಿಂದ? ಕುರಿ ಅಥವಾ ರೇಶಿಮೆ ಹುಳ ಇವುಗಳಿಂದ ಇವಾದರೂ ಅವನ್ನು ಹೇಗೆ ತಯಾರಿಸುತ್ತವೆ? ಹುಲ್ಲು ಎಲೆ ತೊಪ್ಪಲು ಮುಂತಾದ ವನಸ್ಪತಿಗಳನ್ನು ತಿಂದು ಬೆಳೆಯುವವು. ಅಂದ ಮೇಲೆ ಅವುಗಳಿಂದ ಹೊರಡುವ ಉಣ್ಣೆ ರೇಶಿಮೆಗಳೂ ವನಸ್ಪತಿಗಳಿಂದ ತಯಾರಾಗುವವೆಂದು ಹೇಳಬಹುದು. ಕುರಿ ಅಥವಾ ರೇಶಿಮೆ ಹುಳ ಇವು ಅ ವನಸ್ಪತಿಗಳಿಂದ ನ ಮ ಗೆ ಉ ಣ್ಣೆ ರೇಶಿಮೆ ತಯಾರಿಸಿ ಕೊಡುವವು. ಹಾಗಾದರೆ ಕುರಿ ಅಥವಾ ರೇಶಿಮೆ ಹುಳ ಇವುಗಳ ಸಹಾಯವಿಲ್ಲದೆ, ಮನುಷ್ಯನೆ ಆಯಾ ವನಸ್ಪತಿಗಳಿಂದ ನೇರವಾಗಿ ಉಣ್ಣೆ ರೇಶಿಮೆಗಳನ್ನು ತಯಾರಿಸಬಹುದಲ್ಲವೆ?

ಈ ಪ್ರಶ್ನೆಗೆ ಉತ್ತರ ಹುಡುಕುತ್ತ ರಸಾಯನ ಶಾಸ್ತ್ರವು ಸೇಂಗಾದಿಂದ ಉಣ್ಣೆಯನ್ನು ತಯಾರಿಸಬಹುದೆಂದು ಹುಡುಕಿ ತೆಗೆದಿದೆ. ತಯಾರಿಕೆ ಪದ್ಧತಿಯು ಶೋಧವಾಗಿದೆ

ಕುರಿಯು ಉಣ್ಣೆಯಂತೆ ಇಲ್ಲವೆ ಶುದ್ಧ ರೇಶಿಮೆಯಂತೆ ಸೇಂಗಾದಿಂದ ತಯಾರಿಸಲ್ಪಟ್ಟ ಉಣ್ಣೆಯೂ "ಪ್ರಾಣಿಜ" ನಾರು. ಹತ್ತಿಯಂದ ವನಸ್ಪತಿಗಳಿಂದ ಪಡೆಯುವ ನಾರಿನ ರಚನೆಯು ಬೇರೆ ತರವಾಗಿರುವದು "ಪ್ರಾಣಿಜ" ನಾರನ್ನು ಕುರಿ ಇಲ್ಲವೆ ರೇಶಿಮೆ ಹುಳಗಳು ನಮಗೆ ಒದಗಿಸುತ್ತವೆ ಅದು ಹೇಗೆಂದರೆ: ಕುರಿಹಾಗು ರೇಶಿಮೆ ಹುಳಗಳು ಆಹಾರವೆಂದು ವನಸ್ಪತಿಗಳನ್ನು ತಿನ್ನುವುದುಂಟು. ಅವುಗಳ ಶರೀರದಲ್ಲಿ ನಡೆಯುವ ರಾಸಾಯನಿಕ ಕ್ರಿಯೆಯಲ್ಲಿ ವನಸ್ಪತಿ ನಾರು ಪ್ರಾಣಿಜ ನಾರಾಗಿ ಸ್ಥಿತ್ಯಾಂತರವಾಗುವದು ಕುರಿ ಇಲ್ಲವೆ ರೇಶಿಮೆ ಹುಳಗಳು ನಮಗೆ ಒದಗಿಸುವ ನಾರು ಇದೇ. ಇದು ಸತ್ಯ ದಾರಿ. ಈಗ ರಸಾಯನದ ಸಹಾಯ ಪಡೆಯುವನಸ್ಪತಿಗಳಿಂದ ನೇರವಾಗಿ "ನಾರನ್ನು" ತಯಾರಿಸುವದು ಸಾಧ್ಯವಿದೆ.

ಅಮೇರಿಕೆಯ ಒಕ್ಕಲಿಗರ ಶಕ್ತಿ ರಾಷ್ಟ್ರ ಮಟ್ಟದ ಅಗಿದೆ ಉಳಿದ ಸೇಂಗಾ ಸಂಸ್ಕರಣವು ಬಹಳ ಆಗಿದೆ ಉಳಿದ ಸೇಂಗಾ ಸಂಸ್ಕರಣವು ಬಹಳ ಇರುವದು. ಈಗ ಅವರಿಗೆ, ಮೇಲೆ ಹೇಳಿದ ಸಂಶೋಧನೆಯಿಂದ ಬಹಳ ಲಾಭವಾಗಬಹುದು ಸೇಂಗಾದಿಂದ ತಯಾರಿಸುವಂಥ ಉಣ್ಣೆಯನ್ನು 'ಸೋಯಾಬೀನ್' ದಿಂದಲೂ ತಯಾರಿಸಲಾಗುತ್ತಿದೆ.

ಪದ್ಧತಿ. ಸೇಂಗಾದಿಂದ ತಯಾರಿಸುವ ನೂಲಿನಲ್ಲಿ ಎರಡು ನಮೂನೆಗಳಿವೆ ಅವುಗಳಲ್ಲಿ 'ಆಡ್ರಿಲ್' ಎಂಬ ನಮೂನೆಯು ಮೊಟ್ಟ ಮೊದಲು ಪೇಟೆಗೆ ಬಂದಿತು. ಪೂರ್ವ ಆಫ್ರಿಕೆಯಲ್ಲಿ ಸೇಂಗಾದ ಉತ್ಪಾದನೆ ಅಧಿಕವಾಗಿದೆ. ಹೀಗೆ ಹೆಚ್ಚಿದ ಉತ್ಪಾದನೆಯನ್ನು ವಾರಾಟ ಮಾಡಲು ಹೊಸ ಸಾಧನವೆಂದು ಬ್ರಿಟಿಶ ಟೆಕ್ಸಟಾಯಿಲ್ ಕೆಮಿಸ್ಟರು ಈ ನಮೂನೆಯ ನೂಲನ್ನು ತಯಾರಿಸಿದರು ಇನ್ನೊಂದು ನಮೂನೆಯ ನೂಲಿಗೆ 'ವಿಕಾರಾ' ಎಂಬ ಹೆಸರಿದೆ.

ತಯಾರಿಕೆ ಪದ್ಧತಿ

ಸೇಂಗಾದಿಂದ ನೂಲು ತಯಾರಿಸುವ ಪದ್ಧತಿ ಇಂತಿದೆ:—ಮೊದಲು ಸೇಂಗಾದ ಕಾಳಿನ ಮೇಲಿನ ಪದರಿನ್ನು ತೆಗೆದು ಹಾಕಬೇಕು. ಇಲ್ಲದಿದ್ದರೆ ಅದರಿಂದ ಹೊರಡುವ ನೂಲು ತೆಳೆಯ ಬಣ್ಣದ್ದಾಗದೆ ಕೆಂಪು ಬಣ್ಣಕ್ಕೆ ತಿರುಗುವದು. ಸಾಮಾನ್ಯವಾಗಿ ನಾರಿಗೆ ತೆಳೆಯ ಬಣ್ಣ ವಿರುವದು ಲೇಸು. ಅನಂತರ ಇಂಥ ಸೇಂಗಾದ ಕಾಳಿನಿಂದ ಎಣ್ಣೆ ತೆಗೆಯಬೇಕು. ಅಲ್ಕಲಿ ದ್ರಾವಣ ಉಪಯೋಗಿಸಿ ಎಣ್ಣೆ ತೆಗೆಯಲ್ಪಟ್ಟ ಹಿಂದಿಯಿಂದ ಪ್ರೋಟೀನ ಅಂಶಗಳನ್ನು ತೆಗೆಯಬೇಕು. ರೇಯಾನ್ (ಕೃತ್ರಿಮ ರೇಶಿಮೆ) ನೂಲನ್ನು ತಯಾರಿಸುವಂತೆ ಈ ನೂಲು ತಯಾರಿಸಬಹುದು.

ಹೀಗೆ ತಯಾರಿಸಿದ ನೂಲನ್ನು ಹದಗೊಳಿಸಬೇಕು ಇಲ್ಲವೆ ಹುರಿ ಹಾಕಬೇಕು. ಹದಗೊಳಿಸದ ನೂಲನ್ನು ಬಳಸಿದರೆ ಅದು ಹಿಟ್ಟಿನಂತಾಗುವದು ಫಾರ್ಮಲ್ ಹೈಡ್ ಎಂಬ ದ್ರಾವಕವನ್ನುಪಯೋಗಿಸಿ ನಾರನ್ನು ಹದಗೊಳಿಸಬಹುದು. ಎಷ್ಟು ವುದ್ದ ಬೇಕೊ ಅಷ್ಟು ವುದ್ದ ನೂಲನ್ನು ತಯಾರಿಸಬಹುದು. ಅನಂತರ ಅದು ನೂಲು ತೆಗೆಯುವದಕ್ಕೆ, ನೇಯುವದಕ್ಕೆ ಇಲ್ಲವೆ ಹಣಿಯುವದಕ್ಕೆ ತಕ್ಕದ್ದಾಗುವದು.

ಮೇಲೆ ಹೇಳಿದಂತೆ ಸೇಂಗಾದಿಂದ ತಯಾರಿಸಿದ ನೂಲು ಉಣ್ಣೆಯಂತೆ ಕಾಣುವದು; ಅದನ್ನು ಸ್ಪರ್ಶಿಸಿದರೆ ಉಣ್ಣೆಯನ್ನು ಸ್ಪರ್ಶಿಸಿದಂತೆ ಎನಿಸುವದು. ಈ ಉಣ್ಣೆಯಲ್ಲಿ, ಎಳೆಗಳಲ್ಲಿ ಹವೆಯಾಡಲು ಅವಕಾಶವಿರುವದು ಇದರಿಂದ ತಯಾರಿಸಿದ ಬಟ್ಟೆ ಉಣ್ಣೆಯ ಬಟ್ಟೆಯಂತೆ ಬೆಚ್ಚಗಿನಿಸುವದು ಎಂದು ವಿಜ್ಞಾನಿಗಳು ಅಭಿಪ್ರಾಯ ಪಡುತ್ತಾರೆ. ರೇಯಾನ್ ಇಲ್ಲವೆ ಅರಳೆ ಬಟ್ಟೆಯ ಮೇಕೆ ಬೀಳುವಷ್ಟು ಬೇಗನೆ ಮಡಕೆಗಳು ಇಂಥ ಉಣ್ಣೆಯ ಬಟ್ಟೆಯ ಮೇಲೆ ಬೀಳುವದಿಲ್ಲ. (ಇಸ್ತ್ರೀ ಬಹಳ ದಿನ ಕಡೆಯುವದು) ಸೇಂಗಾದಿಂದ ತಯಾರಿಸಿದ ನೂಲನ್ನು ಪ್ರತ್ಯೇಕವಾಗಿ ಬಳಸಿದರೆ ಅದು ಉಣ್ಣೆಯಷ್ಟು ಹುರಿ ಕಟ್ಟುಗಿರುವದಿಲ್ಲ. ಆದ್ದರಿಂದ ಉಣ್ಣೆ ಹಾಗು ಇಂಥ ನಾರನ್ನು ಸೇರಿಸಿ ನೆಯ್ದರೆ ಅದರಿಂದ ತಯಾರಾಗುವ ಬಟ್ಟೆಯು ಶುದ್ಧ ಉಣ್ಣೆಯ ಬಟ್ಟೆಗಿಂತ ಹೆಚ್ಚು ದಿನ ಕಾಲುವಂತಹದಾಗುವದು. ಇದಕ್ಕೆ ಬಣ್ಣ ಹಾಕುವದು ಸುಲಭ. ಇದಕ್ಕೆ ಗುನಿ ಹಿಡಿಯುವದಿಲ್ಲ

ಆಡ್ರಿಲ್ ನಮೂನೆ ನೂಲನ್ನು ಕಡಿಮೆ ವೆಚ್ಚದಲ್ಲಿ ತಯಾರಿಸಬಹುದು ಸ್ವಾಭಾವಿಕ ಉಣ್ಣೆ ತಯಾರಿಸಲು ಎಷ್ಟು ವೆಚ್ಚ ಹಿಡಿಯುವದೊ ಅದರ ೧/೩ ರಿಂದ ೨/೩ ರಷ್ಟು ವೆಚ್ಚ ಮಾತ್ರ ಇದಕ್ಕೆ ಹಿಡಿಯುವದು. ಆಗ್ಗದ ಉಣ್ಣೆ ಬಟ್ಟೆ ತಯಾರಿಸುವ ಉದ್ಯಮವು ಅಭಿವೃದ್ಧಿ ಹೊಂದುವದಕ್ಕೆ ಒಳ್ಳೆ ಅವಕಾಶವಿದೆ.

ಡಾಕ್ಟರ್ ಹರ್ಡೀಕರರು ದೀರ್ಘಾಯುಗಳಾಗಲಿ

7-5-1950 ಕ್ಕೆ ನಮ್ಮ ಹರ್ಡೀಕರರಿಗೆ 60 ವರ್ಷಗಳು ತುಂಬುತ್ತೆ. ಈ ವಜ್ರ ಮಹೋತ್ಸವದ ಶುಭ ಅವಸರದಲ್ಲಿ ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಅವರಿಂದಾದ ಸೇವೆಯನ್ನು ಸ್ಮರಿಸಿ ಅವರ ಮಾರ್ಗದರ್ಶನದಿಂದ ತರುಣ ವೃಂದಕ್ಕೆಷ್ಟು ಲಾಭವಾಯ್ತೆಂಬುದನ್ನು ಲೆಕ್ಕಹಾಕುವುದಕ್ಕಾಗಿ. ಯುದ್ಧಕ್ಕೆ ಸೈನ್ಯ ಬೇಕಾಗಿ. ಸೈನ್ಯ ಸಂಚಾಲನಕ್ಕೆ ಸೇನಾಧಿಪತಿಯ ಬೇಕಾಗಿ. ಬಲಾಢ್ಯನಾದ ಬ್ರಿಟಿಶ ಸಾಮ್ರಾಜ್ಯದ ಕಸಿವುಸ್ಪಿಯ ಹಿಡಿತದಿಂದ ನಾರಾಗಲು ಮಹಾತ್ಮಾ ಗಾಂಧಿಯವರು ಹೂಡಿದ ಅಹಿಂಸಾಯುದ್ಧದ ವಿವಿಧ ಪರ್ವಗಳಲ್ಲಿ ಹರ್ಡೀಕರರಂಥ ಚತುರ ಸೇನಾಧಿಪತಿಗಳಿಲ್ಲದಿದ್ದರೆ ನಾವು ಯಾವ ಪರಿಸ್ಥಿತಿಯಲ್ಲಿರುತ್ತಿದ್ದೆವೆಂಬುದನ್ನು ಊಹಿಸುವುದು ಕೂಡ ಕಷ್ಟ. ಗಾಂಧೀಜಿ ಸೇನಾಧಿಪತಿಗಳು ಅನೇಕರಿದ್ದಾರೆ. ಅವರಲ್ಲಿ ಪ್ರಥಮ ಸ್ಥಾನ ಡಾಕ್ಟರ್ ಹರ್ಡೀಕರರಿಗೆ ಸಲ್ಲಬೇಕೆಂದು ನಮ್ಮ ಅಭಿಪ್ರಾಯ.

ತರುಣರಲ್ಲಿ ಶಿಸ್ತಿನಿಂದ ಸಂಘಟಿತ ಸೈನ್ಯವನ್ನು ನಿರ್ಮಾಣಮಾಡಿ ವಿವೇಕದಿಂದ ಸಂಚಾಲನ ಮಾಡಿದವರಿವರು. ಜಾತಿ ಕುಲಮರ್ಯಾದೆಗಳ ಪರಿಧಿಯಿಂದ ಹೊರಗೆ ಬರುವಂತೆ ಮಾಡಿ ನಿಸ್ವಾರ್ಥ ಬುದ್ಧಿಯಿಂದ ನೀಚವೆಂದು ಗಣಿಸಲ್ಪಟ್ಟ ಉದ್ಯೋಗದಲ್ಲಿ ದೇಶಹಿತದೃಷ್ಟಿಯಿಂದ ಪ್ರೇರೇಪಿಸಿದವರಿವರು. ಗಾಂಧೀಜಿ ಮಾರ್ಗದರ್ಶನದಲ್ಲಿ, ಅಹಿಂಸೆಯ ನೆರಳಿನಲ್ಲಿ ಬಿಳಿನೆತ್ತರದ ಅಸುರಸ್ವತಂತ್ರರನ್ನು ತಾಳ್ಮೆ, ಶ್ರದ್ಧೆ, ಪರಿಶ್ರಮಿಯ ಶ್ರೇಷ್ಠಗುಣಗಳಿಂದ ಪೂರೈಸಿದವರಿವರು. ಕರ್ನಾಟಕದಲ್ಲಿದುದಿದರೆ ಸಾಕೆಂಬ ಸ್ವಾಂತೀಯತೆಯ ಸಂಕುಚಿತ ಭಾವನೆಯನ್ನು ತೊಡೆದು ಇಡೀ ಭಾರತವೇ ನನ್ನ ಕುಟುಂಬವೆಂಬ ಭಾವನೆಯಿಂದ ಭಿನ್ನ ಭಿನ್ನ ಪ್ರಾಂತಗಳಲ್ಲಿ ರಾಷ್ಟ್ರೀಯತೆಯ ದೃಷ್ಟಿಗಾಗಿ ದೇಹವನ್ನು ಸವೆದವರಿವರು. ಕಾಂಗ್ರೆಸ್‌ಗೆ ಆಕ್ಸಿಜನ್ ಇರುವವರೆಗೂ ಅವರ ಮುಖ್ಯಾಂಶ ಹರ್ಡೀಕರರೆಂದು.

ಬೆಳಗಾಂವಿ ಕಾಂಗ್ರೆಸ್‌ನಿಂದ (1924) ಡಾಕ್ಟರ್ ಹರ್ಡೀಕರರ ಪರಿಚಯ ನನಗಿದೆ. 1926 ರಲ್ಲಿ ಬಳ್ಳಾರಿಯಲ್ಲಿ ವಿವಿಧ ಸಮ್ಮೇಳನಗಳಾದ ಕಾಲಕ್ಕೆ ಅವರು ತಮ್ಮ ಸೈನ್ಯದಿಂದ ನನ್ನ ಸಹಾಯಕ್ಕೆ ಬಂದಿದ್ದರು. 1933 ರ ಡಿಸೆಂಬರ್‌ದಲ್ಲಿ ಅಖಿಲಭಾರತ ಖಾದಿ ಸ್ವದೇಶಿ ಪ್ರದರ್ಶನಕ್ಕೆ ಶ್ರೀಯುತ ಸೋಮಜಿಯವರ ದರ್ಶನವನ್ನು ಪಡೆದು ಅವರ ಅನುಭವದ ಫಲವನ್ನು ನಮಗೆ ಕೊಟ್ಟರು. ಭಾರತದ ಮುಖ್ಯ ಪ್ರಸಂಗಗಳಲ್ಲಿ ಭೂಕಂಪನೇನು? ಕ್ಷಾಮವೇನು? ನೆರೆಯ ಅನಾಹುತವೇನು? ಅಲ್ಲಿ ಹರ್ಡೀಕರರ ಮಾರ್ಗದರ್ಶನದ ಲಾಭವಾಗುತ್ತಾ ನಡೆದಿದೆ.

ಈಗಿನ ಜಾತೀಯ ವಾತಾವರಣದಲ್ಲಿ ಡಾಕ್ಟರ್ ಹರ್ಡೀಕರರಂಥವರಿಗೆ ಸ್ಥಾನವಿಲ್ಲೆಂದು ಅನೇಕರಿಗೆ ಮನವರಿಕೆಯಾಗುತ್ತ ನಡೆದಿದೆ. ಇದರಿಂದ ಅವರು ಕುಗ್ಗುವವರಲ್ಲ. ದೇಹದಲ್ಲಿ ಉಸುರುವವರೆಗೂ ರಾಷ್ಟ್ರದ ಹಿತಕ್ಕಾಗಿ ಶ್ರಮಿಸುವವರು. ಧೃಡನಿಶ್ಚಯದಿಂದ ತಪ್ಪಸ್ಥಳವಾದ ಹುಬ್ಬಳ್ಳಿಯ ಕಾಂಚ್ಚಿಯನ್ನು ತೊಳೆದಂತೆ ರಾಷ್ಟ್ರೀಯ ಮಹಾಸಭೆಯಲ್ಲಿನ ಕೊಚ್ಚೆಯನ್ನು ತೊಳೆಯಲು ಇವರು ಮುಂಬರಬೇಕೆಂದು ಆಶಿಸುವುದು ಸ್ವಾಭಾವಿಕವಾಗಿದೆ.

ಉದಯೋಮಯನು ಡಾಕ್ಟರ್ ಹರ್ಡೀಕರರಿಗೆ ದೀರ್ಘಾಯುರಾರೋಗ್ಯಗಳನ್ನು ರಾಷ್ಟ್ರೀಯ ಸೇವಾಭಿಲಾಷೆಯನ್ನು ಪ್ರದಾನ ಮಾಡಲೆಂದು ಪ್ರಾರ್ಥಿಸುತ್ತೇವೆ. [ಸಂಪಾದಕ 'ನವಭಾರತ']

ಹಿಂದೀ ಮಹಾ ವಿದ್ಯಾಲಯ, ಬಳ್ಳಾರಿ,

[1931 ಸ್ಥಾಪಿತ. ಬಳ್ಳಾರಿ ಜಿಲ್ಲಾ ಹಿಂದೀ ಪ್ರೇಮೀಮಂಡಲದಾಶ್ರಯದಲ್ಲಿ, ರಿಜಿಸ್ಟರ್ಡ್.]

ಮದ್ರಾಸ್ ಸರ್ಕಾರದಿಂದ ಮಾನ್ಯತೆ ಇದೆ.

ಪ್ರಾರಂಭಿಕ ವರ್ಗಗಳಿಗೆ ಮಾಸಿಕ 3/- ಶುಲ್ಕ — ಉನ್ನತ ವರ್ಗಗಳಿಗೆ ಮಾಸಿಕ 5/- ಶುಲ್ಕ

ವಾರ್ಡಾಲಾ ಹೈಸ್ಕೂಲ್ ಕಟ್ಟಡದಲ್ಲಿ ಪ್ರಾರಂಭಾಲ-ಸಾಯಂಕಾಲ ಹಿಂದೀ ಕಾಲೇಜ್‌ದ ವರ್ಗಗಳು ನಡೆಯುತ್ತಿವೆ ವಿಶಾರದ — ಪ್ರಚಾರಕ ವರ್ಗಗಳಲ್ಲದೆ ಪ್ರಾರಂಭಿಕ ವರ್ಗಗಳಿಗೂ ಪ್ರವೇಶವಿದೆ. ವರ್ಗಗಳಿಗೆ ಸಂಬಂಧಿಸಿದ ಪಾಠ ಪುಸ್ತಕಗಳು ವಿದ್ಯಾಲಯದಲ್ಲಿ ದೊರೆಯುತ್ತವೆ. ಒಳ್ಳೆಯ ಪುಸ್ತಕಭಂಡಾರವಿದೆ. ಶ್ರೇಷ್ಠ ವಾರಪತ್ರಿಕೆ, ಮಾಸಪತ್ರಿಕೆಗಳು ಲಭ್ಯ ಇತರ ವಿವರಗಳಿಗೆ ಸ್ವಾಂಸಿಟ್ಟು ಬರೆಯಿರಿ.

ಪ್ರಿನ್ಸಿಪಾಲ್.

NAVA BHARAT BELLARY. (Reg No. M. 4746)

ನವಭಾರತ ಬಳ್ಳಾರಿ.

S--5--50

(Nationalist Weekly)

ಚಂದಾದರಗಳು.	Subscription Rates.
ವರ್ಷಕ್ಕೆ 5—0—0	One Year 5—0—0
6 ತಿಂಗಳಿಗೆ 3—0—0	Six months 3—0—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.	Subscription will not be accepted for less than 6 months

To

Sri.....

.....

....

Printed at Krishna Printing Works, Edited & Published by T. B. Keshava Rao.

JAI—HIND

ಸಂಯುಕ್ತ ಕರ್ನಾಟಕ

ಬಳ್ಳಾರಿಯ
ಉಜ್ವಲ ರಾಷ್ಟ್ರೀಯ ವಾರಪತ್ರಿಕೆ
*
ಉತ್ತಿಷ್ಠತ! ಜಾಗ್ರತ!!
ಪ್ರಾಪ್ಯವರಾನ್ನಿ ಬೋಧತ!!!
*
ಸಂಪಾದಕ ಮತ್ತು ಪ್ರಕಾಶಕರು—
ಕೆ. ಬಿ. ಕೇಶವರಾವು.

ವರ್ಷ ೧೩ | ಸೋಮವಾರ ಮೇ ೧೫ ೧೯೫೦ | ಸಂಚಿಕೆ ೧೫

ದುಡ್ಡಿನ ದೊಡ್ಡಪ್ಪ

[ಲಾವಣಿ ದಾಟಿ]

ದುಡ್ಡು ಎಂಬೊ ಕತೆ
ಅಡ್ಡ ಬೀಳುವರು
ಅದರೊಳಗೇನಿದೆ ಅಂಥ ಗುಣ!
ಹೆತ್ತ ತಾಯು ಸಹ
ದುಡ್ಡಿನ ಎದುರಿಗೆ
ಪಡ್ಡ ಹೊಡೆಯುವೆನು ತೊಟ್ಟು ಪಣ!!

ದುಡ್ಡಿನ ಗೂಢವ
ಅರಿಯದಿರುವ ಜನ
ದುಡ್ಡಿಗಾಗಿ ಬಾಯ್ಬಿಡುತಿಹರು!
ದುಡ್ಡೇ ದುಡ್ಡಿನ
ತಾಯೆಂಬುದನು
ಮರೆತು ಬಂದ ಹಾಳಾಗುವರು!!

ಬೆಳಗು – ಬೈಗಿನೊಳು
ದುಡಿಯುವ ಸನಗೆ
ದುಡಿತವೆ ಜೀವನ ಸರ್ವಸ್ವ!
ದುಡಿಯದಂದು ನಾ
ಮಡಿವೆನೆನ್ನುವೆನು
ಮಡಿಕೊಡೊಳಗಡಗಿಹುದೀ ವಿಶ್ವ!!

ಅಂದಿನ ಊಟಕೆ
ಅಂದಿನ ದುಡಿತವು
ಹಿಂದಿನವರಂತೂ ನಿಶ್ಚಿಂತೆ!
ಮುಂದಿನ ಜೀವನ
ಕೈಯೊಳಗಿರಲೇತಕೆ ಚಿಂತೆ!!

—ಶಿಬ್ಬಂದಿ ವೀರೇಶ್ವರ

ಸೋಮನಾಥ ದೇವಾಲಯದ ಜೀರ್ಣೋದ್ಧಾರ

ಜಾಮ ಸಾಹೇಬರಿಂದ ಶಂಕುಸ್ಥಾಪನೆ

ಪ್ರಭಾಸಪಟ್ಟಣ (ಸೌರಾಷ್ಟ್ರ) ಸೌರಾಷ್ಟ್ರ ರಾಜಪ್ರಮುಖರಾದ ನವನಗರದ ಜಾಮ ಸಾಹೇಬರು ಈದಿನ ಮುಂಜಾನೆ ಸೋಮನಾಥ ದೇವಾಲಯದ ಜೀರ್ಣೋದ್ಧಾರದ ಶಂಕುಸ್ಥಾಪನೆಯನ್ನು ನೆರವೇರಿಸಿದರು.

೧೧ನೆಯ ಶತಮಾನದಲ್ಲಿ ಮಹಮ್ಮದ ಘಜನಿಯಿಂದ ಹಾಳುಗೆಡವಲ್ಪಟ್ಟ ಸೋಮನಾಥ ದೇವಾಲಯವನ್ನು ಜೀರ್ಣೋದ್ಧಾರಗೊಳಿಸುವ ನಿರ್ಣಯವನ್ನು ಭಾರತದ ಉಪ ಪ್ರಧಾನಮಂತ್ರಿ ಸರದಾರ ಪಟೇಲರು ಎರಡು ವರ್ಷಗಳ ಹಿಂದೆ ಸ್ವಾದರು. ಅದನ್ನು ಗುರಾಣವಾಗಿ ಸ್ಥಾಪಿಸಿದ ಸೋಮನಾಥ ವಿಧಿಯ ಸೇವಾಕಾರ್ಯ ಪರಿಷ್ಕಾರದ ಸಂಬಂಧ ಯೋಜನೆಗಳನ್ನು ಸಿದ್ಧಪಡಿಸಿತು.

ಈ ಸಂದರ್ಭದಲ್ಲಿ ಸೇರಿದ ಪ್ರಮುಖ ನಾಗರಿಕರು ಹಾಗೂ ಯೋಜನೆಗಳನ್ನು ದ್ದೇಶಿಸಿ ಭಾಷಣ ಮಾಡುತ್ತ ಜಾಮ ಸಾಹೇಬರು ಹಿಂದುಗಳ ಪ್ರಾಚೀನ ಪರಂಪರೆಯನ್ನು ಮನ್ನಿಸಿ ಅವನ್ನು ಹೆಚ್ಚು ಉಜ್ವಲ ಗೊಳಿಸಬೇಕೆಂದು ಬಿಜ್ಞಪಿಸಿಕೊಂಡರು. ಸೋಮನಾಥ ದೇವಸ್ಥಾನವು ಭಾರತೀಯ ಸಂಸ್ಕೃತಿಯು ಅಭಿವೃದ್ಧಿ ಹೊಂದಲು ಕಾರಣವಾದ ಶಕ್ತಿಗಳನ್ನು ಜನರು ಅರಗಿಸಿಕೊಳ್ಳಬೇಕೆಂದೂ ಅವರು ಹೇಳಿದರು.

ಕೇಂದ್ರ ಮಂತ್ರಿಪದಕ್ಕೆ ರಾಜಾಜಿಯವರ ಒಪ್ಪಿಗೆ

ಹೊಸದಿಲ್ಲಿ ಕೇಂದ್ರ ಮಂತ್ರಿ ಮಂಡಲದಲ್ಲಿ ಸೇರಲು ಶ್ರೀ ಸಿ. ರಾಜಗೋಪಾಲಾಚಾರಿಯವರು ಒಪ್ಪಿರುವರೆಂದು ತಿಳಿದು ಬಂದಿದೆ. ಅವರು ವಿದೇಶ ವ್ಯವಹಾರದ ಶಾಖೆಯನ್ನು ವಹಿಸಿಕೊಳ್ಳಬಹುದು.

ಭಯಂಕರ ರೈಲ್ವೇ ಅಪಘಾತ

ಮೃತರ ಸಂಖ್ಯೆ ೧೫೦ ನುಟ್ಟಿತು

ಕಲಕತ್ತಾ ಲಾಹಾಒನ ಹತ್ತಿರ ಪಂಜಾಬ ಮೇಲಿಗೆ ಸಂಭವಿಸಿದ ಅಪಘಾತದಲ್ಲಿ ಮರಣ ಹೊಂದಿದವರ ಸಂಖ್ಯೆಯು ಈಗ ೧೫೦ಕ್ಕೆ ಮುಟ್ಟಿದ್ದು ಗಾಯಾಳುಗಳಲ್ಲಿ ೬ ಜನರು ಆಸ್ಪತ್ರೆಯಲ್ಲಿ ಮರಣ ಹೊಂದಿರುವರು.

ಒಟ್ಟು ೧೫೦ ಜನರು ಗಾಯಗೊಂಡಿದ್ದರು ಈಗ ತಿಳಿದು ಬರುತ್ತದೆ.

ರೈಲ್ವೇ ಅಪಘಾತಗಳು

ಹೊಸದಿಲ್ಲಿ-ಸಾರಿಗೆ ಮಂತ್ರಿ ಶ್ರೀ ಎನ್ ಗೋಪಾಲಸ್ವಾಮಿ ಅಯ್ಯಂಗಾರರು ಆ. ಭಾ. ಆಕಾಶವಾಣಿಯ ದಿಲ್ಲಿ ಕೇಂದ್ರದಿಂದ ಇಂದು ರೈಲ್ವೇಯ ಅಪಘಾತಗಳ ಬಗ್ಗೆ ಭಾಷಣ ಮಾಡಿದರು.

ಜನನಿಬಿಡ ಕಿಡಿಗೇಡಿಗಳನ್ನು ಹಿಡಿಯುವಲ್ಲಿ ಸರಕಾರಕ್ಕೆ ಸಹಾಯ ನೀಡಬೇಕೆಂದೂ, ರೈಲ್ವೇ ಅಧಿಕಾರಿಗಳು ಹೆಚ್ಚು ದಕ್ಷತೆ ವಹಿಸಬೇಕೆಂದೂ ಅವರು ವಿನ್ನವಿಸಿಕೊಂಡರು

To-Ex Servicemen of Bellary Dt.

ಸೈನ್ಯದ ವಿವಿಧ ಶಾಖೆಗಳಲ್ಲಿ ದುಡಿದು ನಿರುದ್ಯೋಗಿಗಳಾದವರಿಗೆ ಸೂಚನೆ

22-4-50 ಶ್ರೀ ಮಾಸಿಕ ಸಭೆಯಲ್ಲಿ ಸೈನ್ಯದ ನಿರುದ್ಯೋಗಿಗಳಿಗೆ ಎಲ್ಲಾ ವಿವಿಧ ಅನುಕೂಲಗಳನ್ನೊದಗಿಸಲು ನಿಶ್ಚಯವಾಯಿತು. ಅವರ ಅನುಕೂಲಕ್ಕಾಗಿ ಪ್ರತ್ಯೇಕಿಸಿಟ್ಟಿರುವ ನಿಧಿಗಳು ಸರಕಾರದ ಪದ್ಧತಿಯ ಕಾರ್ಯಗಳ ಬಗ್ಗೆ ಪ್ರಕಾಶನ ಮಾಡಲು ತೀರ್ಮಾನವಾಗಿ ಈ ನಿರುದ್ಯೋಗಿಗಳು ಸಂಘವನ್ನೇರ್ಪಡಿಸಿಕೊಂಡರೆ ಅವರಿಗೆ ಬಾಡಿಗೆಯ ಕಟ್ಟಡ ವೈಕ್ತಪತ್ರಿಕೆ ಪುಸ್ತಕಗಳನ್ನೊದಗಿಸಬೇಕೆಂದಾಯಿತು.

ಬಳ್ಳಾರಿ ಜಿಲ್ಲಾ ಎಕ್ಸ್ಸರ್ವೀಸ್‌ಮೆಂಟಾಫೀಸದಲ್ಲಿ 3-5-50 ವಾಜನಾಲಯಕ್ಕೇರ್ಪಾಟಾಗಿ 7 ಮಾಸಪತ್ರಿಕೆ ಮತ್ತು ವೃತ್ತಪತ್ರಿಕೆಗಳನ್ನು ತರಿಸಲಾಗುತ್ತಿದೆ.

ವಿವಿಧ ನಿಧಿ ಕುಟುಂಬದವರಿಗೆ ಬೇಕಾದ ಅನುಕೂಲ್ಯ ಮಕ್ಕಳಿಗೆ ಬೇಕಾದ ಉಚಿತ ವಿದ್ಯಾಭ್ಯಾಸ ಇವುಗಳ ಸಂಬಂಧವಾಗಿ ಹೆಚ್ಚಿನ ಮಾಹಿತಿ ಯಬೇಕೆಂದಿರುವರು ಈ ತಿಳಿಸಿದವರಿಗೆ ಬರೆಯಿರಿ-ಯಾ-ನೋಡಿ ತಿಳಿಯಿರಿ.

ಸಕ್ಕರೆ,
ಡಿಸ್ಟ್ರಿಕ್ಟ್ ಸೋಲ್ಜರ್ಸ್ ಬೋರ್ಡ್
ಬಳ್ಳಾರಿ.

ಹಿಂದೀ ಮಹಾವಿದ್ಯಾಲಯ, ಬಳ್ಳಾರಿ.

ಪರೀಕ್ಷೆಗಳ ಫಲಿತಾಂಶ

ಈ ಕೆಳಗಿನ ವಿದ್ಯಾರ್ಥಿಗಳು ಬಳ್ಳಾರಿ ಕೇಂದ್ರದಲ್ಲಿಗತ ಫೆಬ್ರುವರಿ 50 ರಲ್ಲಿ ನಡೆದ ಮದ್ರಾಸ್ ಹಿಂದೀಪ್ರಚಾರ ಸಭೆಯ ವಿವಿಧ ಪರೀಕ್ಷೆಗಳಲ್ಲಿ ಉತ್ತೀರ್ಣರಾದರು

ವಿಶಾರದ

1. ತೂಲಹಳ್ಳಿ ಶೆಟ್ಟರ ನಿಜಲಿಂಗಪ್ಪ
2. ಬಿ. ಎಂ. ಶಿದ್ದಲಿಂಗಯ್ಯ
3. ಯನ್. ಎಂ. ಮಲ್ಲಿಕಾರ್ಜುನಶರ್ಮ

ಪ್ರವೇಶಿಕ.

1. ತೂಲಹಳ್ಳಿ ಶೆಟ್ಟರ ಸಣ್ಣವೀರಪ್ಪ

ರಾಷ್ಟ್ರಭಾಷಾ.

1. ಸಿ. ಯಂ. ವಿಮಲಾ
2. ಸಿ. ಯಂ. ಸರೋಜಿನಿ
3. ಬಿ. ಕಾರ್ವತಮ್ಮ
4. ಕೆ. ಎ. ಸುಂದರಮ್ಮ
5. ಎ. ಸುಬ್ಬಲಕ್ಷ್ಮಮ್ಮ
6. ಸಿ. ಯಮುನಾಬಾಯಿ
7. ಕೆ. ಯಂ. ಪಂಪಾಪತಿ ಶರ್ಮ
8. ಯಸ್. ಯಂ. ಶಿದ್ಧೇಶ್ವರ
9. ಯಸ್. ರಂಗಪ್ಪನಾಯಂದು
10. ಶಾಂತಲಿಂಗ ಮರಿಗದ್ದೀಮಠ
11. ಯಂ. ಸಿ. ರಾಮಸುಬ್ಬಾರೆಡ್ಡಿ
12. ಯಲ್. ಅಂಥೋಸಿರೆಡ್ಡಿ
13. ಬಿ. ಗೋವಾನಾಡ
14. ವೈ. ಮರಿಪ್ಪ
15. ಹೆಚ್. ಯಂ. ಬಸವಪ್ಪಯ್ಯ
16. ಕೆ. ವಿ. ಶಂಕರ ಶುಬ್ರಮಣ್ಯಂ
17. ಬಿ. ಬಾಗ್ಗಮ್ಮ
18. ಕೆ. ಸಬ್ಬರಾವ್
18. ಕೆ. ಅಯ್ಯಪ್ಪ

ಮಧ್ಯಮಾ

1. ಯಸ್. ಅಂಬುಜಾ ಪ್ರಥಮಶ್ರೇಣಿ
2. ಚಾವಲ ಶ್ರೀರಾಮಮೂರ್ತಿ ಪ್ರಥಮ
3. ಜಿ. ಬಸಮ್ಮ II
4. ಬಿ. ರಂಗಮ್ಮ ,,
5. ಸುಗುಣಾ ಸರೋವರ್ ,,
6. ಅಪ್ಪಾಜಿ ಸುಮಿತ್ರಾಬಾಯಿ ,,
7. ಹೆಚ್. ಸಾವಿತ್ರಮ್ಮ ,,
8. ಸಿ. ಪಾಂಡುರಂಗಾಚಾರ್ಯ ,,
9. ಹೆಚ್. ಜಿ. ವಾಸುದೇವಾಚಾರ್ಯ
10. ಯಂ. ರಾಜಶೇಖರ
11. ಜಿ. ತಿಮ್ಮಪ್ಪ
12. ಯಂ. ಪುಲ್ಲಯ್ಯ
13. ಕೆ. ರಾಜಾರಾವ್
14. ಬಿ. ಸತ್ಯನಾರಾಯಣ
15. ಯಸ್. ಯಸ್. ಬಾಬೂರಾವ್
16. ಕೆ. ನಾಗರಾಜರಾಂರಾವ್
17. ಟಿ. ದಿವಾಕರ್
18. ಕೃಷ್ಣಮೂರ್ತಿ
19 ರಾ. ಮಧ್ವರಾವ್
20. ಸಿ ಪಿ. ತಿಪ್ಪನಗೌಡ
21. ಕೆ. ಭಾವಿ ಮಠದ ಉಮಾಪತಿ
22. ಯಸ್ ಮಲ್ಲಿಕಾರ್ಜುನ

ಪ್ರಾಥಮಿಕ

(ಪ್ರಥಮ ಶ್ರೇಣಿಯಲ್ಲಿ)

1. ಬಿ. ವಿ. ಇಂದಿರಾ
2 ಡಿ. ಇ. ಫ್ಲಾರೆನ್ಸ್
3. ಆರ್. ಯಶೋದಾ
4. ಹಂಪನಗೌಡ
5. ಎ. ರಾಮವಲ್ಲಭ
6. ಜೆ. ಸೋಮಸುಂದರ್
7. ಜಿ. ವೆಂಕಟರಮಣ
8. ಬಿ. ವೆಂಕೋಬರಾವ
9. ಜಿ. ವೆಂಕಣ್ಣ
10. ಡಿ. ಯಂ. ಗುರುಪಾದಯ್ಯ

ದ್ವಿತೀಯ ಶ್ರೇಣಿ II

1. ಜಿ. ಜಯಲಕ್ಷ್ಮಿ
2. ಯಂ. ರಿಷೇಶಮ್ಮ
3. ವಿ. ರುಕ್ಮಿಣಿ
4. ವಿ. ಸುಶೀಲಾ
5. ಭಾಗೀರಥಮ್ಮ
6. ಸುಗುಣಾ ಶಾರ್ಲಟ್
7. ಸುಂಕಮ್ಮ
8. ಜಿ. ಪದ್ಮದಾಸ್
9. ಶ್ರೀನಿವಾಸ್ ನಾಯರ್
10. ಜಿ. ಬೋನಿಪಾಟಿ
11. ಕೆ. ರಾಮಮೂರ್ತಿ
12. ಯಸ್. ಷಣ್ಮುಖಪ್ಪ
13. ಅರವಂಟಿಗಿ ರುದ್ರಗೌಡ
14. ಕರಣಂ ಹನುಮಂತರಾವ್
15. ಹೆಗ್ಗಾಯಿ ರುದ್ರನಗೌಡ
16. ಮಠದ ರುದ್ರಯ್ಯ
17. ಟಿ. ಕೆ. ಬಾಲಸುಬ್ರಮಣ್ಯಂ
18. ಡಿ. ಸುಬ್ಬಣ್ಣ ಮುದು
19. ಟಿ. ಗೋಪಾಲಕೃಷ್ಣ
20. ಯಂ. ಸಿ. ನಾರಾಯಣ
21. ಸಿ. ಬಿ. ರಾವ್
22. ಯಂ. ಪುಲ್ಲಯ್ಯ
23. ಯನ್. ವಿ. ಶಿವರಾವ್
24. ಯಂ. ನಾರಾಯಣಶೆಟ್ಟಿ
25. ಎನ್. ಚನ್ನಯ್ಯ
26. ಕೆ. ಚಂದ್ರಶೇಖರಶಾಸ್ತ್ರಿ
27. ಕೆ. ಮಲ್ಲಿಕಾರ್ಜುನಶಾಸ್ತ್ರಿ
28. ಬಿ. ಹೊನ್ನಾರೆಡ್ಡಿ
29. ಎ. ಪಾರ್ಥಸಾರಥಿ
30. ಟಿ. ಬಿ. ಸುಬ್ರಮಣ್ಯಂ
31. ಸಿ. ಚಲ್ಲಪ್ಪರಾವ್
32. ಹೆಲಾರ್ಡ್ ಬೆನ್ನಿಸನ್
33. ತೀವಾಶೌರಯ್ಯ
34. ದೇವಿರೆಡ್ಡಿ ತೇಜಸ್ವುರೆಡ್ಡಿ
35. ಬಿ. ವೆಂಕಟ ನಂಜರೆಡ್ಡಿ
36. ನರಸಿಂಗರಾವ್ ಘೋರ್ಪಡೆ
37. ಸರಾಫ್ ವಸಂತವಾಧವ್
38. ಜಿ. ಯಲ್ಲಪ್ಪ
39. ನರಸಿಂಹ ದಿವಾಕರಸ್ವಾಮಿ
40. ಕೃಷ್ಣರಾವ್ ಕುಲಕರ್ಣಿ
41. ಕೆ. ನಾಗೇಶ ಶಾಸ್ತ್ರಿ
42. ಹೆಚ್. ಗುಂಡುರಾವ್
43. ಜಿ. ಪುಟ್ಟಣ್ಣ ಶಾಸ್ತ್ರಿ
44. ಹೆಚ್. ರಾಘವೇಂದ್ರ ರಾವ್
45. ಎನ್. ಕೃಷ್ಣಮೂರ್ತಿ
46. ಚಿಲ್ಲಾ ವೆಂಕಟಪ್ಪ

ಬಳ್ಳಾರಿ ನಗರಕ್ಕೆ ಜೋಗ್

— ಬೆಳಕು —

10-5-50 ರಮು ಧ್ಯಾ ನ್ಹಾ ಕ್ಷ ರ 3-30 ಕ್ಕೆ ಮದ್ರಾಸ್ ಸರ್ಕಾರದ ಅಧಿಕಾರಿಗಳು ಬಳ್ಳಾರಿ ಮುನಿಸಿಪಾಲಿಟಿ ವಿದ್ಯುತ್ ಕೇಂದ್ರದ ಅಡಳಿತವನ್ನು ವಹಿಸಿದರು. ಆ ಸಮಯದಿಂದ ಬಳ್ಳಾರಿಯ ಎ. ಸಿ. ಕರೆಂಟ್ ಭಾಗಕ್ಕೆಲ್ಲಾ ೨೪ ಗಂಟೆ ವಿದ್ಯುತ್ ಪೂರೈಕೆಯಾಗುತ್ತಲಿದೆ. ಸೊದಲಿಗಿದ್ದ ಡಿ.ಸಿ. ಭಾಗಗಳಿಗೂ ಕೂಡಹೆಚ್ಚು ಸಮಯ ವಿದ್ಯುತ್ತನ್ನು ಪೂರೈಕೆಮಾಡಿ ಕ್ರಮೇಣ ನಗರವನ್ನೆಲ್ಲಾ ಎ. ಸಿ. ಗೆ ಮಾರ್ಪಡಿಸಲಿರುವರು.

ಬಳ್ಳಾರಿ ಜಿಲ್ಲಾ ಮುನ್ಸಿಫರ ಕೋರ್ಟಿನಲ್ಲಿ

ಒ. ಪಿ. ನಂಬರು 7/50

BETWEEN

1) B. ತಿರುವೆಂಗಡಂ ಪಿಳ್ಳೈ
2) B. ಶೇಷಶಯನಂ ಪಿಳ್ಳೈ } ಅರ್ಜಿದಾರರು

ದಿ. ಡಿವಿಜನಲ್ ಎಂಜಿನೀರ್ ಫಾರ್ ಹೈವೇಸ್ ಬಳ್ಳಾರಿ ರೆಸ್ಪಾಡೆಂಟ್

ಅರ್ಜಿದಾರರ ತಂದೆಯಾದ ಬಿ. ಗೋವಿಂದರಾಜು ಪಿಳ್ಳೈಯವರು ಡಿವಿಜನಲ್ ಎಂಜಿನೀರ್ ಆಫೀಸಿದಲ್ಲಿ ಡಿಸ್ಮಿಸಿಟ್ ಆಗಿ ಇಟ್ಟ 200/- ರೂ. ಮೊತ್ತವನ್ನು ವಾಪಸು ಪಡೆಯಲು ವಾರಸು ಸರ್ಟಿಫಿಕೇಟಿಗಾಗಿ ಅರ್ಜಿದಾರರು ಮೇಲ್ಕಂಡ ನಂಬರಿನಲ್ಲಿ ದಾವಾ ಮಾಡಿರುತ್ತಾರೆ ಅದರ ವಿಚಾರಣೆಯು 21-6-1950 ಕ್ಕೆ ಇದೆ. ವಾರಸು ಸರ್ಟಿಫಿಕೇಟ್ ಪಡ್ರಿ ಅರ್ಜಿದಾರರಿಗೆ ಕೊಡಲು ಯಾರದಾದರೂ ಆಕ್ಷೇಪಣೆ ಇದ್ದಲ್ಲಿ ಸದ್ರಿ 21-6-50 ಕ್ಕೆ ಮೇಲ್ಕಾಣಿಸಿದ ಕೋರ್ಟಿನಲ್ಲಿ ಹಾಜರಾಗಿ ತಮ್ಮ ಆಕ್ಷೇಪಣೆ ತಿಳಿಸಬೇಕು. ಇಲ್ಲವಾದಲ್ಲಿ ಏಕ್ಪಾರ್ಟಿ ನಿರ್ಣಯವಾಗುತ್ತೆ.

ಬಿ. ಕಲ್ಲೂರಾವ್
ಅರ್ಜಿದಾರರ ಅಡ್ವೋಕೇಟ್

ಡಾ. ಹರ್ಡೀಕರರಿಗೆ ಸನ್ಮಾನ ಕೃತಜ್ಞತೆ

ಬೊಂಬಾಯಿಯಲ್ಲಿ 7-5-50 ರ ದಿನಾಂಕ ಡಾಕ್ಟರ್ ಹರ್ಡೀಕರರ ಷಷ್ಟ್ಯಬ್ದಪೂರ್ತಿ ಸಮಾರಂಭೋತ್ಸವವು ಮೇಯರ್ ಯಸ್. ಕೆ. ಪಾಟೀಲರಧ್ಯಕ್ಷತೆಯಲ್ಲಿ ನಡೆದು 61 ಸಾವಿರ ರೂ. ಗಳ ಹಿಮ್ಮಾಣಿಯು ಅರ್ಪಿಸಲ್ಪಟ್ಟಿತು. ಅನೇಕ ಸಂಘ ಸಂಸ್ಥೆಗಳು ಮಾನಪತ್ರಗಳನ್ನರ್ಪಿಸಿದವು. ಈ ಹಣವನ್ನೆಲ್ಲಾ ಸಾರ್ವಜನಿಕ ಕಾರ್ಯಗಳಿಗೆ ವಿನಿಯೋಗಿಸುವದಾಗಿ ಡಾಕ್ಟರರು ಆಶ್ವಾಸನವಿತ್ತರು

ನಾಸಿಕ್ಯಾದ ಜಾಲೋಬಾಬಾದಲ್ಲಿ ದಂಗೆಯಾಗಿ ಹಿಂದುಗಳ ಆಸ್ತಿಗೆ ಪ್ರಾಣಕ್ಕೆ ಹಾನಿಯಾಗಿದೆ ಅಲ್ಲಿಗೆ ಪಾಕಿಸ್ತಾನದ ವಕ್ತಿಗಳುಂ ಹೋಗಿದ್ದಾರೆ.

ಅಮೆರಿಕಾದ ಸಹಾಯ

ಏಶಿಯಾದ ದೇಶಗಳು ಕಮ್ಯೂನಿಸ್ಟರ ಪ್ರಭಾವಕ್ಕೊಳಗಾಗುವದೆಂಬ ಭಯದಿಂದ ಸಂಪತ್ತಿನ ರಾಷ್ಟ್ರವಾದ ಅಮೇರಿಕಾವು ಶಸ್ತ್ರಾಸ್ತ್ರಗಳ ಮತ್ತು ಹಣದ ಸಹಾಯವನ್ನು ಮಾಡಲು ನಿಶ್ಚಯಿಸಿದೆ ಬರ್ಮಾಕ್ಕೆ ಕಾಮನವೆಲ್ತ್ ರಾಷ್ಟ್ರಗಳು ಧನಸಹಾಯವನ್ನೊದಗಿಸಲಿವೆ. ಇಂಡೋಚೀನದಲ್ಲಿನ ಪರಿಸ್ಥಿತಿಯು ಕೆಡುತ್ತಾ ನಡೆದಿದೆ. ಡಾ॥ ವಿಟ್ಮಿನ್ಹ್ ಎನ್ನುವ ರಷ್ಯಾವೂ ಮತ್ತು ಬಾವ್‌ದಾಯರ್ ಅಧೀನದಲ್ಲಿನ ಸರ್ಕಾರವನ್ನು ಅಮೆರಿಕಾ, ಇಗ್ಲಂಡೂ ಮನ್ನಿಸಿವೆ. ಇಂಡೋಚೀನಕ್ಕೆ ಅಧುನಿಕ ಶಸ್ತ್ರಾಸ್ತ್ರ ಮತ್ತು ಹಣದ ಸಹಾಯವನ್ನೊದಗಿಸದಿದ್ದರೆ ಅದು ಕಮ್ಯೂನಿಸ್ಟರ ಅಧೀನವಾಗುವದೆಂದು ಅಮೇರಿಕೆಯು ಇಂತಿಷ್ಟು ಹಣಸಹಾಯ ಮಾಡಲು ನಿಶ್ಚಯಿಸಿದೆ. ಕಮ್ಯೂನಿಸ್ಟರ ಮಿತ್ರನಾದ ಡಾ॥ ವಿಟ್ಮಿನ್ಹ್ ಚೀನದ ಮೂಲಕ ರಷ್ಯಾದ ಸಹಾಯ ಪಡೆಯಬಹುದು.

ಪ್ರಪಂಚದಲ್ಲಿ ತಮ್ಮ ತಮ್ಮ ಪ್ರತಿಭೆಗಳ ವಿಸ್ತಾರಕ್ಕಾಗಿ ರಷ್ಯಾ ಮತ್ತು ಅಮೆರಿಕಾಗಳು ನಿರಂತರ ಪ್ರಯತ್ನಗಳನ್ನು ಮಾಡುತ್ತಲಿವೆ. ಈ ಅಂತರಿಕಯುದ್ಧವು (Cold War) ಬಹಿರಂಗ ಸ್ವರೂಪವನ್ನು ಎಂದು ತಾಳುವದೋ ಎಂಬ ಭೀತಿಯು ಎಲ್ಲಾ ಕಡೆಗಳಲ್ಲೂ ಹಬ್ಬಿದೆ.

ಕೇಂದ್ರ ಮಂತ್ರಿಮಂಡಳ

ಕೇಂದ್ರ ಮಂತ್ರಿಮಂಡಳದಲ್ಲಿ ಶ್ರೀರಾಜಗೋಪಾಲಾಚಾರಿ ಪಂಗೋವಿಂದ ವಲ್ಲಭಪಂತ ಕೆ. ಯಂ. ಮುನ್ಶಿ ಮತ್ತು ಹುಕ್ಕಪ್ಪನೆಂಬವರು ಸೇರ್ಪಡೆಯಾಗಲಿದ್ದು ಅವರಿಗೆ ಮುಖ್ಯ ಶಾಖೆಗಳ ಹಂಚಿಕೆಯಾಗಲಿದೆ. ಆಸ್ಸಾಂಗವರ್ನರರಾದ ಶ್ರೀ ಜಯಪ್ರಕಾಶರೂ ಕೂಡ ಕೇಂದ್ರದಲ್ಲಿ ಬರಲಿದ್ದಾರೆಂದು ಗೊತ್ತಾಗಿದೆ.

—:(೨):—

ಸರ್ದಾರ ಪಟೇಲ

ಭಾರತದ ಉಪ ಮುಖ್ಯ ಮಂತ್ರಿ ಸರ್ದಾರ ಪಟೇಲರು ಬೊಂಬಾಯಿಯಿಂದ 12 ಕ್ಕೆ 'ಡೆಹಲಿ' ಎಂಬ ಹಡಗಿನಿಂದ ಕೆರಳಿದರು. ತಿರುವಾಂಕೂರು ಕೊಚ್ಚಿನ್‌ಗಳಲ್ಲಿ 4 ದಿನಗಳ ಪ್ರವಾಸವಾಡಿ ಬೊಂಬಾಯಿಗೆ ಮರಳಲಿರುವರು.

SCHOLARSHIPS.

The Provincial Vysya Education Fund, Bellary offers scholarships to poor Vysya student who take up any technical course anywhere in India Applications can be had at request from its General Secretary. Applications received after 30-5-50 will not be entertained.

D. L. Gangadhara Chetty,
General Secretary,
P V.E Fund, BELLARY

ವಿದ್ಯಾರ್ಥಿ ವೇತನಗಳು

ಹಿಂದುಸ್ತಾನದ ಯಾವ ಭಾಗದಲ್ಲಾದರೂ ಟೆಕ್ನಿಕ್ಯಲ್ ಶಿಕ್ಷಣ ಹೊಂದಬಯಸುವ ಬಡ ವೈಶ್ಯ ವಿದ್ಯಾರ್ಥಿಗಳಿಗೆ ಪ್ರಾಂತೀಯ ವೈಶ್ಯ ವಿದ್ಯಾರ್ಥಿನಿಧಿಯಿಂದ ವಿದ್ಯಾರ್ಥಿ ವೇತನ ದೊರೆಯುವುದು. ನಿಧಿಯ ಜನರಲ್ ಸೆಕ್ರೆಟರಿಯಿಂದ ಅರ್ಜಿಗಳನ್ನು ಪಡೆದು 30-5-50 ರೊಳಗಾಗಿ ಅರ್ಜಿಗಳನ್ನು ಅವರಿಗೆ ಕಳುಹಿಸಬೇಕು.

ದಿ. ಎಲ್. ಗಂಗಾಧರ ಶೆಟ್ಟಿ
ಜನರಲ್ ಸೆಕ್ರೆಟರಿ ವೈಶ್ಯ ವಿದ್ಯಾರ್ಥಿನಿಧಿ
ಬಳ್ಳಾರಿ.

(ಜೋಗ್ ಹೊಸಪೇಟೆ)

ಬಳ್ಳಾರಿ ಜಿಲ್ಲಾ ಹೊಸಪೇಟೆ ತಾಲೂಕ 64 ನೇ ನಂಬರು ಜೋಗ ಗ್ರಾಮದಲ್ಲಿ ಕಾಲಿ 10-10-50 ನೇ ದಿನ ಸಾಯಂಕಾಲ 6 ಘಂಟೆಗೆ ಸರಿಯಾಗಿ ಶ್ರೀ ವೀರಭದ್ರೇಶ್ವರನ ದೇವಸ್ಥಾನದಲ್ಲಿ ವಿದ್ಯಾಪ್ರಚಾರ ಸಭೆಯನ್ನು ಗ್ರಾಮದವರು ಶ್ರೀಯುತ ಮಳೆಮಠದ ಮಳೆಯಪ್ಪನವರ ಅಧ್ಯಕ್ಷತೆಯಲ್ಲಿ ಕರೆಯದಿದ್ದರು ಗ್ರಾಮದ ಮುಖಂಡರಾದಂಥ ಶ್ರೀಮಾನ್ ಕರಭಯ್ಯನವರು, ಗೌಡ್ರ ರುದ್ರಪ್ಪನವರು, ಸೋಮೇನಹಳ್ಳಿ ಶಿದ್ದಪ್ಪನವರು ದಿಯ್ಯಾನ ಗೌಡರು, ಪಡಿಯಪ್ಪನವರ ಬಸಪ್ಪನವರೂ, ತಿಮ್ಮಪ್ಪನವರ ಶರಭಣ್ಣನವರು ಅಂಗಡಿ ವೀರಭದ್ರಪ್ಪನವರು ಮತ್ತು ಗ್ರಾಮದ ರೆಡ್ಡಿಯವರೂ ಸಕಲರೂ ಹಾಜರಿದ್ದರು ಶ್ರೀಯುತ ಸೊನ್ನ ಶಾಧುಗಳಾದ ವಿರೂಪಾಕ್ಷಯ್ಯನವರು ವಿದ್ಯಾಭ್ಯಾಸದ ಸ್ವಾಮುಖ್ಯತೆ ಮತ್ತು ಹೊಸ ಶಾಲೆಯ ಸ್ಥಾಪನೆ ಮಾಡುವ ಬಗ್ಗೆ ಸುಮಾರು ೩ ಘಂಟೆ ಭಾಷಣ ಮೂಲಕ ತಿಳಿಯಪಡಿಸಿದರು.

ಮೇಲಿನ ಮುಖಂಡರು ಇನ್ನು ಎರಡು ತಿಂಗಳೊಳಗಾಗಿ ಹೊಸಶಾಲೆಯನ್ನು ಸ್ಥಾಪನೆ ಮಾಡುವೆವೆಂದು ವಚನವನ್ನಿತ್ತರು. ಅಂತ್ಯದಲ್ಲಿ "ವಂದೇಮಾತರಂ" ರಾಷ್ಟ್ರ ಗೀತೆಯಿಂದ ಸಭೆಯು ವಿಸರ್ಜನೆಗೊಳ್ಳಿತು.

ಅಸಾಮದಲ್ಲಿ ಕಮ್ಯೂನಿಸ್ಟರು ಸೌಗಾಂಗ್‌ನಗರಕ್ಕೆ 45 ಮೈಲಿದೂರದಲ್ಲಿ ಹೌರಾಘಾಟ್ ಎಂಬಲ್ಲಿ ಇಬ್ಬರು ಪೋಲೀಸ್ ಕಾನ್ಸ್ಟೇಬಲರನ್ನು ಕೊಂದು ಶಸ್ತ್ರಾಸ್ತ್ರಗಳನ್ನೆಲ್ಲಾ ಕದ್ದೊಯ್ದಿರುವರು.

ಭತ್ತದ ಫಸಲು ಮೊತ್ತದಲ್ಲಿ ಶೇಕಡ ೨ ಭಾಗ ಹೆಚ್ಚಿದೆಯೆಂದು ನವ ದೆಹಲಿಯಿಂದ ಪ್ರಕಟನೆ ಹೊರಟಿದೆ. ಬರ್ಮಾದಿಂದ ಈ ತಿಂಗಳಲ್ಲಿ 32 ಸಾವಿರ ಟನ್ ಅಕ್ಕಿ ಬರಲಿದೆ. ಸೆಪ್ಟಂಬರ್ ಒಳಗಾಗಿ ಒಂದುಲಕ್ಷ ಟನ್ ಅಕ್ಕಿಯು ಬರಲಿದೆ.

ಒರಿಸ್ಸಾದ ಮುಖ್ಯ ಮಂತ್ರಿಗಳಾಗಿ ಶ್ರೀ ನಭಕೃಷ್ಣ ಚೌದರಿಯವರು ಆರಿಸಲ್ಪಟ್ಟಿರುವರು.

ಬಳ್ಳಾರಿನಗರದಲ್ಲಿ ಬಸ್ ಸರ್ವಿಸ್

ಟ್ರಾಫಿಕ್ ಬೋರ್ಡಿನವರು ಬಳ್ಳಾರಿ ನಗರದಲ್ಲಿ ಎರಡು ಬಸ್‌ಗಳನ್ನು ನಡೆಸಲು ಅಪ್ಪಣೆ ಇತ್ತಿರುವರು. ಆದರೆ ಪುರಸಭೆಯವರು ತಾವೇ ನಡೆಸುವರೋ, ಬೇರೆಯವರಿಗೊಪ್ಪಿಸುವರೊ ಇನ್ನೂ ತಿಳಿದುಬಂದಿಲ್ಲ. ವರ್ಗವಿಶ್ಚಯವೂ ಆಗಿಲ್ಲ.

ವಿದ್ಯಾಭ್ಯಾಸ

ಕನ್ನಡಶಿಕ್ಷಣ:— ಹೊಸಪೇಟೆಯ ಟ್ರೈನಿಂಗ್ ಶಾಲೆಯಲ್ಲಿ ಕನ್ನಡ ಹೈಯ್ಯರ್ ಎಲಿಮೆಂಟರಿ ಗ್ರೇಡ್, ಸೆಕಂಡರಿ ಗ್ರೇಡ್ ವಿದ್ಯಾರ್ಥಿಗಳಿಗೆ ವ್ಯವಸ್ಥೆಯಿದೆ. ಜಿಲ್ಲಾ ಕೇಂದ್ರವಾದ ಬಳ್ಳಾರಿಯಲ್ಲಿ ತೆಲುಗಿಗೆ ಮಾತ್ರ ವ್ಯವಸ್ಥೆಯುಂಟು. ಬಳ್ಳಾರಿಯಲ್ಲಿ ಪರಸ್ಥಳದಿಂದ ಬಂದ ಬಹುವಿದ್ಯಾರ್ಥಿಗಳಿಗೆ ಇರುವಷ್ಟು ಸೌಕರ್ಯವು ಜಿಲ್ಲೆಯ ಯಾವನಗರದಲ್ಲೂ ಇಲ್ಲ ತೆಲುಗನ್ನು ಕಿತ್ತುಹಾಕಬೇಕೆಂದು ಹೇಳುವುದಿಲ್ಲ. ಆದರೆ ಬಳ್ಳಾರಿಯಲ್ಲಿ ಕನ್ನಡ ಮತ್ತು ತೆಲುಗಿನ ಶಿಕ್ಷಣ ಈ ಎರಡಕ್ಕೂ ಸ್ಥಾನ ಕೊಟ್ಟಿದ್ದರೆ ಉಚಿತ ವಿದ್ವತ್. ಶಿಕ್ಷಣಾಧಿಕಾರಿಗಳು ಯಾರ ಪ್ರಾರ್ಥನೆಗೂ ಕಿವಿಗೊಡುವುದಿಲ್ಲ.

ಕಾಲುಬಾಜಾರಿನ ಸ್ತ್ರೀಯರ ಟ್ರೈನಿಂಗ್ ಸಂಸ್ಥೆಯಲ್ಲಿ ಇನ್ನು ಮೇಲೆ ಎಲ್ಲರಿಗೂ ಶಿಕ್ಷಣ ಕೊಡಲಾಗುವದು ಆದರೆ ತೆಲುಗಿನಲ್ಲಿ ಮಾತ್ರ ಕನ್ನಡದ ವಿದ್ಯಾರ್ಥಿನಿಯರೂ ಅಧ್ಯಾಪಿಕೆಯರೂ ಹೊಸಪೇಟೆಗೆ ಹೋಗಬೇಕು.

ನಮ್ಮ ಶಾಸನ ಸಭೆಯವರು ಇತ್ತಕಡೆಗೆ ಗಮನಕೊಟ್ಟು ಬಳ್ಳಾರಿ ನಗರದ ಶಿಕ್ಷಣ ಸಂಸ್ಥೆಗಳಲ್ಲಿ ಕನ್ನಡಕ್ಕೂ ಸ್ಥಾನಮಾನ ಕೊಡಿಸುವರೆಂದು ಆಶೀಸುತ್ತೇವೆ.

—ಒಬ್ಬ ವಿದ್ಯಾರ್ಥಿ

ಜಗತ್ತಿನಲ್ಲಿ ಭಾರತದಲ್ಲಿ ಮಹಾ ಚುನಾವಣೆ

ಮುಂದಿನ ವರ್ಷ ನಡೆಯುವದು.

ಕಲಕತ್ತೆ ಸುಮಾರು ೧೭ ಕೋಟಿ ಮತದಾರರು ಭಾಗವಹಿಸುವ ಸಗತ್ತಿನಲ್ಲಿಯೇ ಅತಿ ದೊಡ್ಡದಾದ ಚುನಾವಣೆಯೂ ಮುಂದಿನ ವರ್ಷ ಬಹುಶಃ ಇದೇ ಸಮಯದಲ್ಲಿ ಭಾರತದಲ್ಲಿ ನಡೆಯಬಹುದು. ಎಂದು ಮುಖ್ಯ ಚುನಾವಣೆ ಕಮೀಶನರಾದ ಶ್ರೀ ಎಸ್. ಸೇನರು ಹೇಳಿದ್ದಾರೆ ಅಂಥ ಮಹತ್ತರವಾದ ಕಾರಣವೇನೂ ಸಂಭವಿಸದಿದ್ದರೆ ಭಾರತದ ಪಾರ್ಲಿಮೆಂಟು ಹಾಗೂ ಪ್ರಾಂತ ಶಾಸನ ಸಭೆಗಳ ಚುನಾವಣೆಯು ೧೯೫೧ರ ಮೇ ತಿಂಗಳ ಕೊನೆಯೊಳಗಾಗಿ ಮುಗಿಯುವದು. ಎಂದವರು ಹೇಳಿದರು

ಹಿಂದೀ ಮಹಾ ವಿದ್ಯಾಲಯ, ಬಳ್ಳಾರಿ,

[1931 ಸ್ಥಾಪಿತ. ಬಳ್ಳಾರಿ ಜಿಲ್ಲಾ ಹಿಂದೀ ಪ್ರೇಮಿಮಂಡಲದಾಶ್ರಯದಲ್ಲಿ, ರಿಜಿಸ್ಟರ್ಡ.]

ಮದ್ರಾಸ್ ಸರ್ಕಾರದಿಂದ ಮಾನ್ಯತೆ ಇದೆ.

ಪ್ರಾರಂಭಿಕ ವರ್ಗಗಳಿಗೆ ಮಾಸಿಕ ೫/- ಶುಲ್ಕ — ಉನ್ನತ ವರ್ಗಗಳಿಗೆ ಮಾಸಿಕ ೮/- ಶುಲ್ಕ

ವಾರ್ಡಲಾ ಹೈಸ್ಕೂಲ್ ಕಟ್ಟಡದಲ್ಲಿ ಪ್ರಾತಃಕಾಲ—ಸಾಯಂಕಾಲ ಹಿಂದೀ ಕಾಲೇಜಿನ ವರ್ಗಗಳು ನಡೆಯುತ್ತಿವೆ ವಿಶಾರದ — ಪ್ರವೇಶ ವರ್ಗಗಳಲ್ಲದೆ ಪ್ರಾರಂಭಿಕ ವರ್ಗಗಳಿಗೂ ಪ್ರವೇಶವಿದೆ. ವರ್ಗಗಳಿಗೆ ಸಂಬಂಧಿಸಿದ ಪಾಠ್ಯ ಪುಸ್ತಕಗಳು ವಿದ್ಯಾಲಯದಲ್ಲಿ ದೊರೆಯುತ್ತವೆ. ಒಳ್ಳೆಯ ಪುಸ್ತಕಭಂಡಾರವಿದೆ. ಶ್ರೇಷ್ಠ ವಾರಪತ್ರಿಕೆ, ಮಾಸಪತ್ರಿಕೆಗಳು ಲಭ್ಯ. ಇತರ ವಿವರಗಳಿಗೆ ಸ್ವಾಂಪಿಟ್ಟು ಬರೆಯಿರಿ.

ಪ್ರಿನ್ಸಿಪಾಲ್.

NAVA BHARAT BELLARY. (Reg No. M. 4746)

ನವಭಾರತ ಬಳ್ಳಾರಿ. 15—5—50

(Nationalist Weekly)

ಚಂದಾದರಗಳು.	Subscription Rates.
ವರ್ಷಕ್ಕೆ 5—0—0	One Year 5—0—0
6 ತಿಂಗಳಿಗೆ 3—0—0	Six months 3—0—0
ಆರು ತಿಂಗಳ ಕಡಿಮೆ, ಚಂದಾ ಸ್ವೀಕರಿಸುವುದಿಲ್ಲ.	Subscription will not be accepted for less than 6 months

To

Sri.....

.....

Printed at Krishna Printing Works, Edited & Published by T.B. Keshava Rao.

AI—HIND

ನವಭಾರತ

ಬಳ್ಳಾರಿಯ
ಉಜ್ವಲ ರಾಷ್ಟ್ರೀಯ ವಾರಪತ್ರಿಕೆ
*
ಉತ್ತಿಷ್ಠತ ! ಜಾಗ್ರತ !!
ನ್ಯಾಸ್ಯವರಾನ್ನಿ ಬೋಧತ !!!
*
ಸಂಪಾದಕ ಮುದ್ರಕ ಪ್ರಕಾಶಕ:—
ಟಿ. ಬಿ. ಕೇಶವರಾವ್

ಸಂ ೧೦ ಸೋಮವಾರ ೩೦ ನೇ ಏಪ್ರಿಲ್ ೧೯೩೭ ಬೆಲೆ ೧೫ ಪೈ

ಶ್ರೀ ವೈ. ಮಹಾಬಲೇಶ್ವರಪ್ಪನವರು

'ನವಭಾರತ' ಪತ್ರಿಕೆಯ ಸಂಪಾದಕರಿಗೆ ಬರೆದ ಪತ್ರ

ಮಹಾಶಯರೇ !

ಕನ್ನಡಿಗರ ಉದ್ಧಾರ ಮತ್ತು ಕನ್ನಡದ ವಿಕಾಸನವನ್ನು ಕುರಿತು ನೀವು ಇತ್ತೀಚಿನ ಸಂಚಿಕೆಯಲ್ಲಿ ಜಿಲ್ಲಾ ಬೋರ್ಡ್ ಸಂಬಂಧದಲ್ಲಿ ಅದರಲ್ಲೂ ನನ್ನ ಸಾನು ಭೂತಿಯು ಅಭಿಮಾನದ ಬಗ್ಗೆ ಬರೆದಿರುವ ಲೇಖನಗಳನ್ನೋದಿರುತ್ತೇನೆ. ನಾನು ಕನ್ನಡಿಗನಿದ್ದೇನೆ ಕನ್ನಡದ ಏಳಿಗೆ ಮತ್ತು ಕನ್ನಡಿಗರ ಅಭ್ಯುದಯದ ಬಗ್ಗೆ ನನಗೆ ಆಸಕ್ತಿ ಇಲ್ಲವೆಂದು ಹೇಳುವುದು ಅನುದಾರವಾದ ಮಾತಾಗುವುದರಿಂದ ಆ ಲೇಖಕರದು ತಪ್ಪು ಅಭಿಪ್ರಾಯ. ವಿಶೇಷೋತ್ಸಾಹದವರು ತಮ್ಮ ಸ್ವಾರ್ಥೋದ್ದೇಶಕ್ಕಾಗಿ ಸುಳ್ಳು ಪ್ರಚಾರದಲ್ಲಿ ಮಗ್ನರಾಗಿ ನಿಮ್ಮ ಸುದ್ದಿಗಾರರಿಗೆ ಅಶಕ್ತ ಮತ್ತು ತಪ್ಪು ಅಭಿಪ್ರಾಯದ ಅಂಶಗಳನ್ನು ಪೂರೈಸುತ್ತಿರುವರು

ಅಡಳಿತಗಾರರು ನಿಸ್ಪೃಹರಾಗಿ ಅನಪೇಕ್ಷಿತ ಮತ್ತು ದುಷ್ಪ್ರಚಾರಗಳನ್ನು ಸದೆಬಡಿಯಬೇಕು. ಒಂದು ನಿಶ್ಚಿತ ನೀತಿಗನುಗುಣವಾಗಿ ಅಭಿವೃದ್ಧಿಯ ಎಲ್ಲಾ ಯೋಜನೆಗಳಿಗೂ ಅವರು ಪ್ರೋತ್ಸಾಹ ಕೊಡಬೇಕು ಒಂದೆಡೆಗೆ ಹೆಚ್ಚಿನಲವನ್ನು ಕೊಟ್ಟು ಕೆಲವರ್ಗಗಳಿಗೆ ಘಾತಕವಾಗುವಂತೆ ನಾನು ವರ್ತಿಸಬೇಕೆಂದು ನಿರೀಕ್ಷಿಸಬಾರದು. ನಿಮ್ಮ ಲೇಖನಗಳಿಗೆ ಅಂಶಗಳನ್ನು ಪೂರೈಸಿದ ನಿಮ್ಮ ಸುದ್ದಿಗಾರರು ಮತ್ತು ಇತರರು ಈ ಮುಖ್ಯ ತತ್ವವನ್ನು ಮರೆಯುವಂತೆ ತಾಣತ್ತಿದೆ ಇದೆಲ್ಲದರ ಜೊತೆಗೆ ಬಳ್ಳಾರಿ ಜಿಲ್ಲಾ ಬೋರ್ಡ್ ಅಧ್ಯಕ್ಷರ ಅಧಿಕಾರವು ಬಹಳ ಸೀಮಿತವಿದೆಯೆಂಬುದನ್ನೂ ಅವರು ಮರೆತಂತೆ ಭಾಸವಾಗುತ್ತದೆ. ಉದಾಹರಣಾರ್ಥವಾಗಿ ಹೊಸಶಾಲೆಯನ್ನು ಸ್ಥಾಪಿಸಲು, ಒಂದು ಪ್ರಾಥಮಿಕ ಶಾಲೆಯಿಂದ ಮಿಡ್ಲ್ ಸ್ಕೂಲಿಗೆ ಉಪಾಧ್ಯಾಯರನ್ನು ನೇಮಕ ಮಾಡಲು ಹೆಚ್ಚಿಗೆ ಉಪಾಧ್ಯಾಯರನ್ನು ಒಂದು ಶಾಲೆಗೆ ನಿಯುಕ್ತಮಾಡಲು ಹೊರಗಿನ ವಿದ್ಯಾಶಾಖೆಯವರ ಆಪ್ಪಣೆಬೇಕು. ಬೋರ್ಡಿನ ನೌಕರರನ್ನು ಶಿಕ್ಷಿಸಲು ವಿಧಾಯಕ ಮತ್ತು ನಿಯಮಕ್ಕೊಳಪಟ್ಟ ನೀತಿಯನ್ನು ಅನುಸರಿಸಬೇಕು. ಹೊರಗಿನ ಅಧಿಕಾರಿಗಳಿಗೆ ಅವರು ಅಪೀಲ್ ಮಾಡುವ ಅಧಿಕಾರವುಂಟು ಬೋರ್ಡಿನ ಲೆಕ್ಕ ಪರಿಶೋಧಕ್ಕೊಳಪಟ್ಟಿದೆ. ಪ್ರತಿಯೊಂದು ತೀರ್ಮಾನಕ್ಕೆ ಸರ್ಕಾರದ ಒಪ್ಪಿಗೆಬೇಕು. ಕಚೇರಿಯ ಅಧಿಕಾರಿವರ್ಗದಲ್ಲಿ ಕ್ರಾಂತಿಕರ ಬದಲಾವಣೆಗಳು ಅಸಾಧ್ಯ, ಒಂದುವೇಳೆ ಅವರನ್ನೆಲ್ಲಾ ತೆಗೆದು ಮಾರನೆಯ ಪ್ರಾತಃಕಾಲ ಬೇರೆಯವರನ್ನು ಸೇರಿಸಿಕೊಳ್ಳುವುದು ಸಾಧ್ಯವೇ ಇಲ್ಲ ಸೂಚಿತ ಉದಾಹರಣೆಗಳಲ್ಲದೆ ಕಚೇರಿಯ ನೌಕರ ವರ್ಗದಮೇಲೆ ಕಣ್ಮುಚ್ಚಿ ದೋಷಾರೋಪಣೆ ಮಾಡುವುದು ವಿಷಾದಕರವಾದ ಸಂಗತಿ. ತಪ್ಪುಗಳನ್ನು ತಿದ್ದುಪಡಿಗಾಗಿ ತೋರಿಸಬಹುದು. ಅಡಳಿತವರ್ಗದವರು, ಅಂಧ್ರರು ಪಕ್ಷದವರೆಂದು ಹೇಳುವುರು ಹುಚ್ಚುತನಕ್ಕೆ ಸಮೀಪಿಸುತ್ತದೆ. ಏಕೆಂದರೆ, ಅವರು ಅಧ್ಯಕ್ಷರ ಆಜ್ಞೆಯನ್ನೇ ಪರಿಪಾಲಿಸುತ್ತಾರೆ. ಅಧ್ಯಕ್ಷರಿಂಗೆ ಒಂದು ನಿಶ್ಚಿತ ಧೋರಣವಿದೆ ನಿಷ್ಪಕ್ಷಪಾತವಾದ ಅಡಳಿತವನ್ನು ನಡೆಸಲು ಅವರು ಗೊತ್ತುಗುರಿಗಳನ್ನು ಇಟ್ಟುಕೊಂಡಿರುವರು.

ಉಪಾಧ್ಯಕ್ಷರೆ ಅಥವಾ ಒಬ್ಬ ಸದಸ್ಯರು ಸಲಹೆ, ಸೂಚನೆಗಳನ್ನು ಅನುಸರಿಸಲು ಅಥವಾ ಅನುಸರಿಸದಿರಲು ನ್ಯಾಯ ಕಾರಣವಿದ್ದರೆ, ಅದನ್ನು ಯಾವ ಸದಸ್ಯರಾಗಲಿ ಪರ್ಯಾಯ ಭಾವಿಸಬಾರದು. ತಾವು ಕೆಳಗಿನ ದರ್ಜೆಯವರೆಂಬ ಕಮ್ಮಿ ಮಾತು ನಡೆಯುವುದಿಲ್ಲೆಂಬ ವೃಥಾ ಮತ್ತು ಅನಾವಶ್ಯಕ ಭಾವನೆಯಿಂದ ನರಳುತ್ತ, ಉಪಾಧ್ಯಕ್ಷರು, ಅತುರದ ಪ್ರವೃತ್ತಿಯಿಂದ, ವ್ಯಕ್ತಿದ್ವೇಷವೆಡೆಗೆ ಕೈ ಬೆರಳುಮಾಡಿ, ರಾಜೀನಾಮೆ ಕೊಡಬಯಸುವುದರಿಂದ ಯಾರಿಗೂ ಲಾಭವಾಗುವಂತಿಲ್ಲ. ತಾವು ಕೊಡುವ ಸೂಚನೆಗಳಿಲ್ಲಾ, ಸಾಕಷ್ಟು ಧ್ಯಾನಕ್ಕೊಳಪಡುತ್ತವೆ. ಎಂಬ ಭರವಸೆ ಕೊಡುತ್ತೇನೆ ಈ ಅಶ್ವಾಸನದಿಂದ ಸುಳ್ಳುಪ್ರಚಾರವು ನಿಂತೀತೆಂದು ಭಾವಿಸುತ್ತೇನೆ. ಸದಸ್ಯರೂ, ಸುದ್ದಿಗಾರರೂ ತಮ್ಮೆಡೆಗೆ ಬರುವ ಅಸಕ್ತ ಮತ್ತು ಸ್ವಾರ್ಥೋದ್ದೇಶಕರ ಸೂಚನೆಗಳನ್ನು ಸಾಕಷ್ಟು ದೀರ್ಘವಿಚಾರ ವಿಮರ್ಶೆ ಮಾಡಿ ನಿರ್ಣಯಕ್ಕೆ ಬರಬೇಕೆಂದು ನನ್ನ ವಿನಂತಿ.

ವೈ. ಮಹಾಬಲೇಶ್ವರಪ್ಪ,
ಅಧ್ಯಕ್ಷರು, ಜಿಲ್ಲಾ ಬೋರ್ಡ್, ಬಳ್ಳಾರಿ.

ನವಭಾರತಕ್ಕೆ
ಚಂದಾದಾರರಾಗಿರಿ.

ನಂಗಪರ್ವತಾರೋಹಣ

★ ಭಾರತಮಾತೆಗೆ ಮುಕುಟಪ್ರಾಯವಾದ ಹಿಮಾಲಯವು ಸೌಂದರ್ಯದ ನೆಲವೀಡು. ★ ಸಾಮಾನ್ಯರಿಂದ ಪರ್ವತಾರೋಹಣವು ಸಾಗದ ಕೆಲಸ; ಎತ್ತರವಾದ ಶಿಖರವನ್ನೇರಲು ಗಟ್ಟಿಮುಟ್ಟಾದ ದೇಹದ ಜೊತೆಗೆ ಅನಮಾನವಾದ ಆತ್ಮಶಕ್ತಿಯೂ ಬೇಕು. ★ ನಂಗಾರೋಹಣಕ್ಕಾಗಿ ಹೋದ ವರಲ್ಲಿ ಮರಳುವವರು ಕಡಿಮೆ

* * * * ಶ್ರೀ. ಟಿ. ಚಂದ್ರರಾಜ ಶೆಟ್ಟಿ ಅವರಿಂದ * * * *

ಸೃಷ್ಟಿ ಸೌಂದರ್ಯವನ್ನು ಸವಿಯುವ ಹುಚ್ಚು ಮಾನವನಿಗೆ ಬಹು ಹಿಂದಿನ ಕಾಲದಿಂದಲೂ ಅಂಟಿಕೊಂಡು ಬಂದಿದೆ. ಜಗತ್ತಿನ ಅತ್ಯುನ್ನತ ಶಿಖರವಾದ ನಂಗ (ನಂಗ ಎವರೆಸ್ಟ್) ಪರ್ವತಾರೋಹಣ ಕ್ಕಾಗಿ ಬಂದು, ತಮ್ಮ ತನುಗಳನ್ನರ್ಪಿಸಿದ ವಿದೇಶಿಯರ ಸಾಹಸವೇ ಈ ಮಾತಿಗೆ ಅತ್ಯುತ್ತಮವಾದ ಉದಾಹರಣೆಯಾಗಿದೆ. 'ದೂರದಿಂದ ಬೆಟ್ಟ ನುಣ್ಣಗೆ' ಎಂಬ ಸಾಮತಿಯು ಬಳಕೆಯಲ್ಲಿದೆ. ನುಣ್ಣಗೆ ಕಂಡ ಬೆಟ್ಟವನ್ನೇರಲು ಹೊರಟರೆ ನಮಗೆ ಯಾವ ಅಡ್ಡಿ ಆತಂಕಗಳು ಎದುರಾಗಬಹುದೆಂಬುದನ್ನು ಊಹಿಸಬೇಕಾದರೆ ನಾವು ಒಂದು ಅತಿ ಚಿಕ್ಕ ಶಿಖರವನ್ನಾದರೂ ಏರಬೇಕು.

ಪರ್ವತಾರೋಹಣವು ಸುಲಭ ಸಾಧ್ಯವಲ್ಲ ಈ ಸಾಹಸಕ್ಕೆ ಅಡಿ ಇಡುವ ಮೊದಲು ಅವರು ತಮ್ಮ ಪ್ರಾಣದಾಶೆಯನ್ನು ತೊರೆದೇ ಮುಂದಡಿಯಿಡಬೇಕಾಗುವುದು ಅದರಲ್ಲೂ ಹಿಮಾಲಯದಂಥ ಹಿಮಾಚ್ಛಾದಿತವಾದ ಅತ್ಯುನ್ನತ ಶಿಖರವನ್ನೇರುವ ಸಾಹಸವು ಸಾಮಾನ್ಯವಾದುದಲ್ಲ ಶಿಖರದ ಮೇಲೆ ನಮ್ಮ ಉಸಿರಾಟಕ್ಕೆ ಅಗತ್ಯವಿರುವ ಆಮ್ಲ ಜನಕ ಪ್ರಾಯುವಿನ ವಿರಳತೆಯಿಂದಲೂ, ಕ್ಷಣ ಕ್ಷಣಕ್ಕೆ ವಾತಾವರಣವನ್ನು ಹೊಂದುತ್ತಿರುವ ಹವಾಮಾನದಿಂದಲೂ, ಅಗಾಧವಾದ ಗಿರಿ, ಕಂದರ ಪ್ರಪಾತಗಳಿಂದ ಕೂಡಿಕೊಂಡ ಶ್ರೇಣಿಗಳಿಂದಲೂ ನಂಗ ಪರ್ವತವು ಇಂದಿಗೂ ಅಜೇಯವಾಗಿ ನಿಂತಿದೆ. ಭಯಂಕರವಾದ ಬಿರುಗಾಳಿಯೂ ಬೀಸತೊಡಗಿದರೆ ಅಥವಾ ದೊಡ್ಡ ದೊಡ್ಡ ಹಿಮಗಡ್ಡೆಗಳು ಉರುಳತೊಡಗಿದರೆ ಅದನ್ನು ತಪ್ಪಿಸಿಕೊಂಡು ಬದುಕಬಲ್ಲ ಧೀರನಾದರೂ ಮಾನವರಲ್ಲಿಲ್ಲ. ಹಿಮಾಲಯದ ನಿಗೂಢತೆಯನ್ನು ಬಯಲುಮಾಡಲು ಯತ್ನಿಸಿದ ಅದೆಷ್ಟೋ ಪರ್ವತಾರೋಹಿಗಳಲ್ಲಿ ಹೆಚ್ಚಿನವರು ವಿಚಿತ್ರವಾದ ಗಿರಿಶಕ್ತಿಯ ಸೆಳೆತಕ್ಕೆ ಸಿಕ್ಕಿ ಪ್ರಾಣಾರ್ಪಣವನ್ನು ಮಾಡಿದ್ದಾರೆ.

ಹಿಮಾಲಯದ ಪ್ರತಿ ಶ್ರೇಣಿಯಲ್ಲೂ ಅಪಾಯಗಳು ಹೆಜ್ಜೆಹೆಜ್ಜೆಗೂ ಇವೆ. ಆದರೆ ಪರ್ವತಾರೋಹಿಗಳು ಮೇಲೇರುವಾಗ, ರೋಮಾಂಚನವನ್ನುಂಟುಮಾಡುವ ದೃಶ್ಯಗಳನ್ನು ಕಾಣುತ್ತ ತಮ್ಮ ಕಷ್ಟಗಳನ್ನು ಮರೆಯುವರು. ಹಿಮಾಲಯದ ಲೋಮಹರ್ಷಣ ದೃಶ್ಯಗಳು ಯೂರೋಪಿನ ಪರ್ವತಶ್ರೇಣಿಗಳಲ್ಲಿ ಇಲ್ಲ. ಸೂರ್ಯನ ಬೆಳಕು ಎಂದೆಂದಿಗೂ ಪ್ರವೇಶಿಸದ ಮೈಲುಗಟ್ಟಲೆ ಎತ್ತರವಾದ ದೊಡ್ಡ ದೊಡ್ಡ ಗಿರಿ ಕಂದರಗಳು, ಭಯಂಕರವಾದ ಕಡಿದಾದ ಪ್ರಪಾತಗಳು ಸೂರ್ಯನ ಬೆಳಕಿನಲ್ಲಿ ಮಿನುಗುತ್ತಿರುವ ಸ್ಫಟಿಕಸದೃಶವಾದ ಮಂಜಿನ ಬೆಟ್ಟಗಳ ಸಾಲುಗಳು ಇವೇ ಹಿಮಾಲಯದ ಪ್ರಾಕೃತಿಕ ಸೌಂದರ್ಯದ ಸಾರಸರ್ವಸ್ವ.

ನಂಗಾರೋಹಣಕ್ಕಾಗಿ ಪ್ರಯತ್ನ

ಸಕಲ ಸನ್ನಾಹಗಳೊಡನೆ ನಂಗಾರೋಹಣಕ್ಕಾಗಿ ಈವರೆಗೆ ಹಲವು ಸಲ ಪ್ರಯತ್ನಗಳು ನಡೆದರೂ ವಿಜಯಿಯಾಗಿ ಹಿಂದೆ ಬಂದವರಿಲ್ಲ. ೧೯೨೨ರಲ್ಲಿ ಏಳು ಮಂದಿ ಪರ್ವತಾರೋಹಿಗಳು ನಂಗ ಶಿಖರವನ್ನೇರಲು ಹೋದವರಲ್ಲಿ ಒಬ್ಬನಾದರೂ ವಾಪಸು ಬರಲಿಲ್ಲ. ೧೯೩೪ರಲ್ಲಿ ಅದನ್ನೇರಲು ಪ್ರಯತ್ನಿಸಿದ ಮೆಲ್ಲರಿ ಮತ್ತು ಇರ್ವಿನ್ ಎಂಬಿಬ್ಬರು ತಮ್ಮ ಪ್ರಾಣಗಳನ್ನು ಕಳೆದುಕೊಂಡರು. ೧೯೩೫ರಲ್ಲಿ ಹರ್ ಮರ್ಕೆಲ್ ಎಂಬ ಜರ್ಮನನು ಒಂಭತ್ತು ಮಂದಿ ಯೂರೋಪಿಯನರ ಮತ್ತು ೨೫ ಮಂದಿ ಹಿಂದೀ ಕೂಲಿಗಳೊಡನೆ ಹೋಗಿ ೨೩,೭೯೪ ಅಡಿಗಳ ಮೇಲೆ ಏಳನೆಯ ಶಿಬಿರವನ್ನು ಸ್ಥಾಪಿಸಿ, ಅಲ್ಲಿಂದ ಮೇಲೇರಲಾರದೆ ಕೆಳಗಿಳಿಯುವಾಗ ಒಬ್ಬೊಬ್ಬರೇ ಎಂಬಂತೆ ಎಲ್ಲರೂ ಹಿಮದ ರಾಶಿಯಲ್ಲಿಯೇ ಸಮಾಧಿಹೊಂದಿದರು. ೧೯೩೫ರಲ್ಲಿ ಎಫ್. ಎಸ್. ಸ್ಮಿತ್ ಎಂಬುವನು ತನ್ನದೊಂದು ಪಂಗಡವನ್ನು ಕಟ್ಟಿಕೊಂಡು ನಂಗಾರೋಹಣಕ್ಕಾಗಿ ಹೊರಟು ಅರ್ಧದಿಂದಲೇ ಮರಳಬೇಕಾಯಿತು ಆಮೇಲೆ ಕೆಲ ಸಮಯದ ಮೇಲೆ ವಿಮಾನದಿಂದ ನಂಗ ಪರ್ವತದ ಮೇಲೆ ಅಲ್ಲಲ್ಲಿಯ ಚಿತ್ರಗಳನ್ನು ತೆಗೆದರು.

ಪರ್ವತವನ್ನೇರಲು ಬರುವ ತೊಡಕುಗಳು

ಎತ್ತರವಾದ ಶಿಖರವನ್ನೇರಲು ಹಲವು ತರದ ತೊಡಕುಗಳಿವೆ. ಪರ್ವತಗಳ ಬುಡಗಳಲ್ಲಿರುವ ದಟ್ಟವಾದ ಕಾಡುಗಳಲ್ಲಿ ಮರಗಳನ್ನು ಕಡಿಯುತ್ತ ದಾರಿ ಮಾಡಿಕೊಂಡು ನುಸುಳಿ ಹೋಗಬೇಕು. ಅಲ್ಲಲ್ಲಿ ಎದುರಿಸುತ್ತಿರುವ ಕಾಡು ಪ್ರಾಣಿಗಳ ಬಾಯಿಯಿಂದ ತಪ್ಪಿಸಿಕೊಳ್ಳಬೇಕು. ಮುಂದೆ ಅಡಿ ಇಟ್ಟಲ್ಲಿ ಹಾವು ಜೇಳುಗಳು, ಅಲ್ಲಲ್ಲಿ ಅತ್ಯಂತ ವೇಗದಿಂದ ಹರಿಯುವ ಗಿರಿತೊರೆಗಳು, ಕೆಲವೆಡೆ ಪ್ರವಾತವನ್ನೇರುತ್ತಿರುವಾಗ ಅಕಸ್ಮಾತ್ ಕಾಲುಜಾರಿದರೆ ಪಾತಾಳವೇ ಗತಿ; ಅತನ ಎಲುಬು ದೊರೆಯಲಾರದು. ಇವನ್ನೆಲ್ಲಾ ಧೈರ್ಯಶಾಲಿಯಾದವನು ಸಹಿಸಿಕೊಂಡು ಮುಂದಕ್ಕೆ ಹತ್ತಿದರೆ ಮಂಜಿನ ಗುಡ್ಡೆಗಳು ಸಿಕ್ಕುವವು. ಮಂಜಿನ ಮೇಲೆ ನಡೆಯುವ ಕಷ್ಟವನ್ನು ವಿವರಿಸಲು ಸಾಧ್ಯವೇ ಇಲ್ಲ. ಇಂಥ ಸಾಹಸವನ್ನು ಕೈಗೊಳ್ಳುವವರಿಗೆ ಗಟ್ಟಿಮುಟ್ಟಾದ ದೇಹದ ಜೊತೆಗೆ ಅಸದೃಶವಾದ ಆತ್ಮಶಕ್ತಿಯೂ ಅಗತ್ಯ.

ವರ್ಷದ ಎಲ್ಲಾ ಸಮಯಗಳಲ್ಲಿ ಹಿಮಾಲಯವನ್ನು ಏರಲಾಗುವುದಿಲ್ಲ. ವಾತಾವರಣವು ಶಾಂತವಾಗಿರುವಾಗ ಮೇ ತಿಂಗಳಲ್ಲಿ ಮೇಲೇರಿ ಹೋಗುವುದು ಸುಲಭ ಮೇಲೆ ಮೇಲಕ್ಕೇರುವಾಗ ಅಲ್ಲಲ್ಲಿ ಶಿಬಿರಗಳನ್ನು ಸ್ಥಾಪಿಸುತ್ತ ಮುಂದರಿಯಬೇಕು. ಸುಮಾರು ೧೦,೦೦೦ ಅಡಿಗಳವರೆಗೆ ಸಾಮಾನ್ಯರಿಗೂ ಏರಿಹೋಗಬಹುದು. ಆಮೇಲೆ ಹವೆಯ ವಿರಳತೆಯಿಂದಾಗಿ ಉಸಿರಾಟದಲ್ಲಿ ತೊಡಕು ಉಂಟಾಗುವುದು ೧೯,೦೦೦ ಅಡಿಗಳ ಮೇಲೆ ಸ್ವಲ್ಪ ಆಯಾಸವಾದರೂ ಅದನ್ನು ಕಳೆಯಲು ಗಂಟೆಗಟ್ಟಲೆ ವಿಶ್ರಾಂತಿಯನ್ನು ಹೊಂದಬೇಕಾಗುವದು ಅಲ್ಲಿ

ಉಸಿರಾಟವು ತೀರ ಕಷ್ಟವಾಗಿ ಎದೆಯಲ್ಲಿ ನೋವು ಉಂಟಾಗುವುದು. ಅಲ್ಲಲ್ಲಿ ಹೆಜ್ಜೆ ಗೊಮ್ಮೆ ಎಂಬಂತೆ ನಿಂತುಕೊಂಡು ದೀರ್ಘ ಶ್ವಾಸವನ್ನೆಳೆದುಕೊಂಡು ಅಯಾಸವನ್ನು ಕಳೆದುಕೊಳ್ಳಬೇಕಾಗುವುದು ಅಷ್ಟು ಎತ್ತರದಲ್ಲಿ ಒಂದು ಘಂಟೆಗೆ ಸುಮಾರು ಲಂ ಅಡಿಗಳಷ್ಟು ಮಾತ್ರ ನೀಲೇರಬಹುದು.

ಆತ್ಮಶಕ್ತಿಯೂ ಮನೋದಾರ್ಢ್ಯವೂ ಕಡಿಮೆ ಇರುವ ಮಾನವನಿಂದ ಪರ್ವತಾರೋಹಣವು ಸಾಗದ ಕೆಲಸ. ನಿಸರ್ಗದ ಸೊಬಗು ಧೈರ್ಯೋತ್ಸಾಹಗಳು ಅವನನ್ನು ಅದೊಂದು ಅಸದೃಶವಾದ ಶಕ್ತಿಯಿಂದ ಮುಂದಕ್ಕೆ ಎಳೆಯುತ್ತಿರುವಂತೆ ಕಾಣುತ್ತಿದ್ದರೆ, ಕೆಲವರಿಗೆ ದೃಷ್ಟಿಮಂದವಾಗುವಿಕೆ, ತಲೆತಿರುಗುವಿಕೆ ನೋಪಲಿಂದಾಗಿ ತಾವು ಕೈಕೊಂಡ ಕರ್ತವ್ಯವನು ಮರೆತು ಒಂದು ಕಡೆ ಬಿದ್ದುಬಿಡುವರು. ಕೆಲವರಿಗೆ ಸ್ಮರಣಶಕ್ತಿಯೇ ಕುಂದುಗಿಹೋಗುತ್ತದೆ ಹಲವರಿಗೆ ಸ್ವರಭಂಗವಾಗಿ ಕೆಮ್ಮಿನೊಡನೆ ರಕ್ತವು ಶ್ರಿತವಾದಳವು ಹೊರಡುವುದು; ಮೂಗಿನಿಂದ ರಕ್ತ ಸುರಿಯಲು ಪ್ರಾರಂಭಿಸುವುದು ಕಿವಿಯಲ್ಲಿ ಸದಾ ಪಟ್ಟಯಾಗಿ ಸಮುದ್ರ ಘೋಷವು ಘರ್ಜಿಸಿದಂತೆ ಕೇಳಿಸುತ್ತಿದ್ದು, ಹುಚ್ಚು ಹಿಡಿದಂತಾಗುವುದು. ಇಲ್ಲಿಯ ವಾಯುವಿನಲ್ಲಿ ಸಮುದ್ರ ಪಾತಳಿಯ ವಾಯುವಿನಲ್ಲಿ ಇದ್ದುದರ ೧/೩ನೇ ಪಾಲು ಮಾತ್ರ ಆಮ್ಲಜನಕವಿರುವುದರಿಂದ ಹೀಗಾಗಲು ಕಾರಣ.

ಪ್ರಕೃತಿ ಮುನಿದಾಗ

ಇವೆಲ್ಲ ಹವೆಯ ಅನುಕೂಲವಿದ್ದಾಗ ಉಂಟಾಗುವ ಕಷ್ಟಗಳು. ಪ್ರಕೃತಿಯು ಮುನಿದರೆ ಉಂಟಾಗುವ ಭೀಕರತೆಯನ್ನು ವರ್ಣಿಸತೀರದು. ಬಿರುಗಾಳಿಯು ಬೀಸತೊಡಗಿದರೆ ಅದರಿಂದ ಪಾರಾಗುವ ದೆಂದರೆ ಯಮನ ದವಡೆಯೊಳಗಿಂದ ಹೊರಬಂದಂತೆಯೇ ಸರಿ ೨೨,೦೦೦ ಅಡಿಗಳ ಮೇಲೆ ಬೀಸುವ ಹಿಮಬಿರುತ ಈ ಬಿರುಗಾಳಿಯು ಅತ್ಯಂತ ಭಯಾನಕರವಾದದು. ಪರ್ವತಾರೋಹಿಗಳಿಗೆ ಬಿರುಗಾಳಿ ಬೀಸುವ ಸೂಚನೆಯು ಗೊತ್ತಾದರೆ, ಅವರು ಮುಂಜಿನಲ್ಲಿ ಹೊಂಡವನ್ನು ತೆಗೆದು ಅವರ ತಳದಲ್ಲಿ ಮರಿಯಾದ ಸ್ಥಳದಲ್ಲಿ ಡೇರೆಯನ್ನು ಹಾಕಿಕುಳಿತುಕೊಳ್ಳುವರು. ಕೆಲಕ್ಕೊಮ್ಮೆ ಬಿರುಗಾಳಿಯು ಡೇರೆಸಮೇತರಾಗಿದೆ ಅವರನ್ನು ಕೂಡ ಎತ್ತಿಕೊಂಡು ಮೈಲುಗಟ್ಟಲೆ ದೂರ ಎಸೆದುಬಿಡುವುದು. ಅಥವಾ ಅವರು ಹೊರಬರಲಾರದಷ್ಟು ಡಟ್ಟವಾದ ಮುಂಜಿನ ರಾಶಿಯು ಅವರನ್ನು ಇದ್ದಲ್ಲಿಯೇ ಹೂತು ಬಿಡುವುದು ಅಬಿರುಗಾಳಿಗೆ ತಿಖರದ ದೊಡ್ಡ ದೊಡ್ಡ ಮುಂಜಿನ ಬಂಡೆಗಳು ಒಂದೆ ಬದಿಯಿಂದ ಇನ್ನೊಂದೆಡೆಗೆ ಜಾರಿ ಬೀಳುವುದುಂಟು ಹಾಗೆ ಜಾರಿ ಬೀಳುತ್ತಿರುವ ಬಂಡೆಗಳ ದಾರಿಯಲ್ಲಿ ಸಿಕ್ಕವರು ಅದನ್ನು ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ.

ಕೂಲಿಗಳು

ಈ ಸಂದರ್ಭದಲ್ಲಿ ಪರ್ವತಾರೋಹಿಗಳಿಗೆ ಸಹಾಯ ಮಾಡುವ ಕೂಲಿಗಳನ್ನು ಕುರಿತು ಕೆಲವು ಮಾತುಗಳನ್ನು ಹೇಳಬೇಕಾಗುವುದು. ಆಗಾಗ ಕೆಲವು ಪಂಗಡಗಳೊಡನೆ ಪರ್ವತಾರೋಹಣ ಮಾಡಿದ ಕೂಲಿಗಳು ಕೆಲವರುವರು. ಅವರು ಮೈಯಲ್ಲಿ ಧೃಢಕಾಯರಿದ್ದು ಕಷ್ಟಕಾಲದಲ್ಲಿ ಜೀವನವನ್ನು ಕೊಡಲು ತಯಾರಾಗಿರುವರು. ಅಲ್ಲಲ್ಲಿ ಸ್ಥಾಪಿಸಲ್ಪಡುವ ತಿಬಿರಗಳಿಗೆ ಅಗತ್ಯವಿರುವ ಡೇರೆ ಮತ್ತು ಆಹಾರ ಸಾಮಗ್ರಿಗಳನ್ನು ಈ ಗಿರಿಪ್ರವಾತಗಳ ಮೇಲೆ ಹೊತ್ತುಕೊಂಡು ಹೋಗುವುದು ಸಾಮಾನ್ಯರಿಂದ ಸಾಧ್ಯವಿಲ್ಲ. ಪರ್ವತದ ಬುಡದಲ್ಲಿರುವ ಕಾಡುಗಳನ್ನು ದಾಟಿ ಒಂದಿರಡನೆ ತಿಬಿರಗಳೆಲ್ಲಿಯೇ ಈ ಕೂಲಿಗಳು ಉಳಿದುಕೊಳ್ಳುವುದರಿಂದ ಅವರ ಜೀವಕ್ಕೆ ಹೆಚ್ಚಿನ ಅಪಾಯ ಉಂಟಾಗುವದಿಲ್ಲ.

ಪರ್ವತಾರೋಹಿಗಳ ಸಾಹಸಮಯ ಜೀವನದಲ್ಲಿ ಸದಾ ನೆನೆಪಿನಲ್ಲಿಡಬೇಕಾದ ಒಂದು ವಿಚಾರವೆಂದರೆ ಅವರು ಸಂಗಾತಿಗಳೊಡನೆ ಸಹೋದರಭಾವದಿಂದಿರುವುದು. ಅವರು ಒಬ್ಬರನ್ನೊಬ್ಬರು ಪರಸ್ಪರ ಪ್ರೀತಿಯಿಂದ ಕಂಡು ಒಬ್ಬನ ಜೀವನಕ್ಕಾಗಿ ಇನ್ನೊಬ್ಬನು ಜೀವ ಕೊಡಲು ತಯಾರಿರುವನು. ಅವರಲ್ಲಿ ಸೇವಕರು ಒಡೆಯರೆಂಬ ವ್ಯತ್ಯಾಸವಿಲ್ಲ.

ದಾರ್ಜಲಿಂಗಿನ ನೀಮಾ ತಂಡ್ರುಪ ನೆಂಬ ಭಾರತೀಯ ಕೂಲಿಯು ಹಲವು ಪರ್ವತಾರೋಹಿಗಳ ಒಡನಾಟದಲ್ಲಿದ್ದು ಹಲವರ ಪ್ರಾಣವನ್ನು ಉಳಿಸಿದ್ದಾನೆ. ಇವನು ನಾಲ್ಕು ಬಾರಿ ನಂಗಪರ್ವತಾರೋಹಿಗಳ ಜತೆಯಲ್ಲಿ ಹೋಗಿದ್ದಾನೆ, ಕಾಂಚನಗಂಗವನ್ನೇರುವಲ್ಲಿ ಜತೆಯಲ್ಲಿ ಎರಡು ಸಲ ಹೋಗಿದ್ದಾನೆ.

ಯೂರೋಪು ಮತ್ತು ಅಮೇರಿಕಗಳಲ್ಲಿಯ ಪರ್ವತಾರೋಹಿಗಳು 'ಅಲಾಯ್ನ್ ಕ್ಲಬ್' ನೆಳೆಂಬ ಕ್ಲಬ್ಬುಗಳನ್ನು ಮಾಡಿ ಉತ್ಸಾಹಿ ತರುಣರಿಗೆ ಪರ್ವತಾರೋಹಣದ ಅಭ್ಯಾಸವನ್ನು ಮಾಡಿಸುತ್ತಿದ್ದಾರೆ. ಅದರಂತೆ ಭಾರತದಲ್ಲಿ ಪ್ರೊ ಅಬ್ದುಲ್ ಹಮೀದ್ ಬೇಗ್ ಎಂಬವರು ಒಂದು ಕ್ಲಬ್ಬನ್ನು ತೆರೆದು ಗಢವಾಲ್ ಅಗಸ್ತ್ಯ ತಿಂಗಳಲ್ಲಿ ಕಾಂಗ್ರಾ ಗುಡ್ಡಗಳಿಗೆ ಕೆಲವನ್ನು ಕರೆದುಕೊಂಡು ಹೋಗಿ ಪರ್ವತಾರೋಹಣದ ಅಭ್ಯಾಸವನ್ನು ಮಾಡಲು ಪ್ರಾರಂಭಿಸಿದ್ದಾರೆ. ಈ ಕ್ಲಬ್ಬಿಗೆ ಹಲವು ಕಡೆಗಳಿಂದ ಧನ ಸಹಾಯವು ಸಿಕ್ಕಿದೆ.

ಹೊಸಪೇಟೆ ಜಿಲ್ಲಾ ಮುನ್ಸಿಫರ ಕೋರ್ಟಿನಲ್ಲಿ

Sc. 232/45 E. P. 14/50.

ಕೆ. ವೆಂಕಪ್ಪ —ಅರ್ಜಿದಾರ

ಕರ್ಕಿಸಳ್ಳಿ ಅಬ್ದುಲ್ ಖಾದರ್ ಸಾಬ್ } ರೆಸ್ಪಾಂಡೆಂಟ್

ಮೇಲ್ಕಾಣಿಸಿದ ಇ. ಪಿ. ಯು..... .....ಕ್ಕೆ ನಿಮ್ಮ ಹಾಜರಿಗಾಗಿ ವಾರೆಂಟ್ ಹೊರಡಿಸಲಾಗಿದೆ ಅಂದು ನೀವು ಸದ್ರಿ ಕೋರ್ಟಿಗೆ ಪ್ರಾತಃಕಾಲ 11 ಗಂಟೆಗೆ ಹಾಜರಾಗಿ ನಿಮ್ಮ ಆಕ್ಷೇಪಣೆಗಳನ್ನು ತಿಳಿಸದಿದ್ದರೆ, ಈ ವಿಷಯವು ಏಕಪಕ್ಷದಿಂದ ತೀರ್ಮಾನಿಸಲ್ಪಡುವುದೆಂದು ಈ ಮೂಲಕ ತಿಳಿಸಲಾಗಿದೆ.

ಎಂ. ರಂಗನಾಥಾಚಾರ್
ಅರ್ಜಿದಾರರ ವಕೀಲ.

ಬಳ್ಳಾರಿ ಜಿಲ್ಲಾ ಕಲೆಕ್ಟರವರಲ್ಲಿ ಜಿಲ್ಲಾ ಹಿಂದ್ ಕಿಸಾನ್ ಪಂಚಾಯತ್ ಅಧ್ಯಕ್ಷರು

ದಿ. ೧೬-೫-೫೦ ರಲ್ಲಿ ಜಿ. ಹಿಂ. ಕಿ. ಪಂ. ಅಧ್ಯಕ್ಷ ಸ್ವಾಮಿಜಿಯವರು ಜಿಲ್ಲಾ ಕಲೆಕ್ಟರ್ ಶ್ರೀ ಜಿ ರಾಮಿರೆಡ್ಡಿಯವರನ್ನು ಕೂಡ್ಲಿಗೆಯಲ್ಲಿ ಭೆಟ್ಟಿಆಗಿ ಹೊಸಪೇಟೆ ತಾಲೂಕಿನ ಚಿಲಕನಹಟ್ಟಿ ತಾಳಿ ಬಸ್ಸಾಪುರ ತಾಂಡಾ ನಾಗಲಾಪುರ ಗ್ರಾಮಗಳ ಕಾಳು ಎತ್ತುವಿಕೆಯಲ್ಲಿ ಸೀದಾಧಿಕಾರಿಗಳಿಂದ ನಡೆದ ಲೋಪದೋಷಗಳನ್ನು ಗಂಭೀರವಾಗಿ ಲಿಖಿತವಾಗಿ ತಿಳಿಸಿದ್ದಾರೆಂದು ಶ್ರೀಕರು ಕಳ್ಳಪೇಟೆಯಿಂದ ಕಾಳು ಕೊಂಡು ಕೊಡುತ್ತಿದ್ದಾರೆಂಬಂಶವನ್ನೂ ಕಲೆಕ್ಟರರ ಅವಗಾಹನೆಗೆ ತಂದು ಕೊಟ್ಟರು ಕಲೆಕ್ಟರರು ಸಾವಧಾನದಿಂದ ಕೇಳಿ ಅಧ್ಯಕ್ಷರ ಹೇಳಿಕೆಗಳನ್ನು ಬರಕೊಂಡು ಲೋಪದೋಷಗಳನ್ನು ಸರಿಪಡಿಸುವುದಾಗಿ ಭರವಸೆಯನ್ನಿತ್ತರು.

ಹಿಂದು - ಮುಸಲ್ಮಾನ ಸಮಸ್ಯೆ

[ಹರಿಜನದ ಲೇಖ]

ಇತ್ತೀಚೆಗೆ ಒಪ್ಪಂದವಾದ ಬಗ್ಗೆ ಎಂದೆಂದಿಗೂ ಅಲ್ಲದಿದ್ದರೂ ಇರ್ಕಡೆಗಳಲ್ಲಿಯೂ ಆದರ ಪರಿಣಾಮಗಳನ್ನು ನಿರೀಕ್ಷಿಸಲು ಸಾಕಾಗುವಷ್ಟು ಅವಧಿಯು ವರೆಗಾದರೂ ಯುದ್ಧಸದೃಶತೆಗೆ ಪೋಷಣೆ ದೊರೆಯುವುದು ಕಡಿಮೆಯಾದೀತೆಂದು ನನಗನಿಸಿತು. ದುರ್ದೈವದಿಂದ ಅಂಥ ಚಿಹ್ನೆಗಳು ಸಾಕಷ್ಟು ಕಂಡುಬರುತ್ತಿಲ್ಲ. ತುರಿಸಿಕೊಂಡರೆ ಸಮಾಧಾನವಾದೀತೆಂಬ ಅರ್ಥರಹಿತ ಆಸೆಯಿಂದ ತುರಿಸಿಕೊಳ್ಳುವ ಅದಮ್ಯ ಇಚ್ಛೆಯನ್ನು ಉಂಟುಮಾಡುವ ಕಜ್ಜಿಯಂತೆ ನಮ್ಮಲ್ಲಿಯ ಒಂದಲ್ಲ ಒಂದು ಕಡೆಯ ಜನರಿಗೆ ಯುದ್ಧ ಬೇಕೆಂಬ ಕಾತರತೆ ಸಾಂಕ್ರಾಮಿಕವಾಗಿ ಅಂಟಿಕೊಂಡಂತೆ ತೋರುತ್ತದೆ. ವಿಶೇಷತಃ ಬಂಗಾಲವು ಅದರಿಂದ ಬಹಳವಾಗಿ ವ್ಯಸನಗ್ರಸ್ತವಾದಂತೆ ತೋರುತ್ತದೆ. ಸೌಮ್ಯ ಭಾಷಿತವನ್ನು ಕೇಳಿದರೆ ಅಪಮಾನವಾಗದು. ಏಕೆಂದರೆ ಬಂಗಾಲದ ಜೊತೆಗಿನವರು ಹಾಗೆ ಮೇಲ್ನುಡಿಗಳನ್ನಾಡುವುದು ತನ್ನ ಜನಗಳ ಕಷ್ಟದಲ್ಲಿ ಅವರಿಗೆ ಸಹಾನುಭೂತಿಯಿಲ್ಲ ಎಂಬುದನ್ನು ತೋರಿಸುವುದು ಎಂದು ಅದು ತಿಳಿಯುತ್ತದೆ. ಅದು ಬಹಳ ದುರ್ದೈವದ ಸಂಗತಿ. ಕ್ರೋಧಾದ್ಭವತಿ ಸಮ್ಮೋಹಃ (ಸಿಟ್ಟಿನಿಂದ ವಿಚಾರಶೂನ್ಯತೆಯುಂಟಾಗುತ್ತದೆ) ಎನ್ನುತ್ತದೆ ಭಗವದ್ಗೀತೆ. ಮನಸ್ಸಿನ ಆ ಸ್ಥಿತಿಯಲ್ಲಿ ಯೋಗ್ಯವಿಚಾರ ಹಾರೋಪಾಯವನ್ನು ಕಂಡು ಹಿಡಿಯಲು ಸಾಧ್ಯವಾಗದು.

ಈ ಜಾತೀಯ ಉತ್ಪಾತಗಳಲ್ಲಿ ಕಲ್ಪನಾಗಮ್ಯವಾದ ಎಲ್ಲ ಬಗೆಗಳಿಂದಲೂ ಕಷ್ಟಪಟ್ಟವರು ಹಿಂದುಗಳೇ, ಅವರ ವರ್ತನೆ ನಿಃಶೇಷವಾಗಿ ನಿರ್ದುಷ್ಟವಾದುದು ಎಂದು ನಾವು ಸಾಮಾನ್ಯವಾಗಿ ಕಲ್ಪಿಸಿಕೊಂಡೆವೆಂಬುದು ಸ್ಪಷ್ಟ. ಕೊಲ್ಲುವುದು, ಸೂರೆಗೈಯುವುದು, ಹುಡುಗಿಯರನ್ನು ಬಲಾತ್ಕರಿಸುವುದು ಮತ್ತು ಹೊತ್ತುಕೊಂಡು ಹೋಗುವುದು, ಅಧಿಕಾರಿಗಳು ಅನ್ಯಾಯವಾಗಿ ನಡೆಸಿಕೊಂಡು ಮತ್ತು ದರ್ಪದಿಂದ ಕಾರಭಾರ ಮಾಡುವುದು ಮುಂತಾದವು ಸಂಭವಿಸಿದರೆ ಅವನ್ನೆಲ್ಲ ಮಾಡಿದವರು ಪಾಕಿಸ್ತಾನಿಗಳು ಅಥವಾ ಭಾರತದಲ್ಲಿಯ ಮುಸಲ್ಮಾನರು ಎಂದೂ ಹಿಂದುಗಳೇನಾದರು ಅಡ್ಡಬಿದ್ದಾಗಿ ಹಿಡಿದರೆ ಆ ಕಡೆಯವರು ಪ್ರೊಚ್ಚಗೆಬ್ಬಿಸಿದ್ದರಿಂದಲೇ ಎಂದೂ ಯಾವಾಗಲೂ ನಂಬಲಿಚ್ಛಿಸಬಹುದು. ಹೀಗೆ ಕಲ್ಪಿಸಿಕೊಳ್ಳುವುದು ನಿರಾಧಾರವಾದುದಷ್ಟೇ ಅಲ್ಲದೆ ಅಸತ್ಯವಾದುದೂ ಆಗಿದೆ. ಬಂಗಾಲ ಮತ್ತು ಉತ್ತರ ಪ್ರದೇಶಗಳಿಂದ ಯಾವುದೇ ಪ್ರಾಂತಗಳಲ್ಲಿ ಇತ್ತೀಚೆಗೆ ನಡೆದ ಘಟನೆಗಳೆಲ್ಲಂತೂ ಅದು ವಿಶೇಷತಃ ಅಸತ್ಯವಾಗಿದೆ. ಇವನ್ನು ಹೇಳಿದರೆ ಕಣ್ಣು ಕೆಂಪು ಮಾಡುವುದರಿಂದ ಏನೂ ಉಪಯೋಗವಿಲ್ಲ. ಮುಸಲ್ಮಾನರು ಎಷ್ಟು ದುಷ್ಟರೆಂದು ಅಭಿಪ್ರಾಯಪಡಲಾಗುತ್ತಿದ್ದರೂ ಹಿಂದುಗಳೂ ಕಷ್ಟೇ ದುಷ್ಟರಾಗಬಲ್ಲರು ಸುತ್ತು ಕೆಲ ರಾಜ್ಯಗಳಲ್ಲಿ ಮುಸಲ್ಮಾನರು ಪೂರ್ವಬಂಗಾಲದಲ್ಲಿ ಹಿಂದುಗಳೆಷ್ಟು ಭಯಗ್ರಸ್ತರಾಗಿದ್ದಾರೆಂದು ವರದಿ ನೂಡಲಾಗಿದೆಯೋ ಅಷ್ಟೇ ಭಯಗ್ರಸ್ತರಾಗಿದ್ದಾರೆ.

ನಮ್ಮ ಮುಸಲ್ಮಾನ ದೇಶಬಾಂಧವರಿಗಿಂತ ನಾವೇ ಹೆಚ್ಚು ದೈವಭಕ್ತಿಯುಳ್ಳವರೆಂಬ ಬಗ್ಗೆ ನಮಗೆ ಖಾತ್ರಿಯಿದೆಯೇ? ದೇಶದ ನಾನಾ ವರ್ಗಗಳಿಂದ ಹಿಂದು ಮುಸಲ್ಮಾನರನ್ನು ಸಮ ಸಂಖ್ಯೆಯಲ್ಲಿ ಎತ್ತಿ ತೆಗೆದುಕೊಂಡರೆ ಅವರಲ್ಲಿ ಒಳ್ಳೆಯ ಸದಯಹೃದಯದ, ಉದಾರತೆಯ ವಿಶ್ವಾಸ್ಯರಾದ ಮುಸಲ್ಮಾನರ ಸಂಖ್ಯೆಯೆಂದೂ ಅಂಥ ಹಿಂದುಗಳ ಸಂಖ್ಯೆಗಿಂತ ಕಡಿಮೆಯೆನಿಸದು ಎಂದು ನಾನು ಭಾವಿಸುತ್ತೇನೆ. ಅಷ್ಟೇ ಅಲ್ಲ, ಮುಸಲ್ಮಾನನಲ್ಲಿ ಉಚ್ಚ ನೀಚವೆಂಬ ಜಾತೀಯ ಕಲ್ಪನೆಯಿಲ್ಲದುದರಿಂದ ಅವನು ಒಳ್ಳೆಯ ಹಿಂದುವಿಗಿಂತ ಎಷ್ಟೋ ಪೇಳೆ ತನ್ನ ಹೃದಯವೈಶಾಲ್ಯವನ್ನು ಹೆಚ್ಚು ಘನವಾದ ರೂಪದಲ್ಲಿ ಪ್ರಕಟಪಡಿಸುವನು. ಇದನ್ನು ನಾವು ಅರ್ಜವದಿಂದ ಅರಿತು ಒಪ್ಪಿಕೊಳ್ಳೋಣ. ಆದರಿಂದ ನಮಗೆ ಒಳ್ಳೆಯದಾಗುವುದು. ಅವರ ದೋಷಗಳನ್ನೆಂತೋ ಗುಣಗಳನ್ನೂ ಅಂತೆಯೇ ಅರಿತು ಮಾನ್ಯ ಮಾಡತೊಡಗುವುದರಿಂದ ಮೂಲಕ ನಾವು ಅವರ ಬಗ್ಗೆ ನಮಗಿರುವ ಮನೋಭಾವವನ್ನು ಬದಲಿಸಿದ್ದೇ ಆದರೆ ಎಂಥ ವ್ಯಾಪಾರಿಕ ಪ್ರಯತ್ನವನ್ನೇ ಮಾಡಿದರೂ ಹಿಂದುಗಳಿಗೆ ತೋರಿಸಲು ಸಾಧ್ಯವಾಗುವುದಕ್ಕಿಂತ ಹೆಚ್ಚಿನ ಔದಾರ್ಯವನ್ನು ಮುಸಲ್ಮಾನರು ತೋರಿಸಬಲ್ಲರೆಂದು ನನಗೆ ಭಾಸವಾಗುತ್ತದೆ. ಬೇರ್ಪಾಡುವಸು, ಹೊರಗುಳಿಸುವುದು, ಪ್ರತ್ಯೇಕೀಕರಣ, ಅನಂತದವರೆಗೆ ವಿಭಜನಾನುವಿಭಜನೆಗಳನ್ನು ನೂಡುವುದು ಇಲ್ಲವೆ ಮುಖ್ಯವಾಗಿ ಹಿಂದು ಜೀವನರೀತಿ ಉದ್ಯೋಗ, ಭಾಷೆ, ವೇಷ ಅಥವಾ ಆಹಾರ (ಸಸ್ಯಾಹಾರವೇ ಆದರೂ) ಮುಂತಾದ ಅತಿಚಿಕ್ಕ ವ್ಯಾವರ್ತಕ ಗುಣಕಂಡರೂ ಸಾಕು, ಪ್ರತ್ಯೇಕತೆಯಿರಬೇಕನ್ನುತ್ತೇವೆ ನಾವು ಹಿಂದುಗಳು ಐಕ್ಯವರಿರಾದ ಗಳಿಗೆಯಲ್ಲಿ ಉಳಿದವರು ಅಗಲೇ ಅದಕ್ಕೆ ಸಿದ್ಧರಾಗಿದ್ದರೆಂಬುದು ಅವರಿಗೆ ಗೊತ್ತಾಗಿ ಬಿಡುವಷ್ಟರಲ್ಲಿ ಹಿಂದುಗಳು ಮಿಕ್ಕವರೊಡನೆ ಒಂದುಗೂಡುವ ಆಲೋಚನೆ ನೂಡುವುದರೊಳಗಾಗಿ ತಮ್ಮೊಳಗೇ ಕಾವು ಒಕ್ಕಟ್ಟಾಗಬೇಕು ಅಥವಾ ಮುಸಲ್ಮಾನರು ದೂರ ಉಳಿದರೆ ಅವರು ಒಂದಾಗುವರು ಎಂದು ಮುಂತಾಗಿ ಆಲೋಚಿಸುವುದು ತಪ್ಪು ಐಕ್ಯಭಾವನೆಯು ಹಾಗೆ ಕಾರ್ಯಕಾರಿಯಾಗದು. ಅದು ಎಷ್ಟು ಚುರುಕಿನಿಂದ ಜಾಗೃತಗೊಳಿಸಲ್ಪಟ್ಟಿದೆಯೋ ಅಷ್ಟೇ ಚುರುಕಾಗಿ ಒಂದೇ ಕಾಲದಲ್ಲಿ ಅದು ಜೀವನದ ಎಲ್ಲ ಕ್ಷೇತ್ರಗಳಲ್ಲಿಯೂ ಕಾರ್ಯಕಾರಿಯಾಗುವುದು.

— ಕ. ಭ. ಮುನ್ಶಿವಾಲಾ

ವರ್ಧಾ ೩೦-೪-೫೦

ಬಳ್ಳಾರಿ ವೀರಶೈವ ಕಾಲೇಜು

ಮನ್ನಣೆಯ ಆಜ್ಞೆಯು ದೊರೆತಿದ್ದು ಜೂಲೈ ತಿಂಗಳಲ್ಲಿ ಜ್ಯೂನಿಯರ್ ಇಂಟರ್ ವರ್ಗಕ್ಕೆ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಲಾಗುವುದು ಕಟ್ಟಡಕ್ಕೆ ಸರ್ಕಾರದ ಗ್ರಾಂಟು ದೊರೆತಿದ್ದು, ಕಟ್ಟಿಸುವ ಯೋಜನೆಯು ತೀವ್ರದಲ್ಲಿ ಪುರೋಗತಿಯಲ್ಲಿ ಬರಲಿದೆ. ಇದು ಬಳ್ಳಾರಿ ಜಿಲ್ಲೆಯವರಿಗೆ ಶುಭ ಸೂಚನೆಯಾಗಿದ್ದು ಈ ದಿಶೆಯಲ್ಲಿ ಶ್ರದ್ಧೆಯಿಂದ ಶ್ರಮಿಸಿದ ಶ್ರೀ ವೈ. ಮಹಾಬಲೇಶ್ವರಪ್ಪನವರಿಗೂ ಅವರ ಸಹಯೋಗಿಗಳಿಗೂ ನಮ್ಮ ಧನ್ಯವಾದಗಳನ್ನರ್ಪಿಸುವೆವು.

NOT AGAINST KANNADA

Sir

My attention has been drawn to articles published in the Kanada weekly of Bellary "RYTA" Dated 9-4-50 and 30-4-50 under prominent head lines imputing to the President District Board (Kannadiga) non co-opration and unhelpful attitude with the Vice-President (also Kannadiga) in the execution of the letters alleged earnest policy in the District Board's administration to serve the cause of the Kannada language in the District. Indefinite statements are made in the articles that I as the President, District Board (though a Kannadiga elected by the vote of Kannadiga manjority) have stood in the way of the Vice-President (Sri B. Rangana Gowd) to start new Board schools and that I have unnecessarily transferred several Kannada teachers from Kannada schools It is further stated that I am not only not helpful or co-operating with the vice President, in his efforts to promote the cause of the "KANNADIGAS" but that on the contrary all conveniences are being afforded to "ANDHRAS" and that the Vice-President's suggestion to me to transfer from the Education Section subordinate officers, who under the very nose of the Kannadiga President and Vice-President are enemies of Kannada have not been heeded to by me As he is thus prevented from serving the dear cause of "KANNADA" he has decided to resign his position, The Karnataka Ekeekarana Sangha of the Bellary District of which Sri Gadilingana Gowd is the President is said to have passed a resolution on 29-3-50 published in the "RYTA" that on account of the alleged administrative acts in the Board's management which endanger the Kannada language, the Sangha has sounded a warning of its intention (if the present state of things continue) to give a mandate to the Vice-President, and the president to resign their respective seats, on account of their failure to adequately serve the cause of the Kannada language by acting contrary to it in the day today administration of the Board.

I regret to note that the District Board Vice-President and Karnataka Ekikarana Sangha President have rushed to the press with hasty conclusions not based upon correct facts, but imaginary incidents, evindently to gain cheap popularity and to bring slur on good administration by generalised and magnified statements to incite the average person to passionate thinking in terms of "KANNADA IN DANGER" The words used as the headings are "KANNADIGAS TREACHERY TO KANNADA-THE BELLARY DISTRICT BOARD VICE PRESIDENT'S PLEA FOR RESIGNATION. The Lamp of Kanada is declining" I am afraid that such acts will lead to dissaffection in a large section of the public and disturb peace and order, which the press ought not to indulge in. Let not the Editor become an instrument for such malicious propaganda.

I trust that my correct observation of the matter under review will ally public discontent.

Y. MAHABALESWARAPPA,
President District Board, BELLARY.

ಸ್ಥಾನಬದ್ಧತೆ - ಕೇಂದ್ರದ ಕಾನೂನು ನ್ಯಾಯ

ನವದೆಹಲಿಯು ಸುಪ್ರೀಂಕೋರ್ಟಿನವರು ಅನುಮೋದನದಮೇಲೆ ಸ್ಥಾನಬದ್ಧತೆಯು ಲ್ಲಿರಿಸುವ ಕೇಂದ್ರದ ಕಾನೂನು ನ್ಯಾಯಬದ್ಧವೆಂದು ಸಾರಿದೆ ಕಾನೂನಿನ 14 ನೆಯ ಕಾಲಂ ನ್ಯಾಯಸಮ್ಮತವಲ್ಲೆಂದು ಕೋರ್ಟು ನಿಶ್ಚಯಿಸಿತು. ಮದ್ರಾಸ್ ಕಮ್ಯೂನಿಸ್ಟ ಸ್ಥಾನಬದ್ಧ ಎ. ಕೆ. ಗೋಪಾಲನ್‌ರ ಅರ್ಜಿಯು ಹೊಡೆದು ಹಾಕಲ್ಪಟ್ಟಿತು.

ಕಾಮಲಾಪುರದ ಹೋಟೇಲದವನಿಗೆ ದಂಡ

ಹೊಸಪೇಟೆ ತಾಲೂಕು ಕಾಮಲಾಪುರದ ಹೋಟೇಲವನು ಫಲಾಹಾರಕ್ಕಾಗಿ ಒಳಗೆಬಂದ ಹರಿಜನನೊಬ್ಬನನ್ನು ಹೊಡೆದಟ್ಟಿದನೆಂಬ ಅಪರಾಧದಮೇಲೆ 135 ರೂ. ದಂಡಕ್ಕೊಳಗಾದನು.

ಬಳ್ಳಾರಿ ಜಿಲ್ಲಾ ಬೋರ್ಡು

ಶ್ರೀ ಸೈ. ಮಹಾಬಲೇಶ್ವರಪ್ಪನವರಧ್ಯಕ್ಷತೆಯಲ್ಲಿ ಕಳೆದ 15 ನೆಯ ತಾರೀಖು ಸಮಾವೇಶವಾದ ಸಭೆಯಲ್ಲಿ ಮದ್ರಾಸ್ ಗವರ್ನರರು ಬಳ್ಳಾರಿಯನ್ನು ಸಂದರ್ಶಿಸಿದಾಗ ಜಿಲ್ಲಾ ಬೋರ್ಡು ವತಿಯಿಂದ ಮಾನಪತ್ರವನ್ನರ್ಪಿಸಲು ನಿಶ್ಚಯವಾಯಿತು ಬಳ್ಳಾರಿಯಲ್ಲಿರುವ ಜಿಲ್ಲಾಬೋರ್ಡು ನವಳಿಗರಿಗೆ ಮನೆಬಾಡಿಗೆಗಾಗಿ ಹೆಚ್ಚಿಗೆ ಅಲೋರ್ಯನ್ಸ್ ಕೊಡಬೇಕೆಂದು ಜಿಲ್ಲೆಯ ಹತ್ತು ಹಳ್ಳಿಗಳಲ್ಲಿ ಸ್ಪಸೂತಿ ಕೇಂದ್ರಗಳನ್ನು ಸ್ಥಾಪಿಸಲು ತೀರ್ಮಾನವಾಯಿತು. ಇದಕ್ಕಾಗಿ ಸರ್ಕಾರದವರು ಶೇಕಡ 75 ಗ್ರಾಂಟು ಕೊಡಲು ಕೇಳಬೇಕೆಂದಾಯಿತು. ಕೋಸಗಿಯಲ್ಲಿ ಶ್ರೀ ಶಾಲಿಪರಮೇಶ್ವರಪ್ಪನವರು ಕಟ್ಟಿಸುತ್ತಿರುವ ಛತ್ರವನ್ನು ಜಿಲ್ಲಾ ಬೋರ್ಡು ಆಡಳಿತಕ್ಕೆ ತೆಗೆದುಕೊಳ್ಳಬೇಕೆಂಬ ಬೇಡಿಕೆಯನ್ನು ಮನ್ನಿಸಲಾಯಿತು. ಸರ್ಕಾರದವರು 40 ಸಾವಿರ ರೂ. ಹಣ ಸಹಾಯ ಕೊಡುವುದಾದರೆ, ಸೊಂಡೂರಿನ ವಿದ್ಯಾಮಂದಿರ ಹೈಸ್ಕೂಲನ್ನು ತಮ್ಮ ವ್ಯವಸ್ಥೆಗೆ ತೆಗೆದುಕೊಳ್ಳುವ ನಿಶ್ಚಯವಾಯಿತು.

ಮದ್ರಾಸ್ ಅಸೆಂಬ್ಲಿ

ಜಿಲ್ಲಾವಾರ ಸ್ಥಾನಗಳ ಹಂಚಿಕೆ. —

		ಜನರಲ್	ಹರಿಜನ	ಗುಡ್ಡಗಾಡು ಜನಾಂಗ
1	ವಿಶಾಖಪಟ್ಟಣ	24	3	3
2	ಪೂರ್ವ ಗೋದಾವರಿ	12	3	1
3	ಪಶ್ಚಿಮ ಗೋದಾವರಿ	9	2	0
4	ಕೃಷ್ಣ	10	2	
5	ಗುಂಟೂರು	17	1	
6	ನೆಲ್ಲೂರು	11	2	
7	ಕರ್ನೂಲು	8	1	
8	ಕಡಪ	7	1	
9	ಅನಂತಪುರ	8	1	
10	ಬಳ್ಳಾರಿ	6	1	
11	ಚಿತ್ತೂರು	10	10	
12	ಮದ್ರಾಸ್	7	1	
13	ಚಿಂಗಲ್‌ಪಟ್	9	4	
14	ಉತ್ತರ ಆರ್ಕಾಟು	15	5	
15	ಸೇಲಂ	18	3	
16	ಕೋಯಂಬತ್ತೂರು	16	4	
17	ದಕ್ಷಿಣ ಆರ್ಕಾಟು	14	6	
18	ತಂಜಾವೂರು	14	5	
19	ತಿರುಶಿರಪಲ್ಲಿ	16	4	
20	ಮಧುರೈ	15	3	
21	ರಾಮನಾಂದಪುರಂ	13	2	
22	ತಿರುನಲ್ವೇಲಿ	14	3	
23	ನೀಲಗಿರಿ	2	0	
24	ದ. ಕನ್ನಡ	9	1	
25	ಮಲಬಾರ್	24	3-1	

ಬರುವ ವರ್ಷದ ಚುನಾವಣೆಗಳಲ್ಲಿ ಮದ್ರಾಸ್ ಸ್ಟೇಟ್ ಅಸೆಂಬ್ಲಿಗೆ 308 ಜನರಲ್ ಸ್ಥಾನಗಳು 62 ಹರಿಜನಸ್ಥಾನಗಳು 5 ಗುಡ್ಡಗಾಡಿನ ಜನಾಂಗಕ್ಕೆ ಒಂದುಲಕ್ಷ 46 ಸಾವಿರ ಜನರಿಗೆ ಒಂದು ಸ್ಥಾನದಂತೆ ಹೀಗೆ 376 ಸ್ಥಾನಗಳನ್ನು ಹಂಚಿರುವರೆಂದೂ ಕ್ಷೇತ್ರ ನಿರ್ದೇಶವು ತಿರ್ಪ್ಪಡಿಯಲ್ಲೇ ಆಗಲಿದೆಯೆಂದೂ ಅರ್ಥಿಕ ಮಂತ್ರಿ ಗೋಪಾಲರೆಡ್ಡಿಯವರು ಹೇಳಿದರು

ಸತ್ಯವಂತ್-ಅರವಿಂದರ ಬಂಧನ

ಬಳ್ಳಾರಿಯ ವಕೀಲರಾದ ಶ್ರೀ ಸತ್ಯವಂತರಾವ್ ಮತ್ತು ಅವರ ಮಗ ಅರವಿಂದ ಇವರನ್ನು 19-5-'50 ಶುಕ್ರವಾರ ಪೋಲೀಸರು ಬಂಧಿಸಿದರು. ಸಾಯಂಕಾಲ ಸಬ್ ಮ್ಯಾಜಿಸ್ಟೇಟರ ಕೋರ್ಟಿನಲ್ಲಿ ಹಾಜರಾಪಡಿಸಿದಾಗ ಬಿಡುಗಡೆಯಾಯಿತು. ಅವರು ಅಕ್ಷೇಪಕರವಾದ ಸಾಹಿತ್ಯವನ್ನು ಬಚ್ಚಿಕೊಂಡಿದ್ದರೆಂದೂ, ಸರ್ಕಾರದ ಕಾಯ್ದೆಯನ್ವಯ ಅವರುಗಳ ಮೇಲೆ ಕ್ರಮ ತಗೆದುಕೊಳ್ಳಲಾಯ್ತೆಂದು ತಿಳಿದು ಬಂದಿದೆ.

— —

ಸರ್ದಾರ ಪಟೇಲರು

ಕರ್ನಾಟಕ ಕಾಂಗ್ರೆಸ್ ಕಾರ್ಯಕರ್ತರಿಗೆ ಉಪದೇಶ.

ಶಿಸ್ತು ಸಂಘಟನೆಗಳಿಂದ ಕಾಂಗ್ರೆಸ್ ಸಂಸ್ಥೆಯ ಬಲಸಂವರ್ಧನ ಮಾಡಿರಿ. ಮೈಸೂರಿಗೆ ಪ್ರತ್ಯೇಕ ಕಾಂಗ್ರೆಸ್ ಕೊಟ್ಟದ್ದರಿಂದ ಕರ್ನಾಟಕ ಏಕೀಕರಣಕ್ಕೆ ಕುಂದು ಬಾರದು. ಕರ್ನಾಟಕಕ್ಕೆ ಕಪ್ಪಗಳಿವೆಯೆಂಬುದು ಗೊತ್ತು ಅದರೂ ಅವುಗಳನ್ನು ಶಾಂತಿಯಿಂದ ಬಗೆಹರಿಸಿಕೊಳ್ಳಬೇಕು. ಎಂದು ಕರ್ನಾಟಕದ ಕಡೆಯಿಂದ ಹೋದ 50 ಕಾಂಗ್ರೆಸ್ ಕಾರ್ಯಕರ್ತರಿಗೆ ಕಾರ್ವಾರ ಬಂದರದಲ್ಲಿ ಡೆಲ್ಲಿ ಹದಗದ ಮೇಲೆಯೇ ಸರ್ದಾರ ಪಟೇಲರು ಉಪದೇಶವಿತ್ತರು ಕರ್ನಾಟಕದ ವರವಾಗಿದಾತಾರರು ಹೇಳಿಕೆಯನ್ನು ಮಂಡಿಸಿದರು.

ಹಿಂದೀ ಮಹಾ ವಿದ್ಯಾಲಯ, ಬಳ್ಳಾರಿ,

[1931 ಸ್ಥಾಪಿತ. ಬಳ್ಳಾರಿ ಜಿಲ್ಲಾ ಹಿಂದೀ ಪ್ರೇಮಿಮಂಡಲದಾಶ್ರಯದಲ್ಲಿ, ರಿಜಿಸ್ಟರ್ಡ.]

ಮದ್ರಾಸ್ ಸರ್ಕಾರದಿಂದ ಮಾನ್ಯತೆ ಇದೆ.

ಪ್ರಾರಂಭಿಕ ವರ್ಗಗಳಿಗೆ ಮಾಸಿಕ 3/- ಶುಲ್ಕ — ಉನ್ನತ ವರ್ಗಗಳಿಗೆ ಮಾಸಿಕ 5/- ಶುಲ್ಕ

ಪಾರ್ವಲಾ ಹೈಸ್ಕೂಲ್ ಕಟ್ಟಡದಲ್ಲಿ ಪ್ರಾತಃಕಾಲ—ಸಾಯಂಕಾಲ ಹಿಂದೀ ಕಾಲೇಜ್‌ದ ವರ್ಗಗಳು ನಡೆಯುತ್ತಿವೆ ಪ್ರವೇಶ — ವಿಶಾರದ ವರ್ಗಗಳಲ್ಲದೆ ಪ್ರಾರಂಭಿಕ ವರ್ಗಗಳಿಗೂ ಪ್ರವೇಶವಿದೆ. ವರ್ಗಗಳಿಗೆ ಸಂಬಂಧಿಸಿದ ಪಾಠ್ಯ ಪುಸ್ತಕಗಳು ವಿದ್ಯಾಲಯದಲ್ಲಿ ದೊರೆಯುತ್ತವೆ. ಒಳ್ಳೆಯ ಪುಸ್ತಕಭಂಡಾರವಿದೆ. ಶ್ರೇಷ್ಠ ವಾರಪತ್ರಿಕೆ, ಮಾಸಪತ್ರಿಕೆಗಳು ಲಭ್ಯ ಇತರ ವಿವರಗಳಿಗೆ ಸ್ವಾಂಪಿಟ್ಟು ಬರೆಯಿರಿ.

ಪ್ರಿನ್ಸಿಪಾಲ್.

NAVA BHARAT BELLARY. (Reg. No. M. 4746)

ನವಭಾರತ ಬಳ್ಳಾರಿ.

(Nationalist Weekly)

ಚಂದಾವರಗಳು. Subscription Rates.

ವರ್ಷಕ್ಕೆ 5—0—0	One Year 5—0—0
6 ತಿಂಗಳಿಗೆ 3—0—0	Six months 3—0—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.	Subscription will not be accepted for less than 6 months

22—5—50

To

Sri.....

.....

.....

Printed at Krishna Printing Works, Edited & Published by T.B. Keshaav Rao.

JAI- HIND

ನಿಷ್ಠಾವಂತ

ಬಳ್ಳಾರಿಯ
ಉಜ್ವಲ ರಾಷ್ಟ್ರೀಯ ವಾರಪತ್ರಿಕೆ
*
ಉತ್ತಿಷ್ಠತ ! ಜಾಗೃತ !!
ಪ್ರಾಪ್ಯವರಾನ್ನಿ ಬೋಧತ !!!
*
ಸಂಪಾದಕ ಮತ್ತು ಪ್ರಕಾಶಕರು:-
ಟಿ. ಬಿ. ಕೇಶವರಾವ್

ವರ್ಷ ೧೫ | ಸೋಮವಾರ ೨೯ ಮೇ ೧೯೫೦ | ಸಂಚಿಕೆ ೯

ಸೊಸೈಟಿಯು ಮೊ.

ಅಥವಾ

ಸುಲಭ ಸಮಾಜವಾದ !!!

ವ್ಯಕ್ತಿ ಸ್ವಾತಂತ್ರ್ಯ ಮತ್ತು ಬಂಡವಲಶಾಹಿ !!!!

ಧನವನ್ನು ನಿರ್ಮಿಸುವ ಸಾಧನಗಳ ಮೇಲಿದ್ದ ಖಾಸಗಿ ಒಡೆತನವನ್ನು ರದ್ದು ಗೊಳಿಸಬೇಕು. ಮತ್ತು ಆ ಸಾಧನಗಳ ಒಡೆತನವು ಸಮಾಜದ್ದಾಗಬೇಕು ಎಂದು ಸೋಷಿಯಲಿಷ್ಟರು ಹೇಳುವ ಮಾತಿನಿಂದ ಬಂಡವಾಲಶಾಹಿಯವರು ನಿರ್ಮಿಸಿದ ವ್ಯಕ್ತಿ ಸ್ವಾತಂತ್ರ್ಯಕ್ಕೆ ನಷ್ಟ ಉಂಟಾಗುತ್ತದೆ; ಇದಕ್ಕೆ ಉಪಾಯ ಯಾವುದೆಂದು ಕೊಂಡ ಅಲ್ಪೀಸ ಎತ್ತಲಾಗುತ್ತದೆ. ಬಂಡವಾಲಶಾಹಿ ಬರುವ ಮೊದಲು ಮಾನವ ಸಮಾಜವು ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ದೃಷ್ಟಿಯಿಂದ ತೀರ ಪರತಂತ್ರವಿತ್ತು. ಜೀವೆ ಉದ್ಯೋಗಗಳ ಸಂಘಗಳದ್ದು ಆಯಾ ಸಂಘದ ಜನರಿಗೆ ಬೇರೆ ಉದ್ಯೋಗ ಕೈಕೊಳ್ಳಲು ಕಾಯಿದೆಯಿಂದ ಅಡ್ಡಿ ಆತಂಕಗಳಿದ್ದವು ಒಕ್ಕಲಿಗರು ವಂಶ ಪರಂಪರೆಯಿಂದ ಪರದಾರೆ ಜಮೀನುದಾರರ ಹೊಲಗಳಿಗೆ ಹೊಂದಿಕೊಂಡವರಾಗಿದ್ದರು. ಸರದಾರರಾಗಿ ವಂಶ ಪರಂಪರೆಯಿಂದ ಸೈನ್ಯದಲ್ಲಿ ನೌಕರಿಮಾಡಿ ಆಗಾಗ ಯುದ್ಧಗಳಲ್ಲಿ ಪ್ರಾಣಾರ್ಪಣ ಮಾಡಬೇಕಾಗುತ್ತಿತ್ತು. ಸರ್ವಸೈನ್ಯಾಧಿಕಾರಿ ಅರಸರಂತೂ ಉನ್ನತರೂ, ಬಲುಮೆ ಮಾಡುವವರೂ ಮತ್ತು ಹೊಣೆಗಾರಿಕೆ ಬಿಡಿಯದವರೂ ಇದ್ದರು. ಸ್ತ್ರೀಯು, ಕನ್ಯಾ, ಪತ್ನಿ ಮತ್ತು ತಾಯಿ ಈ ಮೂರು ಅವಸ್ಥೆಯಲ್ಲಿ ಪುರುಷರ ಗುಲಾಮಳಾಗಿ ಇರುತ್ತಿದ್ದಳು. ಅವಳು ಬಲುಮೆ, ಮಾನಹಾನಿಸೊಳಗಾಗಿ ಬಾಳ ಬೇಕಾಗುತ್ತಿತ್ತು. ಅಪ್ಪೇ ಅಲ್ಲದೆ ನುನೆತನವನ್ನು ನೋಡಿಕೊಂಡು ಅದಕ್ಕಾಗಿ ಬರುವ ಕಷ್ಟ ನಷ್ಟಗಳಿಗೆಲ್ಲ ತುತ್ತಾಗಬೇಕಾಗುತ್ತಿತ್ತು. ಗುಲಾಮರ ಸ್ವತಂತ್ರವಾದ ವರ್ಗವು ಸಮಾಜದಲ್ಲಿ ನೆಲಸಿತ್ತು. ಹೀಗಿದ್ದರೂ ಬಹು ಸಂಖ್ಯೆ ಜನರ ಜೀವನ ಗುಲಾಮಗಿರಿಯಲ್ಲಿಯೇ ವಿಶೇಷವಾಗಿ ಇರುತ್ತಿತ್ತು. ಹಿಂದುಸ್ಥಾನದಂಥ ಹಿಂದುಳಿದ ದೇಶದಲ್ಲಿ ಜಾತಿಭೇದ, ಜಾತಿ ಜಾತಿಗಳಲ್ಲಿರುವ ಮೇಲು ಕೀಳು ಭಾವನೆಗಳು ಅಸ್ಪೃಶ್ಯತೆ ಜಗತ್ತಿನಲ್ಲಿ ಬಂಡವಾಲಶಾಹಿ ಬರುವ ಪೂರ್ವದಲ್ಲಿ ಕಂಡುಬರುವ ಜಾತಿದ್ವೇಷ, ಈ ಎಲ್ಲ ದೃಶ್ಯಗಳತ್ತ ಮನೋದೃಷ್ಟಿ ಹರಿಸಿ ನೋಡಿದರೆ ವ್ಯಕ್ತಿ ಸ್ವಾತಂತ್ರ್ಯದ ವಾಸನೆ ಸಹ ಬಂಡವಾಲಶಾಹಿಯು ಪೂರ್ವದಲ್ಲಿ ಇತ್ತೆಂದು ಅನ್ನಲು ಬರುವಂತಿಲ್ಲೆಂಬುದು ಸಹಜವಾಗಿ ಕಂಡು ಬರುವಂತೆ ಮಾತಿದೆ.

ತತ್ವಜ್ಞರಿಂದ ವ್ಯಕ್ತಿಸ್ವಾತಂತ್ರ್ಯದ ಪುರಸ್ಕಾರ

ಸಾವಿರಾರು ವರುಷ ಮಾನವ ಸಮಾಜ ಶರೀರದಲ್ಲಿ ಊರಿನಿಂತ ಗುಲಾಮಗಿರಿಯ ಬೇರುಗಳ ಮೇಲೆ ಬಂಡವಾಲಶಾಹಿಯ ತತ್ವಜ್ಞರು ಮೊದಲನೆ ಪೆಟ್ಟನ್ನು ಹಾಕಿದರು. ಕಳೆದ ಇನ್ನೂರು ವರುಷಗಳಲ್ಲಿ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಮೊದಲಾದ ಎಲ್ಲ ದೃಷ್ಟಿಯಿಂದ ವ್ಯಕ್ತಿ ಸ್ವಾತಂತ್ರ್ಯ ದೊರಕಿಸಲು ಬಂಡವಾಲಶಾಹಿಯ ತತ್ವಜ್ಞರು ಶಕ್ತಿಮೀರಿ ಪ್ರಯತ್ನ ಮಾಡಿದ್ದಾರೆ. ಫ್ರೆಂಚರಾಜ್ಯ ಕ್ರಾಂತಿಯಾಗುವ ಪೂರ್ವದಲ್ಲಿ ಜಗತ್ತಿನಲ್ಲಿ ಹೆಸರಾದ ತತ್ವಜ್ಞ ರೂಸೊ ಇವನು ಶಕ್ತಿಯ ರಾಜ್ಯಸತ್ತೆ ಮತ್ತು ಅರಸರು ಅನ್ಯಿಸರ್ಗಕರೆಂದೂ, ಯಾವದಾದ ನೊಂದೂ, ಸಾರ್ವಜನಿಕ ಸಂಸ್ಥೆಯ ಸಭಾಸದನಾಗುವದು ಅಥವಾ ಬಿಡುವದು ಹೇಗೆ ವ್ಯಕ್ತಿಗಳ ಇಚ್ಛೆಯನ್ನು ಅವಲಂಬಿಸಿದೆಯೋ ಅದರಂತೆ ರಾಜ್ಯಸಂಸ್ಥೆಯ ಸಭಾಸದ ಅಂದರೆ ಪ್ರಜಾಜನನಾಗೋ ಆಗಬಾರದೋ ಅನ್ನುವದು ಸಹ ವ್ಯಕ್ತಿಗಳ ಇಚ್ಛೆಯನ್ನು ಅವಲಂಬಿಸಿದೆಯೆಂದೂ ಮತ್ತು ರಾಜ್ಯಸಂಸ್ಥೆಯು ಮಾನವರ ಪರಸ್ಪರ ಕರಾರುಗಳ ಮೂಲಕ ಅಸ್ತಿತ್ವದಲ್ಲಿ ಬಂದಿದೆಯೆಂದೂ ಪ್ರತಿಪಾದಿಸಿದನು. ಇದು ವ್ಯಕ್ತಿ ಸ್ವಾತಂತ್ರ್ಯದ ಸರಪಾನವಧಿ ಎನ್ನಬಹುದು. ರಾಜ್ಯಸಂಸ್ಥೆಗಳ ಇತಿಹಾಸದಲ್ಲಿ ಈ ಕಲ್ಪನೆಯ ಪ್ರಭಾವವು ಜನಮನದಲ್ಲಿ ಜೀರಿ ಬೆಳೆದು ಯೂರೋಪ್ ಅಮೇರಿಕ ಗಳಲ್ಲಿ ಪ್ರಚಂಡ ಚಳವಳಿಗಾಗಿ ಪ್ರಜಾಸತ್ತಾತ್ಮಕ ರಾಜ್ಯಸಂಸ್ಥೆಗಳು ಬಂಡವಲಶಾಹಿಯ ಅಮಲಿನಲ್ಲಿ ಸ್ಥಾಪನವಾದವು. ಫ್ರಾನ್ಸ್, ಅಮೇರಿಕಗಳಲ್ಲಿ ಅರಸ ಎಂಬ ಪದ್ಧು ಬಿಷಯಕ್ಕೆ ಸರಿಸಿಗದು. ಇಂಗ್ಲಂಡಿನಲ್ಲಿ ಅರಸನೆಂದರೆ ಸೊಂಬೆಯಾಗಿದ್ದಾನೆ. ಸಮಾಜದಲ್ಲಿ ಕಾಯಬೆಗಳ ದೃಷ್ಟಿಯಲ್ಲಿ ಯಾರೂ ಮೇಲಿಲ್ಲ, ಕೀಳೂ ಇಲ್ಲ, ಎಲ್ಲರು ಒಂದೇ ದರ್ಜೆಯವರೆಂದು ಗಣಿಸಲ್ಪಟ್ಟಿದ್ದಾರೆ. ಸ್ತ್ರೀಯರಿಗೆ ಮತದ ಹಕ್ಕು ಸಂಪೂರ್ಣವಾಗಿ ಇಲ್ಲದಿದ್ದರೂ, ಸಾಮಾಜಿಕ ವಿಷಯಗಳಲ್ಲಿ ಸ್ತ್ರೀಯರಿಗೆ ಬೇಕಾದಷ್ಟು ಸ್ವಾತಂತ್ರ್ಯ ಮತ್ತು ಗಂಡಸರೊಡನೆ ಸಮಕೆ ದೊರೆತಿದೆ. ಧಾರ್ಮಿಕ ಮತ್ತು ಜಾತೀಯ ಉಚ್ಚ ನೀಚ ಭಾವನೆಗಳು ತೀರ ಕಡಿಮೆಯಾಗಿವೆ. ಇನ್ನೂ ಜಗತ್ತಿನಲ್ಲಿ ಎಲ್ಲ ಕಡೆಯಲ್ಲಿ ಸಾಳಲ್ಪಟ್ಟ ಇವುಗಳ ವಿಷಯ ಪ್ರಗತಿಯಾಗಿಲ್ಲಿಂಬುದು ನಿಜ. ಆದರೆ ಎಷ್ಟೋ ಶತಮಾನಗಳಲ್ಲಿ ಆಗದಿದ್ದ ಪ್ರಗತಿ ಈ ಎರಡು ನೂರು ವರುಷಗಳಲ್ಲಿ ಆಗಿದೆ; ಇದೆಲ್ಲ ಬಂಡವಲಶಾಹಿಯ ಪ್ರಭಾವದಿಂದ.

ಅಮೇರಿಕೆಯ ಮುಂದೆ

ಪಾಕಿಸ್ತಾನ ಫಲಶ್ರುತಿ

ಇತ್ತೀಚೆಗಿನ ಕೆಲವು ದಿನಗಳಿಂದ ಪಾಕಿಸ್ತಾನ ಮುಖ್ಯ ಮಂತ್ರಿ ಲಿಯಾಖತ ಅಲ್ಲೀಖಾನರು, ಅಮೇರಿಕೆಯಲ್ಲಿ ತಮ್ಮ ರಾಜಕೀಯ ಪ್ರವಾಸವನ್ನು ಕೈಕೊಂಡಿದ್ದು, ಅಲ್ಲಲ್ಲಿ ಪಾಕಿಸ್ತಾನ ಫಲಶ್ರುತಿಯನ್ನು ಅಮೇರಿಕನ್ನರಿಗೆ ತಿಳಿಸುತ್ತಲಿದ್ದಾರೆ. ಇಲ್ಲಿಯವರೆಗಿನ ಅವರ ಮಾತುಗಳನ್ನು—ಸಿನೇಟಿನಲ್ಲಿ, ಪತ್ರಿಕಾ ಪರಿಷತ್ತಿನಲ್ಲಿ, ಸಾರ್ವಜನಿಕ ಸಭೆಗಳಲ್ಲಿ, ವಿಶ್ವವಿದ್ಯಾಲಯಗಳಲ್ಲಿ ಮೊದಲಾದ ಕಡೆ ಆಡಿದ ಮಾತುಗಳನ್ನು—ಕೂಲಂಕಷವಾಗಿ ಅಳೆದು ನೋಡಿದಲ್ಲಿ ಪಾಕಿಸ್ತಾನವು ಯಾವ ಮತ್ತು ಎಂತಹ ದಾರಿ ತುಳಿಯುತ್ತಲಿದೆ ಎಂಬುದರ ಕಲ್ಪನೆಯು ಬರುವಂತಿದೆ.

ಮೊನ್ನೆ ಮೊನ್ನೆ ಮೇ ಎರಡನೆಯ ವಾರದಲ್ಲಿ ಚಿಕಾಗೋದಲ್ಲಿ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡುತ್ತ ಮಾನ್ಯ ಲಿಯಾಕತರು "ಪಾಕಿಸ್ತಾನದ ಬಗ್ಗೆ ಸಂಪೂರ್ಣ ಸತ್ಯ ಸಂಗತಿ" ಗಳನ್ನು ತಿಳಿಸಲೆಂದೇ ನಾನಿಲ್ಲಿಗೆ ಬಂದಿರುವೆ" ಎಂದು ಹೇಳಿದರು. ಅಲ್ಲದೆ ಅಮೇರಿಕೆಯ ಬಳಿ ಧನ, ಅನುಭವ, ತಾಂತ್ರಿಕ ಜ್ಞಾನ, ಮೊದಲಾದವೆಲ್ಲವೂ ಇದ್ದು ಅವುಗಳನ್ನು ಅಮೇರಿಕೆಯು ಪೌರ್ವಾತ್ಯ ರಾಷ್ಟ್ರಗಳ ಅಭಿವೃದ್ಧಿಯ ದಿಶೆಯಿಂದ ಉಪಯೋಗವನ್ನು ಮಾಡದೆ ಇದ್ದರೆ, ಜಾಗತಿಕ ಸ್ಥಿರತೆ, ಅಭಿವೃದ್ಧಿ ಹಾಗು ಶಾಂತಿಗಳನ್ನು ಕಾಪಾಡಿಕೊಳ್ಳುವುದು ಅಡಕ್ಕೆ ಅಸಾಧ್ಯವಾಗಬಹುದು ಎಂದೂ ಹೇಳಿದ್ದಾರೆ.

"ಅಮೇರಿಕೆಯು ಪರಸ್ಪರ ಹಿತವಾಗುವಂತಿದ್ದರೆ ಮಾತ್ರ ಅಂಥಲ್ಲಿ ತನ್ನ ಹಣವನ್ನು ತೊಡಗಿಸಲಿ; ನವುಗೆ ದಯೆಯು ದೇಣಿಗೆಯೇನೂ ಬೇಕಿಲ್ಲ."

ಏಶಿಯಾದಲ್ಲಿ ಶಾಂತಿ ಇಲ್ಲದೆ ಹೋದಲ್ಲಿ ಜಗತ್ತಿನಲ್ಲಿಯೇ ಶಾಂತಿಯು ಉಳಿಯಲಾರದು, ಉಳಿಯುವ ಸಂಭವವಿಲ್ಲ.

"ಪಾಕಿಸ್ತಾನದಲ್ಲಿ ಅಮೇರಿಕೆಯು ತನ್ನ ಹಣವನ್ನು ತೊಡಕಿಸಲು ವಾತಾವರಣವು ತೀರ ಶಕ್ಯದ್ದಾಗಿರುತ್ತದೆ.

"ಪಾಕಿಸ್ತಾನದ ನನ್ನ ಮುಂಗಡ ಪತ್ರದ ಸಮತೋಲವನ್ನು ನಾವು ಕಾಯ್ದುಕೊಂಡಿದ್ದು, ಕರಭಾರದ ಹೆಚ್ಚು ವಿಕೆಯ ಮೇಲಿಂದ ವೆಚ್ಚಗಳ ಹಿಡಿತದಲ್ಲಿವೆ.

"ಸನಿಹದಲ್ಲಿಯೇ ಕೂಡಲಿರುವ ಭಾರತ-ಪಾಕಿಸ್ತಾನ ಪರಿಷತ್ತು, ಎರಡೂ ರಾಷ್ಟ್ರಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ವಾಣಿಜ್ಯ ವ್ಯವಹಾರವು ನಡೆಯುವಂತೆ ಮಾರ್ಗಮಾಡಿಕೊಡುವದೆಂದು ಹಾರೈಸುತ್ತೇನೆ.

ಇತ್ತೀಚೆಗೆ ಆದ ಭಾರತ—ಪಾಕ್ ಅಲ್ಪಸಂಖ್ಯಾಕ ಒಡಂಬಡಿಕೆಯು ಸರಿಯಾದ ದಿಕೆಯಲ್ಲಿ ಒಂದು ಹೆಜ್ಜೆಯಾಗಿದ್ದು, ಅದರಿಂದ ಎರಡೂ ರಾಷ್ಟ್ರಗಳ ನಡುವಿನ ಸಂಬಂಧವು ಉತ್ತಮಗೊಳ್ಳುವದೆಂದು ತಿಳಿದಿದ್ದೇನೆ.

"ರಶಿಯಾದೊಂದಿಗೆ ನಮ್ಮದು ಕೇವಲ ರಾಜಕೀಯ ಸಂಬಂಧವಿದೆ.

"ಇರಾಣ ಮತ್ತು ಪಾಕಿಸ್ತಾನಗಳ ಮೈತ್ರಿಯು ಮಾತ್ರ ಗಾಢವಾದದ್ದಾಗಿದೆ.

"ಅಫಗಾನಿಸ್ತಾನದೊಡನೆ ಪಾಕಿಸ್ತಾನವು ಮೈತ್ರಿಯಿಂದ ಇರಬಯಸುತ್ತಿದೆಯಾದರೂ ದುರ್ದೈವದಿಂದ ಅಫಗಾನಿಸ್ತಾನದಲ್ಲಿಯ ಕೆಲವು ಸಾಧಕರು ಜನತೆಯನ್ನು ತಪ್ಪು ಮಾರ್ಗಕ್ಕೆಳೆಯುತ್ತ ಎರಡೂ ರಾಷ್ಟ್ರಗಳ ಸಡಾಲೆ ಸಂಶಯಕ್ಕೆ ಎಡೆ ಮಾಡುತ್ತಿದ್ದಾರೆ ಏನೇ ಇದ್ದರೂ ಪಾಕಿಸ್ತಾನ ಅಫಗಾನಿಸ್ತಾನಗಳೆರಡೂ ಮುಸ್ಲಿಂ ರಾಷ್ಟ್ರಗಳೇ ಆಗಿದ್ದು ಅವುಗಳ ಸಂಸ್ಕೃತಿಯೂ ಒಂದೇ ಆಗಿರುತ್ತದೆ.

"ವಾಯವ್ಯ ಸರಹದ್ದು ಪ್ರಾಂತದ ಪರಾಣರು ಯುಕ್ತವಾದ ಜನಮತಗಣನೆಯ ಮೂಲಕ ಪಾಕಿಸ್ತಾನದ ಅಂಶವಾಗಿರಲು ನಿರ್ಧರಿಸಿದ್ದಾರೆ.

ಇವೇ ಮುಂತಾದ ಸತ್ಯಸಂಗತಿಗಳನ್ನು ಪಾಕಿಸ್ತಾನದ ಮುಖ್ಯ ಮಂತ್ರಿಗಳು ಅಮೇರಿಕದ ಜನತೆಯ ಎದುರಿಗೆ ಹಾಗೂ ಪತ್ರಿಕಾ ಪ್ರಪಂಚದ ಎದುರಿಗೆ ಮಂಡಿಸಿದ್ದಾರೆ. ಅಲ್ಲದೆ ಕಾಶ್ಮೀರವು, ಐತಿಹಾಸಿಕವಾಗಿ, ಭೌಗೋಲಿಕವಾಗಿ ಖಗೋಲಿಕವಾಗಿ ಪಾಕಿಸ್ತಾನಕ್ಕೆ ಬರಬೇಕಾದದ್ದೆಂದು ಹೇಳಿದ್ದಾರೆ. ಕಂಪು ರಶಿಯಾದ ಭೀತಿಯಿಂದ ಜಗತ್ತನ್ನು ಕಾಪಿಸಲು ಸಾಹಸ ಪಡುತ್ತಿರುವ ಅಮೇರಿಕೆಗೆ ಯುದ್ಧ ಮುಖಪ್ರದೇಶವಾಗಲು ಪಾಕಿಸ್ತಾನವು ಶಕ್ಯದ್ದಾಗಿದೆಯೆಂದು ಹೇಳಿದ್ದಾರೆ. ಪಾಕಿಸ್ತಾನವು ಅಮೇರಿಕೆಯಿಂದ ಶಸ್ತ್ರಾಸ್ತ್ರಗಳನ್ನು ಕೊಂಡುಕೊಳ್ಳಲು ಒಂಟಿಗಾಲ ಮೇಲೆ ಸಿದ್ಧವಿದೆಯೆಂದೂ ಹೇಳಿದ್ದಾರೆ.

ಪರಿಣಾಮ

ಶ್ರೀ. ಲಿಯಾಖತರ ಅಮೇರಿಕೆಯಲ್ಲಿಯ ಈ ಮೇಲಿನ ಮಾತುಗಳನ್ನು ಕೂಸು ಕೂಲಂಕಷವಾಗಿ ಅವಲೋಕಿಸಿದರೆ ವಿಷಫಲಿತಾಂಶ ಅಥವಾ ಪರಿಣಾಮವು ಹೊರಡಬಹುದು? ಈ ಭಿನ್ನ ಭಿನ್ನ ಪ್ರಣಾಲಿಯ ವಿಚಾರಧಾರೆಯ ಮಾತ್ಕಗಳನ್ನು ಒಟ್ಟುಗೂಡಿಸಿ ನೋಡಿದಲ್ಲಿ ಮುಖ್ಯವಾಗಿ ನೂರು ಮಾತುಗಳು ತಿಳಿದು ಬರುವಂತೆ ಪಾಕಿಸ್ತಾನದ ಸರಹದ್ದಿಗೆ ಭದ್ರತೆ ಬೇಕು; ಪಾಕಿಸ್ತಾನಕ್ಕೆ ಕಾಶ್ಮೀರವೂ ಬೇಕು; ಹಾಗೂ ಪಾಕಿಸ್ತಾನಕ್ಕೆ ಅಮೇರಿಕೆಯು ಹಣವೂ ಶಸ್ತ್ರಾಸ್ತ್ರಗಳೂ ಬೇಕು.

ಈ ಮೂರು 'ಬೇಕು' ಗಳ ಮೂಲ ಉದ್ದೇಶವು ಯಾವುದಿರಬಹುದು ಎಂಬ ವಿಷಯವು ಆ ಮಾತುಗಳಲ್ಲಿ ಸ್ಪಷ್ಟವಾಗಿ ತೋರಿಬರುತ್ತದೆ. ಯಾವುದೇ ಒಂದು ನೆವದಿಂದಾಗಲಿ, ಪಾಕಿಸ್ತಾನಕ್ಕೆ ಈ ಮೂರು ಮಾತುಗಳನ್ನು ಸಾಧಿಸಿವುದು ಬೇಕಾಗಿರುತ್ತದೆ. ಅದಕ್ಕಾಗಿ ಅಮೇರಿಕೆಯು ಒಪ್ಪದಿದ್ದರೆ, ರಶಿಯಾದ ಸ್ನೇಹವನ್ನಾದರೂ ಸಂಪಾದಿಸಿ ಈ ಮಾತುಗಳನ್ನು ಸಾಧಿಸಿಕೊಳ್ಳಬೇಕೆಂದು ಪಾಕಿಸ್ತಾನದ ಮುತ್ಸದ್ದಿಯೆಯೆಂಬುದನ್ನು ಮಾನ್ಯ ಲಿಯಾಕತರೇ ಆಡಿ ತೋರಿಸಿದ್ದಾರೆ.

ಹೀಗೆ ಏಕಮೇವ ಪ್ರಕಾರೇಣ ತಮ್ಮ ಉದ್ದಿಶ್ಯತನ್ನು ಸಾಧಿಸಿಕೊಳ್ಳುವ ಹವ್ಯಾಸದಿಂದಲೇ ಪಾಕಿಸ್ತಾನದ ಎಲ್ಲ ಚಟುವಟಿಕೆಗಳು ನಡೆದಿವೆಯೆಂದು ಅನೇಕರು ಅಭಿಪ್ರಾಯ ಪಟ್ಟರೆ ಅದೇನೂ ಆಶ್ಚರ್ಯವಾತಾಗಲಾರದು. ಜಾಗತಿಕ ಶಾಂತಿ ಸಾರ್ವಜನಿಕ ಅಭಿಪ್ರಾಯ, ಮೊದಲಾದವುಗಳೆಲ್ಲವೂ ಈ ಉದ್ದಿಶ್ಯ ಸಿದ್ಧಿಯ ಸಾಧನಗಳಾಗಿರುತ್ತವೆಯೆಂದರೆ ತಪ್ಪಾಗಲಾರದು.

ಭಾರತ ಮತ್ತು ಪಾಕಿಸ್ತಾನಗಳ ನಡುವೆ ಸೌಹಾರ್ದ ಸಂಬಂಧವಿರಬೇಕೆಂದೂ, ಪರಸ್ಪರರಲ್ಲಿ ವ್ಯಾಪಾರ

ವಾಣಿಜ್ಯಗಳು ಅಭಿವೃದ್ಧಿಯಾಗಬೇಕೆಂದೂ ಆದಿ ಜೋರಿಸುತ್ತಿದ್ದರೂ ರೂಪಾಯಿಯ ಬೆಲೆಯಿಳಿಕೆಯ ಬಗ್ಗೆ ಚಕಾರ ಶಬ್ದವಿಲ್ಲ. ಜಾಗತಿಕ ಶಾಂತಿ ಸಾಧನೆಗಾಗಿ ಹಂಬಲಿಸುತ್ತಿದ್ದಂತೆ ತೋರಿಸುತ್ತಲೇ ಇತ್ತ ಶಸ್ತ್ರಾಸ್ತ್ರಗಳ ಖರೀದಿ ನಡೆಸುತ್ತದಲ್ಲದೆ, ಅಮೇಂಕಗೆ ರಶಿಯಾದ ವಿರುದ್ಧ 'ಯುದ್ಧಮುಖ ಪ್ರದೇಶ' ದ ನಿರ್ದೇಶನ ನಡೆದಿರುತ್ತದೆ. ಪಠಾಣ ಪ್ರಮುಖರನ್ನು ಬಂಧಿಸದಲ್ಲಿರಿಸಿಯೂ ಅವರು ಪಾಕಿಸ್ತಾನದಲ್ಲಿಯೇ ಇರಬಯಸುತ್ತಾರೆಂದು ಹೇಳಲಾಗುತ್ತದೆ.

ಹೀಗೆಯೇ ಇನ್ನೂ ಇಂತಹ ಅನೇಕ ಒಂದಕ್ಕೊಂದು ಹೊಂದಿದ ವಾತಾವರಣಗಳ ಉದಾಹರಣೆಗಳನ್ನು ಕೂಡ ಬಹುದು. ಒಟ್ಟಿನಲ್ಲಿ ಪಾಕಿಸ್ತಾನವು ತನ್ನ ಹಿಡಿತವನ್ನು ಸಾಧಿಸಲು ಬೇಕಾದಂತಹ ಮಾರ್ಗವನ್ನಾದರೂ ಕೈಕೊಳ್ಳಬಯಸುವುದೆಂಬ ಮಾತು ಮಾತ್ರ ಇದರಿಂದ ಸಿದ್ಧವಾಗುತ್ತದೆ.

ಹೆಚ್ಚಿನ ಬಸ್ ಸರ್ವೀಸುಗಳ ಅವಶ್ಯಕತೆ

ಬಳ್ಳಾರಿಜಿಲ್ಲೆಯ ಎಲ್ಲಾಕಡೆಗಳಲ್ಲಿ ಪ್ರಯಾಣಿಕರ ಸಂಖ್ಯೆ ಇರುವ ಬಸ್ ಸರ್ವೀಸುಗಳು ಕಡಿಮೆ ಇವೆ ಪೆಟ್ರೋಲಿನ ಅಭಾವದಿಂದ ತಮಿಳದೇಶದಂತೆ ಅಂದ್ರಲ್ಲೂಕೂಡ ಗ್ಯಾಸ್ ಬಸ್‌ಗಳನ್ನು ಜಾರಿಗೆ ತರಲು ಅರ್ಥಿಕಮಂತ್ರಿ ಗೋಪಾಲರೆಡ್ಡಿಯವರು ಕೋರಿರುತ್ತಾರೆ. ಕೊನೆಗೆ ಗ್ಯಾಸ್ ಬಸ್‌ಗಳಾದರು ಅಪ್ಪಣೆ ಕೊಡಬಾರದೇ? —ದೈತನೊಬ್ಬ

ಡಾಕ್ಟರ್ ಹರ್ಡೀಕರರು ವಜ್ರಮಹೋತ್ಸವ ಹಣದ ಸದುಪಯೋಗ

ಡಾ॥ ಹರ್ಡೀಕರರವರಿಗೆ ಸಮರ್ಪಿಸಲಾದ 61 ಸಾವಿರದಲ್ಲಿ ½ ಭಾಗ ರಾಷ್ಟ್ರೀಯ ವಿದ್ಯಾರ್ಥಿ ಸೇನೆಯಲ್ಲಿ ತರಬೇತು ಹೊಂದುತ್ತಿರುವ ವಿದ್ಯಾರ್ಥಿಗಳಲ್ಲಿ ಹೆಚ್ಚು ಅಂಕ ಪಡೆದವರಿಗೆ 'ಜವಹರ್ ವಾರಿತೋಷಿಕ' ಎಂಬ ಹೆಸರಿನಿಂದ ಬಹುಮಾನ ಕೊಡಲು ನಿಶ್ಚಯಿಸಲಾಗಿದೆ ಇನ್ನುಳಿದ ಹಣವನ್ನು ಹಿಂದ ಸೇವಾ ಟ್ರಸ್ಟಿಗೆ ಒಪ್ಪಿಸಲಾಗುವುದು. ಈ ಸಂಸ್ಥೆಯವತಿಯಿಂದ ಈಗ 'ಜಯ ಹಿಂದ್' ವಾರಪತ್ರಿಕೆಯು ನಡೆಯುತ್ತಲಿದೆ.

ಮದ್ರಾಸ್ ಕರ್ನಾಟಕ ಸಂಘ

ಏಕಾಂಕ ಕರ್ನಾಟಕ ಸ್ಪರ್ಧೆ

ಕರ್ನಾಟಕ ಸಂಘದ ವಾರ್ಷಿಕಾಧಿವೇಶನದ ಅಂಗವಾಗಿ, ಬರೆಹಗಾರರಿಗೆ ಪ್ರೋತ್ಸಾಹಕೊಡುವ ಉದ್ದೇಶದಿಂದ ಈ ಮೇಲಿನ ಸ್ಪರ್ಧೆಯನ್ನು ನಡೆಸಲು ತೀರ್ಮಾನಿಸಿದೆ. ಅಖಿಲ ಕರ್ನಾಟಕದ ಸಾಹಿತ್ಯಾಭಿಮಾನಿಗಳಾದ ಕನ್ನಡಿಗ, ಕನ್ನಡತಿಯರೆಲ್ಲಾ ಭಾಗವಹಿಸಬೇಕಾಗಿ ವಿನಂತಿ.

ನಿಯಮಗಳು:— (1) ನಾಟಕದ ನೇಲಾಸ್ಯಗದಲ್ಲಿ. ಕರ್ನಾಟಕದ ಸಂಘದ ಏಕಾಂಕ ನಾಟಕ ಸ್ಪರ್ಧೆಗಾಗಿ, ಎಂದು ಬರೆದು ಅದರ ಕೆಳಗೆ ನಾಟಕದ ಹೆಸರನ್ನು ಬರೆಯಬೇಕು. (2) ಪ್ರತಿ ನಾಟಕ ದೊಡನೆ ಸ್ಪರ್ಧೆಯ ಪ್ರವೇಶ ಶುಲ್ಕವಾಗಿ ಅಣೆ ಒಂದನ್ನು ಪೋಸ್ಟಲ್ ಆರ್ಡರ್ ಮೂಲಕ ಕಳುಹಬೇಕು. (3) ನಾಟಕವು ಅಭಿನಿಕಾಲಿನೀತಿಗಳಿಗೆ ಸಂಹೊಂದುವಂತಿದ್ದು ಸ್ವತಂತ್ರವಾಗಿಯೂ ಇದುವರೆಗೆ ಪ್ರಕಟವಾಗದ್ದಾಗಿಯೂ ಇರತಕ್ಕದ್ದು. (4) ಫೂಲ್‌ಸ್ಕೇಪ್ ಸೈಜಿನ ಮೂವತ್ತು ಪುಟಗಳಿಗೆ ವಿರುದಂತೆ ಕಾಗದದ ನಾಲ್ಕು ಬದಿಗಳಲ್ಲಿಯೂ ಸರಿಯಾಗಿ ಮಾರ್ಜಿನ್ನು ಬಿಟ್ಟು ಒಂದೇ ಪುಟದಲ್ಲಿ ಶಾಯಿಯಿಂದ ಸ್ಪಷ್ಟವಾಗಿ ಬರೆದಿರಬೇಕು. (5) ಒಬ್ಬನೇ ಒಂದಕ್ಕಿಂತ ಹೆಚ್ಚು ನಾಟಕಗಳನ್ನು ಕಳುಹಬಹುದು. ಆದರೆ ಬಹುಮಾನ ಯೋಗ್ಯವೆಂದು ಕಂಡರೂ ಒಂದಕ್ಕಿಂತ ಹೆಚ್ಚಿನ ಕೃತಿಗಳಿಗೆ ಬಹುಮಾನ ದೊರೆಯಲಾರದು. (6) ಪ್ರತಿಯೊಂದು ನಾಟಕದ ಎರಡೆರಡು ನಕಲುಗಳನ್ನು ಕಳುಹತಕ್ಕದ್ದು. ನಾಟಕದ ನಕಲುಗಳನ್ನು ಹಿಂದಕ್ಕೆ ಕಳುಹಲಾಗುವುದಿಲ್ಲ. (7) ಬಹುಮಾನ ಪಡೆದ ನಾಟಕವನ್ನು ಪ್ರಕಟಿಸುವುದೇ ಮೊದಲಾದ ಎಲ್ಲಾ ಹಕ್ಕುಗಳೂ ಸಂಘದ್ದಾಗಿವೆ. (8) ನಾಟಕದ ಪುಟಗಳ ಯಾವುದೇ ಭಾಗದಲ್ಲಿ ಲೇಖಕರು ತಮ್ಮ ಹೆಸರನ್ನಾಗಲಿ ಗುಪ್ತನಾಮವನ್ನಾಗಲಿ ಕಾಣಿಸಕೂಡದು. (9) ಲೇಖಕರು ತಮ್ಮ ಸಂಪೂರ್ಣ ಹೆಸರು ವಿಳಾಸವನ್ನು ಪ್ರತ್ಯೇಕವಾದ ಕಾಗದದಲ್ಲಿ ಕಾಣಿಸಿ, ಸಂಘದ ಎಲ್ಲಾ ನಿಯಮಗಳನ್ನು ಒಪ್ಪಿಕೊಂಡು ನನ್ನ ಸ್ವಂತ ಕೃತಿಯಾದ ——— ಈ ನಾಟಕವನ್ನು ಏಕಾಂಕ ನಾಟಕ ಸ್ಪರ್ಧೆಗಾಗಿ ಕಳುಹಿದ್ದೇನೆ. ಎಂಬ ಪತ್ರವನ್ನು ಬರೆಯಬೇಕು. (10) ನಾಟಕದ ಪ್ರತಿಗಳು 1950 ನೇ ಆಗೋಸ್ತ 15 ನೇ ದಿನಾಂಕ ದೊಳಗೆ, ಕಾರ್ಯದರ್ಶಿ 'ಕರ್ನಾಟಕ ಸಂಘ' 16 ವೀರಸ್ವಾಮಿ ಮಿಸಿಲೈ ಸ್ಟ್ರೀಟ್, ಮದ್ರಾಸ್ 8, ಇವರಿಗೆ ಸೇರುವಂತೆ ಕಳುಹಬೇಕು.

ಅತ್ಯುತ್ತಮ ನಾಟಕಗಳಲ್ಲಿ ಮೊದಲನೇ ಬಹುಮಾನ ರೂ. 50 - ಎರಡನೇ ಬಹುಮಾನ ರೂ. 30 - ಮೂರನೇ ಬಹುಮಾನ ರೂ. 20 – ಕೊಡಲಾಗುವುದು. ಬಹುಮಾನ ಯೋಗ್ಯವಾದ ನಾಟಕಗಳು ಬಾರದಿದ್ದಲ್ಲಿ ಬಹುಮಾನವನ್ನು ಕಡಿಮೆ ಮಾಡಲಿಕ್ಕು ಸಂಘಕ್ಕೆ ಅಧಿಕಾರವಿದೆ. 1951 ನೇ ಜನವರಿ ತಿಂಗಳಲ್ಲಿ ನಡೆಯುವ ಸಂಘದ ವಾರ್ಷಿಕಾಧಿವೇಶನದಲ್ಲಿ ಫಲಿತಾಂಶವನ್ನು ಬಹಿರಂಗ ಗೊಳಿಸಲಾಗುವುದು.

ಬಹುಮಾನದ ಮೊತ್ತವನ್ನು ಶ್ರೀಮಾನ್ ಹರಿಹರ್ ಸಿ. ಶ್ರೀರಾಮುರಾವ್ (ಡೈರೆಕ್ಟರ್ ಜನರಲ್ ಪ್ರೊಡ್ಯೂಸ್ ಥೀಲರ್ಸ್ (ಮದ್ರಾಸ್) ಲಿಮಿಟೆಡ್ ಜೋರ್ಜ್ ಟೌನ್ ಮದ್ರಾಸ್) ಅವರು ಕೊಡುವುದಾಗಿ ವಾಗ್ದಾನವಿತ್ತು ಸಹಕರಿಸಿದ್ದಕ್ಕಾಗಿ ಅವರಿಗೆ ಸಂಘವು ಕೃತಜ್ಞತೆಗಳನ್ನು ಸಲ್ಲಿಸುತ್ತದೆ.

ಸಬ್ ಮ್ಯಾಜಿಸ್ಟ್ರೇಟರ ಹುದ್ದೆ

ಈ ಕೆಲಸಕ್ಕೆ ಬೇಕೆಂಬುವವರಿಗೆ 30 ವರ್ಷ ವಯಸ್ಸಿನ ಪರಿಮಿತಿ ಇಟ್ಟು ಬಾಗ್ರಾಜುಯೇಟರಾಗಿರಬೇಕೆಂದು ವಿಧಿಸಿರುವ ಕಾರಣ 50 ಪಾಲಿಬಿದ್ದ ಕೆಲಸಗಳಿಗೆ 60 ಮಾತ್ರ ಅರ್ಜಿಗಳು ಬಂದಿದ್ದವು. ಇದಕ್ಕೆ ತಿಂಗಳಿಗೆ 150 ರೂ. ಮಾತ್ರ ಸಂಬಳವಿಟ್ಟಿದ್ದಾರೆ. ಇಷ್ಟು ದುಡಿಯಲು ಶಕ್ತಿ ಇಲ್ಲದ ವಕೀಲರು ಈ ಕೆಲಸಕ್ಕೆ ಬರಬೇಕು. ಸಂಬಳವನ್ನು ಹೆಚ್ಚಿಸಿ ಅನುಭವೀಕರು ದೊರೆಯಲೆನುವಾಗುವಂತೆ ವಯಸ್ಸಿನ ಪರಿಮಿತಿಯನ್ನು 40ಕೆ ಏರಿಸುವುದೊಳ್ಳೆಯದೆಂದು ನಮ್ಮ ಸಲಹೆ ಸಬ್ ಮ್ಯಾಜಿಸ್ಟ್ರೇಟರಿಗಿಂತಲೂ ಹೆಚ್ಚಿನ ದರ್ಜೆಯ ತಹಶೀಲ್ದಾರರು ಎಸ್. ಎಸ್. ಎಲ್. ಸಿ. ಪರೀಕ್ಷೆಯವರಾದರೂಸರಿ ಇನ್ನು ಮೇಲೆ ಇಂಥಾ ಕೆಲಸಗಳಿಗೆ ಕೊನೆಯ ಪಕ್ಷ ಬಿ. ಎ. ವಾಸಾದವರನ್ನಾದರೂ ನಿಯಮಿಸಿದರೊಳ್ಳೆಯದು.

—ವಿ. ಜ. ರಾಮಚಂದ್ರನ್

ಕೆಲಸಮಾಡುವವರಿಗೆ ತಕ್ಕ ಪ್ರತಿಫಲ

ಈ ಪತ್ರಿಕೆಯು ಬೇರೊಂದೆಡೆಯಲ್ಲಿ ಶಿವಮೊಗ್ಗದ ಬೆಂಕಿಪೆಟ್ಟಿಗೆಯ ಕಾರ್ಖಾನೆಯನ್ನು ನಡೆಸಿ ಖರ್ಚು ಕಳೆದು ಉಳಿದದ್ದನ್ನು ತಮ್ಮಲ್ಲಿ ತಾವೇ ಹಂಚಿಕೊಳ್ಳಬೇಕೆಂದು ನಿಶ್ಚಯಿಸಿರುವ ಸುದ್ದಿಯು ಪ್ರಕಟವಾಗಿರುವದನ್ನು ನಾವಕರು ತಮ್ಮ ಅವಗಾನಹೆಗೆ ತಂದುಕೊಳ್ಳಬೇಕಾದದು ಅವಶ್ಯಕವಾಗಿದೆ ಇದರಲ್ಲಿ ಕಾರ್ಮಿಕರು ವ್ಯಕ್ತಪಡಿಸಿದ ಕೃತಿಯಲ್ಲಿ ತೊಡಗಿದನನು ಅದರ ಸುಖದುಃಖಗಳನ್ನು ಅನುವಿಭಸುವ ಹಕ್ಕು ಇರಬೇಕು. ಪರಿಶ್ರಮದ ಪೂರ್ಣ ಲಾಭವು ಅವನಿಗೆ ದೊರಕಬೇಕು. ಎಂಬ ಗಹನವಾದ ತತ್ವವು ಅಡಕವಾಗಿದೆ. ಪ್ರಪಂಚದ ಅನೇಕ ಭಾಗಗಳಲ್ಲಿ ಸೋಶಿಯಲಿಸ್ಟರೂ ಕಮ್ಯೂನಿಷ್ಟರೂ ಪ್ರತಿಪಾದಿಸುತ್ತಲಿರುವ ಈ ಧೋರಣೆಯು ವ್ಯವಹಾರ ರೂಪದಲ್ಲಿ ಇನ್ನೂ ಬಂದಿಲ್ಲ. ರಶಿಯಾದಲ್ಲಿ ಎಲ್ಲದೂ ಸರ್ಕಾರದ ಸೊತ್ತಾಗಿರುವಕಾರಣ ಕೆಲಸಗಾರರಿಗೆ ಎಂಥ ಪ್ರತಿಫಲವು ದೊರಕುತ್ತಿದೆಯೆಂಬುದು ನಮಗೆ ಗೊತ್ತಿಲ್ಲ. ಆದರೂ ಅಲ್ಲಿ ಇಲ್ಲಿಯವರಿಗಿಂತ ಸೌಕರ್ಯಗಳು ಹೆಚ್ಚಿವೆಯೆಂದು ನೋಡಿದವರು ಬಲ್ಲವರು ಹೇಳುತ್ತಲಿದ್ದಾರೆ.

ಬೆಂಕಿ ಪೆಟ್ಟಿಗೆ ಕಾರ್ಖಾನೆಯ ಜಾಲಕರನ್ನೂ, ಮೈಸೂರು ಸರ್ಕಾರವನ್ನೂ ನಾವು ಅಭಿನಂದಿಸರಲಾರೆವು. ದಕ್ಷಿಣ ಹಿಂದೂಸ್ತಾನದಲ್ಲಿ ಇದೇ ಪ್ರಥಮವಾದ ಪ್ರಯತ್ನವು ಇದೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಕಾರ್ಖಾನೆಗಳೂ, ದೊಡ್ಡ ದೊಡ್ಡ ಉದ್ಯೋಗಗಳೂ ಶ್ರೀಮಂತರಾದ ಭಂಡವಲುಗಾರರ ಸ್ವಾಧೀನದಲ್ಲಿದ್ದು ಬಹುಭಾಗದ ಲಾಭನನ್ನು ಭಂಡವಲುಗಾರರೇ ಪಡೆಯುತ್ತಿದ್ದಾರೆ. ಈ ಕಾರಣ ಕೆಲಸಗಾರರಲ್ಲಿ ಕೂಲಿಯವರಲ್ಲಿ ಅಶಾಂತಿ ಪ್ರಜ್ವಲಿತವಾಗಿ ಮುಷ್ಕರ ಸ್ಟ್ರಾಯಿಕ್‌ಗಳಿಗೆ ಕಾರಣವಾಗಿದೆ. ಕೆಲಸಗಾರರು ತಮ್ಮದೇ ಆದ ಸಹಕಾರ ಸಂಘವನ್ನು ಸ್ಥಾಪಿಸಿಕೊಂಡು ಇಂಥ ಉದ್ಯೋಗಗಳನ್ನು ನಡೆಸುವುದರಿಂದ ಸಮಾಜದಲ್ಲಿ ಶಾಂತಿ ನೆಲೆಸುವದೆಂಬುದು ಸಮಾಜವಾದೀ ತತ್ವವಾಗಿದೆ. ದಾರಿದ್ರ್ಯ, ನಿಸ್ಸಹಾಯತೆ, ಅವಿದ್ಯೆ, ಅಜ್ಞಾನಗಳಿಂದ ಕೆಲಸಗಾರರಲ್ಲಿ ಏಕ್ಯಮತ್ಯವಿಲ್ಲದೆ ಅವರಿಗೆ ಮಾರ್ಗದರ್ಶಕರು ಕಡಿಮೆ ಇದ್ದಾರೆ. ಆದರೆ ಈಗ ಕೆಲಸಗಾರರಲ್ಲೂ ವಿದ್ಯಾವಂತರು ಬರುತ್ತಿರುವುದು ದೇಶದ ಸೌಭಾಗ್ಯ ಕೆಲಸಗಾರರು ನುರಿತವರಾಗಿ ತಮ್ಮ ಕೆಲಸಗಳನ್ನು ತಮ್ಮದೆಂಬ ಭಾವನೆಯಿಂದ ಸಹಕಾರೀ ಪ್ರವೃತ್ತಿಯಿಂದ ನಡೆಸುವುದಾದರೆ ರಾಷ್ಟ್ರದ ಆರ್ಥಿಕ ಪ್ರಗತಿಯು ಶೀಘ್ರವಾಗಿ ಆಗುವುದರಲ್ಲಿ ಸಂಶಯವೇ ಇಲ್ಲ.

ಕೆಲಸಗಾರರೇ ಸಂಘಟಿತರಾಗಿರಿ!!

ಕೆಲಸಗಾರರಿಗೇ ಎಲ್ಲಾ ಲಾಭ

ಮೈಸೂರು ಬೆಂಕಿ ಕಡ್ಡಿ ಕಾರ್ಖಾನೆ.

ಆರ್ಥಿಕ ಅಡಚಣೆಯಮೂಲಕ 1950 ನೆ ಏಪ್ರಿಲ್ 1 ರಿಂದ ಮುಚ್ಚಲ್ಪಟ್ಟಿದ್ದ ಈ ಕಾರ್ಖಾನೆಯನ್ನು ನಡೆಸಿಕೊಂಡು ಹೋಗಲು ಕಂಪನಿಯು ಕೆಲಸಗಾರರೇ ಹೊಣೆಹೊತ್ತಿರುವರು. ಖರ್ಚುಹೋಗಿ ಉಳಿದದ್ದನ್ನು ಕೆಲಸಗಾರರು ಹಂಚಿಕೊಳ್ಳತಕ್ಕದೆಂದು ಗೊತ್ತಾಗಿದೆ.

— ತಪ್ಪು ತಿದ್ದುವಿಕೆ —

ಕಳೆದವಾರ ಪತ್ರಿಕೆಯಲ್ಲಿ ಕಾಮುಲಾಪುರದ ಸುದ್ದಿಯಲ್ಲಿ ಹೋಟೆಲ ಸರ್ವರ್‌ಗೆ 185/- ರೂ. ಜುಲ್ಮಾನೆ ಎಂದು ತಪ್ಪು ಪ್ರಕಟವಾಗಿದೆ. ಆದರೆ, ಹೋಟೆಲ್ ಸರ್ವರ್ ರಾಮುದಾವ್ ಎಂಬಾತನಿಗೆ, ಹರಿಜನನನ್ನು ಹೊಡೆದಟ್ಟಿದ್ದರಿಂದ 6 ವಾರಗಳ ಶಿಕ್ಷೆ 35 ರೂ. ದಂಡ ವಿಧಿಸಲಾಗಿದೆ ಯೆಂಬುದು ಈಗ ಗೊತ್ತಾಗಿದೆ.

ಕಮ್ಯೂನಿಷ್ಟರ ದಾಳಿ

ಕೃಷ್ಣಾಜಿಲ್ಲೆಯ ನೇಮಾಲಿ ಹಳ್ಳಿಯ ಮೇಲೆ ಕಳೆದ ಬುಧವಾರ ರಾತ್ರಿ ಖಾಕಿ ಸಮವಸ್ತ್ರ ಧರಿಸಿದ 30 ಕಮ್ಯೂನಿಷ್ಟರ ದಾಳಿಯಾಗಿ ಮೂವರು ಹಳ್ಳಿಗರು ಪ್ರಾಣ ಕಳೆದುಕೊಂಡರು ಗ್ರಾಮರಕ್ಷಣಾದಳದವರು ಕಮ್ಯೂನಿಷ್ಟರನ್ನೆದುರಿಸಿ ಗಾಯಗೊಳಿಸಿದರೆಂದು ಹೇಳಲಾಗಿದೆ.

ಗುರು ಅರ್ಜುನದೇವರ ಯಾತ್ರೆಗಾಗಿ ಲಾಹೋರಕ್ಕೆ ಹೋದ ಸೀಖರ ದಿಲ್ಲಿ ಒಪ್ಪಂದದಿಂದ ಪಾಕಿಸ್ತಾನದ ಹೃದಯ ಪರಿವರ್ತನೆಯಾಗಿರುವರೆಂದೂ, ಅಲ್ಲಿಯ ಮುಸಲ್ಮಾನರು ಸೀಖರನ್ನು ಸ್ನೇಹಿತರಂತೆ ಸ್ವಾಗತಿಸುತ್ತಿರುವರೆಂದೂ ಹೇಳುತ್ತಾರೆ. ಅಲ್ಲದೆ ಲಾಹೋರಿನ ಗುರುದ್ವಾರಗಳೆಲ್ಲಾ ಸುಸ್ಥಿಯಲ್ಲಿವೆಯೆಂದರು.

ಚೇಳ್ಳಗುರಿಕೆ
ಯಾತ್ರಿತಾತ ರಥೋತ್ಸವ

ಯಾತ್ರಿಕಾತ ಮಠದ ಧರ್ಮಕರ್ತ ಶ್ರೀ ಕೆ. ಬಸಯ್ಯನವರು ಹೀಗೆ ತಿಳಿಸುತ್ತಾರೆ. ಇದೇ ವಿಕೃತಿ ಸಂ॥ ಜೇ॥ ಶು॥ ಪಂಚಮಿಯಿಂದ ಷಷ್ಠಿಯ ವರೆವಿಗೆ ಯಾತ್ರಿತಾತ ರಥೋತ್ಸವವು ಬಹಳ ವಿಜೃಂಭಣೆಯಿಂದ ನೆರವೇರಿತು ಸಾವಿರಾರು ಭಕ್ತಾದಿಗಳು ಆಗಮಿಸಿ ಯಾತ್ರಿತಾತ ಸಮಾಧಿಯ ದರ್ಶನ ಲಾಭಪಡೆದು ಭಜನೆಯಲ್ಲಿ ಭಾಗವಹಿಸಿ ತಮ್ಮ ಕೋರಿಕೆಗಳನ್ನು ಪೂರೈಸಿದರು ಇದೇಪ್ರಕಾರ ನೂರಾರು ಭಕ್ತಾದಿಗಳು ಪ್ರತಿ ಅಮವಾಸ್ಯೆ ಇಲ್ಲಿಗೆ ಬಂದು ತಮ್ಮ ಇಷ್ಟಾರ್ಥ ಸಿದ್ಧಿ ಹೊಂದುತ್ತಲಿರುವರು. ಇದು ಜಾಗೃತ ಸ್ಥಳವಾಗಿದ್ದು ಭಕ್ತರು ಪ್ರತಿ ಅಮವಾಸ್ಯೆಗೆ ಬರಲು ಸೌಕರ್ಯಗಳೇರ್ಪಟ್ಟಿವೆ. ನೀರಿಗೂ ವಸತಿಗೂ ಅನುಕೂಲವಿದೆ. ಬಳ್ಳಾರಿಜಿಲ್ಲಾ ಬೋರ್ಡ್ ಅಧ್ಯಕ್ಷರೂ, ನಗರದ ಸುಪ್ರಸಿದ್ಧ ವರ್ತಕರೂ ಆದ ಶ್ರೀಮಾನ್ ವೈ. ಮಹಾಬಲೇಶ್ವಪ್ಪನವರು ಸುಮಾರು 5 ಸಾವಿರ ರೂ. ಖರ್ಚಿನಿಂದ ಭಾವಿ ತೆಗೆಸಿದ್ದು ಸಿಹಿನೀರು ಪ್ರಾಪ್ತವಾಗಿರುವುದು ನಮ್ಮ ಸೌಭಾಗ್ಯ.

ಭಾರತದ ಹಿಂದಿನ ವೈಸ್ರಾಯರಾಗಿದ್ದ ಲಾರ್ಡ್ ವೇವೆಲ್ಲರು ತಮ್ಮ ೭೭ ನೆಯ ವಯಸ್ಸಿನಲ್ಲಿ ೫೪ ನೆಯ ತಾ. ನಿಧನ ಹೊಂದಿದರು. ಇವರು ಸುಪ್ರಸಿದ್ಧ ಸೇನಾನಿಗಳಾಗಿ ಪ್ರಥಮ ಮತ್ತು ದ್ವಿತೀಯ ಯುದ್ಧದಲ್ಲಿ ಭಾಗವಹಿಸಿದ್ದರು.

ಅಸಾಮವು ಸುಪ್ತಾವಸ್ಥೆಯಲ್ಲಿರುವ ಜ್ವಾಲಾಮುಖಿಯಂತಿದೆ. ಗಡಿಪ್ರದೇಶಗಳಲ್ಲಿ ನಡೆದಿರುವ ಚಟುವಟಿಕೆಗಳಿಂದ ಗುಡ್ಡ ಗಾಡಿನ ಪ್ರದೇಶದ ಜನರಲ್ಲಿ ಅಶಾಂತಿ ಬೆಳೆಯುತ್ತಲಿದೆ.

ನವಭಾರತಕ್ಕೆ
ಚಂದಾದಾರರಾಗಿರಿ.

ಸಮಾನತೆ

ಗಂಡಸು ಹೆಂಗಸಿನ ಅವಕಾಶಗಳನ್ನು ಅಲ್ಲಗಳೆಯಬೇಕಾಗಿಲ್ಲ. ಹೆಂಗಸು ಗಂಡಸಿನ ಸ್ವಾತಂತ್ರ್ಯಕ್ಕೆ ಮತ್ಸರ ಪಡಬೇಕಾಗಿಲ್ಲ.

"ಆತ್ಮ ತ್ಯಾಗದಲ್ಲಿ ಸ್ತ್ರೀಯರು ಯಾವಾಗಲೂ ಪುರುಷರಿಗಿಂತ ಶ್ರೇಷ್ಠರು" — ಮಹಾತ್ಮಾ ಗಾಂಧಿ.

ಶ್ರೀಮತಿ ಪಿ. ಪಾರಿಜಾತಂ ನಾಯುಡು, ಮಹಿಳೋದ್ಧಾರ ಶಾಖೆಯ ಮುಖ್ಯಾಧಿಕಾರಿಣಿ

'ಸಮಾನತೆ' ಯೆಂದರೆ ಅನೇಕರು ತಪ್ಪಾಗಿ ತಿಳಿದುಕೊಂಡಿದ್ದಾರೆ. ಕೆಲವರು ಎಲ್ಲದರಲ್ಲೂ ಸಮಾನತೆಯೆಂದು ಭಾವಿಸುತ್ತಾರೆ. ಹೀಗೆ ಸಮಾನತೆಯು ಸರಿಯಾದ ಅರ್ಥ ವಿಸ್ತರಣೆಯನ್ನು ತಿಳಿಯದೆ ಸ್ತ್ರೀಯರು ಸಮಾನತೆಗಾಗಿ ಕೇಳುವುದನ್ನು ಟೀಕಿಸುತ್ತಾರೆ. ನಿಜವಾಗಿ ಹೇಳುವುದಿದ್ದರೆ ಸಮಾನತೆಯೆಂದರೆ ವ್ಯಾಮುಖ್ಯದಲ್ಲಿ ಸಮಾನತೆಯಿರಬೇಕೆಂದು ಅರ್ಥಮಾಡಿಕೊಳ್ಳಬೇಕು. ಸ್ತ್ರೀಯರಾಗಲಿ ಪುರುಷರಾಗಲಿ ಮಾಡಿದ ಪ್ರತಿಯೊಂದು ಚಿಕ್ಕ ಕೆಲಸವಾದರೂ ಅದಕ್ಕೆ ತಕ್ಕ ಪ್ರಾಮುಖ್ಯ ಕೊಡಲೇಬೇಕು. ಸ್ತ್ರೀಯರಿಗೆ ಸಂಬಂಧಿಸಿದ್ದೆಂದು ಅದಕ್ಕೆ ಪ್ರಾಶಸ್ತ್ಯವಿಲ್ಲದಿರಕೂಡದು. ಅಂದರೆ ಅವಕಾಶಗಳಲ್ಲಿ ಸಮಾನತೆ ಇರಬೇಕೆಂಬುದೇ ನಮ್ಮ ಗುರಿಯಾಗಿದೆ. ಸ್ತ್ರೀಯರಿಗೂ ಪುರುಷರಿಗೂ ತಮ್ಮ ಸುತ್ತಮುತ್ತಲ ವಾತಾವರಣಕ್ಕೆ ಅನುಗುಣವಾಗಿ ತಮ್ಮ ವಂಶಾನುಗತ ಬುದ್ಧಿಶಕ್ತಿಗಳನ್ನು ಅಭಿವೃದ್ಧಿಗೊಳಿಸಿಕೊಳ್ಳಲು ಸಮಯದ ಹಕ್ಕು ಸ್ವಾತಂತ್ರ್ಯಗಳಿರಬೇಕು. ಇದರಿಂದ ಕೇವಲ ಸ್ತ್ರೀಯರು ಅಥವಾ ಪುರುಷರು ಅಭಿವೃದ್ಧಿ ಹೊಂದುವದಲ್ಲ ತಾವೂ ಪರಸ್ಪರ ಅಭಿವೃದ್ಧಿ ಹೊಂದುವುದರ ಮೂಲಕ ಇಡಿ ಸಮಾಜವನ್ನೇ ಉನ್ನತಿಗೇರಿಸಿದಂತಾಗುತ್ತದೆ. ಈ ಹಕ್ಕನ್ನು ಅಡಗಿಸುವುದಾಗಲಿ ಅದನ್ನು ವ್ಯಕ್ತಿಕರಿಸದಂತೆ ತಡೆಯುವದಾಗಲಿ ಪ್ರತಿಯೊಬ್ಬನ ಜನ್ಮಸಿದ್ಧವಾದ ಸಮಾನತೆಯನ್ನು ಅಲ್ಲಗಳೆದಂತೆಯೇ. ಸರಿಸಮಾನತೆಗೆ ಬೇರಾವ ಅರ್ಥಮಾಡಿದರೂ ಈ ಸಂದರ್ಭದಲ್ಲಿ ಬೆಲೆ ಇರುವುದಿಲ್ಲ. ಯೋಗ್ಯತೆಯ ವಿಷಯದಲ್ಲಿ ಅತಿ ಚಿಕ್ಕ ತಪ್ಪು ತಿಳುವಳಿಕೆಯಾದರೂ ಕಾಲಾಂತರದಲ್ಲಿ ಹೆಚ್ಚಿನ ಭೇಧಕ್ಕೆ ಎಡೆಯಾಗಬಹುದು. ಒಮ್ಮೆ ದಾರಿತಪ್ಪಿ ನುಂದುವರಿದೆನೆಂದರೆ ನಾವು ಹೊರಟಲ್ಲಿ ಹೆಚ್ಚು ದೂರವಿಲ್ಲದಿದ್ದರೂ ನಾವು ಗುರಿಯನ್ನು ಮುಟ್ಟುವಾಗ ಎಷ್ಟೋ ದೂರವಾಗಬಹುದು. ಹಾಗೆಯೇ ಸ್ತ್ರೀಪುರುಷರ ಯೋಗ್ಯತೆಗಳಲ್ಲಿ ಪ್ರಾರಂಭದಲ್ಲಿ ಹೆಚ್ಚು ಭೇದವಿಲ್ಲದಿದ್ದರು ಕೊನೆಗೆ ಅದು ವಿಸ್ತಾರವಾಗಬಹುದು. ಉದಾಹರಣೆಗಾಗಿ ಶಾಲಾ ಕಾಲೇಜುಗಳಲ್ಲಿ ಗೃಹಜ್ಞಾನ (ಹೋಮ್ ಸೈನ್ಸ್) ಶಿಕ್ಷಣವನ್ನೇ ತೆಕ್ಕೊಳ್ಳೋಣ. ಸ್ತ್ರೀಪುರುಷರ ಸಮಾನತೆಗಾಗಿ ಈ ಶಿಕ್ಷಣವನ್ನು ಓದಿಸುವುದೆಂದು ಹೇಳಬಹುದೇ? ಲೆಕ್ಕ, ವಿಜ್ಞಾನ, ಚರಿತ್ರೆ ಅರ್ಥಶಾಸ್ತ್ರ ಇವೆಲ್ಲಾ ಸ್ತ್ರೀಯರಿಗೆ ಕಲಿಯಬೇಕಾದ್ದುಗಳಾಗಿರುವುದರಿಂದ ಹೌದು ಎನ್ನಬಹುದು. ಗೃಹವಿಜ್ಞಾನವು ಸ್ತ್ರೀಯರಿಗೆ ಮಾತ್ರ ಪ್ರತ್ಯೇಕವಾಗಿ ಆರಂಭಿಸಲ್ಪಟ್ಟ ಶಿಕ್ಷಣವಾಗಿರುವುದರಿಂದ ಸಮಾನತೆಗಾಗಿ ಅಲ್ಲ ಎನ್ನಬಹುದು. ಆದುದರಿಂದ ಸಮಾನತೆಯೆಂದರೆ ಏನೆಂದು ಸರಿಯಾಗಿ ತಿಳಿಕೊಳ್ಳುವುದು. ಅತ್ಯವಶ್ಯವಾಗಿದೆ.

ಮತದಾನ

ಇನ್ನೊಂದು ಪ್ರಶ್ನೆ ಮತದಾನದ ವಿಷಯವಾದುದು. ಇಲ್ಲಿ ಸ್ತ್ರೀಪುರುಷ ಭೇದವೆಂಬುದು ಯಾವ ವಿಧದಲ್ಲೂ ಅಯೋಗ್ಯತೆ ಇಲ್ಲ. ಪ್ರತಿಯೊಂದು ವ್ಯಾಯಬದ್ಧ ವ್ಯಕ್ತಿಗೂ ಮತದಾನದ ಹಕ್ಕಿರುವುದು. ಇದನ್ನು ಸಮಾನತೆಯೆಂದು ಕರೆಯಬಹುದು. ಪ್ರಪಂಚದ ವ್ಯತ್ತಸ್ತ ಪರಿಸ್ಥಿತಿಗೆ ಅನುಸರಿಸಿ ಸ್ತ್ರೀಗೂ ದೇಶದ ಹಿತವೃಸ್ಥಿಯಿಂದ ಮತದಾನದ ಹಕ್ಕಿರುವುದು ಅವಶ್ಯವಾಗಿದೆ ಎಂಬುದರಿಂದ ಇದು ಸಮಾನತೆಯೆಂದು ಹೇಳಲಾಗುವುದಿಲ್ಲ. ಆದುದರಿಂದ ಮಹಾ ಜವಾಬ್ದಾರಿಕೆಯನ್ನು ವಹಿಸತಕ್ಕ ನಿರಾತಂಕವಾದ ಅವಕಾಶವು ಅದರಲ್ಲೂ ನಮ್ಮ ದೇಶದ ರಾಜಕೀಯ ಚರಿತ್ರೆಯ ಈ ಅವಧಿಯಲ್ಲಿ ಸ್ತ್ರೀಯರು ತಮ್ಮ ಮತವನ್ನು ಸರಿಯಾಗಿಕೊಡುವುದು ಅತ್ಯವಶ್ಯವಾಗಿದೆ.

ಮಹಿಳೋದ್ಧಾರ ಶಾಖೆ

ಕೊನೆಯದಾಗಿ ನಮ್ಮ ಸರಕಾರದ ಮಹಿಳೋದ್ಧಾರ ಶಾಖೆಯ ವಿಷಯವಾಗಿ ವಿಚಾರಿಸೋಣ. ಸ್ತ್ರೀಯರ ಸ್ಥಿತಿಗತಿಗಳು ಅವನತಿಗಿಳಿದಿರುವುದರಿಂದ ಯೋಗ್ಯತೆಗಳೆಲ್ಲಾ ನಮ್ಮ ಕಣ್ಮರೆಯಾಗಿರುವುವು. ನಮ್ಮ ದೇಶದ ಹಿಂದಿನ ಪರಿಸ್ಥಿತಿಯಂತೆ ಸಾಂಸ್ಕೃತಿಕ, ಸಾಮಾಜಿಕ ಆರ್ಥಿಕ ದೃಷ್ಟಿಯಿಂದ ಇಲಾಖೆಯು ಪರಿಸ್ಥಿತಿಯ ಫಲವಾಗಿಯೇ ಹುಟ್ಟಿತು. ಸಾಮಾನ್ಯ ಜನರ ಸೇವೆ ಸಲ್ಲಿಸುವದೇ ಇದರ ಅವಶ್ಯಕತೆಯಾಗಿತ್ತು ಈ ಇಲಾಖೆಯುದ್ದೇಶವನ್ನು ಕವ್ಯಾಗಿ ತಿಳಿದುಕೊಳ್ಳುವುದಲ್ಲಿ ಅರ್ಥವಿಲ್ಲ.

ಪರಸ್ಪರ ಅಭಿವೃದ್ಧಿ

ಸ್ತ್ರೀಪುರುಷರ ಪ್ರಾಣಿಶಾಸ್ತ್ರ ಹಾಗೂ ಶರೀರ ಶಾಸ್ತ್ರದ ದೃಷ್ಟಿಯಿಂದ ಸ್ತ್ರೀಪುರುಷರು ಭಿನ್ನ ಭಿನ್ನ ಕಾರ್ಯಗಳಿಗೆ ಸೃಷ್ಟಿ ಸಲ್ಪಟ್ಟಿದ್ದಾರೆ. ಹಾಗೆಂದರೆ ಜೀವನದಲ್ಲಿ ಇವರು ಪರಸ್ಪರ ವಿರೋಧಿಗಳಾಗಿರಬೇಕೆಂದಿಲ್ಲ. ನಿಜವಾಗಿ ನೋಡಿದರೆ ಇವರು ಒಬ್ಬರಿಗೊಬ್ಬರು ಸಹಾಯಕರಾಗಿರಬೇಕೆಂಬುದೇ ಸೃಷ್ಟಿಯ ತತ್ವವಾಗಿದೆ ಒಬ್ಬರಲ್ಲಿ ಇಲ್ಲದುದನ್ನು ಇನ್ನೊಬ್ಬರು ಪೂರೈಕೆ ಮಾಡಬಹುದಾಗಿದೆ ಇವರಲ್ಲಿ ಒಬ್ಬರಿಗೊಬ್ಬರು ಶ್ರೇಷ್ಠರೆಂದು ಹೇಳಬರುವುದಿಲ್ಲ. ಒಬ್ಬರನ್ನು ಬಿಟ್ಟು ಇನ್ನೊಬ್ಬರಿಗಿರಲು ಸಾಧ್ಯವಿಲ್ಲ ಒಬ್ಬರ ಬಲವು ಇನ್ನೊಬ್ಬರ ಅಬಲತೆಯನ್ನು ಹೋಗಲಾಡಿಸುವುದು. ಆದುದರಿಂದ ಅನುಕರಣೆಗೆ ಅಥವಾ ಸ್ಪರ್ಧೆಗೆ ಎಂದೂ ಎಡೆಯಿಲ್ಲ. ಆದರೆ ಪ್ರತಿಯೊಬ್ಬರಿಗೂ ಸ್ವಯಂ ಉದ್ಧಾರಕ್ಕೆ ಬೇಕಾದಷ್ಟು ಅವಕಾಶವಿದೆ. ಇದಕ್ಕಾಗಿ ಗಂಡಸು ಹೆಂಗಸಿನ ಅವಕಾಶಗಳನ್ನು ಅಲ್ಲಗಳೆಯಬೇಕಾಗಿಲ್ಲ. ಅಥವಾ ಗಂಡಸಿನ ಸ್ವಾತಂತ್ರ್ಯಕ್ಕಾಗಿ ಹೆಂಗಸು ಮತ್ಸರಿಸಬೇಕಾಗಿಲ್ಲ. ದೇವರು ಕೊಟ್ಟ ಸೌಕರ್ಯಗಳನ್ನು ಶಕ್ತಿ ಸಾಮರ್ಥ್ಯಗಳನ್ನು ಸ್ತ್ರೀಪುರುಷರು ಪರಸ್ಪರ ಅಭಿವೃದ್ಧಿ ಸುಖಗಳಿಗಾಗಿ ಉಪಯೋಗಿಸಿ ಅನ್ಯೋನ್ಯ ಸಹಕಾರದಿಂದ ವರ್ತಿಸಿ ಸಮಾನತೆಯ ನಿಜವಾದ ಅರ್ಥವನ್ನು ತಿಳಿಕೊಳ್ಳುವಂತಾಗಲಿ!

ಮದ್ರಾಸು ಮಾರ್ಗದರ್ಶಕ

ಇತರ ಅನೇಕ ವಿಷಯಗಳಂತೆ ಸ್ತ್ರೀಯರ ವಿದ್ಯಾಭ್ಯಾಸದ ವಿಷಯದಲ್ಲಿಯೂ ಮದ್ರಾಸ್ ಪ್ರಾಂತವು ಇತರ ಪ್ರಾಂತಗಳಿಗೆ ಮಾರ್ಗದರ್ಶನವಾಗಿ ತನ್ನ ಗೌರವನ್ನು ಹೆಚ್ಚಿಸಿಕೊಂಡಿದೆ. ಕಳೆದ ಎರಡು ವರ್ಷಗಳಲ್ಲಿ ಹಿಂದುಸ್ಥಾನದಲ್ಲಿ ಮಹಿಳೆಯರಲ್ಲಿ ಕುಂಬಾ ಜಾಗೃತಿಯು ತಲೆದೋರುತ್ತಿದೆ. ಅವರು ವಿವಿಧ ಉದ್ಯೋಗ ಹಾಗೂ ಸಮಾಜ ಸೇವೆಗಳಲ್ಲಿ ಮಾತ್ರವಲ್ಲದೆ, ರಾಜಕೀಯ ಕ್ಷೇತ್ರದಲ್ಲಿ ಸಹ ಭಾಗವಹಿಸಲು ಮುಂದೆ ಬಂದಿರುತ್ತಾರೆ. ಅವರ ಕಾರ್ಯಕಲಾಪಗಳಿಗೆ ಪ್ರೋತ್ಸಾಹ ಕೊಡುವುದು ಅವಶ್ಯ.

—ಫ್ರೆ. ಹೊ. ಭಾವನಗರ ಮಹಾರಾಜ,
ನಮ್ಮ ಗವರ್ನರರು.

ಹೊಸಪೇಟೆ ಜಿಲ್ಲಾ ಮುನ್ಸಿಫರ ಕೋರ್ಟಿನಲ್ಲಿ

Sc. 232/45 E. P. 14/50

ಕೆ. ವೆಂಕಪ್ಪ ....ಅರ್ಜಿದಾರ

ಕರ್ಕಿಹಳ್ಳಿ ಅಬ್ದುಲ್ ಖಾದರ್ ಸಾಬ್) ರೆಸ್ಪಾಡೆಂಟ್

ಮೇಲ್ಕಾಣಿಸಿದ ಇ.ಪಿ.ಯು. 7-7-'50 ಕ್ಕೆ ನಿಮ್ಮ ಹಾಜರಿಗಾಗಿ ವಾಯ್ದೆಹಾಕಲಾಗಿದೆ. ಅಂದು ನೀವು ಸದ್ರಿ ಕೋರ್ಟಿಗೆ ಪ್ರಾತಃಕಾಲ 11 ಗಂಟೆಗೆ ಹಾಜರಾಗಿ ನಿಮ್ಮ ಆಕ್ಷೇಪಣೆಗಳನ್ನು ತಿಳಿಸದಿದ್ದರೆ, ಈ ವಿಷಯವು ಏಕಪಕ್ಷದಿಂದ ತೀರ್ಮಾನಿಸಲ್ಪಡುವುದೆಂದು ಈಮೂಲಕ ತಿಳಿಸಲಾಗಿದೆ.

ಎಂ. ರಂಗನಾಥಾಚಾರ್
ಅರ್ಜಿದಾರರ ವಕೀಲ.

ರಷಿಯಾ, ಚೀನಗಳ ಮಧ್ಯೆ 4 ಸಾವಿರ ಮೈಲಿ ದೂರದಲ್ಲಿನ ಟೆಲಿಫೋನ್ ವ್ಯವಹಾರವು ಪ್ರಾರಂಭವಾಗಿರುವುದು ಗೊತ್ತಾಗಿದೆ.

ವೃಷ್ಣಾ-ವೆನ್ನಾರ ಪ್ರಾಜೆಕ್ಟ್

ಮದ್ರಾಸ್ ಸರ್ಕಾರದ ಈ ನೀರಾವರಿ ಯೋಜನೆಯಿಂದ ಏಮಲಕ್ಷ ಎಕರೆ ಭೂವಿಯು ನೀರಾವರಿಯಾಗುವುದೆಂದು ಅಂದಾಜುಮಾಡಲಾಗಿದೆ. ಇದು ಕಾರ್ಯ ಕಾರಿಯಾಗಲು, ಯುದ್ಧರಹಿತ ವಿಶ್ವಶಾಂತಿಯಲ್ಲಿ 15 ವರ್ಷ ಹಿಡಿಯಬಹುದು. ಈಗಿನ ಹಣದ ಬೆಲೆಯ ದೃಷ್ಟಿಯಿಂದ 120 ಕೋಟಿ ವ್ಯಯವಾಗಬಹುದು.

ಪಂಡಿತ ಜವಹರಲಾಲ ನೆಹರೂವರು ಟ್ರಾವಂಕೂರು, ಕೊಚಿನ್‌ಗಳನ್ನು ಸಂದರ್ಶಿಸಿ, ಇಂಡೋನೇಶಿಯಾಕ್ಕೆ ತೆರಳಿಲಿರುವರು. ಸಿಂಗಪುರದಲ್ಲಿ ಸಾರ್ವಜನಿಕ ಸಭೆಯೂ ರಂಗೂನದಲ್ಲಿ ಮುನಿಸಿಪಾಲಿಟಿಯವರ ಮೂಸ ಸತ್ಕಾರ ಸಮಾರಂಭವೂ ಇದೆ.

ಬಳ್ಳಾರಿ ಕುರುಬರ ಸಂಘ

ಬಳ್ಳಾರಿ ೨೫—ಬಳ್ಳಾರಿ ಕುರುಬರ ಸಂಘದ ಕಾರ್ಯನಿರ್ವಾಹಕ ಸಮಿತಿ ಸಭೆಯು ತಾ ೨೩ ಸಾಯಂಕಾಲ ಡಾ.ಆರ್. ನಾಗಸಗೌಡರ ಅಧ್ಯಕ್ಷತೆಯಲ್ಲಿ ಕೂಡಿ ಜೂನ ಮೊದಲನೇ ವಾರದಲ್ಲಿ ಸಂಘದ ಹಾಸ್ಟೆಲ್ಲಿನ ಪ್ರಾರಂಭೋತ್ಸವ ಜರುಗಿಸುವದು ಗೊತ್ತಾಯಿಸಿತು. ಜಿಲ್ಲೆಯ ಕುರುಬ ಮತ್ತು ಇತರ ಸಮಗಳ ಬಡ ವಿದ್ಯಾರ್ಥಿಗಳಿಗೆ ಉಚಿತವಾಗಿ ಭೋಜನ ಹಾಗು ವಸತಿಸೌಕರ್ಯ ಏರ್ಪಡಿಸಲಾಗಿದ್ದು ಬಳ್ಳಾರಿ ಹಾಯಸ್ಕೂಲಗಳು ಅಥವಾ ಕಾಲೇಜದಲ್ಲಿ ಸೇರುವ ಜಿಲ್ಲೆಯ ಬಡ ವಿದ್ಯಾರ್ಥಿಗಳು ಜೂನ ೫ ನೇ ತಾರೀಖಿನೊಳಗಾಗಿ ತಮಗೆ ಅರ್ಜಿ ಕಳಿಸಬೇಕೆಂದು ಸಂಘದ ಗೌರವ ಕಾರ್ಯದರ್ಶಿಗಳಾದ ಶ್ರೀ ಕೆ ಜಿ. ಪಿ.ಚ್ಚಪ್ಪನವರು ತಿಳಿಸುತ್ತಾರೆ ಅರ್ಜಿಸಂಗಡ ತಾವು ಸೇರುವ ವರ್ಗ ತಿಳಿಸುವದಲ್ಲದೆ ಬಡತನ ಹಾಗೂ ಸತ್ಕುಲದ ಬಗ್ಗೆ ಸರ್ಟಿಫಿಕೇಟು ಕಳಿಸಬೇಕು.

'ಕ್ರಾಸ್‌ರೋಡ್ಸ್' ಪತ್ರಿಕೆಗೆ

ನಿರ್ಬಂಧ ಹೋಯಿತು.

ಮದ್ರಾಸ್ ಪಬ್ಲಿಕ್ ಸೆಕ್ಯೂರಿಟಿ ಆಕ್ಟ್ ಕಲಂ 9 ರನ್ವಯ 'ಕ್ರಾಸ್‌ರೋಡ್ಸ್' ಎಂಬ ಬೊಂಬಾಯಿ ವಾರ ಪತ್ರಿಕೆಯ ಮೇಲೆ ನಿರ್ಬಂಧವನ್ನು ಹೇರಿ ಮದ್ರಾಸ್ ಪ್ರಾಂತದಲ್ಲಿ ಒರಡಂತೆ ಅದನ್ನು ಯಾರು ತ ಸಮಂಕ್ರಶಿಬಂಧಿಸಲಾಗಿತ್ತು ಅದರ ಅದರ ಸಂಪಾದಕರು ಡೆಲ್ಲಿ ಸುಪ್ರೀಂ ಕೋರ್ಟಿಗೆ ಅಪೀಲ್ ಮಾಡಿದ್ದರು ನ್ಯಾಯಾಧೀಶರು ತೀರ್ಪುಕೊಟ್ಟು ಮದ್ರಾಸ್ ಸರ್ಕಾರದವರು ಮಾಡಿದ ನಿಯಮವು ಸರಿಯಾದದ್ದಲ್ಲವೆಂದು ಹೇಳಿದರು. ಕ್ರಾಸ್ ರೋಡ್ಸ್ ಪತ್ರಿಕೆಗಳನ್ನು ತರಿಸಿದ ಕಾರಣವೇ ಮೂ. ಸತ್ಯಮೂರ್ತಿರಾಯರ ಅವರ ಪುತ್ರ ಶಿವಿಂದನನ್ನು ಬಂಧಿಸಲಾಗಿತ್ತು.

ಹಿಂದೀ ಮಹಾ ವಿದ್ಯಾಲಯ, ಬಳ್ಳಾರಿ,

[1931 ಸ್ಥಾಪಿತ. ಬಳ್ಳಾರಿ ಜಿಲ್ಲಾ ಹಿಂದೀ ಪ್ರೇಮಿಮಂಡಲದಾಶ್ರಯದಲ್ಲಿ, ರಿಜಿಸ್ಟರ್ಡ್.]

ಮದ್ರಾಸ್ ಸರ್ಕಾರದಿಂದ ಮಾನ್ಯತೆ ಇದೆ.

ಪ್ರಾರಂಭಿಕ ವರ್ಗಗಳಿಗೆ ಮಾಸಿಕ 3/- ಶುಲ್ಕ — ಉನ್ನತ ವರ್ಗಗಳಿಗೆ ಮಾಸಿಕ 5/- ಶುಲ್ಕ

ವಾರ್ಡಲಾ ಹೈಸ್ಕೂಲ್ ಕಟ್ಟಡದಲ್ಲಿ ಪ್ರಾತಃಕಾಲ-ಸಾಯಂಕಾಲ ಹಿಂದೀ ಕಾಲೇಜ್‌ದ ವರ್ಗಗಳು ನಡೆಯುತ್ತಿವೆ. ಪ್ರವೇಶಿಕ — ವಿಶಾರದ ವರ್ಗಗಳಲ್ಲದೆ ಪ್ರಾರಂಭಿಕ ವರ್ಗಗಳಿಗೂ ಪ್ರವೇಶವಿದೆ. ವರ್ಗಗಳಿಗೆ ಸಂಬಂಧಿಸಿದ ಪಾಠಪುಸ್ತಕಗಳು ವಿದ್ಯಾಲಯದಲ್ಲಿ ದೊರೆಯುತ್ತವೆ ಒಳ್ಳೆಯ ಪುಸ್ತಕಭಂಡಾರವಿದೆ. ಶ್ರೇಷ್ಠ ವಾರಪತ್ರಿಕೆ, ಮಾಸಪತ್ರಿಕೆಗಳು ಲಭ್ಯ. ಇತರ ವಿವರಗಳಿಗೆ ಸ್ವಾಂಸಿಟ್ಟು ಬರೆಯಿರಿ.

ಪ್ರಿನ್ಸಿಪಾಲ್.

NAVA BHARAT BELLARY. (Reg. No. M. 4746)

ನವಭಾರತ ಬಳ್ಳಾರಿ.

29—5—50

To

Sri...

(Nationalist Weekly)

ಚಂದಾದರಗಳು.	Subscription Rates.
ವರ್ಷಕ್ಕೆ 5—0—0	One Year 5—0—0
6 ತಿಂಗಳಿಗೆ 3—0—0	Six months 3—0—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.	Subscription will not be accepted for less than 6 months

Printed at Krishna Printing Works. Edited & Published by T.B. Keshaav Rao.

JAI—HIND

ಕಸ್ತೂರಿ

ಬಳ್ಳಾರಿಯ
ಉಜ್ವಲ ರಾಷ್ಟ್ರೀಯ ವಾರಪತ್ರಿ
*
ಉತ್ತಿಷ್ಠತ ! ಜಾಗೃತ
ಪ್ರಾಪ್ಯವರಾನ್ನಿ ಬೋಧತ !!!
*
ಸಂಪಾದಕ ಮತ್ತು ಪ್ರಕಾಶಕ:—
ಟಿ. ಬಿ. ಕೇಶವರಾವು

ವರ್ಷ ೧೪ | ಸೋಮವಾರ ೧೨ ಜೂನ್ ೧೯೫೦ | ಸಂಚಿಕೆ ೧೯

ಕೇಣಿಕಾರ

ಮೂಲಕತೆಗಾರರು,
ಶ್ರೀ ಡಿ. ಪ್ರಸಾದ

ಆನುವಾದಕ,
ಬಿ. ಆರ್. ಭೀಮರಾವ್, ಬಳ್ಳಾರಿ.

ಉದ್ಯಾನದ ಶೈಲಮಾಲೆಯ ನದರದಲ್ಲಿ ಪಚ್ಚೆ ಸೈರಿಂದಾವರಿಸಲ್ಪಟ್ಟ ಚಿಕ್ಕದೊಂದು ಹಳ್ಳಿ ವಸಂತಮಾರುತನು ಅದನ್ನಾಲಂಗಿಸಿ ಸುಮಸೌರಭದಿಂದ ಅದರ ಗುಡಿಸಲುಗಳನ್ನು ತುಂಬುತ್ತಾನೆ. ಉಪತ್ಯಕೆಯ ಹಿಮಶೀತಲ ಝರಿಗಳು ಅದನ್ನು ತಮ್ಮ ಬಾಹುಪಾಶದಲ್ಲಿ ಬಂಧಿಸಿವೆ. ಆ ಸುಂದರ ಸ್ಥಾನದಲ್ಲಿ ಸ್ನಿಗ್ಧ ಸಂಗೀತ ಸದಾ ಸುಳಿಯುತ್ತದೆ. ಅದರಲ್ಲಿ ಬುಲ್ ಬುಲ್‌ಗಳ ಕಲನಾದವು, ಕೆಂಪನೆ ವಸಂತ ತಾನತೆರೆಗಳನ್ನೇಳಿಸುತ್ತದೆ.

ದಾಳಿಂಬೆಯ ಕೆಂಬಣ್ಣದ ಕುಸುಮ ರಂಜಿತ ಛಾಯೆ, ಸಂಜೆಯ ಅರುಣಕಿರಣಗಳಿಂದ ಪ್ರಕಾಶಮಾನವಾಗುತ್ತಿತ್ತು. ಶೀರಿ ಅದರ ಕಳಗೆ ಒಂದು ಶಿಲಾಖಂಡದ ಮೇಲೆ ಕುಳಿತು, ಎದುರಿನ ಗುಲಾಬಿ ಗುಂಪೊಂದನ್ನು ನೋಡುತ್ತಿದ್ದಳು ಬಹಳ ಬುಲ್ ಬುಲ್‌ಗಳು ಗಾನವೈಭವವೆತ್ತಿದ್ದವು. ವಾಯುದೇವನೊಂದಿಗೆ ಚಿಕ್ಕಂದಿನಿಂದ ಚಲ್ಲಾಟವಾಡುತ್ತಾ ಆ ಸಮಯವನ್ನು ತಮ್ಮ ಕಲವಾದದಿಂದ ಗುಂಜರಿತ ಗೈಯುತ್ತಿದ್ದವು.

ಹಠಾತ್ತಾಗಿ ಶೀರಿ ತನ್ನ ಅವಕುಂಠನವನ್ನು ತೆಗೆದಳು. ಪ್ರಕೃತಿ ನಕ್ಕು ತನ್ನ ಪ್ರಸನ್ನತೆ ತೆಳಿಸಿದಳು ಗುಲಾಬಿಯ ದಳದಲ್ಲಿ ಶೀರಿಯ ಮುಖ ರಾಜನಂತೆ ಶೋಭಿಸಿತು. ಮುಗ್ಧ ಹೃದಯ ನೀಲ ಮೇಘಕ ಗಳೆರಡು ಆ ಗುಲಾಬಿಯಿಂದ ಹಾರಲಸಮರ್ಥವಾಗಿದ್ದವು ಭ್ರಮರಗಳಿಗರಿಗಳು ಕಂಪಹೀನವಾಗಿದ್ದವು. ಮುಳ್ಳಿಡಿದ ಪೊದೆಯಲ್ಲಿ ಬೆದರಿಕೆಯಿಲ್ಲದೆ ಬುಲ್ ಬುಲ್‌ಗಳು ಕೂರುವುದು ಮತ್ತು ಹಾರುವುದನ್ನು ಶೀರಿ ತನ್ಮಯಳಾಗಿ ನೋಡು ನೋಡುತ್ತಿದ್ದಳು.

ಸಖಿ ಜುಲೇಖಾಳ ಆಗಮನದಿಂದ ಅವಳ ಏಕಾಂತ ಭಾವನೆಗೆ ಭಂಗಬಂದಿತು. ತನ್ನ ಮುಸುಕನ್ನು ತೆಗೆಯುತ್ತಾ ಜುಲೇಖಾ ಕೇಳಿದಳು "ಶೀರಿ, ! ನಿನ್ನ ಕೈಯಲ್ಲಾಡುವ ಬುಲ್ ಬುಲ್ ಏನಿತ್ತೀಚಿಗೆ ಕಾಣಿಸಲಿಲ್ಲೇ"?

ನಿಡುಸುಯ್ದು ಶೀರಿ ಉತ್ತರಿಸಿದಳು "ಶೀತಕಾಲದಲ್ಲಿ ತನ್ನದಳಸಹಿತ ವೈದಾನದ ಕಡೆಗೆ ಹೋಯಿತು. ವಸಂತನ ಆಗಮನವಾದರೂ ಅದು ಹಿಂದಿರುಗಲಿಲ್ಲ.

"ಇವೆಲ್ಲಾ ಹಿಂದೂಸ್ತಾನದಲ್ಲಿ ಬಹಳ ದೂರದವರೆಗೂ ಹೋಗುವೆಂದು ಕೇಳಿದ್ದೇನೆ ಇದು ಸತ್ಯನೇ ಶೀರಿ"

"ಹೌದು ಪ್ರಿಯೆ! ಅವಕ್ಕೆ ನಿರಂಕುಶ ವಿಚರಿಸುವುದು ಮನಮೆಚ್ಚಿ ಇವುಗಳ ಜಾತಿ ಬಹು ಸ್ವತಂತ್ರ ಪ್ರಿಯವಿದೆ."

"ನಿನ್ನ ಗುಂಗುರು ಕೇಶವಾಶದಲ್ಲೇಕೆ ಬಂಧಿಸಲಿಲ್ಲ? "

"ನಸ್ಸ ವಾಶ ಆಪಕ್ಷಿಗಾಗಿ ಶಿಥಿಲವಾಗುತ್ತಿದ್ದವು"

"ಸರಿ ಚಿಂತಿಸಬೇಡ, ಹಿಂತಿರುಗುವ ದೇಳು ನಾನು ಹೋಗುವೆ"

ಶೀರಿ ಶಿರವಲ್ಲಾಡಿಸಿದಳು ಜುಲೇಖಾ ಹೊರಟುಹೋದಳು.

—: ೨ :—

ಗುಡ್ಡಗಾಡಿನ ಗಗನಮುಂಚಳೆದಲ್ಲಿ ಸಂಧ್ಯಾರಾಣಿ ಪರ್ಣೋತ್ಸವರ್ಣವುಳ್ಳ ವಸ್ತ್ರ ಹರಡುವಾಗ; ಪಕ್ಷಿಕುಲ ಸಂಗೀತ ಸುಧಾ ಸುರಿಸುತ್ತಾ, ಸಾಲಾಗಿಸಾಗುತ್ತಾ ಸಸ್ಯ ಸಂಕುಲದೆಡೆ ಬರುವಾಗ; ಮತ್ತು ಗಾಳಿಯಲ್ಲಿ ಅವುಗಳ ಕೋಮಲ ರೆಕ್ಕೆ ಗಳಿಂದ ತೆರೆಗಳೇಳುವಾಗ ಸಮೂರನು ತನ್ನ ವಾಯುತರಂಗಗಳಲ್ಲಿ ಪ್ರತಿಸಾತೆ ಅಂಧಕಾರವನ್ನೆಳೆದು ತರುವಾಗ; ಗುಲಾಬಿ ಅಧಿಕಾರಕ ಸೌರಭ ವ್ಯಯಿಸಿ ಹಸಿರು ಹೊದಿಕೆಯಲ್ಲಿ ಮುಖ ಮುದುರಿಕೊಳ್ಳಲಿ ಚ್ಛಿಸುವುವೋ, ಆಗ ಶೀರಿಯ ಆಶಾಭರಿತ ದೃಷ್ಟಿ ಕತ್ತಲೆಯಿಂದೊದಗೂಡಿ ರೆಪೆಯೊಳಗಡಗಿತು. ಅವಳು ಜಾಗೃತಳಾಗಿದ್ದರೂ ಒಂದು ಸ್ವಪ್ನ ಕಾಣತೊಡಗಿದಳು

"ಹಿಂದುಸ್ತಾನದ ಸಮೃದ್ಧಿಶಾಲಿ ನಗರದ ಒಂದು ಒಣಿಯಲ್ಲಿ ಒಬ್ಬ ಯುವಕ ಬೆನ್ನಮೇಲೆ ಗಂಟುಹೊತ್ತು ತಿರುಗುತ್ತಿರುವನು. ಪರಿಶ್ರಮ ಮತ್ತು ನಿರಾಹಾರದಿಂದ ಅವನ ಮುಖ ಕಾಂತಿಹೀನವಾಗಿದೆ. ಆಯಾಸದಿಂದ ಯಾರದೋ ಮನೆಯ ಬಾಗಿಲಲ್ಲಿ ಕುಳಿತ್ತಿದ್ದಾನೆ. ಏನಾದರೂ ಮಾರಿ ಆ ದಿನದ ಹೊಟ್ಟೆ ಹೊರೆಯುವ ಹಂಬಲ ಅವನ ದಯನೀಯ ಮಾತುಗಳಿಂದ ವ್ಯಕ್ತವಾಗುತ್ತದೆ ಆದರೆ ಆ ಗೃಹಸ್ಥ ಹೇಳುವ "ಉದ್ರಿ ಕೊಡುವ ಹಾಗಾದಲ್ಲಿ ಕೊಡು; ಇಲ್ಲದಲ್ಲಿ ಗಂಟೆತ್ತು ತಿಳಿಯಿತೋ ಆಗಾ?"

ಯುವಕ:— ನನ್ನಲ್ಲಿ ಉದ್ರಿ ಕೊಡುವ ಯೋಗ್ಯತೆ ಇಲ್ಲ."

ಹಾಗಾದಲ್ಲಿ ನನಗೇನೂ ಬೇಡ!."

ಶೀರಿ ತನ್ನ ಈ ಕಲ್ಪನೆಯಿಂದ ಬೆಚ್ಚಿದಳು. ತನ್ನ ಅತುಲ ಸಂಪತ್ತು ತೆಗೆದುಕೊಂಡು ವ್ಯಾಪಾರವಿದಲಡೊಡನೆ ಬೈಬರ್ ಗಿರಿಸಂಕಟವನ್ನು ತನ್ನ ಭಾವನೆಯಿಂದ ಪಾದಾಕ್ರಾಂತ ಮಾಡತೊಡಗಿದಳು.

ಹಿಂದೂಸ್ತಾನದ ಪ್ರತಿಯೊಬ್ಬ ಗೃಹಸ್ಥನಲ್ಲಿ – ತನಗೆ ಅನಾವಶ್ಯಕವಾದಾಗ್ಯೂ ಆಯುವಕನ ಎಲ್ಲಾ ವಸ್ತುಗಳನ್ನು ಕೊಂಡು ಅವನ ಭಾರ ಕಡಿಮೆ ಮಾಡುವಷ್ಟು – ಹಣವಿರಬೇಕೆಂಬ ಇಚ್ಛೆ ತವಕಗಾಯಿತು. ಆದರೆ ಸರಳ ಶೀರಿ ನಿಸ್ಸಹಾಯಳು. ಅವಳ ತಂದೆಯೊಬ್ಬ ಕ್ರೂರ ಗುಡ್ಡಗಾಡು ಸರದಾರನಿದ್ದ ತನ್ನ ತಲೆ ತಗ್ಗಿಸಿ, ಏನೋ ಯೋಚನೆ ಮಾಡತೊಡಗಿದಳು.

ಸಂಧ್ಯೆಯ ಅಧಿಕಾರ ಆರಂಭವಾಯಿತು. ಕಲರವ ಕುಗ್ಗಿತು. ಶೀರಿಯ ಉಸುರಿನಂತೆ ಗಾಳಿಯ ಗತಿಯ ಏರುದ್ಧವಾಯಿತು. ಅವಳ ಬೆನ್ನು ಕಲ್ಲಿಗೆ ಆತು ಕೊಂಡಿತು.

(೬ ನೇ ಪುಟನೋಡಿರಿ)

ಎಲುಬು ರಕ್ತಗಳ ಗೊಬ್ಬರ

ಜಾನುವಾರುಗಳು ಸತ್ತರೂ ಉಪಯೋಗವುಳ್ಳುವು.

(ಹಿಂದೂಸ್ಥಾನ ಸರಕಾರಕ್ಕೆ ಎಲುಬಿನ ವಿಷಯದಲ್ಲಿ ಗೌರವ ಸಲಹೆಗಾರರಾದ ಶ್ರೀ ಜಿ. ಆರ್. ವೆಲುಂಜ್ಕರ್, ಅವರು ಇತ್ತೀಚೆಗೆ ಮದ್ರಾಸಿಗೆ ಬಂದಾಗ, ಪತ್ರಕೋದ್ಯೋಗಿಗಳೊಡನೆಮಾತಾಡುತ್ತಾ ಎಲುಬು, ರಕ್ತ, ಮೂತ್ರ, ಮೀನಿನ ಕಾಳುಗಳಂತಿರುವ ನಿಷ್ಪ್ರಯೋಜಕ ವಸ್ತುಗಳು ನೈಟ್ರೋಜಿನಸ್ ಸಹಾರಜನಕ ಮತ್ತು ಫೋಸ್ಫೆಟಿಕ್ ರಂಜಕಗೊಬ್ಬರಗಳಿಗೆ ಅಮೂಲ ಮೂಲಗಳೆಂದು ಹೇಳಿದರು. ಇಪ್ಪತ್ತು ವರ್ಷಗಳಿಂದ ವಾರ್ಧಾದಲ್ಲಿ ಗಾಂಧಿ ಆಶ್ರಮದ ಸಹಸ್ಯರಾಗಿ ಇವರು ಈ ಸಮಸ್ಯೆಯನ್ನು ಚೆನ್ನಾಗಿ ಕಲಿತಿದ್ದಾರೆ. ಇವರು ಈ ವಿಷಯದಲ್ಲಿ ಸ್ಥಳೀಯ ಪರಿಸ್ಥಿತಿಗತಿಗಳನ್ನು ಪರಿಶೀಲಿಸುವ ಬಗ್ಗೆ ಸಂಚರಿಸುತ್ತ ಮದ್ರಾಸಿಗೆ ಸಂದರ್ಶನವಿತ್ತು ನಮ್ಮ ಕೃಷಿ ಶಾಖಾ ಮಂತ್ರಿಯವರೊಡನೆಯೂ ಕೃಷಿ ಇಲಾಖೆಯ ಅಧಿಸಿರೊಡನೆಯೂ ತನ್ನ ಹಂಚಿಕೆ-ಸೂಚನೆಗಳನ್ನು ಚರ್ಚಿಸಿದ್ದಾರೆ. ಇವರ ಸೂಚನೆಗಳನ್ನು ಕಾರ್ಯರೂಪಕ್ಕೆ ತರುವ ವಿಷಯದಲ್ಲಿ ಒಂದು ಸಮಿತಿಯನ್ನು ನೇಮಿಸಲು ಮದ್ರಾಸು ಸರಕಾರವು ಸಂಬಂಧಪಟ್ಟ ಅಧಿಕಾರಿಗಳ ಹಾಗೂ ಸಮಾಜ ಸೇವಕರ ಒಂದು ಸಮ್ಮೇಳನ ಕರೆಯಲಿದೆ.)

ಎಲುಬಿನಲ್ಲಿ ರಂಜಕ ಪದಾರ್ಥಗಳು ಅತ್ಯಧಿಕವಾಗಿರುವದರಿಂದ, ಈ ದೇಶದಲ್ಲಿ ಎಲುಬು ಹುಡಿಯ ಉತ್ಪಾದನೆಯನ್ನು ಹೆಚ್ಚಿಸಲು ಸರಕಾರವು ಇಚ್ಛಿಸುತ್ತದೆ. ಎಲುಬು ಹುಡಿ ತಯಾರಿಸುವ ಕಾರ್ಖಾನೆಗಳೆಲ್ಲವೂ ಈಗ ದೊಡ್ಡ ನಗರಗಳಲ್ಲಿವೆ. ಇದರಿಂದ ಹಳ್ಳಿಗಳಿಗೆ ಗೊಬ್ಬರವಾಗಿ ಉಪಯೋಗಿಸಲು ಕೊಂಡೊಯ್ಯಲು ತುಂಬಾ ವೆಚ್ಚತಗಲುತ್ತವೆ. ಆದುದರಿಂದ ಸಂಸ್ಥಾನಗಳು ಕಾರ್ಖಾನೆಗಳನ್ನೆಲ್ಲಾ ವಿಕೇಂದ್ರೀಕರಿಸಿ, ವಿವಿಧ ಭಾಗಗಳಲ್ಲಿ ಸಣ್ಣ ಸಣ್ಣ ಸಂಸ್ಥೆಗಳಾಗಿ ಸ್ಥಾಪಿಸಿಕೊಂಡು ಸುತ್ತಮುತ್ತಲಿನ ಪ್ರದೇಶದಲ್ಲಿ ದೊರೆಯುವ ಎಲುಬುಗಳನ್ನು ಸಂಗ್ರಹಿಸಿ ಅದರಿಂದ ಹುಡಿ ತಯಾರಿಸಬಹುದು ಈ ಸಣ್ಣ ಸಣ್ಣ ಸಂಸ್ಥೆಗಳಿಗೆ ಸಹಾಯಿಕೊಡುವ ಬಗ್ಗೆ ಹಿಂದುಸ್ಥಾನ ಸರಕಾರವು ಎಲುಬು ಪುಡಿಮಾಡುವಂಥ ಒಂದು ಸಂಚಾಲಕ ಯಂತ್ರವನ್ನು ರಚಿಸಿರುತ್ತದೆ. ಈ ಯಂತ್ರಕ್ಕೆ ಚಕ್ರಗಳಿದ್ದು ಅದನ್ನು 25 ಅಶ್ವಶಕ್ತಿಯ ಒಂದು ಟ್ರ್ಯಾಕ್ಟರ್ ಎಳೆಯುತ್ತದೆ. ಯಂತ್ರ ನಡೆಸುವದಕ್ಕೆ ಬೇಕಾದ ಶಕ್ತಿಯನ್ನು ಈ ಟ್ರ್ಯಾಕ್ಟರೇ ಒದಗಿಸುವುದು ಈ ಸಂಚಾಲಕ ಯಂತ್ರಕ್ಕೆ ಸುಮಾರು ರೂ. 10,000 ವೆಚ್ಚ ತಗಲಬಹುದು.

ಈ ಕೈಗಾರಿಕೆಯನ್ನು ಸಣ್ಣ ಸಣ್ಣ ಸಂಸ್ಥೆಗಳ ರೂಪದಲ್ಲಿ ನೈಸರ್ಗಿಕವಾಗಿ ಬೆಳೆದುಕೊಂಡಿರುವ ಕೆಲವು ಸಂಸ್ಥಾನಗಳಲ್ಲಿ ಎಲುಬು ಹುಡಿ ತಯಾರಿಸುವ ಖರ್ಚಿನ ಕಡಿಮೆಯೆಂದು ತಿಳಿದು ಬಂದಿದೆ. ಉದಾಹರಣೆಗಾಗಿ, ಮುಂಬೈ ಪ್ರದೇಶದಲ್ಲಿ ಟನ್ನಿಗೆ ರೂ. 143, ಉತ್ತರಪ್ರದೇಶದಲ್ಲಿ ರೂ. 170, ಮಧ್ಯ ಭಾರತದಲ್ಲಿ ರೂ 150, ಈ ದರದಲ್ಲಿ ಎಲುಬು ಹುಡಿ ತಯಾರಾಗುತ್ತದೆ. ಮದ್ರಾಸು ಕಲ್ಲುತ್ತಾಗಳಲ್ಲಿರುವ ದೊಡ್ಡ ಕಾರ್ಖಾನೆಗಳಲ್ಲಿ ಟನ್ನಿಗೆ ರೂ 250—280 ಕೇಳುತ್ತಾರೆ.

ನೈಟ್ರೋಜನ್ ಸಿದ್ಧವಿದೆ

ರಕ್ತ ಹುಡಿ ಇನ್ನೊಂದು ಅವಶ್ಯಕ್ಯ ಸೇಂದ್ರಿಯ ಗೊಬ್ಬರವಾಗಿದೆ. ಮಣ್ಣಿಗೆ ಬೇಕಾದಷ್ಟು ನೈಟ್ರೋಜನ್ ಒದಗಿಸುತ್ತದೆ. ಶೇಕಡ 12—15 ರಷ್ಟು ನೈಟ್ರೋಜನ್ನಿನಿಂದ ಕೂಡಿದ ರಕ್ತವು ಸಸಿಗೆ ಸುಲಭದಲ್ಲಿ ದೊರೆಯುತ್ತದೆ.

ಹಿಂದುಸ್ಥಾನದ ಪ್ರಾಣವಧೆ ನಡೆಯುವ ಸ್ಥಳಗಳಲ್ಲಿಯೇ ಹಾಳಾಗಿ ಹೋಗುವ ರಕ್ತವನ್ನು ಸಂಗ್ರಹಿಸಿದರೆ, ವರ್ಷಕ್ಕೆ 26,000 ಟನ್ನುಗಳಿಗಿಂತಲೂ ಅಧಿಕ ರಕ್ತ ಹುಡಿ ದೊರೆಯಬಹುದೆಂದು ಅಂದಾಜು ಮಾಡಲಾಗಿದೆ. ಈ ರಕ್ತ ಹುಡಿಯು ಸುಮಾರು 2½ ಲಕ್ಷ ಎಕರೆ ಜಮೀನಿಗೆ ಗೊಬ್ಬರವಾಗಿ ಉಪಯೋಗಿಸಲ್ಪಡಲು ಸಾಕು. ರಕ್ತದಿಂದ ರಕ್ತ ಹುಡಿ ತಯಾರಿಸುವುದು ಸುಲಭದ ಕೆಲಸ. ಅದಕ್ಕೆ ಹೆಚ್ಚು ಬಂಡವಾಳವಾಗಲೀ ಕೊಡಕಿನ ಯಂತ್ರಸಲಕರಣೆಯಾಗಲೀ ಬೇಕಾಗಿಲ್ಲ. ರಕ್ತವನ್ನೆಲ್ಲಾ ಸಂಗ್ರಹಿಸಿ ದೊಡ್ಡ ಕಡಾಯಿಯಲ್ಲಿ ಹಾಕಿ, ಸ್ವಲ್ಪ ಸ್ವಲ್ಪ ಸೀಸೆ ಸೇರಿಸಿ ಕುದಿಸಬೇಕು. ಈ ರಕ್ತವು ಗಟ್ಟಿಯಾಗಿ ಒಣಗಿ ಧೂಳಿನಂತೆ ಹುಡಿಯಾಗುತ್ತದೆ ಈ ಹುಡಿಯನ್ನೇ ಮಣ್ಣಿಗೆ ಹಾಕುವುದು.

ಮೂಳೆಯ ಹುಡಿ

ಈಗ ಜಾನುವಾರು ಸತ್ತರೆ ಅವುಗಳ ಚರ್ಮ ಮೂತ್ರ ಉಪಯೋಗಿಸಲ್ಪಡುತ್ತಲ್ಲದೆ, ಮೂಳೆಯನ್ನೆಲ್ಲ ಬಿಸಾಡಲಾಗುತ್ತದೆ. ಹೆಣದಲ್ಲಿ ಶೇಕಡ 11-12 ರಷ್ಟು ನೈಟ್ರೋಜನಿನ ಹೆಣವನ್ನು ಸಣ್ಣ ಸಣ್ಣ ತುಂಡುಗಳಾಗಿ ಮಾಡಿ, ಜೆನ್ನಾಗಿ ಬೇಯಿಸಿ, ಕೊಬ್ಬನ್ನು ಹೊರಗೆ ಬರಿಸಿದ ನಂತರ ಒಣಗಿಸುವುದು.

ಮೂತ್ರ ಉತ್ತಮ ನೈಟ್ರೋಜ್ ಮೂಲ

ಮನುಷ್ಯರ ಮೂತ್ರವು ನೈಟ್ರೋಜ್ ತುಂಬಿದ ಅತ್ಯುತ್ತಮ ಗೊಬ್ಬರ. ಮನುಷ್ಯರು ತಿನ್ನುವ ನೈಟ್ರೋಜನಿನಲ್ಲಿ ಶೇಕಡ ಸುಮಾರು 95 ರಷ್ಟು ಮೂತ್ರದಲ್ಲಿ ಹೊರ ಹೋಗುತ್ತದೆ. ಒಂದು ವರ್ಷದಲ್ಲಿ ಒಬ್ಬನ ಮೂತ್ರದಿಂದ ಸುಮಾರು 13 ಪೌಂಡುಗಳಷ್ಟು ನೈಟ್ರೋಜನ್ ಪಡೆಯಬಹುದೆಂದು ಅಂದಾಜು ಮಾಡಲಾಗಿದೆ. ನೀವಾಸರಿಯಲ್ಲಿ ಮಣ್ಣಿಗೆ ಸಾಧಾರಣವಾಗಿ ಎಕರೆಗೆ 20 ಪೌಂಡುಗಳಷ್ಟು ಗೊಬ್ಬರ ಬೇಕಾಗುತ್ತದೆ. ಆದುದರಿಂದ ಒಬ್ಬನ ಮೂತ್ರವು ಅರ್ಧ ಎಕರೆಗಿಂತ ಹೆಚ್ಚು ಭೂಮಿಗೆ ಗೊಬ್ಬರವಾಗಲು ಸಾಕ್ಕು. ಹಿಂದುಸ್ಥಾನದಲ್ಲಿ ಒಬ್ಬನಿಗೆ ಸರಾಸರಿ 543 ಎಕರೆಗಳಷ್ಟು ಸಾಗುವಳಿ ಭೂಮಿ ಇದೆಯೆಂದಾದರೆ, ಈ ದೇಶದಲ್ಲಿ ಸಾಗುವಳಿ ಭೂಮಿಗೆ ಬೇಕಾದ ಎಲ್ಲಾ ನೈಟ್ರೋಜನನ್ನೂ ಮನುಷ್ಯರಿಗೆನೇ ಒದಗಿಸಲು ಸಾಧ್ಯವಿದೆ. ಶ್ರೀ ವಲುಂಜ್ಕರ್, ಅವರು ವ್ಯರ್ಥವಾಗುವ ಈ ವಸ್ತುಗಳನ್ನು ಸಂಗ್ರಹಿಸಿ, ಅದರ ಅಮೂಲ್ಯ ಪದಾರ್ಥಗಳು ಕೆಡದ ರೀತಿಯಲ್ಲಿ ಇಂಗುವ ಬಗ್ಗೆ ಒಂದು ಡಬ್ಬಿ ತಯಾರಿಸಿದ್ದಾರೆ. ಸಾಮಾನ್ಯ ಡಬ್ಬಿಯಲ್ಲಿ ಮಣ್ಣು, ಇದ್ದಲು -ವಾಗರಗಸದ ಹುಡಿಗಳಂತಿರುವ ಸಾಮಗ್ರಿ

(ಮುಂದೆ ಪುಟ ನೋಡಿರಿ.)

ಎಲುಬು ರಕ್ತಗಳೆ ಗೊಬ್ಬರ
ಜಾನುವಾರುಗಳು ಸತ್ತರೂ
ಉಪಯೋಗವುಳ್ಳವು

(೨ನೇ ಪುಟದಿಂದ)

ಯನ್ನು ತುಂಬಿಸುವುದು. ಸೂಕ್ಷ್ಮಜಂತುಗಳನ್ನು ಪಟ್ಟಿಯಲ್ಲಿ ಕೆಳಭಾಗಕ್ಕೆ ಕೊಂಡೊಯ್ದು ಅದರ ಅವೋಸಿಯಂ ಗಾಳಿಯೊಡನೆ ಮಿಶ್ರವಾಗದಂತೆ ತಡೆಯುವ ಬಗ್ಗೆ ಈ ಪಟ್ಟಿಗೆ ಲೋಹದ ಜಾಲರಿಯನ್ನು ಬಿಗಿಸಲಾಗಿದೆ. ಈ ಹೀರುವ ಸಾಮಗ್ರಿಯು ಒಣಗಿದ ನಂತರ ಅದನ್ನು ಬಿಗಿಸಿ, ಪುನಃ ಉಪಯೋಗಿಸಬಹುದು. ಇದರಿಂದ ಜಿಗಾರ್ಟ್ ಸ್ಟೆಟ್ರೋಜನ್ ಪೆಟ್ಟಿಗೆಯು ಸಂಗ್ರಹವಾಗುತ್ತದೆ. ಪರೀಕ್ಷಾ ಪ್ರಯೋಗ ನಡೆಸಿದಾಗ ಇದ್ದಲು ಮೂರು ಸಲ, ಒಣಪ್ರಾಣಿಯಾಗಿ ಅದರಲ್ಲಿ ಶೇಕಡ 7 ರಷ್ಟು ನೈಟ್ರೋಜನ್ ಇರುತ್ತದೆಂದು ತಿಳಿದು ಬಂದಿದೆ. ಇದು ಹಿಂಡಿಯಲ್ಲಿರುವ ನೈಟ್ರೋಜನ್ ಪ್ರಮಾಣಕ್ಕೆ ಸರಿಸಮಾನವಾಗಿದೆ

ಪಶುಗಳು ಉಪಯೋಗಿಸಿದ ಬಾಕಿ ಉಳಿಯುವ ನೈಟ್ರೋಜನ್, ಸಗಣಿ, ಕೆರೆ ಬಾವಿ ಸಮುದ್ರಕ್ಕೆ ಸೋರಿ ಬೀಳುತ್ತದೆ. ಅಲ್ಲಿ ಅನೇಕ ಮೀನು ಮತ್ತು ಇತರ ಜಲಜೀವಿಗಳಿಗೆ ಆಹಾರವಾಗುತ್ತದೆ. ಮೀನು ಸಾಗುವಳಿಯಿಂದ ಈ ನೈಟ್ರೋಜನ್ ಗೊಬ್ಬರ ದೊರೆಯುವ ಇನ್ನೊಂದು ಮಾರ್ಗವೆಂದರೆ ವಿಷಸಿದ ವ್ಯರ್ಥಭಾಗ ಅಥವಾ ವಿಷನು ಹುಡಿ.

ಮದ್ರಾಸು ಸಂಸ್ಥಾನದಲ್ಲಿ ಸಾಗುವಳಿ ಭೂಮಿಗಳು ಪ್ರತಿವರ್ಷ ಈ ಕೆಳಗಿನಂತೆ ರಾಸಾಯನಿಕ ಪದಾರ್ಥಗಳನ್ನು ಕಳೆ ಕೊಳ್ಳುತ್ತಿವೆಯೆಂದು ಅಂದಾಜು ಮಾಡಲಾಗಿದೆ—

	ಟನ್ನು.
ನೈಟ್ರೋಜನ್(ಸಸಾರಜನಕ)	886,000
ಫೋಸ್ಫರಸ್ (ರಂಜಕ)	369,000
ಪೊಟೇಶ್ (ಸೆಸ್ಕ್ವಾನ)	905,000

ಇದನ್ನು ಭರ್ತಿ ಮಾಡಿಕೊಳ್ಳಲು ಸಮಸ್ತ ಸಂಸ್ಥಾನಕ್ಕೆ 35 ಲಕ್ಷ ಟನ್ನುಗಳಷ್ಟು ಅಮೋನಿಯಂ ಸಲ್ಫೇಟ್ ಬೇಕು. ಈ ಪ್ರಮಾಣವನ್ನೆಲ್ಲಾ ಸರಬೇಪರಿಯಿಂದ ತರಿಸಲು ಸಾಧ್ಯವಿಲ್ಲ. ಆದುದರಿಂದ ಮೇಲೆ ಹೇಳಿದ ವಸ್ತುಗಳು ಮಣ್ಣಿನ ಸಾರವನ್ನು ಸ್ವಲ್ಪ ಮಟ್ಟಿಗಾದರೂ ಹಿಂದೆ ಬರಿಸುವುದರಲ್ಲಿ ಸಂದೇಹವಿಲ್ಲ.

ಸತ್ಪ್ರವರ್ತನೆ

ಪ್ರಿಯ ಕರ್ನಾಟಕರೆ!

ಕೃಷಿ ಇಲಾಖೆಯ ಪಶುರಕ್ಷಣಾ ವಿಭಾಗಕ್ಕೆ ಸಂಬಂಧಿಸಿದ ಪ್ರಚಾರ ಕೊಡುವಂತೆ ನಿಮ್ಮ ಔದಾರ್ಯ ಕೋರುತ್ತೇನೆ. ಚಿಕ್ಕಬಳ್ಳಾಪುರ ತಾಲೂಕಿನ ಪೂಲಕಲ ಗ್ರಾಮದಲ್ಲಿ 40 ಎಕರೆ ವಿಸ್ತೀರ್ಣದ ಮಾವಿನ ತೋಟವಿದೆ. ಕಳೆದ 5-6 ವರ್ಷಗಳಲ್ಲಿ ಹುಳಗಳ ಉಪಟಳದಿಂದ ನನಗೆ ಬೆಳೆಯೇ ಇದ್ದಿಲ್ಲ. ಹುಳಗಳಿಂದ ಹೂವುಗಳು ಉದುರುತ್ತಿದ್ದವು. ಎಲೆಗಳ ಮೇಲೆಲ್ಲಾ ಕಪ್ಪು ವರ್ಣದ ಅಂಟಾದ ದ್ರವವು ಸಸಿಸುತ್ತಿತ್ತು. ಈ ವರ್ಷ ಜಿಗ್ಗೊರಿನ್ಲಿಗುವ ಸಸಿರಕ್ಷಣಾ ಅಧಿಕಾರಿಗಳು 36 ಗ್ಯಾಲನ್ನು ನೀರಿಗೆ ಒಂದು ಪೌಂಡಿನಂತೆ ಡಿಗೂಸರಾಲ್ 50% (ಡಿ. ಡಿ. ಟಿ) ಔಷಧ ಕಲಸಿ ಮಾವಿನ ಸಸಿಗಳಿಗೆ ಚಿಮುಕಿಸುವಂತೆ ಸಲಹೆ ಕೊಟ್ಟರು. ಪ್ರತಿ ಚಿಮುಕಿಸಲಕ್ಕೆ ಎರಡು ಸೇರು ಸಂಪ್ರಗಳ ದ್ರವ ಅವರು ಒದಗಿಸಿದರು. ಈ ವರ್ಷ ನಾನು ಪ್ರಥಮ ವಾರದಲ್ಲಿ ಇಡೀ ತೋಟಕ್ಕೆ ಈ ಔಷಧಿ ಚಿಮುಕಿಸಲಾಯಿತು. ಎರಡನೆಯ ಸಲ ಕೊಯಿಲಿನ ವಾರದಲ್ಲಿ ಎರಡನೆಯ ಸಲ ಚಿಮುಕಿಸಲಾಯಿತು. ಈ ಸಲ ಚಿಮುಕಿಸಿದ ಕೂಡಲೇ ಮಳೆ ಬಂದುದರಿಂದ ದ್ರವವು ಸಸಿಗಳಲ್ಲಿ ಹೆಚ್ಚು ಸಂಖ್ಯೆ ಕೊಳೆಯಲು ಹೋಗಿದೆ. ಹೀಗಿದ್ದರೂ ಉತ್ತಮ ವ್ಯತ್ಯಾಸ ಕಂಡಿದೆ. ಕಳೆದ ೫-೬ ವರ್ಷಗಳಲ್ಲಿ ನನಗೆ ಒಂದು ಮಾವಿನ ಗಾತಿ ಕಂಬ ಹಣ್ಣು ಸಿಕ್ಕಿತ್ತು. ಆದರೆ ಈ ವರ್ಷ ಈ ಔಷಧಿ ಚಿಮುಕಿಸುವ ವಿಧಾನದಿಂದಾಗಿ ಸುಮಾರು ರೂ. ೪೫೦ ಬೆಲೆಯ ಮಾವಿನ ಹಣ್ಣನ್ನು ವಿಕ್ರಯ ಮಾಡಿರುವೆನು. ಔಷಧ ಮತ್ತು ಚಿಮುಕಿಸುವ ಖರ್ಚು ಒಟ್ಟು ರೂ. 85೧ ಕ್ಕೆ ಮೀರಲಿಲ್ಲ. ಸುತ್ತಮುತ್ತಲಿನ ಮಾವಿನ ತೋಟಗಳಲ್ಲಿ ಈ ರೀತಿ ಚಿಮುಕಿಸದಿದ್ದುದರಿಂದ ಅಲ್ಲಿ ಹಣ್ಣೇ ಆಗಲಿಲ್ಲ. ಹುಳಗಳೇ ಇಷ್ಟಕ್ಕೆ ಕಾರಣ. ಕೃಷಿ ಇಲಾಖೆಯ ಪಶು ರಕ್ಷಣಾ ವಿಭಾಗದವರು ನಮ್ಮ ಮಾವಿನ ಸಸಿ ಬೆಳೆಯುವವರಿಗೆ ಹುಳಗಳ ಉಪಟಳದಿಂದ ಸಾರಾಗುವ ಉಪಾಯವನ್ನು ತೋರಿಸಿಕೊಟ್ಟು ಸಹಾಯ ಕೊಟ್ಟಿದ್ದಾರೆ. ಇದಕ್ಕಾಗಿ ನಾನು ಅವರಿಗೆ ತುಂಬಾ ಕೃತಜ್ಞನಾಗಿರುವೆನು. ಪ್ರತಿಯೊಬ್ಬ ಮಾವಿನ ತೋಟದ ಯಜಮಾನನೂ ಈ ವಿಧಾನವನ್ನು ಕೈಕೊಂಡು ಮಾವಿನ ಬೆಳೆಯನ್ನು ರಕ್ಷಿಸ ಬೇಕೆಂದು ನಿಮ್ಮ ಪತ್ರಿಕೆಯ ಮುಖಾಲಕ ನಾನು ಕೋರುತ್ತೇನೆ.

ಶ್ರೀ ಪಿ. ರಾಮಚಂದ್ರ ರಾವ್.

ಭೂಮಿಯ ಒಡೆತನ
ಸಮಾಜದ್ದಾಗಬೇಕು.

ಭೂಮಿಯು ಒಡೆತನವು ಸಾಮೂಹಿಕವಾಗಿ ಸಮಾಜವಾದದ್ದಾಗಿರಬೇಕೆಂದು "ನಮ್ಮ ಭೂ ಸಮಸ್ಯೆ" ಎಂಬ ವಿಷಯದ ಸಮಾಲೋಚನೆ ಮಾಡುತ್ತ ಅಖಿಲ ಭಾರತ ಗ್ರಾಮೋದ್ಯೋಗ ಸಂಘದ ಡಾ. ಜೆ. ಸಿ. ಕುಮಾರಪ್ಪನವರು ಹೇಳಿದರು.

ಅವರೆನ್ನುವುದೇನೆಂದರೆ ಭೂಮಿಯು ಆಹಾರದ ಉತ್ಪಾದನೆ ಮಾಡುವದೆ ಆಹಾರದ ಉತ್ಪಾದನೆ ಮಾಡುವದಾದ್ದರಿಂದ ಭೂಮಿಯು ಸಮಾಜದ ಹಿತಕ್ಕಾಗಿ ಉಪಯೋಗಿಸಲ್ಪಡತಕ್ಕದ್ದು. ಸಮಾಜವು ಇದರ ಒಡೆಯನಾಗಬೇಕು. ಅಂದರೆ ಅದರ ಸ್ವಾಮಿತ್ವ ಪಡೆಯಬೇಕೆಂಬ ಅಥವಾ ಅದನ್ನೊಂದು ಬಂಡವಳೆಂದು ಉಪಯೋಗಿಸುವ ರೀತಿಯ ಒಡೆತನವಲ್ಲ ಆದರೆ ಭೂಮಿಯನ್ನೂ ಸಾಮಾ ವಿಧವಾಗಿ ಉಪಯೋಗಿಸಲು ಅನುಕೂಲ ಒದಗಿಸುವ ಅಧಿಕಾರ ಸಮಾಜದ್ದಿರಬೇಕು. ಭೂಮಿಯ ಉಪಯೋಗವು ಹೀಗೆಯೇ ಆಗಬೇಕೆಂದು ನಿರ್ಣಯಿಸುವ ಅಧಿಕಾರ ಸಮಾಜದ್ದಾಗಬೇಕು.

ಒಕ್ಕಲತನದ ಸುಧಾರಣೆ

ಜನಸಂಖ್ಯೆ ಬೆಳೆಯುತ್ತಿರುವ ಭಾರತದಲ್ಲಿ ಒಕ್ಕಲತನದ ಸುಧಾರಣೆಯಾಗಬೇಕು. ಸುಧಾರಣೆಯ ಸಾಧನೆಗಾಗಿ ನಮ್ಮ ದೇಶದಲ್ಲೇ, ಉತ್ಪಾದನೆಯಾಗುವ ಕಚ್ಚಾ ಸರಕುಗಳ ಮೂಲಕ ಉದ್ದಿಮೆಗಳ ಅಭಿವೃದ್ಧಿಯನ್ನು ವ್ಯಾಪಕವಾಗಿ ಮಾಡುವ ಕಾರ್ಯಕ್ಕೆ ತಡೆಹಾಕಬೇಕು. ಆಹಾರದ ಕೊರತೆಯಿಂದ ನಮ್ಮ ದೇಶದ ಭೂ ಸಮಸ್ಯೆ ಅತ್ಯಂತ ಗಡಚಾಗಿದೆ. ಇತರ ದೇಶಗಳ ಉತ್ಪಾದನೆ ಪ್ರಮಾಣಕ್ಕಿಂತ ನಮ್ಮಲ್ಲಿಯ ಪ್ರಮಾಣ ಬಹಳ ಕಡಿಮೆಯಿದೆ. ಪ್ರತಿ ಎಕರೆಯ ಉತ್ಪನ್ನವನ್ನು ಹೆಚ್ಚಾಗುವಂತೆ ಮಾಡಬೇಕು. ಟ್ರಾಕ್ಟರುಗಳನ್ನು ಬೊಸಭೂಮಿಯು ಸಾಗುವಳಿಗೆ ಮಾತ್ರ ಉಪಯೋಗಿಸಬಹುದು. ಕೇವಲ ಉಪಯೋಗಿಸದ ಭೂಮಿಯನ್ನು ಉಪಯೋಗಿಸುತ್ತಿದ್ದ ಜಮೀನುದಾರರ ಭೂಮಿಯನ್ನು ವಶಪಡಿಸಿಕೊಳ್ಳುವಾಗ ಅವರಿಗೆ ಪರಿಹಾರವೇನನ್ನೂ ಕೊಡಬಾರದೆಂದು ನನ್ನ ವೈಯಕ್ತಿಕ ಅಭಿಪ್ರಾಯವಿದೆ.

ಬಳ್ಳಾರಿ ಜಿಲ್ಲೆಯಲ್ಲಿ ಸರ್ಕಾರದವರು ಭಾವಿಗಳಿಗಾಗಿ ವೆಚ್ಚಮಾಡಿದ ಹಣ.

ಆಲೂರು ತಾಲೂಕು.

	ಆಲೂರು ಫಿರ್ಕಾ.	ಭಾವಿಗಳು	ಪಬ್ಲಿಕ್ + ಸಾಲಕೊಟ್ಟ ಹಣ	
1	ಆಲೂರು	16	11875	ರೂ
2	ಹತ್ತಿಬೆಳಗಲ್ಲು	2	1350	,,
3	ಹಾಲಹರವಿ	6	3000	,,
4	ಅರಕೆರೆ	3	2000	,,
5	ಕುರುವಳ್ಳಿ	1	500	,,
6	ಬಾಪುರ	3	2900	,,
7	ಗೂಳ್ಯ	7	5562	,,
8	ಜಂಗಮರ ಹೊಸಹಳ್ಳಿ	4	3500	,,
9	ಬಿಳೆಹಾಳು	3	1750	,,
10	ಬಲ್ಲೂರು	7	4000	,,
11	ಅಮೃತಾಪುರ	1	500	,,
12	ವಿರುಪಾಪುರ	1	500	,,
13	ಕರಡಿಗುಡ್ಡ	2	1500	,
14	ಹುಳಿಬೀಡು	1	750	,,
	ಚಿಪ್ಪಿಗೆರೆ ಫಿರ್ಕಾ			
15	ಕುಂದನ ಗುರ್ತಿ	1	500	,,
16	ರಾಮದುರ್ಗ	3	1975	,,
17	ಚಿಪ್ಪಿಗೆರೆ	7	6000	,,
	ಹೊಳಗುಂದಿ ಫಿರ್ಕಾ			
18	ಹೆಬ್ಬಟ	3	2500	,,
19	ದೊಡ್ಡಗೋನಹಾಳು	1	500	,,
20	ನೇರಣಿಕಿ	6	4750	,,
21	ಯಳ್ಳರ್ತಿ	4	2000	,,
22	ಕೋಗಲಿತೋಟ	3	3600	,,
23	ಹೊನ್ನೂರು	1	1200	,,
24	ಸಮ್ಮತಗೇರಿ	1	500	,,
	ದೊಡ್ಡಹೋತೂರು ಫಿರ್ಕಾ			
25	ದೊಡ್ಡಹೋತೂರು	7	4900	,,
26	ಚಿನ್ನಹೋತೂರು	3	1500	,,
27	ಕಾತ್ರಿಕಿ	1	500	,,
28	ಅಷ್ಟಾರಿ	3	2250	,,
29	ಅಂಗಸಕಲ್ಲು	1	750	,,
30	ಮಣಿಕುರ್ತಿ	1	750	,,
			73762	

ಆಲೂರು ತಾಲೂಕಿನಲ್ಲಿ ಸರ್ಕಾರದವರು ಭಾವಿಗಳಿಗಾಗಿ ರೂ. 73762 ವೆಚ್ಚಿಸಿರುವರು

ನಿರುಪಯೋಗೀ ಮಾಧ್ಯಮಿಕ ಶಾಲೆಗಳು.

ಸಾಕಷ್ಟು ಸಂಖ್ಯೆ ಇಲ್ಲದೆ ವ್ಯರ್ಥ ಖರ್ಚಿನ ಮಾಧ್ಯಮಿಕ ಶಾಲೆಗಳನ್ನು ಮುಚ್ಚಬೇಕೆಂದು ನಿಶ್ಚಯಿಸಿದ್ದರು. ಅದರಿ ವಿದ್ಯಾಶಾಖೆಯು ಡೈರೆಕ್ಟರ ಸಿಫಾರಸಿನಂತೆ ಸರ್ಕಾರದವರು ಲೋಕಲ್ ಬೋರ್ಡು ಮುನಿಸಿಪಾಲಿಟಿ ಮತ್ತು ಇತರ ಖಾಸಗಿ ಮ್ಯಾನೇಜ್‌ಮೆಂಟಿನವರಿಗೆ ಮತ್ತೊಂದು ವರ್ಷ ಅವಕಾಶ ಕೊಟ್ಟು ಆ ಅವಧಿಯೊಳಗಾಗಿ ಸಂಖ್ಯೆಯನ್ನು ಹೆಚ್ಚಿಸಲು ಸೂಚಿಸಿದ್ದಾರೆ.

ಹಳೆಯ ಪದ್ಧತಿಯಂತೆಯೇ ಹಿಂದಿಯನ್ನು ಕಲಿಸಬಹುದೆಂದೂ ಸರ್ಕಾರದ ಹೊಸ ಆರ್ಡರು ಈ ವರ್ಷ ಅಮಲಿನಲ್ಲಿ ಬರುವದಲ್ಲೆಂದೂ ಸರಕಾರದವರು ಮತ್ತೊಂದು ಆಜ್ಞೆ ಹೊರಡಿಸಿರುತ್ತಾರೆ.

ಬಳ್ಳಾರಿ ಜಿಲ್ಲಾ ನಾಟಕ ಕಲಾ ಸಮಿತಿ ಅರಿಕೆ.

ಬಳ್ಳಾರಿ:— 7-6-'50 ದ್ವಿತೀಯ ಕಲಾ ಪರಿಷತ್ತು ರಾಯದುರ್ಗದಲ್ಲಿ ಕಳೆದ ಡಿಸಂಬರ್ ತಿಂಗಳಲ್ಲಿ ಕೂಡಬೇಕಾಗಿದ್ದು ಕೆಲವು ಅನಾನುಕೂಲಗಳಿಂದ ಕೂಡಿಸಲು ಸಾಧ್ಯವಾಗಲಿಲ್ಲವೆಂದು ತಿಳಿಸಲು ವಿಷಾದವೆನಿಸುತ್ತೆ.

3-6-'50 ಕಲಾಸಮಿತಿಯ ಅಧ್ಯಕ್ಷರು ಜಿಲ್ಲಾಬೋರ್ಡ್ ಸದಸ್ಯರಾದ ಶ್ರೀ ಬಾಣಾಪುರದ ದೊಡ್ಡ ಬಸವನಗೌಡರು ಶ್ರೀ ಸೂರ್ಯನಾರಾಯಣ ಶರ್ಮರು ವದೊಂದಿಗೆ ರಾಯದುರ್ಗಕ್ಕೆ ಹೋಗಿ ಅಲ್ಲಿಯ ಮುಖಂಡರಾದ ಶ್ರೀ ಸಿದ್ಧನ ಗೌಡರು (ಜಿಲ್ಲಾಬೋರ್ಡ್‌ಸದಸ್ಯರು) ಶ್ರೀ ಸಣ್ಣಬಸವನ ಗೌಡರು (ಪಂಚಾಯತಿ ಬೋರ್ಡ್ ಪ್ರೆಸಿಡೆಂಟ್) ಶ್ರೀ ಓಬಲಾಚಾರ್ಯರು, ಶ್ರೀ ಸುಬ್ಬಾ ಶಾಸ್ತ್ರಿಗಳು, ತ್ಯಾದಿ ಮುಖಂಡರೊಂದಿಗೆ ವಿಚಾರವಿನಿಮಯ ಮಾಡಲಾಗಿ ಬರುವ ಡಿಸೆಂಬರ್ ತಿಂಗಳಲ್ಲಿ ಕಲಾ ಪರಿಷತ್ತು ಕೂಡಿಸಲು ನಿರ್ಧರಿಸಲಾಗಿದೆ.

ಪರಿಷತ್ತಿನ ವತಿಯಿಂದ ಹೊರಡಬೇಕಾದ ಪುಸ್ತಕಕೊಡ ತನಗೊದಗಿದ ಅನೇಕ ಕುತ್ತುಗಳನ್ನು ದಾಟಿ ಇದೇ ನವಂಬರ್ ತಿಂಗಳೊಳಗಾಗಿ ಪರಿಷತ್ತಿನ ಸದಸ್ಯರ ಕೈ ಸೇರುವುದು.

ಅಧ್ಯಕ್ಷ,
ಕೆ. ದೊಡ್ಡನ ಗೌಡ ಜೋಳದರಾಶಿ.

ಹರಪನಹಳ್ಳಿ

ನಿನ್ನವರ್ಗದವರಿಗಾಗಿ ವಿದ್ಯಾರ್ಥಿ ನಿಲಯ

ಶ್ರೀ ಸಿ. ಭೋಜಾನಾಯ್ಕರು ಹೀಗೆ ತಿಳಿಸುತ್ತಾರೆ:—

"ಬಣಜಾರ (ಲಂಬಾಣಿ) ಕೊರಚ ಡೊಂಬರ ಪಗ್ಯೆರೆ ಬೋರ್ಡಿಂಗ್ ಗ್ರಾಂಗೆ ಅರ್ಹತೆಯುಳ್ಳ ಸುಮಾರು 15 ಜನ ಬಡ ವಿದ್ಯಾರ್ಥಿಗಳಿಗಾಗಿ ಉಚಿತ ಭೋಜನ ವಸತಿಗಳನ್ನು ಕೂಡಲು ಒಂದು ಹಾಸ್ಟೆಲ್ ಹರಪನಹಳ್ಳಿಯಲ್ಲಿ ಪ್ರಾರಂಭಿಸಲಿದ್ದೇವೆ. ಪ್ರಾರಂಭೋತ್ಸವವು ಹೊಸಪೇಟೆ ಡೆಪ್ಯುಟಿ ಕಲೆಕ್ಟರ್ ಶ್ರೀ ಭಗವಾನ ದಾಸ್‌ರಿಂದ ಈ ತಿಂಗಳು ಮೂರನೆಯ ವಾರವಾಗಲಿದೆ. ಸಂಬಂಧಿಸಿದ ಬಡ ವಿದ್ಯಾರ್ಥಿಗಳು ಈ ಕೆಳಗಿನವರಿಗೆ ಅರ್ಜಿ ಹಾಕಬೇಕು.

ಸಿ. ಭೋಜನಾಯ್ಕ,
ಕಾರ್ಯದರ್ಶಿ.



ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಕರುಣೆ ತೋರಬೇಕಾಗಿದೆ.

ಸ್ವಾತಂತ್ರ್ಯ ವ್ಯಾಪ್ತಿಯನಂತರ ಇತರ ಎಲ್ಲಾ ರಂಗಗಳಲ್ಲೂ ಗೊಂದಲವನ್ನೆಬ್ಬಿಸಿದ್ದಾಗೆ ವಿದ್ಯಾಭ್ಯಾಸ ರಂಗದಲ್ಲೂ ಗೊಂದಲ ಹುಟ್ಟಿದೆ. ಇದಂತೆ ವ್ಯಾಪಕವಾದ ವಿದ್ಯಾಭ್ಯಾಸಕ್ಕೆ ಕೀಲಕ ಪ್ರಾಯವಾದ ಪ್ರಾಥಮಿಕ ಶಾಲೆಗಳನ್ನು ಸ್ಥಾಪಿಸುವುದಕ್ಕೆ ಹೆಚ್ಚಿಸಿದ್ದಾದರೂ ಸಾಕಷ್ಟು ಯೋಗ್ಯತೆಯ ಕರಬೇತಾದ ಉಪಾಧ್ಯಾಯರ ಕೊರತೆ ಬಿದ್ದು ಕಾಡಿದೆ. ಶೋಚ್ಯತೆಯವರು ಅನಿರ್ವಾಹವನ್ನುಂಡು ಸಮಯ ವಿಸಲ್ಪಟ್ಟಿರುವರು ಅವರಿಗೆ ಬೋಧನಾ ಶಕ್ತಿಯೂ ಇಲ್ಲ. ವಿದ್ಯಾಪನ ಕಲೆಯೂ ಅವರಲ್ಲಿ ಶೂನ್ಯ. ಹೊಸಹೊಸ ಪಾಠ್ಯ ಪುಸ್ತಕಗಳು ಹೊಸ ವಾತ್ಯಕ್ರಮ ಹೊಸ ಪದ್ಧತಿಗಳು ಪ್ರತಿನಿತ್ಯವೂ ಇವುಗಳಲ್ಲಿ ಪರಿವರ್ತನೆ ಹೀಗಾಗಿ ಉಪಾಧ್ಯಾಯರಿಗೆ ಏನು ಹೇಳಬೇಕು? ಹೇಗೆ ಬೋಧಿಸಬೇಕೆಂಬುದೇ ತೋಚದಂತಾಗಿದೆ ಈಗ ಕೊಡುತ್ತಿರುವ ತುಟ್ಟಿ ಭತ್ಯಕ್ಕೊಂದಿಸಿ ಸಂಬಳವು ಸಾಕಾಗುವುದೆಂದು ಭಾವಿಸಿದಾದರೂ ನಿತ್ಯಾವಶ್ಯಕತೆ ವಿಲಕ್ಷಣವಾಗಿರುವ ಜೀವನ ಸಾಮಗ್ರಿಯಲ್ಲಿ ಉಪಾಧ್ಯಾಯರ ಆದರಲ್ಲೂ ಕುಟುಂಬೀಕರ ಕಷ್ಟನಷ್ಟಗಳು ಹೆಚ್ಚುತ್ತಿವೆ ಯೆಂಬುದರಲ್ಲಿ ಸಂಶಯವೂ ಇಲ್ಲ. ಉಪಾಧ್ಯಾಯರಿಗೆ ಉದ್ಯರೆ ಕೈಗಡ ದೊರೆಯುವುದು ಬಹು ಸ್ವಾಸ್ಥ್ಯ ಈ ಕಷ್ಟಗಳೊಂದಿಗೆ ಶಾಲೆಗೇ ಕಟ್ಟಡವಿಲ್ಲದಾಗ ಉಪಾಧ್ಯಾಯರಿಗೆ ಬೇರೆ ಮನೆ ಎಲ್ಲಿಂದ ದೊರೆಯಬೇಕು? ಅನಿರ್ವಾಹವಸ್ಥೆ ವರ್ತಿಸಿದ ಉಪಾಧ್ಯಾಯರು ಕುಟುಂಬ ಸಮೇತ ಶಾಲೆಯಲ್ಲೇ ಇಳಿಯಬೇಕಾಗುತ್ತೆ. ಆಗ ಡೆಪ್ಯುಟಿ ಇನ್ಸ್ಪೆಕ್ಟರು ಜನರನ್ನೆಲೆ ಅಪರಾಧವನ್ನು ಹೊರಿಸಿ ಅವರನ್ನು ಶಿಕ್ಷಾರ್ಹರನ್ನಾಗಿ ಗಣಿಸುವರು.

ಸರ್ಕಾರವು ಈ ತೊಡಕುಗಳನ್ನು ಸಮಯ ಮಾಗಿಸಿ ವ್ಯವಸ್ಥೆಗೊಳಿಸುತ್ತಲೇ ಇರುವರು. ಸೌಲಭ್ಯಕ್ಕೆ ಸ್ಥಾನದಿಂದ ಹಿಂದೆ ಬಿದ್ದಿರುವ ಕಡೆಗೆ ಲಕ್ಷ ಕೊಡಬೇಕೆಂದು ಮಂತ್ರಿಗಳು ಆಜ್ಞೆ ಮಾಡಿದ್ದಾರೆ. ಕೊಯಂಬತ್ತೂರು ಜಿಲ್ಲೆಯನ್ನು ಹಿಂದಿದ್ದ ಸ್ಥಿತಿಗೆ ತರಲು ಮಂತ್ರಿಗಳು ಈ ಆಜ್ಞೆಯಿಂದ ತಮಿಳು ಮಾತೃಭಾಷೆಯವರಿಗೆ ಬಾಧೆ ತಟ್ಟುವ ಸಂಭವವಿದೆ. ಕೃಷ್ಣಣ್ಣನೇ ಸರ್ಕಾರವು ಹೊರಡಿಸಿರುವ ಆಜ್ಞೆಯನ್ನು ಜಾರಿಗೆ ತರಲಿಲ್ಲ. ಉಪಾಧ್ಯಾಯ ಸಂಘಗಳನ್ನೆಲ್ಲಾ ಸಂಯುಕ್ತವಾಗಿ ಕಳುಹಿಸಿದ ವಿಜ್ಞಾಪನೆಗಳನ್ನು ಸರ್ಕಾರವು ಮಾನ್ಯ ಮಾಡಬೇಕಿತ್ತು. ಈಗ ಯಾವ ವಿದ್ಯಾರ್ಥಿಗೇ ಆಗಲಿ ಪ್ರಾಥಮಿಕ ವಿದ್ಯಾಭ್ಯಾಸವು ಸುಗಮಸಂತರ ಮಾಡುವ ಭಾವನೆಗಳನ್ನು ಕಲಿಯಲೇ ಬೇಕಾಗುತ್ತದೆ. ಮಾತೃಭಾಷೆ ರಾಷ್ಟ್ರಭಾಷೆ ಇಂಗ್ಲೀಷ್ ಇಂಗ್ಲೀಷಿಗೆ ಬದಲಾಗಿ ಸಂಸ್ಕೃತವನ್ನು ಕಲಿತುಕೊಳ್ಳಬಹುದು. ಸರ್ಕಾರವು ಜಾತೀಯತೆ ಪ್ರಾಂತೀಯ ಕಿಚ್ಚಗಳಿಗೆ ಸ್ಥಾನ ಕೊಟ್ಟರೆ ರಾಜ್ಯವರವು ಸುಗಮವಾಗಿ ನಡೆಯುವುದೇ ಕಷ್ಟವಾಗುತ್ತದೆ.

ಒಕ್ಕಲಿತನ ಉದ್ವಿಮೆ

ಒಕ್ಕಲಿತನ ಮತ್ತು ಉದ್ವಿಮೆಗಳ ವರಸ್ಪರ ಸಂಬಂಧಗಳ ವಿಚಾರದಲ್ಲಿ ಹೇಳುವುದಾದರೆ ಒಕ್ಕಲಿಗನು ದೇಶದ ಸಂಸತ್ತಿನ ನಿಜವಾದ ಉಪ್ಪನ್ನವಾಗಿದ್ದಾನೆ ಉದ್ವಿಮೆದಾರರು ಕೇವಲ ಅದರ ಪರಿವರ್ತಕರಾಗಿದ್ದಾರೆ. ಆದುದರಿಂದ ಉದ್ವಿಮೆ ವಿಭಾಗವನ್ನು ಒಕ್ಕಲಿತನ ದೊಂದಿಗೆ ಒಂದಾಗಿಸಬೇಕು. ಹೀಗಾಗುವವರೆಗೂ ಸಮಾನ ಹಂಚುವಿಕೆಯ ಮಾರ್ಗದಲ್ಲಿ ತೊಂದರೆಗಳಿದ್ದೇ ಇರುವವು

ದೇಶದಲ್ಲಿ ಸಾಗುವಳಿಗೆ ದೊರೆಯಬಹುದಾದ ಭೂಮಿಯು ಅಲಕ್ಷಣವಾಗಿರಬೇಕು. ಕಾಲಿ ಬೀಳಿ ವಿವಿಧ ಘನ ಕಾರ್ಯವಲ್ಲಿ ಇತ್ಯಾದಿಗಳನ್ನು ಅವಶ್ಯಕತೆಗನುಗುಣವಾಗಿ ಬೆಳೆಯಲು ಇನ್ನು ಹೊಂದಿಕೊಳ್ಳುವ ರೀತಿಯಲ್ಲಿ ಭೂಮಿಯು ಹಂಚುವಿಕೆಯಾಗಬೇಕು.

ರಾಷ್ಟ್ರೀಯಕರಣವು ಶೀಘ್ರವಾಗಿ ಮತ್ತು ಸಂಪತ್ತಿನ ಹಂಚುವಿಕೆ ನಷ್ಟವಾದ ರೀತಿ ಸಮಾಜ ರಚನೆಗೆ ಅನುಕೂಲವಾಗುವ ಕ್ಷಿಣ ಪಕ್ಷ ತಿಳಿಯಬೇಕು

ಇಂಡೋನೇಶಿಯಾದಲ್ಲಿ ನೆಹರು

ಇಂಡೋನೇಶಿಯಾದ ರಾಜಧಾನಿ ಜಕಾರ್ತಾಕ್ಕೆ ಪಂಡಿತ ನೆಹರೂರವರು ಆಗಮಿಸಿದಾಗ ಅಲ್ಲಿನ ಅಧ್ಯಕ್ಷರು ಅಭೂತಪೂರ್ವವಾದ ಸ್ವಾಗತವನ್ನಿತ್ತರು ಇಂಡೋನೇಶಿಯಾ ಪಾರ್ಲಿಮೆಂಟಿನಲ್ಲಿ ಮಾತಾಡುತ್ತಾ ಏಶಿಯಾದಲ್ಲಿ ಸ್ವಾತಂತ್ರ್ಯವನ್ನು ಸಂಘಟಿಸುವ ಮೊದಲೇ ಏಶಿಯಾದೇತರಗಳಲ್ಲಿ ಸಂಘರ್ಷಣೆ ವ್ಯಾರಂಭವಾದದ್ದು ದುರ್ದೈವ ಆದರೆ ಈಗ ಏಶಿಯಾವನ್ನು ಯಾರೂ ಕಡೆಗಣಿಸಬಾರದೆಂದರು.

ಹರಿಜನರು ಮತ್ತು ಬುದ್ಧ ಧರ್ಮ

ಕೇಂದ್ರ ಸರಕಾರದ ಮಂತ್ರಿಗಳಾದ ಡಾ. ಅಂಬೇಡ್ಕರರು (ಮೊದಲು ಹರಿಜನರು ಈಗ ಬುದ್ಧ ಧರ್ಮವನ್ನು ಸ್ವೀಕರಿಸಿ ತಮ್ಮ ಅನುಯಾಯಿಗಳೆಲ್ಲಾ ಬುದ್ಧಧರ್ಮವನ್ನು ಸ್ವೀಕರಿಸಲು ಪ್ರಾರ್ಥಿಸಿದ್ದಾರೆ. ಈ ಧರ್ಮ ಪರಿವರ್ತನೆಯಿಂದ ಹರಿಜನರಿಗೇನು ಲಾಭವಾಗುವದೋ ತಿಳಿದು ಬರುವುದಿಲ್ಲ.

ಮದ್ರಾಸ್ ಸಂಸ್ಥಾನದ ಕನ್ನಡ ಜೀವಿಕರಿಗೆ ಉತ್ತಮವಾದ ನೂರು ಗ್ರಂಥಗಳಿಗೆ ರೂ. 500 ರಂತೆ ಬಹುಮಾನ.

ಲೇಖಕರಿಗೆ ಪ್ರೋತ್ಸಾಹ ಕೊಡುವ ಉದ್ದೇಶದಿಂದ ಮದ್ರಾಸು ಸರ್ಕಾರವು ಉತ್ತಮವಾದ ಕನ್ನಡ ಪುಸ್ತಕಗಳಿಗೆ ಸಂಭಾವನೆ ಕೊಡಿಸುವ ಸಂದರ್ಭದಲ್ಲಿ ೧೯೫೦ ನೇ ವರ್ಷದ ಬಹುಮಾನಗಳಿಗಾಗಿ ಮದ್ರಾಸು ಪ್ರಾಂತದ ಕನ್ನಡ ಜೀವಿಕರು ತಮ್ಮ ಸ್ವಂತ ಕೃಷಿಗಳ ನಾಲ್ಕು ಪ್ರತಿಗಳನ್ನು ಕಾರ್ಯದರ್ಶಿ ಕರ್ನಾಟಕ ಸಂಘ ೧೬ ವೀರಾಸ್ವಾಮಿ ಪಿಳ್ಳೆ ಸ್ಟೀಟ್ ಎಗ್ಮೋರ್ ಮದ್ರಾಸು ೮ ಇವರಿಗೆ ೩೦-೬-೫೦ ರ ಮೊದಲೇ ಸೇರುವಂತೆ ಕಳುಹಿಸಬೇಕಾಗಿ ಪ್ರಾರ್ಥನೆ. ಕೆಳಗಿನವಿಷಯಗಳೆಲ್ಲ ೧೯೫೦ ರ ಜೂನಿನ ಪ್ರಕಟನಾದ ಅಧಿಕೃತ ಕೈಬರಹದ ಗ್ರಂಥಗಳನ್ನು ಸ್ವೀಕರಿಸಲಾಗುವುದು.

೧. ಕೃಷಿ, ೨. ಆರೋಗ್ಯ ೩. ಶಿಕ್ಷಣ,

ನವಭಾರತಕ್ಕೆ
ಚಂದಾದಾರರಾಗಿರಿ.

ದಾಸಿಯು ಬಂದು ಅವಳನ್ನು ಚೇತನಗೊಳಿಸಿದಳು. "ಬೇಗನು ಕರೆಯುತ್ತಿದ್ದಾರೆ; ಮಹಂದಿ ಬಂದಿದೆ" ಎಂದಳು.

—: ೩ :—

ತಿಂಗಳೆಷ್ಟೋ ಉರುಳಿದೆ. ಒಬ್ಬ ಶ್ರೀಮಂತ ಸರದಾರನೊಂದಿಗೆ ಶೀರಿಯ ವಿವಾಹವಾಗಿದೆ. ವಸಂತಪವನನ ತನ್ನ ಒಂದೊಂದು ಪ್ರಹಾರದಿಂದ ನೂರಾರು ಪುಷ್ಪಗಳನ್ನು ಅಳಿಸುತ್ತಿದ್ದ ಬುಲ್‌ಬುಲ್‌ಗಳು ಅವನ ನಿರ್ದಯತೆಗೆ ಚೀರಾಡ ಹತ್ತುವುವು. ಶೀರಿ ಎಲ್ಲಾ ಸಹಿಸುತ್ತಿದ್ದಳು ಸರದಾರನ ಮುಖ ಉತ್ಸಾಹ ಪೂರ್ಣವಾಗಿತ್ತು. ಅದೊಂದು ಸುಂದರ ಪ್ರಭಾತ.

ಒಬ್ಬ ದುರ್ಬಲ ಮತ್ತು ಎತ್ತರದ ಯುವಕ ಗಂಟು ಬೆನ್ನ ಮೇಲೆ ಹೊತ್ತು ಕೊಂಡು ಬಂದು ಕುಳಿತ. ಶೀರಿಯು ನೋಡಿದಳು. ಆದರೆ ಅವನು ಯಾರ ಕಡೆಗೂ ನೋಡದನು. ತನ್ನ ಸಾಮಾನು ಹುಡುಕತೊಡಗಿದ.

ಸರದಾರ ತನ್ನ ಸ್ತ್ರೀಯರಿಗೆ ಪುರಸ್ಕಾರಕೊಡಲು ಕಂಚಿನ ಬಟ್ಟಲು ಮತ್ತು ಕಾಶ್ಮೀರ ಸಾಮಾನು ಚುನಾಯಿಸತೊಡಗಿದ.

ಶೀರಿ ಮೌನದಿಂದಿದ್ದಳು ಅವಳ ಹೃದಯಕಾನನದಲ್ಲಿ ಕಲರವನಳಿ ಗೋಳಿದ್ದಿತು. ಸರದಾರ ಕ್ರಯಕೇಳಿದ ಯುವಕನೆಂದ, "ನಾನು ಕಾಣಿಕೆ ಕೊಡುವೆ. ಕ್ರಯ ಕ್ಕೆ ಕೊಡೆನು. ಈ ವಿಲಾಯತಿ ಮತ್ತು ಕಾಶ್ಮೀರಿ ಸಾಮಾನುಗಳನ್ನು ಬೇಕೆಂದೇ ತರಿಸಿದ್ದೇನೆ. ಇವುಗಳಲ್ಲಿ ಮೂಲ್ಯ ಮಾತ್ರವಲ್ಲ. ಹೃದಯ ಹತ್ತಿದೆ ಇವು ಕ್ರಯಕ್ಕಲ್ಲ."

ಸರದಾರ ತೀಕ್ಷ್ಣ ಸ್ವರದಲ್ಲಿ ಹೇಳಿದ "ಹಾಗಾದಲ್ಲಿ ನನಗೆ ಬೇಕಾಗಿಲ್ಲ. ತೆಗೆದುಕೊಂಡು ಹೋಗು ಎತ್ತಿಕೊ"

ಆಗಲಿ ಎತ್ತಿಕೊಳ್ಳುವೆ. ನಾನು ಆಯಾಸಗೊಂಡಿರುವೆ. ಸ್ವಲ್ಪ ಸಮಯ ಕೊಡಿ. ನಾನು ಕೈಕಾಲು ತೊಳೆದುಕೊಳ್ಳುವೆ ಎಂದು ಯುವಕ ಕಂಬನಿದುಂಬಿದ ಕಣ್ಣು ನೋಡಿಸದೆ ನಡೆದ.

ಝರಿಯ ಕಡೆಗೆ ಹೋಗಿರುವನೆಂದು ಸರದಾರ ತಿಳಿದ. ವಿಳಂಬವಾಯಿತು. ಆದರೆ ಅವನು ಬರಲೇ ಇಲ್ಲ. ದೊಡ್ಡ ಆಘಾತ ಮತ್ತು ನಿರ್ಮಮ ವ್ಯಥೆಯನ್ನು ಸಹಿಸುತ್ತಾ ಶೀರಿ ಗುಲಾಬಿ ಪೊದೆಯ ಕಡೆ ನೋಡತೊಡಗಿದಳು. ಆದರೆ ಅಶ್ರು ಪೂರಿತ ನಯನಗಳಿಗೇನೊಂದು ಕಾಣುತ್ತಿರಲಿಲ್ಲ. ಸರದಾರ ಪ್ರೇಮದಿಂದ ಅವಳ ಬೆನ್ನಮೇಲೆ ತನ್ನ ಕೈಯಿಟ್ಟು ಕೇಳಿದ "ಏನು ನೋಡುತ್ತಿರುವೆ."

ನನ್ನದೊಂದು ಸಾಕಿದ ಬುಲ್ ಬುಲ್ ಶೀತಕಾಲದಲ್ಲಿ ಹಿಂದುಸ್ಥಾನದ ಹೋಗಿತ್ತು. ಅದು ಹಿಂತಿರುಗಿ ಈ ದಿನ ಬೆಳಗ್ಗೆ ಕಾಣಿಸಿತು. ಅದು ಬಳಿಸೇರಿದಾದ ನಾನು ಅದನ್ನು ಹಿಡಿಯಬೈಸಿದೆ, ಆದರೆ ಅದು ಶೈಲಮಾಲೆಯ ಕಡೆ ಹಾರಿಹೋಯಿತು. ಶೀರಿಯ ಸ್ವರದಲ್ಲಿ ಕಂಪಿಸಿತ್ತು ಆದರೂ ಆ ಶಬ್ದಗಳು ಒಳಗೆ ಸಂತೋಷನನಾಗಿ ಹೊಂಬಿಂದಿದ್ದವು. ಸರದಾರನಕ್ಕು ಕೇಳಿದ "ಬುಲ್‌ಬುಲ್‌ಗಳ ಶೋಧಸುವುಗಳೇಕೆ?" ಆಶ್ಚರ್ಯ

ಕೇಣಿಕಾರ ತನ್ನ ಸಾಮಾನುಗಳನ್ನು ಬಿಟ್ಟು ಹೊರಟ ಹಿಂದಿರುಗಲಿಲ್ಲ.

ಶೀರಿ ಅವನ ಭಾರವನ್ನೇನೋ ಇಳಿಸಿದಳು, ಆದರೆ ಬೆಲೆ ಕೊಡಲಿಲ್ಲ.

ಪೂರ್ವದ ನಾಣ್ಯಗಳು – ಸೊಹಮ್ಮದ್ ತೊಗಲಖನಕಾಲದ ನಾಣ್ಯಗಳು ಕಾನಪುರಕ್ಕೆ ಸಮೀಪ ೧೦ ಮೈಲಿ ದೂರದ ಶಿಲೂಶಿಗ್ರಾವುದಲ್ಲಿ ದೊರೆತಿವೆ. ೧೨ ಚಿನ್ನದವು ೨೩ ತಾಮ್ರದವು ಮನೆ ಕಟ್ಟಬೇಕಾದರೆ ಆಸ್ತುವಾರ ಹಾಕುವಾಗ ದೊರೆತು ಅವುಗಳನ್ನು ಪೋಲೀಸರು. ವ್ರಾಚ್ಯವಸ್ತು ಸಂಶೋಧನ ಶಾಖೆಗೆ ಕಳುಹಿಸಿದುವರು.

ಹಿಂದೀ ಮಹಾ ವಿದ್ಯಾಲಯ, ಬಳ್ಳಾರಿ,

[1931 ಸ್ಥಾಪಿತ. ಬಳ್ಳಾರಿ ಜಿಲ್ಲಾ ಹಿಂದೀ ಪ್ರೇಮೀಮಂಡಲದಾಶ್ರಯದಲ್ಲಿ, ರಿಜಿಸ್ಟರ್ಡ್.]

ಮದ್ರಾಸ್ ಸರ್ಕಾರದಿಂದ ಮಾನ್ಯತೆಪಡೆದಿದೆ.

ಪ್ರಾರಂಭಿಕ ವರ್ಗಗಳಿಗೆ ಮಾಸಿಕ 3/- ರೂ. — ಇನ್ನಿತರ ವರ್ಗಗಳಿಗೆ ಮಾಸಿಕ 5/- ಶುಲ್ಕ

ವಾರ್ಡಲಾ ಹೈಸ್ಕೂಲ್ ಕಟ್ಟಡದಲ್ಲಿ ಪ್ರಾತಃಕಾಲ–ಸಾಯಂಕಾಲ ಹಿಂದೀ ಕಾಲೇಜಿನ ವರ್ಗಗಳು ನಡೆಯುತ್ತಿವೆ ಪ್ರವೇಶ — ವಿಶಾರದ ವರ್ಗಗಳಲ್ಲಿ ಪ್ರಾರಂಭಿಕ ವರ್ಗಗಳಿಗೂ ಪ್ರವೇಶವಿದೆ. ವರ್ಗಗಳಿಗೆ ಸಂಬಂಧಿಸಿದ ಪಾಠ್ಯ ಪುಸ್ತಕಗಳು ವಿದ್ಯಾಲಯದಲ್ಲಿ ದೊರೆಯುತ್ತವೆ. ಒಳ್ಳೆಯ ಪುಸ್ತಕಭಂಡಾರವಿದೆ. ಶ್ರೇಷ್ಠ ವಾರಪತ್ರಿಕೆ, ಮಾಸಪತ್ರಿಕೆಗಳು ಲಭ್ಯ ಇತರ ವಿವರಗಳಿಗೆ ಸ್ವಾಂಪಿಟ್ಟು ಬರೆಯಿರಿ.

ಪ್ರಿನ್ಸಿಪಾಲ್.

NAVA BHARAT BELLARY. (Reg. No. M. 4746)

12—6—50

ನವಭಾರತ ಬಳ್ಳಾರಿ.

(Nationalist Weekly)

ಚಂದಾದರಗಳು.	Subscription Rates.
ವರ್ಷಕ್ಕೆ 5—0—0	One Year 5—0—0
6 ತಿಂಗಳಿಗೆ 3—0—0	Six months 3—0—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.	Subscription will not be accepted for less than 6 months

To

Sri.....

.....

.....

Printed at Krishna Printing Works. Edited & Published by T.B. Keshaav Rao.

JAI - HIND

ನವಚೈತನ್ಯ

ಬಳ್ಳಾರಿಯ
ಉಜ್ವಲ ರಾಷ್ಟ್ರೀಯ ವಾರಪತ್ರಿಕೆ
*
ಉತ್ತಿಷ್ಠತ ! ಜಾಗೃತ
ಪ್ರಾಪ್ಯವರಾನ್ನಿ ಬೋಧತ !!!
*
ಸಂಪಾದಕ ಮತ್ತು ಪ್ರಕಾಶಕರು—
ಟಿ. ಬಿ. ಕೇಶವರಾವು

ವರ್ಷ ೧೩ ಸೋಮವಾರ ೧೯ ಜೂನ್ ೧೯೪೦ ಸಂಚಿಕೆ ೩೭

ಕೈಮಗ್ಗದ ನೇಕಾರರಿಗೆ ಕೇಂದ್ರಮಂತ್ರಿಗಳ ಆಶ್ವಾಸನ

ಎಲ್ಲತರದ ಸಹಾಯ ಮಾಡುವೆವು.

"ನಿನುಗೆ ನೂಲನ್ನು ಉದಾರವಾಗಿ ಪೂರೈಸುತ್ತೇವೆ. ಹಿಂಸುಸ್ತಾನದಲ್ಲಿಯೇ ಎಲ್ಲ ನೂಲು ಖರ್ಚಾಗುವದು. ಕಾಡು ಬಂದರೆ ಅದನ್ನ ಸರಸೇತಿಗಳಿಗೆ ಕಳಿಹಿಸುವುದಿಲ್ಲ. ವಿಶಿಷ್ಟರೀತಿಯ ಟಾವಲಗಳನ್ನು ಕೇವಲ ಕೈಮಗ್ಗದವರೇ ಮಾಡಬೇಕೆಂದು ವಿಧಿಸುವೆವು. ವಿಲಗಳನರು ಇವನ್ನು ಮಾಡತಕ್ಕದ್ದಲ್ಲ. ಕೆಲ ವಿಶಿಷ್ಟ ಅಂಚಿನ ಸೀರೆಗಳನ್ನ ಸಹ ನೀನೆ ತಯಾರಿಸಬೇಕು. ಮೈಸೂರಿ" ಆಶ್ವಾಸನವನ್ನ ಕೇಂದ್ರದ ಔದ್ಯೋಗಿಕ ಮಂತ್ರಿ ಹರಿಕೃಷ್ಣನ್ ಮೆಹತಾ ಬಾರು ಬೊಂಬಾಯಿಯಲ್ಲಿ ತಮ್ಮೊಡನೆ ಮಾತಾಡಲು ಬಂದ ಶಿಷ್ಟಮಂಡಳಿಗಳಿಗೆ ತಿಳಿಸಿದರು. ಶಿಷ್ಟಮಂಡಳದವರು ಗಿರಣಿ ಧಾರಣೆ ಪ್ರಕಾರಸಲವತ್ತಿನಧರದಿಂದ ನೂಲನ್ನು ಪೊರೈಸಲು ಕೈಮಗ್ಗದ ಉದ್ಯೋಗಕ್ಕೆ ಧನಸಹಾಯ ಮಾಡಲು ಅದಕ್ಕೆ ಸಂರಕ್ಷಣೆ ಕೊಡಲು ಬೇಡಿದರು.

ಆದರೆ ಖಾದಿಯು ಯಾವ ರೀತಿಯಲ್ಲಿ ಆರ್ಥಿಕದ ದೃಷ್ಟಿಯಿಂದ ಲಾಭಕರವಲ್ಲವೋ ಹಾಗೆಯೇ ಕೈಮಗ್ಗದ ಬಟ್ಟೆಯೂ ಆದರೂ ಮಿಲ್ ಬಟ್ಟೆಗಿಂತ ಧುಬಾರಿಯಾದುದೆ. ಇದು ಕೈಕಲಸವಾದ್ದರಿಂದ ಧಾರಣೆಯಲ್ಲಿ ಕಡಿಮೆಯಾಗಲು ಸಾಧ್ಯವೇ ಇಲ್ಲ. ಅಧುನಿಕಕಾಲದಲ್ಲಿ ಯಂತ್ರದೊಂದಿಗೆ ಪೋಟಿ ಮಾಡುವ ವೃತ್ತಿ ಪರಿಶ್ರಮದ ಸಾಧನವು ಎಲ್ಲಿಯೂ ಕಂಗುಬರುವದಿಲ್ಲ. ಗೃಹೋದ್ಯೋಗಿಗಳಿಗೆ ಕೈಕಲಸಗಳಿಗೆ ಸರ್ಕಾರದವರು ಎಷ್ಟೇ ಧನ ವ್ಯಯಮಾಡಲಿ ಎಷ್ಟೇ ಸಂರಕ್ಷಣೆ ಕೊಡಲಿ ಅದು ಕೃತವಾಗಿ ಸಹಾಯವಿರುವವರೆಗೆ ಜೀವಿಸಿರುತ್ತವೆ ಸಹಾಯವು ನಿಂತಾಗ ಸಾಯುತ್ತವೆ.

ಹೀಗೆ ದೇಶವಿಭಜನೆಯ ಲಕ್ಷ್ಯಾಂತರ ಮಗ್ಗಗಳು ಯಂತ್ರಗಳು ಬಂದಮೇಲೆ ನಾಶವಾವವು ಇದು ಸುಲಭಜೀವನದ ಪ್ರಶ್ನೆ ಆರ್ಥಿಕ ಸಮಸ್ಯೆ ಒಂದೂರಿಗೆ 0-4-0 ಯಲ್ಲಿ ಮೋಟಾರ್ ಮೇಲೆ ಹೋಗಿ ಬರುವದನ್ನು ಎತ್ತಿನಗಾಡಿ ಉದ್ಯೋಗದ ಪುನರುದ್ಧಾರ ಮಾಡಲು 3-0-0 ಕೊಟ್ಟು ಹೋಗುವದು ಸಾಧ್ಯವೇ? 10 ಸೇರು ಬೀಸಲು ಬೀರುವ ಗಿರಣಿಯಲ್ಲಿ 0-4-0 ಕೊಡುವದನ್ನು ಬಿಟ್ಟು 0-10-0 ಕೊಟ್ಟು ಬೀಸುವ ಉದ್ಯೋಗಕ್ಕೆ ಹೋಗುವದೇ? ಹಾಗೆಯೇ 6 ರೂ. ಗೆ ಒಂದು ಜತೆ ಪಂಚೆ ದೊರೆಯುತ್ತಿರಬೇಕಾದರೆ ಅದಕ್ಕಿಂತಲೂ ಸುಮಾರಿದ ದಪ್ಪನ್ನ ಪಂಚೆಗೆ 9/- ಕೊಡಲು ಹೋಗುವರೇ? ದೇಶಾಭಿಮಾನದಿಂದಲೂ ಇಂಗ್ಲೀಷರಮೇಲಿನ ದ್ವೇಷದಿಂದಲೂ ಕಾಂಗ್ರೆಸ್ ಸಂಸ್ಥೆಯ ಗುರುತಿಗಾಗಿಯೂ ಮಹಾತ್ಮ ಗಾಂಧಿಯ ಉಪದೇಶದಿಂದ ಖಾದಿಯನ್ನು ಸ್ವೀಕರಿಸಲಾಗಿತ್ತು. ಈಗ ಸ್ವರಾಜ್ಯ ಬಂದಮೇಲೆ ಖಾದಿಯ ಉದ್ಯೋಗವು ನಾಶವಾಗುತ್ತಲಿದೆ. ಸರ್ಕಾರದವರೆಷ್ಟು ಸಹಾಯ ಮಾಡಿದರೂ ಇದು ಬದುಕುವ ಲಕ್ಷಣಗಳು ಕೋರಿ ಬರುತ್ತಲಿಲ್ಲ. ಹಾಗೆಯೇ ಕೈಮಗ್ಗದ ಉದ್ಯೋಗವಾದರೂ ಕ್ಷೀಣಿಸುತ್ತಲಿದೆ.

ಪ್ರವಾಹಕ್ಕನುಗುಣವಾಗಿ ಕಾಲಚಕ್ರವು ಬದಲಾದಂತೆ ಈ ಯಂತ್ರ ಯುಗದಲ್ಲಿ ನಾವು ಕಾರ್ಯಶೀಲರಾಗದಿದ್ದರೆ ನಮಗೆ ಆರ್ಥಿಕ ಸ್ವಾತಂತ್ರ್ಯವು ಕನಸಾದೀತು.

ಭಾರತ ಸರಕಾರಕ್ಕೆ ಸಾಲಬೇಕು

ಭಾರತ ಸರ್ಕಾರದ ಅಭಿವೃದ್ಧಿ ಯೋಜನೆಗಳಿಗಾಗಿ 30 ಕೋಟಿ ರೂ ಗಳ ಸಾಲವನ್ನು ಕೇಳಲಾಗಿದೆ. ಸಾರ್ವಜನಿಕರೂ ಜೂನ್ 19 ರಿಂದ ಜೂನ್ 21 ರವರಿಗೆ ಈ ಸಾಲಕ್ಕೆ ಚಂದಾ ಸಲ್ಲಿಸಬಹುದು. ಶೇಕಡ 3 ಬಡ್ಡಿ.

ದರೋಜಿಯ ಮುಖ್ಯ ಕೊರತೆ

ನಮ್ಮೂರಿನಲ್ಲಿ ಪಾಯಿಖಾನೆಯ ಕೊರತೆ ಅಹಸ್ಯವಾಗಿದೆ. ಸ್ತ್ರೀಯರಿಗಂತೂ ವಿಶೇಷ ಹಿಂಸೆಯೆಂದು ಹೇಳಬಹುದು. ಈ ಕೊರತೆಯನ್ನು ನಿವಾರಿಸಲು ಎಷ್ಟು ಅರ್ಜಿಗಳಿಟ್ಟರೂ ಉಪಯೋಗವಾಗಿಲ್ಲ. ನಮ್ಮೂರ ಪಂಚಾಯ್ತಿ. ಬೋರ್ಡಿನಲ್ಲಿ ಹಣವಿಲ್ಲೆಂದಲ್ಲ. ಸಾಕಷ್ಟು ಹಣ ಕೂಡ ಇದೆ. ಸರ್ಕಾರದವರು ಗ್ರಾಂಟು ಕೊಡದಿದ್ದರೂ ಸ್ವಲ್ಪ ಖರ್ಚಿನಲ್ಲಿ ಅಧುನಿಕ ರೀತಿಯ ಪಾಯಿಖಾನೆಗಳನ್ನು ಕಟ್ಟಿಸಲು ಸಾಧ್ಯವಿದೆ. ಗ್ರಾಮೀಣ ಪಂಚಾಯ್ತಿ ಬೋರ್ಡು ಅಧ್ಯಕ್ಷರಿಗೆ ಜಿಲ್ಲಾ ಪಂಚಾಯ್ತಿ ಆಫೀಸರವರು ತಕ್ಕ ಆದೇಶ ಕೊಟ್ಟು ಈ ಕೆಲಸ ಮಾಡಿಸುವರೆಂದು ಆಶಿಸುತ್ತೇನೆ. —ಲಿಂಗನಗೌಡ,ದರೋಜಿ.

ವಿದ್ಯಾರ್ಥಿಗಳಿಗೆ ಉತ್ತೇಜಕದ ಸುದ್ದಿಗಳನ್ನು ತಿಳಿಸದಿರಲು ಅಧ್ಯಾಪಕರು ಪ್ರಯತ್ನಿಸಬೇಕೆಂದು ಕೇಂದ್ರ ಸರಕಾರದವರು ಕಲಕತ್ತೆಯ ವಿಶ್ವವಿದ್ಯಾಲಯದ ಅಧಿಕಾರಿಗಳಿಗೆ ತಿಳಿಸಿದ್ದಾರೆ. ಇದು ಹೇಗೆ ಸಾಧ್ಯವೋ ದೇವರೇ ಬಲ್ಲ!

ಟಿಬೆಟ್ ದೇಶದ ಶಿಷ್ಟಮಂಡಲವು ಕಲ್ಕತ್ತೆಯಿಂದ ಮುಂದಕ್ಕೆ ಹೋಗದಂತೆ ಮಾಡಿದ್ದಾರೆ. ಈ ಶಿಷ್ಟಮಂಡಳವು ಕಮ್ಯೂನಿಸ್ಟ ಚೀನಾ ಸರ್ಕಾರದೊಂದಿಗೆ ಮಾತುಕತೆ ಮಾಡಲು ಹೊರಟಿತು.

ಮದ್ರಾಸ್ ಪ್ರಾಂತದ ಮಧ್ಯನಿಷೇಧ ಮಂತ್ರಿಗಳು ಬಳ್ಳಾರಿಗೆ ಬಂದು, ಯಥಾ ಪ್ರಕಾರ ತುಂಗಭದ್ರಾಯೋಜನೆ ಹಂದಿಗಳನ್ನು ಸರ್ಕಾರದ ಖರ್ಚಿನಿಂದ್ಹೋದಿಕೊಂಡು ಮದ್ರಾಸಿಗೆ ತೆರಳಿದರು.

ಸೋಮವಾರ ೧೯ ಜೂನ್ ೧೯೫೦.

ಆಹಾರ ಪ್ರಶ್ನೆ

"ಹೆಚ್ಚು ಬೆಳೆಯಿರಿ" ಎಂಬುವ ಪ್ರಚಾರ.

ದೆಲ್ಲಿ ಕೇಂದ್ರದಲ್ಲಿ ನೂತನವಾಗಿ ನಿಯುಕ್ತವಾಗಿರುವ ಆಹಾರ ಮಂತ್ರಿಗಳಾದ ಶ್ರೀ ಕೆ. ಯಂ. ಮುನ್ಸಿಯವರು 1951 ರೊಳಗಾಗಿ ಪರದೇಶದಿಂದ ಆಹಾರ ಧಾನ್ಯಾದಿಗಳ ಆಯಾತವನ್ನು ನಿಲ್ಲಿಸುವುದು ಸಾಧ್ಯವಿದೆಯೆಂದೂ ಜನರು ನಿರಾಶಾವಾತಾವರಣದಿಂದ ಪಾರಾಗಿ ಆಶಾವಾದಿಗಳಾಗಬೇಕೆಂದೂ ಪ್ರಚಾರ ಮಾಡುತ್ತಿರುವರು. ಪ್ರಾಂತ ಮತ್ತು ಕೇಂದ್ರಮಂತ್ರಿಗಳು ಇಂತಹ ಪ್ರಚಾರಸಭೆಗೆ ಕೈ ಗೊಂಡಿರುವರು. ಸರ್ಕಾರದ ಮತ್ತು ಜನತೆಯ ವಾದ ಸರಣಿ ಈ ಕೆಳಗಿನಂತಿದೆ

ಜನತೆಯ ವಾದ	ಸರ್ಕಾರದ ವಾದ
1 ಯಾರೂ ಅರಹೊಟ್ಟೆ ಊಟ ಮಾಡುವುದಿಲ್ಲ.	1 ದೇಶದ ಜನಸಂಖ್ಯೆ ಬಹಳ ಹೆಚ್ಚಿದೆ.
2 ಬ್ಲಾಕ್ ಮಾರ್ಕೆಟ್‌ನಲ್ಲಿ ಬೇಕಾದ ಧಾನ್ಯವನ್ನು ಹೆಚ್ಚು ಬೆಲೆಯಿಂದ ಕೊಳ್ಳಲು ಸಾಧ್ಯವಿದೆ.	2 ಯುದ್ಧ ಪೂರ್ವದಲ್ಲೂ ನಮಗೆ ಬರ್ಮಾ ಜಾವಾಗಳಿಂದ ಅಕ್ಕಿಯು ಬರುತ್ತಿತ್ತು.
3 ದೇಶದಲ್ಲಿ ನಿಜವಾಗಿಯೂ ಆಹಾರ ಕೊರತೆ ಯಿದ್ದರೆ ಜನರಿಗೆ ಬೇಕಾದ ಧಾನ್ಯವು ಬ್ಲಾಕ್ ಮಾರ್ಕೆಟ್‌ದಲ್ಲಿ ಹೇಗೆ ದೊರೆಯುತ್ತಿತ್ತು ?	3 ಈಗ ಹಣದ ವ್ಯಾಪ್ತಿ ಸುಲಭವಾಗಿ ಹೆಚ್ಚಿನ ಧನ ಸಂಪಾದಿಸಲು ಬಡವನಿಗೆ ಸಾಧ್ಯವಿರುವಕಾರಣ ಮೊದಲಿಗಿಂತಲೂ ಈಗ ಧಾನ್ಯಗಳಿಗೆ ಬೇಡಿಕೆ ಹೆಚ್ಚಿದೆ.
4 ಶಿವಿಲ್ ಸಪ್ಲೈಸ್ -ಯಾ- ಪೂರೈಕೆ ಶಾಖೆಯ ಅಧಿಕಾರಿಗಳು ಮಾತ್ರ ದೇಶದಲ್ಲಿ ಕ್ಷಾಮವಿದೆಯೆನ್ನುತ್ತಾರೆ. ಅವರನ್ನು ಪೋಷಿಸಲು ಮಾತ್ರವೇ ಸರ್ಕಾರದವರು ನಿಯಂತ್ರಣಗಳನ್ನೇರ್ಪಡಿಸಿರುವರು.	4 ವರ್ತಕರು ಧಾನ್ಯವನ್ನೆಲ್ಲಾ ತೆಗೆದಿರಿಸಿ ಕಂಟ್ರೋಲ್ ಇಲ್ಲದಿದ್ದರೆ ಜನಗಳು ಸಾಯುವಂತೆ ಮಾಡಬಲ್ಲರು.
5 'ಹೆಚ್ಚು ಬೆಳೆ' ಎಂಬ ಪ್ರಚಾರಕ್ಕೆ ಕೊಟ್ಟ ಹಣ ದುರ್ವಿನಿಯೋಗವಾಗಿದೆ.	5 ಧಾನ್ಯದ ವಿತರಣೆ, ಬೆಲೆಯ ಸಮತೆಯನ್ನು ಹಿಡಿತದಲ್ಲಿಡಬೇಕೆಂದರೆ ಕಂಟ್ರೋಲ್ ಅವಶ್ಯಕ.
6 ಸರ್ಕಾರದವರು ತೋರಿಸುವ ಅಂಕೆ ಸಂಖೆಗಳು ಕಾರ್ಯರೂಪದಲ್ಲಿ ಜಾರಿಗೆ ಬಂದಿಲ್ಲ.	6 ನಿತ್ಯ ವ್ಯವಹಾರದಲ್ಲಿ ನೋಡುತ್ತಿರುವಂತೆ ಪ್ರಜೆಗಳ ಮೇಲೆಯೇ ಧಾನ್ಯದ ಸಂಗ್ರಹ, ವಿತರಣೆಯನ್ನು ಬಿಡಲಿಕ್ಕೆ ಬರುವಂತಿಲ್ಲ.

ಸರ್ಕಾರದವರು ಹೇಳುವುದರಲ್ಲೂ ಸತ್ಯಾಂಶಗಳಿವೆ. ಸಂಗ್ರಹವುಕಡಮೆಇದ್ದು ಬೇಡಿಕೆಯು ಹೆಚ್ಚಾದರೆ ಇರುವ ಸಂಗ್ರಹವು ಪಾತಾಳಕ್ಕೆ ಹೋಗಿ ಹೆಚ್ಚಿನ ಬೆಲೆ ಕೊಟ್ಟಾಗಲೇ ಹೊರಬೀಳುತ್ತದೆ. ಹೆಚ್ಚು ಬೆಲೆ ಕೊಟ್ಟು, ಹೊಟ್ಟೆ ತುಂಬ ಊಟ ಮಾಡುವವರು ಸ್ವಲ್ಪಮಂದಿ. ಅನೇಕರು ಕೊಟ್ಟ ಧಾನ್ಯವನ್ನು 4 ಜನಗಳಲ್ಲಿ ಪಾರ್ಟುಮಾಡಿ ಉಪವಾಸ ಬೀಳುತ್ತಾರೆ. ಅಕ್ಕಿಯಲ್ಲದ ಧಾನ್ಯಾದಿಗಳ ಮೇಲಾದರೂ ಕಂಟ್ರೋಲ್ ತೆಗೆದಿದ್ದರೆ ಜನತೆಗೆ ಅನುಕೂಲವಿತ್ತು.

ಧಾನ್ಯಾದಿಗಳನ್ನು ಬೆಳೆಸಲು ಸರ್ಕಾರದವರು ವಿನಿಯೋಗಿಸಿದ ಬಹುತಾಂಶ ಧನವು ದುರ್ವಿನಿಯೋಗವಾಗಿದೆಯೆಂಬುದನ್ನು ಅನೇಕರು ಬಲ್ಲರು. ತಾವು ಇಂಥಿಂಥಾ ಪ್ರಾಂತದಲ್ಲಿ ಇಷ್ಟುಕೋಟಿರೂ. ವ್ಯಯಮಾಡಿರುವೆವೆಂದೂ ಇಷ್ಟು ಲಕ್ಷ ಎಕರೆಭೂಮಿಗಳನ್ನು ಸಾಗುವಳಿಗೆ ತಂದಿರುವೆವೆಂದೂ ಕಾಗದದ ಮೇಲೆ ತೃಪ್ತಿ ಪಟ್ಟರೆ ಆರ್ಥಿಕ ಪರಿಸ್ಥಿತಿ ಸುಧಾರಿಸಬೇಕೆಂತು? ಆಹಾರ ಧಾನ್ಯಾದಿಗಳ ಉತ್ಪಾದನೆಯ ಲೆಕ್ಕಗಳು ಸುಳ್ಳಿವೆ.

ಆಹಾರ ಧಾನ್ಯಾದಿಗಳು ಹೆಚ್ಚಿಗೆ ಬೆಳೆಯಲು ಒಣಭೂಮಿಗೆ ಸಾಕಷ್ಟು ಮಳೆ ಬೇಕು. ತರಿಭೂಮಿಗೆ ಹೆಚ್ಚು ನೀರು ಬೇಕು. ತರೀ ಭೂಮಿಗಳಲ್ಲಿ ಸರಾಸರಿ ಎರಡು ಪೈರುಗಳನ್ನಾದರೂ ಬೆಳೆಸಲು ಯಾವ ಪ್ರೋತ್ಸಾಹನೆ ದೊರೆತಿದೆ? ಬಳ್ಳಾರಿ ಜಿಲ್ಲೆಯಲ್ಲಾದರೂ ಯಾವ ಏರ್ಪಾಟು ಮಾಡಿದ್ದಾರೆ? ನೀರನ್ನು ಹೆಚ್ಚಾಗಿ ಸರಬರಾಯಿಮಾಡಿದ್ದಾರೆಯೇ? ಅನೇಕ ಕೆರೆಗಳು ರಿಪೇರಿಯಾಗದಿವೆ. ಕೆಲವು ಹೂತು ಹೋಗಿವೆ. ಜಮೀನಿನ ವಿಸ್ತೀರ್ಣ ಗೊಬ್ಬರಗೂಡು ಬೀಜವ್ಯವಸಾಯ ಸಲಕರಣೆಗಳಿಗೆ ಬೇಕಾದ ಹಣಸಹಾಯ ಭಾವಿ ಕೆರೆಗಳ ಮತ್ತು ಕಾಲುವೆ ರಿಪೇರಿ ಈಗಿರುವ ತರೀ ಗದ್ದೆಗಳಲ್ಲಿ ಎರಡು ಸಾರಿ ಬೆಳೆಯಲು ನೀರಿನಸರಬರಾಯಿ ಇವುಗಳನ್ನೆಲ್ಲಾ ಆಹಾರ ಸಮಿತಿಯೇ ನಿರ್ಣಯಿಸಿ ಸರ್ಕಾರಕ್ಕೆ ಸಹಾಯಕ್ಕಾಗಿ ಬರೆಯಬೇಕು. ಇಂಥಾ ನ್ಯಾಯವಾದ ಬೇಡಿಕೆಗಳನ್ನು ಮನ್ನಿಸಿದಾಗಲೇ ಹೆಚ್ಚು ಬೆಳೆ" ಪ್ರಚಾರವು ಸಾರ್ಥಕವಾಗಿ ನಮಗೆ ಹೆಚ್ಚು ಧಾನ್ಯವು ದೊರೆವುದು. ಇಲ್ಲವಾದರೆ ಈ ಪ್ರಚಾರವು ನಿರ್ಥವಾಗುವುದು.

ಮದ್ರಾಸ್ ಸರ್ಕಾರದ ಜಾತೀಯ ಆಜ್ಞೆ

ಅಕ್ರಮವೆಂದು ಸಾರಲು ಹೈಕೋರ್ಟಿಗೆ ವಿನಂತಿ

ಮೆಡಿಕಲ್ ಕಾಲೇಜ ವಿದ್ಯಾರ್ಥಿನಿಯ ಅರ್ಜಿಯ ಸ್ವೀಕಾರ

ಮದ್ರಾಸ್ ೭ — ಪ್ರಾಂತದಲ್ಲಿಯ ವೈದ್ಯಕೀಯ ಕಾಲೇಜಗಳಲ್ಲಿಯ ಪ್ರವೇಶದ ಬಗ್ಗೆ ಮದ್ರಾಸ ಸರಕಾರದವರು ಹೊರಡಿಸಿದ ಜಾತೀಯ ಆಜ್ಞೆಯ ಕ್ರಮಬದ್ಧತೆಯನ್ನು ಆಕ್ಷೇಪಿಸಿ ಪರಮಾದೇಶನನ್ನು (ರಿಟ್ ಆಫ್ ಮ್ಯಾಂಡೆಮಸ್) ಹೊರಡಿಸಬೇಕೆಂದು ಬೇಡಿಕೊಂಡ ಅರ್ಜಿಯು ಇಂದು ಮದ್ರಾಸ ಹೈಕೋರ್ಟಿನಲ್ಲಿ ಸ್ವೀಕೃತವಾಯಿತು.

ವೈದ್ಯಕೀ ಕಾಲೇಜಿಗೆ ಪ್ರವೇಶ ಪಡೆಯಲಿಚ್ಛಿಸಿದ ಓರ್ವ ವಿದ್ಯಾರ್ಥಿನಿಯು ಈ ಅರ್ಜಿಯನ್ನು ಮಾಡಿಕೊಂಡಿದ್ದು ಜಾತಿ, ಭಾಷೆ ಮತ್ತು ಜಲ್ಲೆಗಳ ತಳಹದಿಯ ಮೇಲೆ ಪ್ರವೇಶವನ್ನು ನಿರ್ಭಂಧಿಸುವ ಆಜ್ಞೆ ಹೊರಡಿಸುವ ಅಧಿಕಾರವು ಸರಕಾರಕ್ಕಿಲ್ಲವೆಂದು ವಾದಿಸಿದ್ದಾಳೆ. ಆದರೆ ಈಗ ಸರಕಾರವು ಹೊರಡಿಸಿರುವ ಜಾತೀಯ ಆಜ್ಞೆಯ ಮೂಲಕ ತನಗೆ ಕಾಲೇಜಿನಲ್ಲಿ ಪ್ರವೇಶ ದೊರೆಯುವ ಸಂಭವವಿಲ್ಲವೆಂದೂ ಹೊಸ ಘಟನೆಯು ಅಮಲಿನಲ್ಲಿ ಬರುವ ಪೂರ್ವದಲ್ಲಿ ಈ ಆಜ್ಞೆಯು ಕ್ರಮ ಬದ್ಧವಿರಲಿ ಇಲ್ಲದಿರಲಿ ಆದರೆ ಹೊಸ ಘಟನೆಯನ್ನಯ ಮೂಕ್ರ ಇದರಿಂದ ನಾಗರಿಕನ ವೈಯಕ್ತಿಕ ಹಕ್ಕು ಬಾಧ್ಯತೆಗಳನ್ನು ಕಸಿದುಕೊಂಡತಾಗುವದೆಂದೂ ಆದ್ದರಿಂದ ಈ ಅರ್ಜಿಯ ವಿಚಾರಣೆಯು ಪೂರ್ತಿಯಾಗುವವರೆಗೆ ಸರಕಾರದವರು ಈ ಜಾತೀಯ ಆಜ್ಞೆಯನ್ನು ಅಮಲಿನಲ್ಲಿ ತರುವದನ್ನು ತಡೆಹಿಡಿಯುವಂತೆ ಆಜ್ಞೆ ವಿಧಿಸಬೇಕೆಂದೂ ಹೈಕೋರ್ಟಿನ್ನು ಕೇಳಿಕೊಂಡಿದ್ದಾಳೆ.

ನ್ಯಾಯ ಮೂರ್ತಿ ಬಶೀರ ಅಹಮ್ಮದ ಸಯ್ಯದರವರು ಈ ಅರ್ಜಿಯನ್ನು ಸ್ವೀಕರಿಸಿ ಸರಕಾರಕ್ಕೆ ನೋಟೀಸು ಕೊಟ್ಟಿದ್ದಾರೆ.

ಕಾಂಗ್ರೆಸ ಪ್ರತಿನಿಧಿಗಳ ಚುನಾವಣೆ

ಕೆ. ಪಿ. ಸಿ. ಸಿ. ಕಾರ್ಯದರ್ಶಿಗಳ ಪ್ರಕಟನೆ

ಹುಬ್ಬಳ್ಳಿ- ಕೆ. ಪಿ. ಸಿ. ಸಿ. ಪ್ರಧಾನ ಕಾರ್ಯದರ್ಶಿಗಳ ಜಿಲ್ಲಾ ಕಾಂಗ್ರೆಸ ಸಮಿತಿಗಳನ್ನು ಕುರಿತು ಈ ರೀತಿ ಪ್ರಕಟನೆ ಹೊರಡಿಸಿದ್ದಾರೆ.

ಅ. ಭಾ. ಕಾಂಗ್ರೆಸ ಸಮಿತಿಯು ಕಾಂಗ್ರೆಸ ಪ್ರತಿನಿಧಿಗಳು ಚುನಾವಣೆಯು ಬಗ್ಗೆ ಕೆಳಗಿನಂತೆ ಕಾರ್ಯಕ್ರಮ ಗೊತ್ತು ಪಡಿಸಿರುವರು.

ನಾಮಪತ್ರಗಳ ಸ್ವೀಕಾರ	೨೦-೬-೧೯೫೦
ಅವುಗಳ ಪರಿಶೀಲನೆ	೨೧-೬-೧೯೫೦
ಹಿಂತೆಗೆದುಕೊಳ್ಳುವ ಕೊನೆಯ ದಿನ	೨೩-೬-೧೯೫೦
ಮತದಾನ	೩೦-೬-೧೯೫೦
ಎಣಿಕೆ	೨-೭-೧೯೫೦

ಅ ಭಾ ಕಾ ಸಮಿತಿ ಕಛೇರಿಗೆ ಪ್ರತಿನಿಧಿಗಳ ಪಟ್ಟಿ ತಲುಪುವ ಕೊನೆಯ ದಿನ ೪-೭-೧೯೫೦

ಜಿಲ್ಲಾ ಕಾಂಗ್ರೆಸ ಸಮಿತಿಗಳು ಮೇಲಿನ ಕಾರ್ಯಕ್ರಮದಂತೆ ಪ್ರತಿನಿಧಿಗಳ ಚುನಾವಣೆಯನ್ನೇರ್ಪಡಿಸಬೇಕು.

ಮದ್ರಾಸಿನಲ್ಲಿ ಆಹಾರ ಧಾನ್ಯಗಳ ಕೊರತೆ

ಮದ್ರಾಸ್ ಪ್ರಾಂತದಲ್ಲಿ ಅಕ್ಕಿಯ ಕೊರತೆಯು ವಿಶೇಷವಾಗಿದ್ದು ಒಬ್ಬರಿಗೆ 8 ಔನ್ಸುಗಳಿದ್ದುದನ್ನು 7 ಔನ್ಸುಗಳಾಗಿ ಮಾಡುವ ಸಂಭವವಿದೆ. ಪಟ್ಟಣಗಳೆಲ್ಲೆಲ್ಲಾ ಒಂದೇ ಆಹಾರಧಾನ್ಯ ಅಂದರೆ ಅಕ್ಕಿಯನ್ನು ಒದಗಿಸಿ ಹಳ್ಳಿಗಳಿಗೆಲ್ಲಾ ಇತರ ಧಾನ್ಯಗಳನ್ನೊದಗಿಸುವ ಸಂಭವವಿದೆ ಇನ್ನುಮೇಲೆ ಇಪ್ಪುದಿನ ಕೊಡ್ಯ ಕ್ತಿದ್ದ ಅಕ್ಕಿಯಭಾಗವೂ ಹಳ್ಳಿಗಳಿಗಿಲ್ಲ ದಂತಾಗುವುದು. ಈ ವಿಷಯದಲ್ಲಿ ೫೦ ಫೆಬ್ರವಾರಿ ಸರಕಾರದ ಆಜ್ಞೆಯು ಹೊರ ಬೀಳಲಿದೆ.

ನಿಯಂತ್ರಣ ತೆಗೆದೂಗಯಿರಿ

ರಾಷ್ಟ್ರಹಿತವಿಲ್ಲ-ಸರಕಾರಕ್ಕೆ ಭಾರತ ವಣಿಕ್ಸಂಘದ ಸೂಚನೆ

"ಉತ್ಪಾದನೆಯನ್ನು ಹೆಚ್ಚಿಸಲು, ಸಮಾನವಾಗಿ ವಸ್ತುಗಳ ಹಂಚಿಕೆಯಾಗಲು, ಮತ್ತು ಬೆಲೆಗಳಏರಿಕೆಯನ್ನು ತಡೆಯಲು ಈ ನಿಯಂತ್ರಣಗಳನ್ನು ಹೇರಲಾಯಿತು. ಆದರೆ ಇಂದು ಇವ್ರ ಗಳಲ್ಲಿ ಒಂದು ಧ್ಯೇಯವಾದರೂ ಸಿದ್ಧಿಯಾಗಿಲ್ಲ. ಅದರ ಬದಲಾಗಿ ಈ ನಿಯಂತ್ರಣದಿಂದ ವಿರುದ್ಧ ಪರಿಣಾಮವಾಗಿದೆ. ಒಕ್ಕಲತನ ಹಾಗು ಔದ್ಯೋಗಿಕ ಉತ್ಪಾದನೆಯು ಕಡಿಮೆಯಾಗಿದೆ, ಸರಕುಗಳ ಹಂಚುಕೆಯು ಸರಿಯಾಗಿ ಆಗುತ್ತಿಲ್ಲ. ಮತ್ತು ಬೆಲೆಗಳಾದರೂ ಕಳವಟ್ಟಕ್ಕೆ ಇಳಿಯದೆ ಮೊದಲಿನ ಏರಿದ ಮಟ್ಟದಲ್ಲಿವೆ.

ನಿಯಂತ್ರಣಗಳ ಪರಿಣಾಮವಾಗಿ ಔದ್ಯೋಗಿಕ ಪುನರುಜ್ಜೀವನಕ್ಕೆ ಧಕ್ಕೆಯುಂಟಾಗಿದೆ ಮತ್ತು ವ್ಯಾಪಾರ ಚಟುವಟಿಕೆಗಳಿಗೂ ಪೆಟ್ಟುಬಿದ್ದಿದೆ. ನಿಯಂತ್ರಣಗಳು ಔದ್ಯೋಗಿಕ ಪ್ರಗತಿಗೆ ಅಡ್ಡಗಲ್ಲಾಗಿರುವದರಿಂದ ಉತ್ಪಾದನೆಯು ಹೆಚ್ಚುವ ಮಾರ್ಗವು ಕೂಡ ಕಟ್ಟಾಗಿದೆ. ವ್ಯಾಪಾರ ಹಾಗು ಉದ್ದಿಮೆ ಮುಲ್ಲಿ ಕೊಡಗಿದ ಮಧ್ಯಮ ವರ್ಗದ ಜನರ ಚಟುವಟಿಕೆಯನ್ನು ಕಡಿಮೆಮಾಡಿ ಈ ನಿಯಂತ್ರಣಗಳು ಅವರನ್ನು ಅವರ ವ್ಯವಸಾಯಗಳಿಗೆ ಎರವು ಮಾಡಿವೆ. ಮತ್ತು ಬೆಲೆಗಳ ತಗ್ಗುವಿಕೆಯೆಂಬ ಇಚ್ಛಿತ ಪರಿಣಾಮ ಸಾಧನೆಯನ್ನು ಪ್ರತಿಬಂಧಿಸಿದೆ.

ಇಂದು ಮಾರಾಟಗಾರರ ಪೇಟೆಯೆಂಬದೇ ಇಲ್ಲದಂತಾಗಿದೆ. ವಿದೇಶ ವ್ಯಾಪಾರವನ್ನು ಅಭಿವೃದ್ಧಿಗೊಳಿಸುವದು ಸಾಧ್ಯವಾಗಬೇಕಾದರೆ ಒಳದೇಶದ ಪೇಟೆಗಳಲ್ಲಿ ಹಂಚಿಕೆ ಹಾಗು ಬೆಲೆಗಳಮೇಲಿನ ನಿಯಂತ್ರಣಗಳೆಂಬ ಶೃಂಖಲೆಗಳನ್ನು ಕಿತ್ತೊಗೆಯುವದು ಅವಶ್ಯ.

ಇಂದು ರಾಷ್ಟ್ರದಲ್ಲಿ ಆಹಾರಧಾನ್ಯಗಳ ಕೊರತೆ, ಹತ್ತಿ ಬಿರಿಳೆ ಮೊದಲಾದ ಅವಶ್ಯಕ ಕಚ್ಚಾ ವಸ್ತುಗಳ ಕೊರತೆ, ವ್ಯಾಪಾರ ವ್ಯವಹಾರಗಳ ಚಟುವಳಿಯಲ್ಲಿ ಸ್ಥಗಿತ, ನಿರುದ್ಯೋಗದಲ್ಲಿ ಹೆಚ್ಚಳ,

(೬ ನೇ ಪುಟ ನೋಡಿರಿ.)

100

ದಾಲ್ಮಿಯಾರವರ ಹುಚ್ಚು ಪ್ರಯತ್ನ

ಸೇಠ ರಾಮಕೃಷ್ಣ ದಾಲ್ಮಿಯಾರವರು ದೊಡ್ಡ ಶ್ರೀಮಂತರು ಅನೇಕ ದೊಡ್ಡ ಉದ್ಯೋಗಗಳನ್ನು ಅವರು ನಡೆಸುತ್ತಿದ್ದಾರೆ.

ಮತ್ತು ಸಾರ್ವಜನಿಕ ಕಾರ್ಯ ಮಾಡುವಲ್ಲಿಯೂ ಅವರಿಗೆ ಹವ್ಯಾಸವಿದೆ. ಒಳಗಡೆ ಅವರು ಗೋರಕ್ಷಣ ಕಾರ್ಯವನ್ನು ಕೈಯಲ್ಲಿ ತೆಗೆದುಕೊಂಡಿದ್ದರು. ಈಗ ಅವರ ತಲೆಯಲ್ಲಿ ನಿರಾಶ್ರಿತರ ವಿಷಯವು ಸೇರಿದೆ. ಆ ಬಡ ಪ್ರಾಣಿಗಳನ್ನು ಕಂಡು ಮತ್ತು ಅವರು ಪಡುತ್ತಿರುವ ಕಷ್ಟ ನಷ್ಟಗಳನ್ನು ನೋಡಿ ಅನುರೀಗ ಬಹಳ ದುಃಖಿಸುತ್ತಿದ್ದಾರೆಂದು ತೋರುತ್ತಿದೆ.

ಈ ವಿಚಾರಗಳು ಮತ್ತು ಕಾರ್ಯದ ಹೇತುವು ಸರ್ವಥಾ ಶ್ಲಾಘನೀಯವಾದುದೆಂಬುದರಲ್ಲಿ ಸಂಶಯವೇ ಇಲ್ಲ. ಮತ್ತು ಅವು ದಾಲ್ಮಿಯಾರಂಥ ಲಕ್ಷಾಧೀಶ್ವರ ತಲೆಯಲ್ಲಿ ಹುಟ್ಟಿದುದು ಇನ್ನೂ ಸಂತೋಷದ ಸಂಗತಿಯಾಗಿದೆ.

ಏಕೆಂದರೆ ಬಹಳ ಜನರಲ್ಲಿ ಇಂತಹ ವಿಚಾರಗಳು ಹುಟ್ಟುತ್ತಿದ್ದರೂ ಅವರಲ್ಲಿ ವಿಚಾರಗಳನ್ನು ಕೃತಿಯಲ್ಲಿ ಇಳಿಸುವ ಸಾಮರ್ಥ್ಯವು ಇರುವದಿಲ್ಲ. ಇನ್ನು ಶ್ರೀಮಂತರಲ್ಲಿ ಔದಾರ್ಯವೂ ಇರುತ್ತದೆ ಇರದಿದ್ದರೂ ವು ಬಹಳ ಪ್ರಯೋಜನಕ್ಕೆ ಬರುತ್ತಿರುವದಿಲ್ಲ. ಯಾರಾದರೂ ಕಾರ್ಯಕರ್ತರು ಅವರ ಕಡೆಗೆ ಹೋದರೆ ಅವರು ಹೇರಳ ದುಡ್ಡು ಅಥವಾ ತಮ್ಮ ಕೈಯಿಂದಾದ ಧನ ಸಹಾಯವನ್ನು ಮಾಡುತ್ತಿರುತ್ತಾರೆ. ಇಂತಹ ಜನರ ಸಹಾಯದಿಂದಲೇ ಎಲ್ಲಸಾರ್ವಜನಿಕ ಕಾರ್ಯಗಳು ನಡೆದಿವೆಂದು ಹೇಳಿದರೂ ತಪ್ಪಾಗಲಾರದು.

ಅದ್ದರಿಂದ ದಾಲ್ಮಿಯಾ ಶೇಟರ ಇಂತಹ ಸಾರ್ವಜನಿಕ ಕಾರ್ಯಗಳಲ್ಲಿ ತಮ್ಮ ಮನಸ್ಸು ಹಾಕಿದ್ದು ಬಹಳಅಭಿನಂದನೀಯ ವಿಷಯವಾಗಿದೆ.

ಪಶ್ಚಾತ್ತಾಪ ಬುದ್ಧಿ

ದಾಲ್ಮಿಯಾರವರಿಗೆ ಕೃತಕರ್ಮದ ಬಗ್ಗೆ ಪಶ್ಚಾತ್ತಾಪವಾಗಿದೆಯೆಂಬ ಮಾತು ಅವರ ಮಾತು ಮತ್ತು ಬರಹಗಳಿಂದ ಗೊತ್ತಾಗುತ್ತದೆ. ಇದು ಸ್ವಾಭಾವಿಕವಾದ ವಿಷಯ.

ಶ್ರೀಮಂತಿಕೆಯು ಬಹಳ ಗೊಂದಲದ ಸ್ಥಿತಿ. ಅದರ ನಿರ್ಮಾಣವಾಗಬೇಕಾದರೆ ಅನೇಕ ನೀತ್ಯತೀತ, ಅನೀತ್ಯತೀತ, ಸಮಾಧಾನಕರ ಅಸಮಾಧಾನಕರ ಘಟನೆಗಳು ನಡೆದುಹೋಗುತ್ತವೆ. ಮತ್ತು ನಮ್ಮ ಸಾಮಾನ್ಯ ತಿಳುವಳಿಕೆಯಿಂದ ನೋಡಿದರೂ ಕೂಡ ಒಬ್ಬನು ಶ್ರೀಮಂತನಾಗಬೇಕಾದರೆ ಅನೇಕರು ಬಡತನದಲ್ಲಿ ಬಳಲಬೇಕಾಗುವದೆಂಬುದನ್ನು ನಾವು ಅನುಭವದಿಂದ ಕಂಡು ಮಾತಾಡುತ್ತಿರುತ್ತೇವೆ

ಈ ರೀತಿಯಾಗಿ ಕೂಡಿಟ್ಟಿದ್ದ ಧನರಾಶಿಯನ್ನು ಕಂಡಾಗ ಅದರ ಅಧಿನತೆಗಳಾದ ಶ್ರೀಮಂತರಿಗೆ ಅದರ ಬಗ್ಗೆ ಭಯವೆನಿಸದೆ ಇರುವದಿಲ್ಲ. ಅದನ್ನು ಗಳಿಸುವಾಗ ಗಾಸಿಗೊಳಿಸಲ್ಪಟ್ಟವರ ಚಿತ್ರಗಳು ಅವರ ಕಣ್ಣಿಗೆ ಕಟ್ಟಿದಂತಾಗಿ ಆ ದೃಶ್ಯದ ಮೂಲಕ ಅವರ ಧರ್ಮ ಬುದ್ಧಿಯು ಕನಿಕರ ಪಡದೆ ಇರುವದಿಲ್ಲ. ಆದರಿಂದ ಬಂದ ಪಾಪವನ್ನು ಹೇಗೆ ತೊಳೆದುಕೊಳ್ಳಬೇಕೆಂಬ ಬಗ್ಗೆ ಅವರ ಮನವು ಆಗ ಹಾತೊರೆಯ ಹತ್ತುತ್ತದೆ. ಅದಕ್ಕಾಗಿ ಅವರು ತನುಗೆ ಸರಿಕಂತಪ್ಪ ಯೋಗ್ಯ ತೋಂದ ಹಾಗೆ ದಾನ ನೂಡಲು ವ್ಯಾರಂಭಿಸುತ್ತಾರೆ.

ದಾಲ್ಮಿಯಾರವರೂ ಇದೇ ತರಹದ ಪಶ್ಚಾತ್ತಾಪದಿಂದ ಬಳಲುತ್ತಿರುವಂತೆ ತೋರುತ್ತಿದೆ. ಮನುಷ್ಯನಲ್ಲಿ ಅಂತಃಕರಣವು ಇದ್ದೇ ಇದೆ. ಧನದ ಪ್ರಭಾವದ ಮೂಲಕ ಅವನ ಹೃದಯವು ಎಷ್ಟೇ ಕಠಿಣವಾದರೂ ಹಲಕೆಲವು ಸಮಯದಲ್ಲಿ ಆ ಅಂತಃಕರಣವು ಉಕ್ಕಿ ಬಂದು ಅವನನ್ನು ಎಚ್ಚರಗೊಳಿಸುತ್ತದೆ. ಈ ಜಾಗ್ರತಿಯ ಮೂಲಕ ಎಷ್ಟೋ ಶ್ರೀಮಂತರು ತಮ್ಮ ಎಲ್ಲ ಧನವನ್ನು ತ್ಯಜಿಸಿದ್ದಾರೆ. ಬೈರಾಗಿಗಳಾದ ಉದಾಹರಣೆಗಳೂ ಇವೆ

ಇದೇ ಮೇರೆಗೆ ದಾಲ್ಮಿಯಾರವರು ಇಂದು ಆ ಅಂತಃಕರಣದ ಜಾಗೃತಿಯಿಂದ ಮುಂದೆ ಬಂದಂತೆ ತೋರುತ್ತಿದ್ದಾರೆ. "ನಾನು ಈ ಮೊದಲು ಏನೇ ಮಾಡಿದ್ದರೂ ಇನ್ನು ಉಳಿದ ಆಯುಷ್ಯವನ್ನು ಮಾತ್ರ ಬಡವರ ಕಲ್ಯಾಣದ ಸಲುವಾಗಿ ಸವೆಸಲು ನಿಶ್ಚಯ ಮಾಡಿದ್ದೇನೆ" ಎಂದು ಅವರು ಹೇಳಿದ್ದಾರೆ.

ಯಾವನಿಗೆ ಈ ಮಾತಿನಿಂದ ಸಂತೋಷವಾಗಲಿಕ್ಕಿಲ್ಲ? ಇಂತಹ ಔದಾರ್ಯ ಶ್ರೀಮಂತನಿಂದ ಸಾಧ್ಯವಿದ್ದಷ್ಟು ಬಡವರ ಕಲ್ಯಾಣವು ಸಾಧಿಸಲ್ಪಡಲಿ ಎಂದು ಪ್ರತಿಯೊಬ್ಬನು ಹಾರೈಸದೆ ಇರಲಾರನು.

ದಾರಿ ಸರಿಯಿಲ್ಲ

ಆದರೆ ದಾಲ್ಮಿಯಾರವರ ಕಳೆದ ಕೆಲವು ವರ್ಷಗಳ ಚಟುವಟಿಕೆ, ಬರಹ, ಮಾತುಗಳನ್ನು ನೋಡಿದರೆ ಅವರ ಬಗ್ಗೆ ಸ್ವಲ್ಪ ನಗೆ ಬರುವಂತಹ ಪ್ರಸಂಗವು ಬಂದಿದೆ ಅವರು ಬಹಳ ಚಂಚಲರಾಗಿ ತೋರುತ್ತಿದ್ದಾರೆ. ಇವತ್ತೊಂದು ಮಾತಾಡಿದರೆ ಅದನ್ನು ನಾಳೆ ಮರೆತು ಬೇರೆ ಯಾವುದೇ ವಿಷಯವನ್ನು ಅವರು ಬೆನ್ನಟ್ಟಿರುವದು ಕಂಡುಬರುತ್ತದೆ.

ಮನುಷ್ಯನಲ್ಲಿಯ ಮತ್ತೊಂದು ದುರ್ಗುಣವನ್ನು ಹೇಳಬೇಕೆಂದರೆ ಅವನು ಏನಾದರೂ ಅಲ್ಪ ಸ್ವಲ್ಪ ಸತ್ಕಾರ್ಯ ಮಾಡಿದರೆ, ಮಾಡುವ ವಿಚಾರ ಮಾಡಿದರೂ ಕೂಡ, ತನ್ನ ಯೋಗ್ಯತೆಯ ಬಗ್ಗೆ ಅವಾಸ್ತವ ಕಲ್ಪನೆಯನ್ನು ಮಾಡಿಕೊಂಡು ಬಿಟ್ಟು ಎರಡನೆಯವರಿಗೆ ಉಪದೇಶವನ್ನೇ ಮಾಡಲು ವ್ಯಾರಂಭಿಸಿಬಿಡುತ್ತಾನೆ ಮತ್ತು ಅವೊದಲು ಅಂತಹ ಕಾರ್ಯದಲ್ಲಿ ತೊಡಕಿದ ಯಾವದೇ ವ್ಯಕ್ತಿಯನ್ನು ಹಿಂದೆಹಾಕುವ ಹುಚ್ಚು ಬುದ್ಧಿಯು ಅವನಲ್ಲಿ ಉಂಟಾಗುತ್ತದೆ.

ದಾಲ್ಮಿಯಾರವರಲ್ಲಿ ಈ ಮಾತು ಈಗ ಚನ್ನಾಗಿ ಕಂಡುಬರುತ್ತಿದೆ. ಅವರು ಗಾಂಧಿ ಸ್ಮಾರಕ ನಿಧಿ, ಕಸ್ತೂರಬಾ ನಿಧಿಗಳ ಬಗ್ಗೆ ಮಾಡಿದ ಆರೋಪ, ಪಂಡಿತ ಜವಾಹರಲಾಲರಿಗೆ ಬಹಿರಂಗ ಪತ್ರ ಬರೆದು "ನೀವು ಇಂಡೋನೇಶಿಯಾದ ವ್ಯವಾಸವನ್ನು ಮುಂದೆ ಹಾಕಿರಿ. ಇಂತಹ ವೇಳೆಯಲ್ಲಿ ನೀವು ದೇಶವನ್ನು ಬಿಟ್ಟು ಹೋಗಕೊಡದು. ನಿರಾಶ್ರಿತರ ಪ್ರಶ್ನೆಯನ್ನು ನಮ್ಮ ದೇಶವು ನೋಡಲು ಬಿಡಿಸಬೇಕಾಗಿದೆ" ಎಂಬುದೇ ಮುಂತಾಗಿ ಹೇಳಿದ ವಿಷಯಗಳು ಅವರ ಈ ವಿಷಯದ ಅತಿ ಉತ್ಸಾಹವನ್ನು ತೋರಿಸುತ್ತಿವೆ.

ತಾವು ಬೇಕಾದ ರೀತಿಯಲ್ಲಿ ತಮಗೆ ತಿಳಿದ ಕಾರ್ಯವನ್ನು ಬೇಕಾದಷ್ಟು ಮಾಡಲು ದಾಲ್ಮಿಯಾಂವರಿಗೆ ಯಾರೂ ಬೇಡವೆನ್ನುವದಿಲ್ಲ. ಅವರೇ ಮೊದಲು

ಶ್ರೀಮಂತರಿದ್ದಾರೆ ಕೋಟಿಗಟ್ಟಲೆ ದುಡ್ಡನ್ನು ವೆಚ್ಚ ಮಾಡಲು ಅವರಿಗೆ ಸಾಮರ್ಥ್ಯವಿದೆ. ಅಲ್ಲದೆ ತಮ್ಮ ವರ್ಚಸ್ಸಿನ ಮೂಲಕ ಮತ್ತು ತಾವು ಕೈಕೊಳ್ಳಬಹುದಾದ ಕಾರ್ಯದ ಉದಾತ್ತತೆಯ ಕಾರಣದಿಂದ ಅವರು ತಮ್ಮಂತಹ ಇತರ ಲಕ್ಷಿಪ್ರ ಪುತ್ರರಿಂದ ಬೇಕಾದಷ್ಟು ಹಣವನ್ನು ಕೂಡಿಸಬಹುದಾಗಿದೆ.

ಹೀಗಿರುವಾಗ ಆ ಗಾಂಧೀ ನಿಧಿ, ಕಸ್ತೂರಬಾ ನಿಧಿಗಳ ಬಗ್ಗೆ ವ್ಯರ್ಥ ಅಪಲಾಪಗಳನ್ನು ತೆಗೆಯುವದು ಏತಕ್ಕೆ ಬೇಕಾಗಿತ್ತು? ಹೊರಗೆ ಹೋಗುವ ದೆವ್ವವನ್ನು ಮನೆಯಲ್ಲಿ ಹೊಗಿಸಿಕೊಂಡು ತಮ್ಮ ಕಾರ್ಯಕ್ಕೇ ತಾವು ವಿಘ್ನವನ್ನು ಉಂಟು ಮಾಡಿಕೊಳ್ಳುತ್ತಿದ್ದಾರೆಂಬುದು ಅವರಿಗೆ ತಿಳಿಯದಿದ್ದುದು ಆಶ್ಚರ್ಯದ ಸಂಗತಿ.

ಜವಾಹರಲಾಲರಿಗೆ ಇಂಡೋನೇಸಿಯಾಕ್ಕೆ ಈಗ ಹೋಗಬೇಡಿರೆಂದು ಹೇಳುವದು ಏನು ಅವಶ್ಯವಿತ್ತು? ಅವಶ್ಯ ಕೇವಲ ನಿರಾಶ್ರಿತರ ಕೆಲಸವನ್ನೇ ಮಾಡಿದರೆ ಸಾಕೆ? ದೇಶಕ್ಕೆ ಅವಶ್ಯವಿರುವ ಇತರ ಮಹತ್ವದ ಕೆಲಸಗಳನ್ನು ಅವರು ಮಾಡಬೇಡವೆ? ಅಷ್ಟೇ ಅಲ್ಲದೆ ಜವಾಹರಲಾಲರು ನಿರಾಶ್ರಿತರ ಬಗ್ಗೆ ಬೇಕಾದ ಸಹಾಯ ಮಾಡಲು ಒಂಟಿಗಾಲಿನಿಂದ ಸಿದ್ಧರಿದ್ದಾರೆ. ಅದರ ಪ್ರಯೋಜನವನ್ನು ತಮ್ಮ ಕಾರ್ಯಪ್ರಗತಿಯ ಬೆಳಕಿನಿಂದ ಮಾಡಿಕೊಳ್ಳುವುದನ್ನು ಬಿಟ್ಟು ಹೀಗೆ ಅನವಶ್ಯಕವಾಗಿ ಪ್ರಯತ್ನಪಡುವುದನ್ನು ನೋಡಿದರೆ ದಾಲ್ಮಿಯಾರವರು ಕಾರ್ಯಕ್ಕಿಂತ ಮಾತನ್ನೆ ಹೆಚ್ಚಾಗಿ ಆಡುವವರು ಅಗಿದ್ದಾರೆಂದು ಯಾರಾದರೂ ಅಂದುಕೊಳ್ಳಬಹುದಾಗಿದೆ. ಈ ಮಾತನ್ನು ಲಕ್ಷಿಸಿ ಅವರು ಮುಂದುವರಿಯುವುದು ಅವಶ್ಯವಿದೆ. —[ಜಯ ಹಿಂದ]—

ಶಾಲೆಗಳಲ್ಲಿ ಅನಾವಶ್ಯಕ ಚಂದಾ ವಸೂಲಿ.

ಜಿಲ್ಲಾ ಬೋರ್ಡು ಮತ್ತು ಇತರ ಖಾಸಗಿ ನಾಧ್ಯಮಿಕ ಶಾಲೆಗಳಲ್ಲಿ ಶಾಲೆಯ ಮಾಸಿಕ ಶುಲ್ಕವಲ್ಲದೆ ಶಾಲೆಯ ವಾರ್ಷಿಕೋತ್ಸವ ಮತ್ತು ಇತರ ಉತ್ಸವ ಸ್ಕೌವುಟ ಕ್ಯಾಂಪ್ ವಿಹಾರಗಳಿಗಾಗಿ ಉಪಾಧ್ಯಾಯರು ಚಂದಾ ವಸೂಲಿ ಮಾಡುವ ಪೂರ್ವದಲ್ಲಿ ತನಿಖೆ :ಅಡಿ ಕಾರಿಗಳ ಅಪ್ಪಣೆ ಇಲ್ಲದೆ ವಸೂಲಿ ಮಾಡಬಾರದೆಂದು ವಿದ್ಯಾ ಶಾಖೆಯ ಡೈರೆಕ್ಟರ್‌ರು ವಿಧಿಸಿದ್ದಾರೆ.

ಸಕ್ಕರೆಯ ಬಿಕ್ಕಟ್ಟು

ನಮ್ಮ ರಾಷ್ಟ್ರದಲ್ಲಿ ಜನತೆಗೆ ಸಾಕಾಗುವಷ್ಟು ಉತ್ಪನ್ನವಾಗುತ್ತಿದ್ದರೂ ೧೯೪೯ ರ ಜುಲೈ-ಅಗಸ್ಟದಲ್ಲಿ ಸಕ್ಕರೆಯ ಕೃತ್ರಿಮವು ತಲೆದೋರಿ ಸರಕಾರದವರು ಮತ್ತೆ ನಿಯಂತ್ರಣ ಹೇರಬೇಕಾದ ಪ್ರಸಂಗ ಬಂದಿತು. ಈ ಬಿಕ್ಕಟ್ಟಿಗೆ ಕಾರಣವಾದ ಅಂಶಗಳನ್ನು ಈಗ ಪರ್ಯಾಲೋಚಿಸಲಾಗುತ್ತಿದೆ. ಇದಕ್ಕಾಗಿ ಭಾರತ ಸರ್ಕಾರದವರು ಒಬ್ಬ ಹೈಕೋರ್ಟು ನ್ಯಾಯಾಧೀಶರನ್ನು ನಿಯಮಿಸಿರುವರು.

ಸಕ್ಕರೆ ಕಾರ್ಖಾನೆಗಳ ಮಾಲೀಕರೂ ಅವರ ಮಾರಾಟದ ಏಜಂಟರೂ ರಾಷ್ಟ್ರದ ವಿವಿಧ ಭಾಗಗಳಿಗೆ ಸಕ್ಕರೆ ಕಳುಹಿಸುತ್ತೇವೆಂಬ ನೆಪದಿಂದ ಹೆಚ್ಚು ವಾಗೀನುಗಳನ್ನು ಪಡೆದು ಒಳಗೊಳಗೇ ಪಾಕಿಸ್ತಾನಕ್ಕೆ ಸಾಗಿಸಿದರು. ಹೆಚ್ಚು ವಾಗೀನುಗಳನ್ನು ಪಡೆದು ಸಕ್ಕರೆಯನ್ನು ಒಳಗೊಳಗೇ ಪಾಕಿಸ್ತಾನಕ್ಕೆ ಸಾಗಿಸಿದರು ಸಕ್ಕರೆಯನ್ನು ಹೆಚ್ಚು ಖರ್ಚು ಮಾಡುವ ಹೋಟಲ್ ಮತ್ತು ವಿಶಾಯಿ ಅಂಗಡಿಗಳಿಗೆ ಈ ಮಾರಾಟಿಗ ಏಜಂಟರು ಅಧಿಕ ಬೆಲೆಗೆ ಮಾರಿ ಇತರ ಜನರಿಗೆ ದೊರಕದಂತೆ ಮಾಡಿದರು ಈ ಸಕ್ಕರೆ ಕಾರ್ಖಾನೆಯ ಮಾಲೀಕರು ತಮ್ಮ ಗುದಾಮುಗಳಲ್ಲಿ ಸಾವಿರಗಟ್ಟಲೆ ಚೀಲಗಳನ್ನು ಸಂಗ್ರಹಿಸಿ ಇಂಥ ಕಳ್ಳ ವ್ಯಾಪಾರವನ್ನು ಒಳಗೊಳಗೇ ಸಾಗಿಸಿದ್ದರು. ಸರ್ಕಾರದವರು ಅಜ್ಞೆ ಹೊರಡಿಸಿದೊಡನೆಯೇ ಈ ಮಾಲೀಕರೆಲ್ಲಾ ಸಕ್ಕರೆಯನ್ನು ಬೇಕೆಕಡೆ ಸಾಗಿಸಿ ಸಕ್ಷರೆಯ ಬೆಲೆಯನ್ನು ಏರುವಂತೆ ಮಾಡಿದರು.

ಈ ಅಂಶಗಳೆಲ್ಲಾ ಈಗ ಹೊರಬಿದ್ದಿವೆ ಆಹಾರಸಾಮಗ್ರಿಗಳ ಸ್ವತಂತ್ರ ವ್ಯಾಪಾರ (Free Trade) ಇರಬೇಕೆಂದು ಜನತೆಯು ಆಂದೋಳನ ಹೂಡುತ್ತಿದೆ. ಅವರು ಸಕ್ಕರೆ ಕಾರ್ಖಾನೆಗಳ ಮಾಲೀಕ ಮತ್ತು ಅವರ ಏಜಂಟರ ಉದಾಹರಣೆಯನ್ನು ಚನ್ನಾಗಿ ಗಮನಿಸಬೇಕು. ಅಕ್ಕಿಯಲ್ಲದ ಇತರ ಧಾನ್ಯಾದಿಗಳವಿನಿಯಂತ್ರಣವಾದರೂ ಲಾಭಬಡಕ ತನದಿಂದ ಲಕ್ಷ ಗಟ್ಟಲೆ ಚೀಲ ಕೊಂಡು ಹೆಚ್ಚು ಬೆಲೆಗೆ ಮಾರುವ ಉದ್ದೇಶದಿಂದ ಒಳಗಿಡುವ ವರ್ತಕರ ಕಾರಣದಿಂದ ಅವರ ಭಯದಿಂದ ಹಿಂದೆ ಬಿದ್ದಿದೆ.

ರೂಪಾಯಿಗೆ 5-6 ಸೇರು ಪ್ರಕಾರ ಕೊಂಡು ಎಲ್ಲಿಯೂ ಧಾನ್ಯವಿಲ್ಲದಂತೆ ಮಾಡಿ ಗೂಪಾಯಿಗೆ 2 ಸೇರು ಜೋಳದಂತೆ ಮಾರಿದ ಉದಾಹರಣೆಗಳನ್ನು ನಾವು ಕಣ್ಣಾರೆ ಕಂಡಿದ್ದೇವೆ. ಈ ಕಾರಣದಿಂದ ಕಂಟ್ರೋಲ್ ತೆಗೆಯಬೇಕಾದರೆ ಯಾ ವಿನಿಯಂತ್ರಣ ಮಾಡಬೇಕಾದರೆ ಸರ್ಕಾರವಾದರೂ ಪೂರ್ವಾಪರ ಬಹಳ ಆಲೋಚಿಸಬೇಕಾಗುತ್ತದೆ.

ಹೊಸಪೇಟೆಯ ಜಿಲ್ಲಾ ಮುನ್ಸಿಫರ ಕೋರ್ಟಿನಲ್ಲಿ.

S. C. 60/50.

V.L. ನಾರಾಯಣರಾವು ಅಡ್ವೋಕೇಟ್ ಹೊಸಪೇಟೆ. .... ವಾದಿ

Vs

ಕುರಿ ಸಣ್ಣ ಹನುಮಂತಪ್ಪ ತಂದೆ ನಾಗಪ್ಪ, 36, ಕುರುಬ, ಜಿರಾಯ್ತಿ, ಇಂಗಳಗಿ, ಹೊಸಪೇಟೆ ತಾ|| ಪ್ರತಿವಾದಿ.

ಮೇಲಿನ ನಂಬರಿನಲ್ಲಿ ವಾದಿ ಪ್ರತಿವಾದಿಯ ಮೇಲೆ ರು. 109—0—0 ಕ್ಕೆ ದಾವಮಾಡಿರುತ್ತಾರೆ 20-6—50 ಕ್ಕೆ ವಾಯಿದಾ ಇರುತ್ತದೆ. ಪ್ರತಿವಾದಿ ಆ ದಿವಸ ಖುದ್ದಾಗಲಿ ವಕೀಲರದ್ವಾರಾ ಆಗಲಿ ಹಾಜರ ಆಗದಿದ್ದರೆ ಪ್ರತಿವಾದಿ ಮೇಲೆ exparte ಡಿಕ್ರಿ ಆಗುತ್ತದೆ.

Hospet)ಎ. ಆರ್. ಕೃಷ್ಣರಾವ್,
10—6—50)ವಾದಿಯ ಅಡ್ವೋಕೇಟ್

ಹೊಸಪೇಟೆ

ಸಾನಿಗುರೂಜಿ:— ಮಹರಾಷ್ಟ್ರದ ಸುಪ್ರಸಿದ್ಧ ಸಮಾಜವಾದಿಗಳೂ ತತ್ವವೇತ್ತರೂ ಆದ ಸಾನಿಗುರೂಜಿಯವರ ನಿಧನದಿಂದ ರಾಷ್ಟ್ರಕ್ಕೆ ಸಂಭವಿಸಿದ ನಷ್ಟವು ಅಪಾರವಾದುದು ಎಂದು ಬಳ್ಳಾರಿ ಜಿಲ್ಲಾ ಸೋಶಿಯಲಿಸ್ಟ್ ಪಾರ್ಟಿಯ ನೇತೃತ್ವದಲ್ಲಿ ಶ್ರೀ ಆ. ತಿರುಮಲರಾಯರ ಅಧ್ಯಕ್ಷತೆಯಲ್ಲಿ 13 ನೆಯ ತಾ. ಸಮಾನೇಕವಾದ ಸಭೆಯೊಳಗೆ ತೀರ್ಮಾನವಾಗಿ ಮೃತರ ಆತ್ಮಕ್ಕೆ ಶಾಂತಿಯೂ ಕುಟುಂಬೀಕರಿಗೆ ದುಃಖ ಸಹಾನುಭೂತಿಯೂ ಪ್ರದರ್ಶಿತವಾದವು.

ಇಲ್ಲಿಗೆ 15 ಮೈಲಿ ದೂರದ ಗರಗ ಗ್ರಾಮದಲ್ಲಿ ಒಂದು ತಿಂಗಳಿಂದ ಪಶು ಭಕ್ಷಕನಾಗಿದ್ದ ದೊಡ್ಡ ಹುಲಿಯೊಂದನ್ನು ಕೇವಲ 18 ವರ್ಷದ ಬೇಡರ ದೊಡ್ಡ ಹನುಮಂತಪ್ಪನೆಂಬಾತನು ಬೇಟೆಯಾಡಿ ಕೊಂದನು. 7 ಅಡಿ ಉದ್ದದ ಆ ಹುಲಿಯ ಸುರವಣಿಗೆಯು ತೆಗೆಯಲಾಗಿತ್ತು.

ಶ್ರೀ ಗುರು ಸಚ್ಚಿದಾನಂದ ಟಾಕೀಸ್ ಎಂಬ ವಾಕ್ಚಿತ್ರ ಮಂದಿರ ಉದ್ಘಾಟನೆಯಾಯಿತು. ಇಲ್ಲಿಗೆ ಮದ್ರಾಸ್ ಗವರ್ನರರು ಬಂದಾಗ ಅವರಿಗೆ ಮಾನಪತ್ರ ಸಮರ್ಪಿಸಲು ಪುರಸಭೆಯು ನಿಶ್ಚಯಿಸಿದೆ.

ಕಾಲೇಜುಗಳಲ್ಲಿ ಪ್ರವೇಶ ನಿರ್ಬಂಧವು ಹೋಗಬೇಕು

ಈ ಜಾತ್ಯಾತೀತ ರಾಷ್ಟ್ರದಲ್ಲಿ ನೌಕರಿಗಳಿಗಷ್ಟೇ ಅಲ್ಲ. ವಿದ್ಯಾಭ್ಯಾಸ ಕ್ರಮದಲ್ಲೂಕೂಡ ಸರ್ಕಾರದವರು ಜಾತಿಗಳನ್ನು ನೋಡಿ ಪ್ರವೇಶ ಸೌಕರ್ಯವನ್ನು ಕಲ್ಪಿಸುತ್ತಿರುವರೆ. ಬ್ರಾಹ್ಮಣಜಾತಿಯವರಿಗಂತೂ ಯಾವ ಕಾಲೇಜಿನಲ್ಲೇ ಆಗಲಿ ಸ್ಥಾನ ಸಿಕ್ಕುವುದು ದುರ್ಭರವಾಗಿಬಿಟ್ಟಿದೆ. ನೌಕರಿಗಳಲ್ಲಿ ನಿರ್ಬಂಧ ವಿರಬೇಕಾಮದು ನ್ಯಾಯವೆಂದು ಸರಕಾರವು ವಾದಿಸಲು ತಯಾರಿದ್ದರೂ ಶಾಲೆಗಳಲ್ಲಿ ತಾವು ಬೇಡಿದ ಶಿಕ್ಷಣಕ್ಕೆ ವರ್ಷಡಿಸಬೇಕಾದುದು ಸರಕಾರದ ಮುಖ್ಯ ಕರ್ತವ್ಯವಿದೆ. ಯಾವ ಜಾತಿಯವರೇ ಇರಲಿ ಮಕ್ಕಳ ವಿದ್ಯಾಭ್ಯಾಸದಲ್ಲಿ ಸರಕಾರವು ಪಕ್ಷಪಾತವನ್ನು ತೋರಿಸಬಾರದು. ಸರಕಾರವು ತನ್ನ ಖರ್ಚಿನಿಂದ ಇನ್ನು ಹೆಚ್ಚು ಕಾಲೇಜುಗಳನ್ನು ತೆಗೆಯಲಿ ಆದರೆ ಈ ಪಕ್ಷಪಾತವು ಮಾತ್ರಬೇಡ ಶ್ರೀಮತಿ ಚಂಪಕಮ್ ದೊರೈರಾಜನ್ ಎಂಬ ಬಿ. ಎ. ಪಾಸು ಮಾಡಿದ ಸ್ತ್ರೀಯು ತನಗೆ ಮದ್ರಾಸ್ ಮೆಡಿಕಲ್ ಕಾಲೇಜಿನಲ್ಲಿ ಈ ಜಾತೀಯ ಆಜ್ಞೆಯಕಾರಣ ಸ್ಥಾನ ದೊರಕದಿದ್ದುದರಿಂದ ಮದ್ರಾಸ್ ಹೈಕೋರ್ಟಿನಲ್ಲಿ ದಾವೆ ಹೂಡಿದ್ದಾಳೆ. ಮದ್ರಾಸಿನ ಸುಪ್ರಸಿದ್ಧ ವಕೀಲರಾದ ಶ್ರೀ ವಿ. ವಿ. ಶ್ರೀನಿವಾಸಯ್ಯಂಗಾರರು ಅಕೆಯಪರ ವಾದಿಸಲು ನಿಂತಿರುವರು. ಸರಕಾರದವರು ಸಮಯ ಬೇಕೆಂದು ಕೇಳಿದಕಾರಣ ಜುಲೈ 10 ರವರೆಗೆ ಸಮಯ ಕೊಡಲಾಗಿದೆ ಇದನ್ನು ಎಲ್ಲರೂ ಕುತೂಹಲ ಪರವಶರಾಗಿ ಈಕ್ಷಿಸುತ್ತಿರುವರು.

———

(ಹಿನೇ ಪುಟದಿಂದ ಮುಂದುವರಿದಿದೆ.)

ಹಂಕೆಯಲ್ಲಿ ಅವ್ಯವಸ್ಥೆ, ಪ್ರಾಂತೀಯ ಸರಕಾರಗಳಲ್ಲಿ ಕೊರತೆಯ ಮುಂಗಡ ಪತ್ರ ಇವುಗಳೆಲ್ಲ ಕಂಡು ಬರುತ್ತಿರುವದಕ್ಕೆ ನಿಯಂತ್ರಣಗಳ ಘೋರತೆ ಹಾಗು ಕಾರ್ಯಚರಣೆಗಳೇ ಕಾರಣವಾಗಿದೆ.

ಯುದ್ಧಕಾಲದಲ್ಲಿ ಮತ್ತು ತದನಂತರದ ಅವಧಿಯಲ್ಲಿ ನಿಯಂತ್ರಣಗಳ ಅವಶ್ಯಕತೆ ಏನೇ ಇದ್ದರೂ ಸಮಸ್ಯೆ ಮಾತ್ರ ಅವುಗಳನ್ನು ಮುಂದುವರಿಸುವ ಕಾರಣವಿಲ್ಲ ಮುಂದುವರಿಸವದರಿಂದ ರಾಷ್ಟ್ರದ ಹಿತಕ್ಕೆ ಭಂಗ ಬರುವದು.

ಆಹಾರ ಧಾನ್ಯಗಳು, ಹತ್ತಿ, ನೂಲು, ಕಲ್ಲಿದ್ದಲಿ ಹಾಗು ಚಿಕ್ಕ-ದೊಡ್ಡ ಉದ್ದಿಮೆಗಳಮೇಲೆ ನಿಯಂತ್ರಣಗಳಿಂದಾಗಿ ದುಷ್ಪರಿಣಾಮಗಳನ್ನು ಈ ಸಮಿತಿಯವರು ತೋರಿಸಿ ಕೊಟ್ಟಿದ್ದಾರೆ.

———

ವಿಮಾನ ಅಪಘಾತ:— ಫ್ರಾನ್ಸ್‌ದೇಶದ ಎರಡು ವಿಮಾನಗಳು ಪರ್ಶಿಯಾ ಕೊಲ್ಲಿಯಲ್ಲಿ ಮಂಗಳವಾರ ಪ್ರಾತಃಕಾಲ ಒಂದು, ಗುರುವಾರ ಪ್ರಾತಃಕಾಲ ಒಂದು ಒಂದೇ ಸ್ಥಳದಲ್ಲಿ ಕೆಳಗಳಿಯ ಬೇಕಾದರೆ ಸಮುದ್ರದಲ್ಲಿ ಬಿದ್ದು ನಾಶವಾದವು. ಮಂಗಳವಾರದಿನ 51 ಪ್ರಯಾಣಿಕರಲ್ಲಿ 45 ಸತ್ತರು. ಗುರುವಾರ 45 ಜನ ಮತ್ತು 8 ವೈಮಾನಿಕರು ಪತ್ತೆ ಇಲ್ಲದಾಗಿದ್ದಾರೆ ಈ ವಿಮಾನಗಳು ಇಂಡೋಚೀನದಿಂದ ಫ್ರಾನ್ಸಿಗೆ ಹೋಗಲಿದ್ದವು. ಇಂಡೋಚೀನದ ಕಮ್ಯೂನಿಸ್ಟರು ಈ ನಾಶಕಾರೀ ಕೃತ್ಯ ಮಾಡಿರಬೇಕೆಂದು ಊಹಿಸಲಾಗಿದೆ.

———

ದಕ್ಷಿಣ ಆಫ್ರಿಕಾದವರು ಭಾರತೀಯರ ವಿರೋಧವಾಗಿ ಬಿಲ್ ಪಾಸ್ ಮಾಡಿದಕಾರಣ ಆ ಸರ್ಕಾರದೊಡನೆ ಯಾವ ವಿಷಯಕ್ಕೂ ಸಂಧಾನಕ್ಕೆ ಬರುವದಿಲ್ಲೆಂದು ಭಾರತ ಸರಕಾರವು ಆಫ್ರಿಕಾಕ್ಕೆ ತಿಳಿಸಿದೆ.

———

ಡಾರ್ಜಲಿಂಗಿನ ಪ್ರದೇಶದಲ್ಲಿ ವಿಶೇಷ ಸಂಚಯವಾದಕಾರಣ ಅದು ಭಾರತದಿಂದ ಪ್ರತ್ಯೇಕಿಸಲ್ಪಟ್ಟಿದೆ. ತಂತಿ ಇಲ್ಲದ ವ್ಯವಹಾರವು ಸಾಗಿದೆ. ೨೪ ಗಂಟೆಗಳಲ್ಲಿ ೧೪ ಅಂಗುಲ ಮಳೆಯಾಗಿ ಪರ್ವತ ಭಾಗವು ಅಲ್ಲಲ್ಲಿ ಬಿದ್ದಿದೆ.

ಹಿಂದೀ ಮಹಾ ವಿದ್ಯಾಲಯ, ಬಳ್ಳಾರಿ,

[1931 ಸ್ಥಾಪಿತ. ಬಳ್ಳಾರಿ ಜಿಲ್ಲಾ ಹಿಂದೀ ಪ್ರೇಮೀ-ಮಂಡಲದಾಶ್ರಯದಲ್ಲಿ, ರಿಜಿಸ್ಟರ್ಡ್.]

ಮದ್ರಾಸ್ ಸರ್ಕಾರದಿಂದ ಮಾನ್ಯತೆ ಇದೆ.

ಪ್ರಾರಂಭಿಕ ವರ್ಗಗಳಿಗೆ ಮಾಸಿಕ 3/- ರೂ. ಶುಲ್ಕ — ಉನ್ನತ ವರ್ಗಗಳಿಗೆ ಮಾಸಿಕ 5/- ಶುಲ್ಕ

ವಾರ್ಡಲಾ ಹೈಸ್ಕೂಲ್ ಕಟ್ಟಡದಲ್ಲಿ ಪ್ರಾತಃಕಾಲ-ಸಾಯಂಕಾಲ ಹಿಂದೀ ಕಾಲೇಜ್‌ದ ವರ್ಗಗಳು ನಡೆಯುತ್ತಿವೆ. ಪ್ರವೇಶಕ — ವಿಶಾರದ ವರ್ಗಗಳಲ್ಲದೆ ಪ್ರಾರಂಭಿಕ ವರ್ಗಗಳಿಗೂ ಪ್ರವೇಶವಿದೆ. ವರ್ಗಗಳಿಗೆ ಸಂಬಂಧಿಸಿದ ವಾಠ್ಯ ಪುಸ್ತಕಗಳು ವಿದ್ಯಾಲಯದಲ್ಲಿ ದೊರೆಯುತ್ತವೆ. ಒಳ್ಳೆಯ ಪುಸ್ತಕಭಂಡಾರವಿದೆ. ಶ್ರೀಷ್ಮ ವಾರಪತ್ರಿಕೆ, ಮಾಸಪತ್ರಿಕೆಗಳು ಲಭ್ಯ. ಇತರ ವಿವರಗಳಿಗೆ ಸ್ವಾಂಪಿಟ್ಟು ಬರೆಯಿರಿ.

ಪ್ರಿನ್ಸಿಪಾಲ್.

NAVA BHARAT BELLARY. (Reg. No. M. 4746)

19—6—50

ನವಭಾರತ ಬಳ್ಳಾರಿ.

(Nationalist Weekly)

ಚಂದಾದರಗಳು.		Subscription Rates.	
ವರ್ಷಕ್ಕೆ	5—0—0	One Year	5—0—0
6 ತಿಂಗಳಿಗೆ	3—0—0	Six months	3—0—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.		Subscription will not be accepted for less than 6 months	

To

Sri.....

.....

.....

Printed at Krishna Printing Works, Edited & Published by T.B. Keshava Rao.

JAI—HIND

ಸಂಯುಕ್ತವಾದಿ

ಬಳ್ಳಾರಿಯ
ಉಜ್ವಲ ರಾಷ್ಟ್ರೀಯ ವಾರಪತ್ರಿಕೆ
*
ಉತ್ತಿಷ್ಠತ! ಜಾಗೃತ
ಪ್ರಾಪ್ಯವರಾನ್ನಿ ಭೋಧತ !!!
*
ಸಂಪಾದಕ ಮತ್ತು ಪ್ರಕಾಶಕ:—
ಟಿ. ಬಿ. ಕೇಶವರಾವು

ವರ್ಷ ೧೩ ಸೋಮವಾರ ೨೬ ಜೂನ್ ೧೯೫೦ ಸಂಚಿಕೆ .

ಕಾಂಗ್ರೆಸಿಗೆ

ವಿರೋಧ ಪಕ್ಷವು ಬೇಕು

(ಶ್ರೀ ಯಸ್. ಯಂ. ಶಾಸ್ತ್ರಿಗಳ ವಾದದ ಸಾರಾಂಶ)

ಮಹಾತ್ಮ ಗಾಂಧಿಯವರ ಶ್ರೇಷ್ಠತ ತ್ವಾನುಯಾಯಿಗಳೆಂದು ಹೇಳಿಕೊಳ್ಳುವ ಕಾಂಗ್ರೆಸಿಗರು ರಾಜ್ಯಪರಿಪಾಲನೆಯಲ್ಲಿ ತಪ್ಪು ಹಾದಿಹಿಡಿದಿದ್ದಾರೆ. ವಿದ್ಯಾಸಂಸ್ಥೆಗಳಲ್ಲಿದ ಅನೇಕರು ಗಾಂಧೀಜಿ ಕರೆಗೆ 'ಓ' ಕೊಟ್ಟು ಜೈಲಿನವಾಸವನ್ನನುಭವಿಸಿ ಹೊರಗೆ ಬಂದಕೂಡಲೆ ಅವರು ದೊಡ್ಡ ದೇಶಭಕ್ತರೆಂದು ಜನತೆಯು ಭಾವಿಸಿ ಅವರನ್ನು ಪುರಸ್ಕಾರ ರೂಪವಾಗಿ ಶಾಸನ ಸಭೆಗಳಿಗೆ ಕಳುಹಿಸಿದ ದುಸ್ಪರಿಣಾಮವಿದು. ಅವರು ಎಷ್ಟೇ ಧಡ್ಡರಿರಲಿ ಯುದ್ಧಕಾಲದಲ್ಲಿ ಸೈನಿಕರ ಉಪಯೋಗ ವಾದೀತು. ಯುದ್ಧಸಮಯವು ಪೂರ್ತಿಸಿ ಸೇನಾಧಿಪತಿಯು ಕೈಸಡಲಿಸಿದರೆ ಸೈನಿಕರು ತಪ್ಪದಾರಿ ಯಾವಪ್ರಕಾರ ಹಿಡಿಯುವರೋ ಅದೇ ರೀತಿಯಲ್ಲಿಯೇ ಸ್ವಾತಂತ್ರ್ಯೋದ್ಯಮವು ನುಗಿದನಂತರ ಗಾಂಧೀಜಿಯ ಅಸಂಖ್ಯಾತ ಮತ್ತು ಅನಿಯಂತ್ರಿತ ಈ ಸೈನಿಕರು ತಪ್ಪುದಾರಿ ಹಿಡಿದಿದ್ದಾರೆ. ಅಲ್ಲದೆ ಯುದ್ಧಕಾಲೆಯು ಬೇರೆ. ರಾಜ್ಯಭಾರ ಪರಿಪಾಲನೆಯು ಬೇರೆ. ಜೈಲಿಗೆ ಹೋಗುವ ಕಲೆಯನ್ನು ಕಲಿತವರು ರಾಜ್ಯಭಾರ ಸೂತ್ರವನ್ನು ಹೇಗೆ ಅರ್ಹರಾದಾರು? ಈಗ ಶಾಸನಸಭೆಗಳಲಿ ಕಾಂಗ್ರೆಸ್‌ನಿಯಿಂದ ಬಂದ ಸೇಕಡ 90 ಜನರಿಗೆ ಅಂತಸ್ಥ ಸೈನಿಕ ಶ್ರೇಣಿಯೂ ಇಲ್ಲ. ಶಕ್ತಿ ಸಾಮರ್ಥ್ಯಗಳೂ ಇಲ್ಲ ಹೀಗಾಗಿ ನುಂಗ್ರಿಗಲು ಕನ್ನು ಬೆಂಬಲಿಗರೆಂದು ಹೇಳಿಕೊಳ್ಳುವ ಕಾಂಗ್ರೆಸಿಗರನ್ನು ಸಂಪೀಡಿಸಿಕೊಳಿಸಲು ಪರ್ಮಿಟ್ ಲೈಸನ್ಸ್ ಮತ್ತಿತರ ಸರ್ಕಾರದಧೀನದಲ್ಲಿರುವ ಆಕರ್ಷಣೆಗಳನ್ನು ಅವರಿಗೆ ಬಹುಮಾನರೂಪವಾಗಿ ಕೊಡಲಾರಂಭಿಸಿದರು. ಇದರಿಂದ ಅಧಿಕಾರ ವರ್ಗವು ಲಂಚಕೋರತನದಿಂದ ತುಂಬಿ ಹೋಯಿತು. ಜಾತೀಯರೀತ್ಯಾನವಕರಿಗಳನ್ನು ಕುಂಬುವ ಪದ್ಧತಿಯು ಕಾಂಗ್ರೆಸಿನಲ್ಲಿ ಜಾರಿಯಲ್ಲಿಡಲ್ಪಟ್ಟಕಾರಣ ದೇಶದಲ್ಲಿ ಅಸಂತೋಷವು ಹೆಚ್ಚಾಯಿತು.

ನಿಯಂತ್ರಣ ಆಹಾರ ಸಮಸ್ಯೆಗಳಿಂದ ಪರಿಸ್ಥಿತಿಯು ಇನ್ನೂ ಕೆಟ್ಟಿದೆ. ಕಾಂಗ್ರೆಸಿಗೆ ಎದುರೇ ಇಲ್ಲ. ವಿರೋಧಿಗಳಿದ್ದರೆ ಅವರನ್ನು ಆಗಾಗ್ಗೆ ಚೆಕ್ ಮಾಡಲು ಬರುತ್ತದೆ. ತಮ್ಮ ಅಧಿಕ ಸಂಖ್ಯೆಯ ಬಲದಿಂದ ಕೈಬರೆನಿಂದಿಣಿಸುವಷ್ಟು ಜನರ ಟೀಕೆ ಟಿಪ್ಪಣಿಗಳು ಇವರ ಕಿವಿಗೆ ಬೀಳುವುದಿಲ್ಲ. ಕಾಂಗ್ರೆಸ್‌ನ ನೀತಿ ಮತ್ತು ಕಾರ್ಯಕ್ರಮದ ವಿಷಯಕ್ಕೆ ನನ್ನ ಅಕ್ಷೇಪಣೆ ಇಲ್ಲ. ಆದರೆ ಅದರ ನಿರ್ವಾಲನೆಗೆ ನಿಂತಿರುವ ಜನರ ವಿಷಯ ಕ್ಕೆದೆ. ಪಂಡಿತ ಜವಹರಲಾಲರಾದರೂ ಕಾಂಗ್ರೆಸ್‌ಗೆ ಹಿತಕರವಾದ ವಿರೋಧವು ಬೇಕೆಂಬುದನ್ನು ಒಪ್ಪಿರುತ್ತಾರೆ.

ಈ ಕಾರಣ ಇಂಥಹ ಸರ್ವಸಮಯದಲ್ಲಿ ಒಂದು ವಿರೋಧಿ ಪಕ್ಷದ ಸಂಘಟನೆ ಯಾಗಬೇಕಾದದು ಅವಶ್ಯಕನೆಂಬುದನ್ನು ಇಲ್ಲಿ ಒತ್ತಿ ಹೇಳುತ್ತೇನೆ.

ರಾಯಲಸೀಮೆಯು ಆರ್ಥಿಕವಾಗಿ ಹಿಂದುಳಿದಿದಕಾರಣ ಇಲ್ಲಿ ಒಳ್ಳೆಯ ನಾಯಕತ್ವವು ಬೇಕಾಗಿದೆ. ಆಂಧ್ರ ಪ್ರಾಂತ ನಿರ್ಮಾಣಕ್ಕೆ ನಮ್ಮ ವಿರೋಧವನ್ನು ಸೂಚಿಸಬೇಕಾಗಿದೆ.

ಪ್ರಜಾತಂತ್ರದಲ್ಲಿ ಜನಮತಕ್ಕೆ ಪ್ರಾಧಾನ್ಯತೆಯು ಬೇಕು. ಜನತೆಯ ಅಭಿಪ್ರಾಯವನ್ನು ಈಗಿನ ಸರಕಾರವು ತುಚ್ಛೀಕರಿಸಿರುತ್ತದೆ. ಈ ಕಾರಣ ಜನತೆಯು ಈ ವಿಷಯವನ್ನು ದೀರ್ಘವಿಚಾರಿಸಿ ವಿರೋಧಿಪಕ್ಷದ ಆವಶ್ಯಕತೆಯ ಬಗ್ಗೆ ಒಂದು ನಿರ್ಣಯಕ್ಕೆ ಬರಲು ಕೋರುತ್ತೇನೆ.

ಮುನ್ಸಿ ರಾಜಾ ಹೊಸಪೇಟೆ
ಡಿಸ್ಟ್ರಿಕ್ಟ್ ಮುನ್ಸಿ ಕೋರ್ಟಿನಲ್ಲಿ
O. S. 39/50

ವಾಲಿ ಕೊಟ್ರಪ್ಪ .... ವಾದಿ
Vs.
ಬ್ಯಾಡರ ಸೊಂಟಿ ಗಾದೆಪ್ಪತಂದೆ ಹನುಮಪ್ಪಮೇಜರ್, ಬ್ಯಾಡರು ಸಾ|| ಕಂಪ್ಲಿ. } ಪ್ರತಿವಾದಿ

—: ಪ್ರತಿವಾದಿಗೆ ಸಮನು :—

27-3-'47ರಲ್ಲಿ ಪ್ರತಿವಾದಿ ವಾದಿಗೆ ಬರಕೊಟ್ಟ ಪ್ರೋನೋಟಿನಬಾಕಿ ಅಸಲು ಬಡ್ಡಿ ಕಲ್ತು ರೂ. 350/- ಕ್ಕೆ ಮೇಲಿನ ನಂಬರಿನಲ್ಲಿ ವಾದಿದಾವಾ ಮಾಡಿರುತ್ತಾನೆ. ಸದರಿ ದಾವಾ ವಾಯ್ದೆ 30-6-'50 ಕ್ಕೆ ಇರುತ್ತದೆ ಪ್ರತಿವಾದಿಯದು ಏನಾದರೂ ತಕರಾರು ಇದ್ದಲ್ಲಿ ಅದಿನ ಬೆಳಿಗ್ಗೆ 11 ಗಂಟೆಗೆ ಕೋರ್ಟಿನಲ್ಲಿ ಹಾಜರಾಗಿ ತಕರಾರು ಹಾಜರು ಪಡಿಸತಕ್ಕದ್ದು ತಪ್ಪಿದಲ್ಲಿ ಪ್ರತಿವಾದಿಯನ್ನು ಎಕ್ಪಾರ್ಟೆ ಮಾಡಿ ತೀರ್ಪು ಕೊಡಲಾಗುವುದೆಂದು ಈ ಮೂಲಕ ತಿಳಿಸೋಣಾಗಿದೆ.

18-6-50 ರಾಕ್ಷಿ ಶ್ರೀಪಾದಾಚಾರ್ಯ,
ಹೊಸಪೇಟೆ. ವಾದಿಯ ಅಡ್ವೊಕೇಟ್.

ಪಾಕಿಸ್ತಾನ ಅಫ್ಘಾನಿಸ್ತಾನ ಘರ್ಷಣೆ

ಬಲೂಚಿಸ್ತಾನ-ಅಫ್ಘಾನಿಸ್ತಾನ ಗಡಿಯಲ್ಲಿ ಪಾಕ್ ಮತ್ತು ಅಫ್ಘಾನಿಸ್ತಾನ ಸೈನ್ಯಗಳ ಮಧ್ಯೆ ಘರ್ಷಣೆಯಾಗಿ ಅಫ್ಘಾನಿ ಸೈನಿಕರು ಒಂದು ಠಾಣೆಯನ್ನು ಆಕ್ರಮಿಸಿರುವದಾಗಿ ತಿಳಿದುಬಂದಿದೆ.

ಸೋಮವಾರ ೨೬ ಜೂನ್ ೧೯೫೦.

ಬರುವ ಚುನಾವಣೆಗಳಲ್ಲಿ

ಕಾಂಗ್ರೆಸಿಗೆ ಬಹುಮತ?

1951 ನೆಯ ಪ್ರಥಮಾರ್ಧದೊಳಗಾಗಿ ಸಾರ್ವತ್ರಿಕ ಚುನಾವಣೆಗಳು ನಡೆಯುವುದು ಖಂಡಿತ. ಈ ಚುನಾವಣೆಗಳಲ್ಲಿ ಬಲಾಢ್ಯ ಪಕ್ಷವಾದ ಕಾಂಗ್ರೆಸಿಗೇ ಜಯವು ಕಟ್ಟಿಟ್ಟದ್ದೆಂದು ಕಾಂಗ್ರೆಸಿಗರು ನಂಬಿರುತ್ತಾರೆ. ಕಾಂಗ್ರೆಸಿಗೆ ಬಹುಮತವು ದೊರಕಬಹುದು. ಆದರೆ ಹಿಂದಿನ ಚುನಾವಣೆಗಳಂತೆ ವಿರೋಧವೇ ಇರುವುದಿಲ್ಲೆಂದು ಭಾವಿಸುವುದು ತಪ್ಪು. ಕಾಂಗ್ರೆಸ್ ಸಂಸ್ಥೆಗೆ 56 ವರ್ಷಗಳ ಹಿಂದಿನ ಜನರ ಸೇವೆಯ ಮೂಲಧನವಿದೆ. ವ್ಯವಸ್ಥಿತವಾಗಿ ಪ್ರತಿ ದೊಡ್ಡ ಊರಲ್ಲೂ ಸಂಘಟಿತವಾಗಿದೆ. ಧನವಂತರೆಲ್ಲಾ ಈ ಸಂಸ್ಥೆಯಲ್ಲೇ ಇದ್ದಾರೆ. ಇಷ್ಟರಮೇಲೆ ಈಗಿನ ಸರ್ಕಾರದಲ್ಲಿ ಅದು ತಾದಾತ್ಮ್ಯವನ್ನು ಹೊಂದಿ ಸರ್ಕಾರದ ಸಂಪೂರ್ಣ ಬೆಂಬಲವು ಸಂಸ್ಥೆಗೆ ಇದ್ದೇ ಇದೆ.

ವಯಸ್ಕ ಮತದಾನಪದ್ಧತಿಯಂತೆ ೧೮ ವರ್ಷಕ್ಕೆ ಮೀರಿರುವ ಪ್ರತಿಯೊಬ್ಬ ಸ್ತ್ರೀ ಪುರುಷಗೆ ಮತದಾನಹಕ್ಕು ಇರುವುದಾದರೂ ದೇಶದಲ್ಲಿ ನಿರಕ್ಷರತೆಯು ಅಧಿಕವಾಗಿರುವ ಕಾರಣ ಅಧಿಕ ಸಂಖ್ಯಾಕರು ಗ್ರಾಮನಾಯಕರ ಅನುಯಾಯಿಗಳಾಗಿದ್ದು ನಾಯಕನು ಇವರನ್ನು ಕುರಿಮಂದೆಯಂತೆ ಎಲ್ಲಿಗೆ ಬೇಕಾದರೂ ಹೊಡೆದುಕೊಂಡುಹೋಗಿ ತನ್ನ ಇಚ್ಛೆಯ ಪ್ರಕಾರಕ್ಕೆ ಕೆಲಸ ಮಾಡಿಸಬಲ್ಲನು. ಈ ಗ್ರಾಮ ನಾಯಕರನ್ನು (Group Leaders) ಜೇಬಿಗೆ ಹಾಕಿಕೊಳ್ಳುವ ಶಕ್ತಿ ಯೋಗ್ಯತೆಗಳು ಕಾಂಗ್ರೆಸ್ ಜನರಿಗುಂಟು. ಈಸಲ ಸುಮಾರು 17 ಕೋಟಿ ಜನ ಮತದಾರರಾಗಿರುವರು. ಒಂದೊಂದು ಜಿಲ್ಲೆಯ ಜನಸಂಖ್ಯೆಯಲ್ಲಿ ಅರ್ಧಭಾಗದಷ್ಟಿಜನ ಮತದಾರರಿದ್ದು ಈ ಲಕ್ಷಗಟ್ಟಲೆ ಜನರ ಮತದಾನವು ಕೇವಲ ಕೆಲವರನ್ನೇ ಅವಲಂಬಿಸಿದೆ. ಕಾಂಗ್ರೆಸ್ ಸರಕಾರವು ಅಧಿಕಾರಾರೂಢವಾಗಿರುವ ದರಿಂದ ತಮ್ಮ ಪಾರ್ಟಿಜನರಿಗೆ ಬೆಂಬಲ ಕೊಡುವವರಲ್ಲಿ ಯಾವ ಸಂಶಯವೂ ಇಲ್ಲ. ಆದರೆ ಈ ಬೆಂಬಲವು ಯಾವ ಸ್ವರೂಪಕ್ಕೆ ಹೋಗುತ್ತದೆ. ಸರಕಾರವು ಎಂಥಾ ಅನುಚಿತ ಮಾರ್ಗಗಳನ್ನು ಅನುಸರಿಸಲು ಶಕ್ಯವೆಂಬುದನ್ನು ಆಲೋಚಿಸುವುದೂ ಬೇಡ. ಏಕೆಂದರೆ ಈ ಕಾಂಗ್ರೆಸ್ ರಾಜ್ಯಭಾರದಲ್ಲಿ 175 ವರ್ಷಗಳ ಬ್ರಿಟಿಶ್ ರಾಜ್ಯಭಾರದಲ್ಲೂ ಆಗದ ಅಕೃತ್ಯಗಳು ಜರಿಗಿವೆ, ಜರುಗುತ್ತಲಿವೆ. ಮಹಾತ್ಮಗಾಂಧಿಯವರ ಶಿಷ್ಯರೆಂದು ಶುದ್ಧಖಾದಿ ಧಾರಿಗಳಾಗಿ ಜನಶೋಷಣೆಯ ಕಾರ್ಯದಲ್ಲೂ ಇತರ ಹೊಲಸು ಕೆಲಸಗಳಲ್ಲೂ ತೊಡಗಿರುತ್ತಾರೆ. ಗಾಂಧೀ ಜ ತತ್ವಗಳನ್ನೆಲ್ಲಾ ಗಾಳಿಯಲ್ಲಿ ಊದಿರುತ್ತಾರೆ. ಇಂಥಹ ಜನರಿಂದ ನಿಷ್ಪಕ್ಷಪಾತವಾದ ನ್ಯಾಯವು ದೊರೆಯುವುದು ಹೇಗೆ?

ಈಕಾರಣದಿಂದಲೇ ಸೋಶಿಯಲಿಸ್ಟ್ ಪಾರ್ಟಿ ನಾಯಕರಾದ ಶ್ರೀ ಜಯಪ್ರಕಾಶ ನಾರಾಯಣರು ಬೊಂಬಾಯಿಯಲ್ಲಿ ಜುಲೈ 1 ನೆಯ ತಾ. ವಿರೋಧಿ ಪಕ್ಷಗಳ ಸಭೆಕರೆದಿದ್ದಾರೆ. ಕಮ್ಯೂನಿಸ್ಟ್ ಪಕ್ಷಪದವರು ಕೊಲೆಸುಲಿಗೆಗಳಲ್ಲಿ ತೊಡಗಿರುವಕಾರಣ ಅವರನ್ನು ಈ ಸಂಯುಕ್ತ ಸಭೆಗೆ ಆಹ್ವಾನಿಸಿಲ್ಲ. ನ್ಯಾಯ ನಿಷ್ಪಕ್ಷಪಾತ ದೃಷ್ಟಿಗಳಿಂದ ಪ್ರಜಾತಂತ್ರ ಮಾರ್ಗಗಳಿಗನುಗುಣವಾಗಿ ಚುನಾವಣೆ ನಡೆಸಲು ಪ್ರಧಾನಮಂತ್ರಿ ನುತ್ತು ಅಧ್ಯಕ್ಷರಮೇಲೆ ಪ್ರಭಾವ ಬೀರುವಂತೆ ಮಾಡುವುದೇ ಈ ಸಭೆಯ ಉದ್ದೇಶವಾಗಿದೆ.

ಸರಕಾರದವರು ವಿರೋಧಿ ಪಕ್ಷದ ಪ್ರಚಾರಕ್ಕೆ ತಡೆಕಟ್ಟಬಹುದು ಭಾಷಣ ಬಂದಿ ಹುಕುಮುಗಳನ್ನು ಜಾರಿ ಮಾಡಬಹುದು. ಮುಖ್ಯ ಮುಖ್ಯ ಕಾರ್ಯಕರ್ತರನ್ನು ಒಳಗೆಹಾಕಬಹುದು. ಚುನಾವಣೆಗೆ ನಿಲ್ಲದಂತೆ ಎದುರಾಳಿಗಳಮೇಲೆ ಸಾಮ, ದಾನ, ಭೇದ ದಂಡೋಪಾಯಗಳನ್ನು ಸಾಧಿಸಬಹುದು. ಮುಖ್ಯವಾಗಿ ಅಧಿಕಾರವಿರುವಕಾರಣ ದಂಡೋಪಾಯವು ಜಾರಿಯಲ್ಲಿ ಬಂದೀತು. ಕಾಂಗ್ರೆಸಿನ ಜಯಕ್ಕೆ ಮುಖ್ಯೊಂದು ಕಾರಣವು ಮುಖ್ಯವಾಗಬಹುದು. ಯಾವ ಯಾವ ಕ್ಷೇತ್ರದಲ್ಲಿ ಯಾರು ಪ್ರತಿಭಾವಂತರೆಂಬುದನ್ನು ಅರಿತು ಅವರಿಗೇ ಕಾಂಗ್ರೆಸ್ ಟಿಕೆಟ್ ಕೊಡುವ ಪರಿಪಾಠವು ಹಿಂದಿನಿಂದ ಬಂದಿದೆ. ಈ ದುಷ್ಪದ್ಧತಿಯೇ ಮುಂದೂ ಕೂಡ ಅನುಸರಿಸಲ್ಪಡುವುದು.

ಜನರು ನಿರಕ್ಷರರಾದ್ದರೂ, ಅಲ್ಪಸ್ವಲ್ಪ ರಾಜಕೀಯ ಜ್ಞಾನವು ಅವರಿಗುಂಟು: ನೋಸವಾಗುವದೆಂಬ ಜ್ಞಾನವುಂಟು. ಸುಸ್ಥಾವಸ್ಥೆಯಲ್ಲಿರುವ ಜನತೆಯನ್ನು ಈಗಿನಿಂದಲೇ ಎಚ್ಚರಿಸಬೇಕು. ಪ್ರಜಾತಂತ್ರವು ಯಶಸ್ವಿಯಾಗಬೇಕೆಂದರೆ ವಿರೋಧೀ ಪಕ್ಷವು ಬೇಕು. ಕಳೆದ ವರ್ಷಗಳಲ್ಲಿ ಕಾಂಗ್ರೆಸ್‌ಗೆ ವಿರೋಧೀಪಕ್ಷವೇ ಇಲ್ಲದೆ ಅದು ಸ್ವೇಚ್ಛಾಪ್ರವೃತ್ತಿಯಿಂದ ಪ್ರಜಾಹಿತಕ್ಕೆ ವಿರೋಧವಾದ ಕೆಲಸಗಳನ್ನು ಮಾಡಿತು. ತಪ್ಪುಹಾದೀ ತೋರಿಸುವವರು ಪ್ರತಿಭಟಿಸುವವರು ಇದ್ದೇ ಇರಬೇಕು. ಇಲ್ಲವಾದರೆ ರಾಷ್ಟ್ರವು ಪತನದ ಹಾದಿಯನ್ನು ಹಿಡಿದು ಅಭಿವೃದ್ಧಿಯ ಮಾತು ಕನಸಾದೀತು.

ನಿಜಾಮರ ಆಸ್ತಿ.

ಹೈದರಾಬಾದಿನ ನಿಜಾಮರು ಭಾರತ ಸರ್ಕಾರದೊಡನೆ ಮಾಡಿಕೊಂತ ಒಪ್ಪಂದದ ಪ್ರಕಾರಕ್ಕೆ ಅವರ ಆಸ್ತಿಯಪಟ್ಟಿಕೆಳು ಹಿಸಿದ್ದಾರೆ. ಅವರ ಭೂ ಆಸ್ತಿ ಕಟ್ಟಡಗಳು ಬಿಟ್ಟಿ ಭಂಗಾರ ವಜ್ರ ವೈಢೂರ್ಯ ರತ್ನಗಳೇ ಅಲ್ಲದೆ ಅನೇಕ ಕಾರ್ಖಾನೆಗಳಲ್ಲಿ ತೊಡಗಿಸಿದ ಶೇರುಗಳು ಬ್ಯಾಂಕ್ಕಿನಲ್ಲಿರುವ ಹಣ ಇವೆಲ್ಲಾಸೇರಿ 500/- ಐನೂರು ಕೋಟಿ ರೂಪಾಯಿಗಳ ಅಂದಾಜು ಮಾಡಿದ್ದಾರೆ.

ಕಂಪ್ಲಿಯಲ್ಲಿ ಕಾಲರಾ.

ಹೊಸಪೇಟೆ ತಾಲೂಕು ಕೆಲ ಭಾಗದಲ್ಲಿ ಕಾಲರಾ ಇದೆ. ಹೊಸಪೇಟೆ ಕಾಮಲಾಪುರಗಳಲ್ಲಿ ಕಾಲರಾ ಜ್ವರಗಳು ತಗಲಿ ಮರಣಗಳು ಸಂಭವಿಸುತ್ತಲಿವೆ. ಕಂಪ್ಲಿಯಲ್ಲಿ 40 ಜನರಿಗೆ ತಗಲಿ 14 ಜನರು ಈವಾರದೊಳಗಾಗಿ ಸತ್ತಿರುವರು. ಆರೋಗ್ಯಶಾಖೆಯವರು ನಿವಾರಣೋಪಾಯಗಳನ್ನು ಕೈಕೊಂಡಿರುವರು.

ಅರಳೆಯ ಪರಮಾವಧಿ ಬೆಲೆ

ಅದನ್ನು ಏಕೆ ಹೆಚ್ಚಿಸಿದರು ?

ಭಾರತ ಸರಕಾರದಿಂದ ನೇಮಿಸಲ್ಪಟ್ಟ ಜವಳಿ ಸಲಹಾ ಸಮಿತಿಯು ಇಂದು ಅರಳೆಯ ಪರಮಾವಧಿ ಬೆಲೆಯನ್ನು ೧೫೦ ರೂ. ಗಳಷ್ಟು ಹೆಚ್ಚಿಸಲು ಸೂಚಿಸಿತು. ಈಗ ಅರಳೆಯ ಪರಮಾವಧಿ ಬೆಲೆಯು ೩೦೦ ರೂ. ಗಳಿದೆ.

ಕೇಂದ್ರಮಂತ್ರಿಗಳ ಸ್ಪಷ್ಟೀಕರಣ
ರೈತರ ಹಿತ.

ಸಿ. ಟಿ. ಐ. ಪ್ರತಿನಿಧಿಯು ಇಂದು ಕೇಂದ್ರ ಸರಕಾರದ ಉದ್ದಿಮೆ ಹಾಗು ಪೂರೈಕೆ ಮಂತ್ರಿಗಳಾದ ಮಾನ್ಯ ಮೆಹತಾಬರವರನ್ನು ಕಂಡು ಅವಶ್ಯಕ ವಸ್ತುಗಳ ದರಗಳನ್ನು ಇಳಿಸುವದೇ ಸರಕಾರದ ಸಾಮಾನ್ಯಧೋರಣವಿರುವಾಗ ಅರಳೆಯ ಪರಮಾವಧಿ ಧರವನ್ನು ಹೆಚ್ಚಿಸಿದ್ದುದು ಅದಕ್ಕೆವಿಸಂಗತವಾಗುವದಿಲ್ಲವೇ ಹಾಗು ಅದರಿಂದ ದೇಶದಲ್ಲಿಯ ಅಭಿಪ್ರಸಾರಣದ ಒಲವಿಗೆ ಉತ್ತೇಜನ ದೊರೆಯುವದಿಲ್ಲವೇ ಎಂದು ಪ್ರಶ್ನಿಸಲು ಮೆಹತಾಬರವರು ಈರೀತಿ ಹೇಳಿದರು

ಈ ನಿರ್ಣಯದಿಂದ ಅಭಿಪ್ರಸರಣಕ್ಕೆ ಉತ್ತೇಜನ ದೊರೆಯುವ ಸಂಭವವೇನೂ ಇಲ್ಲ. ಪಾಕಿಸ್ತಾನದಿಂದ ಹಿಂದುಸ್ತಾನಕ್ಕೆ ಅರಳಿ ಬಾರದಂತಾಗಿದ್ದರಿಂದ ಹಾಗು ಬಟ್ಟೆಯ ನಿರ್ಯಾತದ ಬೇಡಿಕೆ ಹೆಚ್ಚಾಗಿದ್ದರಿಂದ ಸದ್ಯಕ್ಕೆ ದೇಶದಲ್ಲಿ ಅರಳೆಯ ಕೊರತೆ ವಿಶೇಷವಾಗಿ ಆಗಿದ್ದರಿಂದ ಅರಳೆಯ ಮಾರ್ಕೆಟ ದರವನ್ನು ಅಲಕ್ಷಿಸಿ ನಡೆಯುಸಂತಿಲ್ಲ

ಒಳ ದೇಶದ ಗಿರಣಿಗಳ ಅವಶ್ಯಕತೆ ಪೂರೈಸುವಷ್ಟು ಹತ್ತಿ ಬೆಳೆಯುವದಕ್ಕೆ ಸಾಗುವಳಿದಾರರ ಉತ್ತೇಜನ ಕೊಡುವದೇ ಈಗ ಕೈಕೊಂಡ ನಿರ್ಣಯದ ಮುಖ್ಯ ಉದ್ದೇಶವಿರುವದು.

ಮುನಶಿಯವರ ಆಕಾಶವಾಣಿ
ಭಾಷಣ

—೧೯೫೦-೫೧ ನೇ ವರ್ಷದಲ್ಲಿ ಹತ್ತಿಯನ್ನು ಹೆಚ್ಚಾಗಿ ರೈತರು ಬೆಳೆಯಬೇಕೆಂದು ೧ ಖಂಡಿಗೆ ೧೫೦ ರೂ ಯಂತೆ ಅರಳೆಯ ಪರಮಾವಧಿ ದರವನ್ನು ಹೆಚ್ಚಿಸಲಾಗಿದೆ ಇದರಿಂದ ಆಹಾರ ಸ್ವಾವಲಂಬನದ ಧೋರಣಕ್ಕೆ ವ್ಯತ್ಯಯ ಬಾರದು. ನಮಗೆ ಆಹಾರ ಸ್ವಾವಲಂಬನದೊಂದಿಗೆ ಅರಳೆ, ಸಣಬು, ಇವುಗಳ ಸ್ವಾವಲಂಬನವನ್ನೂ ಸಾಧಿಸಬೇಕಾಗಿದೆ. ಎಂಬುದನ್ನು ಮರೆಯಬಾರದೆಂ" ಎಂದು, ಭಾರತ ಆಹಾರ ಸಚಿವರಾದ ಶ್ರೀ ಕೆ. ಎಂ. ಮುನಶಿಯವರು 17 ನೆಯ ರಾತ್ರಿ ದಿಲ್ಲಿ ಆಕಾಶವಾಣಿಯಲ್ಲಿ ಮಾಡಿದ ಭಾಷಣದಲ್ಲಿ ಹೇಳಿದರು.

ಭಾರತಕ್ಕೆ ೪೦ ಲಕ್ಷ ಗಂಟು ಅರಳಿ ಬೇಕಾಗುವದು. ಈಗ ಭಾರತದಲ್ಲಿ ೭೮ ಲಕ್ಷ ಅರಳಿ ಗಂಟುಗಳಿಗೆ ಬೇಕಾಗುವಷ್ಟುಸೂತ್ರ ಹತ್ತಿ ಬೆಳೆಯುವದು. ಇನ್ನೂ೭೮ಲಕ್ಷ ಗಂಟು ಅರಳೆಯನ್ನು ವಿದೇಶಗಳಿಂದ ಆಯಾತ ಮಾಡಿದರೆ ೯೦ ಕೋಟಿ ರೂ. ಗಳಷ್ಟು ವಿದೇಶ ನಾಣ್ಯ ಗಳನ್ನು ವೆಚ್ಚ ಮಾಡಬೇಕಾಗುವದು. ಇಷ್ಟು ವಿದೇಶ ನಾಣ್ಯಗಳನ್ನ, ಉಳಿಸಿ ಕೊಳ್ಳುವ ಉದ್ದೇಶದಿಂದ ಪ್ರತಿಯನ್ನು ಹೆಚ್ಚಿಗೆ ಬೆಳೆಯುವೇಕು

ಆಹಾರ ಧಾನ್ಯ ಬಿತ್ತಿದರೆ ಹೆಚ್ಚು ಹಣ ರೈತರಿಗೆ ಈಗಿನ ಅರಳೆ ಬೆಲೆಯಿಂದ ಬರುತ್ತಿರಲಿಲ್ಲ. ಆದುದರಿಂದ ಹತ್ತಿ ಬಿತ್ತಲು ಉತ್ತೇಜನ ಕೊಡುವ ನೈಷ್ಟಿಯಿಂದ ಬೆಲೆಯನ್ನು ಹೆಚ್ಚಿಸುವದು ಅಗತ್ಯವಿತ್ತು.

೧೯೫೦-೫೧ ರಲ್ಲಿ ಹತ್ತಿಸಾಳು, ಸೊಬ್ಬರ ಪೂರೈಸಲು ಸರಕಾರವು ವ್ಯವಸ್ಥೆ ಮಾಡಿದೆ. ಇದರಿಂದ ಹತ್ತಿ ಬಿತ್ತುವ ಕ್ಷೇತ್ರ ಹೆಚ್ಚಬಹುದು ರೈತರಿಗೆ ಈಗ ಏರಿಸಿದ ಬೆಲೆಯು ಲಾಭ ಸಿಗುವಂತೆ ಹತ್ತಿಯು ತೂರಿಟದಲ್ಲಿಯೂ ಹೊಸ ವ್ಯವಸ್ಥೆ ಮಾಡುವ ಯೋಜನೆ ಇದೆ. ಎಲ್ಲ ಗಿರಣಿಗಳು ಸರಕಾರದಿಂದ ಖಾತೂರಿಯಾಗಿ ಹತ್ತಿಯನ್ನು ಕೊಳ್ಳಬೇಕೆಂದು ಸೂಚನೆ ಮಾಡಲಾಗುವದು ಇದರಿಂದ ಹತ್ತಿಯ ಕಳ್ಳನೇಟಿಗೆ ಅವಕಾಶ ದೊರೆಯದು. ರೈತರಿಗೆ ಯೋಗ್ಯ ಬೆಲೆ ಸಿಗುವದು.

೧೯೫೦-೫೧ ನಂತರ ಆಹಾರಧಾನ್ಯದ ಆಯಾತವನ್ನು ಸಂಪೂರ್ಣವಾಗಿ ನಿಲ್ಲಿಸುವ ಸರಕಾರದ ನಿರ್ಣಯವು ಅತಿಮುಖ್ಯವಾದದ್ದು. ಆಹಾರಧಾನ್ಯವು ಪ್ರತಿ ಎಕರೆಗೆ ಹೆಚ್ಚು ಬೆಳೆಯುವಂತೆ ಪ್ರಯತ್ನಿಸಲಾಗುವದು. ಪಡಬಿದ್ದ ಭೂಮಿಯನ್ನು ಕೂಡಲೇ ಸಾಗುವಳಿಗೆ ತಂದರೆ ಹತ್ತಿಯನ್ನ ಬಿತ್ತುವದು ಸುಲಭ ಆಗುವದು. ಅದಂದ ಪಡಭೂಮಿಯನ್ನು ಸಾಗುವಳಿ ಮಾಡಿ ಹತ್ತಿ ಬಿತ್ತುವರೈತರಿಗೆ ಕಂದಾಯ ಸೂಟ ಬಿಡಲಾಗುವದು. ನೀರಾವರಿ ಹೆಚ್ಚಿನ ಬೆಲೆಯೂ ಸಿಗುವದು. ಹತ್ತಿಯಲ್ಲಿ ನಡುವಿನ ಸಾಲಿಗೆ ಸಣ್ಣ ಕಾಳು ಅಥವಾ ಎಣ್ಣೆಕಾಳಿನ ಅಕ್ಕಡಿ ಹಾಕಿದರೆ ಮುಖ್ಯಬೆಳೆಗೆ ಧಕ್ಕೆಯಾಗದೆ ಎರಡೂ ಬೆಳೆ ಬರುವವು.

ರೈತರು ಮನಸ್ಸು ಮಾಡಿದರೆ ನಮ್ಮ ದೇಶವನ್ನು ಆಹಾರ, ಸಣಬು ಮತ್ತು ಅರಳೆಯ ಸ್ವಾವಲಂಬನ ಸಾಧಿಸಲು ಮನಮುಟ್ಟಿ ಪ್ರಯತ್ನಿಸಬೇಕು ಎಂದಿತ್ತ"

ಹೊಸಪೇಟೆ ರೈಲ್ವೆ ಸ್ಟೇಷನ್

ಹೊಸಪೇಟೆಯಿಂದ ಹುಬ್ಬಳ್ಳಿಕಡೆ ಮತ್ತು ಬಳ್ಳಾರಿಕಡೆ ಮಧ್ಯಾಹ್ನ ಮತ್ತು ಮಧ್ಯರಾತ್ರಿಗಳಲ್ಲಿ ಗಾಡಿಗಳು ಬಿಡುತ್ತವೆ ಈಚೆಗೆ ಶಿವಮೊಗ್ಗ ಕೆಲಸವಾಗಿರುವ ಪ್ರಯಾಣಿಕರೊ೦ದಿಗೆ ಮಾತನಾಡುತ್ತಿದ್ದಾಗ ಅವರು ಹೇಳಿದರು. ಹೊಸಪೇಟೆಯಿಂದ ಹುಬ್ಬಳ್ಳಿಕಡೆ ಮತ್ತು ಬಳ್ಳಾರಿಕಡೆ ಮಧ್ಯಾಹ್ನ ಮತ್ತು ಮಧ್ಯರಾತ್ರಿಗಳಲ್ಲಿ ಗಾಡಿಗಳು ಬಿಡುತ್ತವೆ ಈಚೆಗೆ ಶಿವಮೊಗ್ಗ ಕೆಲಸವಾಗಿರುವ ಪ್ರಯಾಣಿಕರೊಂದಿಗೆ ಮಾತನಾಡುತ್ತಿದ್ದಾಗ ಅವರು ಹೇಳಿದರು. ತಂಗುವ ಪ್ರಯಾಣಿಕರಿಗೆ ವಿಶ್ರಮಿಸಲು ಸಾಕಷ್ಟು ಸ್ಥಳವಿಲ್ಲ. ಸಕ್ಕರೆ ಕಾರ್ಖಾನೆ ತುಂಗಭದ್ರಾ ವ್ಯಾಜೆಕ್ಟಗಳಿಂದ ಕೂಲಿಕಾರರು ಮತ್ತು ಇತರ ನೌಕರರ ಸಂಖೆಯು ಬಹಳ ಹೆಚ್ಚಿರುವಕಾರಣ ಈ ಸ್ಟೇಷನ್ನಿಗೆ ಬಹಳ ಮುಖ್ಯತೆಯು ಬಂದಿದ್ದು ಇಲ್ಲಿ ಯಾವಾಗಲೂ ಗದ್ದಲವು ಬಹಳ ಹೆಚ್ಚಿರುತ್ತದೆ. ಎರಡನೆಯ ದರ್ಜೆಯವರಿಗಾಗಿರುವ ತಗಡಿನಿಗಳಿಂದ ತುಂಬಿದ ಚಿಕ್ಕ ಕೋಣೆಯಲ್ಲಿ ಮತ್ತು ಮೂರನೆಯ ದರ್ಜೆಯವರಿಗಾಗಿರುವ ಸ್ಥಳದಲ್ಲಿ ಬ್ಲಾಕ್ ಹೋಲಿನ ವರ್ಣನೆಯಂತೆ ಜನರು ತುಂಬಿರುತ್ತಾರೆ ರೈಲ್ವೇಗಳ ಆದಾಯವು ಮೂರನೆಯ ದರ್ಜೆಯವರ ಪ್ರಯಾಣವನ್ನೇ ಆವಲಂಬಿಸಿದೆ. ಒಂದು ಡಬ್ಬಿಯನ್ನಾದರೂ ಹೆಚ್ಚಿಗೆ ಹಾಕುವುದಿಲ್ಲ 20 ಜನರು ಪ್ರಯಾಣಮಾಡುವ ಡಬ್ಬಿಯಲ್ಲಿ 40 ಜನರುತುಂಬುತ್ತಾರೆ. ಹೀಗಿದ್ದು ಕೊನೆಗೆ ಸ್ಟೇಷನ್ನುಗಳಲ್ಲಿ ವಿಶ್ರಮಿಸಲು ಕೂಡ ಸ್ಥಳವಿಲ್ಲದಿರುವದು ರೈಲ್ವೇ ದಿವಾರ್ಟುಮೆಂಟಿಗೆ ನಾಚಿಕೆಗೇಡು. ಸ್ವರಾಜ್ಯವು ಬಂದಮೇಲೆ ಈ ಕಷ್ಟಗಳನ್ನೆಲ್ಲಾ ಹೋಗಲಾಡಿಸಲು ಯತ್ನಿಸುವರೆಂಬ ಆಶೆ ಬೆಳೆದಿದೆ. ಸರ್ಕಾರವು ಈ ಕಡೆಗೆ ಗಮನವೀಯಬೇಕು. —ಪ್ರಯಾಣಿಕ

ಬಳ್ಳಾರಿ:— ಕಾಂಗ್ರೆಸ್‌ಗೆ ವಿರೋಧಪಕ್ಷದ ಅವಶ್ಯಕತೆಯನ್ನು ಎರಿತು ತಮ್ಮ ಅಲೋಚನೆಗಳನ್ನು ತಿಳಿಸಲು ಸಮರ್ಥವಾದ ಪ್ರಭಾತ ಚಿತ್ರಮಂದಿರದ (13-6-50) ಸಭೆಯಲ್ಲಿ ಮುನ್ಸಿ, ಯಂ. ಶಾಸ್ತ್ರಿಗಳು ಉಪನ್ಯಾಸಕೊಟ್ಟರು. ಬಂದ ಸಭಿಕರನ್ನು ಫಲಾಹಾರದಿಂದ ಸತ್ಕರಿಸಲಾಯಿತು.

ದಕ್ಷಿಣ ಆಫ್ರಿಕೆಯ ಹಟ.

ಮೂಲ ನಿವಾಸಿಗಳು, ಬಿಳಿ ಜನರು ಮತ್ತು ಹಿಂದೀಯರೇ ಮೊದಲಾದ ವಿದೇಶೀಯರು ಇವರನ್ನು ಬೇರೆ ಬೇರೆಯಾಗಿ ಇಡುವ ಕಾಯಿದೆ ಮಾಡಲು ಕಳೆದ ಅನೇಕ ದಿವಸಗಳಿಂದ, ದಕ್ಷಿಣ ಆಫ್ರಿಕೆಯ ಸರಕಾರವುಯತ್ನಿಸುತ್ತಿರುವದನ್ನು ಸರ್ವರೂ ಬಲ್ಲರು.

ಕೊನೆಗ ಈ ಸೂಚನೆಯು ದಕ್ಷಿಣ ಆಫ್ರಿಕೆಯ ಶಾಸನ ಸಭೆಯಲ್ಲಿ ತಾ. ೧೩ ನೇ ದಿವಸ ಸ್ವೀಕೃತವಾಯಿತು. ಸ್ವೀಕಾರಕ್ಕೆ ೭೩ ಮತಗಳೂ, ಅದರ ವಿರುದ್ಧವಾಗಿ ೭೮ ಮತಗಳೂ ಬಿದ್ದವಂತೆ.

ಮೂಲನ್ನರಮುಂಚೆ ದಕ್ಷಿಣ ಆಫ್ರಿಕೆಯ ಮುಖ್ಯಮಂತ್ರಿಗಳಾಗಿದ್ದ ಜನರಲ್ ಸ್ಮಟ್ಸರು ಈಗ ಬೇನೆಯಿಂದ ಹಾಸಿಗೆ ಹಿಡಿದಿದ್ದಾರೆ. ಅವರು ಅಲ್ಲಿ ಇದ್ದರೆ ವಿರೋಧ ಪಕ್ಷಕ್ಕೆ ಇನ್ನಿಷ್ಟು ಬೆಂಬಲವು ಸಿಗಬಹುದಾಗಿದ್ದಿತು.

ಆದರೂ ವಿರೋಧ ಪಕ್ಷದವರು ಆ ಸೂಚನೆಯನ್ನೇ ಮುಂದೆ ಒದಗಿಸಲು ಪ್ರಯತ್ನ ಮಾಡಿದರು. ಅವರಿಗೆ ಯಶಸ್ಸು ದೊರೆಯಲಿಲ್ಲ. ಮತದಾನದ ವಿಷಯವನ್ನು ನೋಡಿದರೆ, ಈ ವಿಚಾರಕ್ಕೆ ದಕ್ಷಿಣ ಆಫ್ರಿಕೆಯಲ್ಲಿ ಇರುವ ವಿರೋಧಕ್ಕೂ ಬೆಲೆಯಿದೆ ಎಂದು ಹೇಳಬೇಕಾಗುತ್ತದೆ.

ಈ ಬಗೆಯ ಜಟದಿಂದ ಮೂಲನ್ನ ಸರಕಾರವು ಅಲ್ಲಿ ಮುಂದರಿಯುತ್ತಿದ್ದರೂ ಅದರ ಈ ಘೋರಣದಿಂದ ಜಗತ್ತಿನಲ್ಲಿ ಯಾವ ತರಹದ ವಾತಾವರಣವು ಹುಟ್ಟುತ್ತಿದೆಯೆಂಬುದು ಲಕ್ಷಿಸತಕ್ಕ ಸಂಗತಿಯಾಗಿದೆ. ಈ ತಿಕ್ಕಾಟನನ್ನು ಬಗೆಹರಿಸುವದಕ್ಕಾಗಿ ಕೂಡಬೇಕಾಗಿದ್ದ ದುಂಡು ಮೇಜಿನ ಪರಿಷತ್ತನ್ನು ಭಾರತವು ಬಹಿಷ್ಕರಿಸಿತು. ಪಾಶ್ಚಿಮಾತ್ಯ ಮುಕ್ತನ್ಡಿಗಳಲ್ಲಿ ಅನೇಕರು ಮಾಲನ್ನರಿಗೆ ಮತ್ತು ಅವರ ಘೋರಣದವರಿಗೆ ಬಲವಾದ ಎಚ್ಚರಿಕೆಯನ್ನು ಕೊಟ್ಟಿದ್ದಾರೆ. ಏಶಿಯಾ ರಾಷ್ಟ್ರಗಳಲ್ಲಿ ಇಂತಹ ವಿಚಾರಗಳನ್ನು ವಿರೋಧಿಸುವ ಕಾರಿತು ಪರಣಾಮಕಾರಿ ಸಂಘಟನೆಯು ನಡೆಯುತ್ತಿದೆ.

ಮಾಲನ್ನರು ಮತ್ತು ಅವರ ಸಹೋದ್ಯೋಗಿಗಳು ಈ ಪರಿಸ್ಥಿತಿಯನ್ನು ಅಲಕ್ಷಿಸಿದಂತೆ ನಟಿಸುತ್ತಿದ್ದರೂ ಅದನ್ನು ಬಹು ಗಂಭೀರವಾಗಿ ನಿರೀಕ್ಷಿಸುತ್ತಿರುವರೆಂದು ಹೇಳಲು ಅನೇಕ ಕಾರಣಗಳು ಇವೆ.

"ದಕ್ಷಿಣ ಆಫ್ರಿಕೆಯು ಜಗತ್ತಿಗೇ ಆಹ್ವಾನವನ್ನು ಈ ಮೂಲಕ ಕೊಟ್ಟಂತಾಗಿದೆ. ಇದರಿಂದ ಅಂತರಾಷ್ಟ್ರೀಯ ಸೌಹಾರ್ದ್ರಭಾವನೆಗೆ ಪೆಟ್ಟು ಬಿದ್ದಿದೆ. ಈ ಅವ್ವಾನವನ್ನು ಯುಕ್ತರಾಷ್ಟ್ರಸಂಘವು ಸ್ವೀಕರಿಸಬೇಕು" ಎಂದು ಹಿಂದುಸ್ಥಾನ ಸರಕಾರದ ಆರೋಗ್ಯ ಮಂತ್ರಿಗಳಾದ ಶ್ರೀಮತಿ ಅಮೃತಕೌರವರು ಲಂಡನ್ನಿನಲ್ಲಿ, ಹೇಳಿದ್ದಾರೆ.

ನಿಜವಾಗಿಯೂ ದಕ್ಷಿಣ ಆಫ್ರಿಕೆಯು ಜಗತ್ತಿಗೇ ಕೊಟ್ಟ ಇದೊಂದು ಆವ್ವಾನವಾಗಿದೆ. ಎಲ್ಲೆಡೆಗೂ ಶಾಂತಿ ಸಮಾಧಾನಗಳನ್ನು ಹುಟ್ಟಿಸುವ ಉದ್ದೇಶದಿಂದ, ಪರಸ್ಪರ ವಿಶ್ವಾಸ ಸ್ನೇಹಗಳನ್ನು ಹುಟ್ಟಿಸುತ್ತಿರುವ ಈ ಕಾಲದಲ್ಲಿ ದಕ್ಷಿಣ ಆಫ್ರಿಕೆಯ ಈ ದಾರಿಯನ್ನು ಕಂಡು, ಸರ್ವರಿಗೆ, ಆಶ್ಚರ್ಯ ಮತ್ತು ವ್ಯಸನಗಳಾಗಿರಲು ಸಾಕು.

ಹೀಗೆನ್ನಬೇಕೇ ? ಪಾಶ್ಚಾತ್ಯ ರಾಷ್ಟ್ರಗಳು ಈ ವರ್ಣದ್ವೇಷದ ವಿಷಯವನ್ನು ನಿಜವಾಗಿಯೂ ವಿರೋಧಿಸುತ್ತಿವೆಯೇ? ಎಂಬುದೆಂದೂ ಸಂಶಯಾಸ್ಪದವಾದ ವಿಷಯವಾಗಿದೆ. ಅವು ವಿರೋಧಿಸುತ್ತಿದ್ದರೆ ಆ ಬಗ್ಗೆ ದಕ್ಷಿಣ ಆಫ್ರಿಕೆಯ ಮೇಲೆ ಬಲವಾದ ಒತ್ತಾಯವನ್ನೇಕೆ ತರಲಿಲ್ಲ. ತಂದಿದ್ದರೆ ದಕ್ಷಿಣ ಆಫ್ರಿಕೆಯು ಇಷ್ಟು ಧೈರ್ಯ ಮಾಡುತ್ತಿತ್ತೆಂದು ಯಾರೂ ನಂಬಲಾರರು.

ಈಗ ಈ ಮಾತಿನ ಪರೀಕ್ಷೆಯ ಕಾಲವು ಬಂದಿದೆ. ಪಾಶ್ಚಾತ್ಯ ರಾಷ್ಟ್ರಗಳೂ ಈ ಅನ್ಯಾಯವನ್ನು ನಿವಾರಿಸುವುದಕ್ಕಾಗಿ ಈಗ ನಿಜವಾಗಿ ಮುಂದೆ ಬರದೆ ನಿರ್ವಾಹವಿಲ್ಲ. ಅದರಲ್ಲಿ ಅವರು ಹೊಯ್ದಾಡಹತ್ತಿದರೆ ಅವರ ಬಗ್ಗೆ ಏಶಿಯಾ ಖಂಡದ ರಾಷ್ಟ್ರಗಳು ಸಂಶಯ ತಾಳಿದರೆ ಅದರಲ್ಲಿ ಏನೂ ತಪ್ಪಾಗಲಾರದು.

ಕನ್ನಡ ನೂತನ ಪ್ರಾಥಮಿಕ ಪಾಠಶಾಲೆ.

14-6-50 ಈ ತೇದಿ ಬುಧವಾರ ಉದಯ ಬಳ್ಳಾರಿ ತಾಲೋಕು ಗುತ್ತಿಗನೂರು ಗ್ರಾಮದಲ್ಲಿ ಜಿಲ್ಲಾ ಬೋರ್ಡು ಸದಸ್ಯರಾದ ಶ್ರೀಕೆ. ದೊಡ್ಡಬಸಪ್ಪನವರಿಂದ ತೆರೆಯಲ್ಪಟ್ಟಿತು. ಶಾಲೆಗಾಗಿ ಮನೆಯನ್ನು ಕುರುಗೋಡು ನೀಲಮ್ಮನ ಮಠದ ಶ್ರೀ ಬಸಯ್ಯನವರು ತಮ್ಮ ಉದಾರ ಬುದ್ಧಿಯಿಂದ ಉಚಿತವಾಗಿ ಕೊಟ್ಟಿದ್ದಾರೆ. ಪ್ರತಿ ಒಂದು ಹಳ್ಳಿಯಲ್ಲಿಯೂ ಇದೇ ರೀತಿ ಉತ್ಸಾಹ ಇದ್ದು ಪ್ರಾಥಮಿಕ ವಿದ್ಯೆಯನ್ನು ವೃದ್ಧಿ ಪಡಿಸಬೇಕು ಎಂದು ಸದಸ್ಯರು ತಿಳಿಸುತ್ತಾ ಪ್ರಾಥಮಿಕವಿದ್ಯೆ ವಿಷಯ: ಹಳ್ಳಿಗರಿಗೂ ಉಪಾಧ್ಯಾಯರಿಗೂ ಇರುವ ಬಾಧ್ಯತೆ ವಿಶದ ಪಡಿಸಿದರು.

ಕೋರಿ. ಗುರುಸಿದ್ದಪ್ಪ,
ಗುತ್ತಿಗನೂರು.

ಇವರೆಂದು ಮಾಡುವರು ?

ಹರಿಜನರಿಗಾಗಿ ಕೋಟಿರೂಪಾಯಿ ತೆಗೆದಿಟ್ಟಿದ್ದೇವೆ ಮನೆಕಟ್ಟಿಸಲು ಸಹಾಯ ಮಾಡುತ್ತೇವೆ. ನಿವೇಶನಗಳನ್ನು ಉಚಿತವಾಗಿ ಒದಗಿಸುತ್ತೇವೆ. ವರ್ಷಕ್ಕೆ ವರ್ಷಕ್ಕೆ ವಾಗ್ದಾನ ಮಾಡಿದ ಕಾಂಗ್ರೆಸ್ ಸರಕಾರವು ಅಧಿಕಾರಾರೂಢವಾಗಿ 5 ವರ್ಷಗಳಾಗುತ್ತಾ ಬಂತು ಆದರೆ ಇವರು ಹರಿಜನರಿಗಾಗಿ ಕಾಗದದಮೇಲೆಯೇ ಎಲ್ಲಾ ಯೋಜನೆಗಳನ್ನು ಸಿದ್ಧಪಡಿಸುತ್ತಿರುವುದು, ನನಗೆ ಮನಪರಿಕೆಯಾಗುತ್ತಲಿದೆ. ದೇವಸ್ಥಾನಪ್ರವೇಶ ಕೆಲ ಸಾಮಾಜಿಕ ಹಕ್ಕುಗಳ ಸ್ವಾತಂತ್ರ್ಯ ಬಿಟ್ಟರೆ ನಮ್ಮ ಪರಿಸ್ಥಿತಿಯು ಕಾಂಗ್ರೆಸ್ ಅಧಿಕಾರಾರೂಢವಾಗದ ಮುಂಚೆ 1937 ರ ಪೂರ್ವಕ್ಕೆ ಇದ್ದಂತೆಯೇ ಇದೆ. ಯಾವ ವಿಷಯದಲ್ಲೂ ನಮಗೆ ಆರ್ಥಿಕ ಸಹಾಯವಿಲ್ಲ. ನಮ್ಮ ಮೇಲೆ ಆದ ಅನ್ಯಾಯಗಳಿಗೆ ಶೀಘ್ರ ಪರಿಹಾರವಿಲ್ಲ ನಾವು ಮಂತ್ರಿಗಳಿಗೆ ಅರ್ಜಿ ಇಟ್ಟುಕೊಂಡರೆ ಅದಕ್ಕೆ ಉತ್ತರವಿಲ್ಲ. ಬಳ್ಳಾರಿ ಜಿಲ್ಲೆಯಲ್ಲಿ ಕಳೆದ ಹತ್ತು ವರ್ಷಗಳೊಳಗಾಗಿ ಯಾವ ಊರಿನ ಹರಿಜನರಿಗೂ ಉಚಿತವಾಗಿ ಮನೆಕಟ್ಟಲು ಸ್ಥಳ ಒದಗಿಸಲಿಲ್ಲ 1937 ಹಿಂದಿನ ರೂಲು ಪ್ರಕಾರಕ್ಕೆ ಮನೆಯ. ಜಾಗಾಗಳಿಗಾಗಿ ಅರ್ಧ ಹಣ ಸರ್ಕಾರದವರು ಕಟ್ಟಿಸಿಕೊಂಡು ಎರಡು ಮೂರು ವರ್ಷಗಳಾದರೂ ವಿಚಾರಣೆಯೇ ಇಲ್ಲು ಆಫೀಸರ ಹತ್ತರ ಹೋದರೆ ಏನೋ ಸಮಾಧಾನ ಹೇಳಿ ಕಳುಹಿಸಿಬಿಡುತ್ತಾರೆ, ನಮಗೆ ಇರುವ ಇತರ ಕಷ್ಟಗಳನ್ನು ವರ್ಣಿಸುತ್ತಾ ಹೋದರೆ ಅದು ದೊಡ್ಡ ಪುರಾಣವಾಗುತ್ತದೆ.

ನಮಗೆ ಅಂದಿಗೂ ದೇಕ್ಷವಿಲ್ಲ
ಇಂದಿಗೂ ಇಲ್ಲ.

ಸೋಮಪ್ಪ—ವೇಣಿವೀರಾಪುರ.
ಹನುಮಂತಪ್ಪ—ನೇರಣಿಕಿ

ಮದ್ರಾಸ್ ಚುನಾವಣಾ ಮಂಡಳ.

———o(@)o———

ಮುಂಬರುವ ಸಾರ್ವತ್ರಿಕ ಚುನಾವಣೆಗಳಿಗಾಗಿ ಭಿನ್ನ ಭಿನ್ನ ಕ್ಷೇತ್ರಗಳನ್ನು ನಿರ್ಮಿಸಿ ಆಯಾಪ್ರಾಂತಗಳಿಗೆ ಕೊಟ್ಟ ಸ್ಥಾನಗಳನ್ನು ಹಂಚಲು ಭಾರತ ಸರ್ಕಾರದವರು ಸಲಹೆಮಂಡಳಗಳನ್ನು ನಿಯಮಿಸಿರುತ್ತಾರೆ. ಮದ್ರಾಸ್ ಪ್ರಾಂತದಲ್ಲಿ ಈ ಕೆಳಗಿನ ಮಹಾಶಯರು ಸಲಹೆ ಮಂಡಳಕ್ಕೆ ನಿಯುಕ್ತರಾಗಿರುವರು.

ಶ್ರೀ ವಿ. ಸಿ. ಕೇಶವರಾವ್	ಒಂದು ಕ್ಷೇತ್ರದಲ್ಲಿ ಎರಡು ಸ್ಥಾನಗಳಿದ್ದರೆ ಮತದಾರರು ಬೇರೆ ಬೇರೆ ಪಕ್ಷಕ್ಕಾದರೇ ಅಭಿಪ್ರಾಯ ಕೊಡಬಹುದೇ ಎಂಬ ವಿಷಯ ನಿಶ್ಚಯವಾಗಿಲ್ಲ.
,, ಎನ್. ಜಿ. ರಂಗಾ	
,, ಅನಂತಶಯನಯ್ಯಂಗಾರ್,	
,, ಎ. ಕೆ. ಮೇನನ್	
,, ಟಿ. ಎ. ರಾಮಲಿಂಗ ಚೆಟ್ಟಿಯಾರ್	
,, ಯು. ಶ್ರೀನಿವಾಸ ಮಲ್ಯ	
,, ಅಹಮದ್ ಮೀರಾನ್	

ಪತ್ರವ್ಯವಹಾರ:—

ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕ್ ಮತ್ತು ರೈತರಿಗೆ ಸಾಲ

ಋಣಗ್ರಸ್ತ ರೈತರ ಸಹಾಯಾರ್ಥವಾಗಿ ಮತ್ತು ಭೂಮಿಗಳನ್ನು ಯಂತ್ರ ಸಹಾಯದಿಂದ ಅಭಿವೃದ್ಧಿಗೆ ತರಲು ಸರಕಾರದವರು ಅಲ್ಲಲ್ಲಿ ಈ ಬ್ಯಾಂಕುಗಳನ್ನು ಸ್ಥಾಪಿಸುತ್ತಿರುವದು ಸರಿಯಷ್ಟೇ. ಆದರೆ ತರಿಭೂಮಿ ಇರುವ ರೈತನಿಗೆ ಮಾತ್ರವೇ ಇದರ ಉಪಯೋಗಕ್ಕೆ ಅನಕಾಶಕೊಟ್ಟಿರುವ ಕಾರಣ ಶೇಕಡ 90 ಮಂದಿ ಋಣಗ್ರಸ್ತ ರೈತರಿಗೆ ಪರಿಹಾರವನ್ನು ಒದಗಿಸಿದಂತಾಗಲಿಲ್ಲ. ಸರಕಾರಕ್ಕೆ ಫಸ್ಟೋಡ್ಡೇಶ ವಿದ್ದರೆ ಅದು ಸಾಧಿಸುವಂತೆಯೂ ಇಲ್ಲ. ರಾಯಲಸೀಮೆ ಜಿಲ್ಲೆಗಳಾದ ಬಳ್ಳಾರಿ ಕಡಪ ಕರ್ನೂಲು ಅನಂತಪುರಗಳಲ್ಲಿ ಶೇಕಡ 90 ಭಾಗದ ರೈತರು ಒಣಭೂಮಿಯ ವ್ಯವಸಾಯ ಸಾಗಿಸಿ ಬೆಳೆಗಾಗಿ ಮಳೆಯ ದೇವರನ್ನು ನಂಬಿರುವರು ಈ ಜಿಲ್ಲೆಗಳಲ್ಲಿ ರೈತನಿಗೆ ಧಾನ್ಯ ಜೋಳ ನವಣೆ ಹತ್ತಿ ನಿಷೇಧವಾಗಿ ಬೆಳೆಯುತ್ತದೆ. ದಕ್ಷಿಣ ದೇಶದಲ್ಲಿ ಇದು ಮುಖ್ಯ ಆಹಾರವಾಗಿದೆ. ಯಾವಾಗಲೂ ಸರ್ಕಾರದ ಉದ್ದೇಶವು ಅಧಿಕ ಸಂಖ್ಯಾಕರಿಗೆ ಸಹಾಯಮಾಡುವಂತಿದ್ದರಬೇಕು ಇದೇ ಪ್ರಜಾತಂತ್ರದ ಮೂಲತತ್ವ (Democracy.)

ಈ ಕಾರಣ ನನ್ನ ನಿಯಮದಲ್ಲಿ ಸವರ್ತನೆ ಮಾಡಿ ಭೂಮಿ ಇರುವ ಎಲ್ಲಾ ರೈತರಿಗೆ ಸಾಲ ದೊರೆಯುವಂತೆ ಏರ್ಪಡಿಸಿ ಎಲ್ಲಾ ತಾಲೂಕುಗಳಲ್ಲೂ ಈ ಬ್ಯಾಂಕುಗಳನ್ನು ಸ್ಥಾಪಿಸಬೇಕೆಂದು ಕೋರುತ್ತೇನೆ.

—ರಂಗರಾವ್ ಅಗಸನೂರು

Branch Post office for MORAGERE Sanctioned (HADAGALI)

ಮೋರಗೆರೆ ಪೋಸ್ಟಾಫೀಸು ಮುಂಜೂರಾಯಿತು

ಹಡಗಲಿ ತಾಲೂಕು ಮೋರಗೆರೆಯಲ್ಲಿ ಪೋಸ್ಟಾಫೀಸನ್ನು ಸ್ಥಾಪಿಸಲು ಕೇಳಿಕೊಳ್ಳಲಾಗಿದ್ದಿತು. ಅದರ ಸಂಬಂಧ 'ನವಭಾರತ' ಸಂಪಾದಕರು ಪೋಸ್ಟ ಆಫೀಸರಿಗೆಳೊಡನೆ ವ್ಯವಹರಿಸಿ ಈಗ ಮುಂಜೂರಾಗಿದೆಯೆಂದು ತಿಳಿಸಲು ಸಂತೋಷಿಸುತ್ತೇನೆ.

ಶ್ರೀ ಕೇಶವರಾಯರು ಮತ್ತು ಪೋಸ್ಟಲ್ ಇನ್‌ಸ್ಪೆಕ್ಟರ್ ಶ್ರೀ ರಾಮಚಂದ್ರರಾಯರು ಮೋರಗೆರೆಗೆ ಜೂಲೈ ೨ನೆಯ ವಾರಬಂದು ಪ್ರಾರಂಭೋತ್ಸವವನ್ನು ನೆರವೇರಿಸುವರು. ಅದಕ್ಕೆ ಸರಿಯಾದ ಮನೆ ಕೆಲಸಮಾಡಲು ಯೋಗ್ಯವಕ್ತಿಯ ಹೊಣೆ ಮೋರಗೆರೆಯ ಮುಖ್ಯರನ್ನವರು ವಹಿಸಿದೆ

ಖಾದಿಯು ಜನರಿಗೆ ಬೇಡವಾಯಿತು

"ಖಾದಿಯು ಅಹಿಂಸೆಯ ಪ್ರತೀಕ ಅಹಿಂಸಾತ್ಮಕ ಸಮಾಜ ರಚನೆಗೆ ಅದೊಂದು ಸಾಧನ ಈ ವ್ಯಾಪಕಾರ್ಥದಲ್ಲಿ ಖಾದಿಯನ್ನು ಮಹಾತ್ಮಾ ಗಾಂಧಿಯವರು ನವಾಜದ ಮುಂದೆ ಇಟ್ಟರು ಗಾಂಧಿವಾದದಲ್ಲಿ ಜನರ ಶ್ರದ್ಧೆಯು ಕಡಿಮೆಯಾಗಿ ಅವರು ಖಾದಿಯನ್ನು ಬಿಡುತ್ತಲಿರುವುದು ಇಂದು ಖಾದಿಗೆ ಬಂದ ಆಪತ್ತು ಗಾಂಧಿವಾದದಲ್ಲಿ ಜನರ ಶ್ರದ್ಧೆ ಕಡಿಮೆಯಾದ ನಿದರ್ಶನ" ಎಂದು ಗಾಂಧಿ ಸೇವಾ ಸಂಘದ ಭೋತ್ಪ್ರಯವರು ಹಳೇ ಹುಬ್ಬಳ್ಳಿಯಲ್ಲಿ ಹೇಳಿದರು.

NOTICE.

ಸಾರ್ವಜನಿಕ ಪ್ರಕಟನೆ

ಬಳ್ಳಾರಿ ಜಿಲ್ಲಾ ಬಳ್ಳಾರಿ ತಾಲೂಕು ಬಳ್ಳಾರಿನಗರದಲ್ಲಿ ವಾಸವಾಗಿರುವ ಅಂತಾಪುರದ ಶ್ರೀನಿವಾಸರಾಯರು ಸಕಲರಿಗೂ ಈ ನೋಟೀಸು ಮೂಲಕ ತಿಳಿಸುವದೇನೆಂದರೆ :—

ನಾನು ಮತ್ತು ನನ್ನ ಅವಿಭಕ್ತ ಅಣ್ಣನಾದ ಅಂತಾಪುರದ ನರಸಿಂಗರಾಯನು ಒಂದೇ ಸಮಯದಲ್ಲಿ ಕಾಪುರವಿದ್ದು ಇತ್ತೀಚೆಗೆ ಸರಿಬೀಳದಕಾರಣ ಬೇರೆ ಬೇರೆ ಕಾಪುರ ಮಾತ್ರ ಮಾಡುತ್ತಲಿದ್ದೇವೆ. ನಮ್ಮಿಬ್ಬರ ಜಂಟಿ ಕುಟುಂಬಕ್ಕೆ ಪೂರ್ವಾರ್ಜಿತ ಮತ್ತು ಇತ್ತೀಚಿಗೆ ವೃದ್ಧಿಮಾಡಿದ ಆಸ್ತಿಗಳು ಬಳ್ಳಾರಿ, ಕುಡತಿನಿ ಶಿದ್ದಮ್ಮನಹಳ್ಳಿ, ಯೇಳುಬೆಂಚಿ, ಅಂತಾಪುರದ ಇಲಾಪೆ ಗ್ರಾಮುಗಳು ಅಸ್ಪಲಾಪುರ, ಕಂಪ್ಲಿ, ರಾಮಸಾಗರ ಬುಕ್ಕಸಾಗರ, ಚಿತ್ರವಾಡಿಗಿ ಮುಂತಾದ ಗಾಮಗಳಲ್ಲಿರುತ್ತವೆ. ಸದರಿ ಕುಟುಂಬಕ್ಕೆ ಸೇರಿದ ಸ್ಥಿರ ಚರಾಸ್ತಿಗಳು ಸರಿಯಾಗಿ ಪಾಲುವಿಭಾಗ ಮಾಡಿಕೊಂಡಿಲ್ಲ. ಹೀಗಿರಲು ನನ್ಮಣ್ಣನಾದ ನರಸಿಂಗರಾಯನು ನನಗೆ ಮೋಸಮಾಡಲು ಆಯವ ಮಾರಾಟ ಮೊದಲಾಗಿ ದುರ್ವಿನಿಯೋಗ ಮಾಡಲು ಪ್ರಯತ್ನ ಪಟ್ಟಿರುತ್ತಾನೆ ಈಗ ಸದ್ಯಕ್ಕೆ ಬಳ್ಳಾರಿನಗರದಲ್ಲಿರುವ ಮನೆಗಳನ್ನು ಸಿದ್ದಮ್ಮನಹಳ್ಳಿ ಕಾಡಿತಿಯಲ್ಲಿರುವ ಭೂಮಿಗಳನ್ನು ಮಾರಲು ಪ್ರಯತ್ನಿಸುತ್ತಿರುವಂತೆ ತಿಳಿದುಬಂದಿದೆ. ಸದರಿ ಆಸ್ತಿಯನ್ನು ಈ ರೀತಿ ದುರ್ವಿನಿಯೋಗ ಮಾಡಲು ಅವನಿಗೆ ಅಧಿಕಾರವಿಲ್ಲ.

ಈ ಕಾರಣ ನನ್ನ ಹಕ್ಕಿಗೆ ಒಳಪಟ್ಟಿರುವ ಆಸ್ತಿಗಳನ್ನು ವಿಕ್ರಯಕ್ಕಾಗಲಿ ಆಯಕಕ್ಕಾಗಲಿ ಬೇರೆ ವಿಧದಿಂದಲಾಗಲಿ ಸದರಿ ನರಸಿಂಗರಾಯರ ಕಡೆಯಿಂದ ತೆಗೆದುಕೊಂಡ ಪಕ್ಷದಲ್ಲಿ ಅಂಥವರು ನನ್ನ ಕಷ್ಟನಷ್ಟ ಪರಿಹಾರಕ್ಕೂ ವ್ಯಾಜ್ಯದ ಖರ್ಚಿಗೂ ಜವಾಬ್ದಾರರಾಗುತ್ತಾರೆಂದು ಈ ನೋಟೀಸು ಮೂಲಕ ಸಕಲರಿಗೂ ತಿಳಿಯಪಡಿಸಿರುತ್ತೇನೆ

ಅಂತಾಪುರಂ
ಶ್ರೀನಿವಾಸರಾವು.

———

ಇನ್ನೊಂದು ಯುದ್ಧವೇನಾದರೂ ಸಂಭವಿಸಿದರೆ ಅದು ತಲೆ ತಲಾಂತರಗಳಿಗೂ ವಿನಾಶಕಾರಿಯಾಗಿ ಪರಿಣಮಿಸಿ ಜಗತ್ತಿನ ಉತ್ಪಾದನ ಶಕ್ತಿಯೇ ಕುಗ್ಗಿಹೋಗ್ಯವುದು.

ದೇವಸ್ಥಾನದ ಭೂಮಿಗಳು
ಹರಿಜನರಿಗೆ ಸಾಗುವಳಿ ಕೊಡಿರಿ.

ತಿರುನೆಲ್ವೇಲಿ ಸಭೆಯಲ್ಲಿ ದೇವಸ್ಥಾನ ಭೂಮಿಗಳನ್ನು ಹರಿಜನರಿಗೆ ಸಾಗುವಳಿಗೆ ಕೊಡಲು ಬೇಡಲಾಯಿತು. ನೆಲ್ಲೂರು ಜಿಲ್ಲಾ ಕಲೆಕ್ಟರವರು ಸಹ ಸಿಫಾರಸ್ಸು ಮಾಡಿ ಕಳೆದ ಐದು ವರ್ಷಗಳ ಸಾಗುವಳಿ ಮೊತ್ತದ ಸರಾಸರಿಯಾಡಿ ಹರಿಜನರಿಗೆ ಕೊಡಬಹುದೆಂದರು.

ಆದರೆ ರಿಲಿಜಿಯಸ್ ಎಂಡೋಮೆಂಟ್ ಬೋರ್ಡದವರು ಇದರಿಂದ ಧಾರ್ಮಿಕ ಸಂಸ್ಥೆಗಳಿಗೆ ಲುಕ್ಸಾನಾಗುವದೆಂದೂ ಹರಿಜನರು ಸಾಗುವಳಿ ಮೊತ್ತವನ್ನು ಸರಿಯಾಗಿ ಸಲ್ಲಿಸುವದಿಲ್ಲೆಂತಲೂ ಪೋಟಿಮಾಡಿ ಹೆಚ್ಚು ಮೊತ್ತಕ್ಕೆ ಯಾರು ಬೇಕಾದರೂ ಪಡೆಯಬಹುದೆಂದೂ ತಿಳಿಸಿದ್ದಾರೆ.

ಇನ್ನು ಮೇಲೆ ವಿಧ್ವಂಸಕಚಟುವಟಿಕೆಗಳಲ್ಲಿ ಭಾಗವಹಿಸುವದಿಲ್ಲೆಂದು ಲೇಖಿನೂಲಕ ಬರೆದುಕೊಟ್ಟು ೧೫೦ ಕಮ್ಯೂನಿಸ್ಟ ಸ್ಥಾನಬದ್ಧರನ್ನು ಮದ್ರಾಸ್ ಸರ್ಕಾರವು ಬಿಡುಗಡೆ ಮಾಡಿದೆ. ಮದ್ರಾಸ್ ಪ್ರಾಂತದಲ್ಲಿ 600 ಕಮ್ಯೂನಿಸ್ಟ ಸ್ಥಾನಬದ್ಧರಿರುವರು. ——

ಭೈರವನ ತಿಪ್ಪ

ಪ್ರೊವಿಜಿಸ್ಟ ಮಂತ್ರಿ ಶ್ರೀ ಸಂಜೀವ ರೆಡ್ಡಿಯವರು ರಾಯದುರ್ಗಕ್ಕೆ ಬಂದಾಗ ಭೈರವನತಿಪ್ಪ ಬಳಿ ವೇದಾವತಿಯ ಅಣೆಕಟ್ಟಿನ ಯೋಜನೆಯು ಸರಕಾರದಿಂದ ಸ್ವೀಕೃತವಾಗಿ ಏತಕ್ಕೆ ತಡವಾಗುತ್ತಿದೆಯೆಂದು ಕೇಳಲಾಯಿತು. ಅದಕ್ಕೆ ಮಂತ್ರಿಗಳು ಆದಷ್ಟು ತ್ವರಿತವಾಗಿ ಈ ಕಾರ್ಯವು ಮುಂದೆ ಸಾಗುವುದೆಂದರು ಮೈಸೂರು ಸ್ಟೇಟಿನಲ್ಲಿ ಈ ಯೋಜನೆಯಿಂದ ಮುಳುಗುವ ಭೂಮಿಯ ಪರಿಹಾರದ ಬಗ್ಗೆ ವಿಚಾರವಿಮರ್ಶೆಯಾಗುತ್ತಿರುವದೆಂದರು

ಅಫೀಮಿನ ಕಳ್ಳಸಾಗಾಟ

ಬೊಂಬಾಯಿಯಿಂದ ಸಿಂಗಪುರಕ್ಕೆ ಹಡಗಿನಲ್ಲಿ ಸಾಗಿಸಿದ ೨೫೦ ಪೌಂಡಿನ ೫ ಪೆಟ್ಟಿಗೆಗಳನ್ನು ಬೊಂಬಾಯಿ ಪೋಲೀಸರು ಸಿಂಗಪುರದ ಪೋಲೀಸರ ಸಹಾಯದಿಂದ ಪತ್ತೆ ಹಚ್ಚಿದರು ಬೊಂಬಾಯಿಯಲ್ಲಿ ಅಫೀಮಿನ ಧಾರಣೆ ಪೌಂಡಿಗೆ ೧೦೦ ರೂ. ಇದೆ. ಸಿಂಗಪುರದಲ್ಲಿ ೬೦೦ ಇದೆ

ನಿಯಂತ್ರಣಗಳು ಸರ್ಕಾರಕ್ಕೂ ಬೇಡ.

ಆದರೆ ಸದ್ಯದ ಆರ್ಥಿಕ ಪರಿಸ್ಥಿತಿಯಲ್ಲಿ ರಾಷ್ಟ್ರದ ಆರ್ಥಿಕ ರಚನೆಯನ್ನನ್ನುಲಕ್ಷಿಸಿ ಇವುಗಳನ್ನು ಮುಂದುವರಿಸ ಬೇಕಾಗಿದೆ. ಎಂದು ಕೇಂದ್ರವಾಣಿಜ್ಯಸಂತ್ರಿ ಶ್ರೀ ಪ್ರಕಾಶರು ಹೇಳಿದರು

ಮುನಿಸಿಪಲ್ ಚುನಾವಣೆಗಳು

ಸಯಸ್ಯ ಮತದಾನ ಪದ್ಧತಿಯಂತೆ ಈ ವರ್ಷದ ಕೊನೆಯಲ್ಲಿ ಮುನಿಸಿಪಲ್ ಚುನಾವಣೆಗಳನ್ನು ನಡೆಸಲು ಮದ್ರಾಸ್ ನಲ್ಲಿ ಸಮಾವೇಶವಾದ ಮುನಿಸಿಪಲ್ ಛೇರ್ಮನ್ನರ ಸಭೆಯಲ್ಲಿ ಒಮ್ಮತೀರ್ಮಾನ ನಿರ್ಣಯಿಸಲ್ಪಟ್ಟು ಸರ್ಕಾರಕ್ಕೆ ಕಳುಹಿಸಲಾಯಿತು. ——

ಅಖಿಲ ಭಾರತ ಸಮಾಜವಾದಿ ಸಮ್ಮೇಳನ.

ನೇಶಿಯಲಿಸ್ಟ್ ಪಾರ್ಟಿಯ ಅಷ್ಟಮ ಮಾಧಿವೇಶನವು ಜೂಲೈ 8 ರಿಂದ 12 ರವರೆಗೆ ಮದ್ರಾಸ್ ಪೀಪಲ್ಸ್ ಪಾರ್ಕಿನ ಸರ್ಕಸ್ ವೈದಾನದಲ್ಲಿ ಸಮಾವೇಶವಾಗಲಿದೆ. ಜಯಪ್ರಕಾಶ, ಕಮಲಾದೇವಿ, ಯೂಸುಫ್ ಮೆಹರಾಲಿ ಮೊದಲಾದವರೆ ಮುಖಂಡರು ಬರಲಿದ್ದಾರೆ. ಸಾಂಸ್ಕೃತಿಕ ಅಧಿವೇಶನವು ನಡೆಯಲಿದೆ.

ಹಿಂದೀ ಮಹಾ ವಿದ್ಯಾಲಯ, ಬಳ್ಳಾರಿ,

[1931 ಸ್ಥಾಪಿತ. ಬಳ್ಳಾರಿ ಜಿಲ್ಲಾ ಹಿಂದೀ ಪ್ರೇಮಿಮಂಡಲದಾಶ್ರಯದಲ್ಲಿ, ರಿಜಸ್ಟರ್ಡ.]

ಮದ್ರಾಸ್ ಸರ್ಕಾರದಿಂದ ಮಾನ್ಯತೆ ಇದೆ.

ಪ್ರಾರಂಭಿಕ ವರ್ಗಗಳಿಗೆ ಮಾಸಿಕ 3/- ಶುಲ್ಕ — ಉನ್ನತ ವರ್ಗಗಳಿಗೆ ಮಾಸಿಕ 5/- ಶುಲ್ಕ

ವಾರ್ಡಲಾ ಹೈಸ್ಕೂಲ್ ಕಟ್ಟಡದಲ್ಲಿ ಪ್ರಾತಃಕಾಲ-ಸಾಯಂಕಾಲ ಹಿಂದೀ ಕಾಲೇಜ್‌ದ ವರ್ಗಗಳು ನಡೆಯುತ್ತಿವೆ. ಪ್ರವೇಶಿಕ — ವಿಶಾರದ ವರ್ಗಗಳಲ್ಲದೆ ಪ್ರಾರಂಭಿಕ ವರ್ಗಗಳಿಗೂ ಪ್ರವೇಶವಿದೆ. ವರ್ಗಗಳಿಗೆ ಸಂಬಂಧಿಸಿದ ಪಾಠ್ಯ ಪುಸ್ತಕಗಳು ವಿದ್ಯಾಲಯದಲ್ಲಿ ದೊರೆಯುತ್ತವೆ. ಒಳ್ಳೆಯ ಪುಸ್ತಕಭಂಡಾರವಿದೆ. ಶ್ರೇಷ್ಠ ವಾರಪತ್ರಿಕೆ, ಮಾಸಪತ್ರಿಕೆಗಳು ಲಭ್ಯ ಇತರ ವಿವರಗಳಿಗೆ ಸ್ವಾಂಪಿಟ್ಟು ಬರೆಯಿರಿ.

ಪ್ರಿನ್ಸಿಪಾಲ್.

NAVA BHARAT BELLARY. (Reg. No. M. 4746)

ನವಭಾರತ ಬಳ್ಳಾರಿ.

26—6—50

(Nationalist Weekly)

ಚಂದಾದರರಗಳು.	Subscription Rates.
ವರ್ಷಕ್ಕೆ 6—0—0	One Year 5—0—0
6 ತಿಂಗಳಿಗೆ 3—0—0	Six months 3—0—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.	Subscription will not be accepted for less than 6 months

To

Sri.....

.....

.....

Printed at Krishna Printing Works, Edited & Published by T.B. Keshaav Rao.

JAI—HIND

ನಾಗರಿಕಾಭಿಮಾನಿ

ಬಳ್ಳಾರಿಯ
ಉಜ್ವಲ ರಾಷ್ಟ್ರೀಯ ವಾರಪತ್ರಿಕೆ
*
ಉತ್ತಿಷ್ಠತ ! ಜಾಗ್ರತ
ಪ್ರಾಪ್ಯವರಾನ್ನಿ ಬೋಧತ !!!
*
ಸಂಪಾದಕ ಮತ್ತು ಪ್ರಕಾಶಕ:—
ಬಿ. ಬಿ. ಕೇಶವರಾವ

ವರ್ಷ ೧೩ | ಸೋಮವಾರ ೩ ಜೂಲೈ ೧೯೫೦ | ಸಂಚಿಕೆ ೨

ವನಮಹೋತ್ಸವವು

ವಿನಂತಿ!!

ನಮ್ಮದೇಶವು ಆರ್ಥಿಕ ಮುಗ್ಗಟ್ಟಿನಲ್ಲಿರುವುದು ಎಲ್ಲರಿಗೂ ತಿಳಿದ ವಿಷಯ ನಾವು ಈಗ ಒಂದು ಸ್ವತಂತ್ರರಾಷ್ಟ್ರದ ಪ್ರಜೆಗಳಾಗಿದ್ದು ನಮ್ಮಜನಾಂಗದ ಬಿನ್ನ ತ್ಯವನ್ನು ಗಳಿಸುವುದು ಪ್ರತಿಯೊಬ್ಬ ಭಾರತೀಯನ ಕರ್ತವ್ಯವಾಗಿದೆ. ನಮ್ಮ ಈ ಭಾರತ ದೇಶವು ವ್ಯವಸಾಯ ಪ್ರಧಾನವಾದುದರಿಂದ, ವಿಶೇಷ ವಿಷಯವಾಗಿ ನಾವು ಯಾವ ಒಂದು ಕ್ರಮವನ್ನು ಕೈಕೊಂಡರೂ ಅದು ರೈತರಿಗೆ ಸಂಬಂಧಿಸಿದುದೇ ಆಗಿರುವುದು. ಈ ದೇಶದಲ್ಲಿ ಈಗ ಪ್ರಜೆಗಳಿಗೆಲ್ಲಾ ಸಾಕಷ್ಟು ಬೆಳೆಯ ಉತ್ಪತ್ತಿ ಇಲ್ಲ. ಭೂಮಿಯನ್ನು ಸಾರವತ್ತಾಗಿ ಮಾಡುವುದಕ್ಕೆ ಗೊಬ್ಬರವನ್ನು ಹಾಕದಿರುವುದರಿಂದಲೂ ನುಳೆಯು ಸಕಾಲಕ್ಕೆ ಬಾರದಿರುವುದರಿಂದಲೂ ಈ ಕಷ್ಟವು ಒದಗಿರುವುದು. ಗಿಡ ಮರಗಳನ್ನು ಸ್ವೇಚ್ಛೆಯಾಗಿ ಕಡಿದು ಅವನ್ನು ಸ್ವದೇಶಕ್ಕೆ ಉಪಯೋಗಿಸುತ್ತಿದ್ದೇವೆ ಹೊರತು, ಈ ವ್ಯಯವನ್ನು ಸರಿಪಡಿಸುವುದಕ್ಕೆ ಹೊಸ ಗಿಡಗಳನ್ನು ನಾಟಿಸುವ ಪದ್ಧತಿಯನ್ನು ಸಾರ್ವಜನಿಕವಾಗಿ ನಾವು ಕೈಕೊಂಡಿಲ್ಲ. ಸಸ್ಯಸಮೃದ್ಧಿಯ ಮೇಲೆ ಮಳೆಯು ಹೊಂದಿಕೊಂಡಿರುವುದು. ಮರಗಿಡಗಳ ನಾಶವಾಗಿರುವುದರಿಂದಲೇ ನುಳೆಯು ಕಮ್ಮಿಯಾಗಿರುವುದು. ಇದಲ್ಲದೆ ಕಟ್ಟಿಗೆಗೆ ಸಾಕಷ್ಟು ಮರ ಇಲ್ಲದಿರುವುದರಿಂದ ಗೊಬ್ಬರವಾಗಿ ಉಪಯೋಗಿಸತಕ್ಕ ಸೆಗಣಿಯನ್ನು ನಾವು ಉರುಹಚ್ಚುವುದಕ್ಕೇನೇ ಉಪಯೋಗಿಸುತ್ತೇವೆ. ನಾವು ಹೀಗೆ ಮರಗಳನ್ನು ನಾಶಪಡಿಸುತ್ತ ಬಂದು ಅವುಗಳ ಬದಲು ಸಾಕಷ್ಟು ಹೊಸಮರಗಳನ್ನು ಬೆಳೆಸುವದಕ್ಕೆ ನಾವು ಗಮನಿಸದೆ ನಮ್ಮ ದೇಶದ ಸಸ್ಯಸಂಪತ್ತನ್ನು ಬಹಳ ಅಧೋಗತಿಗೆ ತಂದುಕೊಂಡಿರುವದರಿಂದ ಇನ್ನು ಕೆಲವು ಸಂವತ್ಸರಗಳೊಳಗಾಗಿ ನಮ್ಮದೇಶವು ನಿಶ್ಚಯವಾಗಿಯೂ ಮರುಭೂಮಿ ಸಮಾನವಾಗಿ ಪರಿಣಮಿಸುವುದು. ಈ ಎಲ್ಲಾ ವಿಷಯಗಳನ್ನು ಪರಿಗಣಿಸಿಕೊಂಡು ಪ್ರತಿ ವರ್ಷದಲ್ಲೂ ಜೂಲೈ ತಿಂಗಳ ಮೊದಲನೆವಾರದಲ್ಲಿ 'ವನಮಹೋತ್ಸವ' ದಾಚರಣೆಯನ್ನು ಕೈಕೊಳ್ಳಬೇಕೆಂದು ನಮ್ಮರಾಷ್ಟ್ರದ ಮುಂದಾಳುಗಳು ಪಣ ತೊಟ್ಟಿರುತ್ತಾರೆ. ಇದಕ್ಕಾಗಿ ಪ್ರತಿಯೊಬ್ಬ ದೇಶಭಕ್ತನಾದ ಭಾರತೀಯನು ತಾನು ಗಮನಿಸಿ ನೀರು ಸುರಿಸಿ ಸಂರಕ್ಷಿಸುವಷ್ಟು ಸಸಿಗಳನ್ನು ಈ ಸುಸಂದರ್ಭದಲ್ಲಿ ನಾಟಿ, ನಾವು ಇದುವರೆಗೆ ಕಳೆದುಕೊಂಡ ವನಸಂಪತ್ತಿಯನ್ನು ಭರ್ತಿ ಗೊಳಿಸುವುದಕ್ಕೆ ಸಹಕರಿಸಬೇಕು ವನಸಂಪತ್ತಿಯು ಭೂದೇವಿಗೆ ಪೀತಾಂಬರವಿದ್ದಂತೆ ಆ ದೇವಿಯ ಮಕ್ಕಳಾದ ನಾವು ಈ ಕೆಡಿಸಿರುವ ಉಡುಗೆಯನ್ನು ಸರಿಪಡಿಸುವುದು ನಮ್ಮ ಕರ್ತವ್ಯವಿರುತ್ತದೆ. ಅಂದರೆ ಭೂಮಿಯ ಮೇಲಿದ್ದ ಮರಗಳನ್ನು ನಾಶಮಾಡಿದವರೇ ಹೊಸಮರಗಳನ್ನು ಬೆಳೆಸುವುದಕ್ಕೆ ಹೊಣೆಗಾರರಾಗಿರುತ್ತೇವೆ. ಅದರಿ ಜನಾಂಗದ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಅಲ್ಪ ಸೇವೆಯನ್ನು ಮನಃಪೂರ್ವಕವಾಗಿ ಕೈಕೊಂಡರೇನೇ ಸರಕಾರದ ಗುರಿಯು ಸಾಫಲ್ಯವಾಗುವುದು. ಆದುದರಿಂದಲೇ ಈ ವನಮಹೋತ್ಸವವನ್ನು ಜಯಪ್ರದವಾಗಿ ಆಚರಿಸುವಂತೆ ಸರಕಾರದವರು, ಪ್ರಜೆಗಳಿಗೆ ಬೀಜಗಳನ್ನು ಸಸಿಗಳನ್ನೂ ಧರ್ಮಾರ್ಥವಾಗಿ ಹಂಚುತ್ತಿದ್ದಾರೆ. ಆದಾಗ್ಯೂ ಎಲ್ಲರೂ ತಮಗೆ ಉಪಯುಕ್ತವಾದ ತಮ್ಮ ಸ್ವಂತ ಬೀಜವನ್ನಾಗಲಿ ಸಸಿಯನ್ನಾಗಲಿ ಆರಿಸಿಕೊಂಡು ತಮ್ಮ ಮನೆಯ ಮುಂದುಗಡೆ ಹಿತ್ತಲಲ್ಲಿ, ಹೊಲಗಳಲ್ಲಿ ಪುತ್ತು ಮಾರ್ಗದ ಪಕ್ಕಗಳಲ್ಲಿ ನೆಟ್ಟು ಜೋಪಾನ ಮಾಡಬೇಕು. ಸಂರಕ್ಷಣೆಗಾಗಿ ಅವುಗಳಿಗೆ ಬೇಲಿಹಚ್ಚಿ. ಅವು ಬೇರೂರಿಕೊಂಡು ಮಳೆಯ ಆಶ್ರಯವಿಲ್ಲದೆ ಬದುಕುವವರೆಗೆ ಆಗಾಗ್ಗೆ ನೀರು ಚಿಮುಕಿಸುವುದು ಅಗತ್ಯ. ಅನಾಧೀನ ಪೊರಂಬೋಕು ಭೂಮಿಯಲ್ಲಿ ಕೂಡಾ ಮರಗಳನ್ನು ಬೆಳೆಸುವುದಕ್ಕೆ ಇಚ್ಛೆಯುಳ್ಳ ರೈತರು ಅದಕ್ಕೆ ಅನುಮತಿಯನ್ನು ತಮ್ಮ ತಾಲೂಕು ಕಛೇರಿಲ್ದಾರರಿಂದ ಹೊಂದಬಹುದು. ಯಾವ ವಿಧವಾದ ಮರವಾಗಲಿ ಅದು ಒಂದಲ್ಲ, ಒಂದು ವಿಧದಿಂದ ಉಪಯೋಗವಾಗಿರುವುದು. ಏಕೆಂದರೆ ಮರವು ಕಟ್ಟಿಗೆ, ಹಣ್ಣು, ಗೊಬ್ಬರ ಸೊಪ್ಪು ಅಥವಾ ನೆರಳನ್ನು ಕೊಡುತ್ತದೆ.

ವನಮಹೋತ್ಸವವೆಂಬುದು ಪ್ರತಿಯೊಬ್ಬ ವ್ಯಕ್ತಿಯ ಹಬ್ಬವು. ಬಾಲಕರು ವೃದ್ಧರು, ಬಡವರು, ರೈತರು, ಆಳುಗಳು ಎಲ್ಲರೂ ಪ್ರತಿವರ್ಷವೂ ಈ ಉತ್ಸವವನ್ನು ಜರುಗಿಸಲಿ. ಎಂಬುದೇ ನನ್ನ ಅಪೇಕ್ಷೆ.

ಬಳ್ಳಾರಿ. ಜಿ. ರಾಮಿರೆಡ್ಡಿ
ತಾ|| 21-6-50 ತಲೆಕ್ಕರು, ಬಳ್ಳಾರಿ.

ತಾರಾನಾಥ ಆಯುರ್ವೇದ ವಿದ್ಯಾಪೀಠ ಬಳ್ಳಾರಿ.

ಈ ವಿದ್ಯಾಪೀಠವು ಎಂದಿನಂತೆ ಜುಲೈ 15ನೇ ತಾರೀಕಿಗೆ ತೆರೆಯಲ್ಪಡುವುದು. ಹೊಸತಾಗಿ ಸೇರಲಿಚ್ಛಿಸುವ ವಿದ್ಯಾರ್ಥಿಗಳ ಅರ್ಜಿಗಳು ಆ ಮೊದಲು ವಿದ್ಯಾಪೀಠದ ಕಾರ್ಯಾಲಯಕ್ಕೆ ಮುಟ್ಟತಕ್ಕದ್ದು. ವಿದ್ಯಾರ್ಥಿಗಳು ಕನಿಷ್ಠ ಮೆಟ್ರಿಕ್ಯುಲೇಷನ್ ಪರೀಕ್ಷೆ ಪಾಸಾದವರಿರತಕ್ಕದ್ದು. ಅರ್ಹತೆ ಪಡೆದ ವಿದ್ಯಾರ್ಥಿಗಳ ಕುರಿತು ಅವರಿಗೆ ತಿಳಿಸಲಾಗುವುದು.

ಬಳ್ಳಾರಿ. ಕಾರ್ಯದರ್ಶಿ.
30-6-50

ಸೋಮವಾರ ೩ ಜೂಲೈ ೧೯೫೦.

ಯುದ್ಧ ಚಿಹ್ನೆಗಳು

ಈಚಿನ ಇತಿಹಾಸ

ಭಾರತದ ಆಚ್ಚೀಯಕ್ಕೆ ಜಪಾನೀ ಸಮುದ್ರಕ್ಕೆ ಸಮೀಪವಿರುವ ಕೋರಿಯಾ ದೇಶವು ೧೯೧೦ ರಿಂದ ದ್ವಿತೀಯ ಮಹಾಯುದ್ಧವು ಮುಗಿಯುವ ೧೯೪೫ ವರೆಗೆ ಜಪಾನೀ ಸರ್ಕಾರಾಧೀನದಲ್ಲಿದ್ದಿತು. ದ್ವಿತೀಯ ಮಹಾಯುದ್ಧದಲ್ಲಿ ಜಪಾನವು ಸೋತು ಶರಣಾಗತಿಯನ್ನು ಬೇಡಿದ ಮೇಲೆ ಉತ್ತರ ಭಾಗದ ಕೋರಿಯಾವನ್ನು ರಷ್ಯಾಸೈನ್ಯಗಳೂ, ದಕ್ಷಿಣ ಭಾಗದ ಕೋರಿಯಾವನ್ನು ಅಮೆರಿಕನ್ ಸೈನ್ಯಗಳೂ ಆಕ್ರಮಿಸಿ ಮಿಲಿಟರಿ ಆಡಳಿತವನ್ನು ಪ್ರಾರಂಭಿಸಿದವು. ತದನಂತರ ಈ ಐದುವರ್ಷಗಳೊಳಗಾಗಿ ಉತ್ತರ ದಕ್ಷಿಣ ಭಾಗಗಳನ್ನು ಕೂಡಿಸಿ ಏಕ ರಾಷ್ಟ್ರವನ್ನಾಗಿ ರಾಜ್ಯಪರಿಪಾಲನೆ ಮಾಡಬೇಕೆಂದು ಅಮೆರಿಕಾ ಸೂಚಿಸಿತು. ರಷ್ಯಾ ಸೂಚನೆಗಳನ್ನು ಅಮೆರಿಕಾ ಮಾನ್ಯ ಮಾಡಲಿಲ್ಲ. ಹೀಗಾಗಿ ಗುಪ್ತರೂಪದಲ್ಲಿ ಎರಡೂ ಭಾಗಗಳ ಮಧ್ಯೆ ಫೆರ್ಮಜೆ ಇದ್ದೇ ಇತ್ತು. ಉತ್ತರದಲ್ಲಿ ರಷ್ಯಾದ ದಕ್ಷಿಣದಲ್ಲಿ ಅಮೆರಿಕಾದ ಪ್ರತಿಭೆಯು ಅಲ್ಲಿಯ ರಾಜ್ಯಭಾರದಾಡಳಿತೆಯ ಮೇಲೆ ಬಿದ್ದಿದೆ.

ಚುನಾವಣೆಗಳು

೧೯೪೮ ಮೇ ಯಲ್ಲಿ ಉತ್ತರ ದಕ್ಷಿಣ ಭಾಗಗಳಲ್ಲಿ ರಷ್ಯಾ-ಅಮೆರಿಕಾ ಪ್ರಭಾವಕ್ಕೊಳಪಟ್ಟ ಚುನಾವಣೆಗಳು ನಡೆದವು. ಉತ್ತರದಲ್ಲಿ ಕಮ್ಯೂನಿಷ್ಟ ಸರಕಾರವೂ ದಕ್ಷಿಣದಲ್ಲಿ ಅಮೆರಿಕಾಕ್ಕೆ ಬೇಕಾದ ರಾಜ್ಯಭಾರನ್ನೂ ಸ್ಥಿರಗೊಂಡವು. ರಷ್ಯಾ ಮತ್ತು ಅಮೆರಿಕಾಗಳು ತಮ್ಮ ಸೈನ್ಯಗಳನ್ನು ಹಿಂದೆಗೆದುಕೊಂಡರೂ ಅಲ್ಲಿ ಸ್ಥಾಪಿತವಾದ ಸರ್ಕಾರಗಳು ಈ ಶಕ್ತಿಗಳಕೊಳಪಟ್ಟು ಅಧೀನಸ್ಥವಿದ್ದವೆಂದು ಹೇಳಬಹುದು.

ಸಂಧಾನ ಪ್ರಯತ್ನ

ಯುಕ್ತ ರಾಷ್ಟ್ರ ಸಂಘದ ಪ್ರಾತಿನಿಧಿಕ ಕಮಿಂಡಳವು ಉತ್ತರ-ದಕ್ಷಿಣ ಸರಕಾರಗಳಲ್ಲಿ ರಾಜಮಾಡುವ ಉದ್ದಿಶ್ಯ ೧೯೪೮ರಲ್ಲಿ ಕೋರಿಯಾಕ್ಕೆ ಬಂದಿತು. ಉತ್ತರ ಭಾಗದ ಸರ್ಕಾರವು ತಮ್ಮ ಭಾಗಕ್ಕೆ ಬರಬಾರದೆಂದು ಕಟ್ಟಾಜ್ಞೆ ವಿಧಿಸಿತು. ಈಚೆಗೆ ಅಮೆರಿಕಾ ರಷ್ಯಾಗಳಲ್ಲಿ ವೈಮನಸ್ಯವು ಹೆಚ್ಚಾಗುತ್ತಿರುವದರಿಂದ ಸಂಧಿ ಮಾತುಗಳಿಗೆ ಬೆಲೆ ಬರಲಿಲ್ಲ.

ಯುದ್ಧ ಪ್ರಾರಂಭ

ಉತ್ತರ ಭಾಗದವರು ರಷ್ಯಾದ ಸಹಾಯದಿಂದ ಶಸ್ತ್ರ ಸುಸಜ್ಜಿತರಾಗಿ ಒಂದೇ ಸಲ ಆಕ್ರಮಣ ಮಾಡಿ ದಕ್ಷಿಣ ಭಾಗದಲ್ಲಿ ನುಗ್ಗುತ್ತಿದ್ದಾರೆ. ದಕ್ಷಿಣ ರಾಜಧಾನಿಯ ಪತನವಾಗಿದೆ. ದಕ್ಷಿಣ ಭಾಗದಲ್ಲಿ ತಯಾರಿ ಇಲ್ಲದೆ ಇದ್ದಕಾರಣ ಅವರು ಓಡುತ್ತಿರುವರು.

ಅಮೆರಿಕಾದ ಸಹಾಯ

ಅಮೆರಿಕಾದ ಪ್ರತಿಭೆಗೆ ಚೀನದಲ್ಲೂ ಇಲ್ಲಿಯೂ ಆದ ಭಕ್ಕೆಯನ್ನು ಗುರ್ತಿಸಿ ಪ್ರಸಿಡೆಂಟ್ ಟ್ರೂಮನ್ನರು ದಕ್ಷಿಣ ಕೋರಿಯಾಕ್ಕೆ ಎಲ್ಲತರದ ಸಹಾಯವನ್ನು ವಿಮಾನ ನೌಕಾದಳ ಮದ್ದು ಗುಂಡುಗಳನ್ನೊದಗಿಸಲು ಆಜ್ಞೆ ಇತ್ತಿರುವರು. ಅಮೆರಿಕಾದ ಸಹಾಯವನ್ನು ಸಹಾಯ ಸೂಚನೆಯು ತೀರ್ಮಾನಕ್ಕೆ ಸೆಕ್ಯೂರಿಟಿ ಕೌನ್ಸಿಲದಲ್ಲಿ ಬೆಂಬಲವು ದೊರೆಯಿತು. ಇಂಡಿಯಾ ಈಜಿಪ್ಟಗಳು ತಮ್ಮ ಸರ್ಕಾರದ ಕಡೆಯಿಂದ ಸೂಚನೆ ಬರದ ಕಾರಣ ತಟಸ್ಥ ವೃತ್ತಿಯನ್ನು ತಾಳಿದ್ದರು. ಈಗ ಜಪಾನದಲ್ಲಿದ್ದ ಅಮೆರಿಕಾದ ಸೇನಾಧಿಪತಿ ಡಗ್ಲಾಸ್ ಮ್ಯಾಕಾರ್ಥರವರ ನೇತೃತ್ವದಲ್ಲಿ ಅಮೆರಿಕಾದ ಸೇನಾ ನೌಕಾಪಡೆಗಳು ಯುದ್ಧದಲ್ಲಿ ಧುಮುಕಿದವೆಂದು ಪ್ರಕಟವಾಗಿದೆ.

ಮುಂದೇನು?

ಅಮೇರಿಕೆಯು ಪ್ರತ್ಯಕ್ಷರೀತಿಯ ಸಹಾಯವನ್ನು ಒದಗಿಸಿದಮೇಲೆ ರಷ್ಯಾವು ಕೂಡ ಉತ್ತರ ಭಾಗಕ್ಕೆ ತನ್ನ ಸಹಾಯವನ್ನು ಒದಗಿಸುವುದರಲ್ಲಿ ಸಂಶಯವಿಲ್ಲ. ದಕ್ಷಿಣ ಕೋರಿಯಾದಲ್ಲಿ ದಂಗೆಕೋರರು ಉತ್ತರ ಭಾಗದವರಿಗೆ ಸಹಾಯ ಮಾಡುತ್ತಲಿರುವರೆಂದು ಮೂರುಸಾವಿರ ಜನರು ಗುಡ್ಡಗಾಡು ಪ್ರದೇಶದಲ್ಲಿ ಧ್ವಂಸ ಕಾರ್ಯಗಳನ್ನಾರಂಭಿಸಿರುವರೆಂದು ಪ್ರಕಟವಾಗಿದೆ. ಬರೀ ಸೈನ್ಯ ಮದ್ದು ಗುಂಡುಗಳ ಸಹಾಯದಿಂದಲೇ ಯುದ್ಧವನ್ನು ಗೆಲ್ಲುವ ಕಾಲ ಹಿಂದಾಯಿತು. ಜನತೆಯ ಸಹಾಯವೂ ಬೇಕು. ಈ ದೃಷ್ಟಿಯಿಂದ ಜನತಾ ವಿರೋಧಿ ಸರ್ಕಾರವು ದಕ್ಷಿಣದಲ್ಲಿದ್ದು ಅಲ್ಲಿನ ಸಿಂಗಮ್ಯಾನ್‌ರೀ ಪ್ರಧಾನ ಮಂತ್ರಿಗಳ ರಾಜ್ಯಭಾರವು ಜನಾಕರ್ಷಕವಿದ್ದಿಲ್ಲೆಂದು ಹೇಳಬಹುದು.

ಭಾರತದ ಕರ್ತವ್ಯ

ಭಾರತವು ಈಗ ತಟಸ್ಥ ವೃತ್ತಿಯನ್ನು ತಾಳುವದೊಳ್ಳೆಯದು. ಉತ್ತರ ದಕ್ಷಿಣ ಭಾಗಗಳೊಳಗಿನ ಆಂತರಿಕ ಸಮಸ್ಯೆಯು ಪರರಾಷ್ಟ್ರ ಶಕ್ತಿಗಳ ಪ್ರಭಾವದಿಂದ ನಿರ್ಣಯವಾಗಬಾರದು. ಭಾರತದಲ್ಲಿನ ಜನಾಭಿಪ್ರಾಯವು ತಟಸ್ಥವೃತ್ತಿಯನ್ನೇ ಪ್ರೋತ್ಸಾಹಿಸುವುದರಲ್ಲಿ ಸಂಶಯವೇ ಇಲ್ಲ.

ಯಾವ ಕಾರಣದಿಂದಲಾದರೂ ಯುದ್ಧವು ಸಂಭವಿಸಿದರೆ ಇಡೀ ಪ್ರಪಂಚವೇ ನಾಶಮಾರ್ಗವನ್ನೈದಬೇಕಾಗುತ್ತದೆ ನಾಗರೀಕತೆ ಸಾಂಸ್ಕೃತಿಗಳ ಬೇರುಕೂಡ ಅದೃಶ್ಯವಾಗುತ್ತದೆ. ಇದು ಭಾರತಕ್ಕೆ ಸಮೀಪವಿರುವಕಾರಣ ಯುದ್ಧದ ಬೇಗೆಯು ನಮಗೆ ಮೊದಲು ತಗಲುತ್ತದೆ.

ಹೊಸಪೇಟೆ ಜಿಲ್ಲಾ ಮುನ್ಸಿಫರ ಕೋರ್ಟಿನಲ್ಲಿ

Sc 59/50

ಟಪಾಲ್ ಶಿವಾಲಾಲ್‌ಸಿಂಗ್ – ವಾದಿ
ಎಂ. ಅಬ್ದುಲ್‌ಸಾಬ್ – ಪ್ರತಿವಾದಿ

ಮೇಲ್ಕಾಣಿಸಿದ ದಾವೆಯು 21-7 50 ಕ್ಕೆ ಪ್ರತಿವಾದಿಯ ಹಾಜರಿಗಾಗಿ ವಾಯ್ದೆ ಹಾಕಲಾಗಿದೆ. ಕೋರ್ಟಿನಲ್ಲಿ ಆದಿನ ಪ್ರಾತಃಕಾಲ 11 ಗಂಟೆಗೆ ಪ್ರತಿವಾದಿ ಹಾಜರಾಗದಿದ್ದರೆ ಎಕ್ಸಪಾರ್ಟಿಯಾಗಿ ಭಾವಿಸಲ್ಪಟ್ಟು ದಾವೆಯ ವಿಚಾರಣೆಯಾಗುವದು.

ಎಂ. ರಂಗನಾಥಾಚಾರ್,
ವಾದಿಯ ವಕೀಲರು

ಬಳ್ಳಾರಿ ಜಿಲ್ಲಾ ಸೋಶಿಯಲಿಸ್ಟ್ ಪಾರ್ಟಿ

ಬಳ್ಳಾರಿ ಜಿಲ್ಲಾ ಸೋಶಿಯಲಿಸ್ಟ್ ಪಾರ್ಟಿಯ ಸಾಧಾರಣ ಸಭೆಯು ಮುಬಾರಕ್ ಮಂದಿರದಲ್ಲಿ ಸಮಾವೇಶವಾಗಿದ್ದಿತು. ಜಿಲ್ಲೆಯ ಎಲ್ಲಾ ಕಡೆಗಳಿಂದಲೂ ಸದಸ್ಯರು ಆಗಮಿಸಿದ್ದರು. ಆಂಧ್ರ ಕನ್ನಡ ಸದಸ್ಯರಲ್ಲಿ ಒಮ್ಮತವಾಗಿ ಇಡೀ ಜಿಲ್ಲೆಗೆಲ್ಲಾ ಒಂದೇ ಪಾರ್ಟಿ ಇರಬೇಕೆಂದು ನಿಶ್ಚಯವಾಗಿ ಅಸಂಬಂಧದ ತೀರ್ಮಾನವಾಯಿತು. ಜನಾಬ್ ರಿಯಾಜುದ್ದೀನರು ಅಧ್ಯಕ್ಷತೆ ವಹಿಸಿದ ಈ ಸಭೆಯಲ್ಲಿ ಜನರಲ್ ಸೆಕ್ರಟರಿ ಶ್ರೀ ಅಸುಂಡಿ ತಿರುಮಲರಾಯರು ಇಲ್ಲಿಯವರೆಗೆ ನಡೆದ ಕಾರ್ಯಕ್ರಮವನ್ನು ವಿವರಿಸಿ ಕೂಲಿಕಾರರ ಸಲುವಾಗಿ ನಿರ್ಮಿಸಲಾದ ಸಂಸ್ಥೆಗಳನ್ನು ಹೇಳಿ ಜಿಲ್ಲೆಯಲ್ಲಿ ಕೆಲಸಗಾರರು ಅಲ್ಪಸಂಖ್ಯೆಯಲ್ಲಿರುವ ಕಾರಣ ಜಿಲ್ಲೆಗೆಲ್ಲಾ ಒಂದೇ ಪಾರ್ಟಿ ಇರುವ ಅವಶ್ಯಕತೆಯನ್ನು ಸೂಚಿಸಿದರು ಪ್ರಧಮದಲ್ಲಿ ಸಮಾಜವಾದಿ ಸುಪ್ರಸಿದ್ಧ ಕಾರ್ಯಕರ್ತ ಭಾರತೀಯ ಸಂಸ್ಕೃತಿಯ ಪ್ರತೀಕರಾದ ಸಾನೆಗೂರೂಜಿಯವರ ನಿಧನಕ್ಕೆ ದುಃಖಸೂಚಕ ತೀರ್ಮಾನವಾಗಿ ಕುಟುಂಬಕ್ಕೆ ಸಾನುಭೂತಿ ಅರ್ಪಿಸುವುದಾಯಿತು. ಬರುವ ವರ್ಷಕ್ಕೆ ಈ ಕೆಳಗಿನ ಸದಸ್ಯರು ಸರ್ವಾನುಮತದಿಂದಾರಿಸಲ್ಪಟ್ಟರು.

ಜನರಲ್ ಸೆಕ್ರಟರಿ
ಅಸುಂಡಿ ತಿರುಮಲರಾವ್

ಜಾಯಿಂಟ್ ಸೆಕ್ರಟರಿಗಳು.
1. ಬಿ. ಭೀಮಸೇನಾಚಾರ್ಯ
2. ಬಿ. ವೆಂಕಟರಾಮರೆಡ್ಡಿ
3. ಆರ್. ವಿ. ದೇಶಾಯಿ

ಶ್ರೀ ದೇಶಾಯಿಯವರಿಗೆ ಆಫೀಸ್ ಕೆಲಸ ಒಪ್ಪಿಸಲಾಯಿತು 9 ಸದಸ್ಯರ ಕಾರ್ಯಕಾರಿ ಸಮಿತಿಯ ರಚನೆಯಾಯಿತು. ಲೆಕ್ಕ ಪತ್ರ ವರದಿಯ ಸ್ವೀಕೃತವಾಗಿ ಲೆಕ್ಕ ಪರಿಶೋಧನೆಗೆ ಕಳುಹಿಸಬೇಕೆಂಬ ತೀರ್ಮಾನವಾಯಿತು. ಮದ್ರಾಸಿನಲ್ಲಿ ನಡೆಯುವ ಅಖಿಲ ಭಾರತ ಸಮಾಜವಾದಿ ಸಮ್ಮೇಳನಕ್ಕೆ ಬಳ್ಳಾರಿಯಿಂದ ೧೦ ಸದಸ್ಯರನ್ನು ಕಳುಹಿಸಬೇಕೆಂಬುದಾಯಿತು.

ಆತ್ಮ ತತ್ವ

ತ್ಯಾಗ ಮತ್ತು ಸಂಕಲ್ಪಗಳಿಂದ ಯಾರಿಗೂ ಹಾನಿಯಿಲ್ಲವೆಂಬುದು ಪ್ರಾತ್ಯಕ್ಷಿಕ ಸತ್ಯವಾಗಿದೆ. ಅವರು ಪಾರ್ಥಿವ ಹಾನಿಗೊಳಗಾಗಿದ್ದರೂ ಅಮರ ಜೀವನದ ಉತ್ತರಾಧಿಕಾರಿಯಾಗಿ ಹಾನಿಗಿಂತಲೂ ಹೆಚ್ಚು ಲಾಭವನ್ನು ಸಡೆಯುವರು. ಇದೇ ಆತ್ಮ ತತ್ವ. ಈ ದೇಶವನ್ನು ಬದುಕಿಸಲು ವ್ಯಕ್ತಿಯು ಪ್ರಾಣಾರ್ಪಣ ಮಾಡಲೇ ಬೇಕು ಭಾರತವನ್ನು ಬದುಕಿಸಲಿಕ್ಕಾಗಿ ಹಾಗೂ ಭಾರತವು ತನ್ನ ಸ್ವಾತಂತ್ರ್ಯ ಹಾಗೂ ವೈಭವ ಪೂರಕಿಸುವದಕ್ಕಾಗಿ ಪ್ರಸಂಗ ಬಂದರೆ ನಾನು ನಿಶ್ಚಯವಾಗಿ ಪ್ರಾಣ ಕೊಡುವೆನು.

—ಸುಭಾಷಚಂದ್ರ ಬೋಸ

ಹೊಸಪೇಟೆ ಡಿಸ್ಟ್ರಿಕ್ಟ್ ಮುನ್ಸಿಫರ ಕೋರ್ಟಿನಲ್ಲಿ

O. S. No. 41/50

S. ಶ್ರೀನಿವಾಸ — ವಾದಿ
ಮತ್ತು
ಕರ್ಣಂ ವೆಂಕೋಬರಾವು — ಪ್ರತಿವಾದಿ

ಪ್ರತಿವಾದಿಗೆ ನೋಟೀಸು

ಮೇಲಿನ ನಂಬರಿನಲ್ಲಿ ವಾದಿಯು ಪ್ರತಿವಾದಿಯಮೇಲೆ ಪ್ರೊನೋಟು ಬಾಬತು ಬಾಕಿಗಾಗಿ ರೂ. 871-12-0 ಗಳಿಗೆ ದಾವೆ ಮಾಡಿ ಯಿರುತ್ತಾರೆ. ಸದ್ರಿ ದಾವೆ 14-7-50 ಕ್ಕೆ ವಾಯಿದೆ ಹಾಕಿರುತ್ತಾರೆ ಸದ್ರಿ ತಾರೀಖು 14-7-50 ಹಗಲು 11 ಘಂಟೆಗೆ ಪ್ರತಿವಾದಿಯು ಕೋರ್ಟಿಗೆ ಹಾಜರಾಗದಿದ್ದಲ್ಲಿ ಸದ್ರಿಯವರ ಪರೋಕ್ಷದಲ್ಲಿ ದಾವೆ ತೀರ್ಮಾನಿಸಲ್ಪಡುವುದು.

ಹೊಸಪೇಟೆ
26-6-50

ಆ. ನಟೇಶ
ಮೊದಲಿಯೂರು

ಸತ್ಪ್ರಯತ್ನ

ಹಳ್ಳಿಗಳಿಗೆ ಟಪಾಲು ಸರಿಯಾಗಿ ಮುಟ್ಟುವದಿಲ್ಲ

ಪೋಷ್ಟು ಇಲಾಖೆಯವರಿಗೆ ಅತಿಯಾಗಿ ಸಂಬಳ ಹೆಚ್ಚಿಸಿದರು. ವಿಲೇಜ್ ಪೋಷ್ಟಮ್ಯಾನ್ ಇವರಿಗೆ ತಿಂಗಳಿಗೆ ೭೦ ರೂ. ಗಿಂತಲೂ ಹೆಚ್ಚಿನ ಸಂಬಳವಿದೆ. ಕೆಲಸ ಹೆಚ್ಚಾಗಿ ಬಾಧ್ಯತೆಯು ಮುಖ್ಯವಿದ್ದಕಾರಣ ಈ ಕುಟ್ಟಿಯಕಾಲದಲ್ಲಿ ಇವರ ಸಂಬಳ ಹೆಚ್ಚಿಸಿದ್ದು ನ್ಯಾಯವೂ ಉಚಿತವೂ ಆಯ್ತೆಂದು ಜನರು ಭಾವಿಸಿದರು. ಆದರೆ ಇವರ ಸಂಬಳ ಅರ್ಧವಿದ್ದಾಗ ಇವರೆಷ್ಟು ಔದಾಸೀನ್ಯ ಸಹಿಸಿದ್ದರೋ ಅಷ್ಟೇ ಈಗಲೂ ಇದೆ. ತಮಗೆ ಬಂದ ಮುಖ್ಯ ಉತ್ತರಗಳನ್ನು ಸಂತೆಗಳಲ್ಲಿ ಹಂಚುವುದು ಅಥವಾ ತಮ್ಮ ಮನೆಯಿಂದಲೇ ಬಟವಾಡೆ ಮಾಡುವುದು ವರಿವಾಟವಾಗಿದೆ. ಎರಡು ಮೂರು ವಾರ ತಡವಾದರೆ ಕಾಗದಗಳನ್ನು ಹರಿದು ಹಾಕಿಬಿಡುವರು. ಮೂಲೆಯ ಹಳ್ಳಿಗಳಿಗೆ ಪ್ರಪಂಚದ ಸುದ್ದಿಯೇ ತಿಳಿಯುವಂತಿಲ್ಲ.

ಕವುತಾಳದ ಪೋಷ್ಟಮ್ಯಾನ್ ಸಿರುಗುಪ್ಪ ಸಮೀಪದವರಿಗೂ ಬರಬೇಕು. ಸಿರುಗುಪ್ಪ ತಾಲೂಕು ಪೋಷ್ಟು ಆಫೀಸ್ ಮುಖ್ಯವಿದ್ದರೂ ಅಲ್ಲಿ V. P. M ಇಲ್ಲ ಸಿರುಗುಪ್ಪೆಯಲ್ಲಿ ಮಾತ್ರ ಬ್ಯು V. P. M ನ್ನು ನಿಯಮಿಸುವದರಿಂದ ಕಾತಾಳದ V P. M. ಗೆ ಕೆಲಸ ಕಡಿಮೆಯಾದೀತು ಹಳ್ಳಿಗಳು ಡಿಮೆ ಯಾದಾವು. ಆಗ ಅವನಮೇಲೆ ಕಂಪ್ಲೇಂಟು ಕೊಟ್ಟರೂ ಸಾರ್ಥಕ ವಾದೀತು ಒಂದು ವಾರಕ್ಕೆ ೬೪ ಹಳ್ಳಿಗಳನ್ನು ಸುತ್ತಿ ಬರುವದೆಂದರೆ ಅಸಾಧ್ಯವಾದ ಮಾತು ಇದು ಸಂಭವನೀಯವೇ ಅಲ್ಲ. ಹರವನಹಳ್ಳಿ ತಾಲೂಕು ತೆಲಿಗಿ ಫಿರ್ಕಾದಲ್ಲೂಕೂಡ ಇದೇ ಹಣೆಯ ಬರಹವಿದೆ. ಕೂಡ್ಲಿಗಿ ತಾಲೂಕು ಹೊಸಹಳ್ಳಿ ಫಿರ್ಕಾದಲ್ಲೂಕೂಡ ಎಲ್ಲಾ ಹಳ್ಳಿಗಳಿಗೆ ಟಪಾಲು ಮುಟ್ಟುವ ಸೌಕರ್ಯವಿಲ್ಲ. ಎಲ್ಲೆಲ್ಲಿ ಬೇಡಿಕೆಯಿಂಟೋ ಅಲ್ಲಿ ಟಪಾಲು ಆಫೀಸು ಸ್ಥಾಪಿಸಬೇಕು. ಒಂದು ದಿನಕ್ಕೆ ೪ ಹಳ್ಳಿಗಳಂತೆ ವಾರದೊಳಗಾಗಿ ೩೦ ಹಳ್ಳಿಗಳನ್ನು ಮುಗಿಸುವ ಏರ್ಪಾಟು ಪ್ರತಿಯೊಬ್ಬ ವಿಲೇಜ್ ಪೋಸ್ಟುಮ್ಯಾನ್‌ಗಿರುವಂತೆ ಏರ್ಪಡಿಸಬೇಕು. ಎಲ್ಲಿಂದಲಾದರೂ ಟಪಾಲು ಮುಟ್ಟುವಲ್ಲಿಲ್ಲವೆಂಬ ಕಂಪ್ಲೇಂಟ್ ಬಂದರೆ ಕಡ್ಡಾಯ ವಿಚಾರಿಸಿ ತಪ್ಪಿಸ್ಥರಿಗೆ ಶಿಕ್ಷೆ ವಿಧಿಸಬೇಕು.

ಪೋಸ್ಟಲ್ ಡಿಪಾರ್ಟ್‌ಮೆಂಟಿನವರು ಈ ದಿಶೆಯಲ್ಲಿ ಸಾಕಷ್ಟು ಧ್ಯಾನವನ್ನು ಕೊಟ್ಟು ಈ ಅವ್ಯವಸ್ಥೆಯನ್ನು ಸರಿಪಡಿಸುವರೆಂದು ನಂಬುತ್ತೇನೆ.

"ಜಿಲ್ಲಾಸಂಚಾರಿ"

112

ವನಸ್ಪತಿ ಎಣ್ಣೆ-ತುಪ್ಪಗಳು

★ ಅವುಗಳನ್ನು ಪ್ರತಿಬಂಧಿಸುವ ಕಾಯ್ದೆ ★

(ಗೋಸೇವಾ ಸಂಘ, ಗೋಪುರಿ, ವರ್ಧಾ ಈ ಸಂಸ್ಥೆಯವರು ಪ್ರಕಟನೆಗಾಗಿ ಕಳಹಿಸಿದ್ದಾರೆ. ಇದರ ಲೇಖಕರು ಶ್ರೀ ಕೆ. ಟಿ. ಮಶ್ರೂವಾಲಾರವರು. ಮತ್ತು ಶ್ರೀ ಮಶ್ರೂವಾಲಾರವರ ಈ ಲೇಖನದಲ್ಲಿ ಅಭಿಪ್ರಾಯಕ್ಕೆ ಶ್ರೀ. ವಿನೋಬಾಜಿ ಯವರು ತಮ್ಮ ಅನುಮೋದನೆಯನ್ನಿತ್ತಿದ್ದಾರೆ. —ಸಂಪಾದಕ

ಪಂಡಿತ ಠಾಕೂರದಾಸ ಭಾರ್ಗವ ಇವರು ಮಧ್ಯ ವಿಧಿ ಮಂಡಳದಲ್ಲಿ ಒಂದು ಸೂಚನೆಯನ್ನು ತಂದಿದ್ದು ಅದು ವನಸ್ಪತಿ ಎಣ್ಣೆ ತುಪ್ಪಗಳ ನಿರ್ಮಾಣವನ್ನು ಮತ್ತು ಮಾರಾಟವನ್ನು ಪ್ರತಿಬಂಧಿಸಬೇಕೆಂದು ಸೂಚಿಸುತ್ತದೆ. ಈ ಸೂಚನೆಯು ಸ್ವೀಕೃತವಾಗಿ ಅದು ಕಾಯಿದೆಯ ಸ್ವರೂಪವನ್ನು ತಾಳದಲ್ಲಿ ವನಸ್ಪತಿ ಎಣ್ಣೆ ತುಪ್ಪಗಳನ್ನು (ಹ್ಯಾಡ್ರೋಜಿನೇಟೆಡ್ ಆಯಿಲ್ಸ್) ಸಿದ್ಧಮಾಡುವ ಕಾರಖಾನೆಗಳು ಮುಚ್ಚಲ್ಪಡಬೇಕಾಗುವುದು. ಮತ್ತು ಇಂತಹ ಎಣ್ಣೆ ತುಪ್ಪಗಳನ್ನು ಪರದೇಶದಿಂದ ತರಿಸುವದು ನಿಲ್ಲಿಸಲ್ಪಡುವದು. ಈ ವಿಷಯದಲ್ಲಿ ಸರಕಾರವು ಜನತೆಯ ಅಭಿಪ್ರಾಯಗಳನ್ನು ಕೂಡಿಸಲು ಪ್ರಕಟನೆಯನ್ನು ಕೊಟ್ಟಿದ್ದು ಅಂತಹ ಅಭಿಪ್ರಾಯಗಳನ್ನು ಬರುವ ಆಗಸ್ಟ ತಿಂಗಳ ೩೧ ನೇ ತಾರೀಖಿನೊಳಗಾಗಿ ಕಳುಹಿಸಬೇಕೆಂದು ಹೇಳಲಾಗಿದೆ.

ಲಾಭದಾಯಕ ವ್ಯವಸಾಯ

ಕಳೆದ ಕೆಲವು ವರ್ಷಗಳಲ್ಲಿ ವನಸ್ಪತಿ ಎಣ್ಣೆ ತುಪ್ಪಗಳು ನಮ್ಮ ದೇಶದ ಪೇಟೆಯಲ್ಲಿ ಒಳ್ಳೇ ಪ್ರಾಮುಖ್ಯತೆಯನ್ನು ಸಂಪಾದಿಸಿವೆ. ಈ ವ್ಯವಸಾಯವು ಬಹಳ ಲಾಭದಾಯಕವಾದದ್ದು. ಅದು ಭರದಿಂದ ಬೆಳೆಯುತ್ತಿದೆ. ಈ ವಸ್ತುಗಳ ಪ್ರಕಟನೆಗಳ ಮೇಲೆ ಲಕ್ಷಾಂತರ ರೂಪಾಯಿ ವೆಚ್ಚಮಾಡುತ್ತಿದ್ದಾರೆ. ಮತ್ತು ಈ ವಿಷಯದಲ್ಲಿ ಅನುಕೂಲ ಅಭಿಪ್ರಾಯಗಳು ಸರಕಾರಕ್ಕೆ ಮುಟ್ಟಬೇಕೆಂಬ ಬಗ್ಗೆಯೂ ಆ ವ್ಯವಸಾಯಗಾರರು ವಿಶ್ವಪ್ರಯತ್ನ ನಡೆಸಿದ್ದಾರೆ.

ಆದರೆ ಈ ವಸ್ತುಗಳು ಜನತೆಗೆ ಅನೇಕ ವಿಧದ ಹಾನಿಯನ್ನು ಉಂಟು ಮಾಡಿವೆ. ಒಕ್ಕಲುತನ ಮತ್ತು ಎಣ್ಣೆ ವ್ಯವಸಾಯವನ್ನು ಹಾನಿಗೊಳಿಸಿವೆ. ವನಸ್ಪತಿ ಎಣ್ಣೆ ತುಪ್ಪಗಳಲ್ಲಿ ಆರೋಗ್ಯಕ್ಕೆ ಅನುಕೂಲವಾದಂತೆ ಹೆಚ್ಚಿನ ತತ್ವವೇನೂ ಇಲ್ಲ. ತಮ್ಮ ಆಕರ್ಷಕ ಸ್ವರೂಪದಿಂದ ಈ ವಸ್ತುಗಳು ಜನತೆಯನ್ನು ಅವಶ್ಯಕ ವೆಚ್ಚಕ್ಕೆ ಮತ್ತು ಅತ್ಯ ವಂಚನೆಗೆ ಗುರಿಮಾಡಿವೆ. ಶುದ್ಧ ಎಣ್ಣೆ ತುಪ್ಪಗಳನ್ನು ಇವುಗಳ ಮೂಲಕ ಜನರು ತ್ಯಜಿಸುವಂತಾಗಿದೆ. ವನಸ್ಪತಿ ಎಣ್ಣೆ ತುಪ್ಪಗಳ ಹಾನಿಯಿಂದ ನಮ್ಮ ದೇಶದ ಔದ್ಯೋಗಿಕ ಸ್ಥಿತಿಕಮಟ್ಟವು ಧಕ್ಕೆಗೊಂಡಿದೆ

ತುಪ್ಪದ ಸ್ಥಳದಲ್ಲಿ ಎಷ್ಟೋ ಜನರು ಈ ಎಣ್ಣೆಯನ್ನು ತೆಗೆದುಕೊಳ್ಳುತ್ತಿದ್ದಾರೆ. ಇಲ್ಲದಿದ್ದರೆ ಅವರು ಮಿಶ್ರತತುಪ್ಪ ಅಥವಾ ಎಣ್ಣೆಯನ್ನು ತೆಗೆದುಕೊಳ್ಳಬೇಕಾಗಿದೆ. ಅದರಿಂದ ದುಡ್ಡು, ಆರೋಗ್ಯಗಳನ್ನು ಅವರು ಕಳೆದುಕೊಳ್ಳುತ್ತಿದ್ದಾರೆ.

ಭಿನ್ನಾಭಿಪ್ರಾಯ

ಶ್ರೀ ಭಾರ್ಗವ ಇವರು ತಂದ ಸೂಚನೆಯ ಭವಿಷ್ಯವು ಏನಾಗುವದೆಂಬುದನ್ನು ಹೇಳುವದು ಕಠಿಣವಿದೆ. ದೇಶದಲ್ಲಿ ಈ ವಿಷಯದಲ್ಲಿ ಭಿನ್ನಾಭಿಪ್ರಾಯಗಳಿವೆ. ಕೆಲವರು ವನಸ್ಪತಿ ತುಪ್ಪದ ವಿರುದ್ಧರಿದ್ದಾರೆ. ಕೆಲವರು ಅನುಕೂಲರಿದ್ದಾರೆ. ಅನೇಕರು ಕಟಸ್ಥರಾಗಿವ್ವಾರೆ. ಕೆಲವು ಪ್ರಾಂತಿಕ ಸರಕಾರಗಳ ಅಭಿಪ್ರಾಯಗಳು ಮತ್ತು ಅವೇಪ್ರಾಂತದ ಮಂತ್ರಿಗಳು ಇವರ ಅಭಿಪ್ರಾಯಗಳಲ್ಲಿ ತಾಳಮೇಳವಿಲ್ಲ. ಡಾ ಗಿಲ್ಡರರು "ನಾನು ಸ್ವತಃ ಎಣ್ಣೆ ತುಪ್ಪಗಳನ್ನು ಉಪಯೋಗ ಮಾಡಿದ್ದೇನೆ. ಅದರಿಂದ ನನ್ನ ಆರೋಗ್ಯದ ಮೇಲೆ ಏನೂ ದುಷ್ಪರಿಣಾಮವಾಗಿಲ್ಲ" ಎಂದು ಒಮ್ಮೆ ಹೇಳಿದ್ದಾರೆ. ಇಂತಹ ಅಭಿಪ್ರಾಯಗಳ ತಳಹದಿಯ ಮೇಲೆ ಈ ವಸ್ತುಗಳ ಉತ್ಪಾದಕರು ಭವ್ಯ ಕೋಟೆಗಳನ್ನೇ ಕಟ್ಟಹತ್ತಿದ್ದಾರೆ. ಅದರಂತೆಯೇ ಶ್ರೀ ಎಸ್. ಏಸ್. ಭಾಟನಗರ ಇವರು "ವನಸ್ಪತಿ ಎಣ್ಣೆ ತುಪ್ಪಗಳಿಗೆ ಸ್ಪಷ್ಟ ಸ್ವರೂಪಗಳನ್ನು ಕೊಡಲು ಬಣ್ಣ ಹಾಕಬೇಕೆಂಬುದು ಸರಿಯಾಗಿದ್ದರೂ ಆ ಕ್ರಮವು ವ್ಯಾಪಾರದಮೇಲೆ ಬಹಳ ದುಷ್ಪರಿಣಾಮವನ್ನು ಮಾಡುತ್ತದೆ" ಎಂದು ದಾಗಿ ಆಕಾಶವಾಣಿಯ ದ್ವಾರಾ ಹೇಳಿಬಿಟ್ಟರು. ಇಂತಹ ಭಿನ್ನ ಭಿನ್ನ ಅಭಿಪ್ರಾಯಗಳಿಂದ ಸಾರ್ವಜನಿಕರ ಮೇಲೆ ಸಂಶಯಗ್ರಸ್ತ ವಾತಾವರಣವನ್ನು ಹೇರಿದಂತೆ ಆಗಿದೆ. ಮತ್ತು ವನಸ್ಪತಿ ಉದ್ಯೋಗಸ್ಥರು ಜನರನ್ನು ತಮ್ಮ ಕಡೆಗೆ ಎಳೆದುಕೊಳ್ಳುವುದಕ್ಕಾಗಿ "ವನಸ್ಪತಿ ಎಣ್ಣೆ ತುಪ್ಪಗಳು ಪುಷ್ಟಿಕರವೂ ಮತ್ತು ಆರೋಗ್ಯಕರವೂ ಆಗಿವೆ ಎಂಬುದು ಸಿದ್ಧವಾಯಿತು. ಅವು ಮನುಷ್ಯನ ಜೀವನಕ್ಕೆ ಅವಶ್ಯವಾದವುಗಳೆಂದು ಮನವರಿಕೆಯಾಗಿದೆ. ವನಸ್ಪತಿ ಸಿದ್ಧತೆಗಳ ವಿರುದ್ಧ ನಿದ್ದವರು ಶ್ರೀಮಂತರ ಸ್ನೇಹಿತರೂ ಬಡಪರ ವೈರಿಗಳೂ ಆಗಿದ್ದಾರೆ" ಎಂದಿವೇ ಮೊದಲಾಗಿ ತಮ್ಮ ಪ್ರಕಟನೆಗಳಲ್ಲಿ ಸಾರಹತ್ತಿದ್ದಾರೆ.

ತುಲನಾತ್ಮಕ ಪರೀಕ್ಷೆ

ವನಸ್ಪತಿ ತುಪ್ಪ ಅಥವಾ ಎಣ್ಣೆಯು ೩೭ಸಿ. ಕರಗುವ ಸ್ಥಿತಿಯಲ್ಲಿ ಸಿದ್ಧವಾದದ್ದಿದ್ದರೆ, ಕಚ್ಚಾ ಸೇಂಗಾ ಎಣ್ಣೆಯ ಪರಿಣಾಮವನ್ನು ಅದು ಕೊಡುತ್ತದೆ. ಆದರೆ ತುಪ್ಪ ಇಲ್ಲವೆ ಇತರ ಎಣ್ಣೆಗಳೊಡನೆ ಅದನ್ನು ಹೋಲಿಸಲು ಬರುವದಿಲ್ಲ. ಶುದ್ಧ ಸೇಂಗಾ ಎಣ್ಣೆಯೊಡನೆ ಅದನ್ನು ಹೋಲಿಸಿ ನೋಡಿದರೆ ಏನಾಗುತ್ತದೆಂಬುದು ನೋಡಲ್ಪಟ್ಟಿಲ್ಲ.

ಇಲಿಗಳ ಮೇಲೆ ಅವ್ಯಾಹತವಾಗಿ ಮೂರು ಸೀಳಿಗೆಯ ಮೇಲೆ ಸೇಂಗಾದ ಎಣ್ಣೆ, ಶುದ್ಧ ಸೇಂಗಾದ ಎಣ್ಣೆ, ವನಸ್ಪತಿ ಎಣ್ಣೆಗಳನ್ನು ಪ್ರಯೋಗಿಸಿ ನೋಡಲಾಗಿ ವನಸ್ಪತಿಯ ತುಪ್ಪದಿಂದ ಅವುಗಳಿಗೆ ಮೈಮೇಲೆ ಗಂಟುಗಳೇಳುವುದು [ನೊಡೆಲೆಜೇರಿಯಸ್ ಇಫೆಕ್ಟ್] ಕಂಡು ಬಂದಿತು. ತುಪ್ಪ ಮತ್ತು ಮಿಶ್ರಿತ ತುಪ್ಪ ಇವುಗಳೊಡನೆ ವನಸ್ಪತಿ ಎಣ್ಣೆ ತುಪ್ಪಗಳನ್ನು ಹೋಲಿಸಿ ನೋಡಿದರೋ ಇಲ್ಲವೋ ಎಂಬುದು ತಿಳಿದಿಲ್ಲ. ಕೊಬ್ಬರಿ ಎಣ್ಣೆ ಮೊದಲಾದ ಇತರ ಎಣ್ಣೆಗಳೊಡನೆ ಇರುವ ಅದರ ಹೋಲಿಕೆಯ ವಿವರಗಳೂ ತಿಳಿದು ಬಂದಿಲ್ಲ.

ಏನೇ ಇದ್ದರೂ ವನಸ್ಪತಿ ಎಣ್ಣೆ ತುಪ್ಪಗಳು, ಜನರನ್ನು ತಮ್ಮ ಕಡೆಗೆ ಆಕರ್ಷಿಸುವಂತಹ ಯಾವುವೇ ವೈಶಿಷ್ಟ್ಯಗಳನ್ನು ಪಡೆದಿಲ್ಲವೆಂಬುದನ್ನು ಮಾತ್ರ ಧಾರಾಳವಾಗಿ ಹೇಳಬಹುದಾಗಿದೆ. ಮತ್ತು ತುಪ್ಪದ ಪಾತ್ರವನ್ನು ನಿಭಿಸುವ ಜಂಭ ಬಡಿಯುತ್ತ ಜನರನ್ನು ಹೆಚ್ಚಿನ ವೆಚ್ಚಕ್ಕೆ ಗುರಿಮಾಡುವ ಯೋಗ್ಯತೆಯು ಅವುಗಳಿಗೆ ಇಲ್ಲ ಎಂಬ ಮಾತು ಸ್ಪಷ್ಟವಾಗಿದೆ.

ಈ ಹೊಸ ಉದ್ಯೋಗದಿಂದ ಎಣ್ಣೆ ಕಾರಖಾನೆಗಳ ಸಂಖ್ಯೆಯು ಬೆಳೆದಿದೆ. ವನಸ್ಪತಿ ಎಣ್ಣೆ ತುಪ್ಪಗಳನ್ನು ಸಿದ್ಧಮಾಡುವಾಗ ಉಳಿಯುವ ಕೆಲ ಕಚ್ಚಾ ಎಣ್ಣೆಯ ಭಾಗಗಳನ್ನು ಎಣ್ಣೆ ತುಪ್ಪಗಳಲ್ಲಿ

ಕೂಡಿಸುವುದು ನಡೆದಿರುತ್ತದೆ. ಪೇಟೆಯಲ್ಲಿ ಶುದ್ಧ ಎಣ್ಣೆ ತುಪ್ಪಗಳನ್ನೇ ಉಪಯೋಗಿಸಿ ಬಿಡೋಣ. ಎಂದು ಜನರು ಅನ್ನವಂತಾಗಿದೆ. ಆದ್ದರಿಂದ ವನಸ್ಪತಿ ಸಿದ್ಧತೆಗಳು ಉಳಿದ ಎಲ್ಲ ಎಣ್ಣೆಗಳನ್ನು ಹಿಂದೆ ಹಾಕಿ ಪೇಟೆಯನ್ನು ವ್ಯಾಪಿಸಿವೆ.

ಜನತೆಯ ಕರ್ತವ್ಯ

ಗಾಣದ ಉದ್ಯೋಗವು ಇದರಿಂದ ಹಿಂದೆಬಿದ್ದಿರುವುದರಿಂದ ಹಿಂಡಿಯು ಸುಲಭದಲ್ಲಿ ಸಿಗದಾಗಿದೆ. ಗಿರಣಿಗಳ ಹಿಂಡಿಯು ಕಡಿಮೆ ಸತ್ವವುಳ್ಳದ್ದೂ ಅಶುದ್ಧ ವಸ್ತುಗಳನ್ನು ಒಳಗೊಂಡದ್ದೂ ಇರುತ್ತದೆ. ಮತ್ತು ಅದನ್ನು ಗೊಬ್ಬರಕ್ಕೆ ಉಪಯೋಗಿಸುವದರಿಂದ ಅದು ಪರದೇಶಗಳಿಗೆ ಕೂಡ ಕಳಿಸಲ್ಪಡುತ್ತಿದೆ. ಇದರಿಂದ ದನಗಳ ಆಹಾರಕ್ಕೆ ಧಕ್ಕೆಯುಂಟಾಗಿದೆ. ಗೊಬ್ಬರಕ್ಕಾಗಿ ಈ ಹಿಂಡಿಯು ಎಷ್ಟರಮಟ್ಟಿಗೆ ಉಪಯುಕ್ತವಾಗುವದು ಎಂಬ ಮಾತು ಸಂಶಯಾಸ್ಪದವೇ ಆಗಿದೆ. ಈ ರೀತಿ ವನಸ್ಪತಿ ಎಣ್ಣೆ ತುಪ್ಪಗಳು ನಮ್ಮ ಒಕ್ಕಲುತನ, ಗೋರಕ್ಷಣೆ, ವ್ಯಾಪಾರದಲ್ಲಿಯ ನೀತಿಗಳ ಮಟ್ಟಗಳನ್ನು ಕೆಳಗಿಳಿಸಲು ಕಾರಣವಾಗಿವೆ.

ಈ ಪರಿಸ್ಥಿತಿಯನ್ನು ಅನುಲಕ್ಷಿಸಿ ಜನತೆಯು, ವಿಶೇಷತಃ ವಿಧಾಯಕ ಕಾರ್ಯದ ಸಂಸ್ಥೆಗಳು, ಪಂಚಾಯತಿಗಳು, ವನಸ್ಪತಿ ಎಣ್ಣೆ ತುಪ್ಪಗಳ ವಿಷಯಕವಾದ ತಮ್ಮ ಅಭಿಪ್ರಾಯವನ್ನು, ಸುಧ್ಮವರ್ತಿ ಸರಕಾರದ ಆಹಾರ ಮಂತ್ರಿಗಳು ಮತ್ತು ಹಿರಿಯೋಲಗದ ಅಧ್ಯಕ್ಷರು ಇವರಕಡೆಗೆ ಬರುವ ಆಗಷ್ಟ ತಿಂಗಳ ಒಳಗೇ ತಾರೀಕಿನೊಳಗಾಗಿ ಕಳಿಸಬೇಕು. ನಮ್ಮ ಅಭಿಪ್ರಾಯಕ್ಕೆ ಒಪ್ಪುವವರು ಈ ಕೆಳಗಿನಂತೆ ಬರೆದು ಕಳಿಸಬೇಕು.

"ನಮ್ಮ_____ ಅಭಿಪ್ರಾಯದಲ್ಲಿ ವನಸ್ಪತಿ ಎಣ್ಣೆ ತುಪ್ಪಗಳ ನಿರ್ಮಾಣವನ್ನು ಆದಷ್ಟು ಬೇಗನೆ ಪ್ರತಿಬಂಧಿಸಬೇಕು. ಅದನ್ನು ಮಾಡುವವರಿಗೆ ಅಂತಹ ಎಣ್ಣೆ ತುಪ್ಪಗಳಿಗೆ ಬಣ್ಣ ಹಾಕಿ, ಅವುಗಳನ್ನು ಶುದ್ಧ ತುಪ್ಪದೊಡನೆ ಮಿಶ್ರಮಾಡಲು ಬರದಂತೆ ಮಾಡಬೇಕು."

ಮತ್ತು ಈ ಗೊತ್ತುವಳಿ ಅಥವಾ ಅಭಿಪ್ರಾಯದ ಒಂದು ಪ್ರತಿಯನ್ನು ಕಾರ್ಯದರ್ಶಿ ಗೋಸೇವಾ ಸಂಘ, ಗೋವುರಿ, ವರ್ಧಾ ಇವರ ಕಡೆಗೆ ಕಳಿಸಲೂ ಮರೆಯಬಾರದು.

ಕಮ್ಯುನಿಝಮ್‌ದ ಭವಿತವ್ಯ

ಕಮ್ಯುನಿಝಮ್ ತತ್ವತಃ, ಅದರ ತಾತ್ವಿಕ ದೃಷ್ಟಿಯಿಂದ ಎಷ್ಟೇ ಮಹತ್ವದ್ದಾಗಿದ್ದರೂ ಅದನ್ನು ಕಾರ್ಯದಲ್ಲಿ ಇಳಿಸಲು ಹೊರಟವರಿಂದ ಹಿಂದೆ ಬೀಳುತ್ತಿದೆ ಎಂದು ವ್ಯಸನದಿಂದ ಹೇಳಬೇಕಾಗಿದೆ. ಮಾರ್ಕ್ಸನು ಅತ್ಯಂತ ಉದಾತ್ತವಾದ ಆಡಳಿತದ ಮಾದರಿಯನ್ನು, ತಾನು ಕಂಡ ಶೋಷಣಾಮಯ ಪರಿಸ್ಥಿತಿಯ ನಿವಾರಣಾರ್ಥವಾಗಿ ಜಗತ್ತಿನ ಮುಂದೆ ಇಟ್ಟನು. ಮಾನವಕೋಟಿಗೆ ಅದರಿಂದ ಕಲ್ಯಾಣವಾಗಲಿ ಎಂದು ಅವನು ಬಯಸಿದನು.

ಆದರೆ ಇಂದು ಈ ತತ್ವವು ಜಗತ್ತನ್ನು ಎರಡು ಹೋಳುಗಳನ್ನಾಗಿ ಮಾಡಲು ಕಾರಣವಾಯಿತು. ಮತ್ತು ಕಮ್ಯುನಿಝಮ್ ಎಂಬ ಶಬ್ದವು ಉಚ್ಚರಿಸಲ್ಪಟ್ಟಕೂಡಲೆ 'ರಶಿಯಾ' ಎನ್ನುವಂತಹ ಸಾತಾವರಣವು ಹುಟ್ಟಿದೆ. ಇದಕ್ಕೆ ರಶಿಯಾ, ಆ ತತ್ವವನ್ನು ಮುಂದೂಡಲು ಯೋಜಿಸಿದ ಸೂತ್ರಗಳೇ ಕಾರಣವೆಂಬುದನ್ನು ಹೇಳದೆ ಗತ್ಯಂತರವಿಲ್ಲ.

ಅಮೇರಿಕೆಯ ಗುಂಪು ಕಮ್ಯುನಿಝಮ್ಮನ್ನು ಹಿಂದೆಹಾಕಲು ವಿಶ್ವ ಪ್ರಯತ್ನ ಮಾಡುತ್ತಿದೆ. ಅದರ ಪ್ರಯತ್ನಕ್ಕೆ ಯಶಸ್ಸು ಬರುತ್ತಿದೆ ಎನ್ನುವದಕ್ಕಿಂತ ಕಮ್ಯುನಿಷ್ಟರು ಜಗತ್ತಿನಲ್ಲಿ ಇಂದು ಗಳಿಸಿಕೊಂಡಿರುವ ಅಪ್ರಿಯತೆಯೇ ಅವರ ಶಕ್ತಿಯನ್ನು ಕಡಿಮೆ ಮಾಡುತ್ತಿದೆಯೆಂದು ಹೇಳುವುದು ಹೆಚ್ಚು ಕ್ರಮಪ್ರಾಪ್ತವಾಗುವುದು.

ಪಂ. ಜವಾಹರಲಾಲರು ಮಂಡಯಾದಲ್ಲಿ ಮಾಡಿದ ಒಂದು ಭಾಷಣದ ಕಾಲಕ್ಕೆ "ರಶಿಯಾದ ಕಮ್ಯೂನಿಷ್ಟರ ಘೋರಣ ಮತ್ತು ಮುಖಂಡತ್ವವು ಸದ್ಯದಲ್ಲಿಯೇ ವ್ಯತ್ಯಾಸಗೊಳ್ಳಬಹುದು. ಭಾರತದ ಕಮ್ಯೂನಿಷ್ಟರ ಕಾರ್ಯಪದ್ಧತಿಯಿಂದ ಆ ಪಕ್ಷಕ್ಕೇ ಹಾನಿಯಾಗಿದೆ, ಮತ್ತು ಅವರು ದಿನೇ ದಿನೇ ಜನಬೆಂಬಲವನ್ನು ಕಳೆದು ಕೊಳ್ಳುತ್ತಿದ್ದಾರೆ" ಎಂದು ಹೇಳಿದ್ದು ಅಕ್ಷರಶಃ ನಿಜವಿದೆ. ಮತ್ತು ದಕ್ಷಿಣ ಆಫ್ರಿಕೆಯಲ್ಲಿ ಕಮ್ಯೂನಿಷ್ಟರನ್ನು ಹತ್ತಿಕ್ಕುವ ಕಾಯಿದೆಯು ಸ್ವೀಕೃತವಾಗುವ ಮೊದಲೇ ಅಲ್ಲಿಯ ಕಮ್ಯೂನಿಷ್ಟ ಪಕ್ಷವು ವಿಸರ್ಜಿಸಲ್ಪಟ್ಟಿತಂತೆ.

ಭಾರತದ ಕಮ್ಯೂನಿಸ್ಟರಲ್ಲಿ ಒಡಕು ಹುಟ್ಟುವ ವಿಷಯವು ಬೈಲಿಗೆ ಬಂದೇ ಹೋಗಿದೆ. ಅವರ ಮುಖಂಡರು ಒಬ್ಬರಮೇಲೊಬ್ಬರು ದೋಷಾರೋಪಣೆ ಮಾಡುತ್ತಿದ್ದಾರೆ. ಹೀಗಾಗುವದಕ್ಕೆ ಅವರ ಕಾರ್ಯವು ಹಿಂದೆಬೀಳುತ್ತಿರುವುದೇ ಮುಖ್ಯಕಾರಣವಾಗಿದೆ. ಅಪಯಶಸ್ಸು ಬರುತ್ತಿರುವಾಗ್ಗೆ ಹೀಗೆ ಒಡಕು ಹುಟ್ಟುವುದು ಸ್ವಾಭಾವಿಕವಾಗಿದೆ.

ನಿಶ್ಚಿತವಾದ ಧ್ಯೇಯ, ಘೋರಣ, ಕಾರ್ಯಕ್ರಮ ಮತ್ತು ಅದರಿಂದ ದೊರೆಯುವ ಫಲದ ಮನವರಿಕೆ ಇವು ಇಲ್ಲದ ಕಾರ್ಯದ ಪರ್ಯವಸಾನವು ಇದೇರೀತಿಯಲ್ಲಾಗುವುದು ಕಟ್ಟಿಟ್ಟದ್ದು. ಕಮ್ಯೂನಿಸ್ಟರು ಅನೇಕ ವರ್ಷಗಳಿಂದ ಭಾರತದಲ್ಲಿ ಕೆಲಸಮಾಡುತ್ತಿದ್ದಾರೆ, ಜನತೆಯ ಬೇರೆ ಬೇರೆ ಗುಂಪುಗಳನ್ನು ಸಂಘಟಿಸಿದುಡಿದರು. ಆದರೆ ಕೆಲವು ದಿವಸಗಳ ನಂತರ ಆ ಗುಂಪುಗಳು ಅವರಿಗೆ ಬೇಸತ್ತವೇ ಹೋದರು ಅವರಿಂದ ಎಳ್ಳಷ್ಟು ಲಾಭಪಡೆಯಲಿಲ್ಲ. ಅಂದಮೇಲೆ ಅವರಿಗೆ ಬೆಂಬಲವು ದೊರೆಯುವುದೆಂತು? ಮತ್ತು ಅವರ ತತ್ವದ ಪ್ರಸಾರವಾಗುವುದು ಹೇಗೆ?

ಸಾಲದ್ದಕ್ಕೆ ಅವರು ರಶಿಯಾದ ಕಡೆಗೆ ನೋಡುತ್ತಿದ್ದಾರೆ. ಮತ್ತು ಅಲ್ಲಿಂದಲೇ ಮಾರ್ಗದರ್ಶನ ಪಡೆಯುತ್ತಿದ್ದಾರೆ. ಜಾಗತಿಕ ರಾಜಕಾರಣದಲ್ಲಿ ರಶಿಯಾದ ಸ್ಥಾನವು ನಿಶ್ಚಿತವಾಗದಿರುವಾಗ ಇವರಿಗೆ ಒಂದು ಸ್ಥಾನ ದೊರೆಯುವುದು ಹೇಗೆ? ರಶಿಯಾ, ಎಲ್ಲೆಡೆಗೆ ಗೊಂದಲವನ್ನೆಬ್ಬಿಸುವ ಘೋರಣೆಯನ್ನಿಟ್ಟುಕೊಂಡಿದೆ. ಅದೇ ಈ ಕಮ್ಯೂನಿಸ್ಟರದೂ ಧ್ಯೇಯ. ಗೊಂದಲವು ಯಾವ ರೀತಿಯಿಂದ ಶಾಂತವಾಗಬೇಳು? ಅದಕ್ಕೆ ಅವರಲ್ಲಿ ಉಪಾಯವಿಲ್ಲ. ಕೇವಲ ಗೊಂದಲವನ್ನೆಬ್ಬಿಸುವವರಿಗೆ ಜನಬೆಂಬಲವು ದೊರೆಯುವುದೆಂತು?

ಹೀಗಾಗಿ ಕಮ್ಯೂನಿಸ್ಟರ ಬಲವು ಜಗತ್ತಿನಲ್ಲಿ ಇಂದು ಕುಗ್ಗಹತ್ತಿದೆ. ಇನ್ನು ಹಲಕೆಲವು ಪ್ರದೇಶಗಳಲ್ಲಿ ಅಲ್ಲಿಂಯ ವಿಪರೀತ ಪರಿಸ್ಥಿತಿಯ ನೂಲಕ ಇವರ ಪ್ರವೇಶವಾಗಿದೆ. ಅಂದ ಮಾತ್ರಕ್ಕೆ ಅವರ ಕಾಲುಗಳು ಅಲ್ಲಿ ಸ್ಥಿರವಾದವು ಎಂದು ಅವರು ತಿಳಿದುಕೊಳ್ಳಕೂಡದು. ಅವರ ದೈನಂದಿನ ಆಡಳಿತವು ಜನತೆಗೆ ನೆಮ್ಮದಿಯನ್ನು ಕೊಡುವಂಥದು ಆಗಿರಬೇಕು. ಅದಿಲ್ಲದ ಕಮ್ಯೂನಿಝಮ್ ಎಂದೂ ವಿಸ್ತಾರಗೊಳ್ಳಲಾರದು.

[ಜಯಹಿಂದ್]

ಬಿತ್ತುವ ಕಳೆ ತೆಗೆಯುವ

ಸಲಕರಣೆಗಳು

ಲೇಖಕ :— ಶ್ರೀ ವಿ. ಕೆ. ನಗರಕರ.

"ಆಧುನಿಕ ಶಾಸ್ತ್ರೀಯ ಜ್ಞಾನದ ಬಳಕೆ ಹೊಸ ಹೊಸ ಮಾದರಿಯ ಯಂತ್ರೋಪಕರಣಗಳ ಉಪಯೋಗ. ಇವುಗಳಿಂದ ಇಂದಿನ ಒಕ್ಕಲಿಗನಿಗೆ ಆಗುವ ಲಾಭ ಅಷ್ಟಿಷ್ಟಲ್ಲ. ಹಿಂದಿನ ಕಾಲದ ರೋಮನ್ ಒಕ್ಕಲಿಗನು ವಾರದಲ್ಲಿ ಆರುದಿನ, ದಿನಕ್ಕೆ ಹತ್ತು ತಾಸಿನಂತೆ, ಎಪ್ಪತ್ತು ವರುಷಗಳ ವರೆಗೆ ಶ್ರಮಬಟ್ಟು ಬೆಳೆಯಬಹುದಾದಷ್ಟು ಗೋದಿಯನ್ನು ಈ ನೂತನ ಸಲಕರಣೆಗಳಿಂದ ಇಂದಿನ ಒಕ್ಕಲಿಗನು ಕೇವಲ ಮೂರುತಿಂಗಳ ಪರಿಶ್ರಮ ಬಟ್ಟು ಬೆಳೆಯಬಲ್ಲನು".

ಒಕ್ಕಲತನದಲ್ಲಿ ಬಿತ್ತುವದು, ಕಳೆ ತೆಗೆಯುವದು ಹಾಗೂ ಕೊಯ್ಯುವದು ಈ ಮೂರು ಮುಖ್ಯವಾದ ಕೆಲಸಗಳಾಗಿವೆ. ಅಷ್ಟೇ ಕಠಿಣವಾದವೂ ಅಹುದು. ಇವುಗಳಲ್ಲದೆ ಭಾರತದಲ್ಲಿ ಮಳೆಗಾಲದ ಅನಿಶ್ಚಿತತೆಯೊಂದು ಒಕ್ಕಲತನಕ್ಕೆ ಕಾತ್ತಾಗಿದೆ. ರಾತ್ರಿಯ ಆಗುಹೋಗುಗಳು ಈ ಮಳೆಗಾಲದ ಲಹರಿಯ ಮೇಲೆಯೆ ಅವಲಂಬಿಸಿವೆ. ಆದ್ದರಿಂದ ಬಿತ್ತುವ ಹಾಗು ಕಳೆತೆಗೆಯುವ ಕೆಲಸವು ಹೊತ್ತಿಗೆ ಸರಿಯಾಗಿ ಆಗಲೇಬೇಕು. ಆದರೆ ಒಕ್ಕಲತನದಲ್ಲಿ ಅಳುಹೋಳುಗಳ ಕೊರತೆಯಿದೆ. ಹೀಗಿರುವದರಿಂದ ಹೊತ್ತಿಗೆ ಸರಿಯಾಗಿ ಈ ಕೆಲಸಗಳನ್ನು ಪೂರೈಸುವದು ಅಸಾಧ್ಯವಾಗುತ್ತಿದೆ. ಹೆಚ್ಚು ಕೂಲಿಕೊಟ್ಟು ಅಳುಹೋಳುಗಳನ್ನು ಆ ಸಮಯಕ್ಕೆ ದೂರ ದೂರದ ಸ್ಥಳಗಳಿಂದ ಒದಗಿಸಿಕೊಳ್ಳಬೇಕಾಗುತ್ತದೆ. ಇಂಥ ಪರಿಸ್ಥಿತಿಯಲ್ಲಿ ಬಿತ್ತುವ, ಕಳೆತೆಗೆಯುವ ಹಾಗು ಕೊಯ್ಯುವ ಕೆಲಸಕ್ಕೆ ಉಪಯೋಗವಾಗುವಂಥ ಹಾಗು ಶ್ರಮವುಳಿಸುವಂಥ ಸಾಧನ ಸಲಕರಣೆಗಳ ಬಗ್ಗೆ ದೇಶದಲ್ಲೆಲ್ಲ ಒಕ್ಕಲಿಗರು ಉತ್ಸಾಹ ತೋರಿಸುತ್ತಿರುವದು ಆಶ್ಚರ್ಯವಲ್ಲ.

ವಿವಿಧ ಒಕ್ಕಲತನ ಪದ್ಧತಿಗಳು

ಭಾರತದಲ್ಲಿ ಅನೇಕ ಭಾಷೆಗಳಿವೆಂದು ಹೇಳಲಾಗುತ್ತಿದೆ. ಕೇವಲ ಭಾಷೆಗಳಷ್ಟೇ ಏಕೆ ಇಲ್ಲಿಯ ಭೂಗುಣವೂ ಅನೇಕ ವಿಧವಾಗಿದೆ. ಮಣ್ಣಿನ ತಜ್ಞರಿಗೆ ಇದೊಂದು ಬಿಡಿಸಲಾರದ ಒಗಟಾಗಿದೆ. ಇತ್ತ ಒಕ್ಕಲತನ ತಜ್ಞರಿಗೆ ಅನೇಕ ಸಮಸ್ಯೆಗಳಿವೆ. ಬೇರೆ ಬೇರೆಡೆಗಳಲ್ಲಿ ಬೇರೆ ಬೇರೆ ರೀತಿಯ ಒಕ್ಕಲತನ ಪದ್ಧತಿಗಳು ಬಳಕೆಯಲ್ಲಿವೆ. ಭಾರತದ ಹಸಿವೆಯನ್ನು ಪೂರ್ಣ ಹಿಂಗಿಸುವಷ್ಟು ಕಾಳನ್ನು ಒಕ್ಕುವ ದಕ್ಕಾಗಿಯಂತ್ರೋಪಕರಣಗಳನ್ನು ಯೋಜಿಸುವ ಮೊದಲು ಒಕ್ಕಲತನ ಯಂತ್ರಜ್ಞರು ಈ ಎಲ್ಲ ಸಂಗತಿಗಳನ್ನು ಪರಾಮರ್ಶಿಸುವದು ಅವಶ್ಯವಿದೆ. ಒಕ್ಕಲತನ ವಿಷಯದ ಬಗ್ಗೆ ಕೇವಲ ಪುಸ್ತಕದ ಜ್ಞಾನವಿದ್ದರೆ ಸಾಲದು ತಾತ್ವಿಕ ಚರ್ಚೆಗೆ ಮಾತ್ರ ಅದರಿಂದ ಉಪಯೋಗವಾಗಬಹುದು. ಆದರೆ ಸಾಧನ ಸಲಕರಣೆಗಳನ್ನು ಸಿದ್ಧಗೊಳಿಸಲಿರುವವರು, ಒಕ್ಕಲಿಗರ ಅನುಭವವನ್ನೇ ಅವಲಂಬಿಸಕಕ್ಕದ್ದು.

ಬಿತ್ತುವದು ಮತ್ತು ನಟ್ಟೇ ಹಚ್ಚುವದು

ಕೈಯಿಂದ ಬೀಜ ತೂರುವದು ಇಲ್ಲವೆ ಕೂರಿಗೆಯಿಂದ ಬಿತ್ತುವದು ಇದೀ ಜಗತ್ತಿನಲ್ಲಿ ಅನುಸರಿಸುವ ಪದ್ಧತಿಗಳಾಗಿವೆ. ಹೀಗಿದ್ದರೂ ಕೂಡ ಬೀಳೆ ಕಾಳು, ಅಹಾರಧಾನ್ಯ, ಹತ್ತಿ, ಎಣ್ಣೆಕಾಳು, ಬಟಾಟೆ, ಮತ್ತು ಕಬ್ಬು ಇತ್ಯಾದಿ ಬೇರೆ ಬೇರೆ ಬೆಳೆಗೆ ಪ್ರತ್ಯೇಕವಾದ ಬಿತ್ತುವ ಪದ್ಧತಿಯಿರುವದನ್ನು ನೋಡಿ ದಿಕ್ಕು ತಪ್ಪದಿರದು. ಇದಲ್ಲದೆ ಬಿತ್ತಿದಮೇಲೆ ಪ್ರಾರಂಭವಾಗುವ ಹಕ್ಕಿ-ಪಕ್ಕಿ ಇಲಿ ಹೆಗ್ಗಣಗಳ ಕ್ರಿಮಿಕೀಟಗಳ ಕಾಟವನ್ನು ನಿವಾರಿಸುವದಂತೂ ಹೇಳತೀರದಷ್ಟಿದೆ. ಭತ್ತ ಬಿತ್ತುವದೊಂದು ಕತೆಯೇ ಇದೆ. ಭತ್ತವ ಸಸಿಗಳನ್ನು ನೀರಲ್ಲಿ ೬ ರಿಂದ ೧೫ ಇಂಚಿನ ವರೆಗೆ ಮುಳುಗಿದ ಗದ್ದೆಯಲ್ಲಿ ನಟ್ಟೇ ಹಚ್ಚಬೇಕಾಗುವದು. ಈ ನೀರಲ್ಲಿ ಮುಳುಗಿದ ಗದ್ದೆಯಲ್ಲಿ ಬಿತ್ತುವ ಕೆಲಸವನ್ನು ಹೇಗೆ ಮಾಡಬೇಕೆಂಬುದು ಒಕ್ಕಲಿಗನಿಗೊಂದು ಬಿಡಿಸಲಾರದ ಸಮಸ್ಯೆ ಆಗಿ ಕುಳಿತಿದೆ. ಇನ್ನು ಮುಂದುವರಿದ ಕೆಲವು ದೇಶಗಳಲ್ಲಿ ಬತ್ತವನ್ನು ಬಿತ್ತುವದಕ್ಕೆ ವಿಮಾನಗಳನ್ನು ಬಳಸುತ್ತಾರೆ.

ಕೈಯಿಂದ ತೂರಿ ಬಿತ್ತುವದು

ಕೈಯಿಂದ ತೂರಿ ಬಿತ್ತುವದು, ಹಳೆಯಕಾಲದಿಂದ ನಡೆದು ಬಂದ ಪದ್ಧತಿ. ಇದರಿಂದ ಬೆಳೆ ಗುಂಪುಗುಂಪಾಗಿ ಹಾಗು ಅಸ್ತವ್ಯಸ್ತವಾಗಿ ಬೆಳೆದು ನಿಲ್ಲುವದು. ಆದರೆ ಕೂರಿಗೆಯಿಂದ ಬಿತ್ತಿದಾಗ ಬೆಳೆ ಸಾಲುಸಾಲಾಗಿ ಬೆಳೆದು, "ಶಿಸ್ತಿನ ಸೈನಿಕರ ಸಾಲಿನಂತೆ" ಕಾಣುತ್ತದೆ. ಭೂಮಿಯ ಮೇಲೆಲ್ಲ ಕೈಯಿಂದ ಬೀಜಗಳನ್ನು ತೂರಿ, ಆ ಮೇಲೆ ಎಡೆಹೊಡೆದು ಅವುಗಳನ್ನು ಸಾಕಷ್ಟು ಆಳವಾಗಿ ಮುಚ್ಚುವದರಿಂದ ಬೀಜಕ್ಕೆ ಧಕ್ಕೆ ತಗಲುವ ಸಂಭವವಿದೆ. ಏಕಂದರೆ ಕೆಲವೆಡಗಳಲ್ಲಿ ಬೀಜಗಳು ಹೆಚ್ಚು ಆಳವಾಗಿ ನೆಲದಲ್ಲಿ ಹೂತು ಹೋಗುವದುಂಟು. ಇನ್ನು ಕೆಲವೆಡೆಗಳಲ್ಲಿ ಬೀಜಗಳು ಬೈಲಿಗೆ ಬೀಳುವದುಂಟು. ಇದರಿಂದ ಬೀಜವು ವಿನಾಕಾರಣ ನಾಶವಾಗುವದು. ಆದರೆ ಕೂರಿಗೆಯಿಂದ ಬಿತ್ತಿದರೆ ಈ ರೀತಿ ವಿಶೇಷ ಹಾನಿಯಾಗುವದಿಲ್ಲ.

ಹಳೆಯ ಕೂರಿಗೆ

ಕೂರಿಗೆಯನ್ನು ಭಾರತೀಯ ಒಕ್ಕಲಿಗನು ಬಹಳ ಹಿಂದಿನ ಕಾಲದಿಂದಲೇ ಬಳಸುತ್ತ ಬಂದಿರುವನು. ಮೊಹೆಂಜೊದಾರೋದಲ್ಲಿ ನಡೆದ ಸಂಶೋಧನದಲ್ಲಿ, ಕೂರಿಗೆಯೊಂದು ದೊರೆತಿದೆ. ಕಟ್ಟಿಗೆ ಬಿದುರುಗಳಿಂದ ಅದು ಮಾಡಲ್ಪಟ್ಟಿದೆ. ಹಿಂದಿನ ಕಾಲದಲ್ಲೂ ಒಕ್ಕಲಿಗರು ಕೇವಲ ಬೀಜದ ಕಾಳು ಕಡಿಮೆ ಹತ್ತುವದಕ್ಕಷ್ಟೇ ಅಲ್ಲದೆ, ಮಣ್ಣಿನ ಉಳಿತಾಯವನ್ನೂ ಅವರು ಹೇಗೆ ಸಾಧಿಸುತ್ತಿದ್ದರೆಂಬುದನ್ನು ಅದು ತೋರಿಸಿಕೊಡುವದು. ೧೮೫೧ ರಲ್ಲಿ ಇಂಗ್ಲಂಡಿನಲ್ಲಿ ಜರುಗಿದ ಪ್ರದರ್ಶನದಲ್ಲಿ ಅದನ್ನಿಡಲಾಗಿತ್ತು.

ಹೊಸ ಬಗೆಯ ಕೂರಿಗೆ

ಹೊಸ ಬಗೆಯ ಕೂರಿಗೆಯು ೧೭೦೧ ರಲ್ಲಿ ಜೇಥ್ರೋಟಲ್ ಎಂಬವರಿಂದ ಕಂಡುಹಿಡಿಯಲ್ಪಟ್ಟಿತು. ಆದರೂ, ಈ ಕೂರಿಗೆ ಅಮೇರಿಕೆಯಲ್ಲಿ ಮೊದಲಿಗೆ ಬಳಕೆಯಲ್ಲಿ ಬಂದದ್ದು ೧೮೪೦ರಲ್ಲಿಯೇ. ಶ್ರೀ. ಟಲ್ ಇವರಿಗೆ ಸಂಗೀತದಲ್ಲಿ ಬಹಳ ಅಭಿರುಚಿಯಿತ್ತು. ಕೂರಿಗೆಯ ಕಲ್ಪನೆ ಅವರಿಗೆ ಹೊಳೆದದ್ದು ಅವರ ಒಂದು ಸಂಗೀತ ಸಾಧನದಿಂದ. ಪೊಳ್ಳು ಕೊಳವೆಗಳ ಸಹಾಯದಿಂದ ಅದು ಬಿತ್ತುತ್ತಿತ್ತು.

ಕುಂಟಿ, ಡಿಸ್ಕ್ ರಂಟಿ, ಗೋಧಿ ಭೂಮಿ ರಂಟೆ ಇತ್ಯಾದಿಗಳು, ಗಾಲಿಯಾಕಿದ್ದು ಇವುಗಳನ್ನು ಟ್ರಾಕ್ಟರಗಳಿಗೆ ಜೋಡಿಸಬರುವದು. ಈ ಸಲಕರಣೆಗಳಿರುವ ಡಿಸ್ಕ್ (ಗಾಲಿ)ದ ವ್ಯಾಸವು ೧೪

ರಿಂದ ೨೪ ಇಂಚಿನ ವರೆಗಿರುವದು. ಈ ಸಾಧನಗಳಲ್ಲಿ ಇನ್ನೊಂದು ಸೌಲಭ್ಯವಿದೆ. ಸಾಲುಗಳ ಅಂತರವನ್ನು ಎಷ್ಟು ಬೇಕಷ್ಟು ಇಟ್ಟುಕೊಳ್ಳಲು ಬರುವದು. ಜಡ ಮಣ್ಣಿನಲ್ಲಿ ಈ ಉಪಕರಣಗಳು ಹುಗಿದು ಹೋಗುವ ಸಂಭವವಿಧೆ. ಅಂಥಲ್ಲಿ, ಎಲ್ಲ ಗಾಲಿಗಳಿಗೂ ಉಸುಕಿನಲ್ಲಿ ಇಳಿಯದಂತ ಹಳಿಗಳನ್ನು ಉಪಯೋಗಿಸುವದು ಹೆಚ್ಚು ಪರಿಣಾಮಕಾರಿಯಾಗಿ ಕಂಡು ಬಂದಿದೆ.

ಇನ್ನು ಸಾದಾ ಹಾಗು ಫರ್ಟಿಲಾಯಿಝರ ಕೂರಿಗೆಗಳನ್ನು ಬಳಸುವಾಗ ಒಂದು ಮಾತು ಅನುಭವಕ್ಕೆ ಬಂದಿದೆ. ಒಂದೇ ಡಿಸ್ಕು ನೆಲದೊಳಗೆ ಸಾಕಷ್ಟು ಆಳವಾಗಿ ಹೋಗುವದು. ಆದರೆ ಹೆಚ್ಚು ಬಿರುಸಾದ ಭೂಮಿಯಲ್ಲಿ ಎರಡು ಡಿಸ್ಕುಗಳನ್ನು ಬಳಸುವದು ಅವಶ್ಯವೆಂದು ಕಂಡುಬಂದಿದೆ. ಬಹಳ ಉದ್ದಳತೆಯುಳ್ಳ ಕೂರಿಗೆಗಳಿಗೆ ಇನ್ನೊಂದು ಸಾಧನ ಅವಶ್ಯ. ಅದನ್ನು ಎತ್ತಿ ಒಯ್ಯುವದಕ್ಕೆ ಅನುಕೂಲತೆಯಿರಬೇಕು. ಏಕಂದರೆ ಹೊಲದಲ್ಲಿರುವ ಸಣ್ಣ ಪುಟ್ಟ ಕಾಲುವೆಗಳ ಮೇಲಿಂದ ಅವುಗಳನ್ನು ಹಾಗೇ ಒಯ್ಯುವದು ಸಾಧ್ಯವಾಗುವದಿಲ್ಲ. ಹತ್ತಿ; ಸೇಂಗಾ ಇತ್ಯಾದಿಗಳನ್ನು ಬಿತ್ತುವದಕ್ಕೆ ಬಳಸುವ ಕೂರಿಗೆಗಳಿಗೆ, ವೆಲ್ಲನೆ ಹೋಗುವಂತೆ ಮಾಡುವ ಸಾಧನವಿರುವದು ಅವಶ್ಯ. ಅಂದರೆ ಅವಶ್ಯಕ ಗತಿಯ ಪ್ರಮಾಣಕ್ಕೆ ಅವು ಹೊಂದಿಕೊಳ್ಳುವವು. ಇವುಗಳನ್ನು ವ್ಹೀಲ ಮಾದರಿಯ ಟ್ರಾಕ್ಟರುಗಳಿಗೆ ಜೋಡಿಸಲಾಗುವುದು.

ಕಳೆ ತೆಗೆಯುವ ಸಲಕರಣೆ

ಈ 'ಕಳೆ'ಯ ಹೆಸರು ಬಹು ಪುರಾತನ ಕಾಲದಿಂದಲೂ ಕೇಳಿಬರುತ್ತದೆ. ೪,೧೦೦ ವರುಷಗಳ ಹಿಂದಿನ ಕಾಲದಲ್ಲಿಯೂ ಕಳೆಯ ಉಪದ್ರವ ಇತ್ತೆಂದು ಸಾಹಿತ್ಯ ಸಾಕ್ಷಿ ಹೇಳುತ್ತದೆ 'ಕಳೆಯು' ಒಕ್ಕಾಲುತನದಲ್ಲಿ ಕಳ್ಳಕಾಕರಿಗೆ ಹೋಲಿಸಲ್ಪಟ್ಟಿದೆ. ಕಳೆ ತೆಗೆಯದಿದ್ದರೆ ಹುಟ್ಟುವಳಿ ಕಡಿಮೆಯಾಗುವದು. ಕಳೆ ಹತ್ತದಂತೆ ಮಾಡುವದು, ಬೆಳೆಯಲ್ಲಿಯ ಕಳೆ ತೆಗೆಯುವದು, ಎಡೆ ಹೊಡೆದು ಕಳೆ ಇಲ್ಲದಂತೆ ಮಾಡುವದು ಹಾಗು ರಾಸಾಯನಿಕ ದ್ರವ್ಯಗಳನ್ನುಪಯೋಗಿಸಿ ಕಳೆ ನಾಶಮಾಡುವದು. ಈ ನಾಲ್ಕು ಮಾರ್ಗಗಳು ಸಾಮಾನ್ಯವಾಗಿ ಒಕ್ಕಲಿಗರಿಂದ ಅನುಸರಿಸಲ್ಪಟ್ಟಿವೆ. ಕಳೆ ಬೆಳೆದ ಮೇಲೆ ತೆಗೆದುಹಾಕುವದಕ್ಕಿಂತ ಅದು ಬೆಳೆಯದಂತೆ ಉಪಾಯ ಯೋಜಿಸುವದೇ ಮೇಲು. ಇದನ್ನು ಎರಡು ಬಗೆಯಿಂದ ಸಾಧಿಸಬಹುದು. ಯೋಗ್ಯವಾದ ರೀತಿಯಿಂದ ಎಡೆಹೊಡೆಯುವದು ಇಲ್ಲವೆ ಸರಕಿ ಪದ್ಧತಿಯಿಂದ ಕಾಳು ಬಿತ್ತುವದು ಹೀಗೆ ಎರಡು ಉಪಾಯಗಳಿವೆ.

ಆಳವಾಗಿ ರಂಟಿ ಹೊಡೆಯುವದು, ಎಡೆಹೊಡೆಯುವದು, ಕಳೆ ತೆಗೆಯುವದು, ಹರಗುವದು ಇತ್ಯಾದಿ ರೀತಿಗಳಿಂದ ಈ ಕಳೆಯನ್ನು ನಿರ್ಮೂಲ ಮಾಡಲಾಗುತ್ತಿದೆ.

ಕರಿಕೆ ಹತ್ತಿದ ಹೊಲವನ್ನು ೧೨ ರಿಂದ ೧೪ ಇಂಚಿನವರಿಗೆ ಆಳವಾಗಿ ಬೇಸಿಗೆಯಲ್ಲಿ ರಂಟಿ ಹೊಡೆದು ಕರಿಕೆಯ ಬೇರು ಸಹಿತ ಕಿತ್ತಿ ಬರುವಂತೆ ಮಾಡಿ ಅದನ್ನು ಬಿಸಿಲಲ್ಲಿ ಒಣಗಬಿಟ್ಟರೆ, ಅದು ಸಂಪೂರ್ಣ ನಾಶವಾಗುವದೆಂಬುದು ಅನುಭವಕ್ಕೆ ಬಂದ ಮಾತು. ಇಂಥ ಕೆಲಸಕ್ಕೆ ೫೦ ಅಶ್ವಶಕ್ತಿಯ ಕ್ಯಾಟರ್ಪಿಲರ ಮಾದರಿಯ ಟ್ರಾಕ್ಟರನ್ನು ಉಪಯೋಗಿಸಬೇಕು, ಈ ಟ್ರಾಕ್ಟರಿಗೆ ಜಡವಾದ ಮೌಲ್ಡಬೋರ್ಡ ಮತ್ತು ಡಿಸ್ಕರಂಟಿಗಳನ್ನು ಜೋಡಿಸಬೇಕು. ಅಂದರೆ ಜಡ ಮಣ್ಣಿನಲ್ಲಿ ಅವು ಕೆಲಸ ಮಾಡಬಲ್ಲವು. ಇವಲ್ಲದೆ ೫೦ ಬ್ರಶ್ ಬ್ರೇಕರಗಳುಳ್ಳ ರಂಟಿಗಳಿಗೆ ಜೋಡಿಸಲ್ಪಟ್ಟ ಜಡವಾದ ವ್ಹೀಲ ಮಾದರಿಯ ಟ್ರಾಕ್ಟರನ್ನೂ ಇದಕ್ಕೆ ಬಳಸಬಹುದಾಗಿದೆ. ಸಲ ಗಟ್ಟಿಯಾಗಿದ್ದಲ್ಲಿ ಮೊದಲು ಸಬ್ ಸಾಯಲರ್ಸಗಳಿಂದ ಅದನ್ನು ಅಗಿದು ಆಮೇಲೆ 'ಇನವರ್ಟ್ ಶರ್ನ್' ರಂಟಿಯನ್ನು ಬಳಸಬೇಕು.

ಕಬ್ಬಿಣ ಸಲಕರಣೆಗಳು

ಟೂಥ ಕಲ್ಟಿವೇಟರದಂಥ ಕಬ್ಬಿಣದ ಸಲಕರಣೆಗಳು ನಮ್ಮ ಎತ್ತುಗಳಿಗೆ ಬಹಳ ಭಾರನಾಗುವವು. ಟ್ರಾಕ್ಟರಿಗೆ ಇಲ್ಲವೆ ಅದಕ್ಕೆ ನೇರವಾಗಿ ಜೋಡಿಸಲಾದ ಅನೇಕ ಪ್ರಕಾರದ ಸಾಧನಗಳಿಂದ ಇತ್ತೀಚಿಗೆ ಕಳೆ ತೆಗೆಯಲಾಗುತ್ತಿದೆ. ಇವುಗಳೆಲ್ಲ ಸ್ವೀಪ್ಸಗಳಿಂದ ಕೂಡಿದ ಕಲ್ಟಿವ್ಹೇಟರ, ವೀಡರ, ಮಲ್ಚರ್ಸ, ಬ್ಲಾಯಿಂಡ ಹ್ಯಾರೋಯಿಂಗ ಟೂಲ್ಸ, ರೋಟರಿ ಹೊಜ, ಸ್ಪ್ಲೇಮ ಕಲ್ಟಿವ್ಹೇಟರ್ಸ ಇತ್ಯಾದಿಗಳಿವೆ ಮಣ್ಣಿನ ಸವಕಳಿ ಹಾಗು ಬಿರುಸು ಭೂಮಿಯನ್ನು ಹದಮಾಡುವದಕ್ಕೆ ಅವಶ್ಯವಾದ ಸಲಕರಣೆಗಳು ಇದರಲ್ಲಿವೆ. 'ಸ್ವೀಪ್ಸ' ಎಂಬವುಗಳನ್ನು ಕೇವಲ ಮೇಲೆ ಮೇಲೆ ಎಡೆ ಹೊಡೆಯುವದಕ್ಕೆ ಉಪಯೋಗಿಸಲಾಗುತ್ತದೆ. ವೀಡರ್ ಮಲ್ಚರ್ಸಗಳನ್ನು ಹಗುರು ಮಣ್ಣಿನಲ್ಲಿ ವಿಶೇಷವಾಗಿ ಉಪಯೋಗಿಸುವರು. ಗೋಧಿ ಮತ್ತು ಸೇಂಗಾ ಇತ್ಯಾದಿಗಳನ್ನು ಬೆಳೆಯುವ ಭೂಮಿಯಲ್ಲಿ ಇವುಗಳ ಬಳಕೆ ಹೆಚ್ಚು. ಏಕಂದರೆ ಮಳೆಗಾಲ ಹಿಡಿದು ಬಿರುಸಾದ ಮೇಲು ಭೂಮಿಯನ್ನು ಒಡೆಯಲು ಇವುಗಳ ಉಪಯೋಗ ಬಹಳ. ಇವು ಸಮಾಂತರ ಹಾಗು ತಗ್ಗು ದಿನ್ನೆಯುಳ್ಳ ಭೂಮಿಯಲ್ಲಿ ರಂಟಿ ಹೊಡೆಯುವವಲ್ಲದೆ ಮಣ್ಣು ಆರ್ದ್ರತೆ ಹಿಡಿಯುವದಕ್ಕೆ ಅನುಕೂಲವಾಗುವಂತೆ ಹದಮಾಡುವವು. ಕರಿಕೆಯನ್ನೂ ನಾಶಮಾಡುವವು. ಆದರೆ ಭಾರತದಲ್ಲಿ ಇನ್ನೂ ಸ್ಪ್ಲೇಮಫ್ರೋಯಿಂಗ ಮತ್ತು ಕೆವ್ಹಿಕಲ್ ವೀಡಿಂಗ ಬಳಕೆಯಲ್ಲಿಲ್ಲ. ಇವುಗಳಲ್ಲಿ ಮೊದಲನೆಯ ವಿಧಾನವು ಇತರೆಡೆಗಳಲ್ಲಿ ಯದ್ಧಕಾಲದಲ್ಲಿ ಬಹಳ ಬಳಕೆಯಲ್ಲಿತ್ತು. ಇದಲ್ಲದೆ, ಅವಶ್ಯವಾದ ಶಿಕ್ಷಣವಿಲ್ಲದಿರುವವರ ಕೈಯಲ್ಲಿ ಇಂಥ ಸಾಧನ ಸಲಕರಣೆಗಳನ್ನು ಕೊಡುವದೂ ವಿಹಿತವಲ್ಲ.

ನೋಟೀಸು

ಮುಖಾರಾಖ ಹೊಸಪೇಟೆ ಡಿಖ ಮುಖ ಕೋರ್ಟಿನಲ್ಲಿ

O. S. 141/46 E. A. 34/50

ಬಳಿ ಬಸಪ್ಪ ನಗೈರೆ .... ಅರ್ಜಿದಾರರು

Vs. Jds

ಕೋಣನ ದೊಡ್ಡ ತಿಪ್ಪೆಸ್ವಾಮಿ ಎದುರು (D. H.)

ಮೇಲಿನ ನಂಬರಿನಲ್ಲಿ ಅರ್ಜಿದಾರರು (ಪ್ರತಿವಾದಿಗಳು) ಕೋರ್ಟಿನಲ್ಲಿ 520-4-0 ಕಟ್ಟಿ ಡಿಕ್ರಿ ಬಾಕಿ ಪೂರ ಮುಟ್ಟಿದಂತೆ ರಿಕಾರ್ಡು ಮಾಡಲು ಅರ್ಜಿ ಇಟ್ಟಿರುತ್ತಾರೆ. ಸದ್ರಿ ಅರ್ಜಿ 28-7-50 ಕ್ಕೆ ವಾಯಿದಾ ಇರುತ್ತದೆ. ತಕರಾರು ಇದ್ದಲ್ಲಿ ಆಗಿನ ಕೋರ್ಟಿಗೆ ಹಾಜರು ಆಗಬೇಕು.

ಎಸ್. ನಾರಾಯಣ ರಾವ್,
ಅರ್ಜಿದಾರರ-ವಕೀಲರು,

ಸಂಗನಕಲ್ಲಿನಲ್ಲಿ

ಹರಿಜನರಮೇಲೆ ವಿಚಿತ್ರ ಹಿಂಸೆ

+++++++

ಬಳ್ಳಾರಿ ತಾಲೂಕು ಸಂಗನಕಲ್ಲಿನಲ್ಲಿ ಹರಿಜನರ ಮದುವೆ ಮೆರವಣಿಗೆಗಳಾದ ನಂತರ ಹರಿಜನರ ಬಹಿಷ್ಕಾರವು ನಡೆದಿದ್ದು ಅವರಮೇಲೆ ವಿಚಿತ್ರ ಹಿಂಸೆಗಳಾಗುತ್ತಿರುವುದು ನಮ್ಮ ಗಮನಕ್ಕೆ ಬಂದಿದೆ ಹರಿಜನರು ಮದ್ರಾಸಿಗೆ ಹರಿಜನ ಮಂತ್ರಿಗಳನ್ನೂ ಡಾಯರೆಕ್ಟರನ್ನೂ ಕಂಡು ಬಂದರು. ಜಿಲ್ಲಾ ಕಲೆಕ್ಟರವರು ಜಿಲ್ಲಾ ಪೋಲೀಸ್ ಸೂಪರೆಂಟರು ಶ್ರದ್ಧೆವಹಿಸಿದರೆ ಈ ಅತ್ಯಾಚಾರವು ನಿಂತೀತು. ತಕ್ಕ ಚರ್ಯೆಗಳು ತೀವ್ರವಾಗಿ ತೆಗೆದುಕೊಳ್ಳಲಾಗುವವೆಂದು ಆಶಿಸೋಣ.

ಯುದ್ಧ ಸಮಾಚಾರ

ಜನರಲ್ ಮಕಾರ್ಥರ್‌ರವರು ಕೋರಿಯಾಕ್ಕೆ ಧಾವಿಸಿರುವರು. ಅವರು ಹೋದ ಉದ್ದೇಶವೆಂದರೆ, ಕೆಂಪು ಸೈನ್ಯಗಳ ಮುನ್ನಡೆಯನ್ನು ಯಾವರೀತಿಯಲ್ಲಿ ತಡೆಯಬಹುದು? ದಕ್ಷಿಣದ ಸೈನ್ಯಗಳಿಗೆ ಯಾವ ತರಹೆಯ ಆಯುಧಗಳವಶ್ಯ. ಯಾವಸ್ಥಳದಿಂದ, ಯುದ್ಧವಾಡಿರಿ, ಜಯವೊರೆದೀತು, ಎಂಬುದು, ಇದನ್ನೆಲ್ಲಾ ನೋಡಿಕೊಂಡು ಅವರು ಟೋಕಿಯಾಕ್ಕೆ ಮರಳಿದರು.

ಆದರೆ ದಕ್ಷಿಣದ ಕೋರಿಯಾದಲ್ಲಿ ಉತ್ತರದ ಕೆಂಪು ಸೈನ್ಯಗಳ ಮುನ್ನಡೆಯು ಸಾಗಿದೆ. ಸಿಯೋಲ್ ರಾಜಧಾನಿಯ ಪತನಾನಂತರ ೫೦ ಮೈಲಿ ದಕ್ಷಿಣಕ್ಕಿರುವ ಹ್ಯಾನ್ ನದಿಯನ್ನು ದಾಟಿ ಸೇತುವೆಯನ್ನು ಒಡೆದ ಕಾರಣ, ದಕ್ಷಿಣದ ಸೈನ್ಯವೆಲ್ಲಾ ಕೆಂಪುಸೈನ್ಯಗಳಿಗೆ ಬಲಿಯಾದಂತಾಗಿದೆ. ಅಮೆರಿಕಾದ ವಿಮಾನಗಳು ಜಪಾನಿನಿಂದ ಬಾಂಬು ದಾಳಿಮಾಡುತ್ತಲಿವೆ.

ಅಮೆರಿಕಾದ ವಿಮಾನಗಳು ಉತ್ತರ ಕೋರಿಯಾದ ಮುಖ್ಯ ಠಾಣೆಗಳಮೇಲೆ ಬಾಂಬುದಾಳಿಗಾರಂಭಿಸಿವೆ

ಸತ್ಕಾರ್ಯನಿಧಿಗೆ:—

ಮದ್ರಾಸ್ ಗವರ್ನರರ
ಬಳ್ಳಾರಿಜಿಲ್ಲಾ ಭೇಟಿ

ಬಳ್ಳಾರಿ ಮುನಿಸಿಪಾಲಿಟಿಯವರು, ಮದ್ರಾಸ್ ಗವರ್ನರರು ಆಗಮಿಸಿದಾಗ ಅವರು ಹಾದು ಹೋಗುವ ರಸ್ತೆಗಳನ್ನು ಮಾತ್ರ ರಿಪೇರಿ ಮಾಡಿಸಿ ಒಳ್ಳೆಯ ಸ್ಥಿತಿಯಲ್ಲಿಡುವ ಲಕ್ಷಣಗಳು ತೋರಿ ಬರುತ್ತಲಿವೆ. ಗವರ್ನರರ ಭೇಟಿಯಿಂದಲಾದರೂ ಊರ ರಸ್ತೆಗಳು ಉತ್ತಮಗೊಳ್ಳುವನೆಂದಾಶೆಯಿದ್ದಿತು. ಆದರೆ ಮುನಿಸಿಪಾಲಿಟಿಯವರು, ತಮ್ಮ ಕರ್ತವ್ಯವನ್ನರಿತಂತೆ ತೋರುವುದಿಲ್ಲ.

ದೊಡ್ಡವರೆಂಬುವರು ಬಂದಾಗ ಮಾತ್ರ, ಅವಂ ಸಭಿಸ್ತ್ರಾಯವನ್ನು ಪಡೆಯಲಿಚ್ಛಿಸಿ, ಊರಿನ ಹೊಲಸನ್ನು ಬಿಟ್ಟು ಕಟ್ಟ ರಸ್ತೆಗಳನ್ನು ಹಾಗೆಯೇ ಇರಗೊಟ್ಟರೆ, ಅವರಿಗೆ ಕೀರ್ತಿ ಬರಲಾರದು. ನಗರದ ನಾಗರೀಕರು ಸರ್ಟಿಫಿಕೇಟ್ ಕೊಡಬೇಕಾಗಲಿ ಗವರ್ನರರು ಮುನ್ಸಿಪಾಲಿಟಿಯ ಶಹಬಾಸ್‌ಗಿರಿಮಾಡಿದರೆ ಉಪಯೋಗವಿಲ್ಲ.

G. M. S.

ಬಳ್ಳಾರಿಯಲ್ಲಿ ವನಮಹೋತ್ಸವ

ಬಳ್ಳಾರಿ ಕಲೆಕ್ಟರ್ ಕಾಂಪೌಂಡದಲ್ಲಿ ಪ್ರಾಂತಃಕಾಲ ೮-೩೦ ಗಂಟೆಗೆ ಜಿಲ್ಲಾ ಜಡ್ಜರಾದ ಜಾರ್ಜಸನ್‌ರವರು, ವನಮಹೋತ್ಸವದ ಪ್ರಾರಂಭ ಮಹೋತ್ಸವಕ್ಕೆ ಅಧ್ಯಕ್ಷತೆಯನ್ನು ವಹಿಸಿದ್ದರು. ಕಲೆಕ್ಟರ್ ಶ್ರೀ ಜಿ ರಾಮರೆಡ್ಡಿಯವರು ಪ್ರಾರಂಭೋತ್ಸವ ಮಾಡಿ ಮರಗಳನ್ನು ಬೆಳೆಸಲು ಸಸಿಗಳನ್ನು ನೆಟ್ಟರು.

ಶ್ರೀ ಟಿ. ಬಿ. ಕೇಶವರಾಯರು ಕನ್ನಡದಲ್ಲೂ, ಶ್ರೀ ನಾಗಭೂಷಣಂರವರು ತೆಲುಗಿನಲ್ಲೂ, ವನಮಹೋತ್ಸವ, ಮರಗಳ ಸಂರಕ್ಷಣೆ ವಿಷಯವಾಗಿ ಮಾತಾಡಿದರು.

For the quarter ending March 31st, 1950 the Employment Officers in the 5 Rayalaseema Districts of Bellary, Anantapur, Cuddapah Chittoor and Kurnool, Registered 4408 candidates for employment assistance and placed 1575 in suitable jobs. Jobs were found for women candidates and other educated employment seekers including 1 Engineer.

ಹಿಂದೀ ಮಹಾ ವಿದ್ಯಾಲಯ, ಬಳ್ಳಾರಿ,

[1931 ಸ್ಥಾಪಿತ. ಬಳ್ಳಾರಿ ಜಿಲ್ಲಾ ಹಿಂದೀ ಪ್ರೇಮೀಮಂಡಲದಾಶ್ರಯದಲ್ಲಿ, ರಿಜಿಸ್ಟರ್ಡ.]

ಮದ್ರಾಸ್ ಸರ್ಕಾರದಿಂದ ಮಾನ್ಯತೆ ಇದೆ.

ಪ್ರಾರಂಭಿಕ ವರ್ಗಗಳಿಗೆ ಮಾಸಿಕ 3/- ಶುಲ್ಕ — ಉನ್ನತ ವರ್ಗಗಳಿಗೆ ಮಾಸಿಕ 5/- ಶುಲ್ಕ

ನಾರ್ಡಾಲಾ ಹೈಸ್ಕೂಲ್ ಕಟ್ಟಡದಲ್ಲಿ ಪ್ರಾತಃಕಾಲ-ಸಾಯಂಕಾಲ ಹಿಂದೀ ಕಾಲೇಜ್‌ದ ವರ್ಗಗಳು ನಡೆಯುತ್ತವೆ. ಪ್ರವೇಶಿಕ — ವಿಶಾರದ ವರ್ಗಗಳಲ್ಲದೆ ಪ್ರಾರಂಭಿಕ ವರ್ಗಗಳಿಗೂ ಪ್ರವೇಶವಿದೆ. ವರ್ಗಗಳಿಗೆ ಸಂಬಂಧಿಸಿದ ಪಾಠಪುಸ್ತಕಗಳು ವಿದ್ಯಾಲಯದಲ್ಲಿ ದೊರೆಯುತ್ತವೆ. ಒಳ್ಳೆಯ ಪುಸ್ತಕಭಂಡಾರವಿದೆ. ಶ್ರೇಷ್ಠ ವಾರಪತ್ರಿಕೆ, ಮಾಸಪತ್ರಿಕೆಗಳು ಲಭ್ಯ. ಇತರ ವಿವರಗಳಿಗೆ ಸ್ವಾಂಪಿಟ್ಟು ಬರೆಯಿರಿ.

ಪ್ರಿನ್ಸಿಪಾಲ್.

NAVA BHARAT BELLARY. (Reg. No. M. 4746)

ನವಭಾರತ ಬಳ್ಳಾರಿ. 3—7—50

(Nationalist Weekly)

ಚಂದಾದರಗಳು.		Subscription Rates.	
ವರ್ಷಕ್ಕೆ	6—0—0	One Year	5—0—0
6 ತಿಂಗಳಿಗೆ	3—0—0	Six months	3—0—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.		Subscription will not be accepted for less than 6 months	

To

Sri.....

.....

.....

Printed at Krishna Printing Works, Edited & Published by T.B. Keshav Rao.

JAI HIND

ಸಂಯುಕ್ತ ಕರ್ನಾಟಕ

ಬಳ್ಳಾರಿಯ
ಉಜ್ವಲ ರಾಷ್ಟ್ರೀಯ ವಾರಪತ್ರಿಕೆ
*
ಉತ್ತಿಷ್ಠತ ! ಜಾಗ್ರತ
ಪ್ರಾಪ್ಯವರಾನ್ನಿ ಬೋಧತ !!!
*
ಪ್ರಕಾಶಕ ಮತ್ತು ಪ್ರಕಾಶಕ:—
ಬಿ. ಬಿ. ಕೇಶವರಾವು

ಸಂ ೧೩ ಸೋಮವಾರ ೧೨ ಜೂಲೈ ೧೯೪೬ ಸಂಚಿಕೆ ೬೫

ನಿಜವಾದ ಸೇವೆ

ನಿಜವಾದ ಸೇವೆ ಮಾಡಬೇಕಾದಿದ್ದರೆ ಅವರು ಮನಃಪೂರ್ವಕವಾಗಿ ಹಳ್ಳಿಯನ್ನೇ ಆಗಬೇಕು. ಪಟ್ಟಣದ ಮೋಹವನ್ನು ಬಿಟ್ಟುಕೊಡಬೇಕು. ಪಟ್ಟಣಗಳಲ್ಲಿ ಒಳ್ಳೆಯದಿದ್ದದ್ದನ್ನು, ಉದಾಹರಣಾರ್ಥವಾಗಿ ಸ್ವಚ್ಛತೆ ಮೊದಲಾದವುಗಳನ್ನು ಅವರು ಹಳ್ಳಿಗೆ ಒಯ್ಯಬೇಕು. ಆದರೆ ಇದಕ್ಕೆ ಮೂಢನಂಬಿಕೆಯ ನೇವಹಾಕಬೇಕಾಗುವದು. ಅಂದರೆ ಮಾತ್ರ ಅವರು ಹಳ್ಳಿಗಳ ಸುಧಾರಣೆಯನ್ನು ಸಲ್ಲಿಸಿ ಅಲ್ಲಿಯ ಹೊಂಗಸರು ಹುಡುಗರ ಪರಿಸ್ಥಿತಿಯನ್ನು ಸುಧಾರಿಸಬಲ್ಲರು.

ಒದ್ದಿ ಹಾಗು ದುಡಿತಗಳ ನಿರ್ಮೂಲನ ಸಂಬಂಧ ತಿಳಿಸಿ ಹೇಳಿರುವದರಿಂದಲೆ ಹಳ್ಳಿಗಳು ಆರೋಗ್ಯದಲ್ಲಿ ಕ್ಷಯಿಸಲ್ಪಟ್ಟಿವೆ. ಕಪ್ಪುಬಣ್ಣವಾದರೂ ಇವು ನಮ್ಮಲ್ಲಿ ಸುಂದರವಾದ ಚಿಕ್ಕ ಚಿಕ್ಕ ಹಳ್ಳಿಗಳು ಕಂಗೊಳಿಸುವ ಒದಲು ಹೊಲಸಿನ ಕುಂಪೆಗಳ ಕಣ್ಣಿಗೆ ಬೀಳುತ್ತವೆ. ಹಳ್ಳಿಗಳಲ್ಲಿ ಸ್ವಚ್ಛತೆ ಇರಬೇಕಾದರೆ ಕಣ್ಣು ಮುಚ್ಚಿಕೊಂಡು ಮೂಗು ಹಿಡಿದುಕೊಂಡು ಹೋಗಬೇಕಾಗುತ್ತದೆ. ಅವುಗಳ ಸುತ್ತಮುತ್ತಲಿನ ಅಸ್ವಚ್ಛತೆಗೆ ಹಾಗು ಹೊಲಸು ವಾಸನೆಯನ್ನು ಅಸಹ್ಯಿಸಿಕೊಳ್ಳದೆ

ನಮ್ಮಲ್ಲಿ ರಾಷ್ಟ್ರೀಯ ಅಧಿಕಾರ ಸ್ಥಾನವಾಜಿಕ ಸ್ವಚ್ಛತೆಯ ಅರಿವೇ ಇಲ್ಲ. ನಾವು ಸ್ವಾತಂತ್ರವನ್ನೇನೊ ಪಡೆದುಕೊಳ್ಳೇವೆ. ಅದನ್ನೆ ಉಪಯೋಗಿಸುವ ಬಾವಿ, ಕೆರೆ ಅಥವಾ ಹೊಳೆಗಳನ್ನು ಹೊಲಸು ಮಾಡಲು ಹಿಂಜರಿಯುವದಿಲ್ಲ. ಇ ಕೊಂಪು ನನ್ನಲ್ಲಿಯ ದುರ್ಗುಣವೆಂದು ನಾನು ಕರೆಯುತ್ತೇನೆ. ನನ್ನ ಹಳ್ಳಿಗಳಲ್ಲಿಯ ಹಾಗೂ ಪವಿತ್ರ ನದಿಗಳ ದಂಡೆಗಳಲ್ಲಿಯ ಹೇಯವಾದ ಸ್ಥಿತಿಗೆ ಹಾಗು ಇಂದು ಅನಾರೋಗ್ಯಕರ ಪರಿಸ್ಥಿತಿಯಿಂದ ಬಾಧಿಸುತ್ತಿರುವ ರೋಗರುಜಿನಗಳಿಗೆ ನಮ್ಮ ಈ ದುರ್ಗುಣವೇ ಮೂಲ ಕಾರಣ.

ಮಹಾತ್ಮಾ ಗಾಂಧಿ

ಕಾಂಗ್ರೆಸ್ ವಿರೋಧೀ ಪಕ್ಷಗಳ ಪರಿಷತ್ತು

ಬೊಂಬಾಯಿ ವರದಿಗಾರರಿಂದ

ಬೊಂಬಾಯಿ — ಇತ್ತೀಚೆ ಎರಡು ದಿನಗಳಲ್ಲಿ ನಡೆದ ಸೇರಿದ ವಿರೋಧಿ ಪಕ್ಷಗಳ ಪರಿಷತ್ತಿನಲ್ಲಿ ಬರುವ ಸಾರ್ವತ್ರಿಕ ಚುನಾವಣೆಗಳು ಸಿಪ್ಪಕ್ಷವಾತ ರೀತಿಯಲ್ಲಿ ನಡೆಯಬೇಕೆಂದು ಯಾವುಯಾವ ಕ್ರಮಗಳನ್ನು ಕೈಕೊಳ್ಳಬೇಕು ಎಂಬುದೇ ಈಗ ಸ್ವಾಧ್ಯಕ್ಷೆ ಡಾ॥ ರಾಜೇಂದ್ರ ಪ್ರಸಾದ ಎಂಬ ಸಾರ ಪಡಿಸಲು ಒಂದು ಸುದೀರ್ಘ ಪರಿಷತ್ತನ್ನು ಒದಿಸಿ ಅದನ್ನು ಅಂಗೀಕರಿಸಲಾಯಿತು. ಮನವಿಯಲ್ಲಿ ಬಹುಪ್ರತಿನಿಧಿಕ ಮತದಾರ ಸಂಘಗಳ ಬದಲಿಗೆ ಎಂದೂ ಹೊತದಾನ ಪದ್ಧತಿಯು ಬಿಟ್ಟು ಹೊತದಾನ ಪದ್ಧತಿಯನ್ನು ಅನುಸರಿಸಬೇಕೆಂಬ ಎಷ್ಟು ಪ್ರತಿನಿಧಿಗಳನ್ನು ಅರಿಸಬೇಕಾಗಿದೆಯೋ ಅಷ್ಟು ಮತಗಳನ್ನು ಮತದಾರನು ತನಗೆ ಬೇಕಾದ ಒಬ್ಬನೇ ಪ್ರತಿನಿಧಿಗೆ ಹಾಕಲು ಒರುವಂತೆ ಕೂಡಿಸಿ ಹಾಕುವ ಸುಲಭವಾದ ಪದ್ಧತಿಯನ್ನು ಅನುಸರಿಸಬೇಕೆಂದೂ ಹೇಳಲಾಗಿದೆ.

ಚುನಾವಣೆಗಳು ನಡೆಯುವವರೆಗೆ ಪ್ರತಿಬಂಧಕ ಸ್ಥಾನಬದ್ಧತೆ ಕಾನೂನನ್ನು ಸ್ಥಗಿತಗೊಳಿಸಬೇಕೆಂದೂ ವೀಕ್ಷಣಲ್ಲಿರುವ ಆಕಾಶವಾಣಿ ಕೇಂದ್ರದ ಮುಖಾಂತರ ಚುನಾವಣೆ ಪ್ರಚಾರ ಮಾಡಲು ಎಲ್ಲ ರಾಜಕೀಯ ಪಕ್ಷಗಳಿಗೂ ಅವಕಾಶವಿರಬೇಕೆಂದೂ ಮನವಿಯಲ್ಲಿ ಕೋರಿಸಲಾಗಿದೆ.

ನಿಷ್ಪಕ್ಷವಾತ ರೀತಿಯಲ್ಲಿ ಚುನಾವಣೆಗಳು ನಡೆಸಲ್ಪಡುವಂತೆ ಅವಶ್ಯಕ ಕ್ರಮಗಳನ್ನು ಕೈಕೊಳ್ಳಲು ಪ್ರಾಗತಿಕ ಪಕ್ಷದ ಮುಖಂಡರಾದ ಡಾ॥ ಆರ್. ಪಿ. ಪರಾಂಜಪೆಯವರ ಅಧ್ಯಕ್ಷತೆಯಲ್ಲಿ ೧೫ ಸದಸ್ಯರ ಒಂದು ಸ್ಥಾಯಿ ಸಮಿತಿಯನ್ನು ನೇಮಿಸಲಾಯಿತು.

ಈ ಮಹತ್ಕಾರ್ಯವನ್ನು ಸರ್ವಾಜ ಸಾಧಿಸಿಕ್ಕಾಗಿ ಕಾರ್ಯದರ್ಶಿಗಳಾದ ಶ್ರೀ ಅಚ್ಯುತ್ಪಾಶ ನಾರಾಯಣರು ಕರೆದಿದ್ದರು. ಸುಮಾರು ೨೦೦ ಪ್ರತಿನಿಧಿಗಳು ಈ ಪರಿಷತ್ತಿನ ಅಧಿವೇಶನಕ್ಕೆ ಹಾಜರಾಗಿದ್ದರು. ಈ ಸಮಿತಿಯನ್ನು ವಿರೋಧಿಸಿದವರೆಂದರೆ ಸಂಯುಕ್ತ ಹಿಂದಿನ ಮೇಯರರಾದ ಶ್ರೀ ಜಮನಾದಾಸ ಮೆಹತಾರೊಬ್ಬರೇ ಆಗಿದ್ದರು. ಉಳಿದವರು ಮನವಿಯ ಕುರಿತು ಅಭಿಪ್ರಾಯಗಳನ್ನು ಸಮರ್ಥಿಸಿದರು.

ಈ ಸಾನಿಧ್ಯದಲ್ಲಿ ಅ. ಭಾ. ಸಮಾಜವಾದಿ ಪಕ್ಷ, ಹಿಂದೂಮಹಾಸಭೆ, ರಾಷ್ಟ್ರೀಯ ವ್ರಾಗತಿಕರ ಮಹಾಮಂಡಲ, ದಲಿತವರ್ಗಗಳ ಮಹಾಮಂಡಲ, ಭಾರತ ಸೇವಕ ಸಮಾಜ, ಈ ಸಂಸ್ಥೆಗಳ ಪ್ರತಿನಿಧಿಗಳು ಭಾಗವಹಿಸಿದ್ದು ಪಂಡಿತ ಹೃದಯನಾಥ ಕುಂಝುರು, ಡಾ॥ ಎನ್. ಬಿ. ಖರೆ, ಶ್ರೀ ಎನ್. ಎಂ. ಜೋಶಿ ಇವರು ಪ್ರತಿನಿಧಿಗಳಲ್ಲಿ ಪ್ರಮುಖರಾಗಿದ್ದರು.

ಪ್ರಚಾರದ ಅವಕಾಶ

ಭಾರತದಲ್ಲಿ ಆಕಾಶವಾಣಿ ಕೇಂದ್ರಗಳು ಸರಕಾರದ ವಶದಲ್ಲಿವೆ. ಆಕಾಶವಾಣಿ ಮೂಲಕ ಪ್ರಚಾರಮಾಡಲು ಎಲ್ಲ ರಾಜಕೀಯ ಪಕ್ಷಗಳಿಗೆ ಸರಿಯಾದ ಅವಕಾಶ ಕೊಡಬೇಕು. ಇದನ್ನು ಯಶಸ್ವಿಯಾಗಿ ನಿರ್ವಹಿಸಲು ಸುಕಾಲೇತರ ಸದಸ್ಯರ ಒಂದು ಮಂಡಲವನ್ನು ನೇಮಿಸಿ ಅವರಿಗೆ ಆಕಾಶವಾಣಿಯ ಉಪಯೋಗವನ್ನು ರಾಜಕೀಯ ಪಕ್ಷಗಳ ಪ್ರಚಾರದ ಬಗ್ಗೆ ಮಾಡಿಕೊಳ್ಳಲು ಕೂಡುವ ಅಧಿಕಾರ ಕೊಡಬೇಕು.

(ಮುಂದೇ ಪುಟ ನೋಡಿರಿ.)

118

ಚುನಾವಣೆ ಹಸ್ತ ಪತ್ರಿಕೆಗಳನ್ನು ಪುಕ್ಕಟೆಯಾಗಿ ಕಳಿಸಲು ಇಂಗ್ಲಂಡದಂತೆ ಇಲ್ಲಿಯೂ ವ್ಯವಸ್ಥೆ ಮಾಡಬೇಕು ಎಲ್ಲ ರಾಜಕೀಯ ಪಕ್ಷಗಳಿಗೂ ಚುನಾವಣೆ ಪ್ರಚಾರ ಸಭೆ ಸೇರಿಸಲು, ಭಿತ್ತಿ ಪತ್ರ ಹಚ್ಚಲು ಸರಕಾರೀ ಬೈಲು, ಸರಕಾರೀ ಕಟ್ಟಡಗಳ ಉಪಯೋಗ ಮಾಡಿಕೊಳ್ಳಲು ಅವಕಾಶವಿರಬೇಕು.

ಚುನಾವಣೆ ನಡೆಸುವ ರೀತಿ

ಮತದಾರರಿಗೆ ಎರಡು ಮೈಲುಗಳಿಗಿಂತ ಹೆಚ್ಚು ದೂರ ನಡೆಯದಂತೆ ಮತಗಟ್ಟೆಗಳನ್ನು ಸ್ಥಾಪಿಸಬೇಕು. ಇಂಗ್ಲಂಡದಲ್ಲಿ ಜಾರಿಯಲ್ಲಿರುವಂತೆ ಇಲ್ಲಿಯೂ ಚುನಾವಣೆ ಅಧಿಕಾರಿಯು ಪ್ರತಿಯೊಬ್ಬ ಮತದಾರನಿಗೆ ಅವನ ಮತದಾರ ರಜಿಸ್ಟರದಲ್ಲಿಯ ನಂಬರು, ಮತ ಹಾಕುವ ಸ್ಥಳ ಇವುಗಳನ್ನು ಕಾರ್ಡು ಬರೆದು ಕಳಿಸಬೇಕು. ಮತದಾನದ ದಿನ ಮತಗಟ್ಟೆಯ ಸಮೀಪದಲ್ಲಿ ಹುರಿಯಾಳುಗಳ ಪರವಾಗಿ ಯಾರು ಯಾವದೇ ಮತ ಪ್ರದರ್ಶನ ಮಾಡ ಕೂಡದೆಂದು ನಿರ್ಬಂಧಿಸಬೇಕು. ಕೇಂದ್ರ ಮತ್ತು ಪ್ರಾಂತಿಕ ಶಾಸನ ಸಭೆಗಳ ಚುನಾವಣೆಗಳು ಒಂದೇ ದಿನ ನಡೆಯಬೇಕು. ಅದು ಶಕ್ಯವಾಗದಿದ್ದರೆ ಮರುದಿನ ನಡೆಸಿದರೂ ಎರಡೂ ಪರಿಣಾಮಗಳನ್ನು ಏಕಕಾಲಕ್ಕೆ ಪ್ರಸಿದ್ಧಿಪಡಿಸಬೇಕು. ಮತದಾನದ ಕಾಗದಗಳಲ್ಲಿ ಅಭ್ಯರ್ಥಿಗಳ ಹೆಸರು, ಅವನ ಗುರ್ತು ಮತ್ತು ಮತ ಹಾಕಲು ಸೂಚನೆ ಇರತಕ್ಕದ್ದು. ಹುರಿಯಾಳುಗಳ ಹೆಸರನ್ನು ಅಕ್ಷರ ವಿಲೇವಾರಿಯಂತೆ ಮುದ್ರಿಸಬೇಕು.

ಲ್ಯಾಂಡ್ ಮಾರ್ಟಗೇಜ್ ಬ್ಯಾಂಕ್ ಸಿರುಗುಪ್ಪೆ ರೈತರ ಮನವಿ

ತುಂಗಭದ್ರಾ ಯೋಜನೆಯಿಂದ ಸಿರುಗುಪ್ಪೆ ತಾಲೂಕಿನಲ್ಲಿ ಸುಮಾರು ೨೫ ಸಾವಿರ ಎಕರೆಗಳಿಗಿಂತಲೂ ಹೆಚ್ಚಾಗಿ ಭೂಮಿಯು ನೀರಾವರಿಯದಾಗುತ್ತದೆ. ಸೊಸೈಟಿ ನಿಯಮಗಳ ಪ್ರಕಾರಕ್ಕೆ ಗದ್ದೆಗಳಲ್ಲಿನ ರೈತರಿಗೇ ಸಾಲ ಕೊಡಬೇಕೆಂಬುದಾದರೂ ಶೀಘ್ರ ಭವಿಷ್ಯದಲ್ಲಿ ನೀರಾವರಿಯಾಗಲಿರುವ ಭೂ ಸುಧಾರಕರಿಗೆ ದ್ರವ್ಯ ಸಹಾಯ ಮಾಡುವುದು ಉಚಿತವಾದುದಿರುತ್ತದೆ. ಇದು ನಿಯಮಕ್ಕೆ ವಿರೋಧವಾಗಲಿಕ್ಕಿಲ್ಲ. ಸರ್ಕಾರದವರು ಸೊಸೈಟಿ ನಿಯಮಗಳಲ್ಲಿ ತಕ್ಕ ಮಾರ್ಪಾಟುಗಳನ್ನು ಮಾಡಿ, ಈ ರೈತರ ಸಹಾಯಕ್ಕೇ ಪರಿಸಬೇಕೆಂದು ಕೋರುತ್ತೇನೆ. —ಸಿರುಗುಪ್ಪೆ ರೈತ

ಸೋಮವಾರ ಜೂಲೈ ೧೦ ೧೯೫೦.

ಚುನಾವಣಾ ಕ್ಷೇತ್ರಗಳ ನಿರ್ಧಾರ

ಮದ್ರಾಸ್ ಸರ್ಕಾರದ ನಿರ್ಧಾರ. ಇದು ಪ್ರಜಾತಂತ್ರವೇ?

ಕೇಂದ್ರ ಸರ್ಕಾರದ ಎಲೆಕ್ಷನ್ ಕಮಿಶನರಾದ ಶ್ರೀ ಕುಮಾರಸೇನರು ದಕ್ಷಿಣದ ಮುಖ್ಯನಗರಗಳಿಗೆ ಭೇಟಿಕೊಟ್ಟು ವಿವಿಧರಾಜಕೀಯ ಪಕ್ಷಗಳೊಂದಿಗೆ ವಿಚಾರವಿನಿಮಯಮಾಡಿ, ಸಂಬಂಧಿಸಿದ ಸರ್ಕಾರಗಳಿಗೆ ತಕ್ಕ ಸಲಹೆ ಕೊಟ್ಟು ಹೋದರು. ಕ್ಷೇತ್ರ ನಿರ್ಧಾರದ ವಿಷಯದಲ್ಲಿ ಪ್ರಾಂತೀಯ ಸರಕಾರಗಳು ತಮ್ಮ ನಿಘಂಟುಗಳನ್ನು ಕಳುಹಿಸಬಹುದೆಂದರು. ಆದರೆ ಮದ್ರಾಸ್ ಸರ್ಕಾರದವರು ಪ್ರಜಾಪ್ರತಿನಿಧಿ ಸಭೆಯಲ್ಲಿ ಈ ವಿಷಯವನ್ನು ತರದೆ ತಮ್ಮದೇ ಆದ ನಿಘಂಟನ್ನು ಕಳುಹಿಸಿರುವರೆಂದು ಪ್ರಕಟವಾಗಿದೆ. ಮಂತ್ರಿಗಳು ಎಷ್ಟೇ ಉತ್ಸಹವಿರಲಿ, ತಾವೇ ಬುದ್ಧಿ ಚತುರರೆಂದು ಬಾವಿಸಬಾರದು ಪ್ರಜೆಗಳಿಂದ ಆರಿಸಲ್ಪಟ್ಟ ಪ್ರತಿನಿಧಿಗಳಿಂದ ಕೂಡಿದ ಅಸೆಂಬ್ಲಿಯಲ್ಲಿ ಇಂಥ ಮುಖ್ಯ ವಿಷಯವನ್ನು ತಂದು, ಚರ್ಚಿಸಬೇಕಿದ್ದಿತು ಹೀಗೆ ಮಾಡದೆ ತಮ್ಮ ಸೂಚನೆಗಳನ್ನು ಸಾರ್ವಜನಿಕರಿಗೆ ತಿಳಿಸದೆ ಗುಪ್ತವಾಗಿ ಇಂಡಿಯಾ ಸರ್ಕಾರಕ್ಕೆ ನಿಘಂಟು ಕಳುಹಿಸುವುದು, ಈ ವ್ಯಜಾ ತಂತ್ರೀಯುಗದಲ್ಲಿ, ಶೋಭಿಸದು.

ತನುಗೂ ತಮ್ಮ ಪಾರ್ಟಿಯವರಿಗೂ ಅನುಕೂಲವಾಗುವ ರೀತಿಯಲ್ಲಿ ಕ್ಷೇತ್ರಗಳನ್ನು ನಿರ್ಮಿಸಿಕೊಂಡು ಒಪ್ಪಿಗೆ ಪಡೆಯುವುದು ಭವಿಷ್ಯದ ತಮ್ಮ ಭದ್ರತೆಗಾಗಿ ಎಂದು ವಿರೋಧಿ ಪಕ್ಷದವರು ಆವಾದಿಸುವುದರಲ್ಲೇನು ತಪ್ಪುಂಟು ನಮ್ಮ ಅಭಿಪ್ರಾಯದಲ್ಲಿ ಕೆಲ ಕಾಂಗ್ರೆಸ್ ಮುಖಂಡರೂ ಅಧಿಕಾರಿಗಳೂ ಸ್ವೇಚ್ಛೆಯಿಂದಲೂ, ಸರ್ವಾಧಿಕಾರಿಗಳಂತೆ ವರ್ತಿಸುತ್ತಿರುವುದು ಕಂಡುಬರುತ್ತದೆ. ರಾಷ್ಟ್ರದ ಎಲ್ಲಾ ಭಾಗಗಳಲ್ಲೂ ಚುನಾವಣೆ ಪದ್ಧತಿ ಸಮಾನವಿರಬೇಕು. ಜೊಂಬಾಯಿ ಪ್ರಾಂತದಲ್ಲಿ ಒಂದು ಕ್ಷೇತ್ರದಿಂದ ನಾಲ್ಕು ಜನರು ಆರಿಸಿ ಬರಬೇಕೆಂಬುದಾದರೆ ಮದ್ರಾಸ್ ಪ್ರಾಂತದಲ್ಲಿ ಒಬ್ಬೊಬ್ಬರೇ ಆರಿಸಿಬಂದರು ಘಟನಾನಿರ್ಣಯ ನಿಶ್ಚಿತ ಅಭಿಪ್ರಾಯ ಸೂಚಿಸಿಲ್ಲ ಪ್ರಾಂತವರು ತಮ್ಮ ಇಷ್ಟಾನುಸಾರವಾಗಿ ತನ್ನ ಪಾಲಿಗೆ ಬಂದ ಸ್ಥಾನಗಳನ್ನು ಹಂಚಿಕೊಳ್ಳುವ ಹಕ್ಕುಂಟು ಈ ಕಾರಣ ಗಾರ್ಬ ಬಲಾಬಲ ವ್ಯತ್ಯಾಸ ಬರಬಲ್ಲದಾದುದರಿಂದ ಅವರ ಅನುಕೂಲಾನುಸಾರ ಸ್ಥಾನಗಳನ್ನು ಹಂಚುವ ಈ ಕಟ್ಟಳೆ ರಾಜಕೀಯ ಪ್ರಜಾತಂತ್ರವು ಸರ್ವಾಧಿಕಾರೀ ದೇಶಗಳಲ್ಲಿ ಸುಸ್ಪಷ್ಟವಾಗಿ ಕಂಡುಬರತ್ತದೆ.

ಕೇಂದ್ರದವರು ರಾಷ್ಟ್ರದೆಲ್ಲೆಲ್ಲಾ ಸಮಾನ ಆಚರಣೆ, ಸಮಾನ ಪದ್ಧತಿಗಳಿಗಾಗಿ ಯೋಗ್ಯ ಸೂಚನೆಗಳನ್ನು ಕೊಡುವುದು ಅವಶ್ಯಕ.

ಮದ್ರಾಸ್ ಪ್ರಾಂತದಲ್ಲಿ ನೀರಾವರಿ ಯೋಜನೆಗಳಿಗಾಗಿ, ಜುಲೈ ಯಾ ಆಗಸ್ಟಿಂಗಳಲ್ಲಿ ಸರ್ಕಾರವು ಸಾಲ ತೆಗೆಯಬೇಕೆಂದು ನಿರ್ಧರಿಸಿದೆ

ಶ್ರೀ ರಾಜಗೋಪಾಲಾಚಾರಿಯವರು ಸಂಪೂರ್ಣ ಗುಣ ಹೊಂದಿರುವರು. ಅವರು ಊಟಿಯಿಂದ ಮದ್ರಾಸಿಗೆ ಜೂಲೈ ೫ಕ್ಕೆ ಬಂದಿದ್ದು ನಂತರ ದೆಲ್ಲಿಗೆ ಹೊರಡುವರು.

ಶ್ರೀಮಜ್ಜೀವಿಗಳ ಕಾರ್ಖಾನೆ

ಉತ್ತರ ಪ್ರದೇಶದ ಗಿರಣಿಯೊಂದರಲ್ಲಿ ಶ್ರೀಮಜ್ಜೀವಿಗಳೇ ಆಡಳಿತ ನಡೆಸಬೇಕೆಂದೂ ಅದರ ಲಾಭನಷ್ಟಗಳಿಗೆ ಜವಾಬ್ದಾರರಾಗಬೇಕೆಂದೂ ನಿಶ್ಚಯವಾಗಿದೆ ಈ ಸಮಿತಿಯಲ್ಲಿ ಸರ್ಕಾರದ ಒಡೆಯರ. ಸದಸ್ಯರೂ ಇದ್ದಾರೆ.

ಮುಂದುವರಿದ ಪ್ರಯೋಗಗಳು

ಬೆರಕೆ ಗೋವಿನ ಜೋಳದ ಜಾತಿಗಳು ಜವಾರಿ ಜಾತಿಗಳಿಗಿಂತ ಉತ್ತಮವಿವೆ ಎಂಬುದು ಜಬೇರೆ ಬೇರೆ ಪ್ರಯೋಗಗಳಲ್ಲಿ ಕಂಡುಬಂದಿತು. ಪ್ರಯೋಗಗಳಲ್ಲಿಯ ಗೊಬ್ಬರ ಪ್ರಮಾಣ (ಎಕರೆಗೆ ೫ ಬಂಡಿ ದಡ್ಡೀಗೊಬ್ಬರ) ಸಾಕಷ್ಟಿದ್ದಿಲ್ಲ ವೆಂದು ಎನಿಸಹತ್ತಿದೆ. ಏಕೆಂದರೆ ಸ್ಥಾನಿಕ ಒಕ್ಕಲಿಗರು ೧೫ ರಿಂದ ೨೦ ಬಂಡಿ ಗೊಬ್ಬರವನ್ನು ಉಪಯೋಗಿಸುತ್ತಾರೆ. ಈ ಕಾರಣಗಳಿಂದಾಗಿ ಬೆರಕೆ ಜಾತಿಗಳ ನಿಜವಾದ ಯೋಗ್ಯತೆ ಇನ್ನೂ ಕಂತು ಬಂದಿಲ್ಲ. ಇನ್ನು ಮುಂದಿನ ಪ್ರಯೋಗಗಳಲ್ಲಿ ಪರಮಾವಧಿ ಗೊಬ್ಬರವನ್ನು ಉಪಯೋಗಿಸಲಾಗುವದು.

ಬೆರಕೆ ಗೋವಿನ ಜೋಳದ ಕಾಳುಗಳು ಜವಾರಿ ಕಾಳುಗಳಂತೆಯೇ ಇವೆ. ಅವು ದುಂಡಗೆ ಹಳದಿ ಬಣ್ಣದವಿದ್ದು ಸ್ವಲ್ಪ ಹೊಳೆಯುತ್ತವೆ. ಬೆಳೆಣಿಗೆಯ ಅವಧಿಯೂ ಅಷ್ಟೇ ಇದೆ; ರೀತಿ ಮಾಡಲು ೪೫ ರಿಂದ ೫೦ ದಿವಸ, ಫಲ ಬರಲು ೬೫ ರಿಂದ ೧೦೦ ದಿವಸ.

೧೯೪೯-೪೯ ರಲ್ಲಿ ಅಮೇರಿಕನ್ ಬೆರಕೆ ಜಾತಿಗಳನ್ನು ಪ್ರಯೋಗಿಸಲಾಯಿತು. ಆದರೆ ಆ ವರುಷ ಈ ರು ಜಿಣಿಗಿ ರೋಗ ಕಗಲಿ ಹುಟ್ಟುವಳಿ ಕಡಿಮೆ ಬಂದಿತು.

ಅಮೇರಿಕೆಯಿಂದ ಮತ್ತೆ ಕೆಲವು ಬೆರಕೆ ಜಾತಿಗಳನ್ನು ತರಿಸಲಾಗಿದೆ. ಅವನ್ನೂ ಈ ವರುಷದ ಪ್ರಯೋಗಗಳಲ್ಲಿ ಉಪಯೋಗಿಲಾಗುವದು.

ಯೂಸುಫ್ ಮೆಹರಾಲಿಯವರ ನಿಧನ

ಸುಪ್ರಸಿದ್ಧ ಸಮಾಜವಾದಿ ಮುಖಂಡರು

ಮೆಹರಾಲಿಯವರು ತಿಂಗಳು ತಾ॥ ಹೃದಯ ವಿಕಾರದಿಂದ ಮರಣ ಹೊಂದಿದರು. ನಿಧನದ ಕಾಲಕ್ಕೆ ಅವರಿಗೆ ೪೪ ವರ್ಷವಾಗಿತ್ತು. ಅವರು ಬೊಂಬಾಯಿ ಮೇಯರ್ ರಾಗಿದ್ದು ರಾಷ್ಟ್ರೀಯ ಚಳವಳಿಯಲ್ಲಿ ಮುಖ್ಯವಾಗಿ ೧೯೪೨ರ ಚಲೇ ಜಾವ್ ಚಳವಳಿಯಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

ಸೋಶಿಯಲಿಸ್ಟ ಪಾರ್ಟಿ ಪಕ್ಷದ ನಾಯಕರಾದ ಶ್ರೀ ಜಯಪ್ರಕಾಶ ನಾರಾಯಣರು, ಕೋರಿಯಾ ಸಂದರ್ಭದಲ್ಲಿ ದಕ್ಷಿಣ ಕೋರಿಯಾಕ್ಕೆ ತೆರಳಿ ಸಾನು ಭೂತಿಯನ್ನು ಸೂಚಿಸಿದ್ದಾರೆ.

ಕೋರಿಯಾ

ಕೋರಿಯಾ ದೇಶವು ಮಂಚೂರಿಯಾದ ದಕ್ಷಿಣಕ್ಕೆ ದಕ್ಷಿಣೋತ್ತರ ೬೦೦ ಮೈಲು ಉದ್ದ ಮತ್ತು ಪೂರ್ವ ಪಶ್ಚಿಮ ೧೩೫ ಮೈಲು ಅಗಲವಾದ ಒಂದು ದ್ವೀಪ ಕಲ್ಪವಿದೆ. ಇದು ಯುರೋಪದ ಇಟಲಿಯು ಭೂಮಧ್ಯ ಸಮುದ್ರದಲ್ಲಿರಿದಂತೆ ಜಪಾನ ಸಾಗರ ಮತ್ತು ಪೀತ ಸಮುದ್ರಗಳ ನಡುವೆ ಇಳಿದಿದೆ. ಇದಕ್ಕೆ ೧೯೪೦ ಮೈಲು ಸಮುದ್ರ ಕರಾವಳಿ ಇದ್ದು ಜಪಾನದ ಮೂಲ ಭೂಮಿ ಅಥವಾ ಚೀನದ ಮೂಲಭೂಮಿಗೆ ತೀರ ಸಮೀಪದ ತುದಿಯಿಂದ ೧೭೨ ಮೈಲು ಅಂತರವಿದೆ. ಕ್ಷೇತ್ರ ವಿಸ್ತಾರವು ೮೫,೨೨೦ ಮೈಲು ಅಂದರೆ ಗ್ರೇಟಬ್ರಿಟನದ ೩ ರಷ್ಟಿದೆ. ಜನಸಂಖ್ಯೆ ಸುಮಾರು ೨ ಕೋಟಿ ೩೦ ಲಕ್ಷದಷ್ಟಿದೆ. ಹವೆ ಸಮಶೀತೋಷ್ಣದ್ದು; ಗುಡ್ಡಗಾಡು ಪ್ರದೇಶ ಬಾಗಾರ, ಬೆಳ್ಳಿ, ಕಲ್ಲಿದ್ದಲಿ, ಕಬ್ಬಿಣ ಮತ್ತು ಇತರ ಧಾತುಗಳು ಹಾಗೂ ಖನಿಜ ದ್ರವ್ಯಗಳು ವಿಪುಲವಾಗಿ ದೊರೆಯುತ್ತವೆ. ಒಕ್ಕಲುತನಕ್ಕೂ ಸಾಕಷ್ಟು ಎಡೆಯಿದ್ದು ಒಳ್ಳೇ ಫಲವತ್ತಾದ ಭೂಮಿಯೂ ಸಾಕಷ್ಟಿದೆ. ಮುಖ್ಯಬೆಳೆ ಅಕ್ಕಿ, ಅನರಿಕಾಳು ಮೊದಲಾದುವು.

ಕೋರಿಯಾದೇಶವು ಮೊದಲಿನಿಂದಲೂ ಸ್ವತಂತ್ರವಿತ್ತು. ಅಲ್ಲಿಯ ವಿಕ್ಷಿಪ್ತ ಹವಾಮಾನದ ಮೂಲಕ ಜನರು ಆಲಸಿಗಳೂ ನಿರುದ್ಯೋಗಿಗಳೂ ಆಗಿರುವರು. ಕೋರಿಯನ್ನರು ಮಂಚೂರಿಯನ್ನರಂತೆಯೇ ಆಕಾರ ಮತ್ತು ಗುಣದವರಿರುವರು. ಈ ದೇಶದ ಆಧಿಪತ್ಯಕ್ಕಾಗಿ ಜಪಾನ, ಚೀನಗಳಲ್ಲಿ ಅನೇಕ ಸಾರಿ ಯುದ್ಧಗಳಾಗಿ ಅನೇಕ ಸಾರಿ ಹಸ್ತಾಂತರವಾಗಿದೆ. ಆದರೆ ೧೯೧೦ ರಲ್ಲಿ ಜಪಾನವು ಅದರ ಮೇಲೆ ತನ್ನ ಸಂಪೂರ್ಣ ಆಧಿಪತ್ಯವನ್ನು ಸ್ಥಾಪಿಸಿತು. ಮತ್ತು ಅನಂತರ ಅಲ್ಲಿ ಅನೇಕಾನೇಕ ಸಂವರ್ಧನೆಯ ಯೋಜನೆಯನ್ನು ಕೈಕೊಂಡಿತು. ಯುದ್ಧವು ಮುಗಿಯುವವರೆಗೆ ಜಪಾನೀಯರ ಕೈಯಲ್ಲಿ ಉಳಿದು ದ್ವಿತೀಯ ಯುದ್ಧಾನಂತರ ಅದು ಸ್ವತಂತ್ರ ರಾಷ್ಟ್ರವಾಗಿ ಪರಿಗಣಿಸಲ್ಪಟ್ಟಿದೆ.

ಚೀನದಲ್ಲಿಯ ರಾಷ್ಟ್ರೀಯ ಸರಕಾರವು ಸದಭ್ರಷ್ಟವಾಗಿ ಕಮ್ಯುನಿಸ್ಟ ಸರಕಾರವು ಆಸ್ತಿತ್ವದಲ್ಲಿ ಬಂದಂದಿನಿಂದ ಕಮ್ಯುನಿಸ್ಟರ ಪ್ರಭಾವವು ಉತ್ತರ ಕೋರಿಯಾದ ಮೇಲೆ ಬೀಳಲಾರಂಭಿಸಿತು. ಮತ್ತು ಕೋರಿಯಾದಲ್ಲಿ ಸಹ ಕಮ್ಯುನಿಸ್ಟರ ಏರಾಟಿಕೆಯು ಹೆಚ್ಚುತ್ತ ಇಂದು ಅದೊಂದು ರಣಭೂಮಿಯಾಗಿ ಪರಿಣಮಿಸಿದೆ. ಉತ್ತರ ಕೋರಿಯಾದ ಮೇಲೆ ಕಮ್ಯುನಿಸ್ಟರ ಪ್ರಾಬಲ್ಯವಿದ್ದು ಅವರಿಗೆ ರಶಿಯದ ಬೆಂಬಲವೂ ದಕ್ಷಿಣ ಕೋರಿಯಾದ ಮೇಲೆ ಜಪಾನದ ನಿಯಂತ್ರಕರಾದ ಅಮೇರಿಕನರ ವರ್ಚಸ್ಸು ಇದ್ದು ಅಮೇರಿಕೆಯ ಬೆಂಬಲವೂ ಇರುವದರಿಂದ ಈಗ ಪ್ರಾರಂಭವಾಗಿರುವ ಈ ಯುದ್ಧದ ಕಿಡಿಯು ಇನ್ನೊಂದು ಮಹಾಯುದ್ಧದ ವಡವಾನಲವನ್ನು ಪಸರಿಸಲು ಎಲ್ಲ ಕಾರಣವಾಗುವದೋ ಎಂಬ ಭೀತಿಗೆ ಎಡೆಯನ್ನುಂಟುಮಾಡಿದೆ.

ಕೋರಿಯಾ ಯುದ್ಧದಲ್ಲಿ ರಷ್ಯನರು ತಮ್ಮ ಯುದ್ಧ ವಿವಾನಗಳನ್ನು ಉಪಯೋಗಿಸಿರುವರೆಂದೂ, ಸವಾನದಮೇಲೆ ಬಾಂಬುದಾಳಿ ಮಾಡಿರುವರೆಂದೂ ವ್ಯಕ್ತವಾಗಿದೆ.

ಭಾರತ ಸರ್ಕಾರವು ಸೆಕ್ಯೂರಿಟಿ ಕೌನ್ಸಿಲ್‌ದ ತೀರ್ಮಾನಕ್ಕೆ ತನ್ನ ಒಪ್ಪಿಗೆಯನ್ನಿತ್ತು ಕೋರಿಯಾದ ಬಗ್ಗೆ ಅಮೆರಿಕಾದ ಧೋರಣೆಗೆ ಸಮ್ಮತಿ ಕೊಟ್ಟಂತಾಗಿದೆ.

ನೋಟೀಸು

ಮಾನ್ಯ ಶ್ರೀ ಹೊಸಪೇಟೆ ಡಿವಿಜನ್ ಮುನ್ಸಿಫ್ ಕೋರ್ಟಿನಲ್ಲಿ

Sc 85/50

ಅಲಬೂರು ಬಸಪ್ಪ .....ವಾದಿ

Vs

ನೋರಗೆರೆ ಮೋದೀನ್‌ಸಾಬು
ಕೊಂಗನ ಹೊಸೂರು
ತಾಲೂಕು ಹರಪನಹಳ್ಳಿ } ಪ್ರತಿವಾದಿ

ವಾದಿಯು ನಿನ್ನಮೇಲೆ ರೂ. 46-6-6 ಗೆ ದಾವಾ ಮಾಡಿರುತ್ತಾನೆ. ಸದರಿ ದಾವೆಯು 27-7-50ಕ್ಕೆ ವಾಯಿದೆ ಹಾಕಲಾಗಿದೆ. ನಿನಗೇನಾದರೂ ಆಕ್ಷೇಪಣೆ ಇದ್ದಲ್ಲಿ ಆ ದಿನ ನ್ಯಾಯಕಾಲ 11 ಗಂಟೆಗೆ ಖುದ್ದಾಗಲಿ ವಕೀಲರ ಮೂಲಕವಾಗಲಿ ಕೋರ್ಟಿಗೆ ಹಾಜರಾಗಿ ತಿಳಿಸಕ್ಕದ್ದು. ಇಲ್ಲವಾದರೆ ನಿನ್ನಮೇಲೆ ಎಕ್ಸ್‌ಪಾರ್ಟಿ ಡಿಕ್ರೀ ಆಗುತ್ತದೆ.

ಹೊಸಪೇಟೆ
3-7-50 } ಹು. ಗೋವಿಂದಾಚಾರ್
ಅಡ್ವೋಕೇಟ್

120

(೫ನೇ ಪುಟದಿಂದ ಮುಂದುವರಿದುದು.)

೧೯೫೦ನೇ ಜುಲೈ ತಿಂಗಳ ❀ ಭವಿಷ್ಯ ❀

"ಸುಧಾಕರ ಹುಬ್ಬಳ್ಳಿ"

ವ್ಯಾಪಾರದಲ್ಲಿ ಇಮ್ಮಡಿ ಲಾಭ ಸಿಗುವದು. ಸಿವಿಲ್ ಕ್ರಿಮಿನಲ್ ವ್ಯಾಜ್ಯದಲ್ಲಿ ಜಯ. ವಿದ್ಯಾರ್ಥಿ-ವಿದ್ಯಾರ್ಥಿನೀಯರಿಗೆ ಅಭ್ಯಾಸ ಅಟ ನೋಟದಲ್ಲಿ ಕಾಲಕ್ರಮಣ, ದೇಹಾರೋಗ್ಯ-ಸ್ತ್ರೀಪುತ್ರಾದಿಕರ ಸುಖ, ವಾಹನಸುಖ, ಪ್ರವಾಸದಲ್ಲಿ ದ್ರವ್ಯಹರಣ. ಸತ್ಪ್ರತಿನಹಾರದಲ್ಲಿ ಉದ್ವಿಗ್ನಹೇತುವು ಸಾಧಿಸುವದು. ಶುಕ್ರವಾರ ಘಾತವಿರುವದರಿಂದ ನೂತನ ವಸ್ತ್ರಧಾರಣಾದಿಗಳನ್ನು ಮಾಡಕೂಡದು.

ಧನು:- ನಿಷ್ಕ್ರಿಯ ನಡಾವಳಿಯಿಂದ ಅಪೇಕ್ಷಿತ ಮಿತ್ರವರ್ಗದವರು ಔದಾಸೀನ್ಯತೆಯನ್ನು ತೋರಿಸುವರು. ಸ್ವಂತ ಉದ್ಯೋಗವು ಏರುತ್ಸಾಹಯುಕ್ತ ಸಾಗುವದು. ವ್ಯಾಪಾರದಲ್ಲಿ ಹೋದ ತಿಂಗಳಕ್ಕಿಂತ ಸ್ವಲ್ಪು ಹೆಚ್ಚು ಲಾಭವಾಗುವದು. ನವೆಕರಿಯಲ್ಲಿ ತ್ರಾಸವೆನಿಸುವದು. ವೃಥಿರಲೋಚನೆ ತ್ರಾಸವೆನಿಸುವದು. ಹಳೇದೋಗಿಗೆ ತ್ರಾಸ ಕಡಿಮೆ. ದೇಹಾರೋಗ್ಯ-ಸ್ತ್ರೀಪುತ್ರಾದಿಸುಖ ಕೊಂಚ ತ್ರಾಸಯುಕ್ತ. ದುಷ್ಟ ಪ್ರಾಣಿಗಳಿಂದಲೂ, ಕೀಟಕಾದಿಗಳಿಂದಲೂ ಅಪಾಯವಿರುವದು. ಅಬ್ಬಗ್ಗೆ ಜಾಗರೂಕತೆಯಿಂದ ಇರತಕ್ಕದ್ದು. ಶಿವಿಲ ಕ್ರಿಮಿನೆಲ್ ವ್ಯಾಜ್ಯದಲ್ಲಿ ದ್ರವ್ಯಹರಣ ಮಾತ್ರವಾಗುವದು. ವಿದ್ಯಾರ್ಥಿಗಳಿಗೆ ಅಭ್ಯಾಸದಲ್ಲಿ ಪ್ರವೃತ್ತಿ. ಶುಕ್ರವಾರವು ಘಾತವಾರವಿರುವದರಿಂದ ಹೊಸ ಸ್ನೇಹನನ್ನು ಪ್ರಾರಂಭಿಸಕೂಡದು. ಈ ತಿಂಗಳ ಮಿಶ್ರ ಫಲಗಳಿರುವವು.

ಮಕರ:- ಕೈಕೊಂಡ ಉದ್ಯೋಗವು ಯಶಸ್ವಿಯಾಗುವಲ್ಲಿ ಸಂದೇಹವಿಲ್ಲ. ಅದರ ಲಾಭವೃದ್ಧಿಯ ಸಲುವಾಗಿ ನಾಲ್ಕುದುಡ್ಡು ಖರ್ಚುಮಾಡಬೇಕಾಗುವುದರಿಂದ ಹೆಚ್ಚು ಖರ್ಚು ಬರುವದು ವ್ಯಾಪಾರದಲ್ಲಿ ಹೋದ ತಿಂಗಳಿಗಿಂತ ಹೆಚ್ಚು ಲಾಭದೊರೆಯುವದು. ಜನತಾ ಸಹಾಯವು ದೊರೆಯುವದಲ್ಲದೆ, ಮಾನ ಮರ್ಯಾದೆಗಳು ದೊರೆಯುವವು. ಧರ್ಮಕಾರ್ಯದಲ್ಲಿ ಆಸಕ್ತಿ. ದೇಹಾರೋಗ್ಯ ಸ್ತ್ರೀಪುತ್ರಾದಿಕರಸುಖ ಉತ್ತಮದೊರೆಯುವದು. ಷಟ್ಪಾವ್ಯಾಪಾರ ಸ್ಥಾವರಾಸ್ತಿ ಖರೀದೀ ವಿಕ್ರಿ ಇವುಗಳಲ್ಲಿ ಹೆಚ್ಚಿನ ಲಾಭ ಸಿಗಲಾರದು. ಅಷ್ಟವು ಶನಿಯ ಪರಿಣಾಮದಿಂದ ವೃಥಾಲೋಚನೆ, ಮಾನಸಿಕ ತ್ರಾಸುಗಳು ಕಡಿಮೆ. ಘಾತವಾರವು ವಿದ್ಯಾರ್ಥಿಗಳಿಗೆ ಅಭ್ಯಾಸಕ್ಕಿಂತಲೂ ಆಟಪೋಟಿಗಳಲ್ಲಿ ಪ್ರವೃತ್ತಿ. ಮಂಗಳವಾರ ಘಾತವಾರವಿರುವದರಿಂದ ಹೆಚ್ಚಿನ ಕಾರ್ಯ ಪ್ರಾರಂಭಿಸಕೂಡದು.

ಕುಂಭ:- ನಿಷ್ಕ್ರಿಯತೆಗೆ ಈ ತಿಂಗಳಲ್ಲಿ ಮಿಶ್ರಫಲಗಳು ದೊರೆಯುವದರಿಂದ ಉತ್ಸಾಹ-ನಿರುತ್ಸಾಹಗಳೆರಡು ಪದೇ ಪದೇ ತೋರುವುವು. ವ್ಯಾಪಾರ ಉದ್ಯೋಗಗಳಲ್ಲಿ ಮುಳ್ಳೆಯು. ಲಾಭ, ಪ್ರಾಪ್ತಿಗಿಂತ ಖರ್ಚು ಹೆಚ್ಚು ಬರುವದು. ಹೊಸ ಉದ್ಯೋಗ, ನೌಕರಿ ಪ್ರಯತ್ನ. ಸಟ್ಟಾ ವ್ಯಾಪಾರಾದಿಗಳಲ್ಲಿ ಮನಸ್ಸು ಹಾಕಕೂಡದು ಕೃಷಿ ಸ್ಥಾವರಾಯದಲ್ಲಿ ಹೆಚ್ಚು ಖರ್ಚು. ಧರ್ಮಕಾರ್ಯದಲ್ಲಿ ಆಸಕ್ತಿ ಬಂಧುಗಳಲ್ಲಿ ಸ್ಥಾನಭ್ರಷ್ಟ ಸಂಬಂಧ ಕಲಹ. ದೇಹಾರೋಗ್ಯ ಸ್ತ್ರೀಪುತ್ರಾದಿಗಳ ಸುಖ ವಾಹನ ಸುಖಾದಿಗಳು ಕೊಂಚ ತ್ರಾಸಯುಕ್ತವಿರುವವು. ಶಿವಿಲ ಕ್ರಿಮಿನೆಲ್ ವ್ಯಾಜ್ಯದಲ್ಲಿ ದ್ರವ್ಯಹರಣವಾದರೂ ಅಪಯಶವಿಲ್ಲ ಗುರುವಾರ ಘಾತವಾರವಿರುವದು.

ಮೀನ:- ಗ್ರಹರಾಜನಾದ ಶನಿಯು ಅನುಕೂಲವಿರುವದರಿಂದ ವ್ಯಾಪಾರ-ಉದ್ಯೋಗ ನೌಕರಿ ಇವುಗಳಲ್ಲಿ ತ್ರಾಸವಿಲ್ಲ. ಹೋದ ತಿಂಗಳಕ್ಕಿಂತ ಈ ತಿಂಗಳು ವ್ಯಾಪ್ತಿ ದೃಷ್ಟಿಯಿಂದ ಅನುಕೂಲವಿರುವದು. ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೂ, ಹೆಣ್ಣುಮಕ್ಕಳಿಗೂ ಈ ತಿಂಗಳು ಅನಂದದಾಯಕವಾಗಿ ಪರಿಣಮಿಸುವದು. ಶಿವಿಲ ಕ್ರಿಮಿನೆಲ್ ವ್ಯಾಜ್ಯಗಳಲ್ಲಿ ಅಪಜಯವಾಗುವ ಸಂಭವವಿರುವದು. ಗುರುವು ಪ್ರತಿಕೂಲವಿರುವದರಿಂದ ದೇವ ಮನುಷ್ಯಾನನ್ನ ಪೂಜಿಸಿದರೆ ನಿಮ್ಮ ಕಾಮನೆಯು ಸಿದ್ಧಿಯಾಗುವದು. ದೇಹಾರೋಗ್ಯ ಸ್ತ್ರೀಪುತ್ರಾದಿಕರ ಸುಖ ಇಚ್ಛಿತ ಪ್ರಕಾರ ದೊರೆಯುವದು. ಹಳೇದೋಗಿಗೆ ತ್ರಾಸ ಕಡಿಮೆಯೆನಿಸುವದು. ಸಟ್ಟಾವ್ಯಾಪಾರದಲ್ಲಿ ಲಾಭವಿರುವದು. ಸ್ಥಾವರಾಸ್ತಿ ಖರೀದಿ ವಿಕ್ರಿ ಇವುಗಳಲ್ಲಿ ಲಾಭವಿರುವದು. ಶುಕ್ರವಾರ ಘಾತವಾರವಿರುವದರಿಂದ ಕೋರ್ಟು ಕಚೇರಿಗಳ ಕೆಲಸದಲ್ಲಿ ಮನಸ್ಸು ಹಾಕಬೇಡಿರಿ

ಸರ್ವೇಜನಾಃ ಸುಖಿನೋಭವಂತು

ಕೋರಿಯಾ ಯುದ್ಧದಲ್ಲಿ ಸಹಾಯ ಮಾಡುವುದು ಬೇಡ

ಶ್ರೀ ಗುರುಸ್ವಾಮಿಯವರ ಎಚ್ಚರಿಕೆ.

ಶ್ರೀದುಂತಶಾಖಾ ಜನರ ಮಾತಿಗೆ ಗುರುಳಾಗಿ ಅಮೆರಿಕೆಯು ಇನ್ನಷ್ಟು ಟ್ರೂಮನ್ನರ ಹೊಡೆತಗಳನ್ನು ಕೋರಿಯಾ ಯುದ್ಧಕ್ಕೆ ಭಾರತವು ಸೈನ್ಯ ಸಹಾಯವನ್ನಾಗಲಿ, ಇತರ ಸಹಾಯವನ್ನಾಗಲಿ ಮಾಡಬಾರದೆಂದು ಅಖಿಲ ಭಾರತ ರೈಲ್ವೆ ನೌಕರರ ಮಹಾಮಂಡಳದ ಪ್ರಧಾನ ಕಾರ್ಯದರ್ಶಿ ಶ್ರೀ ಗುರುಸ್ವಾಮಿಯು ಪರಮಶಾಂತಿಯ ತವರಾದ ಹುಬ್ಬಳ್ಳಿ ಕೆಲಸಗಾರರ ಸಭೆಯಲ್ಲಿ ಮಾತಾಡುತ್ತ ಭಾರತ ಸರ್ಕಾರದವರನ್ನು ಎಚ್ಚರಿಸುವದು ಉಚಿತವೆಂದು ನಮ್ಮ ಪತ್ರಿನಿಧಿಯಲ್ಲಿ ತಿಳಿಸಿದ್ದಾರೆ.

ಭಾರತವು ಸ್ವತಂತ್ರವೆಂದು ಪರಿಗಣಿಸಲ್ಪಡುವದಾದರೂ, ಶೈಕ್ಷಣ, ಸೋತ್ಪಾದಗಳಲ್ಲಿನ ಸ್ವಾತಂತ್ರ್ಯಗಳೆ ಇನ್ನಿನ್ನೂ ಸಾಧಿಸಬೇಕಾದ ತಕ್ಕಿಗಳು ಮಿಡಿಯಾದಲ್ಲಿ ಕಾಲಿಡದಂತೆ ಹೊರಗಿನ ಕಾಲು ಬಂದಿದೆ. ಏನೇ ಇರಲು ತಾತ್ಕಾಲಿಕ ಸಿದ್ಧಾಂತದ ಬೇಟಿ ಭಾರತ ಸರ್ಕಾರವು ಭದ್ರತಾ ಮಂಡಳಿಯ ತೀರ್ಮಾನಕ್ಕೆ ತನ್ನ ನೈತಿಕ ಬೆಂಬಲನನ್ನು ಕೊಟ್ಟಿತು.

ಭಾರತಕ್ಕಿಂತಲೂ ಅಮೆರಿಕಾ, ಬ್ರಿಟನ್‌ಗಳ ಸಂಬಂಧ ಭಾರತದ ಆರ್ಥಿಕ ಪರಿಸ್ಥಿತಿಯನ್ನು ಅನುಲಕ್ಷಿಸಿ ಅಮೆರಿಕಾ, ಬ್ರಿಟನ್‌ಗಳನ್ನು ಸಂತೃಪ್ತಿಪಡಿಸಲು ಭಾರತ ಸರ್ಕಾರವು ಹೀಗೆ ವರ್ತಿಸಿದುದರಲ್ಲಿ ಏನೂ ಆಶ್ಚರ್ಯವಿಲ್ಲ. ಆದರೆ ಹಿಂದಿನ ಯುದ್ಧಗಳಲ್ಲಿ ಪರರಾಷ್ಟ್ರಗಳ ಸಾಮ್ರಾಜ್ಯಾಭಿವೃದ್ಧಿಗಾಗಿ ಭಾರತವು ದಿವಾಳಿಯಾಗುವ ಪ್ರಸಂಗ ಬಿಟ್ಟಿಲ್ಲದ, ಜನರನ್ನು ಬಲಿಹಿಂದಿಟ್ಟಿಲ್ಲವೆಂಬ ಕೆ. ಒತ್ತಾಯದ ಸೈನ್ಯಬಲದಿಂದ, ಒತ್ತಾಯದ ಹಣವಸೂಲಿಯಾಯಿತು. ಪೆರೋಧಿಗಳಾದವರನ್ನು ಸೆರೆಮನೆಯಲ್ಲಿಟ್ಟು ಸಂಕಷ್ಟಕರದ ಹಿಂಸೆ ಮಾಡಲಾಯಿತು. ಆದರೆ ಈಗ ರಾಷ್ಟ್ರೀಯ ಸರ್ಕಾರವು ಅಸ್ತಿತ್ವದಲ್ಲಿರುವಾಗಲೂ ಇಂಥಾ ಕೃತ್ಯಗಳ ಕಡಿಮೆಯಾಗದಿದ್ದರೇ ಅಲ್ಲಿ ಫಿರಂಗಿಯಿಂದ ಯುದ್ಧಕ್ಕೆ ಸಕ್ರಿಯ ಸಹಾಯವು ದೊರೆಯಲಿಕ್ಕಿಲ್ಲವೆಂದು ಭಾವಿಸುತ್ತೇವೆ.

ವೀರಶೈವ ಕಾಲೇಜ್-ಬಳ್ಳಾರಿ

ಬಳ್ಳಾರಿಯ ವೀರಶೈವ ಕಾಲೇಜಿಗೆ ಶ್ರೀ ಬಿ. ಎನ್ ಗೌಡರು ಪ್ರಿನ್ಸಿಪಾಲರಾಗಿ ನಿಯುಕ್ತರಾಗಿದ್ದಾರೆ. ಇವರು ಅನಂತಪುರದ ಗವರ್ನಮೆಂಟ್ ಕಾಲೇಜಿನ ಪ್ರಿನ್ಸಿಪಾಲರಾಗಿ ನಿವೃತ್ತರಾಗಿದ್ದರು.

೧೯೫೦ ನೇ ಜುಲೈ ತಿಂಗಳ ಫಲ ಭವಿಷ್ಯ

["ಸುಧಾಕರ" ಹುಬ್ಬಳ್ಳಿ]

ಮೇಷ, ಈ ತಿಂಗಳ ಮಧ್ಯದಲ್ಲಿ ಆರೋಗ್ಯಕ್ಕೆ ಬಾಧಕವಾಗುವ ಸಂಭವವಿರುವದು. ಸ್ತ್ರೀಪುತ್ರಾದಿಗಳ ಸುಖವು ಅನುಕೂಲ ಕೋರ್ಟು-ಕಚೇರಿಗಳ ಕೆಲಸವನ್ನು ಹೊಸದಾಗಿ ಪ್ರಾರಂಭಿಸ ಕೂಡದು ಇದ್ದುದನ್ನು ಮುಂದೆ ಹಾಕಿ ಕೆಲಸಕ್ಕೆ ಪ್ರಯತ್ನಿಸಬೇಕು. ವ್ಯಾಪಾರ-ಉದ್ಯೋಗಗಳಲ್ಲಿ ಹೆಚ್ಚಿನ ಲಾಭವಿಲ್ಲ. ಲುಕ್ಸಾನವೂ ಇಲ್ಲ ಕೃಷಿ ವ್ಯವಸಾಯದ ಕಡೆಗೆ ವಿಶೇಷ ಲಕ್ಷ್ಯ. ತಮಗೆ ತಕ್ಕಷ್ಟು ಖರ್ಚು, ನೌಕರಿಯಲ್ಲಿ ತ್ರಾಸವಿಲ್ಲ. ರೋಗಿಗೆ ತ್ರಾಸವು ದಿನೆ ದಿನೆ ಹೆಚ್ಚುವ ಸಂದರ್ಭವಿರುವದು. ದೂರ ಪ್ರವಾಸದಲ್ಲಿ ಸೌಖ್ಯವಿಲ್ಲ. ಈ ತಿಂಗಳಲ್ಲಿ ೧೦ ಅಣೆ ತ್ರಾಸ ೬ ಅಣೆ ಸುಖ. ರವಿವಾರವು ಘಾತವಾರವಿರುವದರಿಂದ ಪ್ರವಾಸ ವರ್ಜ.

ವೃಷಭ:- ವ್ಯಾಪಾರ-ಉದ್ಯೋಗಗಳನ್ನು ನೌಕರದಾರರು ಅಧವಾ ಆಸ್ತರುಗಳನ್ನು ಅವಲಂಬಿಸಿ ಮಾತಕೂಡದು. ಲುಕ್ಸಾನ ತಟ್ಟೀತು, ಸ್ವಂತ ದುಡಿತದಲ್ಲಿ ಲಾಭವಿರುವದು ನೌಕರಿಯಲ್ಲಿ ವರಿಷ್ಠ ಅಧಿಕಾರಿಗಳ ಪ್ರೀತಿಯು ವೃದ್ಧಿಂಗತವಾಗುವದು. ಆಸ್ತೀಪ್ಪರ ಅಕಸ್ಮಿಕ ಭೆಟ್ಟಿ. ಶಿವಿಲ-ಕ್ರಿಮಿನಲ್ ವ್ಯಾಜ್ಯಗಳಲ್ಲಿ ದ್ರವ್ಯ ಹರಣವಾದರೂ ಯಶಸಿಗುವದು. ಧರ್ಮಾಕಾರ್ಯದಲ್ಲಿ ಆಸಕ್ತಿ, ದೇಹಾರೋಗ್ಯ-ಸ್ತ್ರೀಪುತ್ರಾದಿಕರ ಸುಖ ಮಧ್ಯಮ. ಚತುಷ್ಪಾದ ಪ್ರಾಣಿಗಳ ಕ್ರಯ ವಿಕ್ರಯದಲ್ಲಿ ಲಾಭ. ಹಳೇ ರೋಗಿಗೆ ಈ ತಿಂಗಳ ಮಧ್ಯದಿಂದ ತ್ರಾಸಕಡಿಮೆಯಿನಿಸುತ್ತ ಹೋಗುವದು. ಇದ್ದದ್ದನ್ನು ಬಿಡಬಾರದು ಹೆಚ್ಚಿನ ಕಾರ್ಯ ಕೈಕೊಳ್ಳಬಾರದು. ವಿಶ್ರಾ ಘಟಗಳು ಈ ತಿಂಗಳಲ್ಲಿ ದೊರೆಯುವವು.

ಮಿಥುನ:- ಈ ತಿಂಗಳಲ್ಲಿ ಹೆಚ್ಚಿನ ತ್ರಾಸಗಳಿರುವವು. ಅವುಗಳನ್ನು ಸಮ್ಯ ಆತ್ಮ ಸಂಯಮನದಿಂದ ನಿವಾರಿಸಬೇಕು. ವೃಥಾಯೋಚನೆ ಮಾನಸಿಕ ತ್ರಾಸಗಳು ಬಹಳ ವ್ಯಾಪಾರ-ಉದ್ಯೋಗಗಳಲ್ಲಿ ಮುಂದಗತಿ. ಆದರೂ ಪ್ರಾಪ್ತಿ ಅನುಕೂಲವಿರುವವು. ಹೊಸ ಉದ್ಯೋಗ-ಸಟ್ಟಾವ್ಯಾಪಾರ, ಸ್ಥಾವರ ಆಸ್ತಿ, ಖರೀದಿ ವಿಕ್ರಯಗಳಲ್ಲಿ ಮನಸ್ಸು ಹಾಕಕೂಡದು. ಲುಕ್ಸಾನವಿರುವದು. ರಾಜಕಾರಣದಲ್ಲಿ ಲಾಭವಿಲ್ಲ. ರೋಗಿಗೆ ತ್ರಾಸವು ಕಡಿಮೆಯಾಗುತ್ತ ಹೋಗುವದು. ವ್ಯಾಪಂಚಿಕೆ ಖರ್ಚು ಹೆಚ್ಚುವದು. ದುಡ್ಡಿನ ಅಡಚಣಿಯು ಉದ್ಭವಿಸುವದು. ಈ ತಿಂಗಳಲ್ಲಿ ೮ ಅಣೆ ತ್ರಾಸ ೮ ಅಣೆ ಸುಖ ಸೋಮವಾರ ಘಾತವಾರವಿರುವದರಿಂದ ಆದಿವಸ ರಾಜಕಾರಣದಲ್ಲಿ ಪ್ರವೇಶಿಸಕೂಡದು.

ಕರ್ಕ:- ಹಿಂದೆ ಪ್ರಯತ್ನಿಸಿದ ಕೆಲಸವು ಈ ತಿಂಗಳ ಮಧ್ಯದಲ್ಲಿ ಆಗುವದು. ವ್ಯಾಪಾರ ಉದ್ಯೋಗಗಳು ಅಷ್ಟೊಂದು ಭರಭರಾಟಿಯಿಂದ ನಡೆಯಲಾರವು. ಹೆಚ್ಚಿನ ಹವ್ಯಾಸಕ್ಕೆ ಹೋದರೆ ಲುಕ್ಸಾನ ಕಟ್ಟಿವ ಸಂದರ್ಭವಿರುವದು ನವಕರಿಯಲ್ಲಿ ತ್ರಾಸವಿಲ್ಲ ಪ್ರಾಪ್ತಿಗಿಂತ ಖರ್ಚು ಹೆಚ್ಚು, ಶಿವಿಲ ವ್ಯಾಜ್ಯದಲ್ಲಿ ನಾಲ್ಕುದುದ್ದು ಖರ್ಚು ಆದರೂ ಅಪಯಶವಿಲ್ಲ. ಪ್ರವಾಸದಲ್ಲಿ ಹೋದ ಕೆಲಸವು ಅನುಕೂಲವಾಗುವದು ವಕ್ರದೃಷ್ಟಿಯವರಲ್ಲಿ ಇಚ್ಛಿತ ಕಾರ್ಯ ಸಿದ್ಧಿಯಾಗಲಾರದು. ವರಿಷ್ಠ ಅಧಿಕಾರಿಗಳ ಸ್ನೇಹವಾಗುವದು. ದೇಹಾರೋಗ್ಯ ಸ್ತ್ರೀಪುತ್ರಾದಿಕರ ಸುಖ ಅನುಕೂಲವಿರುವದು. ಕೃಷಿ ವ್ಯವಸಾಯದಲ್ಲಿ ಅಭಿರುಚಿ, ವ್ಯಾಪ್ತಿ ದೃಷ್ಟಿಯಿಂದ ಹೋದ ತಿಂಗಳಕಿಂತ ಈ ತಿಂಗಳು ನೆಟ್ಟಗಿರುವದು. ಒಧು ವಾರವು ಘಾತವಿರುವದರಿಂದ ಹೊಸ ವ್ಯಾಪಾರದಲ್ಲಿ ಮನಸ್ಸು ಹಾಕಬಾರದು.

ಸಿಂಹ:- ಕೋರ್ಟು ಕಚೇರಿಗಳ ಕೆಲಸದಲ್ಲಿ ಪ್ರವೇಶಿಸಕೂಡದು. ಹಳೇರೋಗಿಗೆ ಸ್ಥಳಾಂತರಿಸಲಿಕ್ಕೆ ಬಾಧಕವಿರುವದು. ವ್ಯಾಪಾರ ಉದ್ಯೋಗಗಳಲ್ಲಿ ಲುಕ್ಸಾನವಿಲ್ಲ ದುಡ್ಡು ಎಷ್ಟೇಬಂದರೂ ಖರ್ಚಿನ ಪ್ರಸಂಗಗಳಿರುವದರಿಂದ ಆ ಅಡಚಣೆಯು ತಪ್ಪುವದಿಲ್ಲ. ನವಕರಿಯಲ್ಲಿ ವರಿಷ್ಠ ಅಧಿಕಾರಿಗಳ ತ್ರಾಸವು ಕೊಂಚ ಜಾಸ್ತಿಯಾಗುವದು. ಶನಿವಾರಗೂ ಮಾರುತಿಯ ಆರಾಧನೆಯನ್ನು ಅನಶ್ಯವಾಗಿ ಮಾಡತಕ್ಕದ್ದು. ಸಟ್ಟಾ ವ್ಯಾಪಾರ, ಸ್ಥಾವರ ಆಸ್ತಿ ಖರೀದಿ ವಿಕ್ರಯಗಳಲ್ಲಿ ಲುಕ್ಸಾನವಿರುವದು. ದೇಹಾರೋಗ್ಯ. ಸ್ತ್ರೀಪುತ್ರಾದಿಕರ ಸುಖ ಕೊಂಚ ತ್ರಾಸಯುಕ್ತ ಶನಿವಾರವು ಘಾತವಿರುವುದರಿಂದ ಹೊಸ ಕೆಲಸವನ್ನು ಪ್ರಾರಂಭಿಸಕೂಡದು ೧೦ ಅಣೆ ಕಷ್ಟ ೬ ಅಣೆ ಸುಖ ಈ ತಿಂಗಳು

ಕನ್ಯಾ:- ಈ ತಿಂಗಳಲ್ಲಿ ೨೯ರ ವರೆಗೆ ಒಂದಿಲ್ಲೊಂದುತರದ ತ್ರಾಸವು ತಪ್ಪಲಾರದು ಪ್ರಕೃತಿಯ ಬಗ್ಗೆ ಹೆಚ್ಚು ಕಾಳಜೀ ತೆಗೆದುಕೊಳ್ಳತಕ್ಕದ್ದು. ವಿಮಾನ, ಹಡಗು, ರೇಲ್ವೆ ಮೊದಲಾದವುಗಳಲ್ಲಿ ದೂರ ಪ್ರವಾಸವನ್ನು ಕೈಕೊಳ್ಳಕೂಡದು. ಹಳೇ ರೋಗಿಗೆ ತ್ರಾಸವಿನಿಸುವದು. ಶಿವಿಲ, ಕ್ರಿಮಿನಲ್ ವ್ಯಾಜ್ಯಗಳಲ್ಲಿ ಅಪಯಶವಿಲ್ಲ. ದುಷ್ಟ ಜನರ ಸ್ನೇಹದಿಂದ ಹಲ-ಕೆಲವು ಕೆಲಸಗಳು ಅನುಕೂಲವಾಗುವವು ಸಾಹಸ ಸುಖ. ಸ್ತ್ರೀಪುತ್ರಾದಿಕರ ಸುಖ ಮಧ್ಯಮ. ಚತುಷ್ಪಾದ ಪ್ರಾಣಿಗಳ ಕ್ರಯ-ವಿಕ್ರಯ, ಸ್ಥಾವರ ಆಸ್ತಿ ಖರೀದಿ ವಿಕ್ರಿ ಇವುಗಳಲ್ಲಿ ಲುಕ್ಸಾನವಿರುವದು. ಶನಿವಾರವು ಘಾತವಿರುವದರಿಂದ ಪ್ರಯಾಣ-ರಾಜಕಾರಣ ಇವುಗಳಲ್ಲಿ ಮನಸ್ಸು ಹಾಕ ಕೂಡದು. ೬ ಅಣೆ ಸುಖ ೯ ಅಣೆ ತ್ರಾಸದಿಂದ ಹೋಗುವದು.

ತುಳಾ:- ವ್ಯಾಪಾರ-ಉದ್ಯೋಗಗಳಲ್ಲಿ ಲಾಭ, ನೌಕರಿಯಲ್ಲಿ ತ್ರಾಸವಿಲ್ಲ. ವರಿಷ್ಠ ಅಧಿಕಾರಿಗಳ ಪ್ರೇಮವು ಬೆಳೆದು ಜುನ್ನತಿಯು ದೊರೆಯುವ ಸಂದರ್ಭವಿರುವದು. ಕೃಷಿ ವ್ಯವಸಾಯ, ಇನ್ನಿತರ ಉದ್ಯೋಗಗಳಿಗೆ ಅನುಕೂಲ, ಧರ್ಮಕಾರ್ಯದಲ್ಲಿ ಆಸಕ್ತಿ, ಕಚೇರಿ-ರಾಜಕಾರಣ ಮೊದಲಾದುವುಗಳಲ್ಲಿಯು ಕೆಲಸಗಳು ಸ್ರಯತ್ನದಿಂದ ಸಾಧ್ಯವಾಗುವವು. ಬಾಲಗ್ರಹ ಪೀಡಿತ ಶಿಶುಗಳಿಗೂ, ಗರ್ಭಿಣೀ ಸ್ತ್ರೀಯರಿಗೂ, ಆಪರೇಷನ್ ಮಾಡಿಸತಕ್ಕವರಿಗೂ ಕಡೆಯ ವಾರವು ಪ್ರತಿಕೂಲವಿರುವದು ಪ್ರಕೃತಿ ವ್ಯಾಪಂಚಿಕ ಸುಖ, ವಾಹನ ಸುಖಾದಿಗಳು ಉತ್ತಮವಾಗುವವಾರವು ಘಾತವಾರವಿರುವದರಿಂದ ಹೊಸದಾಗಿ ವ್ಯಾಪಾರವನ್ನು ವ್ಯಾರಂಭಿಸಕೂಡದು. ೧೦ ಅಣೆ ಸುಖ ೬ ಅಣೆ ತ್ರಾಸದಿಂದ ಹೋಗುವದು.

ವೃಶ್ಚಿಕ:- ಸ್ವಂತ ಉದ್ಯೋಗ ವ್ಯಾಪಾರಗಳಲ್ಲಿ ಹೆಚ್ಚಿನಲಾಭ. ನವಕರಿಯಲ್ಲಿ ತ್ರಾಸವಿಲ್ಲ. ಸನ್ಮಿತ್ರರ ಸಹಾಯ ಯೋಗ ದುಡ್ಡಿನ ಅಡಚಣಿಯಿಲ್ಲ. ಯಾತ್ರಿಕ ರಸಪದಾರ್ಥ, ಎಣ್ಣೆ, ಎಣ್ಣೇಕಾಳು, ಕಚ್ಚಾಸಾಮಾನು ಇವುಗಳ

(೬ನೇ ಪುಟ ನೋಡಿರಿ.)

ಬೆರಕೆ ಗೋವಿನ ಜೋಳ

ಜವಾರಿ ಗೋವಿನ ಜೋಳಕ್ಕಿಂತ ನೂರಕ್ಕೆ ೧೦ ರಿಂದ ೧೫ ರಷ್ಟು ಹೆಚ್ಚು ಹುಟ್ಟುವಳಿ ಕೊಡುವ ಬೆರಕೆ ಗೋವಿನ ಜೋಳದ ೨ ಪ್ರಕಾರಗಳನ್ನು ಒಕ್ಕಲತನ ಖಾತೆಯವರು ಹುಟ್ಟಿಸಿದ್ದಾರೆ. ವಿದೇಶಿ ಗೋವಿನ ಜೋಳದ ಪ್ರಕಾರಗಳನ್ನು ಬೆರಸಿ ಬೆರಕೆ ಗೋವಿನ ಜೋಳಗಳನ್ನು ಬೆಳೆಯಿಸುವ ಕಾರ್ಯ ಭರದಿಂದ ಸಾಗಿದೆ.

ಗೋವಿನ ಜೋಳ ಮುಂಬಯಿ ರಾಜ್ಯದ ಒಂದು ಉಪಧಾನ್ಯ. ಇದನ್ನು ಎರಡು ಕಡೆಯಲ್ಲಿ ಸ್ವಾಮುಖ್ಯವಾಗಿ ಬೆಳೆಯಲಾಗುತ್ತಿದೆ. ಪಂಚಮಹಾಲ ಜಿಲ್ಲೆಯಲ್ಲಿ ಭಿಲ್ಲ ಜನರು ಇದನ್ನು ಬೆಳೆಯುತ್ತಾರೆ. ಇದನ್ನು ಬೆಳೆಯುವದು ಅತಿ ಸುಲಭವಿದ್ದುದರಿಂದ ಇದು ಭಿಲ್ಲರಿಗೆ ಅನುಕೂಲವಾಗಿದೆ. ಗೋವಿನ ಜೋಳ ವ್ಯಾಮುಖ್ಯವಾಗಿ ಬೆಳೆಯುವ ಎರಡನೆಯ ವಿಭಾಗ, ಬೆಳಗಾವಿ ಜಿಲ್ಲೆಯ ಘಟಪ್ರಭಾ ನದಿಯ ಎತ್ತರದಂಡೆಯ ಪ್ರದೇಶ. ೩-೪ ತಿಂಗಳಲ್ಲಿ ಇದರ ಫಲ ಬಂದು ಬಿಡುವದರಿಂದ, ಆ ಭಾಗದ, ಒಂದಾದ ಮೇಲೊಂದು ಬೆಳೆ ತೆಗೆದುಕೊಳ್ಳುವ ಪದ್ಧತಿಯಲ್ಲಿ ಇದು ಸ್ಥಾನವನ್ನು ಗಳಿಸಿಕೊಂಡಿದೆ. ಪಂಚಮಹಾಲ ಜಿಲ್ಲೆಯಲ್ಲಿ ೧,೫೨,೦೦೦ ಎಕರೆ ಹಾಗು ಬೆಳಗಾವಿ ಜಿಲ್ಲೆಯಲ್ಲಿ ೧೫,೦೦೦ ಎಕರೆ ಭೂಮಿಯಲ್ಲಿ ಇದನ್ನು ಬೆಳೆಯಲಾಗುತ್ತಿದೆ.

ಇವೆರಡೂ ವಿಭಾಗಗಳಲ್ಲಿ ಒಂದೊಂದೇ ಪ್ರಕಾರದ ಗೋವಿನ ಜೋಳ ಬೆಳೆಯಲಾಗುತ್ತಿದೆ. ಪಂಚಮಹಾಲ ಜಿಲ್ಲೆಯಲ್ಲಿ ಬೆಳೆಯಲಾಗುತ್ತಿರುವದು, ಬೆಳೆ "ಓಟ್ಟೈನ್" ಜಾತಿ ಹಾಗು ಬೆಳಗಾವಿ ಜಿಲ್ಲೆಯಲ್ಲಿ ಪ್ರಚಲಿತವಿರುವದು, ಹಳದಿ ಜಾತಿ. ಇವೆರಡರಲ್ಲೂ ಹಲವು ರೀತಿಯಲ್ಲಿ ಸಾಮ್ಯ ಇದೆ. ಇವೆರಡೂ ತಮ್ಮ ತಮ್ಮ ವಿಭಾಗಗಳಿಗೆ ಯೋಗ್ಯವಾಗುವಂಥ ವಿದ್ದು ಜಯಪ್ರದವಾಗಿವೆ. ಅದ್ದರಿಂದ ಯಾವ ಬದಲಾವಣೆಗೂ ಅಸ್ಪದವಿಲ್ಲ.

ರಾಜ್ಯದಲ್ಲಿ ಈ ಬೆಳೆಗೆ ಅಷ್ಟು ಮಹತ್ವ ಇಲ್ಲದುದರಿಂದ ಹಾಗು ಸುಧಾರಿಸಿದ ಮತ್ತು ಬೆರಕೆ ಪ್ರಕಾರಗಳ ಬೆಳವಣಿಗೆಯ ಕಾರ್ಯದಲ್ಲಿ ತೊಡಕುಗಳು ಕಂಡುಬಂದುದರಿಂದ ಈ ಕಾರ್ಯಕ್ಕೆ ಒಕ್ಕಲತನ ಖಾತೆಯು, ಕಳೆದ ೨೦ ವರುಷಗಳ ಮುಂಚೆ ಅಷ್ಟು ಲಕ್ಷ ಕೊಟ್ಟರಲಿಲ್ಲ. ಪಂಚಮಹಾಲ ಜಿಲ್ಲೆಯ ದೋಹಾದ ಸರಕಾರಿ ಫಾರ್ಮಿನಲ್ಲಿ ಈ ಕಾರ್ಯ ಮೊದಲು ಕೈಕೊಳ್ಳಲ್ಪಟ್ಟಿತು. ಅಲ್ಲಿ ಗೋವಿನ ಜೋಳದ ಹಲವಾರು ಸಾಮಾನ್ಯ ಜಾತಿಗಳೊಳಗಿಂದ ಉತ್ತಮವಾದುದನ್ನು ಆರಿಸಿ ಬೆಳೆಯಿಸಲಾಯಿತು. "ಫಾರ್ಮ ಸುಮೇರಿ" ಎಂಬ ಹೆಸರಿನ ಈ ಗೋವಿನ ಜೋಳ ಜವಾರಿ ಗೋವಿನ ಜೋಳಕ್ಕಿಂತ ನೂರಕ್ಕೆ ೧೦-೧೫ ರಷ್ಟು ಹೆಚ್ಚು ಹುಟ್ಟುವಳಿ ಕೊಡುವದರಿಂದ, ಆ ಭಾಗದಲ್ಲಿ ಈಗ ಅದು ಜನಪ್ರಿಯವಾಗಿದೆ. ಅಲ್ಲಿ ಇತ್ತೀಚಿಗೆ ಸಧ್ಯ ತಿ ಪ್ರಕಾರ ಸುಧಾರಿಸಿದ ಜಾತಿಯ ಬೆಳವಣಿಗೆಯ ಕಾರ್ಯ ಕೈಕೊಳ್ಳಲಾಗಿದ್ದರೂ ಇದಕ್ಕೂ ಉತ್ತಮ ಪ್ರತಿಯ ಗೋವಿನ ಜೋಳವನ್ನು ಬೆಳೆಯಿಸುವದು ಸಾಧ್ಯವಾಗಿಲ್ಲ.

ಅರಭಾವಿಯಲ್ಲಿ ಯಶಸ್ವಿ ಪ್ರಯೋಗ

ಗೋಕಾಕ ಕಾಲುವೆ ಪ್ರದೇಶಕ್ಕೆ ಒಗ್ಗುವಂತಹ ಬೆರಕೆ ಗೋವಿನ ಜೋಳವನ್ನು ಬೆಳೆಯಿಸುವ ಮಹತ್ವದ ಕಾರ್ಯವನ್ನು ಅರಭಾವಿಯಲ್ಲಿ ಕೈಕೊಳ್ಳಲಾಗಿದೆ. ಘಟಪ್ರಭಾ ಎಡದಂಡೆ ಕಾಲುವೆ ೧೯೯೦ ಸುಮಾರಿಗೆ ಸಿದ್ಧವಾಯಿತು. ಆಗ ಆ ಪ್ರದೇಶದಲ್ಲಿ ಎರಡು ಬೆಳೆ ತೆಗೆದು ಕೊಳ್ಳಲು ಸಹಾಯವಾಗುವಂತಹ ಅಲ್ಪಾವಧಿಯಲ್ಲಿ ಫಲಬರುವ ಹಾಗು ಹೆಚ್ಚು ಹುಟ್ಟುವಳಿ ಕೊಡುವ ಬಳೆಯೊಂದು ಅವಶ್ಯವೆನಿಸಿತು. ಈ ಭಾಗದಲ್ಲಿಯ ಭೂಮಿ ಎರೆ ಅಥವಾ ಮಸಾರಿ ಭೂಮಿ. ಇಲ್ಲಿ ಬೀಳುವ ಮಳೆ ಸುಮಾರು ೨೩ ಇಂಚು. ೩ ರಿಂದ ೪ ಸಲ ನೀರು ಹಾಯಿಸಿದರೆ ಸಾಕು ಎಕರೆಗೆ ೨ ಸಾವಿರ ಪೌಂಡು ಧಾನ್ಯ ಹಾಗು ೩ ಸಾವಿರ ಪೌಂಡು ಕಣಿಕೆ ಕೊಡುವ ಗೋವಿನ ಜೋಳವನ್ನು ಈ ಭಾಗದಲ್ಲಿ ಹುಲುಸಾಗಿ ಬೆಳೆಸಬಹುದು. ಗೋವಿನ ಜೋಳ ಈ ಭಾಗಕ್ಕೆ ಸರಿಬಾಗಿ ಹೊಂದಿಕೊಳ್ಳುತ್ತದೆ.

೧೯೦೯ ರಲ್ಲಿ ಸ್ಥಾಪಿಸಲ್ಪಟ್ಟ ಗೋಕಾಕ ಕಾಲುವೆ ಒಕ್ಕಲತನ ಕೇಂದ್ರದಲ್ಲಿ ೩ ವ್ರು ಫಲ ಹಾಗು ಹೆಚ್ಚು ಹುಟ್ಟುವಳಿ ಈ ಎರಡು ಮಹತ್ವದ ಗುಣಗಳನ್ನು ಕೂಡಿಸಿ ಬೆರಕೆ ಗೋವಿನ ಜೋಳವನ್ನು ಹುಟ್ಟಿಸುವ ಕಾರ್ಯ ೧೯೩೩-೩೪ ರಲ್ಲಿ ಪ್ರಾರಂಭವಾಯಿತು.

ಕಾರ್ಯದ ಪ್ರಗತಿ

ಜವಾರಿ ಗೋವಿನ ಜೋಳದ ಪ್ರಕಾರಗಳಲ್ಲಿ ಉತ್ತಮವೆನಿಸಿದಂಥವನ್ನು ಆರಿಸಿ ಅವುಗಳನ್ನು ಸ್ವಯಂಕೇಶರದ ಸಹಾಯದಿಂದ ಬೆಳೆಯಿಸಲಾಗಿ ೬ ತೀವ್ರ, ಶುದ್ಧ ಮತ್ತು ಹಾಗು ೫ ಕಡವಾಗಿ ಮಾಡುವ ಉತ್ತಮ ತರಗತಿಯ ಜಾತಿಗಳು ಹುಟ್ಟಿದವು.

೧೯೩೨-೩೩ ರಲ್ಲಿ ಈ ಕೆಲಸವನ್ನು ಹೆಚ್ಚು ಶಾಸ್ತ್ರೀಯವಾಗಿ ಕೈಕೊಳ್ಳಲಾಯಿತು. ಇದೆ ಕಾರ್ಯಕ್ಕಾಗಿ ಅಮೇರಿಕೆಯಲ್ಲಿ ಕೈಕೊಳ್ಳಲಾಗಿದ್ದ ಪದ್ಧತಿಯನ್ನು ಅನುಸರಿಸಲಾಯಿತು. ಈ ಬೆರಕೆ ಜಾತಿಗಳನ್ನು ಮೂಲವಾಗಿಟ್ಟುಕೊಂಡು ಆಫ್ರಿಕಾ ಅಮೇರಿಕಾ ಹಾಗು ವಿದೇಶಾನರಗಳಿಂದ ಪಡೆದ ೬ ಇತರ ಜಾತಿಗಳೊಡನೆ ಬೆರಸುವ ಕಾರ್ಯಕ್ರಮವನ್ನು ಕೈಕೊಳ್ಳಲಾಯಿತು. ಮುರು ವರುಷಗಳಲ್ಲಿಯೂ ಈ ಕಾರ್ಯವನ್ನು ಮುಂದುವರಿಸಲಾಯಿತು. ಸಣ್ಣ ಸಣ್ಣ ಪ್ಲಾಟುಗಳಲ್ಲಿ ಪ್ರಯೋಗ ನಡೆಸಿ ಹುಟ್ಟುವಳಿ ಎಷ್ಟು ಬರುವದೆಂದು ಪರೀಕ್ಷಿಸಲಾಗುತ್ತಿದೆ. ಈ ಪ್ರಯೋಗಗಳಲ್ಲಿ ಜಬಂಡಿ ದತ್ತೀಗೊಬ್ಬರವನ್ನು ಉಪಯೋಗಿಸಲಾಯಿತು. ಹಾಗು ಎರಡು ಸಾಲುಗಳ ನಡುವೆ ೧೫ ಇಂಚು, ಎರಡು ದಂಟುಗಳ ನಡುವೆ ೧೫ ಇಂಚು ಅಂತರ ಬಿಡಲಾಗಿತ್ತು.

ಈ ಪ್ರಯೋಗಗಳಿಂದ ಬೆರಕೆಯ ಎರಡೂ ಜಾತಿಗಳು ಹುಟ್ಟುವಳಿಯಲ್ಲಿ ಜವಾರಿ ಜಾತಿಗಳಿಗಿಂತ ಉತ್ತಮವಿವೆ ಎಂದು ಕಂಡು ಬಂದಿತು. ಅವು ಎಕರೆಗೆ ಸರಾಸರಿ ೨೫೧೬ ಪೌಂಡು ಹಾಗು ೨೬೨೨ ಪೌಂಡು ಹುಟ್ಟುವಳಿ ಕೊಟ್ಟವು. ಜವಾರಿ ಜಾತಿಗಳು ಕೇವಲ ೨೦೨೧ ಪೌಂಡು ಹುಟ್ಟುವಳಿ ಕೊಟ್ಟವು

ಕಾಲೇಜುಗಳಲ್ಲಿ ಹೆಚ್ಚು ಸ್ಥಾನಗಳು
ಬ್ರಾಹ್ಮಣರಿಗೆ ಅನ್ಯಾಯ

ಕಾಲೇಜುಗಳಲ್ಲಿ ತಾದಿಟ್ಟ ಸ್ಥಾನಗಳು ಸ್ವಲ್ಪವಿದ್ದು, ಓದುವವರ ಸಂಖ್ಯೆಯು ಅಧಿಕ ವಿರುವಕಾರಣ, ವಿದ್ಯಾರ್ಥಿಗಳಿಗೆ ಕಷ್ಟವಾಗುತ್ತಲಿದೆ. ಬ್ರಾಹ್ಮಣ, ಬ್ರಾಹ್ಮೇತರ ಭೇದ ಭಾವನೆಯಿಂದ, ಓದುವ ಸೌಕರ್ಯ ವಾದರೂ ಬ್ರಾಹ್ಮಣರಿಗೆ ದೊರೆಯದಂತಾಗಿದೆ. ನೌಕರಿಗಳಲ್ಲಿ ಸ್ಥಾನವು ಸಿಗಲಿ, ಬಿಡಲಿ ಅದು ಬೇರೆ ವಿಷಯ ಆದರೆ, ಓದಲಿಚ್ಛಿಸದೂ, ಚಿಕ್ಕವಯಸ್ಸಿನ ಬಾಲಕರಿಗೆ ಸೌಕರ್ಯ ಒದಗಿಸಿಕೊಡಬೇಕಾದರೆ ಇದನ್ನು ನಾಗರೀಕ ಸರ್ಕಾರವೆಂದು ಹೇಗೆ ಅನ್ನಬೇಕು ?

ಮದ್ರಾಸ್ ವಿಶ್ವ ವಿದ್ಯಾಲಯದ ಸಿಂಡಿಕೇಟಿನವರು, ಕಾಲೇಜುಗಳ ಪ್ರಿನ್ಸಿಪಾಲರು, ವಿಜ್ಞಾನೇತರ ಭಾಗಗಳಲ್ಲಿನ ಸ್ಥಾನಗಳನ್ನು ಹೆಚ್ಚಿಸಲು ಅಪ್ಪಣೆ ಇತ್ತಿರುವರು. ಮದ್ರಾಸ್ ಪ್ರಾಂತದ ಆರ್ಟ್ಸ್ ಕಾಲೇಜುಗಳಲ್ಲಿ, ಹೆಚ್ಚಿನ ಅಂಕಗಳನ್ನು ಪಡೆದವರಿಗೆ ಮಾತ್ರವೇ ಪ್ರವೇಶದಯಕ್ಕು ಕೊಡಲಾಗಿದೆಯೆಂದೂ, ಇದನ್ನು ಜಾತೀಯ ದೃಷ್ಟಿಯಿಂದ ಗಣನೆ ಮಾಡಿಲ್ಲವೆಂದೂ ವಿದ್ಯಾಮಂತ್ರಿ ಸಾಧನಮೆನನ್ ರವರು ಹೇಳಿದರು.

ವಿಜ್ಞಾನೇತರ ಭಾಗಗಳನ್ನು ತೆಗೆದುಕೊಂಡು ಉತ್ತೀರ್ಣರಾದರೆ, ಉಪಾಧ್ಯಾಯ ಕೆಲಸಬಿಟ್ಟರೆ, ಬೇರೆ ಯಾವುದು ಉದ್ಯೋಗ ದೊರೆಯುವುದಿಲ್ಲ. ಅದೂ ಕೂಡ ಕುಂಬಿ, ಪೋಟಿಯು ಸಹಿಸುತ್ತಲಿದೆ. ಈ ಕಾರಣ ವಿದ್ಯಾರ್ಥಿಗಳು ವಿಜ್ಞಾನಭಾಗಗಳನ್ನು ತೆಗೆದುಕೊಳ್ಳಲಿಚ್ಛಿಸುತ್ತಿರುವರು. ಹಾಗೆಯೇ ವೈದ್ಯಕೀಯ ಶಿಕ್ಷಣಕ್ಕಾಗಿ ಇವ್ವಿ ಅರಿಸುತ್ತಿರುವುದು. ಅದರಿಂದ ಸ್ವಂತವಾಗಿ ಬದುಕುವ ಮಾರ್ಗವಾದರೂ ದೊರಕುವುದೆಂಬ ಆಶೆ. ಸರ್ಕಾರದವರು, ಇಂಜಿನಿಯರಿಂಗ್, ಮೆಡಿಕಲ್ ಮತ್ತು ಸೈನ್ಸ್ ಕಾಲೇಜುಗಳನ್ನು ಹೆಚ್ಚಿಸಿದಾಗಲೇ, ಈ ಸಮಸ್ಯೆಯು ಪರಿಹಾರವಾಗುವುದು. ನಾಡಿನ ವಿದ್ಯಾರ್ಥಿಗಳಿಗೇ ಸ್ಪಿಸುವ ಶಿಕ್ಷಣದ ಸೌಕರ್ಯ ಕಲ್ಪಿಸಬೇಕಾದುದು, ಸರಕಾರದ ಆದ್ಯ ಕರ್ತವ್ಯ.

ಭಾರತದಿಂದ ಯುದ್ಧಕ್ಕೆ ಸಕ್ರಿಯ ಸಹಾಯವಿಲ್ಲ.

ಭಾರತವು ಭದ್ರತಾಮಂಡಳಿಯ ತೀರ್ಮಾನವನ್ನು ಸ್ವೀಕರಿಸಿದನಂತರ ಅದು ಯಾವ ರೀತಿಯಲ್ಲಿ ಸಹಾಯಮಾಡಬಹುದೆಂದು ಕಾರ್ಯದರ್ಶಿಗಳು ಕೇಳಿದ್ದರು. ಭಾರತದ ಸದ್ಯದ ಪರಿಸ್ಥಿತಿಯಲ್ಲಿ ಕೋರಿಯಾದಲ್ಲಿ ಕೈಹಾಕಲು ಸಕ್ರಿಯ ಸಹಾಯ ಅಂದರೆ ಸೈನ್ಯ ಕಳಿಸಿಯೂ ವಿಮಾನದಳವನ್ನು ಕಳುಹಿಸುವುದು. ಸಾಧ್ಯವಿಲ್ಲೆಂದು ಭಾರತ ಸರ್ಕಾರವು ತಿಳಿಸಿದೆ.

"ದಕ್ಷಿಣ ಕೋರಿಯಾದ ಯುದ್ಧದಿಂದ ಜಗತ್ತು ಯುದ್ಧದ ಬಾಗಿಲಲ್ಲಿ ಬಂದು ನಿಂತಂತಾಗಿದೆ. ಈ ಸಂದರ್ಭದಲ್ಲಿ ಭಾರತೀಯ ಕಿಸ್ತಾನಗಳು ತಮ್ಮ ಸಣ್ಣ ಪುಟ್ಟ ಮತಭೇದಗಳನ್ನು ಮರೆತು ಒಂದಾಗಬೇಕು, ಎಂದು ಭಾರತಪ್ರಧಾನಿ ಪಂಡಿತ ನೆಹರೂರವರು ಕ್ರೈಸ್ತ ಶಿಷ್ಟಮಂಡಳಿಗೆ ಹೇಳಿದರು

ಮೂರನೆಯ ಮಹಾಯುದ್ಧದ ಲಕ್ಷಣ ಜ್ಯೋತಿಷಿಗಳ ಜೇಳಿಕೆ.

ಹಾನೇರಿಯ ಪಂಡಿತ ಶಂಕರಶಾಸ್ತ್ರಿ ಹೊನ್ನತ್ತಿ ಮತ್ತು ಸಿದ್ಧಾಂತಿ ಚನವೀರ ಶಾಸ್ತ್ರಿಗಳು ಗ್ರಹಣಗಳ ಚಲನವಲನದಿಂದ ಮೂರನೆಯ ಮಹಾಯುದ್ಧದಾಗುವ ಲಕ್ಷಣಗಳನ್ನು ವಿವರಿಸಿ ಇದರ ಬೇಕಾಯು ಯೂರೋಪ ಮತ್ತು ರಷ್ಯಾಗಳಿಗೆ ಹಬ್ಬುವುದೆಂದು ಸೂಚಿಸಿರುತ್ತಾರೆ.

ಅಮೆರಿಕಾ ನಮ್ಮ ಸ್ವಾತಂತ್ರ್ಯ ಕೆಸಿಯುತ್ತಲಿದೆ.

"ಪೂರ್ವದಲ್ಲಿ ಸಾಮ್ರಾಜ್ಯವನ್ನು ಕಟ್ಟಿ ಲು ಹವಣಿಸಿ ಅಮೆರಿಕೆಯು ತನ್ನ ಸಾಮ್ರಾಜ್ಯದಾಸನವನ್ನು ಪ್ರಪಂಚಕ್ಕೆ ವ್ಯಕ್ತಪಡಿಸುತ್ತಿದೆ. ತಮ್ಮ ಮಿಲಿಟರಿ ಬಲದಿಂದ ಪ್ರಪಂಚ ಸ್ವಾತಂತ್ರ್ಯವನ್ನೇ ಹರಣ ಮಾಡಲು ಸಿದ್ಧರಾಗಿದ್ದಾರೆ. ಕೋರಿಯಾದಲ್ಲಿ ಅಮೆರಿಕಾದ ಗೊಂಜೆ ಸಿಂಗ್ಮನ್ ರೀಗೆ ಇವರು ಸಹಾಯ ನೀಡುತ್ತಿರುವರು ಇವನಿಗೆ ಜನತೆಯು ಬೆಂಬಲವಿದ್ದರೆ, ಇವನ ಸೈನ್ಯವು ಧೈರ್ಯವಾಗಿ ದಕ್ಷಿಣಾಭಾಗಕ್ಕೆ ಏತಕ್ಕೆ ಓಡುತ್ತಿತ್ತು ?" ಎಂದು ರಷ್ಯನ್ ಭಾಷೆಯಲ್ಲಿ ಕೋರಿಯಾ ನ್ಯಾಯಾಧ್ಯಕ್ಷರು, ರಷ್ಯಾದ ಮೂಲಕ ಕೇಂಬ್ರಿಲ್ ಕಳಿಸಿದ್ದಾರೆ.

ತಾರಾನಾಥಾ ಆಯುರ್ವೇದ ವಿದ್ಯಾಪೀಠ.

ಇಲ್ಲಿಯನಂವಿಗೆ ಬಳ್ಳಾರಿಯಿಂದ ೪ ಮೈಲಿದೂರ ಘಾಸಲೆಯಲ್ಲಿನ ಸಂಗನ ಕಲ್ಲೇಶ್ವರದ್ದಿ ತಾರಾನಾಥ ಆಯುರ್ವೇದ ವಿದ್ಯಾಪೀಠವು ಬಳ್ಳಾರಿನಗರಕ್ಕೆಸ್ಥಳಾಂತರಿಸಲ್ಪಡುವುದೆಂದೂ, ಜುಲೈ ೧೫ಕ್ಕೆ, ಇದರ ಪುನಃ ವ್ಯಾರಂಭ ವಾಗುವ ದೆಂದೂ ತಿಳಿದು ಬಂದಿದೆ. ಈ ಅಮೂರ್ವದ ವಿದ್ಯಾಪೀಠಕ್ಕೆ ಸರ್ಕಾರದ ಮನ್ನಣೆ ದೊರೆತಿದ್ದು, ಇಲ್ಲಿಂದ ಉತ್ತೀರ್ಣರಾಗಿ ಹೊರಬೀಳುವ ವಿದ್ಯಾರ್ಥಿಗಳಿಗೆ ರಿಜಿಸ್ಟ್ರೇಷನ್ ಸರ್ಟಿಫಿಕೇಟ್ ವಿನೂ ಕಷ್ಟವಿಲ್ಲದೆ ದೊರೆಯುವುದು. ಇಲ್ಲಿ ಅಧ್ಯಯನದ ಅವಧಿಯು ನಾಲ್ಕು ವರ್ಷವಿದೆ. ಇತರ ಸೌಕರ್ಯ, ಅಧ್ಯಾಪನ ಪ್ರಣಾಲಿಯ ಬಗ್ಗೆ, ಕಾರ್ಯದರ್ಶಿಗಳಿಗೆ ಒಲೆದು ತಿಳಿದುಕೊಳ್ಳಿರಿ.

ನಿಜಾಮರು ಅಪರಾಧಿಗಳು

ರಜಾಕಾರ ಮುಖಂಡರಾದ ಕಾಸಿಂ ರಜ್ವಿಯವರು, ನಿಜಾಮರನ್ನೂ ಕೂಡ ಅಪರಾಧಿವರ್ಗದಲ್ಲಿ ಸೇರಿಸಬೇಕೆಂದು ಅರ್ಜಿಮಾಡಿ ಕೊಂಡಿದ್ದನ್ನು ವಿಶೇಷ ನ್ಯಾಯಮಂಡಲವು ವಿಚಾರಿಸಿ ಅದನ್ನು ತಳ್ಳಿ ಹಾಕಿತು.

ಹೆಚ್ಚು ಅಕ್ಕಿ ಕೊಡಿರಿ

ಇಂಡಿಯಾದ ಆಹಾರ ಮಂತ್ರಿ ಶ್ರೀ ಕೆ ಎಂ. ಮುನ್ಷಿಯವರು ಮದ್ರಾಸಿಗೆ ಬಂದುಗ ಕನಿಷ್ಟಕ್ಕೆ ೧,೬೯ ಸಾವಿರ ಟನ್ ಅಕ್ಕಿ ಕೊಟ್ಟರೆ, ಹಿಂದಿನಂತೆ ಲಘಿನ್ನ ಆಹಾರವನ್ನು ಪೂರೈಸಲಾಗುವದೆಂದು ಮುಖ್ಯಮಂತ್ರಿಗಳು ತಮ್ಮ ಬೇಡಿಕೆಯನ್ನು ಮಂಡಿಸಿದರು. ಬ್ರೆಜಲ್, ಬರ್ಮಾ ದೇಶಗಳಿಂದ ಅಕ್ಕಿಯು ಎಷ್ಟುರಪ್ತಾಗುವದೆಂಬುದನ್ನು ಈಗಲೇ ಹೇಳಬರುವಂತಿಲ್ಲವೆಂದೂ, ಆದರೂ ಭಾರತ ಸರ್ಕಾರವು ಮದ್ರಾಸ್ ಪ್ರಾಂತದ ವಿಷಯದಲ್ಲಿ ಸಾನುಭೂತಿಯಿಂದ ವಿಚಾರಿಸುವೆನೆಂದೂ ಮುನ್ಷಿಯವರು ಹೇಳಿದರು.

ಕೋರಿಯಾ ಯುದ್ಧದಲ್ಲಿ ಭಾರತವು ಮಧ್ಯಸ್ಥಿಕೆಯ ಪ್ರಾಕ್ಕವನ್ನು ವಹಿಸಿ, ಪೂರ್ವ, ಪಶ್ಚಿಮ ರಕ್ತಿಗಳಲ್ಲಿ ಕಂಟಿಯನ್ನು ಬಗ್ಗೆ ಪರಿಸಬೇಕೆಂಬ ಸೂಚನೆಗಳು, ಬಂದಿದ್ದರೂ, ಭಾರತದ ಇಚ್ಛೆಯ ಬಗ್ಗೆ ಕಷ್ಟಾಂಶವು ಇನ್ನೂ ಕಂಡು ಬಂದಿಲ್ಲ.

ಕೋರಿಯಾ ಯುದ್ಧ ಸೈನಿಕರ ಸಹಾಯವಿಲ್ಲ

ಪಂ. ಜವಹರಲಾಲರ ಹೇಳಿಕೆ.

ಪಂಡಿತ ಜವಹರಲಾಲ ನೆಹರೂ ರವರು ವೃತ್ತ ಪತ್ರಿಕಾ ಪರಿಷತ್ತಿನಲ್ಲಿ ಭಾಷಣ ಮಾಡುತ್ತ ಈ ರೀತಿ ತಿಳಿಸಿದರು.

ಶಾಂತಿಸ್ಥಾಪನೆಗೆ ಸಹಾಯ ಮಾಡುವ ಉದ್ದಿಶ್ಯದಿಂದಲೇ ಭಾರತವು ಭದ್ರತಾ ಮಂಡಳದ ಗೊತ್ತುವಳಿಗೆ ಬೆಂಬಲವಿತ್ತಿದೆ. ಯಾವಗುಂಪಿಗೂ ಸೇರಬಾರದೆನ್ನುವ ಭಾರತದ ವಿದೇಶೀ ಧೋರಣೆಗೆ ಇದು ಸರಿಯಾಗಿದೆ. ಕೋರಿಯಾದಲ್ಲಿ ಉಭಯ ಪಕ್ಷಗಳ ಒಪ್ಪಿಗೆಯಿಲ್ಲದೆ ಭಾರತವು ಮಧ್ಯಸ್ಥಿಕೆ ವಹಿಸಲಾರದು. ಇದಕ್ಕಾಗಿ ವೃಥಾ ಚರ್ಚೆಯು ಬೇಡ. ರಾಜಕಾರಣ ದೃಷ್ಟಿಯಿಂದ ಉತ್ತರ, ಮತ್ತು ದಕ್ಷಿಣ ಕೋರಿಯಾಗಳೆಂದು ನಾವು ಮಾನ್ಯಮಾಡಿಲ್ಲ. ನಾವು ಏಲ್ಲಿನ ಘಟನೆಗಳಲ್ಲಿ ಕೈಹಾಕ ಬಯಸುವುದಿಲ್ಲ. ಆದರೆ ಉತ್ತರದವರು ದಕ್ಷಿಣದಮೇಲೆ ಮಾಡಿದ ದಾಳಿಯು ಪೂರ್ವ ತಯಾರಿಯಿದ್ದು ಸುಸಜ್ಜಿತವಾದ್ದಿದೆ. ಅಂತರಾಷ್ಟ್ರೀಯ ಕಂಟೆಗಳನ್ನು ಶಾಂತಿಯಿಂದ ಬಿಡಿಸಬೇಕಾದುದು ರಾಷ್ಟ್ರ ಸಂಘದ ಕರ್ತವ್ಯವಾಗಿದೆ. ಈ ಕಾರಣದಿಂದಲೇ ನಾವು ಅದಕ್ಕೆ ಬೆಂಬಲ ಕೊಟ್ಟಿವೆ.

ಚೀನದ ಕಮ್ಯೂನಿಷ್ಟ ಸರಕಾರಕ್ಕೆ ಮನ್ನಣೆ ಕೊಡಬೇಕು. ಈ ಮನ್ನಣೆ ಕೊಡದಿರುವ ಕಾರಣ ರಷ್ಯಾವು ಎಲ್ಲಾ ಸಂಸ್ಥೆಗಳಿಂದ ಹೊರಬಿದ್ದಿದೆ. ಚೀನಿ ಕಮ್ಯೂನಿಷ್ಟ ಪ್ರತಿನಿಧಿಗೆ ಭದ್ರತಾ ಮಂಡಳಿ ಮತ್ತು ಇತರ ಅಂಗ ಸಂಸ್ಥೆಗಳಲ್ಲಿ ಸ್ಥಾನ ದೊರಕಿಸಲು ಭಾರತವು ಪ್ರಯತ್ನಿಸುತ್ತಲಿದೆ. **ಭಾರತವು ಕೋರಿಯಾಕ್ಕೆ ಸೈನ್ಯವನ್ನು ಕಳುಹಿಸಲಾರದು. ಕಳಿಸಿದರೂ ಆದರಿಂದ ಉಪಯೋಗವಿಲ್ಲ. ನಮ್ಮಬಳಿ ಇರುವ ಸೈನ್ಯವಾದರೂ ಆಂತರಿಕ ಸುವ್ಯವಸ್ಥೆಯನ್ನು ಕಾಯ್ದುಕೊಳ್ಳಲು ಸಾಕಾದಷ್ಟಿದೆ.**

ಪಾಕಿಸ್ತಾನದ ಪುಂಡರು ಭಾರತದ ಆಧೀನದಲ್ಲಿದ್ದ ಕಾಶ್ಮೀರದಮೇಲೆ ದಾಳಿ ಮಾಡಿದಾಗ ಈ ಅಮೆರಿಕೆಯು ಸ್ವಲ್ಪವೇ ಕಿತ್ತು? ಎಂದು ಪತ್ರಿಕಾ ಕರ್ತರೊಬ್ಬರು ಪ್ರಶ್ನೆ ಹಾಕಿದಾಗ, ಈ ಪ್ರಶ್ನೆಯನ್ನು ಅಮೆರಿಕಾ ಸರಕಾರಕ್ಕೆ ಕೇಳಿರಿ ಎಂದು ಪಂ| ಜವಹರಲಾಲರು ಉತ್ತರಿಸಿದರು.

ಯುದ್ಧ ಸಮಾಚಾರ

ಅಮೆರಿಕಾದವರು ಹಿಂದೆ ಸರಿಯಬೇಕಾದ ಪ್ರಸಂಗ ಬಂದಿತು. ಉತ್ತರ ಕೋರಿಯನರ ಸೈನ್ಯವು ಟ್ಯಾಂಕುಗಳಿಂದ ಸುಸಜ್ಜಿತವಾಗಿ ಅಮೆರಿಕನ್ನರಿಗಿಂತಲೂ ಹೆಚ್ಚು ಸಂಖ್ಯೆಯುಳ್ಳವರಾಗಿ ದಕ್ಷಿಣಕ್ಕೆ ನುಗ್ಗುತ್ತಲಿರುವರು. ದಕ್ಷಿಣ ಕೋರಿಯಾದ ರಾಜಧಾನಿ ಸಿಯೋಲದ ದಕ್ಷಿಣಕ್ಕೆ ೫೦ ಮೈಲು ದೂರ ಪ್ರವೇಶಿಸಿರುವರು.

ಕಾಂಗ್ರೆಸ್ಸ ಸಂಸ್ಥೆಯು ರದ್ದಾಗಲಿ

ಹಿಂದೂ ಮಹಾ ಸಭಾಧ್ಯಕ್ಷರಾದ ಡಾಕ್ಟರ್ ಎನ್. ಬಿ. ಖರೆಯವರ ಒಂದು ಹೇಳಿಕೆ ಕೊಟ್ಟು ಕಾಂಗ್ರೆಸ ಸಂಸ್ಥೆಯು ರದ್ದಾಗುವದೊಳ್ಳೆಯದೆಂದು ಕೋರಿರುವರು. ಮಹಾತ್ಮ ಗಾಂಧಿಯವರು ಲೋಕಸೇವಾಸಂಘದ ಸ್ಥಾಪನೆ ಮಾಡಿರೆಂದು ಕಾಂಗ್ರೆಸ್‌ದವರಿಗೆ ಹೇಳಿದುದನ್ನು ಎಚ್ಚರಿಸಿ, ಕಾಂಗ್ರೆಸ್ ಸಂಸ್ಥೆಯನ್ನು ಹಿಂದೂ ಮಹಾ ಸಭೆಯು ಚುನಾವಣೆಗಳಲ್ಲಿ ಎದುರಿಸುವುದೆಂದರು.

ಹಿಂದೀ ಮಹಾ ವಿದ್ಯಾಲಯ, ಬಳ್ಳಾರಿ,

[1931 ಸ್ಥಾಪಿತ. ಬಳ್ಳಾರಿ ಜಿಲ್ಲಾ ಹಿಂದೀ ಪ್ರೇಮಿಮಂಡಲದಾಶ್ರಯದಲ್ಲಿ, ರಿಜಿಸ್ಟರ್ಡ.]

ಮದ್ರಾಸ್ ಸರ್ಕಾರದಿಂದ ಮಾನ್ಯತೆ ಇದೆ.

ಪ್ರಾರಂಭಿಕ ವರ್ಗಗಳಿಗೆ ಮಾಸಿಕ 3/- ಶುಲ್ಕ — ಉನ್ನತ ವರ್ಗಗಳಿಗೆ ಮಾಸಿಕ 5/- ಶುಲ್ಕ

ವಾರ್ಡಲಾ ಹೈಸ್ಕೂಲ್ ಕಟ್ಟಡದಲ್ಲಿ ಪ್ರಾತಃಕಾಲ—ಸಾಯಂಕಾಲ ಹಿಂದೀ ಕಾಲೇಜ್‌ದ ವರ್ಗಗಳು ನಡೆಯುತ್ತಿವೆ. ಪ್ರವೇಶಿಕ — ವಿಶಾರದ ವರ್ಗಗಳಲ್ಲದೆ ಪ್ರಾರಂಭಿಕ ವರ್ಗಗಳಿಗೂ ಪ್ರವೇಶವಿದೆ. ವರ್ಗಗಳಿಗೆ ಸಂಬಂಧಿಸಿದ ಪಾಠ್ಯ ಪುಸ್ತಕಗಳು ವಿದ್ಯಾಲಯದಲ್ಲಿ ದೊರೆಯುತ್ತವೆ. ಒಳ್ಳೆಯ ಪುಸ್ತಕಭಂಡಾರವಿದೆ. ಶ್ರೀಷ್ಮ ವಾರಪತ್ರಿಕೆ, ಮಾಸಪತ್ರಿಕೆಗಳು ಲಭ್ಯ. ಇತರ ವಿವರಗಳಿಗೆ ಸ್ವಾಂಪಿಟ್ಟು ಬರೆಯಿರಿ.

ಪ್ರಿನ್ಸಿಪಾಲ್.

NAVA BHARAT BELLARY. (Reg. No. M. 4746)

10—7—50

ನವಭಾರತ ಬಳ್ಳಾರಿ.

(Nationalist Weekly)

ಚಂದಾದರಗಳು.	Subscription Rates.
ವರ್ಷಕ್ಕೆ 5—0—0	One Year 5—0—0
6 ತಿಂಗಳಿಗೆ 3—0—0	Six months 3—0—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.	Subscription will not be accepted for less than 6 months

To

Sri.....

.....

.....

Printed at Krishna Printing Works. Edited & Published by T.B. Keshava Rao.

JAI—HIND

ನವಚೈತನ್ಯ

ಬಳ್ಳಾರಿಯ
ಉಜ್ವಲ ರಾಷ್ಟ್ರೀಯ ವಾರಪತ್ರಿಕೆ
*
ಉತ್ತಿಷ್ಠತ! ಜಾಗ್ರತ
ಪ್ರಾಪ್ಯವರಾನ್ನಿ ಭೋಧತ !!!
*
ಸಂಪಾದಕ ಮತ್ತು ಪ್ರಕಾಶಕ:—
ಟಿ. ಬಿ. ಕೇಶವರಾವು

ವರ್ಷ ೧೩ | ಸೋಮವಾರ ೧೭ ಜೂಲೈ ೧೯೫೦ | ಸಂಚಿಕೆ ೩೨

ರಾಯಲಸೀಮ ಗ್ರಾಮೋದ್ಯೋಗಿಗಳ ಸಭೆ ಬಳ್ಳಾರಿ.

13ನೇಯ: ದಿನಾಂಕ ಈ ಸಭೆಯು ಶ್ರೀ ಸಣ್ಣನಗೌಡ್ರು ನಿಟ್ಟೂರು ಇವರಧ್ಯಕ್ಷತೆಯಲ್ಲಿ ಸವಾವೇಶವಾಗಿದ್ದಿತು. ಕಾರ್ಯದರ್ಶಿ ಶ್ರೀ ಸಂಜೀವರಾಯರು (ಯೇರೂರು) ಸರ್ಕಾರದ ಪರಿಶೀಯಿಂದ ಬಂದ ಪ್ರಶ್ನಾವಳಿಯನ್ನು ಕುರಿತು ತಮ್ಮ ಸಭೆಯು ಪ್ರಶ್ನುತ್ತರಗಳನ್ನು ತಳು ಹಿಸುವ ಕುರಿತು ವಿವರಪೂರ್ವಕವಾಗಿ ಹೇಳಿದರು. ನಂತರ ಒಂದು ವಿವರಣಾ ಪತ್ರವನ್ನು ತಳುಹಿಸುವ ನಿಶ್ಚಯವಾಯಿತು. ಇದನ್ನು ತಯಾರಿಸಲು ಶ್ರೀ ಸಣ್ಣನಗೌಡರಧ್ಯಕ್ಷತೆಯಲ್ಲಿ, ಕಾರ್ಯದರ್ಶಿ ಸಂಜೀವರಾವ್, ಕೆ. ಹನುಮಂತರಾವ್ ಮತ್ತು ಅಗಸನೂರು ರಂಗರಾವ್ ಇವರ ಉಪಸಮಿತಿಯು ನಿಯುಕ್ತವಾಯಿತು.

ಸರ್ಕಾರಕ್ಕೆ ತಳುಹಿಸಲಾದ ವಿವರಣಾ ಪತ್ರಿಕೆಯ ಮುಖ್ಯಾಂಶಗಳು

1) **ಲ್ಯಾಂಡ್ ರೆವಿನ್ಯೂ:**— ಈಗಿರುವ ಗುತ್ತಾವಸೂಲ ಪದ್ಧತಿಯು ಶ್ರೇಷ್ಠವಾಗಿದೆ. ಆದರೆ ರೈತನಿಗೆ ತಾನು ಎಷ್ಟು ಸಲ್ಲಿಸಬೇಕೆಂಬುದರ ಬಗ್ಗೆ ಗೊತ್ತಿಲ್ಲ. ವರ್ಷವರ್ಷವೂ ತೆಸ್ಸುಗಳನ್ನು ಹೆಚ್ಚಿಸುತ್ತಿರುವರು. ಭೂಮಾಲೀಕನಿಗೆ ಇಂತಿಷ್ಟು ಹಣಕೊಡಲು ವಿಧಿಸಿದರೆ ಒಳ್ಳೆಯದು. ಅದರಲ್ಲಿ ತೆಸ್ಸುಗಳನ್ನು ಸೇರಿಸಿ ನಿಗ್ಗಯಿಸಲಿ. ಲ್ಯಾಂಡ್ ರೆವಿನ್ಯೂಹಣದ ಕೆಲಭಾಗ ಸ್ಥಾನಿಕ ಸಂಸ್ಥೆಗಳಿಗೆ ಕೊಡತಕ್ಕದ್ದು. ರಿಸೆಂಟ್ಲಮೆಂಟನ್ನು ಸ್ಥಾಯಿರೂಪದಲ್ಲಿ ತೆಗೆದು ಹಾಕಬೇಕು.

2) **ಇನಾಂ:**— ಸರ್ಕಾರದ ರೈತವಾರಿ ಪಟ್ಟಾ ಭೂಮಿಗಳಂತೆ ವಿಭಜಿತ ಇನಾಂಗಳನ್ನು [Enfranchised Inams] ಗಣಿಸಬೇಕು. ಅನೇಕ ಇನಾಂ ಭೂಮಿಗಳು ಪೊದಲಿನ ಪಟ್ಟಾದಾರರ--ಯಾ--ವಂಶಸ್ಥರಧೀನದಲ್ಲಿಲ್ಲ. ಆ ಧುನಿಕ ಕಾಲಕ್ಕನುಸರಿಸಿ ಅವುಗಳನ್ನು ಇನಾಂಗಳೆಂದು ಇರಿಸುವುದರಲ್ಲಿ ಅರ್ಥವಿಲ್ಲ. ಧರ್ಮ, ದಾನ, ಮತ್ತು ಕಲೆಗಳಿಗಾಗಿ ಕಾದಿಟ್ಟ ಇನಾಂ ಭೂಮಿಗಳನ್ನು ಸರ್ಕಾರದ ಭೂಮಿಗಳಂತೆ ಗಣಿಸಿ ಅವುಗಳ ಅಸೆಸ್ಮೆಂಟನ್ನು ವರ್ಷವರ್ಷವೂ ಕಟ್ಟಬೇಕು. ವಿವಿಧ ಉದ್ಯೋಗಗಳ ಪೋಷಣೆಗಾಗಿ ಕೊಟ್ಟ ಇನಾಂಗಳನ್ನು ಸ್ಥಾನಿಕ ಪಂಚಾಯ್ತುಗಳಿಗೊಪ್ಪಿಸಿ ಅವರಿಂದ ಕಾರ್ಯಭಾಗ ನಡೆಸಬೇಕು.

3) **ಗ್ರಾಮೋದ್ಯೋಗಿಗಳು:**— ಗ್ರಾಮೋದ್ಯೋಗಿಗಳ ವಂಶ ಪಾರಂಪರ್ಯ ಹಕ್ಕನ್ನು ಈಗಿರುವಂತೆಯೇ ಸ್ಥಿರಗೊಳಿಸಿ, ಅದು ಎಲ್ಲಿ ಜಾರಿಯಲ್ಲಿಲ್ಲವೋ ಅಲ್ಲಿಯೂ ಕೂಡ ಜಾರಿಯಲ್ಲಿ ತರಬೇಕು. ಈ ವಂಶ ಪಾರಂಪರ್ಯ ಹಕ್ಕಿನಿಂದ ಸರ್ಕಾರಕ್ಕೆ ಅನುಕೂಲವಾಗಿ, ಜವಾಬ್ದಾರರಾದ ಮತ್ತು ಯೋಗ್ಯಜನರು ಈ ಕೆಲಸಕ್ಕೆ ಸಿಕ್ಕುವರು. ಸರ್ಕಾರೀ ಕಾರ್ಯವು ಕೃಷ್ಟಿಕರವಾಗಿ ಸಾಗುವುದು.

4) **ಲೆಕ್ಕ ಪತ್ರಗಳ ಸರಳತೆ:**— ಲ್ಯಾಂಡ್ ಎಂಕ್ರೋಚ್‌ಮೆಂಟ್ ಆಕ್ಟಿನ ಕೆಳಗೆ ಈಗಿರುವ ಅಕ್ರಮಣಗಳಮೇಲೆ ಚರ್ಯೆ ತೆಗೆದುಕೊಳ್ಳುವ ಪದ್ಧತಿಯು ಜಮಾಬಂದಿ ಅಧಿಕಾರಿಯಿಂದ ಹಿಡಿದು, ಗ್ರಾಮೋದ್ಯೋಗಿವರೆಗೆ ಬಹಳ ಕೆಲಸವಾಗುತ್ತೆ. ಅಕ್ಷೇಪಣೆ ಇಲ್ಲದ ಅಕ್ರಮಣಗಳ ಪಟ್ಟಾ ಆಗಬೇಕು. ಬೊಂಬಾಯಿ, ಹೈದರಾಬಾದ್, ಮೈಸೂರು ಸೀಮೆಗಳಲ್ಲಿದ್ದಂತೆ, ಗ್ರಾಮನತ್ತ ಪೊರಂಬೋಕ್ ಭೂಮಿಗಳ ಅಕ್ರಮಣವು ಕೋರ್ಟಿನ ಶಿಕ್ಷೆಗೆ ಒಳಪಡಬೇಕು. ರೇಗಡೆ ಭೂಮಿ ಇರುವ ಪ್ರದೇಶಗಳಲ್ಲಿ ಅಕ್ರಮಣಕ್ಕೆ ಅಪ್ಪಣೆ ಕೊಡುವುದರಿಂದ ದನಗಳಿಗೆ ಮೇಯುವ ಭೂಮಿಯೇ ಇಲ್ಲದಂತಾಗುತ್ತೆ.

5) **ಲ್ಯಾಂಡ್ ರೆವಿನ್ಯೂ ವ್ಯವಸ್ಥೆಯಲ್ಲಿ ಪರಿವರ್ತನೆ:**— 'ಬಿ' ಮೆಮೊ ಪದ್ಧತಿ ತೆಗೆದು ಹಾಕಿದರೆ, ರೆವಿನ್ಯೂ ಇನ್ಸ್‌ಪೆಕ್ಟರರ ಕಾರ್ಯ ಸುಲಭವಾಗುತ್ತದೆ. ಗ್ರಾಮೋದ್ಧಾರ, ಪೂರೈಕೆ ಕೆಲಸಕ್ಕೆ ಅವರು ಗಮನಕೊಡಲು ಇದರಿಂದ ಸಾಧ್ಯವಾಗುತ್ತದೆ. ವಾರ್ಷಿಕ ಜಮಾಮಂದಿಯನ್ನು ಅಂತಗೊಳಿಸಬೇಕು. ರೆವಿನ್ಯೂಡಿವಿಜನಲ್ ಅಧೀಸರರ ಜ್ಞಾನವು ಸುನ್ನೆಯ ಹೆಚ್ಚಿಗಿದ್ದು, ಕಷ್ಟವಾದಕಾರಣ, ಅದನ್ನು ತೆಗೆದುಹಾಕಬೇಕು. ರೆವಿನ್ಯೂ ಆಡಳಿತೆಯಲ್ಲಿ ಅವರಿಂದ ಸರ್ಜನ ಉಳಿತಾಯವಾಗುತ್ತದೆ. ತಾಲೂಕು ತಹಶೀಲ್ದಾರರು ಗಿಜೆಟೆಡ್ ಅಧೀಸರರಾಗಿ, ಫಸ್ಟ್‌ಕ್ಲಾಸ್ ಅಧಿಕಾರಹೊಂದಿ ತಾಲೂಕಿನಲ್ಲಿನ ವಿವಿಧ ಶಾಖೆಯವರೆಲ್ಲಾ ಅವರ ಅಧೀನಸ್ಥರಾಗುವಂತೇರ್ಪಡಿಸಬೇಕು.

6) **ವ್ಯವಸಾಯಸಂಬಂಧೀಗುತ್ತಾಮತ್ತು ನ್ಯಾಹಂಠೀ ಬೆಳೆಗಳ ಪೀಲೆಗುತ್ತಾ:**— ಇದರಿಂದ ವೃಥಾ ದುಷ್ಪಪದ್ಧತಿಗಳು ಆಚರಣೆಯಲ್ಲಿ ಬಂದು, ಲಂಚವು ಠಿಕವಾಗುತ್ತದೆ. ಈ ಟ್ಯಾಕ್ಸನ್ನು ತಪ್ಪಿಸಲು ಉಪಾಯಗಳು ಉತ್ಪನ್ನವಾಗುತ್ತವೆ.

7) **ಗಾಮು ಸುಧಾರಣಾ ಯೋಜನೆಗಳು:**—ಸರ್ಕಾರವು ಎಲ್ಲರಿಗೂ ಕೆಲಸ ಕೊಡಿಸಲು ಸಮರ್ಥವಾದಾಗಲೇ ಈ ಕಾರ್ಯವು ಫಲಿತಾರ್ಥವಾಗುತ್ತದೆ. ಇಲ್ಲವಾದರೆ, ಯಾವಸುಧಾರಣೆ ಇದಾದರೂ, ದೇಶದಲ್ಲಿ ಜಿಶಾಂತಿಯುಂಟಾಗಿ, ವ್ಯವಸಾಯೀ ಜೀವನ ಮತ್ತು ಆರ್ಥಿಕ ವ್ಯವಸ್ಥೆಯು ಗಂಡಾಂತರಕ್ಕೊಳಗಾಗುತ್ತದೆ.

ಎನ್. ಸಣ್ಣನಗೌಡ
ವೈ. ಸಂಜೀವರಾವ್
ಕೆ. ಹನುಮಂತರಾವ್
ರಂಗರಾವ್ ಅಗಸನೂರ

ಹೊಸಪೇಟೆ ಜಿಲ್ಲಾ ಮುನ್ಸಿಫರ ಕೋರ್ಟಿನಲ್ಲಿ

Sc 232/45 Ep 14/50

ಅರ್ಜಿದಾರ—ಕಳವಿಹಳ್ಳಿ ವೆಂಕಪ್ಪ
ರೆಸ್ಪಾಂಡೆಂಟು (ಎದುರು) —ಕಂಕಿಹಳ್ಳಿ ಅಬ್ದುಲ್ ಖಾದರ್

ಮೇಲ್ಕಾಣಿಸಿದ ಇ. ಪಿ. 21-7-50 ಕ್ಕೆ ರೆಸ್ಪಾಂಡೆಂಟ್ ಕಂಕಿಹಳ್ಳಿ ಅಬ್ದುಲ್ ಖಾದರ್ ಇವರ ಹಾಜರಿಗಾಗಿ ವಾಯ್ದೆ ಹಾಕಲಾಗಿದೆ. ಆದಿನ ಪ್ರಾತಃಕಾಲ 11 ಗಂಟೆಗೆ ಕೋರ್ಟಿನಲ್ಲಿ ಸದರಿ ಅಬ್ದುಲ್ ಖಾದರ್ ಖುದ್ದಾಗಿಯಾಗಲಿ, ವಕೀಲರ ದ್ವಾರವಾಗಲಿ ಹಾಜರಾಗಿ ತನ್ನ ಅಕ್ಷೇಪಣೆ ತಿಳಿಸಿದ್ದರೆ, ಅಕ್ಷೇಪನನ್ನು ಎಕ್ಸಪಾರ್ಟಿಯಾಗಿ ಭಾವಿಸಿ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

10-7-50] ಎಂ. ರಂಗನಾಥಾಚಾರ್
ಹೊಸಪೇಟೆ] ಅರ್ಜಿದಾರರ ವಕೀಲರು



ಸೋಮವಾರ ಜೂಲೈ ೧೭ ೧೯೫೦.

ಆಟಂಬಾಂಬಿನ ಉಪಯೋಗವೇ?

ಇಂದಿನ ಪರಿಸ್ಥಿತಿಯಲ್ಲಿ ಜಗತ್ತು ಮೂರನೆಯ ಮಹಾಯುದ್ಧದ ಭಯದಿಂದ ತಲ್ಲಣಿಸುತ್ತಲಿದೆ. ಕೋರಿಯಾ ಯುದ್ಧ ಲಕ್ಷಣಗಳಲ್ಲಿ ಅಪಶಕುನಗಳೇ ಕಂಡುಬರುತ್ತಲಿವೆ. ಕೋರಿಯಾ ಯುದ್ಧವು ಜೂನ್ 25ಕ್ಕೆ ಪ್ರಾರಂಭವಾಯಿತು. ಈ 20 ದಿನಗಳಲ್ಲಿ ಇಮೆರಿಕನ್ನರು ಹಿಂದೆ ಸರಿಯುತ್ತಲೇ ಇರುವರು. ಅವರು ಕೋರಿಯಾದಿಂದ ಹೊರದೂಡಲ್ಪಡುವ ಲಕ್ಷಣಗಳೂ ಇವೆ. ಈ ಕಾರಣ ಅಮೆರಿಕಾದಲ್ಲಿಯ ಕೆಲ ಜನರು ಮತ್ತು ಯೂರೋಪ್‌ನ ಅಂತರಾಷ್ಟ್ರೀಯ ಸಮಿತಿಯೂ, ಅಣುಬಾಂಬನ್ನುಪಯೋಗಿಸಿ, ಯುದ್ಧವನ್ನು ಅಂತಗೊಳಿಸಬೇಕೆಂದು ಸೂಚಿಸುತ್ತಲಿವೆ. ಇದು ಭಯಂಕರ ಸೂಚನೆಯಿದ್ದು, ಇದರ ಪರಿಣಾಮವು ಜಗತ್ತಿನ ನಾಶದಲ್ಲಿ ಕಟ್ಟಿಟ್ಟಿದ್ದು ಎಂಬುದನ್ನು ಮರೆಯತಕ್ಕದ್ದಲ್ಲ.

ಜಪಾನರು ಶರಣಾಗತರಾದ ಮೇಲೆ ಅಮೆರಿಕೆಯು ಹಿರೋಶಿಮ, ನಾಗಸಾಕಿ ನಗರಗಳಮೇಲೆ ಅಣು ಬಾಂಬುಗಳನ್ನು ಪ್ರಯೋಗಿಸಿ, ಅವುಗಳನ್ನು ಪೂರ್ಣವಾಗಿ ನಾಶಮಾಡಿತು. ಯುದ್ಧನಿಲ್ಲಿಸುವುದಕ್ಕಲ್ಲ ಅದರೆ ಯುದ್ಧ ನಿಂತಮೇಲೆ ಅವುಗಳ, ಪ್ರಯೋಗ ಫಲವನ್ನೀಕ್ಷಿಸಲು ಅಮೆರಿಕೆಯು ಹೀಗೆಮಾಡಿತು. ಇತರ ಅಸ್ತ್ರಾಸ್ತ್ರಗಳ ಬಲದಿಂದ ಯುದ್ಧವನ್ನು ನೆಲ್ಲುವುದು ಹಿತಕರವಾಗಲಿ, ಜನಾಂಗೆ ಜನಾಂಗವನ್ನೇ ನಾಶಗೊಳಿಸಿ ಅನೇಕ ನರ್ಷಗಳವರೆಗೆ ಅಲ್ಲಿ ವಿಷಯುಕ್ತ ವಾತಾವರಣವನ್ನು ಸೃಷ್ಟಿಸುವುದು ಸಾಗರಿಕತೆಯ ದ್ಯೋತಕವಲ್ಲ. ಅದು ರಾಷ್ಟ್ರೀಯ ಕೃತ್ಯ.

ಯುದ್ಧದಲ್ಲಿ ಎರಡು ಪಾರ್ಟಿಗಳು ತೊಡಗಿರುತ್ತವೆಯಾಗಲಿ, ಶತ್ರು ರಾಷ್ಟ್ರಗಳ ಸೈತರು, ಮಕ್ಕಳು, ನಿರಪರಾಧಿಗಳಾದ ಸ್ತ್ರೀಯರು, ಕೈಲಾಗದ ಮುದುಕರು ಸೇರಿಲ್ಲ. ಅವರನ್ನು ಸಂಹಾರಮಾಡುವುದು ಯಾವ ಧರ್ಮ? ನಿದ್ದ ರಾಷ್ಟ್ರಗಳ ಅಧೀನಸ್ಥರಾಗಿ, ಅವರ ಪ್ರಜೆಗಳಾಗುವವರು ಸೋದರರು. ಹೀಗೆಯೇ ಪ್ರಪಂಚದ ಇತಿಹಾಸದಲ್ಲಿ ಒಬ್ಬರಾದ ಮೇಲೊಬ್ಬರು ಸ್ವಾತಂತ್ರ್ಯ ಹರಣ ಮಾಡುತ್ತಲಿರುವರು.

ಆಧುನಿಕ ವಿಜ್ಞಾನ ಯುಗದಲ್ಲಿ ಜಗತ್ತನ್ನು ನಾಶಗೊಳಿಸುವ ಅಸ್ತ್ರಗಳು ಅವಿಷ್ಕಾರವಾಗುತ್ತಲಿವೆ. ಇ ಶಕ್ತಿಗಳಿಂದ ಜಗತ್ತಿನ ಆರ್ಥಿಕ ಉದ್ಧಾರವೂ ಕೂಡ ಸಾಧ್ಯವಿದೆ ಅದರೆ, ಇಂದು ನಾವಿಕಾವೀ ಮಾರ್ಗದತ್ತ ನಾವು ಸಾಗಿದ್ದೇವೆ. ಅಮೆರಿಕಾವು ಎಂದು ಅಣು ಬಾಂಬಿನ ಪ್ರಯೋಗಮಾಡುವುದೋ ಅಂದೇ ಪ್ರಳಯದಾರಂಭವಾಯ್ತೆಂದು ಭಾವಿಸಬೇಕು. ಭಗವಂತನ ಲೀಲಾ ಪ್ರಪಂಚದಲ್ಲಿ ಯಾವಲೀಲೆಯಿಂದ ಅವನಿಗೆ ತೃಪ್ತಿಯಾಗುತ್ತೋ ನೋಡುವ!

ಕೋರಿಯಾ ಯುದ್ಧ ವಾರ್ತೆ

ಸಂಯುಕ್ತ ರಾಷ್ಟ್ರಸಂಘದ ಹೆಸರ ಮೇಲೆ ಜಾಪಾನದಲ್ಲಿನ ಜನರಲ್ ಮಾಕಾರ್ಥರರು, ಸಂಯುಕ್ತರಾಷ್ಟ್ರ ಸೈನ್ಯಗಳ ಸರ್ವಾಧಿಕಾರಿಗಳಾಗಿದ್ದಾರೆ. ಈ ವಾರವೆಲ್ಲಾ ಅಮೆರಿಕಾದ ಸೈನ್ಯಗಳು ಹಿಂದೆ ಸರಿಯುತ್ತಲೇ ಇವೆ. ಸುತ್ತುಗಟ್ಟಲ್ಪಟ್ಟ ಅಮೆರಿಕಾ ಸೈನ್ಯವೊಂದು ತಪ್ಪಿಸಿಕೊಂತು ಬಂದಂತೆ ವರದಿಯಾಗಿದೆ. ಕೆಂಪು ಸೈನ್ಯಗಳು ಸುನಾನವನ್ನು ಆಕ್ರಮಿಸಿದ ನಂತರ, ಟಾಯ್ಟಾನ ದ ಕಡೆಗೆ ನುಗ್ಗುತ್ತಲಿವೆ. ಅಮೆರಿಕಾದ ಬಾಂಬರ್ ವಿಮಾನಗಳು, ಕೋರಿಯಾದ ಹಳ್ಳಿ, ಪಟ್ಟಣಗಳಮೇಲೆ ಬಾಂಬುಗಳನ್ನು ಸುರಿಸುತ್ತಲಿವೆ.

ಮೂರನೆಯ ಮಹಾಯುದ್ಧ ಸೂಚನೆಗಳು

ಸ್ಪೆಷಿಲ್ ಮಹಾಸಾಗರದ ಫಿಲಿಪೈನ್ ದ್ವೀಪಗಳಲ್ಲಿ ರಷ್ಯಾ ಸೂತ್ರಗಳಿಂದ ಪ್ರೇರಿತರಾದ ಕೆಂಪು ಸೈನ್ಯದವರು ಗೊಂದಲ ಹೆಬ್ಬಿಸುತ್ತಿರುವರು. ಕೆಂಪು ಚೀನಾ ಸರ್ಕಾರವು ಫಾರ್ಮೋಸಾದ್ವೀಪವನ್ನು ಮುತ್ತಲು ಸರ್ವ ಸನ್ನಾಹ ನಡೆಸುತ್ತಲಿದೆ.

ರಷ್ಯಾದ ಸೈನ್ಯಗಳು ಈ ಪ್ರಕಾರ ಸಿದ್ಧವಾಗಿ ನಡೆದಿವೆಯೆಂದು ಗೊತ್ತಾಗಿದೆ.

1) ಮಂಚೂರಿಯದ ಪೂರ್ವಭಾಗಕ್ಕೆ ೬ ಲಕ್ಷ ದಿಂದ ೫ ಲಕ್ಷದವರೆಗೆ ರಷ್ಯಾದ ಸೈನ್ಯಗಳು ಧಾಳಿಸಿ ನಡೆದಿವೆ.

2) ಇರಾನ್-ಯಾ-ಪರ್ಶಿಯಾದ ಸರಹದ್ದಿಗೆ ರಷ್ಯಾದ ಸೈನ್ಯಗಳು ಹೊರಟಿವೆ.

3) ಜರ್ಮನ್ ರಾಜಧಾನಿ ಬರ್ಲಿನ್ ವಿಭಾಗದಲ್ಲಿ ರಷ್ಯಾವು ಇತ್ತರ ರಾಷ್ಟ್ರಗಳವರನ್ನು ಪೀಡಿಸುತ್ತಲಿದೆ.

4) ಯುಗೋಸ್ಲೋವಿಯಾ ಸರಹದ್ದಿನಲ್ಲಿ ರಷ್ಯಾದ ಪ್ರತಿಭೆಗೊಳಿಸಲ್ಪಟ್ಟಿರುವ ಯುಗೋಸ್ಲೋವಿಯಾ ಸೈನ್ಯಗಳು ಸಿದ್ಧಪಡಿಸಲ್ಪಡುತ್ತಲಿವೆ.

5) ಚೀನದ ಕೆಮ್ಮಿನಸ್ಸರ ೩ ಲಕ್ಷ ಸೈನ್ಯವು ಇಂಡೋಚೀನದಲ್ಲಿ ಕಾದು ನಿಂತಿದೆ. [ಹಿಂದೂ ಪತ್ರಿಕೆ 12-7 50]

ಕೋರಿಯಾ ಯುದ್ಧವನ್ನು ನಿಲ್ಲಿಸಲು ಆಟಂಬಾಂಬನ್ನು ಪ್ರಯೋಗಿಸಬೇಕೆಂದು ಅಭಿಪ್ರಾಯಪಟ್ಟ ಸಮಿತಿಯಿಂದ ನಾಲ್ಕು ಬ್ರಿಟಿಷ್ ಸದಸ್ಯರು, ರಾಜೀನಾಮೆ ಕೊಟ್ಟು, ಕಮ್ಯೂನಿಸ್ಟರು ಹಾಜರಿಯಲ್ಲಿ ಹೀಗೆ ಮಾಡಬಾರದಿತ್ತೆಂದು ಹೇಳಿದ್ದಾರೆ.

ಬಳ್ಳಾರಿ ಜಿಲ್ಲಾ
ಕರ್ನಾಟಕ ವಿಕೀಕರಣ ಸಂಘ

ತಾ ೨೩ ನೇ ಸಾಂಕ ಸಾಯಂಕಾಲ ೪ ಗಂಟೆಗೆ ಬಳ್ಳಾರಿ ವೀರಶೈವ ಮಹಜ್ಜನಸಭೆ ಈ ಸಂಘದ ಅವಸರ ಸಭೆಯು ಸಮಾವೇಶವಾಗಿದೆ. ಈ ಸಂಘಕ್ಕೆ ಸಂಬಂಧಿಸಿದಂತೆ ಜಿಲ್ಲಾ ಬೋರ್ಡ್ ಅಧ್ಯಕ್ಷ ಶ್ರೀ ಸೈ. ಮಹಾಬಲೇಶ್ವರಪ್ಪನವರ ಹೇಳಿಕೆ. ಮತ್ತು ಶ್ರೀ ಬಾ. ಚನ್ನಬಸವನೆಗೌಡರವರದಿ ಚರ್ಚಿಸಿ ನಿರ್ಣಯಕ್ಕೆ ಬರಬೇಕಾಗಿದೆ. ಸದಸ್ಯರು, ನಿಮಂತ್ರಿತರು ಆಗಮಿಸಲು ಕೋರಿಕೆ.

ಮ. ವೆಂಕಯ್ಯ
ಕಾರ್ಯದರ್ಶಿ.

ನವಭಾರತಕ್ಕೆ
ಚಂದಾದಾರರಾಗಿರಿ.

★ ನಸ್ಯದ ತವರುಮನೆ ★

ಒಟಗಳ ಮಹಿಮೆಯನ್ನು ಸರ್ಕಾರು ಬಲ್ಲರು. ಜನರು ಗೊತ್ತಿಲ್ಲದೆ ಅವುಗಳ ಬಲೆಗೆ ಸಿಕ್ಕುತ್ತಾರೆ. ಒಮ್ಮೆ ಚಟವು ಬೆಳೆಯಿತೆಂದರೆ ಅದರ ದಾಸರಾಗಿ ಅವರು ವರ್ತಿಸಬೇಕಾಗುತ್ತದೆ.

ಯಾವುದೊಂದು ಚಟವನ್ನು ಬಿಡಬೇಕಾದರೆ ಅದರ ಸ್ಥಳದಲ್ಲಿ ಇನ್ನೊಂದನ್ನು ಸ್ವೀಕರಿಸಿದಾಗಲೇ ಮೊದಲನೆಯದನ್ನು ಬಿಡಲು ಸಾಧ್ಯವಾಗುತ್ತದೆ. ಕೆಲವು ಗಟ್ಟಿ ಮನಸ್ಸಿನವರೂ ಇದ್ದಾರೆ ಒಮ್ಮೆ ತಮ್ಮ ಚಟದಿಂದಾಗುವ ಹಾನಿಯನ್ನು ಮನಗಂಡು ಅದನ್ನು ಬಿಟ್ಟುಬಿಡಬೇಕೆಂದು ನಿಶ್ಚಯಮಾಡಿ ಅದರಂತೆ ನಿಶ್ಚಿತವಾಗಿ ಆಚರಿಸಿದವರು ಉಂಟು. ಆದರೆ ಅಂಥವರು ಬಹಳ ಕಡಿಮೆ. ಚಟದಿಂದ ಬೇಕಾದಷ್ಟು ಅನಾಹುತವಾದರೂ, ಜೀವ ಹೋಗುವ ಪ್ರಸಂಗ ಬಂದರೂ ಅದನ್ನು ಬಿಡಲಾರದೆ ಅದರಲ್ಲಿಯೇ ಮುಳುಗಿರುವವರೇ ಹೆಚ್ಚು.

ಇನ್ನು ಈ ಚಟಗಳಲ್ಲಿ ಯಾವುದು ಕೆಟ್ಟದ್ದು, ಯಾವುದು ಚಲೋದು, ಏತರಿಂದ ಹೆಚ್ಚು ಹಾನಿಯಾಗುತ್ತದೆ. ನೋಡಲಾಗಿ ವಿಚಾರಮಾಡುವುದು ನಿಷ್ಪ್ರಯೋಜಕವಾದದ್ದು. ಏಕೆಂದರೆ ಚಟವೆಂದರೆ ಅನವಶ್ಯಕ ಅಭ್ಯಾಸ. ಏನೋ ಒಂದು ತರದ ಮನರಂಜನೆ, ಉತ್ತೇಜನ ಪಡೆಯುವದಕ್ಕಾಗಿ ಅದಕ್ಕೆ ಮನುಷ್ಯನು ಆಶ್ರಯಕೊಡುತ್ತಾನೆ ಅದರಿಂದ ಪ್ರಯೋಜನವೇನೋ ಉಂಟು ಆದರೆ ಪ್ರಯೋಜನಕ್ಕಿಂತ ಅಪ್ರಯೋಜನವೇ ಹೆಚ್ಚು ಎಂದು ಹೇಳಬಹುದು.

ಸಾಮಾನ್ಯವಾಗಿ ನೋಡಿದರೆ ಅತಿಂತ ಮೇಧಾವಿಗಳಾಗಿದ್ದವರಲ್ಲಿ ತಂಬಾಕು ಸೇದುವದು, ಏರಿಸುವದು ಸುತ್ತು ತಿನ್ನುವದು ಈ ಮೂರು ಪ್ರಕಾರಗಳಲ್ಲಿ ಒಂದು ನಿಶ್ಚಯವಾಗಿ ಇದ್ದುದು ಕಂಡು ಬರುತ್ತದೆ. ಇದಕ್ಕೆ ಅಪವಾದಗಳೂ ಇವೆ ಆದರೆ ಅವು ವಿರಳ.

ಹಾಗೆ ತಂಬಾಕ ಅಥವಾ ಯಾವುದೇ ಚಟದ ವಸ್ತುವನ್ನು ಸೇವಿಸಿದಾಗ ಆ ವ್ಯಸನಿಯರು ತನ್ನ ಕೆಲಸವನ್ನು ಉತ್ತಮವಾಗಿ ಮಾಡುವನೆಂಬುದು ಅನುಭವಕ್ಕೆ ಬಂದಿದೆ.

ಮೂಗಿನ ಚಾಪಲ್ಯ

ದೇಹಕ್ಕೆ ಆಹಾರ ಬೇಕಷ್ಟೇ ಆ ಆಹಾರದಲ್ಲಿ ಅನೇಕ ಪ್ರಕಾರಗಳಿವೆ. ಕೆಲವು ಆಹಾರಗಳು ದೇಹದ ಪೌಷ್ಟಿಕತೆಗೆ ಸಹಾಯಮಾಡುತ್ತಿದ್ದರೆ ಕೆಲವು ಅದಕ್ಕೆ ಉತ್ತೇಜನವನ್ನು ಕೊಡಲು ಉಪಯುಕ್ತವಾಗಿವೆ ನೋಡಲಾನವು ಪರಿಣಾಮದಲ್ಲಿ ಹಿತಕಾರಿಗಳೂ ಎರಡನೆಯವು ಅಹಿತಕಾರಿಗಳೂ ಆಗಿವೆ. ಆದರೆ ಅವಶ್ಯಕತೆಯ ಬಗ್ಗೆ ಹೇಳುವುದಾದರೆ ಎರಡೂ ಅಷ್ಟೇ ಪ್ರಭಾವಶಾಲಿಗಳಾಗಿವೆ.

ಮನಸ್ಯನು ವಸ್ತುಗಳ ರುಚಿಯನ್ನು ನಾಲಿಗೆಯಿಂದ ತಿಳಿದುಕೊಳ್ಳುತ್ತಾನೆ. ಎಂದು ಹೇಳಲಾಗಿದೆ. ಆದರೆ ನಮ್ಮ ಪ್ರತಿಯೊಂದು ಇಂದ್ರಿಯವೂ ರುಚಿಯನ್ನು ಬಲ್ಲವು. ಕವಿಯು ಈ ಸ್ವರವೆ ನಿಟ್ಟಿಗಿಲ್ಲ ಅದು ಬಹಳ ಇಂಪಾಗಿದೆ ಎಂದು ಹೇಳುತ್ತದೆ. ಕಣ್ಣು ಈ ರೂಪವು ಅಹಸ್ಯವಾಗಿದೆ, ಅದು ಆನಂದದಾಯಕವಾಗಿದೆ ಎಂದು ತಾರತಮ್ಯವನ್ನು ತೋರಿಸುತ್ತದೆ. ಮೂಗು ಇದು ಉತ್ತಮ ವಾಸನೆ, ಇದು ದುರ್ಗಂಧ ಈ ವಾಸನೆಯು ಬಹಳ ಉಗ್ರವಾಗಿದೆ. ನೋಡಲಾಗಿ ನಿರ್ಣಯ ಮಾಡುತ್ತದೆ.

ನಸ್ಯವು ಮೂಗಿಗೆ ಸಂಬಂಧಪಟ್ಟ ಉತ್ತೇಜಕ ಪದಾರ್ಥ. ಅದರಲ್ಲಿಯೂ ಎಷ್ಟು ಪ್ರಕಾರಗಳು! ಸುದ್ರಾಸಿ, ಮಂಗಳೂರಿ, ಜವಾರಿ, ಮಡ್ಡಿ ಆ ಕಂಪನಿಯದು ಈ ಕಂಪನಿಯದು ಎಂದು ಅನೇಕ ಮಾದರಿಯ ನಸ್ಯವು ಪ್ರಚಾರದಲ್ಲಿ ಬಂದಿದೆ. ಮೈಸೂರ ಕಡೆಗಂತೂ ಆಫೀಸರರ ನಸ್ಯ ಎಂಬುದೊಂದು ಹೊಸಬಗೆಯಿದೆ.

ಈ ಪ್ರಕಾರಗಳಿಂದ ಅನೇಕರ ಮೂಗುಗಳು ಹಲವು ವಿಧವಾಗಿ ಅಸಂದರ್ಭವಾಗಿ ಹೊಂದುತ್ತವೆ. ಚಟಗಾರರ ಸಂಭ್ರಮವೂ ನೋಡತಕ್ಕಂತಿರುತ್ತದೆ. ಯಾರು ಬಂಗಾರದ ಡಬ್ಬಿ, ಯಾರು ಬೆಳ್ಳಿಯದು, ಕಾಜಿನದು, ಕೋಡಿನದು, ತಗಡಿನದು ಮತ್ತು ನಾನಾತರಹದ ಆಕಾರದ ಡಬ್ಬಿಗಳನ್ನು ಇಟ್ಟಿರುತ್ತಾರೆ. ಒಬ್ಬನು ನಸ್ಯಹಾಕುವದನ್ನು ಕಂಡರೆ, ಇನ್ನೊಬ್ಬ ನಸ್ಯಹಾಕುವವನ ಅತಿ ಆಶ್ಚರ್ಯತೆಯಿಂದ ಅವನ ಹತ್ತಿರಕ್ಕೆ ಹೋಗಿ ಅವನ ಪುಡಿಯೊತನೆ ತನ್ನದನ್ನು ವಿನಿಯಮ ಮಾಡುತ್ತಾನೆ. ತನ್ನಲ್ಲಿ ಇಲ್ಲದಿದ್ದರೆ ನಾಚಿಕೆ ಮರ್ಯಾದೆಗಳನ್ನು ಮರೆತುಬಿಟ್ಟು "ನನಗಿಪ್ಪು ಕೊಡುವಿರಾ?" ಎಂದು ಕೇಳಿಯೇ ಬಿಡುತ್ತಾನೆ. ನಸ್ಯದ ಡಬ್ಬಿಯುಳ್ಳವನಿಗೂ ಕಸ್ನ ಜಾತಿಯವನನ್ನು ಕಂಡರೆ ಬಹಳ ಆನಂದ. ಇಬ್ಬರಲ್ಲಿ ಎಂದೂ ಇಲ್ಲದ ಸ್ನೇಹವು ಒಮ್ಮೆಲೆ ಉದ್ಭವಿಸಿಹೋಗುತ್ತದೆ.

ಆಮೇಲೆ ಈ ಚಟದವರ ಪೀಕಲಾಟವನ್ನು ನೋಡುವಹಾಗೆ ಇರುತ್ತದೆ. ಅವರ ಮೂಗಿನಲ್ಲಿ ಗಂಗಾ (ಎಲ್ಲ ಯಮುನಾ) ಪ್ರವಾಹವು ನಡದೇ ಇರುತ್ತದೆ. ಅದಕ್ಕಾಗಿ ಕರವಸ್ತ್ರಗಳು ಬೇಕು. ಅವಿಲ್ಲದವರೇ ಬಹು ಜನರು. ಇದ್ದ ಕರವಸ್ತ್ರಗಳು, ನೋಡುವಂತಹವಿರುತ್ತವೆ. ಅವು ಇಲ್ಲದವರು ಫೋಕರದಿಂದಲೋ ಅಥವಾ ಕೈಯಿಂದಲೋ ಆ ಪ್ರವಾಹವನ್ನು ತಡೆಗಟ್ಟುತ್ತಿರುತ್ತಾರೆ. ಅವರ ಎಡಬಲದಲ್ಲಿ ಕುಳಿತಿರುವವರಿಗೆ ದೊಡ್ಡ ಸಂಕಟವೇ ತಲೆದೋರುತ್ತದೆ, ಈ ಚಟದಲ್ಲಿ ಅಚ್ಚು ಕಟ್ಟುತನವುಳ್ಳವರೂ ಇರುತ್ತಾರೆ. ಅವ್ಯವಸ್ಥಿತ ಪ್ರಾಣಿಗಳು ಬೇಕಾದಷ್ಟು ಇರುವುದೇ ಸಾಮಾನ್ಯ ಸಮಯ.

ಸ್ವೀಡನ್ನಲ್ಲಿ

ತಂಬಾಕದ ಉಪಯೋಗಗಳು ಎಲ್ಲೆಲ್ಲಿ ಹೇಗೆ ಹೇಗೆ ಆಗುತ್ತವೆ ಎಂಬುದನ್ನು ತಿಳಿಯಲು ಕಷ್ಟಪಡಬೇಕಾಗಿಲ್ಲ. ನೇದು ಅ ಅಭ್ಯಾಸವು ಜಗತ್ತಿನಲ್ಲೆಲ್ಲ ವ್ಯಾಪಿಸಿದೆ. ತನ್ನದೆ ಚಟವೂ ಎಲ್ಲೆಡೆಯಲ್ಲಿ ಇದೆ. ಆದರೆ ಅದು ಯಾವ ದೇಶದಲ್ಲಿ ವಿಚಿತ್ರವೆನಿಸಿದ ಸ್ಥಿತಿಯಲ್ಲಿ ಇದೆ. ಎಂಬ ಬಗ್ಗೆ ತಿಳಿದುಕೊಳ್ಳಲು ಯಾರೂ ಪ್ರಯತ್ನಪಟ್ಟಂತೆ ತೋರುವುದಿಲ್ಲ. ನಸ್ಯದ ಚಟವು ಕೂಡ ಎಲ್ಲೆಡೆಯಲ್ಲಿ ಇದೆ. ಹಲಕೆಲವು ಮಾತುಗಳಿಂದ ಅದನ್ನು ಸಿದ್ಧ ಮಾಡಬಹುದಾಗಿದೆ. ಹಿಂದುಸ್ಥಾನದ ಪೂರ್ವಜನರು ಅದಕ್ಕೆ "ಜ್ಞಾನಚೂರ್ಣ" ಎಂದು ಕರೆದರು, ಯೂರೋಪದಲ್ಲಿಯೂ ನಾತು ಇದೆ. ಇಂಗ್ರೆಜಿಯಲ್ಲಿ "ವ್ಯಾಜ್ ಮೆನ್‌ಸ್ಸ್ಫ್" (ಜಾಣರು ನಸ್ಯವನ್ನು ಉಪಯೋಗಿಸುತ್ತಾರೆ) ಎಂಬ ನಾಣ್ಣುಡಿಯಿದೆ ಅದರೆ ಈ ಚಟವು ಅತಿಶಯ ಬೆಳೆದುಕೊಂಡಿರುವ ದೇಶದ ಬಗ್ಗೆ ಒಂದು ಪ್ರಕಟನೆಯು ಬಂದಿದೆ.

ಸ್ವೀಡನ್ ದೇಶದಲ್ಲಿ ನಸ್ಯದ ಚಟವು ವಿಚಿತ್ರವೆನಿಸಿದೆಯಂತೆ. ಮತ್ತು ಇನ್ನೂ ಅದು ಅಲ್ಲಿ ಬೆಳೆಯುತ್ತಿದೆ. ಹೋಪ ವರ್ಷ ಅಲ್ಲಿಯ ಜನರು ೭೦ ಲಕ್ಷ ಪೌಂಡು ನಾಸೀಪುಡಿಯನ್ನು ಉಪಯೋಗಿಸಿದರಂತೆ. ಅಲ್ಲಿಯ ಜನಸಂಖ್ಯೆಯು ಮಾನದಿಂದ ಅದರ ಲೆಕ್ಕಹಾಕಿದರೆ, ಪ್ರತಿಯೊಬ್ಬ ವಯಸ್ಸಿನ ಗಂಡಸಿಗೆ ಮೂರು ಪೌಂಡು ಬಿದ್ದಿದೆ. ಪುಡಿಯನ್ನು ಹಾಕುವದಕ್ಕೆ ಬೇಕಾದ ಬೆಳ್ಳಿಯ ಡಬ್ಬಿಗಳ ಉದ್ಯೋಗವು ಕೂಡ ದೊಡ್ಡ ಪ್ರಮಾಣದಲ್ಲಿ ಅಲ್ಲಿ ನಡೆಯುತ್ತಿದೆ. ಉಪಹಾರ,

ಊಟದ ಗೃಹಗಳಲ್ಲಿ ಮೇಜಿನಮೇಲೆ ನಸ್ಯದ ಡಬ್ಬಿಗಳನ್ನು, ಗ್ರಾಹಕರ ಪುಕ್ಕಟೆ ಉಪಯೋಗಕ್ಕಾಗಿ ಇಟ್ಟಿರುತ್ತಾರಂತೆ.

ಹೊರ ದೇಶದವರು ಸ್ವೀಡನ್ನಿನ ಈ ಪರಿಸ್ಥಿತಿಯನ್ನು ಶ್ಲಾಘಿಸುತ್ತಿದ್ದಾರೆ. ಏಕಂದರೆ, ತಂಬಾಕ ಸೇದುವದಕ್ಕಿಂತ ನಸ್ಯದ ಚಟದಿಂದ ಕಡಿಮೆ ಹಾನಿಯು ದೇಹಕ್ಕೆ ಆಗುವುದು. ಆದ್ದರಿಂದ ಈ ವಿಷಯದಲ್ಲಿ ಸ್ವೀಡನ್ ಸರಕಾರವು ತನ್ನ ಪ್ರಜೆಗಳಿಗೆ ಉತ್ತೇಜನ ಕೊಡುತ್ತಿದೆ. ಆ ಉದ್ಯೋಗವು ಅಲ್ಲಿಯ ಸರಕಾರದಿಂದಲೇ ನಡೆಯುತ್ತಿರುವುದರಿಂದ ಅದರಿಂದ ಅದಕ್ಕೆ ಲಾಭವೇ ಇದೆ.

ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಈ ಚಟದ ಬಗ್ಗೆ ಜನಾಭಿಪ್ರಾಯವು ಸ್ವಲ್ಪ ವಿರುದ್ಧವಾದದ್ದಿದೆ. ಏಕೆಂದರೆ ನಸ್ಯವನ್ನು ಉಸಯೋಗಿಸುವದರಿಂದ ಸೀನುವ ಜನರನ್ನು ಕಂಡಾಗ ಅಸಹ್ಯ ವೆನಿಸುತ್ತದೆಂದು ಅವರು ಅನ್ನುತ್ತಾರೆ.

ಆದರೆ ಅಲ್ಲಿಯ ಹಳ್ಳಿಗಳಲ್ಲಿ ಧಾರಾಳವಾಗಿ ಜನರು ಯಾವದೇ ಅಡೆತಡೆಗಳಿಲ್ಲದೆ ನಸ್ಯ ಉಪಯೋಗಿಸುತ್ತಿದ್ದಾರೆ. ಬಡವರಿಗೆ ಈ ಚಟವು ಅನುಕೂಲವೂ ಆಗಿದೆ. ಕಾರಖಾನೆಗಳಲ್ಲಿ ಕೆಲಸಮಾಡುವವರು ಮೇಲಿಂದಮೇಲೆ ನಸ್ಯ ಏರಿಸುವದನ್ನು ಬಿಟ್ಟಿದ್ದು, ನೇಳೆ ಉಳಿಸಲು, ಅವರು ಪುಡಿಯನ್ನು ಮೇಲ್ದುಟಿಯ ಒಳ ಭಾಗದಲ್ಲಿ ಹಿಡಿದುಬಿಡುತ್ತಾರೆ. ಮತ್ತು ಅದರ ರಸವನ್ನು ಉಗುಳುತ್ತಿರುತ್ತಾರೆ ಈ ಉಗುಳುವಿಕೆಗಾಗಿ ಪಾತ್ರೆಗಳನ್ನು ಇಟ್ಟಿರುತ್ತಾರೆ. ಆದರೂ ಸ್ವಚ್ಛತಾ ವಿಭಾಗದವರಿಗೆ ಇದರಿಂದ ತೊಂದರೆಯಾಗಿದೆ ಇಲ್ಲ.

ಹೀಗೆಯೇ ನೋಡುತ್ತ ಹೋದರೆ ಇಂತಹ ಎಷ್ಟೋ ವೈಚಿತ್ರ್ಯಗಳನ್ನು ನೋಡಬಹುದಾಗಿದೆ. ಮನುಷ್ಯನು ತನ್ನ ಜೀವನದಲ್ಲಿ ಅನಂದ ಸುಖಗಳನ್ನು ಕಲ್ಪಿಸಿಕೊಳ್ಳುವಾಗ ಇಂತಹ ಅನೇಕ ಮೂರ್ಖ ಚಟಗಳಲ್ಲಿ ಬೀಳುವದುಂಟು.

ಮರಗಳು—ವಾಷ್ಪೀಯ ಸಂಪತ್ತಾಗಿವೆ.
ಮರಗಳು—ನೆರಳು, ಹಣ್ಣು, ಸೌದೆಗಳನ್ನು ಒದಗಿಸುತ್ತವೆ.
ಮರಗಳು—ಕೈಗಾರಿಕೆ ವಿಸ್ತರಣೆಗೆ ಸಹಾಯ ನೀಡುತ್ತವೆ.
ಮರಗಳು—ವಸತಿ, ಆಶ್ರಯಗಳನ್ನು ಒದಗಿಸುತ್ತವೆ.
ಮರಗಳು—ಮಳೆ ಬೀಳುವುದನ್ನು ಹೆಚ್ಚಿಸುತ್ತವೆ.
ಮರಗಳು—ಮಣ್ಣಿನ ಸವೆತವನ್ನು ತಡೆಯುತ್ತವೆ.
ಮರಗಳು—ಮಣ್ಣಿನ ತೇವವನ್ನು ಕೆಡದಂತೆ ಮಾಡುತ್ತವೆ.

ಹತ್ತಿಗೆ ಗೊಬ್ಬರ

ಬೆಲೆ ಕಮ್ಮಿಯಾಗಿದ್ದುದರಿಂದ ಲಾಭವು ಆಕರ್ಷಕವಾಗಿಲ್ಲ.

ನಮ್ಮ ದೇಶದಲ್ಲಿ ಹತ್ತಿ ಕೊರತೆಯು ಕಠಿಣವಾಗುತ್ತಿರುವುದು ಎಲ್ಲರಿಗೂ ಗೊತ್ತು ಸರಕಾರವು ಈ ಸಮಸ್ಯೆಯನ್ನು ಬಗೆಹರಿಸಲು ಸರ್ವತೋಮುಖ ಯತ್ನ ನಡೆಸುತ್ತಿದೆ. ಕೆಲವು ನಿರ್ದಿಷ್ಟ ವಲಯಗಳಲ್ಲಿ ಹತ್ತಿಗೆ ಗೊಬ್ಬರ ಹಾಕುವುದರಿಂದ ಪ್ರಯೋಜನವುಂಟೆಂದು ತಿಳಿದು ಬಂದಿದೆ. ಈ ಕ್ರಮವನ್ನು ಎಲ್ಲೆಲ್ಲೂ ಅನುಸರಿಸುವಂತೆ ಪ್ರೋತ್ಸಾಹವು ಅವಶ್ಯ. ಹತ್ತಿಗೆ ಗೊಬ್ಬರ ಹಾಕುವುದರಿಂದ ಪ್ರಯೋಜನವನ್ನು ಹತ್ತಿ ಬೆಳೆಯುವ ಅನೇಕ ರೈತರು ತಪ್ಪಾಗಿ ತಿಳಿದುಕೊಂಡಂತೆ ತೋರುತ್ತದೆ. ಈ ತಪ್ಪು ತಿಳುವಳಿಕೆಯನ್ನು ನಿವಾರಿಸುವ ದಕ್ಕಾಗಿಯೇ ಈ ಲೇಖನವು, ವರ್ಷಕ್ಕೆ 27 ಅಂಗುಲಕ್ಕಿಂತ ಹೆಚ್ಚಿಗೆ ಮಳೆಬೀಳುವ ಪ್ರದೇಶಗಳಲ್ಲಿ ಹತ್ತಿಗೆ ಸೈಟ್ರೊಜಿನ್ ತುಂಬಾ ಪ್ರಯೋಜನಕಾರಿಯಾಗುತ್ತದೆ ನೀರಾವರಿ ಸೌಕರ್ಯವಿರುವ ಎಲ್ಲಾ ಪ್ರದೇಶಗಳಲ್ಲಿ ಯಾವಾಗಲೂ ಇದೇ ಫಲವಿರುತ್ತದೆ. ಸೈಟ್ರೊಜನ್ ಈಗ ಅಮೋನಿಯಂ ಸಲ್ಫೇಟಿನ ರೂಪದಲ್ಲಿ ಅತಿ ಸುಲಭ ಬೆಲೆಯದ್ದಾದುದರಿಂದ ಅಮೋನಿಯಂ ಸಲ್ಫೇಟನ್ನು ಹತ್ತಿಗೆ ಗೊಬ್ಬರವಾಗಿ ಉಪಯೋಗಿಸುವುದು ಒಳ್ಳೇದು. ಮಧುರೈ, ರಾಮ್ನಾಡು, ತಿರುನಲ್ವೇಲಿ ಜಿಲ್ಲೆಗಳಂತಿರುವ ಕೆಲವು ನಿರ್ದಿಷ್ಟ ಪ್ರದೇಶಗಳಲ್ಲಿ ನೂಲಿಯ ಸೀರಿನ ಮೂಲಕ ಬೆಳೆಯುವ ಹತ್ತಿಗಳಿಗೆ ಎಕರೆಗೆ ನಾಲ್ಕು ಮಣ (112 ರಾತ್ಲು) ಗಳಷ್ಟು ನೀರಾವರಿಯ ಮೂಲಕ ಬೆಳೆಯುವ ಕಾಂಬೋಡಿಯಾ ಹತ್ತಿಗಳಿಗೆ ಎಕರೆಗೆ ಎಂಟು ಮಣಗಳಷ್ಟು ಅಮೋನಿಯಂ ಸಲ್ಫೇಟ್ ಹಾಕಬಹುದು. ಸಾಮಾನ್ಯ ಸಾರವತ್ತಾದ ಮಣ್ಣಿಗೆ ಮೇಲಿನ ಪ್ರಮಾಣಗಳಲ್ಲಿ ಸಾಕು. ಹೆಚ್ಚು ಸಾರವತ್ತಾದ ಮಟ್ಟಿನಲ್ಲಿ ಉತ್ಪತ್ತಿ ಜಾಸ್ತಿಗಾಗುತ್ತದೆ. ಸೀರು ಹಾಯಿಸಿ ಬೆಳೆಯಿಸುವ ಹತ್ತಿಗಳಿಗೆ ನೈಟ್ರೊಜನನ್ನು 60 ಪೌಂಡುಗಳಷ್ಟಕ್ಕೆ ಅಂದರೆ ಎಕರೆಗೆ ಅಮೋನಿಯಂ ಸಲ್ಫೇಟನ್ನು 12 ಮಣಗಳಷ್ಟಕ್ಕೆ ಏರಿಸಬಹುದು. ಮಳೆ ನೀರಿನ ಸಹಾಯದಿಂದ ಬೆಳೆಯುವ ಹತ್ತಿಗಳಿಗೆ ಗೊಬ್ಬರವನ್ನು ಬಿತ್ತುವದಕ್ಕಿಂತ ಮುಂಚೆ ಹಾಕಿ ಮುಚ್ಚಬೇಕು. ಬಿತ್ತುವದಕ್ಕಿಂತ ಮುಂಚೆ ನುತ್ತ ಹೂಬಿಡುವಾಗ ಎಂದು ಎರಡು ಸಲ ಹಾಕಿದರೆ ಒಳ್ಳೇದು. ನೀರಾವರಿ ಸಹಾಯದಿಂದ ಬೆಳೆಯುವ ಹತ್ತಿಗಳಿಗೆ ನೈಟ್ರೊಜನು ಸಲ ಗುದ್ದಲಿಯಿಂದ ಅಗೆಯುವಾಗ ಗೊಬ್ಬರ ಹಾಕಬೇಕು ಈ ಹತ್ತಿಗಳಿಗೆ ಎರಡನೆ ಸಲ ಗೊಬ್ಬರ ಹಾಕಿದನಂತರ ಬೇಗಬೇಗನೆ ಎರಡು ಸಲ ತುಂಬಾ ನೀರು ಬಿಡಬೇಕು. ಮಳೆ ನೀರಿನ ಸಹಾಯದಿಂದ ಬೆಳೆಯುವ ಹತ್ತಿಗಳಿಗೆ ಹಾಕಿದ ಪ್ರತಿ ಪೌಂಡು ನೈಟ್ರೊಜನಿಗೆ ಸಾಮಾನ್ಯ ಸಾರವತ್ತಾದ ಮಣ್ಣಿನ ಎಕರೆಗೆ ಒಂಬಿ ಪೌಂಡಿನಂತೆ ಹೆಚ್ಚಿಗೆ ನಾರು ನೀರೀಕ್ಷಿಸಬಹುದು. ಹೆಚ್ಚು ಸಾರವತ್ತಾದ ಮಣ್ಣುಗಳಲ್ಲಿ ಎಕರೆಗೆ ಎರಡು ಪೌಂಡುಗಳಷ್ಟು ದೊರೆಯಬಹುದು, ನೀರಾವರಿ ಸಹಾಯದಿಂದ ಬೆಳೆಯುವ ಹತ್ತಿಗಳಲ್ಲಿ 2½ ಪೌಂಡುಗಳಷ್ಟು ಹೆಚ್ಚಿಗೆ ನೀರೀಕ್ಷಿಸಬಹುದು.

ಈ ವರೆಗೆ ಹತ್ತಿಗೆ ಗೊಬ್ಬರ ಹಾಕುವ ಕುರಿತು ರೈತರಿಗೆ ಪ್ರೋತ್ಸಾಹವೀಯಲಿಲ್ಲ ಆಹಾರ ಸೈರುಗಳಿಗೆ ಹಾಕುವುದಕ್ಕೇನೆ ಸಾಕಷ್ಟು ಗೊಬ್ಬರ ವಿಲ್ಲದುದರಿಂದ ಹತ್ತಿಯಂತಹ ವ್ಯಾಪಾರ ಸೈರುಗಳಿಗೆ ಹೇಗೆ ತಾನೆ ದೊರೆಯುತ್ತದು? ಎರಡನೆಯದಾಗಿ ಅಸಿದ್ಧ ಹತ್ತಿಯ ಬೆಲೆಯು ಅತಿ ಕಡಿಮೆಯಾಗಿದ್ದುದರಿಂದ ಲಾಭದ ಮಿತಿಯೇ ಆಕರ್ಷಕವಾಗಿದ್ದಿಲ್ಲ. ಈಗ ಹತ್ತಿ ಬೆಲೆ ಆಕರ್ಷಕವಾಗಿದೆ. ನಮ್ಮ ಪ್ರಾಂತಕ್ಕೂ ಸ್ಥಳೀಯ ಹತ್ತಿಗೆ ಹಾಕಲು 500 ಟನ್ನುಗಳಷ್ಟು ಗೊಬ್ಬರ ಪ್ರತ್ಯೇಕ ಹಂಚಿ ಹಾಕಲಾಗಿದೆ. ಈ ಪರಿಸ್ಥಿತಿಯನ್ನು ರೈತರು ತಮ್ಮ ಅನುಕೂಲತೆಗೋಸ್ಕರ ಉಪಯೋಗಿಸಬೇಕೆಂದೂ ಎಕರೆ ಉತ್ಪತ್ತಿಯ ಹೆಚ್ಚಿನ್ನು ಸಬೇಕೆಂದು ಸರಕಾರವು ನಿರೀಕ್ಷಿಸುತ್ತಿದೆ. ಇದರಿಂದ ಹೆಚ್ಚಿಗೆ ಹತ್ತಿ ಉತ್ಪತ್ತಿಯನ್ನು ವಿಶೇಷ ಯತ್ನದಲ್ಲಿ ರೈತರು ನಡೆಸಿರಿಸಿದಂತಾಗುತ್ತದೆ. ಮತ್ತು ಕೊರತೆಯನ್ನು ನಿವಾರಿಸಲು ಸಹಾಯ ಮಾಡಿದಂತಾಗುತ್ತದೆ. —(ಪೇ ಪ್ರಟ ನೋಡಿರಿ.

ಸೋಶಿಯಲಿಷ್ಟರ ಕಾರ್ಯಕ್ರಮ ಪತ್ರಿಕೆ

★ ಜಾತೀಯತೆ ಅಳಿದು ರಾಷ್ಟ್ರೀಯತೆ ಬರಬೇಕು
★ ಸಂಪತ್ತನ್ನು ಸಮನಾಗಿ ಹಂಚಬೇಕು
★ ಆಡಳಿತದಲ್ಲಿ ಇನ್ನೂ ಇರುವ ಬ್ರಿಟಿಶ ಪದ್ಧತಿ ಹೋಗಬೇಕು
★ ಲಂಚ ನಿರ್ಮೂಲನೆಗಾಗಿ ಒಂದು ಸ್ವತಂತ್ರ ಸಂಸ್ಥೆ ನಿರ್ಮಿಸಲ್ಪಡಬೇಕು.

ಭಾರತದಲ್ಲಿಯ ಸಮತಾವಾದೀ ಪಕ್ಷವು ಪುನರುಜ್ಜೀವನಕ್ಕಾಗಿ ಗಲ ಅಂಶಗಳಿಂದ ಕೂಡಿದ ಒಂದು ಯೋಜನೆಯನ್ನು ಸಿದ್ಧಪಡಿಸಿದ್ದು ರಾಷ್ಟ್ರದ ಜನತೆಯ ದುರು ಅದನ್ನು ಮಂಡಿಸಿದೆ. ರಾಷ್ಟ್ರೀಯ ಜೀವನದಲ್ಲಿ ಕಂಡುಬರುತ್ತಿರುವ ಕೊಳೆಯನ್ನು ನಿರ್ಮೂಲನಮಾಡಿ ಸಾಮಾಜಿಕ ಸಮಸ್ಯೆ, ದಾರಿದ್ರ್ಯ ಮತ್ತು ನಿರುದ್ಯೋಗ ಔದ್ಯೋಗಿಕ ಉತ್ಪತ್ತಿ, ಗ್ರಾಮಾಭಿವೃದ್ಧಿ ವ್ಯಾಪಾರ, ಶಿಕ್ಷಣ ಇವೇ ಮೊದಲಾದ ಸಮಸ್ಯೆಗಳನ್ನು ಬಿಡಿಸುವದು ಈ ಯೋಜನೆಯ ಗುರಿಯಾಗಿದೆಯೆಂದು ಅದರಲ್ಲಿ ಹೇಳಲಾಗಿದೆ. ಸಮತಾವಾದಿ ಪಕ್ಷವು ಈ ಎಲ್ಲ ಸಮಸ್ಯೆಗಳನ್ನೂ ಪೃಥಕ್ಕರಿಸಿ ಅವುಗಳ ಬಗ್ಗೆ ತಾನು ಕೈಕೊಳ್ಳಲಿರುವ ಉಪಾಯಗಳನ್ನೂ ಸೂಚಿಸಿದೆ ಅದು ಮತ್ತು ಹೇಳುವದೇನೆಂದರೆ, ರಾಷ್ಟ್ರೀಯ ಜೀವನದ ಪ್ರತಿಯೊಂದು ಅಂಗದಲ್ಲಿಯೂ ಈಗ ಕೊಳೆ ತುಂಬಿದ್ದು ಅದನ್ನು ಕಿತ್ತೊಗೆಯದಿದ್ದರೆ ಸರ್ವನಾಶವು ಕಟ್ಟಿಟ್ಟದ್ದು ಭಾರತಕ್ಕೆ ಜೀವ ಕಳೆ ತಂದುಕೊಟ್ಟ ಗಾಂಧೀಜಿಯವರು ಇಂದು ಕಣ್ಮರೆಯಾಗಿದ್ದಾರೆ. ನಾವು ಯೋಗ್ಯ ಸ್ಫೂರ್ತಿಯನ್ನು ಪಡೆಯುವದಕ್ಕಾಗಿ ಮತ್ತೆ ಅವರು ತೋರಿದ ದಾರಿಯಿಂದಲೇ ಸಾಗಬೇಕು ಮತ್ತು ಅವರಿದ್ದರೆ ನಾವು ಮಾಡಬಹುದಾಗಿದ್ದುದನ್ನು ಮಾಡಬೇಕು. ಇವೆಲ್ಲವನ್ನೂ ಕೇವಲ ಸಮತಾವಾದೀ ಪಕ್ಷವೊಂದೇ ಸಾಧಿಸಲಾರದು. ಅದಕ್ಕೆ ಜನತೆಯು, ಅದರಲ್ಲಿಯೂ ತರುಣರು, ಶ್ರಮಜೀವಿ ಸಂಸ್ಥೆಗಳು ರೈತರು, ರೈತ ಸಂಘಗಳು, ಬುದ್ಧಿವಂತರು, ಹರಿಜನರು ಮೊದಲಾದವರೆಲ್ಲರೂ ಈ ಕಾರ್ಯವನ್ನು ಯಶಸ್ವಿಗೊಳಿಸುವಲ್ಲಿ ಸಹಕರಿಸಬೇಕು.

ಈ ಪುನರುಜ್ಜೀವನ ಕಾರ್ಯಕ್ರಮದಲ್ಲಿಯ ಮಹತ್ವದ ಅಂಶವೆಂದರೆ ಜನತೆಯು ಅಸಂಕುಷ್ಟವಾಗಿ ಸರಕಾರವನ್ನು ತೆಗಳುತ್ತ ಸುಮ್ಮನೆ ಕೂಡ್ರದೆ ತನಗೆ ಅವಶ್ಯಕವಾಗಿರುವ ವಿಧಾಯಕ ಯೋಜನೆಗಳನ್ನು ಕೈಗೊಳ್ಳುವಂತೆ ಸರಕಾರವನ್ನು ಒತಾಯಪಡಿಸಬೇಕು, ತಮ್ಮ ಇಚ್ಛೆಯಂತೆ ಆಡಳಿತ ನಡೆಸಲು ಸರಕಾರವನ್ನು ಒಕ್ಕಾಯಪಡಿಸಬೇಕು. ಇಲ್ಲವೆ ಆ ಸರಕಾರವನ್ನು ಕಿತ್ತೊಗೆದು ತಮ್ಮ ಉದ್ದೇಶವನ್ನು ಸಾಧಿಸುವಂತಹ ಬೇರೊಂದು ಸರಕಾರವನ್ನು ಸ್ಥಾಪಿಸಬೇಕು.

ರಾಷ್ಟ್ರದ ಪುನರುಜ್ಜೀವನಕ್ಕೆ ಐಕ್ಯವು ಅತ್ಯಾವಶ್ಯಕ. ಧಾರ್ಮಿಕ ಭಾವನೆ, ಪ್ರಾಂತೀಯತೆ, ಜಾತೀಯತೆ, ಭಾಷಾವಾದ ಇವೇ ಮೊದಲಾದವುಗಳನ್ನು ನಿರ್ಮೂಲಮಾಡಿ ರಾಷ್ಟ್ರೀಯ ಐಕ್ಯವನ್ನು ಸಾಧಿಸುವವರೆಗೆ ಭಾರತವು ಒಂದು ರಾಷ್ಟ್ರವಾಗಲಾರದು. ಮತ್ತು ನಾವು ಒಂದು ರಾಷ್ಟ್ರದವರೆಂದು ಬದುಕಲಾರೆವು. ಆದುದರಿಂದ ರಾಷ್ಟ್ರೀಯ ಐಕ್ಯಕ್ಕಾಗಿ ಹೊಣಗಾಡುವದು ಪ್ರತಿಯೊಬ್ಬ ದೇಶಾಭಿಮಾನಿಯ ಕರ್ತವ್ಯವಾಗಿದೆ.

ಹಳ್ಳಿಗಳಲ್ಲಿಯ ಕಂಡುಬರುತ್ತಿರುವ ಸಾಮಾಜಿಕ ದೌರ್ಬಲ್ಯಗಳನ್ನೂ ಮೇಲು ಕೀಳು ಭಾವನೆಗಳನ್ನು ಕಿತ್ತೊಗೆಯುವದಕ್ಕಾಗಿ ನಗರಗಳಲ್ಲಿಯೂ ಹಳ್ಳಿಗಳಲ್ಲಿಯೂ "ಗಾಂಧಿ ಸಂಸ್ಕೃತಿ" ಕೇಂದ್ರಗಳನ್ನು ಮತ್ತು "ರಾಷ್ಟ್ರಾಭ್ಯುದಯ" ಕೇಂದ್ರಗಳನ್ನು ಪ್ರಾರಂಭಿಸಬೇಕು.

ಸಮತಾವಾದಿ ಪಕ್ಷದ ಕಾರ್ಯಕ್ರಮ ಪತ್ರಿಕೆ

ಈ ಪಕ್ಷದ ಕಾರ್ಯಕ್ರಮ ಪತ್ರಿಕೆಯಲ್ಲಿ ಕೆಳಗಿನ ಅಂಶಗಳು ಅಡಕವಾಗಿವೆ.

ದಾರಿದ್ರ್ಯ:- ದೇಶದಲ್ಲಿ ಅತ್ಯಂತ ದಾರಿದ್ರ್ಯವಿದ್ದು ನೂರಕ್ಕೆ ೯೦ ರಷ್ಟು ಜನರು ಅದಕ್ಕೆ ಬಲಿಯಾಗಿದ್ದಾರೆ. ದಾರಿದ್ರ್ಯ ನಿವಾರಣೆಗೆ ಸಂಪತ್ತನ್ನು ಸಮನಾಗಿ ಹಂಚುವದು. ಮೊದಲ ಹೆಜ್ಜೆ. ಈಗ ತಿಂಗಳಿಗೆ ರೂ. ೨೦ ಗಳ ಆದಾಯದವರೂ ಇದ್ದಾರೆ. ಲಕ್ಷಾವಧಿ ರೂ. ಗಳ ಆದಾಯದವರೂ ಇದ್ದಾರೆ. ಈ ಅಂತರವು ೧೫ರಿಂದ ೩೦ ಕ್ಕಿಂತ ಹೆಚ್ಚಿರಕೂಡದು. ತೀರ ಕಡಿಮೆ ಆದಾಯವನ್ನಿರುವ ಕುಟುಂಬಗಳ ವಿದ್ಯಾಪ್ಪು ಬೇಗ ಜೀವನ ಮಟ್ಟಕ್ಕೆ ಸರಿದೂಗುವಂತೆ ಏರಿಸಬೇಕು. ಅಳತೆಗೆಟ್ಟು ಹೆಚ್ಚಾಗಿ ಕೊಡಲ್ಪಡುತ್ತಿರುವ ಸಂಸ್ಥಾನಿಕರ ವೇತನಗಳನ್ನು ನಿಲ್ಲಿಸಿ ಆ ಹಣವನ್ನು ಉತ್ಪಾದನೆಯ ಕೆಲಸಕ್ಕೆ ಉಪಯೋಗಿಸಬೇಕು.

ಭೂ ಸುಧಾರಣೆ:- ಕೃಷಿಪ್ರಧಾನ ದೇಶದಲ್ಲಿ ಭೂ ಸುಧಾರಣೆ ಅತ್ಯವಶ್ಯ. ಆದರೆ ಕಾಂಗ್ರೆಸ್ ಸರಕಾರವು ಆಡಳಿತಕ್ಕೆ ಬಂದು ನಾಲ್ಕು ವರ್ಷಗಳಾದರೂ ಈ ದಿಕ್ಕಿನಲ್ಲಿ ಹೇಳಿಕೊಳ್ಳುವಂತಹ ಯಾವ ಸುಧಾರಣೆಯನ್ನೂ ಮಾಡಿಲ್ಲ. ಭೂಮಿಯು ಉಳುವವನದಾಗಬೇಕು. ಮತ್ತು ನಡುವಿನವರೆಲ್ಲ ಹೋಗಬೇಕು ಪ್ರತಿಯೊಬ್ಬ ಒಕ್ಕಲಿಗನಿಗೆ ಕನಿಷ್ಟ ೧೫ ಎಕರೆ. ಮತ್ತು ಹೆಚ್ಚೆಂದರೆ ೩೦ ಎಕರೆ ಚಲೋ ಭೂಮಿ ಇರಬೇಕು. ಸಣ್ಣ ಹಿಡುವಳಿದಾರರ ಪುನರ್ನಿರ್ಮಿಸುವಿಕೆಗಾಗಿ ಅಲ್ಲದೆ ಬೇರೆ ಯಾವದೇ ಕಾರಣದಿಂದ ಜಮೀನ್ದಾರರ ಒಡೆತನ ನಷ್ಟ ಮಾಡುವಾಗ ಪರಿಹಾರ ಧನ ಕೊಡಕೂಡದು. ಇದಕ್ಕೆಲ್ಲ ಕಾಯಿದೆ ಬೇಕು. ಆದಾಗದಿದ್ದರೆ ರೈತ ತರುಣರು ತಾವೇ ಮುಂದೆ ಸಾಗಬೇಕು.

ಗ್ರಾಮ ಪುನರುಜ್ಜೀವನ:- ಭಾರತದ ಏಳುವರೆ ಲಕ್ಷ ಹಳ್ಳಿಗಳಲ್ಲಿ ನವಚೇತನ್ಯ ಉಂಟಾಗಬೇಕು. ಪ್ರತಿಯೊಂದು ಹಳ್ಳಿಯಲ್ಲಿ ವಾಸಿಸುವವನು ಪ್ರತಿದಿನ ಒಂದು ಗಂಟೆಯಷ್ಟಾದರೂ ಮಾರ್ಗ ರಚನೆ, ಕೆರೆ ಒಡ್ಡುಗಳ ರಚನೆ ಗೊಬ್ಬರ ಹದ ಮಾಡುವದು. ಇವೇ ಮೊದಲಾದ ಕೆಲಸಗಳನ್ನು ಸಾಮೂಹಿಕವಾಗಿ ಸಾಗಿಸಬೇಕು. ಈಗ ನಗರಗಳ ಹಿತಕ್ಕಾಗಿ ಹಳ್ಳಿಗಳ ಶೋಷಣೆ ನಡೆದಿದೆ. ಅದು ಹೋಗಿ "ನಮಗಿ ಹಳ್ಳಿಗೇ ಚಲುವಳಗಾನ ರಂಭವಾಗಬೇಕು.

ಔದ್ಯೋಗಿಕ ಉತ್ಪಾದನೆ:- ಔದ್ಯೋಗಿಕ ಬೆಳವಣಿಗಾಗಿ ಸಾಕಷ್ಟು ಹಣವಿಲ್ಲದಿರುವದರಿಂದಲೂ ಯಾಂತ್ರಿಕ ಜ್ಞಾನವಿಲ್ಲದಿರುವದರಿಂದಲೂ ಜಾಗುಟುತನವಿಲ್ಲದಿರುವದರಿಂದಲೂ ಸರಕಾರದ ಧೋರಣೆಯಲ್ಲಿ ನಿಶ್ಚಿತತೆ ಇರುವದರಿಂದಲೂ ಈಗ ಈ ಕ್ಷೇತ್ರದಲ್ಲಿ ಕೊಳೆಯುಂಟಾಗಿದೆ ಸರಕಾರವು ಸ್ತಬ್ಧವಾಗಿ ಕುಳಿತಿದೆ.

ದೊಡ್ಡ ಪ್ರಮಾಣದ ಔದ್ಯೋಗಿಕರಣಕ್ಕೆ ಹಣ, ಯಂತ್ರಸಾಮಗ್ರಿ ಮತ್ತು ಯಾಂತ್ರಿಕ ತಜ್ಞರು ಇವೆಲ್ಲ ಸಾಕಷ್ಟು ದೊರೆಯುತ್ತಿರದಿದ್ದರೂ ಮನುಷ್ಯ ಬಲ

(೬ ನೇ ಪುಟ ನೋಡಿರಿ)

ಸಾಕಷ್ಟಿದೆ. ಇದನ್ನು ರಾಷ್ಟ್ರಾಭಿವೃದ್ಧಿಗೆ ಉಪಯೋಗಿಸಿಕೊಳ್ಳಬೇಕು.

ವ್ಯಾಪಾರ:–ಪರ್ಮಿಟ್ ಮತ್ತು ಲಾಯಿಸನ್ಸುಗಳ ಈ ದಿನಗಳಲ್ಲಿ ವರ್ತಕ ವ್ಯವಸಾಯಗಾರರು ಮೊಲೆಗೊತ್ತಲ್ಪಟ್ಟು ವ್ಯಾಪಾರದ ಗಂಧಕೂಡಾ ಇಲ್ಲದವರೂ ಅಸಮರ್ಥರೂ ಅನನುಭವಿಕರೂ ವಶೀಲಿಯ ಬಲದಿಂದ ಮುಂದೆ ಬರುತ್ತಿದ್ದಾರೆ. ಸಣ್ಣ ಪುಟ್ಟ ವರ್ತಕರು ಕೆಳಕ್ಕೆ ತುಳಿಯಲ್ಪಟ್ಟು ಕೆಲವೇ ಜನ ದೊಡ್ಡ ದೊಡ್ಡ ವ್ಯಾಪಾರಸ್ಥರು ಊರ್ಜಿತಾವಸ್ಥೆಗೆ ಬರುತ್ತಿದ್ದಾರೆ. ಆಯಾತ ನಿರ್ಯಾತ ವ್ಯವಹಾರ ಎಲ್ಲ ಸರಕಾರದಿಂದಲೇ ನಡೆಸಲ್ಪಡಬೇಕು.

ಬೆಲೆಗಳಲ್ಲಿ ಇಳಿಮುಖ:– ಔದ್ಯೋಗಿಕ ಮತ್ತು ಒಕ್ಕಲುತನದಲ್ಲಿ ಹೆಚ್ಚಿನ ಉತ್ಪತ್ತಿಯಿಂದ ಮತ್ತು ಅದರ ಜೊತೆಗೆ ಒತ್ತಾಯದ ಉಳಿತಾಯ ಯೋಜನೆ ದೊಡ್ಡ ಸಂಬಳದವರ ಸಂಬಳದಲ್ಲಿ ಕಡಿತ ಮತ್ತು ಬಳಿಕೆಯಲ್ಲಿ ನಿಯಂತ್ರಣ ಇವು ಈಗ ಏರಿದ ಬೆಲೆಗಳು ಇಳಿಯಲು ಸುಲಭೋಪಾಯಗಳಿವೆ.

ಬಟ್ಟೆಬ್ಟ್ಟೆ ಹಣ:– ಬಚ್ಚಿಡಲ್ಪಟ್ಟ ಹಣವನ್ನು ಹೊರತೆಗೆಯಬೇಕು. ಉದ್ದಿಮೆದಾರರು ಸರಕಾರದೊಡನೆ ಸಹಕರಿಸಿಲ್ಲ. ಆದಾಯಕರ ವಿಚಾರಣಾ ಸಮಿತಿಯಶಸ್ವಿಯಾಗಿಲ್ಲ. ಇದಕ್ಕೂ ಉಗ್ರವಾದ ಕ್ರಮಗಳನ್ನು ಯೋಜಿಸಬೇಕು.

ನಿರುದ್ಯೋಗ:– ಈ ಘೋಷಣ ಪತ್ರಿಕೆಯಲ್ಲಿ ತೋರಿಸಿದ ಅರ್ಥಿಕ ಕಾರ್ಯಕ್ರಮವನ್ನು ಕೈಕೊಂಡರೆ ಮಾತ್ರ ಬೆಳೆಯುತ್ತಿರುವ ಈ ನಿರುದ್ಯೋಗ ಸಮಸ್ಯೆ ಬಿಡಬಲ್ಲದು.

ನಿರಾಶ್ರಿತರು:– ಇವರ ಪುನರ್ನಿರ್ಮಿಸುವಿಕೆಯ ಪ್ರಶ್ನೆಯನ್ನು ರಾಷ್ಟ್ರದ ಪ್ರಮುಖ ಅರ್ಥಿಕ ಯೋಜನೆಯೊಡನೆ ಕೂಡಿಸಬೇಕು.

ಲಂಚಗುಳಿತನ:– ಇದು ಮಾತ್ರ ರಾಷ್ಟ್ರದ ಒಂದೇ ಒಂದು ಭೀಕರ ಶತ್ರುವಾಗಿದೆ. ಇದು ಈಗ ಸರ್ವಾಂತರ್ಯಾಮಿಯಂತಾಗಿದೆ. ಲಂಚ ಪ್ರತಿಬಂಧಕ ವಿಭಾಗವು ಸಂಪೂರ್ಣ ಅಯಶಸ್ವಿಯಾಗಿದೆ. ಆ ವಿಭಾಗವನ್ನು ಕಿತ್ತೊಗೆದು ರಾಜ್ಯಪಟ್ಟನೆಯಲ್ಲಿ ಚುನಾವಣೆ ಸಮಿತಿಯ ರಚನೆಯ ಬಗ್ಗೆ ಹೇಳಿದಂತೆ ಒಂದು ಸ್ವತಂತ್ರವಾದ ಲಂಚಪ್ರತಿಬಂಧಕ ಸಮಿತಿಯು ನಿರ್ಮಾಣವಾಗಬೇಕು.

ಆಡಳಿತ:– ಕಾಂಗ್ರೆಸ್ಸು ಆಡಳಿತ ಸಾಗಿಸುತ್ತಿದ್ದರೂ ಬ್ರಿಟಿಶರ ಆಡಳಿತ ಯಂತ್ರವೂ ಇನ್ನೂ ಹಾಗೆ ಇದೆ. ಆ ಪದ್ಧತಿಯಿಂದ ರಾಷ್ಟ್ರದ ಉತ್ಕರ್ಷವು ಎಂದಿಗೂ ಆಗದು. ಬ್ರಿಟಿಶರ ಆಡಳಿತ ಪದ್ಧತಿಯು ಅವಿಶ್ವಾಸವಿದ್ದು ಮತ್ತು ಹೊಣೆಗಾರಿಕೆಯನ್ನು ಮೇಲಿನವರ ಮೇಲೆ ಅಥವಾ ಕೆಳಗಿನವರ ಮೇಲೆ ಹೇರಿ ಹಾರಿಸಿಕೊಳ್ಳುವಂಥದಿದೆ. ನಿರ್ಧರಿಸಿದ ವೇಳೆಯಲ್ಲಿ ನಿಶ್ಚಿತ ಕೆಲಸ ಮಾಡಿತೋರಿಸುವ ಹೊಣೆ ಮೇಲಾಧಿಕಾರಿಗಳಮೇಲಿರತಕ್ಕದ್ದು.

ಪ್ರಜಾಸತ್ತೆ ಮತ್ತು ವಿಕೇಂದ್ರೀಕರಣ:– ಈಗ ಕೇಂದ್ರ ಮತ್ತು ಪ್ರಾಂತಿಕ ಹೀಗೆ ಎರಡು ಕಡೆ ವಿಕೇಂದ್ರೀಕರಣವಾಗಿದೆ. ಆದರೆ ಇದು ಇನ್ನೂ ಹೆಚ್ಚಾಗಿ ಜಿಲ್ಲೆ ಹಳ್ಳಿಗಳಿಗೆ ಸಹ ಆರ್ಥಿಕ ಮತ್ತು ರಾಜಕೀಯ ಅಧಿಕಾರಗಳನ್ನು ಕೊಡುವಂತಾಗಬೇಕು.

ಶಿಕ್ಷಣ:– ಪ್ರಾಥಮಿಕ ಶಿಕ್ಷಣವು ಪುಕ್ಕಟೆಯಾಗಿರಬೇಕು ಮತ್ತು ಒತ್ತಾಯವಿರಬೇಕು. ಮಾಧ್ಯಮಿಕ ಶಿಕ್ಷಣವು ಬೌದ್ಧಿಕ ಮತ್ತು ಯಾಂತ್ರಿಕವಿರಬೇಕು. ಉಚ್ಚ ವಿದ್ಯಾಭ್ಯಾಸ ಮತ್ತು ಸಂಶೋಧನೆ ಇವುಗಳಿಗಾಗಿ ಮಾತ್ರ ವಿಶ್ವವಿದ್ಯಾಲಯದ ಶಿಕ್ಷಣವಿರಬೇಕು.

ಜನಸಂಖ್ಯೆ:– ಈಗಿನಂತೆ ಜನಸಂಖ್ಯೆ ಆತಂಕವಿಲ್ಲದೆ ಭರದಿಂದ ಬೆಳೆಯುತ್ತ ಸಾಗಿದರೆ ಆರ್ಥಿಕ ಬೆಳವಣಿಗೆಯು ನಿಷ್ಫ್ರಯವಾಗುವದು. ವಿವಾಹದ ವಯೋಮರ್ಯಾದೆಯನ್ನು ಹೆಚ್ಚಿಸುವದು, ಸಂತತಿನಿಯಮನ ಮೊದಲಾದ ಯೋಜನೆಗಳು ಈ ಸಮಸ್ಯೆಯನ್ನು ಬಿಡಿಸಲು ಶಕ್ತವಾಗಿವೆ.

ಜನತೆಯ ಸ್ವಾತಂತ್ರ್ಯ:– ರಾಜ್ಯ ಘಟನೆಯಲ್ಲಿ ನಮೂದಿಸಿದ ಜನತೆಯ ಮೂಲಭೂತ ಸ್ವಾತಂತ್ರ್ಯಗಳು ಅವರಿಗೆ ನಿಜವಾಗಿ ದೊರೆಯಬೇಕು. ಮತ್ತು ಜನತೆಯ ಮೇಲೆ ರಾಜ್ಯಘಟನೆಗನುಸರಿಸಿ ಅಧಿಸತ್ತಾ ಕಾಯ್ದೆಯಿಂದ ಹೇರಿದ ನಿರ್ಬಂಧಗಳನ್ನು ತೆಗೆದುಹಾಕಬೇಕು. ಯುದ್ಧ ಮತ್ತು ರಾಷ್ಟ್ರೀಯ ಗಂಡಾಂತರದ ವಿನಃ ಇತರ ಸಂದರ್ಭಗಳಲ್ಲಿ ವಿಚಾರಣೆಯಿಲ್ಲದೆ ಬಂಧಿಸುವದು ಮತ್ತು ಕಾರಾಗೃಹದಲ್ಲಿಡುವದು ಹೋಗಬೇಕು.

ಸಮತಾವಾದೀ ಪಕ್ಷವು ಮೇಲಿನ ಆಶಯದ ಅಂಶಗಳನ್ನು ಜನತೆಯ ಮುಂದಿಟ್ಟಿದ್ದು ಇದರಿಂದ ತಾವು ಗುರಿಮುಟ್ಟಿದ್ದರೂ ಆ ದಿಶೆಯಲ್ಲಿ ಇದೊಂದು ದೊಡ್ಡ ಹೆಜ್ಜೆಯಾಗಿದೆಯೆಂದೂ ನಿರಾಶೆ ಮತ್ತು ಅಶಾಭಂಗವಾದ ಈ ಕಾಲದಲ್ಲಿ ಜನತೆಯ ವಿಚಾರಸರಣಿಯಲ್ಲಿ ಸ್ಥಿತ್ಯಂತರವಾಗಿ ಮುಂದೆಸಾಗಲು ಇಂಥ ಕಾರ್ಯಕ್ರಮದಿಂದ ಮಾತ್ರ ಸಾಧ್ಯವಿದೆಯೆಂದೂ ಹೇಳಿದೆ.

ವನಮಹೋತ್ಸವ

ನಮ್ಮ ದಟ್ಟವಾದ ಅರಣ್ಯಗಳು ಒಂದು ಕಾಲದಲ್ಲಿ ನಮ್ಮ ಭೂಮಿಯ ಹೆಮ್ಮೆಯ ಚಿಹ್ನೆಗಳಾಗಿದ್ದುವು. ಸತ್ಯ ಶೋಧಕರಿಗೆ ಅವು ಆದರ್ಶ ಆಶ್ರಯ ಸ್ಥಾನಗಳಾಗಿದ್ದುವು. ಮಾತ್ರವಲ್ಲ, ಸಕಾಲದಲ್ಲಿ ಸಾಕಷ್ಟು ಮಳೆ ಬೀಳುವ ದಕ್ಕೂ ಕಾರಣವಾಗಿದ್ದುವು. ನಮ್ಮ ಕೃಷಿ ಸಂಪತ್ತಿಗೆ ಅವು ತುಂಬಾ ಸಹಾಯಸೇತುವಾಗಿದ್ದುವು. ಇಂತಹ ಅಭಿವೃದ್ಧಿದಾಯಕ ಅರಣ್ಯಗಳು ಇತ್ತೀಚೆಗೆ ಮರಗಳೆಲ್ಲಾ ಕಡಿಯಲ್ಪಟ್ಟು ಕೆಟ್ಟು ಹೋಗುವಂತೆ ಮಾಡಿದುದನ್ನು ನೋಡುವಾಗ ನನಗೆ ತುಂಬಾ ವಿಷಾದವಾಗುತ್ತದೆ. ಇದರಿಂದ ಹೊಸ ಹಾಗೂ ಕಠಿಣ ಸಮಸ್ಯೆಗಳು ತಲೆದೋರಿವೆ. ಈ ಸಂದಿಗ್ಧ ಸಮಯದಲ್ಲಿ ಜನತೆಯ ಕರ್ತವ್ಯವೂ ಸ್ಪಷ್ಟವಿದೆ. ನಿರ್ನಾಮವಾದ ನಮ್ಮ ಅರಣ್ಯಗಳನ್ನು ಪುನರುತ್ಥಾನಗೊಳಿಸುವುದರಲ್ಲಿ ಮಾತ್ರವಲ್ಲ, ಅವಶ್ಯವಿದ್ದಲೆಲ್ಲಾ ಸಸಿನೆಟ್ಟು, ಅವು ಬೆಳೆದು ಜನತೆಗೆ ಹಾಗೂ ಮುಂದಿನ ಪೀಳಿಗೆಗಳಿಗೆ ಉಪಯೋಗಕಾರಿಯಾಗುವಂತೆ, ಸಾಕಿ ಸಲಹುವ ಯತ್ನದಲ್ಲಿ ಜನರು ಸರಕಾರದೊಡನೆ ಸಹಕರಿಸಬೇಕು. ಈ ಅರಣ್ಯಗಳು ನಮ್ಮ ಈ ಪ್ರಾಚೀನ ಭೂಮಿಯ ವರ್ಣ-ಸೌಂದರ್ಯಗಳನ್ನು ಬೀರಿಸುವಂತೆ ಮಾಡಬೇಕು. ಸರಕಾರವು "ಹೆಚ್ಚು ಮರ ಬೆಳೆಸಿರಿ" ಎಂಬ ಹೊಸ ಹಾಗೂ ತೀವ್ರ ಚಳವಳಿಯನ್ನಾರಂಭಿಸಿದೆ. ಈ ಕಾರ್ಯದ ವ್ಯಾಪ್ತಿಮುಖ್ಯತೆ-ತೀಕ್ಷ್ಣತೆಗಳನ್ನು ಒತ್ತಿ ಹೇಳಬೇಕಾಗಿಲ್ಲ. ಸರಕಾರದ ಈ ಸುಸೂತ್ರ ಪ್ರಯತ್ನದಲ್ಲಿ ಮನಃಪೂರ್ವಕ ಸಹಕಾರ ನೀಡಬೇಕೆಂದು ನಾನು ನಮ್ಮ ದೇಶದ ಜನರನ್ನು ಹೃತ್ಪೂರ್ವಕ ವಿನಂತಿಸುತ್ತೇನೆ.

—ರಾಜೇಂದ್ರ ಪ್ರಸಾದ
ಹಿಂದುಸ್ಥಾನದ ಅಧ್ಯಕ್ಷ

ಕಾಮಲಾಪುರದಲ್ಲಿ ಸಪ್ತಾಹ ಭಜನೆ

ಕಾಮಲಾಪುರದ ಜನರು, ತಮ್ಮ ಗ್ರಾಮ ಮತ್ತು ಸುತ್ತಮುತ್ತಲ ಗ್ರಾಮಗಳ ಕಾಲರಾ ಉಪದ್ರವದಿಂದ, ಅವರ ಶಾಂತಿ ಪರಿಹಾರಕ್ಕಾಗಿ, ಗ್ರಾಮದೇವತೆಯ ಗುಡಿಯಲ್ಲಿ ಸಪ್ತಾಹ ಭಜನೆ ಇಟ್ಟಿದ್ದರು. ಕೊನೆಯದಿನ ೨ ಸಾವಿರ ಜನಕ್ಕೆಂತಲೂ ಹೆಚ್ಚಿನ ಜನರಿಗೆ ಅನ್ನ ಸಂತರ್ಪಣೆ ನಡೆಯಿತು. ಇದಕ್ಕಾಗಿ ಸಂಗ್ರಹಿಸಿದ ಹೆಣವಲ್ಲಿ ರೂ. 423-3-6 ಯನ್ನು ಶ್ರೀ ಯಂ. ಬಸವನಗೌಡರ ಹೆಸರಿನಲ್ಲಿ ಬ್ಯಾಂಕಿನಲ್ಲಿಡಲಾಗಿದೆ ಇನ್ನು ಇದಕ್ಕೆ ಸ್ವಲ್ಪ ಹಣ ಕೂಡಿಸಿ ದೊಡ್ಡಗುಡಿಯನ್ನು ಕಟ್ಟಿಸಲೇರ್ಪಡಿಸಲಾಗಿದೆ. ಎಲ್ಲಾ ಪುರಜನರು ಕೂಡುಗೈಯಿಂದ ಸಹಾಯಮಾಡಲು ಪ್ರಾರ್ಥನೆ.

ಈ ಸಹಾಯ ಮಾಡಿದವರಿಗೆ ನನ್ನ ಧನ್ಯವಾದಗಳನ್ನರ್ಪಿಸಿ, ಕೊಡುವ ಸಹಾಯ ಕರ್ತರು ಶ್ರೀ ಗೋಪಾಲಶೆಟ್ಟರಿಗೆ ತಮ್ಮ ಸಹಾಯವನ್ನರ್ಪಿಸಿ, ರಶೀದಿ ಪಡೆಯತಕ್ಕದ್ದು.

ಆ. ನಾಗಮಲ್ಲಿಂಗ,

ಹೊಸಪೇಟೆಜಿಲ್ಲಾ ಮುನ್ಸಿಫರ ಕೋರ್ಟಿನಲ್ಲಿ

Sc 80/50

ಮಂಜಾಲಿ ದೊಡ್ಡ ರಾಮಯ್ಯಶೆಟ್ಟಿ —ವಾದಿ

Vs

ಎಂ. ವೈ. ಹಬೀಬ್ ಅಂಡಸನ್ನು ಬೈಪಾರ್ಟಿನರ್ ಬಾಲಕೃಷ್ಣ ಯಲ್ಲಪ್ಪ ಹಬೀಬ್ — ಪ್ರತಿವಾದಿ

ರೂ. 56-15-0 ಬಾಕಿ ನನಗೂ ಲಿಗಾಗಿ ಈ ದಾವೆಯನ್ನು ಹೂಡಲಾಗಿದ್ದು ಪ್ರತಿವಾದಿಯು ಹಾಜರಾಗಿದ್ದು ಕೈವಾಯ್ದೆ ಹಾಕಲಾಗಿದೆ. ಆದಿನ ಪ್ರತಿವಾದಿಯು ಖುದ್ದಾಗಿಯಾಗಲಿ, ವಕೀಲರ ಮೂಲಕವಾಗಿಯಾಗಲಿ, ಕೋರ್ಟಿಗೆ ಹಾಜರಾಗಿ ತನ್ನ ಆಕ್ಷೇಪಣೆಗಳನ್ನು ತಿಳಿಸದಿದ್ದರೆ, ಎಕ್ಸಪಾರ್ಟಿಯಾಗಿ ಭಾವಿಸಿ ದಾವೆಯು ಏಕಪಕ್ಷವಾಗಿ ನಿರ್ಣಯಿಸಲ್ಪಡುವುದು

10-7-50 ಹೊಸಪೇಟೆ — ಎಂ. ರಂಗನಾಥಾಚಾರ್ ವಾದಿಯ ವಕೀಲರು

ಬರ್ನಾತ್

ಪ್ರಭಾತದಲ್ಲಿನ ಚಿತ್ರ

ಪ್ರೇಮವೆಂದರೇನು ?

ನದಿಯು ತೆರೆಗಳಲ್ಲಿ ಸಿಲುಕಿ ಹೊಡೆದು ಕೊಂಡು ಹೋಗುವುದೋ, ಅಥವಾ ಕಂಬನಿಗಳ ಗರ್ಭದಲ್ಲಿ ಹೊಕ್ಕು ಮುತ್ತು ರತ್ನಗಳನ್ನು ತೆಗೆಯುವುದೋ ? ಈ ಎರಡು ಸಿದ್ಧಾಂತಗಳಿರುವ ತಮ್ಮ ತಮ್ಮ ಪರವಾಗಿ ಬಲವಾದ ವಾದಗಳನ್ನು ಮುಂದುವರಿಸಿದರು ಇಲ್ಲಿ ಭೌತಿಕ ಮತ್ತು ಅಧ್ಯಾತ್ಮ ತತ್ವಗಳ ಘರ್ಷಣೆಯುಂಟು. ಸೌಂದರ್ಯವು ಅಶ್ವತವಾಗಿ ನಾಶಕಾರಿಯಾಗಿದ್ದೆಂದು ಒಬ್ಬರೂ ಪ್ರೇಮವು ಶಾಶ್ವತವಿದ್ದು ಅವಿನಾಶಕಾರಿಯೆಂದು ಮಗದೊಬ್ಬರೂ ಹೇಳುವರು. ಮನುಷ್ಯ ಜೀವನವು ಅಲ್ಪ ಸಂಖ್ಯಿತವಿದ್ದು, ಅದನ್ನು ಪೂರಾ ಭೋಗಿಸಲಿ ಚಿಕ್ಕಸುಖವೊಬ್ಬರು, ಇನ್ನೊಬ್ಬರೂ ಬಲಿದಾನದಲ್ಲೇ ಪ್ರೇಮ ವಿದೆಯೆನ್ನುವರು.

ಈ ಎರಡು ಸಿದ್ಧಾಂತಗಳ ಘರ್ಷಣೆಯೇ "ಬರ್ನಾತ್" ಜರ್ಮನ್ ಮತ್ತು ಸಂಸ್ಕೃತಿಗೆ ಸಂಬಂಧಿಸಿದ ವಾದ ಪ್ರತಿವಾದಗಳು ಬಂದನ್ನೊಂದು ನೋಡಿಸುತ್ತವೆ. ಗೋಪಾಲನು ವ್ಯಾಣನನ್ನು ಮನವೊಲಿಸಲಾರ, ವ್ಯಾಣನು ಗೋಪಾಲನನ್ನು ಗೆಲ್ಲಲಾರ. ಆದರೆ ನಿರಕ್ಷರರಾದ ಮತ್ತು ಪ್ರಕೃತಿಯ ಪರ್ವತಗಳೆ, ಮಡುಲಲ್ಲಿ ಹುಟ್ಟಿದ ಇಬ್ಬರು ಬಾಲೆಯರ, ಇದನ್ನು ಇತ್ಯರ್ಥಗೊಳಿಸುವರು. ಪ್ರಕೃತಿಯ ಈ ಸಂತಾನವು, ಪರ ಪ್ರೇಮಕ್ಕಾಗಿ, ಕಂಬನಿಗಳಲ್ಲಿ ಜೀವಿಸಿ ಆತ್ಮತ್ಯಾಗ ಮಾಡಬಲ್ಲುದು.

ವ್ಯಾಣನನ್ನು ಗೆಲ್ಲುವುದೆಂದರೆ ಜೀವನವು ಕ್ಷಣಿಕವೆಂಬುದನ್ನು ಗುರ್ತಿಸಬೇಕು. ರಪ್ಪ ಮತ್ತು ನೀಲ ಇವರ ದೈವತ್ವ ಹೇಗೆ ಹೊಂದುವರೆಂಬುದು ಪ್ರೇಕ್ಷಣೀಯ, ವ್ಯಾಣನು ಗೋಪಾಲನಿಗೆ ಹೇಳುತ್ತಾನೆ.

"ಪ್ರೇಮಿಗಳಿಗೆ ಏನೂ ಲಾಭವಿಲ್ಲ. ಆದರೆ ನಿಜವಾದ ಪ್ರೇಮಿಗಳು, ಶುದ್ಧ ಪ್ರೇಮವು ಅವಿನಾಶಿಯೆಂಬುದನ್ನು ತೋರಿಸಿದ್ದಾರೆ."

ಪ್ರಚಂಡ ಪರ್ವತಗಳ ಅಗಾಧ ಕಂದರಗಳ ಕಥೆಯು ಇದಾಗಿದೆ. ಅಂದರೆ ಎಲ್ಲಿ ಒಬ್ಬರೊಬ್ಬರಲ್ಲಿ ನಿಜ ಪ್ರೇಮವುಂಟೋ ಅಲ್ಲಿ.

ಶಾಂತಮಾರ್ಗಗಳಿಂದ ಬಿಕ್ಕಟ್ಟು ಬಿಡಿಸಿರಿ.

ನೆಹರೂರವರ ಸಂದೇಶ ಸ್ಟಾಲಿನ್ ಆಚೆಸನ್‌ರವರಿಗೆ

ಭಾರತದ ಮುಖ್ಯ ಮಂತ್ರಿ ಪಂಡಿತ ಜವಹರಲಾಲ ನೆಹರೂರವರು ಅಮೆರಿಕೆಯ ವಿದೇಶ ಮಂತ್ರಿ ಡೀನ್ ಆಚೆಸನ್‌ರವರಿಗೂ ರಷ್ಯಾದ ಅಧ್ಯಕ್ಷ ಸ್ಟಾಲಿನ್‌ರವರಿಗೂ ಕೋರಿಯಾ ಬಿಕ್ಕಟ್ಟು ಬಿಡಿಸಲು ಸಂದೇಶಗಳನ್ನು ಕಳುಹಿಸಿರುವರೆಂದು ಇಂದು ಪ್ರಕಟನೆ ಹೊರಟಿದೆ. ಮಾಸ್ಕೋದರಾಯಭಾರಿ ರಾಧಾಕೃಷ್ಣನ್‌ರವರು ಈ ಸಂದೇಶವನ್ನು ಸರರಾಷ್ಟ್ರ ಮಂತ್ರಿ ಗ್ರಾಮಿಕೋರವಂಗೆ ಮುಟ್ಟಿಸಿದರು. ಅಮೆರಿಕಾದ ರಾಯಭಾರಿ ವಿಜಯಲಕ್ಷ್ಮಿ ಪಂಡಿತರವರು ಡೀನ ಆಚೆಸನ್‌ರಿಗೆ ಈ ಸಂದೇಶ ಮುಟ್ಟಿಸಿದರು.

ಕಮ್ಯೂನಿಜಂ ವಿರುದ್ಧ ಪ್ರಚಾರ

ಅಮೆರಿಕಾದ ಅಧ್ಯಕ್ಷರಾದ ಟ್ರೂಮನ್‌ರು ಕಮ್ಯೂನಿಜಂದ ವಿರುದ್ಧ ಜಗತ್ತಿನಲ್ಲಿ ಪ್ರಸಾರಮಾಡಲು 27 ಕೋಟಿ ರೂ ಕೊಡಬೇಕೆಂದು ಬೇಡಿಕೆ ಮಂಡಿಸಿರುವರು.

ಅಣು ಬಾಂಬನ್ನು ಅಸ್ತ್ರಮಾಡಿಸಬೇಕೆಂದು ಸ್ಟಾಕ್‌ಹೋಂದ ಒಂದು ಮನವಿಗೆ ಹತ್ತುಲಕ್ಷ ಅಮೆರಿಕನರು ಅಂಕಿತ ಹಾಕಿರುತ್ತಾರೆ. ಅಮೆರಿಕಾದ ವಿದೇಶಮಂತ್ರಿ ಡಿವ್ ಆಚೆಸನ್ನರು ಇದನ್ನು ಖಂಡಿಸಿರುತ್ತಾರೆ.

ಬರ್ಸಾತ್

ಪ್ರಭಾತದಲ್ಲಿ

17—7—50 ರಿಂದ

ಚಿತ್ರನಿರ್ಮಾಣ
ರಾಜ್‌ಕಪೂರ್

Produced & Director
RAJKAPOOR

BARSAT

ಸಂಗನಕಲ್ಲಿನಲ್ಲಿ ರಾಜಿ

ಬಳಾರಿಜಿಲ್ಲಾ ಸಂಗನಕಲ್ಲಿನ ಸವರ್ಣೀಯರೂ, ಹರಿಜನರೂ ರಾಜಿಯಾಗಿ ಇನ್ನುಮೇಲೆ ಪೂರ್ವದಂತೆ ಅಣ್ಣ, ತಮ್ಮಂದಿರಾಗಿ ಬಾಳಲು ನಿಶ್ಚಯಿಸಿದರು. ಇದಕ್ಕೆ ಕಾರಣರಾದ ಡೆಪ್ಯುಟಿ ಕಲೆಕ್ಟರ್ ಶ್ರೀ ವೆಂಕಟನರಸಾರೆಡ್ಡಿಯವರಿಗೂ, ಊರಿನ ಉದಾರೀ ಜನರಿಗೂ ನಮ್ಮ ವಂದನೆಗಳು.

[ಟಿ. ಬಿ ಕೇಶವರಾವ್ ಹರಿಜನಸೇವಕ ಸಂಘ]

ಬಹಳಕಾಲದ ರಕ್ತರಂಜಿತ ಯುದ್ಧ

ಕೋರಿಯಾದಲ್ಲಿ ಬಹಳಕಾಲ ರಕ್ತರಂಜಿತ ಮತ್ತು ಅತಿಖರ್ಚಿನ ಯುದ್ಧವು ನಡೆಯುವುದೆಂಬುದು ಅಮೆರಿಕಾದ ಅಧ್ಯಕ್ಷ ಟ್ರೂಮನ್ನರಿಗೆ ಮನವರಿಕೆಯಾಗಿದೆ. ಕೊನೆಯಲ್ಲಿ ತಾವೇ ಗೆಲ್ಲುವೆವೆಂಬ ನಂಬಿಕೆಇದೆ.

ಕಮ್ಯೂನಿಸ್ಟರ ಹಾವಳಿ

ಗುಂಟೂರುಜಿಲ್ಲೆಯ ದುರ್ಗಿಹಳ್ಳಿಯಮೇಲೆ ಕಮ್ಯೂನಿಸ್ಟರ ದಾಳಿಯಾಗಿ, ಒಬ್ಬರು ಗುಂಡಿನಿಂದ ಸಾಯಹೊಡೆಯಲ್ಪಟ್ಟರು ೫೫ ಸಾವಿರ ನಗನಾಣ್ಯಗಳನ್ನು ದರೋಡೆಮಾಡಿಕೊಂಡು ಹೋಗಿರುತ್ತಾರೆ

ಹಿಂದೀ ಮಹಾ ವಿದ್ಯಾಲಯ, ಬಳ್ಳಾರಿ,

[1931 ಸ್ಥಾಪಿತ. ಬಳ್ಳಾರಿ ಜಿಲ್ಲಾ ಹಿಂದೀ ಪ್ರೇಮೀಮಂಡಲದಾಶ್ರಯದಲ್ಲಿ, ರಿಜಿಸ್ಟರ್ಡ.]

ಮದ್ರಾಸ್ ಸರ್ಕಾರದಿಂದ ಮಾನ್ಯತೆ ಇದೆ.

ಪ್ರಾರಂಭಿಕ ವರ್ಗಗಳಿಗೆ ಮಾಸಿಕ 3/- ಶುಲ್ಕ — ಉನ್ನತ ವರ್ಗಗಳಿಗೆ ಮಾಸಿಕ 5/- ಶುಲ್ಕ

ವಾರ್ಡಲಾ ಪ್ಲೈಸ್ಕೂಲ್ ಕಟ್ಟಡದಲ್ಲಿ ಪ್ರಾತಃಕಾಲ–ಸಾಯಂಕಾಲ ಹಿಂದೀ ಕಾಲೇಜ್‌ದ ವರ್ಗಗಳು ನಡೆಯುತ್ತಿವೆ. ಪ್ರವೇಶಿಕ — ವಿಶಾರದ ವರ್ಗಗಳೆಲ್ಲದೆ ಪ್ರಾರಂಭಿಕ ವರ್ಗಗಳಿಗೂ ಪ್ರವೇಶವಿದೆ. ವರ್ಗಗಳಿಗೆ ಸಂಬಂಧಿಸಿದ ಪಾಠ್ಯ ಪುಸ್ತಕಗಳು ವಿದ್ಯಾಲಯದಲ್ಲಿ ಮಾರಲ್ಪಡುತ್ತವೆ. ಒಳ್ಳೆಯ ಪುಸ್ತಕಭಂಡಾರವಿದೆ. ಶ್ರೇಷ್ಠ ವಾರಪತ್ರಿಕೆ, ಮಾಸಪತ್ರಿಕೆಗಳು ಲಭ್ಯ ಇತರ ವಿವರಗಳಿಗೆ ಸ್ಟಾಂಪಿಟ್ಟು ಬರೆಯಿರಿ.

ಪ್ರಿನ್ಸಿಪಾಲ್.

NAVA BHARAT BELLARY. (Reg. No. M. 4746)

ನವಭಾರತ ಬಳ್ಳಾರಿ.

17—7—50

(Nationalist Weekly)

ಚಂದಾದರಗಳು.	Subscription Rates.
ವರ್ಷಕ್ಕೆ 6—0—0	One Year 5—0—0
6 ತಿಂಗಳಿಗೆ 3—0—0	Six months 3—0—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.	Subscription will not be accepted for less than 6 months

To

Sri.....

.....

.....

Printed at Krishna Printing Works. Edited & Published by T.B. Keshava Rao.

JAI-HIND.

ಸಾಪ್ತಾಹಿಕ

ಬಳ್ಳಾರಿಯ ಉಜ್ವಲರಾಷ್ಟ್ರೀಯ ವಾರಪತ್ರಿಕೆ.

ಉತ್ತಿಷ್ಠತ ! ಜಾಗ್ರತ !! ಪ್ರಾಪ್ಯವರಾನ್ನಿ ಭೋಧತ !!!

ವರ್ಷ ೧೩ ಸಂಚಿಕೆ ೩೩	ಸೋಮವಾರ ೨೪ ಜೂಲೈ ೧೯೫೦.	ಸಂಪಾದಕ ಮತ್ತು ಪ್ರಕಾಶಕ : ಟಿ ಬಿ. ಕೇಶವರಾವು.

ಬಳ್ಳಾರಿಯಲ್ಲಿ ಗವರ್ನರರ ಸಂಚಾರ

ನವ್ಯಾಖ್ ಗವರ್ನರರಾದ ಭಾವ ಸರ್ದಾರ್ ಉಮ್ರಾವ್ ತುಹಾರಾಜರು ಅವರ ದಿನಾಂಕ ೨೫ನೆಯ ತಾ. ಬೆಳ್ಳಿಗ್ಗೆ ೧೦ನೆಯ ತಾ. ಹಾಲ್ಕುರಿ, ಆಲೂರು, ಒಟ್ಟಿಗನೂರು, ಆದವಾನಿ, 26 ನೆಯ ತಾ. ಪಂಪಿ, ಕುಂಗಭದ್ರಾಯೋಜನೆ ಗವನ್ನು ಸಂದರ್ಶಿಸಲಿರುವರು ಈಎಲ್ಲಾ ಸ್ಥಳಗಳಲ್ಲಿ ಸಂಸ್ಥೆಗಳ ಸಭೂರಂಭಗಳಲ್ಲಿ ಭಾಗವಹಿಸಿ, ಕಟ್ಟಡಗಳ ಶಂಕುಸ್ಥಾಪನೆ ಮಾಡಲಿರುವರು. ಪುರಸಭೆಗಳ ಜಿಲ್ಲಾ ಅಧಿಕಾರಿಗಳು, ವೀರಶೈವ ವಿದ್ಯಾವರ್ಧಕ ಸಂಘದ ಪದಾಧಿಕಾರಿಗಳು, ಗುಂಡೂರು ಲಕ್ಷ್ಮೀದೇವಮ್ಮ ಪ್ರಸೂತಿ ಕೇಂದ್ರದ ಶಂಕುಸ್ಥಾಪನೆ, ಮುನ್ಸಿಪಲ್ ಮೈದಾನ ಕಾಮೋತ್ಸವ ವ್ಯಾಯಾಮಶಾಲೆಯ ಉದ್ಘಾಟನೆಗಳಲ್ಲಿ ಭಾಗವಹಿಸಿ, ಸಭಾಧ್ಯಕ್ಷತೆ ವಹಿಸಲಿರುವರು.

ಭೀಕರ ಕಾಳಗದನಂತರ, ಅಮೆರಿಕನ್ನರು ಕೇಜಾನವನ್ನು ಬಾಲಿಮೂಡಿ ಹಿಂಪಕ್ಕೆ ಸರಿದರೆಂದು ಪ್ರಕಟವಾಗಿದೆ.

ಇಂಗ್ಲೆಂಡಿನ ಮೇಲೆ ಅಣುಬಾಂಬು ಬಿದ್ದರೆ ಅದನ್ನು ಹೇಗೆ ರಕ್ಷಿಸಿಕೊಳ್ಳಬೇಕೆಂಬ ರಕ್ಷಣೋಪಾಯಕ್ಕೆ ಒಂದು ಕೋಟಿ ರೂ.ಗಳ ವೆಚ್ಚವಾಗಲಿದೆಯೆಂದು ಗೊತ್ತಾಗಿದೆ.

ಶ್ರೇಷ್ಠಮನುಜ :-

- ಮಾನವ ಜಾತಿಯ ಕಲ್ಯಾಣ ಕೆಲಸಮಾಡಿದವನು.
- ದುಃಖದಲ್ಲಿರುವವರ ದುಃಖವನ್ನು ಕಡಮೆ ಮಾಡಿದವನು.
- ಕನ್ನ ಬಾಹುಬಲದಿಂದ ಅನಾಥರ, ಅಬಲೆಯರ ಉದ್ಧಾರಮಾಡಿದವನು.
- ನೂತನ ಆವಿಷ್ಕಾರಮಾಡಿ ರೋಗಗ್ರಸ್ತ ಮಾನವಜಾತಿಗೆ ಸಹಾಯ ಮಾಡಿದವನು.
- ಎಲ್ಲರನ್ನೂ ತನ್ನ ಸೋದರರಂತೆ ಭಾವಿಸಿ ಅವರ ಸುಖ ಶಾಂತಿಗಳಿಗಾಗಿ ಯತ್ನಿಸಿದವನು.
- ದಾಸ್ಯೋದ್ಧಾರಕ್ಕಾಗಿ ಬಲಿದಾನಮಾಡಿದವನು.

ಶಾಂತಿಗಾಗಿ ನೆಹರೂರ ಪತ್ರವ್ಯವಹಾರ

ಚೀನದ ಪ್ರಜಾಸರ್ಕಾರಕ್ಕೆ ಭದ್ರಕಾಮುಂಡಲದಲ್ಲಿ ಸ್ಥಾನ ಕೊಡುವುದರಿಂದ ಕೋರಿಯಾದ ಸಂಧಾನಕ್ಕೆ ಸಹಾಯ ಮಾಡಿದಂತಾಗುತ್ತದೆ. ಇಲ್ಲಿಯವರಿವಿಗೆ ಬಹಿಷ್ಕರಿಸಿದ ರಷ್ಯಾವೂ ಬರುವುದರಿಂದ ಭದ್ರತಾಮಂಡಲಕ್ಕೆ ಬಲವು ಬರುತ್ತದೆ. ಎಂದು ಪಂಡಿತ ನೆಹರೂರವರು ಅಮೆರಿಕೆಗೆ ತಿಳಿಸಿರುತ್ತಾರೆ. ಉತ್ತರ ಕೋರಿಯದವರ ಸೈನ್ಯವು 38 ನೆಯ ಅಕ್ಷಾಂಶದ ಹಿಂದೆ ಹೋಗಬೇಕೆಂದೂ ಅಲ್ಲಿಯವರಿಗೆ ಸಂಧಾನವೇ ಶಕ್ಯವಿಲ್ಲೆಂದೂ, ಅಮೆರಿಕಾ, ಬ್ರಿಟನ್‌ಗಳು ತಿಳಿಸಿವೆ. ಈ ಎಲ್ಲಾ ಪತ್ರವ್ಯವಹಾರವು ಪ್ರಕಟವಾಗಿರುವುದಲ್ಲದೆ, ನೆಹರೂರವರು ರಶ್ಯಾದ ಸ್ಟಾಲಿನ್‌ರವರಿಗೆ ಅಧಿಕೃತವಾಗಿ ತಿಳಿಸಿರುತ್ತಾರೆ.

ವಸ್ತುಗಳ ಬೆಲೆ ಏರಿಕೆ

ಕೋರಿಯಾ ಯುದ್ಧದ ಕಾರಣ ಮಾಡಿಕೊಂಡು ದೊಡ್ಡ ದೊಡ್ಡ ವಟ್ಟಣಗಳಲ್ಲಿನ ವರ್ತಕರು ಬೆಲೆಗಳನ್ನು ಏರಿಸುತ್ತಲಿರುವರು. ಕೆಲ ಭಾಗಗಳಲ್ಲಿ ಸರ್ಕಾರವೇ ಬೆಲೆ ಏರಿಕೆಗೆ ಸಮ್ಮತಿ ಇತ್ತಿದೆ ಪಶ್ಚಿಮ ಬಂಗಾಲ ಸರಕಾರವು ನೂರಕ್ಕೆ ಐದರಷ್ಟು ಹೆಚ್ಚಿಸಬಹುದೆಂದು ಒಪ್ಪಿದ್ದು ಈಗಲೇ ಗಟ್ಟು ಆರ್ಥಿಕ ಪರಿಸ್ಥಿತಿಯು ಮತ್ತಷ್ಟು ಕೆಟ್ಟು ದೇಶದಲ್ಲಿ ಕ್ಷೋಭೆಯುಂಟಾಗುವದು. ಬಡವರು ಜೀವಿಸುವುದು ಕಷ್ಟವಾಗುವದು. ದೇಶದಲ್ಲಿ ಅಶಾಂತಿಯಾಗಿ ಕ್ರಾಂತಿಯಾಗುವುದು. ಆಹಾರವಸ್ತುಗಳಿಗಾಗಿ ದಂಗೆಗಳಾಗಬಹುದು, ಈ ಕಾರಣ ಸರ್ಕಾರದವರು ಈಗಲೇ ಮುಂಜಾಗ್ರತೆ ವಹಿಸಬೇಕೆಂದು ಸೋಶಿಯಲಿಸ್ಟ್ ಧುರೀಣರಾದ ಅಶೋಕ ಮೇಥಾದವರು ಒಂದು ಹೇಳಿಕೆ ಹೊರಡಿಸಿರುವರು.

ಬರ್ಸಾತ್

ಪ್ರಭಾತದಲ್ಲಿ

17—7—50 ರಿಂದ

ಚಿತ್ರನಿರ್ಮಾತ
ರಾಜ್‌ಕಪೂರ್

Produced & Director
RAJKAPOOR

BARSAT

ಸಂಗನಕಲ್ಲಿನಲ್ಲಿ ರಾಜಿ

ಬಳ್ಳಾರಿಜಿಲ್ಲಾ ಸಂಗನಕಲ್ಲಿನ ಸವರ್ಣೀಯರೂ, ಹರಿಜನರೂ ರಾಜಿಯಾಗಿ ಇನ್ನುಮೇಲೆ ಪೂರ್ವದಂತೆ ಅಣ್ಣ, ತಮ್ಮಂದಿರಾಗಿ ಬಾಳಲು ನಿಶ್ಚಯಿಸಿದರು. ಇದಕ್ಕೆ ಕಾರಣರಾದ ಡೆಪ್ಯುಟಿ ಕಲೆಕ್ಟರ್ ಶ್ರೀ ವೆಂಕಟನರಸಾರೆಡ್ಡಿಯವರಿಗೂ, ಊರಿನ ಜುದಾರೀ ಜನರಿಗೂ ನಮ್ಮ ವಂದನೆಗಳು.

[ಟಿ. ಬಿ. ಕೇಶವರಾವ್ ಹರಿಜನಸೇವಕ ಸಂಘ]

ಬಹಳಕಾಲದ ರಕ್ತರಂಜಿತ ಯುದ್ಧ

ಕೋರಿಯಾದಲ್ಲಿ ಬಹಳಕಾಲ ರಕ್ತರಂಜಿತ ಮತ್ತು ಅತಿಖರ್ಚಿನ ಯುದ್ಧವು ನಡೆಯುವುದೆಂಬುದು ಅಮೆರಿಕಾದ ಅಧ್ಯಕ್ಷ ಟ್ರೂಮನ್ನರಿಗೆ ಮನವರಿಕೆಯಾಗಿದೆ. ಕೊನೆಯಲ್ಲಿ ತಾವೇ ಗೆಲ್ಲುವೆವೆಂಬ ನಂಬಿಕೆಇದೆ.

ಕಮ್ಯೂನಿಸ್ಟರ ಹಾವಳಿ

ಗುಂಟೂರುಜಿಲ್ಲೆಯ ದುರ್ಗಿಹಳ್ಳಿಯಮೇಲೆ ಕಮ್ಯೂನಿಸ್ಟರ ದಾಳಿಯಾಗಿ, ಒಬ್ಬರು ಗುಂಡಿನಿಂದ ಸಾಯಹೊಡೆಯಲ್ಪಟ್ಟರು. ೨೫ ಸಾವಿರ ನಗನಾಣ್ಯಗಳನ್ನು ದರೋಡೆಮಾಡಿಕೊಂಡು ಹೋಗಿರುತ್ತಾರೆ.

ಹಿಂದೀ ಮಹಾವಿದ್ಯಾಲಯ, ಬಳ್ಳಾರಿ,

[1931 ಸ್ಥಾಪಿತ. ಬಳ್ಳಾರಿ ಜಿಲ್ಲಾ ಹಿಂದೀ ಪ್ರೇಮೀಮಂಡಲದಾಶ್ರಯದಲ್ಲಿ, ರಿಜಿಸ್ಟರ್ಡ.]

ಮದ್ರಾಸ್ ಸರ್ಕಾರದಿಂದ ಮಾನ್ಯತೆಇದೆ.

ಪ್ರಾರಂಭಿಕ ವರ್ಗಗಳಿಗೆ ಮಾಸಿಕ 3/- ಶುಲ್ಕ — ಉನ್ನತ ವರ್ಗಗಳಿಗೆ ಮಾಸಿಕ 5/- ಶುಲ್ಕ

ವಾರ್ಡಲಾ ಹೈಸ್ಕೂಲ್ ಕಟ್ಟಡದಲ್ಲಿ ಪ್ರಾತಃಕಾಲ—ಸಾಯಂಕಾಲ ಹಿಂದೀ ಕಾಲೇಜ್‌ದ ವರ್ಗಗಳು ನಡೆಯುತ್ತಿವೆ. ಪ್ರವೇಶಿಕ — ವಿಶಾರದ ವರ್ಗಗಳಲ್ಲದೆ ಪ್ರಾರಂಭಿಕ ವರ್ಗಗಳಿಗೂ ಪ್ರವೇಶವಿದೆ. ವರ್ಗಗಳಿಗೆ ಸಂಬಂಧಿಸಿದ ಪಾಠ್ಯಪುಸ್ತಕಗಳು ವಿದ್ಯಾಲಯದಲ್ಲಿ ದೊರೆಯುತ್ತವೆ. ಒಳ್ಳೆಯ ಪುಸ್ತಕಭಂಡಾರವಿದೆ. ಶ್ರೇಷ್ಠ ವಾರಪತ್ರಿಕೆ, ಮಾಸಪತ್ರಿಕೆಗಳು ಲಭ್ಯ ಇತರ ವಿವರಗಳಿಗೆ ಸ್ವಾಂಪಿಟ್ಟು ಬರೆಯಿರಿ.

ಪ್ರಿನ್ಸಿಪಾಲ್.

NAVA BHARAT BELLARY. (Reg. No. M. 4746)

ನವಭಾರತ ಬಳ್ಳಾರಿ.

17—7—50

(Nationalist Weekly)

ಚಂದಾದರಗಳು. Subscription Rates.

ವರ್ಷಕ್ಕೆ 5—0—0	One Year 5—0—0
6 ತಿಂಗಳಿಗೆ 3—0—0	Six months 3—0—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.	Subscription will not be accepted for less than 6 months

To

Sri.....

.....

.....

Printed at Krishna Printing Works. Edited & Published by T.B. Keshava Rao.

JAI-HIND.

ಸಪ್ತಗಿರಿ

ಬಳ್ಳಾರಿಯ ಉಜ್ವಲರಾಷ್ಟ್ರೀಯ ವಾರಪತ್ರಿಕೆ.
ಉತ್ತಿಷ್ಠತ ! ಜಾಗೃತ !! ಪ್ರಾಪ್ಯವರಾನ್ನಿ ಭೋಧತ !!!

ವರ್ಷ ೧೩ ಸಂಚಿಕೆ ೩೫	ಸೋಮವಾರ ೨೪ ಜೂಲೈ ೧೯೨೦.	ಸಂಪಾದಕ ಮತ್ತು ಪ್ರಕಾಶಕ : ಟಿ ಬಿ. ಕೇಶವರಾವು.

ಬಳ್ಳಾರಿಯಲ್ಲಿ ಗವರ್ನರರ ಸಂಚಾರ

ಮದ್ರಾಸ್ ಗವರ್ನರರಾದ ಭಾವನಗರ ಮಹಾರಾಜರು, ಇವರ ದರ್ಶನಕ್ಕಾಗಿ ಜೂ. 24 ನೆಯ ತಾ. ಬಳ್ಳಾರಿನಗರದಲ್ಲಿಯೂ 25 ನೆಯ ತಾ. ಹೂಲ್ಗಿ, ಆಲೂರು, ಎಮ್ಮಿಗನೂರು, ಅದವಾನಿ, 26 ನೆಯ ತಾ. ಹೊಸಪೇಟೆ, ತುಂಗಭದ್ರಾಯೋಜನೆಗಳನ್ನು ಸಂದರ್ಶಿಸಲಿರುವರು. ಈ ಎಲ್ಲಾ ಸ್ಥಳಗಳಲ್ಲಿ ಸಂಸ್ಥೆಗಳ ಸಮಾರಂಭಗಳಲ್ಲಿ ಭಾಗವಹಿಸಿ, ಕಟ್ಟಡಗಳ ಶಂಕುಸ್ಥಾಪನೆ ಮಾಡಲಿರುವರು. ಪುರಸಭೆಗಳ ಜಿಲ್ಲಾ [illegible] ವೀರಶೈವ ವಿದ್ಯಾವರ್ಧಕ ಸಂಘದ ಮಾನಪತ್ರ. ಗುಗೆಡೂರು ಲಿಪ್ಟ್ರೀಡೆ ಕಿವಸ್ಯ ಸ್ವರೂಪ ಕೇಂದ್ರದ ಶಂಕುಸ್ಥಾಪನೆ, ಎಮ್ಮಿಗನೂರಲ್ಲಿ ವೀನರ್ಸ ಕಾಲೋನಿಯ ವ್ಯಾರಂಭೋತ್ಸವ ಕೆಲವೆಡೆಗಳಲ್ಲಿ ಊಟ, ಸಲಹಾವೇರ್ಪಡಿಸಲಾಗಿದೆ.

ಭೀಕರ ಕಾಳಗದನಂತರ, ಅಮೆರಿಕನ್ನರು ತೇಜಾನವನ್ನು ಖಾಲಿಮಾಡಿ ಹಿಂದಕ್ಕೆ ಸರಿದರೆಂದು ಪ್ರಕಟವಾಗಿದೆ.

ಇಂಗ್ಲೆಂಡಿನ ಮೇಲೆ ಜರ್ಮನಿಯ ಬಾಂಬು ಬಿದ್ದರೆ ಅದನ್ನು ಹೇಗೆ ರಕ್ಷಿಸಿಕೊಳ್ಳಬೇಕೆಂಬ ರಕ್ಷಣೋಪಾಯಕ್ಕೆ ೬೦ ಕೋಟಿ ರೂ.ಗಳ ವೆಚ್ಚವಾಗಲಿದೆಯೆಂದು ಸೊಲ್ಲಾಗಿದೆ.

ಶ್ರೇಷ್ಠಮನುಜ:-

- ಮಾನವ ಜಾತಿಯ ಕಲ್ಯಾಣ ಕೆಲಭಾಗ ಮಾಡಿದವನು.
- ದುಃಖದಲ್ಲಿರುವವರ ದುಃಖವನ್ನು ಕಡಮೆ ಮಾಡಿದವನು.
- ತನ್ನ ಬಾಹುಬಲದಿಂದ ಅನಾಥರ, ಅಬಲೆಯರ ಉದ್ಧಾರಮಾಡಿದವನು.
- ನೂಕನ ಅವಿದ್ಯಾರಮಾಡಿ ರೋಗಗ್ರಸ್ತ ಮಾನವಜಾತಿಗೆ ಸಹಾಯ ಮಾಡಿದವನು.
- ಎಲ್ಲರನ್ನೂ ತನ್ನ ಸೋದರರಂತೆ ಭಾವಿಸಿ ಅವರ ಸುಖ ಶಾಂತಿಗೆಳಿಗಾಗಿ ಯತ್ನಿಸಿದವನು.
- ರಾಷ್ಟ್ರೋದ್ಧಾರಕ್ಕಾಗಿ ಬಲಿದಾನಮಾಡಿದವನು.

ಶಾಂತಿಗಾಗಿ ನೆಹರೂರ ಪತ್ರವ್ಯವಹಾರ

ಚೀನದ ಪ್ರಜಾಸರ್ಕಾರಕ್ಕೆ ಭದ್ರತಾ ಮಂಡಲದಲ್ಲಿ ಸ್ಥಾನ ಕೊಡುವುದರಿಂದ ಕೋರಿಯಾದ ಸಂಧಾನಕ್ಕೆ ಸಹಾಯ ಮಾಡಿದಂತಾಗುತ್ತದೆ. ಇಲ್ಲಿಯವರಿಗೆ ಬಹಿಷ್ಕರಿಸಿದ ರಷ್ಯಾವೂ ಬರುವುದರಿಂದ ಭದ್ರತಾಮಂಡಲಕ್ಕೆ ಬಲವು ಬರುತ್ತದೆ. ಎಂದು ಪಂಡಿತ ನೆಹರೂರವರು ಅಮೆರಿಕೆಗೆ ತಿಳಿಸಿರುತ್ತಾರೆ. ಉತ್ತರ ಕೋರಿಯದವರ ಸೈನ್ಯವು 38 ನೆಯ ಅಕ್ಷಾಂಶದ ಹಿಂದೆ ಹೋಗಬೇಕೆಂದೂ ಅಲ್ಲಿಯವರಿಗೆ ಸಂಧಾನವೇ ಶಕ್ಯವಿಲ್ಲೆಂದೂ, ಅಮೆರಿಕಾ, ಬ್ರಿಟನ್‌ಗಳು ತಿಳಿಸಿವೆ. ಈ ಎಲ್ಲಾ ಪತ್ರವ್ಯವಹಾರವು ಪ್ರಕಟವಾಗಿರುವುದಲ್ಲದೆ, ನೆಹರೂರವರು ರಶ್ಯಾದ ಸ್ಟಾಲಿನ್ನರಿಗೆ ಅಧಿಕೃತವಾಗಿ ತಿಳಿಸಿರುತ್ತಾರೆ.

ವಸ್ತುಗಳ ಬೆಲೆ ಏರಿಕೆ

ಕೋರಿಯಾ ಯುದ್ಧದ ಕಾರಣ ಮಾಡಿಕೊಂಡು ದೊಡ್ಡ ದೊಡ್ಡ ಪಟ್ಟಣಗಳಲ್ಲಿನ ವರ್ತಕರು ಬೆಲೆಗಳನ್ನು ಏರಿಸುತ್ತಲಿರುವರು. ಕೆಲ ಭಾಗಗಳಲ್ಲಿ ಸರ್ಕಾರವೇ ಬೆಲೆ ಏರಿಕೆಗೆ ಸಮ್ಮತಿ ಇತ್ತಿದೆ ಪಶ್ಚಿಮ ಬಂಗಾಲ ಸರಕಾರವು ನೂರಕ್ಕೆ ಐದರಷ್ಟು ಹೆಚ್ಚಿಸಬಹುದೆಂದು ಒಪ್ಪಿದ್ದು ಈಗಲೇ ಕೆಟ್ಟು ಆರ್ಥಿಕ ಪರಿಸ್ಥಿತಿಯು ಮತ್ತಷ್ಟು ಕೆಟ್ಟು, ದೇಶದಲ್ಲಿ ಕ್ಷೋಭೆಯುಂಟಾಗುವದು. ಬಡವರು ಜೀವಿಸುವುದು ಕಷ್ಟವಾಗುವದು. ದೇಶದಲ್ಲಿ ಅಶಾಂತಿಯಾಗಿ ಕ್ರಾಂತಿಯಾಗುವುದು. ಆಹಾರವಸ್ತುಗಳಿಗಾಗಿ ದಂಗೆಗಳಾಗಬಹುದು, ಈ ಕಾರಣ ಸರ್ಕಾರದವರು ಈಗಲೇ ಮುಂಜಾಗ್ರತೆ ವಹಿಸಬೇಕೆಂದು ಸೋತಿಯಲಿಸ್ಟ್ ಧುರೀಣರಾದ ಅಶೋಕ ಮೇಘಾರವರು ಒಂದು ಹೇಳಿಕೆ ಹೊರಡಿಸಿರುವರು.

134

ಸೋಮವಾರ ಜೂಲೈ ೨೪—೭—೫೦

ನೆಹರೂರ ಶಾಂತಿ ಸಂಧಾನ.

ಭಾರತದ ಪ್ರಧಾನಮಂತ್ರಿಗಳಾದ ಪಂಡಿತ ಜವಹರಲಾಲನೆಹರೂರವರು ರಷ್ಯಾದ ಪ್ರಧಾನರಾದ ಸ್ಟಾಲಿನ್ನರಿಗೂ, ಬ್ರಿಟನ್ನಿನ ಪ್ರಧಾನರಾದ ಆಟ್ಲಿಯವರಿಗೂ ಅಮೆರಿಕೆಯು ವಿದೇಶಮಂತ್ರಿ ಡೀನ್ ಆಚೆಸನ್ನರಿಗೂ ಸಂದೇಶಗಳನ್ನು ಕಳುಹಿಸಿ, ಕೋರಿಯಾ ಯುದ್ಧವು, ಮಹಾಯುದ್ಧವಾಗಿ ಪರಿಣಮಿಸದಂತೆ ಅಲ್ಲಿಯೇ ಮುಕ್ತಾಯಮಾಡಿ, ಉಭಯ ಭಾಗಗಳಲ್ಲಿ ಶಾಂತಿಯನ್ನು ಏರ್ಪಡಿಸಲು ಯತ್ನಿಸಬೇಕೆಂದು ಕೇಳಿಕೊಂಡಿದ್ದರು, ಬ್ರಿಟನ್ ಮತ್ತು ಅಮೇರಿಕಾದ ಪ್ರತಿಕ್ರಿಯೆಯು ಅಧಿಕೃತವಾಗಿ ತಿಳಿದುಬಂದಿಲ್ಲವಾದರೂ, ಉತ್ತರ ಕೋರಿಯನ್ನರು ಮೊದಲು ದಾಳಿಮಾಡಿರುವ ಕಾರಣ, ಅವರು ತಮ್ಮ ಪೂರ್ವಸ್ಥಳಕ್ಕೆ ಹಿಂದಿರುಗಿದನಂತರವೇ ಶಾಂತಿ ಸಂಧಾನ ನಡೆಯಬೇಕೆಂಬುವ ಧೋರಣೆ ಇಟ್ಟುಕೊಂಡಿರುತ್ತಾರೆ. ಆ ಪ್ರಕಾರ ಅಲ್ಲಿನ ಪತ್ರಿಕೆಗಳು ಪ್ರಕಟಿಸಿವೆ.

ರಷ್ಯಾದ ಪ್ರಧಾನರಾದ ಮಾರ್ಷಲ್ ಸ್ಟಾಲಿನ್ನರು, ನಹರೂರವರಿಗೆ ಪ್ರತ್ಯುತ್ತರ ಬರೆದಿರುವರು. "ನಿಮ್ಮ ಶಾಂತಿ ಸೂಚನೆ ಸ್ವಾಗತಿಸುತ್ತೇನೆ. ಕೋರಿಯಾದ ಸಮಸ್ಯೆಯು ಭದ್ರತಾಮಂಡಲ ಮೂಲಕ ಶಾಂತಿಯಿಂದ ಒಗೆಹರಿಯಲ್ಲಿ. ಕಮ್ಯೂನಿಸ್ಟ್ ಚೀನವನ್ನೊಳಗೊಂಡ ಐದು ರಾಷ್ಟ್ರಗಳು ಇದರಲ್ಲಿ ಭಾಗವಹಿಸಬೇಕೆಂಬ ನಿಮ್ಮ ಅಭಿಪ್ರಾಯಕ್ಕೆ ನಮ್ಮ ಸಹಮತವುಂಟು. ಭದ್ರತಾಮಂಡಲದವರು ಕೋರಿಯಾದವರ ಅಭಿಪ್ರಾಯವನ್ನೂ ಕೇಳಿಕೊಳ್ಳಬೇಕು." ನಮ್ಮ ಅಭಿಪ್ರಾಯದಲ್ಲಿ ಸ್ಟಾಲಿನ್ನರ ನಕ್ರದಿಂದ ಅವರು ಶಾಂತಪ್ರಿಯರೆಂದೂ ಜಾಗತಿಕ ಯುದ್ಧವು ಅವರಿಗೆ ಬೇಕಿಲ್ಲವೆಂದೂ ಸ್ಪಷ್ಟವಾಗಿ ಗೋಚರಪಡುತ್ತದೆ. ಅಮೆರಿಕನ್ನರು ಹೇಳುವಂತೆ ನಂಬಬೇಕೆಂದರೆ, ರಷ್ಯಾದವರೇ ಉತ್ತರ ಕೋರಿಯಾದವರನ್ನು ಪ್ರೇರೇಪಿಸಿ, ದಕ್ಷಿಣದ ಮೇಲೆ ದಂಡಯಾತ್ರೆ ಕೈಗೊಳ್ಳಲು ಸರ್ವಸಹಾಯಗಳನ್ನು ನೀಡಿದರೆಂದು, ಹೇಳಬೇಕಾಗುತ್ತದೆ. ಆದರೆ ಅಮೆರಿಕಯ ಸೈನ್ಯಾಧಿಕಾರಿಗಳೇ, ಯುದ್ಧದಲ್ಲಿ ರಷ್ಯಾಭಾಗವಹಿಸಿದ ಗುರ್ತುಗಳೇ ಇಲ್ಲವೆಂದೂ, ರಷ್ಯಾದ ಸೈನಿಕರಾಗಲಿ, ವಿಮಾನಗಳಾಗಲಿ, ಟ್ಯಾಂಕುಗಳಾಗಲಿ ಯುದ್ಧಭೂಮಿಯಲ್ಲಿ ಕಂಡು ಬರಲಿಲ್ಲವೆಂದು ಹೇಳಿದ್ದಾರೆ.

ಭಾರತಕ್ಕಿನ್ನು ಆರ್ಥಿಕ ಮತ್ತು ಮಿಲಟರಿಯ ಸಾಕಷ್ಟು ಶಕ್ತಿ ಇಲ್ಲವಾದಕಾರಣ, ಭಾರತದ ಮೂಲು ಅಮೆರಿಕನ್ನರು ಹೇಗೆ ಕೇಳಬೇಕು? ತಮ್ಮ ಕರ್ತವ್ಯ ನಾಧನೆಯಾಯ್ತೆಂದರೆ, ಸಾಕೆಂದೂ, ಅದರ ಶಾಂತಿ ಸಮಾಧಾನಗಳು ತಮಗಿದ್ದರಿ ಸಾಕೆಂದೂ ನೆಹರೂರು ಹೇಳಿದ್ದಾರೆ.

ಈಗಿನ ಪರಿಸ್ಥಿತಿಯಲ್ಲಿ ಅಮೆರಿಕನ್ನರು ಗೌರವ, ವೃಥಾ ದೊಡ್ಡಸ್ತಿಕೆಯ ಭಾವದಿಂದ ನೆಹರೂರವರ ಶಾಂತಿ ಸಂದಾನಕ್ಕೆ ಬೆಲೆಗೊಡದೆ, ತುಚ್ಛೀಕರಿಸಿದರೆ, ಕೋರಿಯಾದಲ್ಲಿ ಯುದ್ಧವನ್ನು ಸಾಗಿಸಿದರೆ, ವೈಪಂಚಯುದ್ಧವು ತಪ್ಪಿದ್ದಲ್ಲ. ಅಂದರೆ, ಪ್ರಳಯವಾಗಿ ಪುನಃ ಸೃಷ್ಟಿಯಾಗಬೇಕಾಗುತ್ತದೆ.

ಯುದ್ಧದಲ್ಲಿ ಗುರ್ತು ಹತ್ತುವದಿಲ್ಲ

ಕಳೆದವಾರದಿಂದ ಉತ್ತರ ಮತ್ತು ದಕ್ಷಿಣ ಕೋರಿಯಾ ಸೈನಿಕರನ್ನು ಗುರ್ತಿಸುವದೇ ಕಠಿಣವಾಗಿದೆಯೆಂದೂ ಯಾರನ್ನು ಗುಂಡಿಕ್ಕಿ ಕೊಲ್ಲಬೇಕೊ ಗೊತ್ತಾಗದಂತಾಗಿದೆಯೆಂದೂ ಒಂದು ವಾರ್ತೆಯು ಹೇಳುತ್ತದೆ.

ಬಳ್ಳಾರಿ ಜಿಲ್ಲಾ ಬೋರ್ಡು

ಶ್ರೀ ವೈ. ಮಹಾಬಲೇಶ್ವರಪ್ಪನವರ ಅಧ್ಯಕ್ಷತೆಯಲ್ಲಿ ಕಳೆದವಾರ ಸರ್ವಾನೇಶವಾದ ಜಿಲ್ಲಾಬೋರ್ಡ್ ಸಭೆಯು ಗವರ್ನರಿಗೆ ಮಾನಪತ್ರವನ್ನರ್ಪಿಸಲು ನಿಶ್ಚಯಿಸಿ, ಅದಕ್ಕಾಗಿ 300 ರೂ. ಮುಂಜೂರುಮಾಡಿತು. ವುಮನ್ ಮೆಡಿಕಲ್ ಆಫೀಸರರ ಕೇಂದ್ರವು ಬಳ್ಳಾರಿಯಲ್ಲಿ ರತಕ್ಕದೆಂದು ನಿಶ್ಚಯವಾಯಿತು. ತೆಕ್ಕಲಕೋಟೆಯ ಬೋರ್ಡಿನ ಸ್ಥಳದಲ್ಲಿ, ತುಂಗಭದ್ರಾ ವ್ಯಾಜಿಕ್ಟ್‌ನವರು ಕಟ್ಟಲಿರುವ ಕಟ್ಟಡ, ಕಡಗಳನ್ನು ಕೆಲಸ ಮುಗಿದನಂತರ ಕಮಿಷನರೇ ಮಾರಬೇಕೆಂದು ಜೋರ್ಡು ಕೇಳಿತು, ಇನ್ನುಳಿದ ಅಮುಖ್ಯ ಅಂಶಗಳನ್ನು ಇತ್ಯರ್ಥವಾಯಿತು.

ಬಳ್ಳಾರಿ ಜಿಲ್ಲೆಯಲ್ಲಿ ಕಾಲರಾ ಬೇನೆ

ಸರ್ಕಾರದ ವರದಿಗಳನ್ನು ನಂಬಬೇಕೆಂದರೆ, ಜಿಲ್ಲೆಯ 7 ತಾಲೂಕುಗಳಲ್ಲಿ ಕಾಲರಾಬೇನೆಯು ವ್ಯಾಪಿಸಿದ್ದು ಪ್ರಾರಂಭವಾದನಂತರ 800 ಜನರಿಗೆ ಬೇನೆಯು ತಗಲಿ 144 ಜನರು ಸತ್ತಿರುವರು. ಸರ್ಕಾರದವರಿಗೆ ವರದಿಗಳು ಒರುವುದು ತಡವಾಗಿ, ಅಲ್ಲದೆ ಆರೋಗ್ಯಾಧಿಕಾರಿಗಳು ಮೂಲೆಯ ಹಳ್ಳಿಗಳನ್ನು ಸಂದರ್ಶಿಸುವುದು ಕಷ್ಟ ಹೀಗಾಗಿ. ಈ ಸಂಖ್ಯೆಯು ಬಹಳ ಕಡಿಮೆಯದೆಂದು ಹೇಳಬೇಕು ಹೊಸವೇಟೆ ತಾಲೂಕು ಅದರಲ್ಲೂ ಹೊಸವೇಟೆ ನಗರದಲ್ಲಿ ಬೇನೆಯು ಅಧಿಕವಿದೆ. ತಾಲೂಕದಲ್ಲಿ 180 ಜನರಿಗೆ ತಗಲಿ 80 ಜನ ಸತ್ತಿದ್ದರೆ, ನಗರದಲ್ಲೇ 140 ಜನರಿಗೆ ತಗಲಿ 49 ಜನರು ಮರಣ ಹೊಂದಿರುವರು. ಕಂಪ್ಲಿ, ಕಾಮಲಾಪುರ ಭಾಗದಲ್ಲಿ, ಸುಮಾರು 80 ಜನ ಸತ್ತಿರುವರು. ಜಿಲ್ಲಾಬೋರ್ಡಿನವರು ಔಷಧಗಳಿಗಾಗಿ 350 ರೂ ಸಾಂಕ್ಷನ್ ಮಾಡಿದ್ದಾರೆ. 10 ಇನ್ಸ್‌ಪೇಕ್ಟರ್ ತಿ ಹೆಲ್ತ್ ಆ ಇನ್‌ಸ್ಪೆಕ್ಟರ್ ನಿಯಮಕವಾಗಿದ್ದು ಸುಮಾರು 50 ಸಾವಿರ ಜನರಿಗೆ ಚುಚ್ಚಿದ್ದಾರೆ.

ಕಾಂಗ್ರೆಸ್ ಅಧ್ಯಕ್ಷರು ದೇವ್-ರಂಗಾರಲ್ಲಿ ಸ್ಪರ್ಧೆ

ಮಹರಾಷ್ಟ್ರದ ಶಂಕರರಾವ್, ಆಂಧ್ರದ ಎಸ್. ಜಿ. ರಂಗಾರವರಲ್ಲಿ, ನಾಸಿಕ್ ಅಧಿವೇಶನದ ಕಾಂಗ್ರೆಸ್ ಅಧ್ಯಕ್ಷತೆಗಾಗಿ ಸ್ಪರ್ಧೆ ನಡೆಯಲಿರುವದೆಂದು ತಿಳಿದುಬಂದಿದೆ.

★ ಕೋರಿಯಾ ಯುದ್ಧದ ಹಿನ್ನೆಲೆ ★

⊛ ದುಡಿದರೂ ಹೊಟ್ಟೆಬಟ್ಟೆಗೆ ಸಂಯಾಗಿ ದೊರಕುವದಿಲ್ಲ
⊛ ಇದೇ ಸೋವಿಯಟ ಕಪಿಮುಷ್ಟಿಗೆ ಮೂಲ ಕಾರಣ.
⊛ ಮಹಾಯುದ್ಧ ಸಂಭವನದ ತಾಯಿ ಬೇರೂ ಇದೇ.

★ ★ ★

ಡಿಸೆಂಬರ ೨೧ ನೆಯ ದಿವಸ ಜೋಸೆಫ ಸ್ಟಾಲಿನ್‌ರ ಹುಟ್ಟು ಹಬ್ಬವು ಮಾಸ್ಕೋದಲ್ಲಿ ಕುಂಬ ಅಬ್ಬರಾಸದಿಂದ ಜರುಗಿತು. ಸ್ಟಾಲಿನ್‌ರ ಎಡಕ್ಕೆ ಚೀನಾ ಕಮ್ಯೂನಿಸ್ಟ ಮುಂದಾಳುವಾದ ಮಾ ಪೊ ಕ್ವೆ ತಂಗ ಹಾಗೂ ಬಲಕ್ಕೆ ಕಮ್ಯೂನಿಸ್ಟ ಪ್ರಭಾವಕ್ಕೊಳಗಾದ ಪೂರ್ವ ಜರ್ಮನಿಯ ಅಧ್ಯಕ್ಷ ವಾಲ್ಟರ್ ಉಲ್ ಬ್ರಿಕ್ಟ ಈ ಉಭಯತರು ವಿರಾಜಮಾನರಾಗಿದ್ದರು.

ಪೂರ್ವ ಜರ್ಮನಿ ಮತ್ತು ಚೀನ ಈ ದೇಶಗಳ ಬಗ್ಗೆ ರಶಿಯನ್ ಸರ್ವಾಧಿಕಾರಿಯು ತೋರುತ್ತಿರುವ ಈ ಪರಮ ಸ್ನೇಹವು ರಶಿಯದ ಅಪಿಲ ಭೂಮಂಡಲದ ಏಕ ಚಕ್ರಾಧಿಪತ್ಯಾಗಬೇಕೆನ್ನುವ ಮಹತ್ವಾಕಾಂಕ್ಷೆಯ ದ್ಯೋತಕವೆನ್ನಲಡ್ಡಿಯಿಲ್ಲ. ಚೀನಾ ಹಾಗೂ ಜರ್ಮನಿಗಳ ಈ ಸ್ನೇಹ ಸೂತ್ರವು ರಶಿಯದ ಮಧ್ಯದಲ್ಲಿ ಹಾಯ್ದು ಗಟ್ಟಿಮುಟ್ಟಾದುದು ಮುಂದೆ ಫೆಬ್ರುವರಿ ೯ ಕ್ಕೆ ಸ್ಪಷ್ಟವಾಯಿತು. ಅಂದು ಚೀನದ ಮಾವೋರೊಡನೆ ವ್ಯಾಪಾರೀ ಒಪ್ಪಂದದ ಮಾತುಕತೆಗಳನ್ನು ರಶಿಯದಲ್ಲಿ ಜರ್ಮನ್ ವಾಣಿಜ್ಯ ಮಂತ್ರಿಗಳಾದ ಹೇರ ಹ್ಯಾಂಡಕೆ ಇವರು ಸ್ವಾರಂಭಿಸಿರುವರೆಂದು ಸಾರಲಾಯಿತು. ಪಶ್ಚಿಮ ಜರ್ಮನಿಯಿಂದ ಚೀನಕ್ಕೆ ನಿರ್ಯಾತವಾಗಬಹುದಾದ ಸರಕುಗಳನ್ನು ಕೂಡ ಗಮನಿಸಬೇಕೆಂದು ಹ್ಯಾಂಡಕೆ ಇವರಿಗೆ ಸೂಚನೆಯನ್ನು ಕೊಡಲಾಗಿದ್ದಿತು.

ಯುರೋಸಿಯನ್ ಮತ್ತು ಏಶಿಯನ್ ವ್ಯಾಪಾರದ ರುಚಿ ಹಚ್ಚಿ ರ್ಹೂರ ಮತ್ತು ಪಶ್ಚಿಮ ಜರ್ಮನಿಗಳನ್ನು ನೆಲ್ಲುಬೇಕೆಂದು ತಮ್ಮ್ಯೋಜನೆಯಂತೆಸೋವ್ಹಿಯೆಟ್ಟರು ಒಂದು ಹೆಜ್ಜೆ ಮುಂದೆ ಹೋದರೆಂಬುದು ಇದರಿಂದ ಗೊತ್ತಾಗುವದು. ಸರ್ವಾಧಿಕಾರಿ ರಾಷ್ಟ್ರಗಳೊಡನೆ ಈ ತೆರನಾದ ಆರ್ಥಿಕ ಸಂಬಂಧವು ಬೆಳೆದಲ್ಲಿ ಅದರ ನೆಳಲಿಗೆ ಸಿಕ್ಕು ಮುಂದೆ ರಾಜಕೀಯ ಬಲೆಯಲ್ಲಿ ಬೀಳದವರಾರು? ಇತಿಹಾಸವು ಇಂತಹ ಅನೇಕ ಉದಾಹರಣೆಗಳಿಂದ ತುಂಬಿದೆ.

ಜರ್ಮನಿಯಲ್ಲಿ

ಪಶ್ಚಿಮವು ನುಂಜೇನು ಮಾಡಬಹುದು? ಜರ್ಮನಿಯ ಮೇಲೆ ಸೌರ್ವಾತ್ಯ ಪ್ರಭುತ್ವದ ಹಿಡಿತವನ್ನು ತಪ್ಪಿಸಲು ಅದು ಏನು ಮಾಡಬಲ್ಲದು? ಜರ್ಮನಿಯ ೧೨ ಕೋಟಿ ಮಜದೂರರಲ್ಲಿ ಈಗಾಗಲೇ ಸುಮಾರು ೪೦ ಲಕ್ಷ ಮಜದೂರರು ನಿರುದ್ಯೋಗಿಗಳಾಗಿರುವರು. ನಿರುದ್ಯೋಗಿಗಳ ಸಂಖ್ಯೆಯು ಇನ್ನೂ ಬೆಳೆಯುತ್ತಲೇ ಇದೆ. ಇದನ್ನು ನಿವಾರಿಸಲು ಶಕ್ತವಾಗ್ಯವಂತೆ ಜರ್ಮನ್ ಉದ್ಯೋಗಗಳಿಗೆ ಯಾವ ವ್ಯಾಪಾರದಿಂದ ಸೌಕರ್ಯವನ್ನು ಪಶ್ಚಿಮ ರಾಷ್ಟ್ರಗಳು ಕೊಡಬಲ್ಲವು? ಕೇವಲ ವ್ಯಾಪಾರ ಸೌಕರ್ಯವನ್ನು ಕೊಟ್ಟರೂ ಸಡೆಯದು. ಜರ್ಮನಿಯ ಆರ್ಥಿಕ ಸಂಸ್ಥೆಯು ಪಶ್ಚಿಮ ರಾಷ್ಟ್ರಗಳೊಡನೆ ಬೆರೆಕುಹೋದರೆ ಮಾತ್ರ ಅದಕ್ಕೆ ಏನಾದರೂ ಸಹಾಯವಾಗಬಲ್ಲದು.

ಆದರೆ ಇಂದು ಪಶ್ಚಿಮ ರಾಷ್ಟ್ರಗಳ ಅನೇಕ ಉದ್ಯೋಗಗಳು ಜರ್ಮನ್ ಉದ್ಯೋಗಗಳೊಡನೆ ಸ್ಪರ್ಧಿಸುತ್ತಲಿವೆ. ಇಂಥ ಪರಿಸ್ಥಿತಿಯಲ್ಲಿ ಇದನ್ನು ಸಾಧಿಸುವದಾದರೂ ಹೇಗೆ? ಆದರೆ ಸಾಧಿಸದೆ ಗತ್ಯಂತರವಿಲ್ಲ. ಜರ್ಮನ್—ರಶಿಯನ್ ಮಿತ್ರತ್ವವು ಈಗಾಗಲೇ ರೂಪಗೊಳ್ಳುತ್ತಲಿದೆ. ಇದಕ್ಕೆ ಅರದಾಳ ಹಚ್ಚಬೇಕಾದರೆ ಪಶ್ಚಿಮ ಯೂರೋಪವು ಎಂತಹ ತ್ಯಾಗವನ್ನಾದರೂ ಮಾಡಲೇಬೇಕಾಗಿದೆ.

ಇದರಿಂದ ಜರ್ಮನಿಯೊಡನೆ ವ್ಯಾಪಾರ ಸ್ನೇಹಕ್ಕಿಂತಲೂ ಪಶ್ಚಿಮ ರಾಷ್ಟ್ರಗಳ ರಾಜಕೀಯ ಸ್ನೇಹವು ಮೊದಲು ಬಲವತ್ತರವಾಗಬೇಕೆಂಬ ಮಾತು ನಿರ್ವಿವಾದ ಸದ್ಯ ಜರ್ಮನಿಯಲ್ಲಿಯ ಪ್ರಜಾಪ್ರಭುತ್ವ ಶಕ್ತಿಯು ಸೋವಿಯಟ್ ಜರ್ಮನಿ ಸ್ನೇಹ ಸಂಬಂಧವನ್ನು ಅಲ್ಪ ಸ್ವಲ್ಪ ಕಡಿಗಟ್ಟಬಹುದು. ಆದರೆ ಆ ಶಕ್ತಿಗೆ ಸರ್ವ ವಿಧದಲ್ಲಿಯೂ ಬೆಂಬಲ ದೊರೆತರೆ ಅದರ ಪ್ರತಿಭಟನೆಯು ಯಶಶ್ವಿಯಾಗಬಹುದು

ಮಜದೂರರು

ರ್ಹೂರದಲ್ಲಿಯ ಮಜದೂರ ಸಂಘಗಳಿಗೆ ಅಲ್ಲಿಯ ಉಕ್ಕು ಕಲ್ಲಿದ್ದಲಿ ಉದ್ಯೋಗಗಳನ್ನು ನಿಯಂತ್ರಿಸಲು ಅವಕಾಶ ದೊರೆತರೆ ಸೋವಿಯಟ್ ಸ್ನೇಹದ ಮಾತೇ ದೂರ ಉಳಿಯುವದು. ಈ ಪ್ರಚಂಡ ಶಕ್ತಿಯ ಹೊಡೆತಕ್ಕೆ ಜರ್ಮನಿಯಲ್ಲಿ ಇದೀಗ ಬೆಳೆಯುತ್ತಿರುವ "ದಕ್ಷಿಣೇಡಿ ರಾಷ್ಟ್ರೀಯತ್ವ"ವು ಕ್ಷಣಮಾತ್ರದಲ್ಲಿ ಕುಸಿದು ಹೋಗುವದಲ್ಲದೆ ರಶಿಯನ್ನರು ಮುಂದೆ ನೂಡಿದ ಆಕರ್ಷಕ ವ್ಯಾಪಾರಿ ಒಪ್ಪಂದದ ಕರಾರುಗಳು ಸಹ ಹಾರಿ ಹೋಗುವವು. ಆದರೆ ನೂಡುವದೇನು? ಜರ್ಮನಿಯಲ್ಲಿ ಈಗ ಹಿಂದೆ ಹೇಳಿದಂತೆ ನಿರುದ್ಯೋಗವು ಮೀತಿಮೀರಿದ್ದು ಎಲ್ಲವೂ ನಿಪತೀಕವಾಗಿದೆ. ಪಶ್ಚಿಮ ರಾಷ್ಟ್ರಗಳ ನೆರವಂತೂ ಕಾಣಬರುವದಿಲ್ಲ. ಹೀಗಾಗಿ ಇಡೀ ಸಂಯುಕ್ತ ಜರ್ಮನಿಯು ಸೋವ್ಹಿಯೆಟ್ ರಾಷ್ಟ್ರದ ಆಶ್ರಯವನ್ನು ಪಡೆದರೆ ಆಶ್ಚರ್ಯವೇನು? ಸೋವ್ಹಿಯೆಟ್ ಸೃಷ್ಟಿಗಳು ನಿಶಸಂರಾಧ ಜರ್ಮನರನ್ನು ಪ್ರಚೋದಿಸಿ ವಿಕೇಂದ್ರೀಕರಣ ಅಂದೋಲನವನ್ನೆಳ್ಳೇ ಭರದಿಂದ ನಡೆಸಿದ್ದಾರೆ. ವ್ಯಾಪಾರಿ, ಉದ್ಯೋಗ, ಧರ್ಮ ಹಾಗೂ ಮಜದೂರರಲ್ಲಿ ಈ ಪ್ರಚಾರವು ಅವ್ಯಾಹತವಾಗಿ ಸಾಗಿದೆ.

ರಶಿಯನ ಪ್ರಚಾರಕರು ಇಷ್ಟಕ್ಕೆ ನಿಂತಿಲ್ಲ. ಫ್ರಾನ್ಸ ಇಟಲಿಗಳಲ್ಲಿಯೂ ಗೊಂದಲವೆಬ್ಬಿಸಿರುವರು. ಮಜದೂರ ಸಂಘಟನೆಯ ನೆವದಿಂದ ಸೈನಿಕ ಶಿಬಿರಗಳನ್ನು ನಿರ್ಮಿಸುತ್ತಿರುವರು. 'ಶಾಂತಿಯ ಹೆಸರಿನಲ್ಲಿ ಯುದ್ಧದ ಧೋರಣವನ್ನು ಪುರಸ್ಕರಿಸುತ್ತಿರುವರು. ಫ್ರಾನ್ಸ್ ಮತ್ತು ಇಟಲಿಗಳಲ್ಲಿಯ ಸರಕಾರಗಳು ಅಶ್ಕನಾವೆಂದೂ ಸಹ ಈ ರಶಿಯನ್ ಬೆಂಬಲಿಗರು ಸಾರಲು ಹಿಂದೆ ಮುಂದೆ ನೋಡುತ್ತಿಲ್ಲ.

ಯೂರೋಪದ ಕರಾವಳಿ ವ್ಯಾಪಾರದಲ್ಲಿಯೂ ರಶಿಯವು ಅಪ್ರತ್ಯಕ್ಷವಾಗಿ ಅತ್ತಹಾಗಲು ಹೊಡೆಯ ಹತ್ತಿದೆ. ಅಲ್ಲಿಯ ಕಮ್ಯೂನಿಸ್ಟ ಯುನಿಯನ್ನುಗಳಿಂದರೆ 'ಒಳಸಂಚಿನ ಅಡ್ಡೇ' ಗಳೆಂದು ರೂಢವಾಗಿ ಬಿಟ್ಟಿವೆ. ಬಂದರಗಳಲ್ಲಿ ಸಂಘ ಹೂಡಿಸಿ ಹದಗೆಡಿಸುವದು; ರೈಲ್ವೇ ಮಜದೂರರನ್ನು ಸಂಪಿಗೆ ಅಣಿ ಮಾಡಿ ಸಾರಿಗೆಗೆ ತಾಪ್ಪು ತಾಕುವದು; ಇವೇ ಮೊದಲಾದ ಕೃತಿಗಳನ್ನು ಕಮ್ಯೂನಿಸ್ಟರು ಮಾಡುತ್ತಿರುವರು. ಅವರ ಬಣ್ಣವು ಈಗೇ

ನೋ ಸ್ವಲ್ಪ ಬಯಲಿಗೆ ಬಂದಿದೆಯಾದರೂ ಕಮ್ಯೂನಿಸ್ಟೇತರ ಪುಜದೂರರು ಇನ್ನು ಹೆಚ್ಚಾಗಿ ಸಂಘಟಿತರಾಗಬೇಕು ಇರಲಿ.

ರಶಿಯನ್ ರ ಸಾಹಸವನ್ನು ನೆನೆದರೆ ಅದು ಪಶ್ಚಿಮ ಯೂರೋಪದಲ್ಲಿ ತನ್ನ ಸೈನಿಕ ಶಕ್ತಿಯನ್ನು ಬಲಪಡಿಸಲು ಅಕುರಪಡುತ್ತಿದೆಯೆನ್ನಬಹುದು. ರಶಿಯದ ಧೋರಣವು ಯುದ್ಧಮುಖವಾಗಿದೆಯೆಂಬುದು ಸ್ಪಷ್ಟವಾಗುವದು.

ಆರ್ಥಿಕ ಸ್ಥಿತಿ

ಯೂರೋಪದ ಆರ್ಥಿಕ ಸ್ಥಿತಿಯು ತೀರ ಹದಗೆಟ್ಟಿದೆಯಾದ್ದರಿಂದಲೇ ರಶಿಯದ ಕೈವಾಡವು ಅಲ್ಲಿ ನಿರಾತಂಕವಾಗಿ ಸಾಗಿದೆಯೆನ್ನಬಹುದು.

ಆತ್ತ ಪಶ್ಚಿಮ ಯೂರೋಪವು ಹೀಗೆ ನಿಕೃಷ್ಟ ಸ್ಥಿತಿಗೆ ಇಳಿದಿರುವಾಗ ಸೋವಿಯಟ್ ಯೂನಿಯನ್ನಿನ ಪೂರ್ವ ಮಂಡಲವೂ ಅದರ ಮಿತ್ರ ರಾಷ್ಟ್ರಗಳೂ ತಮ್ಮ ಮಿತ್ರತ್ವವನ್ನು ಸರ್ವ ವಿಧದಲ್ಲಿಯೂ ಗಟ್ಟಿಗೊಳಿಸುತ್ತಿರುವರು.. ಪೂರ್ವ ಯೂರೋಪದ ಎಲ್ಲ ರಾಷ್ಟ್ರಗಳು ಚೀನದೊಡನೆ ವಿಚಾರವಿನಿಮಯ ನಡೆಸಿರುವವು. ಅಲ್ಲಿಯ ಕಮ್ಯೂನಿಸ್ಟರಿಗೆ ಧೈರ್ಯ ಕೊಡುತ್ತಿರುವವು ಆರ್ಥಿಕ ಸಹಾಯವನ್ನೂ ಕೊಡಮಾಡಿರುವವು. ರಶಿಯದ ಹತ್ತರ ಸಂತೂ ಹೇರಳ ಸಂಪತ್ತು ಕೂಡಿ ಬಿದ್ದಿದೆ. ಯುದ್ಧ ಕಾಲದಲ್ಲಿ ಅದೂ ಒಂದು ಪ್ರಬಲ ಅಸ್ತ್ರವಾಗಬಹುದು

ಈ ಪ್ರಕಾರ ರಶಿಯದ ಯುದ್ಧಾಭಿಲಾಷೆಯು ದಿನ ದಿನಕ್ಕೆ ಸ್ಪಷ್ಟವಾಗುತ್ತಿದ್ದರೂ ಯೂರೋಪದಲ್ಲಿ ಇನ್ನೂ "ಶಾಂತಿ" ಘೋರಣದ ಮಾತುಗಳು ಕೇಳಬರುತ್ತವೆ. ಜಲಾ ಹಾಗೂ ಜಲಜನಕ ವಾಯುಬಾಂಬುಗಳು ಇಡೀಎನಾನವ ಜನಾಂಗದ ತಲೆಕದಿಸುತ್ತಿರುವಾಗ ಸಹ ಅಲ್ಲಲ್ಲಿ " ತಟಸ್ಥ " ವಾದವು ಕೇಳಿ ಬರುತ್ತದೆ.

ರಾಷ್ಟ್ರ ಸಂಘದ ಹಿರಿ ರಾಷ್ಟ್ರಗಳು ಮಾತ್ರ ರಶಿಯಾದ ಈ ಘೋರಣವನ್ನು ಚನ್ನಾಗಿ ಅರಿತಿದ್ದೆವೆನ್ನಬಹುದು ಕೋರಿಯನ್ ಯುದ್ಧದಲ್ಲಿ ರಶಿಯದ ಕೈವಾಡ ವಿದೆಯೆಂಬುದು ಸುಸ್ಪಷ್ಟವಿದೆ. ಇಂದಿನವರೆಗಿನ ರಶಿಯದ ವರರಾಷ್ಟ್ರಘೋರಣೆಯನ್ನು ನೋಡಿದರೆ ಅದಕ್ಕೆ ಜಾಗತಿಕ ಪ್ರಭುತ್ವದ ಹಂಬಲವು ಹಿಡಿದಿದೆಯೆಂಬುದೂ ಅಷ್ಟೇಸ್ಪಷ್ಟ ಅದುದರಿಂದ ಕೋರಿಯಾದಲ್ಲಿ ದಕ್ಷಿಣ ಕೋರಿಯನ್ನರನ್ನು ಸಂರಕ್ಷಿಸದಿದ್ದರೆ ಆ ಕಡಿಯ ಮುಂಬೆ ಭಯಂಕರ ಬೇಗೆಯನ್ನು ಹೊತ್ತಿಸಬಹುದೆಂದೂ ಅದರಲ್ಲಿ ಇಡೀ ಜಗತ್ತೇ ಹುರಿವಳಿಸಿ ಹೋಗಬಹುದೆಂದೂ ಅರಿತು ರಾಷ್ಟ್ರಸಂಘವು ದಕ್ಷಿಣ ಕೋರಿಯನ್ನರ ಸಂರಕ್ಷಣೆಗೆ ಈಗ ಧಾವಿಸಿದೆ. ಅಮೇರಿಕೆಯಂತೂ ಹಿರಿಕನವನ್ನು ವಹಿಸಿದೆ.

ಆಹಾರ, ಒಟ್ಟೆ, ಮೊದಲಾದ ಜೀವನಾವಶ್ಯಕ ವಸ್ತುಗಳನ್ನು ದುಡಿದು ದೊರಕಿಸಲು ಅವಕಾಶವಿಲ್ಲದಂತಹ ಪರಿಸ್ಥಿತಿಯೇ ಕಮ್ಯೂನಿಷ್ಟ ಮನೋನೈತ್ತಿಗೆ ಪೋಷಕವಾಗಿದೆ. ಎಲ್ಲರಿಗೂ ಸರಿಸಮಾನವಾಗಿ ಇವು ದೊರೆಯುವಂತಹ ಪರಿಸ್ಥಿತಿಯುಂಟಾದಲ್ಲಿ ಈ ಪೈವೃತ್ತಿಯನ್ನು ಸಂಪೂರ್ಣವಾಗಿ ತಡೆಗಟ್ಟಬಹುದು. ಸದ್ಯದ ಜಾಗತಿಕ ಅಸಂತೋಷದ ಮೂಲವಾದರೂ ಇದೇ ಆಗಿದೆ.

[ಜಯಹಿಂದ್‌ಪತ್ರಿಕೆ ಶ್ರೀ ನಾಡಕರ್ಣಿಯವರ ಲೇಖನದ ಆಧಾರ]

ಕೋರಿಯಾದ ಯುದ್ಧ ವಾರ್ತೆಗಳು

ಪೂರ್ವ ಕರಾವಳಿಯಲ್ಲಿ ಉತ್ತರ ಕೋರಿಯನ್ನರ ಕಮ್ಯೂನಿಷ್ಟ ಸೈನ್ಯಗಳು ಹಿಂದಿಗೆಯುತ್ತಲಿವೆಯೆಂದೂ, ಆದರೆ ಮಧ್ಯ ಪ್ರದೇಶದಲ್ಲಿ ಮುನ್ನುಗ್ಗುತಿವೆಯೆಂದೂ ಈ ವಾರದ ಪ್ರಕಟನೆಗಳಿಂದ ಗೊತ್ತಾಗುತ್ತಲಿದೆ. ದಕ್ಷಿಣ ಕೋರಿಯಾದ ತಾತ್ಕಾಲಿಕ ರಾಜಧಾನಿ, ತೇಜಾನನಗರವು ಕೋರಿಯನ್ನರ ವಶವಾಯಿತು.

ಅಮೆರಿಕನ್ನರು ಹೇಡಿಗಳೆಂದೂ, ಗುಂಡಿನಸಪ್ಪಳ ಕೇಳಿಸಿದರೆ ಪಲಾಯನ ಮಾಡುವರೆಂದೂ, ಇವರಿಗೆ ಯುದ್ಧಕಲೆಯೇ ಗೊತ್ತಿಲ್ಲವೆಂದೂ ಒಬ್ಬ ಸುದ್ದಿಗಾರನು ಪ್ರಕಟಿಸಿರುತ್ತಾನೆ. ಅಲ್ಲದೆ ಕಮ್ಯೂನಿಸ್ಟರ ಸಂಖೆ, ಬಲಾಬಲಗಳನ್ನು ದಕ್ಷಿಣದವರು ಅರಿಯಲಸಾಧ್ಯವಾಯಿತು. ರಷ್ಯಾದಲ್ಲಿ ತಯಾರಾದ ಬಲವಾದ ಟ್ಯಾಂಕುಗಳನ್ನು ಭೇದಿಸಬಲ್ಲ ಅಸ್ತ್ರಗಳು ಮಿತ್ರಸೈನ್ಯಗಳ ಬಳಿಯಲ್ಲೇ ಇಲ್ಲವಂತೆ. ಅಮೆರಿಕಾದ ವಿಮಾನ ದಾಳಿಗಳಿಂದ ಏನೂ ಉಪಯೋಗವಾಗಿಲ್ಲ ನೆಂದು ಒಂದು ಅಭಿಪ್ರಾಯವಿದೆ.

ಭಾರಿ ವಿಮಾನ ಅಪಘಾತ

ಹೊಸ ದಿಲ್ಲಿಯಿಂದ ಶ್ರೀನಗರಕ್ಕೆ ಹೊರಟ ಒಂದು ವಿಮಾನವು ಪಾರನ ಕೋಟೆ ಬಳಿ ಕೆಳಗೆ ಬಿದ್ದ ಕಾರಣ 4 ಜನ ವೈಮಾನಿಕರು, 18 ಜನ ಪ್ರಯಾಣೀಕರು ಮರಣಹೊಂದಿದರು ಸತ್ತವರಲ್ಲಿ, ನೆಹರೂರ ಆಪ್ತ ಕಾರ್ಯದರ್ಶಿ ದ್ವಾರಕಾನಾಥಕಚ್ರು, ಆಸ್ಟ್ರಿಯನ್ ಸರಕಾರದ ಪ್ರತಿನಿಧಿ, ಸಂ ರಾ. ಸಂಸ್ಥೆಯ 3 ಕಾಶ್ಮೀರ ನಿರೀಕ್ಷಕರು ಮತ್ತು ಭಾರತದ 3 ಸೇನಾಧಿಕಾರಿಗಳಿರುವರು. ವಿಶೇಷ ಮಳೆಯಾಗಿ ದಾರಿಕಾಣದೆ ಹೀಗಾಗಿರಬೇಕೆಂದು ಹೇಳಲಾಗಿದೆ.

ಜಾನುವಾರು ಸಾಕುವವರಿಗೆ ಸಹಾಯ

ನೆಸ್ಲೆ ಸಂಸ್ಥಾನದಲ್ಲಿ ಜಾನುವಾರ ಸಾಕುವವರಿಗೆ ಸರಕಾರವು ಸಹಾಯ ಕೊಡಲು ನಿಶ್ಚಯಿಸಿ, ಇದಕ್ಕಾಗಿ ವರ್ಷಕ್ಕೆ ರೂ. 10,೦೦೦ ಪ್ರತ್ಯೇಕ ಇಟ್ಟಿದೆ. ಇದರಲ್ಲಿ ರೂ 60,೦೦೦ ವನ್ನು ಜಾನುವಾರು ಸಾಕುವವರಿಗೆ ಧನಸಹಾಯದ ರೂಪದಲ್ಲಿಯೂ ಉಳಿದುದನ್ನು ಸಾಲವಾಗಿಯೂ ಕೊಡುವುದು. ಸಹಾಯಧನವನ್ನು ಹೆಚ್ಚೆಂದರೆ 30 ಮಂದಿಗೆ ಕೊಡಲಾಗುವುದು. ಇವರಲ್ಲಿ ಕಡಮೆಯೆಂದರೆ 25 ರಷ್ಟು ಶುದ್ಧವಾದ ಕಾಗಾಯಂ, ಒಂಗೋಲು, ಸಿಂಧಿ, ಹಾಲಿಕರ್, ಅಂಬಲಚೆರಿ ಜಾತಿಯ ವ್ಯಾಣಿಗರಿರಬೇಕು. ಪ್ರತಿ ಕರುವಿಗೆ ಹುಟ್ಟಿದ ನಂತರ ಆರು ತಿಂಗಳಲ್ಲಿ ರೂ. 60 ರಂತೆ ಕೊಡಲಾಗುವುದು. ಆದರೆ ಒಬ್ಬನಿಗೆ ರೂ. ೩,೦೦೦ ಕ್ಕಿಂತ ಹೆಚ್ಚು ಬೊರೆಯುವದಿಲ್ಲ. ಸಾಲವನ್ನು ಯೋಗ್ಯ ಜಾಮೀನಿನ ಮೇಲೆ ಕೊಡಲಾಗುವುದು. ಆದರೆ ಸಾಕುವ ದನಗಳ ಹೊಣೆಯ ಮೇಲೆ ಅವುಗಳ ಬೆಲೆಯಲ್ಲಿ ಶೇಕಡ 30 ರಷ್ಟರವರೆಗೆ ಕೊಡಲಾಗುವುದು. ಅದಕ್ಕಾಗಿ ಪ್ರತ್ಯೇಕ ನಿಯಮಗಳಿವೆ. ಪಶುಸಂವರ್ಧನ ಶಾಖೆಯ ಡೈರಕ್ಟರರು ತಮ್ಮ ಇಚ್ಛಾನುಸಾರ ಈ ಸಾಲಗಳನ್ನೂ ಸಹಾಯ ಧನಗಳನ್ನೂ ಹಂಚಬಹುದು. ಜಾನುವಾರ ಸಾಕುವ ಕ್ಷೇತ್ರಗಳಿಗೋಸ್ಕರ ಮೇವು ಬೆಳೆಯುವವರಿಗೆ ಉಚಿತವಾಗಿ ಭೂಮಿ ಗೇಣಿಗೆ ಕೊಡುವುದು, ನೀರು ತೆರಿಗೆಯಿಂದ ವಿನಾಯಿತಿ, ವಿಸರ್ವ್ ಕಾಡುಗಳಲ್ಲಿ ಧರ್ಮಾರ್ಥವಾಗಿ ಮೇಯಲು ಬಿಡುವುದು, ಇತ್ಯಾದಿ ರಿಯಾಯಿತಿಗಳನ್ನು ಸಹ ಕೊಡಲಾಗುವುದು.

ಹಿಂದೀಪ್ರಚಾರಕ ಟ್ರೈನಿಂಗ್‌ಗೆ ಹೋಗುವವರಿಗೆ ಹೆಚ್ಚಿನ ಆಲೋರ್ಯನ್ಸ್

ಮುನಿಸಿಪಾಲಿಟಿ ಮತ್ತು ಜಿಲ್ಲಾಬೋರ್ಡುಗಳವರು, ಪ್ರಚಾರಕ ಟ್ರೈನಿಂಗ್‌ಗೆ ಕಳುಹಿಸುವ ಉಪಾಧ್ಯಾಯರ ಶಿಕ್ಷಣವು 9 ತಿಂಗಳಿಗೆ ಏರಿಸಲಾಗಿರುವ ಕಾರಣ ಅವರಿಗೆ ಕೊಡಬೇಕಾದ ಸಂಬಳ ಮತ್ತು ಅಲೋರ್ಯನ್ಸನ್ನು ೫40 ರೂ ಗಳಿಗೆ ಹೆಚ್ಚಿಸಿರುವುದಾಗಿ ಸರ್ಕಾರದ ಆರ್ಡರೊಂದು ತಿಳಿಸುತ್ತದೆ

ಕೆಲ ಅಂಕೆ ಸಂಖ್ಯೆಗಳು.

ಬ್ರಿಟ್ನಿನಲ್ಲಿ ನಕ್ಸಿಕೆಗಳನ್ನೋದುವವರು	—	ಇಬ್ಬರಿಗೆ 1 ರಂತೆ
,, ರೇಡಿಯೋ ಇಟ್ಟಿರುವವರು	—	1000 ಕ್ಕೆ 227
ಅಮೆರಿಕಾದಲ್ಲಿ ,, ಇಟ್ಟಿರುವವರು	—	,, 566
,, ಚಲಚಿತ್ರಗಳ ತಯಾರಿ		ವರ್ಷಕ್ಕೆ 432
ಭಾರತದಲ್ಲಿ ,,		,, 250
ಜಪಾನ ,,		,, 123
ಫ್ರಾನ್ಸ್ ,,		,, 106
ಮೆಕ್ಸಿಕೊ ,,		,, 84
ಬ್ರಿಟನ್ ,,		,, 71

ಜಗತ್ತಿನಲ್ಲಿ ನಿತ್ಯವೂ ಅಚ್ಚಾಗುವ ಪತ್ರಿಕೆಗಳ ಪ್ರತಿಗಳು 21 ಕೋಟಿ
,, ಸಿನೆಮಾ ಮಂದಿರಗಳು 16 ,,
,, ಸಿನೆಮಾ ಮಂದಿರಗಳಲ್ಲಿ ಕೂಡ್ರಲು ಸ್ಥಾನಗಳು 44 ,,

ರಷಿಯಾದಲ್ಲಿ 70 ಭಾಷೆಯಲ್ಲಿ ಪತ್ರಿಕೆಗಳು ಹೊರಡುತ್ತವೆ. ಎಂಬುದಾಗಿ ಸಂಯುಕ್ತ ರಾಷ್ಟ್ರಸಂಘದ ವೈಜ್ಞಾನಿಕ ಸಂಸ್ಥೆಯು ಪ್ರಕಟಿಸಿದೆ.

ಕೋಳಿ ಸಾಕುವುದು

ಮೊಟ್ಟೆಯ ಉತ್ಪತ್ತಿ ಹೆಚ್ಚಿಸುವಂತೆಯೂ ಮೊಟ್ಟೆಯ ವ್ಯಾಪಾರಕ್ಕೆ ಏರ್ಪಾಟು ಮಾಡುವಂತೆಯೂ ಸರಕಾರವು ಕೋಳಿ ಸಾಕುವ ಪಕ್ಕೋಸ್ಕರ ಒಂದು ಯೋಜನೆಯನ್ನು ಸಿದ್ಧಮಾಡಿದೆ. ಈ ಯೋಜನೆಯನ್ನು ಮದ್ರಾಸ್ ಕೋಪರೇಟಿವ್ ಏಲ್ಕ್ ಸಪ್ಲೈ ಯೂನಿಯನ್ ತನ್ನ ಶಾಖೆಗಳ ಮೂಲಕ ಈ ಕೆಳಗಿನಂತೆ ಮೂರು ದಶೆಗಳಲ್ಲಿ ಕಾರ್ಯರೂಪಕ್ಕೆ ತರಲಾಗುವುದು:—

(1) ಶಾಖೆಗಳ ಮೂಲಕ ಮೊಟ್ಟೆ ಸಂಗ್ರಹಿಸಿ ಜನವರಿಯಲ್ಲಿರುವ ಯೂನಿಯನ್ ಆಫೀಸಿಗೆ ಸಾಗಿಸುವುದು. ನಂತರ ಸ್ಥಳೀಯ ವ್ಯಾಪಾರ ಡಿಪೋಗಳಿಗೆ ಹಂಚುವುದು.

(2) ನಗರದಲ್ಲಿರುವ ಸರಕಾರಿದ ಕೋಳಿ ಸಾಕುವ ಕ್ಷೇತ್ರದಿಂದ ಉತ್ತಮ ಜಾತಿಯ ಹುಂಜಗಳನ್ನು ಕೊಂಡು ಕೊಂಡು ಹಾಲುಪೂರೈಸುವ ಸಂಘಗಳ ಸದಸ್ಯನಾಗಿದ್ದು ಕೋಳಿ ಸಾಕುವದರಲ್ಲಿ ಆಸಕ್ತಿ ಇರುವ ಸದಸ್ಯರಿಗೆ ಹಂಚಿ ಮೊಟ್ಟೆ ಉತ್ಪತ್ತಿ ಹೆಚ್ಚಿಸುವುದು.

(3) ಮೊಟ್ಟೆಯು ಬೇಗನೇ ಒತ್ತೆದು ಮರಿ ದೊರೆಯುವಂತೆ ಇಂಕ್ಯುಬೇಟರ್ ಸಲಕರಣೆಗಳ ಮೂಲಕ ಮೊಟ್ಟೆ ಒಡೆಸಿ ಮರಿ ಮಾಡಿಸುವ ಕ್ರಮವನ್ನು ಜಾರಿಗೆ ತರುವುದು.

ಪ್ರೈವೇಟ್ ಟ್ಯೂಷನ್

ಸೆಕೆಂಡರಿ ಶಾಲೆಗಳ ಮೇನೇಜ್‌ಮೆಂಟಿನವರು ಅವರ ಶಾಲೆಗಳಿಗೆ ಸೇರಿರುವ ಅಧ್ಯಾಪಕರನ್ನು ಖಾಸಗಿ ಟ್ಯೂಶನ್ ಕೊಡಲು ಬಿಡುವುದಕ್ಕಿಂತ ಮುಂಚೆ ಕೆಲವು ಶರತ್ತುಗಳನ್ನು ಸರಕಾರವು ಗೊತ್ತುಪಡಿಸಿದೆ. ಈ ಶರತ್ತುಗಳ ಪ್ರಕಾರ ಒಬ್ಬ ಅಧ್ಯಾಪಕರು ಒಂದು ತಿಂಗಳಲ್ಲಿ ಸಾಧಾರಣವಾಗಿ ನೂರಕ್ಕಿಂತ ಹೆಚ್ಚು ವಿದ್ಯಾರ್ಥಿಗಳಿಗೆ ಟ್ಯೂಶನ್ನು ಕೊಡಲು ಅವಕಾಶಕೊಳ್ಳಕೂಡದು. ಅಲ್ಲದೆ ಕೊಡುವ ಟ್ಯೂಶನ್ ವಾರಕ್ಕೆ 12 ತಾಸುಗಳಿಗೆ ಮೀರಕೂಡದು. ಇದರಲ್ಲಿ ಕನಿಷ್ಟಪಕ್ಷ 4 ತಾಸುಗಳು ವಾರದ ರಜಾ ದಿನಗಳಲ್ಲಿರಬೇಕು. ಇನ್ನೊಂದು ನಿಯಮಪ್ರಕಾರ ವಿದ್ಯಾರ್ಥಿಗಳ ಹೆಸರನ್ನೂ ಕಲಿಸುವ ತಾಸುಗಳನ್ನೂ ಹೆಡ್ ಮಾಸ್ತರರಿಗೆ ತಿಳಿಸಬೇಕು. ಹೀಗೊ ಟ್ಯೂಶನ್‌ನಿಂದ ಶಾಲೆಯ ಆಟಗಳ ಮತ್ತು ಇತರ ಚಟುವಟಿಕೆಗಳಿಗೆ ಅಡ್ಡಿ ಬರಕೂಡದು. ಈ ಶರತ್ತುಗಳು ಸರಕಾರದ ಸೆಕೆಂಡರಿ ಶಾಲೆಗಳ ಅಧ್ಯಾಪಕರಿಗೂ ಅನ್ವಯಿಸುತ್ತವೆ.

ಮಿಂಚೇರಿ (ಬಳ್ಳಾರಿ) ಯ ಬಳಿ ಖೂನಿ

ಕಾಕರ್ಲತೋಟ ಎಂಬ ಹಳ್ಳಿಯ ಒಂದು ಭೂಮಿಯ ಬಗ್ಗೆ ಮಿಂಚೇರಿಯ ಎರಡು ಪಾರ್ಟಿಗಳಲ್ಲಿ ಬಡಿದಾಟವಾಗಿ ಆಸ್ಪತ್ರೆಯಲ್ಲಿ ಒಬ್ಬನು ಸತ್ತಿರುವನೆಂದು ಗೊತ್ತಾಗಿದೆ. ಇನ್ನು 8 ಜನರಿಗೆ ಘಾಯಗಳಾಗಿವೆ. ಇಬ್ಬರ ಘಾಯಗಳು ತೀಕ್ಷ್ಣವಾಗಿದ್ದು ಅಪಾಯಕರಸ್ಥಿತಿಯಲ್ಲಿರುವರೆಂದು ಹೇಳಲಾಗಿದೆ. ಪೋಲೀಸರು ವಿಚಾರಣೆ ನಡೆಸಿರುವರು.

— ವಿದ್ಯಾರ್ಥಿಗಳು —

ಮೂರು ಭಾಷೆ ಕಲಿಯಬೇಕು

ಸೆಕೆಂಡರಿ ಶಾಲಾ ದಶೆಯಲ್ಲಿ ಇನ್ನು ಮುಂದೆ ಮೂರು ಭಾಷೆಗಳನ್ನು ಮಾತ್ರ ಕಲಿಯಬೇಕೆಂದು ಸರಕಾರವು ನಿಶ್ಚಯಿಸಿದೆ. ಪ್ರಥಮ ಭಾಷೆಯು ಮಕ್ಕಳಿಗೆ, ವ್ಯಾದೇಶಿಕ ಭಾಷೆಯು ಕಡ್ಡಾಯವಾಗಿ ದ್ವಿತೀಯ ಭಾಷೆಯಾಗುವುದರ ಬದಲಿಗೆ ಯಾವ ಹಿಂದೀಯ ಭಾಷೆಯಾಗಿದ್ದರೂ, ಅದು ವ್ಯಾದೇಶಿಕ ಭಾಷೆಯಾಗಿರಲಿ ಮಾತೃಭಾಷೆಯಾಗಿರಲಿ ಸಾಹಿತ್ಯದಲ್ಲಿ ಮೇಲ್ತರದ ಭಾಷೆಯಾಗಿರಲಿ, ಇಲ್ಲವೇ ಇತರ ಯಾವುದೇ ಭಾಷೆಯಾಗಿರಲಿ ಅದನ್ನು I ರಿಂದ VI ವರೆಗಿನ ಫಾರ್ಮುಗಳಲ್ಲಿ ವಾರದಲ್ಲಿ ಆರು ಪಿರಿಯಡ್‌ಗಳ ತನಕ ಪ್ರಥಮ ಭಾಷೆಯಾಗಿ ಕಲಿಯಬೇಕು.

I ರಿಂದ VI ವರೆಗಿನ ಫಾರ್ಮುಗಳಲ್ಲಿ ಹಿಂದಿಯನ್ನು ದ್ವಿತೀಯ ಭಾಷೆಯನ್ನಾಗಿ ಕಲಿಯಬೇಕು. I ನೇ ಫಾರ್ಮಿನಲ್ಲಿ ಸಂಭಾಷಣೆ ಮಾಡುವ ಮೂಲಕವೂ II ನೇ ಫಾರ್ಮಿನಲ್ಲಿ ಬರಹದ ಮೂಲಕವೂ ಭಾಷೆ ಕಲಿಸಬೇಕು. ಭಾಷೆ ಕಲಿಸಲಿಕ್ಕೆ ದೇವನಾಗರಿ ಲಿಪಿ ಉಪಯೋಗಿಸಬೇಕು.

I ರಿಂದ VI ನೇ ಫಾರ್ಮುಗಳ ವರೆಗೆ ಈಗಿರುವಂತೆ ವಾರದಲ್ಲಿ 6 ಪಿರಿಯಡ್‌ಗಳಲ್ಲಿ ಇಂಗ್ಲಿಷನ್ನು ತೃತೀಯ ಭಾಷೆಯಾಗಿ ಕಲಿಯಬೇಕು.

ಶಿಕ್ಷಣ ಮಾಧ್ಯಮವು ವ್ಯಾದೇಶಿಕ ಭಾಷೆಯಾಗಿರುವುದು. ಅದರೆ ವ್ಯಾದೇಶಿಕ ಭಾಷೆಯಲ್ಲದೆ ಇತರ ಭಾಷೆಯು ಮಾತೃಭಾಷೆಯಾಗಿರುವ ಭಾಷಾನುಗುಣ ಅಲ್ಪಸಂಖ್ಯಾಕರ ಮಟ್ಟಿಗೆ ಈಗಾಗಲೇ ಪ್ರತ್ಯೇಕ ಅವಕಾಶಗಳನ್ನು ಕಲ್ಪಿಸಲಾಗಿದೆ. ಈ ಬದಲಾವಣೆಗಳು 1950-51 ನೇ ಶಾಲಾ ವರ್ಷದಿಂದ ಜಾರಿಗೆ ಬರುವುದು. I ನೇ ಫಾರ್ಮಿನಿಂದ ಆರಂಭವಾಗಿ ಪ್ರತಿ ವರ್ಷ ಮುಂದರಿಸುತ್ತಾ VI ನೇ ಫಾರ್ಮಿನ ವರೆಗೆ ಕೊಂಡುಹೋಗಲಾಗುವುದು. ಈಗ II ರಿಂದ VI ನೇ ಫಾರ್ಮುಗಳಲ್ಲಿರುವ ವಿದ್ಯಾರ್ಥಿಗಳು ಈಗಿರುವ ಪದ್ಧತಿಯನ್ನು ಇಲ್ಲವೇ ಹೊಸ ಪದ್ಧತಿಯನ್ನು ಅನುಸರಿಸುವಂತೆ ಬಿಡುವುದು ವಿದ್ಯಾಶಾಖೆಯ ಡೈರೆಕ್ಟರ ಇಚ್ಛೆ.

ನವಭಾರತಕ್ಕೆ
ಚಂದಾದಾರರಾಗಿರಿ

138

ವಿಜ್ಞಾನ ಪ್ರಪಂಚ

ಪ್ರಾಣಿ ದೇಹದ ಮೇಲೆ ಚಳಿಯ ಪರಿಣಾಮ

‡‡ ಚಳಿಯಿಂದ ದೇಹ ಸಾಯುವದಿಲ್ಲ

‡‡ ಚಳಿಯಿಂದ ಸಾವಿರ ವರ್ಷ ಬದುಕಬಹುದು

‡‡ ಜರ್ಮನ್ ಡಾಕ್ಟರರ ಅದ್ಭುತ ಶೋಧಗಳ ನೋಲೆ ಬೆಳಕು

ಬಿಸಿಲಿಗೆ ಸಿಕ್ಕಿ ಸಾಯುವ ಸುದ್ದಿ ನಮ್ಮೀ ಉಷ್ಣವಲಯದಲ್ಲಿ ಬೇಕಾದಷ್ಟು ಕೇಳಿಬರುತ್ತದೆ. ಆದರೆ ಚಳಿಯಿಂದ ಸತ್ತ ಸುದ್ದಿಗಳನ್ನೂ ನಾವು ಕೇಳುತ್ತೇವೆ ಹಿಮಾಲಯದ ಬದಿಯಲ್ಲಿ ಮಂಜು ಬೀಳುವ ಭಾಗಗಳಲ್ಲಿ ಇಂಥ ಘಟನೆಗಳು ಜರುಗುವದು ಹೆಚ್ಚು. ಆದರೆ ಚಳಿಯಿಂದ ಸಾಯುವವರ ಸಾವಿಗೆ ಚಳಿಯೇ ಕಾರಣವಲ್ಲೆಂದೂ ಚಳಿಯಲ್ಲಿ ಮನುಷ್ಯನು ಪ್ರಜ್ಞಾಹೀನನಾಗಿ ಅನೇಕ ಶತಮಾನ ಕೂಡ ಬದುಕಬಲ್ಲನೆಂದೂ ಅತ್ಯಂತ ಆಶ್ಚರ್ಯಕರ ತೀರ್ಮಾನಕ್ಕೆ ಜರ್ಮನ್ ವಿಜ್ಞಾನಿಗಳು ಯುದ್ಧಕಾಲದಲ್ಲಿ ಬಂದಿದ್ದಾರೆ.

ಹಿಟ್ಲರನ ದಪ್ತರಗಳನ್ನು ಜಡತಿ ಮಾಡಿದಾಗ ಅಮೆರಿಕನ್ನರಿಗೆ ಜರ್ಮನ್ ತಜ್ಞರ "ದೀರ್ಘಕಾಲ ಚಳಿಯ ಹೊಡೆತಕ್ಕೆ ಗುರಿಯಾದವರ ಚಿಕಿತ್ಸೆ" ಯೆಂಬ ವರದಿಯೊಂದು ಸಿಕ್ಕಿತು. ಯುದ್ಧ ಕಾಲದಲ್ಲಿ ಚಳಿಗೆ ಸಿಕ್ಕಿ ಸ್ಮೃತಿ ತಪ್ಪಿದವರ ಚಿಕಿತ್ಸೆ ಮಾಡುವ ಉಪಾಯಗಳನ್ನು ಕಂಡು ಹಿಡಿಯುವುದು ಸಂಶೋಧಕರ ಉದ್ದೇಶವಾಗಿತ್ತು.

ಅವರು ಯುದ್ಧ ಕೈದಿಗಳೇ ಮೊದಲಾದ ನಿಸ್ಸಹಾಯ ಮನುಷ್ಯರ ಮೇಲೆ ಅನಾನುಷ ಹಿಂಸೆಕೊಡುವ ಪ್ರಯೋಗಗಳನ್ನು ಮಾಡಿದುದನ್ನು ಕೇಳಿದರೆ ಮೈ ಜುಮ್ಮೆನ್ನಬಹುದಾದರೂ ಜರ್ಮನರು ಕಂಡುಹಿಡಿದ ಸಂಗತಿಗಳು ಅಕ್ಕದ್ಭುತವೇ ಆಗಿದ್ದವು.

ಮೊದಲನೆಯದಾಗಿ ಚಳಿಗೆ ಸಿಕ್ಕಿದವರನ್ನು ಸ್ಮೃತಿಗೆ ತರಲು, ಅವರ ಮೈಯನ್ನು ಮೆಲ್ಲ ಮೆಲ್ಲಗೆ ಬೆಚ್ಚಗೆ ಮಾಡಬೇಕೆಂಬ ಹಳೆಯ ವಿಚಾರ ಸುಳ್ಳುಗಳೆಯಲ್ಪಟ್ಟು ಒಮ್ಮಲೆ ೧೪೦ ಡಿಗ್ರಿ ಫೆರನ್ಹೈಟ್ ಬಿಸಿನೀರಿನಲ್ಲಿ ದೇಹವನ್ನು ಅದ್ದಿದರೆ ಪೀಡಿತನು ಬದುಕುವ ಸಂಭವ ಹೆಚ್ಚೆಂದು ಸಿದ್ಧವಾಯಿತು.

ಜೀವನ ಮರಣಗಳ ನಡುವಿನ ಸ್ಥಿತಿ

ಇದು ಹೊಸತಾದರೂ ಅದ್ಭುತವೇನೂ ಅಲ್ಲ. ಅದ್ಭುತವೆಂದರೆ ಇದು; ಕೆಲವು ಪೀಡಿತರ ದೇಹಗಳು ೨೦ ಡಿಗ್ರಿ ಫೆರನ್ಹೈಟ್ ವರೆಗೆ ತಣ್ಣಗಾಗಿ ಹೋಗಿ ಹೃದಯದ ಬಡಿತ ನಿಂತು, ಡಾಕ್ಟರಿಂದ ಸತ್ತನೆಂದು ತೀರ್ಮಾನಿಸಲ್ಪಟ್ಟ ನೇಲೂ ಒಮ್ಮಿಂದೊಮ್ಮೆ ಕಾವು ಕೊಟ್ಟರೆ ಪುನಃ ಜೀವನದ ಲಕ್ಷಣಗಳನ್ನು ತೋರಿಸಹತ್ತಿದವು. ಹಾಗಾದರೆ ಅವರ ಸಾವು ಕೇವಲ ಆಭಾಸಿಕವಾಗಿದ್ದಿರಬೇಕು.

ಅಂದರೆ ಜೀವನ ಮರಣಗಳ ನಡುವೆ ಒಂದು ತಟಸ್ಥ ರಾಜ್ಯವಿದೆಯೇ? ಮನುಷ್ಯನನ್ನು ಈ ಆಭಾಸಿಕ ಮೃತಾವಸ್ಥೆಯಲ್ಲಿ ಚಿರಕಾಲ ಇರಿಸಿ ಮತ್ತೆ ಬೇಕೆನಿಸಿದಾಗ ಪುನರುಜ್ಜೀವನ ಗೊಳಿಸಬಹುದೆ? ಅರ್ಧಾತ್ ಜೀವವನ್ನು ಭೌತಿಕ ರೀತಿಯಿಂದ "ಯೋಗನಿದ್ರೆ" ಯಲ್ಲಿರಿಸಬಹುದೇ

ಆಗಾಧ ಪ್ರಶ್ನೆಗಳು. ಇವುಗಳ ಉತ್ತರವೂ ಅಷ್ಟೇ ಆಗಾಧವಾಗಿದೆಯೆನ್ನಬಹುದು.

ಜರ್ಮನ್ ಡಾಕ್ಟರರ ಸಂಶೋಧನೆಯಿಂದ ಹೊರಪಟ್ಟ ಅಂಶವೆಂದರೆ, ಬಿಸಿರಕ್ತದ ಪ್ರಾಣಿಗಳಿಗೂ ತಂಪುರಕ್ತದ ವಕ್ಕೂ ವಸ್ತುತಃ ಹಿಂದೆ ಭಾವಿಸಿದ್ದಷ್ಟು ಅಂತರವಿಲ್ಲ.

ತಂಪುರಕ್ತದ ಪ್ರಾಣಿಗಳು ಚಳಿಯ ಹೊಡೆತವನ್ನು ಸಹಿಸುವುದಕ್ಕೆ ಹೆಚ್ಚು ಸಮರ್ಥವಾಗಿವೆ. ಇನ್ನೂ ಹೆಚ್ಚಿನದೆಂದರೆ ನೀರು ಹೆಪ್ಪುಗಟ್ಟುವಷ್ಟು ಚಳಿಯಲ್ಲಿ ಜೀವಾಣುಗಳು ಸತ್ತಷ್ಟು ಬೇಗ ಅದಕ್ಕಿಂತಲೂ ಅಸಾಧ್ಯವಾದ ಋಣ ೪೦ ಡಿಗ್ರಿ ಚಳಿಯಲ್ಲಿ ಸಾಯುವುದಿಲ್ಲ. **ಹಾಗಾದರೆ ಚಳಿಯಿಂದ ಪ್ರಾಣಿಗಳು ಸಾಯುವುದಿಲ್ಲ** ಎಂದಾಯಿತು.

ತಂಪುರಕ್ತದ ಪ್ರಾಣಿಗಳು ಸಹಾ ಚಳಿಯಿಂದ ಸಾಯುವುದಿಲ್ಲಾದರೆ ಬಿಸಿರಕ್ತದವೇಕೆ ಸಾಯಬೇಕು? ಅರ್ಥಾತ್ ಚಳಿ ಮೃತ್ಯುಕಾರಣವಲ್ಲದಿದ್ದರೆ ಪ್ರಾಣಿಗಳು ಚಳಿಯಿಂದ ಏಕೆ ಸಾಯುತ್ತವೆ?

ಸಾವಿನ ಕಾರಣ

ಬಿಸಿರಕ್ತದ ಪ್ರಾಣಿಯ ಮೈ ತಂಪೇರುವಾಗ ಅದರ ಮೈಯಿಂದ ಹೊರಟು ಹೋಗುವ ಕಾವು ಎರಡು ಬೇರೆ ಬೇರೆ ಮೂಲಗಳಿಂದ ಬರುತ್ತದೆ. ಒಂದು ದೇಹದಲ್ಲಿ ಸ್ವಾಭಾವಿಕವಾಗಿದ್ದ ಕಾವು; ಇನ್ನೊಂದು, ದೇಹದಿಂದ ಹೊರಟು ಹೋದ ಕಾವನ್ನು ತುಂಬಿಕೊಳ್ಳಲು ದೇಹ ರಭಸದಿಂದ ಹೊಸತಾಗಿ ಉತ್ಪಾದಿಸುತ್ತ ಹೋಗುವ ಕಾವು. ಬಿಸಿರಕ್ತದ ಪ್ರಾಣಿಗೂ ತಂಪುರಕ್ತದ್ದಕ್ಕೂ ದೇಹವ್ಯಾವಹಾರದಲ್ಲಿರುವ ಒಂದು ಮುಖ್ಯ ಅಂತರವೆಂದರೆ, ಬಿಸಿರಕ್ತದ ಮೈ ಬಾಹ್ಯ ವಾತಾವರಣ ಹೇಗೆ ಇರಲಿ, ತನ್ನ ರಕ್ತವನ್ನು ಎಷ್ಟು ಹೊತ್ತಿಗೂ ೯೮ ಡಿಗ್ರಿಯಷ್ಟು ಬಿಸಿಯಿರುವಂತೆ ಪ್ರಯತ್ನಿಸುತ್ತದೆ. ತಂಪುರಕ್ತದ ಮೈ ಹೊರಗಿನ ವಾತಾವರಣವನ್ನು ಸರಿಸಿ ತನ್ನ ತಾಪವನ್ನು ಹೆಚ್ಚು ಕಡಿಮೆ ಮಾಡುತ್ತದೆ. ಅಲ್ಲದೆ ತಂಪುರಕ್ತದ ಪ್ರಾಣಿಯ ರಕ್ತ ಬಿಸಿಯೇರಿದರೂ ತಣ್ಣಗಾದರೂ ತನ್ನ ಆಕ್ಸಿಜನ್‌ವಾಹಕ ಕಣಗಳ ಶಕ್ತಿಯನ್ನು ಪೂರ್ತಿ ಕಳೆದುಕೊಳ್ಳುವುದಿಲ್ಲ ಆದರೆ ನಮ್ಮ ರಕ್ತವನ್ನು ೬೦ ಡಿಗ್ರಿಯಷ್ಟು ತಣ್ಣಗೆ ಮಾಡಿದರೆ ಆಕ್ಸಿಜನ್‌ವಾಹಕ ಶಕ್ತಿಯೇ ಉಳಿಯುವುದಿಲ್ಲ.

ಆದರೆ ದೇಹ ತಂಪೇರುತ್ತ ಹೋದಂತೆ ಕಡಿಗ್ರಿ ಕಾವನ್ನುಳಿಸಿಕೊಳ್ಳಲು ನಮ್ಮ ರಕ್ತ ಭರದಿಂದ ಹೆಣಗಾಡತೊಡಗುತ್ತದೆ ಈ ಹೆಣಗಾಟದಲ್ಲಿ ಇನ್ನಷ್ಟು ಆಕ್ಸಿಜನ್ ಅವಶ್ಯವಾಗುತ್ತದೆ. ಆಕ್ಸಿ ದೇಹ ತಂಪೇರಿದಂತೆ ಅದರ ಆಕ್ಸಿಜನ್‌ವಾಹಕ ಶಕ್ತಿ ಕುಂದುತ್ತದೆ. ಹೀಗೆ ಎರಡೂ ಬಗೆಯಿಂದ ರಕ್ತದ ಆಕ್ಸಿಜನ್ ಕ್ಷಯವಾಗುತ್ತ ಹೋಗಿ ಕೊನೆಗೆ ನಿಶ್ಶೇಷವಾಗುವುದರಿಂದಲೆ ನಾವು ಚಳಿಯಿಂದ ಸಾಯುತ್ತೇವೆ. **ಚಳಿ ನಮ್ಮನ್ನು ಕೊಲ್ಲುವುದಿಲ್ಲ ಆಕ್ಸಿಜನ್ ಅಭಾವವೇ ಕೊಲ್ಲುತ್ತದೆ.** ಯಾವುದಾದರೊಂದು ಉಪಾಯದಿಂದ ರಕ್ತದಲ್ಲಿ ಕನಿಷ್ಠ ಪ್ರಮಾಣದಷ್ಟಾದರೂ ಆಕ್ಸಿಜನ್ ಉಳಿಯುವಂತೆ ಮಾಡಬಹುದಾದರೆ ಚಳಿಯಿಂದ ಮನುಷ್ಯ ಸಾಯಬೇಕಾಗಿಲ್ಲ.

ಆಕ್ಷೇಪಯ

ಹೀಗೆ ಮಾಡುವುದು ಸಾಧ್ಯವಿದೆಯೇ ಜರ್ಮನ್ ಪ್ರಯೋಗಗಳ ಪರಿಣಾಮದಿಂದ ದೊರೆಯುವ ಉತ್ತರ 'ಅಹುದು?' ಎಂದು ಆದರೆ ಸದ್ಯಕ್ಕೆ ಅದು ತಾತ್ವಿಕವಾಗಿದೆ ಅಷ್ಟೇ.

ಈ ಆಶೆಗೆ ಕಾರಣವಾಗಿರುವ ಒಂದು ಗುಣ ಬಸಿ ರಕ್ತದಲ್ಲಿದೆ ಕಾವನ್ನು ಯಥಾಸ್ಥಿತಿಗೆ ತರುವ ರಕ್ತದ ವ್ಯಾಪಾರ ಎಲ್ಲ ಅವಸ್ಥೆಗಳಲ್ಲೂ ಒಂದೇ ಬಗೆಯಾಗಿರುವುದಿಲ್ಲ. ಒಂದು ನಿಶಿಯ ನಂತರ ಅದು ಆಪ್ರಯತ್ನವನ್ನು ಬಿಟ್ಟುಕೊಡುತ್ತದೆ. ೯೮ ಡಿಗ್ರಿಯಿಂದ ಕೆಳಗಿಳಿದೊಡನೆ "ಅಪಾಯ ಕ್ಷೇತ್ರ" ಆರಂಭವಾಗಿ ಸೊನ್ನೆ ಡಿಗ್ರಿಗೆ ಸಮೀಪವಾಗುತ್ತಲೆ ಸಮಾಪ್ತವಾಗುತ್ತದೆ. **ಅರ್ಧಾತ್ ಬಹಳ ವೇಗವಾಗಿ ದೇಹವನ್ನು ತಂಪುಗೊಳಿಸುತ್ತ ಸೊನ್ನೆ ಡಿಗ್ರಿಗೆ ತಂದುಬಿಟ್ಟರೆ ದೇಹದಲ್ಲಿ ಸಾಕಷ್ಟು ಆಕ್ಸಿಜನ್ ಉಳಿದುಕೊಳ್ಳುವದು.** ಒಮ್ಮೆ ಆಕನಿಷ್ಟ ಅವಧಿಯನ್ನು ಯಶಸ್ವಿಯಾಗಿ ದಾಟಿದರೆ ಮತ್ತೆ ಮರಣಭಯವಿಲ್ಲ **ಮೆಲ್ಲಮೆಲ್ಲಗೆ ತಂಪುಕೊಟ್ಟರೇ ಜೀವ ಸಾಯುವದು ಹೊರತು ರಭಸದಿಂದ ತಂಪುಕೊಟ್ಟರೆ ಸಾಯದು** ಒಮ್ಮೆ ಅಪಾಯ ಕ್ಷೇತ್ರವನ್ನು ದಾಟಿ ಬಂದ ಮೇಲೆ ಕಣ್ಣುಗಾದಷ್ಟೂ ದೇಹದ ಆಯುಷ್ಯ ಬೆಳೆಯುವದು. ಸರ್ವಥಾ ಶೂನ್ಯವಾದ ಬಿಣ ಳಟಂರ ಅಂಶಶ್ಶಿಳಿದರೆ ಆಕ್ಸಿಜನ್‌ಕ್ಷೆಯ ಶೂನ್ಯವಾಗಿ ಬಿಡುವುದು.

ಈ ಶೂನ್ಯಾಂಶ ಉಷ್ಣಜಲ್ಲಿ (ಅಂದರೆ ಅದಕ್ಕಿಂತ ಶೀತ ಜಗತ್ತಿನಲ್ಲೇ ಇಲ್ಲ) ಎಲ್ಲ ರಸಾಯನಿಕ ಕ್ರಿಯೆಗಳೂ ದೇಹ ವ್ಯಾಪಾರಗಳೂ ಸ್ಥಗಿತವಾಗಿ ಹೋಗುತ್ತವೆ. ಆದರೆ ಅದು ಮರಣವಲ್ಲ. **ಜೀವನ ಇಲ್ಲುನೆ ಮರಣ ಮಾತ್ರವಲ್ಲದೆ ನಿಶ್ಚೇಷ್ಟತೆಯೆಂಬ ಮೂರನೆ ಅವಸ್ಥೆಯೊಂದು ಜೀವಿಗಳಿಗಿದೆ.** ಜೀವನದ ಜೀಪ್ಪೆಗಳು ಮಾತ್ರ ಅದರಲ್ಲಿ ತಾಟಿಸ್ಥಿತಿಯನ್ನು ಹೊಂದುತ್ತವೆ. ಅದನ್ನು 'ಯೋಗ ನಿದ್ರೆ'ಯೆಂದು ಕರೆಯೋಣ.

—ಮತ್ತು ನೇಗವಾದ ಕಾವಿನಿಂದ ದೇಹವನ್ನು ಬಿಸಿಯೇರಿಸಿ (ಇಲ್ಲಿ ಯೂಂಡಿಗ್ರಿಯಿಂದ ೯೮ ಡಿಗ್ರಿ ನಡುವಿನ ಕ್ಷೇತ್ರ ಅಪಾಯ ಕ್ಷೇತ್ರ) ೯೮ ಡಿಗ್ರಿಗೆ ತಂದರೆ, ಇಂದ್ರಿಯ ವ್ಯಾಪಾರಗಳು ಪುನಃ ಸಾದ್ರಿಕ್ತವಾಗಿ ಜೀವನ ಪುನಃ ಪ್ರಾರಂಭವಾಗುವದು.

ಪರಿಣಾಮಗಳು

ಎಷ್ಟು ಅದ್ಭುತ! ಹಾಗಾದರೆ ಗಡಿಯಾರದ ಚಾವಿಸ್ಟೆಲ್ಲ ಬರಿದುಮಾಡಿ ಅದನ್ನು ನಿಶ್ಚೇಷ್ಟಾವಸ್ಥೆಯಲ್ಲಿಟ್ಟು ಪುನಃ ಬೇಕಾದಾಗ ಚಾವಿತಿರುವಿ ಚಲಿಯಿಸುವಂತೆ ಮನುಷ್ಯ ಪ್ರಾಣಿಯನ್ನೂ ಮಾಡಬಹುದೇ? ಹೌದು! ಇನ್ನೂ ವ್ಯವಹಾರದಲ್ಲಿ ಇದು ಸಾಧ್ಯವಾಗಿಲ್ಲವಾದರೂ ಸೈದ್ಧಾಂತಿಕವಾಗಿ ಇದು ಸಾಧ್ಯವಿದೆ.

ಇದರ ಲೌಕಿಕ ಪರಿಣಾಮಗಳೋ ತಲೆ ತಿರುಗಿಸಿಬಿಡುವಷ್ಟು ಅಚಿಂತನೀಯವಾಗಿದೆ.

ಇದರ ಅರ್ಥವೇನಾಗಬಹುದೆಂದರೆ, ಪುರುಷಾಯುಷ್ಯವನ್ನು ಈಗಿನ ಶತವಾನದ ಪರಮಾವಧಿಯಿಂದ ಮುಕ್ತಗೊಳಿಸಿ ಅನಂತವಲ್ಲದಿದ್ದರೂ ಕಲ್ಪನಾತೀತವಾಗುವಷ್ಟು ಹೆಚ್ಚಿಸಬಹುದು.

ಇದರ ಅರ್ಥವೇನಾಗಬಹುದೆಂದರೆ, ಮನುಷ್ಯನು ಈ 'ಯೋಗನಿದ್ರಾವಸ್ಥೆ'ಯೆನ್ನು ಬಯಸಿದಷ್ಟು ಕಾಲ ಕಳೆದು ಪುನಃ ಎಚ್ಚೆತ್ತು ಜೀವಸಪ ಏಕತಾನದಿಂದ ಬೇಸತ್ತೊಡನೆ ಪುನರಪಿ ನಿಶ್ಚೇಷ್ಟನಾಗಿ ಭವಿಷ್ಯತ್ತಿನ ಇನ್ನೊಂದು ಯುಗದಲ್ಲಿ ಎದ್ದು ಪೂರ್ಣಾಯುಷ್ಯವನ್ನು ಬಾಳಬಹುದು. "ಯೋಗನಿದ್ರಾ"ಕಾಲದಲ್ಲಿ ಅವನ ಪಾಲಿಗೆ ಕಾಲವು ನಿಶ್ಚಲವಾಗಿಬಿಡುವದು!

ಇದರ ಅರ್ಥವೇನಾಗಬಹುದೆಂದರೆ, ನೀರಿಲ್ಲದ ಬರಗಾಲದಲ್ಲಿ ಪ್ರಾಣಿಗಳನ್ನು ನಾಯಗೊಡುವುದನ್ನು ಅಥವಾ ಕೊಂದು ತಿನ್ನುವುದನ್ನು ಬಿಟ್ಟು ಅವನ್ನು 'ಯೋಗನಿದ್ರೆ'ಗೆ ಕಳಿಸಿ ಸುಭಿಕ್ಷೆ ಬಂದೊಡನೆ ಪುನಃ ಎಚ್ಚರಿಸಿ ಬೆಳೆಸಬಹುದು.

ಇಂದು ಪೆಟ್ಟಿಗೆಯಲ್ಲಿ ಹೊಕ್ಕು 'ಯೋಗನಿದ್ರೆ'ಯಲ್ಲಿ ಮುಳುಗಿ ಅದರಲ್ಲೇ ಇರುವ ಅವಧಿಯಂತ್ರದ ಸಹಾಯದಿಂದ ಇನ್ನೊಂದುಸಾವಿರ ವರ್ಷದ ನಂತರ ತಾನಾಗಿ ನಿಮ್ಮ ನೈಜೀವನಕೆಗೆ ಕಿರುಗುನಷ್ಟು ಕಾವೇರಿ ನೀವು ಪುನರಪಿ ಜೀವಂತರಾಗಿ ಹೊರಬಂದರೆಂದು ತಿಳಿಯಿರಿ—ನೀವು ಕಾಣುವ ಪ್ರಪಂಚ ಎಷ್ಟು ಚಮತ್ಕಾರಕವೆನಿಸಬಹುದು. ಲೋ ಮಾಂಚಕ ವೆನಿಸಬಹುದು! ಅಚಿಂತ್ಯ! ಅಚಿಂತ್ಯ!

ಆಗಿನ ಮನುಷ್ಯರ ಮುಂಜೆ ನೀವು ಸಾವಿರವರ್ಷ ಹಿಂದಿನ ಲೋಕದ ಪ್ರತ್ಯಕ್ಷ ಸಾಕ್ಷಿಯಾಗಿ ಇಳಿಯುವಿರಿ. ಮಹಾತ್ಮಾ ಗಾಂಧಿಯವರನ್ನು ಕಣ್ಣಾರೆ ಕಂಡವನಾನು, ಅಣುಬಾಂಬಿನ ಯುಗದಲ್ಲಿ ನಾನಿದ್ದೆ. ಈ ಭೂಮಿಯಲ್ಲಿ ಹೀಗೆತ್ತು ಹಾಗಿತ್ತು, ಎಂದು ನಿನ್ನತ್ತ ಸೈನಿಕನಂತೆ ಅದ್ಭುತ ಕತೆಗಳನ್ನು ಹೇಳುವಿರಿ. ಆಹಾ ಎಷ್ಟು ಅದ್ಭುತ!

ಆದರೆ ಇದು ಕೇವಲ ಕಲ್ಪನೆಯಲ್ಲ—ವೇಗನೇ ಇದು ಬರಲಿದೆ. ಮನುಷ್ಯನ ಇತಿಹಾಸದ ಎರಡನೆ ಅಧ್ಯಾಯ ಸಂಧಿ ಕಾವಿದೆಂಬಂತೆ ಕೋರುತ್ತದೆ.

ಮದ್ರಾಸ್ ಸರ್ಕಾರದ ವಿಚಿತ್ರ ವಿದ್ಯಾಧೋರಣೆ

ಇಂಗ್ಲೀಸ್ ಭಾಷಾಮೋಹ

ಮಾಧ್ಯಮಿಕ ಶಾಲೆಗಳಲ್ಲಿ ಮಾತೃಭಾಷೆ ಮತ್ತು ಇಂಗ್ಲೀಷನ್ನು ಕಡ್ಡಾಯವಾಗಿ ಕಲಿಸಬೇಕೆಂದು ಮದ್ರಾಸ್ ಸರ್ಕಾರವು ಈಚೆಗೆ ಆಜ್ಞೆ ಮಾಡಿದೆ. ಮದ್ರಾಸ್ ಸರ್ಕಾರದ ವಿದ್ಯಾಪಾತೆಯವರು ನಿತ್ಯನಿತ್ಯವೂ ಹೊಸ ಹೊಸ ಆಜ್ಞೆಗಳನ್ನು ಮಾಡುವ ಸರಿವಾಶದಿಂದ ವಿದ್ಯಾಶಾಖೆಯಲ್ಲಿ ಗೊಂದಲವೆದ್ದಿದೆ. ಸರ್ಕಾರದ ಖಚಿತ ಧೋರಣೆಯೇ ಅರ್ಥವಾಗುವಂತಿಲ್ಲ. ಅದರ ನಿಶ್ಚಿತತೆಯೇ ವ್ಯಕ್ತವಾಗುವುದಿಲ್ಲ. ಕೇಂದ್ರ ವಿದ್ಯಾ ಸಮಿತಿಯವರು 15 ವರ್ಷಗಳೊಳಗಾಗಿ ಇಂಗ್ಲೀಷನ್ನು ಹೊರದೂಡಿ ಅದರ ಸ್ಥಳದಲ್ಲಿ ಹಿಂದಿಯನ್ನು ರಾಜಭಾಷೆಯಾಗಿ ಮಾಡುವ ತೀರ್ಮಾನ ಮಾಡಿರುವರು. ಇದನ್ನು ಹೇಗೆ ಆಚರಣೆಯಲ್ಲಿ ತರಬೇಕೆಂಬ್ಯ ಸೂಚಿತವಾಗಿಲ್ಲ. ಅಲ್ಲದೆ ಒಂದೊಂದು ಪ್ರಾಂತದಲ್ಲಿ ಒಂದೊಂದು ಧೋರಣೆಯು ಕಂಡುಬರುತ್ತಲಿದೆ. ಮದ್ರಾಸ್ ಪ್ರಾಂತದವನಿಗಂತೂ ಇಂಗ್ಲೀಷ್ ಭಾಷಾಮೋಹವು ಹೋಗಲು ಬಹಳ ಕಾಲಬೇಕು. ಅಲ್ಲದೆ ಹಿಂದಿಯ ಪ್ರವೇಶದಿಂದ ತಮಿಳರ ಕೋಪಕ್ಕೆ ಗುರಿಯಾಗಬೇಕಾದೀತೆಂದು ಹಿಂದಿಯನ್ನು ಅನಿವಾರ್ಯ ಮಾಡದೆ ಪರಭಾಷೆಯಾದ ಇಂಗ್ಲೀಷಿಗೆ ಆ ಸ್ಥಾನ ಕೊಟ್ಟಿರುವರು. ಹೀಗಾದರೆ ಹಿಂದಿಯನ್ನು ರಾಜಭಾಷೆ-ಯಾ-ರಾಷ್ಟ್ರ ಭಾಷೆಯಾಗಿ ಮಾಡುವುದು ಹೇಗಾಗುತ್ತದೆ.?

I II III ಈ ಮೂರು ಫಾರಂಗಳಲ್ಲೂ ಹಿಂದಿಯನ್ನು ಕಡ್ಡಾಯವಾಗಿ ಮಾಡಬೇಕಿದ್ದಿತು. ಸರ್ಕಾರವು ಹೀಗೆ ಮಾಡದಿರುವುದು ಅನ್ಯಾಯವಾಗಿದೆ. ಕೇಂದ್ರ ಸರ್ಕಾರದ ನೀತಿಗೆ ವಿರೋಧವಾಗಿದೆ. ಚಿಕ್ಕಮಕ್ಕಳು ತಮ್ಮ ಮಾತೃಭಾಷೆ ಮತ್ತು ರಾಷ್ಟ್ರಭಾಷೆ ಕಲಿತರೆ ಸಾಕು ಆದರೆ ಪರಭಾಷೆಯಾದ ಇಂಗ್ಲೀಷ್ ಏಕೆ ಕಲಿಯಬೇಕು? ಅದನ್ನು ಐಚ್ಛಿಕವಾದರೂ ಇಟ್ಟಿದ್ದರೆ ಬೇಕಿದ್ದವರು ತೆಗೆದುಕೊಳ್ಳಬಹುದಿತ್ತು. ರಾಷ್ಟ್ರ ಭಾಷೆಗೆ ಕೊಡಬೇಕಾದ ಸ್ಥಾನವನ್ನು ಪರಭಾಷೆಯಾದ ಇಂಗ್ಲೀಷಿಗೆ ಕೊಟ್ಟಿರುವ ಕಾರಣ ಮದ್ರಾಸ್ ಸರ್ಕಾರವು ಕಾಂಗ್ರೆಸ್ ಮತ್ತು ಗಾಂಧೀಜಿ ನೀತಿಗೆ ವಿರೋಧವಾಗಿ ನಡೆದಿದೆ. ರಚನಾತ್ಮಕ ಕಾರ್ಯಕ್ರಮಕ್ಕೆ ಅದರ ಅಪ್ರತ್ಯಕ್ಷ ವಿರೋಧವನ್ನು ವ್ಯಕ್ತಪಡಿಸಿದಂತಾಗಿದೆ.

ಹಳ್ಳಿಯಲ್ಲಿ ಮನೆ

ಹಳ್ಳಿ ಪ್ರದೇಶಗಳಲ್ಲಿ ಪ್ರತ್ಯೇಕ ಮನೆ ಒದಗಿಸುವ ಸಂಘಗಳನ್ನು ವ್ಯವಸ್ಥಾಪಿಸುವ ಯೋಜನೆಯನ್ನು ಸರಕಾರವು ಅಂಗೀಕರಿಸಿದೆ. ಸಂಘದ ಸದಸ್ಯರು ತಮ್ಮ ಮನೆ ಕಟ್ಟಿಕೊಳ್ಳುವ ಬಗ್ಗೆ ಸರಕಾರದಿಂದ ಹಣ ಸಾಲಪಡೆದು ಅರ್ಜಿದಾರರಿಗೆ ಸಾಲಕೊಡುವುದಲ್ಲದೆ ಸದಸ್ಯರು ಸಿಮೆಂಟ್, ಕಬ್ಬಿಣ, ಉಕ್ಕು, ಮರ ಮೊದಲಾದ ಕಟ್ಟಡದ ಸಾಮಗ್ರಿಗಳನ್ನು ಸಂಗ್ರಹಿಸಲು ಈ ಸಂಘಗಳು ಸಹಕರಿಸುವವು. ಮೊದಲನೆಯ ವರ್ಷದಲ್ಲಿ ಈ ಯೋಜನೆಯನ್ನು ಪ್ರತಿ ಜಿಲ್ಲೆಯ ಒಂದು ಹಳ್ಳಿಯಲ್ಲಿ ಜಾರಿಗೆ ತರಲಾಗುವುದು. ಪ್ರತಿ 20 ಮನೆಗಳಿಂದ ಕೂಡಿದ ವಸಾಹತನ್ನು ನಿರ್ಮಿಸುವುದಕ್ಕೆ ಸರಕಾರಿ ಸಾಲಗಳನ್ನು ಕೊಡಲಾಗುವುದು, ಇದಕ್ಕಾಗಿ ಬಜೆಟಿನಲ್ಲಿ ರೂ. 20 ಲಕ್ಷ ಪ್ರತ್ಯೇತಿಸಿಡಲಾಗಿದೆ. ಸದಸ್ಯರಿಗೆ ಕೊಟ್ಟ ಸಾಲಗಳನ್ನು ಸಕಾಲದಲ್ಲಿ ಹಿಂದೆ ಪಡೆಯುವ ಬಗ್ಗೆ ಪ್ರತಿ ಅರ್ಜಿದಾರನೂ ಈ ಸಂಘದಲ್ಲಿ ನಗದಿಕೊಟ್ಟು ಸಾಲುವಡೆಯಬೇಕಾಗಿದೆ. ಸ್ಥಳದ ಬೆಲೆಗೆ ಸಾಲು ಬಂಡವಾಳವನ್ನು ಭರ್ತಿಮಾಡಿಕೊಳ್ಳಲು ಸಾಧ್ಯವಿಲ್ಲ. ತೆತ್ತ ಸಾಲು ಬಂಡವಾಳದ ಮೂರು ಸಾಲುಷ್ಟು ಮೊಬಲಗಿನಷ್ಟು ಮಾತ್ರ ಸಾಲಕೊಡುವ ನಿರ್ಬಂಧವಿದೆ. ಸುಮಾರು 30 ವರ್ಷಗಳವರೆಗೆ ಇರಬಹುದಾದ ಯೋಗ್ಯ ಕಟ್ಟಡಗಳನ್ನು ನಿರ್ಮಿಸುವುದಕ್ಕೆ ಮಾತ್ರ ಸಾಲ ಕೊಡಲಾಗುವುದು. ರೂ. 3,000 ಕ್ಕಿಂತ ಕಡಿಮೆ ವೆಚ್ಚ ತಗಲಬಹುದಾದ ಇಲ್ಲವೇ ಸ್ಥಳವು 450 ಚದರ ಅಡಿಗಿಂತ ಕಡಿಮೆ ವಿಸ್ತಾರವಿರುವ ಮನೆಗಳಿಗೆ ಸಾಲ ದೊರೆಯುವುದಿಲ್ಲ. ಒಂದು ಮನೆಗೆ ಹೆಚ್ಚೆಂದರೆ ರೂ. 5,000 ಸಾಲಕೊಡಲಾಗುತ್ತದೆ. ಈ ಯೋಜನೆ ಪ್ರಕಾರ ಕಟ್ಟುವ ಮನೆಗಳು ಒಂದೇ ವಸಾಹತಿನಲ್ಲಿರಬೇಕಲ್ಲದೆ ಎಲ್ಲಿಯಾದರೂ ಇಲ್ಲ.

ಹಾಸ್ಟೆಲಿಗೆ ಧನ ಸಹಾಯ

ಹಿಂದುಳಿದ ಮತ್ತು ಸಹಾಯ ಪಡೆಯಲು ಅರ್ಹತೆಯುಳ್ಳ ಜಾತಿಗಳ ವಿದ್ಯಾರ್ಥಿಗಳ ಹಾಸ್ಟೆಲುಗಳಿಗೆ ಮಂಜೂರಾತಿ ಮತ್ತು ಸಹಾಯ ಧನ ಕೊಡುವ ವಿಷಯದಲ್ಲಿ ಕೆಲವು ಜನರು ತಪ್ಪಾಗಿ ತಿಳಿಕೊಂಡಿದ್ದಾರೆ. ಅಂಗೀಕೃತ ಶಾಲೆಗಳಲ್ಲಿ ಮಂಜೂರಾದ ಕೋರ್ಸುಗಳನ್ನು ಕಲಿಯುವ ಮೇಲೆ ಹೇಳಿದ ಜಾತಿಗಳ ವಿದ್ಯಾರ್ಥಿಗಳಿಗಾಗಿ ಹೊಸದಾಗಿ ಸೇವಕ ಸಂಘವೂ ಖಾಸಗಿ ಜನರೂ ನಡೆಸುವ ಹಾಸ್ಟೆಲುಗಳಿಗೆ ಸರಕಾರವು ಮೊದಲಿಂಗ್ ಗ್ರಾಂಟ್ ಕೊಡುತ್ತದೆ. ಹಾಗು ಜನೋದ್ಧಾರ ಶಾಖೆಯ ಡೈರೆಕ್ಟರವರು ಅಂಗೀಕರಿಸಿದ ಹಾಸ್ಟೆಲಿಗೆ ಗ್ರಾಂಟ್ ದೊರೆಯುವುದಿಲ್ಲ. ಇದಕ್ಕೆ ಹಾಸ್ಟೆಲಿನ ಮೇನೇಜ್‌ಮೆಂಟಿನವರು ಸಂಬಂಧಪಟ್ಟ ಕಲೆಕ್ಟರ ಮೂಲಕ ಆಗಸ್ಟ ತಿಂಗಳ ಅಂತ್ಯದೊಳಗೆ ವಿಧಿಸಿದ ಅರ್ಜಿ ಫಾರ್ಮುಗಳಲ್ಲಿ ಹರಿಜನೋದ್ಧಾರ ಶಾಖೆಯ ಡೈರೆಕ್ಟರಿಗೆ ಅರ್ಜಿ ಕಳುಹಿಸಬೇಕು. ಗ್ರಾಂಟು ಸಿಕ್ಕಬೇಕಾದರೆ ಹಾಸ್ಟೆಲಿನಲ್ಲಿ ಕನಿಷ್ಠ ಪಕ್ಷ 10 ಅರ್ಹರಾದ ವಿದ್ಯಾರ್ಥಿಗಳಾದರೂ ಇರಬೇಕು. ಈಗಾಗಲೇ ಅಂಗೀಕಾರ ಹೊಂದಿದ ಹಾಸ್ಟೆಲುಗಳಿಗೆ ಹೊಸತಾಗಿ ಸೇರಿಸಿಕೊಂಡ ವಿದ್ಯಾರ್ಥಿಗಳಿಗಾಗಿ ಹೆಚ್ಚಿಗೆ ಗ್ರಾಂಟು ದೊರೆಯುತ್ತದೆ. ಇದಕ್ಕಾಗಿ ಆಗಸ್ಟ 31 ರೊಳಗೆ ಅರ್ಜಿ ಕಳುಹಿಸಬೇಕು. ಹೆಚ್ಚಿನ ಬೋರ್ಡಿಂಗ್ ಗ್ರಾಂಟು ಮಂಜೂರಿನ ವರ್ಷದಲ್ಲಿ ಪಡೆದ ಗ್ರಾಂಟಿನ ಶೇಕಡ 20 ರಷ್ಟಿರುತ್ತದೆ. ವಿದ್ಯಾರ್ಥಿನಿಯರ ಹಾಸ್ಟೆಲುಗಳಿಗೆ ಮಾತ್ರ ಗ್ರಾಂಟು ಪಡೆಯುವ ವರ್ಷದ ಎಲ್ಲಾ ವಿದ್ಯಾರ್ಥಿನಿಯರಿಗೂ ದೊರೆಯುವುದು. ಹೆಚ್ಚಿಗೆ ಗ್ರಾಂಟು ಶೇಕಡ 20 ರಷ್ಟು ನೂರೆಯೊಳಪ್ಪೆಂದು ಖಂಡಿತ ಹೇಳಲು ಸಾಧ್ಯವಿಲ್ಲ. ಅದು ಸಂಸ್ಥಾನದ ಆರ್ಥಿಕ ಪರಿಸ್ಥಿತಿಯಮೇಲೆ ಹೊಂದಿಕೊಂಡಿದೆ.

ಹಿಂದೀ ಮಹಾ ವಿದ್ಯಾಲಯ, ಬಳ್ಳಾರಿ,

[1931 ಸ್ಥಾಪಿತ. ಬಳ್ಳಾರಿ ಜಿಲ್ಲಾ ಹಿಂದೀ ಪ್ರೇಮೀಮಂಡಲದಾಶ್ರಯದಲ್ಲಿ. ರಿಜಿಸ್ಟರ್ಡ.]

ಮದ್ರಾಸ್ ಸರ್ಕಾರದಿಂದ ಮಾನ್ಯತೆಪಡೆದ.

ಪ್ರಾರಂಭಿಕ ವರ್ಗಗಳಿಗೆ ಮಾಸಿಕ 3/- ಶುಲ್ಕ — ಉನ್ನತ ವರ್ಗಗಳಿಗೆ ಮಾಸಿಕ 5 - ಶುಲ್ಕ

ವಾರ್ಡಾಲಾ ಹೈಸ್ಕೂಲ್ ಕಟ್ಟಡದಲ್ಲಿ ಪ್ರಾತಃಕಾಲ-ಸಾಯಂಕಾಲ ಹಿಂದೀ ಕಾಲೇಜಿನ ವರ್ಗಗಳ ನಡೆಯುತ್ತಿವೆ. ಪ್ರವೇಶಿಕ — ವಿಶಾರದ ವರ್ಗಗಳಲ್ಲದೆ ಪ್ರಾರಂಭಿಕ ವರ್ಗಗಳಿಗೂ ಪ್ರವೇಶವಿದೆ. ವರ್ಗಗಳಿಗೆ ಸಂಬಂಧಿಸಿದ ಪಾಠ್ಯ ಪುಸ್ತಕಗಳು ವಿದ್ಯಾಲಯದಲ್ಲಿ ದೊರೆಯುತ್ತವೆ. ಒಳ್ಳೆಯ ಪುಸ್ತಕಭಂಡಾರವಿದೆ. ಶ್ರೇಷ್ಠ ವಾರಪತ್ರಿಕೆ, ಮಾಸಪತ್ರಿಕೆಗಳು ಲಭ್ಯ. ಇತರ ವಿವರಗಳಿಗೆ ಸ್ವಾಂಸಿಟ್ಟು ಬರೆಯಿರಿ

ಪ್ರಿನ್ಸಿಪಾಲ್

NAVA BHARAT LIBRARY. (Reg No. M 4716)

24—7—50

ನವಭಾರತ ಬಳ್ಳಾರಿ.

(Nationalist Weekly)

ಚಂದಾವರಗಳು.		Subscription Rates.	
ವರ್ಷಕ್ಕೆ	6—0—0	One Year	5—0—0
6 ತಿಂಗಳಿಗೆ	3—0—0	Six months	3—0—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.		Subscription will not be accepted for less than 6 months	

To

Sri.....

.....

.....

Printed at Krishna Printing Works, Edited & Published by T.B. Keshava Rao.

JAI-HIND.

ಸಹಕಾರಿ

ಬಳ್ಳಾರಿಯ ಉಜ್ವಲರಾಷ್ಟ್ರೀಯ ವಾರಪತ್ರಿಕೆ.

ಉತ್ತಿಷ್ಠತ! ಜಾಗೃತ!! ಪ್ರಾಪ್ಯವರಾನ್ನಿ ಭೋಧತ !!!

ವರ್ಷ ೧೩ ಸಂಚಿಕೆ ೨೩	ಸೋಮವಾರ ೩೧ ಜೂಲೈ ೧೯೩೧.	ಸಂಪಾದಕ ಮತ್ತು ಪ್ರಕಾಶಕ: ಟಿ. ಬಿ. ಕೇಶವರಾವ್.

ಮದ್ರಾಸ್ ಸರ್ಕಾರದ ಜಾತೀಯ ಆಜ್ಞೆ ಅಕ್ರಮ

— ಹೈಕೋರ್ಟು ತೀರ್ಪು —

ಮದ್ರಾಸ್ ಸರ್ಕಾರದ ಶಾಲೆ, ಕಾಲೇಜುಗಳಿಗೆ ಮಕ್ಕಳನ್ನು ಸೇರಿಸಬೇಕಾದರೆ ಜಾತೀಯ ಪ್ರಮಾಣದಿಂದ ಇಂತಿಂಥ ಜಾತಿಯವರಿಗಿಷ್ಟು ಸ್ಥಾನಗಳಿರಬೇಕೆಂದೂ, ಇದೇ ಪ್ರಮಾಣವು ಸರ್ಕಾರೀ ನವಕರಿಗಳಿಗೂ ಅನ್ವಯಿಸತಕ್ಕದ್ದೆಂದೂ, ಸರ್ಕಾರವು ಆಜ್ಞೆಮಾಡಿ ಅದರ ಪ್ರಕಾರಕ್ಕೆ ಆಚರಣೆಯಲ್ಲಿ ತಂದಿದ್ದಿತು. ಆದರೆ ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಿಗೆ ಸೇರಬೇಕೆಂದಿದ್ದ ಇಬ್ಬರು ಬ್ರಾಹ್ಮಣ ವಿದ್ಯಾರ್ಥಿಗಳು ಹೈಕೋರ್ಟಿಗೆ ಅರ್ಜಿಮಾಡಿ ಈ ಸಣ್ಣ ಘಟನೆಯ ತತ್ಕಾಲಕ್ಕನುಸಾರವಾಗಿ ಇದ್ದ ಅನ್ಯಾಯವೆಂದು ಪ್ರತಿವಾದಿಸಿದ್ದರು. ಈ ವಿದ್ಯಾರ್ಥಿಗಳ ಪರವಾಗಿ ಮದ್ರಾಸಿನ ಸುಪ್ರಸಿದ್ಧ ವಕೀಲರಾದ ಶ್ರೀ ವಿ. ವಿ. ಶ್ರೀನಿವಾಸಯ್ಯಂಗಾರ್ ಮತ್ತು ಆಟನೆಯ ರಚನೆಯಲ್ಲಿ ಮುಖ್ಯ ಸಹಾಯಕರಾಗಿದ್ದ ಶ್ರೀ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್‌ರವರು ಮದ್ರಾಸ್ ಸರ್ಕಾರದ ಆಜ್ಞೆಯು ಅನ್ಯಾಯವೆಂದು ಉಚಿತವಾದ ವಾದಗಳನ್ನು ಸಾದರಪಡಿಸಿದರು ಹೈಕೋರ್ಟಿನ ಪ್ರಭ್ ಜೆಂಕಿನ್ಸ್‌ರವರು ಎಲ್ಲವನ್ನು ಕೇಳಿಕೊಂಡು, ಮದ್ರಾಸ್ ಸರ್ಕಾರದ ಆಜ್ಞೆಯು ಘಟನೆಗೆ ವಿರೋಧವಾದುದೆಂದು ತೀರ್ಪು ಕೊಟ್ಟಿದ್ದು ಅಭಿನಂದನೀಯವಾಗಿದೆ.

ಕಾಲೇಜುಗಳಲ್ಲಿ ಸ್ಥಾನಾಭಾವವಿದ್ದು ಅಧಿಕ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಬಾದರೆ ಕಾಲೇಜುಗಳನ್ನಾದರೂ ಹೆಚ್ಚಿಸಬೇಕು. ಇಲ್ಲವೇ ಜಿಲ್ಲೆಗಿಷ್ಟು ವಿದ್ಯಾರ್ಥಿಗಳನ್ನು ಸೇರಿಸುವ ಕ್ರಮವನ್ನಾದರೂ ಆಚರಣೆಯಲ್ಲಿ ತರಬೇಕು. ನವಕರಿಗಳಿಗೆ ಕಡಮೆ ಅಂಕ, ಕಡಿಮೆ ಯೋಗ್ಯತೆಯಿರುವ, ಬ್ರಾಹ್ಮಣೇತರರಿಗೆ ಸ್ಥಾನವಿಲ್ಲದಂತಾಗುವದೆಂದು ಸರ್ಕಾರದ ಮತ್ತು ಇತರರ ಭಯವಿವೆ ಸರ್ಕಾರದ ಪ್ರತಿಶಾಪಿಯೂ ಸಮರ್ಥ ನುತ್ತು ಯೋಗ್ಯ ಜನರಿಂದ ಕೂಡಿರಬೇಕೆಂದಲೆ, ಸಮರ್ಥತೆಗಳಿಗೆ ಪ್ರಥಮಸ್ಥಾನ ಕೊಡಬೇಕು. ಈಗಿರುವ ಶಾಖೆಗಳಲ್ಲಿ ಅನರ್ಹ ಅಯೋಗ್ಯ ನವಕರಿಂದ್ದು, ಯಾವ ಕೆಲಸಗಳೂ ಶೀಘ್ರವಾಗುವಂತಿಲ್ಲ ಕೆಲಗುಮಾಸ್ತರಿಗೆ ಒಂದು ಡ್ರಾಫ್ಟ್ ಬರೆಯುವುದು ಹಾಗಿರಲಿ ಬರೆದದ್ದನ್ನು ಸಕಲುನಾಡುವುದು ಕೂಡ ಬರುವಂತಿಲ್ಲ. ಸಮರ್ಥ ನುತ್ತು ಯೋಗ್ಯ ಜನರು ಎಲ್ಲಾ ಜಾತಿಗಳಿವರಲ್ಲೂ ಬೆಳೆಕುತ್ತಾರೆ ಅನುಒಂದೇ ಜಾತಿಯ ಮೈ ಶಿಷ್ಟತವಲ್ಲ ಈ ಕಾರಣ ಬ್ರಾಹ್ಮಣ ಜಾತಿಯವರೆಂಎಲ್ಲಾ ನವಕರಿಗಳಲ್ಲೂ ತುಂಬುವರೆಂಬ ಮಾತು ಅಸಕ್ಯವಾಗುವದರಲಿ ಸಂದೇಹವೇನಿಲ್ಲ. ಎಲ್ಲಾ ಶಾಲೆ, ಕಾಲೇಜುಗಳಲ್ಲೆ ಅಧಿಕ ಸಂಖ್ಯಾಕರಾಗಿದ್ದು, ಯೋಗ್ಯರಿರುವ ಇತರ ಎಮ್ಮೇಜನರು ಮುಂದೆ ಬರಲ್ಕಿದ್ದು ಜಾತಿ, ಮತ, ಪಂಥಗಳ ನಾಶವಾಗುತ್ತಿರುವ ಸುಲಕ್ಷಣಗಳನ್ನು ನಾವು ನೋಡುತ್ತಲಿದ್ದೇವೆ ದಕ್ಷಿಣ ಹಿಂದುಸ್ಥಾನದ ಬೊಂಬಾಯಿ, ಮದ್ರಾಸ್ ಮತ್ತು ಮೈಸೂರು ಭಾಗಗಳಲ್ಲಿ ನವಾತ್ತೀರ ಅಲ್ಪ ಪ್ರಮಾಣದಲ್ಲಿ ಹಬ್ಬಿರುವ ಈ ರೋಗವನ್ನು ನಿವಾರಿಸುವುದು ಎಲ್ಲಾ ದೇಶಭಕ್ತರ ಕರ್ತವ್ಯವಾಗಿದೆ.

— ನೆಹರು ಮಿತ್ರ —

ಪ. ಜವಹರಲಾಲ ನೆಹರೂರವರ ಶಾಂತಿ ಪ್ರಯತ್ನವು ಪ್ರಶಂಸನೀಯವಾದುದು ಎಂದು ಇಂಗ್ಲೆಂಡಿನ ಪಾರ್ಲಿಮೆಂಟಿದಲ್ಲಿ ಲಾರ್ಡ್ ಭಾನ್ಸಲರ್ ಜೋಯಿಟೆರು ಹೇಳಿದರು.

೦ ೦ ೦

— ನೆಹರು ಶತ್ರು —

ಹಿಂದುಸ್ತಾನದ ನೆಹರೂರವರು ಪೂರ್ಣ ಸಹಾಯನೂಡಿದ್ದರೆ ವಿಶ್ವಯುದ್ಧದಲ್ಲಿ ಅರ್ಧಭಾಗ ನಮ್ಮಕಡೆಗೆ ಇರುತಿತ್ತು ಅವರು ಸ್ವಾಲಿನ್ಸರಿಗೆ ಕಾಗದ ಬರೆದು ಅವರ ಗರ್ವವನ್ನು ಹೆಚ್ಚಿಸಿದರು ಎಂದು ಕನ್ಸರ್ವೇಟಿವ್ ಪಕ್ಷಾಂಗದವರಾದ ಲಾರ್ಡ್ ಸಾಲಿಸ್ಬರಿಯವರು ಹೇಳಿದರು.

ವ್ಯವಸಾಯದ ಕೆಲಸಕ್ಕೆ ಆಕಳುಗಳನ್ನು ಉಪಯೋಗಿಸಿರಿ

ಭಾರತ ಸರ್ಕಾರದ ಸೂಚನೆ

ದೇಶದಲ್ಲಿ ಎತ್ತು, ಹೋಗಳ ಅಭಾವ ವಿರುವ ಕಾರಣ ಈ ಕೊರತೆಯನ್ನು ನಿವಾರಿಸಿಕೊಳ್ಳಲು ಸ್ಥಿರರು ಆಕಳುಗಳನ್ನು ಉಪಯೋಗಿಸಿಕೊಳ್ಳುವಂತೆ ಭಾರತ ಸರ್ಕಾರವು ಎಲ್ಲಾ ಪ್ರಾಂತೀಕ ಸರ್ಕಾರಗಳಿಗೆ ಸೂಚಿಸಿದೆ. ಬೆಂಗಳೂರಿನಲ್ಲಿ ಶೋಧ ನಡೆಸಿದನಂತರ ಕೆಲಸವಮಾಡುವದರಿಂದ ಆಕಳುಗಳ ಹಾಲು ಕೊಡುವ ಶಕ್ತಿಗೆ ಭಾಧಕ ಬರುವದಿಲ್ಲೆಂದು ನೊತ್ತಾಗಿದೆ.

142

THE NAVA BHARAT
ನವಭಾರತ
ಸಂಪಾದಕ-ಟಿ. ಪ್ರಕೇತವರಾವ್
ಸೋಮವಾರ ಜುಲೈ ೩೧—೭—೫೦

ಮಿತಹಾರಿ

ಶ್ರೀ ಮುನ್ಸಿಯವರ ಕೋರಿಕೆ

ಭಾರತದ ಆಹಾರಮಂತ್ರಿಗಳಾದ ಶ್ರೀ ಕೆ. ಯಂ. ಮುನ್ಸಿಯವರು, ಜನತೆಗೆ ಬಿನ್ನೈಸಿ ಮಿತಾಹಾರದ ವಿಷಯದಲ್ಲಿ ಸ್ತ್ರೀಯರು ಸಹಾಯಕ್ಕೆ ಬರಬೇಕೆಂದೂ, ಕೊನೆಗೆ ವಾರದಲ್ಲಿ ಒಂದು ದಿನವಾದರೂ ಕಾಯಿಪಲ್ಯೆಯಿಂದಲೇ ಕಾಲ ಕಳೆಯಬೇಕೆಂದೂ ತಿಳಿಸಿರುತ್ತಾರೆ. ಆಹಾರ ಪರಿಸ್ಥಿತಿಯು ತುಟ್ಟಾಗತೆ ಆರಂಭವಾರಮೇಲೆ ಪಟ್ಟಣಗಳಲ್ಲಿ ಸಾಕಷ್ಟು ಧಾನ್ಯಾದಿಗಳು ದೊರೆಯದೆ, ಸೀದಾ ಪರಿಸ್ಥಿತಿಯಿಂದ ಲಭ್ಯವಾಗುವ ಆಹಾರವು ೮ ದಿನಗಳಲ್ಲೇ ಮುಗಿದು ಹೋಗುತ್ತದೆ. ಮಕ್ಕಳು ಮರಿ ಇರುವ ಕುಟುಂಬಗಳಲ್ಲಂತೂ, ಮಕ್ಕಳಿಗಾಗಿ ದೊಡ್ಡವರು ಉಪವಾಸ ಮಾಡಬೇಕಾಗುತ್ತದೆ. ಹೆಚ್ಚು ಹಣವಿರುವವರು ಕೇಳಿದಷ್ಟನ್ನು ಕೊಟ್ಟು ಕಳ್ಳಸಂತೆಯಿಂದ ತರುತ್ತಾರೆ. ಸ್ವಲ್ಪ ಆದಾಯವಿರುವವರು ಯಾರಿಗೂ ಹೇಳಿಕೊಳ್ಳದೆ, ಉಪವಾಸ ಮಾಡುತ್ತಾರೆ.

ಇನ್ನು ಹಳ್ಳಿಗಳಲ್ಲಿ, ರೈತರು ತಮ್ಮ ಅವಶ್ಯಕ ವಸ್ತುಗಳಿಗಾಗಿ ಬೆಳೆದ ಧಾನ್ಯವನ್ನು ಮಾರಿ, ಪ್ರೊಕ್ಯೂರ್‌ಮೆಂಟಿನವರಿಗೆ ಕೊಟ್ಟು, ಕಳೆದುಳಿದ ಧಾನ್ಯದಿಂದ ಮತ್ತೆ ಬೆಳೆಬರುವವರಿಗೆ ಕಷ್ಟಜೀವನ ನಡೆಸಬೇಕು. ಬೇಸಾಯ ಕೂಲಿ, ನಟ್ಟು, ಭಿಕ್ಷೆ, ಮತ್ತು ಇನ್ನಿತರ ಎಲ್ಲಾ ಖರ್ಚುಗಳಿಗೂ ಧಾನ್ಯವನ್ನೇ ಮಾರಬೇಕು. ಅತ್ಯವಶ್ಯಕತೆಯಲು ಧಾನ್ಯವಾರಬೇಕು ಅದಾವುದೂ ಸಿಕ್ಕುವಂತಿಲ್ಲ. ಹೀಗಾಗಿ, ಹಳ್ಳಿಗಳ ಜೀವನವು ಎಷ್ಟು ಪಾಪಾರ್ಜಿತವೋ ಅಷ್ಟು ಸಂಕಟಮಯವಾಗಿ ಬಿಟ್ಟಿದೆ. ಕೊರತೆಯಜೀವನ, ಕಷ್ಟಜೀವನ, ಹೊರಲಾಗದಭಾರ, ಉಪವಾಸಪರಿಸ್ಥಿತಿ.

ರಾಷ್ಟ್ರದ ಇಂಥಾ ಆರ್ಥಿಕ ದುರ್ದೆಸೆಯಲ್ಲಿ ಉಪವಾಸ ಪರಿಸ್ಥಿತಿಯಲ್ಲಿ, ಶ್ರೀ ಮುನ್ಸಿಯವರ ಬಿನ್ನಹವು ಹಾಸ್ಯಾಸ್ಪದವಾಗಿದೆ. ಬೀಹಾರದ ಮುಖ್ಯಮಂತ್ರಿಗಳು ತಮ್ಮ ಪ್ರಾಂತದಲ್ಲಿ ಆಹಾರವಿಲ್ಲದೆ ೬ ಜನರು ಸತ್ತಿರುವದಾಗಿ ವರದಿ ಮಾಡಿರುತ್ತಾರೆ ಬೀಹಾರದಲ್ಲಿರುವ ಭೀಕರ ಕ್ಷಾಮದ ಪರಿಸ್ಥಿತಿಯು ಎಲ್ಲಾ ಪ್ರಾಂತಗಳಲ್ಲೂ ಸರ್ವೇ ಸಾಮಾನ್ಯವಾಗಿ ಹಬ್ಬಿದೆ. ಮುಖ್ಯಮಂತ್ರಿಗಳೇ ೬ ಜನರು ಸತ್ತರೆಂದು ಒಪ್ಪಿಕೊಂಡಿರಬೇಕಾದರೆ, ಇನ್ನು ಬಾಳ ಜನರು ಸೊತ್ತಿಲ್ಲದೆ ಸತ್ತಿರಬೇಕೆಂದು ಊಹಿಸಲಡ್ಡಿಯಿಲ್ಲ.

ನಮ್ಮ ಸೂಚನೆಗಳೆಂದರೆ, ಪ್ರಾಂತ ಪ್ರಾಂತಗಳಲ್ಲಿ ಪ್ರೇಕ್ಷಾಗಳನ್ನು ನಿರ್ಮಿಸಿ, ಅಲ್ಲಿ ಸ್ವತಂತ್ರ್ಯ ವ್ಯಾಪಾರಕ್ಕೆ ಅನುಕೂಲ ಮಾಡಿಕೊಳ್ಳಬೇಕು ಅಕ್ಕಿಯ ಬೆಲೆ ಇತರ ಧಾನ್ಯಾದಿಗಳಮೇಲೆ ನಿಯಂತ್ರಣ ಹೇರಬಾರದು ಮಾಲಿನ ಸಾಗಾಟಕ್ಕೆ ವಾಗನುಗಳನ್ನು ತಡವಿಲ್ಲದೆ ಒದಗಿಸಿಕೊಡಬೇಕು ಆಹಾರ ಶಾಖೆಯಧಿಕಾರಿಗಳನ್ನು ಕಡಿಮೆ ಮಾಡಿದರೆ. ಜನರು ಸುಳ್ಳು ವರದಿ ಕೊಡುವುದೂ ತಪ್ಪಿ ಹೋಗುತ್ತದೆ. ಆಹಾರ ಸಂಬಂಧವಾಗಿ ಅನೇಕ ಕಚೇರಿಗಳಲ್ಲಿ, ಇನ್ನು ಮೇರ್ದ ಖರ್ಚಿದೆ. ಇವನ್ನು ತಡೆಯುವ ಉಪಾಯಗಳೇನಿಲ್ಲ ಮಂತ್ರಿಗಳು ಸಂಚಾರಕ್ಕೆ ಹೋದಾಗ ೨೦೦- ೩೦೦ ಜನರ ಭೋಜನಸಂತರ್ಪಣೆಯಾಗುತ್ತದೆ, ಇದು ತಡೆಯಾಗಬೇಕು. ಮೇಲಿನವರು ಒಳ್ಳೆಯ ಮೇಲ್ಪಂಕ್ತಿ ಹಾಕಿದರೆ, ಜನತೆಗೆ ಒಳ್ಳೆ ಪರಿಣಾಮವಾಗುತ್ತದೆ. ಹೆಚ್ಚಿಗೆ ಬೆಳೆವ ಪ್ರದೇಶಗಳಿಂದ ಒತ್ತಾಯವಿಲ್ಲದೆ, ಅಲ್ಲಿನ ಧಾರಣೆ ಕೊಟ್ಟು ಕೊಳ್ಳಬೇಕು. ಒಟ್ಟಿನಲ್ಲಿ ಇಂಥಾ ಅನೇಕ ಉಪಾಯಗಳಿಂದ ಸದ್ಯದ ಪರಿಸ್ಥಿತಿಯು ಹಿಡಿತದಲ್ಲಿ ಬರಲು ಸಂದೇಹವೇಇಲ್ಲ.

EMPLOYMENT.

"During the month of June 1950, 325 applicants were employed as prohibition guards by the Employment Exchanges in Ceded District A large number of candidates are required for filling up vacancies in the Prohibition Department, the Hyderabad Police Force and the Bellary district Police. Those interested should apply to the local Employment Exchange"

R. Prabhakar Rao
Asst- Public Relations Officer.
Anantapur.

ನಿರುದ್ಯೋಗಿಗಳಿಗೆ ಉದ್ಯೋಗ

1955ನೆಯು ಜೂನ್‌ದಲ್ಲಿ, 325 ಜನರು ಪ್ರೊಹಿಬಿಷ್ಟ ಗಾರ್ಡುಗಳಾಗಿ ರಾಯಲಸೀಮೆಯಲ್ಲಿ ನೇಮಕ ಹೊಂದಿದರು, ಅರ್ಜಿಹಾಕಿಕೊಳ್ಳಬೇಕು.

[ಆರ್. ಪ್ರಭಾಕರರಾವ್]

ಯುದ್ಧಭೀತಿ-ಭಾರತ ಪಾಕಿಸ್ತಾನಗಳ ಸಂಯುಕ್ತ ರಕ್ಷಣಾ ವ್ಯವಸ್ಥೆ

ಹಿಮಾಲಯದ ಉತ್ತರಕ್ಕೆ ಹೊಂದಿಕೊಂಡಿರುವ ಟಿಬೆಟ್ ದೇಶವನ್ನು ಕಮ್ಯೂನಿಸ್ಟರು ಆಕ್ರಮಿಸಿದ್ದಾರೆ. ರಷ್ಯಾದ ಸರಹದ್ದು ಕಾಶ್ಮೀರ ಸರಹದ್ದು ಸೊಂದಿಕೊಂಡಿದೆ. ಪ್ರಪಂಚ ಯುದ್ಧವೇನಾದರೂ ಸಂಭವಿಸಿದರೆ ಪಾಕಿಸ್ತಾನದವರ ದುರ್ಬಲತೆಯಿಂದ ಹಿಂದುಸ್ತಾನಕ್ಕೂ ಗಂಡಾಂತರವಿಲ್ಲವೆಂದು ಬೀಹಾರದ ಮಂತ್ರಿ ಡಾಕ್ಟರ್ ಸಯ್ಯದ್ ಅಹಮ್ಮದರು ಲಂಡನ್ನಿನ ನ್ಯೂಸ್ ಕ್ರಾನಿಕಲ್ ಪತ್ರಿಕೆಯಲ್ಲಿ ಐದು ಲೇಖನಗಳನ್ನು ಪ್ರಕಟಿಸಿರುವರು.

ಭಿನ್ನಾಭಿಪ್ರಾಯವಿದ್ದರೂ ಅಮೆರಿಕಾ ಕ್ಯಾನಡಾ ದೇಶಗಳು ಸಂಯುಕ್ತ ಸಂರಕ್ಷಣಾ ವ್ಯವಸ್ಥೆ ಮಾಡಿಕೊಂಡಂತೆ ಭಾರತ ಪಾಕಿಸ್ತಾನಗಳು ಸಂಯುಕ್ತ ಸಂರಕ್ಷಣೆ ಮಾಡಿಕೊಳ್ಳಬೇಕು. ವಾಯುವ್ಯ ಗಡಿ ರಕ್ಷಣೆ ಪಾಕಿಸ್ತಾನಕ್ಕೆ ಮಹತ್ವವಿದ್ದಂತೆ ಭಾರತಕ್ಕೂ ಇದೆ. ಏಕೆಂದರೆ ಆ ಮಾರ್ಗವನ್ನು ಶತ್ರುಗಳು ಭೇದಿಸಿದರೆ ಬಂಗಾಲದವರೆಗೂ ಅವರನ್ನು ತಡೆಯಲು ಶಕ್ಯವಿಲ್ಲ ಎಂದು ಇವರು ಅಭಿಪ್ರಾಯ ಪಟ್ಟಿರುವರು.

ಮದ್ರಾಸ್ ಪ್ರಾಂತದಲ್ಲಿ ಅಕ್ಕಿಯ ಕೊರತೆಯುಂಟಾಗಿದೆ. ಈಗಿರುವ ಅಕ್ಕಿ ಸಂಗ್ರಹವು ಸೀದಾ ಪ್ರದೇಶಗಳಿಗೆ ಮಾತ್ರ ಒಂದು ತಿಂಗಳಿಗೆ ಸಾಲುವಷ್ಟಿದೆ.

ಮದ್ರಾಸ್ ಗವರ್ನರರ ಬಳ್ಳಾರಿ ಜಿಲ್ಲೆಯ ಸಂಚಾರ

24—7—50

ಬಳ್ಳಾರಿನಗರದಲ್ಲಿ ಗವರ್ನರರು, ಜಿಲ್ಲಾ ಬೋರ್ಡು ಮುನಿಸಿಪಾಲಿಟಿ ಮತ್ತು ವೀರಶೈವ ವಿದ್ಯಾವರ್ಧಕ ಸಂಘದ ಮಾನಪತ್ರಗಳನ್ನು ಸ್ವೀಕರಿಸಿ ಸಮುಚಿತ ಉತ್ತರಗಳನ್ನು ದಯಪಾಲಿಸಿದರು. ಶ್ರೀ ಗುಜುಡೂರು ತಿಮ್ಮಪ್ಪನವರು ತಮ್ಮ ಪತ್ನಿ ಹೆಸರಿನಲ್ಲಿ ಕಟ್ಟಿಸಿದ ಪ್ರಸೂತಿ ಕೇಂದ್ರದ ಪ್ರಾರಂಭೋತ್ಸವಮಾಡಿ, ಶ್ರೀ ಅಗಡಿ ಲಕ್ಷ್ಮಿನಾರಾಯಣಶೆಟ್ಟರು ಕಟ್ಟಿಸುವ ಛತ್ರದ ಅಡಿಗಲ್ಲನ್ನು ಹಾಕಿದರು. ಸೆಂಟ್ರಲ್ ಕೋ ಆಪರೇಟಿವ್ ಸ್ಟೋರ್ಸ್ ದಲ್ಲಿ ಶ್ರೀ ಲಿಂಗಾರೆಡ್ಡಿಯವರು ಮಾನಪತ್ರ ಅರ್ಪಿಸಿದರು. ಬಳ್ಳಾರಿಯ ಅನೇಕ ಸಂಘ ಸಂಸ್ಥೆಗಳಿಗೆ ಭೇಟಿ ಇತ್ತರು. ಶ್ರೀಮತಿ ಗವರ್ನರರು ಲೇಡೀಸ್ ಕ್ಲಬ್ ಹೆಣ್ಣುಮಕ್ಕಳ ಟ್ರೈನಿಂಗ್ ಶಾಲೆ ಮತ್ತು ತಮ್ಮ ಪತಿಯನೊಂದಿಗೆ ಇತರ ಭಾಗಗಳಿಗೂ ಹೋಗಿದ್ದರು.

25—7—50

ಹಾಲಕರ್ವಿಯಲ್ಲಿ ಕಮ್ಯೂನಿಟಿ ಸೆಂಟರ್ ಬಿಲ್ಡಿಂಗ್ ಅಡಿಗಲ್ಲು ಹಾಕಿ, ನಾರಾಯಣರೆಡ್ಡಿಯವರ ಆತಿಥ್ಯ ಸ್ವೀಕರಿಸಿ, ಆ ಊರಿನಲ್ಲಿ ಆಸ್ಪತ್ರೆ ಬಡಾವಣೆ ಅಡಿಗಲ್ಲು ಹಾಕಿ ಅದವಾನಿ ಮೊರ್ಗವಾಗಿ ಯಮ್ಮಿಗನೂರಿಗೆ ತೆರಳಿದರು. ಅಲ್ಲಿ ಪಂಚಾಯ್ತಿ ಬೋರ್ಡು ಮಾನಪತ್ರ ಸ್ವೀಕರಿಸಿ ನೆಯ್ಕಾರರ ಕಾಲೋನಿಯ ವ್ಯಾರಂಭೋತ್ಸವನೆರವೇರಿಸಿದರು. ಮತ್ತೆ ಆದವಾನಿಗೆ ಮರಳಿ, ರಾಯಲಸೀಮಾ ಮಿಲ್ಸ್ ಸಂದರ್ಶಿಸಿದರು. ಸಾಯಂಕಾಲ ಮುನಿಸಿಪಾಲಿಟಿ ಮಾನಪತ್ರ ಸ್ವೀಕರಿಸಿ ಗುಜರಾತಿ ಮಕ್ಕಳ ಆಸ್ಪತ್ರೆಯ ಅಡಿಗಲ್ಲು ಹಾಕಿದರು. ಆ ರಾತ್ರಿ ಬಳ್ಳಾರಿಗೆ ವಾಪಸು ಬಂದರು.

26—7—50

ಪ್ರಾತಃಕಾಲ ಹಂಪಿಯನ್ನು ಸಂದರ್ಶಿಸಿ, ಸಾಯಂಕಾಲ ಪುರಸಭೆಯ ಮಾನಪತ್ರವನ್ನು ಸ್ವೀಕರಿಸಿ ಉಚಿತ ಜವಾಬನ್ನು ಕೊಟ್ಟರು. ತುಂಗಭದ್ರಾ ಯೋಜನೆಯನ್ನು ಸಂದರ್ಶಿಸಲಾಯಿತು.

27—7—50

ಸಂಡೂರು ರಾಜರ ಅತಿಥಿಗಳಾಗಿ ಕಾರ್ತಿಕೇಯಸ್ವಾಮಿ ದೇವಸ್ಥಾನ ಮೊಂಗನೀಸ್ ಗಣಿ ನೋಡಿಕೊಂಡು, ಸಾಯಂಕಾಲ ಹೊಸಪೇಟೆಗೆ ಮರಳಿ ಮದ್ರಾಸಿ

ಅಣುಬಾಂಬಿನಿಂದಾಗುವ ಹಾನಿ

ಜಪಾನಿನ ಹಿರೋಶಿಮಾ ಮತ್ತು ನಾಗಸಾಕಿ ನಗರಗಳಿಗೆ ಹೋಗಿ ಶೋಧ ಮಾಡಿದ ಬ್ರಿಟಿಶ ಅಣುಶಕ್ತಿ ವಿಜ್ಞಾನಿಗಳು ಒಂದು ವರದಿಯನ್ನು ಸಾದರಪಡಿಸಿರುವರು. ಆ ಪ್ರಕಾರಕ್ಕೆ ಬಾಂಬು ಸ್ಫೋಟದಿಂದ ಗಾಯಗೊಂಡ ೧೦೦ ಕ್ಕೆ ೫೦ ರಿಂದ ೬೦ ಜನ ಸತ್ತಿರುವರು. ಅದರಿಂದ ಪ್ರಜ್ವಲಿತವಾದ ಉಷ್ಣದಿಂದ ನೂರಕ್ಕೆ ೫೦ ರಿಂದ ೫೦ ಜನರು ಸತ್ತಿರುವರು. ಅದರ ವಿಷ್ಕೃತ್ತಿಯಿಂದ ನೂರಕ್ಕೆ ೧೫ ರಿಂದ ೨೦ ಜನರು ಸತ್ತಿರುವರು. ಎಂಬುದಾಗಿ ವರದಿಯಲ್ಲಿ ಕಾಣಿಸಲಾಗಿದೆ.

ಕೋರಿಯಾ—ಯುದ್ಧ

ಕೋರಿಯಾದ ದಕ್ಷಿಣ ಪ್ರದೇಶದಲ್ಲಿ ಅಮೆರಿಕನ್ ಸೈನ್ಯಗಳು ಹಿಂದೋಡುತ್ತಿದ್ದು, ಅವರ ಕೊನೆಯ ತಾಣಕ್ಕೂ ಕೂಡ ಗಂಡಾಂತರವುಂಟಾಗಿದೆ. ಉತ್ತರ ಕೋರಿಯನ್ನರು ಪಶ್ಚಿಮ ಕರಾವಳಿಯಲ್ಲಿ ಮಾನ್ಪೊಗಿ ಕೊರಿಯಾದ ತಾನಿಯನ್ನು ಮುತ್ತಿರುವರು. ಶತ್ರುಗಳು ತೀಜಾನಿನ ಗುಡ್ಡಗಾಡು ಪ್ರದೇಶಗಳಿಂದಿಳಿದು ತೇಗೂದ ಕಡೆ ಮುನ್ನುಗ್ಗುತ್ತಿರುವರು. ದಕ್ಷಿಣದ ತಾತ್ಕಾಲಿಕ ರಾಜಧಾನಿ, ತೇಗೂ ಇನ್ನು ಉತ್ತರ ಕೋರಿಯನ್ ಸೈನ್ಯಕ್ಕೆ ೫೦ ಮೈಲಿ ದೂರದಲ್ಲಿದೆ.

ಪಂಚಾಯ್ತಿ ಬೋರ್ಡುಗಳ ಅವಧಿ

ಮದ್ರಾಸ್ ರಾಜ್ಯದ ಪಂಚಾಯ್ತಿ ಬೋರ್ಡುಗಳ ಅವಧಿಯು ನವಂಬರ್ ವರೆವಿಗೆ ಬೆಳೆಸಲಾಗಿದೆ. ಅಕ್ಟೋಬರ್, ನವಂಬರ್‌ಗಳಲ್ಲಿ ಚುನಾವಣೆ ಬರಬಹುದು. ಸರ್ಕಾರದವರು ಮುಂದಿಂದು ಪ್ರಕಟಣೆ ಹೊರಡಿಸಬಹುದು

ಬಳ್ಳಾರಿ ಜಿಲ್ಲಾ ಕೋರ್ಟು

O. P. No. 38/50

ಸೋಗಿ ಶಾಂತರಾಜು ಅರ್ಜಿದಾರ

In the matter of Succession Certificate

ಲೇಟು ಸೋಗಿ ಗುಣಸಾಲಪ್ಪನ ಹೆಸರಲ್ಲಿ ಇರತಕ್ಕ ಬಾಕಿಗಳು ಪಗ್ಗೇರಾಗಳಲ್ಲಿ ½ ಮೊತ್ತ ವಸೂಲು ಮಾಡಿಕೊಳ್ಳುವದಕ್ಕೆ Succession Certificates ಗಾಗಿ ಅರ್ಜಿ ಹಾಕಲಾಗಿ 1-8-50 ಕ್ಕೆ ವಾಯಿದಾ ಇರುತ್ತದೆ. ಯಾರಿಗಾದರು ಆಕ್ಷೇಪಣೆ ಇದ್ದಲ್ಲಿ ತಕರಾರು ಹಾಜರು ಮಾಡಬಹುದು.

ಜೆ. ಶ್ರೀಧರಮೂರ್ತಿ
ವಕೀಲರು, ಬಳ್ಳಾರಿ.

ಕಾಶ್ಮೀರ

ಕಾಶ್ಮೀರ ಸಮಸ್ಯೆಯ ವಿಷಯವಾಗಿ ಭಾರತ ಪಾಕಿಸ್ತಾನ ಮಂತ್ರಿಗಳಲ್ಲಿ 4 ದಿನ ಮಾತುಕತೆ ನಡೆದರೂ ಇನ್ನು ಯಾವ ನಿರ್ಣಾಯಕ ಘಟ್ಟಕ್ಕೂ ಮಾತುಕತೆಗಳು ಮುಟ್ಟಿಲ್ಲ.

"ನಿಷಾಸ್ತನ್, ಗುಸ್ತಾಂಗ್, ಬರ್ಜಾಸ್ತನ್"ರ ಭೆಟ್ಟಿಯಾದರೆವ್ವ ಮಾತಾಡಿದೆವು ಚರ್ಚಿಸಿದೆವು ಎಂಬುದಾಗಿ ಪಾಕಿಸ್ತಾನ್ ಮುಖ್ಯ ಮಂತ್ರಿಗಳು ಪರ್ಶಿಯಾ ಭಾಷೆಯ ನೂರು ಶಬ್ದಗಳನ್ನು ಪತ್ರಿಕೆಗೆ ವಿವರಿಸಿದರು.

ಮಾನ್ಯರಾಜಶ್ರೀ ಜಿಲ್ಲಾ ಮುನ್ಸಿಫ್ ಕೋರ್ಟು ಆದವಾನಿ.

S. C 97/50

ಜಿ ಆರ್ ರಾಮಚಂದ್ರರಾವು,
ಕೃಷ್ಣಾಜಿರಾ
ಅವಿಭಕ್ತ ಹಿಂದೂಳುಟುಂಬದ ಅಂಗ
By Manager Senior Copartn
ರಾಮಚಂದ್ರರಾವು ಜಿ. ಆ
— ವಾ

And

ಮಂಚಾಲಿನುರಂ ಪರೀಕ್ಷಿತಾಚಾರ
ಬ್ರಾಹ್ಮಣ-ಪೂಜಾರಿ-ಮಂಚಾ
— ಪ್ರತಿವಾ

ಮೇಲಿನ ಸಂಬಂಧದಲ್ಲಿ ನಾವಿಯ ಪ್ರತಿವಾದಿಯವರಿಗೆ ಲೇವಾದೇನಿಯಾ ರೂ. 68-11-0 ಕೋರ್ಟು ಖರ್ಚು ವಗೈರೆ ವಂಡಿನ ಒತ್ತಿಯ ಸಮೇತ ವಸೂಲುನಾಮೆಯಲ್ಲಿ ದಾವಾ ಹೂಡಿರತ್ತಾಸಿ, ಸದರ ವಾಯ್ದೆ 4-8-1950 ಇದೆ. ಆದಿನ ಬೆಳಿಗ್ಗೆ 11 ಘಂಟೆ ಖುದ್ದಾಗಿಯಾಗಲಿ ವಕೀಲರ ಮೂಲಕವಾಗಿ ಹಾಜರಾಗಿ ಆಕ್ಷೇಪಣೆಗಳನ್ನು ತಿಳಿಸಬೇಕು. ಇಲ್ಲವಾದಲ್ಲಿ ಪ್ರತಿವಾದಿಯನ್ನು ಯುಕ್ತವಾರ್ಪಿಯಾಗಿ ಮಾಡಿಸ್ತಿ ಕೊಡಲಾಗುವುದೆಂದು ಈ ಮೂಲಕ ಪ್ರಟಿಸಲಾಗಿದೆ.

ಬಿ. ನರಸಿಂಗರಾವ್ ಬಿ. ಎ. ಬಿ. ಎಲ್
ವಾದಿಯ ಅಡ್ವೊಕೇಟ್

ನವಭಾರತಪ್ರೆಸ್
ಚಂದಾದಾರರಾಗಿರಿ.

ಹಾಲು ಹೆಚ್ಚುವುದು

ಖನಿಜ ವಸ್ತುಗಳನ್ನು ಕರೆಯುವ ದನಗಳಿಗೆ ಕೊಡುವುದರಿಂದ ಹೆಚ್ಚಿನ ಪ್ರಯೋಜನವಿದೆ

ಶ್ರೀ ಸಿ. ಬಾಲಸುಬ್ರಮಣ್ಯಂ, ಬಿ. ಎ.

ದನಕರುಗಳಿಗೆ ಸಾಕಷ್ಟು ಮೇವು ಹಾಗೂ ನ್ಯಾಯವಾದ ಬೆಲೆಗೆ ಒಳ್ಳೆಯ ಹಿಂಡಿ, ಇತ್ಯಾದಿ ತಿಂಡಿಗಳು ದೊರೆಯದಿರುವ ಈ ಸಮಯದಲ್ಲಿ ಹಾಲು ಕರೆಯುವ ಹಸುಗಳನ್ನು ಸಾಕುವುದು ಒಂದು ಕಠಿಣ ಸಮಸ್ಯೆಯಾಗಿಯೇ ಪರಿಣಮಿಸಿದೆಯೆನ್ನಬಹುದು. ಮನುಷ್ಯರ ಪೋಷಕ ಪದಾರ್ಥಗಳಲ್ಲಿ ಹಾಲು ಅವಶ್ಯವಾಗಿ ಸೇರಿರಬೇಕಾಗಿದೆ. ಆದುದರಿಂದ ಕರುವಿನ ಪ್ರಾಣಿಗಳನ್ನು ಸಾಕಷ್ಟು ಆಹಾರ ಕೊಟ್ಟು ಸರಿಯಾಗಿ ಸಾಕುವುದು ಅವಶ್ಯ. ಹಾಲು ಕರೆಯುವ ದನಗಳಿಗೆ ಕೊಡುವ ಆಹಾರವು ಸಾಕಷ್ಟಿಲ್ಲದಿರುವುದರಿಂದ, ಈ ಒಂದು ಗುಣ ಕಠಿಣ ಪರಿಣಾಮಗಳನ್ನು ಸುಲಭದಲ್ಲಿ ಹೇಗೆ ನಿವಾರಿಸಬಹುದು? ಮೇವುಗಳನ್ನೂ ಹಿಂಡಿಗಳನ್ನೂ ವಾಡಿಕೆಯ ಕ್ರಮದಲ್ಲಿ ಕೊಡುತ್ತಿರಬೇಕು. ಈ ಕೆಳಗಿನ ಸೂಚನೆಗಳನ್ನು ಅನುಸರಿಸುವುದರಿಂದ ಕರೆಯುವ ದನಗಳ ಪೋಷಣೆ ಕೆಡದಂತೆ ಮಾಡಿಕೊಳ್ಳಬಹುದು. ಈ ಸೂಚನೆಗಳಲ್ಲಿ ಮುಖ್ಯ ವಿಷಯವೆಂದರೆ, ಹಸುಗಳ ದಿನನಿತ್ಯದ ಆಹಾರದಲ್ಲಿ ಖನಿಜ ವಿಶ್ರಣದಂತಿರುವ ಕೆಲವು ಸುಲಭ ಪದಾರ್ಥಗಳನ್ನೂ ಉಪ್ಪನ್ನೂ ಸೇರಿಸಿಕೊಳ್ಳುವುದು

ಖನಿಜ ವಿಶ್ರಣವೆಂದರೆ ಸುಟ್ಟಬಿಚ್ಚಿನ ಸುಣ್ಣ ಮತ್ತು ಕುಗಿಯಿಂದ ಬೇಯಿಸಿದ ಎಲುಬಿನ ಹುಡಿ, ಇವನ್ನು ಸಮಪ್ರಮಾಣಗಳಲ್ಲಿ ವಿಶ್ರವಾಡುವುದು. ಕಾಲ್ಸಿಯಂ (ಸುಣ್ಣ) ದಾಕು ಜೂ ನಿ ಯ ಲ್ಲಿ ಅತ್ಯಂತ ಕಡಮೆಯಿರುವ ಪ್ರದೇಶಗಳಲ್ಲಿ ಈ ಚಿಕ್ಕ ಗಾತ್ರದ ದನಗಳಿಗೆ ಮೂರು ಪಾಲಷ್ಟು ಚಿಪ್ಪು ಸುಣ್ಣವನ್ನೂ ಎರಡು ಪಾಲಷ್ಟು ಎಲುಬು ಹುಡಿಯನ್ನೂ ಮಿಶ್ರಣಮಾಡಿಕೊಡಬಹುದು. ಈ ಮಿಶ್ರಣದಲ್ಲಿ, ಕಾಲ್ಸಿಯಂ ಫೋಸ್ಫರಸ್ (ರಂಜಕ)ಗಳು ತುಂಬಾ ಇವೆ. ನಿಜಾಂಶವೆಂದರೆ ಈ ಎರಡು ಮುಖ್ಯ ಖನಿಜಗಳೇ ಕರೆಯುವ ದನಗಳ ಇಡೀ ಖನಿಜತತ್ವವನ್ನು ನಿಯಂತ್ರಿಸುತ್ತವೆ. ಇವು ಪೇಹದಲ್ಲಿ ಸಂಪೆಟಿತ ಖನಿಜಗಳಾಗಿರುತ್ತವೆ. ಇವುಗಳಲ್ಲಿ ಯಾವುದಾದರೂ ಒಂದು ಕಡಿಮೆಇದ್ದರೆ ಪ್ರಾಣಿಯ ಪೋಷಣೆಗೇ ಬಾಧಕ ಬರುತ್ತದೆ. ಇವು ಒಂದು ನಿರ್ದಿಷ್ಟ ದಾಮಾಶದಲ್ಲಿ ಎಲುಬುಗಳಲ್ಲಿರುತ್ತವೆ. ಹೆಚ್ಚು ಕಡಿಮೆ ಅದೇ ದಾಮಾಶಯದಲ್ಲಿ ಅವು ಹಾಲಿನಲ್ಲಿಯೂ ಇರುತ್ತವೆ. (1) ಈ ಖನಿಜಗಳು ಪ್ರಾಣಿಯ ಆಹಾರದಲ್ಲಿ ಸೇರಿಕೊಂಡಿರುವ ಪ್ರಮಾಣ ಮತ್ತು ದಾಮಾಶಯ, (2) ಆಹಾರದಲ್ಲಿ ಸೇರಿಕೊಂಡಿರುವ, ಡಿ-ಜೀವಸತ್ವ, ಇವು ಪ್ರಾಣಿಯ ಪೋಷಣೆಯನ್ನು ನಿಯಂತ್ರಿಸುತ್ತವೆ. ದಕ್ಷಿಣ ಹಿಂದೂಸ್ಥಾನದಲ್ಲಿ ಹುಲ್ಲುಗಾವಲುಗಳಲ್ಲಿ ಮೇಯುವಾಗ ಸೂರ್ಯನ ಬೆಳಕಿನಿಂದ ಅವು ಬೇಕಾದಷ್ಟು ಡಿ-ಜೀವಸತ್ವವನ್ನು ಸಡೆಯುತ್ತಿವೆ. ಇದಲ್ಲದೆ ಮೇಯುವ ಹುಲ್ಲುಗಾವಲುಗಳಿಂದಲೂ ಈ ಜೀವಸತ್ವ ದೊರೆಯುತ್ತದೆ.

ನೆಮ್ಮದಿಸಂಸ್ಥಾನದಲ್ಲಿ ಕರೆಯುವ ಪ್ರಾಣಿಗಳಿಗೆ ಈ ಕೆಳಗಿನಂತೆ ಖನಿಜ ವಿಶ್ರಣವನ್ನೂ ಉಪ್ಪನ್ನೂ ಕೊಡಬಹುದು.

ದಿನಕ್ಕೆ ಪ್ರಾಣಿಗೆ ಕೊಡಬೇಕಾದ ಪ್ರಮಾಣ

ಪ್ರಾಣಿ.	ಖನಿಜ ವಿಶ್ರಣ (ಔನ್ಸು.)	ಉಪ್ಪು (ಔನ್ಸು)
ಒಂದು ತಿಂಗಳಿಗಿಂತ ಕಡಮೆ ಪ್ರಾಯದ ಕರು.	—	...
1-3 ತಿಂಗಳ ಕರು.	1	0 25
4-12 ..	1	0 50
13 18 ..	1	1 00
19-24 .. ಗಡಸು	1	1,00
ಕರೆಯುವ ದನ	2	1 00
ಗರ್ಭಿಣಿ ದನ	2	1 00
ಹಾಲು ಬತ್ತಿದ ದನ	2	1 00

ಕರೆಯುವ ಹಾಲಿನ ಪ್ರಮಾಣವು ದಿನಕ್ಕೆ 20 ಪೌಂಡಿಗಿಂತ ಹೆಚ್ಚಿದ್ದರೆ ಅರ್ಧ ಔನ್ಸು ಹೆಚ್ಚಿಗೆ ಕೊಡಬಹುದು.

ಮಲಬಾರು, ಕರ್ನೂಲು, ಕಡಪ, ಉತ್ತರ ಸೇಲಂ, ನೀಲಗಿರಿ, ಮಧುರೈ ಜಿಲ್ಲೆಯ ದಿಂಡಿಗಲ್, ತೆಲೂರು, ವೆರುಯಕುಳಂ ತಾಲೂಕುಗಳು, ತಂಜಾವೂರು ಜಿಲ್ಲೆ, ಈ ಕಡೆಗಳಲ್ಲಿ ಮಣ್ಣಿನಲ್ಲಿ ಸುಣ್ಣವಾಗಲೀ ಫೋಸ್ಪರಸಾಗಲೀ ಸಾಕಷ್ಟಿಲ್ಲದಿರುವುದರಿಂದ ಇಲ್ಲಿ ಮೇಲಿನ ಪ್ರಮಾಣಗಳನ್ನು ಇನ್ನೂ ಹಿಗ್ಗಿಸಬಹುದು. ಈ ಮಿಶ್ರಣವನ್ನೂ ಉಪ್ಪನ್ನೂ ಸದಾ ಕೊಡುತ್ತಿರಬೇಕು. ಕೆಲವು ಪ್ರಾಣಿಗಳಿಗೆ ಖನಿಜ ಮಿಶ್ರಣದ ವಾಸನೆ ಹಿಡಿಯುವುದಿಲ್ಲ. ಅಂತಹ ಸಂದರ್ಭದಲ್ಲಿ ಅದನ್ನು ಹಿಂಡಿ, ತೌಡು, ಹತ್ತಿಬೀಜ, ಹೊಟ್ಟುಗಳೊಡನೆ ಮಿಶ್ರಮಾಡಿ ತಿನ್ನಿಸಬಹುದು. ಉಪ್ಪು ಪ್ರಾಣಿಯ ಸಾಮಾನ್ಯ ದೇಹಾರೋಗ್ಯವನ್ನು ಒಳ್ಳೇ ಸ್ಥಿತಿಯಲ್ಲಿರಿಸುವುದಕ್ಕೆ ಕೊಡುವುದಾಗಿದೆ. ಈ ಪದಾರ್ಥಗಳಿಗೆ ದಿನಕ್ಕೆ ಒಂದು ಪ್ರಾಣಿಗೆ ಕಾಲಾಣೆಗಿಂತ ಹೆಚ್ಚು ವೆಚ್ಚವಾಗುವುದಿಲ್ಲ.

ಖನಿಜ ಮಿಶ್ರಣವನ್ನೂ ಗೊಬ್ಬರ, ರಾಸಾಯನಿಕ ಗೊಬ್ಬರಗಳನ್ನೂ ವಿಕ್ರಯಿಸುವ ಯಾವ ಕಂಪೆನಿಯಿಂದಲೂ ಪಡೆಯಬಹುದು. ಆದರೆ ಕೊಂಡುಕೊಳ್ಳುವಾಗ ದನಕರುಗಳಿಗೆ ಆಹಾರವಾಗಿ ಕೊಡುವುದಕ್ಕೆ ಎಂದು ಸ್ಪಷ್ಟಪಡಿಸಬೇಕು. ಬೆಲೆ ಕಡಿಮೆಯಾದರೂ ಇವುಗಳ ಪರಿಣಾಮ ಅತ್ಯಧಿಕವಾದುದು. ಇವನ್ನು ಎಲ್ಲರೂ ತಮ್ಮ ತಮ್ಮ ಪ್ರಾಣಿಗಳಿಗೆ ಕೊಟ್ಟು ಅಪಾರ ಪ್ರಯೋಜನ ಪಡೆಯಬಹುದು. ಆಹಾರದ ಕೊರತೆಯು ಈಗಿನ ದಿನಗಳಲ್ಲಿ ಒಳ್ಳೆಯ ಹಾಲಿನ ಪ್ರಯೋಜನ ಎಲ್ಲರಿಗೂ ಸೊತ್ತು. ಆದುದರಿಂದ ಹಾಲಿನ ಉತ್ಪಾದನೆಯನ್ನು ಹೆಚ್ಚಿಸುವ ಯತ್ನದಿಂದ ಈಗಿನ ಆಹಾರ ಸಮಸ್ಯೆಯನ್ನು ಬಗೆಹರಿಸಲು ಅನುಕೂಲವಾಗುತ್ತದಲ್ಲದೆ, ಮನುಷ್ಯರ ಪೋಷಣ ಪ್ರಮಾಣವನ್ನು ಸಮತೂಕದಲ್ಲಿರಿಸಿದಂತೆಯೂ ಆಗುತ್ತದೆ.

ಬೀಹಾರದಲ್ಲಿ ಪ್ಲೇಗು

ಅನ್ನಾಭಾವದಿಂದ ಮರಣ

ಭಾಗಲಪೂರ, ನಾಗಚ್ಚಿ, ಭೀಘ್ಪರ ಮತ್ತು ಗೋವಾಲಪುರ ತಾಣಗೆಗಳಲ್ಲಿ ಭೇಕರ ಕ್ಷಾಮ ಒದಗಿದ್ದು ಜನರು ಸತ್ತಿರುವರೆಂದು ಕಾಂಗ್ರೆಸ್ ಕಛೇರಿಯಿಂದ ತಿಳಿದು ಬಂದಿದೆ. ಆ ಹಾರ ಧಾನ್ಯಗಳ ಲೂಟಿ ಪ್ರಕರಣವೂ ನಡೆದಿದೆ. ಕೆಲ ಭಾಗಗಳಲ್ಲಿ ಅಕ್ಕಿಯನ್ನು ೪೨ ರಿಂದ ೪೫ ರೂ. ಮಣದಂತೆ ಮಾರುತ್ತಿರುವರು.

ಪುರಂದರದಾಸರ ಕೀರ್ತನೆಗಳು

ಸಂಗೀತ, ಸಾಹಿತ್ಯ, ಶಿಲ್ಪ ಮೊದಲಾದ ಲಲಿತ ಕಲೆಗಳು ಕರ್ನಾಟಕದಲ್ಲಿ ಬಾಳಿ ಬೆಳೆದಿದ್ದು ಸುಳ್ಳಲ್ಲ. ಜೈನ, ದ್ವೈತ, ಅದ್ವೈತ, ವಿಶಿಷ್ಟಾದ್ವೈತ—ವೀರಶೈವ ಮತಗಳು ಪುಷ್ಟಿಪಡೆದು ಪ್ರಚಾರವಾದದ್ದೂ ಸರಿಯಲ್ಲ. ಧರ್ಮ—ಸಾಹಿತ್ಯಗಳನ್ನು ಅರಿತೋ ಅರಿಯದೋ ಏಕ ಕಾಲದಲ್ಲಿ ಆರಾಧನೆಮಾಡಿ ಕೃತಾರ್ಥರಾದವರ ಕುಲಕುಲದವರು ಒಬ್ಬರಲ್ಲ, ಇಬ್ಬರಲ್ಲ, ನೂರಾರು ಜನ ಕನ್ನಡದ ಚಂಪೂ ಕಾವ್ಯದ ಹೆಸರೆತ್ತಿದ ಕೂಡಲೇ ಕಣ್ಣಿಗೆ ಕಾಣುವವನು ಜೈನಮತಸ್ಥನಾದ ಆದಿಕವಿ ಪಂಪ! ಕನ್ನಡ ನುಡಿಯ ಗುಡಿಯಲ್ಲಿ ರಗಳೆಯ ಮಲ್ಲಿಕೆಯನ್ನು ಬಾರಿಸಿದವನು ವೀರಶೈವನಾದ ಹಂಪೆಯ ಹರಿಹರ! ಷಟ್ಪದಿಯ ಬಿತಗು ಬಿನ್ನಾಣಗಳನ್ನು ತೋರಿಸಿ ಬೆರಗು ಗೊಳಿಸಿದವನು ಮಾಧ್ವನಾದ ಗದುಗಿನ ನಾರಣಪ್ಪ! ಆದರೆ, ಇವರ ದಾರಿಯಲ್ಲೇ ನಡೆದು ಸಾಹಿತ್ಯ ಸ್ವಧರ್ಮಗಳೊಂದಿಗೆ ಸಂಗೀತವನ್ನೂ ಬೆರೆಸಿ ಬಾಳಿದ ಕೀರ್ತಿ, ಕೀರ್ತನಕಾರರಾದ ಪುರಂದರದಾಸರಿಗೆ ಸೇರಿದ್ದು. ಇವರ ಹೆಸರನ್ನು ಕೇಳದ ಕನ್ನಡಿಗನಿಲ್ಲ. ಇವರ ಹಾಡನ್ನು ಹಾಡದ ಹಂಭಕ್ತನಿಲ್ಲ.

ಹನ್ನೆರಡನೆಯ ಶತಮಾನದಲ್ಲಿ ವೀರಶೈವ ಮತಾನುಯಾಯಿಗಳ ಪ್ರಾಬಲ್ಯದಿಂದ ವಚನ ಸಾಹಿತ್ಯ ಕನ್ನಡಕ್ಕೆ ಒಂದು ಅಪೂರ್ವವಾದ ಕಾಣಿಕೆಯಾಗಿ ಸಿಕ್ಕಿತಷ್ಟೆ. ಅಕೇ ರೀತಿಯಲ್ಲಾಗಿ ಹದಿನಾರನೆಯ ಶತಮಾನದಲ್ಲಿ ದಾಸಕೂಟವು ಸ್ಥಾಪಿತವಾಯಿತು. ಈ ಕಾಲವೇ ವಿಜಯನಗರವು ತಲೆಯೆತ್ತಿ ಬಾಳಿದ ಕಾಲ ವ್ಯಾಪಾರಾಯರು ಹೆಸರು ವಾಸಿಯಾದ ಕಾಲ. ಇವರ ಪರವು ತಿಳಿದೇ ಪುರಂದರದಾಸರು ಇವರ ಒಡನಾಡಿಗಳೇ ಕನಕದಾಸರು. ಲಡಾಸಕೂಟ ವ್ಯಾಸಕೂಟಗಳೆಂದು ಪ್ರತ್ಯೇಕ ಸಂಗಡಗಳುಂಟಾದವು. ಈ ಕಾಲದಲ್ಲಿ ಪುರಂದರದಾಸರ ಅನುಯಾಯಿಗಳು ದಾಸಕೂಟದ ಸದಸ್ಯರೆನಿಸಿಕೊಂಡರು. ವ್ಯಾಪಾರಾಯರ ಮಾರ್ಗವನ್ನೇ ಹಿಡಿದು ಸಾಗಿದವರು ವ್ಯಾಸಕೂಟದವರು ಎನ್ನಿಸಿಕೊಂಡರು. ಇದು ಬಳಕೆಯಲ್ಲಿರುವ ಅರ್ಥ. ಅದರೆ ದಾಸಕೂಟ ಎಂಬ ಶಬ್ದವು ವ್ಯಾಸಕೂಟದವರ ಅವಹೇಳನ ನಡಿ ಎಂಬುದಾಗಿ ಶ್ರೀಮಾನ್ ಬೇಲೂರು ಕೇಶವದಾಸರು ವಿಚಾರ ಮಾಡಿದ್ದಾರೆ. ಇ ಇದು ಗಮನಾರ್ಹವಾದ ಸಂಗತಿ.

ದಾಸಕೂಟವಂತೂ ಸ್ಥಾಪಿತವಾಯಿತು. ಈ ಪಂಥದ ನೊಟ್ಟನೊದಲನೆಯವರು ಅಚಲಾನಂದ ದಾಸ ಎಂದು ಹಲವರ ಅಭಿಪ್ರಾಯ. ಈತನ ಕಾಲ ೧೯೦೦ ಶತಮಾನವೆಂದು ಹೇಳುತ್ತಾರೆ. ೬ ಆದರೆ ಈತನು ಅಷ್ಟು ಪ್ರಾಚೀನನಲ್ಲವೆಂದೂ ಪುರಂದರದಾಸರು ಸಮಕಾಲೀನನೆಂದೂ ಹೇಳುವವರುಂಟು. ೭ ಇವರ ನಿರ್ಧಾರ ಈಗ ಮುಖ್ಯವಲ್ಲ ದಾಸಪಂಥದ ಪ್ರಾಶಸ್ತ್ಯ ಪುರಂದರದಾಸರ ಅನಂತರ ಹೆಚ್ಚಾಯಿತೆಂದು ಹೇಳಲು ಯಾವ ಅಡ್ಡಿಯೂ ಇಲ್ಲ. ಅವರು ಹಾಕಿಕೊಟ್ಟ ಮಾರ್ಗ ಮೇಲು ಪಂಕ್ತಿಯಾಯಿತು; ಅವರ ನೇತೃತ್ವ ಫಲಕಾರಿಯಾಯಿತು.

ಪರಮಾತ್ಮನ ಸಾನ್ನಿಧ್ಯವನ್ನು ಸೇರಲು ಮೂರು ಮಾರ್ಗಗಳುಂಟು ೪ ಜ್ಞಾನಮಾರ್ಗವಾಗಬಹುದು; ಕರ್ಮಮಾರ್ಗವಾಗಬಹುದು; ಭಕ್ತಿಮಾರ್ಗವಾಗಬಹುದು. ಮೊದಲಿನ ಎರಡು ಮಾರ್ಗಗಳೂ ಮಹಾನುಭಾವರ ನಾಲು ಭಕ್ತಿಮಾರ್ಗವಾದರೂ ಸರ್ವ ಸಾಮಾನ್ಯರಿಗೂ ಸುಲಭವಾದುದು. ಅದಕ್ಕೆ ಶ್ರದ್ಧೆ ಬೇಕು; ಶಕ್ತಿ ಬೇಕು; ದುಡಿಯಬೇಕು. ಭಕ್ತಿ ಎನ್ನುವುದು ಸೃಷ್ಟಿಯ ಸೌಂದರ್ಯವನ್ನು ಕಂಡ ಹೃದಯಾಂತರಾಳನದಿಂದ ಉದ್ಭವಿಸಬಹುದು. ಇಲ್ಲವೇ ಪ್ರಕೃತಿಯ ಭೀಷಣ ದೃಷ್ಟಿಯನ್ನು ಕಂಡು, ಕಲಕಿದ ಚಿತ್ತದಿಂದ ಹುಟ್ಟಬಹುದು. ೯ ಅದವಾ ವಿರಕ್ತಿ ಭಾವವು ತಲೆದೋರಿ ವೈರಾಳಿಬಹುದು ಅದರ ಪ್ರಭಾವ ಎಲ್ಲರಲ್ಲೂ ಉಂಟು. ಹಲಕೆಲವರಲ್ಲಿ ಬಾಲ್ಯದಿಂದ ಬೆಳೆದು ಒದಬಹುದು. ಚಂದ್ರಹಾಸ ಪ್ರಹ್ಲಾದರೇ ಇದಕ್ಕೆ ಸಾಕ್ಷಿ. ಇನ್ನು ಕೆಲವರಲ್ಲಿ ಆತ್ಮಾತ್ಥಾಗ ಅವರ ಜೀವನದಲ್ಲಿ ಒಂದಾದ ಘಟನೆಯು ಮಾಣಾಮವಾಗಿ ಬರಬಹುದು ಇದಕ್ಕೆ ಸತ್ಯ ಪುರಂದರದಾಸರೇ ನಿದರ್ಶನ. ಸಂಕಟ ಕಾಲದಲ್ಲಿ ನೆನೆಯುವ ವೆಂಕಟರಮಣನ ಭಕ್ತರೇ ಚಿರಂತನವಾದರೇ ಅದೇ ಬದುಕಿನ ಗುರಿಯಾದರೇ, ಅತನೇ ಶರಣನಾಗುತ್ತಾನೆ. ಇಲ್ಲವೇ ದಾಸನಾಗುತ್ತಾನೆ. ಈತನು ಸೃಷ್ಟಿಯನ್ನು ತಿರಸ್ಕರಿಸುವನಿಲ್ಲ; ಸಂಸಾರಕ್ಕೆ ಹೇಸುವದಿಲ್ಲ. ಜನರ ಗುಂಪಿಗೆ ಬೆದರುವದಿಲ್ಲ. ಸರ್ವದಾ ದೇವರು, ಲೋಕ ಸಮಾಜಗಳು, ಅತನ ಕಣ್ಣ ಮುಂದೆ ಇರುತ್ತವೆ. ಅವನು ಆಡಿದ ಪ್ರತಿಯೊಂದು ನುಡಿಯೂ ದೇವರ ನಾಮವಾಗುತ್ತದೆ. ಕೈಕೊಂಡ ಪ್ರತಿಯೊಂದು ಕಾರ್ಯವೂ ಲೋಕದ ಹಾಗೂ ಸಮಾಜದ ಉದ್ಧಾರಕ್ಕಾಗಿ ಮೀಸಲಾಗುತ್ತದೆ. ಇವೇ ದಾಸಪಂಥದ ಆದರ್ಶಗಳು; ಇವೇ ಅವರ ಕೀರ್ತನೆಗಳ ಬೋಧನೆಗಳು.

ಭಕ್ತನ ಹೃದಯದಲ್ಲಿ ಜನ್ಮತಾಳಿದ ಭಕ್ತಿಯು ಶಾಂತ, ದಾಸ್ಯ, ಸಖ್ಯ, ವಾತ್ಸಲ್ಯ, ಮಧುರ, ಎಂಬ ಐದು ಭಾವಗಳಲ್ಲಿ ವ್ಯಕ್ತವಾಗಬಹುದು ಇವುಗಳನ್ನು ಒಂಬತ್ತು ರೀತಿಗಳಲ್ಲಿ ೧೦ ವ್ಯಕ್ತಪಡಿಸಲು ಸಾಧ್ಯ ದಾಸರ ವಾರ್ಗ ಅದರ ಪದಗಳನ್ನೆಲ್ಲಿ ಕಲೆ ಹಾಕಿ ವಿಭಜನೆ ಮಾಡಿ ನೋಡಿದರೆ ಅಲ್ಲಿ ಐದು ಭಾವಗಳೂ ಕಂಡುಬರುತ್ತವೆ ಇದರ ವಿಸ್ತಾರ ವರ್ಣನೆಯನ್ನು ಶ್ರೀಮಾನ್ ರಂಗನಾಥ ದಿವಾಕರರು ಮಾಡಿರುತ್ತಾರೆ. ೧೧ ನಾವು ಅದರ ಸುಳಿವನ್ನು—ಮುಖ್ಯವಾಗಿ ದಾಸ್ಯ ಮತ್ತು ವಾತ್ಸಲ್ಯ ಭಾವಗಳನ್ನು—ಪುರಂದರ ದಾಸರ ಕೃತಿಗಳಲ್ಲಿ ಹೇಗೆ ವಿದಿತವಾಗುತ್ತದೆ ಎಂಬುದನ್ನು ಮುಂದೆ ಪರಿಚಯಮಾಡಿ ಕೊಡುತ್ತೇವೆ.

ಕೀರ್ತನೆ ಪದ್ಧತಿಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳದಿರಲು ಸಾಧ್ಯವಿಲ್ಲ. ಭಕ್ತಿಯ ಆರಂಭ, ಮನನವನಿಗೆ ತಿಳಿಯಿಕೆ ಮೊದಲಾದಂದಿನಿಂದ ಎಂದು ಇಟ್ಟುಕೊಂಡರೆ, ಅಂದೇ ಕೀರ್ತನೆ ಅಥವಾ ಸ್ತೋತ್ರವೂ ಮೊದಲಾಗಿರಬೇಕು ಎಂದು ಊಹಿಸಬಹುದು. ಇದರ ಬಗ್ಗೆ ಪ್ರಸ್ತಾಪಿಸುತ್ತಾ ಶ್ರೀಮಾನ್ ಕೇಶವದಾಸರು ಐತಿಹಾಸಿಕ ಆಧಾರಗಳನ್ನು ಸೂಚಿಸಿ, ಅದು ಕ್ರಿ.ಶ ೧೨ನೆಯ ಶತಮಾನದಿಂದ ಕರ್ನಾಟಕದಲ್ಲಿ ರೂಢಿಯಲ್ಲಿತ್ತು ಎನ್ನುತ್ತಾರೆ. ಸಾರಾಣಿಕದ ಆಧಾರದ ಮೇಲೆಗೆ ಶುಶ್ರೂಚಾರ್ಯರೇ ಅದರ ಆದ್ಯ ಪ್ರವರ್ತಕರಾಗುತ್ತಾರೆ ಪುರಂದರದಾಸರಿಗೆ ಪುನರುದ್ಧಾರಕರ ಪಟ್ಟಕಟ್ಟಿದ್ದಾರೆ. ಇವರ ಅನಂತರ ಮಹಾರಾಷ್ಟ್ರರೂ, ಆಂಧ್ರರೂ, ತಮಿಳರೂ ಕೀರ್ತನೆಗಳನ್ನು ಕಟ್ಟಿ ಹಾಡಿದರು ಎಂದು ಸಿದ್ಧಾಂತ ಮಾಡಿರುತ್ತಾರೆ. ೧೨ ಕನ್ನಡನಾಡಿನಲ್ಲಿ ಕೀರ್ತನೆಗಳನ್ನು ಪ್ರಸಾರ ಮಾಡಿದವರು ದಾಸಕೂಟದವರೆಂಬುದು ನಿರ್ವಿವಾದ ವಾದ ಸಂಗತಿ ಅವರು ಪ್ರಚಾರಕ್ಕಾಗಿ ಅರಂಭವಾಯಿತೆಂದು ಹೇಳಿದರೂ ಬಾಧಕವಿಲ್ಲ. ಕೇವಲ ಭಕ್ತಿಯು ಉಚ್ಚಾರಣೆಯೆಂದರೂ ತಂತೆಯಿಲ್ಲ. ಸಾಹಿತ್ಯ—ಸಂಗೀತಗಳ ಸಂಗಮವಾಯಿತೆಂದು ಹೇಳುವುದಕ್ಕೆ ಯಾರೂ ಹಿಂಜರಿಯಬೇಕಾಗಿಲ್ಲ. ಇಂದಿಗೂ ಕೀರ್ತನೆಯೆಂದ ಕೂಡಲೆ ಸಾಮಾನ್ಯರಿಗೆ ಪುರಂದರದಾಸರ ನೆನಪಾಗುತ್ತದೆ. 'ಪುರಂದರ ವಿಠಲ' ಎಂಬ ಶಬ್ದ ಕಿವಿಗೆ ಬಿದ್ದಕೂಡಲೇ ಪಂಢರಾಪುರದ ಡೆಗೆ ಮನಸ್ಸು ಎಳೆಯುತ್ತದೆ.

146

ರಶಿಯಾದ ಯುದ್ಧ ಸಾಮಗ್ರಿ

ಪ್ರಪಂಚದಲ್ಲೇ ರಷ್ಯಾವನ್ನು ಮೀರಿಸುವವರಿಲ್ಲ

ರಶಿಯಾದಬಳಿ ೭೦೦ ಡಿವಿಜನ್ ಸೈನ್ಯವಿದೆಯೆಂದೂ, ಜಾಗತಿಕ ಯುದ್ಧ ಪ್ರಾರಂಭವಾದರೆ ತನ್ನ ಮಿತ್ರರ ಸಹಾಯದಿಂದ ಆ ಸೈನ್ಯವನ್ನು ರಣರಂಗದಲ್ಲಿ ಧುಮುಕಿಸಬಲ್ಲರೆಂದೂ ಒಬ್ಬ ಜರ್ಮನ್ ತಜ್ಞನು ಹೇಳಿದ್ದಾನೆ. ಒಂದು ಡಿವಿಜನ್ ಅಂದರೆ 15 ಸಾವಿರ ಸೈನ್ಯ ಅಂದರೆ 75 ಲಕ್ಷ ಸೈನ್ಯ ವಿದ್ದಂತಾಯಿತು. ಅಮೆರಿಕಾದ ಪ್ರತಿನಿಧಿ ಸಭೆಯ ಸೈನ್ಯ ಸಮಿತಿ ಅಧ್ಯಕ್ಷರಾದ ಕಾರ್ಲ್ ವಿನ್ಸೆನ್ಸ್‌ರು ಹೇಳುವ ಪ್ರಕಾರಕ್ಕೆ ರಷ್ಯಾದ ಸೈನ್ಯವು ಅಮೆರಿಕದ17 ರಷ್ಟಿರುವದೆಂದೂ300 ಸಬ್‌ಮರೀನ್‌ಗಳಿದ್ದು, ಅಪಾರ ವಿಮಾನದಳವಿದೆಯೆಂದೂ ಹೇಳಿದರು

ಉತ್ತರ ಕೋರಿಯಾದ ಕಮ್ಯೂನಿಸ್ಟ ದಳಗಳು ದಕ್ಷಿಣ ಕೋರಿಯಾದ ತೇಜಾನದ ಕೆಳಗೆ ನಾಲ್ಕು ಮುಖ್ಯನಗರಗಳನ್ನು ಆಕ್ರಮಿಸಿರುತ್ತಾರೆ. ಅಮೆರಿಕಾದ ಒಂದೇ ಪೂರೈಕೆ ಬಂದರಾದ ಪೂಸಾನ ಕ್ಕೂ ಗಂಡಾಂತರ ಒದಗಿದೆಯೆಂದು ಹೇಳಲಾಗಿದೆ.

ಪಾಕಿಸ್ತಾನವು-ಆಂಗ್ಲೋ-ಅಮೆರಿಕನರ ಕೈ ಗೊಂಬೆ

ಮೊಸ್ಕೋದ 'ಲಿಟರೆರಿ ಗೆಜೆಟ್' ಒಂದು ಲೇಖನ ಬರೆದು, 'ಪಾಕಿಸ್ತಾನದ ಮುಖ್ಯಮಂತ್ರಿಗಳು ಚೀನದ ಚಿಂಗಕೇ ಶೇಖರಿದ್ದಂತೆ, ದಕ್ಷಿಣ ಕೋರಿಯಾದ ಸಿಂಗಮನರೀ ಇದ್ದಂತೆ ಎಂದು ತಿಳಿಸಿದೆ ಅಮೆರಿಕಾದಿಂದ ಬಂದಮೇಲೆ ಇವರ ಚಟುವಟಿಕೆ ಹೆಚ್ಚಾಗಿದೆ. ಪಾಕಿಸ್ತಾನವನ್ನು ಆಂಗ್ಲೋ-ಅಮೆರಿಕನ್ನರಿಗೆ ವರ್ತರಲು ಇವರು ಹವಣಿಸುತ್ತಿರುವರು ಸಾಹುಕಾರರ ಸೂತ್ರಧಾರರಾಗಿರುವ ಇವರು ಹೀಗೆ ನಡುವುದು ಉಚಿತವೆನಿಸಬಹುದು ಆದರೆ ಜನತೆಯು ಇವರ ಮಾತನ್ನು ಕೇಳುವುದಿಲ್ಲವೆಂಬುದು ನಿಶ್ಚಿತವಾಗುತ್ತದೆ

ಇಂಗ್ಲೆಂಡಿನಲ್ಲಿ ವೃತ್ತ ಪತ್ರಿಕಾಗದದ ಕೊರತೆಯಾಗಿರುವ ಕಾರಣ ವೃತ್ತ ಪತ್ರಿಕೆಗಳ ಆಕಾರವು ನಾಲ್ಕು ಪುಟಗಳಿಗಿಳಿಯುವ ಸೂಚನೆಗಳಿವೆ. ಪ್ರಪಂಚದಿನ್ನಾವುದೇಶದಲ್ಲೂ ಹೀಗಾಗಿಲ್ಲ.

ಚುನಾವಣೆಗಳು -

ಮುಂಬರುವ ಚುನಾವಣೆಗಳಲ್ಲಿ ಕಮ್ಯೂನಿಸ್ಟರಿಗೆ ಪ್ರಚಾರ ಮಾಡಲು ಪೂರ್ಣಾವಕಾಶ ಕೊಡಲಾಗುವದೆಂದು ಬೊಂಬಾಯಿಯ ಗೃಹ ಮಂತ್ರಿ ಮುರಾರಜೀ ದೇಸಾಯಿಯವರು ಹೇಳಿದರು. ಆದರೆ ಅವರು ವರ್ಗವರ್ಗಗಳಲ್ಲಿ ಕಲಹ ಪ್ರಚೋದನೆ ಮಾಡಬಾರದು. ಹಿಂಸಾ ಮಾರ್ಗವನ್ನು ತ್ಯಜಿಸಬೇಕು.

ಬಳ್ಳಾರಿ ಜಿಲ್ಲೆಯಲ್ಲಿ ವಿದ್ಯುಚ್ಛಕ್ತಿ

ಉತ್ಪಾದನೆ

ಹೊಸಪೇಟೆಯ ಸಮೀಪ ತುಂಗಭದ್ರಾ ಯೋಜನೆಯ ಮೂಲಕ ವಿದ್ಯುಚ್ಛಕ್ತಿಯ ಉತ್ಪಾದನೆ ಕೈಕೊಳ್ಳಲು ಸರ್ಕಾರಕ್ಕೆ ಸುಮಾರು 7,83,00,000 ರೂ. ಖರ್ಚಾಗುವದಿದ್ದು ಇದಕ್ಕೆ ಮದ್ರಾಸ್ ಮಂತ್ರಿಮಂಡಲವು ಒಪ್ಪಿಗೆ ಕೊಟ್ಟಿತು. ಈ ಶಕ್ತಿಯಿಂದ ಬಳ್ಳಾರಿ, ಕಡಪಾ, ಅನಂತಪುರ, ಕರ್ನೂಲು ಜಿಲ್ಲೆಗಳಲ್ಲಿ ವಿದ್ಯುಚ್ಛಕ್ತಿಯ ಪೂರೈಕೆಯಾಗಲಿದೆ.

ಹಿಂದೀ ಮಹಾ ವಿದ್ಯಾಲಯ, ಬಳ್ಳಾರಿ,

[1931 ಸ್ಥಾಪಿತ. ಬಳ್ಳಾರಿ ಜಿಲ್ಲಾ ಹಿಂದೀ ಪ್ರೇಮಿಮಂಡಲದಾಶ್ರಯದಲ್ಲಿ. ರಿಜಿಸ್ಟರ್ಡ್.]

ಮದ್ರಾಸ್ ಸರ್ಕಾರದಿಂದ ಮಾನ್ಯತೆ ಇದೆ.

ಪ್ರಾರಂಭಿಕ ವರ್ಗಗಳಿಗೆ ಮಾಸಿಕ 3/- ಶುಲ್ಕ — ಉನ್ನತ ವರ್ಗಗಳಿಗೆ ಮಾಸಿಕ 5/- ಶುಲ್ಕ

ವಾರ್ಡಲಾ ಹೈಸ್ಕೂಲ್ ಕಟ್ಟಡದಲ್ಲಿ ಪ್ರಾತಃಕಾಲ-ಸಾಯಂಕಾಲ ಹಿಂದೀ ಕಾಲೇಜ್‌ದ ವರ್ಗಗಳು ನಡೆಯುತ್ತಿವೆ. ಪ್ರವೇಶಿಕ — ವಿಶಾರದ ವರ್ಗಗಳಲ್ಲದೆ ವ್ಯಾವಹಾರಿಕ ವರ್ಗಗಳಿಗೂ ಪ್ರವೇಶವಿದೆ ವರ್ಗಗಳಿಗೆ ಸಂಬಂಧಿಸಿದ ಪಾಠ್ಯ ಪುಸ್ತಕಗಳು ವಿದ್ಯಾಲಯದಲ್ಲಿ ದೊರೆಯುತ್ತವೆ. ಒಳ್ಳೆಯ ಪುಸ್ತಕಭಂಡಾರವಿದೆ. ಶ್ರೇಷ್ಠ ವಾರಪತ್ರಿಕೆ, ಮಾಸಪತ್ರಿಕೆಗಳು ಲಭ್ಯ ಇತರ ವಿವರಗಳಿಗೆ ಸ್ವಾಂಪಿಟ್ಟು ಬರೆಯಿರಿ.

ಪ್ರಿನ್ಸಿಪಾಲ್.

NAVA BHARAT BELLARY. (Reg. No. M. 4746)

ನವಭಾರತ ಬಳ್ಳಾರಿ.

(Nationalist Weekly)

ಚಂದಾದಾರರಿಗೆ ಸೂಚನೆ.

ವರ್ಷಕ್ಕೆ 6—0—0
6 ತಿಂಗಳಿಗೆ 3—0—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.

Subscription Rates.

One Year 5—0—0
Six months 3—0—0
Subscription will not be accepted for less than 6 months

31 - 7--50

To

Sri.....

.....

.....

Printed at Krishna Printing Works, Edited & Published by T R Kashinath Rao,

ಸ್ವಾತಂತ್ರ್ಯ ದಿನೋತ್ಸವ ವಿಶೇಷ ಸಂಚಿಕೆ ೧೬ ಪುಟಗಳು.

ಕಹಳೆ

—[ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರ ಪತ್ರಿಕೆ.]—

ಉತ್ತಿಷ್ಠತ! ಜಾಗ್ರತ!! ಪ್ರಾಪ್ಯವರಾನ್ನಿಬೋಧತ!!

ವರ್ಷ 13 | ಮಂಗಳವಾರ ಆಗಷ್ಟು 15th 1950 | ಸಂಪಾದಕ ಮತ್ತು ಪ್ರಕಾಶಕ
ಸಂಚಿಕೆ 27 | | ಪಿ. ಟಿ. ಕೇತವರಾವ್

ರಾಷ್ಟ್ರಪಿತ
ಮಹಾತ್ಮಗಾಂಧಿಯ
ಸಿದ್ಧಾಂತ ಕಥಾಭಾಗಗಳನ್ನು
ಅನುಕರಣೆಮಾಡುತ್ತಿರುವ
ನೆಪರೂರವರಿಗೆ
ಎಲ್ಲಿಡೆಯಲ್ಲೂ
ಯಶಸ್ಸು ದೊರೆಯಲಿ



ಡಾಕ್ಟರ್ ಹಡ್ಗೆಕರರ ಸಂದೇಶ

— ಮೊದಲು ಕರ್ತವ್ಯ - ನಂತರ ಆಸ್ತಿ -

ಆಗಸ್ಟ್ 15 ನೇ ದಿನಾಂಕವು ಭಾರತೀಯರಲ್ಲರಿಗೂ ಹೆಮ್ಮೆಯ ದಿನ. ಮೂರು ವರ್ಷಗಳ ಹಿಂದೆ ಈ ದಿನ, ಭಾರತವು ಪರಕೀಯ ಶತ್ರುಯಿಂದ ಕಿತ್ತುಗೆದು ಸ್ವತಂತ್ರ ಗಳಿಸಿತು ಆದಂದರಿಂದ ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಒರೆಯಲ್ಪಡುವ ಈ ದಿನವನ್ನು ಒಂದು ಶಬ್ದ ದಿನವೆಂದು ಸಂಭ್ರಮದಿಂದ ಆಚರಿಸಬೇಕಾಗಿತ್ತು ಆದರೆ ಸ್ವಾತಂತ್ರ್ಯ ಪಡೆದರೂ ನಮ್ಮ ಕರ್ತವ್ಯವಿನ್ನೂ ಮುಗಿದಂತಾಗಿಲ್ಲ ಅದಕ್ಕೆ ಪ್ರತಿಯಾಗಿ ನಮ್ಮ ಕರ್ತವ್ಯ ಜವಾಬ್ದಾರಿಗಳು ಮೊದಲಿಗಿಂತ ಇನ್ನಿಷ್ಟು ಹೆಚ್ಚು ಬೆಳೆದಿವೆ

ಇಂದು ನಮ್ಮಲ್ಲಿಲ್ಲದುದನ್ನು ನಾವಿಂದು ಪಡೆದಿದ್ದೇವೆ ಇಂದು ಪಡೆದುದನ್ನು ಮತ್ತೆ ಕಳೆದುಕೊಳ್ಳದಂತೆ ಅದನ್ನು ಸಂರಕ್ಷಿಸುವದು ನಮ್ಮ ಆದ್ಯ ಕರ್ತವ್ಯವಾಗಿದೆ ಆದರೆ ನಾವು ನಮ್ಮ ಕರ್ತವ್ಯವನ್ನು ಮರೆತು, ಹೊಣೆಗಾರಿಕೆಯನ್ನು ಹಾರಿಸಿಕೊಂಡು ಗಾಳಿ ಬಿಟ್ಟಾಗ ರವಾನೆ ಮತ್ತು ಆ ನಿಧಾನ ರನ ಸಾಮರ್ಥ್ಯವನ್ನು ಕಳೆದುಕೊಳ್ಳುವ ಮನೋಭಾವವು ಳ್ಳವರಾಗಿದ್ದೇವೆ ಇದೇನೇ ನಮ್ಮ ದೇಶಾಭಿಮಾನ? ಇದೇನೇ ನಮ್ಮ ಕರ್ತವ್ಯತತ್ಪರತೆ? ಇನ್ನೂ ನಾವು ಹೋರಾಟದ ತುದಿಮುಟ್ಟುವಿಂವಾಗ, ಹೊರಗೆ ಹೋದ ತಳ್ಳವಿನ್ನು ನಮ್ಮ ಅಂಗಣದಲ್ಲಿರುವಾಗ ನಾವು ಈ ರೀತಿಯಾಗಿ ನಮ್ಮ ಆಚಾರ ವಿಚಾರಗಳನ್ನು ಸಂಕುಚಿತ ಮನೋವೃತ್ತಿಯಿಂದ ಸಾಗಿಸಿದರೆ ಆದರ ಪರಿಣಾಮವು ಭೀಕರವಾದ ಅನಾಹುತದಲ್ಲಿ ಕೊನೆಗೊಳ್ಳುವದರಲ್ಲಿ ಸಂಶಯವಿಲ್ಲ

ಆದುದರಿಂದ ಮೊದಲು ನಾವು ಕಟಿಬದ್ಧರಾಗಿ ನಮ್ಮ ಕರ್ತವ್ಯವನ್ನು ನಿರ್ವಹಿಸಿಬಿಟ್ಟಾಗ ಗಳಿಸಿದ ಸ್ವತಂತ್ರ್ಯವನ್ನು ಕಾಪಾಡಿಕೊಳ್ಳುವ ದೃಢನಿರ್ಧಾರವನ್ನೂ ಮತ್ತು ಆ ನಿರ್ಧಾರವನ್ನು ಕಾರ್ಯರೂಪಕ್ಕಿಳಿಸುವದಕ್ಕಾಗಿ ಬೇಕಾಗುವ ಚಾರಿತ್ರ್ಯ, ಶೀಲ, ಬಲ, ಶಿಸ್ತು, ಸಂಘಟನೆಗಳನ್ನು ಬೆಳೆಸಿಕೊಳ್ಳುವಾ ದೇತವಲ್ಲಿ ನಮ್ಮೈಕ್ಯಮಂತ್ರದಕೂಡಲೆ ಉಜ್ವಲ ಸಮಾರಂಭಗಳನ್ನು ಬೇಕಾದಷ್ಟಾಗಿ ಆಚರಿಸುವಾ ಆದರೆ ಅಲ್ಲಿಯವರೆಗೆ ಮಾತ್ರ ಜಾಗ್ರತೆ

ಜಯ ಹಿಂದ.

ಪರಮಾತ್ಮ ಪ್ರೆಸ್, ಬಳ್ಳಾರಿ

ಉತ್ತಮ ಫಲಹಾರ ! ಭೋಜನ !! ವಸತಿಗೃಹ !!!

ರುಚಿ — ಶುಚಿ — ಸೇವೆ.

ನಮ್ಮ ಧ್ಯೇಯ

ಸ್ವೇಷನ್ನಿಗೆ ಸವಿಾಪ —— ವ್ಯಾಪಾರೀ ಕೇಂದ್ರ

AMBA BHAVAN

&

The City Lodge — Meals Hotel.

ಅಂಬಾ ಭವನ - ದಿ ಸಿಟಿ ಲಾಡ್ಜ್ - ಊಟದ ಹೋಟೆಲ್

— ಟೇಪಾರ್ಟಿಗಳ ಏರ್ಪಾಟಿನಲ್ಲಿ ಹೆಸರುವಾಸಿ. —

ಸರ್ಕಾರಿ ನಿಯಮಗಳಿಗೂಳಪಟ್ಟು ಭೋಜನದ ವ್ಯವಸ್ಥೆ ಕೈಗೊಳ್ಳುವೆವು.

ಕೋಟೆ ಶ್ರೀನಿವಾಸಾಚಾರ್ ಅಂಡ್ ಸನ್ಸ್,

ಜನರಲ್ ಮರ್ಚಂಟ್ಸ್ ತೇರು ಬಜಾರ್,

Wholesale & Retail — ಬಳ್ಳಾರಿ — ಪಟ್ಟಾ ಹುತ್ತು ಚಿಲ್ಲರೆ

ನಮ್ಮಲ್ಲಿ ಶ್ರೇಷ್ಠವಾದ ಪೀಟಿ ಕಾಫಿ ಬೀಜ, ಶಾಮಲಕೋಟೆ - ತುದ್ದ ಎಳ್ಳೆಣ್ಣೆ ಮತ್ತು
ಎಲ್ಲಾ ತರದ ಸ್ವೇಷನರಿ ಸಾಮಾನುಗಳು ನ್ಯಾಯವಾದ ಮತ್ತು
ಸರಿಯಾದ ಬೆಲೆಗೆ ದೊರೆಯುತ್ತವೆ. ಇಂದೇ ಪರೀಕ್ಷಿಸಿರಿ.

Koti Srinivasachar & Sons,

General Merchants Car Street, BELLARY

— ಕೆಮ್ಮಬೇಡ —

ಕೆಮ್ಮಿದರೆ

ಕಾಶ್ಮೀರು ಅರುಕ್

(ಮನೆಯ ವೈದ್ಯ)

ನುರೆಯಬೇಡಿರಿ

ಮಳೆಗಾಲದಲ್ಲಿ ನಿಮ್ಮ ಗೆಬರತಕ್ಕ
ನೆಗಡಿ, ಕೆಮ್ಮು, ವುಬ್ಬಸ, ಶೀತ,
ಭೇದಿ, ಶೀತ ಜ್ವರ, ಮಲೇರಿಯಾ
ಮತ್ತು ಎಲ್ಲಾ ನೋವುಗಳಿಗೂ
ದಿವ್ಯಾಮೃತವಾದಂಥಾ

ಕಾಶ್ಮೀರು ಅರುಕ್

[ಮನೆಯ ವೈದ್ಯ]

ಇದನ್ನು ಉಪಯೋಗಿಸಿ ನಿವಾರಣೆ ಮಾಡಿಕೊಳ್ಳಿರಿ

ಎಲ್ಲಾಷಾಪುಗಳಲ್ಲಿ ದೊರೆಯುತ್ತೆ

ಬಳ್ಳಾರಿ ಪ್ರಭಾತದಲ್ಲಿ

[ಈ ವಾರದಿಂದ]

"ಶಬ್ನಮ್" ವಾರ್ಷಿಕ ಕಥಾಸಾರ

1942ರಲ್ಲಿ ಜಪಾನೀಯರು ಬರ್ಮಾದೇಶವನ್ನು ಆಕ್ರಮಿಸುತ್ತಿದ್ದಾಗ ಅಲ್ಲಿನ ಭಾರತೀಯರು ಶರಣಾರ್ಥಿಗಳಾಗಿ ಬಂದೂಸ್ತಾನಕ್ಕೆ ಬರಹತ್ತಿದರು. ಇವರಲ್ಲಿ ಶಾಂತಿ ಎಂಬ ಧನೀ ವ್ಯಾಪಾರಿಯ ಮಗಳೊಬ್ಬಳು ತನ್ನ ನೀತಿಪ್ರತ್ಯೇಕ್ಷಣೆಗಾಗಿ ಪುರುಷ ವೇಷವನ್ನು ಧರಿಸಿ ಬರುತ್ತಿದ್ದಳು. ಪ್ರಯಾಣಕಾಲದಲ್ಲಿ ಒಯ್ಯಾರಿಕೆಯಿಂದ ಬಳಲುತ್ತಿದ್ದ ತನ್ನ ವೃದ್ಧ ಪಿತನಿಗಾಗಿ ನೀರನ್ನು ತರಲು ಇನ್ನೊಂದು ಪ್ರಯಾಣೀಕರ ಗುಂಪಿನಬಳಿ ಹೋದಾಗ ಯಾರೂ ನೀರುಕೊಡುವ ಉದಾರತೆ ತೋರಿಸಲಿಲ್ಲ.

ಅವರ ಗುಂಪಿನಲ್ಲಿದ್ದ ಮನೋಜನೆಂಬ ಒಬ್ಬ ಯುವಕನು ಆಕೆಗೆ ಸಹಾಯಮಾಡಲು ಬಂದನು. ಪ್ರಯಾಣಕಾಲದಲ್ಲಿ ತನುಷ, ನಿನೋದ, ಹಾಸ್ಯಗಳಲ್ಲಿ ಕಳೆದು ಮನೋಜನಿಗೆ ಪುರುಷ ವೇಷದಲ್ಲಿರುವವಳು ಸ್ತ್ರೀ ಯೆಂಬುದು ಗೊತ್ತಾಯಿತು. ಕ್ರಮೇಣ ವಿಶ್ವತ್ವವು ಪ್ರೇಮದಲ್ಲಿ ಪರಿಣತವಾಯಿತು.

ಬಂದು ದಿನ ಶಾಂತಳ ತಂದೆಗೆ ಕಾರಿನಲ್ಲಿ ಹೆಬ್ಬುತಗಲಿ ಮುಂದಕ್ಕೆ ಹೋಗಲಾರದ ಪರಿಸ್ಥಿತಿ ಬಂದಕಾರಣ ಮನೋಜನು ಒಬ್ಬ ಜಿಪ್ಸೀ ಹುಡುಗಿಯ ಗಾಡಿಯನ್ನು ಬಾಡಿಗೆ ಮಾಡಿ ನಡೆಸಲು ಹತ್ತಿದನು. ಮುಖವಾ ಎಂಬ ಜಿಪ್ಸೀ ಹುಡುಗಿಯು ಈ ಸುಂದರ ಯುವಕನನ್ನು ನೋಡಿ ನೋಡಿ ಹಿಗ್ಗಳಾಗಿ ಅವನಿಂದ ಅಗಲಲಾರದ ಪರಿಸ್ಥಿತಿಗೆ ಬಂದಳು

ಇತ್ತ ಶಾಂತಿಯು ಕಾದು ಕಾದು ಮನೋಜನ ಪತ್ತೆ ಹಚ್ಚಲು ಕತ್ತಿರ ಸಂಸ್ಥಾನದ ರಾಜಕುಮಾರ 'ಬರುವ' ಎಂಬಾತನನ್ನು ಪ್ರಾರ್ಥಿಸಿದಳು. 'ಬರುವಾ' ರಾಜಕುಮಾರನು ಶಾಂತಿ ಮತ್ತು ಆಕೆಯ ತಂದೆಯನ್ನು ತನ್ನ ಪುಷ್ಪಕವಿಮಾನದಲ್ಲಿ ಸುಖವಾಗಿಟ್ಟನು. ಆ ರಾಜಕುಮಾರನು ಶಾಂತಿಯ ದೌರ್ಬಲ್ಯದಿಂದ ನೋಡಿದಾಗ ಅವಳನ್ನು ಸ್ವಯಂವರವಾಗಿದೆಲ್ಲ ಯೂರಾಗಲೂ ಯತ್ನಿಸತ್ತಿದ್ದನು. ಒಂದು ದಿನ ಶಾಂತಿಯು ಸಂತೋಷದಿಂದಿರುವಾಗ ರಾಜಕುಮಾರನು ಒಂದು ಆಟ ಏರ್ಪಾಡಿಸಿದನು.

ಸೈತ್ಯ ಮಾಡಿ ನವರು ಮನೋಜ ಮತ್ತು ಜಿಪ್ಸೀ ಹುಡುಗಿ ಈ ನಿಜತ್ವ ಜಿಪ್ಸೀ ವೇಷದಲ್ಲಿ ಶಾಂತಿಯು ಮನೋಜನನ್ನು ಗುರ್ತಿಸಲಿಲ್ಲ. ಆದರೆ ಮನೋಜನು ಶಾಂತಿಯನ್ನು ಗುರ್ತಿಸಿ ಬಿಟ್ಟನು ಅರಮನೆಯ ಪ್ರೇಕ್ಷಕರಿಗೆ ಅನಪಿಗೆ ಕಾಣಿಸಲಿಲ್ಲ ಅವನನ್ನು ಮುತ್ತಿತು ರಾಜಕುಮಾರನನ್ನು ಶಾಂತಿಯು ಸ್ವೀಕರಿಸುತ್ತಿರಬಹುದೆಂದು ಮನೋಜನು ತಿಳಿದನು.

ಘಟನೆಗಳಿಂದ ತಪ್ಪಭಿಪ್ರಾಯದ ಮೋಹಗಳು ಬೆಳೆದವು ಶಾಂತಿ ಮತ್ತು ರಾಜಕುಮಾರನ ವ್ಯವಹಾರಗಳಿಂದ ಗೊಂದಲವಾದಂತಾಯಿತು

ಮನೋಜ-ಬರುವ. ಶಾಂತಿ ಈ ಪ್ರೇಮಿಗಳ ಸಮಸ್ಯೆಯಾವುದಂತಿ ಪರಿಣಾಮವಾಯಿತು? ಶಾಂತಿಯು ಪ್ರೇಮವು ಯಾರಿಗೆ ಲಭ್ಯವಾಯಿತು. ಈ ಆಕರ್ಷಕ ಪೂರ್ಣ ಕಥೆಯನ್ನು ತಿರಿಯುವೇಲೆ ನೋಡಿರಿ.

ಫ್ರಿಪ್ರತಾ ಮಂಡಲದಲ್ಲಿ ಕಷ್ಯಾದ ಪ್ರತಿನಿಧಿ ಜಾಕಬ್ ಮಾಲಿಕ್‌ರನ್ನು ಸ್ಥಾನಭ್ರಷ್ಟ ಮಾಡಲು ...ಯಾ— ಆಗಬ್ಬದ ಉಳಿದ ದಿನಗಳಲ್ಲಿ ಸಭೆ ಸೇರದಂತೆ ಮಾಡಲು ಅಮೆರಿಕಾದ ಪ್ರೇರೇಪಣೆಯಿಂದ ಉಳಿದ ರಾಷ್ಟ್ರಗಳು ಯತ್ನಿಸುತ್ತಿವೆ

ಯುದ್ಧ ಕೋಲಾಹಲ.

ಕೊರಿಯಾ—ದಕ್ಷಿಣಕೊರಿಯಾದಲ್ಲಿ ಅಮೆರಿಕನರು ಸಾಹಸ ಮಾಡುತ್ತಿರುವಂತೆ ಕಾಣುತ್ತದೆ. ಚೀಜು ಪ್ರದೇಶದಲ್ಲಿ ಯುದ್ಧಕ್ರಿಯಾಗಿ ಮುನ್ನುಗ್ಗುತ್ತಿರುವಂತೆ ಪ್ರಕಟವಾಗಿದೆ. ದಕ್ಷಿಣ ಕೊರಿಯಾದ ಮೂರನೆಯ ರಾಜಧಾನಿ ಟೇಗುವಾದ ಪತನವಾಯಿತೆಂಬ ವಾರ್ತೆ ಬಂದಿದೆ. ಅಮೆರಿಕನರು ಕೊರಿಯಾದ ಪಟ್ಟಣ ಹಳ್ಳಿಗಳನ್ನು ಬಾಂಬುಗಳಿಂದ ನಾಶನಮಾಡುತ್ತಿರುವರು

ಟಿಬೆಟ್ ಕಮ್ಯುನಿಸ್ಟ್ ಚೀನದ ಕೆಂಪು ಸೈನ್ಯಗಳು ಟಿಬೆಟ್‌ದಲ್ಲಿ ಮುನ್ನುಗ್ಗುತ್ತಿರುವವೆಂದು ಅನಧಿಕೃತ ಪ್ರಕಟಣೆಗಳಿಂದ ಗೊತ್ತಾಗಿದೆ

ಬಳ್ಳಾರಿ ವರ್ತಕರಿಗೆ ಷಾಪ್ ಆಕ್ಟಿನ ಕೆಳಗೆ ದಂಡ

ಅಸಿಸ್ಟೆಂಟು ಇನ್‌ಸ್ಪೆಕ್ಟರ್ ಆಫ್ ಲೇಬರ್ ಶ್ರೀ. ರಾಮಬೊಮ್ಮಪ್ಪಯ್ಯನವರು ಹೀಗೆ ತಿಳಿಸುತ್ತಾರೆ:—

ನಿಯಮಿತ ರಿಜಿಸ್ಟರುಗಳಲ್ಲಿ ಪ್ರತಿನಿತ್ಯ ಬರೆಯಬೇಕಾದುದನ್ನು ಬರೆಯದೆ, ಲೇಬರ್ ಇನ್‌ಸ್ಪೆಕ್ಟರು ಬಂದಾಗ ವಿಸಿಟರ್ಸ್ ಬುಕ್ ಕೂಡ ಕೊಡದಿದ್ದುದರಿಂದ ಈ ಕೆಳಗಿನ ವರ್ತಕರನ್ನು ಸ್ಪೇಷನರಿ ಸಬ್‌ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಷಾಪ್ ಆಕ್ಟಿನಕೆಳಗೆ ವಿಚಾರಣೆಗೊಳಪಡಿಸಲಾಯಿತು. ಅವರಿಗೆ ಈ ಪ್ರಕಾರ ದಂಡ ವಿಧಿಸಲಾಗಿದೆ.

1) ಡಿ. ಮುರಿಬಸಪ್ಪ ಎ. ಮುರಿಪ್ಪ ಸರಾಫ್ 30 ರೂ.
2) ಪವಾಡಪಟ್ಟಿ ಮಲ್ಲಾಜಪ್ಪ ದಲಾಳಿ ಮರ್ಚೆಂಟ್ 10ರೂ
3) ಭಕ್ಕಾವರಮಲ್, ಹಿತ್ತಾಳಿ ಅಲ್ಯೂಮಿನಿಯಂ ವರ್ತಕರು 10ರೂ
4) ಪಟ್ಟಣಶೆಟ್ಟಿ ನೀರಂಣ 10 ರೂ.

ಮನೆಯಿಲ್ಲದವರಿಗೆ ಮನೆ ಕಟ್ಟಲು ಸರ್ಕಾರದಿಂದ ಸಾಲ

ಭಾರತದ ಪ್ರತಿಯೊಂದು ಪ್ರಜೆಗೂ ವಿದ್ಯಾಭ್ಯಾಸದ ಮೂಲಕ ಸ್ವಾತಂತ್ರ್ಯವನ್ನು ಉಪಯೋಗಿಸುವ ಶಕ್ತಿಯನ್ನು ಕೊಡಿಸಿ ಅವರ ಜೀವನವನ್ನು ಸುಖಮಯವಾಗಿ ಮಾಡಿಸಲು ಪ್ರಯತ್ನಿಸಿದ ಪೆಟ್ಟಿಗೆ ಅಲ್ಲಿ ದೂರ ಪ್ರದೇಶಗಳಿಗೆ ಕಳಿಸುವ ಅವಶ್ಯಕತೆಯಿಲ್ಲದೆ, ಭಾರತ ಪ್ರಭುತ್ವವು ನಿಮ್ಮ ವಿದ್ಯಾಭ್ಯಾಸವನ್ನು ಪೂರೈಸಲಿಕ್ಕಾಗಿ ಒಂದು ಅನೂಹ್ಯ ಸಹಾಯವನ್ನು ಮಾಡಿದೆ.

ಹೀಗೆ ಸಾಧಾರಣವಾಗಿ ಹಣ್ಣುಗಳಿಗೆ ತೀವ್ರವಾದ ಕಷ್ಟವಿಲ್ಲದೆ ಸಾರಿಗೆಯ ಕಾರ್ಯವಾಗಬೇಕೆಂಬ ಮಹದುದ್ದೇಶದಿಂದ ಸರಕಾರವು ಸ್ಥಾಪನೆಮಾಡಿರುವ ಸಂಸ್ಥೆಯಲ್ಲಿ ಕೂಡಿದ ಸಂಸ್ಥಾಪಕರ ಸಲಹಾ ಸಮಿತಿಯು ಬೆಳಗಾವಿಯಲ್ಲಿ ಜರ್ಮನಿಯಲ್ಲಿ ಕೂಡಿದ್ದಾಗ ಈ ಕೆಳಗಿನ ಶಿಫಾರಸುಗಳನ್ನು ಮಾಡಿತು.

ಕಾಶ್ಮೀರದ ತೋಟಗಳಲ್ಲಿಯು ಕೆಲವು ಪೂರ್ವಜಾತಿಯ ಉತ್ತಮ ಹಣ್ಣುಗಳನ್ನು ಹಾಗು ಸಂಬಂಧಿಸಿದ ವಿದ್ಯಾಸಂಸ್ಥೆಗಳಲ್ಲಿ ಸಂಶೋಧನೆಗಳನ್ನು ಸರಕಾರವು ಮಾಡಿಸುವುದಲ್ಲದೆ ಪಡೆಗಳಲ್ಲಿ ತೋಟ ಕೆಲಸಗಳಿಗೆ ವ್ಯವಸ್ಥೆಮಾಡಿ, ಪಂಜಾಬಿಗೆ ಕಳಿಸಬಹುದು ಮಿಲಿಟರಿ ಕೆಲಸ ಗಳಿಸಲು ಶಕ್ತವಾದ ಇನ್ನೊಂದು ಉಪಯೋಗವಿದೆ. ಅಲ್ಲಿಂದ ಈ ದಕ್ಷಿಣಪಥಕ್ಕೆ ಬಾಸು ಪ್ರಯತ್ನಗಳಿಂದ ಅಭಿವೃದ್ಧಿ ಹೊಂದುತ್ತಿರುವ ಸಾಗರ-ಫಲದ ಉತ್ಪತ್ತಿ ದಕ್ಷಿಣಭಾರತದ ಕರಾವಳಿ ಪ್ರದೇಶಗಳಲ್ಲಿಯು ನಮ್ಮ ದೇಶದ ಇತರ ಭಾಗಗಳಲ್ಲಿಯು ವಿಪುಲವಾಗಿ ಬೆಳೆಯುತ್ತಿದೆ. ಅಮೆರಿಕೆಯ ಜನರು ಅವನ್ನು ಒಳಗೊಳ್ಳುತ್ತಾರೆ. ಪೆಸ್ಟಿಜೈಡ್ ಸಾಧನದ ಪಿತೆ ಸನ್ಯಪಟ್ಟಿ ಮಾಡಿ ಅವನ್ನು ಅಮೇರಿಕೆಗೆ ಕಳಿಸಲು ಪಡೆಗಳಲ್ಲಿ ಹಾಗು ಯೋಗ್ಯ ದಕ್ಷಿಣದಿಂದ ಅವನ್ನು ಅಲ್ಲಿ ಪೂರೈಸಬಹುದು.

ಉತ್ತಮವಾದ ಹಣ್ಣುಗಳು ಹಾಗು ಜಿಂಗಿಳನ್ನು ಪರದೇಶಗಳಿಗೆ ಕಳಿಸಲು ಅಲ್ಲಿ ಯೋಗ್ಯರಿಂದ ಪ್ರಯತ್ನವನ್ನು ಸಾಧ್ಯವಾಗಬೇಕಾದರೆ ಅಭಿವೃದ್ಧಿಗಳ ಸಂಗ್ರಹಮಾಡುವ ಪದ್ಧತಿಯಲ್ಲಿ ಸುಧಾರಣೆ, ತಾಸ್ತ್ರೀಯವಾದ ಪ್ಯಾಕಿಂಗ್ ಹಾಗು ತೀಕ್ಷ್ಣಕಾರಕಕಷಾಯಿನಲ್ಲಿ ಸಾರಿಗೆಇವು ಗಳ ಅವಶ್ಯಕತೆ ಇದೆ ಇಷ್ಟೇ ಅಲ್ಲದೆ ಈ ಕಾರ್ಯಕ್ಕೆ ಹಚ್ಚು ಯೋಗ್ಯವಾದ ವ್ಯಾಪಾರಿ ಸಂಘಗಳೂ ಬೇಕು

In the Court of the Dt. Munsif Hospet

O P 151-50

Petitioners—

(1) Kandri Lakshmidevamma

(2) ,, Lakshminarayan Setty

(3) ,, Chikkahavala Setty

Minor by N. F. B Lakshmidevamma

Respondents—

(1) B Kamanna Setty

(2) B S Hanmanna Setty

To All men concerned.

The petitioners have filed an application for granting them a Succession Certificate under I S Act to enable them to collect Rs 1497-13-0 annuity due under policy No 158619 of late B Venkobanna from The Empire of India Assurance Co. Limited Bombay It is posted to 17 8-1950 All those who have any objection may appear and submit their objections on that day at 11 A. M.

S Chakrapani Achar

Pleader for Petitioners.

ಹೊಸಪೇಟೆಯ ಜಿಲ್ಲಾ ಮುನ್ಸೀಫರ ಕೋರ್ಟಿನಲ್ಲಿ

ಒ ಪಿ 18 [illegible]

ಅರ್ಜಿದಾರರು—

1] ಬಂಡ್ರಿಲಕ್ಷ್ಮಿದೇವಮ್ಮ

2] ,, ಲಕ್ಷ್ಮಿನಾರಾಯಣಶೆಟ್ಟಿ

3] ,, ಭಕ್ತವತ್ಸಲಶೆಟ್ಟಿ

ಮೈನರು

ಬಿ. ಲಕ್ಷ್ಮಿದೇವಮ್ಮ

ಪ್ರತಿವಾದಿಗಳು—

1] ಬಿ. ಕಾಮಣ್ಣಶೆಟ್ಟಿ

2] ಬಿ ಹನುಮಣ್ಣಶೆಟ್ಟಿ

ಸಂಬಂಧಿಸಿದ ಎಲ್ಲರಿಗೂ ತಿಳಿಸುವುದೇನೆಂದರೆ—

ಬೊಂಬಾಯಿಯ ಎಂಪೈರ್ ಆಫ್ ಇಂಡಿಯಾ ಲೈಫ್ ಅಶೂರೆನ್ಸು ಕಂಪನಿ ಲಿಮಿಟೆಡ್‌ನ ಪಾಲಿಸಿ ನಂಬರು 158649ನ್ನು ಹೊಂದಿದ ದಿವಂಗತ ಬಿ. ವೆಂಕೋಬಣ್ಣನವರಿಗೆ ಸದರಿ ಪಾಲಿಸಿ ಸಂಬಂಧ ಒದಗಬೇಕಾದ ಮೊತ್ತ ರೂ1497-13-0 ಗಳನ್ನು ಐ ಎಸ್. ಆಕ್ಟಿನ ಪ್ರಕಾರ ಕೈ ವಾರಸುಪತ್ರ ಹೊಂದಿ ಪಡೆಯಲು ಅರ್ಜಿದಾರರು ಅರ್ಜಿ ಮಾಡಿದ್ದಾರೆ. ಸದರಿ ಅರ್ಜಿ — ಕೋರ್ಟಿನಲ್ಲಿ 17—8—50 ಕ್ಕೆ ಮುಂಚೆ ಯಾರಿಗಾದರೂ ಆಕ್ಷೇಪಣೆ ಇರುವಲ್ಲಿ ಆ ದಿನ ಪೂರ್ವಾಹ್ನ 11 ಗಂಟೆಗೆ ಹಾಜರಾಗಿ ತಮ್ಮ ಆಕ್ಷೇಪಣೆಗಳನ್ನು ತಿಳಿಸಬೇಕು.

ಯ ಸ್ ಚಕ್ರಪಾಣಿ ಆಚಾರ್,

ಅರ್ಜಿದಾರರ ವಕೀಲರು,

In the court of the Dist. Munsif Hospet.

O S 99149 I A 359149

petitioner—

perumal Pakkavaram

Respondent-

The India General Construction Corporation Ltd (*Represented* by its Managing Engineer 33 Komara park East Extension Bangalore)

The transferee of the decree one B. Viswanath Singh has *applied for recognising him as the transferee decree holder It is posted to* 11-8-50 *In Case the respondent has any objection he may do so on that date else it will proceed exparte.*

M Ranganatha Char,

pleader for Transferee Decree Holder

ಜಿಲ್ಲಾ ಮುನ್ಸೀಫ್ ಕೋರ್ಟ್

ಹೊಸಪೇಟೆಯಲ್ಲಿ

O.S. 99149 I.A. 359149

ಅರ್ಜಿದಾರ- ಪೆರುಮಾಳ್‌ರಕ್ಕವರಂ

ಪ್ರತಿವಾದಿ — ದಿ ಇಂಡಿಯಾ ಜನರಲ್ ಕನ್ಸ್‌ಟ್ರಕ್ಷನ್ ಕಾರ್ಪೋರೇಶನ್ ಲಿಮಿಟೆಡ್ - ಪ್ರತಿನಿಧಿ ಮ್ಯಾನೇಜಿಂಗ್ ಇಂಜನಿಯರ್ 33 ಕೊಮಾರಪಾರ್ಕ್ ಈಸ್ಟ್ ಎಕ್ಸ್ ಟೆನ್ಷನ್ ಬೆಂಗಳೂರು

ಮೇಲಿನ ನಂಬರುಗಳಲ್ಲಿ ಡಿಕ್ರಿಹೊಂದಿದ್ದವನ್ನು ತಮ್ಮ ಹೆಸರಿಗೆ ಸರಿಪಡಿಸಿಕೊಡಬೇಕೆಂದು ಶ್ರೀ ಬಿ ವಿಶ್ವನಾಥಸಿಂಗರು ತಮ್ಮನ್ನು ಟ್ರಾನ್ಸ್‌ಫರೀ ಡಿಕ್ರಿ ಹೋಲ್ಡರ್‌ರಾಗಿ ಮಾನ್ಯಮಾಡಲು ಅರ್ಜಿಯಿಟ್ಟಿದ್ದು ಆದು 11—8—50ಕ್ಕೆ ವಾಯ್ದೆಹಾಕಲಾಗಿದೆ ಪ್ರತಿವಾದಿಗೇನಾದರು ಆಕ್ಷೇಪಣೆ ಇದ್ದಲ್ಲಿ ಆದಿನ ಹಾಜರಾಗಿ ತಿಳಿಸಬೇಕು. ಇಲ್ಲವಾದರೆ ಏಕಪಕ್ಷೀಯವಾಗಿ ತೀರ್ಮಾನವಾಗುವುದು.

ಎಂ. ರಂಗನಾಥಾಚಾರ್,

ವಕೀಲರು

ಜಾಗತಿಕ ಆಹಾರರಂಗ ಅವಲೋಕನ

—[ ]—

1950-'51ನೇ ವರ್ಷದ ಜಾಗತಿಕ ಆಹಾರ ಹುಟ್ಟುವಳಿ ಅದರ ಹಿಂದಿನ ವರ್ಷಕ್ಕಿಂತ ತುಸು ಕಡಿಮೆಯಾಗುವದೆಂದು ಅಂದೋಳಿಕೆಯು ಒಕ್ಕೂಟದ ಖಾತೆಯಾನಸೆಂಬ ಜಾಗತಿಕ ತಜ್ಞರಾರ ಪ್ರತಿಯು ಸಮಿಕ್ಷಣೆಯಿಂದ ಕಂಡುಬಂದಿದೆ.

(೨)

1941ರಲ್ಲಿ ಜಗತ್ತಿನ ಆಹಾರ ಪರಿಸ್ಥಿತಿಯಲ್ಲಿ ಸರ್ವ ಸಾಧಾರಣವಾದ ಸುಧಾರಣೆಯಾಗುತ್ತ ಸಡಮಿತು ಹಾಗು ಕೊರತೆಯು ಪ್ರದೇಶಗಳಲ್ಲಿ ಆಹಾರ ಬಳಕೆಯು ಪ್ರಮಾಣವು ಪ್ರಪಂಚದ ವರ್ಷಗಳಲ್ಲಿಲ್ಲ ಅತಿ ಹೆಚ್ಚಿನ ಪ್ರಮಾಣದಲ್ಲಿತ್ತು ಎಂದು ಅಂದೋಳಿಕೆಯು ಒಕ್ಕೂಟದ ಖಾತೆಯವರು ಕೈಕೊಂಡ ಸಮಿಕ್ಷಣೆಯಿಂದ ತಿಳಿದುಬರುತ್ತದೆ

1941-'51ನೇ ವರ್ಷ ಜಗತ್ತಿನ ಸಹುಟ್ಟುವಳಿ ಅದರ ಹಿಂದಿನ ಹತ್ತು ವರ್ಷಕ್ಕಿಂತ ತೀರ ಕಡಿಮೆಯಾಗಿ ಬಹುದೆಂದೂ ಆದರೆ ಈ ಕೊರತೆಯು 1948-'49ನೇ ವರ್ಷ ಹೆಚ್ಚಾಗಿ ಉಳಿದ ಆಹಾರೋತ್ಪನ್ನದಿಂದ ಸಹಜವಾಗಿ ತುಂಬಿಬರುವದೆಂದೂ ಜಾಗತಿಕ ಆಹಾರ ಪರಿಸ್ಥಿತಿಯು ವರ್ಷಕ್ಕನವರಿಯಲ್ಲಿ ಹೇಳಲಾಗಿದೆ

ಜಗತ್ತಿನ ಆಹಾರ ರಂಗದಲ್ಲಿ 1941ನೇ ವರ್ಷದಲ್ಲಿ ಎದ್ದು ಕಾಣುವ ಸಮಸ್ಯೆಯ ಎಂದರೆ ಯುರೋಪಿನ ಆಹಾರವನ್ನು ತಿಯಲ್ಲಿನ ಸುಧಾರಣೆ. ಅಲ್ಲಿ ಕೇವಲ ಬಡಿಟಿಯಿಂದನ್ನುಳಿದು ಇತರ ಎಲ್ಲ ಸಾಲಿಲಸಾಮಗ್ರಿಗಳ ಉತ್ಪಾದನೆ 1913ಸ್ಥಾತಕೆಚ್ಚಿವೆ. ಈ ವರ್ಷದ ಸಮಾತಾವಾದಿ ಪರಿಸ್ಥಿತಿಗಳು ಅನುಕೂಲವಿದ್ದುದರಿಂದ ಆಹಾರದಲ್ಲಿ ಹೆಚ್ಚಿನ ಸಮತೋಲ ಪುಟಿಯುವ ಭರವಸೆಯಿದೆಯೆಂದೂ ಆ ವರದಿಯಲ್ಲಿ ಅಭಿಪ್ರಾಯಪಟ್ಟಿದೆ.

ವರದಿಯಲ್ಲಿ ಒಟ್ಟು ಪರಿಸ್ಥಿತಿಯ ಸಿಂಹಾವಲೋಕನವನ್ನು ಹೀಗೆ ಮಾಡಲಾಗಿದೆ:—

(1) ದೂರಪ್ರಾಚ್ಯವನ್ನುಳಿದು ಜಗತ್ತಿನ ಇತರ ಭಾಗಗಳೆಲ್ಲವೂ ಆಹಾರೋತ್ಪಾದನೆ ಭರದಿಂದ ಹೆಚ್ಚಿದೆ ಅಲ್ಲಿ ಆಹಾರ ಕೊರತೆಯು ಪ್ರಶ್ನೆಯೆ ಉಳಿದಿಲ್ಲ. ಇಷ್ಟೇಅಲ್ಲ, ತಮ್ಮ ಹೆಚ್ಚಿನ ಆಹಾರ ಪದಾರ್ಥಕ್ಕಾಗಿ ಪೇಟೆಯನ್ನು ಹುಡುಕುವದೇ ಅವರಿಗೆ ದೊಡ್ಡ ಪ್ರಶ್ನೆಯಾಗಿ ಸಂಭವಿಸಿದೆ. 'ಡಾಲರ ಕ್ಷೇತ್ರ'ಗಳೆಂದು ಕರೆಯಲ್ಪಡುವ ದೇಶಗಳಲ್ಲಿ ಹೆಚ್ಚಾಗಿ ಉಳಿದ ಆಹಾರಧಾನ್ಯಗಳೇ ಇದಕ್ಕೆ ಸಾಕ್ಷಿ. ಹೀಗಿದ್ದಾಗ್ಯೂ ಕೊರತೆಯ ಪ್ರದೇಶಗಳ ಬೇಡಿಕೆಗಳೆಲ್ಲ ಇನ್ನೂ ಪೂರೈಸಲ್ಪಟ್ಟಿಲ್ಲ

(2) ಕೊರತೆಯು ಪ್ರದೇಶದ ಎಷ್ಟೋಭಾಗಗಳಲ್ಲಿ ಆಹಾರ ಬಳಕೆಯ ಪ್ರಮಾಣ ಯುದ್ಧ ಕಾಲಕ್ಕಿಂತ ಪರಮಾವಧಿ ಪ್ರಮಾಣಕ್ಕೇರಿದರೂ ಇನ್ನೂ ಕೆಲ ರಾಷ್ಟ್ರಗಳಲ್ಲಿ ವಿಶೇಷತಃ ದೂರಪ್ರಾಚ್ಯದೇಶಗಳಲ್ಲಿಯು ಬಳಕೆಯ ಪ್ರಮಾಣಗಳು ಯುದ್ಧಪೂರ್ವಕಾಲಕ್ಕಿಂತ ಕಡಿಮೆಯೇ ಇವೆ.

[1] ಜಗತ್ತಿನಲ್ಲಿ ಆಹಾರದ ತಲಾ ಉತ್ಪಾದನೆಯು ಯುದ್ಧಪೂರ್ವ ವರ್ಷಗಳಿಗಿಂತ ಕಡಿಮೆಯೇ ಇದೆ. ಇದಕ್ಕೆ ಕಾರಣವೆಂದರೆ ಜಗತ್ತಿನ ಜನಸಂಖ್ಯೆ ನೂರಕ್ಕೆ 10 ಪ್ರತಿಶತ ಹೆಚ್ಚಾಗಿದೆ. ಆದರೆ ಕಳೆದ ಎರಡು ವರ್ಷಗಳಲ್ಲಿ ಆಹಾರೋತ್ಪಾದನೆ ಎಂಟು ನೂರಕ್ಕೆ ಕೇವಲ ಎರಡು ಅಷ್ಟನ ಮೂರರಷ್ಟೇ ಏರಿದೆ.

(4) ಜಗತ್ತಿನಲ್ಲಿ ಆಹಾರವನ್ನು ರ್ಯಾತಿ ಮಾಡುವ ಮುಖ್ಯ ರಾಷ್ಟ್ರಗಳೆಲ್ಲೆಲ್ಲ (ಅಮೇರಿಕೆ, ಕಾನಡಾ, ಕ್ಯೂಬಾ, ಆಸ್ಟ್ರೇಲಿಯಾ, ನ್ಯೂಝಿಲಂಡ ಹಾಗು ಆರ್ಜೆಂಟೈನಾ) 1949ರಲ್ಲಿ ಹಿಂದಿನ ವರ್ಷಕ್ಕಿಂತ ಬಿಳಿ ಜೆನ್ನಾಗಿ ವ್ಯವಸಾಯವೆಂದರೆ ಆಸ್ಟ್ರೇಲಿಯಾ ಒಂದೇ. ಆದರೂ ಈ ಎಲ್ಲ ರಾಷ್ಟ್ರಗಳ ಒಟ್ಟು ಆಹಾರೋತ್ಪಾದನೆ, ಉತ್ತರ ಅಮೇರಿಕೆಹಗು ಯುರೋಪಿಗಳಲ್ಲಿಯ 1950ನ ಸುಗ್ಗಿಯಿಂದಿಗಿನ ಎಲ್ಲ ಬಸ್ಸಿಕೊಳ್ಳಲ್ಪಟ್ಟ ಕರಾರುಗಳ ಪೂರೈಸಲು ಸಾಕಾಗಿ ಉಳಿಯುತ್ತದೆ.

ಜಗತ್ತಿನ ಬೇರೆಬೇರೆ ಭಾಗಗಳ ಆಹಾರ ಪರಿಸ್ಥಿತಿಯನ್ನು ವರದಿಯಲ್ಲಿ ಈ ರೀತಿ ವಿವರಿಸಲಾಗಿದೆ—

ದೂರಪ್ರಾಚ್ಯ

ಒಟ್ಟಿನಮೇಲೆ ದೂರಪ್ರಾಚ್ಯದ ಆಹಾರಪರಿಸ್ಥಿತಿಯಲ್ಲಿ ಸುಧಾರಣೆಯಾದುದು ಒಡೆದುಕಾಣಿಸುತ್ತದೆ. 1949ರಲ್ಲಿ ಚೀನದೇತದ ಬಿಳಿ ಒರಬೇಕಷ್ಟು ಜೆನ್ನಾಗಿ ಬರದಿದ್ದರು ಕೂಡ ಹಾಗು ಆ ದೇತ, ಬ್ರಹ್ಮದೇತ ಮತ್ತು ಇಂಡೋಚೀನಗಳಲ್ಲಿಯು ರಾಜಕೀಯ ಪರಿಸ್ಥಿತಿಯು ಆಹಾರೋತ್ಪಾದನೆಯ ಮೇಲೆ ವಿಪರೀತ ಪರಿಣಾಮವನ್ನುಂಟು ಮಾಡಿದರೂ ಕೂಡ ದೂರಪ್ರಾಚ್ಯದಲ್ಲಿಯು ಆಹಾರಪರಿಸ್ಥಿತಿ ಸುಧಾರಿಸಿದೆ. ಭಾರತಪಾಕಿಸ್ತಾನಗಳಲ್ಲಿ ಉತ್ಪಾದನೆ ಹೆಚ್ಚಿದ್ದರಿಂದ ಬಳಕೆಯ ಪ್ರಮಾಣ ಹೆಚ್ಚಾಗಿ ಆರ್ಥಿಕ ಪರಿಸ್ಥಿತಿ ಭದ್ರವಾಗಲು ಸಹಾಯವಾಗಿದೆ.

ಭಾರತ-ಪಾಕಿಸ್ತಾನ.

'ಹೆಚ್ಚು ಆಹಾರ ಬೆಳೆಯಿರಿ' ಆಂದೋಲನ ಹಾಗು ಮಳೆಗಾಳಿಗಳ ಅನುಕೂಲತೆಯಿಂದಾಗಿ ಭಾರತದ ಆಹಾರ ಉತ್ಪಾದನೆ ಸ್ವಲ್ಪಹೆಚ್ಚಿದೆ ಆದರೂ 1950ರಲ್ಲಿ ಅದು ಸುಮಾರು 40 ಲಕ್ಷ ಟನ್ ಆಹಾರಧಾನ್ಯಗಳನ್ನು ಹೊರಗಿನಿಂದ ತರಿಸಬಹುದೆಂದು ಅಂದಾಜು ಮಾಡಲಾಗಿದೆ. 1949ರಲ್ಲಿ ಭಾರತದ ಆಯಾತ ಮಾಡಿದ ಧಾನ್ಯ ಕನಿಷ್ಠ 37 ಲಕ್ಷ ಟನ್ನಿನಷ್ಟಾಗಬಹುದು. ಆದರಲ್ಲಿ ಸುಮಾರು ನೂರಕ್ಕೆ 25 ರಷ್ಟು ಅಂದರೆ, 7,96,000 ಟನ್ನು ಕೇವಲ ಅಮೇರಿಕೆಯಿಂದ ಒಂದಿತು. ಈ ವಜಾಫೆಗಳಲ್ಲಿ ಬಹುತರವಾಗಿ ಗೋಧಿಹಾಗು ತಜ್ಜನ್ಯ ಪದಾರ್ಥಗಳಿದ್ದವು.

1949ರ ಕೊನೆಯಲ್ಲಿ ಪಾಕಿಸ್ತಾನದ ಆಹಾರ ಪೂರೈಕೆ ಪರಿಸ್ಥಿತಿ ಅದರ ಹಿಂದಿನ ವರ್ಷಕ್ಕಿಂತ ಎಷ್ಟೋ ಸುಧಾರಿಸಿತು ಆ ವರ್ಷ ಹಂಗಾಮು ಸರಿಯಾಗಿ ದೊರೆತದ್ದರಿಂದ ಹಾಗೂ ಹಲ್ಲೇ ಪ್ರದೇಶಗಳಲ್ಲಿ ತ್ವರಲಾವಣೀ ಕರಾರುಗಳು ಅಸ್ತಿತ್ವದಲ್ಲಿ ಬಂದುದರಿಂದ ಗೋಧಿಹಾಗು ಅಕ್ಕಿಗಳ ಉತ್ಪಾದನೆ ಅನುಕ್ರಮವಾಗಿ ನೂರಕ್ಕೆ 11 ಹಾಗು 13 ರಷ್ಟು ಏರಿತು. ಅದರಂತೆಯೇ ಇತರ ಆಹಾರ ಧಾನ್ಯಗಳು, ಎಣ್ಣೆಕಾಳುಗಳು, ಸಕ್ಕರೆ ಇವುಗಳ ಉತ್ಪಾದನೆಯೂ ಹೆಚ್ಚಾಯಿತು.

ಬ್ರಹ್ಮದೇತ

ಬ್ರಹ್ಮದೇತದಲ್ಲಿಯ ಅಶಾಂತ ರಾಜಕೀಯ ವಾತಾವರಣದ ಮೂಲಕ ಇಲ್ಲಿಯು ಬಿತ್ತಿಗೆ ಕ್ಷೇತ್ರ ಕಡಿಮೆಯಾಯಿತೆಂದು ವರದಿಯಲ್ಲಿ ಹೇಳಲಾಗಿದೆ. ತತ್ಪರಿಣಾಮವಾಗಿ ಈ ಸ

ಲ ಕೇವಲ 9,50,000 ಟ ಧಾನ್ಯ ವನ್ನುಮಾತ್ರ ಅದು ನಿರ್ಯಾತಮಾ ಡಬಲ್ಲದು. ಇದು ಯುದ್ಧಪೂರ್ವ ನಿರ್ಯಾತದ ನೂರಕ್ಕೆ 29ನಷ್ಟು ಹಾಗು ಕಳೆದಸಲಕ್ಕಿಂತ 3,70,000 ಟನ್ನಿ ನಷ್ಟು ಕಡಿಮೆ ಆದಂತಾಯಿತು. 1949–'50ರಲ್ಲಿ ಒಟ್ಟು ಸುಮಾರು 32,00,000 ಟ ಹುಟ್ಟುವಳಿ ಬರ ಬಹುದೆಂದು ಅಂದಾಜಿದೆ. ಅದರ ಹಿಂದಿನ ವರ್ಷಕ್ಕಿಂತ 10 ಲಕ್ಷ ಟನ್ನು ಕಡಿಮೆಯಾದಂತಾಯಿತು. ಕೇಂದ್ರಿನ ಧಾನ್ಯಸಂಗ್ರಹವನ್ನು ಕೂಡಿಸುವದು ಹಾಗು ಅದನ್ನು ನಿರ್ಯಾತಕ್ಕಾಗಿ ಬಂ ದರಗಳಿಗೆ ಕಳಿಸುವದು ಬಹಳಕಠಿ ಣವಾಯಿತೆಂದೂ ಸಶಸ್ತ್ರ ಸಂರಕ್ಷಣೆ ಒದಗಿಸಿ ಆ ಕಾರ್ಯಗಳನ್ನು ಸಾರಂ ಗಾಣಿಸಬೇಕಾಯಿತೆಂದೂ ವರದಿ ಯಲ್ಲಿ ಹೇಳಲಾಗಿದೆ. ಇಂಡೋ-ಚೀನದಂತೆ ಇಲ್ಲಿಕೂಡ 1950ರ ನಿರ್ಯಾತ ರಾಜಕೀಯ ಸ್ಥೈರ್ಯವನ್ನೆ ಅವಲಂಬಿಸಿದೆ, ಏನೇಆದರೂ ನಿರ್ಯಾ ತಪ್ರಮಾಣ ಕಡಿಮೆಯಾಗುವ ಸಂ ಭವವಿದೆ ಎಂದೂ ವರದಿಯಲ್ಲಿದೆ.

ಸಿಂಹಳ

ಸಿಂಹಳಕ್ಕೆ ಬೇಕಾಗುವ ಆಹಾರಧಾ ನ್ಯಗಳಲ್ಲಿ ಹೆಚ್ಚಾಗಿ ಪರದೇಶಗಳಿಂ ದಲೇ ತರಿಸಬೇಕಾಯಿತು. ಆದ್ದರಿಂ ದ ಅಲ್ಲಿಯ ಸರಕಾರವು, ಸುಧಾ ರಿಸಿದ ಸಾಗುವಳಿ ಪದ್ಧತಿ ಹಾಗು ಹೆಚ್ಚಿಚ್ಚು ನೀರಾವರಿ ಸೌಕರ್ಯ ಮೊ ದಲಾದವುಗಳನ್ನು ಕೈಕೊಂಡು ದೇಶದ ಆಹಾರೋತ್ಪಾದನೆಯನ್ನು ಹೆಚ್ಚಿಸಲು ಉಪಕ್ರಮಿಸಿದೆ. 1949 ರಲ್ಲಿ ಸಿಂಹಳವು ಹೊರಗಿನಿಂದತರಿ ಸಿದ ಸರಕುಗಳಲ್ಲಿ ನೂರಕ್ಕೆ 52 ರಷ್ಟು ಬರಿಯ ಆಹಾರ ಧಾನ್ಯವಿ ದ್ದಿತು

ಯುರೋಪ ಖಂಡ

ಯುರೋಪದ ಎಸ್ಟೋ ದೇಶ ಗಳಲ್ಲಿ ಆಹಾರಪೂರೈಕೆಯ ಪರಿಸ್ಥಿತಿ ಸುಧಾರಿಸಿದ್ದರಿಂದ ಅವು ತಮ್ಮ ಸೀ ದಾ ಕಾರ್ಯಕ್ರಮವನ್ನು ತೆಗೆದೊಗೆ ಯಲು ಅಥವಾ ಅವರಲ್ಲಿ ಬದಲಾವ ಣೆಮಾಡಲು ಅನುಕೂಲವಾಯಿತು ಸೆಣ, ಮಾಂಸ ಹಾಗು ಹಾಲು ಹೈನ ಗಳ ಉಳಿತಾಯವು ಹೆಚ್ಚಾಗಿ ಜನತೆಯ ಆಹಾರಮಟ್ಟ ಸುಧಾರಿಸಿತು. ಆದ ರೂ ಯುದ್ಧಪೂರ್ವಕಾಲಕ್ಕಿಂತ ಇ ನ್ನೂ ಕೆಳಹುಟ್ಟದಲ್ಲಿಯೇ ಇದೆ. 1950ರಲ್ಲಿ ಸಾಧಾರಣ ಎಲ್ಲ ರಷ್ಟ ಗಳಲ್ಲಿ ಮಾಂಸ, ಹಾಲು ಹೈನಗಳ ಉತ್ಪತ್ತಿ ಹೆಚ್ಚಾಗಬಹುದೆಂದು ಎ ಣಿಸಲಾಗಿದ್ದರೂ ಯುದ್ಧಪೂರ್ವ ಕಾಲದ ಸರಾಸರಿ ಉತ್ಪಾದನೆಯ ನ್ನು ವಿಾರಲಾರದು. ರತಿಯಜನ್ನು ಳಿದು ಯುರೋಪದಲ್ಲಿಯ ಆಹಾ ರದ ತಲಾ ಬಳಕೆ 1948 – '49 ಕ್ಕಿಂತ 1949 – 50ರಲ್ಲಿಅಲ್ಪಸ್ವಲ್ಪ ಹೆಚ್ಚಾಗಬಹುದೆಂದು ಅಂದಾಜಿದೆ

ಪಶ್ಚಿಮ ಜರ್ಮನಿ

ಪಶ್ಚಿಮಜರ್ಮನಿಯು ಐದು ದ್ವೋತ್ತರ ವರ್ಷಗಳಲ್ಲಿಲ್ಲ 1949 ರ ಹುಟ್ಟುವಳಿ ಚೆನ್ನಾಗಿಬಂದೀತು. ಆಹಾರೋತ್ಪಾದನದಲ್ಲಾದ ಶೀಘ್ರ ನಾದ ಹೆಚ್ಚಳ ಹಾಗು ಕ್ರಮಬದ್ಧ ನಾದ ನಿರ್ಯಾತ ಇವುಗಳ ಫಲ ವಾಗಿ 1949–50ರ ಸರಾಸರಿ ತಲಾ ಬಳಕೆಯು ಸಾಕಷ್ಟು ಏರಿ, ಯುದ್ಧ ಪೂರ್ವದ ಸರಾಸರಿಯ 100ಕ್ಕೆ 90ರಷ್ಟರಮಟ್ಟಿಗೆ ತಲುಪಬ ಹುದೆಂದು ಆತಿಸಲಾಗಿದೆ ಸಕರೆ ಯೊಂದನ್ನುಳಿದು ಇತರ ಎಲ್ಲಆಹಾ ರಪದಾರ್ಥಗಳ ಸೀದಾಪದ್ಧತಿಯನ್ನು ಮಾರ್ಚ 1ರಿಂದ ತೆಗೆದುಹಾಕಲಾ ಯಿತು. ಬರ್ಲಿನ ನಗರದಲ್ಲಿನಮಾತ್ರ ಸೀದಾಪದ್ಧತಿ ಅಮಲಿನಲ್ಲಿದೆ.

ಪೂರ್ವ ಜರ್ಮನಿ

ಸುಧಾರಣೆಯಲ್ಲಿ ಪೂರ್ವಜರ್ಮ ನಿಯು ಪಶ್ಚಿಮ ಜರ್ಮನಿಯನ್ನು ಸರಿಗಟ್ಟಲಿಲ್ಲ ಅಲ್ಲಿ 1949-50ರಲ್ಲಿ ಪ್ರತಿಯೊಬ್ಬನಿಗೆ ದೊರೆಯಬಹು ದಾದ ಆಹಾರದ ಸರಾಸರಿಸಂಗ್ರಹ ಹಾಗು ಮಟ್ಟಗಳಿಂದೂ ಪಶ್ಚಿಮ ಜರ್ಮನಿಗಿಂತ ಎಷ್ಟೋ ಕಡಿಮೆ ಉಳಿಯುವ ಸಂಭವನಿದೆ.

ರಶಿಯಾ

ರಶಿಯಾದಲ್ಲೂ 1949ರಲ್ಲಿ ಒಳ್ಳೆಲತನದಲ್ಲಿ ಯುದ್ಧೋತ್ತರ ಸು ಧಾರಣೆಯು ಮುನ್ನಡೆಯಿತು. ರಶಿ ಯಾದ ಕೆಲ ಮಹತ್ವದ ಭಾಗಗಳ ಲ್ಲಿಯು ಆಹಾರ ಪರಿಸ್ಥಿತಿಯು ಒಟ್ಟಿ ವಿಶ್ವಾಸಾರ್ಹವಾಗಿತ್ತು ದೊರೆಯದಿ ದ್ದರೂಕೂಡ ಒಟ್ಟಿನಮೇಲೆ ಆಹಾ ರದಾಗಿ ಇತರಮಹತ್ವದ ಸರಕು ಗಳ ಪೂರೈಕೆ ಹೆಚ್ಚಿ ಪರಿಸ್ಥಿತಿ ಸು ಧಾರಿಸಿದ ಲಕ್ಷಣಕಂಡುಬರುತ್ತದೆ.

'ಸರಕಾರದ ಕಿರುಕುಳ ಹಂ ಚಿಕೆಯ ಪದ್ಧತಿಯಮೇರೆಗೆ ಪೂರೈ ಸಲಾಗುವ ಆಹಾರಧಾನ್ಯಗಳು ಸಾ ಕಷ್ಟಿರುವದಿಲ್ಲ. ಪಟ್ಟಣಗಳಲ್ಲಿ ವಾ ಸಿಸುವವರು ತಮ್ಮ ಆಹಾರಕ್ಕಾಗಿ ಮುಖ್ಯವಾಗಿ ಈ ಸಂಕಾರಿಕಾ ಕೆಯ ಮೇಲೆಯೇ ಅವಲಂಬಿಸಿರು ತ್ತಾರೆ ಅಲ್ಲಿಯ ಆಹಾರ ಪರಿಸ್ಥಿತಿ ಯಲ್ಲಿರುವ ಕೊರತೆ ಇದು'ಎಂದು ವರದಿಯಲ್ಲಿ ತಿಳಿಸಲಾಗಿದೆ.

ರಶಿಯಾದಲ್ಲಿ ಆಹಾರಧಾನ್ಯಗ ಳ ಬೆಲೆಗಳು ಯುದ್ಧಪೂರ್ವಕಾ ಲಕಿಂತ ಇನ್ನೂ ಬಹಳ ಹೆಚ್ಚಿಗಿವೆ ಬ್ರೆಡ್ಡಿನಈಗಿನ ಬೆಲೆ ಯುದ್ಧಪೂರ್ವ ದ ಬೆಲೆಯಿಂ ಎರೂರುಪಟ್ಟಿಗಿಂತ ಹೆ ಚ್ಚಿಗಿದೆ ಆದರೆ ಸಾಮಾನ್ಯವಾಜ ದೂರರು ಗಳಿಕೆ ಏರಿಪಟ್ಟಿಕೂಡ ಏರಿಲ್ಲ

ಮಧ್ಯಪೂರ್ವ

ತುರ್ಕಸ್ತಾನ ಹಾಗು ಇರಾಣಗಳಲ್ಲಿ ವಿವಿಧ ದೇವಾಪಾನದನೂಲಕ ಗೋಧಿಯ ಉತ್ಪಾದನೆಗೆ ಭಯಂಕ ರ ಪೆಟ್ಟು ಬಿತ್ತು. ಉಳಿದ ದೇಶಗ ಳಲ್ಲಿ ಆಹಾರ ಪರಿಸ್ಥಿತಿ ಸಾಮಾನ್ಯ ವಾಗಿ ಸುಧಾರಿಸಿತೆನ್ನಬಹುದು ಈ ಎಲ್ಲ ರಾಷ್ಟ್ರಗಳು 1949—50ರಲ್ಲಿ ತಮ್ಮ ತಮ್ಮ ವಿಶೇಷ ಸರಕುಗಳನ್ನು ನಿರ್ಯಾತಮಾಡಬಹುದು. 1948 ಹಾಗು 49ರಲ್ಲಿ ಇಸ್ರಾಯೇಲದಲ್ಲಿ ಸೈನಿಕರ ಚಲನವಲನಗಳಮೂಲಕ ಆಹಾರೋತ್ಪಾದನೆಗೆ ಹೇಳತೀರದ ಪೆಟ್ಟು ಪ್ರಾಪ್ತಿಯಾಯಿತು. 1949–50 ರಲ್ಲಿ ಅದು ಎಂದಿಗಿಂತ ಹೆಚ್ಚಾಗಿ ಆಹಾರ ಧಾನ್ಯಗಳನ್ನು ಹೊರಗಿನಿಂ ದ ತರಿಸಬೇಕಾಗುತ್ತದೆ.

ಒಟ್ಟು ಇಡೀ ಜಗತ್ತಿನ ಬಗ್ಗೆ ಹೇಳುವದಾದರೆ, ಮಾಂಸದ ಉ ತ್ಪಾದನೆ, ಪೂರ್ವಯುದ್ಧ ಪೂರ್ವ ಉತ್ಪಾದನೆಗಿಂತ ಹೆಚ್ಚಾ ಯಿ ಎ, ಹಾಲಿನ ಉತ್ಪಾದನೆಯಲ್ಲಿ ಸುಧಾರಣೆಯಾಯಿತು ತಿನ್ನುವ ಅಕ್ಕಿ ಹಾಗು ಸೆಣಗಳಪೂರೈಕೆ ಯುದ್ಧ ಪೂರ್ವಕಾಲದ ಪೂರೈಕೆಗಿಂತ ಹೆ ಚ್ಚಾದರೂ ಇದೇ ನೊದೇ ಸೇಸಲು ಆದರೆ ಈ ಹೆಚ್ಚಳವು ವ್ಯವಸಾಯ ಜನಸಂಖ್ಯೆಗೂ ಸಮನಾಗಿಲ್ಲ

ನವಭಾರತಕ್ಕೆ
ಚಂದಾದಾರರಾಗಿರಿ.

153 Lan

ಯುದ್ಧ ಚಿತ್ರಗಳು



ಕೊರಿಯಾಕ್ಕೆ ಅಮೆರಿಕಾದ ವಿಮಾನಗಳ ಪ್ರಯಾಣ

ಗಾಯಾಳುಗಳ ತುರ್ತ್ರೈಷೆ

ಯುದ್ಧ ಚಿತ್ರಗಳು

ಬಾಂಬುದಾಳಿಗಾಗಿ ವಿಮಾನದ ತಂಪೂರಿ

ತೆರೆಯುವುದೆಯಿಂದ ಗುಂಡು ಹಾರಿಸುವುದು.

ನೀಲಿಯ ಅಭಾವ

ಆಹಾರ ಪರಿಸ್ಥಿತಿ.

—||||—

ಎಲ್ಲಿಯೆಯಲ್ಲೂ ನೀಲಿಯು ಬೇಕಾಗಿ ರೈತರು ಆಕಾತವನ್ನು ನೋಡುತ್ತಿರುವರು. ಪೈರುಗಳು ಬಂಗಾರಹತ್ತಿಯ ಪೊಸ ಬೆಳೆಯು ಬರುತ್ತೆಂಬಾಶೆಯಿಂದ ಇದ್ದ ಕಾಳು ಕಡಿಯಿನ್ನು ಮಾರಿಕೊಂಡವರ ಅವಸ್ಥೆಯಂತೂ ಹೇಳತೀರದು. ಪ್ರೊಕ್ಯೂರ್‌ಮೆಂಟು ದೇವತೆಗಳು ಮತ್ತೆ ಬಂದಿಳಿದು ಕಾಳನ್ನು ಕೊಡಲು ಕೇಳುತ್ತಿದ್ದಾರೆ ಕಾಳನ್ನು ಕೊಂಡುತರಬೇಕೆಂದರೂ ಈಗ ಅತಿಕಷ್ಟಪರಿಸ್ಥಿತಿಯುತ್ಪನ್ನವಾಗಿದೆ. ಕಾಳು ದೊರೆಯುವುದೂ ಕಷ್ಟವಾಗಿದೆ. ಇದ್ದ ಅಲ್ಪಸ್ವಲ್ಪ ಅಕ್ಕಿಯನ್ನು ಪಟ್ಟಣಗಳಲ್ಲಿ 6 ಬಿ-ಸು ಹಂಚಲಿಕ್ಕೇ ಸಾಕಾಗುವಷ್ಟಿಲ್ಲವಾದ್ದರಿಂದ ಹಳ್ಳಿಗಳ ಭವಣೆ ಹೇಳತೀರದಾಗಿದೆ

'ಹೆಚ್ಚು ಬೆಳೆಯಿರಿ' ಎಂಬ ಪ್ರಚಾರವು ಕಾಗದದಮೇಲೆ ರಂಗವಲ್ಲಿಯ ಭೂಷಣಗಳಲ್ಲಿ ವಿಶೇಷವ್ಯಕ್ತವಾಗುತ್ತಿದೆಯೊಗಲಿ. ಕಾರ್ಯತಃ ಫಲಕಾರಿಯಾಗಿಲ್ಲ ಭೂಮಿ, ಕೆರಗಳ ರಿಪೇರಿ, ಜಲಾಶಯ, ಕಾಲುವೆಗಳ ಪುನರುದ್ಧಾರಕ್ಕೆ ಸರ್ಕಾರದವರು ಪ್ರಯತ್ನವನ್ನು ಒದಗಿಸಬೇಕು, ನೀರಾವರಿ ಕೆಲಸಕ್ಕೆ ನೀರಿನ ಕಾಲುವೆಗಳ ಸಹಾಯವನ್ನು ಧಾರಾಳವಾಗಿ ಒದಗಿಸಬೇಕು. ಬಳ್ಳಾರಿ ಜಿಲ್ಲೆಯಿಮಾತು ಹೇಳಬೇಕೆಂದರೆ ಜೋಗ್‌ದಿಂದ ಬಂದ ವಿದ್ಯುಚ್ಛಕ್ತಿಯು ಸದುಪಯೋಗವು ಹಳ್ಳಿಗಳಲ್ಲೂ ಆಗಬೇಕು ಬೆಳೆಯು ಸಾರ್ಥಕವಾದಿತು ಭೂಮಿಯೂ ಸಾಗುವಳಿಗೆ ಇರುವ ಪ್ರದೇಶದಲ್ಲಿ ರೈತರಿಲ್ಲ! ರೈತರಿರುವ ಭಾಗದಲ್ಲಿ ಭೂಮಿಗಳಿಲ್ಲ ಹೀಗಾಗಿ ಕಬ್ಬುಬೆಳೆಗೆ ಇದೊಂದು ತಡೆಯಾಗಿರುವುದು ಈ ಅಭಾವವು ವಿದ್ಯುಚ್ಛಕ್ತಿಯ ಪೂರೈಕೆಯಿಂದ ಪೂರ್ತಿಯಾಗುವುದು

ಬೀಹಾರ್ ಮುಂತಾದ ಪ್ರದೇಶಗಳಲ್ಲಿ ಅನ್ನಾಹಾರಗಳಿಲ್ಲದೆ ಸಾವಿರವ ಪರಿಸ್ಥಿತಿಯು ಬಂದಿದೆಯಂತೆ ಕೊಯಿಗಿನಿಂದ ಧಾನ್ಯಾದಿಗಳು ಬಂದಿದ್ದರೆ ಮದ್ರಾಸು ಪ್ರಾಂತದಲ್ಲಾ ಸಹ ಇದೇ ಪರಿಸ್ಥಿತಿಯುತ್ಪನ್ನವಾದೀತು—

ಪರಾಕಾಲ ಸರ್ಕಾರವನ್ನೇ ಟೀಕಿಸುತ್ತಾ ಕುಳಿತರೂ ಪ್ರಯೋಜನವಿಲ್ಲ ಪ್ರಜೆಗಳೂ ಸಹ ತಮ್ಮ ಬಾಧ್ಯತೆಯನ್ನರಿತು ಆಹಾರ ಸಮಸ್ಯೆಯ ವಿಷಯದಲ್ಲಿ ಸರ್ಕಾರದೊಡನೆ ಸಹಕರಿಸಬೇಕು. ಪ್ರಜಾ ಸಹಕಾರವಿಲ್ಲದೆ ಯಾವ ಸರ್ಕಾರವೂ ಯಾವ ಘನ ಕಾರ್ಯಸನ್ನಾಗಲಿ ಸಾಧಿಸಲು ತಕ್ಕವಿಲ್ಲ. ಪ್ರಜೆಗಳಲ್ಲಿ ಸಮಾಜತತ್ವಗಳಿದ್ದಾರೆ ಧಾನ್ಯವನ್ನೆಷ್ಟೂ ಬಂದೆಡೆ ಕೂಡಿಹಾಕಿ ಹೆಚ್ಚಿನ ದರಗಳಿಂದ ಮಾರುವವರಿದ್ದಾರೆ. ಲಾಭಬಡಕರಿದ್ದಾರೆ. ಸಾನುಭೂತಿ ಭ್ರಾತೃ ಭಾವತತ್ವವನ್ನು ಬಿತ್ತಿ ಇವರಿಂದ ನಮ್ಮ ಸಮಾಜಕ್ಕೆ ಹೆಚ್ಚು ಸಹಾಯವಿದೆ. ಈ ಕಾರಣ ಪ್ರಜೆಗಳೂ ಕೂಡ ತಮ್ಮ ಕರ್ತವ್ಯಗಳನ್ನು ನೆರವೇರಿಸಬೇಕು.



— ಹಿಂದೀ ಪರೀಕ್ಷೆಗಳು —

ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ಪ್ರವೇಶಿಕ---ವಿಶಾರದ ಪರೀಕ್ಷೆಗಳು ಸೆಪ್ಟಂಬರು 2,3,4, ನೆಯು ತಾರೀಕುಗಳಲ್ಲೂ ಪ್ರಾಥಮಿಕ—ಮಧ್ಯಮಾ— ರಾಷ್ಟ್ರ ಭಾಷಾ ಪರೀಕ್ಷೆಗಳು 2ನೆಯು ತಾ|| ಭಾನುವಾರವೂ ನಡೆಯುತ್ತಿವೆ. ಬಳ್ಳಾರಿಯಲ್ಲಿ ಮುನಿಸಿಪಲ್ ಕೈಸ್ಕೂಲು ಕೇಂದ್ರವಾಗಿದೆ.

—

— ಏಕಾಂಕ ನಾಟಕ ಸ್ಪರ್ಧೆ —

ಕರ್ನಾಟಕ ಸಂಘದ ವಾರ್ಷಿಕಾಧಿವೇಶನದ ಅಂಗವಾಗಿ ನಡೆಯುತ್ತಿರುವ ಏಕಾಂಕ ನಾಟಕಸ್ಪರ್ಧೆಗೆ ಬರುವ ಕೃತಿಗಳನ್ನು ಸೆಪ್ಟಂಬರ್ ತಿಂಗಳ ಅಂತ್ಯದವರೆಗೂ ಸ್ವೀಕರಿಸಲಾಗುವುದು ಪ್ರಕಟನಾದ ಕೃತಿಗಳನ್ನು ಸ್ವೀಕರಿಸಲಾಗುವುದಿಲ್ಲ. ಒಬ್ಬರೇ ಎಷ್ಟು ನಾಟಕಗಳನ್ನಾದರೂ ಕಳುಹಬಹುದು. ಪ್ರತಿ ನಾಟಕದ ಎರಡೆರಡು ನಕಲುಗಳನ್ನು ಪ್ರತ್ಯೇಕವಾಗಿ ಎಂಟುಣೆಯಂತೆ ಪ್ರವೇಶ ತುಲ್ಕವನ್ನು ಕಳುಹತಕ್ಕದ್ದು. ವಯಸ್ಸು, ಜಾತಿ, ನಾಡು ಇತ್ಯಾದಿ ನಿಬಂಧನೆಗಳೇನೂ ಇಲ್ಲ. ಭಾಷಾಭಿಮಾನಿಗಳೆಲ್ಲರೂ ಭಾಗವಹಿಸಬೇಕಾಗಿದ್ದು ಜಯಶ್ರೀಗೆ ಬಂದ ನಾಟಕಗಳನ್ನು ಹಿಂದಕ್ಕೆ ಕಳುಹಲಿರುವುದಿಲ್ಲ ಕೃತಿಗಳನ್ನು ಕಾರ್ಯದರ್ಶಿ ಕರ್ನಾಟಕ ಸಂಘ 16 ನೀರಸ್ವಾಮಿಪಿಳ್ಳೈಸ್ಟ್ರೀಟು ಎಗ್ಮೂರು, ಮದ್ರಾಸು ಇವರಿಗೆ ಕಳುಹಬೇಕು.

....

ಗ್ವಾಲಿಯರ್ (ಮಧ್ಯಪ್ರದೇಶ) ನಗರದಲ್ಲಿ ವಿದ್ಯಾರ್ಥಿಗಳಮೇಲೆ ಗುಂಡುಹಾರಿಸಲಾಗಿ ಇಬ್ಬರು ಸತ್ತರು. ಅಲ್ಲಿ ದಂಗೆಯಾಗಿ ಈಗ ಜಾತಿಯ ಸ್ವರೂಪವನ್ನು ತಾಳುತ್ತಲಿದೆ.

—||||—



ವಿಮಾನಗಳ ಸಾಲು



ಸೈನ್ಯ ಮತ್ತು ವಿಮಾನಗಳು ತುಂಬಿದ ಯುದ್ಧದ ಹಡಗಿನ ಪ್ರಯಾಣ

ಕಬ್ಬಿನ ಸುಳಿ ಬೀಳುವ ರೋಗ

—×—

ಲೇ:— ಶ್ರೀ. ಸಿ. ನ್ಹಿ. ವಾಗಳೆ,
ಬೆಳೆ ಸಂರಕ್ಷಣೆ ಅಧಿಕಾರಿಗಳು,
ಕಬ್ಬಿನ ಅಭಿವೃದ್ಧಿ ಯೋಜನೆ,
ಅಹಮದನಗರ.

—

ಕರ್ನಾಟಕದಲ್ಲಿ ಅಪಾಲ್ಲೂ ಮುಖ್ಯವಾಗಿ ಬೆಳಗಾವಿ ಜಿಲ್ಲೆಯಲ್ಲಿ ಕಬ್ಬಿನ ಸುಳಿ ಬೀಳುವ ರೋಗವು ತೀವ್ರವಾಗಿ ಹಬ್ಬಿ ತೊಂದರೆಯೆಂಬುದು ಕಂಡುಬರುತ್ತದೆ. ಈ ರೋಗದ ಮುಖ್ಯ ಲಕ್ಷಣವೆಂದರೆ ಕಬ್ಬಿನ ಗಟ್ಟಿ ನಡುವಿನ ಸುಳಿಯಿದಾ ಂಯಿಕೊಂಡ್ಡಾ ದ ಲಡ್ಡಿನಂಥ ಉದ್ದವಾದ ಗರಿಯು ಹಾಯುತ್ತದೆ. ಆ ಕಬ್ಬಿನವುರಿಳಿ ನೂಕೂಡ ಮುಂದೆ ಈ ರೋಗ ಅಂಟಿಕೊಳ್ಳುತ್ತದೆ. ಇಂಥ ಲಡ್ಡು ನೊಪಲು ಕ ರ್ಪ ಗಿರುವ ವಿಲ್ಲ. ಅವರ ಸುತ್ತಲೂ ಅಚ್ಚು ಬೆಳ್ಳಗಿನ ಸರೆ ಇರುತ್ತದೆ. ಅವರೆ ಉಚ್ಚಿ ಹೋದಮೇಲೆ ಅದರಿಂದ ಕರಿಯಪುಡಿ ಹೊರಬೀಳುತ್ತದೆ ಈ ಪ್ರದಿಯಲ್ಲಿ ಲಕ್ಷಾಂತರ್ಟಲ್ಲಿ ಅತಿಸೂಕ್ಷ್ಮವಾದ ರೋಗಾಣುಗಳು ತುಂಬಿರುತ್ತವೆ ಇದೇ ರೋಗದ ಮೂಲ. ಗಾಳಿಯಿಂದ ಈ ರೋಗಾಣುಗಳು ದೂರ ಹಾರಿ ಹೋಗಿ ಬೇರೆಡೆಗೂ ರೋಗವನ್ನು ತರುತ್ತದೆ ಈ ರೋಗ ತಗಲಿದ ಕಬ್ಬು ಜೆನ್ನಾಗಿ ಬೆಳೆಯುವದಿಲ್ಲ ಕರ್ನಾಟಕದಲ್ಲಿ ಈ ರೋಗ ತೀವ್ರವಾಗಿ ಬೆಳೆಯಲು ಕಾರಣವೆಂದರೆ ಅಲ್ಲಿನವಾ ಸ್ಯವಾಗಿರುವ ಕುಳಿಕಾಯುವ ಹವ್ಯ ತಿ ಸಿ. ಓ ಳಗಿನ ಜಾತಿಯ ಬಿರುಸು ಕಬ್ಬನ್ನು ಅಲ್ಲಿ ಬೆಳೆಯುವುದರಿಂದ ರೂ ಈ ರೋಗ ಹಬ್ಬಲು ತೊಡಗಿದೆ. ಡೆಕ್ಕನ್ ಪಠಾರದಲ್ಲಿ ತೀರ ಇತ್ತೀಚೆಗೆ ಬೆಳೆಯುವುತ್ತಿರುವ ಹೆಚ್ಚು ಹುಟ್ಟುವಳಿ ಕೊಡುವಹಾಗು ಪೆತ್ತಗಿರುವ ಸಿ. ಓ ೪೧೨೩ ಜಾತಿಯ ಕಬ್ಬಿಗೆ ಸಿ. ಓ ೪೧೮ ಜಾತಿಗಿಂತಲೂ ಬೇಗನೆ ಈ ರೋಗ ತಗಲುವುದೆಂದು ಕಂಡು ಬರುತ್ತದೆ. ಇದು ಭರವಸೆಯಿಂದ ಹಬ್ಬುವಂತೆ ಹಾಗು ಪಿಡುಗಾಗಿ ಪರಿಣಮಿಸದಂತೆ ಮಾಡಲು ಈ ಕೆಳಗಿನ ಉಪಾಯಗಳನ್ನು ಯೋಜಿಸುವದು ಅವಶ್ಯವಿದೆ.—

ಕಬ್ಬು ಹೊಳಕೆಯೊಡೆಯುವ ಹತ್ತಿದ ಬಳಿಕ ನೇಲಿಂದನೇಲೆ ಬೆಳೆಯನ್ನು ಕಣ್ಣಾಲ್ಲಿ ಕಣ್ಣಿಟ್ಟು ನೋಡುತ್ತಿರಬೇಕು ಹಾಗು ಸಂಶಯಿಸಿದ ಸಸಿಗಳನ್ನೆಲ್ಲ ತೆಗೆದುಹೊಗೆಯಬೇಕು. ಈ ರೋಗದ ಲಡ್ಡುಗಳನ್ನು ಸಾವಕಾಶವಾಗಿ ಕತ್ತರಿಸಿ ದಪ್ಪನೆಯ ಅರಿವೆಯ ಚೀಲದಲ್ಲಿ ತುಂಬಬೇಕು. ಅಂದರೆ ರೋಗಾಣುಗಳು ಹಾರಿಹೋಗಲಾರವು ಆನಂತರ ಅವನ್ನು ಕಬ್ಬಿನ ತೋಟದಿಂದ ದೂರ ಒಯ್ದು ಸುಟ್ಟು ಹಾಕಬೇಕು.

ಕಬ್ಬಿನಜೆಳೆಯೊಳಗಿಂದ ರೋಗತಗಲಿದ ಕಬ್ಬುಗಳನ್ನು ಆರಿಸಿ ತೆಗೆದು ನಾಶಮಾಡಬೇಕು.

ಬೀಜಗಳನ್ನು ಆರಿಸುವಾಗ ಬಕಳದಷ್ಟತೆ ವಹಿಸಬೇಕು ಸುಳಿಬಿದ್ದ ತೋಟಗಳಿಂದ ಎಂದೂಬೀಜಗಳನ್ನು ಪಡೆಯಕೂಡದು.

ತೋಟದಲ್ಲಿ ಸುಳಿಬಿದ್ದ ಲಕ್ಷಣ ಕಂಡಕೂಡಲೆ ಆ ವರ್ಷ ಕಬ್ಬಿನ ಕಾಯುವವನ್ನು ಬಿಟ್ಟುಬಿಡಬೇಕು.

ಈ ಉಪಾಯಗಳನ್ನು ಯೋಗ್ಯರೀತಿಯಿಂದ ಬಾಧೇಸವನೆ ಸೂರು ವರ್ಷಗಳವರೆಗೆ ನಡೆಸಿದರೆ ಸುಳಿಬೀಳುವ ರೋಗವನ್ನು ತಳಕಿತ್ತಿಸಬಹುದು. ಆ ಬಳಿಕ ಈ ರೋಗಕ್ಕೆ ಈಡಾಗುವ ಯಾವದೇ ಜಾತಿಯ ಕಬ್ಬು ಹುಟ್ಟುವಳಿ ಕೊಡುವ ಕಬ್ಬನ್ನು ನಿರ್ಭೀತರಾಗಿ ಬೆಳೆಯಬಹುದು

ಕಬ್ಬಿನ ಸಿಪ್ಪೆಯಿಂದ ಕಾಗದ

ಕಬ್ಬಿನ ಸಿಪ್ಪೆಯಿಂದ ತಯಾರಿಸಿದ ವೃತ್ತಪತ್ರ ಕಾಗದವನ್ನು ಅಮೆರಿಕೆಯಲ್ಲಿ ಇತ್ತೀಚೆಗೆ, ಮೊಟ್ಟಮೊದಲನೆಯ ಸಲ ಉಪಯೋಗಿಸಲಾಯಿತು. ಈ ಹೊಸ ಶೋಧ, ಕಬ್ಬು ಬೆಳೆಯುವ ರಾಷ್ಟ್ರಗಳಿಗೆಲ್ಲ ಆರ್ಥಿಕ ದೃಷ್ಟಿಯಿಂದ ಬಹಳಮಹತ್ವದ್ದಾಗುವಲ್ಲಿ ಸಂಶಯವಿಲ್ಲ. ಅಲ್ಲದೆ, ವೃತ್ತಪತ್ರಕಾಗದದ ಕೊರತೆಯನ್ನು ನೀಗಿಸುವದರಲ್ಲೂ ಇದರಿಂದ ಎಷ್ಟೋ ಸಹಾಯವಾಗುವದು.

ಕೊರಿಯಾ ಯುದ್ಧ ವಾರ್ತೆಗಳು

— []—

ಉತ್ತರಕೊರಿಯಾದ ಕಮ್ಯುನಿಸ್ಟರು ದಕ್ಷಿಣದ ಬಹುಭಾಗವನ್ನು ತೆಗೆದುಕೊಂಡು ಅಮೆರಿಕಾದವರು ಇಳಿಯಲುಬಂದೇಬಂದು ಒಂದರಾದ ಪೂರ್ತಾನವನ್ನು ಸ್ವಾಧೀನಪಡಿಸಿಕೊಳ್ಳಲು ಸರ್ವ ಸನ್ನಾಹವಾಗುತ್ತಿರುವರು. ಈ ಭಾಗದಲ್ಲಿ ಭಯಂಕರ ಯುದ್ಧವಾಗುತ್ತಲಿದೆ. ಭಯಂಕರ ಹಾನಿಯಾಗುತ್ತಿದ್ದರೂ ಅದನ್ನು ಲೆಕ್ಕಿಸದೆ ಕಮ್ಯೂನಿಸ್ಟರು ಮುನ್ನುಗ್ಗುತ್ತಿರುವರು. ಎಂಥಸಂದರ್ಭದಲ್ಲಿಯಾದರೂ ಅಮೆರಿಕನ್ನರು ಹಿಂಜರಿಯುವುದಿಲ್ಲವೆಂದು ಸೈನ್ಯಾಧಿಕಾರಿಗಳು ಆಜ್ಞೆ ಇತ್ತಿರುವರಂತೆ.

ಘಟ್ಟದಳಿಗೆ ಹೋಗುವವರಿಗೆ ಎಚ್ಚರಿಕೆ

ತಿನಸೊಗ್ಗ ಉಡುಪರಕ್ಕೆ ವತ್ತು ಕಡೂರು ಮಂಗಳೂರು ರಸಗಳು ವಿಶೇಷ ಮಳೆಯಿಂದ ಕೆಲ ಭಾಗಗಳಲ್ಲಿ ಕೊಚ್ಚಿ ಹೋಗಿರುವ ಕಾರಣ ಪ್ರಯಾಣಕ್ಕೆ ಯೋಗ್ಯವಿಲ್ಲೆಂದು ಹೇಳಲಾಗಿದೆ.

—(.)—

ಮುನಿಸಿಪಲ್ ಚುನಾವಣೆಗಳು.

ಮುನಿಸಿಪಾಲಟಿ ಚುನಾವಣೆಗಳನ್ನುಕೂಡ ಮುಂದಕ್ಕೆಹಾಕಲಾಗಿದೆಯೆಂದು ಸರ್ಕಾರದ ಪ್ರಕಟನೆಯಿಂದ ತಿಳಿದುಬರುತ್ತದೆ.

—

— ನುಂಗಗಳಿಂದ ಧಾನ್ಯನಾಶ —

ಆಹಾರ ಮಂತ್ರಿಗಳಾದ ಮುನಿಶಿಯವರು ಕೇಂದ್ರಅಸೆಂಬ್ಲಿಯಲ್ಲಿ ಉತ್ತರ ಕೊಡುತ್ತ ಪ್ರತಿವರ್ಷ ಸುಮಾರು 20ಕೋಟಿ ರೂ. ಬೆಲೆಬಾಳುವ ಧಾನ್ಯವು ಮಂಗಗಳಿಂದ ನಾಶವಾಗುತ್ತಿರುವುದಾಗಿ ಹೇಳಿದರು ಮಂಗಗಳನ್ನು ಹಿಂಸರಿಸಲು ಕೇಂದ್ರ ಸರಕಾರವು ಹಣ ಸಹಾಯ ಮಾಡುವುದೆಂದರು.

158

—[ನವಭಾರತ]— 14—8—50

ಮಣ್ಣಿನ ಸಂರಕ್ಷಣೆ

"ಪ್ರಕೃತಿಯು ಮನುಷ್ಯನಿಗೆ ಕೊಟ್ಟ ದಾನಗಳಲ್ಲಿ ಪವಿತ್ರವಾದ ಜೀವನಕ್ಕೆ ಮಣ್ಣಿನಷ್ಟು ಅವಶ್ಯಕ ವಸ್ತು ಬಹುಶಃ ಬೇರಿಲ್ಲ"

[ಮನುಷ್ಯನು ಭೂಮಿಯಮೇಲೆ ಜೀವಿಸಿರುವಷ್ಟು ಕಾಲವೆಲ್ಲಿ ಅವನು ಪ್ರತ್ಯಕ್ಷವಾಗಿಯೊಗಲಿ ಪರೋಕ್ಷವಾಗಿಯಾಗಲಿ ಮಣ್ಣಿನ ಮೇಲೆ ಹೊಂದಿಕೊಂಡಿರುತ್ತಾನೆ. ಆಹಾರ, ಬಟ್ಟೆಬರೆ, ಮನೆ, ವಸತಿಗ ಸಹ ಅವನು ಮಣ್ಣನ್ನು ಆಧರಿಸಿಕೊಂಡಿರಬೇಕು. ಆದ್ದರಿಂದ ಮಾನವ ಜಾತಿಯ ಬಾಳ್ವಿಕೆಗೇನಿ ಮಣ್ಣನ್ನು ಕಾಪಾಡುವುದೂ, ಅದರ ಉತ್ಪಾದಕ ಶಕ್ತಿಯನ್ನು ಪರಮಾಧಿಕ ನುಟ್ಟದಲ್ಲಿರಿಸುವುದೂ ಪ್ರಾಮುಖ್ಯವಾಗಿದೆ.]

ಮಣ್ಣು ಸಂರಕ್ಷಣೆಯೆಂದರೆ, ಯೋಗ್ಯಬೇಸಾಯಸದ್ಧತಿಗನುಸಾರ ಭೂಮಿಯನ್ನು ದಕ್ಷತೆಯಿಂದ ಉಪಯೋಗಿಸುವುದು ಮತ್ತು ತಪ್ಪು ಕೃಷಿ ಕ್ರಮಗಳಿಂದ ಮಣ್ಣಿನ ಸಾರವು ಕಡಮೆಯಾಗದಂತೆ ನೋಡಿಕೊಳ್ಳುವುದು. ಅಂದರೆ ಒಳ್ಳೆಯರೀತಿಯಲ್ಲಿ ಭೂಮಿ ಸಂಪತ್ತಿಸುವುದೇ ಮಣ್ಣು ಸಂರಕ್ಷಣೆ. ಆದುದರಿಂದ ಸರ್ವತೋಮುಖವಾದ ಸುಧಾರಿತಬೇಸಾಯ, ಕೃಷಿ ಉತ್ಪತ್ತಿಯನ್ನು ಸಾಗುವಳಿ ವಿಸ್ತರಿಸುವುದರಿಂದಾಗಲಿ ಅಧಿಕೋತ್ಪಾದನೆಯಿಂದಾಗಲಿ ಕೆಚ್ಚಿಸಬಹುದು. ಸಹ್ಯ ಆಹಾರಸಮಸ್ಯೆಗಳನ್ನು ಬಗೆಹರಿಸಬೇಕಾದರೆ ಅಧಿಕ ಉತ್ಪತ್ತಿಯೊರೆಯೆಂತೆ ಸಾಗುವಳಿಯಾಗಬೇಕು. ಆದರೆ ಇವಕ್ಕೆ ಅನೇಕ ಸಾಧನೆಗಳು ಜೇಕು. ಇವುಗಳಲ್ಲಿಕೆ ಮಣ್ಣು ಸಂರಕ್ಷಣೆಯು ಅತಿ ಅವಶ್ಯಕ ಸಾಧನೆಯಾಗಿದೆ ಮಣ್ಣಿನ ಉತ್ಪಾದಕ ಸಾಮರ್ಥ್ಯವು ಕಡಮೆಯಾಗದ ರೀತಿಯಲ್ಲಿ ಸರಸಾಸರಿ ಫಸಲು ಪಡೆಯುವುದೇ ಭೂಮಿಯನ್ನು ಸರಿಯಾಗಿ ನೋಡಿಕೊಳ್ಳುವುದೇ ಇದರ ಉದ್ದೇಶ. ಈ ಗುರಿಯನ್ನು ಮುಂಬಯಿಟ್ಟುಕೊಂಡು ಸರ್ಕಾರವು ಒಳ್ಳಾರಿ ಮತ್ತು ಅನಂತಪುರ ಜಿಲ್ಲೆಗಳ ಕೆಲವು ಭಾಗಗಳಲ್ಲಿ ಮಣ್ಣು ಸಂರಕ್ಷಣಾ ಯೋಜನೆಯನ್ನು ಜಾರಿಗೆ ತಂದಿದೆ.

ಮಣ್ಣಿನ ಉತ್ಪಾದಕ ಸಾಮರ್ಥ್ಯವು ತಗ್ಗಿಹೋಗಲು, ಮಣ್ಣು ಸವೆತ, ಜವಿೂನನ್ನು ಸಾಗುವಳಿಗೆ ಸರಿಯಾದ ಕ್ರಮವಲ್ಲಿ ಉಪಯೋಗಿಸದಿರುವುದು, ಗೊಬ್ಬರ ಮತ್ತು ನೀರಾವರಿ ಸೌಕರ್ಯಗಳಿಲ್ಲದಿರುವುದು, ಇವೆಲ್ಲಾ ಕಾರಣಗಳಾಗಿವೆ.

ಮಣ್ಣು ಸವೆತ

ಜಲಿಸುತ್ತಿರುವ ಗಾಳಿಅಥವಾ ನೀರಿನಿಂದಾಗಿ ಮಣ್ಣು ಸವೆಯುತ್ತದೆ ಗಾಳಿ ಅಥವಾ ಮಳೆ ನೀರು ಬಂಜೆಜೆಯಿಂದ ಇನ್ನೊಂದೆಡೆಗೆ ಸಾಗುತ್ತಿರುವಾಗ, ಮುಖ್ಯವಾಗಿ ನೆಲದ ಮೇಲ್ಪದರದಿಂದಾಗಿ ಹೋಗುತ್ತಿರುವಾಗ, ಇಳಿಜಾರುಗಳಲ್ಲಿ ಹರಿಯುತ್ತಿರುವಾಗ, ತೆರೆಗಳಾಗಿ ಭೂಮಿಗೆ ಬಡಿಯುತ್ತಿರುವಾಗ, ಅದಕ್ಕೆ ಬಂದುಬಿಗೆಯು ಸವೆಯುವ ಶಕ್ತಿ ಉಂಟಾಗುತ್ತವೆ ಇವರಿಂದಾಗಿ ಮಣ್ಣಿನ ಕಣಗಳು ಸಂಚಲಿಸಲ್ಪಡುತ್ತವೆ. ಈ ಕಣಗಳು ಗಾಳಿ-ನೀರುಗಳೊಡನೆ ಬಹುದೂರ ಸಾಗುತ್ತವೆ. ಭೂಮಿಯು ನೀಲಿ ಬೀಳುವ ಮಳೆ ನೀರಿನಲ್ಲಿ ಸ್ವಲ್ಪಾಂಶವು ಮಣ್ಣಿನಲ್ಲಿ ಇಂಗಿಹೋಗುತ್ತದೆ. ಬಂದಂತೆವು ಆವಿಯಾಗುತ್ತವೆ. ಹೆಚ್ಚಿನಾಂಶವು ನೆಲದಮೇಲೆ ಹರಿಯುತ್ತಾ ವ್ಯರ್ಥವಾಗುತ್ತವೆ. ನೆಲವನ್ನೇಲೆ ಹರಿಯುತ್ತಿರುವ ಶಾಂತವಾಗಿ ತೋರುವ ಈ ನೀರೆಮಣ್ಣು ಸವೆತಕ್ಕೆ ಕಾರಣ! ಸಸ್ಯಾದಿಗಳಿಗೆ ಬೇಕಾದ ಆಹಾರವನ್ನು ಇದುಕೊಂಡೊಯ್ಯುತ್ತವೆ ಇವಲ್ಲದೆ ನೀರು ಈ ರೀತಿ ಮಣ್ಣನ್ನು ಕೊಂಡೊಯ್ಯುವಾಗ, ಮಣ್ಣಿನಲ್ಲಿರುವ ಸೂಕ್ಷ್ಮ ರಂಧ್ರಗಳು ಮುಚ್ಚಿ ಹೋಗುತ್ತವೆ. ಈ ರಂಧ್ರಗಳ ಮೂಲಕವೇ ಮಳೆನೀರು ಕೆಳ ಮಣ್ಣಿನೊಳಕ್ಕೆ ಸೋರುವುದಾಗಿದೆ ಹೀಗೆ ನೀರು ಸೋರುವುದು ಕಡಮೆಯಾಗುವುದರಿಂದ ಅಥವಾ ತಡೆಯಲ್ಪಡುವುದರಿಂದ ಮಣ್ಣಿನಲ್ಲಿ ನೀರಿನ ಮಟ್ಟವು ತಗ್ಗುತ್ತದೆ.

ನದಿಯ ಇಬ್ಬದಿಗಳಿಂದ ಮಣ್ಣುಸವೆಯುತ್ತಾ ಬಂದು ನದಿಯ ಹಾನಿಯುಲ್ಲಿ ಬಿದ್ದು, ಕೊನೆಗೆ ಸೆರೆಗೆ ಕಾರಣವಾಗುತ್ತದೆ. ಮಣ್ಣು ಸವೆತದ ಫಲವಾಗಿ ಅನೇಕ ಕೆರೆಗಳು, ದೊಡ್ಡ ದೊಡ್ಡ ನೀರಾತ್ರಿಯಗಳುಸಹ ಮುಚ್ಚಲ್ಪಡುತ್ತವೆ ದಕ್ಷಿಣ ಹಿಂದುಸ್ಥಾನದಲ್ಲಿರುವ ಕೆರೆಗಳೆಲ್ಲಾ ಮುಚ್ಚಲ್ಪಡಲು, ಸುತ್ತು ಮುತ್ತಲಿಂದ ಮಣ್ಣು ಸವೆದು ಕೆರೆಗಳಲ್ಲಿ ತುಂಬುವುದೇ ಕಾರಣ ಹೀಗೆ ಮಣ್ಣುಸವೆತವು ಮಣ್ಣನ್ನು ತೆರಪುಗೊಳಿಸುತ್ತವೆ. ನೀರಿನ ಮಟ್ಟವನ್ನು ತಗ್ಗಿಸುತ್ತವೆ. ನದಿ, ಕೆರೆ, ನೀರಾತ್ರಿಯಗಳನ್ನು ಕೆಡಿಸುತ್ತವೆ. ಆದುದರಿಂದ ಮಣ್ಣನ್ನು ಉಳಿಸಬೇಕಾದರೆ ಸವೆತವನ್ನು ತಡೆಯುವುದು ಅತಿ ಪ್ರಾಮುಖ್ಯ ಏರ್ಪಾಡಾಗಿದೆ.

ಎರಡನೆಯ ಕಾರಣವೆಂದರೆ ಭೂಮಿಯನ್ನು ಉಪಯೋಗಿಸುವ ಪೂಚಿಕೆಯು ತಪ್ಪಾಗಿರುವುದು. ಅಂದರೆ ಸಾಗುವಳಿ ಉದ್ದೇಶಗಳಿಗೆ ಅಯೋಗ್ಯವಾದ ಭೂಮಿಯಲ್ಲಿ, ಉದಾಹರಣೆಗಾಗಿ ಸೊಪ್ಪ ಇಳಿಜಾರುಗಳಲ್ಲಿ ಸಾಗುವಳಿ ಮಾಡುವುದು, ಸರಿಯಾದ ಕ್ರಮವಲ್ಲಿ ಸಾಗುವಳಿ ಮಾಡದಿರುವುದು, ಪೆಚ್ಚುವಾದ ಸಾರವನ್ನು ಮಣ್ಣು ತಿರುಗಿಪಡೆಯುವಂತೆ ಕೃಷಿ ಏರ್ಪಾಡಿಲ್ಲದಿರುವುದು, ಸಾಕಷ್ಟು ಗೊಬ್ಬರ ಹಾಕದಿರುವುದು, ಇವೆಲ್ಲವೂ ಮಣ್ಣಿನ ಫಲಕಾರಕ್ಯವು ತಗ್ಗಿಹೋಗಲು ಕಾರಣವಾಗುತ್ತದೆ. ಅವರೆ ಸ್ವಾಭಾವಿಕವಾಗಿ ಭರ್ತಿಮಾಡುವುದಕ್ಕಿಂತ ಹೆಚ್ಚಿಗೆಯಾಗಿ ಸಾರವು ಮಣ್ಣಿನಲ್ಲಿರಬೇಕೆಂದಾದರೆ ಗೊಬ್ಬರ ಹಾಕುವ ಕೃತಕ ಉಪಾಯ ಕೈಕೊಳ್ಳಬೇಕಾ. ಇದಿಲ್ಲದಿದ್ದರೆ ಫಲಿತಾಂಶ ಎಷ್ಟಿರಿಗೂ ಗೊತ್ತಿದೆ. ಕೊನೆಗೆ ಭೂಮಿಯು ಬಂಜರಾಗುತ್ತವೆ ಸಸಿ ಬೆಳೆಯುವುದಕ್ಕೂ ಮಣ್ಣಿನ ಸಾರವನ್ನು ಸಂರಕ್ಷಿಸುವುದಕ್ಕೂ ಗೊಬ್ಬರ ಹಾಕುವುದು ಅಗತ್ಯ. ಸಾಗುವಳಿಯು ಯಶಸ್ವಿಯಾಗಿರಲು ಇನ್ನೊಂದು ಅಡಚಣೆಯೆಂದರೆ ನೀರಾವರಿ ಸೌಕರ್ಯಗಳ ಕೊರತೆ.

ಆದುದರಿಂದ ಮಣ್ಣು ಸಂರಕ್ಷಣಾ ಯೋಜನೆಯಲ್ಲಿ ಮಣ್ಣು ಸವೆತ ತಡೆಯುವುದು, ಮಳೆ ನೀರನ್ನು ಸಂಗ್ರಹಿಸಿಟ್ಟುಕೊಳ್ಳುವುದು ಮುಖ್ಯವಾದ ಅಂತರಗಳಾಗಿವೆ

[ಮುಂದು ನರಿಯುವುದು]

ಬಳ್ಳಾರಿಯಲ್ಲಿ ಡಾಕ್ಟರು ಹರ್ಡೀಕರರು

ಹಿಂದೂಸ್ಥಾನೀ ಸೇವಾದಳದ ಸಂಸ್ಥಾಪಕರಾದ ಶ್ರೀ ಎನ್. ಎಸ್. ಹರ್ಡೀಕರರು 9 8–50 ಬಳ್ಳಾರಿಗೆ ಅನೇಕ ಪರ್ಯಾಯ ತಿರುಗಾಡಿ ಪ್ರಸಾರ್ತಾನಕೊಳ್ಳುವ್ಯಕ್ಕಾಗಿ ಅನೇಕ ಕಾಂಗ್ರೆಸ್ ಮುಕ್ತ ಮಾನ್ಯನಿಮಿತ್ರರು ಪ್ರೇಮಾದರಗಳಿಂದ ಬರಮಾಡಿಕೊಂಡರು. ಆಗಸ್ಟ್ 9ರ ಹುತಾತ್ಮ ವಿಮೋಚನೆಗಾಗಿ ಮಲ್ಲಶಜ್ಜನ ನ್ಯಾಯಾಲಯದ ಬಾಲಕರ ಅಪಾನವನ್ನು ಸ್ವೀಕರಿಸಿ ಒಂದು ವಿಷಯವಾಗಿಯಾದರೂ ಅನಕಾತರ ಸ್ವೀಕರಿಸಿಕೊಂಡು ಅವರು ಇಲ್ಲಿಗೆ ಬಂದಿದ್ದಕ್ಕಾಗಿ ಬಳ್ಳಾರಿಯ ಕಾರ್ಯಕರ್ತರಿಗೆ ಪಾಠವಿಲ್ಲದಂತಿತ್ತು.

ಮಲ್ಲಶಜ್ಜನ ನ್ಯಾಯಾನುಶಾಲೆಯ ಸುಬ್ರಾಣನಲ್ಲಿರುವ ಹುತಾತ್ಮರ ಸ್ಮಾರಕದ ಪವಿತ್ರ ಸ್ಥಳದಲ್ಲಿ ಧ್ವಜಾರೋಹಣವು ಸ್ವಾತಂತ್ರ್ಯಕಾಲದ 8 ಗಂಟೆಗೆ ಡಾ|| ಹರ್ಡೀಕರರಿಂದ ನೆರವೇರಿಸಲ್ಪಟ್ಟಿತು. ಆನಂತರ ಸಾಯಂ. 4 ಗಂಟೆಗೆ ರಾಯಲಸೀಮಾ ಪಾಲಿಟೆಕ್ನಿಕ್[ವಿದ್ಯುತ್ಕಳಾಶಾಲೆ]ಯನ್ನು ಸಂದರ್ಶಿಸಿದರು. ಅಲ್ಲಿಯ ಪ್ರಧಾನೋಪಾಧ್ಯಾಯರು ಅವರನ್ನು ಸತ್ಕರಿಸಿ ಅಲ್ಲಿ ನಡೆಯುತ್ತಿರುವ ವಿವಿಧ ಉದ್ಯೋಗಗಳ ವಿವರಣೆಯನ್ನು ಪರಿಚಯಮಾಡಿಕೊಟ್ಟರು. ನಂತರ ಟೇಕಾಸುಬ್ಬಪ್ಪನವರ ಅಧ್ಯಕ್ಷತೆಯಲ್ಲಿ ಸಭೆಯಾಗಿ ಅಧ್ಯಕ್ಷರು ಡಾ|| ಹರ್ಡೀಕರರನ್ನು ಪರಿಚಯಮಾಡಿಕೊಟ್ಟರು. ಶ್ರೀ ಹರ್ಡೀಕರರು ಸ್ವಾತಂತ್ರ್ಯಸಂಪಾದನೆಯಾನಂತರ ಭಾರತೀಯರು ಎಂಥ ಸಮಸ್ಯೆಗಳನ್ನೆದುರಿಸಬೇಕಾಯಿತು, ಹಿಂದಿನಕಿಲ್ಲ ಸೇವೆ ತ್ಯಾಗಗಳ ಫಲವಲ್ಲಿ ಸ್ವಾರ್ಥ ಲಾಭಬಡಕತನ ಪೈಶಾಚಿಕ ತನಗಳು ಬಂದು ಸ್ವಾತಂತ್ರ್ಯಕ್ಕೆ ಧಕ್ಕೆಯಾಗುತ್ತ ಸಂಭವನಿದೆಯೆಂದರು. ಯುವಕರು ಸಂಘಟಿತರಾಗದೆ ಯಾವ ರಾಷ್ಟ್ರೀಯ ಕಾರ್ಯವೂ ಸಾಧಿಸಲಾರದೆಂದರು. ಈ ಕಾರಣ ಉದ್ಯೋಗಶೀಲತೆ ಸಾಹಸ ಶಿಸ್ತು ಸೌಜನ್ಯಗಳು ಬೇಕೆಂದರು. ಶಿ.ಎಸ್. ವೆಂಕಟರಾವ್ ಮತ್ತಿನ್ನಿತರರು ಧನ್ಯವಾದಗಳನ್ನರ್ಪಿಸಿದರು.

ಮಧ್ಯಾಹ್ನ ಹರಿಜನ ಬಾಲಿಕಾನಿಲಯ ಬೇಸಿಕ್ ಟ್ರೈನಿಂಗ್ ಶಾಲೆ ಮಹಿಳೆಯರವು, ಕುರುಷರದು ಇವನ್ನು ನೋಡಿ ಎಲ್ಲಾ ವಿಷಯಗಳ ವಿವರಗಳನ್ನರಿತು ಪುರಪರ ಕಾಲೆಯಲ್ಲಿ ಶಿಸ್ತು ಸಂಘಟನೆಗಳನ್ನು ಕುರಿತು ಉದಾತ್ತೋಪನ್ಯಾಸವನ್ನು ಆಂಗ್ಲಭಾಷೆಯಲ್ಲಿ ಕೊಟ್ಟರು.

[ಸಾರ್ವಜನಿಕ ಸಭೆಯಲ್ಲಿ ಭಾಷಣ.]

....

ಡಾ|| ಹರ್ಡೀಕರರು ಸಭೆಯಲ್ಲಿ ಮಾಡಿದ ಭಾಷಣದ ಸಾರಾಂಶ ಹುತಾತ್ಮರದಿನಾಚರಣೆಯು ಆಗಸ್ಟ್ 9ರ ದಿನಕ್ಕೇ ಸೀಮಿತವಿರಬೇಕೆಂದು ನನಗನಿಸುವದಿಲ್ಲ. ಸ್ರ 1857ರ ವರ್ಷ ಜಾಂಸಿ ಲಕ್ಷ್ಮೀಬಾಯಿಯವರು ಇತರ ರಾಷ್ಟ್ರೀಯವ್ಯಕ್ತಿಗಳು ಉದಾತ್ತ ಧ್ಯೇಯಗಳಿಂದ ಪ್ರೇರೇಪಿತರಾಗಿ ಭಾರತ ಸ್ವಾತಂತ್ರ್ಯಕ್ಕಾಗಿ ಯುದ್ಧವನ್ನೇ ಹೂಡಿದರು ಅನಂತರ 19ನೆಯ ತತನಾಡವ ಕೊನೆಯವರೆವಿಗೂ ಸಣ್ಣಪುಟ್ಟ ಅಂದೋಲನಗಳು ನಡದೇ ಇದ್ದವು. 1905–6ರಲ್ಲಿ ಲಾರ್ಡ್ ಕರ್ಜನನ ಕಾಲದಲ್ಲಿ ಬಂಗಾಲವಿಭಜನೆಯಕಾಲಕ್ಕೆ ಬಂಗಾಲದಲ್ಲಿ ಮೊಡ್ಡ ಕ್ರಾಂತಿಯಾಗಿ ಸ್ವದೇಶೀ ಬಹಿಷ್ಕಾರಾಂದೋಲನವೂ ಆರಂಭವಾಯಿತು. ಖುದೀರಾಂ ಬೋಸ್ ಎಂಬುವ ಹುತಾತ್ಮರು ಆಗಿನಕಾಲಕ್ಕೆ ಆಗಿ ಹೋದರು. ಕೋಮಘಾಟುವಾರು ಎಂಬ ಹಡಗಿನಲ್ಲಿ ಹೋದ ಭಾರತೀಯರಿಗೆ 1912ರಲ್ಲಿ ಆದ ತೊಂದರೆಗಳಿಂದ ದೇಶದಲ್ಲಿ ಮತ್ತೆ ಕ್ರಾಂತಿಯ ಬೆಳವಣಿಗೆಯಾಯಿತು. 1920ರಹಿಂದೆ ಇವರಲ್ಲದೆ ಇತರ ಅನೇಕ ಹುತಾತ್ಮರು ಬಲಿದಾನಮಾಡಿ ರಾಷ್ಟ್ರೀಯ ಇತಿಹಾಸವನ್ನು ಉಜ್ವಲಗೊಳಿಸಿದರು

ಮಹಾತ್ಮಗಾಂಧಿಯವರು ರಾಜಕೀಯ ಕ್ಷೇತ್ರಕ್ಕೆ ಪ್ರವೇಶಿಸಿದನಂತರ ನಮ್ಮ ದೇಶದಲ್ಲಿ ಸ್ವಾಭಿಮಾನ ಸ್ವದೇಶಾಭಿಮಾನದ ಭಾವನೆಗಳುತ್ಪನ್ನವಾದವು. ಭಾರತೀಯರಿಗೆ ಮನುಷ್ಯತ್ವದ ಜ್ಞಾನವನ್ನು ಗಾಂಧೀಜಿಯವರಿಂದಾಯಿತು. ಹಿಂಸೆಯಿಂದ ರಾಜಕೀಯ ಲಕ್ಷ್ಯವು ಸಾಧ್ಯವಲ್ಲೆಂಬುದು ಮನವರಿಕೆಯಾಗಿ ಇಡೀರಾಷ್ಟ್ರದ ಜನರು ಗಾಂಧೀಜಿಯವರ ಅಹಿಂಸಾ ಸಿದ್ಧಾಂತದಲ್ಲಿ ವಿಶ್ವಾಸ ವಿಡಿದರಲ್ಲಿ ಒಂದಿತು. ಗಾಂಧೀಜಿಯವರು ನಡಸಿದ ವಿವಿಧ ಸತ್ಯಾಗ್ರಹಾಂದೋಲನಗಳಲ್ಲಿ ಅದರಲ್ಲೂ ಮುಖ್ಯವಾಗಿ 1942ರಲ್ಲಿ ಲಕ್ಷಗಟ್ಟಲೆ ಜನರು ಅದ್ಭುತತ್ಯಾಗ ಸಲ್ಲಿಸಿದರು ಪ್ರಾಣಾರ್ಪಣೆಮಾಡಿದರು. ಗಾಂಧೀಜೀಯವರ ಅಹಿಂಸಾತ್ಮಕ ಚಳವಳಿಯ ಪರಿಣಾಮದಿಂದ ಜಗತ್ತಿನ ರಾಜಕೀಯ ಪರಿಸ್ಥಿತಿಯ ಪರಿವರ್ತನೆಯಿಂದ ರಾಜಕೀಯ ಸ್ವಾತಂತ್ರ್ಯವು ಲಭ್ಯವಾಯಿತು. ಭಾರತೀಯರ ಪ್ರಯತ್ನಪೂರ್ವಕ ಯತ್ನಸ್ವಾಗತಕ್ಕೆ ಪ್ರಾಧಾನ್ಯ ಕೊಡಬೇಕಾಗುತ್ತದೆ. ಗಾಂಧೀಜೀಯವರ ಆದೇಶದಮೇರೆಗೆ ಅಷ್ಟು ಅಸಂಖ್ಯಾಕ ಜನರು ಇಂಥಾ ತ್ಯಾಗವಾಡಿ ಸ್ವಾತಂತ್ರ್ಯಗಳಿಸಿದರು. ಇದರಲ್ಲೇನೂ ಸಂದೇಹವಿಲ್ಲ.

ಆದರೆ ಈಗ ನಮ್ಮವರಲ್ಲಿ ಭಯಂಕರಸ್ವಾರ್ಥವು ಬಂದು ಬೇರೂರಿದೆ. ಹಿಂದೆ ತ್ಯಾಗಗಳ ಫಲವನ್ನಪೇಕ್ಷಿಸದ ಕಾಂಗ್ರೆಸ್ ಜನರಿಗೆ ಈಗ ತ್ಯಾಗಗಳ ಫಲಬೇಕಾಗಿದೆ. ನಾವು ಇಷ್ಟು ಅಧೋಗತಿಗಿಳಿಗಿರುವುದು ಮಹಾತ್ಮ ಗಾಂಧಿಯವರು ಹತಕೊಟ್ಟನಂತರ್ಗದಿಂದ ದೂರ ಹೋಗುತ್ತಿದ್ದೇವೆ. ಜನರಿಗೆ ಸಲ್ಲಿಸಬೇಕಾದ ವ್ಯಕ್ತಿಯೊಂದು ಸೇವೆಗಾಗಿ ಹಣವನ್ನಪೇಕ್ಷಿಸುತ್ತಿರಲಾಗಿದೆ. ಇಂಥಾ ನೀತಿಪತನವು ಹಿಂದೆ ಯಾವಾಗಲೂ ಸಂಭವಿಸಿದ್ದಿಲ್ಲ ಸತ್ಯಮೇವ ಜಯತೇ' ಎಂಬಂಥ ಸರ್ಕಾರದ ಧ್ಯೇಯವು ಎಲ್ಲೆಡೆಯಿಲ್ಲೂ ನಾಯಿವಾಗುತ್ತಲಿದೆ.

ಜನರ ಪ್ರವೃತ್ತಿಯು ಹೀಗಾಗುತ್ತಾ ನಡೆದರೆ ಗಳಿಸಿದ ಸ್ವಾತಂತ್ರ್ಯವೆ ಉಳಿಯುವುದು ಹೇಗೆ? ಅಧೋಗತಿಯಿಂದ ಪೂರ್ಣನಾಶವನ್ನು ತಡೆಯಬೇಕೆಂದರೆ ಗಾಂಧೀ ಜೀಯವರ ಆದರ್ಶಗಳನ್ನನುಸರಿಸಬೇಕು. ಹುತಾತ್ಮರ ದಿನಾಚರಣೆಯ ಈ ಶುಭಸಮಯದಲ್ಲಾದರೂ ನಮ್ಮ ಚಾರಿತ್ರ್ಯವನ್ನು ಶುದ್ಧಗೊಳಿಸಲು ಯತ್ನಿಸೋಣ. ಅಂಥಾ ಪ್ರತಿಜ್ಞೆ ಮಾಡೋಣ

ಇನ್ನೊಂದು ಮುಖ್ಯ ವಿಷಯ ನಮ್ಮ ತಾರೀರಿಕ ಬಲವನ್ನು ಸಾಕಷ್ಟು ಬೆಳೆಸಲು ಮಲ್ಲಸಜ್ಜನವ್ಯಾಯಾಮ ಶಾಲೆಯೆಂಥಸಂಸ್ಥೆಗಳು ಬೇಕು ಇಂಥಾ ಸಂಸ್ಥೆಗಳು ಬೆಳೆದಾಗಲೇ ರಾಷ್ಟ್ರದ ಧೃಢತೆಯಾದೀತು. ಅದರಲ್ಲೂ ಛಿದ್ರವಾದ ಕರ್ನಾಟಕದಲ್ಲಿ ಇಂಥಾ ಸಂಸ್ಥೆಗಳ ಬೆಳವಣಿಗೆಗೆ ಸರ್ವ ಸಹಾಯ ಸಹಕಾರಗಳು ಅವಶ್ಯಕ ಪಂದನಾರ್ಪಣೆ ಹುತಾತ್ಮರಿಗೆ ತ್ರಿದ್ವಾಂಜಲಿಯ ಅರ್ಪಣೆಯ ನಂತರ ಸಭೆಯು ಮುಗಿಯಿತು.

—:::—

ಹಳ್ಳಿಗಳಿಗೆ ಹೆಚ್ಚು ಪೋಸ್ಟಾಫೀಸುಗಳು.

....

ಭಾರತ ಸರಕಾರದವರು ಈ ವರ್ಷದಂತ್ಯದೊಳಗಾಗಿ 2000 ನುತ್ತು ಅದಕ್ಕಿಂತ ಹೆಚ್ಚು ಜನಸಂಖ್ಯೆಯ ಹಳ್ಳಿಗಳಲ್ಲಿ 4608 ಪೋಸ್ಟಾಫೀಸುಗಳನ್ನು ಪ್ರಾರಂಭಿಸಲಿರುವರು. ಈ ಕಾರ್ಯವು ಮುಗಿದ ನಂತರ 2000 ಜನಸಂಖ್ಯೆಯ ಮತ್ತು ಪೋಸ್ಟಾಫೀಸಿಲ್ಲದ ಒಂದೂ ಊರು ನೋರೆಂಬುದಿಲ್ಲ. ಮದ್ರಾಸು ಪ್ರಾಂತ್ಯದಲ್ಲೇ 2538 ಪೋಸ್ಟಾಫೀಸುಗಳು ತೆರೆಯಲಾಗುತ್ತವೆ.

ಜನಗಳ ಬೀಡಿಕೆ ಸಹಕಾರ ಮುಖ್ಯವಾದುದು.

— ಆಹಾರ ಪರಿಸ್ಥಿತಿ —

ಅಕ್ಕಿಯು ಸೀದಾದಲ್ಲಿ ಕಡಮೆ

....

ಮದ್ರಾಸು ಪ್ರಾಂತದಲ್ಲಿ 13-8-50 ರಿಂದ ಅಕ್ಕಿಯು ಸೀದಾದಲ್ಲಿ ಕಡಮೆಯಾಗಿ ತಲಾ 6 ಔನ್ಸು ಕೊಡಲು ನಿಶ್ಚಯವಾಗಿದೆ. 16 ಔನ್ಸುಗಳಿಂದ 6 ಔನ್ಸುಗಳಿಗೆ ಈ ಪ್ರಮಾಣವು ಕ್ರಮೇಣ ತಗ್ಗುತ್ತ ಬಂದಿದೆ ಅಕ್ಕಿಯ ಸಮೇತವಾಗಿ 12 ಔನ್ಸು ಆಹಾರ ಧಾನ್ಯಗಳನ್ನು ಕೊಡುವ ಆಶ್ವಾಸನವನ್ನು ಮುಖ್ಯ ಮಂತ್ರಿಗಳೇನೊ ಇತ್ತಿರುವರು. ಅಕ್ಕಿಯ ಜೊತೆಗೆ ಗೋಧಿ, ಮೆಕ್ಕೆಜೋಳ ಕೊಡುವವರಂತೆ. ಆದರೆ ಯಾವ ರೇಷನ್ ದಿಪೋದಲ್ಲೂಕೂಡ ಗೋಧಿಯ ಸಂಗ್ರಹ ಸರಿಯಾಗಿಲ್ಲ. ಈ ಕಾರಣ ಸರ್ಕಾರದ ಆರ್ಡರ್ ಕಾಗದದಲ್ಲೇಲುಳಿಯುವದೋ ಏನೋ ಎಂಬ ಅನುಮಾನವಾಗಿದೆ. ಆಂತು ದೇಶದಲ್ಲಿ ಭೀಕರಪರಿಸ್ಥಿತಿ ಉಪ್ಪನ್ನವಾಗಿದೆ.

—

ಟಿಬೆಟ್ಟನ್ನು ಕಮ್ಯೂನಿಸ್ಟರು ಮುತ್ತಿದರು.

ಹಿಮಾಲಯದ ಉತ್ತರ ಪ್ರದೇಶದಲ್ಲಿರುವ ಟಿಬೆಟ್ಟನ್ನು ಕಮ್ಯೂನಿಸ್ಟರು ಮುತ್ತಿದರೆಂದು ವಾರ್ತೆ ಒಂದಿದೆ. ಟಿಬೆಟ್ ನೇತಕ್ಕೆ ಅವಿರೋಧವಾದವರು ಯಾವ ಸಹಾಯವನ್ನೂ ಸಲ್ಲಿಸುವುದಿಲ್ಲೆಂದು ಗೊತ್ತಾಗಿದೆ.

—

ನೋಟೀಸು

ಕೊಸಪೇಟೆಯ ಜಿಲ್ಲಾ ಮುನಸಿಫರ ಕೋರ್ಟಿನಲ್ಲಿ

ಎಸ್. ನಂ 157-50

ವಾದಿ—ಕಸ್ಟಿಹಳ್ಳಿ ಚಿಲ್ಲಪ್ಪ

ಪ್ರತಿವಾದಿ—ಗೂರೀಪುರದ ಪಾಸರ ರಾಮಪ್ಪ

ನೋಲ್ಟಾಣಿಸಿದ ನಂಬರಿನ ವಾಯ್ದೆಯು ಪ್ರತಿವಾದಿಯ ಹಾಜರಾಗಿ 24—8—50 ಕ್ಕೆ ಹಾಕಲಾಗಿದೆ ಆದಿನ ಪ್ರತಿವಾದಿಯು ಪ್ರಾ. 11ಗಂಟೆಗೆ ಕೋರ್ಟಿಗೆ ಹಾಜರಾಗಿ ತನ್ನ ಆಕ್ಷೇಪಣೆಗಳನ್ನು ತಿಳಿಸಬೇಕು. ಇಲ್ಲವಾದರೆ ಕೇಸು ವಿಚಾರಣೆಗೊಳಗಾಗಿ ಏಕಪಕ್ಷ ತೀರ್ಮಾನವಾಗುವದು.

ಎಂ. ರಂಗನಾಥಾಚಾರ್,
ವಾದಿಯ ವಕೀಲರು

ಫಾರ್ಮೋಸಾ ದ್ವೀಪದಮೇಲೆ ದಾಳಿಯಾದರೆ ಅಮೆರಿಕೆಯು ಸಂರಕ್ಷಿಸುವುದೆಂದು ಅಧ್ಯಕ್ಷ ಟ್ರೂಮನ್ನರು ಹೇಳಿದರು.

Hallo !!

NARASEPALLI WORK SHOPS

BELLARY

Undertake Turning, Electric Welding & Tempering of

Spare parts of all kinds

Reasonable charges. Trial Solicited

Telegrame OIL MILLS. **Telephone 57**

ಭಾರತೀಯರಿಗೆ "ಆಗಸ್ಟ್" (ಶುಭ)

ಆಗಸ್ಟ್ ಎಂಬ ಹೆಸರು ಭಾರತೀಯನ ಕಿವಿಗೆ ಬಿದ್ದೊಡನೆಯೇ ಅವನ ಮೈ-ಮನಗಳು ಪುಲಕಿತವಾಗದೆ ಇರವು. ಇಂತಹ ಮಹತ್ವವು ಭಾರತದಲ್ಲಿ ಆಗಸ್ಟ್ ತಿಂಗಳಿಗೆ ಬಂದಿದೆ. ಒಬ್ಬ ಚಿಕ್ಕ ವಿದ್ಯಾರ್ಥಿಯಿಂದ ಹಿಡಿದು ಮಹಾಮಹಿಮರವರೆಗೂ ಪ್ರತಿಯೊಬ್ಬ ಭಾರತೀಯನಿಗೆ "ಆಗಸ್ಟ್" ಎಂಬ ಪದವು ವಿಶೇಷ ವಿಶ್ವಾಸ, ಪ್ರೇಮ ಮತ್ತು ಸಂಸ್ಕಾರಗಳನ್ನು ತಿಂಗಳಾಗಿರುವುದು.

ಭಾರತೀಯರ ಸ್ವಾತಂತ್ರ್ಯದ ಸಂಪಾದನೆಗಾಗಿ ಅಖಂಡವಾಗಿ ಹೋರಾಡಿದ ಅಖಿಲ ಭಾರತ ಕಾಂಗ್ರೆಸ್ಸು, ತನ್ನ ಆಂದೋಲನಕ್ಕೆ "ಕರ್ಮಯೋಗ" ರೂಪಕೊಟ್ಟ, 'ಗೀತಾ ರಹಸ್ಯ'ದ ಉದ್ದಾಮ ಕರ್ಮಯೋಗಿ ಲೋಕಮಾನ್ಯ ಬಾಲಗಂಗಾಧರ ತಿಲಕರನ್ನು ಕಳೆದುಕೊಂಡಾಗ ಆಗಸ್ಟ್ ತಿಂಗಳ ಒಂದನೆಯ ದಿನಾಂಕ (1920)ದಲ್ಲಿಯೇ.

ಸ್ವಾತಂತ್ರ್ಯಾಂದೋಲನದ ನಿಜರೂಪ ಕೊನೆಯ ಹೋರಾಟದಲ್ಲಿ ಕಾಂಗ್ರೆಸ್ಸು ಮುಂಬಯಿಯಲ್ಲಿ ಸಭೆ ಗೂಡಿ 'ಜಗತ್ತಾರ್ಕ್ಷ್ಯವಾದ' ನೂರು ಇಲ್ಲವೆ ಸಾವು' ನಿರ್ಣಯವನ್ನು ಕೈಕೊಂಡು ಬ್ರಿಟಿಶ್ ಸಾಮ್ರಾಜ್ಯವಾದಿತ್ವಕ್ಕೆ "ಭಾರತವನ್ನು ಬಿಟ್ಟುಬಿಡಿ" (ಕ್ವಿಟ್ ಇಂಡಿಯಾ) ಎಂಬ ಚರಮ ಸಂದೇಶವನ್ನು ಕೊಟ್ಟಿದ್ದು ಇದೇ ಆಗಸ್ಟ್ ತಿಂಗಳ ಒಂಬತ್ತನೆಯ ದಿನಾಂಕ (1942)ದಲ್ಲಿಯೇ.

ಬಾಪೂಜಿಯ ಬಲಗೈಯಾದ, ಬಾಪೂಜಿಯ ನೆರಳಾದ, ಬಾಪೂಜಿಯ ಹೃದಯದ ಪ್ರತಿಧ್ವನಿಯಾದ, ಪ್ರೇಮ ಮಹಸೇನಭಾಯಿ ದೇಸಾಯಿ, ಪ್ರಭುತ್ವ ಅಳಿತವಾದ ಕ್ರೂರ ಪಬ್ಬಾಳಿಕೆಯುಗಭ್ರಗುಡಿಯಾದ ಯೆರವಡ ಸೆರಮನೆಯಲ್ಲಿ, ಸ್ವಾತಂತ್ರ್ಯದ ಕೋರಾಟ ನಡೆಸುತ್ತಲೇ ಪ್ರಾಣಾರ್ಪಣ ಮಾಡಿದ್ದು ಇದೇ ಆಗಸ್ಟ್ ತಿಂಗಳ ಹದಿನೈದನೆಯ ದಿನಾಂಕ (1942)ದಲ್ಲಿಯೇ. ಇದೇ ದಿನವೇ ನನ್ನ ಹುಟ್ಟುಳ್ಳುಳ್ಳಿಯೂ ಸ್ವಾತಂತ್ರ್ಯದ ಹೋರಾಟದಲ್ಲಿ ಬಾಪೂ ಹಿಡುವರ "ಮಾಡು ಇಲ್ಲವೆ ಮಡಿ" ಸಂದೇಶದಂತೆ ಒಬ್ಬನಿದ್ಯಾರ್ಥಿಯು ಅತಳಿತದ ದರ್ಪಣಗುಂಡಿಗೆ ತನ್ನ ದೇಹವನ್ನು ಆಹುತಿಕೊಟ್ಟನು.

ಯಾರ ಆಗ್ಲಾನಿದ್ಯಾಲಯ ಪರೀಕ್ಷೆಯಲ್ಲಿಯೂ ತನ್ನ ಹೆಸರಿಲ್ಲದ ಅತರ ತಾಯಿ ನುಡಿಯಲ್ಲಿಯ ತನ್ನ ಕವನಗಳನ್ನು ಸುಸ್ಪಷ್ಟವಿದ್ದ ಆಂಗ್ಲ ಭಾಷೆಯಿಂದ ಭಾಷಾಂತರ ಗೈಸುವಂತೆ ಮಾಡಿ, "ಸೊಬೆಲ್" ಪಾರಿತೋಷಕವನ್ನಿತ್ತ 'ಗೀತಾಂಜಲಿ' ಯಿಂದ ವಿಶ್ವಕ್ಕೇ ಪರಿಚಿತ' ಮಾಂತ್ರನನ್ನು ಸುರಿದ ವಿಶ್ವಕವಿ ಶ್ರೀ ರವೀಂದ್ರನಾಥ ಠಾಕೂರರು ಚಿರವಿಶ್ರಾಂತಿಯನ್ನು ಪಡೆದದ್ದೂ ಇದೇ ಆಗಸ್ಟ್ ತಿಂಗಳ ಏಳನೆಯ ದಿನಾಂಕ (1941)ದಲ್ಲಿಯೇ.

ಪತಕಾನು ಪತಕವಿದ್ದ ಪರಕೀಯ ದಾಸ್ಯದ ನೊಗವನ್ನು ಹೊತ್ತು ನಳುಗುತ್ತಿದ್ದ ಭಾರತವು, ದಾಸ್ಯದ ನೊವನ್ನು ಕಿತ್ತೊಗೆದು ಸ್ವಾತಂತ್ರ್ಯಸೌಧವನ್ನು ಮಾಡಿ, ಬ್ರಿಟಿಶರ ಪ್ರತಿನಿಧಿಯನ್ನು ತನ್ನ ಸ್ವತಂತ್ರರಾಜ್ಯದ ಪ್ರಥಮ ಆತಳಿತಗಾರನಾಗಿ ಮಾಡಿಕೊಂಡು ಪೂರ್ಣ ಆಸ್ವತಂತ್ರಗಳ ಹದಿನೈದನೆಯ ದಿನಾಂಕ(1947)ದಲ್ಲಿಯೇ.

ಕೊನೆಯದಾಗಿ ಜಗತ್ತನ್ನೇ ಭಯದಿಂದ ಶೋಷದಿಂದ ನರಳುಗಿದ್ದ ಭಾರತವು ಹೊರಗೆ ಭಾರತದ ರಾಷ್ಟ್ರೀಯ ಸೈನ್ಯವನ್ನು ಪ್ರಬಲಸಮೂಹವನ್ನು ಸಂಘಟಿಸಿ, ಭಾರತದ ಸುಸ್ಪಷ್ಟ ಸೆನೆನಿಯಾವ ಅಂದ ಮಾತ್ರದಿಂದಲೆ ಸ್ವಾತಂತ್ರ್ಯದೀಪ ನೆಂಬ ಪರಂ ಸ್ವತಂತ್ರ ಭಾರತ ಸರಕಾರವನ್ನು ಸ್ಥಾಪಿಸಿ ಉಳಿದ ಪ್ರಮುಖ ರಾಷ್ಟ್ರಗಳ ಮನ್ನಣೆಯನ್ನು ಆ ಸ್ವತಂತ್ರ ಸರಕಾರಕ್ಕೆ ಪಡೆದುಕೊಂಡು ಇಂಫಾಲವನ್ನೆರೆಗೂ ಬ್ರಿಟಿಶರನ್ನು ಬೆನ್ನಟ್ಟಿ ಓಡಿಸಿದ, ಅಪ್ರತಿಮ ತೇಜಸ್ಸಿನ, ಬಂಗಾಲದ ಹುಲಿ, ಬಾಬೂಜಿ ಸುಭಾಷ್‌ಚಂದ್ರಬೋಸರು ವಿಮಾನ ಅಪಘಾತದಲ್ಲಿ ಒಲುಕಿ ಇದೇ ಆಗಸ್ಟ್ ತಿಂಗಳ 18 ನೇ ದಿನಾಂಕ (1945)ದಲ್ಲಿಯೆ ಮರಣಹೊಂದಿದ ರೆಂದು ಹೇಳಲಾಗುತ್ತದೆ.

ನೋಟೀಸು

ಜಿಲ್ಲಾ ಮುನ್ಸೀಫು ಕೋರ್ಟು ಆದವಾನಿಯಲ್ಲಿ.

ವಾದಿ— ಬಾಡದ ನರಸಪ್ಪಾಚಾರ್ ತಂದೆ ರಾಮಾಚಾರ್

ಪ್ರತಿವಾದಿ—ಕಲ್ಲಮ್ಮ alias ಲಕ್ಷ್ಮಿ, ವೇನಮ್ಮ ಂಡೆ ಭೀಮಾಚಾರ್ ದೇವಸಮುದ್ರಂ

—ಪ್ರತಿವಾದಿಗೆ ನೋಟೀಸು—

ನೀವು ಪ್ರೊನೋಟುಮೂಲಕ ಕಡೆದ ಮೊತ್ತ ಅದರ ಬಡ್ಡಿ ರೂ. 177—7—0 ಮತ್ತು ಮುಂದಾಗುವ ಬಡ್ಡಿ ಕೋರ್ಟು ಖರ್ಚುಗಳಿಗಾಗಿ ವಾದಿಯು ನಿಮ್ಮ ಮೇಲೆ ದಾವಾ ಹೂಡಿರುತ್ತಾನೆ. ಅದರ ವಾಯಿದೆಯು 17—8—50ಕ್ಕೆ ಇದೆ. ಸದರಿ ವಾಯಿದೆಯ ದಿನ ಸಾಯಂಕಾಲ 11 ಗಂಟೆಗೆ ನೀವು ಖುದ್ದಾಗಲಿ ವಕೀಲರ ಮೂಲಕವಾಗಿಯಾಗಲಿ ಹಾಜರಾಗಿ ನಿಮ್ಮ ಆಕ್ಷೇಪಣೆ ತಿಳಿಸಬೇಕು. ಇಲ್ಲವಾದರೆ ನಿಮ್ಮ ಮೇಲೆ ಎಕ್ಸಪಾರ್ಟೆ ಡಿಕ್ರಿ—ಯಾ—ಏಕಪಕ್ಷ ತೀರ್ಮಾನವಾಗುವದೆಂದು ಈ ಮೂಲಕ ತಿಳಿಸಲಾಗಿದೆ.

ಹಾಶ್ಮಿ ಸತ್ಯನಾರಾಯಣರಾವು,
ವಾದಿಯ ಅಡ್ವೊಕೇಟು.

ಪು||ರಾ||ರಾ|| ಹೊಸಪೇಟೆ
ನಿ||ಸು.|| ಕೋರ್ಟಿನಲ್ಲಿ

O P 183/50

ಅರ್ಜಿದಾರರು—
1 ವರಕೇರಿ ಕೊಟ್ರಬಸಮ್ಮ
2 ವರಕೇರಿ ಮಲ್ಲನಗೌಡು
3 ವರಕೇರಿ ನಾಗನಗೌಡು

2,3 ಅರ್ಜಿದಾರರು ಮೈನರುಗಳು ನಿಗೇನಾನು ಕೊಟ್ರಬಸಮ್ಮ

2,3 ಅರ್ಜಿದಾರರ ಅನಿಭಕ್ತ ತಂದೆ, ಮತ್ತು 1ನೇ ಅರ್ಜಿದಾರಳ ಗಂಡ ಆದ ಲೇಟು ಬಸವನಗೌಡನ ಚಾಲಿತ, ಇನ್ಸೂರೆನ್ಸು ಮೊತ್ತಗಳು 1500 ಗಳಿಗೆ ಮೇಲ್ಪಂಡ ಅರ್ಜಿದಾರರು ವಾರಸರೆಂದು ಸದ್ರಿ ಮೊತ್ತಗಳು ವಸೂಲು ಮಾಡಿಕೊಳ್ಳಲು ವಾರಸು ಸರ್ಟಿಫಿಕೇಟು ಕೊಡುವದಾಗಿ ಅರ್ಜಿ ದಾಖಲು ಮಾಡಿರುತ್ತಾರೆ. ಸದ್ರಿ ಅರ್ಜಿ 25—8—50ಕ್ಕೆ ವಾಯಿದಾ ಇರುತ್ತದೆ. ತಕರಾರು ಇದ್ದವರು ವಾಯಿದಾಕ್ಕೆ ಹಾಜರು ಆಗಬೇಕು.

ಎಸ್. ನಾರಾಯಣರಾವು,
ಅರ್ಜಿದಾರರ ವಕೀಲರು
ಹೊಸಪೇಟೆ

Filmistan's

Shabnam

11 Lilting Songs & 6 Scintillating Dances

KAMINI KAUSHAL
DILIP KUMAR & PARO
MUBARAK

ಶಬ್ನಮ್

(ಆಕರ್ಷಕ ವಾಕ್ಚಿತ್ರ.)

ನೋಡುವ ಸುಸಂದರ್ಭ ಕಳೆದು ಕೊಳ್ಳಬೇಡಿರಿ.

[ಇದರ ಕಥೆಯನ್ನು ಒಳಪುಟಗಳಲ್ಲಿ ನೋಡಿರಿ]

ಹಿಂದೀ ಮಹಾ ವಿದ್ಯಾಲಯ; ಬಳ್ಳಾರಿ.

[1931 ಸ್ಥಾಪಿತ. ಬಳ್ಳಾರಿ ಜಿಲ್ಲಾ ಹಿಂದೀ ಪ್ರೇಮಿಗಳ ಮಂಡಲವಾತ್ರಯದಲ್ಲಿ ರಿಜಿಸ್ಟರ್ಡ್]

ಮದ್ರಾಸು ಸರಕಾರದಿಂದ ಮಾನ್ಯತೆ ಇದೆ.

ಪ್ರಾರಂಭಿಕ ವರ್ಗಗಳಿಗೆ ಮಾಸಿಕ ೫।—ತುಲ್ಲು — ಉನ್ನತ ವರ್ಗಗಳಿಗೆ ಮಾಸಿಕ ೫।—ತುಲ್ಲು

ವಾರ್ಡಲಾ ಹೈಸ್ಕೂಲು ಕಟ್ಟಡದಲ್ಲಿ ಪ್ರಾತಃಕಾಲ—ಸಾಯಂಕಾಲ ಹಿಂದೀ ಕಾಲೇಜಿನ ವರ್ಗಗಳು ನಡೆಯುತ್ತಿವೆ. ಪ್ರವೇಶ ಪರೀಕ್ಷಾ—ವಿಶಾರದ ವರ್ಗಗಳಲ್ಲಿಗೆ ಪ್ರಾರಂಭಿಕ ವರ್ಗಗಳಿಗೂ ಪ್ರವೇಶವಿದೆ. ವರ್ಗಗಳಿಗೆ ಸಂಬಂಧಿಸಿದ ಪಾಠ್ಯಪುಸ್ತಕಗಳು ವಿದ್ಯಾಲಯದಲ್ಲಿ ದೊರೆಯುತ್ತವೆ. ಒಳ್ಳೆಯ ಪುಸ್ತಕಭಂಡಾರವಿದೆ. ಶ್ರೇಷ್ಠ ವಾರಪತ್ರಿಕೆ, ಮಾಸಪತ್ರಿಕೆಗಳು ಲಭ್ಯ ಇತರ ವಿವರಗಳಿಗೆ ಸ್ವಾಂಪಿಟ್ಟು ಬರೆಯಿರಿ.

ಪ್ರಿನ್ಸಿಪಾಲ್.

NAVA BHARAT BELLARY. (Reg. No: M. 4746) 15—8—50

ನವಭಾರತ ಬಳ್ಳಾರಿ

(Nationalist Weekly)

To

Sri..... ..

ಚಂದಾವರಗಳು.	Subscription Rates
ವರ್ಷಕ್ಕೆ 5—0—0	One Year 5—0—0
೬ ತಿಂಗಳಿಗೆ 3—0—0	Six months 3—0—0
ಆರು ತಿಂಗಳ ಕಡಿನೆ ಚಂದಾ ಸ್ವೀಕರಿಸುವುದಿಲ್ಲ	Subscription will not be accepted for less than 6 months.

Printed at Jai Paramatma Press, Edited & Published by T. B. Keshava Rao

—[ಬಳ್ಳಾರಿಯ ಉರ್ದು ರಾಷ್ಟ್ರೀಯ ವಾರ ಪತ್ರಿಕೆ.]—

ಉತ್ತಿಷ್ಠತ ! ಜಾಗೃತ !! ಪ್ರಾಪ್ಯ ವರಾನ್ನಿಬೋಧತ !!!

ವರ್ಷ 13 | ಸೋಮವಾರ ಆಗಷ್ಟು 28th 1950 | ಸಂಪಾದಕ ಮತ್ತು ಪ್ರಕಾಶಕ
ಸಂಚಿಕೆ 29 | | ಟಿ. ಬಿ. ಕೇತವರಾವ್

ಸ್ವ ರಾ ಜ್ಯ

—[೧]—

'ಸ್ವರಾಜ್ಯ' ಎಂಬ ತಲ್ಪದವು ಪವಿತ್ರವಾದ ಹಾಗು ವೇದ ಕಾಲದಿಂದ ಬಂದ ತಲ್ಪವಾಗಿದೆ ಸ್ವಂತದ ಆಡಳಿತೆ ಅಥವಾ ಆತ್ಮನಿಗ್ರಹ ಎಂದು ಅದರರ್ಥ. "ಸ್ವಾತಂತ್ರ್ಯ" ಎಂಬ ತಲ್ಪಕ್ಕಿರುವ, ಎಲ್ಲ ಬಂಧನ (ನಿಗ್ರಹ) ಗಳಿಂದಲೂ ಸ್ವತಂತ್ರ, ಎಂಬ ಅರ್ಥ ಈ ತಲ್ಪಕ್ಕಿಲ್ಲ.

ನಮ್ಮ ದೇಶದ ದೀನ ದಲಿತರಿಗೂ ಸ್ವಾತಂತ್ರ್ಯ ದೊರೆತರೆವೊಶ್ಯ ನಾನು ಅದಕ್ಕೆ ಸ್ವರಾಜ್ಯ ಎನ್ನುವೆ.

ನಮ್ಮನ್ನು ಸುಸಂಸ್ಕೃತರನ್ನಾಗಿ ಮಾಡುವದು ಹಾಗು ನಮ್ಮ ಸಂಸ್ಕೃತಿಗೆ ಪಾವಿತ್ರ್ಯ ಹಾಗು ಸ್ಥೈರ್ಯಗಳನ್ನು ಒದಗಿಸಿ ಕೊಡುವದು ಸ್ವರಾಜ್ಯದ ಉದ್ದೇಶವಾಗಿರದಿದ್ದರೆ ಅದಕ್ಕೇನೂ ಬೆಲೆಯಿಲ್ಲ ನಮ್ಮ ಎಲ್ಲ ವ್ಯವಹಾರಗಳಲ್ಲೂ, ಪೂಸಗಿ ಇತರ ಸಾರ್ವಜನಿಕವಿರಂತಿ, ನೀತಿಗೆ ಪರಮೋಚ್ಚ ಸ್ಥಾನವನ್ನೀಯಬೇಕೆಂಬುದೇ ನಮ್ಮ ಸಂಸ್ಕೃತಿಯ ತಿರುಳು.

'ನನ್ನ-ನಮ್ಮ-ಕನಸಿನ ಸ್ವರಾಜ್ಯದಲ್ಲಿ ಜಾತಿ-ಧರ್ಮಗಳ ಭೇದಭಾವ ಕೈದೆಯಿಲ್ಲ ಅದು ಕೇವಲ ಕಲಿತನರ ಅಥವಾ ಸಿರಿವಂತರ ಸೊತ್ತೂ ಅಲ್ಲ. ಸ್ವರಾಜ್ಯವು ಎಲ್ಲರಿಗಾಗಿ ಇರಬೇಕಾದುದು. ಈ ಎಲ್ಲರಲ್ಲಿ ಮೇಲೆ ಕೀಳಿದವರೂ ಬರುತ್ತಾರೆ ಅದರೆ ಅವರಲ್ಲಿ ಶುರುಡರು ಕುಂಟರು ಹಾಗು ಬಳಲುವ, ಬೆವರು ಸುರಿಸುವ ಲಕ್ಷಾಂತರ ಜನರೂ ಬರುತ್ತಾರೆಂಬುದು ಮತ್ತಷ್ಟು ಒತ್ತಿ ಹೇಳಬೇಕಾದ ಮಾತು.

ತೀರ ಬಡವನಿಗೂ ಕೂಡ ಇದು ತನ್ನ ದೇಶ, ಅದರ ಅಭಿವೃದ್ಧಿಯಲ್ಲಿ ತನ್ನದೂ ಫಲಿತಾಂಶವಾರಿಯೂಗುವಂತಹ ಅಂಗವಿದೆ ಎಂದೆನಿಸುವಂಥ ಭಾರತಕ್ಕಾಗಿ ನಾನು ದುಡಿಯುವೆ; ಆ ಭಾರತದಲ್ಲಿ ಮೇಲು ಕೀಳೆಂಬ ವರ್ಗಭೇದಗಳಿರವು; ಎಲ್ಲ ಜಾತಿಗಳಜನರೂ ಅಲ್ಲಿ ಸೌಹಾರ್ದದಿಂದ ವಾಸಿಸುವರು; ಅಸ್ಪೃಶ್ಯತೆ ಹಾಗು ಮದಿರೆ ಈ ವಾಪಗಳಿಗೆ ಅಲ್ಲಿ ಸ್ಥಾನವಿಲ್ಲ. ಪೆಂಗಸರು ಕೂಡ ಗಂಡಸರಷ್ಟೇ ಹಕ್ಕುಬಾಧ್ಯತೆಗಳನ್ನುಪಯೋಗಿಸುವರು.

ಸತ್ಯವಶ್ಟು ಬಲಿ ಕೊಟ್ಟು ಸ್ವಾತಂತ್ರ್ಯತನ್ನು ಗಳಿಸುವದಕ್ಕಿಂತ ಭಾರತವು ಹಾಳಾಗಿಹೋದರೆ ನೆಟ್ಟಗೇದು ನಾನು ತಿಳಿಯುವೆ.

ಎಚ್ಚೆತ್ತ ಸ್ವತಂತ್ರ ಭಾರತವು ನರಳುತ್ತಿರುವ ಜಗತ್ತಿಗೆ ಶಾಂತಿ ಹಾಗು ಸದಿಚ್ಛೆಗಳ ಸಂದೇಶವನ್ನು ಬೀರಬಲ್ಲದು.

—ಮಹಾತ್ಮಾ ಗಾಂಧೀ.

ಕರೂರವರ ಕರೆ

— ಕಳ್ಳಪೇಟಿಗರ ನಿರುದ್ಧ —

ಮುಖ್ಯಮಂತ್ರಿ ಶ್ರೀ ಜವಾಹರಲಾಲ ನೆಹರು ಅವರು ರಾಷ್ಟ್ರವನ್ನು ಸ್ವಾದ್ಧೀಕರಿಸಿ ಅಕಾಶವಾಣಿಯಲ್ಲಿ ಭಾಷಣಮಾಡುತ್ತ ಆಹಾರಪರಿಸ್ಥಿತಿಯು ಅತ್ಯಂತ ಬಿಕ್ಕಟ್ಟಿನದಾಗಿದ್ದು ಯುದ್ಧವೆಂದೇ ಅದರೊಡನೆ ಹೋರಾಡಬೇಕು. ಹಾಗೂ ಮಾರ್ಗದಲ್ಲಿ ಬರುವ ಎಡರು ತೊಡರುಗಳನ್ನೆಲ್ಲ ನಿವಾರಿಸುವ ನಿರ್ಧಾರವಿರಬೇಕೆಂದು ಹೇಳಿದರು.

ಅವರು ಮತ್ತೂ ಹೇಳಿದ್ದೇನಂದರೆ-

ಆಹಾರ ಪರಿಸ್ಥಿತಿ ಬಿಕ್ಕಟ್ಟಿನ ಬಾಗಿದೆ ಆದಾಗ್ಯೂ ಬರಗಾಲದ ಮಾತೆತ್ತುವದು ಘನ್ನತನ ಮತ್ತು ಮೂರ್ಖತನ ಈಗ ಸಾಕಷ್ಟು ಆಹಾರ ಸಂಗ್ರಹವಿದ್ದು ಸಾರಿಗೆಯಿ ತೊಂದರೆಯೇ ಹೆಚ್ಚಾಗಿದೆ.

ಜನರೆಲ್ಲರೂ ಕ್ಷುಲ್ಲಕ ರಾಜಕಾರಣ ಮರತು ಮುಂಬೆ ಒಂದುಸರಕಾರಕ್ಕೆ ಸಹಾಯವಾಡಬೇಕು ಭಯಕ್ಕೆ ಅವಕಾತಪರಬಾರದು ಕಳ್ಳಪೇಟಿಗರಿಂದ ಉಗ್ಗೋತ್ಪತ್ತಿಯ ಕೈಕೊಳ್ಳಲಾಗುವದು ಆಹಾರ ಅಡಳಿತದಲ್ಲಿ ಸ್ವಲ್ಪ ಸಡಿಲಾವರೆ ಅದನ್ನು ಅವರ ವಿರುದ್ಧ ಒರೆದಿಡಲಾಗುವದೆಂದು ಜಿಲ್ಲಾ ಮ್ಯಾಜಿಸ್ಟ್ರೇಟರನ್ನು ನೋಡಲ್ಲೊಂಡು ಎಲ್ಲ ಅಧಿಕಾರಿಗಳಿಗೆ ಸೂಚನೆಯನ್ನು ಕೊಡಲಾಗಿದೆ ಜನರು ಕಳ್ಳಸಂಗ್ರಹವಾಡಿ ಬೆಲೆ ಏರಿಸುವದು ಅಪರಾಧವಾಗುತ್ತದೆ ನಾನೆಲ್ಲರೂ ಇಂದಿನ ಪರಿಸ್ಥಿತಿಯು ಧೈರ್ಯವನ್ನು ಮನದಂದು ಅದನ್ನು ನಿರ್ಧಾರ ಮತ್ತು ಒಕ್ಕಟ್ಟಿನೀಂದ ಎದುರಿಸೋಣ

ಕಾಶ್ಮೀರ ಸಂಸ್ಥಾನದ ವಿಲೀನ

ಭಾರತಪಾಕಿಸ್ತಾನಗಳಲ್ಲಿ ಕಾಶ್ಮೀರದಲ್ಲಿಗ್ಯೆ ಒಪ್ಪಂದವಾಗುವದು ತಕ್ಷ ವಿಲ್ಲೆಂದು ಸಂಯುಕ್ತರಾಷ್ಟ್ರ ಸಂಘದ ಮಧ್ಯಸ್ಥಗಾರರಿರಾದ ಸರ್ ಓವರ್ ಡಿಕ್ಸನ್ನರು ಪ್ರಕಟಿಸಿದ್ದಾರೆ. ಕಾಶ್ಮೀರದ ಒಹುಭಾಗವನ್ನು ಹಾಗೆಯೆ ವಿಭಜಿಸಿ ಉಳಿದ ಭಾಗದಲ್ಲಿ ವಾತ್ರ ಮತಗಣನೆ ನಡೆಸಬೇಕೆಂಬ ಮಧ್ಯಸ್ಥಗಾರರ ಸೂಚನೆಯನ್ನು ಭಾರತವು ಒಪ್ಪಿತು. ಆದರೆ ಪಾಕಿಸ್ತಾನವು ನಿರಾಕರಿಸಿದ ಕಾರಣ ಶ್ಲಿಸ್ತೆ ಪರಿಸ್ಥಿತಿಯುಳ್ಳನ್ನಾಯಿತು ಎಲ್ಲಕಡೆಗೂ ಸಾರ್ವತ್ರಿಕ ಮತಗಣನೆ ನಡೆಯಬೇಕೆಂದು ಪಾಕಿಸ್ತಾನವು ಹಟಹಿಡಿಯಿತು—ಸಂಯುಕ್ತ ರಾಷ್ಟ್ರ ಸಂಘಕ್ಕೆ ವರದಿಮಾಡಲು ದಿನ್ನನ್ನಕು ಲಂಡನ್ನಿನ ಮಾರ್ಗವಾಗಿ ಲೇಕ್‌ಸಕ್ಸೆಸ್‌ಗೆ ಹೊರಟರು.

ಸೊನ್ನದಲ್ಲಿ ಸ್ವಾತಂತ್ರ್ಯ ದಿನಾಚರಣೆ.

ಇಲ್ಲಿಯ ಪ್ರಾಥಮಿಕ ಶಾಲೆಯ ಪ್ರಧಾನ ಶ್ರೀ ಗುರುಸಿದ್ಧಯ್ಯನವರು ಸಹಾಯೋಪಾಧ್ಯಾಯಂದಿರ ಶ್ರೀ ನೀಲಕಂಠಯ್ಯನವರ ನೇತೃತ್ವದಲ್ಲಿ ಬಾಲಬಾಲಿಕೆಯರ ಪ್ರಭಾತಫೇರಿಯು ದೇಶನಾಯಕರ ಭಾವಚಿತ್ರಗಳಿಂದೊಡಗೂಡಿ ಮೆರವಣಿಗೆ ಸೂರಟ್ಟು ನವಚೈತನ್ಯವನ್ನುಂಟುಮಾಡಿತ್ತು. ಆಂಜನೇಯ ದೇವಸ್ಥಾನದಲ್ಲಿ ಸಾಯಂಕಾಲ ಶ್ರೀ ಸ. ನಾಗಪ್ಪನವರ ಅಧ್ಯಕ್ಷತೆಯಲ್ಲಿ ಶ್ರೀ ವಿರೂಪಾಕ್ಷಯ್ಯನವರು ಮಹಾತ್ಮಜೀ ಜೀವನ ಚರಿತ್ರೆ ಮತ್ತು ಸ್ವಾತಂತ್ರ್ಯಮಹತ್ವವನ್ನು ಸವಿಂಚನವಾಗಿ ತಿಳಿಯಹೇಳಿದರು.

—[ ]—

ಮು॥ರಾ॥ಶ್ರೀ ಹೊಸಪೇಟೆ ದಿ॥ಮು॥ ಕೋರ್ಟಿನಲ್ಲಿ

ಎಸ್ ಸಿ 211—1950

ವಾದಿ - ಶ್ರೀ ವೆಂಕಟರಮಣಸ್ವಾಮಿ ಸೆಪ್ಪರ್ ನೆಂಟು ಭಂಡಾರ ಲಿ, ಅದರಪರ ಕಾರ್ಯದರ್ಶಿ ಟಿ. ಶ್ರೀನಿವಾಸಮೂರ್ತಾಚಾರು ಹರಪನಹಳ್ಳಿ.

ಪ್ರತಿವಾದಿಗಳು—

(1) ಎ ಲಿಂಗರಾಜು ವೈನರು
ನಿಗೆವಾನಿ ತಾಲ್ಲೂ ಗಂಗಮ್ಮ
ಕೊಟ್ಟೂರು.

(2) ಎ ಗಂಗಮ್ಮ ,,
ನಿನ್ನಮೇಲೂ ಮತ್ತು ಇನ್ನಿ ಬ್ಬರಮೇಲೂ ವಾದಿಯು ರೂ. 127—15—0ಗೆ ದಾವಾದಾಖಲು ಮಾಡಿರುತ್ತಾನೆ ಸದರಿ ನಂಬರು 8—9—50ಕ್ಕೆ ವಾಯಿದೆ ಇರುತ್ತದೆ ನಿಮಗೇನಾದರೂ ಆಕ್ಷೇಪಣೆ ಇದ್ದಲ್ಲಿ ಸದರಿ ವಾಯಿದೆ ದಿನ ಕೋರ್ಟಗೆ 11 ಗಂಟೆಗೆ ಹಾಜರಾಗತಕ್ಕದ್ದು ಇಲ್ಲವಾದ್ರೆ ನಿಮ್ಮಮೇಲೆದಿಕ್ರಿ ಆಗುತ್ತದೆ.

ಹು. ಗೋವಿಂದಾಚಾರು,
ಅಡ್ವೊಕೇಟು,
ಹೊಸಪೇಟೆ

—(o)—

ಮು॥ರಾ॥ಶ್ರೀ ಹೊಸಪೇಟೆ ದಿ॥ ಮು॥ ಕೋರ್ಟಿನಲ್ಲಿ

ಒ ಎಸ್ 151—47, 83—50

ಅಂಡಾ ಇ. ಎಪ್ 107—50

ವಾದಿ— ಚಿತ್ರಿಕ ವಿರೂಪಾಕ್ಷಪ್ಪ (ಡಿ ಎಚ್)

ಪ್ರತಿವಾದಿಗಳು—

(1) ಬಿ. ಕೆ. ರಾಘವೇಂದ್ರರಾವು,
(2) ,, ಜಯಭೀಮಶೇಷರಾವು
(3) ,, ಹುಲಿಕಂಟೆರಾವು
(4) ,, ಗೋವಾಲರಾವು
(5) ,, ರಾಜರಾವು.
(6) ,, ಸತ್ಯನಾರಾಯಣರಾವು

4 to 6 ವೈನರುಗಳು ನಿಗೇವಾನಿ ಜಯ ಭೀಮಶೇನೆರಾವು.

ನೋಟಿನ ನಂಬರಿನಲ್ಲಿ ವಾದಿ ಪ್ರತಿವಾದಿಗಳ ಆಯಕಆಸ್ತಿಗಳನ್ನು ಕೊಡಲಾಂ ಕೋರಿರುತ್ತಾನೆ. ಮತ್ತು ಕೋರ್ಟಿನಲ್ಲಿ ವಾದಿ ಸಾಕ್ಷಿಯನ್ನು ಮಾಡಲು ಅಜೀಜಿಟ್ಟಿರುತ್ತಾನೆ ವಾಯಿದಾ 14—9—50ಕ್ಕೆ ಇರುತ್ತದೆ. ಕಕಾರರು ಇದ್ದರೆ ಪ್ರತಿವಾದಿಗಳು ಕೋರ್ಟಿಗೆ ಹಾಜರಾಗಬೇಕು

ಎಸ್ ನಾರಾಯಣರಾವು
ವಾದಿ ವಕೀಲರು
ಹೊಸಪೇಟೆ

28—8—50 —[ನವಭಾರತ]—

ಒಕ್ಕಲತನವು ಆರ್ಥಿಕ ಕಟ್ಟಡದ

—ಆಧಾರಸ್ತಂಭ—

ಶ್ರೀ ಪಾಟೀಲ ಮಲ್ಲನಗೌಡರು,

ಮುಂಬಯಿ ರಾಜ್ಯದ ಒಕ್ಕಲತನ ಹಾಗೂ ಅರಣ್ಯ ಖಾತೆಯ ಮಂತ್ರಿಗಳು

"ಭಾರತ ದೇಶ ಸ್ವಾಮುಖ್ಯವಾಗಿ ಒಕ್ಕಲತನ ದೇಶ ಎಂಬುದು ಸ್ವಯಂಸಿದ್ಧ ಮಾತಾದರೂ ಅದನ್ನು ಎಷ್ಟುಸಾರಿ ಪುನರುಚ್ಚರಿಸಿದರೂ ಕಡಿಮೆಯೆ. ದೇಶದ ಉದ್ದಿಮೆಗಳ ಅಭಿವೃದ್ಧಿಗಾಗಿ ನಾವು ಎಷ್ಟೇ ಪ್ರಯತ್ನಿಸಿದರೂ ಒಕ್ಕಲತನವು ನಮ್ಮ ಆರ್ಥಿಕ ಕಟ್ಟಡದ ಆಧಾರಸ್ತಂಭವಾಗಿ ಉಳಿಯಲೇ ಬೇಕು. ಸ್ವಾತಂತ್ರ್ಯ ಪ್ರಾಪ್ತಿಯನಂತರ ದೇಶದಲ್ಲಿಯ ಎಲ್ಲ ಜನಪ್ರಿಯ ಸರಕಾರಗಳು ಒಕ್ಕಲಿಗನ ಸ್ಥಿತಿಗತಿಯನ್ನು ಸುಧಾರಿಸುವ ಕಾರ್ಯದಲ್ಲಿ ಹೆಚ್ಚು ಆಸ್ಥೆವಹಿಸಿವೆ. ಎಲ್ಲ ಸರಕಾರಗಳು, ಒಕ್ಕಲಿಗನನ್ನು ಜಮೀನುದಾರ ಹಾಗೂ ಸಾಹುಕಾರರ ಬಂಧನದಿಂದ ಬಿಡಿಸುವದಕ್ಕಾಗಿ ಕಾಯಿದೆಗಳನ್ನು ಮಾಡಲು ಪ್ರಾರಂಭಿಸಿದವು. ಆ ಕಾಲಕ್ಕೆ ಎದ್ದಷ್ಟೋಭೆ, ಸಮಸ್ಯೆ ಎಷ್ಟು ಕಠಿಣವಾಗಿತ್ತೆ ಯೆಂಬುದಕ್ಕೆ ಸಾಕ್ಷಿಯಾಗಿದೆ.

'ಮುಂಬಯಿ ರಾಜ್ಯ ಈ ವಿಷಯದಲ್ಲಿ ಸುದೈವಿಯಿದೆ! ನಮ್ಮಲ್ಲಿ ಎಲ್ಲಿಯೆ ಒಳ್ಳೆಯ ಪ್ರಮಾಣದಲ್ಲಿ ಕಚ್ಚಾಗಿ ಪ್ರಾಣಿಕತನವಿದ್ದಾಗ ಕೃತಕವಾರಿ ಪದ್ಧತಿ ಇದ್ದ ಕೆಲವು ಜಮೀನುದಾರಿ ಪದ್ಧತಿಗಳು ನಿರ್ಮೂಲವಾಗಿವೆ ಆಥವಾ ಆಗುತ್ತಲಿವೆ. ಆದರೂ ನಮ್ಮಲ್ಲಿ ಪಟ್ಟಣದಲ್ಲಿದ್ದು ಹೊಲಗಳಿಂದ ಬರುವ ಆದಾಯದಿಂದ ಉಬ್ಬಸ ಜೀವಿಸುವ ವರ್ಗವೊಂದಿದೆ ಆ ವರ್ಗದವರಿಂದ ಒಕ್ಕಲಿಗರ ಶೋಷಣೆಯಾಗಬಾರದೆಂದು ಕೂಲ ಸಾಗುವಳಿ ಕಾಯಿದೆಯನ್ನು ನಾವು ಅನುಲಿನಲ್ಲಿ ತಂದಿದ್ದೇವೆ. ಸಾಮಕಾರಿಕೆಯನ್ನು ನಿಯಂತ್ರಿಸಲುಕೂಡ ಕಾಯಿದೆಮಾಡಲಾಗಿದೆ ಆ ಮೂಲಕ ಒಕ್ಕಲಿಗರಿಗೆ ಹಣಕಾಸು ಬಗೆಹರಿಸುವ ದೃಷ್ಟಿಯಿಂದ ಸಹಕಾರಿ ಮತ್ತು ಬೆಳೆಸುವ ಆಂದೋಲನ ಸಹ ಕೈಕೊಳ್ಳಲಾಗಿದೆ.

ಆಹಾರ ಸ್ವಾವಲಂಬನ.

"ಈಗಿನ ಮೂರು ವರುಷಗಳಲ್ಲಿ ಹೆಚ್ಚು ಆಹಾರ ಬೆಳೆಯುವ ಆಂದೋಲನಕ್ಕೆ ಪ್ರಾಮುಖ್ಯತೆ ಕೊಡಲಾಗಿದೆ. ಒಕ್ಕಲತನದ ಕ್ಷೇತ್ರವನ್ನು ವಿಸ್ತರಿಸಿದ ಭಾರತ 125 ಕೋಟಿ ರೂ. ಗಳನ್ನು ಆಹಾರ ಆಯಾತಕ್ಕಾಗಿ ಖರ್ಚು ಮಾಡುವದು ಹಾಸ್ಯಾಸ್ಪದವಾಗಿದೆ. 1951ರ ಕೊನೆಯೊಳಗಾಗಿ ನಾವು ಆಹಾರ ಸ್ವಾವಲಂಬಿಗಳಾಗಲೇ ಬೇಕಾಗಿದೆ. ಅಂತೆಯೆ ಉದ್ದಿಮೆಗಳ ಕಡೆಗೆ ಕಡಿಮೆ ಲಕ್ಷ್ಯ ಕೊಡಲು ಅನುಕೂಲವಾಗಿ ನಮ್ಮ ಸ್ವಾತಂತ್ರ್ಯವನ್ನು ನಾವು ಭದ್ರಪಡಿಸಬಹುದು. 1951ರೊಳಗಾಗಿ 1 ಲಕ್ಷ ಟನ್ ಹೆಚ್ಚು ಆಹಾರ ಬೆಳೆಯಬೇಕೆಂಬ ಗುರಿಯನ್ನು ನಾವು ಇಟ್ಟುಕೊಂಡಿದ್ದೇವೆ. ಹತ್ತಿಯನ್ನು ಹೆಚ್ಚಾಗಿ ಬೆಳೆಯುವಂತೆ ಕ್ರಮ ಕೈಕೊಂಡಿರುವದಕ್ಕಾಗಿ ಪೊದಲಾದ ಜಂಟಿನ ಪ್ರಕಾರಗಳನ್ನೂ ಬೆಳೆಯಲು ನಾವು ವ್ಯವಸ್ಥೆ ಮಾಡಿದ್ದೇವೆ.

"ಅವಧಿ ಮರ್ಯಾದೆಗೆ ವಿರುದ್ಧವಾದರಿಂದ ಮೀರ್ಘಾವಧಿ ಯೋಜನೆಗಳಿಗೆ ಪ್ರಾಮುಖ್ಯತೆ ನೀಡಿ ದಾದರೂ ಕಣ್ಣಿನ ಕಾಯಿಲೆ ಹಾಕುವದನ್ನು ಅದರಂತೆ ಭೂಸುಧಾರಣೆಯ ಕಾರ್ಯಗಳನ್ನು ನಿರ್ಲಕ್ಷಿಸುವಂತೆ ಇಲ್ಲ. ಅದಕ್ಕಾಗಿ 'ಮುಂಬಯಿ ಭೂಸುಧಾರಣೆ ಪದ್ಧತಿ"ಎಂದು ಒಟ್ಟಾಗಿ ಕರೆಯಲ್ಪಡುವ ಹಲವಾರು ಕ್ರಮಗಳನ್ನು ನಾವು ಕೈಕೊಂಡಿದ್ದೇವೆ. 1942 ರಿಂದ '47ರ ಅವಧಿಯಲ್ಲಿ ಒಡ್ಡು ಪೊದಲಾದವುಗಳನ್ನು ಹಾಕಿ 7 ಲಕ್ಷ ಎಕರೆ ಭೂಮಿಯನ್ನು ಸುಧಾರಿಸಲಾಯಿತು. ಅದಕ್ಕಾಗಿ 70 ಲಕ್ಷರೂ ವೆಚ್ಚ ಮಾಡಲಾಯಿತು. ಅದರಲ್ಲಿ 3—4 ಭಾಗವನ್ನು ಒಕ್ಕಲಿಗರಿಂದ ವಸೂಲಮಾಡಲಾಗುವದು. ಭೂಸುಧಾರಣೆ ಕಾರ್ಯಕ್ಕಾಗಿ ಸರಕಾರವು ಧನ ಸಹಾಯ ನೀಡುತ್ತಿದೆ ಕರಬೇತಿ ಕೇಂದ್ರಗಳನ್ನು ಪ್ರಾರಂಭಿಸಲಾಗಿದ್ದು ಸಂಶೋಧನ ಕಾರ್ಯವನ್ನೂ ಕೈಕೊಳ್ಳಲಾಗಿದೆ

ಒಕ್ಕಲತನ ಸುಧಾರಣೆ.

—ಭೂಸುಧಾರಣೆಯ ಅನುಕೂಲತೆಗಳು—

ಒಕ್ಕಲಿಗನಿಗೆ ಸುಧಾರಿಸಿದ ಒಕ್ಕಲತನದ ಶಿಕ್ಷಣವನ್ನೊಡಗಿಸಿ ಸುಧಾರಣೆಯ ಅನುಕೂಲತೆಗಳನ್ನು ಒದಗಿಸುವದೂ ಪ್ರಮುಖವಾದ ವಿಷಯವಾಗಿದೆ ಇದಕ್ಕೆ ಒಕ್ಕಲತನ ವಿಸ್ತರಣಾ ಕಾರ್ಯ ಎಂದು ಕರೆಯುತ್ತಾರೆ. ಯುದ್ಧಕ್ಕೆ ಮುಂಚೆ ಪ್ರತಿಯೊಂದು ಜಿಲ್ಲೆಗೆ ಒಬ್ಬ ಒಕ್ಕಲತನ ಅಧಿಕಾರಿಯಿರುತ್ತಿದ್ದ. ಅವನೆ ಎಲ್ಲವನ್ನೂ ನೋಡಿಕೊಳ್ಳಬೇಕಾಗುತ್ತಿತ್ತು. ಎರಡು ವರ್ಷಗಳಿಂದೆ ನಾವು ಒಕ್ಕಲತನ ವಿಸ್ತರಣಾ ಸರ್ವೀಸನ್ನು ಜಮೆ ರಿಕೆಯ ಮಾದರಿಯ ಮೇಲೆ ಪುನರ್ಘಟಿಸಿದೆವು ಅನುಕೂಲತೆ ನೋಡಿಕೊಂಡು ಅವಶ್ಯಕ ಮಾರ್ಪಾಡು

6ನೆ ಪುಟಕ್ಕೆ

166

28—8—50 —[ನವಭಾರತ]—

ಆಟಂಬಾಂಬು ಪ್ರಯೋಗಿಸಲು ಟ್ರೂಮರ್ ಕಾರಣ.

ಅಮೆರಿಕನರು ಹಿರೋಶಿಮಾದಲ್ಲಿ ಮಾಡಿದ ಅನರ್ಥದ ಪುನಃ ಪಾಠವೇ?

1945ನೆಯ ಆಗಸ್ಟ್ 6ನೆಯ ಪ್ರಾತಃಕಾಲ 8—15ಕ್ಕೆ ಜಾಪಾನಿನ ಮುಖ್ಯ ನಗರಗಳಲ್ಲೊಂದಾದ ಹಿರೋಶಿಮಾವು ಆಟಂಬಾಂಬುಪ್ರಹಾರದಿಂದ ತತ್ತರಿಸಿತು. ಆಗ ನಗರದ ಜನಸಂಖ್ಯೆಯು 3,12000 ಇದ್ದಿತು. ಬಂದು ಸೆಕೆಂಡ್‌ಗೊಳಗಾಗಿ ಅಸಂಖ್ಯವು 1,36000ಕ್ಕೆ ಇಳಿಯಿತು. ಅಂದರೆ 176 ಸಾವಿರ ಜನರು ಕ್ಷಣನೇ ಸತ್ತರು. ಶೇಕಡ 90 ಭಾಗದ ಕಟ್ಟಡಗಳು ನೆಲಕ್ಕುರುಳಿದವು. 76 ಸಾವಿರ ಮನೆಗಳಲ್ಲಿ 8ಸಾವಿರ ಹಾಗೆಯೇ ನಿಂತಿದ್ದವು. ನಗರದಲ್ಲಿನ ಓಟಾ ನದಿಯನ್ನು ದಾಟಲು ಕಟ್ಟಲಾದ ಸೇತುವೆಗಳಲ್ಲಿ 24 ಸೇತುವೆಗಳಲ್ಲಿ ಬಿದ್ದು ಹೋದವು. ಆಟಂಬಾಂಬ್ ಪ್ರಯೋಗದಿಂದ ಸಂಭವಿಸಿದ ಅನಾಹುತಗಳ ವರ್ಣನೆಗಾಗಿ ಬರೆದ ಅನೇಕ ಲೇಖನಗಳಲ್ಲಿ—ಆಗ ನಗರದಲ್ಲಿ ವಾಸವಾಗಿದ್ದ ಶ್ರೀಮತಿ ಯೋಕಾ ಓಟಾರವರು ಬರೆದ ಲೇಖನದ ಆಧಾರದಿಂದ ಈ ಈ ಕೆಳಭಾಗಗಳನ್ನು ಕೊಡಲಾಗಿದೆ

"ಆಟಂಬಾಂಬ್ ಪ್ರಹಾರವಾದ ಕ್ಷಣಾರ್ಧದಲ್ಲಿ ಅಸಂಖ್ಯಾಕ ಸ್ತ್ರೀ ಪುರುಷರು ಮಕ್ಕಳು ಹಿರೋಶಿಮಾ ನಗರದಿಂದ ಭಯಗ್ರಸ್ತರಾಗಿ ಓಡುತಿದ್ದರು. ಎಲ್ಲಿ ಹೋಗಬೇಕೆಂಬುದೇ ಅವರಿಗೆ ವಿಸ್ಮೃತಿಯಾಗಿದ್ದಿತು. ಅವರ ಮೈಮೇಲಿನ ಪೋಷಾಕು ಛಿದ್ರಛಿದ್ರವಾಗಿದ್ದಿತು. ಅವರ ಕಣ್ಣಿನ ಹುಬ್ಬುಗಳು ಪೂರಾ ಸುಟ್ಟು ಹೋಗಿದ್ದವು. ಕೆಲವರಿಗೆ ಚರ್ಮವು ಸುಟ್ಟು ತೊಗಲಿನಿಂದ ಈ ಬಾಂಬ್ ಜನಜಂಗುಳಿಯು ಈ ರೀತಿಯಲ್ಲಿ ಹೊರಬೀಳಬೇಕಾಪರಿಸ್ಥಿತಿ ನಿರ್ಮಾಣ ಮಾಡಿಕೊಳ್ಳುತ್ತಿದ್ದರು. ಅವರ ಉಡುಪೆಲ್ಲಿಂ ಸುಟ್ಟುಹೋಗಿದ್ದಿತು ಸ್ತ್ರೀಯರ ತೀರೆಗಳು ಸುಟ್ಟು ಅವುಗಳ ಪ್ರಿಂಟಿನ ಗುರುತು ಬೇಹದ ನೀಲಿ ಮುದ್ರಣವಾಗಿದ್ದಿತು

ನೀರಲ್ಲಿ ಧುಮುಕಿದ ಮೇಲೆ ಮೇಲೆ ಬಂದಿದ್ದವರು ಉಬ್ಬಿದಂತೆ ಆಗಾಗಿಂಗೆಳೆಯುಬ್ಬಿಕೊಂಡಿದ್ದವು ತಲೆಯ ಭಾಗವನ್ನೆಲ್ಲಾ ಪೂರ್ಣವಿರೂಪಮಾಡಿದಂತೆಂಬಂತೆ ಕೇಳಭಾಗದ ಕೂದಲಿನ ಜುಟ್ಟು ಇದ್ದಂತೆಯೂ ಕಾಣುತ್ತಿತ್ತು ಅವರಿಗೆ ಕಣ್ಣುಕಾಣುತ್ತಿದಂತೆ ತೋರಲಿಲ್ಲ. ಈ ಜನಜಂಗುಳಿಯು ಸಮುದ್ರತೀರದಂಚಿನಲ್ಲಿಗೆ ಶಾಂತವಾಗಿ ಕೂಡಿದಾಗ ಅವರಲ್ಲಿ ಬೇಯುತ್ತಿದ್ದಿತು

ದಾರಿಬಿಡಿಸಲಾಗದ ಹೆಣಗಳನ್ನು ಈಚೆಗೆ ಎಳೆಯೋಣವೆಂದರೆ ಶಕ್ತಿಯೇ ಕುಂದಿರುತ್ತಿತ್ತು— ರಕ್ತ ಪ್ರವಾಹವು ಬೇರೆಸಾಯನದ್ರವ್ಯಗಳೊಂದಿಗೆ ಹರಿಯುತಿತ್ತು. ಹಿರೋಶಿಮಾದಲ್ಲಿ ಕಳೆದುಳಿದ ನಿರಾಶ್ರಿತರಿಗೆ ಪಕ್ಕಿಗಳಾಗಿ ನಷ್ಟುಂಬಕರಾದರು. 3—4 ತಿಂಗಳಾದಮೇಲೆ ಸ್ವಲ್ಪಮಟ್ಟಿಗೆ ಶವಸಂಸ್ಕಾರವಾಯಿತು.

ಇಂಥಾ ಅನರ್ಥಗಳನ್ನುಂಟುಮಾಡಿದ ಆಟಂಬಾಂಬ್ ಪ್ರಯೋಗವನ್ನು ಪುನಃಪರೀಕ್ಷಾರ್ಥವಾಗಿ ಪ್ರಯೋಗಿಸಿ ತಮ್ಮ ಪ್ರತಿಭೆಯನ್ನು ಬೆಳಿಸಿಕೊಳ್ಳಲು ಅಮೇರಿಕಾದ ಆಡಳಿತವರ್ಗವು ಆಲೋಚಿಸುತ್ತಿದೆಯಂತೆ. ಇದನ್ನು ಪ್ರತಿಭಟಿಸಲು ಎಲ್ಲರೂ ಸಿದ್ಧರಾಗಬೇಕು.

ಆಟಂಬಾಂಬ್ ಪ್ರಯೋಗಕ್ಕೆ ಜಾತಿಕಾರಣವಾದ ಕ್ಕೂ ನಮ್ಮ ಪೀಠಭೂಮಿಯನ್ನು ಕೂಡಲೇ ವ್ಯಕ್ತಪಡಿಸಬೇಕು

ಅಸಾಮಿನಲ್ಲಿ ಪ್ರಳಯ

ನದಿಯ ಗತಿಯು ಬದಲಾಯಿತು

ಬೇಸಾದದ ಉತ್ತರಕ್ಕೂ ಕಂತ್ತು ಅಸಾಮಿನಲ್ಲಿ ಕಳೆದ ವಾರ ಅದ್ಭುತ ಭೂಕಂಪವಾಗಿ ಅನೇಕ ಮನೆಗಳು ಬಿದ್ದುಹೋದವು. ನದಿಯು ಕೆಲವೆಡೆಗಳಲ್ಲಿ ಸಾಯಿವಾಗಿ ಮತ್ತೆ ಕೆಲಭಾಗಗಳಲ್ಲಿ ಭೂಗರ್ಭದಿಂದ ಗಂಧಕ ವಗೈರೆ ರಾಸಾಯನಿಕ ಪ್ರವ್ಯಗಳನ್ನು ಕೊರತಂದಿತು. ನದಿಯಲ್ಲಿ ವಾಸಿಸುತ್ತಿದ್ದ ಮೀನುಗಳು ತಮ್ಮ ಪ್ರಾಣಗಳನ್ನುಳಿಸಿಕೊಳ್ಳಲು ಗಡ್ಡೆಗೆ ಒಂದು ಹೊರಗೆ ಸತ್ತಿವೆ. ಒಂದುಕಡೆಯಲ್ಲಿ ಬ್ರಹ್ಮಪುತ್ರಾ ನದಿಗೆ ದೊಡ್ಡ ದೊಡ್ಡ ಒಡ್ಡುಗಳು ಆಡ್ಡವಾಗಿ ನದಿಯು ಬೇರೆಡೆ ಹರಿಯಲು ಪ್ರಾರಂಭಿಸಿ ಹಳ್ಳಿಗಳೂ ಪಟ್ಟಣಗಳೂ ಮುಳುಗುವ ಭಯವೆದ್ದಿದೆಯಿತು. ಡಿಬ್ರೂಗಢ್ ಮತ್ತು ಬಾಂಬರ್ ವಿವಾಸಗಳು ಈ ಕಷ್ಟಗಳನ್ನೊಡೆದು ನದಿಯ ದಾರಿಯನ್ನು ಸುಗಮವಾಗಿಸಲು ಬಂದಾಗ ಮತ್ತೆ ಭೂಕಂಪವಾಗಿ ಒಡ್ಡುಗಳು ತಮ್ಮಷ್ಟಕ್ಕೆ ತಾವೇ ಒಡೆದು ಹರಿದು ಪೂರ್ವದ ದಾರಿಯನ್ನು ಸುಗಮವಾಗಿಸಿದವು. ಒಂದುಕಡೆ ಕೆಲಸಕ್ಕೆ ಹೋದ ಅಧಿಕಾರಿ ಸಿಬ್ಬಂದಿ ಜನ ಸಂಖ್ಯೆ 50 ಇರಬಹುದು. ಅವರು ಒಂದು ದ್ವೀಪದಲ್ಲಿದ್ದಂತೆ ಭಾಸವಾಗುತ್ತಿದೆ. ಸುತ್ತಮುತ್ತಲೆಲ್ಲಿಂಲೂ ಕದಲುವಂತಿಲ್ಲ. ಊಡಲು ಟೈಲ್ಸಿಲ್ಲ. ಉಣ್ಣಲೇನೂ ಇಲ್ಲ. ಸಂದೇಶಕಳಿಸುವಾಣವೆಂದರೆ ಸಾಧನವಿಲ್ಲ. ಕೆಲವೆಡೆಗಳಲ್ಲಿ ದನಕರುಗಳೊಂದಿಗೆ ಗ್ರಾಮಗಳು ಭೂಗರ್ಭದಲ್ಲಿ ಕಾಣದಾಗಿವೆ— ಹೀಗಾಗಿ— ಸೈರಂಗಳು ನಾನಾವಾಗಿವೆ. ದನಕರುಗಳಿಗೆ ಮೇವಿಲ್ಲದಂತಾಗಿದೆ ಕುಡಿಯಲಿಕ್ಕೆ ನೀರಿಲ್ಲದಂತಾಗಿದೆ. ಪ್ರಜೆಗಳು ಭಯಂಕರ ಸಂಕಟಕ್ಕೊಳಗಾಗಿದ್ದಾರೆ

ಇಂಥಾ ಆಪತ್ತಿನ ಸಮಯದಲ್ಲಿ ಸರ್ವತ್ರಿಕವಾಗಿ ಆಹಾರದ ಕೊರತೆಯಿರುವಾಗ ಅಸಾಮಿನ ಭೂಕಂಪೆಯನ್ನು ಮರೆಯುವಂತಿಲ್ಲ. ನಮ್ಮ ಕೈಲಾದ ಸಹಾಯವನ್ನು ಒದಗಿಸಲೇಬೇಕು— ಎಲ್ಲರೂ ಕೊಡುಗೈಯಿಂದ ತಮ್ಮ ತಮ್ಮ ಸಹಾಯವನ್ನು ರಾಷ್ಟ್ರಾಧ್ಯಕ್ಷ ರಾಜೇಂದ್ರ ಪ್ರಸಾದರಿಗೆ ಕಳುಹಿಸಲು ವಿನಂತಿ

ಕೊರಿಯನ್ನರಿಗೆ ಯುದ್ಧ ಬೇಡ

ಕೊರಿಯಾ ರಣರಂಗದಲ್ಲಿ ಸಂಚರಿಸಿಬಂದ ಪಿ. ಟಿ. ಐ. ಸುದ್ದಿಗಾರರಾದ ಎಂ ಶಿವರಾಮ್ ಅವರು ತಮ್ಮ ಅನುಭವಗಳನ್ನು ತಿಳಿಸಿದ್ದಾರೆ

ಅವರು ಹೇಳುವ ಪ್ರಕಾರ ಕೊರಿಯನ್ನರಿಗೆ ಯುದ್ಧವು ಬೇಕಿಲ್ಲ ಅವರು ಯುದ್ಧದಲ್ಲಿ ಉತ್ಸಾಹ ತೋರಿಸುತ್ತಿಲ್ಲ ಅಮೆರಿಕೆಯ ಸೈನಿಕರಾದರೂ ಕೊರಿಯಾವನ್ನು ನರಕದಂತೆ ಭಾವಿಸುತ್ತಲಿರುವರು. ಜಪಾನಿನಲ್ಲಿ ಸುಖಜೀವನ ನಡೆಸಿದ ಇವರು ಇಲ್ಲಿಂದ ಹೊರಬೀಳಲಿತ್ತಿಸುತ್ತಿರುವರು. ಪೂಸಾನ ಟೈಗು ಭಾಗಗಳಲ್ಲಿ ಕಮ್ಯೂನಿಸ್ಟರು ಹೆಚ್ಚಿಗಿರುವರು—ಪೂಸಾನದಲ್ಲಿ ಅಮೆರಿಕನರು ವಿಜಯದ ಪೆರವಣಿಗೆ ಹೊರಡಿದಾಗಲೆಲ್ಲಾ ಅವರು ಹಿಂದೆರಿದ ವಾರ್ತೆಗಳು ಬರುತ್ತಿದ್ದವು

ಅಮೆರಿಕಾ ಸೈನ್ಯ ಹಿಂದೆಗೆಮಕೊಳ್ಳಿ

ಘಾರ್ಮೋಸಾದಿಂದ ಅಮೆರಿಕದ ಸೈನ್ಯತನ್ನು ಹಿಂದೆಗೆದುಕೊಳ್ಳಿಲು ಚೀನೀ ಕಮ್ಯೂನಿಸ್ಟ ಸರಕಾರವು ಸಂಯುಕ್ತ ರಾಷ್ಟ್ರಸಂಸ್ಥೆಯನ್ನು ಕೇಳಿಕೊಂಡಿದೆ

—

ಕೊಪವೇಟಿಯ ಕಾಂಗ್ರೆಸ್ ಪ್ರತಿನಿಧಿಗಳು

ಕೊಪವೇಟಿ ತಾ|| ಕಾಂಗ್ರೆಸ್ ಮತದಾರ ಸಂಘದಿಂದ ಶ್ರೀಮರಿಸ್ವಾಮಯ್ಯ ಮತ್ತು ಪಾಟೀಲ ಇವರು ನಾಸಿಕ್ ಕಾಂಗ್ರೆಸ್‌ಗೆ ಪ್ರತಿನಿಧಿಗಳಾಗಿ ಆರಿಸಲ್ಪಟ್ಟಿದ್ದಾರೆಂದು ನ್ಯಾಂತೀಕ ಕಾಂಗ್ರೆಸ್ ಕಾರ್ಯದರ್ಶಿಗಳು ಪ್ರಕಟಿಸಿದ್ದಾರೆ.

-ಕಾಂಗ್ರೆಸ್ ಅಧ್ಯಕ್ಷರ ಚುನಾವಣೆ-

ಪುರುಷೋತ್ತಮ ಟಾಂಡನ್ ಆಚಾರ್ಯಕೃಪಾಲಿನಿ-ತಂಕರರಾವ್ ದೇವ ಈ ಮೂವರು ನಾಸಿಕದಲ್ಲಿ ನಡೆಯುವ ಕಾಂಗ್ರೆಸಿನ ಅಧ್ಯಕ್ಷಪದವಿಗಾಗಿ ಸ್ಪರ್ಧಿಸುತ್ತಿರುವರು 2ನೆಯ ದಿನಾಂಕ ಚುನಾವಣೆ ನಡೆಯಲಿದೆ.

ಬಳ್ಳಾರಿ ಜಿಲ್ಲಾ ಆಹಾರ ಸಮಿತಿ

ಬಳ್ಳಾರಿ ಜಿಲ್ಲೆಗೆ ಕಚ್ಚಿನ ಮುತ್ತು ಒಳ್ಳೆಯತರದ ಅಕ್ಕಿ ಬೇಕು. ಈಗ ಕಳುಹಿಸುತ್ತಿರುವ ಮಾಲು ತಿನ್ನಲು ಯೋಗ್ಯವಿಲ್ಲ ಎಂಬುದಾಗಿ ಸದಸ್ಯರು ಹೇಳಿದರು—ಇಲ್ಲಿ ಸಾವಿರಾರು ಟನ್ ಉಳಿದಿರುವ ನೆಲಗಡಲೆ ಹಿಂಡಿಯನ್ನು ಸಾರಿಗೆಯ ಸೌಕರ್ಯವಿಲ್ಲೆಂದು ಉಳಿಸಿರುವುದು ಪರಮ ಅನ್ಯಾಯ ಕೂಡಲೇ ಈ ಸೌಕರ್ಯ ಕಲ್ಪಿಸಿ ಇವನ್ನು ಗೂಬ್ಬರವಾಗಿ ಉಪಯೋಗಿಸುವ ರೈತರಿಗೆ ಹೆಚ್ಚಿನ ಬೆಲೆ ಬೆಳೆಯಲು ಸಹಾಯಮಾಡಬೇಕೆಂದು ಶ್ರೀ ಪೂಜಾನಿ ಸೋಮಪ್ಪನವರು ಹೇಳಿದರು. ತಲಸರಿಗೆಗಳ ಮೂಲಕ ಕೆರೆರಿಪೇರಿಗಳ ಮೂಲಕ ಕಚ್ಚಿನಬೆಳೆಗೆ ರಾಸಾಯಿದುಗೊಬ್ಬರ ತಾಲೂಕಿನಲ್ಲಿ ಸಹಾಯ ಮಾಡಬೇಕೆಂದು ಶ್ರೀ ನಾಗಭೂಷಣಂರವರು ತಿಳಿಸಿದರು—ಬಿಳಿದಬೆಲೆಯನ್ನು ನಿಯಂತ್ರಿಸಲು ತೀರ್ಮಾನವಾಯಿತು

ರೈತರಿಗೆ ಬೇಕಾದ ಅಳತೆಚ್ಚು ಕುಡ ಇಗ್ಗೆರ ವಸ್ತುಗಳ ವಿತರಣೆಯು ಸರಿಯಾಗಿಲ್ಲ. ಕೃಷಿಸಾಯ ಶಾಖೆಯವರನ್ನು ಕೇಳಿದರೆ ಕೋ ಅಪರೇಟಿವ್‌ನವರನ್ನು, ಕೇಳಿನ್ನುವರು. ಸಹಕಾರ ಶಾಖೆಗೆ ಉಪಕರಣಗಳೇ ಬರುವಿಲ್ಲ ಹೀಗಾಗಿ ರೈತರಿಗೆ ಈ ಸಾಮಗ್ರಿಗಳು ಒದಗದೆ ಕಷ್ಟವಾಗಿದೆ. ಅನುಕೂಲ ಮಾಡಲು ಬಾಚಿಗೊಂಡೆನಹಳ್ಳಿ ಚನ್ನಬಸವನಗೌಡರು ತಿಳಿಸಿದರು

ಕಲೆಕ್ಟರ್, ಡೆಪ್ಯುಟಿ ಕಲೆಕ್ಟರ್ ತಕಶೀಲ್ದಾರರು ಕೂಡಾಗ ಹೊಲಬಂದ ಭೂಮಿಗಳನ್ನು ಒಲಿಸ್ಯರಾದವರು. ಕಳೆಕಳ್ಳಿನಲ್ಲಿ ಪ್ರಜಾಸಂಖ್ಯೆಯು ಜಾಸ್ತಿಯಾಗಿರುವುದರಿಂದ ಉತ್ತು ಬಿತ್ತಲು ಸಮರ್ಥರಾದ ರೈತರಿಗೂ ಹೆಚ್ಚು ಬೆಳೆಯಿರಿ' ಎಂಬ ಪ್ರಚಾರಕ್ಕೂ ಅನ್ಯಾಯವಾಗಿದೆ ಈಗ ಮಳೆ ಒಂದಿನವಪರೀಂದ ಸಣ್ಣ ರೈತರಿಗೆ ಭೂಮಿಗಳನ್ನು ಬಿಡಿಸಿಕೊಟ್ಟು ಅನುಕೂಲಮಾಡಿಕೊಡಬೇಕೆಂದು ಶ್ರೀ ಟಿ ಬಿ ಕೇತವರಾಯರು ಕೇಳಿದರು-

---- ಸೊರಗೇರಿ ಸಾವೃಷ್ಟಿ ----

ಇಲ್ಲಿಯ ತರುಣಸಂಘದವರು 13—14ನೆಯ ತಾ|| ಬ್ರಹ್ಮದೇವತ ಮಂದಿರದಲ್ಲಿ ಪಾಲಸೇವೆ—ಭಗವದ್ಭಕ್ತಿಯುತ ಭಜನೆ ಮಗೈರೆ ಸಲ್ಲಿಸಿದ ಕೂಡಲೇ ದೈವೇಚ್ಛೆಯಿಂದ ಅದ್ಭುತ ಸಾವೃಷ್ಟಿಯಾಯಿತು. ಬ್ರಹ್ಮದೇವರ ಗುಡಿಯಲ್ಲಿ ಶ್ರೀ ಸೊನ್ನದ ವಿರುಪಾಕ್ಷಯ್ಯನವರ ಅಧ್ಯಕ್ಷತೆಯಲ್ಲಿ ತರುಣಸಂಘದವರು ಸಭೆಗೂಡಿಸಿದರು. ಹೀಗೆ 13—14 ನೆಯ ತಾ|| ಕೂಡಿದ ಸಭೆಗಳಲ್ಲಿ ಭಗವದ್ಭಕ್ತಿ ಪೂರ್ವಾಚಾರಗಳಲ್ಲಿ ನಂಬಿಕೆ ಗ್ರಾಮಾಭಿವೃದ್ಧಿಗಾಗಿ ಕೈಗೊಳ್ಳಬೇಕಾದ ಚರ್ಯೆಗಳಒಗ್ಗೆ ಅಧ್ಯಕ್ಷರು ಹೃದಯಂಗಮವಾಗಿ ತಿಳಿದರು.

ನೆಹರೂರ ಗೋಧಿ ಬೆಳೆ

ನೆಹರೂರ ಬಂಗ್ಲೆಕಾಂಪೌಂಡಿನಲ್ಲಿ ಗೋಧಿಯ ಬೆಳೆಯಿಂದ ಒಂದೆಕರೆಗೆ 33 ಮಣ ದೊರೆತಿದೆ. ಸಾಮಾನ್ಯವಾಗಿ ಭಾರತದಲ್ಲಿ ಎಕರೆಗೆ ಸರಾಸರಿ 9 ಮಣ ಬೆಳೆಯುತ್ತಿದ್ದು ಇದು ಬಹಳ ತೃಪ್ತಿಕರವಾಗಿದೆ. ಒಳ್ಳೆಯ ಬೀಜ, ಒಳ್ಳೆ ಗೊಬ್ಬರ ಮತ್ತು ಆಧುನಿಕ ಪದ್ಧತಿಗಳನ್ನನುಸರಿಸಿದರೆ ಬೇತದಲ್ಲಿ ಬೆಳೆಯು ಹೆಚ್ಚುವುದೆಂದರು.

(3 ನೇ ಪುಟದಿಂದ)

ಗಳನ್ನು ಮಾಡಲಾಗಿದೆ. ಈ ಪುನರ್ಘಟನೆಯಿಂದಾಗಿ ಒಳ್ಳಲಿಗನು ತನ್ನ ಒಳ್ಳಲತನ ಬೇಡಿಕೆಗಳಿಗಾಗಿ ಕೇವಲ ಒಬ್ಬರಕಡೆಗೆ ಅಂದರೆ ಒಳ್ಳಲತನ ಅಸ್ಪಂಟರಕಡೆಗೆ ಮಾತ್ರ ಹೋಗುವಂತಾಗಿದೆ. ಆದರೂ ಒಳಲಿಗ ಸಹಕಾರಿ ಸಾಲ, ಹುಟ್ಟುವಳಿ ವ್ಯಾಪಾರ, ಶಗಾಡು ಸಾಲ ಇವುಗಳಿಗಾಗಿ ಬೇರೆ ಬೇರೆಯವರ ಕಡೆಗೆ ಹೋಗಬೇಕಾಗಿದೆ. ಇದು ತಪ್ಪಬೇಕು ಮತ್ತು ವೈದ್ಯಕೀಯ, ಶಿಕ್ಷಣ, ಕರಪಸೂಲಿ ಹಾಗು ಕಾಯದೆ ವಿಷಯ ಮತ್ತು ಸುವ್ಯವಸ್ಥೆ ಇವನ್ನುಳಿದು ಉಳಿದ ಎಲ್ಲ ಖಾತೆಗಳನ್ನು ಪ್ರತಿನಿಧಿಕರಿಸಲು ಕಳ್ಳಿಯಲ್ಲಿ ಒಬ್ಬನೆ ಅಧಿಕಾರಿ ಯಿರುವದು ಅತ್ಯವಶ್ಯವೆಂದು ನನಗನಿಸುತ್ತದೆ. ಪ್ರತಿ ಹಳ್ಳಿಯಲ್ಲಿ ಸುಸಂಘಟಿತ ಸಹಕಾರಿ ಪತ್ತಿನಸಂಘ ಹಾಗು 10 ಹಳ್ಳಿಗಳಿಗೊಂದು ವಿವಿಧೋದ್ದೇಶ ಸಂಘ ಇರುವದು ಅವಶ್ಯ ಈ ವಿವಿಧೋದ್ದೇಶ ಸಂಘ ಬೀಜ ಗೊಬ್ಬರ ಇತ್ಯಾದಿಗಳ ವಿತರಣೆ ಕಾರ್ಯವನ್ನೂ ಕೈಕೊಳ್ಳಬೇಕು. ನಮ್ಮಲ್ಲಿ 17 ಒಳ್ಳಲತನ ತಾಲೂಕುಗಳು ಇವೆ. ಅವುಗಳಲ್ಲಿ ಪ್ರತಿವರುಷ 500 ಜನರು ತಂಬೀತಿಹೊಂದುತ್ತಾರೆ.

"ಕೇವಲ ಪ್ರಚಾರ ಹಾಗು ಭಾಷಣಗಳಿಂದ ಒಳ್ಳಲಿಗನ ಮನವನ್ನೊಲಿಸುವದು ಸಾಧ್ಯವಿಲ್ಲ. ಅದಕ್ಕಿಗೆ ಪ್ರತ್ಯಕ್ಷಪ್ರಮಾಣ ಬೇಕು ನನ್ನ ಪ್ರಕಾರ ಈಗ ತಾಲೂಕಿಗೆ ಒಂದೊಂದರಂತೆ ಪ್ರಾತ್ಯಕ್ಷಿಕಾ ಕೇಂದ್ರಗಳಿವೆ. ಆ ಕೇಂದ್ರಗಳ ಸಂಖ್ಯೆಯನ್ನು ಹೆಚ್ಚಿಸಿ ಪ್ರತಿ 25 ಹಳ್ಳಿಗಳಿಗೆ ಪ್ರಾತ್ಯಕ್ಷಿಕಾ ಕೇಂದ್ರದ ರೂಪದಲ್ಲಿ ಒಂದು 'ಪ್ರಚಾರ ಪುಸ್ತಿಕೆ'ಯನ್ನು ಒಡನಿಸುವ ಗುರಿಯನ್ನಿಟ್ಟುಕೊಂಡಿದ್ದೇವೆ ಗಾಂಧೀಜಿಯವರ ಹುಟ್ಟುಹಬ್ಬದಂದು ಗ್ರಾಮಸುಧಾರಣಾ ಸಪ್ತಾಹವನ್ನೂ ನಾವು ಆಚರಿಸುತ್ತಿದ್ದೇವೆ.

—ಸರ್ವಾಂಗೀಣ ಸಮನ್ವಯ —

ಇಷ್ಟೇ ಅಲ್ಲದೆ ಸರಕಾರದ ಬೇರೆ ಬೇರೆ ಖಾತೆಗಳಲ್ಲಿಯೂ ಸಮನ್ವಯವಿರುವದು ಅತ್ಯವಶ್ಯ ಇದೇ ಉದ್ದೇಶದಿಂದ ಜಿಲ್ಲಾ ಹಾಗೂ ತಾಲೂಕ ಗ್ರಾಮ ಸುಧಾರಣಾ ಮಂಡಳಿಗಳನ್ನು ಸ್ಥಾಪಿಸಲಾಗಿದೆ. ಅವುಗಳ ಕಾರ್ಯದಲ್ಲಿ ಸರ್ವಜನಿಕ ಸಹಕಾರವನ್ನೂ ಪಡೆಯಲಾಗಿದೆ. ಸರ್ವಜನಿಕ ಸಹಕಾರವೇ ಪ್ರಗತಿಯ ಮಾರ್ಗ.

ಕುಂಚೂರಿನ ಪತ್ರ

ಅಂಚೆಕಟ್ಟೆ

....

ಪ್ರಿಯಸಂಪಾದಕ "ನವಭಾರತ"
ಬಳ್ಳಾರಿ ಇವರಿಗೆ—

ನಿಮ್ಮ ತಾ|| 15—8—50ರ ವಿಶೇಷ ಸಂಚಿಕೆಯಲ್ಲಿ 2000 ಜನ ಸಂಖ್ಯೆ ಇರುವ ಪ್ರತಿಯೊಂದು ಗ್ರಾಮಕ್ಕೂ ಅಂಚೆಕಟ್ಟೆಯನ್ನು ತೆರೆಯಲು ಹಿಂದುಸ್ಥಾನದ ಸರಕಾರದವರು ಯೋಚಿಸಿರುತ್ತಾರೆಂದು ಪ್ರಕಟಣೆ ಮಾಡಿರುತ್ತೀರಿ

ನನ್ನ ಗ್ರಾಮದಲ್ಲಿ ಪಂಚಾಯಿತಿಬೋರ್ಡು ಪಂಚಾಯಿತಿಕೋರ್ಟು ಸಹಕಾರಿ ಸಂಘ ಶಾಲೆ ಇವೆಲ್ಲವುಗಳಿದ್ದು 2000 ಸಾನಿರಕ್ಕೆ ನೇರಳವಿನ ಜನ ಸಂಖ್ಯೆ ಇದ್ದರೂ ನನ್ನ ಗ್ರಾಮದಲ್ಲಿ ಅಂಚೆಕಟ್ಟೆ ಇರುವದಿಲ್ಲ.

ಅಂಚೆಕಟ್ಟೆಯನ್ನು ತೆರೆಯಬೇಕೆಂದು ಸುಮಾರು 1936 ರಿಂದ ನಾವು ಬೇಡುತ್ತಲಿದ್ದರೂ ಈವರೆವಿಗೂ ತೆರೆಯಲಿಲ್ಲ. ಎಷ್ಟೋಸಾರೆ, ಕುಂಚೂರಿಗೆ ಬರುವ, ಹೋಗುವ ಕಾರ್ಡು ಕವರುಗಳ ಲೆಕ್ಕವನ್ನು ಇಟ್ಟಿದ್ದಾಯಿತು. ಮತ್ತು 2000 ಸಾವಿರ ಜನಸಂಖ್ಯೆಯ ಅಂಕೆ, ಸಂಖ್ಯೆಗಳನ್ನು ಕಳುಹಿಸಿದ್ದೂ ಆಯಿತು. ಬರುವ ಲಾಸನ್ನು ಊರವರೇ ಕೊಡಲು ಒಪ್ಪಿಕೊಂಡದ್ದೂ ಆಯಿತು.

ಅಂಚೆಕಟ್ಟೆಯ ಸಂಬಂಧಪಟ್ಟ ಅಧಿಕಾರಿಗಳು ಕೇಳಿದ ಯಾವತ್ತು ಷರತುಗಳಿಗೆ ಒಪ್ಪಿಕೊಂಡರೂ ಈ ವರೆವಿಗೂ ಅಂಚೆಕಟ್ಟೆ ತೆರೆಯಲಿಲ್ಲ.

ನಿಮ್ಮ 15—8—50ರ ಸಂಚಿಕೆಯ ಪ್ರಕಟಣೆಯನುಸಾರ ಅಂಚೆಕಟ್ಟೆ ತೆರೆಯುವದಾದರೆ ಪಂಚಾಯಿತಿಕೋರ್ಟು ಸ್ಥಾಪಿಸುವಾಗ ಶ್ರೀ ಹೊಸಪೇಟೆ ಸಬ್ ಕಲೆಕ್ಟರವರು ಕುಂಚೂರಲ್ಲಿ 2000 ಸಾನಿರ ಜನ ಸಂಖ್ಯೆ ಇದೆಯೆಂದೂ ಊರು ದಿನೇ ದಿನೇ ಅಭಿವೃದ್ಧಿಯಾಗುತ್ತದೆಂದು ಶಿಫಾರ್ಸು ಕೂಡ ಮಾಡಿರುತ್ತಾರೆ.

ಸ್ವಾಮಿಕಾರ್ಯ ಬಹುದಿನಗಳಿಂದಲೂ ನಿರಾತಿಗೊಂಡಿರುವ ಈ ಅತಿಯನ್ನು ಪೂರ್ತಿಗೊಳಿಸಲು ಸಂಬಂಧಪಟ್ಟ ಅಧಿಕಾರಿಗಳೊದನೆ ಪತ್ರವ್ಯವಹಾರಮಾಡಿ ನಮ್ಮ ಗ್ರಾಮಕ್ಕೆ ತೀವ್ರ ಅಂಚೆಕಟ್ಟೆಯನ್ನು ತೆರೆಯುವಂತೆ ಮಾಡಬೇಕೆಂದು ಊರಪರವಾಗಿ ಕೋರುತ್ತೇನೆ.

ಯ. ಕೃಷ್ಣಪ್ಪ,
ಅಧ್ಯಕ್ಷ
ಪಂಚಾಯ್ತಿಬೋರ್ಡು.

[ಸ್ಪೋಷಲ್ ಇನ್ಸಪೆಕ್ಟರ್ ಶ್ರೀ ರಾಮಚಂದ್ರರಾಯರು ಬಂದಾಗ ಊರಿನವರು ಸಹಕರಿಸದೆ ತಕ್ಕ ಮಾಹಿತಿ ಕೊಟ್ಟಿಲ್ಲವೆಂದು ತಿಳಿಯುತ್ತ... ಸಂಬಂಧದ ಸತ್ಯಾಂತವನ್ನು ತಿಳಿದು ವರದಿಮಾಡಲು ಯತ್ನಿಸಿದ್ದೇವೆ.

ಸಂಪಾದಕ—ನವಭಾರತ]

ನವಭಾರತಕ್ಕೆ

ಶುಭಾಶಯಗಳು !!

ಸಮತಾವಾದ

—[ಸಾಮಾಜಿಕ ಬೆಳವಣಿಗೆಯ ನಿಯಮಗಳು]—

ಮನುಷ್ಯವರ್ಗದ ಚರಿತ್ರೆಯನ್ನು ತೆಗೆದುನೋಡಿ. ರಾಷ್ಟ್ರಗಳಲ್ಲಿ ಜಯಶೀಲ, ಕೆಲಸವಮ್ರಾಟರು, ಸೇನಾನಿಗಳು ಮತ್ತು ರಾಜಕಾರಣಿಗಳಿಂದ ಮಾತ್ರ ಜೈತ್ರಯಾತ್ರೆ. ಇದೇ ಅಲ್ಲದೆ ಕೆಲವೊಮ್ಮೆ, ಮತಸಂಸ್ಥಾಪಕರಿಂದ ಪ್ರೇರಿತರಾಗಿ ರಾಜ್ಯಗಳನ್ನು ಗೆಲ್ಲಲು ಹೊರಟರು, ಅಥವಾ ಮತ್ತೆ ಕೆಲವರು ಇಲ್ಲವೆ ಆರ್ಥಿಕ ದೃಷ್ಟಿಕೋನದಿಂದಾಗಿ ಅಂತಹ ಧೋರಣೆಯಿಂದ ಅವರು ವರ್ತಿಸಿದರು ಎನ್ನುವುದೂ ಉಂಟು. ಒಮ್ಮೊಮ್ಮೆ ರಾಷ್ಟ್ರದ ಮಾನರಕ್ಷಣೆಗಾಗಿ ಧರ್ಮಸಂಬಂಧವಾಗಿ ಹೋರಾಡಿದರು"—ಇನ್ನೂ ಇತ್ತೆಂದೂ ಇಲ್ಲದಿದ್ದ.

ಚರಿತ್ರೆಯನ್ನು ಹಾಗೆ ವಿವರಿಸಿದರೆ ಪೂರ್ಣವಾಗಿ ಸರಿಯಾದ ಚಿತ್ರ ಕೊಟ್ಟಂತೆ ಆಗುವುದಿಲ್ಲ.

ಮಾನವ ಕೋಟಿಯ ಎಲ್ಲಾ ಚರಿತ್ರೆಗಳಲ್ಲೂ ಸಹಜವಾಗಿ ಕಾಣುವ ನಿಯಮಗಳನ್ನು ಹುಡುಕುವುದಕ್ಕಾಗಿ ಮಾರ್ಕ್ಸ್‌ವಾದ ಚರಿತ್ರೆಯನ್ನು ಅಭ್ಯಾಸಮಾಡುವುದು ಇದೇ ಕಾರಣದಿಂದ. ವ್ಯಕ್ತಿಗಳ ಕೆಲಸಗಳೆಲ್ಲ ಜನತೆಯಿಂದ ಅಪಸೋಹಮಾಡುವುದು. ಜನತೆಯೆಲ್ಲ, ಅತಿ ಪ್ರಾಚೀನ ಸ್ಥಿತಿಯಿಂದ ಆಧುನಿಕ, ನೋಡಿದಾಗ ಜನತೆಯಲ್ಲೇ ವಿವಿಧ ವಿಭಾಗಗಳನ್ನು ಕಾಣಬಹುದು. ಕೆಲವರು ಅತ್ಯ ಎಳೆಯುವರು; ಕೆಲವರು ಧಣ್ಣ. ಆದರೆ ಹಾಗೆ ಮಾಡುವುದು ವ್ಯಕ್ತಿಗಳಾಗಿ ಅಲ್ಲ ವರ್ಗಗಳಾಗಿ.

ಈ ವರ್ಗಸಂಘರ್ಷವನ್ನು ಸರಳವಾಗಿ ಹೇಳುವುದಿದ್ದರೆ ಒಂದೇ ರೀತಿ ಒಂದೇ ಬಗೆಯ ಒಂದೇ ಜೀವನವಮಾಡುವವರು ದೊಡ್ಡ ಜಮೀನುದಾರಿ ಪದ್ಧತಿಯ ಸ್ಥಮಾಜದಲ್ಲಿ ಅರಸನೂ ಹಾಳಿಯುಗಾರರೂ ತಮಗೆ ಬರುವ ಕಪ್ಪಕಾಣಿಕೆಯನು ನೀಲಿಂದ ಜೀವಿಸುವರು. ಇದನ್ನು ತಂದೊಪ್ಪಿಸುವವರು ಗುಲಾಮರು. ಇವರೇ ಹೊಲದಲ್ಲಿ ದುಡಿದು ಉತ್ಪಾದನೆ ಮಾಡುವವರು. ಪಾಳೆಯಗಾರ ಭೂಪತಿಗಳು ಒಂದು ವರ್ಗ. ಸ್ವಂತದ ಹಕ್ಕು. ಸ್ವಾರ್ಥವಿರುವ ವರ್ಗ. ತಮ್ಮ ಗುಲಾಮರಿಂದ ಎಷ್ಟು ಸಾಧ್ಯವೋ ಅಷ್ಟು ದುಡಿತವನ್ನು ದಕ್ಕಿಸಿಕೊಳ್ಳುವುದು ಅವರೆಲ್ಲರ ಏಕ ಉದ್ದೇಶವಾಗಿತ್ತು; ತಮ್ಮ ಅಧ್ಯಯ ವಿಸ್ತೀರ್ಣವನ್ನೂ ಗುಲಾಮರ ಸಂಖ್ಯೆಯನ್ನೂ ಹೆಚ್ಚಿಸಬೇಕೆಂಬುದು ಅವರೆಲ್ಲರ ಆಸೆಯಾಗಿತ್ತು. ಇತ್ತ ಗುಲಾಮರದೂ ಒಂದು ವರ್ಗ. ಈ ವರ್ಗಕ್ಕೂ ತನ್ನದೇ ಆದ ಸ್ವಾರ್ಥಗಳಿದ್ದವು. ತಾವು ಉತ್ಪಾದನೆ ಮಾಡಿದ್ದೆಲ್ಲವನ್ನೂ ತಮ್ಮ ಧನಿಗಳಿಗೆ ಕೊಡುವುದರ ಬದಲು ಅವರ್ಯಾ ಹೆಚ್ಚಿನಂತವನ್ನು ತಮ್ಮ ಮತ್ತು ತಮ್ಮ ಕುಟುಂಬಗಳಿಗೋಸ್ಕರ ಇಟ್ಟುಕೊಳ್ಳಬೇಕೆಂಬುದು ಅವರ ಆಸೆ. ತಮಗೋಸ್ಕರವಾಗಿ ಮಾತ್ರ ದುಡಿಯಲು ಅವರು ಸ್ವಾತಂತ್ರ್ಯವನ್ನು ಅಪೇಕ್ಷಿಸಿದರು. ನಿಯಮಗಳನ್ನು ಗೊತ್ತುಮಾಡುವ ಮತ್ತು ತೀರ್ಪುಕೊಡುವ ಎರಡೂ ಕೆಲಸಗಳನ್ನು ಮಾಡುತ್ತಿದ್ದ ತಮ್ಮ ಧನಿಗಳ ಪ್ರಾಬಲ್ಯದಿಂದ ತಪ್ಪಿಸಿಕೊಳ್ಳಲು ಅವರು ಕಣ್ಣಾಡಿಸುತ್ತಿದ್ದರು. ಒಲು ಹಿಂದಿನ ಅಂಗ್ಲೋ-ಸ್ಯಾಕ್ಸನ್ ಜೀತಿಕನೊಬ್ಬ ಧನಿಯ ಹೊಲವನ್ನಳುವ ಒಬ್ಬ ಗುಲಾಮನ ಅನುಭವವನ್ನು ಹೀಗೆ ಒರೆದಿದ್ದಾನೆ. "ಓ ಸ್ವಾಮಿ ನಾನು ಮೈ ಎರಿದು ಕೆಲಸ ಮಾಡಿದ್ದೇನೆ. ನುಂಜಾವದಲ್ಲಿ ಹೋರಿಗಳನ್ನೋಡಿಸುತ್ತಾ ಕಾಲಕ್ಕೆ ಹೋಗಿ ಅಲ್ಲಿ ಉಳುತ್ತೇನೆ ಛಳಿಗಾಲದ ಛಳಿ ಎಷ್ಟಿರಲಿ, ನನ್ನ ಧನಿಗೆ ಹೆದರಿ ಮನೆಯಲ್ಲಿ ನಾನು ಇರುವಂತಿಲ್ಲ. ಪ್ರತಿದಿನವೂ ಒಂದು ಎಕ್ರೆ ಇಲ್ಲವೆ ಜಾಸ್ತಿ ನಾನು ಉಳಲೇಬೇಕು.

ಹೀಗೆ ಪ್ರತಿಯೊಂದು ಜಮೀನುದಾರಿ ಆಳರಸರ ರಾಜ್ಯದಲ್ಲೂ ಧನಿ ಗುಲಾಮರುಗಳಿಗೆ ಯಾವಾಗಲೂ ಪೋರಾಟ ನಡೆಯುತ್ತಲೇ ಇತ್ತು. ಕೆಲವೊಮ್ಮೆ ಇದು ವೈಯಕ್ತಿಕವಾಗಿ ಇರುತ್ತಿತ್ತು— ಗುಲಾಮರ ಒಂದು ತಂಡ ಅವರ ಧನಿಗಿದಿರಾಗಿ ಏಳ್ದೇಳುವುದು. ಮತ್ತೆ ಕೆಲವೊಮ್ಮೆ, ತಮ್ಮೆಲ್ಲರ ಪರಿಸ್ಥಿತಿಯನ್ನೂ ಸುಧಾರಿಸುವುದಕ್ಕಾಗಿ, ಗುಲಾಮರು ಹೆಚ್ಚು ಸಂಖ್ಯೆಯಲ್ಲಿ ಒಂದಾಗಿ ದಂಗೆ ಏಳುತ್ತಿದ್ದರು. 1831ರಲ್ಲಿ ಇಂಗ್ಲೆಂಡಿನಲ್ಲಿ ಜಾಬಾಲ್ ವತ್ತು ವಾಟ್ ಟೈಲರು ಇವರ ನೇತೃತ್ವದಲ್ಲಿ ಉಂಟಾದ ಒಂದಾಯ ಆ ರೀತಿಯದು. ಇದೇ ರೀತಿಯಾಯ ಜರ್ಮನಿ, ರಷ್ಯಾ ಮತ್ತಿತರ ರಾಷ್ಟ್ರಗಳಲ್ಲೂ ಗುಲಾಮರ ಇಲ್ಲವೆ ಕೃಷಿಕರ ದಂಗೆಗಳಾಗುತ್ತಿದ್ದವು. ಚಿಕ್ಕಪುಟ್ಟ ಕಲಹಗಳಂತೂ ಅನುದಿನ ಆಗುತ್ತಲಿದ್ದವು.

ಧನಿಯ ಕೊಲೆಯಲ್ಲೂ ಗುಲಾಮರು ಪ್ರಬಲ ಪಾತ್ರವಹಿಸಬೇಕಾಗುತ್ತಿತ್ತು. ಮುಂದಿನ ಬೇಕಾಗುತ್ತಿತ್ತು. ಮುಂದಿನ ಕಾರ್ಯಕ್ರಮವನ್ನು ರೂಪಿಸಲ್ಲಿ ಸಲ್ಲಿಸುವ ಕಾರ್ಯಕ್ರಮ ಇದು. ಇದಲ್ಲದೆ ತಮ್ಮ ಹೊಲಗಳಲ್ಲಿ ಉತ್ಪತ್ತಿಯಾಗುವ ಒಂದಂತೆ ವಸ್ತುಗಳನ್ನೇ ಅಲ್ಲ, ತಾವೂ ತಮ್ಮ ಮನೆಯವರೂ ಉಪಯೋಗಿಸುವ ದೈನಂದಿನ ವಸ್ತುಗಳನ್ನೂ ಗುಲಾಮರು ಧನಿಗೆ ಒಪ್ಪಿಸಬೇಕಾಗುತ್ತಿತ್ತು. ಗುಲಾಮರಲ್ಲಿ ಆಭರಣ ಮತ್ತಿತರ ಸಾಮಗ್ರಿಗಳನ್ನು ತಯಾರಿಸುವ ಕೆಲವಿಚಕ್ಷಣರೂ ಇರುತ್ತಿದ್ದರು. ಉಳಿತಾಯವಾದ ಉತ್ಪತ್ತಿ ಸಾಮಗ್ರಿಗಳನ್ನು ಕೊಂಡುಕೊಂಡು ಬದಲಿಗೆ ಬೇರೆ ಸ್ವತೇತರ ಇಲ್ಲವೆ ರಾಷ್ಟ್ರದ ಸಾಮಗ್ರಿಗಳನ್ನು ಕೊಡುವ ವ್ಯಾಪಾರಿಗಳೂ ಸ್ವಯಂ ಆಗಿರಬಹುದಾದ ವ್ಯಾಪಾರಿಗಳೂ ಸಾಮಗ್ರಿಗಳ ಸರಬರಾಯಿ ಸಾಲದೆ ಹೋಯಿತು. ಸಂತೆಗೆ ಸಾಮಾನುಗಳನ್ನೂ ವದಗಿಸುವುದ ಕ್ಕೋಸ್ಕರ ಸಂಘಟಿತ ಉತ್ಪಾದನೆಗ ವ್ಯಾಪಾರಿಗಳು ಕೈ ಹಾಕಿದರು. ಧನಿಯ ಹಿಡಿತದಿಂದ ಸ್ವತಂತ್ರಗೊಳಿಸುವ ಚಳವಳಿ ಅಲ್ಲಿಂದ ತಪ್ಪಿಸಿಕೊಂಡು ಬಂದ ಗುಲಾಮರು ಪೂರ್ಣದಿನ ಉತ್ಪಾದನೆಗಾಗಿಯೇ ದುಡಿದ

ರು. ಹೀಗೆ ಬಂಧಮುಕ್ತರಾದ ಗುಲಾಮರು ಕೆಲವರು ನಗರಗಳಿಗೆ ಹೋಗಿ, ಒಟ್ಟೆಪೇಯುವ ಲೋಹದ ಪಾತ್ರೆ ಪಂತ್ರಿಗರ ಸಾಮಗ್ರಿಗಳನ್ನು ಮಾಡಲು. ಸ್ವತಂತ್ರ ಉದ್ಯೋಗಿಗಳಾದರು. ಈ ರೀತಿಯ ಪರಿವರ್ತನೆ ಸಾವಧಾನವಾಗಿ ನಡೆಯಿತು. ಕೆಲವೇ ವರ್ಷಗಳಲ್ಲ ನೂರಾರು ವರ್ಷಗಳು ಬೇಕಾದುವು. ಸ್ಥಳೀಯ ಉಪಯೋಗಕ್ಕಾಗಿ ಪಾಳೆಯಗಾರರ ಆಶ್ರಯದಲ್ಲಿ ಉತ್ಪಾದನೆಗಳಾಗುತ್ತಿದ್ದವು. ಅನಂತರ ಅದರಿಂದಲೇ ಹುಟ್ಟಿ ಮಾರ್ಕೆಟ್‌ಗಾಗಿಯೂ ಉತ್ಪಾದನೆಗಳು ಆಗತೊಡಗಿದುವು. ಸ್ವತಂತ್ರ ಕಾರ್ಮಿಕರೂ ವಿನಕೂಲಿಯ ಕೂಲಿಕಾರರೂ ಈ ಕೆಲಸವನ್ನು ಮಾಡಿದರು. ಸ್ವಲ್ಪ ಸ್ವಲ್ಪವಾಗಿ ಬೆಳೆದು ಸ್ವತಂತ್ರ ಕಾರ್ಮಿಕರು ಶಿಲ್ಪಿಗಾರರು---ಚಿನ್ನಪಟ್ಟು ಮಾಲಿಕರಾದರು. ತಮ್ಮ ಕೈಕೆಳಗೆ ಬೇರೆ ಕೂಲಿಕಾರರನ್ನೂ ನೇಮಿಸಿದರು. ಕೂಲಿ ಕೊಟ್ಟು ಅವರನ್ನು ಹುಡಿಸಿ ಉತ್ಪಾದನೆಯನ್ನು ಹೆಚ್ಚಿಸಿದರು. 16ನೆಯ ಶತಮಾನದಿಂದ ಮುಂದಕ್ಕೆ ಹೊಸತೊಂದು ವರ್ಗ—ಕೈಗಾರಿಕೆಯ ಭಂಡವಳಕಾಹಿವರ್ಗ ಬೇರೂರತೊಡಗಿತು. ಜಿದರ 'ನೆರಳಾಗಿ' ಕೈಗಾರಿಕೆಯ ಕೂಲಿಕಾರ ವರ್ಗವೂ ಬೆಳೆಯುತ್ತಿತ್ತು. ಒಂದು. ಕಳ್ಳಗಳಲ್ಲೂ ಕೂಡ ಜಪಿಂಸ್ಟಾರಿ ಒಂದನೆಗಳು ಕಡಿಮೆಯಾಗತೊಡಗಿದುವು ದೈಹಿಕ ದುಡಿಮೆಯ ಬದಲು ಹಣದಗೇಣಿ ಸಂಪಾಯಿತು. ಗುಲಾಮರು ಎಸ್ಟೇಟಿನಲ್ಲಿ ಸ್ವತಂತ್ರ ಕೃಷಿಕರಾಗಿ ತಮ್ಮ ಹೊಲದಲ್ಲಿ ದುಡಿದರು. ಭೂಮಾಲಿಕನ ಕೂಲಿಯಲ್ಲಿ ದುಡಿಯುವ ಕೃಷಿಕರಿಗೆ ಕೂಲಿ ಕೊಡತೊಡಗಿದ. ಈ ರೀತಿಯಲ್ಲಿ ಭಂಡವಳಶಾಯಿ ವ್ಯವಸಾಯ ಗಾರನೂ ಹೊಲದಲ್ಲಿ ದುಡಿದು ಕೂಲಿ ಸಂಪಾದಿಸುವ ಕೂಲಿಕಾರನೂ ಹುಟ್ಟಿಕೊಂಡರು!

ನಗರದಲ್ಲೂ ಕೈಗಾರಿಕೆಯಲ್ಲೂ ಭಂಡವಳಶಾಯಿ ಹುಟ್ಟಿ, ಬೆಳೆಯುತ್ತಾ ಎಂಬ ಪಾತ್ರಕ್ಕೆ ಹಿನ್ನಿನಿಂದಲೇ ಇದ್ದ ಪಾಳೆಯಗಾರ ಧನಿಗಳ ಹಗೆ ಇಳಿದುಹೋಗಲಿಲ್ಲ. ಒದಲಿಗೆ, ಅರಸರೂ ಹಳೆಯ ಜಮೀನುದಾರಿ ಶ್ರೀಮಂತರೂ ಇಗರ್ಜಿ[ಚರ್ಚ್]ಗಳವರೂ ಹೊಸ ಭಂಡವಳಕಾಹಿಯನ್ನು ತಮ್ಮ ಒಳ್ಳಿತಿಗಾಗಿ ಉಪಯೋಗಿಸಲು ಯತ್ನಿಸಿದರು. ಸ್ವತಂತ್ರವಾಗಿ ಅಥವಾ ತಪ್ಪಿಸಿಕೊಂಡು ನಗರಗಳಿಗೆ ಕೂಡಿದ ಕೃಷಿಕರು ತಮ್ಮ ಧನಿಗಳಿಗೆ ದುಡಿಮೆಯ ರೂಪದಲ್ಲಾಗಲೀ, ಕಣಹ ರೂಪದಲ್ಲಾಗಲೀ ಕಪ್ಪ ಕೊಡುವುದು ತಪ್ಪಿತು ಸರಿ. ಆದರೆ ಈ ಗುಲಾಮರ ಸಂತಾನದವರು ಹಣವಂತರಾಗತೊಡಗಿದಂತೆ ಅವರಿಗೆ ಹೊಸ ಧನಿಗಳು ಹುಟ್ಟಿಕೊಂಡರು. ಅರಸನಿಗೂ ಪಾಳೆಯಗಾರ ಶ್ರೀಮಂತರಿಗೂ ಅವರು ಹಲವಾರು ರೀತಿಯ ತೆರಿಗೆಗಳನ್ನು ಕೊಡಬೇಕಾಗಿತ್ತು. ವ್ಯಾಪಾರದಮೇಲೆ ನಿರ್ಬಂಧಗಳಿರುತ್ತಿದ್ದುವು! ಉತ್ಪಾದನೆಯ ಬೆಳವಣಿಗೆಗೆ ತಡೆ ಇತ್ತು.

ಹಿಂದೀ ಮಹಿಳಾ ವಿದ್ಯಾಲಯ, ಬಳ್ಳಾರಿ.

[931 ಸ್ಥಾಪಿತ. ಬಳ್ಳಾರಿ ಜಿಲ್ಲಾ ಹಿಂದೀ ಪ್ರೇಮಿ ಮಂಡಲದಾಶ್ರಯದಲ್ಲಿ, ರಿಜಿಸ್ಟರ್ಡ್]

ಮದ್ರಾಸು ಸರಕಾರದಿಂದ ಮಾನ್ಯತೆ ಇದೆ.

ಪ್ರಾರಂಭಿಕ ವರ್ಗಗಳಿಗೆ ಮಾಸಿಕ 3!—ರೂಲು --- ಉನ್ನತ ವರ್ಗಗಳಿಗೆ ಮಾಸಿಕ 5!—ರೂಲು

ವಾರ್ಡಾ ಶಿಕ್ಷಣ ಶಾಲೆಯಲ್ಲಿ ಪ್ರಾತಃಕಾಲ—ಸಾಯಂಕಾಲ ಹಿಂದೀ ಕಾಲೇಜಿನ ವರ್ಗಗಳು ನಡೆಯುತ್ತವೆ. ಪ್ರವೇಶ ಪರೀಕ್ಷೆ—ವಿವಿಧ ವರ್ಗಗಳಲ್ಲಿಗೆ ಪ್ರಾರಂಭಿಕ ವರ್ಗಗಳಿಗೂ ಪ್ರವೇಶವಿದೆ. ವರ್ಗಗಳಿಗೆ ಸಂಬಂಧಿಸಿದ ಪಾಠಪುಸ್ತಕಗಳು ವಿದ್ಯಾಲಯದಲ್ಲಿ ದೊರೆಯುತ್ತವೆ. ಒಳ್ಳೆಯ ಪುಸ್ತಕಭಂಡಾರವಿದೆ. ಶ್ರೇಷ್ಠ ವಾರಪತ್ರಿಕೆ, ಮಾಸಪತ್ರಿಕೆಗಳು ಲಭ್ಯ. ಇತರ ವಿವರಗಳಿಗೆ ಸ್ವಾಂಪಿಟ್ಟು ಬರೆಯಿರಿ.

ಪ್ರಿನ್ಸಿಪಾಲ್.

NAVA BHARAT BELLARY. (Reg No. M. 4746)
28—8—50

ನವಭಾರತ ಬಳ್ಳಾರಿ

(Nationalist Weekly)

ಚಂದಾವತ್ತಗಳು. Subscription Rates

6 ವರ್ಷಕ್ಕೆ 5 0—0	One Year 5—0—0
ತಿಂಗಳಿಗೆ 3—0—0	Six months 3 0—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ	Subscription will not be accepted for less than 6 months.

To

Sri..... .....

....

.....

ಪರಮೇಶ್ವರ ಪ್ರೆಸ್, ಬಳ್ಳಾರಿ

ಜೈ ಹಿಂದ್

ಸಮಾಚಾರ

—[ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರ ಪತ್ರಿಕೆ.]—

ಉತ್ತಿಷ್ಠತ ! ಜಾಗೃತ !! ಪ್ರಾಪ್ಯ ವರಾನ್ನಿಬೋಧತ !!!

ವರ್ಷ 13 | ಸೋಮವಾರ ಆಗಸ್ಟು 21 st 1950 | ಸಂಪಾದಕ ಮತ್ತು ಪ್ರಕಾಶಕ, ಸಂಚಿಕೆ 25 | ಟಿ. ಬಿ. ಕೇತವರಾವ್

ಸ್ವಾತಂತ್ರ್ಯೋತ್ಸವ

ನಗರಿಗರೆ—15ನೇ ತಾ|| ಪ್ರಾತಃಕಾಲ ಪ್ರಭಾತಫೇರಿಯು ಹೊರಟು ಪೋಸ್ಟು ಆಫೀಸು ಮೈದಾನಕ್ಕೆ ಬಂದಿತು. ಡಾಕ್ಟರ್ ರತ್ನಾಕರರವರು ಧ್ವಜಾರೋಹಣ ಮಾಡಿದರು ಶ್ರೀ ಕರ್ನಂ ದತ್ತರಾಯರು ಸ್ವಾತಂತ್ರ್ಯೋತ್ಸವದ ಮಹತ್ವ ತಿಳಿಹೇಳಿದರು. ಈಮಹೋತ್ಸವದಲ್ಲಿ ಪುರಶ್ರೀ ಮುಖರು ಉತ್ಸಾಹಿತರಾಗಿರಲಿಲ್ಲ ಶಾಲಾ ಬಾಲಕ ಬಾಲಿಕೆಯರು ಸಮ್ಮೋಹಿತರಾಗಿದ್ದರು—ಶಾಲೆಯ ವಿದ್ಯಾರ್ಥಿಗಳಿಗೆ ವಿಶೇಷ ಪಾಯಸ ಹಂಚಲಾಯಿತು.

ಅನಿವೇಕಿಗಳಾದ ಕೆಲವರು ಸ್ವಕುಲಶ್ರೇಷ್ಠಭಿಮಾನದಿಂದ ಪುರವಣಿಗೆಯು ಹರಿಜನ ಕೇರಿಗೆ ಹೊಗುವುದನ್ನು ತಡೆದರು. ಇದು ಒಂದು ಮಾತ್ರ ವಿಷಾದಕರವಾದ ವ್ಯಕ್ತಿಣ

[ಹರಿಜನಕೇರಿಗೆ ಸ್ವಾತಂತ್ರ್ಯ ದಿನವಾದರೂ ಹೋಗಿಬರಬೇಕಿದ್ದಿತು ಉಪಾಧ್ಯಾಯರೇನಾದರೂ ಈ ಘಟನೆಯಲ್ಲಿ ಭಾಗವಹಿಸಿದ್ದರೆ ಏಂಡಾಯಿ ಇವರ ವಿವರಗಳನ್ನು ನಮಗೆ ಬರೆದು ತಿಳಿಸಲು ಮುಖ್ಯೋಪಾಧ್ಯಾಯರನ್ನು ಕೋರುತ್ತೇನೆ.

ಸಂಪಾದಕ—ನವಭಾರತ]

ಹರೇನೇಗಳಗೇರಿ [ಹರಪನಹಳ್ಳಿ.]

....

15ರ ದಿನಾಂಕ ಮ|| ಗಾಂಧಿ ಮತ್ತು ಇತರ ನಾಯಕರ ಭಾವಚಿತ್ರಗಳೊಂದಿಗೂ ರಾಷ್ಟ್ರಧ್ವಜದೊಂದಿಗೂ ಪ್ರಭಾತಫೇರಿಯಾಗಿ ಶ್ರೀ ಅಂಗಡಿ ಹಾಲಪ್ಪನವರಿಂದ ಧ್ವಜಾರೋಹಣವಾಯಿತು. 10 ರಿಂದ ಬಾಲಕರ ಪಂದ್ಯದಾಟಗಳು ನಡೆದವು ಸಾಯಂಕಾಲ ಮಹಾತ್ಮರ ಭಾವಚಿತ್ರದೆರವಣಿಗೆಯು ವೈಭವದಿಂದ ಊರ ಬೀದಿಗಳಲ್ಲಿ ಹೊರಟಾಗ ಇಕ್ಕಡೆಗಳಲ್ಲಿ ಗ್ರಾಮಸ್ಥರು ಭಕ್ತಿಪೂರ್ವಕ ಗಳಿಂದ ಕಾಣಿಕೆಯರ್ಪಿಸಿದರು

ಸಾಯಂಕಾಲ ಶ್ರೀ ರೇವನಗೌಡರ ಅಧ್ಯಕ್ಷತೆಯಲ್ಲಿ (ಜಿಲ್ಲಾಬೋರ್ಡು ಸದಸ್ಯರು) ಸಭೆಯಾಗಿ ಪ್ರಧಾನಾಧ್ಯಾಪಕರಾದ ಶ್ರೀ ಪೊಂನಾಪತಿಯವರು ಸಹಾಯಶಿಕ್ಷಕ ಯೆಮು ನಾಚಾರಿಯವರು ಸ್ವಾತಂತ್ರ್ಯದ ಮಹತ್ವನವನ್ನು ಕುರಿತು ಭಾಷಣಮಾಡಿದರು. ಅಧ್ಯಕ್ಷರು ಸ್ವಾತಂತ್ರ್ಯದ ಪ್ರದಾನವನಂತರ ಗಣರಾಜ್ಯ ಸ್ಥಾಪನೆಯಾಗಿ ಇಲ್ಲಿಯವರಿಗೆ ಇತಿಹಾಸವನ್ನು ಹೇಳಿ ನಮ್ಮ ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳಬೇಕೆಂದರೆ ಜನತೆಯು ಐಕ್ಯ-ಸಹಕಾರ-ಗಾಂಧೀಜಿ ತತ್ವಗಳ ಅನುಕರಣೆ ಆವಶ್ಯಕವೆಂದು ವಂದನಾರ್ಪಣೆ ಮತ್ತು ರಾಷ್ಟ್ರೀಯಗೀತೆಯಿಂದ ಸಭೆ ಮುಗಿಯಿತು.

.... ಕುಮಗೋಡು —

—

ಇಲ್ಲಿಯು ನೆಯ್ಕಾರರು ಶ್ರೀ ಎನ್ ವೀರಬಸವನಗೌಡರ ಅಧ್ಯಕ್ಷತೆಯಲ್ಲಿ ಸಭೆಸೇರಿ ಸರ್ವಾನುಮತದಿಂದ ನೆಯ್ಕಾರರಿಗೆ ಸರಿಯಾದ ಬೆಲೆಗೆ ನೂಲು ದೊರಕುವಂತೆ ವಿಚಾರಿಸಲು, ಶೀಘ್ರದಲ್ಲೇ ಒಂದು ಸಂಘವನ್ನು ನಿರ್ಮಿಸಬೇಕೆಂದು ನಿಶ್ಚಯವಾಗಿದೆ. ಇದರ ಚರ್ಯೆತ್ತಿಗೆನುಕೊಂಡು ನೂಲನ್ನೊದಗಿಸಲು ಮೇಲಧಿಕಾರಿಗಳಿಗೆ ಒಳಿ ಶ್ರೀ ಗೌಡರು ಹೋಗಲಿದ್ದಾರೆ.

ಸಮತಾವಾದ

ಶಾಸ್ತ್ರೀಯ ದೃಷ್ಟಿಯಲ್ಲಿ ಈ ಲೋಕ

....

ನಾವೆ ಜೀವಿಸುತ್ತಿರುವ ಈ ಲೋಕವು, ಅದರ ಒಂದು ಭಾಗವಾಗಿರುವ ಮಾನವ ಸಮಾಜದ, ಕುರಿತಾದ ಸಾಮಾನ್ಯ ಸಿದ್ಧಾಂತವೇ ಮಾರ್ಕ್ಸ್‌ವಾದ. ಕಾರ್ಲ್‌ಮಾರ್ಕ್ಸ್‌ನ [1818—1883] ಸಹಾಯದಿಂದ ಅದು ಮಾರ್ಕ್ಸ್‌ವಾದವಾಯಿತು ಕಳೆದ ಶತಮಾನದ ಮಧ್ಯ ಮತ್ತು ಉತ್ತರಾರ್ಧದಲ್ಲಿ ಫ್ರೆಡರಿಕ್ ಎಂಗೆಲ್ಸ್‌ನ [1820—1895] ಜತೆಯಲ್ಲಿ ದುಡಿದು, ಮಾರ್ಕ್ಸ್ ಆ ಸಿದ್ಧಾಂತವನ್ನು ಕಲ್ಪಿಸಿದ

ಈ ಸಮಾಜ ಹೀಗಿರುವುದೇಕೆ? ಅದು ಬದಲಾಗುವುದೇಕೆ? ಮಾನವಕೋಟಿಯು ನುಂಜಿನ ಬದಲಾವಣೆಗಳೇನು? ಎಂಬುದನ್ನು ಅವರು ತೋರಿಸಿ ಹೋರಟರು ತಮ್ಮ ಅಭ್ಯಾಸದ ಫಲವಾಗಿ, ಹೊರ ಪ್ರಕೃತಿಯ ಬದಲಾವಣೆಗಳಂತೆಯೇ, ಈ ಬದಲಾವಣೆಗಳೂ ಆಕಸ್ಮಿಕವಾಗಿ ಆಗದೆ, ಕೆಲ ನಿಯಮಗಳಿಗೆ ಅನುಸಾರವಾಗಿ ಸಂಭವಿಸುತ್ತವೆ ಎಂಬ ತೀರ್ಮಾನಕ್ಕೆ ಅವರು ಬಂದರು ಈ ಸಮಾಜವೇನೆಂಬುದರ ಬಗ್ಗೆ ಊಹೆ-ಕಲ್ಪನೆಗಳಿಗೆ ಅವಕಾಶವಿರುತ್ತಿತ್ತು. ಧಾರ್ಮಿಕ ಭಾವನೆ, ಕುಲ ಮತ್ತು ವ್ಯಕ್ತಿ ಪೂಜೆ, ದೈವಕೃತ್ಯ ಇಷ್ಟೆ ಅಥವಾ ಬಿಣ ಕನಸು ಇವುಗಳಿಗೆ ಸಂಬಂಧಿಸಿ ಸಮಾಜವೆಂದರೇನೆಂದು ಚಿತ್ರಿಸುತ್ತಿದ್ದರು.... ಈಗಲೂ ಚಿತ್ರಿಸುತ್ತಾರೆ ಇದರ ಒದಲು, ಮನುಷ್ಯರ ನಿಜವಾದ ಅನುಭವಗಳಿಂದ ಸಮಾಜವೆಂದರೇನೆಂದು ಶಾಸ್ತ್ರೀಯ ಸಿದ್ಧಾಂತವನ್ನು ಉಂಟುಮಾಡುವುದು ಅನಂತರವೆ ತೋಧನೆಯಿಂದ ಸಾಧ್ಯವಾಗಿದೆ.

ಮಾರ್ಕ್ಸ್ ತಾನು ಜೀವಿಸುತ್ತಿದ್ದ ಸಮಾಜಕ್ಕೆ .... ಪ್ರಧಾನವಾಗಿ ಭಂಡವಳಶಾಹಿ ಬ್ರಿಟನ್ನಿಗೆ—ತನ್ನ ಸಾಮಾನ್ಯ ವಿಚಾರವನ್ನು ಅನ್ವಯಿಸಿದ: ಭಂಡನಳ ತಾಹಿಯು ಆರ್ಥಿಕ ಸಿದ್ಧಾಂತವನ್ನು ತಯಾರುಮಾಡಿದ. ಅದರೆ ತನ್ನ ಆರ್ಥಿಕ ಸಿದ್ಧಾಂತಗಳನ್ನು ಚಾರಿತ್ರಿಕ ಮತ್ತು ಸಾಮಾಜಿಕ ಮತಗಳಿಂದ ಬೇರ್ವಡಿಸುವುದು ಸಾಧ್ಯವಿಲ್ಲವೆಂದು ಅತ ಯಾವಾಗಲೂ ಸ್ಪಷ್ಟಪಡಿಸುತ್ತಿದ್ದ. ಲಾಭ ಮತ್ತು ಕೂಲಿ [ಸಂಬಳ, ಮಜೂರಿ, ಜೀತ] ಇವನ್ನು ಬರೀ ಆರ್ಥಿಕ ಸಮಸ್ಯೆಗಳಾಗಿ ಬಂದು ನಿತಿಯವರೆಗೆ ಅಭ್ಯಾಸಿಸಬಹುದು ಮಾಲಿಕರನ್ನೂ ಕೂಲಿಕಾರರನ್ನೂ ತಿಳಿದುಕೊಂಡರೆ ಮಾತ್ರ ಲಾಭ ಮತ್ತು ಕೂಲಿಯ ಸಮಸ್ಯೆ ಅರ್ಥವಾಗುವುದು; ಬರೇ. ಕಲ್ಪನೆಗಳ ಬದಲು ನಿಜಜೀವನವನ್ನು ಅಭ್ಯಾಸಿಸ ಹೊರಟ ಪ್ರತಿ ವಿದ್ಯಾರ್ಥಿಗೂ ಇದು ಗೊತ್ತಾಗುತ್ತದೆ. ಮಾಲಿಕರು ಮತ್ತು ಕೂಲಿಕಾರರನ್ನು ಅಭ್ಯಾಸಮಾಡಿದ ಅನಂತರ, ಅವರು ಜೀವಿಸುತ್ತಿರುವ ಚಾರಿತ್ರಿಕ ಘಟ್ಟವನ್ನು ತಿಳಿದುಕೊಳ್ಳಬೇಕಾಗುತ್ತದೆ.

ಸಮಾಜದ ಬೆಳವಣಿಗೆಯನ್ನು ಶಾಸ್ತ್ರೀಯ ದೃಷ್ಟಿಯಿಂದ ನೋಡುವುದು, ಎಲ್ಲಾ ಶಾಸ್ತ್ರಗಳಂತೆ ಅನುಭವದಮೇಲೆ, ಚಾರಿತ್ರೆಯ ಸತ್ಯಸಂಗತಿಗಳಮೇಲೆ, ನವ್ಯ ಸುತ್ತಲಿನ ಲೋಕದ ಮೇಲೆ. ಆದ್ದುದರಿಂದ ಮಾರ್ಕ್ಸ್‌ವಾದ ಪರಿಪೂರ್ಣಸಿದ್ಧಾಂತವಲ್ಲ. ಇತಿಹಾಸವು ಪ್ರಗತಿಹೊಂದಿದಂತ, ಮನುಷ್ಯನ ಅನುಭವ ಹೆಚ್ಚಿದಂತೆ, ಮಾರ್ಕ್ಸ್‌ವಾದವೂ ಬೆಳೆಯುವುದು; ಹೊಸ ಸಂಗತಿಗಳಿಗೆ ಅದು ಅನ್ವಯಿಸಲ್ಪಡುವುದು. ಮಾರ್ಕ್ಸ್ ಮತ್ತು ಎಂಗೆಲ್ಸರ ಮರಣದ ಅನಂತರ ಆ ಸಿದ್ಧಾಂತವನ್ನು ಬೆಳೆಸಿದವನು ಲೆನಿನ್ (1870—1924) ಮತ್ತು ರಷ್ಯದಲ್ಲಿ ಸಮತಾವಾದಿ ಸಮಾಜವನ್ನು ಕಟ್ಟುವ ಅತನ ಕೆಲಸವನ್ನು ನುಂದುವರಿಸಿದ ಸ್ಟಾಲಿನ್

ಬಾಹ್ಯ ಪ್ರಪಂಚವನ್ನು ಬದಲಾಯಿಸಲು ಎಲ್ಲಾ ಶಾಸ್ತ್ರೀಯ ಜ್ಞಾನವನ್ನು ಉಪಯೋಗಿಸುವುದು ಹೇಗೆ ಸಾಧ್ಯವೋ ಹಾಗೆಯೇ, ಸಮಾಜವನ್ನು ಶಾಸ್ತ್ರೀಯವಾಗಿ ಅಭ್ಯಾಸಿಸಿಗಾಂವ ಜ್ಞಾನವನ್ನು ಸಮಾಜವನ್ನೇ ಬದಲಾಯಿಸಲು ಉಪಯೋಗಿಸಬಹುದು. ಆದರೆ ಸಮಾಜದ ಚಲನವಲನಗಳನ್ನು ರೂಪಿಸುವ ಸಾಮಾನ್ಯ ನಿಯಮಗಳು ಬಾಹ್ಯ ಪ್ರಪಂಚದ ನಿಯಮಗಳ ರೂಪದಲ್ಲೇ ಇವೆ ಎಂಬುದೂ ಸ್ಪಷ್ಟ. ಸಾರ್ವತ್ರಿಕವಾಗಿ, ಮನುಷ್ಯರಿಗೂ ವಸ್ತುಗಳಿಗೂ, ಸರಿಹೋಗುವ ಈ ನಿಯಮುಗಳೇ ಮಾರ್ಕ್ಸ್ ವೇದಾಂತ ಇಲ್ಲವೆ ಲೋಕದ ಒಗ್ಗ ಮಾರ್ಕ್ಸ್‌ವಾದ.

ಅತ್ಯಗತ್ಯವಿರುವ ಈಗಿನ ವಿಷಯಗಳ ಬಗ್ಗೆ ಮಾರ್ಕ್ಸ್‌ವಾದವನ್ನು ಮುಂದಿನ ಅಧ್ಯಾಯಗಳಲ್ಲಿ ವಿವರಿಸಲಾಗಿದೆ. ಅಸ್ಪಷ್ಟ ಸ್ಥಿತಿಕ ತತ್ವಗಳ ಮೇಲೆ ಅವಲಂಬಿಸಿದ್ದು ಎಂದು ಕೊಂಡು ಮಾರ್ಕ್ಸ್‌ವಾದವನ್ನು ಯಾರೂ ಒಪ್ಪಬೇಕಾಗಿಲ್ಲ. ಹಾಗೇನೂ ಅಲ್ಲ ಅದು ನಿಜ-ಸತ್ಯವಾಗಿರುವುದರಿಂದಲೇ ಎಲ್ಲರಿಂದ 'ಸರಿ' ಎನ್ನಿಸುತ್ತಿದೆ. ಈ ವಿಷಯವನ್ನು ಪ್ರತಿಯೊಬ್ಬನೂ ಮೊದಲೇ ತಿಳಿದಿರುವುದು ಅಗತ್ಯ. ಸತ್ಯವಾಗಿರುವುದರಿಂದಲೇ ಅದನ್ನು, ಲೋಕದ ಮಾನವಕೋಟಿಯಲ್ಲಿ ಈ ದಿನ ಎಷ್ಟೋ ಮಂದಿ ಅನುಭವಿಸುತ್ತಿರುವ ನಂಳುವಿಕೆ-ಸಂಕಷ್ಟ ಎಂದೆಂದಿಗೂ ಇಲ್ಲದಂತೆ ಮಾಡಲು, ಮೇಲ್ಕಟ್ಟಿದ ಸಮಾಜದಲ್ಲಿ ಗಂಡಸರೂ, ಹೆಂಗಸರೂ ಪರಿಪೂರ್ಣತೆಯತ್ತ ಸಾಗುವಂತೆ ಮಾಡಲು, ಉಪಯೋಗಿಸಬಹುದು; ಉಪಯೋಗಿಸಬೇಕು.

ನೆಹರೂರವರ ಸ್ವಾತಂತ್ರ್ಯ ಸಂದೇಶ

....

ನಾವು ಕಳೆದ 3 ವರ್ಷಗಳಲ್ಲಿ ಅನೇಕಸಲ ಎಡವಿದ್ದೇವೆ. ಬಿದ್ದಿದ್ದೇ ಮತ್ತೆ ಎದ್ದು ಮುಂದೆ ಸಾಗಿ ದ್ದೇನೆ ರಾಷ್ಟ್ರದ ಜೀವನದಲ್ಲಿ ಕೀರ್ತಿ ಸಕೀರ್ತಿಗಳು ಸ್ವಾಭಾವಿಕ ಕಷ್ಟ ಳು ಬಂದನೆಂದು ಏನೆ ಗುಂದಿದರೆ ಸಾತ್ರ ನಮ್ಮ ದೇತಕ್ಕೆ ವಿನಾತವು ಟ್ಟಿಟ್ಟಿದ್ದು. ದೇತದ ದುರ್ಬಲತೆಗೆ ಕಾರಣವಾದ ಹೇದಿತನ, ಕ್ಷುಲ್ಲಿಕ ರುನೋವೃತ್ತಿ, ಪಕ್ಷಪಂಗಡಗಳ ತಿ ಕ್ಕಾಟವನ್ನು ನಾವು ಅಂತಗೊಳಿಸ ಬೇಕು.

ಖಚಿತ ವರ್ಷದಲ್ಲಿ ನಾವು ದೃಢ ವಿಶ್ವಾಸ ಉತ್ಸಾಹದಿಂದ ಕಾರ್ಯಾ ಸಕ್ತರಾಗೋಣ.

....

.... ಹಳೇ ದರೋಜಿ —

15—8—50 ಸ್ವಾತಂತ್ರ್ಯ ದಿನೋತ್ಸವದ ನಿಮಿತ್ಯ ಪ್ರಾತಃಕಾಲ ತ್ರಿವರ್ಣ ರಾಷ್ಟ್ರೀಯ ಧ್ವಜದಿಂದ ಮಾ|| ಗಾಂಧಿ, ಪಂ|| ಜವಹರಲಾಲ ನೆಹರೂ ನೇತಾಜಿ ಭಾವಚಿತ್ರಗ ಳೊಂದಿಗೆ ಪೆರವಣಿಗೆಯು ಹೊರ ಟಿತು ಶಾಲಾ ಮುಂಭಾಗದಲ್ಲಿ ಶ್ರೀ ಕೆ ಎ ಬಂಡೆಯ್ಯನವರು ಧ್ವಜಾ ರೋಹಣಮಾಡಿದರು. ಈ ಪಟಗ ಳನ್ನು ಶ್ರೀ ಬಂಡೆಯ್ಯನವರು ಶಾಲೆ ಗೆ ಉಚಿತಾರ್ಥವಾಗಿ ಕೊಟ್ಟರು. ಶ್ರೀಮತಿ ಸಾಳಿ ತಂಗಳನ್ನನವರು ದಿವಂಗತ ಬಸಯ್ಯನವರ ನೆನಪಿಗಾ ಗಿ 17 ಚಿತ್ರಪಟಗಳನ್ನು ಭಾರತದ ಕಾತೆಯನ್ನು ಶಾಲೆಗೆ ಉಚಿತಾರ್ಥ ವಾಗಿ ಕೊಟ್ಟರು. ಶ್ರೀ ಬಂಡೆಯ್ಯ ನವರು ಸ್ವಾತಂತ್ರ್ಯದ ವಿಷಯ ಹೇಳಿ ದನಂತರ ಶಾಲಾ ಮಕ್ಕಳಿಗೆ ಮಿಠಾ ಯಿ, ಊರಿನ ಜನರಿಗೆ ಫಲಹಾರ ಹಂಚಲಾಯಿತು

—

ನೋಟೀಸು

ಮ||ರಾ||ರಾ|| ಹೊಸಪೇಟೆ||ಮುಂ||
ಕೋರ್ಟಿನಲ್ಲಿ
ಒ ಪಿ 186—50

ಅರ್ಜಿದಾರ—ಅಳವುಂಡಿ ಹನುಮಂ ತಭಟ್ಟ
ಎದುರಿನವರು—1 ಗುರುನಾಥ ಕುಲಕರ್ಣಿ
2 ನಾರಾಯಣ ..
ಲೆಂಟು ಅಳವುಂಡಿ ಶಾಕನ್ನು ನ ಕಸರ್ಕಿ [ದಿ ಕ್ಯನರಾ ಇಂಡಸ್ಟ್ರಿ ಯಲ್ ಅಂಡ್ ಬ್ಯಾಂಕಿಂಗ್ ಸಿಂಡಿ ಕೇಟ್ ಲಿಮಿಟೆಡ್ ಹೊಸಪೇಟೆ] ಯಲ್ಲಿ ಡಿಸಾಜಿಟ್ಟುಮಾಡಿದ ಸೊತ್ತು ಗಳನ್ನು ಅರ್ಜಿದಾರರು ವಸೂಲು ಮಾಡಲು ಸಟ ಸಿಕೇಟು ಕೊಡು ವದಾಗಿ ಕೋರ್ಟಿಗೆ ಅರ್ಜಿ ಹಾಕಿರು ತ್ತಾನೆ. ಸದ್ರಿ ಅರ್ಜಿ 31—8—50 ಕ್ಕೆ ವಾಯಿದಾ ಇರುತ್ತದೆ ತಕರಾ ರು ಇದ್ದವರು ವಾಯಿದಾಕ್ಕೆ ಹಾಜ ರಾಗಬೇಕು

ಎಸ್. ನಾರಾಯಣರಾವು,
ಅರ್ಜಿದಾರರ ವಕೀಲರು

— — —

ಹೊಸಪೇಟೆಯು ಜಿಲ್ಲಾ ಮುನಸೀಫರ ಕೋರ್ಟಿನಲ್ಲಿ
ಎಸ್ ಒ 184 —50

ವ ವಿ —ತೋರಿ ಇಗಳು ತಿಮ್ಮಪ್ಪ ದರೋಜಿ ರುದ್ರಸತುಷತೆಪ್ಪ ಪಗ್ಮಬ್ಯೆನಾರ್ಟಿನವ್ ದಿ.ರುದ್ರ ಸತುಸತೆಪ್ಪ
ಪ್ರತಿವಾದಿ—ದಿ ಹರಪನಕಳ್ಳಿ ಪೊಂನಾಪತೆಪ್ಪ

ಮೇಲ್ಕಾಣಿಸಿದ ದಾವೆಯು ಪ್ರತಿವಾದಿಯು ಹಾಜರಿಗಾಗಿ 31—8—50ಕ್ಕೆ ವಾಯಿದೆ ಹಾಕಲಾಗಿದೆ. ಆ ದಿನ ಪ್ರತಿವಾದಿಯು ಪ್ರಾ 11 ಗಂಟೆಗೆ ಹಾಜರಾಗದಿದ್ದಲ್ಲಿ ಆತನನ್ನು ಎಕ್ಸಪಾರ್ಟಿಯಾಗಿ ಮಾಡಿ ದಾವೆಯು ಮುಂದೆ ಸಾಗುವುದು

ಎಂ. ರಂಗನಾಥಾಚಾರ್ಯ,
ವಾದಿಯ ವಕೀಲರು.

ಹೊಸಪೇಟೆಯು ಜಿಲ್ಲಾ ಮುನ್ಸೀಫರ ಕೋರ್ಟಿನಲ್ಲಿ
ಒ ಯುಸ್ 96 —50

ನಾವಿ ತಾಯಿ ಮಲ್ಲೀತಪ್ಪ
ಪ್ರತಿವಾದಿ—ತಾಯಿ ಹೊನ್ನಪ್ಪ
ಅಂಡು ಸನಸು

ಬೈಪಾರ್ಟನರ್ ಹೊನ್ನಪ್ಪ ಪೇಲ್ಕಾಣಿಸಿದ ದಾವೆಯ ಪ್ರತಿವಾದಿಯ ಹಾಜರಿಗಾಗಿ 31—8—50ಕ್ಕೆ ವಾಯಿದೆ ಹಾಕಲಾಗಿದೆ. ಅಂದು ಪ್ರತಿವಾದಿಯು ಕೋರ್ಟಿಗೆ ಪ್ರಾ. 11 ಗಂಟೆಗೆ ಹಾಜರಾಗದಿದ್ದಲ್ಲಿ ಆತನನ್ನು ಎಕ್ಸಪಾರ್ಟಿಯಾಗಿಮಾಡಿ ದಾವೆಯು ಮುಂದಿನ ಕ್ರಮವು ಜರುಗುವುದು.

ಯಂ. ರಂಗನಾಥಾಚಾರ್, ವಾದಿಯ ವಕೀಲರು

....

— ಹೊಸ ನಾಣ್ಯಗಳು —

ಭಾರತ ಸರಕಾರವು ಇದೇ ಆಗಸ್ಟು 15 ರಿಂದ ರೂಪಾಯಿ, ಅರ್ಧರೂಪಾಯಿ, ಪಾವಲಿ, ಎರ ಡಾಣೆ, ಒಂದಾಣೆ, ಅರ್ಧಾಣೆ ಹಾ ಗು ಬಿಲ್ಲಿಯ ಹೊಸ ನಾಣ್ಯಗಳನ್ನು ಜಾರಿಯಲ್ಲಿ ತಂದಿದೆ.

....

ಹಾಲ್‌ವಿ ಹೈಯರ್ ಎಲಮೆಂಟರಿ ಶಾಲೆ

ಇವನ್ನು ಪ್ರಾರಂಭಿಸಲು ಡೈರೆ ಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷರ ವರು ಡೈರೆಕ್ಟರ್ ಆಫ್ ಪಾರಿಜನ ವೆಲ್ಫೇರಿಗೆ ಒರೆಯಿಸಿದ್ದರು. ಅವರಿಗೆ ಬರದರೆ ಕಲೆಕ್ಟರ್ ಇನ್ನೂ ಜವಾಬು ಕೊಟ್ಟಿಲ್ಲವೆಂದ ರು. ಡಿ. ಇ. ಓ ರು ಡಿವಿಜನಲ್ ಇನ್‌ಸ್ಪೆಕ್ಟರ ಸಮ್ಮತಿಗಾಗಿ ಬರೆದಿರು ವರೆಂದು ಹೇಳಿದರು. ಹೀಗಾಗಿ ಇದು ವ್ಯರ್ಥವಾದ ಆಲಸ್ಯಕ್ಕೆ ಕಾ ರಣವಾಗಿ ಮುಂದಿನ ಜಿಲ್ಲಾ ಹರಿ ಜನ ಸಭೆಯಲ್ಲಿ "ಇದನ್ನು ಕೂಡ ಲೇ ಇತ್ಯರ್ಥ ಪಡಿಸಿರಿ" ಎಂಬ ಪ್ರ ಶ್ನೆಯು ಹಾಕಲಾಗಿದೆ.

ಕಾಳು ಎಲ್ಲುವದರೂ ಕೊಂಡು ಕೊಡಿರಿ

———

ಪ್ರೊಕ್ಯೂರ್‌ಮೆಂಟ್ ಅಧಿಕಾರಿಗಳ ಜುಲುಮು

ಈಗಿನ ಆರ್ಥಿಕದ ಸ್ಥಿತಿ ಕೆಟ್ಟಿದಬಹುದು. ದಕ್ಷಿಣ ಕೆಲಭಾಗಗಳಲ್ಲಿ ಕಾಳಿಲ್ಲದಂತಾಗಿರಬಹುದು. ಆದರೆ ನಮ್ಮ ಸುತ್ತ ಮುತ್ತುಗಳನ್ನೂ ವಿಚಾರಿಸಬೇಕೊ---ಬೇಡವೊ? ನಮ್ಮ ಊರಲ್ಲಿ ಕಾಳಿಲ್ಲದೆ ಸಾಂತಿಯ ಹೊತ್ತು ಬಂದಿದೆ. ಪಶ್ಚಿಮ ತಾಲೂಕುಗಳಲ್ಲಿ ಯಾವಾಗಲೂ ಮುಳಿಯಿಲ್ಲದ ಪರಿಸ್ಥಿತಿ ಇದ್ದಿಲ್ಲ ಈಗಕೆರೆಗಳೆಲ್ಲಾ ಬತ್ತಿ ಹೋದವು. ಬೆಳೆಗಳೆಲ್ಲ ಒಣಗಿಹೋದವು. ದನಗಳಿಗೆ ಮೇವುಕೂಡ ಇಲ್ಲ ಕಾಡಿಗೆ ದನಗಳು ಹೋದರೆ ನೆಗೆ ಬಂದು ನೀರು ಕುಡಿಯಬೇಕು ನಮ್ಮ ಕಾಳನ್ನು ಬೇರೆಕಡೆ ಕಳುಹಿಸುವುದಕ್ಕಿಂತ ಸಂಗ್ರಹವಾದ್ದನ್ನು ಊರಲ್ಲೇ ಇಡಬೇಕಾದ್ದು ಉಚಿತವಲ್ಲವೇ?

ಅಲ್ಲದೆ ಕಾಳು ಇರುವವರು ಲಸ್ಕರಾದ್ದರಿಂದ ಅವರನ್ನು ಬಿಟ್ಟು ಕಾಳಿಲ್ಲದ ನಮ್ಮನ್ನೇ ಏಕೆ ಪೀಡಿಸಬೇಕು?

ನೀವು ಬಂದಿರಿಷ್ಟು ಚೀಲಗಳನ್ನಾದರೂ ಕೊಡಬೇಕು. ನಿಮ್ಮಲ್ಲಿ ಲ್ಲವೆಂದರೆ ಕೊಂಡು ತಂದುಕೊಡಿರಿ ಎಂದು ಹೇಳುವುದು ಸರ್ಕಾರದವರು ಮಾಡಿದ ನಿಯಮಗಳಿಗೆ ವಿರೋಧವಲ್ಲವೇ? ಹೀಗೆ ಜುಲುಮೆಗೊಳಗಾದ ರೈತರು ಪರಸ್ಥಳಗಳಲ್ಲಿ ಕಾಳುಕೊಂಡು ಅಲ್ಲಿಯೇ ದಿಲವರಿ ಕೊಡುತ್ತಿರುವ ಉದಾಹರಣೆಗಳೂ ಇವೆ. ಬ್ಲಾಕ್ ಮಾರ್ಕೆಟ್ ಇರಬೇಕೆಂದೂ ಅದರ ಪ್ರೋತ್ಸಾಹವಾಗಬೇಕೆಂದೂ ಇದರ ಅರ್ಥವಾಗುವುದಿಲ್ಲವೇ!

ಈ ಕಾರಣ ಬಡ ರೈತರನ್ನು ಒತ್ತಾಯಪಡಿಸದೆ ಹೆಚ್ಚು ಕಾಳು ಇರುವವರಿಂದ ವಸೂಲಿ ಮಾಡುವ ಸುಬುದ್ಧಿಯನ್ನು ಪ್ರೊಕ್ಯೂರ್‌ಮೆಂಟ್ ಅಧಿಕಾರಿಗಳಿಗೆ ಕೊಡಲೆಂದು ಪ್ರಾರ್ಥಿಸುತ್ತೇನೆ,

"ನೊಂದ ರೈತ"

—

ಹೊಳಗುಂದಿ

[ಹಡಗಲಿ]

ಸಕ್ಕರೆಯ ವಿತರಣೆ.

ಈ ಊರಿನ ಸಕ್ಕರೆಯ ವಿತರಣೆಯಲ್ಲಿ ವಿಶೇಷ ಅನ್ಯಾಯವಾಗುತ್ತಲಿದೆ. 3500 ಪ್ರಜೆಗಳಿಗೆ ತಿಂಗಳಿಗೆ 6 ಮಣ ಸಕ್ಕರೆ ಸಿಕ್ಕುವುದೂ ಕಷ್ಟ ಆದರೆ ಇಲ್ಲಿರುವ ಸುವಾರು ಇಪ್ಪತ್ತು ಹೋಟೆಲುಗಳವರಿಗೆ ಒಬ್ಬರೊಬ್ಬರಿಗೆ 2---3 ಮಣಗಳ ಪ್ರಕಾರ ದೊರೆಯುತ್ತೆ ಈ ಹೋಟೆಲುಗಳು ಕೆಲವು ಹೆಸರಿಗವಮಾತ್ರವಿವೆ. ಸಕ್ಕರೆಯನ್ನುಪಯೋಗಿಸದೆ ಬೆಲ್ಲವನ್ನು ಬಳಸುವವರೂ ಇದ್ದಾರೆ. ಕೊಟ್ಟ ಸಕ್ಕರೆ ಎಲ್ಲಿ ಹೇಗೆ ಮಾರುತ್ತಾರೆಂಬುದನ್ನು ವಿವರಿಸುವುದನಾವಶ್ಯಕ. ಈ ಹೋಟೆಲುಗಳವರು ಪಂಚಾಯಿತಿಬೋರ್ಡು ರುಸುಂಕೂಡ ಕಟ್ಟುವದಿಲ್ಲ. ಇಂಥಾ ಅಧಿಕಾರಿಗಳೂ, ಇಂಥಾ ಪ್ರಜೆಗಳೂ ಇದ್ದರೆ ಪ್ರಜಾ ಸರ್ಕಾರವು ವಾತವಾಗುವುದು ಖಂಡಿತ. ಕಾಂಗ್ರೆಸ್ ಸರ್ಕಾರ ಬಂದ ಮೇಲೆ ನಡೆಯುವಂಥ ಅನ್ಯಾಯಗಳು ಹಿಂದಾವಾಗಲೂ ಆಗಿಲ್ಲ. ಈಗ ಕೇಳುವವರೇ ದಿಕ್ಕಿಲ್ಲದಂತಾಗಿದೆ! ಎಂಬುದಾಗಿ 14ನೆಯ ತಾರೀಖು ಸಾಯಂಕಾಲ ಸೇರಿದ ಸಭೆಯಲ್ಲಿ ಹೊಳಗುಂದಿಯ ಮುಖಂಡಿಯರು ತಿಳಿಸಿದರು. 'ನವಭಾರತ' ಸಂಪಾದಕರಾದ ಶ್ರೀ ಟಿ ಬಿ ಕೇತವರಾಯರು ಸದ್ಯದ ಪರಿಸ್ಥಿತಿಯಮೇಲೆ ಮಾತಾಡಿ ಆರ್ಥಿಕ ಕಷ್ಟಗಳನಿವಾರಣೆಗಾಗಿ ಪ್ರಜೆಗಳು ಸರ್ಕಾರದೊಡನೆ ಸಹಕರಿಸಿದರೆ ದೇಶದ ಸಂಕಟ ನಿವಾರಣೆಯಾದೀತೆಂದರು.

(The R. D. O. Hospet will be good enough to institute an enquiry into the allegations about the fictitious permits granted to hotels non-existent Editor Nava Bharat)

....

ಮೋರಗೆರೆಗೆ ಟಪಾಲಾಫೀಸು

....

ಹಡಗಲಿ ತಾ|| ಮೋರಗೆರೆಯಲ್ಲಿ 14—8—50 ನೆಯ ದಿನಾಂಕ ಬಳ್ಳಾರಿ ಪೋಸ್ಟಲ್ ಇನ್ಸ್‌ಪೆಕ್ಟರು ರಾಮಚಂದ್ರರಾಯರಿಂ ಟಪಾಲಾಫೀಸಿನ ವ್ಯಾರಂಭೋತ್ಸವವನ್ನು ನೆರವೇರಿಸಿದರು. ಇಲ್ಲಿಗೆ 5 ಮೈಲಿ ದೂರವಿರುವ ಉತ್ತುಂಗಿಯಿಂದ ಟಪಾಲು ಚೀಲವನ್ನು ಪ್ರತಿನಿತ್ಯವೂ ತರಲು ಏರ್ಪಡಿಸಲಾಗಿದೆ. ಮೋರಗೆರೆಯ ಗ್ರಾಮಸ್ಥರೂ ಸುತ್ತಮುತ್ತಲ ಇತರ ಗ್ರಾಮಗಳವರೂ ಈ ಟಪಾಲಾಫೀಸನ್ನು ಪಾಯಿಂ ಆಗಿ ಉಳಿಸಲು ಸಾಕಷ್ಟು ಸಹಾಯ ಸಹಕಾರಗಳನ್ನೊದಗಿಸಬೇಕೆಂದು ಕೋರುತ್ತೇ ಈ ಟಪಾಲಾಫೀಸಿನ ವಿಷಯದಲ್ಲಿ ಸಹಾಯಮಾಡಿದ ಅಧಿಕಾರಿಗಳನ್ನು ಇತರರನ್ನೂ ವಂದಿಸುತ್ತೇನೆ.

....

ಯಮ್ಮಿಗನೂರು (ಬಳ್ಳಾರಿ)

....

15ನೆಯ ತಾ|| ಪ್ರಾತಃಕಾಲ ಪ್ರಭಾತಪರಿಯ ನಂತರ ಧ್ವಜಾರೋಹಣವಾಯಿತು. ಜಿಲ್ಲಾಬೋರ್ಡು ಮೆಂಬರು ಶ್ರೀ ಕಪ್ಪುತಾಳ ದೊಡ್ಡಬಸಪ್ಪನವರ ಅಧ್ಯಕ್ಷತೆಯ ಸಭೆಯಾಗಿ ಸ್ವಾತಂತ್ರದ ಮಹತ್ವ ಭಾಷಣಕಾರರಿಂದ ಹೇಳಲಾಯಿತು. ಶಾಲಾ ಮಕ್ಕಳಿಗೆ ಬಹುಮಾನಗಳನ್ನು ಹಂಚಲಾಯಿತು.

ಕನಿಷ್ಟ ಕೂಲಿ ಮತ್ತು ಪ್ರಜಾ ಪ್ರಭುತ್ವ.

ನಮ್ಮ ದೇಶದಲ್ಲಿ ನೊದಲನೆಯ ಬಾರಿಗೆ ಕನಿಷ್ಟ ಕೂಲಿಯನ್ನು ನಿರ್ಣಯಿಸುವ ಪ್ರಯತ್ನ ನಡೆದಿದೆ. ಕನಿಷ್ಟ ಕೂಲಿಯು ಕಾಯಿದೆ ವ್ಯಾಪಕವಾಗಿ ಆಗಲೇ ಎರಡು ವರ್ಷಪರ್ಯಂತ ಜಾರಿಯಲ್ಲಿದ್ದರೂ ಪ್ರಾಂತೀಯ ಸರಕಾರಗಳಿಗೆ ಆ ಕಾಯಿದೆಯಲ್ಲಿಯ ಅಂತರಾಳವನ್ನು ಜಾರಿಗೆ ತರಲು ಸಾಧ್ಯವಾಗಿಲ್ಲ.

ಕನಿಷ್ಟ ಕೂಲಿಯನ್ನು ನಿರ್ಧರಿಸಲೆಂದು ಸರಕಾರವು ಮಜೂರರ ಪರಿಸ್ಥಿತಿಯನ್ನು ಅರಿತುಕೊಳ್ಳಲು ಅತ್ಯಂತ ಹೆಚ್ಚಿನ ಸಾಂಗೋಪಾಂಗ ಪರಿಶೀಲನೆಯನ್ನು ನಡೆಸಿದೆ. ಕೆಲ ಸಮತ್ತು ಸಂಬಳದ ಪಾಶ್ಚಾತ್ಯ ಪದ್ಧತಿಯಂತೆ ಈ ವಿಧಾನವು ಅವಶ್ಯವೆನಿಸಿತ್ತದೆ. ಅದು ಮಾನವೀಯ ಪದ್ಧತಿಯಲ್ಲ. ಅದರ ಪ್ರಕಾರ ಒಡೆಯನು ಒಟ್ಟಿನ ಉತ್ಪನ್ನದಲ್ಲಿ ಎಷ್ಟು ಕಡಿಮೆ ಅಂತವಷ್ಟು ಕೊಡಲು ಸಾಧ್ಯವೋ ಅಷ್ಟನ್ನು ಕೊಡಲು ಹವಣಿಸುತ್ತಾನೆ. ಈ ತಳಹದಿಯುವೇಲೆ ಲೆಕ್ಕಿಸುವ ಕನಿಷ್ಟ ವೇತನವು ಯಾವಾಗಲೂ ಚರ್ಚಾಸ್ಪದವಾಗಿರುತ್ತದೆ. ಅದರಿಂದ ಒಡೆಯು ಮಜೂರರಲ್ಲಿ ದ್ವಿದ್ಯನಿಷ್ಠ ಕಲಹ, ದುರ್ಭಾವನೆ, ದ್ವೇಷ ಮತ್ತು ಅಸೂಯೆಗಳು ಹುಟ್ಟುತ್ತವೆ. ಅದರ ಪರಿಣಾಮವಾಗಿ ಮಜೂರನು ಅದಷ್ಟು ಕಡಿಮೆ ಕೆಲಸಮಾಡಿ ತನಗೆ ಬೇಕೆನಿಸಿದಷ್ಟು ಹಚ್ಚು ಕೂಲಿಯನ್ನು ಬೇಡುತ್ತಾನೆ. ಈ ಪದ್ಧತಿ ಹಿಂಸೆಯುವೇಲೆ ನಿಂತಿದೆ. ಅದುದರಿಂದ ಕೆಲಸಗಾತಿಸಿಗೆ ಇತಿ ವರ್ಷಕೆ ಬೇಕಾಗುವ ಸಮತೂಕದ ಆಹಾರ,ಸಾಕಷ್ಟುಬಟ್ಟೆ ಮತ್ತು ತಕ್ಕ ವಸತಿ ಸಿಗುವಂತೆ ಕನಿಷ್ಟ ವೇತನವನ್ನು ತರ್ಕಿಸಬೇಕು. ಈ ರೀತಿಯಲ್ಲಿ ತರ್ಕಿಸುವಾಗ ಪದೇ ಪದೇ ಎತ್ತುವ "ಕೊಡುವತಕ್ಕ" ಯ ಕೂಗಿಗೆ ಅವಕಾತವಿರದು ತನ್ನ ಕೆಲಸಗಾರರಿಗೆ ಹೊಟ್ಟೆಬಟ್ಟೆಗಳಿಗೆ ನ್ಯಾಯವಾಗಿ ಸಾಕಾಗುವಷ್ಟು ಕೂಲಿಯನ್ನು ಕೊಡಲಾರದ ಉದ್ಯಮಕ್ಕೆ ಉಳಿಗಾಲವಿಲ್ಲ. ಅಂಥ ಒಂದು ಉದ್ಯಮವು ರಾಷ್ಟ್ರೀಯ ಹಿತಕ್ಕಾಗಿ ಉಳಿಯಲೇ ಬೇಕಾಗಿದ್ದರೆ ಕೆಲಸಗಾರರಿಗೆ ಸಾವೆನಿಸಿದ ಕನಿಷ್ಟವೇತನ ಕೂಲಿಯನ್ನು ಕೊಡಲು ಸಾಧ್ಯವಾಗುವಂತೆ ಸರಕಾರವು ಅದಕ್ಕೆ ಸಹಾಯ ಧನವನ್ನು ನೀಡಬೇಕು. ಕನಿಷ್ಟ ವೇತನಪದವೇಲೆ ಬೋನಸ್ಸನ್ನು ಕೊಡುವಾಗವಾತ್ತ ಕೊಡುವ ತಕ್ಕ್ತಿಯನ್ನು ಒಂದು ವಿಕಾರಾರ್ಹ ಅಂಶವೆಂದು ಎತ್ತಿ ಕೊಳ್ಳಬಹುದು.

ಕನಿಷ್ಟ ಕೂಲಿಯು ಕಾಯಿದೆಯು ವ್ಯಾಪ್ತಿ ವಿಸ್ತರಣ

1949 ನೆಯ ಮಾರ್ಚ್ ತಿಂಗಳ ಹೊತ್ತಿಗೆ ಪೂರ್ವೋಕ್ತ ಕಾಯಿದೆಯ ಪ್ರಯೋಜನವು ಒಕ್ಕಲುತನದ ಮಜೂರರಿಗೂ ಲಭಿಸಬೇಕೆಂದು ಇತ್ತೀಚೆಗೆ ದಿಲ್ಲಿಯಲ್ಲಿ ಸೇರಿದ ಕೇಂದ್ರ ಮಜೂರ ಸಲಹೆಯ ಸಮಿತಿಯು ನಿರ್ಣಯಿಸಿದ್ದನ್ನು ಕೇಳಿ ನಮಗೆ ಸಂತೋಷವಾಗಿದೆ. ಇದೊಂದು ತರ್ಕಬದ್ಧವಾದ ನಡೆ. ಏಕೆಂದರೆ ಕೃಷಿಯು ನಮ್ಮ ಎಲ್ಲ ಆರ್ಥಿಕ ಜೀವನಕ್ಕೂ ಅಡಿಗಲ್ಲಾಗಿದೆ. ನಮ್ಮ ಜೀವನದ ಅಂಥಶ್ರವ ಒಳ್ಳೆ ಭಾಗವು ಶೋಷಣೆಯನ್ನು ಆಧರಿಸಿ ನಿಂತಿರುವುದೆಂಬ ಒಂದನ್ನು ಕಲ್ಪಿಸಲುಕೂಡ ಅಸಾಧ್ಯ ಒಕ್ಕಲುತನದ ಮಜೂರರುಪಡೆಯುವ ಮಜೂರಿಯನ್ನು ನಿರ್ಣಯಿಸದೆ ಸಂಘಟಿತ ಉದ್ಯಮಗಳಲ್ಲಿ ದುಡಿಯುತ್ತಿರುವವರ ಕೂಲಿಯನ್ನು ನಿರ್ಧರಿಸುವುದೆಂದರೆ ಮನೆಯನ್ನು ಕಲೆಕೆಳಗಾಗಿ ಕಟ್ಟಿದಂತೆಯೇ ಸರಿ. ಕೊಡುವವರಿಗೆ ವಿಚಾರ ಮಾಡಿದರೆ ಪ್ರತಿಯೊಂದು ಉದ್ಯಮವೂ ತನಗೆ ಬೇಕಾದ ಅವಶ್ಯ ಪದಾರ್ಥಗಳಿಗಾಗಿ ಭೂಮಿಯನ್ನೇ ಅವಲಂಬಿಸಬೇಕಾಗಿರುವುದು ಅದರಿಂದು ಧನದ ಅರ್ಥನೀತಿ ರೂಢಿಯುಲ್ಲಿರುವುದರಿಂದಕೇಂದ್ರೀಕೃತ ಉದ್ಯಮಗಳಲ್ಲಿ ಕನಿಷ್ಟ ಕೂಲಿಯನ್ನು ಕೃಷಿ ಫಲಗಳ ಬೆಲೆಯಮೇಲಿಂದ ನಿರ್ಧರಿಸುವುದನ್ನು ಬಿಟ್ಟು ಬಿರಿದೆ ಅಲ್ಪಾನುಭವದ ಪ್ರಯೋಗ ವಿಜ್ಞಾನದ ನೆಲೆಯಿಂದ ನಿರ್ಧರಿಸಲಾಗಿದೆ ಕೆಲಸಗಾರನ ವೆಚ್ಚದ ಯೋಜನೆಯಲ್ಲಿ ಕೃಷಿ ಫಲಗಳ ಮೂಲ್ಯಕ್ಕೇ ಮಹತ್ವ ಆದುದರಿಂದ ಕೃಷಿ ಫಲಗಳ ಬೆಲೆಯನ್ನು ಮೊದಲು ನಿರ್ಧರಿಸಿ ಇನಂತರ ಕೂಲಿಯನ್ನು ನಿರ್ಣಯಿಸುವುದು ಅಪರಿಹಾರ್ಯ! ಕೃಷ್ಟತ ಒಕ್ಕಲುತನದ ಖರ್ಚು ವೆಚ್ಚಗಳ ಬಗ್ಗೆ ವಿಸಯಜ್ಞಾನವು ಸಂಗ್ರಹೀತವಾಗಿಲ್ಲ. ಒಕ್ಕಲು ತನದ ಮಜೂರರ ಸ್ಥಿತಿಗತಿಗಳು ಕೂಡ ಗೊತ್ತಿಲ್ಲ! ಈಗ ಮಾಡುತ್ತಿರುವುದೆಂದರೆ, ಕೆಲಸಗಾರರು ಸಾಮಾನ್ಯವಾಗಿ ದಿದ್ಯನಿಷ್ಠ ಪ್ರದೇಶಗಳಲ್ಲಿ ನಿತ್ಯವೂ ಬಳಸುವ ಸಾಮಾನುಗಳ ಬೆಲೆಯ ಒಂದು ಸೂಚಿಪತ್ರವನ್ನು ಸಿದ್ಧಪಾಡಿ, ಹಳೆಯ ಬೆಲೆಗಳನ್ನು ಎದುರಿಟ್ಟುಕೊಂಡು ಕೃಷಿ ಫಲಗಳ ಬೆಲೆಯನ್ನು ನಿರ್ಧರಿಸುವುದು ಕಳೆದ ವರ್ಷವಿದ್ದ ಬೆಲೆಗಳು ರೂಢಿ ಸಹಜವೆಂದು ಅಲ್ಲಿ ಗಣಿಸಲಾಗುತ್ತದೆ ಇಂಥ ಪರಿಸ್ಥಿತಿಯಲ್ಲಿ ನಮ್ಮ ಮೂಲ್ಯ ಪರಾಮರ್ಶವು ಸತ್ಯಕ್ಕೆಸಂಬಂಧಿಸಿರುವುದಿಲ್ಲ.

ಈಯೆಲ್ಲದರ ಪರಿಣಾಮವಾಗಿ ಇಂದು ಕೃಷಿಯ ಮಜೂರರು ಉಪವಾಸ ಬೀಳುವಂತಾಗಿದೆ. ಅವರಿಗೆ ಅವರು ವ್ಯಯಿಸುವ ತಕ್ಕ್ತಿಯನ್ನು ತುಂಬಿಕೊಡುವಷ್ಟು ಪೋಷಣೆ ಕೂಡ ಬೊರಕುತ್ತಿಲ್ಲ. ದೇಶಾದ್ಯಂತವಾಗಿ ಒಕ್ಕಲು ಕಡೆಗಳಲ್ಲಿ ಗುಲಾಮಗಿರಿಗೆ ಕತ್ತಿರವೆನಿಸುವ ಸ್ಥಿತಿ ಅವರದಾಗಿದೆ ಭೂಮಿಯಿಲ್ಲದ ಬಡ ಒಕ್ಕಲು ಜಮೀನುದಾರನಿಂದ ಐವತ್ತು ಅಥವಾ ನೂರು ರೂಪಾಯಿಗಳನ್ನು ಒಮ್ಮೆ ಸಾಲತೆಗೆದುಕೊಂಡ ಜೀವನ ಅವನು ಸಾಯುವವರೆಗೂ ಅತನ ಗುಲಾಮನಾಗಿ ಬಾಳಬೇಕಾಗಬಹುದು- ಅಂಥ ವ್ಯಕ್ತಿಗೆ ದಿನ ಕೊಮ್ಮೆ ಗಂಜಿಯೂ ದೀಪಾವಳಿಗೊಮ್ಮೆ ಬಟ್ಟೆಯೂ ದೊರಕಬಹುದು ಅವನ ಹೆಂಡತಿ ಮಕ್ಕಳಿಗಾದರೂ ಅದೇ ಗತಿ -- ಆ ಒಡೆಯನೊಡನೆಯೋ ಇನ್ನಾರೊಡನೆಯೋ ಅವರು ಅಂಥ ಕರಾರುಗಳಿಗೊಳಗಾಗಿಯೇ ಬಾಳಿಕೊಂಡಿರಬೇಕು ಅವರುಣ್ಣುವ ಅನ್ನದಲ್ಲಿ ಯಾವ ಪೋಷಕದ್ರವ್ಯವೂ ಇರದು ಅದುದರಿಂದ ರೋಗರುಜಿನಗಳನ್ನು ಅವರ ತರೀಕತೆಯೆಲಾರದು. ಮಕ್ಕಳು ಅಂಚೇ ಲಕಾರ್ಯರಾಗಿ ಬೆಳೆಯುವರು ಇಂಥ ಜನ ಕೆಲಸಮಾಡಿ ರಾಷ್ಟ್ರದ ಊಟಕ್ಕೆ ಬೇಕಾದಷ್ಟನ್ನು ಹೇಗೆ ಬೆಳೆತಾರು? ಇಂಥವರ ಪರಿಸ್ಥಿತಿಯನ್ನು ಉತ್ತಮಗೊಳಿಸಲು ಅನ್ಯರು ಮಾಡಿದ ಪ್ರಯತ್ನಗಳಬಗ್ಗೆ ಸರಕಾರವು ಬಹಳ ಸಂತಯುಕ್ತಿಯನ್ನು ತಾಳಿದೆ. ಕೃಷಿಯು ಮಜೂರರಲ್ಲಿ ತಮ್ಮ ಸ್ವಾರ್ಥವಿಳ

ನೇ ಪುಟಕ್ಕೆ

5ನೇ ಪುಟದಿಂದ

ಆವಶ್ಯಕತೆಗಳ ಬಗ್ಗೆ ತಿಳಿವಳಿಕೆಯುಂಟಾದರೆ ಅದರಿಂದ ಧಾನ್ಯಸಂಗ್ರಹ ಯೋಜನೆಗೆ ಅಭೂತಪೂರ್ವವಾದ ಬೆಂಬಲ ದೊರೆತಂತಾಗುವುದು. ಅದಕ್ಕೆ ಹೆದರಿಕೆ ಇದೇ ಸೂ ಬೆಳೆಗಾರ ಸ್ನು ಬದಿಗೆತ್ತಿಕೊಳ್ಳಲು ಎಂತಹ ಹೊಟ್ಟುಕೂರೆಯುವ ಅಟವೇ? ಇಂಥ ಘೋರಣ ಕಾರನೋಟವನ್ನು; ಕಾಲಾಂತರದಲ್ಲಿ ಇದು ಉದ್ವೇತ ಸಾಧಕವಾಗದು.

ಯುದ್ಧ ವಾರ್ತೆ

ಕೊರಿಯಾ ದಕ್ಷಿಣಕೊರಿಯಾದಲ್ಲಿ ಕಮ್ಯೂನಿಸ್ಟರು ಟೇಗು ನಗರದ ಅಕ್ರಮಣಕ್ಕಾಗಿ ನಿತ್ಯಪ್ರಯತ್ನ ನಡೆಸಿರುವರು ಅಮೆರಿಕನರು ವಿಮಾನಗಳಿಂದ ಬಾಂಬು ಸುರಿಸಿ ಕೋರಿಯಾ ನಗರಗಳನ್ನು ಧ್ವಂಸ ಮಾಡುತ್ತಿರುವರು. ಹೀಗಾಗಿ ದಕ್ಷಿ ಕೊರಿಯಾದಲ್ಲಿ ಭಯಂಕರ ಕ್ರಾಮವುಕ್ಷನ್ನವಾಗಿದೆ. ಕೆಲ ಪತ್ರಿಕೆಗಳು ಅಮೆರಿಕನರು ಜಯವನ್ನು ತೀರ ಕೆಡುತ್ತ ಬಂದಿದೆಯೆಂದು ಹೇಳುತ್ತಿವೆ

ಉತ್ತರ ಹಿಂದೊಸ್ತಾನದಲ್ಲಿ
— ಭೂಕಂಪ —

ಈಶಾನ್ಯ ಭಾರತದ ಪ್ರದೇಶದ ಮುಖ್ಯವಾಗಿ ಅಸ್ಸಾಮದಲ್ಲಿ ಭೂಕಂಪವಾಗಿ ಅನೇಕ ಮನೆಗಳು ಧಕ್ಕೆಗೊಂಡವು. ದಿಬ್ರುಗಢ ಗೌಹಾತಿ ಮತ್ತು ಶಿಲಾಂಗಗಳಲ್ಲಿ ತೀವ್ರ ಸಂಪತ್ತಿನ ಕಟ್ಟಾಗಿಹೋಯಿತು ಎಷ್ಟು ಹಾನಿಯಾಗಿರುವ ವಿಷಯದ ವರದಿ ಬಂದಿಲ್ಲ.

— ಜಯಪ್ರಕಾಶ ನಾರಾಯಣ —

ಅಖಿಲಭಾರತ ಸೋಶಿಯಲಿಸ್ಟ ಪಾರ್ಟಿ ನಾಯಕರಾದ ಶ್ರೀಜಯಪ್ರಕಾಶ ನಾರಾಯಣರು, ಸೆಪ್ಟೆಂಬರದಲ್ಲಿ ಆಂಧ್ರಪ್ರಾಂತ ಸಂಚಾರ ಕೈಗೊಳ್ಳಲಿರುವರು. ಕರ್ನೂಲಿಗೆ 17ನೆಯ ತಾ|| ಭೇಟಿಕೊಡಲಿದ್ದಾರೆ. ಹುಬ್ಬಳ್ಳಿ ಜಿಲ್ಲಾ ಪ್ರವಾಸ ಗೋಕರ್ಣಕ್ಕೆ ಬರುವರೆಂದು ಗೊತ್ತಾಗಿದೆ.

— ಜಾತೀಯತೆ ಬೇಡ —

ಕೇಂದ್ರ ಸರಕಾರದಿಂದ ನಿಯುಕ್ತರಾದ ದಿಪಾಕಕ ಸಮಿತಿಯವರು ಭಾರತರಾಜ್ಯ ಭಾರದ ಸೂಕ್ಷ್ಮಗಳಲ್ಲಿ ಜಾತೀಯತೆಯು ಇರಬಾರದೆಂದೂ ಇದರಿಂದ ರಾಷ್ಟ್ರದ ಧೃಡತೆಗೆ ಬಹಳ ಹಾನಿಯಾಗುವದೆಂದು ತಮ್ಮ ಸಿಫಾರ್ಸುಗಳನ್ನು ತಿಳಿಸಿದ್ದಾರೆ. ಆದರೆ ಕೆಲ ಸರ್ಕಾರದವರು ಹಿಂದುಳಿದ ಜಾತಿಯವರಿಗೆ ಸಹಾಯಮಾಡಲು ಏರ್ಪಡಿಸಿಕೊಂಡ ನಿಯಮಗಳನ್ನು ಬದಲಾಯಿಸುವುದು ಸಾಧ್ಯವಿಲ್ಲೆಂದು ತಿಳಿಸಿದ್ದಾರೆ.

ಹಿಂದೀ ಮಹಾವಿದ್ಯಾಲಯ, ಬಳ್ಳಾರಿ.

[1931 ಸ್ಥಾಪಿತ. ಬಳ್ಳಾರಿ ಜಿಲ್ಲಾ ಹಿಂದೀ ಪ್ರೇಮಿ ಮಂಡಲದಾಶ್ರಯದಲ್ಲಿ. ರಜಿಸ್ಟರ್ಡ]

ಮದ್ರಾಸು ಸರಕಾರದಿಂದ ಮಾನ್ಯತೆ ಇದೆ.

ಪ್ರಾರಂಭಿಕ ವರ್ಗಗಳಿಗೆ ಮಾಸಿಕ 3ಱ—ತುಲ್ಯ — ಉನ್ನತ ವರ್ಗಗಳಿಗೆ ಮಾಸಿಕ 5ಱ—ತುಲ್ಯ

ವಾರ್ಡಲಾ ಹೈಸ್ಕೂಲು ಕಟ್ಟಡದಲ್ಲಿ ಪ್ರಾತಃಕಾಲ—ಸಾಯಂಕಾಲ ಹಿಂದೀ ಕಾಲೇಜಿನ ವರ್ಗಗಳು ನಡೆಯುತ್ತಿವೆ. ಪ್ರವೇಶಿಕ—ವಿಶಾರದ ವರ್ಗಗಳಲ್ಲಿಯೆ ಪ್ರಾರಂಭಿಕ ವರ್ಗಗಳಿಗೂ ಪ್ರವೇಶವಿದೆ. ವರ್ಗಗಳಿಗೆ ಸಂಬಂಧಿಸಿದ ಪಾಠ್ಯಪುಸ್ತಕಗಳು ವಿದ್ಯಾಲಯದಲ್ಲಿ ದೊರೆಯುತ್ತವೆ. ಒಳ್ಳೆಯ ಪುಸ್ತಕಭಂಡಾರವಿದೆ. ಶ್ರೇಷ್ಠ ವಾರಪತ್ರಿಕೆ, ಮಾಸಪತ್ರಿಕೆಗಳು ಲಭ್ಯ ಇತರ ವಿವರಗಳಿಗೆ ಸ್ಟ್ಯಾಂಪಿಟ್ಟು ಬರೆಯಿರಿ.

ಪ್ರಿನ್ಸಿಪಾಲ್.

NAVA BHARAT BELLARY. (Reg. No. M. 4746)
21—8—50

ನವಭಾರತ ಬಳ್ಳಾರಿ

(Nationalist Weekly)

ಚಂದಾದರಗಳು.	Subscription Rates
ವರ್ಷಕ್ಕೆ 5—0—0	One Year 5—0—0
6 ತಿಂಗಳಿಗೆ 3—0—0	Six months 3—0—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ	Subscription will not be accepted for less than 6 months.

To

Sri ....

....

.....

ಪರಮಾತ್ಮ ಪ್ರೆಸ್, ಬಳ್ಳಾರಿ

ಜೈ ಹಿಂದ್

ನವಭಾರತ

--[ಬಳ್ಳಾರಿಯ ಉಜ್ವಲ [illegible]]

ಉತ್ತಿಷ್ಠತ! ಜಾಗೃತ!! ಪ್ರಾಪ್ಯವರಾನ್ನಿಬೋಧತ!!!

ವರ್ಷ 13 | ಸೋಮವಾರ ಸೆಪ್ಟಂಬರು 11th. 1950 | ಸಂಪಾದಕ ಮತ್ತು ಪ್ರಕಾಶಕ,
ಸಂಚಿಕೆ 30 | | ಟಿ. ಬಿ. ಕೇಶವರಾವ್

ಬಳ್ಳಾರಿ ಜಿಲ್ಲಾ ಗ್ರಾಮೋದ್ಯೋಗಿಗಳ ಸಂಘದ ಕಾರ್ಯದರ್ಶಿಗಳವಲಿಗೆ

'ನವಭಾರತ'ಸಂಪಾದಕರ ದ್ವಾರಾ-

ಅನೇಕ ಗ್ರಾಮಗಳಲ್ಲಿ ಮುಖ್ಯವಾಗಿ ತಾನುಭೋಗ-ಯಾ-ಕರಣಂರವರು ಗ್ರಾಮದ ಪೊರಂಬೋಕು ಭೂಮಿಗಳನ್ನು ತಮ್ಮಿಷ್ಟ ಪ್ರಕಾರವಾಗಿ ರೈತರಿಗೆ ಕೊಡುತ್ತಿರುವರು. ವರ್ಷವರ್ಷವೂ ಗೊತ್ತಿರುವ ಕಾರಣಗಳಿಗಾಗಿ ರೈತರು ಬದಲಾಗುತ್ತಿರುವರು. ಗೌಡ-ತಾನುಭೋಗರಿಬ್ಬರೂ-ಬಡ ರೈತರಕಷ್ಟಕ್ಕೆ ಕಾರಣರಿರುವರು. ಬಡ ರೈತರ ಭೂಮಿಹಕ್ಕನ್ನು ಸಾಹುಕಾರ ರೈತನು ವತ್ತಾಯದಿಂದ ಅಕ್ರಮವಿಸಿದಾಗ ಗ್ರಾಮೋದ್ಯೋಗಿಗಳು ಯಾವ ಪಕ್ಷವನ್ನು ವಹಿಸುವರೆಂಬುದು ಎಲ್ಲರಿಗೂ ಗೊತ್ತು. ಕಣೇಕಲ್ಲಿನಲ್ಲಿ ಜಿಲ್ಲಾಕಲೆಕ್ಟರು ಶ್ರೀ ರಾಮಿರೆಡ್ಡಿಯವರು, ಡೆಪ್ಯುಟಿಕಲೆಕ್ಟರು ಶ್ರೀ ವೆಂಕಟನ ಸರೆಡ್ಡಿಯವರು, ತಹಶೀಲ್ದಾರು ಶ್ರೀ ಆರೋಗ್ಯಸ್ವಾಮಿಯವರು ರೆವಿನ್ಯೂ ಇನ್ಸ್‌ಪೆಕ್ಟರು ಕಳೆದ ೩-ಗಳು ಊರಿನ ಜನರನ್ನೆಲ್ಲಾ ಕರೆಸಿಕೊಂಡು ಪೊರಂಬೋಕು ಭೂಮಿಯ ಇಂಥಿಂಥ ಸರ್ವೆ ನಂಬರು ಭೂಮಿಗಳನ್ನು ಹರಿಜನರಿಗೆ ಕೊಟ್ಟಿದ್ದೇವೆಂದು ತಿಳಿಸಿ ಬಿಟ್ಟುಕೊಳ್ಳಲಿಕ್ಕೆ ಹೇಳಿದರು ಇದನ್ನು ಶಾಂತಿಯುತವಾಗಿ ಜಾರಿಯಲ್ಲಿ ತರಲು [ಅಧಿಕಾರಿಗಳಿದ್ದಾಗ-ಗೌಡ-ತಾನುಭೋಗರು ವಪ್ಪಿಕೊಂಡರು. ಆದರೆ ಈಚೆಗೆ ಒಂದಕೂಡಲೇ ಬ್ಯಾಡರನ್ನು ಕಳುಹಿಸಿ ಭೂಮಿಯೊಳಿಗೆ ಪ್ರವೇಶವಾಗದಂತೆ ಈ ನಾಯಿಕರು ತಡೆದರು. ಬೇರೆಯವರ ಹಸರಿನಿಂದ ಕಣೇಕಲ್ಲಿನ ಕರಣಂರು ಈ ಪೊರಂಬೋಕು ಭೂಮಿಯನ್ನು ಅನೇಕ ವರ್ಷಗಳಿಂದ ಅನುಭವಿಸುತ್ತಿರುವ ಈ-ಗೌಡ-ತಾನುಭೋಗರ ವಪ್ಪಿಗೆಯಿಲ್ಲದ ಕೆಲಸವು ರೆವಿನ್ಯೂ ಬೋರ್ಡಿಗೆ ಹೋದರೂ ಸಾಧಿಸದೆಂಬುದನ್ನು ಈ ಉದ್ಯೋಗಿಗಳು ಅರಿತಿರುವರು.

ಈ ಗ್ರಾಮೋದ್ಯೋಗಿಗಳು ತಮ್ಮ ಹಿತಕ್ಕಾಗಿ ಒಂದು ಸಂಘ ಸ್ಥಾಪಿಸಿರುವರೆಂದು ಕೇಳುತ್ತೇವೆ ಹಾಗೂದರೆ ಬಡ ರೈತರ ವಿರುದ್ಧ ಸಾಹುಕಾರರ ಪಕ್ಷ ಕಟ್ಟುವದಿಲ್ಲೆಂದು ಇವರ ಸಂಘದಲ್ಲಿ ತೀರ್ಮಾನಿಸಬೇಕು, ಫಲಾನಿ ಗ್ರಾಮದಲ್ಲಿ ಬಡವರಿಗೆ ಅನ್ಯಾಯಮಾಡಿದ ಉದಾಹರಣೆ ತಕ್ಕುಗೆ ಒಂದರೆ ಅಂಥಹವರ ಮೇಲೆ ಚರ್ಯೆ ತೆಗೆದುಕೊಳ್ಳಬೇಕು. ಬಡರೈತರ ಹಿತವನ್ನು ಕಾರಿಸಲು ಕೆಲಸಮಾಡಲನುವಾಗುವಂತೆ ಗ್ರಾಮೋದ್ಯೋಗಿ ಸಂಘದ ಘಟನೆಯ ಕ್ಲಿಯಾವ ಕಲಂ ಇದೆ? ಇದನ್ನು ದಯವಿಟ್ಟು ಕಾರ್ಯದರ್ಶಿಗಳು ತಿಳಿಸಬೇಕು—

ಒಬ್ಬ ಬಡರೈತ

[ಜಿಲ್ಲೆಯ ಅನೇಕ ಗ್ರಾಮಗಳಲ್ಲಿ ಕೆಲ ಗ್ರಾಮೋದ್ಯೋಗಿಗಳ ಮೂಲಕ ಹರಿಜನರಿಗೆ ಅನ್ಯಾಯವಾದ ರಿಕಾರ್ಡು ನಮ್ಮ ಬಳಿ ಇದೆ. ಎಲ್ಲರೂ ದುರ್ಜನರಲ್ಲ. ಬಹು ಸಂಖ್ಯಾಕರು ಪರೋಪಕಾರಿ ಪ್ರವೃತ್ತಿ ಯವರಿದ್ದಾರೆ. ಆದರೂ ಕೆಲವರಿಂದ ಇಡೀ ಸಂಸ್ಥೆಗೆ ಕಳಂಕ ಹತ್ತುವಸ್ಥಿತಿ ಸಂಗವೂ ಉಂಟು. ಇನ್ನುಮೇಲೆ ಬರುವಕಾಲ ಬಡವರ ಕೂಲಿಕಾರರ ದರಿದ್ರನಾರಾಯಣನದು. ಅಂಥ ಮೇಲೆ ಗ್ರಾಮೋದ್ಯೋಗಿಗಳ ಹೃದಯಪರಿವರ್ತನೆಯಾದರೆ ಬೇ ತಳ್ಳಿ ಕ್ರಾಂತಿಯು ಲಭಿಸೀತು. ಸಂಘದವರು ಈ ದಿಶೆಯಲ್ಲಿ ಸಹಾಯ ನೀಡಬೇಕು.

ಸಂಪಾದಕ- ನವಭಾರತ]

ಮದ್ಯ ನಿಷೇಧ

—

(ಈ ವಿಷಯವನ್ನು ಕುರಿತು ಶ್ರೀ ಎನ್. ಎಂ. ಶಾಸ್ತ್ರಿಯವರು ಬರೆದ ಲೇಖನದ ಸಾರಾಂಶ)

ಪರರಾಜ್ಯದಾಸ್ಯದಿಂದ ಕಳಿತದ ನೈತಿಕ ಪತನವನ್ನು ಸಿದ್ಧಗೊಳಿಸಲು ಮಾ॥ ಗಾಂಧಿಯವರು ಮದ್ಯನಿಷೇಧ ಪ್ರಚಾರವನ್ನಾರಂಭಿಸಿದ್ದುದಂಗಡಿಗಳಮುಂದೆ ಪಿಕೆಟಿಂಗಾರಂಭಿಸಿದರು. ಕಾಂಗ್ರೆಸ್ ಸರ್ಕಾರಗಳು ಗಾಂಧಿಯವರ ಅನುಕರಣೆಮಾಡುವುದರಲ್ಲಿ ನೈತಿಕೋದ್ಧಾರಪಡಿಸಿದೆ ಗಮನವಿತ್ತಿರುವುದು ಗೊತ್ತಿಲ್ಲ. ಅಮೆರಿಕಾದಲ್ಲಿ ಮದ್ಯನಿಷೇಧವು ಪೂರ್ಣ ಅಯಶಸ್ವಿಯಾದುದು ಎಲ್ಲರಿಗೂ ತಿಳಿದಿರಲು ಸಾಕು! ಗಾಂಧೀ ಆತಯುದಂತೆ ಕಾಂಗ್ರೆಸ್ ಸರ್ಕಾರಗಳು ಮುಂದಡಿ ಇಟ್ಟದ್ದು ಸ್ವಾಭಾವಿಕವಿದ್ದರೂ ಕೆಲ ಅಂತರಗಳನ್ನು ಗಮನಿಸಬೇಕಿತ್ತು.

ಸಮಾಜ ಸುಧಾರಣಾ ದೃಷ್ಟಿಯಿಂದ ಪ್ರಚಾರ ಮಾಡಬೇಕಿತ್ತು. ಮದ್ರಾಸು ಪ್ರಾಂತವೊಂದರಲ್ಲೇ 17 ಕೋಟಿ ರೂ. ಕಳೆದುಕೊಳ್ಳಬೇಕಾದದ್ದಿರುವುದರಿಂದ ಆರ್ಥಿಕವನ್ನು ನೋಡಿ ಅಭಿವೃದ್ಧಿಕರ ಯೋಜನೆಗಳನ್ನು ತಡೆಯುವಂತಿತ್ತು. ಕುಡುಕರು ಬೇಕಾದ 5ರಷ್ಟು ಮಾತ್ರವೇ ಇದ್ದ ಕಾರಣ ಬಹು ಸಂಖ್ಯಾಕರ ಹಿತಕ್ಕೆ ಕಾರಣವಾಗುವ ಬಲಾತ್ಕಾರದ ಪ್ರಾಥಮಿಕ ವಿದ್ಯಾಭ್ಯಾಸ ನೀರಾವರಿ ಮತ್ತು ಔದ್ಯೋಗಿಕ ಯೋಜನೆಗಳು ಮತ್ತು ಕೋಟ್ಯಂತರ ಜನರಿಗೆ ಅನ್ನ ಬಟ್ಟೆಗಳನ್ನೊದಗಿಸುವ ಸಮಸ್ಯೆಗಳನ್ನು ದುರ್ಲಕ್ಷಿಸಬಾರದಿತ್ತು. ಭಟ್ಟಿ ಸಾರಾಯಿ ಇಳಿಸುವವರು ಎಲ್ಲಿ ಬೇಕಾದರೂ ತಯಾರಿಸಿ ಅತಾಸ್ತ್ರೀಯ ರೀತಿಯಲ್ಲಿ ಜನರ ಆರೋಗ್ಯ ಕೆಡಿಸಿ ಅಮಿತಲಾಭಗಳನ್ನು ಪಡೆಯುವುದು ತಪ್ಪಿಸಲು ಯಾವ ಸರ್ಕಾರಕ್ಕೂ ಸಾಧ್ಯವಿಲ್ಲ. ಹಿಂದೆ ಕೆಟ್ಟ ಅನುಭವಪಡೆದ ಎಕ್ಸ್ಸೈಸ್ ಡಿಪಾರ್ಟ್‌ಮೆಂಟಿನವರಿಗೆ ಈ ಜವಾಬ್ದಾರಿ ವಹಿಸಲ್ಪಟ್ಟು ನ್ಯಾಯಾಲಯಗಳಲ್ಲಿ ಅನಾವಶ್ಯಕ ಕೆಲಸ ಹೆಚ್ಚಿದೆ. ಸಾರ್ವಜನಿಕರಲ್ಲಿ ಅಬ್ಕಾರಿ ಇಲಾಖೆಯವರಿಗೂ ಭಟ್ಟಿ ಸಾರಾಯಿ ಇಳಿಸುವವರಿಗೂ ಗಾಢ ಸಂಬಂಧವಿದೆಯೆಂಬುದು ವೇದ್ಯವಾಗುತ್ತಲಿದೆ.

17 ಕೋಟಿ ರೂ. ಸರ್ಕಾರ ಕೈಸೇರಿ ನಷ್ಟವಾಯಿತು ಅದರೆ ಸಾರಾಯಿ ಉತ್ಪತ್ತಿ ಕಡಮೆಯಾಗಲಿಲ್ಲ ಕುಡಿಯುವವರ ಹಣದಲ್ಲಿ ಉಳಿತಾಯವಾಗಲಿಲ್ಲ ಈ ಹೊಸ ಉದ್ಯೋಗದಿಂದ ಕೂಲಿಯ ದರ ಹೆಚ್ಚಾಯಿತು. ಬೆಲ್ಲದ ಧಾರಣೆ ಆಕಾಶಕ್ಕೇರಿತು ನಿತ್ಯವೂ ಕಷ್ಟಪಟ್ಟು ಪರಿತ್ರಸುಮಾಡಿದವನಿಗೆ ಸಾಯಂಕಾಲ ಅದನ್ನು ಮೆಕ್ಕೆಸುವ ಸಾನೀಯವು ಬೇಡವೇ? ಅನೀತಿ ಅಪ್ರಮಾಣಿಕತೆ ಲಂಚ ಇವು ಹೆಚ್ಚಿನ ಕೆಡುಕುಗಳಲ್ಲವೇನೇ?

ಮದ್ರಾಸಿನ ಮಂತ್ರಿವರ್ಗವು ಮದ್ಯನಿಷೇಧವನ್ನು ಜಾರಿಗೆ ತರುವುದರಲ್ಲಿ ವಿವೇಕಶೂನ್ಯವೆಂಬ ಆತುರತೆಯನ್ನು ವ್ಯಕ್ತಪಡಿಸಿತು ಮದ್ಯನಿಷೇಧವನ್ನು ಪ್ರಚಾರದಿಂದ ಅಂಗಡಿಗಳನ್ನು ಕಡಮೆ ಮಾಡುವುದರಿಂದ ಸಾಧಿಸಬಹುದಿತ್ತು.

[ಶ್ರೀ ಶಾಸ್ತ್ರಿಯವರ ಅಭಿಪ್ರಾಯಗಳನ್ನು ಒಪ್ಪಿರಂಗವಾಗಿ ಸಮರ್ಥಿಸುವವರು ಕಡಮೆ. ಮದ್ರಾಸು ಸರ್ಕಾರವಿವರು ವ್ಯರ್ಥ ಆತುರತೆಯನ್ನು ವ್ಯಕ್ತಪಡಿಸಿದುದನ್ನು ಎಲ್ಲರೂ ಒಪ್ಪುತ್ತಾರೆ. ಸೀಮಿತ ಕ್ಷೇತ್ರದಲ್ಲಿ ಆರ್ಥಿಕ ಹಾನಿ ಇಲ್ಲದೆ ನಿಷೇಧವನ್ನು ಜಾರಿಯಲ್ಲಿ ತರಬೇಕಿದ್ದಿತು. ಸಮಾಜ ಸುಧಾರಣಾ ಯೋಜನೆಗಳಿಂದ ಆರ್ಥಿಕ ಹಾನಿಯಾಗುವುದು ನಿಜ ಎಂದಿದ್ದರೂ ಇದನ್ನು ಅನುಭವಿಸಲೇ ಬೇಕು ಅಮೆರಿಕಾದ ಸಂಸ್ಕೃತಿಗೂ ನಮ್ಮ ಸಂಸ್ಕೃತಿಗೂ ಅಜಗಜಾಂತರ ವ್ಯತ್ಯಾಸವಿದೆ ಭಟ್ಟಿಸಾರಾಯಿ ಇಳಿಸುವುದನ್ನು ತಪ್ಪಿಸುವಬಗೆ ಹೇಗೆ ಎಂಬುದರಲ್ಲಿ ಉಪಾಯಗಳನ್ನು ಸೂಚಿಸುವದೊಳ್ಳೆಯದು.

ಸಂಪಾದಕ ನವಭಾರತ]

ಹೆಚ್ಚು ಬೆಳೆಯಿರಿ.

(ಮದ್ರಾಸು ಸರ್ಕಾರ ಎತ್ತಸಾಗಿದೆ?)

ತುಂಗಭದ್ರಾ ಪ್ರಾಜೆಕ್ಟಿನಿಂದ ನೀರು ಮುಳುಗುವ ಪಕ್ಕಾತರಿ ಮತ್ತು ಖುಷ್ಕಿ ಸಾಗುವಳಿ ಭೂವಿಭಾಗಗಳಿಗೆ, ಸರ್ಕಾರದವರು ಪರಿಹಾರ ದ್ರವ್ಯ ಕೊಟ್ಟು, ಮದರಾಸು ಸರ್ಕಾರವ ಸ್ವಂತ ಹಕ್ಕುವುಳ್ಳದ್ದಾಗಿ ಸರ್ಕಾರದವರೇ ಸಾಗುವಳಿಗೆ ಲೀಜು ಕೊಡುತ್ತಿರುವ ಎರಡು ಬೆಳೆ ಬರುವ ತರಿ (1ನೇತರಗತಿ) 3000 ಎಕರೆ ಒಂದು ಬೆಳೆಬರುವತರಿ(2ನೇತರಗತಿ) 1000ಎಕರೆ ಖುಷ್ಕಿತರಿ(3ನೇ ,,) 6000 ಎಕರೆ ತೋಟ ಪ್ರದೇಶ 1500 ಎಕರೆ ಖುಷ್ಕಿ ಒಂದು ಲಕ್ಷ ಎಕರೆ ಇಷ್ಟು ಸಾಗುವಳಿ ಪ್ರದೇಶದಲ್ಲಿ, ಕನಿಷ್ಟ ಬೆಳೆ ತರಿ ಭೂವಿಯಿಂದ 1359ನೇಪಸ್ಲಿಯಲ್ಲಿ(1949ರಲ್ಲಿ) 37,182 ಟ್ಕ ಭತ್ತ (ನೆಲ್ಲು) ಬರುತ್ತಿತ್ತು ಅದರಂತ 1360 (1950) ರಲ್ಲಿ 37,182 ಟ್ಕ ನೆಲ್ಲು ಈ ಎರಡು ಪಸ್ಲಿಯಿಂದ 37,182 ಟ್ಕ ಅಕ್ಕಿ ದೊರೆಯುತ್ತಿತ್ತು ಖುಷ್ಕಿಯಿಂದ ನಾಲ್ಕುಎಕರೆಗೆ ಒಂದುಟ್ಕ ಆಹಾರ ಧಾನ್ಯದಂತೆ 25ಸಾವಿರ ಟ್ಕ ಆಹಾರ ಧಾನ್ಯ ಳಿದ ಫಸಲಿಗೂ, 25 ಸಾವಿರ ಟ್ಕ ಈ ಫಸಲಿಗೂ ಒಟ್ಟು 50 ಸಾವಿರ ಟನ್ ಆಹಾರಧಾನ್ಯ ಸರಕಾರದ ಸ್ವಂತಭೂಮಿಯಲ್ಲಿ ಸರ್ಕಾರಕ್ಕೆ ತನ್ನಷ್ಟಕ್ಕೆ ತಾನೇ ಕೈಸೇರುತ್ತಿರುವಾಗ ಮಡೆಗೆ ಮುರ್ಲಕ್ಷಿಸಿದ್ದುದರ ಹೊಣೆಗಾರಿಕೆಯಾರದು?

ಈ ಪೊರಪಾಟಿಗೆ ಮದರಾಸು ಸರಕಾರವು 'ಹೆಚ್ಚಿಗೆ ಆಹಾರಧಾನ್ಯ ಬೆಳೆಯಿರಿ' ಎಂಬ ತಜ್ಞರಿಗೆ ಕೊಡಲೇ ಉತ್ತರ ಕೊಡುವುದೋ?

ಎಸ್. ಎಸ್. ನಾಥ



ಪ್ರಾಥಮಿಕ ವಿದ್ಯಾಭ್ಯಾಸ

—

ಕಾಂಗ್ರೆಸ್ ಸರ್ಕಾರವು ಅರೂಢವಾಗಿ ಇಷ್ಟು ವರ್ಷಗಳಾದರೂ ಪ್ರಾಥಮಿಕ ವಿದ್ಯಾಭ್ಯಾಸದಲ್ಲಿ ಸುಧಾರಣೆಯಾಗಿಲ್ಲವೆಂಬ ಪ್ರಾಥಮಿಕ ಶಾಲೆಗಳು ಪೂರ್ವದ ಹೀನಸ್ಥಿತಿಯಲ್ಲೇ ಇವೆ ಕೆಲ ಶಾಲೆಗಳಲ್ಲಿ ಯೋಗ್ಯರಾದ ಉಪಾಧ್ಯಾಯರಿಲ್ಲ ಕೆಲವಲ್ಲಿ ಉಪಾಧ್ಯಾಯರೇ ಇಲ್ಲ ಕೆಲವಲ್ಲಿ ಬಾಲಕರು ಹೆಚ್ಚಿಗಿದ್ದು ಒಬ್ಬರೇ ಉಪಾಧ್ಯಾಯರು ಐದೂ ತರಗತಿಗಳನ್ನು ನಿರ್ವಹಿಸಬೇಕಾದ ಪ್ರಸಂಗವಿವೆ ಕೆಲವೂರುಗಳಲ್ಲಿ ಉಪಾಧ್ಯಾಯರಿಗೆ ಸೌಕರ್ಯಗಳಿಲ್ಲ. ಬರುವ ಸಂಬಳಸಾಲುವುದಿಲ್ಲ. ಸಂಬಳವೂ ಸರಿಯಾಗಿ ಸರ್ಕಾರಕ್ಕೆ ಬಾರದೆ ಶಿಕ್ಷಕರಿಗೆ ಕೆಲ ವ್ಯಾಪಾರಗಳಲ್ಲಿ ಕಷ್ಟಪಡಗಳಿಲ್ಲ. ಬಾಡಿಗೆಯು ಕಷ್ಟಪಡಗಳು ಹೆಂಸಿಯ ಅವಶೇಷಗಳಿವೆಂತಿವೆ. ಮಕ್ಕಳನ್ನು ಮಣ್ಣಮೇಲೆ ಕೂಡಿಸುತ್ತಾರೆ.

ಗ್ರಾಮಸ್ಥರ ದೌರ್ಬಲ್ಯ ಉಪಾಧ್ಯಾಯರ ನಿರ್ಲಕ್ಷ್ಯ ಅಧಿಕಾರಿವರ್ಗದ ನಿರಭಿಮಾನ ಮತ್ತು ಪಕ್ಷಪಾತ ಮೇಲಾಗಿ ಸರ್ಕಾರದ ನಿತ್ಯವೂ ಪರಿವರ್ತಿತನಾಗುತ್ತಿರುವ ನೀತಿ ಅಲ್ಪವೇತನದಿಂದ ಎರಡು ವರ್ಷಗಳ ಟ್ರಾಯನಿಂಗ್ ಮುಗಿಸುವುದು ಸಾಧ್ಯವಿಲ್ಲವೆಂದು ಯುವಕರು ಉದ್ಯೋಗ ಪ್ರಪಂಚದ ಬೇರೆ ಕ್ಷೇತ್ರಗಳಿಗೆ ಹೋಗುತ್ತಿರುವರು. ಹೀಗಾಗಿ ಶಾಲೆಗಳನ್ನು ಹೆಚ್ಚಾಗಿ ವ್ಯಾಪಾರಿಸಿ ನಿರಕ್ಷರತೆಯನ್ನು ನಿರ್ಮೂಲ ಮಾಡುವ ಸರಕಾರದ ಉದ್ದೇಶವೆ ವ್ಯರ್ಥವಾಗುತ್ತಲಿಗೆ. ದೊಡ್ಡ ದೊಡ್ಡ ಗ್ರಾಮಗಳಲ್ಲಿರುವ ಶಾಲೆಗಳ ಪರಿಸ್ಥಿತಿಯು ಶೋಚನೀಯವಾಗಿದೆ ಹತ್ತಿಪ್ಪತ್ತು ವರ್ಷಗಳಿಂದ ಒಂದೇ ಕಡೆಯಲ್ಲಿದ್ದು ಗ್ರಾಮದ ಇತರ ವ್ಯವಹಾರಗಳಲ್ಲಿ ಭಾಗವಹಿಸಿ ಶಾಲೆಗಳ ಹಿನ್ನಡಿತಿಗೆ ಕಾರಣರಾಗಿರುವವರೂ ಇದ್ದಾರೆ. ಗ್ರಾಮಸ್ಥರ ಅಪೇಕ್ಷೆಯನ್ನು ಗವನಿಸಿ ಮೂರು ವರ್ಷಕೊಮ್ಮೆ ಉಪಾಧ್ಯಾಯರ ವರ್ಗಾವರ್ಗಿ ಮಾಡುವುದು ಗ್ರಾಮದ ದೃಷ್ಟಿಯಿಂದ ಹಿತಕರ ಶಾಲೆಯ ದೃಷ್ಟಿಯಿಂದ ಶ್ರೇಯಸ್ಕರ

ಸರ್ಕಾರವರು ಹೆಚ್ಚಿನ ಪಣ ವ್ಯಯ ಮಾಡುವವರೆಗೂ ಈ ವಿಷಯದಲ್ಲಿ ಪ್ರಗತಿ ಸಾಧಿಸುವುದು ಅಸಾಧ್ಯ ಶಿಕ್ಷಣಾವಧಿಯಲ್ಲಿ ಹೆಚ್ಚು ವೇತನ ಕೊಡಬೇಕು ಉಪಾಧ್ಯಾಯರ ಸಂಬಳ ಅಲೋವೆನ್ಸು ಯೋಗ್ಯತಾ ಸ್ಕಾಲರ್‌ಷಿಪ್ಪುಗಳಿಗೆ ಹೆಚ್ಚು ಹಣ ಕಟ್ಟಬೇಕು ಹೊಸ ಕಟ್ಟಡಗಳನ್ನು ಕಟ್ಟಿಸಲಾಗದಿದ್ದರೆ ಬಾಡಿಗೆ ವಸೆಗಳ ವಿಚಾರಿಯನ್ನು ಅವಶ್ಯಕವೆಂದು ಭಾವಿಸಿ ತಾವೇ ಮಾಡಿ ಬಾಡಿಗೆಯಲ್ಲಿ ನುರಿಸುಹಾಕಿಕೊಳ್ಳಬೇಕು— ಸಾಕ್ಷ್ಯಪುಸ್ತಕಗಳ ನಿಯಂತ್ರಣವನ್ನು ತಾವೇ ವಹಿಸಿ ಸಾಂತದ ಎಲ್ಲಾ ತಾಲೂಕುಗಳಲ್ಲೂ ಒಂದೇತರದ ಪಾಠ್ಯಪುಸ್ತಕಗಳ ಅಧ್ಯಯನ ಕ್ಕೇರ್ಪಡಿಸಬೇಕು ಮಾಡಿ ವ್ಯವಸ್ಥಾಪಕರು ಸಂಬಳಸರಿಯಾಗಿ ಕೊಡದಿದ್ದರೆ ಸರಕಾರಿ ಮಾನ್ಯತೆ ಮತ್ತು ಗ್ರಾಂಟುನಿಲ್ಲಿಸಿಬಿಡಬೇಕು. ಯಾವ ಶಾಲೆಗಳಲ್ಲಿ ಪ್ರಗತಿ ಇಲ್ಲವೋ ಅಂಥ ಶಾಲೆಗಳ ಉಪಾಧ್ಯಾಯರನ್ನು ದಂಡಿಸಬೇಕು— ಗ್ರಾಮದ ರಾಜಕೀಯದಲ್ಲಿ ಭಾಗವಹಿಸುವ ಉಪಾಧ್ಯಾಯರನ್ನು ಎಚ್ಚರಿಸಿ ಪ್ರತಿಬಂಧಿಸಬೇಕು— ಇಂಥಾ ವಿವಿಧೋಪಾಯಗಳಿಂದ ಪ್ರಾಥಮಿಕ ವಿದ್ಯಾಭ್ಯಾಸವು ಪ್ರಗತಿಗೊಳ್ಳಬೇಕು.

ಬಾಂಬುದಾಳಿ ಅಮಾನುಷ ಕೃತ್ಯ

ಅಮೆರಿಕನ್ ನಾವ್ಯಾಜ್ಯ ವಾದಿಯು ಕೊರಿಯಾದಲ್ಲಿ ನಡೆಸಿರುವ ಅಮಾನುಷಕೃತ್ಯ ಉತ್ತರ ಕೊರಿಯಾ ಕೊರಿಯಾಗಳಲ್ಲಿ ಯುದ್ಧದ ನಿವಿಂದ ಪಟ್ಟಣ ಹಳ್ಳಿಗಳ ನಿರ್ನಾಮ ಮಾಡುತ್ತಲಿದೆ. ಹೆಂಗಸರೂ ಮಕ್ಕಳೂ ಏನು ಅನ್ಯಾಯಗೈದಿರುವರು? ಅಮೆರಿಕೆಯು ಯುಕ್ತರಾಷ್ಟ್ರಸಂಘದ ಹೆಸರಿನಿಂದ ನಿರಪರಾಧಿ ಜನರ ಕೊಲೆ ಮಾಡುತ್ತಲಿದೆ. ಕಡೆಯಪಕ್ಷ ಹಿಂಡದಲ್ಲಿ ಕಾಲು ಚಾಚಿರುವ ಅವರ ಪ್ರಭಾವವನ್ನು ಕಾಪಾಡಿಕೊಳ್ಳಲು ಅಮೆರಿಕೆಯು ಹವಣಿಸಿದೆ. ಸಿರಿಯಾ ಹಿಂಡದಲ್ಲಿ ಕಾಲು ಚಾಚಿರುವ ಅವರ ಪ್ರಭಾವವನ್ನು ಕಾಪಾಡಿಕೊಳ್ಳಲು ಅಮೆರಿಕೆಯು ಹವಣಿಸಿದೆ. ಸಿರಿಯಾ ಹಿಂಡದಲ್ಲಿ ಜನರ ಸ್ವಾತಂತ್ರ್ಯ ಅಪಹರಣಮಾಡಿ ಅವರನ್ನು ಗುಲಾಮರಾಗಿ ಮಾಡಿ ತನ್ನ ರಾಜ್ಯವಿಸ್ತಾರವನ್ನು ಮಾಡುವ ಅಮೆರಿಕೆಯು ಈ ರಾಕ್ಷಸೀ ಮಹತ್ವಾಕಾಂಕ್ಷೆಯು ಹಿಂಡನೀಯ— ಫಾರ್ಮೋಸಾ ದ್ವೀಪವು ಚೀನಕ್ಕೆ ಸೇರಿದುದೆಂದು ಪ್ರಪಂಚಕ್ಕೇ ಗೊತ್ತಿದ್ದರೂ ಅಮೆರಿಕಯು ಅದನ್ನು ಚೀನಪರಾಕ್ರಮಿಯಂತೆ ತನ್ನ ಸೈನ್ಯವನ್ನು ಕಳುಹಿಸಿದೆ. ಇದನ್ನು ಯುಕ್ತರಾಷ್ಟ್ರ ಸಂಘದ ಸಭೆಯು ದುಃಚ್ಚೆಮರೆಯಿಡಿದೆ ಖಂಡಿಸಬೇಕು" ಎಂದು ಭಾವಣವಾಡಿ ಈ ಅರ್ಥದ ಒಂದು ತೀರ್ಮಾನವನ್ನು ರಶಿಯಾದ ರಾಯಭಾರಿ ಜಾಕೊಬ್ ಮಾಲೀಕರು ತಂದಿದ್ದರು. ಆದರೆ ಅಮೆರಿಕಾಯುಕ್ತರಾಷ್ಟ್ರ ಸಂಘದಲ್ಲಿ ಹೆಚ್ಚಿನ ಬೆಂಬಲವಿರುವಕಾರಣ ರಶ್ಯಾದ ತೀರ್ಮಾನಕೆ ಎತ್ತಸ್ಸುಸಿಗಲಿಲ್ಲ.

—

ನಮಗೆ ಬೇಕಾದ ಆಹಾರ ನಾವೇ ಉತ್ಪನ್ನ ಮಾಡಬೇಕು,

—

1951ರ ನಂತರ ಆಹಾರ ವಸ್ತುಗಳನ್ನು ತರಿಸುವುದಿಲ್ಲ.

ಕಳೆದ ಪ್ರಪಂಚ ಯುದ್ಧ, ಹಿಂದುಸ್ಥಾನದ ವಿಭಜನೆ, ಜನಸಂಖ್ಯೆ ಹೆಚ್ಚುತ್ತಿರುವುದು ಇವು ನಮ್ಮ ಆಹಾರ ಕೊರತೆಗೆ ಮುಖ್ಯಕಾರಣಗಳು. ಆಹಾರ ಧಾನ್ಯ ಬೆಳೆಯುತ್ತಿದ್ದ ಹಿಂದುಸ್ಥಾನದ ವಿಶಾಲ ಪ್ರದೇಶಗಳು ಇಂದು ಪಾಕಿಸ್ತಾನದಲ್ಲಿವೆ. ಅದು ಕೊಡುತ್ತಿದ್ದರೂ, ಒಂದು ವಿಷಯ ಸ್ಪಷ್ಟವಿದೆ. ಹಿಂದುಸ್ಥಾನವು ತನಗೆ ಬೇಕಾದ ಆಹಾರವನ್ನೆಷ್ಟಾಬೇಕಾದರೂ ಹೆಚ್ಚಿಸಿಕೊಳ್ಳಬೇಕು. ಅದು ಹೊರಗಿನ ಆಮದುಗಳನ್ನೇ ಹೊಂದಿಕೊಂಡಿರಲು ಸಾಧ್ಯವಿಲ್ಲ. ಅದರಿಂದ ತುಂಬಾವೆಚ್ಚ, ಸಂಭವನೀಯತ್ತೆ ಮಾತ್ರವಲ್ಲ. ಇತರ ರಮೇಲೆ ನಮ್ಮ ದೇಶವು ಹೊಂದಿಕೊಂಡಿರ ಬೇಕಾಗುತ್ತದೆ. ಅವರಿಂದ ಬೇರೆವು ನಿರ್ಬಲವಾಗುತ್ತದೆ. ಹೊರಗಿನ ಒತ್ತಡಕ್ಕೆ ತಲೆಬಾಗುವ ಅವಶ್ಯವೂ ಒದಗುತ್ತದೆ. ಇದಲ್ಲದೆ ಪ್ರಪಂಚದ ಇಂದಿನಂತಹ ಅವಸರದ ಸಮಯದಲ್ಲಿ ಆಮದುಗಳಿಗೆ ಸಾಧ್ಯವಿಲ್ಲ. ಆದುದರಿಂದ ನಾವು ನಮಗೆ ಬೇಕಾದ ಆಹಾರವನ್ನು ನಾವೇ ಉತ್ಪಾದನೆ ಮಾಡಬೇಕು. ಈ ವಿಷಯವನ್ನು ಜನರು ತಿಳಿದು ತಮ್ಮ ಆಹಾರ ಅಭ್ಯಾಸಗಳನ್ನು ಅದಕ್ಕನುಸಾರವಾಗಿ ಹೊಂದಿಸಿಕೊಳ್ಳಬೇಕು. ತನುಗೆ ಬೇಕಾದ ಬಗೆಯ ಆಹಾರವಸ್ತುಗಳನ್ನು ಆರಿಸಿಕೊಳ್ಳುವ ಸಮಯವು ಇವಲ್ಲ. ಯಾವುದು ದೊರೆಯುತ್ತದೆಯೋ ಅದನ್ನು ತೆಗೆದುಕೊಳ್ಳಬೇಕು. ಈ ಮೂಲ ವಿಷಯವನ್ನು ಜನರು ಅರಿತು, ಒಂದೇ ಒಂದು ಆಹಾರ ಕಣವನ್ನಾದರೂ ಪೋಲುಮಾಡದಂತೆ ನಿರ್ಧರಿಸಬೇಕು.

1951ರ ನಂತರ ಆಹಾರ ವಸ್ತುಗಳನ್ನು ಪರದೇಶಗಳಿಂದ ತರಿಸಲಾಗದೆಂದು ಹಿಂದುಸ್ಥಾನ ಸರಕಾರವು ನಿಶ್ಚಯಿಸಿದೆ. ಈ ನಿರ್ಣಯವನ್ನು ಬದಲಾಯಿಸುವುದಿಲ್ಲ. ಆಹಾರದ ಕೊರತೆಯು ಹೀಗೆಯೇ ಇದ್ದು, ಜನರು ಸ್ವಲ್ಪ ಪ್ರಮಾಣದಲ್ಲಿ ಊಟ ಬೇಕಾಗಿ ಬಂದರೂ ಈ ನಿರ್ಧಾರವನ್ನು ಅನುಸರಿಸಿಯೇ ತೀರುವುದು, ಆಹಾರೋತ್ಪತ್ತಿಯನ್ನು ಹೆಚ್ಚಿಸಿ ಆಹಾರದಮಟ್ಟಿಗೆ ದೇಶವನ್ನು ಸ್ವಾವಲಂಬಿಯನ್ನಾಗಿ ಮಾಡಲು ಪ್ರತಿಯೊಂದು ವಿಧದಲ್ಲಿ ಯತ್ನಿಸಲಾಗುವುದಾದರೂ ಯಾವುದಾದರೂ ಕೊರತೆ ಇದ್ದರೆ ಅದನ್ನು ಜನರು ಸರಿಪಡಿಸಿಕೊಳ್ಳಬೇಕು.

— ಪಂಡಿತ ಜವಹರಲಾಲ್ ನೆಹರು

ವನಸ್ಪತಿಗಳ ಪರಮಾವಧಿ ಬೆಲೆ.

ಮದ್ರಾಸು ಸಂಸ್ಥಾನದಲ್ಲಿ ಮಾರಾಟ ಮಾಡುವ ಪಾಲ್ಡ ಇತ್ಯಾದಿ 'ವನಸ್ಪತಿ' ವಸ್ತುಗಳ ಪರಮಾವಧಿ ಬೆಲೆಗಳನ್ನು ಹಿಂದುಸ್ಥಾನ ಸರಕಾರವು ಈ ಕೆಳಗಿನಂತೆ ಗೊತ್ತುಪಡಿಸಿದೆ—

ದೊಡ್ಡ ಪ್ರಮಾಣಗಳಲ್ಲಿ ಉತ್ಪಾದಕರು ಅಥವ ಹೊಂಚುವ ವ್ಯಾಪಾರಿಗಳು ಮಾರುವಾಗ ಪೌಂಡಿಗೆ ಪರಮಾವಧಿ ಬೆಲೆ ರೂ. 1—0—3

ಇತರರು ದೊಡ್ಡ ಪ್ರಮಾಣಗಳಲ್ಲಿ 35 ಪೌಂಡಿಗೆ ಕಡಮೆಯಾಗದಂತೆ ಅಥವಾ ಬಿಡಿಯಾಗಿ ಸ್ವಲ್ಪ ಪ್ರಮಾಣಗಳಲ್ಲಿ ಮಾರುವಾಗ ಪೌಂಡಿಗೆ ಪರಮಾವಧಿಕ ಬೆಲೆ ರೂ 1—1—0

ಸ್ವಲ್ಪ ಪ್ರಮಾಣಗಳಲ್ಲಿ ಮಾರುವಾಗ ಈ ಕೆಳಗಿನಂತೆ ಪರಮಾವಧಿಕ ಬೆಲೆ ಗೊತ್ತುಪಡಿಸಲಾಗಿದೆ.

ಪ್ರಮಾಣ	ರಫಂ	ಚಿಲ್ಲರೆ
10 ಪೌಂಡು	11-1-6	11-6-6
9 ,,	9-15-9	10-4-3
5 ,,	5-12-6	3-15-0
3 ,,	3-8-3	3-9-9
2 ,,	2-0-6	2-6-6
1 ,,	1-1-0	1-3-6

ಈ ಬೆಲೆಗಳಲ್ಲಿ ಸಾರಿಗೆ ವೆಚ್ಚವೇನಿಯಾದರೂ ಇಳಿಕೆಯಾಗಲಿ, ಟಿಕ್ಕಿನಲ್ಲಿ ಟೀಕ್ಸು ಮತ್ತು ಅಂತಹ ಇತರ ಸ್ಥಳೀಕ ತೆರಿಗೆಗಳೂ ಮಾರಾಟ ತೆರಿಗೆಯೂ ಸೇರಿಕೊಂಡಿಲ್ಲ.

ತಯಾರಿಸುವವ, ಅವರ ಹಂಚುವ ಏಜಂಟರು, ರಫಂ ವ್ಯಾಪಾರಿ ಅಥವಾ ಚಿಲ್ಲರೆ ವ್ಯಾಪಾರಿಯು ಅಂಶಹ ತೆರಿಗೆ ತೆತ್ತರೆ, ಪರಮಾವಧಿಕ ಬೆಲೆಗೆ ತೆರಿಗೆತೆತ್ತ ಬಟ್ಟು ಮೊಬಲಗನ್ನು ಕೂಡಿಸಿಕೊಳ್ಳಬಹುದು.

*

ಪಂಡಿತ ಜವಹರಲಾಲರು ಅಸಾಮುಸಂಚಸ್ಯ ಭಾಗಗಳನ್ನು ಸಂಚರಿಸಿ ದೆಲ್ಲಿಗೆ ಮರಳಿದರು. ಅಸಾಮಿಗೆ ವಿಶ್ವಾಕಡೆಯಿಂದಲೂ ಸಹಾಯವು ಬರುತ್ತಲಿದೆ. ಪಾಕಿಸ್ತಾನವು ಕಳ್ಳಿದ್ದವಿಗೆ ಬದಲಾಗಿ ಅಕ್ಕಿ ಕೊಡಲಿದೆ.

—

ಮದ್ರಾಸಿಗೆ ಮಧ್ಯಪ್ರದೇಶದಿಂದ ಈ ತಿಂಗಳಲ್ಲಿ ಹತ್ತುಸಾವಿರ ಟನ್ ಅಕ್ಕಿ ಬರಲಿದೆ.

—

ಸರ್ದಾರ ವಲ್ಲಭಭಾಯಿ ಪಟೇಲರು 8 ದಿನಗಳ ವಾಸ್ತವ್ಯಕ್ಕಾಗಿ ಬೊಂಬಾಯಿಗೆ ಬಂದಿರುವರು.

ಮೋಟಾರು ಸಾರಿಗೆ ನೌಕರರಿಗೆ ಕನಿಷ್ಟ ವೇತನ

[ಶ್ರೀ]

ಸಾರ್ವಜನಿಕ ಮೋಟಾರುಸಾರಿಗೆಯಲ್ಲಿ ಕೆಲಸಕ್ಕಿರುವ ನೌಕರರಿಗೆ ತೆರಬೇಕಾದ ಕನಿಷ್ಟ ವೇತನ ಧರಗೆಗಳನ್ನು ಸರಕಾರವು ಗೊತ್ತುಪಡಿಸಿ ಪ್ರಕಟಿಸಿದೆ 1950ನೇ ಸಪ್ಟೆಂಬರ 25ರಿಂದ ಜಾರಿಗೂ ಅನಂತರ ಈ ಪ್ರಕಟಣೆಯ ಕುರಿತು ಆಲೋಚಿಸಲಾಗುವುದು. ಇದಕ್ಕೆ ಆಕ್ಷೇಪಗಳನ್ನಾಗಲೀ ಸೂಚನೆಗಳನ್ನಾಗಲೀ ಕಳುಹಿಸುವವರು ಮೇಲಿನ ತಾರೀಕಿನೊಳಗೆ ಮದ್ರಾಸಿನ ಲೇಬರು ಕಮಿಷನರ ಮುಖಾಂತರ ಸರಕಾರದ ಡಿವಲಪ್‌ಮೆಂಟು ಡಿಪಾರ್ಟುಮೆಂಟಿನ ಸೆಕ್ರೆಟರಿಯವರಿಗೆ ಕಳುಹಿಸಬೇಕಾಗಿದೆ. ಗೊತ್ತುಪಡಿಸಿದ ವೇತನಗಳು ಈ ಕೆಳಗಿನಂತಿವೆ. ಇದರಲ್ಲಿ ದೈನಂದಿನದ ಭತ್ತೆಯಾಗಲಿ ಜೀವನವೆಚ್ಚದ ಭತ್ತೆಯಾಗಲಿ ಸೇರಿಕೊಂಡಿಲ್ಲ

ಕೆಲಸಗಾರರು ಕನಿಷ್ಟ ವೇತನದರೂ ಆ ಪೈ

ಟ್ರಾನ್ಸಪೋರ್ಟು ಸರ್ವಿಸ್

1. ಡ್ರೈವರು	40—0—0
2. ಲಾರಿ,,	45—0—0
3. ಕಂಡಕ್ಟರ್	30—0—0
4 ಕ್ಲೀನರ್ ಮೊದಲಾದ ಅನುಭವವಿಲ್ಲದ ಕೆಲಸಗಾರರು	0—14—0

ಟ್ರಾನ್ಸಪೋರ್ಟ್ ವರ್ಕ್‌ಶಾಪು

1 ಎಂಪ್ಲಾಯಿಸ್	1—0—0
2 ಫೋರ್‌ಮೆನ್	100—0—0
3. ಮೆಕೇನಿಕ್	75—0—0
4 ಅಸಿಸ್ಟೆಂಟುಮೆಕ್	50—0—0
5. ಫಿಟ್ಟರ್	50—0—0
6. ಬಡಗಿ, ಕಮ್ಮಾರ ಮೊದಲಾದ ಅನುಭವ ಪಡೆದ ಕೆಲಸಗಾರರು	1—8—0

ಹೊಸಪೇಟೆಯ ಜಿಲ್ಲಾ ಮುನಸೀಫರ ಕೋರ್ಟಿನಲ್ಲಿ

ಒ ಎಸ್ 37,48 ! ಐ. ಸಿ 82.50

ಡಿಕ್ರಿಹೋಲ್ಡರ್—

ಆರ್.ಗೂಳಪ್ಪ ತಂದೆ ರುದ್ರಪ್ಪ 45 ಯಾದವ ಕಂಟ್ರಾಕ್ಟರ್ ಹೊಸಪೇಟೆ

ಜಡ್ಜ್‌ಮೆಂಟ್‌ಡೆಟರ್—

ಕೆ.ಅಬ್ದುಲ್‌ಖಾದರ್‌ಸಾಬು ತಂದೆ ಖಾಜಮುದ್ದೀನುಸಾಬು, 30, ಮುಸ್ಲಿಂ ವ್ಯಾಪಾರ, ಕೂಡ್ಲಿಗಿ

ಶೆ. ಪಿ. ಶೆ. ಆರ್ಡರ್ 21 ರೂಲ್ 22 ನೋಟೀಸು

ಮೇಲಿನ ನಂಬರಿನಲ್ಲಿ ಡಿಕ್ರಿ ಹೋಲ್ಡರ್‌ರು ಡಿಕ್ರಿ ಅನುಸಾರ ನಡೆಸುವದಕ್ಕಾಗಿ ಅರ್ಜಿ ಇಟ್ಟಿರುತ್ತಾನೆ! ಸದ್ರಿ ಅರ್ಜಿ ವಾಯ್ದೆ 14—9—50 ಕ್ಕೆ ಇರುತ್ತದೆ. ಜಡ್ಜ್‌ಮೆಂಟುಡೆಟರ್ ಮುದ್ದಾಗಲಿ, ವಕೀಲರದ್ವಾರವಾಗಲಿ ಹಾಜರಾಗತಕ್ಕದ್ದು

ಎ ಆರ್ ಕೃಷ್ಣರಾವ್,
ಅಡ್ವೊಕೇಟು ಫಾರ್
ಡಿಕ್ರಿಹೋಲ್ಡರು

—[ಶ್ರೀ]—

ಕುಂಚೂರುಅಂಚೆಕಟ್ಟೆ

—

ಶ್ರೀ ಸಿ ಧರ್ಮಪ್ಪನವರು ಹೀಗೆ ಬರೆಯುತ್ತಾರೆ—

196 ಕ್ಕಿಂತಲೂ ಮೊದಲಿನಿಂದ ಈ ಬಗ್ಗೆ ನಮ್ಮ ಪ್ರಯತ್ನಗಳು ಸಾಗಿವೆ. ಪೋಸ್ಟಲು ಅಧಿಕಾರಿಗಳ ಪ್ರಶ್ನೆಗಳಿಗೆಲ್ಲಾ ಸಮರ್ಪಕ ಉತ್ತರಗಳನ್ನು ಲೇಖೀ ಮೂಲಕ ಇತ್ತಿದ್ದೇವೆ. ಒಳ್ಳಾರಿಗೂ ಹೋಗಿ ಸಂಬಂಧಿಸಿದಧಿಕಾರಿಗಳನ್ನು ಕಂಡು ನಿವೇದಿಸಿರುತ್ತೇವೆ. ಆದರೂ ನಮ್ಮ ಪ್ರಯತ್ನಗಳು ಫಲಿಸಿಲ್ಲ.

ನಮ್ಮ ಗ್ರಾಮವು 2 ಸಾವಿರ ಪ್ರಜಾಸಂಖ್ಯೆಯುಳ್ಳದ್ದು ಪಂಚಾಯ್ತಿ ಬೋರ್ಡು, ಕೋರ್ಟು, ಎಲಿಮಂಟರಿಶಾಲೆ ಸಂತೆಯ ಸೌಕರ್ಯಗಳನ್ನು ಕೊಂದಿನೆ ತಂಬಾಕದ ಬೆಳೆಗೆ ಕೇಂದ್ರಸ್ಥಾನವಾಗಿ ನೂರಾರು ವ್ಯಾಗ್ಗಗಳಿವೆ. ವ್ಯಾಪಾರಸ್ಥರೂ ಕರಸಲ್ಲಿ ಸಾನವರಿದ್ದಾರೆ. 5 ಮೈಲಿಯೊಳಗ 7-8 ಸಂಣ ಹಳ್ಳಿಗಳಿದ್ದು ಅವರು ತಮ್ಮ ವಿವಿಧ ಬೇಡಿಕೆಗಳಿಗಾಗಿ ನಮ್ಮ ಗ್ರಾಮವನ್ನವಲಂಬಿಸಿರುವರು ನಮ್ಮ ಗ್ರಾಮವು ಅಂಚೆಕಟ್ಟೆಗೆ ಯೋಗ್ಯವೆಂದು ಬೇರೆ ಹೇಳಬೇಕಾಗಿಲ್ಲ. ಶೀಘ್ರದಲ್ಲಿ ಅಂಚೆಕಟ್ಟೆ ಭರಲು ತಾವು ನಮಗೆ ಸಹಾಯಮಾಡಲು ಕೋರುತ್ತೇನೆ.

ಶಿಕ್ಷಣ ತರಬೇತಿ

ಹೈಸ್ಕೂಲುಗಳಲ್ಲಿ ವಿಭಕ್ತ ಅಭ್ಯಾಸದ ವಿಷಯ

'ಶಿಕ್ಷಣ ತರಬೇತಿ'ಯನ್ನು V ಫಾರ್ಮಿನಲ್ಲಿ ವಿಭಕ್ತ ಅಭ್ಯಾಸದ ವಿಷಯಗಳಲ್ಲಿ ಒಂದನ್ನಾಗಿಸ್ಪೆಯೋಗವೇಪರೀಕ್ಷಾರ್ಥವಾಗಿ ಕೆಲವು ಶಾಲೆಗಳಲ್ಲಿ ಜಾರಿಗೆ ತರಬೇಕೆಂದುಸರಕಾರವು ನಿಶ್ಚಯಿಸಿದೆ. 1950-51ನೇ ಶಾಲಾ ವರ್ಷದಲ್ಲಿ 25 ಸೆಕೆಂಡರಿ ಶಾಲೆಗಳಲ್ಲಿ ಆರಂಭಿಸಲಾಗುವುದು. ಮುನಿಸಿಪಲ್ ಹೈಸ್ಕೂಲ್, ಬಳ್ಳಾರಿಯಲ್ಲಿ ಈ ಕ್ರಮ ಜಾರಿಗೆ ಬರುವುದು.

'ಶಿಕ್ಷಣ ತರಬೇತಿ' ವಿಷಯ ತೆಗೆದುಕೊಳ್ಳುವ ವಿದ್ಯಾರ್ಥಿಗಳಿಗೆ ಶಾಲಾ ಸಂಬಳ ಪೂರ್ಣರಿಯಾಯಿತಿ ಕೊಡಲಾಗುವುದು. ಇದಲ್ಲದೆ V ನೇ ಫಾರ್ಮಿನಲ್ಲಿ ತಿಂಗಳಿಗೆ ರು. 5 ರಂತೆಯೂ VI ನೇ ಫಾರ್ಮಿನಲ್ಲಿ ತಿಂಗಳಿಗೆ ರೂ. 7ರಂತೆಯೂ ವಿದ್ಯಾರ್ಥಿವೇತನ ದೊರೆಯುತ್ತದೆ. ಸರಕಾರಿ ಶಾಲೆಗಳಲ್ಲದೆ ಶಾಲಾಮೇನೇಜುಮೆಂಟಿನವರಿಗೆ ಟೀಚಿಂಗು ಗ್ರಾಂಟುಗಳಲ್ಲದೆ. ವಿದ್ಯಾರ್ಥಿಗಳ ಶಾಲಾ ಸಂಬಳ ನಷ್ಟವನ್ನು ಪೂರ್ಣ ಭರ್ತಿ ಮಾಡಲಾಗುವುದು. ಈ ಅಭ್ಯಾಸ ತೆಗೆದುಕೊಳ್ಳುವ ವಿದ್ಯಾರ್ಥಿಗಳು ಎಸ್.ಎಸ್.ಎಲ್.ಸಿ. ಪರೀಕ್ಷೆ ಮುಗಿದನಂತರ ತಾವು ಟೀಚರ್ಸ್ ಟ್ರೈನಿಂಗ್‌ಕೋರ್ಸ್ ಕಲಿಯುವೆವೆಂದು ವಾಗ್ದಾನ ಕೊಡಬೇಕಾಗಿದೆ.

ಗ. ಕೋಡಿಹಳ್ಳಿ

ಹೊಸಪೇಟೆ ತಾ|| ಇಟ್ಟಿಗಿ ಫಿರ್ಕಾ ಗ|| ಕೋಡಿಹಳ್ಳಿ ದಿನಾಂಕ 4—9—50ರ ಗೋಕುಲಾಷ್ಟಮಿಯ ಶುಭದಿನ ದಂದು ನೂತನ ಕನ್ನಡ ಪ್ರಾಥಮಿಕ ಶಾಲೆಯ ಪ್ರಾರಂಭೋತ್ಸವ ಸಮಾರಂಭವು ಬಳ್ಳಾರಿ ಜಿಲ್ಲಾ ಬೋರ್ಡ ಸದಸ್ಯರಾದ ಶ್ರೀಯುತಗಿರಿ ಶಿದ್ಧಲಿಂಗಪ್ಪನವರಧ್ಯಕ್ಷತೆಯಲ್ಲಿಯೂ, ಹೊಸಪೇಟೆ ತಾಲ್ಲೂಕ ಕಾಂಗ್ರೆಸ್ ಕಮಿಟಿ ಅಧ್ಯಕ್ಷರೂ ಮತ್ತು ಬಳ್ಳಾರಿ ಜಿಲ್ಲಾಬೋರ್ಡ ಸದಸ್ಯರೂ ಆದ ಶ್ರೀ ಕೆ. ಚನ್ನಬಸವನಗೌಡರು, ಬಿ.ಎ., ಇವರ ಉದ್ಘಾಟನೆಯಲ್ಲಿಯೂ ಜರುಗಿತು. ಅಧ್ಯಕ್ಷರು ರೈತಸಂಘಗಳಬಗ್ಗೆ ಕಾರ್ಯಕರ್ತರು ಹೇಗಿರಬೇಕು, ಅವರಿಗೆ ಜನತೆ ಹೇಗೆ ಪ್ರೋತ್ಸಾಹಕೊಡಬೇಕು ಎಂಬ ಬಗ್ಗೆ ದೀರ್ಘಭಾಷಣಮಾಡಿದರು. ಉದ್ಘಾಟಕ ರೈತರ ಆರ್ಥಿಕ ಅಭಿವೃದ್ಧಿ: ಹೆಚ್ಚು ಆಹಾರ ಪದಾರ್ಥಗಳನ್ನು ಬೆಳೆಸುವದರಬಗ್ಗೆ ದೇಶದ ಈಗಿನ ವಾತಾವರಣ, ಪೂಜ್ಯಬಾಪೂಜಿಗೆ ನಾವು ಸಲ್ಲಿಸಬೇಕಾದ ನಿಜಸೇವೆ, ಶಿಕ್ಷಣದಿಂದಾಗುವ ಮಾನವತೆಯ ಉದ್ಧಾರ: ಹರಿಜನರವಳಿಗೆ ಇವುಗಳಬಗ್ಗೆ ಮನನೀಯಭಾಷಣಮಾಡಿದರು. ಶ್ರೀ ಪಾಟೀಲ ಚಂದ್ರಶೇಖರಗೌಡರ ಉಭಾರವನ್ನೆಣೆಯೂಡನೆ, ಶ್ರೀಮತಿ ಮೂಗಳ ಸೋಮವ್ವ ಇವರು ತಮ್ಮ ಭಜನಾಮಂದಿರವನ್ನು ಶಾಲೆಗೆ ಉಚಿತವಾಗಿ ಉದಾರ ಬುದ್ಧಿಯಿಂದ ಕೊಟ್ಟಿದ್ದಕ್ಕೆ ಇವರಿಗೆ ಹೃತ್ಪೂರ್ವಕ ಅಭಿವಂದನೆಗಳನ್ನು ಅರ್ಪಿಸುತ್ತ ಸಭೆಯ ಕಾರ್ಯಕ್ರಮ ಕೊನೆಗೊಂಡಿತು. ಎಸ್. ಎಂ. ನ್ಯಾಯಾಧೀಶಜಯ್ಯನವರು ನೂತನ ಶಾಲೆಗೆ ಅಧ್ಯಾಪಕರಾಗಿ ನೇಮಕಹೊಂದಿದ್ದಾರೆ!

ಕೋರಿಯಾ

ಪೂರ್ವಕರಾವಳಿಯಲ್ಲಿ ಕಮ್ಯೂನಿಸ್ಟರು ಮುನ್ನುಗ್ಗುತ್ತಿರುವರು ಟೇಗುನಗರವನ್ನಾಕ್ರಮಿಸಲು ಕಮ್ಯೂನಿಷ್ಟ ಸೈನ್ಯಗಳು ನಾಲ್ಕುಕಡೆಯಿಂದ ಮುತ್ತಿಗೆ ಹಾಕಿವೆ. 5 ಮೈಲಿಗಳ ದೂರದಲ್ಲಿದ್ದಾರೆ

—74 ಕಮ್ಯೂನಿಸ್ಟರ ಆಹುತಿ—

ಆಂಧ್ರದ ಜಿಲ್ಲೆಗಳಲ್ಲಿ ಮಲಬಾರ ಸ್ಪೆಶಲ್ ಪೋಲೀಸರು ಇಲ್ಲಿಯವರೆಗೆ 74 ಕಮ್ಯೂನಿಸ್ಟರನ್ನು ಗಂಡಿಕ್ಕಿಕೊಂದಿರುವದಾಗಿ ಮದ್ರಾಸ್ ಶಾಸನ ಸಭೆಯಲ್ಲಿ ಕಾನೂನು ಮಂತ್ರಿ ಮಾಧವಮೆನನ್‌ರು ಹೇಳಿದರು

— ನಾಸಿಕ ಕಾಂಗ್ರೆಸ್ —

ಈ ಕಾಂಗ್ರೆಸ್ ಅಧಿವೇಶನದ ಈ ತಿಂಗಳ 31ನೆಯು ವಾರದಲ್ಲಿ ಕೂಡುವುದಿದ್ದು ಹುಬ್ಬಳ್ಳಿ ಧಾರವಾಡ ಬೆಳಗಾಂದಿಂದ ಬೋಟಾರ್‌ಗಾಡಿಗಳ ವ್ಯವಸ್ಥೆಯನ್ನು ಏರ್ಪಡಿಸಿರುವರು

ದೇವಸ್ಥಾನಗಳಮುಂದೆ
..... ಪ್ರಾಣಿಹತ್ಯೆಯ ಪ್ರತಿಬಂದ —

ಮದ್ರಾಸ್ ಸ್ಟಾಂತದ ಹಿಂದೂ ದೇವಾಲಯಗಳ ಮುಂಕೆ ಪ್ರಾಣಿ ಮತ್ತು ಪಕ್ಷಿಗಳ ಬಲಿಯನ್ನು ನಿಲ್ಲಿಸ ಬೇಕೆನ್ನುವ ಕಾಯ್ದೆಯ ಸೂಚನೆಯು ಮದ್ರಾಸ್ ಶಾಸನ ಸಭೆಯಲ್ಲಿ ಸ್ವೀಕೃತವಾಗಿದೆ. ಇದನ್ನು ಉಲ್ಲಂಘಿಸುವವರಿಗೆ 300 ರೂ. ದಂಡವಾಗುತ್ತೆ. ಪೂಜಾರಿಗೆ 3 ತಿಂಗಳ ಶಿಕ್ಷೆಯು ವಿಧಿಸಲಾಗುತ್ತೆ

ರಾಯಲಸೀಮ ಬ್ಯಾಂಕು ಅಪರಾಧಿಗಳ ವಿಚಾರಣೆ

ರಾಯಲಸೀಮ ಬ್ಯಾಂಕು ಕೊಟ್ಟೂರು ತಾಲೆಯಲ್ಲಿ ಅಪಕ್ಯಾತವಾದ ಹಣದ ವಿಷಯಕ್ಕೆ ಮದ್ರಾಸ್ ಸರ್ಕಾರದವರು ಪ್ರತ್ಯೇಕ ನ್ಯಾಯಾಧೀಶರನ್ನು ಮತ್ತು ಪ್ರಾಸಿಕ್ಯೂಟರನ್ನು ನಿಯಮಿಸಿರುವರು. ಅಪರಾಧಿಗಳ ವಿಚಾರಣೆಗೆ ಆರಂಭವಾಗಿದೆ.

ಕೋರಿಯದ ಬಾಂಬು ದಾಳಿಯಿಂದ ಭಾರತಕ್ಕೆ ಕಳವಳ

ಅಮೆರಿಕೆಯು ಕೋರಿಯಾದ ಮೇಲೆ ನಡೆಸಿರುವ ಬಾಂಬು ದಾಳಿಯಿಂದ ಭಾರತದ ಮುಖ್ಯ ಮಂತ್ರಿಗಳಾದ ಪಂಡಿತ ಜವಹರಲಾಲರು ಚಿಂತಾಗ್ರಸ್ತರಾಗಿಹುವರು ಕೋರಿಯಾದಮೇಲೆ ಅಮೆರಿಕೆಯು ನಡೆಸಿದ ಅತ್ಯಾಚಾರದಿಂದ ಭಾರತೀಯರು ಕ್ಷುಬ್ಧರಾಗಿದ್ದಾರೆ — ಎಂದು ಭಾರತದ ಯುಕ್ತರಾಷ್ಟ್ರ ಪ್ರತಿನಿಧಿ ಟಿನಗಲ್ ನರಸಿಂಗರಾಯರು ರಷ್ಯದ ತೀರ್ಮಾನವನ್ನು ಕುರಿತು ಮಾತಾಡುತ್ತಾ ಹೇಳಿದರು

ಬೊಂಬಾಯಿಯ ಜವಳಿಸಂಸ್ಥೆಯಬಗ್ಗೆ ಮತ್ತೆ ಗುಂಡಿನ ಪ್ರಯೋಗವಾಗಿ 3—4 ಜನರ ಗಾಯವಾಗಿದೆ.

— ಕುರುಗೋಡು —

ಇಲ್ಲಿಯ ನೆಯ್ಯಾರ ಸಂಘದ ಪರವಾಗಿ ಶ್ರೀ ಗುಪ್ಪ ಮತ್ತು ಎಜಮಾನ್ ಇವರು ಕಲೆಕ್ಟರವರನ್ನು ಕಂಡು ಬಡ ನೆಯ್ಯಾರರಿಗೆ ನೂಲು ಪೂರೈಸಲು ಕೇಳಿಕೊಂಡರು. ಕಲೆಕ್ಟರರು ಸಹಾಯ ನೀಡುವ ಆಶ್ವಾಸನವಿತ್ತರು.

—ಜ ಸ ಮ ತಾ ವಾ ದ ಟ್ಟ—

ಉಧ್ಭವಕ್ಕೆ ಕಾರಣವಾಗಿ 'ಜಹಗೀರು' (ಅಸ್ತಿ)ಗಳ ಸ್ಥಾಪನೆಯನ್ನು ತೆಗೆದು ಕೊಳ್ಳೋಣ. ' ಟಾಡ್ಸ್ಸ್ಪರಿಚ್ಯುವಲ್, ಲಾಡ್ಸ್ಸ್ ಟೆಂಪರಲ್ ಮತ್ತು ಕಾಮನ್ಸ್ಸ್ ಎಂಬ ಮೂರು ವಿಭಾಗಗಳು (ಆಸ್ತಿಯವಿಸ್ತಾರಕ್ಕೆ ಅನುಗುಣವಾಗಿ) ಇಂಗ್ಲೆಂಡಿನಲ್ಲಿದ್ದುವು. ಅರಂಭದ ಪಾರ್ಲಿಮೆಂಟುಗಳಲ್ಲಿ ಪ್ರತಿ 'ಜಹಗೀರಿ'ಗೂ ಪ್ರತ್ಯೇಕ ಪ್ರತಿನಿಧ್ಯವಿರುತ್ತಿತ್ತು. ಈ ವಿಭಜನೆಯ ಒಂದು ಕೂಪನನ್ನು ಶ್ರೀಮಂತರ ಸಭೆ ಮತ್ತು ಸಾಮಾನ್ಯರ ಸಭೆಗಳಲ್ಲಿ [ಹೌಸ್ ಆಫ್ ಲಾರ್ಡ್ಸ್ ಮತ್ತು ಹೌಸ್ ಆಫ್ ಕಾಮನ್ಸ್] ಈಗಲೂ ಕಾಣಬಹುದಾದರೂ ಕೂಡ, ಪಾಳೆಯಗಾರತನಕ್ಕೆ ಯಾವ ಪ್ರಾಧಾನ್ಯವೂ ಇಲ್ಲ. ಅದು ಅಳಿದುಹೋಗಿದೆ. ಭಂಡವಳಗಾರರು ಮತ್ತು ಕೂಲಿಕಾರರು ಎಂದು ಸಮಾಜದ ಹೊಸ ವಿಭಜನೆಯಾಗಿದೆ. ಫ್ರಾನ್ಸಿನಲ್ಲಿ ಹಿಂದಿನ 'ಜಹಗೀರು'ಗಳ ಒಂದೇಒಂದು ಕುರುಹೂ ಇಲ್ಲ. ಬಿಳಿಯರ ಅಮೆರಿಕಾದಲ್ಲಿ ಅಂತಹ ಜಹಗೀರುಗಳ ವಿಚಾರ ಕೇಳಿದವರೇ ಇಲ್ಲ: ಸಂಯುಕ್ತ ರಾಷ್ಟ್ರಗಳು ಬೆಳೆಯತೊಡಗಿದ ಹೊತ್ತಿಗೆ ಪಾಳೆಯಗಾರತನ ತನ್ನ ಕೊನೆಯುಸಿರನ್ನು ಸವಿಸಿತ್ತು.

ಅಂತಹ ವಿಚಾರ ಸ್ಥಾಪನೆಗಳು ಹೇಗೆ ಹುಟ್ಟಿಕೊಂಡುವು? ಯಾವ ಕಾರಣದಿಂದ ಅವುಗಳ ಅವಸಾನವಾಯಿತು? ಮನುಷ್ಯರ ಪ್ರತ್ಯಕ್ಷಕ್ಕೆ ಎಚ್ಚರಿಯಿಂದಲೇ ಯಾವಾಗಲೂ ಅಂತಹ ವಿಚಾರ-ಸ್ಥಾಪನೆಗಳು ಹುಟ್ಟಿಕೊಂಡಾವು ಎಂದು ಮಾರ್ಕ್ಸ್ ತೋರಿಸಿಕೊಟ್ಟ. ಅಹಾರ ಒಟ್ಟಿಗೆ ವಸತಿ ಇಂತಹ ಜೀವನಾವಶ್ಯಕ ಸಾಮಗ್ರಿಗಳ ಉತ್ಪಾದನೆಯೇ ನೊದಲ ವಿಷಯ ಫ್ರಾಂತನದ ಪಂಗಡಗಳಿರಲಿ, ಗುಲಾಮ ಸಮಾಜವಿರಲಿ, ಪಾಳೆಯಗಾರ ಸಮಾಜವಿರಲಿ, ಆಧುನಿಕ ಭಂಡವಳಗಾರು ಸಮಾಜವಿರಲಿ. ಪ್ರತಿಯೊಂದು ಚಾರಿತ್ರಿಕ ಸಾಮಾಜಿಕ ವಿಭಾಗದಲ್ಲಿಯೂ ಅದರ ವ್ಯಕ್ತಿಗಳಿಗಿನ ಸಂಬಂಧ ಉತ್ಪಾದನೆಯ ರೂಪವನ್ನು ಕೊಂಡಿಕೊಂಡಿತ್ತು. ಸ್ಥಾಪನೆಗಳನ್ನು ನೋಡಲೇ ಯಾರೂ ಯೋಚಿಸಿ ಏರ್ಪಡಿಸಲಿಲ್ಲ. ಪ್ರತಿಯೊಂದು ವಿಭಾಗದ ಪದ್ಧತಿಗಸುಗುಣವಾಗಿ ಅವು ಹುಟ್ಟಿಕೊಂಡುವು. 'ಸ್ಥಾಪನೆಗಳು, ಶಾಸನಗಳು,' ನೈತಿಕ ಧರ್ಮ ಮುಂತ್ತಿತರ ವಿಚಾರಗಳು ರೂಢಿ-ಪದ್ಧತಿಗಳಿಂದಲೇ ರೂಪಗೊಂಡುವು. ಈ ರೂಢಿ-ಪದ್ಧತಿಗಳಿಗಿಂತಲೂ ಉತ್ಪಾದನೆಯ ವಿಧಾನದೊಡನೆ ನಿಕಟ ಸಂಬಂಧವಿತ್ತು.

ಪಾಳೆಯಗಾರತನದಿಂದ ಭಂಡವಳಶಾಹಿಗೆ ಒಂದು ರೀತಿಯಲ್ಲೇ ಉತ್ಪಾದನ ವಿಧಾನ ಒದಲಾದಾಗ ಸ್ಥಾಪನೆಗಳೂ ವಿಚಾರಗಳೂ ಒದಲಾಯಿಸಿದುವು ಎಂಬುದು ಸ್ಪಷ್ಟವಾಯಿತು ಒಂದು ಕಾಲದಲ್ಲಿ ನೈತಿಕವಾಗಿದ್ದುದು ಮತ್ತೆ ಅನೈತಿಕವಾಗುತ್ತದೆ. ಅನೈತಿಕವಾಗಿದ್ದುದು ನೈತಿಕವಾಯಿತು. ಉತ್ಪಾದನ ವಿಧಾನವನ್ನಿನ ಒದಲಾವಣೆಯಂತಹ ವಿಶೇಷ ಒದಲಾವಣೆಯ ಕಾಲದಲ್ಲಿ ಸ್ವಾಭಾವಿಕವಾಗಿಯೇ ವಿಚಾರ ಘರ್ಷಣೆಯಾಯಿತು. ಆಗಿನ ಸ್ಥಾಪನೆಗಳ ವಿರುದ್ಧ ಬಂಡಾಯವಾಯಿತು.

ಭಂಡವಳಶಾಹಿ ಉತ್ಪಾದನೆ ಬೆಳೆದಂತೆ ಪಾಳೆಯಗಾರವರ್ಗದೊಡನೆ ಘರ್ಷಣೆಯಾಯಿತು. ಉತ್ಪಾದನ ವಿಧಾನದಲ್ಲಿ ಭಂಡವಳಶಾಹಿ ಪ್ರಧಾನವಾಯಿತು. ವಿಚಾರ ಘರ್ಷಣೆ ಸ್ಪಷ್ಟವಾಯಿತು. 'ನೈಪಾತ್ಯ ಹಕ್ಕಿಲ್ಲ' ಅದರ ಬದಲು 'ಸ್ವಾತಿಸ್ವಾತಿಲ್ಲದೆ ತಿರುಗೆಯಿಲ್ಲ', ತಮ್ಮಿಷ್ಟದಂತೆ ವ್ಯಾಪಾರ ನಡೆಸಲು ಅಧಿಕಾರವಿರಬೇಕು, ವೈಯಕ್ತಿಕ ಸ್ವಾತಂತ್ರ್ಯವಿರುವ ಸಮಾಜಭಾವನೆ ಸಾಕು, ಕೇಂದ್ರೀಕೃತ ನಿಯಂತ್ರಣ ಸಡಿಲಬೇಕು ತೋರಿಕೆಗೇನೋ ಅಪ್ಪಟ್ಟ ಹಕ್ಕು ಮತ್ತು ಧರ್ಮಿಷ್ಠ ರೀತಿಗಾಗಿ ಸ್ವತಂತ್ರವಾಗಿ ನವರು ನಡೆಸುತ್ತಿದ್ದ ಜೀವನ ಮರಣ ಹೋರಾಟ ವಾಸ್ತವವಾಗಿ ಎದ್ದೇ ಕಾಣುತ್ತಿತ್ತು. ಭಂಡವಳಶಾಹಿ ಕಣ್ಣು ಮುಚ್ಚುತ್ತಲಿದ್ದ ಪಾಳೆಯಗಾರತನದ ವಿರುದ್ಧ ನಡೆಸುತ್ತಿದ್ದ ಸಮರ. 'ವಿಚಾರ' ಘರ್ಷಣೆಯ ಪ್ರಾಧಾನ್ಯ ಎರಡನೆಯದು.

ಈ ಕಾರಣದಿಂದಲೇ ಮಾರ್ಕ್ಸ್ ವಾದಿಗಳು, ಕನಸಿನ ರಾಜ್ಯಗಳಿಗೆ ಒಲೆಯುವ ಲೇಖಕರಂತೆ ಸಮಾಜ ರಚನೆಗೆ ಅಸ್ಪಷ್ಟ 'ತತ್ವ'ಗಳನ್ನು ನಿರ್ಧರಿಸ ಹೊರಡುವುದಿಲ್ಲ. ಮನುಷ್ಯನಲ್ಲಿ ಸುಳಿಯುವ ಅಂತಹ ತತ್ವಗಳು ಒಂದು ನಿರ್ದಿಷ್ಟ ಸ್ಥಳದ, ಕಾಲದ ವಾಸ್ತವಸಮಾಜ ರಚನೆಯನ್ನು ಪ್ರತಿಬಿಂಬಿಸುತ್ತವೆಯೇ ಹೊರತು, ಯಾವಾಗಲೂ ಎಲ್ಲೆಲ್ಲಿಗೆಲ್ಲೂ ಅನ್ವಯಿಸುತ್ತವೆ ಎನ್ನುವ ನಿರೀಕ್ಷೆಯೂ ಕೂಡ-ಉದಾಹರಣೆಗೆ ಮಾನವ ಸಮಾನತೆ-ಸಮಾಜದ ವಿವಿಧ ಘಟ್ಟಗಳಲ್ಲಿ ಒಂದೇ ಅರ್ಥ ಕೊಡುವುದಿಲ್ಲ. ಗ್ರೀಕರ ನಗರರಾಷ್ಟ್ರಗಳಲ್ಲಿ 'ಮಾನವನೆಲೊಳಗಿನ ಸಮಾನ ಹಕ್ಕುಗಳು' ಎಂಬ ತತ್ವ ಗುಲಾಮ ಜನರಿಗೆ ಅನ್ವಯಿಸಲಿಲ್ಲ. ಮಹಾ ಫ್ರೆಂಚು ಕ್ರಾಂತಿಯ 'ಸ್ವಾತಂತ್ರ್ಯ, ಸಮಾನತೆ, ಸೌಹಾರ್ದ' ತತ್ವವೂ ಹಾಗೆಯೇ ಸ್ವಾತಂತ್ರ್ಯ ಎಂದರೆ ಬಳಕ್ತಿತ್ವ ಭಂಡವಳಶಾಹಿಗೆ ಕಡಿಮೆಯಿಲ್ಲದೆ ವ್ಯಾಪಾರ ನಡೆಸಲು ಸ್ವಾತಂತ್ರ್ಯ, ಸಮಾನತೆಯೆಂದರೆ ಈವರ್ಗ ಮತ್ತು ಪಾಳೆಯಗಾರ ಭೂಪತಿಗಳೊಳಗೆ ಸಮಾನತೆ, ಸೌಹಾರ್ದವೆಂದರೆ ಜಮೀನುದಾರಿ ವರ್ಗದ ನಿರ್ಬಂಧಗಳಿಗಿದಿರಾಗಿ ತಮ್ಮ ವರ್ಗದವರೊಳಗೇ ಸೌಹಾರ್ದ. ಪ್ರೆಂಚ್ ವಸಾಹತುಗಳಲ್ಲಿದ್ದ ಗುಲಾಮರಿಗೆ ನೂತ್ರವಲ್ಲ ಫ್ರೆಂಚುಜನ ಕೋಟಿಯಲ್ಲೇ ದರಿದ್ರವರ್ಗಕ್ಕೂ ಯಾ ಶೋಷಣೆ ಅನ್ವಯಿಸಲಿಲ್ಲ.

ಆದುದರಿಂದ ನಾವು ಇಷ್ಟನ್ನು ಹೇಳಬಹುದು. ಹೆಚ್ಚಾಗಿ ವಿಚಾರಗಳು, ಅದರಲ್ಲೂ ಸಮಾಜದ ರಚನೆಗೆ ಸಂಬಂಧಿಸಿದವು, 'ವರ್ಗ' ವಿಚಾರಗಳು, ಪ್ರಚಾರ ಯಂತ್ರವನ್ನುಪಯೋಗಪಡಿಸಿ, ವಿದ್ಯಾಭ್ಯಾಸವನ್ನು ನಿಯಂತ್ರಿಸಿ, ತಮ್ಮ ನ್ಯಾಯಾಸ್ಥಾನದಮೂಲಕ, ಉದ್ಯೋಗದಿಂದ ಹೊರಹಾಕುವುದರ ಮೂಲಕ, ವಿರುದ್ಧಾಭಿಪ್ರಾಯವುಳ್ಳವರನ್ನು ಶಿಕ್ಷಿಸಿ, ಸಮಾಜದಲ್ಲಿನ ಹಿರಿಯವರ್ಗ ತನ್ನ ವರ್ಗ

ವಿಚಾರವನ್ನು ಉಳಿದವರ ಮೇಲೆ ಹೊರಿಸುವುದು: 'ಇಲ್ಲೊಂದು ವಿಚಾರವಿದೆ, ಇದು ಸತ್ಯವಲ್ಲ ನಿಜ. ಆದರೆ ಅದನ್ನು ನಂಬುವಂತೆ ಅಥವಾ ಅಲ್ಲಗಳೆಯುವಂತೆ ಜನರನ್ನು ಒತ್ತಾಯಿಸೋಣ' ಎಂದು ಆ ಹಿರಿಯವರ್ಗ ಭಾವಿಸುತ್ತದೆ. ಎಂದಲ್ಲ. ಹಿರಿಯವರ್ಗ ಸಾಮಾನ್ಯವಾಗಿ ಅಂತಹ ವಿಚಾರಗಳನ್ನು ನಿರ್ಮಿಸುವುದೇ ಇಲ್ಲ. ಪ್ರತ್ಯಕ್ಷ ಜೀವನದಿಂದಲೇ ಆ ವಿಚಾರಗಳು ಹುಟ್ಟುಹಾಕಲ್ಪಡುತ್ತವೆ. 'ಶ್ರೀಮಂತ'ರಾಗಿ ಗಣಿಸಲ್ಪಟ್ಟಿರುವ ಸಾಳೆಯಗಾರ ಧನಿಕರು ಅಥವಾ ಧನಿಕ ಭಂಡವಳಗಾಸನ ಪ್ರತ್ಯಕ್ಷಶಕ್ತಿಯೇ, ಸಾಮಾನ್ಯ ಮನುಷ್ಯನಿಗಿಂತ ತಾನು ಮೇಲು ಎಂಬ ಭಾವನೆಯನ್ನುಟ್ಟಿಸುತ್ತವೆ. ಒಮ್ಮೆ ಈ ವಿಚಾರ ಹುಟ್ಟಿ ಸ್ಥಾಪಿತವಾದಮೇಲೆ ಪ್ರತಿಯೊಬ್ಬನು ಅದನ್ನು ಒಪ್ಪಿಕೊಳ್ಳಬೇಕೆಂದು ಹಿರಿಯವರ್ಗ ಹೇಳುತ್ತದೆ. ಏಕೆಂದರೆ, ಒಪ್ಪಿಕೊಳ್ಳದೇ ಇದ್ದರೆ ಜನ ಆ ವಿಚಾರಕ್ಕನುಗುಣವಾಗಿ ನಡೆಯಲಾರರು. ಅರಸನ ದೈವದತ್ತ ಶಕ್ತಿಯನ್ನೂ ಪ್ರಶ್ನಿಸುವ ಉದ್ಧಟತನವನ್ನು ಮಾಡಬಹುದು: [ಅವನ ರುಂಡವನ್ನು ಉರುಳಿಸುವುದಕ್ಕೂ ಹೋಗಬಹುದು.] ಆದುದರಿಂದ ಜನಾಸಿನ್ನ ಮಾತ್ರವಲ್ಲ, ಪ್ರತಿಯೊಂದು ರಾಷ್ಟ್ರದ ಹಿರಿಯವರ್ಗವೂ 'ಅಪಾಯಕಾರಿ ವಿಚಾರ'ಗಳು ಹರಡದಂತೆ ಸಾಧ್ಯವಿರುವುದನ್ನೆಲ್ಲ ಮಾಡುತ್ತದೆ.

ವಿಚಾರಗಳಿಗೆ ಪ್ರಾಧಾನ್ಯವಿಲ್ಲವಾದರೆ, ಉತ್ಪಾದನ ವಿಧಾನದಲ್ಲಾಗುವ ವಿಶೇಷ ಬದಲಾವಣೆಯೇ ಮೊದಲ ವಿಷಯವಾದರೆ, 'ಅಪಾಯಕಾರಿ ವಿಚಾರ' ಹುಟ್ಟುವುದಾದರೂ ಹೇಗೆ? ಹೊಸ ಉತ್ಪಾದನ ವಿಧಾನ ಬರುವ ಮೊದಲೇ ಅದರ ಬಗ್ಗೆ ಜನ ಹೇಗೆ ಯೋಚಿಸಬಹುದು? ಎಂಬ ಪ್ರಶ್ನೆಯನ್ನು ಕೇಳುವುದು ಸಾಧ್ಯ.

ಉತ್ತರವಿದು: ಅದರ ಇರುವಿಕೆಗೆ ತಳ್ಳ ಪರಿಸ್ಥಿತಿ ಒದಗುವ ಮೊದಲು ಜನ ಆ ವಿಚಾರವಾಡುವುದಿಲ್ಲ ಆದರೆ ಆ ಪರಿಸ್ಥಿತಿ ಒದಗಿದಾಗ ಹಳೆಯ ಸ್ಥಿತಿಗೂ ಉತ್ಪಾದನೆಯ ಹೊಸ ತಂತ್ರಗಳಿಗೂ ಆಗುವ ತಿಕ್ಕಾಟವನ್ನು ನೋಡಿ, ಜನ ತಾವಾಗಿಯೇ ಅದರಬಗ್ಗೆ ವಿಚಾರಮಾಡುವಂತಾಗ್ಬಹುದು.

ನವಭಾರತಕ್ಕೆ ಚಂದಾದಾರರಾಗಿರಿ

ಹಿಂದೀ ಮಹಾವಿದ್ಯಾಲಯ, ಬಳ್ಳಾರಿ.

[1931 ಸ್ಥಾಪಿತ. ಬಳ್ಳಾರಿ ಜಿಲ್ಲಾ ಹಿಂದೀ ಪ್ರೇಮೀ ಮಂಡಲದಾಶ್ರಯದಲ್ಲಿ. ರಿಜಿಸ್ಟರ್ಡ]

ಮದ್ರಾಸು ಸರಕಾರದಿಂದ ಮಾನ್ಯತೆ ಇದೆ.

ಪ್ರಾಥಮಿಕ ವರ್ಗಗಳಿಗೆ ಮಾಸಿಕ ೫।—ತುಲ — ಉನ್ನತ ವರ್ಗಗಳಿಗೆ ಮಾಸಿಕ ೫।—ತುಲ್ಲು

ಈ ನೋಟೀಸು ಮೂಲಕ ತಿಳಿಯಪಡಿಸುವದೇನೆಂದರೆ ಮದರಾಸು ಲೆಜಿಸ್ಲೇಟಿವ್ ಅಸೆಂಬ್ಲಿ ಮತ್ತು ಭಾರತ ಯೂನಿಯನ್ ಪ್ರತಿನಿಧಿಸಂಸ್ಥೆ (House of the people) ಇವುಗಳಿಗೆ ಸಂಬಂಧಿಸಿದ ಬಳ್ಳಾರಿ ಮುನಿಸಿಪಾಲಿಟಿಯಲ್ಲಿರುವ ಓಟರರ ಪ್ರಥಮನಮೆಟ್ಟಿ (priliminary Elector rolls)ಯು 6—1—51 ನೇ ತೇದಿಯಿಂದ ತಾಲೂಕು ಕಛೇರಿ ಮುನಿಸಿಪಲ್ ಆಫೀಸು ಡಿಸ್ಟ್ರಿಕ್ಟ್ ಬೋರ್ಡ್ ಆಫೀಸು ರಿಜಿಸ್ಟರಿಷೀಸಿನಲ್ಲಿಯೂ ಮತ್ತು ಪ್ರತಿಯೊಂದು ವಾರ್ಡಿನ ಈ ಕೆಳಗೆ ಕಾಣಿಸಿದ ಪಬ್ಲಿಕ್ ಸ್ಥಳಗಳಲ್ಲಿಯೂ ಅಂಟಿಸಿ ಪ್ರಕಟಿಸಲಾಗುತ್ತದೆ.

ತಾಲೂಕು ಕಛೇರಿ,
ಬಳ್ಳಾರಿ

ವಾರ್ಡು ನಂ	ಪ್ರಕಟಿಸುವ ಸ್ಥಳ
1ನೇ	ವಾರ್ಡು ರಾಣಿಛತ್ರ.
2	,, ಗ್ಲಾಸು ಬಜಾರು ಎಲಿಮೆಂಟರಿಶಾಲೆ
3	,, ವಾರ್ಡ್ಲೂ ಪೈಸ್ಕೂಲು
4	,, ಪೋಲೀಸು ಸ್ಟೇಷನ್
5	,, ಮುನಿಸಿಪಲ್ ಪಬ್ಲಿಕ್ ಲೈಬ್ರರಿ
6	,, ಹಿರೇಹಾಳು ಉಳ್ಳುಡ ಮುನಿಸಿಪಲ್ ಮುಳ್ಳುಡನ್ ಎಲಿಮೆಂಟರಿಶಾಲೆ.
7	,, ಹಿರೇಹಾಳು ಉಳ್ಳುಡ ಮುನಿಸಿಪಲ್ ಹಿಂದು ಎಲಿಮೆಂಟರಿಶಾಲೆ
8	,, ಸಂತೆಮಾರ್ಕೆಟ್
9	,, ಮುನಿಸಿಪಲ್ ಕೆ ಬಿ ಜಿ ಎಲಿಮೆಂಟರಿಶಾಲೆ
10	,, ಮರಿಪ್ಪನಿನ ಮಠ
11	,, ಕಾಟ್ನ ಮಾರ್ಕೆಟ್ಟಿಂಗ್ ಆಫೀಸು.
12	,, ಪ್ರೈಮರಿ ಸ್ಕೂಲು.
13	,, ರಂಗನಾಥಮುನಿಸಿಪಲ್ ಎಲಿಮೆಂಟರಿಶಾಲೆ
14	,, ಮುನಿಸಿಪಲ್ ಸ್ಕೂಲು, ನಿಚ್ಚಲರಪೇಟೆ
15	,, ಹಳೇ ಮುನಿಸಿಪಲ್ ಆಫೀಸು
16	,, ಮುನಿಸಿಪಲ್ ಮೆಟರ್ನಿಟಿ ಸೆಂಟರ್
17	,, ಎಸ್ ಎ.ಪೇಟೆ ಎಲಿಮೆಂಟರಿ ಶಾಲೆ
18	,, ಮುನಿಸಿಪಲ್ ಆಯುರ್ವೇದಿಕ್ ಆಸ್ಪತ್ರೆ
19	,, ಮುನಿಸಿಪಲ್ ಅಲೋಪತಿಕ್ ಆಸ್ಪತ್ರೆ
20	,, ಪೋಸ್ಟು ಆಫೀಸು
21	,, ಕೂಲುಬಜಾರು ಮಾರ್ಕೆಟ್
22	,, ಸೆಂಟ್ ಕ್ರಿಸ್ಟನ್ಸ್ ಕಾನ್ವೆಂಟ್ ಸ್ಕೂಲ್
23	,, ಪೋಲೀಸು ಸ್ಟೇಷನ್
24	,, ಡೇರ್ಷ ಡಿಸ್ಪೋ.
25	,, ಮುನಿಸಿಪಲ್ ಆಫೀಸು.

ಕೆ. ಕೃಷ್ಣಮೂರ್ತಿ,
ತಹತೀಲ್ದಾರು, ಬಳ್ಳಾರಿ

ನೋಟೀಸು.

ಮು॥ರಾ॥ ಹೊಸಪೇಟೆ ದಿ॥ ಮುನ್ಸಿಫ್ ಕೋರ್ಟ್‌ನಲ್ಲಿ
ಒ ಎಸ್ 402—49
ಇ ಪಿ 183—50

ವಾದಿ - ಕಕ್ಕಿನಗುಡಿ ತಂಕ್ರಪ್ಪ ತಂದೆ ರಾಚಪ್ಪ 60ವರ್ಷ ವೀರಶೈವ ಮತ ವ್ಯಾಪಾರ ಸಾ॥ ಕಂಪ್ಲಿ ತಾ॥ ಹೊಸಪೇಟೆ

ಪ್ರತಿವಾದಿ—ಜೆ. ಕೆ ವಸಂತಪ್ರಸಾದು ತಂದೆ ಎ. ಕೆ. ಪ್ರಸಾದ್ 36 ವರ್ಷ ಗೌಡ ಬ್ರಾಹ್ಮಣ ಜೀವನಯತಿ ಸಾ॥ ಬುಕ್ಕಸಾಗರ ತಾ॥ ಹೊಸಪೇಟೆ

ಮೇಲಿನ ನಂಬರುಗಳಲ್ಲಿ ಪ್ರತಿವಾದಿಗೆ 021 ಆರ್ 37 ಕಿ.ಪಿ.ಕಿ. ನೋಟೀಸುಗಳನ್ನು ಎನಡುಸಲ ಕಟ್ಟಿದಾಗ್ಯೂ ಜಾರಿಯಾಗಿರುವದಿಲ್ಲ. ಮತ್ತು ಸದರಿ ನೋಟೀಸಿನ ವಾಯಿದೆ 30—12—50 ಕ್ಕೆ ಇರುತ್ತದೆ. ತಕರಾರು ಏನಾದರು ಇದ್ದರೆ ಸದರಿ ದಿವಸದೊಳಗೆ ಖುದ್ದಾಗಿಯಾಗಲಿ ವಕೀಲರಮೂಲಕವಾಗಲಿ ಹಾಜರಾಗಿ ತಿಳಿಯಪಡಿಸಬೇಕು. ಸದರಿ ವಾಯಿದೆಗೆ ಹಾಜರಾಗಲು ತಪ್ಪಿದರೆ ಸದರಿ ತೇದಿಯಲ್ಲಿ ನಾರಂಟಿಗೆ ವುತ್ತರವಾಗುತ್ತದೆ.

ಟಿ. ಎಚ್. ಎಂ. ಸಿದ್ದಯ್ಯ.
ವಕೀಲರು, ಹೊಸಪೇಟೆ

ಕೋಳಿಗಳ ರಕ್ಷಣೆಗೆ ಹಣ

ಕೋಳಿ ಸಾಕಲು ಹಿರಿಯೂರಿನ ರಂಜಾನುಸಾಹೇಬರು 1700-0-0 ರೂ ಅಂದಾಜುಮಾಡಿ ಡೆವಲಪ್‌ಮೆಂಟು ಡಿಪಾರ್ಟುಮೆಂಟಿಗೆ ಅರ್ಜಿ ಇಟ್ಟಿದ್ದರು. ಇದು ಒಪಳಿ ದುಬಾರಿಯೆಂತಲೂ ಸಾಧಾರಣ ಇತರರಿಗೆ ಕೊಟ್ಟು ಸಹಾಯಸೂಡಬೇಡುವೆಂತಲೂ ಅಭಿವ್ಯಾಯಪಡಲಾಯಿತು. ಸಮಿತಿ ಸಭೆಯಲ್ಲಿ ರಂಜಾನುಸಾಹೇಬರಿಗೆ ಶ್ರೀ ಗನಿಯಪ್ಪನವರ ಅಭಿವ್ಯಾಯವನ್ನೂ ಪಡೆಯಲಾಯಿತು

ಎಷ್ಟು ಏಕರೆ ಸಾಗುವಳಿಗೆ ಯೋಗ್ಯವಾಡಿದ್ದಾರೆ

ಬಳ್ಳಾರಿ ವ್ಯವಸಾಯ ಶಾಖೆಯವರ ಬಳಿ 8 ಟ್ರಾಕ್ಟರುಗಳೂ, 1 ಬುಲ್‌ಡೋಸರ್ ಇಕ್ವಿಪ್‌ಮೆಂಟು (ಕಡ್ಡಿ ದಿನ್ನೆ ಸರಿಮಾಡಲು) ಇದ್ದಂತೆ ಗೊತ್ತಾಗಿದೆ. ಕಳೆದ ವರ್ಷ ಈ ಯಂತ್ರಗಳಿಂದ ಎಷ್ಟು ಏಕರೆ ಭೂನಿಯನ್ನು ಸಾಗುವಳಿಗೆ ಯೋಗ್ಯವಾಡಿದ್ದಾರೆ? ಮತ್ತು ಯಾವ ಯಾವ ತಾಲೂಕುಗಳಲ್ಲಿ ಎಷ್ಟು ರೈತರು ಇದರಿಂದ ಲಾಭ ಹೊಂದಿದ್ದಾರೆ? ದಯವಿಟ್ಟು ತಿಳಿಸಬೇಕು. (ಕೆ.ಎಸ್. ಶಿವಪ್ಪ)

ಆಯಿಲು ಇಂಜನುಗಳು ಕಂತಿನಮೇಲೆ

ಮುದ್ರಾಸಿನ ತೆಂಬ್ರಲ್ ಅಗ್ರಿಕಲ್ಚರಲ್ ಎಂಜಿನೀರಿಂಗು ಸ್ಟೋರ್ಸ್ ಸಂಗ್ರಹದಿಂದ 10 ಆಯಿಲು ಎಂಜಿನುಗಳನ್ನು ಕಂತಿನಮೂಲಕ ಕೊಟ್ಟಿರುವದಾಗಿಯೂ 3ಪಟ್ರೋಲು ಪಂಪು ಸೆಟ್ಟುಗಳನ್ನು ತಾವೇ ಮಾರಿರುವದಾಗಿಯೂ ಜಿಲ್ಲಾ ವ್ಯವಸಾಯ ಕಾರ್ಯಾಧಿಕಾರಿಗಳು ಜಿಲ್ಲಾ ಡೆವಲಪ್‌ಮೆಂಟು ಕಮಿಟಿಯಲ್ಲಿ ತಿಳಿಸಲಾಯಿತು. ಇವುಗಳ ಬೆಲೆ ಏನು? ಕಂತಿನಮೇಲೆ ತೆಗೆದುಕೊಂಡರೆ ಎಷ್ಟು ಬೀಳುತ್ತದೆ? ಇದರ ವಿವರಗಳನ್ನೆಲ್ಲಾ ತಿಳಿಸಲು ಕೋರಿಕೆ (ಕೆ.ಎಸ್. ಬಸವನಗೌಡ)

ಕಂಟ್ರೋಲು ಕೊನೆಗೊಳ್ಳಲಿ

ಕ್ಷಳವಳಪಟ್ಟವನೋರ್ವ

—

ಈಗೊಂದಾರೇಳು ವರುಷಗಳಿಂದ ನಮ್ಮ ದೇಶದಲ್ಲಿ 'ಸಿಮೆಂಟ್ ತ್ರಾಣ' ಎಂಬ ಪರಿಸ್ಥಿತಿಯು ನಡೆದು ಕೊಂಡು ಬಂದು ತುಂಬಿಗ ನೂರಾರು ಗುತ್ತಿಕರಿಸಿ ಹಳ್ಳಿಯವರೆಗೂ 'ಕಂಟ್ರೋಲು-ಬ್ಲಾಕ್' (ಬ್ಲ್ಯಾಕ್‌ಮಾರ್ಕೆಟ್) ಎಂಬ ವಾತಾವರಣಗಳು ಕೆಲ್ಲಾ ಮುಕ್ಕಳು ಹುಡುಗರವರೆಗೆ ಬಲ್ಲ ಹೋಗಿಬಿತ್ತಿವೆ ದೇಶದ ಬಹುಜನರು, ಅಜ್ಞರಿಂದಲಿ, ಸಜ್ಞರಿಂದಲಿ, ನಿರಕ್ಷಿಗಳಿಂದಲಿ, ಸಾಕ್ಷಿಗಳಿಂದಲಿ, ಕಾಂಗ್ರೆಸಿಗರಿಂದಲಿ, ಕಾಂಗ್ರೆಸ್ಸಿಗರಲ್ಲದವರಿಂದಲಿ, ಈ ಕಂಟ್ರೋಲು ಎಲ್ಲಿಗಳಲ್ಲಿನೀ ಜೀವನವನ್ನು ಸಹಿಸುತ್ತಾ ತ್ತಿವೆ 1948ರ ಸುಮಾರಿನಿಂದ ಯುದ್ಧಕಾಲಕ್ಕೆಂದು ಬ್ರಿಟಿಶರಿಂದ ಭಾರತದಲ್ಲಿ ಕಾಲಿಟ್ಟ ಈ 'ಕಂಟ್ರೋಲ್' ರಕ್ಕಸನು ಇಂದು ಎಲ್ಲಾವನ್ನೂ ತಪ್ಪಿಸಿಂಬಿದ್ದ 'ಅಕಂಟ್ರೋಲಬಲ' ಆಗಿದ್ದಾನೆ.

ಬ್ರಿಟಿಶರಿದ್ದಾಗ, ಅವರ ಯುದ್ಧಕಾಲಾವಧಿಯ ಸಾಮಗ್ರಿ ಸಂಪಾದನೆಗೆಂದು ಈ ಕಂಟ್ರೋಲು ಜಾರಿತು ಬ್ರಿಟಿಶರು ತೊಲಗಿಸಬಲ್ಲಿ, ಅವರಿನ ಪಾಗೂ ಕರ್ನಾಟಕದಲ್ಲಿ ಈ ಕಂಟ್ರೋಲು ಬೆಳೆಬಿತು, ಈಗ ಯಾತ ಕೊಯ್ದು ಕೊಳ್ಳಿ ಇಸುಗೆಳೆಯಿಸಲು ಬ್ರಿಟಿಶರ ಕಾರಣವನ್ನು ತೋರಿಸುತ್ತಿದೆ.

ನೇಶವಲ್ಲಿ ಆಹಾರದ ಕೊರತೆ ಇದೆ ಅದಕ್ಕಾಗಿಯೇ ಈ ಕಂಟ್ರೋಲು ತೆಗೆಯುವುದು ಅಪಾಯವಾಗಿದೆ ಎಂದು ಘೋಷಣೆಯೂ ಸರ್ಕಾರವೂ ಕೂಡಿಯೇ ಹೇಳುತ್ತಿವೆ ಹಾಗೆಯೇ ಉತ್ಪನ್ನವಿಲ್ಲದ ಆಫ್ರಿಕಾ ಏಷ್ಯಾಖಂಡದಿಂದ ಭಾರತದಲ್ಲಿ ಬಿಟ್ಟನೂ ಸತ್ತಿಲ್ಲವೆಂದು ಭಾರತದ ಆಸ್ಥಾನಮಂತ್ರಿ ಶ್ರೀಚವಾಣ್ ಮುನಶೀ ಅಯ್ಯಂಗಾರ್ ಅವರೂ ಅದೇ ಕಾಲಕ್ಕೇ ಹೇಳುತ್ತಿದ್ದಾರೆ. ಈ ಎರಡು ಭಿನ್ನ ಪ್ರಕಾಲಯ ಮಾತುಗಳಲ್ಲಿಯೇ ಕಂಟ್ರೋಲಿನ ರಹಸ್ಯವಡಗಿದೆಯೆಂದು ಹೇಳಬಹುದು.

ನಮ್ಮ ಭಾರತದ ಪರಿಸ್ಥಿತಿಯನ್ನೇ ತಕ್ಕ ಎಕೂಲಂಕಷವಾಗಿ ವಿಚಾರಣೆಮಾಡಿ ನೋಡಿದರೆ ನಿಜವಾಗಿಯು ಆಹಾರಪದಾರ್ಥಗಳಲ್ಲಿ ಒಬ್ಬರ್ಗೇಲಿನ ಭೂಮಿನಿರಪಸಕ್ಕೂ ಆಧಾರಗೊರತೆಂತೆ ಅಗುವುದು ಇಲ್ಲಿ ಕಾಟ್ರೋಲಿಟೆ, ನಿಜ ದೇವನ್ ಅಂಗಡಿಗಳಲ್ಲಿ ಅಕ್ಕಿ, ಗೋಧಿ, ಗೋವಿ ಸೊದಲಾದವುಗಳನ್ನು ತಾಕವಾಡಿ ಕೊಡ ತ್ತಾರೆ ಆದರೆ ಎಷ್ಟು ಜನರು ಈ ಕೇವಲ ದೇವನ್ ಅಂಗಡಿಗಳಿಂದಲೇ ನೋರೆಕಪ್ಪೇ ಧಾನ್ಯಗಳಿಂದ ಉಜೀವನವನ್ನು ಸಾಗಿಸಿಕೊಂಡಿದ್ದಾರೆ ಎಂಬ ಸಾರಾಸ್ಯವಿಲ್ಲಿಕೊಳ್ಳಕ್ಕೆ ನೋಡಿದಲ್ಲಿ ಒಬ್ಬರೂ ಇಲ್ಲವೆಂದೇ ಸ್ಪಷ್ಟವಾಗಿ ಅಭಿಪ್ರಾಯವನ್ನು ಪಡಬೇಕಾಗುತ್ತದೆ ಕೇವಲ ದೇವನ್‌ಮೇಲೆಯೇ ಹೊಟ್ಟೆ ಸಾಗಿಸುತ್ತಿದ್ದಾನೆ. ಇಪ್ಪೊತ್ತಿಗೆ ದೇಶದ ಕಾಲು ಭಾಗಕ್ಕಿಂತಲೂ ಹೆಚ್ಚಿನಜನರು ಇವರಾಗಬೇಕಾಗಿತ್ತು ಏಕೆಂದರೆ ದೇವನದಲ್ಲಿ ಕೊಡುವ ಧಾನ್ಯವು ಒಂದು ಮಾರನ್ನಿಂದು ಹೇಳಬಹುದಾದಂತಹದು ಅರ್ಧ ಮಾರವೂ ಸಾಲುವಷ್ಟಿರುವದಿಲ್ಲವೆಂದು ಪ್ರತಿಯೊಬ್ಬ ಕಾರ್ಯಕರ್ತರಿಯು ಪ್ರಾಮಾಣಿಕವಾದ ಹಾಗೂ ನಿಕರವಾದ ಸತ್ಯವಾದ ಅನುಭವದ ಮಾತಾಗಿರುತ್ತದೆ ಹಾಗಾದರೆ ಉಳಿದ ಅರ್ಧಾಹಾರವ್ಯವಸ್ಥೆ ಕೇಗೆ? ಎಂಬ ಪ್ರಶ್ನೆಯು ಮುಂದೆಬಂದು ನಿಲ್ಲುತ್ತದೆ ಈ ಪ್ರಶ್ನೆಗೆ ಉತ್ತರ, ಕಳ್ಳ ಪೇಟೆ

ಹೀಗೆ ತನ್ನ ಹೊಲದ ಕಾಳಿನ್ನೇ ಅರ್ಧಾಹಾರವನ್ನಾಗಿ ತನ್ನ ಮನೆಯೊಳಗಿನ ಆಹಾರವಸ್ತುವಿನ್ನೇ ಅರ್ಧಾಹಾರವನ್ನಾಗಿ ತಾನು ಕೊಂಡುತಂದ ಆಹಾರ ಧಾನ್ಯವನ್ನೇ ತಕ್ಕೆ ಕದ್ದುಮುಚ್ಚಿ ತಂದು ಕದ್ದುಮುಚ್ಚಿ ತಿನ್ನಬೇಕಾದ ಪರಿಸ್ಥಿತಿ ವಿನಾನವೂ ಇದೆ ವೃತಿನಿನ ಬೆಳೆಗಾರೊಡನೆಯೇ ಈ ಕದ್ದುಮುಚ್ಚಿ ವ್ಯವಹಾರ ಎಂಬ ನಿಷಯವು ಪ್ರತಿಯೊಬ್ಬನಿಗೂ ಮುಂದೆ ಬಂದು ಅವನ ಸ್ವಭಾವವನ್ನೇ ಅವರ ಪ್ರಬಲ ಪರಿಣಾಮವಾಗಿ ಪ್ರತಿಯೊಬ್ಬನ ಅಂತಃಕರಣದ ಆಳದವರೆಗೂ ಈ 'ಕದ್ದುಮುಚ್ಚಿ'ಯು ಬೇರಿಳಿದು ಬಿಟ್ಟಿಗೊಂಡಿದೆ. ಹೀಗಾಗಿ ಪ್ರತಿಪ್ರಜೆಯು ಜೀವನದ ಸರ್ವ ಕ್ಷೇತ್ರದಲ್ಲಿ ಈ 'ಕದ್ದುಮುಚ್ಚಿ'ಯು ತನ್ನ ಬದುಕಿನಲ್ಲಿಯು ಚಾರಿತ್ರ್ಯ ವೈಲಕ್ಷಣ್ಯಗಳಿಗೆ ತಿರಸ್ಕಾರವನ್ನು ತೋರಿದೆ ಒಡಿಯುತ್ತಲಿದೆ

ಎಲ್ಲಿಯವರೆಗೆ ನಿಯಂತ್ರಣವಿರುವುದೋ ಅಲ್ಲಿಯವರೆಗೆ ಜನತೆಯಲ್ಲಿ ತೀಲ ಚಾರಿತ್ರ್ಯಗಳ ಭ್ರಷ್ಟತೆಯು ಅಳಿಯಲಾರದು ಎಂದು ಶ್ರೀಕೆ ಸಿ ಮೆತ್ತೂವಾಲಾ, ಜೆ. ಸಿ. ಕುಮಾರಪ್ಪ ಮತ್ತು ಇನ್ನೂ ಅನೇಕ ಘನೀಣರು ಹೇಳುತ್ತಿರುವಂತೆ ಆಸ್ಥೇ ಏಕೆ 1947ರ ಈ ಇಸವಿಯ ಸುಮಾರಿಗೆ ನಮ್ಮ ರಾಷ್ಟ್ರನಿನ ಜಾತೂಜಿಯವರೂ ಜನತೆ ಯಾವಾಗ ಸತ್ಯರೂ ಚಿಂತೆಯಿಲ್ಲ, ಈ ನಿಯಂತ್ರಣಗಳು ಅಳಿಯಲೇ ಬೇಕೆಂದು ಅಂತಃಕರಣದ ದನಿಯನ್ನು ರಾಷ್ಟ್ರನೆದುರು ಸ್ಪಷ್ಟವಾಗಿ ಮಂಡಿಸಿದ್ದರು.

ಆದರೆ ಏನು ಕಾರಣವೋ? ಯಾವ ಕಾರಣವೋ? 1948 ರಲ್ಲಿ ಕೆಲವು ದಿನಮಾತ್ರ ನಿನಿಯಂತ್ರಣವಾಗಿ ಮತ್ತೆ ನಿಯಂತ್ರಣ ಭೂತವು ಜನತೆಯ ಹೆಗಲೇರಿ ತನ್ನ ಥಕ್ಕಪ್ಪೆ ನರ್ತನವನ್ನು ಪ್ರಾರಂಭಿಸುತ್ತಿದೆ. ಕೊರತೆಯನ್ನು ಸಮಂಜಸಗೊಳಿಸುವುದರ ಸಲುವಾಗಿ ಅಸಂಪೂರ್ಣ ಆದರೆ ಸಮಾನತೆಯುಳ್ಳ ವಿತರಣ ಎಂಬ ಎರಡು ಕಾರಣಗಳು ಈ ನಿಯಂತ್ರಣಕ್ಕೆ ಘನತೆ ಪಂಜೀಕಿನಿ ನೊರೆಕಿತೆಂದು ಹೇಳಲಾಗುತ್ತದೆ. ಇದು ಎಲ್ಲಿಯವರೆಗೂ ಸರಿಯಾಗಿ ಸಮರ್ಪಕವಾಗಿ ಸಜೆಯುತ್ತದೆನ್ನಬೇಕೇ? ಅದೂ ಇಷ್ಟೇ. ಹೀಗಾಗಿ 'ತಾನುಕೊಂಡ ಎರಡನೇಯವರಿಗೂ ಕೊಡಬಿಡ' ಎಂಬಂತೆ ಇಂದಿನ ನಿಯಂತ್ರಣ ನಡೆದಿದೆಯೆಂದರೆ ತಪ್ಪಾಗಲಿಕ್ಕಿಲ್ಲ

ಇಂತಹ ನಿರ್ಬಂಧದ ಕಾರಣವಾಗಿಯೇ ಜನಜೀವನದ ನಿತ್ಯದ

ಒಳಿನಲ್ಲಿ, ಪ್ರತಿಯೊಂದು ಕಣಕಣದಲ್ಲಿಯೂ ಈ 'ಮುಚ್ಚುಮರೆ, ಕದ್ದುಮುಚ್ಚಿ' ಎಂಬ ಭಾವ ಸೇರಿಕೊಂಡು ಜನಜೀವನವನ್ನೆ 'ನಿಸರ್ಗ'ವನ್ನಾಗಿಮಾಡಿದೆ. ಈ ಶ್ರೇಯಸ್ಸೆಲ್ಲವೂ ಸಂಪೂರ್ಣವಾಗಿ 'ನಿಯಂತ್ರಣ' ಅದರಲ್ಲೂ ಅನ್ನ ಅರಿಸಿಗಳ ನಿಯಂತ್ರಣಕ್ಕೇ ಸಲ್ಲತಕ್ಕದ್ದೆಂದರೆ ತಪ್ಪಾಗಲಾರದು

ಯಾವನೊಬ್ಬ ಮನುಷ್ಯನೂ ತನ್ನ ಜೀವನಕ್ಕಾಗಿ ಸುಲಭ ಮಾರ್ಗವನ್ನು ಹುಡುಕಿಕೊಂಡು ಆದಷ್ಟು ಸಲೀಸಾಗಿ ತನ್ನ ಜೀವನವನ್ನು ಸಾಗಿಸಬೇಕೆನ್ನುವನು ಇದು ಮಾನವೀ ಸಹಜಸ್ವಭಾವ ಹೀಗಿದ್ದು, ದೂರಕಾಳು ಕಡಿ ಹೊತ್ತುಕೊಂಡು ಹೋಗಿ ನಿಯಂತ್ರಿತ ಬೆಲೆಗೆ, ಅದೂ ನಾಲ್ಕಾರು ಜನರ ಅಧಿಕಾರದ ಕೆರುಳಿಗೆಕ್ಕೊಳಪಟ್ಟು, ಮಾರಿಕೊಳ್ಳುವುದೆಂತ, ಅವರ ಎದುರು ಪಟ್ಟು ಬೆಳ್ಳಿ.ಇವನಿಗೆ ಕುಳಿತಲ್ಲಿಯೇ ಕೊಬ್ಬೊಯ್ಯಲು ಜನ ಸಿದ್ಧವಿರುವಾಗ ಅವನು ಯಾವ ಮಾರ್ಗವನ್ನವಲಂಬಿಸಬೇಕು ?

ಹೀಗಾಗಿಯೇ ಕಳ್ಳಪೇಟೆಗೆ ಕಳೆ ಏರಿದೆ. ಸರಕಾರಕ್ಕೇ ಅಭಾವ ಭಾವ ವಿೂರಿದೆ. ಅಂತೆಯೇ ವೇತದತುಂಬ ಈ ಗೊಂದಲನೆದ್ದಿದೆ. ಮೊನ್ನೆ ಮೊನ್ನಿನ ಬೆಲ್ಲದ ಉದಾಹರಣೆಯನ್ನೇ ತೆಗೆದುಕೊಂಡರೆ ಈ ಮಾತು ಸ್ಪಷ್ಟವಾಗಿ ತಿಳಿದುಬರುವಂತಿದೆ. ಕಂಟ್ರೋಲಿನಿಂದಲೇ ಕೃತಕ ಕ್ಷಾಮವೆಂದು ಮೈಸೂರಿನ ಧುರೀಣ ರೂಬ್ಬರು ದಪ್ಪಕ್ಷರಗಳಲ್ಲಿ ಹೇಳಿದ್ದಾರೆ.ಎಲ್ಲಿನೋಡಿದಲ್ಲಿ 'ಕುಚ್ಚಿ ಬೆಲ್ಲಿಗಲಾಟ' ಇದೇ ಅನ್ನ ಸಮಸ್ಯೆಗೆ ಮೂಲ ಕಾರಣ

ಸರಕಾರದಿಂದ ಕಳೆದ ಏಪ್ರಿಲು ತಿಂಗಳಲ್ಲಿ ರಚಿತವಾದ ಭಾರ್ಗವ ಸಮಿತಿಯು ತನ್ನ ವರದಿಯನ್ನು ಈಗ ಒಪ್ಪಿಸಿದ್ದು, ಕ್ರಮೇಣ ನಿಯಂತ್ರಣ ಧೋರಣವನ್ನು ಕೈಕೊಳ್ಳಬೇಕೆಂದು ಸರಕಾರಕ್ಕೆ ಸೂಚಿಸಿದೆ.

ಕೇಂಪ್ರ ಪಾರ್ಲಿಮೆಂಟದಲ್ಲಿಯೂ ಈ ನಿಯಂತ್ರಣದ ಮಾತುಕತೆಗಳು ನಡೆದು, ಅನ್ನ ಮಂತ್ರಿಗಳಾದ ಮಾನ್ಯ ಮುನಶಿಯವರು ಗ್ರಾಮಾಂತರಗಳಲ್ಲಿ ಆಹಾರ ಸೀದಾ ಪದ್ಧತಿಯನ್ನು ರದ್ದುಗೊಳಿಸುವ ಕುರಿತು ವಿಚಾರ ನಡೆದಿದೆ' ಎಂದು ಭಾರತ ಪಾರ್ಲಿಮೆಂಟದಲ್ಲಿ ಹೇಳಿದ್ದಾರೆ.

ಇದೇ ತಿಂಗಳ 11-12 ದಿನಾಂಕಗಳಲ್ಲಿ ಮುಂಬಯಿಯಲ್ಲಿ ಎಲ್ಲ ಪ್ರಾಂತಗಳ ಆಹಾರಮಂತ್ರಿಗಳಸಭೆ ಸೇರುವುದಿದ್ದು ಅಲ್ಲಿ ಅನ್ನ ಸಮಸ್ಯೆಯು ಸಾಂಗೋಪಾಂಗವಾಗಿ ಚರ್ಚೆ ಸಲ್ಪಡಲಿದೆ

ಹೊಟ್ಟೆ ಬಟ್ಟೆಗೇ ತಾಪತ್ರಯವನ್ನೊತ್ತಿ, ಕೃತಕ ಕ್ಷಾಮದ ಗಲಾಟೆಯನ್ನೆಬ್ಬಿಸಿ, ಜನತೆಯಲ್ಲಿ, ವ್ಯಾಪಾರಿಗಳಲ್ಲಿ 'ಕದ್ದುಮುಚ್ಚಿ, ಕಳ್ಳಪೇಟೆ' ಎಂಬ ಬಹಿರಂಗ ರಹಸ್ಯಾಗೂ ಚಾರಿತ್ರ್ಯಶೀಲ ಭ್ರಷ್ಟತೆಗೆ ಕಾರಣವಾದ ಈ ಕಂಟ್ರೋಲನ್ನು ಅನಿಯಂತ್ರಿತ ನಿಯಂತ್ರಣವನ್ನು ಆದಷ್ಟು ಬೇಗ ಕೊನೆಗೊಳಿಸುವದು 'ಜೀವನಸಭದ್ರತೆ'ಯ ದೃಷ್ಟಿಯಿಂದ ಒಳ್ಳೆಯದು.

ಹಿಂದೀ ಮಹಾ ವಿದ್ಯಾಲಯ; ಬಳ್ಳಾರಿ.

[931 ಸ್ಥಾಪಿತ. ಬಳ್ಳಾರಿ ಜಿಲ್ಲಾ ಹಿಂದೀ ಪ್ರೇಮಿಗಳ ಮಂಡಲದಾಶ್ರಯದಲ್ಲಿ, ರಜಿಸ್ಟರ್ಡ್]

ಮದ್ರಾಸು ಸರಕಾರದಿಂದ ಮಾನ್ಯತೆ ಇದೆ.

ಪ್ರಾರಂಭಿಕ ವರ್ಗಗಳಿಗೆ ಮಾಸಿಕ 3ಱ—ತುಲ್ಯ —— ಉನ್ನತ ವರ್ಗಗಳಿಗೆ ಮಾಸಿಕ 5ಱ—ತುಲ್ಯ

ವಾರ್ಡಲಾ ಹೈಸ್ಕೂಲು ಕಟ್ಟಡದಲ್ಲಿ ಪ್ರಾತಃಕಾಲ—ಸಾಯಂಕಾಲ ಹಿಂದೀ ಕಾಲೇಜ್‌ದ ವರ್ಗಗಳು ನಡೆಯುತ್ತಿವೆ. ಪ್ರವೇಶಿಕ—ವಿಶಾರದ ವರ್ಗಗಳಲ್ಲದೆ ಜ್ಞಾರಂಭಿಕ ವರ್ಗಗಳಿಗೂ ಪ್ರವೇಶವಿದೆ ವರ್ಗಗಳಿಗೆ ಸಂಬಂಧಿಸಿದ ಪಾಠ್ಯಪುಸ್ತಕಗಳು ವಿದ್ಯಾಲಯದಲ್ಲಿ ದೊರೆಯುತ್ತವೆ. ಒಳ್ಳೆಯ ಪುಸ್ತಕಭಂಡಾರವಿದೆ ಶ್ರೇಷ್ಠ ವಾರಪತ್ರಿಕೆ, ಮಾಸಪತ್ರಿಕೆಗಳು ಲಭ್ಯ ಇತರ ವಿವರಗಳಿಗೆ ಸ್ವಾಂಪಿಟ್ಟು ಬರೆಯಿರಿ.

ಪ್ರಿನ್ಸಿಪಾಲ್.

NAVA BHARAT BELLARY. (Reg. No M 4746)

11—12—50

ನವಭಾರತ ಬಳ್ಳಾರಿ

(Nationalist Weekly)

ಚಂದಾವರ್ತಗಳು. Subscription Rates

ವರ್ಷಕ್ಕೆ 5—0—0	One Year 5—0—0
6 ತಿಂಗಳಿಗೆ 3—0—0	Six months 3—0—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ	Subscription will not be accepted for less than 6 months.

ಶ್ರೀ

Sri.....

.....

.....

ಪರಮಾತ್ಮ ಪ್ರೆಸ್ ಬಳ್ಳಾರಿ.

ನವಭಾರತ

ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ.
ಉತ್ತಿಷ್ಠತ ! ಜಾಗ್ರತ!! ಪ್ರಾಪ್ಯವರಾನ್ನಿ ಭೋಧತ!!!

ವರ್ಷ ೧೩ ಸಂಚಿಕೆ ೪೩	ಸೋಮವಾರ ೧೪ ಡಿಸಂಬರ್ ೧೯೫೦.	ಸಂಪಾದಕ ಮತ್ತು ಪ್ರಕಾಶಕ: ಟಿ. ಬಿ. ಕೇಶವರಾವ್.

ಸರ್ದಾರ್ ಪಟೇಲ್

ಜನನ
31-10-1875

ಮರಣ
15-12-1950

ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪ್ರಮುಖ ಪಾತ್ರ ವಹಿಸಿ ನವೀನ ಭಾರತ ರಚನೆಗೆ ಸಹಾಯಕರಾದ ಸರ್ದಾರ ವಲ್ಲಭಭಾಯಿ ಪಟೇಲರು ಬೊಂಬಾಯಿಯಲ್ಲಿ 15ನೆಯ ತಾ ಪ್ರಾತಃಕಾಲ ಸ್ವರ್ಗವಾಸಿಗಳಾದುದು ಸದ್ಯದ ಕಠಿಣ ಪರಿಸ್ಥಿತಿಯಲ್ಲಿ ಭಾರತದ ದುರ್ಭಾಗ್ಯನೆಂದು ಹೇಳಬೇಕು. ಕಾಂಗ್ರೆಸ್ ಸಂಸ್ಥೆಯ ಶಕ್ತಿಯ ಪ್ರತೀಕವಾಗಿ ಕಾಂಗ್ರೆಸ್ ನ ಉಕ್ಕಿನ ಮನುಷ್ಯನೆಂದೆನಿಸಿಕೊಂಡವರಿವರು. ತಮ್ಮ ಎದುರಾಳಿಗಳನ್ನು ನಿರ್ದಾಕ್ಷಿಣ್ಯವಾಗಿ ನಿಸ್ಸರುಣೆಯಿಂದ ಸದೆಬಡಿದು ರಾಜಕೀಯ ಜೀವನದಲ್ಲಿ ಅವರ ಹೆಸರಿಲ್ಲದಂತೆ ಮಾಡಿದವರಿವರು. ಭಾರತದಲ್ಲಿ ಜಾತೀಯತೆಯು ತಲೆದೋರಿ ಜಿನ್ನಾರವರ ಗುಂಪಿನಿಂದ ಭಾರತದ ರಾಜಕೀಯಕ್ಕೆ ಗಂಡಾಂತರ ಒದಗಿದಾಗ ಅದಕ್ಕೆ ಎದೆಗೊಟ್ಟು ಧೈರ್ಯದಿಂದ ಎದುರಿಸಿ ಕಾಂಗ್ರೆಸ್ ಶಕ್ತಿಯನ್ನು ದೇಶದ ಐಕ್ಯತೆಯನ್ನು ಳಿಸಿದವರಿವರು.

563 ಸಂಸ್ಥಾನಗಳಲ್ಲಿ ಪಾಳೆಯಗಾರರಂತಿದ್ದು ಪ್ರಜೆಗಳ ಹಿತಾಹಿತ ಸಂಬಂಧಗಳನ್ನು ಲೆಕ್ಕಿಸದೆ ಸ್ವೇಚ್ಛೆಯಿಂದಾಳುತ್ತಿದ್ದ ರಾಜರನ್ನು ಕಿತ್ತಿಹಾಕಿ ಆಡಳಿತವನ್ನು ಪ್ರಜೆಗಳ ಪ್ರತಿನಿಧಿಗಳಿಗೆ ಕೊಟ್ಟವರಿವರು. ಈ ಕ್ರಾಂತಿಯು ಒಂದು ತೊಟ್ಟೂ ರಕ್ತವನ್ನು ಸುರಿಸದೆ ಸಾಧ್ಯವಾಯಿತು. ಅವರು ಕಳೆದ 30 ವರ್ಷಗಳಲ್ಲಿ ಸಲ್ಲಿಸಿದ ಸೇವೆಯನ್ನು ಸಂಕ್ಷಿಪ್ತವಾಗಿ ವರ್ಣಿಸುವುದು ಸಾಧ್ಯವೇ ಇಲ್ಲ.

ಅವರ ಆತ್ಮಕ್ಕೆ ಚಿರಶಾಂತಿಯು ದೊರೆಯಲಿ

ಜೀವನ ಪರಿಚಯ

ಶ್ರೀ ವಲ್ಲಭಭಾಯಿ ಪಟೇಲರು 1928 ರಲ್ಲಿ ಬಾರ್ಡೋಲಿಯಲ್ಲಿ ಕರನಿರಾಕರಣೆ ಚಳವಳಿಯನ್ನು ಯಶಸ್ವಿಯಾಗಿ ನಡೆಸಿಕೊಂಡು ಬಂದನ್ನಕ್ಕಾಗಿ ಅವರನ್ನು ಸರದಾರ ಪಟೇಲರೆಂದು ಮಹಾತ್ಮಾ ಗಾಂಧಿಯವರು ಗೌರವಿಸಿದಂದಿನಿಂದ ಭಾರತದ ಸಾರ್ವಜನಿಕ ಜೀವನದಲ್ಲಿ ಸರದಾರ ಪಟೇಲರ ವರ್ಚಸ್ಸು ಕಂಡು ಬರಹತ್ತಿತ್ತು.

ಕಾಂಗ್ರೆಸ್ಸಿನ ಉಕ್ಕಿನ ಮನುಷ್ಯರೆಂದು ಹೆಸರಾಗಿದ್ದ ಶ್ರೀ ವಲ್ಲಭಭಾಯಿ ಪಟೇಲರು ಅವರ ಆಪ್ತ ಸ್ನೇಹಿತರಿಗೆಲ್ಲ ವಲ್ಲಭ ಭಾಯಿ ಎಂದೂ ದೇಶದ ಕೋಟ್ಯನುಧಿ ಜನರಿಗೆಲ್ಲ ಸರದಾರರೆಂದೂ ಸುಪರಿಚಿತರಾಗಿದ್ದರು. ಕಾಂಗ್ರೆಸ್ಸಿಗೆ ಚೈತನ್ಯೋತ್ಸಾಹ ಧುರೀಣತ್ವಕ್ಕಾಗಿ ಇವರನ್ನೇ ಮರೆಹೋಗುತಿದ್ದರು. ಒಳ್ಳೇ ಕಟ್ಟುನಿಟ್ಟಾಗಿ ಶಿಸ್ತನ್ನು ಪಾಲಿಸುವರಾದ ಇವರು ತಮ್ಮ ಗುರಿಯನ್ನು ಮೊದಲು ನಿರ್ಧರಿಸಿಕೊಂಡು ಅದರ ಸಾಧನೆಗಾಗಿ ದೃಢನಿರ್ಧಾರದಿಂದ ಹೋರಾಡುತ್ತಿದ್ದರು. ನಿಃಸ್ಪೃಹಿಯಾದ ಅವರ ಒರಟು ದೇಹದಲ್ಲಿ ಹೂವಿನಂಥ ಮನಸ್ಸು ಇತ್ತು.

ಭಾರತದ ಸ್ವಾತಂತ್ರ್ಯಾಂದೋಳನದ ಪ್ರಕ್ಷುಬ್ಧ ದಿನಗಳಲ್ಲಿ ಇವರು ಮಹಾತ್ಮರ ಬಲಗೈಯಾಗಿದ್ದರು. ಜೈಲಿನಲ್ಲಿ ಹಾಗೂ ಜೇಲಿನ ಹೊರಗೂ ಇವರು ಮಹಾತ್ಮಾ ಗಾಂಧಿಯವರ ಸಹಜರರಾಗಿದ್ದರು. ಸಾರ್ವಜನಿಕ ಜೀವನದ ಪ್ರಾರಂಭದಲ್ಲಿಯೆ ಅವರಲ್ಲಿ ಮುಖಂಡರಾಗುವ ಗುಣಗಳು ಕಂಡು ಬರುತಿದ್ದರೂ ಇವರ ಹಿತಮ್ಮಗುರುಗಳಾದ ಮಹಾತ್ಮರು 1918 ರಲ್ಲಿ ಗುಂಡಿಗಾಹುತಿಯಾಗುವವರೆಗೆ ಅವರ ಪದತಲದಲ್ಲಿ ಕುಳಿತುಕೊಳ್ಳುವದರಲ್ಲಿಯೆ ಸಮಾಧಾನ ಹೊಂದುತ್ತಿದ್ದರು.

ಕಳೆದ ಇಪ್ಪತ್ತು ವರ್ಷಗಳಿಗಿಂತಲೂ ಹೆಚ್ಚುಕಾಲ ಭಾರತದ ರಾಜಕೀಯ ಜೀವನದಲ್ಲಿ ಅತ್ಯಂತ ಮಹತ್ವದ ಪಾತ್ರವಹಿಸಿದ ಕಾಂಗ್ರೆಸ್ಸಿನ ಮುಖ್ಯ ಆಧಾರ ಸ್ತಂಭಗಳಲ್ಲಿ ಇವರೊಬ್ಬರಾಗಿದ್ದರು. 1931 ರಲ್ಲಿ ಕಾಂಗ್ರೆಸ ಪಾರ್ಲಿಮೆಂಟರಿ ಬೋರ್ಡಿನ ಅಧ್ಯಕ್ಷರಾಗಿ ಕಾಂಗ್ರೆಸ್ಸು ಪ್ರಯೋಗಾತ್ಮಕವಾಗಿ ಅಧಿಕಾರ ಗ್ರಹಣ ಮಾಡಿದಾಗ ಪ್ರಾಂತಿಕ ಕಾಂಗ್ರೆಸ ಮಂತ್ರಿಮಂಡಳಗಳ ರಚನೆಯ ವಿಷಯದಲ್ಲಿ ತಾವು ದಕ್ಷ ಆಡಳಿತಗಾರರೆಂಬುದನ್ನು ತೋರಿಸಿಕೊಟ್ಟರು. ಭಾರತಕ್ಕೆ ಸ್ವಾತಂತ್ರ್ಯ ದೊರೆತ ನಂತರ ಇವರು ಭಾರತದ ಉಪಪ್ರಧಾನ ಮಂತ್ರಿಗಳಾಗಿ ಆಡಳಿತಗಾರರೆಂದು ತಮ್ಮ ಕೀರ್ತಿಯ ಶಿಖರವನ್ನು ಮುಟ್ಟಿದರು. ಗೃಹ ಶಾಖೆಯನ್ನು ವಹಿಸಿಕೊಂಡು ಭಾರತದ ಕಳೆದ ಶತಕದ ದಾಸ್ಯದ ಅನಿಷ್ಟ ಕುರುಹುಗಳಾಗಿ ಉಳಿದಿದ್ದ ಆರುನೂರಕ್ಕಿಂತ ಹೆಚ್ಚಿಗಿದ್ದ ಸಂಸ್ಥಾನಗಳ ಸಮಸ್ಯೆಯನ್ನು ದಕ್ಷತೆಯಿಂದ ಬಗೆಹರಿಸಿದರು.

ಭಾರತದ ನಕಾಶದಲ್ಲಿ ವಿರೂಪವಾಗಿ ಕಾಣುತ್ತಿದ್ದ 500 ಕ್ಕಿಂತ ಹೆಚ್ಚಿನ ತುಂಡುಗಳನ್ನು ಎರಡೇ ವರ್ಷಗಳಲ್ಲಿ ಒಂದು ಗೂಡಿಸಿ ಬಾರತಕ್ಕೊಂದು ಸಮಗ್ರ ಸ್ವರೂಪವನ್ನು ತಂದುಕೊಟ್ಟರು.

ಸರದಾರ ವಲ್ಲಭಭಾಯಿಯವರು ಗುಜರಾತದಲ್ಲಿ 1875 ಅಕ್ಟೋಬರ 31 ಕ್ಕೆ ಕರಮಸದ ಎಂಬ ಗ್ರಾಮದಲ್ಲಿ ಜನಿಸಿದರು ನಡಿಯಾದದ ಹಾಯಸ್ಕೂಲಿನಲ್ಲಿ ಶಿಕ್ಷಣ ಪಡೆದು ಡಿಸ್ಟ್ರಿಕ್ಟ್ ಪ್ಲೀಡರ ಪರೀಕ್ಷೆಯನ್ನು ಪಾಸುಮಾಡಿ ಬ್ಯಾರಿಸ್ಟರರಾಗಲೆಂದು ಇಂಗ್ಲಂಡಕ್ಕೆ ತೆರಳಿದರು. ಲಂಡನಿನಲ್ಲಿ ಮಿಡಲ್ ಟೆಂಪಲ್‌ದಲ್ಲಿ ಕಾಯದೆ ಅಭ್ಯಾಸಮಾಡಿ 1913 ರಲ್ಲಿ ಬ್ಯಾರಿಸ್ಟರಾದರು ಅದೇ ವರ್ಷ ಅವರು ಅಹಮ್ಮದಾಬಾದಕ್ಕೆ ಹಿಂತಿರುಗಿ ವಕೀಲಿ ವೃತ್ತಿಯನ್ನು ಪ್ರಾರಂಭಿಸಿದರು

ದೇಶಸೇವಾ ದೀಕ್ಷೆ

ಸಾಬರಮತಿಯಲ್ಲಿ ಆಶ್ರಮವನ್ನು ಸ್ಥಾಪಿಸಿ ಸಾರ್ವಜನಿಕ ಸೇವೆಯನ್ನು ಕೈಕೊಂಡ ಮಹಾತ್ಮಾಗಾಂಧಿಯವರ ವರ್ಚಸ್ಸಿಗೆ ಇವರು 1916 ರಲ್ಲಿ ಒಳಗಾದರು. ಮೊದಲು ಖೇಡ ಸತ್ಯಾಗ್ರಹದಲ್ಲಿ ನಂತರ ನಾಗಪುರ ಧ್ವಜ ಸತ್ಯಾಗ್ರಹದ ಕಾಲದಲ್ಲಿ ಇವರು ಸತ್ಯಾಗ್ರಹಾ ಧುರೀಣರೆಂದು ಪ್ರಸಿದ್ಧಿಗೆ ಬಂದರು 1924 ರಲ್ಲಿ ಅಹಮದಾಬಾದ ನಗರ ಸಭೆಯ ಅಧ್ಯಕ್ಷರಾಗಿ ಇವರು ಆರಿಸಲ್ಪಟ್ಟು ನಾಲ್ಕು ವರ್ಷಕಾಲ ಆ ಅಧಿಕಾರವನ್ನು ವಹಿಸಿಕೊಂಡರು

1928 ರಲ್ಲಿ ಸರದಾರ ಪಟೇಲರು ಅಹಮ್ಮದಾಬಾದದಿಂದ ಬಾರ್ಡೋಲಿಗೆ ಬಂದು ಸ್ವರಾಜ್ಯ ಆಶ್ರಮವನ್ನು ಸ್ಥಾಪಿಸಿದರು ಅದೇವರ್ಷದಲ್ಲಿ ಬಾರ್ಡೋಲಿ ರೈತರಿಂದ ಕರನಿರಾಕರಣೆ ಚಳವಳಿಯನ್ನು ಹೂಡಿಸಿದರು. ಈ ಚಳವಳಿಯನ್ನು ಅತ್ಯಂದ ದಕ್ಷತೆಯಿಂದ ಯಶಸ್ವಿಯಾಗಿಸಿ ತೋರಿಸಿದ್ದರಿಂದ ಗಾಂಧಿಜಿಯವರು ಅವರನ್ನು ಸರದಾರರೆಂದು ಗೌರವಿಸಿದರು

1931 ರಲ್ಲಿ ಕರಾಚಿಯಲ್ಲಿ ಸೇರಿದ್ದ ಅಖಿಲ ಭಾ ಕಾಂಗ್ರೆಸಿನ ಅಧಿವೇಶನದ ಅಧ್ಯಕ್ಷರಾಗಿ ಸರದಾರ ಪಟೇಲರು ಆರಿಸಲ್ಪಟ್ಟರು ಕಾಂಗ್ರೆಸ ಸತ್ಯಾಗ್ರಹದಲ್ಲಿ ಭಾಗವಹಿಸಿ ಇವರು ಕಾರಾಗೃಹವಾಸವನ್ನು ಅನುಭವಿಸಿದರು

1935ರಲ್ಲಿ ಕಾಂಗ್ರೆಸ ಪಾರ್ಲಿಮೆಂಟರಿ ಉಪಸಮಿತಿಯ ಅಧ್ಯಕ್ಷರಾಗಿ, ಇನ್ನು 1937ರಲ್ಲಿ ಭಾರತದ ಹನ್ನೊಂದು ಪ್ರಾಂತಗಳ ಪೈಕಿ ಏಳು ಪ್ರಾಂತಗಳಲ್ಲಿ ರಚಿತವಾದ ಕಾಂಗ್ರೆಸ ಮಂತ್ರಿಮಂಡಳಗಳ ಪಾರ್ಲಿಮೆಂಟರಿ ಚಟುವಟಿಕೆಗಳ ಮೇಲ್ವಿಚಾರಣೆಮಾಡಿದರು

1938 ರಲ್ಲಿ ಸರದಾರ ಪಟೇಲರು ಸುರತ ಜಿಲ್ಲೆಯ ಹರಿಪುರವೆಂಬ ಹಳ್ಳಿಯಲ್ಲಿ ಕಾಂಗ್ರೆಸ ಅಧಿವೇಶನವನ್ನು ಅಚ್ಚುಕಟ್ಟಾಗಿ ನೆರವೇರಿಸಿದರು. ಮುಂದೆ ಕೆಲವು ಕಾಂಗ್ರೆಸ ಅಧಿವೇಶನಗಳಿಗೆ ಇದು ಆದರ್ಶವಾಗಿತ್ತು

ದ್ವಿತೀಯ ಜಾಗತಿಕ ಯುದ್ಧದ ಕಾಲದಲ್ಲಿ ಸರದಾರರು 1940 ಅಕ್ಟೋಬರದಲ್ಲಿ ಒಮ್ಮೆ ಮತ್ತು 1942 ಆಗಸ್ಟದಲ್ಲಿ ಎರಡೆ ಹೀಗೆ ಎರಡು ಸಲ ಸೆರೆಮನೆಯನ್ನು ಕಾಣಬೇಕಾಯಿತು. 1940ರಲ್ಲಿ ಬಂಧಿಸಲ್ಪಟ್ಟಾಗ ಕೆಲವೆ ತಿಂಗಳುಗಳಲ್ಲಿ ದೈಹಿಕ ಅಸ್ವಾಸ್ಥ್ಯದ ಮೂಲಕ ಅವರನ್ನು ಬಿಡುಗಡೆ ಮಾಡಬೇಕಾಯಿತು 1942ರಲ್ಲಿ ಮಾತ್ರ ಇವರನ್ನು ಕಾಂಗ್ರೆಸ ಕಾರ್ಯಕಾರಿ ಸಮಿತಿಯ ಇತರ ಸದಸ್ಯರೊಡನೆ ಅಹಮ್ಮದನಗರ ಕೋಟೆಯಲ್ಲಿ ಮೂರು ವರ್ಷ ಬಂಧನದಲ್ಲಿಡಲಾಯಿತು.

1945 ಜೂನ 15ಕ್ಕೆ ಅಹಮ್ಮದ ನಗರದಿಂದ ತಮ್ಮ ಬಿಡುಗಡೆಯಾದ ನಂತರ ಸರದಾರ ಪಟೇಲರು ಲಾರ್ಡ ವೇವೆಲ್ಲರ ಸಿಮ್ಲಾ ಪರಿಷತ್ತಿನಲ್ಲಿ ನಂತರದ ಬ್ರಿಟಿಶ ಮಂತ್ರಿತ್ರಯದ ವಿಚಾರ ವಿನಿಮಯದ ಕಾಲಕ್ಕೆ ಬಹುಮುಖ್ಯವಾದ ಪಾತ್ರವಹಿಸಿದರು. ಭಾರತದ ನಡುಗಾಲ ಸರಕಾರದಲ್ಲಿಯೆ ಇವರು ಗೃಹಶಾಖೆ ಸುದ್ದಿಶಾಖೆಗಳ

ಮಂತ್ರಿಗಳಾಗಿ ನೇಮಕ ಕೊಂಡಿದರು 1947 ಜುಲೈ 5ನೇ ತಾರೀಖಿಗೆ ಸಂಸ್ಥಾನ ಶಾಖೆಯನ್ನು ವಹಿಸಿಕೊಂಡರು. ಆ ವರ್ಷದ ಆಗಸ್ಟ 15ಕ್ಕೆ ಭಾರತಕ್ಕೆ ಸ್ವಾತಂತ್ರ್ಯ ದೊರೆತನಂತರವೂ ಸಂಸ್ಥಾನ ಶಾಖೆಯು ಇವರ ಕಡೆಗೇ ಉಳಿಯಿತು 1949 ಡಿಸೆಂಬರದಲ್ಲಿ ಇವರ ಮೇಲಿನ ಕೆಲಸದ ಹೊರೆಯನ್ನು ಕಡಿಮೆ ಮಾಡಲು ಸಾಧ್ಯ ಆಕಾಶವಾಣಿ ಶಾಖೆಗೆ ಒಬ್ಬ ಮಂತ್ರಿಯನ್ನು ನೇಮಿಸಲಾಯಿತು.

ಭಾರತಕ್ಕೆ ಸ್ವಾತಂತ್ರ್ಯ ದೊರೆತ ನಂತರ ದೇಶದ ಅಂತರಿಕ ಶಾಂತತೆ ಕಾಯ್ದುಕೊಳ್ಳುವದು ಸಂಸ್ಥಾನಗಳ ವಿಲೀನೀಕರಣ ಮುಂತಾದ ವಿಷಯಗಳಲ್ಲಿ ಅವರು ತೋರಿದ ದಕ್ಷತೆಯನ್ನು ಇಡೀ ಜಗತ್ತೇ ಪ್ರಶಂಸಿಸುತ್ತಿದೆ

ಸರದಾರ ಪಟೇಲರು ಅನೇಕ ವಕ್ಕಲ ತನದ ಕಾಲೇಜ ವಲ್ಲಭವಿದ್ಯಾನಗರ ಅನೇಕ ಗುಜರಾತ ವಿದ್ಯಾಪೀಠ ನವಜೀವನಟ್ರಸ್ಟ, ಕಸ್ತೂರಬಾ ಟ್ರಸ್ಟಗಳಾಗಿ ಲಂಡನ್ನಿನ ಹಾನರ್ಡಸೊಸೈಟಿ ಸದಸ್ಯರಾಗಿದ್ದರು ನಾಗಪುರ, ಬನಾರಸ್ ಅಲಹಾಬಾದ, ವು ಸ್ಮಾನಿಯಾ ಪೂರ್ವ ಪಂಜಾಬ ವಿಶ್ವವಿದ್ಯಾಲಯಗಳು ಇವರಿಗೆ ಡಾಕ್ಟರ್ ಎಂಬ ಗೌರವಪದವಿಯನ್ನು ಅರ್ಪಿಸಿದ್ದವು.

ಮದ್ರಾಸು ಕರ್ನಾಟಕ ಸಂಘ

10-12-50 ನೇ ಭಾನುವಾರ ಸಾಯಂಕಾಲ ಘಂಟೆ 5ಕ್ಕೆ ಸರ್ ಎಂ. ಸಿ. ಟಿ. ಮುತ್ತಯ್ಯ ಚೆಟ್ಟಿಯಾರ್ ಹೈಸ್ಕೂಲ್ ನಲ್ಲಿ ಕರ್ನಾಟಕ ಸಂಘದ ಆಶ್ರಯದಲ್ಲಿ "ಮಹಿಳಾದಿನ" ವನ್ನು ಆಚರಿಸಲಾಯಿತ್ತು. ಶ್ರೀಮತಿ ಕಮಲಾ ಸುಬ್ರಹ್ಮಣ್ಯಂ ಅವರ ಸನ್ಮಾನ್ಯ ಅಧ್ಯಕ್ಷತೆಯಲ್ಲಿ ಶ್ರೀಮತಿ ಬಿ. ಸುಶೀಲಾದೇವಿ ಅವರು "ಸಮಾಜರಚನೆಯಲ್ಲಿ ಮಹಿಳೆಯರ ಸ್ಥಾನ" ಎಂಬ ವಿಷಯವನ್ನು ಕುರಿತು ಗಮನಾರ್ಹ ಭಾಷಣವಿತ್ತರು. ಶ್ರೀ ಪಿ. ಎಸ್. ಹೆಗ್ಡೆ ಇವರ ಪತ್ನಿಯರಾದ ಶ್ರೀಮತಿ ಎನ್. ಜಯಲಕ್ಷ್ಮಿ ಮತ್ತು ಕುಮಾರಿ ಅರುಂದತಿ ಇವರ ಸುಶ್ರಯವಾದ ವೀಣಾವಾದನವು ನಡೆದ ಬಳಿಕ ಶ್ರೀ ಶೇಷಗಿರಿರಾವ್ ವೇದಿ ಇವರ ಶಿಷ್ಯ ಭವಾನಿ ಶಂಕರರಾವ್ ಇವರ ಪುತ್ರಿಯಾ ಆದ ಕುಮಾರಿ ವೃಂದಾನಿರೋಡಿ ಇವಗ ಸುಮಧುರ ಹಿಂದುಸ್ಥಾನಿ ಸಂಗೀತ ಕಛೇರಿಯು ನಡೆಯಿತು ಕಡೆಯದಾಗಿ ಶ್ರೀಮತಿ ಕಮಾಲಾ ಸುಬ್ರಹ್ಮಣ್ಯಾ ಇವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಲಲಿತ ಕಲೆಗಳಕುರಿತು ಸ್ವಾರಸ್ಯಪೂರ್ಣ ವಿಚಾರಗಳನ್ನು ವಿವರಿಸಿದರು

ಆಹಾರ ಧಾನ್ಯಗಳು
ಕಂಟ್ರೋಲ ತೆಗೆಯುವದಿಲ್ಲ.

ಬೊಂಬಾಯಿಯಲ್ಲಿ ಶ್ರಿ ಕೆ. ಯಂ, ಮುನಿಶಿಯವರಧ್ಯಕ್ಷತೆಯಲ್ಲಿ ಕೂಡಿದ ವಿವಿಧ ಮಂತ್ರಿಗಳ ಆಹಾರ ಪರಿಷತ್ತಿನಲ್ಲಿ ಈ ಕೆಳಗೆ ಕಂಡ ತೀರ್ಮಾನಗಳಾದವು-

ನಿಯಂತ್ರಣ ಮತ್ತು ಅದನ್ನು ಜಾರಿಯಲ್ಲಿ ತರುವ ಪದ್ಧತಿಯು ಬಗ್ಗೆ ಉಪ ಸಮಿತಿಯು ಕೈಕೊಂಡ ನಿರ್ಣಯಗಳನ್ನು ಪರಿಷತ್ತು ಅಂಗೀಕರಿಸಿತು ಉಪ ಸಮಿತಿಯ ಸೂಚನೆಗಳಿಂತಿವೆ

ನಿಸರ್ಗ ಕೋಪದಿಂದ ಭಾರತದಲ್ಲಿ ನಾಲ್ಕು ಪ್ರಾಂತಗಳನ್ನು ಬಿಟ್ಟು ಉಳಿದೆಲ್ಲ ಪ್ರಾಂತಗಳಲ್ಲಿ ಆಹಾರ ಪರಿಸ್ಥಿತಿಯು ಗಂಭೀರವಾಗಿದೆ,

1951 ರಲ್ಲಿ 37 ಲಕ್ಷಟನ ಧಾನ್ಯವನ್ನು ಆಯಾತ ಮಾಡಬೇಕು. ಅಂತರಾಷ್ಟ್ರೀಯ ಪರಿಸ್ಥಿತಿಯು ಹದಗೆಟ್ಟಿದ್ದರೂ ಭಾರತದ ಆಹಾರ ಕೊರತೆಯ ಸಮಸ್ಯೆಯನ್ನು ಎದುರಿಸಲು ಸಾಧ್ಯ ಪ್ರಯತ್ನಗಳನ್ನು ಕೈಕೊಳ್ಳಬೇಕು

ಪೂರ್ತಿಪಾಠ.

ಈ ಆಹಾರ ಮಂತ್ರಿಗಳ ಪರಿಷತ್ತು ಒಪ್ಪಿಕೊಂಡಿರುವ ಉಪ ಸಮಿತಿಯ ಆರು ಸೂಚನೆಗಳು ಇಂತಿವೆ

[1] ನೈಸರ್ಗಿಕ ಆಪತ್ತುಗಳಿಂದಾಗಿ ಭಾರತದ ನಾಲ್ಕು ಪ್ರಾಂತಗಳನ್ನು ಬಿಟ್ಟು ಉಳಿದ ಪ್ರಾಂತಗಳಲ್ಲೆಲ್ಲ ಆಹಾರ ಪರಿಸ್ಥಿತಿ ಗಂಭೀರವಾಗಿದೆ ಅಂತರಿಕ ವಿಘ್ನಗಳೆಲ್ಲದೆ ಅಂತರಾಷ್ಟ್ರೀಯ ಪರಿಸ್ಥಿತಿಯೂ ಕಠಿಣವಾಗುತ್ತ ನಡೆದಿರುವದರಿಂದ ಆಹಾರ ಧಾನ್ಯಸಿಗುವದೂ ಅದನ್ನು ತರುವದೂ ಕಠಿಣವಾಗಿಹತ್ತಿದೆ ಜದ್ದರಿಂದ 1951ರಲ್ಲಿ ಗಂಭೀರ ಆಹಾರ ಪರಿಸ್ಥಿತಿಯನ್ನು ಎದುರಿಸಲು ಒಂದೇ ಭಗೆಯ ಘೋರಣವನ್ನೂ ಮಾರ್ಗವನ್ನು ಅನುಸರಿಸುವದೂ ಅನಿವಾರ್ಯವಾಗಿವೆ

[2] ಆಹಾರ ಸ್ವಾವಲಂಬನದ ಪ್ರತಿಜ್ಞೆಯ ಬಗ್ಗೆ ದೇಶದಲ್ಲಿ ಉಂಟಾಗಿರುವ ತಪ್ಪು ತಿಳವಳಿಕೆಯನ್ನು ನಿವಾರಿಸಬೇಕು ಆ ಪ್ರತಿಜ್ಞೆಯ ಪ್ರಕಾರ 1952 ಮಾರ್ಚ 31 ರ ನಂತರ (ಅ) ಸಂಗ್ರಹಿಸುವದಕ್ಕಾಗಿ (ಬ) ರಾಷ್ಟ್ರಹಿತದ ದೃಷ್ಟಿಯಿಂದ ಬೇಕ

— ಬಳ್ಳಾರಿ ಸ್ಮಾಲ್ ಕಾಸಸ್ ಕೋರ್ಟ್‌ನಲ್ಲಿ —
ಎಸ್. ಸಿ. 478/50

ಕೆ. ರಾಮಚಂದ್ರಿ ತಂದೆ ತಿಮ್ಮಾರೆಡ್ಡಿ ವಯಸ್ಸು 34 ಲ್ಯಾಂಡ್ ಲಾರ್ಡ್ ಹಾಲರ್ನ ಆಲೂರು-ತಾಲೂಕು. — ವಾದಿ.

ಕರಿಬಸಪ್ಪ ತಂದೆ ಮಲ್ಲನಗೌಡ ಲಿಂಗಾಯ್ತರು ವಯಸ್ಸು 25 ಜಿರಾಯ್ತಿ ಕರಿಜೇಡು-ಒಳ್ಳಾರಿ ತಾಲ್ಲೂಕು — ಪ್ರತಿವಾದಿ

ವಾದಿಯು ಪ್ರತಿವಾದಿಯ ಮೇಲೆ ರೂ. 165 ರೂ. ವಸೂಲಿಮಾಡಿ ಕೊಳ್ಳಲು ದಾವಾಮಾಡಿದ್ದಾನೆ. ಇದರ ವಿಚಾರಣೆಯು ವಾಜ್ಯೆಯು 30-12-1950 ಕ್ಕೆ ಹಾಕಲಾಗಿದೆ. ಆ ದಿನ ಪ್ರಾತಃಕಾಲ 11 ಗಂಟೆಗೆ ಪ್ರತಿವಾದಿಯು ಖುದ್ದಾಗಲಿ ವಕೀಲರ ಮೂಲಕವಾಗಲಿ ಹಾಜರಾಗಿ ತಮ್ಮ ಆಕ್ಷೇಪಣೆ ತಿಳಿಸಬೇಕು. ಇಲ್ಲವಾದರೆ ಏಕಪಕ್ಷತೀರ್ಪು ಅಥವಾ ಎಕ್ಸಪಾರ್ಟ ಡಿಕ್ರಿಯಾಗುವುದು.

ಕೆ. ರಾಮಲಿಂಗರೆಡ್ಡಿ,
ವಾದಿಯ ಅಡ್ವೊಕೇಟು

226

ಗಳಲ್ಲಿ ಬದಲಾವಣೆ ಮಾಡಬೇಕಾದರೆ (ಕ)ಬರ ಮುಂತಾದ ಕಾರಣಗಳಿಂದ ಬಂದೊದಗುವ ಆಪತ್ಕಾಲದಲ್ಲಿ ಉಂಟಾಗುವ ಕೊಂತೆ ತುಂಬಿಕೊಳ್ಳಲಿಕ್ಕೆ ಮಾತ್ರ ಆಹಾರ ಧಾನ್ಯದ ಆಯಾತ ಮಾಡಲಾಗುವದು. ಬೇರೆ ಯಾವ ಕಾರಣಗಳಿಗಾಗಿ ಈ ಆವಿಧಿಯ ನಂತರ ಆಹಾರ ಧಾನ್ಯದ ಆಯಾತವಿಲ್ಲ.

ಈ ವೇಲ್ಯಾಣಿಸಿದ ಅವಧಿಯ ನಂತರ ಕೊರತೆ ಬೀಳುವ ಪ್ರದೇಶಕ್ಕೆ ಇಡೀ ದೇಶವೇ ಧಾನ್ಯ ಒದಗಿಸಬೇಕು ಎಂದಿವೆ. ಆದರೆ ಬರುವ ವರ್ಷದಲ್ಲಿ ಮಾತ್ರ ಆಹಾರಧಾನ್ಯವನ್ನ ಆಯಾತ ಮಾಡಲು ಈ ಪ್ರತಿಜ್ಞೆ ಅಡ್ಡಿಯಾಗುವದಿಲ್ಲ. 1951 ರಲ್ಲಿ 37 ಲಕ್ಷಟನ್ ಧಾನ್ಯ ಆಯಾತ ಮಾಡಬೇಕೆಂದಿದೆ. ಆದರೆ ಅಂತರ್ರಾಷ್ಟ್ರೀಯ ಪರಿಸ್ಥಿತಿಯಿಂದಾಗಿ ಅನಿರೀಕ್ಷಿತ ತೊಂದರೆಗಳು ಹುಟ್ಟಿಕೊಂಡರೆ ಬಂದ ಪರಿಸ್ಥಿತಿಯನ್ನು ಎದುರಿಸಲು ದೇಶವು ಸಿದ್ಧವಾಗಬೇಕು.

3 ಸಧ್ಯದ ಪರಿಸ್ಥಿತಿಯಲ್ಲಿ ನಿಯಂತ್ರಣ ಅಥವಾ ನಿಯಂತ್ರಣದ ತಾತ್ಪಿಕ ಚರ್ಚೆಯು ಅಪ್ರಸ್ತುತವಾಗುವದೆ. ಆಹಾರ ಧಾನ್ಯದ ವಿಷಯದಲ್ಲಿ ನಿಯಂತ್ರಣವು ಇಂತಶ್ಯದ್ದು ಸಾಧ್ಯವಿದ್ದಷ್ಟು ಗೆ ದಂದ ಮಟ್ಟವನ್ನು ಕಾಯ್ದುಕೊಳತಕ್ಕದು. ಹಂಚಿಕೆ ವ್ಯವಸ್ಥೆಯನ್ನು ಉಚಿತ ಬದಲಾವಣೆಗಳೊಂದಿಗೆ ಇಟ್ಟುಕೊಳ್ಳಬೇಕು ಸಂಯಮ ಕ್ರಮವನ್ನೂ ಕಠೋರವಾಗಬೇಕು.

4] ನಿಯಂತ್ರಣ ಮತ್ತು ಅದನ್ನು ಹೇಗೆ ಜಾರಿಯಲಿ ತರಬೇಕು ಎಂಬ ವಿಷಯವನ್ನು ಪ್ರಾಂತಿಕ ಸರಕಾರಗಳು ಕೇಂದ್ರದೊಡನೆ ಚರ್ಚಿಸಿ ಸಲಹೆ ಪಡೆದು ಬರುವ ವರ್ಷದಲ್ಲಿ ಆಹಾರ ಪರಿಸ್ಥಿತಿಯನ್ನು ಎದುರಿಸಬಲ್ಲಂಥ ವ್ಯವಸ್ಥೆಯನ್ನೂ ಕೈಕೊಳ್ಳತಕ್ಕದ್ದು.

[5] ಅಧಿಕ ಆಹಾರ ಉತ್ಪಾದನೆ ಮತ್ತು ನಿಯಂತ್ರಣ ಇವೆರಡೂ ಒಂದೇ ಯೋಜನೆ ಭಾಗಗಳಾಗಿದ್ದು ಪರಸ್ಪರಾವಲಂಬಿ ಚಟುವಟಿಕೆಗಳಿಗೆ ಬಗೆ ಒಂದೇ ಧೋರಣೆಯನ್ನು ಅನುಸರಿಸುವಂತೆ ನೋಡಿಕೊಳ್ಳಬೇಕು ಮತ್ತು ಬರುವ ಹಿಂಗಾರಿ ಸುಗ್ಗಿಯವರೆಗೆ ಸ್ವಲ್ಪಗತಿಯಲ್ಲಿಯೆ ಬರುವಂತೆ ಬೆಳಗಳನ್ನು ಬೆಳೆದುಕೊಳ್ಳುವ ಪ್ರಯತ್ನ ಮಾಡಬೇಕು.

[6] ಪರಿಸ್ಥಿತಿಯು ಸೂಕ್ಷ್ಮವಾಗಿದ್ದೂ ಹತೋಟಿಯಲ್ಲಿದೆ. ಅವಸ್ಮರ್ಕ ಡಿಮೆ ತೊಂದರೆಯಿಂದ ಈ ಪರಿಸ್ಥಿತಿಯನ್ನು ಎದುರಿಸಲು ಕೇಂದ್ರವೂ ಪ್ರಾಂತಗಳೂ ಸಿದ್ಧತೆ ನಡೆಸಿವೆ ಯಾವ ಸಂದರ್ಭದಲ್ಲಿಯೂ ಜನತೆಯು ಕಳವಳಕ್ಕೀಡಾಗಬಾರದು. ಆದರಿಂದ ಪರಿಸ್ಥಿತಿ ಸುಧಾರಿಸದೆ ಇನ್ನಷ್ಟು ಕೆಡುತ್ತದೆ- ಆದ್ದರಿಂದ ಪರಿಸ್ಥಿತಿಯನ್ನು ಎದುರಿಸಲು ಸರಕಾರವು ಕೈಕೊಂಡ ಕ್ರಮಗಳನ್ನು ಕಾರ್ಯಾಂಮಾಡಬೇಕು. ಜನತೆಯೂ ಪತ್ರಿಕೆಗಳೂ ಜನತೆಯ ನೀತಿಯನ್ನು ಕಾರ್ಯಾಡಿಕೊಳ್ಳಲು ಸಹಕರಿಸಬೇಕಾದ ಕಾಲವಿದಾಗಿದೆ.

ಮುನಿಶಿಯವರ ಭಾಷಣ.

ಎಂಟು ಆಹಾರ ಮಂತ್ರಿಗಳ ಸಮಿತಿಯು ಒಮ್ಮತದಿಂದ ಒಪ್ಪಿಕೊಂಡ ಈ ಸೂಚನೆಗಳನ್ನು ಶ್ರೀ ಮುನಿಶಿಯವರುಪರಿಷತ್ತಿನದುರು ಮಂಡಿಸಿ ದೇಶದ ಆಹಾರ ಪರಿಸ್ಥಿತಿ ಕುರಿತು ಗಂಭೀರವಾದ ಆಲೋಚಿಸಬೇಕಾಗಿದೆ. ಎಂಥ ಪರಿಸ್ಥಿತಿಯನ್ನೂ ಎದುರಿಸಲು ನಾವುಸಿದ್ಧರಾಗಿರಬೇಕೆಂದು ಕೇಳಿಕೊಂಡರು.

ಬರುವ ವರ್ಷದಲ್ಲಿ ಆಹಾರ ಪರಿಸ್ಥಿತಿಯು ಕಠಿಣವಿದೆ ಎಂಬುದನ್ನು ಮುಚ್ಚಿಟ್ಟು ಪ್ರಯೋಜನವಿಲ್ಲ. ಪರಿಸ್ಥಿತಿ ಗಂಡಾಂತರದಾಗಿದ್ದು ನಾವು ಸ್ವಪ್ರಯತ್ನದಿಂದ ಅದನ್ನು ಎದುರಿಸಬೇಕು ಎಂದು ಪದೇ ಪದೇ ಹೇಳುತ್ತ ಕೂಡ್ರುವಲ್ಲಿ ಎನೂ ಅರ್ಥವಿಲ್ಲ. ಈ ಪ್ರಯತ್ನದಲ್ಲಿ ನಮ್ಮಯ ಶಕ್ತಿ ನಮ್ಮ ಸಹಕಾರ ಮತ್ತು ಶಕ್ತಿಯನ್ನೇ ಅವಲಂಬಿಸಿದೆ.

ಸ್ವಪ್ನ ಸುಂದರಿ

ಕಥೆ

ಪ್ರಭು ಮತ್ತು ಅವನ ಸ್ನೇಹಿತ ಅಬ್ಬಿ ಇಬ್ಬರೂ ಕೂಡಿ ಪ್ರವಂಚ ಯಾತ್ರೆಗೆ ಹೊಂಟಿದ್ದಾರೆ. ಒಂದು ದಿನ ಪ್ರಭುವಿನ ಸ್ವಪ್ನದಲ್ಲಿ ಒಬ್ಬಸುಂದರಿಯು ವಶಳಾಗುತ್ತಾಳೆ. ಅವನ ಸ್ನೇಹಿತನು ಇದು ಸ್ವಪ್ನಫಲವೆಂದರೂ ನಂಬದೆ ಸಾಧಿಸಹೊರಟುವನು. ಒಂದುದಿನ ಪರ್ವತ ಪ್ರದೇಶದಲ್ಲಿ ಕೋಯ ಜಾತಿಯ ರಾಣಿಯು ಬೇಟೆಗೆ ಹೊರಟು ಜಂಕೆಯನ್ನು ಹೊಡೆಯಲೆತ್ನಿಸಿದಾಗ ಪ್ರಭುವು ಅದನ್ನು ತಪ್ಪಿಸಿ ಜಿಂಕೆಯನ್ನು ಳಿಸುವನು. ಕೋಯ ರಾಣಿಯು ಪ್ರಭುವನ್ನು ಬಂಧಿಸಿ ಕೋಟಿಯಲ್ಲಿ ಕೈದಿಯಾಗಿಡುವಳು. ಶಿಕ್ಷೆಗೆ ಬದಲಾಗಿ ಅವನನ್ನು ತನ್ನಿಷ್ಟಿಗೆ ಆರ್ಕರ್ಷಿಸಲು ನಾಟ್ಯ ವಿನೋದಗಳನ್ನೆರ್ಪಡಿಸುವಳು. ಪ್ರಭುವು ಆಕೆಯು ಪ್ರೇಮವನ್ನು ತಿರಸ್ಕರಿಸಿದ ಕಾರಣ ಅವನನ್ನು ಗಲ್ಲಿಗೇರಿಸುವುದಾಗಿ ಕೆದರಿಸುವಳು ಈಸಂದರ್ಭದಿಂದ ಕಾವಲುಗಾರರ ಕಣ್ಣಿಗೇಮಣ್ಣು ಹಾಕಿ ಪ್ರಭುವುತ್ತು ಅಬ್ಬಿ ತಪ್ಪಿಸಿಕೊಂಡು ಕೋಗ್ಯವರು. ಇನ್ನೊಂದು ಯಾತ್ರೆಯಲ್ಲಿ ಪ್ರಭುವಿಗೆ ಸ್ವಪ್ನಸುಂದರಿ ಕಾಣಿಸಿಕೊಂಡು ಅವನನ್ನು ಸ್ವರ್ಗಲೋಕಕ್ಕೆ ಕರೆದೊಯ್ದು ಸುಖಿಸುವಳು. ಸ್ವರ್ಗಲೋಕಾಧಿಪತಿಯು ಮಾನವನು ತನ್ನ ಲೋಕದಲ್ಲಿರಬಾರದೆಂದು ವಿಧಿಸುವನು. ಪ್ರೇಮಪಾಶದಿಂದ ಪಾರಾಗದೆ ಸ್ವಪ್ನಸುಂದರಿಯು ಭೂಲೋಕಕ್ಕೆ ಬರುವಳು.

ವಿಠಲರಾಯನೆಂಬ ಒಬ್ಬಮಾಂತ್ರಿಕನು ಪ್ರತಿವರ್ಷ ಒಂದು ಹುಣ್ಣಿಮೆಯ ದಿನ ಒಬ್ಬಕನ್ಯೆಯನ್ನು ವರಿಸುವ ಪದ್ಧತಿಗನುಸಾರ ತನ್ನ ಶಕ್ತಿಯಿಂದ ಸ್ವಪ್ನಸುಂದರಿಯನ್ನು ವರಿಸಿ ಆಕೆಯ ಹಟದ ಕಾರಣ ನಿರ್ಬಂಧಿಸುವನು

ತನ್ನ ಸ್ನೇಹಿತನಾದ ಪ್ರಭುವು ತಪ್ಪಿಸಿಕೊಂಡದ್ದರಿಂದ ಚಿಂತೆಗೊಳಗಾಗಿ ಅಬ್ಬಿಯು ಒಬ್ಬಮುನಿಪತ್ನಿ ಅನುಗ್ರಹದಿಂದ ಸಂಜೀವಿನಿಯನ್ನು ಸಂಪಾದಿಸುವನು.

ಗಾರಡಿಯವನೊಬ್ಬನು ಅಬ್ಬಿಯನ್ನು ಮೋಸಮಾಡಿ ಸಂಜೀವಿನಿ ರಸವನ್ನು ಮಣ್ಣುಪಾಲು ಮಾಡುವನು. ತಾನೊಂದು ಕಡೆ ಪ್ರಭುವು ಭೇತಾಳ ಮಂತ್ರದಸಾಧನದಿಂದ ಸ್ವಪ್ನಸುಂದರಿಯನ್ನು ಹುಡುಕುತ್ತಾ ಮಾಯಕೋಟೆಯಲ್ಲಿ ಸಿಕ್ಕಿಬೀಳುವನು ಯಾವಉಪಾಯದಿಂದಪ್ರಭುವು ಒಳಗೇಬಂದನೆಂಬುದನ್ನು ತಿಳಿಮಾಡಿಕೊಳ್ಳಲು ವಿಠಲರಾಯನೆಷ್ಟು ಪ್ರಯತ್ನಿಸಿದರೂ ಫಲಿತವಾಗಲಿಲ್ಲ.

ಈ ಕಡೆ ಕೋಯ ಜಾತಿಯ ರಾಣಿಯು ಜೋತಿಷ್ಯದ ಮೂಲಕ ಪ್ರಭುವು ಆಪತ್ತಿಯಲ್ಲಿರುವುದನ್ನು ತಿಳಿದು ಪರಿವಾರ ಸಮೇತ ಪುರುಷವೇಷದಲ್ಲಿ ಕೋರಡುವಳು ಮಾಯಕೋಟೆಯಿಂದ ಪ್ರಭುವನ್ನು ಮುಕ್ತಿಮಾಡಿ ಅಲ್ಲಿಯವರೂಡನೇ ಹೋಗಾಡುವಳು. ಅಬ್ಬಿಯು ಮಾಯಕೋಟೆಯ ಬಾಗಿಲಲ್ಲಿದ್ದ ಮಂತ್ರವಾದಿಯನ್ನು ಮೆಚ್ಚಿಸಿ ಒಳಹೊಗುವನು. ಕೊನೆಯಲ್ಲಿ ರಾಯನಿಗೂ ಪ್ರಭುವಿಗೂ ಯುದ್ಧವಾಗುವುದು. ಕೋಯ ರಾಣಿಯು ಪ್ರಭುವಿಗೆ ಸಹಾಯಪಡುವಳು. ಆದರೂ ಆಕೆಯು ಗಾಯದಿಂದುರುವಳು ಇದರಿಂದ ಅನುಗ್ರಹಗೊಂಡು ಪ್ರಭುವು ರಾಯನನ್ನು ಕೊಲ್ಲುವನು. ಆಗ ತಕ್ಷಣನೇ ಮಾಯಾ

Printed at Jai Parmathma Printing Works. Edited & Published by T. B. Keshava Rao.

ಪ್ರಪಂಚವು ನಶಿಸುವುದು. ಸ್ವಪ್ನಸುಂದರಿಯು ಮುಕ್ತಳಾಗಿ ಪ್ರಭುವಿನೆಡೆಗೆ ಬರುವಳು. ಪ್ರಭುವು ಕೋಯರಾಣಿಯನ್ನು ಗುರ್ತಿಸಿಆಕೆಯ ಪರ್ಣತಿಗಾಗಿ ವ್ಯಥೆಪಡುವನು. ಸ್ವಪ್ನಸುಂದರಿಯು ಕೋಯರಾಣಿಯ ನಿಷ್ಕಲ್ಮಷ ಪ್ರೇಮವನ್ನು ಅರಿಯುವಳು. ಕೋಯರಾಣಿಯು ಸಾಯಬೇಕಾದರೆ ಆದಂಪತಿಗಳು ಸುಖವಾಗಿ ಬಾಳಲೆಂದು ಹರಸುವಳು. ಪ್ರಭು ಸ್ವಪ್ನಸುಂದರಿ ಹಿಂದೆ ನಡೆದುದನ್ನು ಮರೆತು ಸುಖವಾಗಿ ಬಾಳುವರು.

ಬಳ್ಳಾರಿಯಲ್ಲಿ

ದು: ಖಸೂಚಕ ಸಭೆ

ಸರ್ದಾರವಲ್ಲಭಭಾಯಿ ಪಟೇಲರ ನಿಧನದ ಸೂಚಕಾರ್ಥವಾಗಿ 15ನೆಯ ತಾ॥ ಅಂಗಡಿಗಳೆಲ್ಲ ಮುಚ್ಚಲಾಗಿದ್ದವು ಸಾಯಂಕಾಲ ಬಿ. ಡಿ. ಎ. ಗ್ರಾವುಂಡದಲ್ಲಿ ಶ್ರಿ ವಿ. ಎಂ. ಗಿರಿಯವರಧ್ಯಕ್ಷತೆಯಲ್ಲಿ ಡಿ. ಯಚ್. ವೆಂಕೋಬರಾವ್ ನಾಗಭೂಷಣಂ, ನರಸಿಂಹಶಾಸ್ತ್ರಿಯವರು ದಿವಂಗತರ ಅನೋಘ ದೇಶಸೇವೆಯನ್ನು ವಿವರಿಸಿ ಗುಣ ಗಾನಮಾಡಿದು:ಖಸೂಚಕ ತೀರ್ಮಾನದ ನಂತರ ಸಭೆಯು ವಿಸರ್ಜನೆಯಾಯಿತು.

17ನೆಯ ತಾ॥ ಸಾಯಂಕಾಲ ಸಾಂಬಮೂರ್ತಿ ಮೈದಾನದಲ್ಲಿ ಶ್ರಿ ಸುಂದರಾಚಾರಿಯವರಧ್ಯಕ್ಷತೆಯಲ್ಲಿ ಬಳ್ಳಾರಿ ನಾಗರೀಕರ ಸಭೆಯು ಸೇರಿ ಶ್ರಿ ಭೀಮಸೇನಾಚಾರಿ, ರಾಜಗೋಪಾಲಶೆಟ್ಟಿ ಟಿ. ಬಿ. ಕೇರನರಾವ್ ವೈ.ಯಸ್. ಹನುಮಂತರಾವ್ ಮತ್ತು ಶಾಂತರುದ್ರಪ್ಪ ನವರು ಭಾಷಣಮಾಡಿ ವಲ್ಲಭಭಾಯಿಯವರಂಥ ಸ್ವಾತಂತ್ರ ಸೂರ್ತಿ ನವೀನಭಾರತದ ರಚನಾಕರ್ತರು ಚಿರಸ್ಮರಣೀಯವಾಗಿರುಳಿಯುವರೆಂದರು.

ಅನುಕೂಲ ವಾತಾವರಣ ವುಂಟ ದ್ರ ಚೀನದ ಕಮ್ಯೂನಿಸ್ಟರು ಕೋರಿಯಾದಿಂದ ತಮ್ಮ ಸೈನ್ಯಗಳನ್ನು ಹಿಂದೆಗೆದು ಕೋಳ್ಳುವುದಾಗಿ ವಾಶಿಂಗ್ಟನ್ನಿಗೆ ಒಂದ ಕಮ್ಯೂನಿಸ್ಟರ ಪ್ರತಿನಿಧಿ ಮುಖಂಡರಾಪ ವೂರವರು ಹೇಳಿದರು.

ನವಭಾರತಕ್ಕೆ
ಚಂದಾದಾರರಾಗಿರಿ.

—ಮಾ॥ ರಾ॥ ಶ್ರೀ ಹೊಸಪೇಟೆ ಡಿ॥ ಮು॥ ಕೋರ್ಟಿನಲ್ಲಿ—

ಕ್ಲೇಯಿಮ್ ನಂ. 122/47
ಇ ಪಿ. 204/50

ಗವರ್ನಮೆಂಟ್ ಕೋ ಆಪರೇಟಿವ್ ಕ್ರೆಡಿಟ್ ಸೊಸೈಟಿ
ಬೈ ಸೆಕ್ರಟೇರಿ
ವೆಂಕಟಸುಬ್ಬಯ್ಯ ಶೆಟ್ಟಿ D. H. .

ವೈದೂರು ಶ್ರೀನಿವಾಸಾಚಾರ್ಯ ಹೊಸಪೇಟೆ J. D.

ವಾದಿಯು ನಿನ್ನಮೇಲೆ ಡಿಕ್ರಿ ಅಮಲುಜಾರಿ ಮಾಡಿ ನಿನ್ನನ್ನು ಶಿವಿಲ್ ಜೈಲಿನಲ್ಲಿ ಏಕೆ ಇಡಬಾರದೆಂತ ಕೇಳಿರುವುದನ್ನು ನಿನಗೆ ತಿಳಿಸಲಾಗಿದೆ. ನಿನಗೇನಾದರೂ ಆಕ್ಷೇಪಣೆ ಇದ್ದಲ್ಲಿ ನೀನು 28-12-50ರ ದಿನ ಪ್ರಾತಃಕಾಲ 11 ಗಂಟೆಗೆ ಖುದ್ದಾಗಿಯಾಗಲಿ ವಕೀಲರ ಮೂಲಕವಾಗಲಿ ಹಾಜರಾಗಿ ತಿಳಿಸಬೇಕು. ಇಲ್ಲವಾದರೆ ಎಕ್ಸಪಾರ್ಟ ಡಿಕ್ರಿ ಯಾ ಏಕಪಕ್ಷ ತೀರ್ಮಾನವಾಗುವುದು.

ಹೆಚ್. ಗೋವಿಂದಾಚಾರ್ಯ
ಅಡ್ವಕೇಟ್

ಹೊಸಪೇಟೆ ಡಿಸ್ಟ್ರಿಕ್ಟ ಮುನ್ಸಿಫ್ ಕೋರ್ಟಿನಲ್ಲಿ
ಒ. ಯಸ್. 337/46. ಏ. ಎ 573/50

ಅರ್ಜಿದಾರರು— ನೀಲನಗೌಡ್ರ ಬಸವನಗೌಡರು
ಮತ್ತು
ಎದುರು— 1 ಪಿಂಜಾರು ರಾಜಾಸಾಬು
2 ಆಗಸರ ಸಂಗನಬಸಪ್ಪ

ಅರ್ಜಿದಾರರ ಎದುರಿರುವರ ಮೇಲೆ ಆದ ಪ್ರಿಲಿಮಿನರಿ ಡಿಕ್ರಿ ಆಯ್ಕೆ ಆಸ್ತಿಗಳು ಯಾಲಮು ಮಾಡಲು ಪೈನಲು ಡಿಕ್ರಿ ಆಗಬೇಕೆಂದು ಅರ್ಜಿದಾರನು ಕೋರಿರುತ್ತಾನೆ. ವಾಯ್ದೆಯು 2-1-1951ಕ್ಕೆ ಇದೆ. ತಕರಾರು ಇದ್ದರೆ ಆ ದಿನ ಎದುರಿದುವರು ಕೋರ್ಟಿಗೆ ಹಾಜರಾಗಬೇಕು. ತಪ್ಪಿದಲ್ಲಿ ಅರ್ಜಿದಾರರ ಪರವಾಗಿ ತೀರ್ಮಾನ ಮಾಡಲಾಗುವುದು.

ಹೊಸಪೇಟೆ
15-12-50
ಎಸ್, ನಾರಾಯಣರಾವ್.
ಅರ್ಜಿದಾರರ ವಕೀಲ

ಬಳ್ಳಾರಿ ಜಿಲ್ಲಾ ಮುನ್ಸೀಫರ ಕೋರ್ಟಿನಲ್ಲಿ
ಒ. ಯಸ್ 244/50

ವಾದಿಗಳು:— 1 ಶೂರಶೆಟ್ಟಿ ಶಿವಪ್ಪ
2 ಕೊಳಗಾನಲ್ಲಿ ಲಿಂಗಪ್ಪ ದಲ್ಲಾಳಿ ಅಂಗಡಿ ಬಳ್ಳಾರಿ.
ಮತ್ತು
ಪ್ರತಿವಾದಿಗಳು:— ಗೋವಿಂದರೆಡ್ಡಿ ತಂದೆ ವೀರನಗೌಡು.
ಲಿಂಗಾಯಿತ –ಜಿರಾಯ್ತಿ –ವಣೆನೂರು
ಬಳ್ಳಾರಿ ತಾಲೂಕು.

ಮೇಲಿನ ನಂಬರಿನಲ್ಲಿ ವಾದಿಗಳು ಪ್ರತಿವಾದಿಯ ಮೇಲೆ ಲೇವಾದೇವಿ ಮಾಡಿದ ಬಾಬತು ಬಾಕೀ ರೂಪಾಯಿಗಳು ರೂ 512-12-0 ಗೆ ದಾವಾದಾಖಲು ಮಾಡಿರುತ್ತಾರೆ. ಸದರಿ ದಾವಾ ಪ್ರತಿವಾದಿಯ ಹಾಜರಿಗಾಗಿ 9-1-1951 ಕ್ಕೆ ವಾಯ್ದೆಹಾಕಲಾಗಿದೆ. ಆ ದಿನ ಪ್ರತಿವಾದಿಯು ಖುದ್ದಾಗಿಯಾಗಲಿ ವಕೀಲರ ದ್ವಾರವಾಗಲಿ ಹಾಜರಾಗಿ ತಕರಾರು ಇಡತಕ್ಕದ್ದು. ಹಾಗೆ ಹಾಜರಾಗದ ಪಕ್ಷದಲ್ಲಿ ಏಕಪಕ್ಷ ವಿಚಾರಣೆಯಾಗಿ ಎಸ್ಪಾರ್ಟ ಡಿಕ್ರಿ ಕೊಡುವದರಲ್ಲಿ ಬರುತ್ತೆಂದು ಈ ಮೂಲಕ ತಿಳಿಸೋಣಾಗಿದೆ.

ಹೆಚ್. ಹೊಂಸನಗೌಡ್
ವಾದಿಯ –ಅಡ್ವೊಕೇಟ್
ಬಳ್ಳಾರಿ.

ಬಳ್ಳಾರಿ

"ಪ್ರಭಾತ್" ದಲ್ಲಿ

— ಪ್ರತಿಭಾ ಇವರ —

ಸ್ವಪ್ನ ಸುಂದರಿ

ಅಂಜಲಿದೇವಿ—ವರಲಕ್ಷ್ಮಿ—ನಾಗೇಶ್ವರರಾವ್
ಶಿವರಾವ್ ವಗೈರೆ ಸುಪ್ರಸಿದ್ಧ ನಟ ನಟರು

—ಶ್ರೀ ಬಲರಾಮಯ್ಯನವರ -ದಿಗ್ದರ್ಶನ—
(ಕಥೆಯನ್ನು ಒಳಪುಟಗಳಲ್ಲಿ ತಪ್ಪದೆ ಓದಿರಿ)

ಹಿಂದೀ ಮಹಾ ವಿದ್ಯಾಲಯ, ಬಳ್ಳಾರಿ.

[1931 ಸ್ಥಾಪಿತ ಬಳ್ಳಾರಿ ಜಿಲ್ಲಾ ಹಿಂದೀ ಪ್ರೇಮೀಮಂಡಲದಾಶ್ರಯದಲ್ಲಿ. ರಿಜಿಸ್ಟರ್ಡ್.]

ಮದ್ರಾಸ್ ಸರ್ಕಾರದಿಂದ ಮಾನ್ಯತೆ ಇದೆ

ಪ್ರಾರಂಭಿಕ ವರ್ಗಗಳಿಗೆ ಮಾಸಿಕ 3/- ಶುಲ್ಕ — ಉನ್ನತ ವರ್ಗಗಳಿಗೆ ಮಾಸಿಕ 5/- ಶುಲ್ಕ

ವಾರ್ಡಲಾ ಹೈಸ್ಕೂಲು ಕಟ್ಟಡದಲ್ಲಿ ಪ್ರಾತಃಕಾಲ-ಸಾಯಂಕಾಲ ಹಿಂದೀ ಕಾಲೇಜ್‌ದ ವರ್ಗಗಳು. ನಡೆಯುತ್ತವೆ. ಪ್ರವೇಶ ಪರೀಕ್ಷೆ — ವಿಶಾರದ ವರ್ಗಗಳಲ್ಲದೆ ಪ್ರಾರಂಭಿಕ ವರ್ಗಗಳಿಗೂ ಪ್ರವೇಶವಿದೆ. ವರ್ಗಗಳಿಗೆ ಸಂಬಂಧಿಸಿದ ಪಾಠ್ಯ ಪುಸ್ತಕಗಳು ವಿದ್ಯಾಲಯದಲ್ಲಿ ದೊರೆಯುತ್ತವೆ. ಒಳ್ಳೆಯ ಪುಸ್ತಕ ಭಂಡಾರವಿದೆ. ಶ್ರೇಷ್ಠ ವಾರಪತ್ರಿಕೆ, ಮಾಸಪತ್ರಿಕೆಗಳ ಸೌಲಭ್ಯ ಇತರ ವಿವರಗಳಿಗೆ ಸ್ವಾಂಪಿಟ್ಟು ಬರೆಯಿರಿ.

ಪ್ರಿನ್ಸಿಪಾಲ್

NAVA BHARAT BELLARY.

ನವಭಾರತ ಬಳ್ಳಾರಿ.

(Nationalist Weekly)

ಚಂದಾದರಗಳು.	Subscription Rates.
ವರ್ಷಕ್ಕೆ 5—0—0	One Year 5—0—0
6 ತಿಂಗಳಿಗೆ 3—0—0	Six months 3—0—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ	Subscription will not be accepted for less than 6 months

(Reg. No. M. 4746)

18-12-50

To

Sri.....

.....

.....

ನವಭಾರತ

ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ.
ಉತ್ತಿಷ್ಠತ! ಜಾಗ್ರತ!! ಪ್ರಾಪ್ಯವರಾನ್ನಿ ಬೋಧತ!!!

ವರ್ಷ ೧೩, ಸಂಚಿಕೆ ೪೬	ಸೋಮವಾರ ೨೫ ಡಿಸಂಬರ್ ೧೯೫೦.	ಸಂಪಾದಕ ಮತ್ತು ಪ್ರಕಾಶಕ: ಟಿ. ಬಿ. ಕೇಶವರಾವು.

ಭಾರತದ ಹೊಸ ಜನಗಣನೆ.

ಶ್ರೀ ಪಾಟೀಲ ಮಲ್ಲನಗೌಡರು

ಒಕ್ಕಲತನ ಹಾಗು ಅರಣ್ಯ ಖಾತೆಯ ಮಂತ್ರಿಗಳು, ಬೊಂಬಾಯಿ.

ನಮ್ಮ ಮುಂದಿನ ಪ್ರಗತಿಯ ದೃಷ್ಟಿಯಿಂದ ಜನಗಣನೆಯು ಎಷ್ಟು ಮಹತ್ವದ್ದಾಗಿ ದೆಂಬ ಮಾತ್ತು ನಿಮಗೆ ಈಗ ಗೊತ್ತಿರಲು ಸಾಕು. ಆದರೆ ಜನರ ಸಹಕಾರವಿಲ್ಲದೆ ಯೋಗ್ಯವಾದ ಜನಗಣನೆ ಆಗಲಾರದು. ಆದ್ದರಿಂದ ಈ ಜನಗಣನೆಯಲ್ಲಿ ತಮಗೆ ಗೊತ್ತಿದ್ದ ಮಟ್ಟಿಗೆ ಸತ್ಯವಾದ ಮಾಹಿತಿಯನ್ನು ಕೊಡುವದು ಪ್ರತಿಯೊಬ್ಬ ನಾಗರಿಕನ ಕರ್ತವ್ಯವಾಗಿದೆ. ಎಣಿಕೆ ಗಾರರು ಕೂಡ ತಮ್ಮ ಹೊಣೆ ಅರಿತು ಕಾರ್ಯವನ್ನು ದಕ್ಷತೆಯಿಂದ ಮಾಡುವದೂ ಅವಶ್ಯವಿದೆ.

ಹತ್ತು ವರ್ಷಕ್ಕೊಮ್ಮೆ ಖಾನೇಶುಮಾರಿ ಅಥವಾ ಜನಗಣನೆ ಮಾಡುವದು ನಿಮಗೆ ಗೊತ್ತಿರಲು ಸಾಕು. ಬರುವ ವರ್ಷದ ಎರಡನೇ ತಿಂಗಳಲ್ಲಿ ಜನಗಣನೆ ಮಾಡುವದನ್ನು ನಿಶ್ಚಯಿಸಲಾಗಿದೆ. ಹಿಂದೆ ಹತ್ತು ವರ್ಷಕ್ಕೊಂದು ಬಾರಿಯಂತೆ ಎಂಟು ಸಲ ಜನಗಣನೆ ಮಾಡಲಾಗಿದೆ. ಆದ್ದರಿಂದ ನಿಮ್ಮಲ್ಲಿ ಕೆಲವರಿಗೆ ಜನಗಣನೆಯ ಪ್ರತ್ಯಕ್ಷ ಅನುಭವ ಇದ್ದಿರಬೇಕು. ಕೆಲವರಂತೂ ಜನಗಣನೆಯ ಕಾರ್ಯದಲ್ಲಿ ಭಾಗ ಕೂಡ ತಹಿಸಿರಬಹುದು.

ಹೊಸ ಜನಗಣನೆಯ ವೈಶಿಷ್ಟ್ಯ

ಪ್ರಪಂಚದಲ್ಲಿ ನಮ್ಮ ಜನಗಣನೆ ಅತಿ ದೊಡ್ಡದು. ಈ ಕಾರ್ಯದಲ್ಲಿ ಲಕ್ಷಾವಧಿ ಗೌರವ ಕಾರ್ಯಕರ್ತರು ನಿನಾವೇತನ ಭಾಗವಹಿಸುತ್ತಾರೆ. ಅಂತೆಯೇ ಇಂಥ ದೊಡ್ಡ ಕಾರ್ಯಕ್ಕೆ 1931 ರಲ್ಲಿ ಕೇವಲ 49 ಲಕ್ಷ ರೂಪಾಯಿ ಖರ್ಚು ತಗಲಿತು. ನಮ್ಮ ದೇಶಕ್ಕಿಂತಲೂ ಅಮೇರಿಕಾ ದೇಶದಲ್ಲಿ ಕಡಿಮೆ ಜನಸಂಖ್ಯೆ ಇದ್ದು, ಅಲ್ಲಿ ಜನಗಣನೆಯ ಮೇಲೆ ಕೋಟಿಗಟ್ಟಿ ರೂಪಾಯಿ ವೆಚ್ಚ ಮಾಡುವರು. ವೆಚ್ಚಕ್ಕೆ ತಕ್ಕಂತೆ ಅಲ್ಲಿ ಜನಗಣನೆಯ ಕಾಲಕ್ಕೆ ನಮ್ಮಲ್ಲಿಗಿಂತಲೂ ಹೆಚ್ಚಿನ ಮಾಹಿತಿಯನ್ನು ಕಲೆ ಹಾಕುವರು. ನಮ್ಮ ದೇಶದಲ್ಲಿ ಸರಿ ೨೦೦ ಲಕ್ಷ ಮನೆಗಳಲ್ಲಿ ವಾಸಿಸುವ ಮಾರು ಇಲ್ಲದವರ ಗಣನೆ ಕೂಡ ಆಗಬೇಕಾಗುತ್ತದೆ. ಹಳ್ಳಿಗಳಲ್ಲಿ ಮನೆಮಾರು ಇಲ್ಲದವರ ಪ್ರಶ್ನೆ ಬರುವದು ಬಹಳ ಕಡಿಮೆ. ಹಳ್ಳಿಗಳಲ್ಲಿ ತೀರ ಬಡವರು ಕೂಡ ಒಂದು ಗುಡಿಸಲು ಕಟ್ಟಿಕೊಂಡು ಇರುತ್ತಾರೆ. ಆದರೆ ಮುಂಬಯಿಯಂಥ ಪಟ್ಟಣಗಳಲ್ಲಿ ಹಾಗು ಇನ್ನು ಳಿದ ನಗರಗಳಲ್ಲಿ ಮನೆಮಾರು ಇಲ್ಲದ ದರಿದ್ರರು ಅನೇಕರಿದ್ದಾರೆ.

ಅಮೂಲ್ಯ ಮಾಹಿತಿ

ಈ ಸಾರೆಯ ಜನಗಣನೆಯು ಅನೇಕ ರೀತಿಯಲ್ಲಿ ವೈಶಿಷ್ಟ್ಯಪೂರ್ಣ ಮತ್ತು ಮಹತ್ವದ್ದಾಗಿದೆ. ನಮ್ಮದೇಶವು ಸ್ವತಂತ್ರವಾದ ನಂತರ ಇದೇ ಮೊದಲನೆಯ ಜನಗಣನೆ. ಭಾರತವು ಇಬ್ಭಾಗವಾದ ನಂತರ ಮೊದಲನೆ ಜನಗಣನೆ ಇದು. ಹಿಂದಿನಂತೆ ಇನ್ನು ಮುಂದೆ ಜನಗಣನೆ ಒಂದು ರಾತ್ರಿಯಲ್ಲಿ ಮುಗಿಸಿಬಿಡುವದಿಲ್ಲ. ಜನಗಣನೆಯನ್ನು ಯೋಗ್ಯ ರೀತಿಯಲ್ಲಿ ಮಾಡುವ ಉದ್ದೇಶದಿಂದ ಜನಗಣನೆ ಪದ್ಧತಿಯಲ್ಲಿ ಕೆಲವು ಬದಲಾವಣೆಗಳನ್ನು ಮಾಡಿದೆ. ಇಲ್ಲಿಯವರೆಗೆ ಜನಗಣನೆಯೆಂದರೆ ಹತ್ತು ವರ್ಷಕ್ಕೊಮ್ಮೆ ಕಣ್ಣು ಕೆರೆದು, ಕಾರ್ಯ ಮುಗಿಸಿ, ಮಧ್ಯಂತರದಲ್ಲಿ ಅದರ ಕುರಿತು ಏನೂ ವಿಚಾರ ವಿಲ್ಲದೇ ಬಿಡುವ ವಿಷಯವಾಗಿತ್ತು. ಇನ್ನು ಮುಂದೆ ಹಾಗಲ್ಲ. ನಮ್ಮ ರಾಷ್ಟ್ರಮಟ್ಟದ ಸಾಮಾಜಿಕ ಮಾಹಿತಿಯ ಆಧಾರದಿಂದ, ಮತದಾರರ ಕ್ಷೇತ್ರಗಳನ್ನು ನಿಶ್ಚಯಿಸಬೇಕೆಂದು ರಾಜ್ಯಘಟನೆಯಲ್ಲಿ ವಿಧಿಸಲಾಗಿದೆ. ಜನಗಣನೆಯು ಕಾರ್ಯಕ್ಕಾಗಿ ಒಂದು ನಿರಂತರ ಕಚೇರಿಯನ್ನು ಈಗಾಗಲೇ ಸ್ಥಾಪಿಸಿದೆ. ಹಿಂದೆ ಜಾತಿಮತಗಳ ಕುರಿತು ಜನಗಣನೆಯಲ್ಲಿ ಹೆಚ್ಚು ಲಕ್ಷ ಕೊಡಲಾಗುತ್ತಿತ್ತು. ಇನ್ನು ಮುಂದೆ ಜನರ ಆರ್ಥಿಕ ಸ್ಥಿತಿಗತಿಯನ್ನು ತಿಳಿದು ಕೊಳ್ಳುವದು ಮುಖ್ಯ ಉದ್ದೇಶಗಳಲ್ಲಿ ಒಂದಾಗುವದು.

ಜನಗಣನೆಯಿಂದ ಅಮೂಲ್ಯ ಮಾಹಿತಿಯನ್ನು ಕೂಡಿಸಲು ಬರುವದು. ಜನಸಂಖ್ಯೆ ವಿಷಯವು ಆರ್ಥಿಕ ಯೋಜನೆಯ ಒಂದು ಮಹತ್ವದ ವಿಭಾಗವಾಗಿದೆ. ಜನಸಂಖ್ಯೆ ಎಷ್ಟು ಬೆಳೆಯುತ್ತಿದೆ ಎಂಬುದು ಗೊತ್ತಿರುವದು ಆವಶ್ಯಕ. ಇಲ್ಲದಿದ್ದರೆ ರಾಷ್ಟ್ರದ ಸರ್ವಾಂಗೀಣ ಉನ್ನತಿಯ ಯೋಜನೆಗಳನ್ನು ಸಮರ್ಪಕವಾಗಿ ತಯಾರಿಸಲು ಹಾಗು ಆಚರಣೆಯಲ್ಲಿ ತರಲು ಸಾಧ್ಯವಾಗುವದಿಲ್ಲ. ಸರಿಯಾದ ಮಾಹಿತಿ ಇಲ್ಲದೆ ತಯಾರಿಸಿದ ಯೋಜನೆಗಳು ಗಾಳಿಗೋಪುರಗಳಾಗುವವು. ಸಮಾಜ ಶಾಸ್ತ್ರದ ಭಾಗವಾಗಿರುವ ಕೌಟುಂಬಿಕ ಜೀವನ ಹಾಗ ಇನ್ನಿತರ ವಿಷಯಗಳ ಕುರಿತು ಮಾಹಿತಿ ಜನಗಣನೆಯಲ್ಲಿ ದೊರೆಯುವದು. ಸುಲ

ಕೊಡುವ ಉತ್ತರಗಳ ಆಧಾರದಿಂದ ತಜ್ಞರಿಗೆ ಅನೇಕ ಸಿದ್ಧಾಂತಗಳನ್ನು ಕಂಡು ಹಿಡಿಯಲು ಬರುವದು. ಉದಾಹರಣೆಗಾಗಿ ಮುಂದಿನ ಹತ್ತು ವರ್ಷಗಳಲ್ಲಿ ಜನ ಸಂಖ್ಯೆ ಎಷ್ಟು ಬೆಳೆಯುವದು ಎಂಬುದನ್ನು ಸಾಧಾರಣವಾಗಿ ಹೇಳಲು ಸಾಧ್ಯವಾಗುವದು.

ಮಹತ್ವದ ಪ್ರಶ್ನೆಗಳು

ಜನಗಣನೆಯ ಕಾಲಕ್ಕೆ ನೀವು ಕೊಡುವ ಮಾಹಿತಿಯನ್ನು ಗುಪ್ತವಾಗಿ ಇಡಲಾಗುತ್ತದೆ. ಆವ ಕಾರಣ ಸತ್ಯನುಡಿಯಲು ಯಾರೂ ಹೆದರುವ ಕಾರಣವಿಲ್ಲ, ನೀವು ಹೇಳುವ ಉತ್ತರಗಳನ್ನು ಪುರಾವೆಯೆಂದು ಕೋರ್ಟು ಕಚೇರಿಗಳಲ್ಲಿ ಬಳಸಲಿಕ್ಕೆ ಒರುವದಿಲ್ಲ. ಆದರೆ ಸುಳ್ಳುಮಾಹಿತಿಯನ್ನು ಕೊಟ್ಟರೆ ಶಿಕ್ಷೆಗೆ ಗುರಿಯಾಗುವಿರಿ. ಈ ಸಾರೆ ನಿಮ್ಮ ಆದಾಯದ ಬಗ್ಗೆ ಪ್ರಶ್ನೆಯನ್ನೇ ಹಾಕುವದಿಲ್ಲ. ಆದಾಯ ಸರಿಯಾಗಿ ತಿಳಿಸಿದರೆ ಟ್ಯಾಕ್ಸು ಕೊಡಬೇಕಾಗುವದೆಂಬ ಹೆದರಿಕೆಗೆ ಆಸ್ಪದವೇ ಇಲ್ಲ ಜನಗಣನೆಯಕಾಲಕ್ಕೆ ಕೇಳುವ ಪ್ರಶ್ನೆಗಳನ್ನು ನೋಡಿದರೆ, ನಿಮಗೆ ಈ ಕಾರ್ಯಕ್ರಮದ ಸಂಪೂರ್ಣ ಕಲ್ಪನೆ ಬರುವದು,

ಮೊದಲನೆ ಪ್ರಶ್ನೆ ನಿಮ್ಮ ಹೆಸರು ಹಾಗು ನಿಮ್ಮ ಮನೆತನದ ಹಿರಿಯರ ನಡುವಿರುವ ಸಂಬಂಧದ ಕುರಿತು ಇದೆ. ಇದರ ಉದ್ದೇಶವೆಂದರೆ ಕುಟುಂಬದ ಪರಿಸ್ಥಿತಿ ತಿಳಿದುಕೊಳ್ಳುವದು ಆಗಿದೆ. ನಮ್ಮ ಪೂರ್ವಜನರಲ್ಲಿ ಏಕತ್ರ ಕುಟುಂಬಗಳು ಹೆಚ್ಚಾಗಿದ್ದವು. ಬರಬರುತ್ತ ಜನರು ವಿಭಕ್ತ ಕುಟುಂಬ ಜೀವನವನ್ನು ಮೆಚ್ಚುತ್ತಿದ್ದಾರೆ. ಇಂದಿಗೂ ಕೂಡ ನೀವು ಕೆಲವು ಏಕತ್ರ ಮನೆತನಗಳನ್ನು ನೋಡಿರಬಹುದು. ಆದರೆ ಅವು ಈಗ ತೀರ ವಿರಳವಾಗಿವೆ. ಕುಟುಂಬ ಜೀವನದಲ್ಲಿ ನಡೆದಿರುವ ಬದಲಾವಣೆಗಳನ್ನು ಕಂಡು ಹಿಡಿಯುವದು, ಮೊದಲನೆಯ ಪ್ರಶ್ನೆಗೆ ದೊರೆಯುವ ಉತ್ತರದಿಂದ ಸಾಧ್ಯವಾಗುತ್ತದೆ.

ಎರಡನೆ ಪ್ರಶ್ನೆ ನಿಮ್ಮ ನಾಗರೀಕತೆ ಹಾಗು ಧರ್ಮಕ್ಕೆ ಸಂಬಂಧಿಸಿದೆ. ರಾಷ್ಟ್ರದಲ್ಲಿ ಪರದೇಶದವರು ಎಷ್ಟಿದ್ದಾರೆಂಬುದು ಗೊತ್ತಿರಬೇಕಾಗುತ್ತದೆ. ಈ ಜನಗಣನೆಯಲ್ಲಿ ಜಾತಿಮತಗಳಿಗೆ ಸ್ಥಾನ ಕೊಡಬಾರದೆಂದು ಗೊತ್ತಾಗಿದೆ. ಬ್ರಿಟಿಶರ ಆಳಿಕೆಯಲ್ಲಿ ಜಾತಿಮತಗಳ ಅನೇಕ ಭೇದಗಳನ್ನು ಸೂಕ್ಷ್ಮವಾಗಿ ಬರೆದಿಡುತ್ತಿದ್ದರು. ಭಾರತವು ಜಾತಿಮತಗಳ ಕೋಲಾಹದಲ್ಲಿ ಸಿಲುಕಿರುವ ದೇಶವೆಂದು ತೋರಿಸುವದೆ ಆಗ ಅವರ ಉದ್ದೇಶವಾಗಿತ್ತು, ನಮ್ಮ ರಾಷ್ಟ್ರ ಈಗ ಸ್ವತಂತ್ರವಾಗಿದೆ. ನಮ್ಮ ರಾಜ್ಯಘಟನೆಯಲ್ಲಿ ಜಾತಿಮತಗಳಿಗೆ ಸ್ಥಾನವಿಲ್ಲ. ಎಲ್ಲ ಜಾತಿಯವರು ಸಮಾನರಾಗಿದ್ದಾರೆ. ಅವರ ಹಕ್ಕುಬಾಧ್ಯತೆಗಳಲ್ಲಿ ವ್ಯತ್ಯಾಸವಿಲ್ಲ. ಆದರೆ ಹರಿಜನರಂಥ ಕೆಲವು ಹಿಂದುಳಿದ ಸಮಾಜದವರಿಗೆ ಕೆಲವು ವರ್ಷಗಳ ಕಾಲ ತುಸು ಹೆಚ್ಚಿನ ಸವಲತ್ತು ರಾಜ್ಯಘಟನೆಯಲ್ಲಿ ಕೊಟ್ಟಿದೆ. ಆದ್ದರಿಂದ ನೀವು ಹಿಂದುಳಿದ ಸಮಾಜದವರಿದ್ದರೆ ಆ ಸಮಾಜದ ಯಾವ ಜಾತಿಗೆ ನೀವು ಸೇರಿರುವಿರೆಂಬ ಪ್ರಶ್ನೆ ಕೇಳಲಾಗುವದು.

ಕುಟುಂಬಿಕ ಜೀವನ

ಮೂರನೆಯ ಪ್ರಶ್ನೆ ನಿಮ್ಮ ವೈವಾಹಿಕ ಜೀವನ ಕುರಿತು ಇದೆ. ವಿವಾಹಿತರು, ಅವಿವಾಹಿತರು, ಸೋಡ ಚೀಟ ತಕ್ಕೊಂಡವರು ಮತ್ತು ವಿಧುರರು ಆಧವಾ ವಿಧವೆಯರು ಹೀಗೆ ನಾಲ್ಕು ವಿಭಾಗ ಮಾಡಲಾಗಿದೆ. ವೈವಾಹಿಕ ಜೀವನದ ಬಗ್ಗೆ ನಾಲ್ಕು ವಿಭಾಗ ಮಾಡಲಾಗಿದೆ. ವೈವಾಹಿಕ ಜೀವನದ ಬಗ್ಗೆ ಕೂಡ ಇಂದು ಸರಕಾರವು ಕಾಯದೆ ಪಾಸು ಮಾಡಬೇಕಾಗಿ ಬಂದಿದೆ. ಇಂಥ ಕಾಲದಲ್ಲಿ ಸರಕಾರಕ್ಕೆ ವಿವಾಹಿತ ಹಾಗು ಅವಿವಾಹಿತರ ಜನಸಂಖ್ಯೆಯ ಮಾಹಿತಿ ಇರುವದು ಅವಶ್ಯಕ.

ನಾಲನ್ನೆಯ ಪ್ರಶ್ನೆ ನಿಮ್ಮ ವಯಸ್ಸಿಗೆ ಸಂಬಂಧಿಸಿದ್ದು: ಎಲ್ಲ ದೇಶಗಳಲ್ಲಿಯೂ ಜನಗಣನೆಯ ಕಾಲಕ್ಕೆ ಇದು ಮಹತ್ವದ ಪ್ರಶ್ನೆಯಾಗಿದೆ. ಹುಟ್ಟಿದವನಿಗೆ ವಯಸ್ಸು ಇರಲೇ ಬೇಕು ಆದರೆ ಎಲ್ಲರಿಗೂ ತಮ್ಮ ವಯಸ್ಸು ಸರಿಯಾಗಿ ಹೇಳಲಿಕ್ಕೆ ಒರುವದಿಲ್ಲ. ಇಂಥವರು ಹೆಚ್ಚಾಗಿ ಅಶಿಕ್ಷಿತರು. ಅವರು ತಮ್ಮ ವಯಸ್ಸನ್ನು ಯಾವದಾದರೊಂದು ಮಹತ್ವದ ಸಂಗತಿಗೆ ಹೊಂದಿಸಿ ಹೇಳುತ್ತಾರೆ. ಉದಾಹರಣೆಗಾಗಿ, ಡವಗೀ ಬರ, ಕೃಷ್ಣಾನದಿಯ ಮಹಾಪೂರ, ಕಾಂಗ್ರೆಸ ಚಳವಳಿ ನುಂತಾದ ಮಹತ್ವದ ಸಂಗತಿಗಳು ಆಗಿ ಹೋದ ಕಾಲಕ್ಕೆ ತಮ್ಮ ವಯಸ್ಸು ಇಷ್ಟು ಇತ್ತೆಂದು ಅವರು ಹೇಳುವರು. ಜನಗಣನೆ ಮಾಡುವವರಿಗೆ ಇಂಥ ಮಹತ್ವದ ಸಂಗತಿಗಳು ನಡೆದ ಕಾಲ ಗೊತ್ತಿರಲಿಕ್ಕೆ ಬೇಕು ಅಂದರೇನೆ ಹೀಗೆ ಉತ್ತರ ಕೊಡುವ ಅಶಿಕ್ಷಿತ ಜನರ ನಿಜವಾದ ವಯಸ್ಸನ್ನು ಅವರಿಗೆ ನಿರ್ಧರಿಸಲಿಕ್ಕೆ ಬರುವದು.

ಐದನೆಯ ಪ್ರಶ್ನೆಯಲ್ಲಿ ನಿಮ್ಮ ಹುಟ್ಟು ಊರು ಯಾವುದು ಎಂಬುದನ್ನು ಕೇಳಲಾಗುವದು. ಈ ಪ್ರಶ್ನೆ ಜನರ ಸ್ಥಳಾಂತರ ದೃಷ್ಟಿಯಿಂದ ಮಹತ್ವದಿದೆ. ಜನರಸ್ಥಳಾಂತರ ಹೇಗೆ, ಯಾವ ದಿಕ್ಕಿನಲ್ಲಿ ನಡೆದಿದೆ ಎಂಬುದು ಗೊತ್ತಿರುವದು ಆವಶ್ಯ. ಈಗ ಹಳ್ಳಿಗಳನ್ನು ಬಿಟ್ಟು, ಜನರು ಉದ್ಯೋಗ-ಧಂದೆಗಳನ್ನು ಹುಡುಕಲು ಪಟ್ಟಣಗಳನ್ನು ಸೇರುತ್ತಿರುವರು ನಿಮಗೆ ಗೊತ್ತಿದ್ದ ಸಂಗತಿ ಇವರ ಪರಿಣಾಮವಾಗಿ ಪಟ್ಟಣಗಳಲ್ಲಿ ಮನೆಮಾರುಗಳ ಅಭಾವ ಮುಂತಾದ ಅನೇಕ ಸಮಸ್ಯೆಗಳು ಹುಟ್ಟಿವೆ ಕುಲಾಬಾ ಹಾಗು ರತ್ನಾಗಿರಿ ಜಿಲ್ಲೆಗಳಲ್ಲಿ ಗಂಡಸರು ಹೆಚ್ಚಾಗಿ ಮುಂಬಯಿಗೆ ಹೋಗುವದರಿಂದ ಆ ಜಿಲ್ಲೆಗಳಲ್ಲಿ ಹೆಣ್ಣು ಮಕ್ಕಳ ಜನಸಂಖ್ಯೆ ಹೆಚ್ಚು ಇದೆ ಜನಗಣನೆಯ ಕಾಲಕ್ಕೆ ಕಂಡುಬಂದಿದೆ. ಒಟ್ಟನಲ್ಲಿ ನಮ್ಮ ಜನರು ತಮ್ಮ ಊರು ಬಿಟ್ಟು ಬೇರೆ ಕಡೆಯಲ್ಲಿ ನೆಲೆಸುವದು ಬಹಳ ಕಡಿಮೆ. ಹೋದ ಜನಗಣನೆಯ ಮೇರೆಗೆ ನೂರಕ್ಕೆ 90 ರಷ್ಟು ಜನರು ತಮ್ಮ ಜಿಲ್ಲೆಯಲ್ಲಿಯೇ ಜೀವಿಸಿದರೆಂದು ಕಂಡುಬಂದಿದೆ. ಉಳಿದ ತುಸು ಜನರು ತಮ್ಮ ನೆರೆಹೊರೆಯ ಜಿಲ್ಲೆಗಳಲ್ಲಿಯ ವ್ಯಾಪಾರ ಉದ್ಯೋಗ ಬೆಳೆದ ಊರುಗಳಲ್ಲಿ ಹೋಗಿ ನೆಲೆಸಿದರು. ಹಿಂದೆ ಇದ್ದ ಈ ಪರಿಸ್ಥಿತಿಯಲ್ಲಿ ಈಗ ಬದಲಾವಣೆ ಆಗಿರಲೇ ಬೇಕು. ಇದನ್ನು ತಿಳಿದುಕೊಳ್ಳುವದೇ ಹುಟ್ಟು ಊರಿನ್ನು ಕುರಿತು ಇರುವ ಪ್ರಶ್ನೆಯ ಉದ್ದೇಶ.

ಆರನೆಯ ಪ್ರಶ್ನೆ ನಿರ್ವಾಸಿತರ ಕುರಿತು ಇದೆ. ಕರ್ನಾಟಕದಲ್ಲಿ ಕೂಡ ಅನೇಕ ನಿರ್ವಾತರು ಬಂದು ನೆಲೆಸಿದ್ದಾರೆ. ಅವರು ಪಾಕಿಸ್ತಾನದಲ್ಲಿಯ ಯಾವ ಜಿಲ್ಲೆಯಿಂದ ಬಂದರು? ಹಾಗೂ ಯಾವಾಗ ಬಂದರು? ಎಂಬುದನ್ನು ತಿಳಿದುಕೊಳ್ಳಲಾಗುವದು. ನಿರ್ವಾಸಿತರಿಗೆ ಉದ್ಯೋಗ ಕಲ್ಪಿಸಿ ಕೊಡುವ ದೃಷ್ಟಿಯಿಂದ ಈ ಮಾಹಿತಿಯು ಜರೂರಿ ಇದೆ.

ಏಳನೆಯ ಪ್ರಶ್ನೆ ಮಾತೃಭಾಷೆಯಲ್ಲದೆ ಉಳಿದ ಯಾವುದಾದರೂ ಭಾಷೆ ಬರುತ್ತಿದ್ದರೆ, ಅದರ ಟಿಪ್ಪಣಿ ಮಾಡಲಾಗುವದು, ಭಾಷಾವಾರ ಪ್ರಾಂತ ರಚನೆಯ ತತ್ವವನ್ನು ಸರಕಾರವು ಮಾನ್ಯ ಮಾನ್ಯ ಮಾಡಿರುವದರಿಂದ ಈ ಪ್ರಶ್ನೆಗೆ ಇನಷ್ಟು ಮಹತ್ವ ಬಂದಿದೆ.

ಉಪಜೀವನಾಧಾರ

ಒಂಬತ್ತು ಹತ್ತು ಹಾಗು ಹನ್ನೊಂದನೆಯ ಪ್ರಶ್ನೆಗಳು ನಿಮ್ಮ ಜೀವನಾಧಾರ ಹಾಗೂ ವ್ಯಾಪಾರ ಉದ್ಯೋಗಗಳ ಕುರಿತು ಇವೆ. ನೀವು ವ್ಯಾಪಾರಂಭಿಸಿಕೊಂಡಿದ್ದೀರೋ? ನೀವು ಯಾವ ಧಂದೆ ಹಾಗೂ ಪೂರಕ ಧಂದೆಗಳನ್ನು ಮಾಡುತ್ತಿರುವಿರಿ? ನೀವು ಉದ್ಯೋಗದಲ್ಲಿ ತೊಡಗಿದ್ದರೆ ಆ ಉದ್ಯೋಗದ ಮೂಲಕರು ಇರುವಿರೊ ಅಥವಾ ಬೇರೆಯವರಿಗೆ ಕೆಲಸ ಮಾಡುತ್ತಿರುವಿರೋ ಇನ್ನೇ ಮೊದಲಾದ ಪ್ರಶ್ನೆಗಳನ್ನು ಕೇಳುವರು.

ಹನ್ನೆರಡನೆಯ ಪ್ರಶ್ನೆ ಸಾಕ್ಷರತೆಯ ಪ್ರಸಾರವನ್ನು ತಿಳಿದುಕೊಳ್ಳಲು ಇದೆ.

ಹದಿಮೂರನೆಯ ಪ್ರಶ್ನೆ ನಿರುದ್ಯೋಗಿಗಳ ಸಂಖ್ಯೆ ಕಂಡುಕೊಳ್ಳಲು ಇರುವುದು.

ಹದಿನಾಲ್ಕನೆಯ ಪ್ರಶ್ನೆ ಗಂಡಸರ ಹಾಗೂ ಹೆಂಗಸರ ಸಂಖ್ಯೆ ಬೇರೆಯಾಗಿ ತಿಳಿದುಕೊಳ್ಳುವದಕ್ಕಾಗಿ ಇಡಲಾಗಿದೆ.

ಜನಗಣನೆಯ ಅವಧಿ

ಮಾರ್ಚ ತಿಂಗಳ ಮೊದಲನೆಯ ದಿನ ಸೂರ್ಯೋದಯದ ಕಾಲಕ್ಕೆ ಜನಸಂಖ್ಯೆ ಎಷ್ಟಿದೆ ಎಂಬುವದನ್ನು ನಿಶ್ಚಯಿಸುವದು ಜನಗಣನೆಯ ಮುಖ್ಯ ಉದ್ದೇಶವಾಗಿದೆ. ಒಬ್ಬ ಎಣಿಕೆಗಾರನು ಸುಮಾರು 1,000 ಜನರ ಗಣನೆ ಮಾಡುವನು. ಜನಗಣನೆ ಪ್ರಾರಂಭ ಮಾಡುವದಕ್ಕಿಂತ ಮೊದಲು ಮನೆಗಳಿಗೆ ನಂಬರು ಹಾಕಿ ಎಣಿಕೆಗಾರರಿಗೆ ಹಂಚಿಕೊಡುವರು, ಫೆಬ್ರುವರಿ 9ನೇ ತಾರೀಖಿಗೆ ಗಣನೆ ಪ್ರಾರಂಭವಾಗಿ ಆ ತಿಂಗಳ ಕೊನೆಯ ವರೆಗೆ ನಡೆಯುವದು

ಆ ತಿಂಗಳ ಕೊನೆಯ ದಿನದ ರಾತ್ರಿ ಮನೆ ಮಾರು ಇಲ್ಲದವರ ಗಣನೆ, ಅವರು ದೊರೆತ ಸ್ಥಳದಲ್ಲಿ ಮಾಡಲಾಗುವದು. ಎಣಿಕೆಗಾರನು ಮನೆಗೆ ಹೋಗಿ ಬಂದ ನಂತರ ಏನಾದರೂ ಜನನ-ಮರಣಗಳಾಗಿದ್ದರೆ ಅವನ್ನು ಕಡೆಯ ಮೂರು ದಿನಗಳಲ್ಲಿ ತಿಳಿದುಕೊಳ್ಳುವ ವ್ಯವಸ್ಥೆಮಾಡಿದೆ.

ನಮ್ಮ ನಾಡಿನ ಮುಂದಿನ ಪ್ರಗತಿಯ ದೃಷ್ಟಿಯಿಂದ ಜನಗಣನೆಯು ಎಷ್ಟು ಮಹತ್ವದ್ದಾಗಿದೆಂಬ ಮಾತು ನಿಮಗೆ ಈಗ ಗೊತ್ತಾಗಿರಲಿಕ್ಕೆ ಸಾಕು. ಆದರೆ ಜನರ ಸಹಕಾರ ವಿಲ್ಲದೇ ಸರಿಯಾಗಿ ಜನಗಣನೆ ಆಗಲಾರದು. ಆದರಿಂದ ಈ ಜನಗಣನೆಯಲ್ಲಿ ತಮಗೆ ಗೊತ್ತಿದ್ದ ಮಟ್ಟಿಗೆ ಸತ್ಯವಾದ ಮಾಹಿತಿಯನ್ನು ಕೊಡುವದು ಪ್ರತಿಯೊಬ್ಬ ನಾಗರಿಕನ ಕರ್ತವ್ಯವಾಗಿದೆ. ಎಣಿಕೆಗಾರರು ಕೂಡ ತಮ್ಮ ಕೊಣೆಯನ್ನು ಅರಿತು, ತಮ್ಮ ಕಾರ್ಯವನ್ನು ದಕ್ಷತೆಯಿಂದ ಮಾಡುವದು ಅವಶ್ಯವಿದೆ. ಆದ ಕಾರಣ ಯಾವಕ್ಕೂ ಜನರು ಹಾಗೂ ಜನಗಣನೆಯಲ್ಲಿ ತೊಡಗುವ ಕಾರ್ಯಕರ್ತರು ತಮ್ಮ ತಮ್ಮ ಕರ್ತವ್ಯವನ್ನು ಯೋಗ್ಯ ರೀತಿಯಿಂದ ಮಾಡಿ ಅಪೂರ್ವವಾದ ಈ ಪ್ರಚಂಡ ಜನಗಣನೆಯನ್ನು ಯಶಸ್ವಿಯನ್ನಾಗಿ ಮಾಡುವಿರೆಂದು ಆಶಿಸುವೆ.

(ಮುಂಬಯಿ ಸರಕಾರದ ಒಕ್ಕಲುತನ ಹಾಗು ಅರಣ್ಯ ಖಾತೆಯ ಮಂತ್ರಿ ಶ್ರೀ. ಪಾಟೀಲ ಮಲ್ಲನಗೌಡರು, ಆಕ್ಟೋಬರ 8 ರಂದು ಧಾರವಾಡ ಬಾನುಲಿ ಕೇಂದ್ರದಿಂದ ಮಾಡಿದ ಭಾಷಣ.)

—: ವನಮಹೋತ್ಸವ :—

ಈ ವಾರದಲ್ಲಿ ಭಾರತವಷ್ಟೆಲ್ಲಾ 3 ಕೋಟಿಗಿದಗಳನ್ನು ನೆಡಲಾಯ್ತೆಂದು ಆಹಾರಮಂತ್ರಿ ಮುನ್ಶಿಯವರ ಹೇಳಿದ್ದಾರೆ. ಇವುಗಳಲ್ಲಿ ಎಷ್ಟುಬೆಳೆದು ಮರಗಳಾಗುತ್ತವೆಂಬುದನ್ನು ಹೇಳುವುದಸಾಧ್ಯ.

ಸರ್ದಾರ ಪಟೇಲರ ಅಸ್ತಿ

ಇವರ ಅಸ್ತಿಯನ್ನು ಪುತ್ರಿ ಮಯಾಭಾಯಿಪಟೇಲರು ಪ್ರಯಾಗ ಗಂಗಾ-ಯಮುನಾ ಸಂಗಮದಲ್ಲಿ-29 ನೆಯತಾ ವಿಸರ್ಜಿಸಿಗೊಳಿಸುವರೆಂದು ಪ್ರಕಟಿಸಲಾಗಿದೆ-ಇವರ ಜೀವಿತಕಾಲದಲ್ಲಿ ಅರ್ಪಿತವಾದ ವಾನಪತ್ರಿಗಳ ಕರಂಡಕಗಳನ್ನು ಅಹಮ್ಮದಾಬಾದಿನ ನವಜೀವನ ಟ್ರಸ್ಟಿಯವರು ಸಂಗ್ರಹಿಸಿಡುವರು.

— ಮದ್ರಾಸಿನಲ್ಲಿ ಜನಗಣನೆ —

ಜನಗಣನೆಯು 1950 ರ ಫಿಬ್ರವರಿ 9 ಕ್ಕೆ ಆರಂಭವಾಗಿ ಫಿಬ್ರವರಿ 28 ಕ್ಕೆ ಮುಗಿಯುವುದಾದರೂ ವಿವಿಧ ಭಾಗಗಳ ಅಂಕೆ ಸಂಖ್ಯೆಗಳನ್ನು ಕಲಿಸಲು ಒಂದು ವರ್ಷ ಬೇಕಾಗಬಹುದೆಂದು ಅಂದಾಜುಮಾಡಲಾಗಿದೆ. ಮದ್ರಾಸು ಪ್ರಾಂತಕ್ಕೆ 10 ಲಕ್ಷ ರೂ ಖರ್ಚಾಗಲಿದೆ.

ಕನ್ನಡ ಸಾಹಿತ್ಯ ಸಮ್ಮೇಳನ

ಮಂಗಳೂರಿನ ಕವಿಪುಂಗವ ಶ್ರೀ ಗೋವಿಂದಪೈಯವರ ಅಧ್ಯಕ್ಷತೆಯಲ್ಲಿ ಬೊಂಬಾಯಿಯಲ್ಲಿ ಕಾಡಿದ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಸುಮಾರು 300 ಕ್ಕಿಂತ ಅಧಿಕವಾಗಿ ಪ್ರತಿನಿಧಿಗಳು ಬಂದಿದ್ದರು. 24 ನೆಯು ದಿನಾಂಕ ಮಾನ್ಯ ದಿವಾಕರರು ಉದ್ಘಾಟನೆ ಮಾಡಿದರು

ಹಳ್ಳಿ ಪ್ರದೇಶದಲ್ಲಿ ಕಾಳಿನ ಕಂಟ್ರೋಲ್

— ಮದ್ರಾಸ್ ಸರ್ಕಾರದನಿಶ್ಚಯ —

ಬರುವಸುಗ್ಗಿಯಿಂದ ಹಳ್ಳಿಯ ಪ್ರದೇಶಗಳಲ್ಲಿ ಕಾಳಿನ ಕಂಟ್ರೋಲ್‌ನ್ನು ಕ್ರಮೇಣವಾಗಿ ಮತ್ತುನಿಧಾನವಾಗಿ ತೆಗೆಯುವ ಕ್ರಮವು ಜಾರಿಯಲ್ಲಿ ಬರುವುದೆಂದು ಮದ್ರಾಸ್ ಸರ್ಕಾರವು ಪ್ರಕಟಿಸಿದೆ. ಎಲ್ಲಾ ಭಾಗಗಳಲ್ಲದೆ – ನಿಯಮಿತಕ್ಷೇತ್ರವನ್ನು ಪರೀಕ್ಷೆ ಮಾಡಿ ಸೂಕ್ತವೆನಿಸಿದಲ್ಲಿ ತೆಗೆದುಕೊಂಡು ವಿಸ್ತರಿಸುವ ಕಾರ್ಯವನ್ನು ಸಾಧಿಸಲಾಗುವದು- ಹೆಚ್ಚು ಬೆಳೆಯುವ ಜಿಲ್ಲಾಗಳಲ್ಲಿ ಕಾಳಿನ ಸಂಗ್ರಹಮಾಡುವದನ್ನು ನಿಲ್ಲಿಸಲಾಗುವುದಿಲ್ಲ. ಕಡಮೆ ಪ್ರದೇಶಗಳಿಗೆ ಬೇರೆಕಡೆಯಿಂದ ತರಿಸಿ ಪರಿಸ್ಥಿತಿ ಸುಧಾರಿಸುವವರೆಗೆ ಸಹಾಯಮಾಡಲಾಗುವದು.

ಅದವಾನಿಯ ಜಿಲ್ಲಾ ಮುನ್ಸಿಫರ ಕೋರ್ಟಿನಲ್ಲಿ

ಎಸ್. ಶಿ. 422/48. ಇ. ಎ. 158/49

Between ಶಿ. ನಾಗಮ್ಮ— ಡಿಕ್ರಿ ಹೋಲ್ಡರ್

ಮತ್ತು

1] ಸಂಜೀವಯ್ಯ
2] ಬೊಜ್ಜನ್ನ
3] ನಬಿಸಾಬ್ ಜೆಡ್ಜ್‌ಮೆಂಟ್ ಡೆಟರ್ಸ್-

ಮೇಲ್ಕಾಣಿಸಿದ ಪ್ರತಿವಾದಿಗಳ- ಆಲೂರು ತಾಲೂಕು ಗೆಜ್ಜೆಹಳ್ಳಿ ಗ್ರಾಮದಲ್ಲಿರುವ ಆಸ್ತಿಪಾಸ್ತಿಗಳನ್ನು ಅದವಾನಿಯ ಜಿಲ್ಲಾ ಮುನ್ಸೀಫರ ಕೋರ್ಟಿನಲ್ಲಿ 11-1-1951 ರ ದಿನ ಪ್ರಾತಃಕಾಲ 11 ಗಂಟೆಗೆ ಬಹಿರಂಗವಾಗಿ ಯಾಲಮು ಹಾಕಲಾಗುವದೆಂದು ಈ ಮೂಲಕ ಸರ್ವರಿಗೂ ತಿಳಿಸಲಾಗಿದೆ.- ಇನ್ನುಳಿದ ವಿವರಗಳನ್ನು ಡಿಕ್ರಿಹೋಲ್ಡರರ ವಕೀಲರಿಂದ ತಿಳಿಯಬಹುದು.

ಶಿ. ಶ್ರೀನಿವಾಸರಾವ್,
ಡಿಕ್ರಿಹೋಲ್ಡರರ ಅಡ್ವೊಕೇಟ್.

೧೯ ಲಕ್ಷ ರೂ. ಬಲಯು ಬಂಗಾರದ ಜಪ್ತಿ, ಯುರೋಪಿಯನ್ನ ಪ್ರವಾಸಿಕರಿಂದ

—೦—

ಮುಂಬಯಿ ತಾ 17 ರ ರಾತ್ರಿ ಇಲ್ಲಿಗೆ ರೋಮದಿಂದ ವಿಮಾನದಲ್ಲಿ ಬಂದಿಳಿದ ನಾಲ್ವರು ಪ್ರವಾಸಿಕರ ಬಳಿಯಲ್ಲಿದ್ದ 10ಲ ಕ್ಷರೂ ಬೆಲೆ ಬಾಳುವ ಭಂಗಾರವನ್ನು ಆಧಿ ಕಾರಿಗಳು ಜಪ್ತಿಮಾಡಿದ್ದಾರೆ. ಈ ಪ್ರವಾಸಿ ಕರು ಯುರೋಪಿಯನ್ನರಾಗಿದ್ದು ಸುಂಕದ ಅಧಿಕಾರಿಗಳು ವಿಚಾರಣೆಗಾಗಿ ಅವರನ್ನು ವಿಮಾನ ನಿಲ್ದಾಣದಲ್ಲಿ ತಡೆ ಹಿಡಿದಿದ್ದಾರೆ.

ರಾಷ್ಟ್ರೀಯ ಭಾವನೆ ಬೆಳೆಸಿರಿ, ಅಲ್ಪ ಸಂಖ್ಯಾಕರಿಗೆ ರಾಷ್ಟ್ರೀಯ ಶೀಖ ಪರಿಷತ್ತಿನ ವಿನಂತಿ

—೦—

ಅಮೃತಸರ 17 ರಂದು ಸೇರಿದ ರಾಷ್ಟ್ರೀಯ ಶೀಖರ ಪರಿಷತ್ತಿನಲ್ಲಿ ಜಾತೀ ಯತೆಯ ಭಾವನೆಯನ್ನಳಿದು ರಾಷ್ಟ್ರೀಯ ಭಾವನೆಯನ್ನು ಬೆಳೆಸಿಕೊಳ್ಳಬೇಕೆಂದು ಭಾರತದ ಅಲ್ಪ ಸಂಖ್ಯಾಕ ಸಮಾಜಕ್ಕೆ ಆಗ್ರಹದ ವಿನಂತಿ ಮಾಡಿಕೊಳ್ಳಲ್ಪಟ್ಟಿತು.

ಜಾತೀಯ ತಳಹದಿಯ ಮೇಲೆ ಹೊಸ ಪ್ರಾಂತಗಳನ್ನು ರಚಿಸುವದು ದೇಶಕ್ಕೆ ಹಾನಿಕರವಾದುದೆಂದು ಈ ಪರಿಷತ್ತು ಅಭಿಪ್ರಾಯಪಟ್ಟಿದೆ. ಬಲಿಷ್ಠ ವಾದ ಮತ್ತು ಸಂಯುಕ್ತರಾಷ್ಟ್ರವನ್ನು ಕಟ್ಟಲು ಕಾಂಗ್ರೆಸ್ಸಿಗೆ ಸಂಪೂರ್ಣ ಬೆಂಬಲ ಕೊಡ ವದಾಗಿ ಪರಿಷತ್ತು ಸಾರಿತು. ಸರದಾರ ಪಟೇಲರ ನಿಧನದ ಬಗ್ಗೆ ಸಂತಾಪ ಸೂಚಿಸುವ ಗೊತ್ತುವಳಿಯೊಂದು ಸ್ವೀಕರಿ ಸಲ್ಪಟ್ಟಿತು.

ಕುರುಡ ವಧು—ವರರು

ಲಗ್ನಕ್ಕಾಗಿ ಸಿಲೋನ ತರುಣಿಯ ಪ್ರಯಾಣ.

—(೦)—

ಕೊಲಂಬೊ 16-ಪತ್ರ ಮೂಲಕ ಪರಿಚಯ ಮಾಡಿಕೊಂಡ ಓರ್ವ ಕುರುಡ ತರುಣನನ್ನು ಲಗ್ನವಾಗುವದಕ್ಕಾಗಿ ಸಿಲೋನಿನ ಕುರುಡ ಹುಡುಗಿಯೊಬ್ಬಳು ಒರುವ ವರ್ಷದ ಪ್ರಾರಂಭದಲ್ಲಿ ಇಂಗ್ಲೆಂ ಡಿಗೆ ಹೋಗಲಿದ್ದಾಳೆ.

ಇಲ್ಲಿ ಕುರುಡರ ಮತ್ತು ಕಿವುಡರ ಶಾಲೆಯಲ್ಲಿ ಶಿಕ್ಷಕಿಯಾಗಿರುವ 24ವರ್ಷದ ಈ ತರುಣಿಯ ಹೆಸರು ಕ್ರಿಸ್ಟಿಯಾನಾ ಐಸಾಕ್ಸ್ ಎಂದಿದ್ದು ಈಗ ಲಗ್ನವಾಗಲಿರುವ 25 ವರ್ಷದ ಫ್ರೆಡ್ ಸ್ಟೀಫನ್ಸ್ ಎಂಬಾತ ನು ಇಂಗ್ಲಂಡದಲ್ಲಿ ತಾಮ್ರದ ಕಾರಖಾನೆ ಯೊಂದರಲ್ಲಿ ದುಡಿಯುತ್ತಿದ್ದಾನೆ. ಹತ್ತು ವರ್ಷಗಳ ಹಿಂದೆ ಇವರೀರ್ವರಲ್ಲಿ ಪತ್ರಿಕೆ ಯೊಂದರಲ್ಲಿ ದೊರಕಿಸಿದ ವಿಳಾಸಗಳ ಮೂ ಲಕ ಪತ್ರವ್ಯವಹಾರ ಪ್ರಾರಂಭಿಸಿಕೆಲೆದ ವಾರ ಸ್ಟಿಫನ್ಸ್‌ನು ವಿವಾಹ ನಿಶ್ಚಯದ ಉಂಗುರವನ್ನು ಕಳಿಸಿದ್ದಾನೆ.

ಆಹಾರ ಮಿತವ್ಯಯ ಅವಶ್ಯಕತೆ

ಸರಕಾರಿ ಅಧಿಕಾರಿಗಳಿಗೆ ನೆಹರೂರ ಪರಿಪತ್ರ

—(೦)—

ದೇಶದಲ್ಲಿಯ ಸದ್ಯದ ಗಂಭೀರ ಆಹಾರ ಪರಿಸ್ಥಿತಿಯ ಮೂಲಕ ಪ್ರಧಾನ ಮಂತ್ರಿಗಳು ಎಲ್ಲ ಶಾಖೆಯ ಅಧಿ ಕಾರಿಗಳಿಗೆ ಒಂದು ಪರಿಪತ್ರವನ್ನು ಕಳಸಿ ಸರಕಾರೀ ಸತ್ಕಾರ ಕೂಟಗಳು, ಸ್ವಾಗತ ಸಮಾರಂಭಗಳು ಮೊದಲಾದವುಗಳಲ್ಲಿ ಆಹಾರ ಒಳ್ಳೇ ಮಿತವ್ಯಯದಿಂದ ವರ್ತಿಸಬೇಕೆಂದು ಸೂಚಿಸಿದ್ದಾರೆ.

ಅತ್ಯಂತ ಆವಶ್ಯವಿದ್ದ ಪ್ರಸಂಗದಲ್ಲಿ ಮಾತ್ರ ಸತ್ಕಾರ ಕೂಟಗಳನ್ನೇರ್ಪಡಿಸ ಬೇಕೆಂದೂ ಆದರಲ್ಲಿ ಅವರು ತಿಳಿಸಿದ್ದಾರೆ. ಊಟಗಳನ್ನೇರ್ಪಡಿಸಿದಾಗಂತೂ ಸಾಧ್ಯ ವಿದ್ದಷ್ಟು ಸೀದಾ ಮತ್ತು ಮೂರಕ್ಕಿಂತ ಹೆ ಚ್ಚಿಲ್ಲದಷ್ಟು ಪದಾರ್ಥಗಳ ಅಡಿಗೆ ತಯಾ ರಿಸಬೇಕೆಂದು ಸೂಚಿಸಿರುವರು.

— ಹೊಸಪೇಟೆ —

—)(—

(ನಮ್ಮ ಸುದ್ದಿಗಾರರಿಂದ)

ದುಃಖ ಸೂಚಕ ಸಭೆ:— 15 ನೆಯ ತಾ. ಪ್ರಾತಃಕಾಲ 10-30 ಕ್ಕೆ ಸರ್ದಾರ ವಲ್ಲಭ ಭಾಯಿ ಪಟೇಲರ ಮರಣವಾ ರ್ತೆಯನ್ನು ಕೇಳಿದೊಡನೆ-ಸ್ಥಳಿಕ ಕಾರ್ಯಕರ್ತರೂ-ವರ್ತಕರು ಪುರಸ ಭಾಧ್ಯಕ್ಷರು-ಉಪಾಧ್ಯಕ್ಷರು ಪಟ್ಟಣದಲ್ಲಿ ಅಡ್ಡಾಡಿ ಹರತಾಳವನ್ನಾಚರಿಸಲು ಕೇಳಿಕೊಂಡ ಕಾರಣ ಸಂಪೂರ್ಣ ಹರತಾಳವಾಯಿತು. ಸಾರ್ವಜನಿಕ ವಾಚನಾಲಯದ ಕಾಂಪೌಂಡಿನಲ್ಲಿ ಶ್ರೀ ಶಂಕರಾನಂದಜಿಯವರ ಅಧ್ಯಕ್ಷತೆಯಲ್ಲಿ ಶ್ರೀ ನವಲಗುಂದ ಸ್ವಾಮಿಯವರು ಪಟೇಲರ ಗುಣಗಾನ ಮಾಡಿ ಆತ್ಮಕ್ಕೆ ಶಾಂತಿ ಕೋರಿದರು. ಶ್ರೀ ಅಸುಂಡಿ ತಿರುಮಲರಾಯರು ಸರ್ದಾರರ ಕಾರ್ಯ ಮಹತ್ವವನ್ನು ವಿವರಿಸಿದರು. ಶ್ರೀ ಮೈ ಮೂರು ತಿರುಮಲಾಚಾರ್ಯರು ದುಃಖ ಸೂಚಕ ತೀರ್ಮಾನವನ್ನು ತಂದು ಅದು ಪಾಸಾದ ನಂತರ ಸಭಿಕರು ಮೌನವಶರಾಗಿ ಎದ್ದು- ಸರ್ದಾರ ಪಟೇಲರ ಆತ್ಮಕ್ಕೆ ಶಾಂತಿ ಕೋರಿದರು.

ಈ ವಾರದ ಯುದ್ಧ ಸಮಾಚಾರ

—೦—

ಕೋರಿಯಾದ ದಕ್ಷಿಣ ಭಾಗಕ್ಕೆ ಕಮ್ಯುನಿಸ್ಟರು ನುಗ್ಗಿರುವರೆಂದು ವದಂತಿ. ಸುದ್ದಿಗಳ ಮೇಲೆ ಪ್ರತಿಬಂಧ ವಿರುವಕಾರಣ ನಿಜಾಂಶಗಳೇ ಹೊರ ಬೀಳುವಂತಿಲ್ಲ. ಅಮೆರಿಕನ್ನರು ಪೂರಾಕೊಡೆತ ತಿಂದು ಕೆಳಬಂದ ಮೇಲೆ ಚೀನೀಯರು 38 ನೆಯ ಅಕ್ಷಾಂ ಶದ ಒಳಗೆ ಪ್ರವೇಶಮಾಡಿಲ್ಲವೆನಾದರೂ ಕೋರಿಯನ್ನರನ್ನು ಶತ್ರುಸುಸಜ್ಜಿತರ ನ್ನಾಗಿ ಮಾಡಿ ಕಳುಹಿಸುತ್ತಿರುವಂತೆ ತೋರುತ್ತದೆ. ಇತ್ತ ಪಶ್ಚಿಮ ಯುರೋಪ ದಲ್ಲಿ ಅಟ್ಲಾಂಟಿಕ್ ರಾಷ್ಟ್ರಗಳು ತಮ್ಮ ಸೈನ್ಯಗಳನ್ನೆಲ್ಲಾ ಜನರಲ್ ಈಸನ್ ಹವರ್‌ರ ಸೇನಾಧಿಪತ್ಯದ ಕೆಳಗೆ ಸಂಘ ಟನೆ ನಡೆಸಿ ಸಂರಕ್ಷಣೆಯ ಕಾರ್ಯ ಕ್ರಮಗಳನ್ನು ನಡೆಸಲು ಅಮೆರಿಕಾದ ಅಧ್ಯಕ್ಷ ಟ್ರೂಮನ್ನರು ಸಲಹೆಯಿತ್ತಿರು ವರು ಅಮೆರಿಕಾದಲ್ಲಿ ಏನು ಯುದ್ಧವಿದ್ದ ತೆನಡೆದಿದೆ ರಷ್ಯಾದಲ್ಲಿ ಏನು ನಡೆದಿರುವು ದೂ ಗೊತ್ತಾಗುವುದಿಲ್ಲ.

— ಲಂಡನ್ನಿನ ಸಭೆ —

—)o(—

ಕಾಮನ್ ವೆಲ್ತರಾಷ್ಟ್ರಗಳ ಮುಖ್ಯ ಮಂತ್ರಿಗಳ ಸಭೆಯು 1951 ಜನವರಿ ಮೊದಲನೇ ವಾರದಲ್ಲಿ ಲಂಡನ್ನಿನಲ್ಲಿ ಕೂಡಲಿದೆ ಪಂಡಿತ ನೆಹರೂರವರು ಇಲ್ಲಿಂದ ಹೋಗಲಿದ್ದಾರೆ.

ಬೆಕ್ಕು ಮನೆಯೊಳು ಲೇಸು
ಮುಳ್ಳು ಕಲ್ಲಿಗೆ ಲೇಸು!
'ನಕ್ಕು ನಗಿಸುವ-ನುಡಿ ಲೇಸು ಊರಿಂಗೆ
'ಒಕ್ಕಲಿಗ'' ಲೇಸು ಸರ್ವಜ್ಞ!!

ಮದ್ರಾಸ್ ಸರ್ಕಾರದ ವ್ಯರ್ಥ ಶಾಖೆಗಳು

ಮದ್ರಾಸು ಸರ್ಕಾರದವರು- ಸಾರ್ವಜನಿಕಹಣವನ್ನು ವ್ಯರ್ಥವಾಗಿಹಾಳುಮಾಡುತ್ತಿರುವರೆಂಬದು ಈ ಕೆಳಗೆಕೊಟ್ಟ ಶಾಖೆಗಳ ನಿರ್ಮಾಣದಿಂದ ಸ್ಪಷ್ಟವಾಗುತ್ತಲಿದೆ. ಬ್ರಿಟಿಷ್ ಸರ್ಕಾರದ ಯಾವಸಮಯದಲ್ಲಾ ಇಷ್ಟೊಂದು ಹಣದ ದುರ್ವ್ಯಯವಾಗುತ್ತಿದ್ದಿಲ್ಲ. ಬ್ರಿಟಿಶ ಸರ್ಕಾರದಕಾಲಕ್ಕೆ ಈದೇಶದ ಹಣ ಪರದೇಶಗಳಿಗೆ ಹರಿದು ಹೋಗುತ್ತಿತ್ತು- ಅದಕ್ಕೆ ನಿಯಂತ್ರಣವಿದ್ದರೂ- ನಮಗೆ ಯಾವವಿಧವಾದ ಆರ್ಥಿಕ ಸ್ವಾತಂತ್ರ್ಯವಿಲ್ಲ, ಆಹಾರಧಾನ್ಯಗಳನ್ನು ತರಿಸಬೇಕಾದರೆ ನೂರಾರು ಕೋಟರೂ. ನಾವು ಪರದೇಶಗಳಿಗೆ ಹಣಕಳುಹಿಸಬೇಕೆಂದಾಗ ಉಳಿದ ಮಾತೇನು?

ಹಳ್ಳಿಗಳಲ್ಲಿ ಯಾವ ವಿಧವಾದ ಅಭಿವೃದ್ಧಿಯೂ ಇಲ್ಲ ಒಳ್ಳೆಯ ರಸ್ತೆಗಳು- ಶಾಲೆ ವೈದ್ಯಕೀಯ ಮತ್ತು ಕುಡಿಯುವ ನೀರಿನ ಸೌಕರ್ಯಗಳೇಕಡಿಮೆ. ರೈತರಿಗೆ ಕರಧಾರ ಕಡಮೆಯಾಗಿಲ್ಲ ಹೆಚ್ಚುತ್ತಲೇ ಇದೆ. ಆದರೆ ರೈತನಿಗೆ ಸರ್ಕಾರದಿಂದ ಯಾವ ಲಾಭಗಳೂಇಲ್ಲ: ಹೀಗಿದ್ದೂ ಗ್ರಾಮಾಭಿವೃದ್ಧಿ ರೈತರಅಭಿವೃದ್ಧಿ- ಈ ಹೆಸರುಗಳಮೇಲಿಂದ ಲಕ್ಷಗಟ್ಟಲೆ ಹಣ ಪ್ರತಿತಿಂಗಳೂ ವ್ಯಯವಾಗುತ್ತಲಿದೆ- ಸರ್ಕಾರದವರು ಈ ವ್ಯರ್ಥಶಾಖೆಗಳಖರ್ಚಗಳ ನ್ನು ಳಿಸಿಬಿಟ್ಟರೆ ಆ ಹಣವನ್ನು ಗ್ರಾಮಾಭಿವೃದ್ಧಿ ಕಾರ್ಯಗಳಿಗೆ ಉಪಯೋಗಿಸಿದರೆ- ಜನರಾಜ್ಯವೆಂಬ ಹೆಸರು ಸಾರ್ಥಕವಾಗುವುದು-

1) **ವ್ಯವಸಾಯಶಾಖೆ:**- ಈ ಶಾಖೆಗಾಗಿ ಎಷ್ಟುಹಣವೆಚ್ಚವಾಗುತ್ತಲಿರುವುದೋ ಅದರ ಶೇಕಡ 10 ರ ಭಾಗವಾದರೂ- ಆ ಯಾ ಜಿಲ್ಲೆಗಳ ವ್ಯವಸಾಯಾಭಿವೃದ್ಧಿಯಾಗಿಲ್ಲ. ಈ ಶಾಖೆಇರುವದರಿಂದ ದನಗಳತಳಿಯಲ್ಲಿ ಸುಧಾರಣೆಯಾಗಿರುವುದೇ? ಭೂಮಿಗಳು ಹೆಚ್ಚು ಫಲವತ್ತಾಗಿರುವನೇ? ಒಳ್ಳೆಯಬೀಜ- ಗೊಬ್ಬರ ತಪ್ಪದೆ ಎಲ್ಲಾ ರೈತರಿಗೂ ದೊರೆಯುತ್ತಿರುವುದೇ? ಇವರವಶದಲ್ಲಿದ್ದಕಾಲಕ್ಕೆ ರೈತರಿಗೆ ಅಳಿ ಅಚ್ಚುಕುಡ- ನೇಗಿಲು ಬಡರೈತರಿಗೆ ಒದಗಿದನೇ ಜಿಲ್ಲೆಯ ಯಾವ ಭಾಗದಲ್ಲಿ ಯಾವಊರಿನ ರೈತರಿಗೆ ಈ ಶಾಖೆಯವರಿಂದ ಎಂಥ ಸಹಾಯ ದೊರಕಿದೆಯೆಂಬುದು ಯಾರಾದರುಸ್ಪಷ್ಟಪಡಿಸಿದರೆ- ಆದನ್ನುಎಲ್ಲರ ಅವಗಾಹನೆಗಾಗಿ ಪ್ರಕಟಿಸಬಹುದು ಈ ಶಾಖೆಗೆ ಜಿಲ್ಲಾ ಆಫೀಸರರು - ಒಬ್ಬ ಡೆಪ್ಯೂಟಿ-ತಾಲೂಕಿಗೊಬ್ಬ ಡಿಮೊನ್ಸ್ಟ್ರೇಟರ್- ಇವರ ಸಿಬ್ಬಂದಿ- ಜಿಲ್ಲೆಗೆ ತಿಂಗಳಿಗೆ 10-15 ಸಾವಿರರೂ. ಖರ್ಚು- ಸರಕಾರಕ್ಕೆ ಬೆಳೆದು ಅಂಕೆ ಸಂಖೆಗಳು ಜೇಕಾದರೆ- ರೈತರ ಮತ್ತು ವ್ಯವಸಾಯಾಭಿವೃದ್ಧಿಯ ವಿಷಯಗಳು ತಿಳಿಯಬೇಕೆಂದರೆ ಹೊರಲಾರದ ಕತ್ತೆಯ ಭಾರವನ್ನು ಹೊರುತ್ತಿರುವ ಗೌಡ-ಶಾನು ಭೋಗರು ತಿಂಗಳಿಗೆ 5/- ಹೆಚ್ಚು ಕೊಟ್ಟರಾಯಿತು. ಈ ಕೆಲಸ ಸಂತೋಷವಾಗಿ ಮಾಡುವರು ಕಲೇಕ್ಟರರ ಆಫೀಸಿನಲ್ಲಿ ಇನ್ನೊಬ್ಬ ಗುಮಾಸ್ತರನ್ನಿಟ್ಟರಾಯಿತು. ವ್ಯರ್ಥ ಪತ್ರವ್ಯವಹಾರ- ವ್ಯರ್ಥ ಅಂಕೆ-ಸಂಖೆ- ಸಾಪ್ತಾಹಿಕ- ಪಾಕ್ಷಿಕ- ಮಾಸಿಕ ವರದಿಗಳು- ಎಲ್ಲಾ ಕಾಗದಗಳ ಮೇಲೆ ವ್ಯವಸಾಯಾಭಿವೃದ್ಧಿ ರೈತರ ಅಭಿವೃದ್ಧಿ- ಇವರ ಸ್ವಾಧೀನಕ್ಕೆ ಕೊಟ್ಟ ಟ್ರಾಕ್ಟರುಗಳಲ್ಲಿ ಮುಕ್ಕಾಲುಪಾಲು 8 ತಿಂಗಳು ಕೆಲಸ ಮಾಡುವುದಿಲ್ಲ. ಡ್ರೈವರುಗಳಿಗೆ ನೂರಾರು ರೂ. ಸಂಬಳ- ಪೆನ್ನನ್, ಕೆಟ್ಟಭಾಗವು 5/- ರೂ ಇದ್ದರೆ-50/- ರೂ. ಜಿಲ್ ಯಾವಬಡರೈತರಿಗೂ ಟ್ರಾಕ್ಟರ್ ಲಾಭವಿಲ್ಲ—

2) **ಪ್ರತ್ಯೇಕ ಅಭಿವೃದ್ಧಿ ಶಾಖೆ- ಸ್ಪೆಶಲ್ ಡೆವಲಪ್‌ಮೆಂಟ್ ಆಫೀಸು-**

ಕಾಂಗ್ರೆಸ್ ಸರಕಾರ ಬಂದ ಮೇಲೆ ಮದ್ರಾಸ್ ರಾಜ್ಯದಲ್ಲಿ ಈ ಶಾಖೆಗಾಗಿ ಲಕ್ಷಗಟ್ಟಲೆ ಹಣ ಪ್ರತಿತಿಂಗಳೂ ವೆಚ್ಚವಾಗುತ್ತಲಿದೆ. ಜಿಲ್ಲೆಗೆ ಒಬ್ಬಸ್ಪೆಶಲ್ ಡೆವಲಪ್‌ಮೆಂಟ್ ಆಫೀರ್‌ಸರವರು- ಅವರ ಜಿಲ್ಲಾ ಸಹಾಯಕರೊಬ್ಬರು- ತಾಲೂಕಿಗೊಬ್ಬ ವೆಲ್ಫೇರ್ ಆಫೀಸರ್‌ರವರು- ಇವರಿಗೂಂದು ದೊಡ್ಡವಾಗೀನಿನಂಥ ಮೋಟಾರು- ಶಿಬ್ಬಂದಿ- ಅವರಲ್ಲಿ ಚಿತ್ರಪ್ರದರ್ಶನ ಮಾಡುವನೊಬ್ಬ- ಸಂಗೀತದ ತಟ್ಟೆಗಳನ್ನಿಡುವವನೊಬ್ಬ- ಈ ಶಾಖೆಯವರು ಹಳ್ಳಿಗಳಿಗೆ ಕೋಗಿ ಏನು ಕೆಲಸಮಾಡಬೇಕೆಂಬುದೇ ಅವರಿಗೇ ಗೊತ್ತಿಲ್ಲ. ಅವರ ಉದ್ದೇಶ ಸಾಧನೆಯ ಮರ್ಮವನ್ನಾದರೂ ಅರಿಯರು. ಈ ಶಾಖೆಯವರ ಸಿಫಾರ್ಸಿನಿಂದ- ಗ್ರಾಮೊಭಿವೃದ್ಧಿಗಾಗಿ ಸರ್ಕಾರದವರು ಹಣವನ್ನು ಕೂಡ ಮಂಜೂರು ಮಾಡುವಂತಿಲ್ಲ ಈ ಹಿಂದೆ ಎಲ್ಲಿಯೂ ಮಾಡಿಲ್ಲ. ಸರ್ಕಾರದ ಖರ್ಚಿನಿಂದ ಪೆಟ್ರೋಲ್ ಸುಟ್ಟುಕೊಂಡು- ವಾಗಿನ್ನಿನಲ್ಲಿನ ಗ್ರಾಮೊಫೋನ್ ಸಂಗೀತದಿಂದ ಆಕರ್ಷಿತರಾದ- ಅಬೋಧ ಗ್ರಾಮಸ್ಥರೆದುರು ತಲೆ-ಬಾಲಗಳಿಲ್ಲದ ನಾಲ್ಕುಮಾತು ಹೇಳಿ ಬರುತ್ತಾರೆ- ಅದರಲ್ಲಾ ಬಳ್ಳಾರಿಗೆ ಭಾಷೆತಿಳಿಯದವರನ್ನು ಕಳುಹಿಸುತ್ತಾರೆ- ತಿನ್ನವೆಲ್ಲಿ ಜಿಲ್ಲೆಯ- ಕನ್ನಡ-ತೆಲುಗು ಭಾಷೆ ತಿಳಿಯದ ಶ್ರೀ ಪಿಳ್ಳೆಯವರಂಥವರು ಸ್ಪೆಶಲ್ ಡೆವಲಪ್ ಮೆಂಟಾಫೀಸರಾದರೆ- ಕೊನೆಗೆ ಹಳ್ಳಿಗಳ ಕಷ್ಟವನ್ನು ಕೂಡ ಅರಿಯಲು ಶಕ್ತಿಯಿಲ್ಲದೆ ಹಾಸ್ಯಾಸ್ಪದ ವಾತಾವರಣದಲ್ಲಿ- ಸಗೆಗೀಡಾಗುವರು—

ಇವರ ಆಫೀಸಿಗೆ ಹೋಗಿರಿ- ಒಬ್ಬೊಬ್ಬ ಗುಮಾಸ್ತರ ಮೇಜಿನಮೇಲೆ ಕತ್ತೆ ಹೊರುವಷ್ಟು ಕಾಗದ- ಪತ್ರಗಳು- ಪ್ರತ್ಯೇಕಾಭಿವೃದ್ಧಿಯ - ಸ್ಪೆಶಲ್ ಡೆವಲಪ್ ಮೆಂಟ್- ಈಕಾಗದ- ಪತ್ರಗಳಲ್ಲೇ ಅಡಗಿದೆ. ಲೆಕ್ಕವಿಲ್ಲದಷ್ಟು ರಿಪೋರ್ಟು- ಸರ್ಕಾರಕ್ಕೆ ಕಳುಹಿಸುತ್ತಿರುತ್ತಾರೆ- ಏನು ಬರೆಯುತ್ತಾರೆಂಬುದು ದೇವರೇ ಬಲ್ಲ.

ಈ ಶಾಖೆಯ ನಿರ್ಮಾಣದಿಂದ- ಕೆಲ ನಿರುದ್ಯೋಗೀ ವಿದ್ಯಾವಂತರಿಗೆ ನೌಕರಿಗಳು ದೊರೆತಿರುವದೇ ಪ್ರತ್ಯೇಕ ಅಭಿವೃದ್ಧಿಯಾ ಸ್ಪೆಶಲ್ ಡೆವಲಪ್ ಮೆಂಟ್ ಎನ್ನಬಹುದು- ಈ ಶಾಖೆಯಿಂದ ಯಾರಿಗೂ ಏನೂ ಎಳ್ಳಷ್ಟಾ ಉಪಯೋಗವಿಲ್ಲ—

[ಮುಂದಿನ ಪುಟಕ್ಕೆ]

ಹೊಸಪೇಟೆ ಜಿಲ್ಲಾ ಮುನ್ಸೀಫರ ಕೋರ್ಟಿನಲ್ಲಿ

S. C. 458/50

ವಾದಿ

ಹತ್ತಿಬೆಳಗಲ್ಲು ಈಶ್ವರಮ್ಮ ಗಂಡ ಈರಣ್ಣ 25 ಲಿಂಗಾಯ್ತು ಸುಖವಸ್ತಿ-ಒಕ್ಕಸಾಗರ

ಪ್ರತಿವಾದಿಗಳು

(1) ಗಾದಿಗನೂರು ಕೊಣವ ಈರಣ್ಣ ತಂದೆ ಲಿಂಗಪ್ಪ 50

(2) ಕೊರವ ಬಸ್ಯ ತಂದೆ ಹುಲುಗಪ್ಪ 33 ಇಬ್ಬರೂಕೊಂವರು

ಜರಾಯ್ತಿ-ಒಕ್ಕಸಾಗರ

ಹೊಸಪೇಟೆ ತಾಲೂಕು

ಮೇಲಿನ ನಂಬರಿನಲ್ಲಿ ವಾದಿಯು ಗಂಡ ಈರಣ್ಣನ ಹೆಸರಲ್ಲಿ ಪ್ರತಿವಾದಿಗಳು ಬರೆಮಕೊಟ್ಟ ಪ್ರೋನೋಟಿನ ಮೇಲೆರೂ 275/- ಗಳಿಗೆ ದಾವಾಮಾಡಿರುತ್ತಾಳೆ ಪ್ರತಿವಾದಿಗಳು 29-12-50 ನೆಯ ತೇದಿ ಹಗಲು 11 ಗಂಟೆಗೆ ಖುದ್ದಾಗಲಿ ವಕೀಲರ ದ್ವಾರವಾಗಲಿ ಕೋರ್ಟಿಗೆ ಹಾಜರಾಗಿ ತಮ್ಮ ಆಕ್ಷೇಪಣೆ ತಿಳಿಸದಿದ್ದರೆ- ಪ್ರತಿವಾದಿಗಳಮೇಲೆ ಎಕ್ಸಪಾರ್ಟಿ ಡಿಕ್ರಿಯಾಗುತ್ತದೆ

ಹೊಸಪೇಟೆ
19-12-50

ಎ. ಆರ್. ಕೃಷ್ಣರಾವ್
ವಾದಿಯ
ಅಡ್ವೊಕೇಟ್.

ಸಕ್ಕರೆ-ಬೆಲ್ಲ

ಕೆಲಮಟ್ಟಿಗೆ ಸಕ್ಕರೆ ಕಂಟ್ರೋಲ್ ತೆಗೆಯುತ್ತಿರೆ. ರೇಷನ್ ಷಾಪ್‌ಗಳಿಂದ ಹಂಚುವ ಕ್ರಮವು ಜಾರಿಯಲ್ಲಿರುವುದಾದರೂ ಬಾಧ್ಯತೆಯಿರುವುದಿಲ್ಲ. ಪ್ರಾಂತ ಪ್ರಾಂತಗಳ ಒಳಸಾಗಾಟವಲ್ಲೂ ನಿರ್ಬಂಧವಿರುವದಿಲ್ಲ. ಬೆಲ್ಲದ ರಣಗಳಿಗೆ ಲೈಸ್ ಪದ್ಧತಿಯನ್ನು ರದ್ದುಮಾಡಬೇಕೆಂಬ ಬೆಲ್ಲ-ಕಬ್ಬು ಸಕ್ಕರೆಗಳ ಧಾರಣೆಯನ್ನು ಏರಿಸಬೇಕೆಂಬ ನಿಶ್ಚಯವಾಯಿತು. ಸಂಗ್ರಹವಾದ ಸಕ್ಕರೆಯನ್ನು ತನ್ಮ ಏಜೆನ್ಸಿಗಳಮೂಲಕ ಹಂಚಿಸಿ-ಉಳಿದುದನ್ನು ಯಾರು ಬೇಕಾದರೂ ಕೊಂಡು-ಮಾರಲು ಅವಕಾಶವಿರಬೇಕೆಂದು ಹೇಳಲಾಗಿದೆ. ಸಕ್ಕರೆಯ ಅಖಿಲಭಾರತ ಬೆಲೆಯನ್ನು ರೂ 28-8-0 ಇಂದ ರೂ 29-12-0 ಗೇ (ಮಣಕ್ಕೆ) ಏರಿಸಲಾಗಿದೆ-ಸರ್ಕಾರದ ಹೊಸನೀತಿಯಿಂದ-ಕೆಲ ವರ್ತಕರು ಮಾರಲಿಕ್ಕೆ ಬರುವುದಾದರೂ-ಧಾರಣೆಗಳಲ್ಲಿ ಇಳಿತವಾಗುವುದಿಲ್ಲ ಅಲ್ಲದೆ ಅಗತ್ಯವಾಗಿಬಳಸುವವರಿಗೆ ಸಾಕಷ್ಟು ದೊರೆಯುವುದಿಲ್ಲ.

ಮದಾಸ್ ಸರ್ಕಾರದ ವ್ಯರ್ಥ ಶಾಪೆಗಳು

ಫಿರ್ಕ ಅಭಿವೃದ್ಧಿ ಶಾಪೆ:—ಕಾಂಗ್ರೆಸ್ ಸರ್ಕಾರ ಆರೂಢವಾದ ಮೇಲೆ ಇದೊಂದು ಹುಚ್ಚುತಗಲಿದೆ. ಪ್ರತಿಜಿಲ್ಲೆಯಲ್ಲೂ ಒಂದೊಂದು ಫಿರ್ಕಾ ಆರಿಸಿ ಒಬ್ಬ ಅಧಿಕಾರಿ-ಆತನ ಸಹಾಯಕ-ಜವಾನ ನಿಬ್ಬಿಂದಿ ಕೊಡುತ್ತಾರೆ. ಅವರಿಗೆ ಹಣ ಖರ್ಚು ಮಾಡಲು ಹಣವೂಇಲ್ಲ. ಈಸಂಳದಧಿಕಾರಿ-ಹಳ್ಳಿಗಳಿಗೆ ಹೋಗಿ ಸದರಿಫಿರ್ಕಾದಲ್ಲಿನ ಯಜಮಾನರ ಸಹಕಾರದಿಂದ-ಫಿರ್ಕಾಅಭಿವೃದ್ಧಿಮಾಡಬೇಕಂತೆ. ಇದಕ್ಕಾಗಿ ಒಬ್ಬದೊಡ್ಡಸಂಬಳದ ಪ್ರಾಂತೀಯ ಅಧಿಕಾರಿ- ದೊಡ್ಡಸಿಬ್ಬಂದಿಯನ್ನಿಟ್ಟುಕೊಂಡ [Provincial Firca Devolopment officer] ಜಿಲ್ಲಾ ಅಧಿಕಾರಿಗಳ ಕೆಲಸ ನಿರೀಕ್ಷಿಸಬೇಕು ಅಭಿವೃದ್ಧಿಎಲ್ಲಾ ಕಾಗದ ಪತ್ರಗಳ ಮೇಲೆ-ಕಳ್ಳಿಗಳಮುಂದಿರುವ ತಿಪ್ಪೆಗಳಲ್ಲಿ ಒಂದನ್ನಾದರೂತೆಗೆಸಲು ಇವರಿಗೆ ಸಾಧ್ಯವಾಗಿಲ್ಲ ವಾಟುಬೀಳುವಗ್ರಾಮದ ಹಾದಿಗಳಾದರೂ-ಸರಿಯಾಗಿಲ್ಲ, ಈ ಪೆಯನ್ನು ತೆಗೆದು 3ನರ್ಷಗಳಾಯಿತು. ಬಳ್ಳಾರಿಜಿಲ್ಲೆಯಲ್ಲಿ ಅಲೂರು ತಾಲೂಕು ಆಲೂರುಫಿರ್ಕಾ ಆರಿಸಿದ್ದಾರೆ ಆಲ್ಲಿ ಎಷ್ಟು ಅಭಿವೃದ್ಧಿಯಾಗಿದೆಎಂಬುದನ್ನು ಯಾರುಬೇಕಾದರೂ ಕಾಣಬಹುದು ಈಶಾಪೆಯಿರುವುದೂ ಕೂಡ ಜನರಿಗೆ ತಿಳಿಯದು ಡೈರಿ-ರಿಪೋರ್ಟುಗಳಿಂದ ಇವರಕೆಲಸ ಇವಕ್ಕಾಗಿ ಲಕ್ಷಗಟ್ಟಿ ಮದ್ರಾಸ್ ಸರ್ಕಾರ ವೆಚ್ಚಮಾಡುತ್ತಲಿದೆ

ಸಮಾಜವಾದಿ ಪಕ್ಷದಿಂದಲೇ ಮುಕ್ತಿ

ಶ್ರೀ ಜಯಪ್ರಕಾಶರು ಚುನಾವಣೆಯ ಪ್ರಚಾರಮಾಡುತ್ತ ಬರುವ ಚುನಾವಣೆಗಳಲ್ಲಿ ಕಾಂಗ್ರೆಸ್ ಸಂಸ್ಥೆಯನ್ನು ಸೋಲಿಸಿ ಸಮಾಜವಾದಿ ಪಕ್ಷವನ್ನು ಗೆಲಿಸಿದರೆ ಈಗಿರುವ ದುಃಖಗಳೆಲ್ಲ ನಿವಾರಣೆ ಯಾಗುವವು ಎಂದರು-ಕಾಂಗ್ರೆಸ್-ಭಂಡವಲಗಾರರಿಗೆ ಪ್ರೋತ್ಸಾಹವೀಯುತ್ತ ಬಡವರ ಆಶಾ ಕಾಂಕ್ಷೆಗಳನ್ನು ಬದಿಗಿರಿಸಿದೆ-ನೀತಿಯಭ್ರಷ್ಟತೆ-ಕಪ್ಪು ಬಾಜಾರ ಲಂಚ ಅಧಿಕಾರಿಗಳ ಅಯೋಗ್ಯತೆಗೆ ಸ್ಥಾನಕೊಟ್ಟಿದೆ ಈಕಾರಣ – ಸಮಜವಾಗಳಿಗೆ ಸ್ಥಾನ ಕೊಡಬೇಕು

ಹೊಸಪೇಟೆ ಡಿ. ಮು. ಕೋರ್ಟನಲ್ಲಿ

ಒ. ಎಸ್. 418/49 1 ಎ 562/50

ಚಿಟ್ಟಿ ಲಿಂಗನಗೌಡ್ ವಾದಿ
ಸಾ, ಬುಕ್ಕಸಾಗರ ಅರ್ಜಿದಾರ

ವಿಟ್‌ನ್ಸು

ರಾಮಸಾಗರದ ಯಮುನಪ್ಪ ಪ್ರತಿವಾದಿ
ರೆಸ್ಪಾಂಡೆಂಟ್

ಮೇಲಿನ ನಂಬರಿನಲ್ಲಿ ಖಾಸಾಗಿರುವ ಪ್ರಿಲಿಮಿನರಿ ಡಿಕ್ರಿಯನ್ನು ಫೈನಲ್ ಮಾಡಲು ವಾದಿ ಇಟ್ಟಿರುವ ಅರ್ಜಿ 1ಎ 562/50 ಯ ವಾಯಿದಾ ತಾ. 12-1-51 ಇದೆ. ಆದಿನ ನೀವು ಹಾಜರಾಗಲು ತಪ್ಪಿದರೆ ಫೈನಲ್ ಡಿಕ್ರಿಮಾಡಲಗುವುದು.

ಹೊಸಪೇಟೆ ತಟ್ಟಿ. ಕೃಷ್ಣರಾವ್
20-12-50 ತಟ್ಟಿ. ರಂಗರಾವ್
ವಾದಿ ವಕೀಲರು.

ಓಟರರ ಪ್ರಾಥಮಿಕ ಪಟ್ಟಿ ಮತ್ತು—ಅನುಬಂಧ..

ಮದ್ರಾಸ್ ಅಸೆಂಬ್ಲಿ ಕೇಂದ್ರಪ್ರಜಾ ಪ್ರತಿನಿಧಿ ಸಭೆಗೆ ಸಂಧಿಸಿದ ಇಡೀ ಬಳ್ಳಾರಿ ತಾಲೂಕಿಗೆ ಸೇರಿದ ಎಲ್ಲಾಗ್ರಾಮಗಳ ಓಟರರ ಪ್ರಾಥಮಿಕ ಪಟ್ಟಿ ಮತ್ತು ಅನುಬಂಧಗಳನ್ನು 15-12-50 ರ ದಿನಾಂಕ ತಾಲೂಕ ಕಚೇರಿ ಜಿಲ್ಲಾ ಬೋರ್ಡು ಆಫೀಸು ರಿಜಸ್ಟ್ರಾರ್ ಆಫೀಸು ಪಂಚಾಯ್ತಿ ಬೋರ್ಡು ಮೋಕ ಕುರುಗೋಡು ಕುಡಿತಿನಿ ಪೋಲೀಸ್ಟೇಷನ್‌ಗಳು ಆಲ್ಲದೆ ಗ್ರಾಮಚಾವಡಿಗಳಲ್ಲಿ ಪ್ರಕಟಿಸಲಾಗಿದೆ.

ಕೆ. ಕೃಷ್ಣಮೂರ್ತಿ
ತಹಶೀಲ್ದಾರ್ ಬಳ್ಳಾರಿ.

ಹಿಂದೀ ಮಹಾ ವಿದ್ಯಾಲಯ, ಬಳ್ಳಾರಿ.

[1931 ಸ್ಥಾಪಿತ ಬಳ್ಳಾರಿ ಜಿಲ್ಲಾ ಹಿಂದೀ ಪ್ರೇಮೀಮಂಡಲದಾಶ್ರಯದಲ್ಲಿ. ರಿಜಿಸ್ಟರ್ಡ್.]

ಮದ್ರಾಸ್ ಸರ್ಕಾರದಿಂದ ಮಾನ್ಯತೆ ಇದೆ

ಪ್ರಾರಂಭಿಕ ವರ್ಗಗಳಿಗೆ ಮಾಸಿಕ 3/- ಶುಲ್ಕ — ಉನ್ನತ ವರ್ಗಗಳಿಗೆ ಮಾಸಿಕ 5/- ಶುಲ್ಕ

ವಾರ್ಡಲಾ ಕೈಸ್ಯಾಲು ಕಟ್ಟಡದಲ್ಲಿ ಪ್ರಾತಃಕಾಲ-ಸಾಯಂಕಾಲ ಹಿಂದೀ ಕಾಲೇಜ್‌ದ ವರ್ಗಗಳು. ನಡೆಯುತ್ತವೆ. ಪ್ರವೇಶ ಪರೀಕ್ಷೆ — ವಿಶಾರದ ವರ್ಗಗಳಲ್ಲದೆ ಪ್ರಾರಂಭಿಕ ವರ್ಗಗಳಿಗೂ ಪ್ರವೇಶವಿದೆ. ವರ್ಗಗಳಿಗೆ ಸಂಬಂಧಿಸಿದ ಪಾಠ್ಯ ಪುಸ್ತಕಗಳು ವಿದ್ಯಾಲಯದಲ್ಲಿ ದೊರೆಯುತ್ತವೆ. ಒಳ್ಳೆಯ ಪುಸ್ತಕ ಭಂಡಾರವಿದೆ. ಶ್ರೇಷ್ಠ ವಾರಪತ್ರಿಕೆ, ಮಾಸಪತ್ರಿಕೆಗಳ ಸೌಲಭ್ಯ ಇತರ ವಿವರಗಳಿಗೆ ಸ್ವಾಂಪಿಟ್ಟು ಬರೆಯಿರಿ.

ಪ್ರಿನ್ಸಿಪಾಲ್

NAVA BHARAT BELLARY.
ನವಭಾರತ ಬಳ್ಳಾರಿ.

(Nationalist Weekly)

(Reg. No. M. 4746)

ಚಂದಾದರಗಳು	Subscription Rates.
ವರ್ಷಕ್ಕೆ 5—0—0	One Year 5—0—0
6 ತಿಂಗಳಿಗೆ 3—0—0	Six months 3—0—0

25-12-50

To

Sri.....